
ಅಂಕೋಲೆ ಬದಲಾಳ



ಅಂಕೋಲಾ ತಾಲೂಕಿನ ೧೦ ನೇ
ಕನ್ನಡ ಸಾಹಿತ್ಯ ಸಮ್ಮೇಳನ
೮ ಫೆಬ್ರುವರಿ ೨೦೨೪, ಗುರುವಾರ

ನೆನಪಿನ ಹೊತ್ತಿಗೆ

ಪ್ರಧಾನ ಸಂಪಾದಕರು:
ಶ್ಯಾಮಸುಂದರ ಗೌಡ, ಅಂಕೋಲಾ

ಕನ್ನಡ ಸಾಹಿತ್ಯ ಪರಿಷತ್ತು
ಅಂಕೋಲಾ ತಾಲ್ಲೂಕು ಘಟಕ


ಅಂಕೋಲಾ ತಾಲೂಕಿನ ೧೦ ನೇ
ಕನ್ನಡ ಸಾಹಿತ್ಯ ಸಮ್ಮೇಳನ
೮ ಫೆಬ್ರುವರಿ ೨೦೨೪, ಗುರುವಾರ
ಅಂಕೋಲಾ ತಾಲೂಕಾ
೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಹಾರ್ದಿಕ ಶುಭಾಶಯಗಳು
ಸನ್ಮಾನ್ಯ ಶ್ರೀ ಸತೀಶ ಕೆ. ಸೈಲ್
ಶಾಸಕರು, ಕಾರವಾರ-ಅಂಕೋಲಾ ವಿಧಾನಸಭಾ ಕ್ಷೇತ್ರ
ಅಧ್ಯಕ್ಷರು, ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್
ಕಮ್ಯುನಿಕೇಶನ್ & ಅಡ್ವರ್ಟೈಸಿಂಗ್ ಲಿಮಿಟೆಡ್.

ಸಿರಿಗನ್ನಡಂ ಗೆಲ್ಗೆ

ಅಂಕೋಲೆ

ಒಡಲಾಳ

ನೆನಪಿನ ಹೊತ್ತಿಗೆ

ಪ್ರಧಾನ ಸಂಪಾದಕರು

ಶ್ಯಾಮಸುಂದರ ಗೌಡ

* * *

ಸಹ ಸಂಪಾದಕರು

ಜೆ. ಪ್ರೇಮಾನಂದ

ನಿರುಪಮಾ ಅಂಕೋಲೆಕರ

* * *

ಪ್ರಕಾಶಕರು

ಗೋಪಾಲಕೃಷ್ಣ ನಾಯಕ

ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಅಂಕೋಲಾ ಘಟಕ

೨೦೨೪

‘ಅಂಕೋಲೆ ಒಡಲಾಳ’ ಅಂಕೋಲಾ ತಾಲೂಕಿನ ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂಸ್ಮರಣ ಸಂಚಿಕೆ

`ANKOLE ODALALA’ Souvenir Edited by Shyamsundar Gouda, Ankola & Published by Gopalakrishna Nayak, The President, Uttara Kannada Sahitya Parishat, Ankola (U.K.)

ಪ್ರಧಾನ ಸಂಪಾದಕರು	: **ಶ್ಯಾಮಸುಂದರ ಗೌಡ**
ಸಹ ಸಂಪಾದಕರು	: **ಜಿ. ಪ್ರೇಮಾನಂದ, ನಿರುಪಮಾ ಅಂಕೋಲೆಕರ**
ಪ್ರಕಾಶಕರು	: **ಗೋಪಾಲಕೃಷ್ಣ ನಾಯಕ** ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಅಂಕೋಲಾ ತಾಲೂಕಾ ಘಟಕ
ಲೇಖನಗಳ ಹಕ್ಕುಗಳು	: **ಆಯಾ ಲೇಖಕರವು**
©	: **Authors**
ಮೊದಲ ಮುದ್ರಣ	: ೨೦೨೪
First Impression	: **2024**
ಬಳಸಿದ ಕಾಗದ	: **ಮ್ಯಾಪ್ಲಿಥೋ ೭೦ ಜಿಎಸ್ಎಂ**
Paper Used	: **Maplitho 70 gsm**
ಅಳತೆ	: ಕ್ರೌನ್ ೧/೪
Pages	: **Crown 1/4**
ಪುಟಗಳು	: ೨೯೨ + ೪
Pages	: **292 + 4**
ರಕ್ಷಾಪುಟ ವಿನ್ಯಾಸ, ಅಕ್ಷರ ಜೋಡಣೆ, ಮುದ್ರಣ	: **ಸಾಯಿ ಲೀಡ್ಸ್** ವಾಜಂತ್ರಿಕೇರಿ, ಕಾರವಾರ ರಸ್ತೆ, ಅಂಕೋಲಾ (ಉ.ಕ.) ಮೊ. : ೭೦೧೯೦೨೪೧೮೭
DTP, Cover Page Designing & Print	: **SAAYI LEADS** Vajantrikeri, Karwar Road, Ankola (U.K.) Mob. : 7019024187

ಸರ್ವಾಧ್ಯಕ್ಷರು



ಪ್ರೊ. ನಾಗೇಶದೇವ ಅಂಕೋಲೇಕರ

ಕಸಾಪ ಪದಾಧಿಕಾರಿಗಳು



ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು, ಕೇಂದ್ರ ಕಸಾಪ, ಬೆಂಗಳೂರು



ಬಿ. ಎನ್. ವಾಸರೆ
ಅಧ್ಯಕ್ಷರು, ಜಿಲ್ಲಾ ಕಸಾಪ, ಉತ್ತರ ಕನ್ನಡ



ಗೋಪಾಲಕೃಷ್ಣ ನಾಯಕ
ಅಧ್ಯಕ್ಷರು, ತಾಲೂಕಾ ಕಸಾಪ, ಅಂಕೋಲಾ

ಕಸಾಪ ಕಾರ್ಯಕಾರಿ ಸಮಿತಿ ಅಂಕೋಲಾ



ಗೋಪಾಲಕೃಷ್ಣ ನಾಯಕ
ಅಧ್ಯಕ್ಷರು



ಜಗದೀಶ ನಾಯಕ
ಗೌರವ ಕಾರ್ಯದರ್ಶಿ



ಜಿ. ಆರ್. ತಾಂಡೇಲ
ಗೌರವ ಕಾರ್ಯದರ್ಶಿ



ಡಾ॥ ಎಸ್. ವಿ. ವಸ್ತ್ರದ
ಗೌರವ ಕೋಶಾಧ್ಯಕ್ಷರು

ಸದಸ್ಯರು



ಮಂಗಳಲಕ್ಷ್ಮಿ ಎಂ. ಪಾಟೀಲ



ಡಾ॥ ಅರ್ಚನಾ ನಾಯಕ



ಡಾ. ಪ್ರಕಾಶ ಬಿ. ನಾಯಕ



ಡಾ. ವಿನಾಯಕ ಹೆಗಡೆ



ಡಾ. ಪುಷ್ಪಾ ನಾಯ್ಕ



ಸುಜೀತ ಎನ್. ನಾಯ್ಕ



ರಾಘು ಕಾಕರಮಠ



ಬಾಲಚಂದ್ರ ಎನ್. ನಾಯಕ



ಪ್ರಕಾಶ ರಾಮಾ ಕುಂಜಿ



ಮಹಾಂತೇಶ ರೇವಡಿ



ಎನ್.ವಿ. ರಾಠೋಡ



ಅರುಣ ಶೆಟ್ಟಿ



ಗೌರೀಶ ನಾಯಕ



ರಫೀಕ್ ಶೇಖ್



ರಾಜೇಂದ್ರ ಕೇಣಿ



ಎಂ.ಬಿ. ಆಗೇರ

ಸ್ವಾಗತ ಸಮಿತಿ ಪದಾಧಿಕಾರಿಗಳು



ಶ್ರೀ ಸತೀಶ ಸೈಲ್

ಶಾಸಕರು, ಕಾರವಾರ-ಅಂಕೋಲಾ ವಿಧಾನಸಭಾ ಕ್ಷೇತ್ರ

ಅಧ್ಯಕ್ಷರು, ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ & ಅಡ್ವರ್ಟೈಸಿಂಗ್ ಲಿಮಿಟೆಡ್.

ಗೌರವಾಧ್ಯಕ್ಷರು



ಡಾ. ಮಹೇಶ ಗೋಳಿಕಟ್ಟೆ

ಅಧ್ಯಕ್ಷರು



ಶ್ರೀ ಗೋಪಾಲಕೃಷ್ಣ ನಾಯಕ

ಪ್ರಧಾನ ಕಾರ್ಯದರ್ಶಿ

ಸ್ವಾಗತ ಸಮಿತಿ ಪದಾಧಿಕಾರಿಗಳು


ಜಗದೀಶ ನಾಯಕ


ಜಿ. ಆರ್. ತಾಂಡೇಲ


ಡಾ.ಎಸ್.ವಿ. ವಸ್ತ್ರದ


ಎಂ.ಬಿ. ಆಗೇರ


ಸುಜೀತ ನಾಯ್ಕ


ಮೋಹನ ಹಬ್ಬು


ರವೀಂದ್ರ ಕೇಣಿ


ವಸಂತ ನಾಯಕ


ರಾಘವೇಂದ್ರ ಡಿ. ನಾಯಕ


ಸವಿತಾ ಶಾಸ್ತ್ರೀಮಠ


ಸಂತೋಷ ಶೆಟ್ಟಿ


ನಾಗೇಶ ನಾಯ್ಕ(ಆಚಾ)


ಬಾಲಚಂದ್ರ ನಾಯಕ


ವಿಷ್ಣು ನಾಯ್ಕ


ಡಾ. ಆರ್.ಜಿ. ಗುಂದಿ


ಮಂಗಲದಾಸ ಕಾಮತ


ರೊ. ಶ್ರೀಧರ ನಾಯ್ಕ


ಜಾತವೇದ ಡಿ. ನಾಯಕ


ನಾಗಾನಂದ ಬಂಟ


ಸಂದೀಪ ನಾಯಕ


ತಿಮ್ಮಣ್ಣ ಭಟ್


ಕೃಷ್ಣಕುಮಾರ ಮಹಾಲೆ


ಗೋಪಾಲಕೃಷ್ಣ ಸಿ. ನಾಯ್ಕ


ರವೀಂದ್ರ ಎನ್. ಶೆಟ್ಟಿ


ಶ್ರೀಧರ ಎಸ್. ನಾಯ್ಕ


ಉಲ್ಲಾಸ ಹುದ್ದಾರ


ಗಣಪತಿ ನಾಯಕ ಶೀಳ್ಯ


ಶಾಂತಾರಾಮ ನಾಯಕ


ಅನುರಾಧಾ ನಾಯ್ಕ

ಉಪ ಸಮಿತಿಗಳ ಪದಾಧಿಕಾರಿಗಳು


ಡಾ. ವಿನಾಯಕ ಹೆಗಡೆ


ಡಾ. ಪುಷ್ಪಾ ನಾಯ್ಕ


ರಾಜು ಎಚ್. ನಾಯಕ


ವಿಜಯ ನಾಯಕ


ರಮೇಶ ನಾಯಕ


ಜಯರಾಮ ಎಚ್. ನಾಯಕ


ದಿವಾಕರ ದೇವನಮನೆ


ಆನಂದು ವಿ. ನಾಯಕ


ರಾಮನಾಥ ನಾಯ್ಕ


ನಾಗರಾಜ ಜಾಂಬಳೇಕರ


ಸುಜೀತ ನಾಯ್ಕ


ಕೆ. ರಮೇಶ


ಅರುಣ ಶೆಟ್ಟಿ


ವಿದ್ಯಾಧರ ಮೊರಬಾ


ನಾಗರಾಜ ಮಂಜಗುಣಿ


ರಾಘು ಕಾಕರಮಠ


ವಾಸುದೇವ ಗುನಗಾ


ವಿಠ್ಠಲದಾಸ ಕಾಮತ


ಸುಭಾಷ ಕಾರೇಬೈಲ್


ಅಕ್ಷಯ ನಾಯ್ಕ


ಮಾರುತಿ ಹರಿಕಂತ್ರ


ವಿಲಾಸ ನಾಯಕ


ಪ್ರಕಾಶ ಕುಂಜಿ


ಶ್ರೀಧರ ನಾಯ್ಕ


ಜಿ.ಆರ್. ನಾಯಕ


ಎಂ.ಎಂ. ಕರ್ಕಿಕರ


ರಾಜೇಂದ್ರ ಕೇಣಿ


ಗಣಪತಿ ಗಾಂವಕರ


ಡಾ|| ಅರ್ಚನಾ ನಾಯಕ


ತೃಪ್ತಿ ನಾಯ್ಕ


ತಿಮ್ಮಣ್ಣ ಭಟ್


ಎನ್.ವಿ. ರಾಠೋಡ


ಎಂ.ಬಿ. ಆಗೇರ


ಜಯಶೀಲ ಆಗೇರ


ರಫೀಕ ಶೇಖ್


ಮಂಜುನಾಥ ಇಟಗಿ

ಸಂಪಾದಕ ಮಂಡಳಿ

ವ್ಯವಸ್ಥಾಪಕ ಸಂಪಾದಕರು



ಗೋಪಾಲಕೃಷ್ಣ ನಾಯಕ

ಪ್ರಧಾನ ಸಂಪಾದಕರು



ಶ್ಯಾಮಸುಂದರ ಗೌಡ

ಸಹ ಸಂಪಾದಕರು



ಜೆ. ಪ್ರೇಮಾನಂದ



ನಿರುಪಮಾ ಅಂಕೋಲೆಕರ

ಮೊದಲ ಮಾತು

ಕರ್ನಾಟಕದ ಬಾರ್ಡೋಲಿ ಎಂಬ ಹೆಗ್ಗಳಿಕೆಯ ವೀರಭೂಮಿ ಅಂಕೋಲೆಯಲ್ಲಿ ೨೦೨೪ ರ ಫೆಬ್ರುವರಿ ೦೮ ರಂದು ನಡೆದ ೧೦ನೇ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನ ಸರಕಾರದ ಹಾಗೂ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಯಾವುದೇ ಅನುದಾನವಿಲ್ಲದೇ, ಸ್ಥಳೀಯ ಸಹೃದಯಿಗಳ ನೆರವಿನೊಂದಿಗೆ ಅತ್ಯಂತ ಅರ್ಥಪೂರ್ಣ ಹಾಗೂ ಯಶಸ್ವಿಯಾಗಿ ಸಂಪನ್ನಗೊಂಡಿದೆ.

ಅಂಕೋಲೆಯ ನಿವೃತ್ತ ಉಪನ್ಯಾಸಕರು, ಸಾಹಿತಿಗಳು ಆದ ಪ್ರೊ. ಎನ್. ಡಿ. ಅಂಕೋಲೇಕರ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನವನ್ನು ನಾಡಿನ ಹಿರಿಯ ಸಾಹಿತಿ ಶಾ.ಮಂ. ಕೃಷ್ಣರಾಯರು ಉದ್ಘಾಟಿಸಿದ್ದು ಇನ್ನಷ್ಟು ಮೆರಗು ತಂದಿತ್ತು. ಹಲವು ವೈಶಿಷ್ಟ್ಯತೆಗಳೊಂದಿಗೆ, ದಿನವಿಡೀ ನಡೆದ ಈ ಸಮ್ಮೇಳನ ಅಂಕೋಲೆಯ ಸಾಹಿತ್ಯ ಸಮ್ಮೇಳನಗಳ ಮಟ್ಟಿಗೆ ದಶಮಾನೋತ್ಸವದ ಸಂಭ್ರಮವನ್ನೇ ತಂದು ಕೊಟ್ಟಿತ್ತು. ಇದು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ತಾಲೂಕು ಸಾಹಿತ್ಯ ಸಮ್ಮೇಳನಗಳಾದ ತಾಲೂಕು ಎಂಬ ಹೆಗ್ಗಳಿಕೆ ಕೂಡ.

ಸಮ್ಮೇಳನದ ನೆನಪಲ್ಲಿ ಅಂಕೋಲಾ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯವರು ನೆನಪಿನ ಸಂಚಿಕೆಯನ್ನು ಹೊರ ತರುತ್ತಿರುವುದು ಅಭಿಮಾನದ ಸಂಗತಿ. ಈ ನೆನಪಿನ ಸಂಚಿಕೆಯ ಮೂಲಕ ಈ ಸಮ್ಮೇಳನ ಒಂದು ದಾಖಲೆಯಾಗಿ ಉಳಿಯುವ ಜೊತೆಗೆ, ಪ್ರತಿ ಮನೆಗಳಲ್ಲಿ ನೆಲೆಗೊಳ್ಳುವಂತಾಗಲಿದೆ.

ಸಮ್ಮೇಳನದ ಯಶಸ್ಸಿಗೆ ತೊಡಗಿಸಿಕೊಂಡ ಅಂಕೋಲಾ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗೋಪಾಲಕೃಷ್ಣ ನಾಯಕ ಹಾಗೂ ಎಲ್ಲ ಪದಾಧಿಕಾರಿಗಳಿಗೂ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ. ಮಹೇಶ ಗೋಳಿಕಟ್ಟೆ ಹಾಗೂ ಎಲ್ಲಾ ಪದಾಧಿಕಾರಿಗಳಿಗೂ, ಜೊತೆಗೆ ಈ ನೆನಪಿನ ಸಂಚಿಕೆಯ ತರುತ್ತಿರುವ ಸಂಪಾದಕ ಶ್ಯಾಮಸುಂದರ ಗೌಡಾ ಹಾಗೂ ಅವರ ಬಳಗಕ್ಕೂ ಅತ್ಯಂತ ಅಭಿಮಾನದಿಂದ ಅಭಿವಂದಿಸುತ್ತಿದ್ದೇನೆ.

ಸುಂದರ ಪರಿಸರದಿಂದ ಸಮೃದ್ಧವಾಗಿರುವ ಉತ್ತರ ಕನ್ನಡ ಜಿಲ್ಲೆ ಸಾಹಿತ್ಯವಾಗಿಯೂ, ಸಾಂಸ್ಕೃತಿಕವಾಗಿಯೂ ಅಷ್ಟೇ ದೊಡ್ಡ ಕೊಡುಗೆಯನ್ನು ಕೊಟ್ಟಿರುವಂತಹ ನೆಲ. ಅದರಲ್ಲಿ ಅಂಕೋಲೆಯದ್ದು ಸಿಂಹ ಪಾಲು. ಈ ನೆಲದ ಸಾಹಿತ್ಯವನ್ನು ಇನ್ನಷ್ಟು ಗಟ್ಟಿಗೊಳಿಸುವ, ನಾಡಿನಾದ್ಯಂತ ಪಸರಿಸುವ ಹಾಗೆ ಮಾಡುವ ಗುರುತರವಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಎಲ್ಲರನ್ನೂ ಒಳಗೊಂಡು, ಎಲ್ಲರೊಂದಾಗಿ ಈ ನಾಡು ನುಡಿಯ ಕೆಲಸದಲ್ಲಿ ಮುನ್ನಡೆಯೋಣ...

ಶುಭ ಹಾರೈಕೆಗಳೊಂದಿಗೆ....

ಬಿ. ಎನ್. ವಾಸರೆ
ಅಧ್ಯಕ್ಷರು
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ಉತ್ತರ ಕನ್ನಡ ಜಿಲ್ಲೆ
೯೪೮೦೦೪೩೪೫೦

ಸ್ವಾಗತ ಸಮಿತಿ ಅಧ್ಯಕ್ಷರ ನುಡಿ

ಅಂಕೋಲಾ ತಾಲೂಕಿನ ಹತ್ತನೇ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷನಾಗಿ ಪ್ರೀತಿಯಿಂದ ಆಯ್ಕೆ ಮಾಡಿದ್ದ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರಿಗೂ ಮೊಟ್ಟಮೊದಲು ಧನ್ಯವಾದ ಹೇಳುತ್ತೇನೆ. ಅದರಲ್ಲೂ ನನ್ನ ತಾಲೂಕು ಸಾಹಿತ್ಯ ಸೇವೆಯಲ್ಲಿ ಹೆಸರು ಮಾಡಿದ್ದು, ಮಾಡುತ್ತಿರುವುದು ತುಂಬಾ ಸಂತಸ. ಇಂತಹ ಸಂದರ್ಭದಲ್ಲಿ ನನಗೊಂದು ಅವಕಾಶ ಈ ಹಿಂದೆಯೂ ಕಾರವಾರದ ಅನೇಕ ಕಾರ್ಯಕ್ರಮಗಳಲ್ಲಿ, ಉತ್ಸವಗಳಲ್ಲಿ, ಸಮ್ಮೇಳನಗಳಲ್ಲಿ ಜವಾಬ್ದಾರಿಯುತವಾಗಿ ಕೆಲಸ ಮಾಡಿರುವುದು ನನಗೆ ಈ ಸಮ್ಮೇಳನದಲ್ಲಿ ಇನ್ನಷ್ಟು ಸಂಪನ್ಮೂಲ ಕ್ರೋಢೀಕರಣಗೊಳಿಸಲು ಅನುಕೂಲವಾಯಿತು.

ಜೊತೆಜೊತೆಯಾಗಿ ನಿಂತವರು ಅಂಕೋಲಾ ಕ.ಸಾ.ಪ. ಅಧ್ಯಕ್ಷರಾದ ಗೋಪಾಲಕೃಷ್ಣ ನಾಯಕ ಹಾಗೂ ನನ್ನ ಗೆಳೆಯರ ಬಳಗಕ್ಕೂ, ಜಾಹಿರಾತುದಾರರಿಗೂ ಈ ಮೂಲಕ ಧನ್ಯವಾದಗಳು. ಹತ್ತನೇ ಸಮ್ಮೇಳನ ಮತ್ತು ಹಿಂದಿನ ಒಂಭತ್ತು ಸಮ್ಮೇಳನದ ಅನೇಕ ಬರಹಗಳನ್ನೊಳಗೊಂಡ 'ಒಡಲಾಳ' ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವುದು ತುಂಬಾ ಸಂತಸವಾಗಿದೆ. ಸಂಪಾದಕ ಮಂಡಳಿಯ ಸರ್ವರಿಗೂ ಧನ್ಯವಾದಗಳು.

ಸ್ಥಳ : ಅಂಕೋಲಾ

ಡಾ. ಮಹೇಶ ಗೋಳಿಕಟ್ಟೆ
ಅಧ್ಯಕ್ಷರು, ಸ್ವಾಗತ ಸಮಿತಿ
೧೦ನೇ ಕನ್ನಡ ಸಾಹಿತ್ಯ ಸಮ್ಮೇಳನ, ಅಂಕೋಲಾ

ಸಾಂಸ್ಕೃತಿಕ ಹೂರಣವನ್ನು ಮಡಿಲಲಿಟ್ಟ 'ಅಂಕೋಲೆ ಒಡಲಾಳ'

ಅಂಕೋಲೆ ಎಂದರೆ ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ, ಜಂಗಲ್ ಸತ್ಯಾಗ್ರಹ, ರೈತ ಹೋರಾಟ, ಡಾ.ದಿನಕರ ದೇಸಾಯಿ, ಸ.ಪ.ಗಾಂವಕರ, ಸಾಹಿತ್ಯ, ಸುಗ್ಗಿ, ಪದ್ಮಶ್ರೀ, ಯಕ್ಷಗಾನ, ಬೆಟ್ಟಗುಡ್ಡ, ನದಿ, ಕಡಲು, ಜಲಪಾತ, ಕಾಡುಹಣ್ಣು, ಇಸಾಡ ಹಣ್ಣು, ಮೀನು, ಕಲ್ಗ, ಚಿಪ್ಪಿಕಲ್ಲು, ಅಂಕೋಲಾ ಕೋಟೆ, ಗಡದಗುಡ್ಡದ ಕೋಟೆ, ಮಿಸಾಳ ಬಾಜಿ, ಕಾಜಿಮಜಿ ಹೀಗೆ... ಇಂತಹ ಸಂಪದ್ಭರಿತ ಅಂಕೋಲೆ ಇಂದು ತನ್ನ ನೆಲದಲ್ಲಿ ಹತ್ತು ಸಾಹಿತ್ಯ ಸಮ್ಮೇಳನವನ್ನು ನಡೆಸಿ ಕನ್ನಡ ಸಾಹಿತ್ಯದ ಪ್ರೇಮವನ್ನು ಮೆರೆದು ಸಾರ್ಥಕತೆ ಕಂಡಿದೆ.

ಹತ್ತನೇ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿಯ ಮತ್ತು ಹಿಂದೆ ನಡೆದ ಎಲ್ಲ ಸಾಹಿತ್ಯ ಸಮ್ಮೇಳನದ ಮೆಲುಕನ್ನು ಹಾಕುವ ಉದ್ದೇಶದಿಂದ ಈ ಹೊತ್ತಿಗೆಯನ್ನು ತರುತ್ತಿದ್ದೇವೆ.

ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ.ಎನ್.ವಾಸರೆಯವರು ಈ ವರ್ಷ ಪ್ರಥಮದಲ್ಲಿಯೇ ಅಂಕೋಲೆಯಲ್ಲಿ ಸಾಹಿತ್ಯ ಸಮ್ಮೇಳನವಾಗಬೇಕು ಎಂಬ ಸಲಹೆಯನ್ನು ನೀಡಿದರು. ಸಲಹೆ ಅನ್ನುವುದಕ್ಕಿಂತ ಅಂಕೋಲೆಯ ಸಾಹಿತ್ಯ ಬಳಗದ ಮೇಲಿನ ಪ್ರೀತಿ ಎನ್ನಬಹುದು. ಆದರೆ ನನಗೆ ಒಂದೆಡೆ ಸಮ್ಮೇಳನ ಮಾಡುವ ಮನಸ್ಸಿದ್ದರೂ ಹಿಂಜರಿಕೆಯಾಯಿತು. ಸಮ್ಮೇಳನ ಮಾಡಲು ಅನುಭವವಿಲ್ಲ ಎಂದಲ್ಲ, ನಾನು ಕ.ಸಾ.ಪ. ತಾಲೂಕಾಧ್ಯಕ್ಷನಾಗಿದ್ದಾಗ ಹಿಂದೆ ಡಾ. ಆರ್.ಜಿ.ಗುಂದಿಯವರ ಸರ್ವಾಧ್ಯಕ್ಷತೆಯ ಹಾಗೂ ಜಿಲ್ಲಾ ಸಮ್ಮೇಳನ ಡಾ. ಜಯಂತ ಕಾಯ್ಕಿಣಿ ಸರ್ವಾಧ್ಯಕ್ಷರಾದಾಗ ಮತ್ತು ಕಳೆದ ವರ್ಷ ಹೊನ್ನಮ್ಮ ನಾಯಕ ಸರ್ವಾಧ್ಯಕ್ಷರಾದಾಗ ನಾಡು ನೆನಪಿಸುವಂತೆ ಕಾರ್ಯಕ್ರಮ ಮಾಡಿದ್ದಿದೆ. ಆದರೆ ಈ ಸಲ ಸ್ವಲ್ಪ ಭಿನ್ನ. ನಾನಂದುಕೊಂಡಂತೆ ಆಗುತ್ತೋ ಇಲ್ಲವೋ ಎನ್ನುವ ಸಂದೇಹ. ಅದಕ್ಕೆ ಕಾರಣ ಸರಕಾರದಿಂದ ಯಾವುದೇ ಅನುದಾನ ಬಾರದೇ ಇರುವುದು.

ಈ ಹಂತದಲ್ಲಿ ನೈತಿಕವಾಗಿ ಬೆಂಬಲ ಮತ್ತು ಪ್ರೋತ್ಸಾಹ ನೀಡಿದವರು ನಮ್ಮ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು. ಬರೀ ಹೇಳಿ ಸುಮ್ಮನಾಗದೇ ಸಮ್ಮೇಳನ ಮುಗಿಯುವ ತನಕವೂ ತಮಗೆ ಕೊಟ್ಟ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಅದರ ಜೊತೆಯಲ್ಲಿ ನನ್ನ ತಾಲೂಕಿನ ಹಿಂದಿನ ಸಮ್ಮೇಳನಾಧ್ಯಕ್ಷರು, ಸಾಹಿತಿಗಳು, ಹಿತೈಷಿಗಳು, ಅಧಿಕಾರಿ ವರ್ಗದವರು ಸಹಕಾರ ನೀಡಿದರು. ಇಷ್ಟಕ್ಕೂ ಈ ಸಮ್ಮೇಳನ ಗಟ್ಟಿಯಾದದ್ದು ನನ್ನ ಆತ್ಮೀಯ ಮಿತ್ರರಾದ ಡಾ. ಮಹೇಶ ಗೋಳಿಕಟ್ಟೆಯವರು 'ಯಾವುದಕ್ಕೂ ಹೆದರಬೇಡ, ನಾನಿದ್ದೇನೆ. ಸಮ್ಮೇಳನಕ್ಕೆ ಹಣ ಹೊಂದಿಸುವ ಜವಾಬ್ದಾರಿ ನಾನು ನೋಡಿಕೊಳ್ಳುತ್ತೇನೆ' ಎಂದು ಮಾತುಕೊಟ್ಟಮೇಲೆ. ಕೊಟ್ಟ ಮಾತನ್ನು ಕೊನೆಯವರೆಗೂ ಉಳಿಸಿಕೊಂಡು ಸಮ್ಮೇಳನವನ್ನು ಯಶಸ್ವಿಗೊಳಿಸಿ, ಈ ಹೊತ್ತಿಗೆಯನ್ನು ಹೊರತರುವವರೆಗೂ ಬೆಂಬಲವಾಗಿ ನಿಂತರು.

ಈ ಮಧ್ಯ ನನ್ನ ಕುಟುಂಬದಂತಿರುವ ಇತಿಹಾಸಕಾರ ಶ್ರೀ ಶ್ಯಾಮಸುಂದರ ಗೌಡ ಇವರು–"ಹತ್ತನೇ ಸಮ್ಮೇಳನವಾಗಿರುವುದರಿಂದ 'ಹಳೆಬೇರು–ಹೊಸ ಚಿಗುರು' ಎನ್ನುವಂತೆ ಈ ಹಿಂದಿನ ಒಂಭತ್ತು ಸಮ್ಮೇಳನಗಳ ಗಟ್ಟಿ ಬರಹಗಳನ್ನು ಹಾಗೂ ಈ ಸಮ್ಮೇಳನದ ಕೆಲವು ವಿಷಯಗಳನ್ನೊಳಗೊಂಡ ನೆನಪಿನ ಹೊತ್ತಿಗೆ ಮಾಡಿದರೆ ಇದೊಂದು ಆಕರವಾಗಬಹುದು" ಎಂದು ಸಲಹೆ ನೀಡಿದರು. ಅವರನ್ನೇ ಪ್ರಧಾನ ಸಂಪಾದಕರಾಗಲು ಕೇಳಿಕೊಂಡಾಗ ಒಪ್ಪಿಗೆ ಸೂಚಿದರು. ಅಲ್ಲದೇ, ಹೊತ್ತಿಗೆಯ ರೂಪು–ರೇಶೆಗಳನ್ನು ತಯಾರಿಸಿ, ಡಾ. ವಿನಾಯಕ ಹೆಗಡೆ ನಿರ್ದೇಶನದಲ್ಲಿ ತಯಾರಾದ ಸಮ್ಮೇಳನದ ಲೋಗೋವನ್ನು ಸಮೀಕರಿಸಿ, ಮುಖಪುಟದ ವಿನ್ಯಾಸ ಮಾಡಿ, ಸಮ್ಮೇಳನದ ದಿನ ದಿನಾಂಕ ೦೮–೦೨–೨೦೨೪ರಂದು ನಾಡವರ ಸಮುದಾಯ ಭವನದಲ್ಲಿ ಪ್ರೊ.ಜಿ.ಎಚ್.ನಾಯಕ ವೇದಿಕೆಯಲ್ಲಿ ನಡೆದ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಹೊಸತನದೊಂದಿಗೆ ಅನಾವರಣ ಮಾಡಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

'ಅಂಕೋಲೆಯ ಒಡಲಾಳ' ಸ್ಮರಣ ಸಂಚಿಕೆ ಸಮಿತಿಯ ಇನ್ನುಳಿದ ಸದಸ್ಯರಾದ ಜೆ. ಪ್ರೇಮಾನಂದ, ನಿರುಪಮಾ ಅಂಕೋಲೆಕರ ಇವರಿಗೂ ಧನ್ಯವಾದವನ್ನು ಹೇಳುತ್ತೇನೆ. ಹತ್ತನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಪ್ರೊ. ನಾಗೇಶದೇವ ಅಂಕೋಲೆಕರ ಇವರಿಗೆ ಅಭಿನಂದನೆಗಳು.

ಅಂಕೋಲೆಯ ಇತಿಹಾಸದಲ್ಲಿ ಈ ಹೊತ್ತಿಗೆ ಶಾಶ್ವತವಾಗಿರಲಿ ಎಂದು ಆಶಿಸುತ್ತಾ, ಈ ಸಮ್ಮೇಳನದಲ್ಲಿ ದುಡಿದ ಸ್ವಾಗತ ಸಮಿತಿಯ ಎಲ್ಲ ಪದಾಧಿಕಾರಿಗಳಿಗೂ, ಹಿರಿ-ಕಿರಿಯ ಸಾಹಿತಿಗಳಿಗೂ, ಸಮ್ಮೇಳನದಲ್ಲಿ ಉಪಸ್ಥಿತರಿದ್ದ ಎಲ್ಲ ಗೋಷ್ಠಿಗಳಲ್ಲಿ ಭಾಗವಹಿಸಿದ ಸಹೃದಯಿಗಳಿಗೂ ಧನ್ಯವಾದಗಳು. ದೂರದ ಊರಿನಿಂದ ಅತಿಥಿಗಳಾಗಿ ಆಗಮಿಸಿದ ಶಾ.ಮ.ಕೃಷ್ಣರಾಯ, ವಿಕ್ರಮ ವಿಸಾಜಿಯವರಿಗೂ, ಅವರನ್ನು ಸಮ್ಮೇಳನಕ್ಕೆ ಕರೆತರಲು ಸಹಾಯ ಮಾಡಿದ ಗೆಳೆಯ ಸಂದೀಪ ನಾಯಕ ಇವರಿಗೂ ಆಭಾರಿಯಾಗಿದ್ದೇನೆ. ನಮ್ಮನ್ನಗಲಿದ ಅಂಕೋಲೆಯ ಚೇತನಗಳ ನೆನಪಿಗೆ ನಿರ್ಮಿಸಿದ 'ನೆನಪಿನ ದ್ವಾರ' ಮಾಡಿ ಸದಾಕಾಲ ನೆನಪಿರುವ ಹಾಗೆ ಮಾಡಿದ ಶ್ಯಾಮಸುಂದರ ಗೌಡ ಹಾಗೂ ಸುಕ್ರು ಗೌಡ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಈ ಬೃಹತ್ ಸಂಸ್ಮರಣ ಸಂಚಿಕೆಯ ಅಕ್ಷರ ಜೋಡಣೆ ಹಾಗೂ ಪುಸ್ತಕ ವಿನ್ಯಾಸವನ್ನು ಉಚಿತವಾಗಿ ಮಾಡಿಕೊಟ್ಟು ಉಪಕರಿಸಿದ ಸಾಯಿ ಲೀಡ್ಸ್‌ನ ಮಾಲಕರೂ ಆದ ಶ್ರೀಮತಿ ನಿರುಪಮಾ ಅಂಕೋಲೆಕರ ಅವರಿಗೂ, ಸಮ್ಮೇಳನದುದ್ದಕ್ಕೂ ವ್ಯಾಪಕ ಪ್ರಚಾರವನ್ನು ನೀಡಿದ ಮಾಧ್ಯಮ ಮಿತ್ರರಿಗೂ ಆಭಾರಿಯಾಗಿದ್ದೇನೆ ಎಂದು ಹೇಳುತ್ತಾ, ಇದು ಬರೀ ಹೊತ್ತಿಗೆಯಲ್ಲ 'ಹೊತ್ತು ಹೊತ್ತಿಗೂ ನೆನಪುಮಾಡುವಂತಹ ಹೊತ್ತಿಗೆ' ಎಂದು ಹೇಳಿ ಸಂಭ್ರಮಿಸುತ್ತಿದ್ದೇನೆ.

'ಧನ್ಯವಾದಗಳು'

ಗೋಪಾಲಕೃಷ್ಣ ನಾಯಕ
ಅಧ್ಯಕ್ಷರು
ಕ.ಸಾ.ಪ., ಅಂಕೋಲಾ

ಸಂಪಾದಕರ ನುಡಿ

'ಸಾಹಿತ್ಯ ಸಮ್ಮೇಳನವನ್ನು ನಮ್ಮ ಸಾಂಸ್ಕೃತಿಕಲೋಕ ನುಡಿಹಬ್ಬವೆಂದೇ ಗುರುತಿಸಿಕೊಂಡು ಬಂದಿದೆ. ಹಬ್ಬದಲ್ಲಿ ಎಲ್ಲ ರೀತಿಯ ಸಡಗರಗಳಿರುತ್ತವೆ. ಊಟ–ಉಪಹಾರ, ಹೊಸಬಟ್ಟೆ, ಎಲ್ಲೆಲ್ಲೊ ಇದ್ದವರು ಬಂದು ಒಂದೆಡೆ ಸೇರುವುದು, ಸುಖ–ದುಃಖಗಳನ್ನು ಹಂಚಿಕೊಳ್ಳುವುದು, ಅವರ ಬೆಳವಣಿಗೆಯನ್ನು ಕಂಡು ಇವರು, ಇವರ ಬೆಳವಣಿಗೆಯನ್ನು ಕಂಡು ಅವರು ಖುಷಿಪಡುವುದು, ವೇದಿಕೆಗಳನ್ನು ಹಂಚಿಕೊಳ್ಳುವುದು, ನಡೆದು ಬಂದ ದಾರಿ ಮತ್ತು ನಡೆಯಬೇಕಾದ ದಾರಿಗಳ ಕುರಿತು ಮುಕ್ತವಾಗಿ ತೆರೆದುಕೊಳ್ಳುವುದು, ಹಿರಿಯರನ್ನೂ ಸಾಧಕರನ್ನೂ ನೆನಪು ಮಾಡಿಕೊಳ್ಳುವುದು, ಅಂಥವರಲ್ಲಿ ಕಣ್ಣಳತೆಗೆ ಸಿಕ್ಕವರನ್ನು ಕರೆತಂದು ಗೌರವಿಸುವುದು... ಹೀಗೆ ಒಂದು ರೀತಿಯ ಸಾಂಸ್ಕೃತಿಕ ಜವಾಬ್ದಾರಿಗಳನ್ನು ಹಂಚಿಕೊಳ್ಳುತ್ತ ನಿಭಾಯಿಸುತ್ತ ಇರುತ್ತೇವೆ.' ಅನ್ನುವ ದಿ. ವಿಷ್ಣು ನಾಯ್ಕರ ಮಾತಿನಂತೆ ಅಂಕೋಲಿಗರು ಕಳೆದ ಹದಿನೆಂಟು ವರ್ಷಗಳಲ್ಲಿ ಹತ್ತು ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿದ್ದಾರೆ. ಹಾಗೆಯೇ ಈ ಎಲ್ಲ ಸಾಹಿತ್ಯ ಸಮ್ಮೇಳನಗಳನ್ನು ನೆನಪಾಗಿ ಉಳಿಸುವ ವಾಂಛೆಯೊಂದಿಗೆ, ಬಹಳಷ್ಟು ಸಂದರ್ಭಗಳಲ್ಲಿ ಈ ಕ್ರಿಯೆ ಪ್ರತಿಷ್ಠೆಯ ಪ್ರಶ್ನೆಯಾಗಿಯೋ, ಕ್ರಮಪ್ರಾಪ್ತ ಪರಿಪಾಠವಾಗಿಯೋ ಅಥವಾ ಧನಸಂಗ್ರಹದ ಹಾದಿಯಾಗಿಯೋ, ನಡೆಯುವ ವಿಧಿಯಾಗಿಯೋ ಸ್ಮರಣ ಸಂಚಿಕೆಗಳನ್ನೂ ಪ್ರಕಟಿಸಿದ್ದಾರೆ. ಈ ಪರಂಪರೆಯ ಪರಿಕ್ರಮದ ಮುಂದುವರಿಕೆಯಾಗಿ ಈ ನೆನಪಿನ ಹೊತ್ತಿಗೆ ಪ್ರಕಟವಾಗುತ್ತಿದೆ.

'ಅಂಕೋಲೆ ಒಡಲಾಳ'ವನ್ನು ಕನ್ನಡಾಭಿಮಾನಿ ಓದುಗರ ಕೈಗೆ ಒಪ್ಪಿಸಲು ನಿಜಕ್ಕೂ ಸಂತೋಷವಾಗುತ್ತಿದೆ. ಪ್ರೊ. ನಾಗೇಶದೇವ ಅಂಕೋಲೆಕರ ಅವರ ಸರ್ವಾಧ್ಯಕ್ಷತೆಯಲ್ಲಿ ಜರುಗಿದ ಅಂಕೋಲಾ ತಾಲೂಕಿನ ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆಯಾಗಿ ನಿಲ್ಲಲಿರುವ ಇದಕ್ಕೆ ತನ್ನದೇ ಆದ ಚಾರಿತ್ರಿಕ ಮಹತ್ವವಿದೆ ಅನ್ನುವುದು ಸಂಪಾದಕ ಮಂಡಳಿಯ ನಂಬಿಕೆ.

ಈ ನೆನಪಿನ ಸಂಚಿಕೆಯ ವೈಶಿಷ್ಟ್ಯವೆಂದರೆ, ಹಿಂದಿನ ಸಮ್ಮೇಳನಗಳ ಸ್ಮರಣ ಸಂಚಿಕೆಗಳಲ್ಲಿ ಪ್ರಕಟವಾದ ಮಹತ್ವದ ಲೇಖನಗಳನ್ನು ಆಯ್ದು, ಅವಶ್ಯಕವೆನಿಸಿದಲ್ಲಿ ಮೂಲ ಲೇಖಕರಿಂದಲೇ ಅವುಗಳನ್ನು ಪರಿಷ್ಕರಿಸಿ ಇಲ್ಲಿ ಮರುಪ್ರಕಟಿಸಲಾಗಿದೆ. ಹಾಗೆಯೇ ಈವರೆಗೆ ಅಂಕೋಲೆಯಲ್ಲಿ ನಡೆದ ಎಲ್ಲ ತಾಲೂಕು ಸಮ್ಮೇಳನಗಳ ಸರ್ವಾಧ್ಯಕ್ಷರ ಭಾಷಣಗಳನ್ನು ಅವರ ಕಿರು ಪರಿಚಯದೊಂದಿಗೆ ಇಲ್ಲಿ ಪ್ರಕಟಿಸಿದ್ದೇವೆ. ಇದರಿಂದ ಹಿಂದಿನ ಸಮ್ಮೇಳನದ ಮೆಲುಕಿಗೆ ಒಂದು ವಿಶೇಷ ಆಸ್ಪದ ಕಲ್ಪಿಸಿದಂತಾಗಿದೆ. ಆಯಾ ಕಾಲಘಟ್ಟಗಳಲ್ಲಿ ಸಮ್ಮೇಳನದ ವೇದಿಕೆಗಳಲ್ಲಿ ಮೂಡಿಬಂದ ಮುಖ್ಯ ಅಭಿಪ್ರಾಯಗಳು ಚರಿತ್ರೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಬಲ್ಲವು ಅನ್ನುವುದೂ ಸಂಪಾದಕ ಮಂಡಳಿಯ ನಂಬಿಕೆಯಾಗಿರುವುದರಿಂದ ಈ ಉಪಕ್ರಮವನ್ನು ಅಳವಡಿಸಿಕೊಂಡಿದ್ದೇವೆ.

'ಅಂಕೋಲೆ ಒಡಲಾಳ'ದಲ್ಲಿ ಈನೆಲದ ಚರಿತ್ರೆಗೆ ಸಂಬಂಧಿಸಿದ, ಜನಪದಕ್ಕೆ ಸಂಬಂಧಿಸಿದ, ಇಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನು, ರೈತ ಚಳುವಳಿಗಳನ್ನು ಪರಿಚಯಿಸುವ ಮುಖ್ಯವಾಗಿ ಈವರೆಗೆ ಎಲ್ಲಿಯೂ ದಾಖಲಾಗದ ಅಂಕೋಲೆಯ ಸಂಗೀತ ಪರಂಪರೆಯ ಕುರಿತಾದ ಲೇಖನಗಳೂ ಇಲ್ಲಿವೆ. ಒಂದು ನಿರ್ದಿಷ್ಟ ಕಾಲಮಿತಿಯ ಅಂಕೋಲೆಯ ಸಾಹಿತ್ಯವನ್ನು ವಿಶ್ಲೇಷಿಸುವ ಪ್ರೌಢ ಪ್ರಬಂಧಗಳೂ ಇವೆ. ಇಂಥ ಐತಿಹಾಸಿಕ ದಾಖಲೆಯ ಸತ್ಯ ಶೋಧನಾತ್ಮಕವಾದ ಪ್ರಬಂಧಗಳನ್ನು ಉದ್ದೇಶ ಪೂರ್ವಕವಾಗಿಯೇ ಪ್ರಸ್ತುತ ಸಂಚಿಕೆಯಲ್ಲಿ ಅಳವಡಿಸಲಾಗಿದೆ. ಅಭಿಪ್ರಾಯ ಪ್ರಕಟಗೊಳ್ಳದೇ ವಿಮರ್ಶೆ ಹುಟ್ಟಲಾರದು. ಇಲ್ಲಿ ವ್ಯಕ್ತವಾದ ವಿದ್ವಾಂಸ ವಲಯದ ಅಭಿಪ್ರಾಯಗಳಾಗಲೀ ವಿಷಯ ಪ್ರತಿಪಾದನೆಯಾಗಲೀ ಆಯಾ ಲೇಖಕರಿಗೇ ಸಂಬಂಧ ಪಟ್ಟಿರುವುದು. ಸಂಪಾದಕ ಮಂಡಳಿ 'ಇದಮಿತ್ಥಂ' ಎಂದು ಎಂದಿಗೂ ಭಾವಿಸುವುದಿಲ್ಲ. ಭವಿಷ್ಯದ ಪೀಳಿಗೆಗೆ ಸತ್ಯದರ್ಶನವನ್ನಲ್ಲದೆ ಕಟ್ಟುಕತೆಯನ್ನು ಕಟ್ಟಿಕೊಡುವ ದುಸ್ಸಾಹಸಕ್ಕೆ ಕೈಹಾಕಬಾರದೆಂಬ ಕಟ್ಟೆಚ್ಚರ ಸಂಪಾದಕ ಮಂಡಳಿಗಿದೆ.

ದೇಶಿ ಮತ್ತು ಮಾರ್ಗ ಉಭಯ ಕ್ಷೇತ್ರದಲ್ಲೂ ಈ ನೆಲಕ್ಕೆ ರಾಜ್ಯ ಮಟ್ಟದ ಖ್ಯಾತಿಯನ್ನು ದೊರಕಿಸಿಕೊಟ್ಟ ಮಹನೀಯರು ಇಲ್ಲಿದ್ದಾರೆ. ಅಂಥ ಮಹನೀಯರ ಪಟ್ಟಿ ಮಾಡುವುದಕ್ಕೆ 'ಸಂಪಾದಕರ ನುಡಿ'ಯ ಪುಟಗಳ ಮಿತಿಯಲ್ಲಿ ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಸಾಂಸ್ಕೃತಿಕ ಮನಸ್ಸುಗಳು ಅಂಥ ವ್ಯಕ್ತಿತ್ವಗಳನ್ನು ಗುರುತಿಸಿ ಸದಾಕಾಲ ಗೌರವಿಸುತ್ತ ಬಂದಿವೆ, ಮುಂದೆಯೂ ಗೌರವಿಸುತ್ತವೆ ಅನ್ನುವುದು ಭರವಸೆ. ಈ ಹಿನ್ನೆಲೆಯಲ್ಲಿ ಇಂದು ನಮ್ಮನ್ನು ಅಗಲಿರುವ ಅಂಕೋಲೆಯ ಹಿಂದಿನ ತಲೆಮಾರಿನ ಪ್ರಮುಖ ಕವಿಗಳನ್ನು ಸ್ಮರಿಸಿಕೊಳ್ಳುವ ಉದ್ದೇಶದಿಂದ ಹಾಗೂ ಅವರ ಬರವಣಿಗೆಯ ಶೈಲಿ ಇಂದಿನವರಿಗೆ ಪರಿಚಯವಾಗಲಿ ಅನ್ನುವ ಕಾರಣಕ್ಕಾಗಿ ಪ್ರಾತಿನಿಧಿಕವಾಗಿ ಒಂದೊಂದು ಕವನಗಳನ್ನು ಇಲ್ಲಿ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ ಅಂಕೋಲೆಯ ಸಾಹಿತ್ಯ ಸಂಸ್ಕೃತಿಯ ಕುರಿತಾಗಿ ಅಧ್ಯಯನ ಮಾಡಬಯಸುವವರಿಗೆ ಮಾರ್ಗದರ್ಶಿಯಾಗಬಲ್ಲ ಒಂದು ಪ್ರಾಥಮಿಕ ಆಕರಗ್ರಂಥವಾಗಲಿ ಅನ್ನುವ ಆಶಯದೊಂದಿಗೆ ನಮ್ಮ ಇತಿ–ಮಿತಿಯಲ್ಲಿ ಈ ನೆನಪಿನ ಹೊತ್ತಿಗೆಯನ್ನು ಸಿದ್ಧಪಡಿಸಿದ್ದೇವೆ.

ಒಂದು ಸಮ್ಮೇಳನದ ನೆನಪಿನ ಸಂಚಿಕೆಯೆಂದಮೇಲೆ ಕೇವಲ ಲೇಖನಗಳಿಗೆ ಮಾತ್ರ ಅದು ಗುತ್ತಿಗೆಯಲ್ಲ. ಸಮ್ಮೇಳನಕ್ಕೆ ಶುಭಹಾರೈಸಿ ಬರೆದವರ ಮಾತಿರಬಹುದು, ಆ ಸಮ್ಮೇಳನದ ಯಶಸ್ಸಿಗಾಗಿ ಬುದ್ಧಿ–ಬೆವರನ್ನು ಕೊಟ್ಟವರ ಭಾವಚಿತ್ರಗಳಿರಬಹುದು, ಊಟ–ಉಪಚಾರಗಳ ಮೂಲಕ ಹೊಟ್ಟೆ ತಣ್ಣಗಾಗಿಸಿದವರಿರಬಹುದು, ಆರ್ಥಿಕವಾಗಿ ಪ್ರೋತ್ಸಾಹಿಸಿದವರಿರಬಹುದು ಇವೆಲ್ಲವೂ ಅಲ್ಲಿ ದಾಖಲಾದಾಗಲೇ ಅದು ನೆನಪಿನ ಸಂಚಿಕೆ ಅನ್ನಿಸಿಕೊಳ್ಳುತ್ತದೆ. ಆ ದೃಷ್ಟಿಯಲ್ಲಿ ಕೂಡ 'ಅಂಕೋಲೆ ಒಡಲಾಳ' ಪರಿಪೂರ್ಣತೆಯ ದಾರಿಯಲ್ಲಿರುವುದು ನಮಗೆ ಸಂತೋಷವನ್ನುಂಟುಮಾಡಿದೆ.

ಅಲ್ಪ ಕಾಲಮಿತಿಯಲ್ಲಿಯೇ ನಾವು ವಿನಂತಿಸಿಕೊಂಡ ಎಲ್ಲ ಮಹನೀಯರು ವಿವಿಧ ವಿಷಯಗಳ ಲೇಖನಗಳನ್ನು ಸಿದ್ಧಪಡಿಸಿ ನೀಡಿದ್ದಾರೆ. ನಮ್ಮ ಮೇಲಿನ ವಿಶ್ವಾಸದಿಂದ ಸಕಾಲದಲ್ಲಿ ಲೇಖನಗಳನ್ನು ಬರೆದುಕೊಟ್ಟ ಎಲ್ಲ ವಿದ್ವಾಂಸರಿಗೆ ಸಂಪಾದಕ ಮಂಡಳಿ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತದೆ. ಸ್ಮರಣ ಸಂಚಿಕೆಯ ವಿನ್ಯಾಸ, ವರ್ಣ ಸಂಯೋಜನೆ, ಆಕೃತಿ ರಚನೆ ಮತ್ತು ಮುದ್ರಣಕಾರ್ಯದಲ್ಲಿ ಮುತುವರ್ಜಿ ವಹಿಸಿದ ಎಲ್ಲ ಮಹನೀಯರಿಗೆ ನಾವು ಋಣಿಯಾಗಿದ್ದೇವೆ. ಸಂಚಿಕೆಗೆ ಜಾಹೀರಾತು ನೀಡುವ ಮೂಲಕ ಇದರ ಮುದ್ರಣದ ಆರ್ಥಿಕ ಹೊರೆಯ ಭಾರವನ್ನು ನಮ್ಮೊಡನೆ ಹಂಚಿಕೊಂಡ ಎಲ್ಲ ಜಾಹೀರಾತುದಾರರಿಗೂ ಮತ್ತು ದಾನಿಗಳಿಗೂ ನಮ್ಮ ನಮನಗಳು. ಸಮ್ಮೇಳನ ಮತ್ತು ಸ್ಮರಣ ಸಂಚಿಕೆ ರಚನೆಯಲ್ಲಿ ನಮ್ಮೊಡನೆ ಪ್ರತ್ಯಕ್ಷವಾಗಿ – ಅಪ್ರತ್ಯಕ್ಷವಾಗಿ ಕೈಜೋಡಿಸಿದ ಎಲ್ಲ ಮಹನೀಯರನ್ನು ನಾವಿಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಂಕೋಲಾ ತಾಲೂಕು ಘಟಕ, ಜಿಲ್ಲಾ ಘಟಕ, ರಾಜ್ಯ ಘಟಕಗಳ ಎಲ್ಲ ಪದಾಧಿಕಾರಿಗಳ ಹಾಗೂ ಹಿರಿಯ ಸಾಹಿತಿಗಳ ಮಾರ್ಗದರ್ಶನಕ್ಕೆ, ಸಮ್ಮೇಳನದ ಯಶಸ್ಸಿಗೆ ದುಡಿದ ವಿವಿಧ ಸಮಿತಿಗಳವರಿಗೆ ನಾವು ಋಣಿಯಾಗಿದ್ದೇವೆ.

ಅದ್ದೂರಿಯಾಗಿ ಸಾಹಿತ್ಯದ ಸಿರಿವಂತಿಕೆಯಿಂದ ಯಶಸ್ವಿಯಾಗಿ ಜರುಗಿದ ಸಮ್ಮೇಳನದ ನೆನಪುಗಳನ್ನು ದಾಖಲಿಸುವ ಹೆಚ್ಚಿನ ಹೊಣೆಗಾರಿಕೆ ನಮ್ಮ ಪಾಲಿಗೆ ಒದಗಿ ಬಂದದ್ದು ಕೂಡ ಒಂದು ನೆನಪಾಗಿ ಉಳಿಯಲಿದೆ. ನಮ್ಮ ಮೇಲೆ ವಿಶೇಷವಾದ ವಿಶ್ವಾಸವಿಟ್ಟು ಇದಕ್ಕೆ ಕಾರಣರಾದವರೆಲ್ಲರನ್ನು ಇನ್ನೊಮ್ಮೆ ಸ್ಮರಿಸಿಕೊಳ್ಳುತ್ತ, ಈ ನೆನಪಿನ ಸಂಚಿಕೆ ಕೆಲವು ಮಿತಿಗಳನ್ನು ಒಳಗಿಟ್ಟುಕೊಂಡೂ ಸಂಗ್ರಹ ಯೋಗ್ಯವಾಗಿ ಮೂಡಿಬಂದಿದೆ ಎನ್ನುವ ವಿಶ್ವಾಸದೊಂದಿಗೆ ತಮ್ಮ ಕೈಗಿಡುತ್ತಿದ್ದೇವೆ.

ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ

ಸಂಪಾದಕ ಮಂಡಳಿಯ ಪರವಾಗಿ

ಶ್ಯಾಮಸುಂದರ ಗೌಡ
ಪ್ರಧಾನ ಸಂಪಾದಕರು

ಕೇಂದ್ರ ಕಸಾಪ ಸಮಿತಿ, ಬೆಂಗಳೂರು

ನಾಡೋಜ ಡಾ. ಮಹೇಶ ಜೋಶಿ, ಅಧ್ಯಕ್ಷರು

ನೇ.ಭ. ರಾಮಲಿಂಗ ಶೆಟ್ಟಿ, ಗೌರವ ಕಾರ್ಯದರ್ಶಿ

ಡಾ. ಪದ್ಮಿನಿ ನಾಗರಾಜ, ಗೌರವ ಕಾರ್ಯದರ್ಶಿ

ಡಾ. ಬಿ.ಎಂ. ಪಟೇಲಪಾಂಡು, ಗೌರವ ಕೋಶಾಧ್ಯಕ್ಷರು

* * *

ಜಿಲ್ಲಾ ಕಸಾಪ ಸಮಿತಿ, ಉತ್ತರ ಕನ್ನಡ

ಬಿ. ಎನ್. ವಾಸರೆ, ಅಧ್ಯಕ್ಷರು

ಪಿ. ಆರ್. ನಾಯ್ಕ, ಗೌರವ ಕಾರ್ಯದರ್ಶಿ

ಜಾರ್ಜ್ ಫರ್ನಾಂಡೀಸ್, ಗೌರವ ಕಾರ್ಯದರ್ಶಿ

ಮುರ್ತುಜಾ ಹುಸೇನ, ಆನೆಹೊಸೂರ, ಗೌರವ ಕೋಶಾಧ್ಯಕ್ಷರು

* * *

ತಾಲೂಕಾ ಕಸಾಪ ಸಮಿತಿ, ಅಂಕೋಲಾ

ಗೋಪಾಲಕೃಷ್ಣ ನಾಯಕ, ಅಧ್ಯಕ್ಷರು

ಜಗದೀಶ ನಾಯಕ, ಗೌರವ ಕಾರ್ಯದರ್ಶಿ

ಜಿ. ಆರ್. ತಾಂಡೇಲ, ಗೌರವ ಕಾರ್ಯದರ್ಶಿ

ಡಾ|| ಎಸ್. ವಿ. ವಸ್ತ್ರದ, ಗೌರವ ಕೋಶಾಧ್ಯಕ್ಷರು

ಸದಸ್ಯರು

ಮಂಗಳಲಕ್ಷ್ಮಿ ಎಂ. ಪಾಟೀಲ, ರಫೀಕ್ ಶೇಖ್, ಡಾ. ಪುಷ್ಪಾ ನಾಯ್ಕ, ಡಾ. ಪ್ರಕಾಶ ಬಿ. ನಾಯಕ, ಡಾ. ವಿನಾಯಕ ಹೆಗಡೆ, ಸುಜೀತ ಎನ್. ನಾಯ್ಕ, ರಾಘು ಕಾಕರಮಠ, ಬಾಲಚಂದ್ರ ಎನ್. ನಾಯಕ, ಪ್ರಕಾಶ ರಾಮಾ ಕುಂಜಿ, ಮಹಾಂತೇಶ ರೇವಡಿ, ಎನ್.ವಿ. ರಾಠೋಡ, ಅರುಣ ಶೆಟ್ಟಿ, ಗೌರೀಶ ನಾಯಕ, ಡಾ|| ಅರ್ಚನಾ ನಾಯಕ, ರಾಜೇಂದ್ರ ಕೇಣಿ, ಎಂ.ಬಿ. ಆಗೇರ

* * *

ಕನ್ನಡ ಸಾಹಿತ್ಯ ಪರಿಷತ್ತು, ಅಂಕೋಲಾ ಘಟಕ
ಅಂಕೋಲಾ ತಾಲೂಕಾ ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನ

ಸ್ವಾಗತ ಸಮಿತಿ

ಗೌರವಾಧ್ಯಕ್ಷರು	: ಶ್ರೀ ಸತೀಶ ಸೈಲ್, ಮಾನ್ಯ ಶಾಸಕರು
ಅಧ್ಯಕ್ಷರು	: ಡಾ. ಮಹೇಶ ಗೋಳಿಕಟ್ಟೆ
ಪ್ರಧಾನ ಕಾರ್ಯದರ್ಶಿ	: ಗೋಪಾಲಕೃಷ್ಣ ಜಿ. ನಾಯಕ
ಸಹ ಕಾರ್ಯದರ್ಶಿಗಳು	: ಜಗದೀಶ ನಾಯಕ, ಜಿ. ಆರ್. ತಾಂಡೇಲ
ಖಜಾಂಚಿ	: ಡಾ. ಎಸ್.ವಿ. ವಸ್ತ್ರದ
ಸಂಘಟನಾ ಕಾರ್ಯದರ್ಶಿಗಳು	: ಎಂ.ಬಿ. ಆಗೇರ, ಸುಜೀತ ನಾಯ್ಕ
ಉಪಾಧ್ಯಕ್ಷರು	: ಮೋಹನ ಹಬ್ಬು, ಡಾ॥ ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ ರವೀಂದ್ರ ಕೇಣಿ, ಅಧ್ಯಕ್ಷರು, ದಿನಕರ ವೇದಿಕೆ ವಸಂತ ನಾಯಕ, ಅಧ್ಯಕ್ಷರು, ಶ್ರೀರಾಮ ಪರಿಸರ ಕ್ರೆಡಿಟ್ ಸೊಸೈಟಿ, ಅಂಕೋಲಾ ರಾಘವೇಂದ್ರ ಡಿ. ನಾಯಕ, ಅಧ್ಯಕ್ಷರು, ಗೋದಾವರಿ ಕ್ರೆಡಿಟ್ ಸೊಸೈಟಿ, ಅಂಕೋಲಾ ಸವಿತಾ ಶಾಸ್ತ್ರೀಮಠ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸಂತೋಷ ಶೆಟ್ಟಿ, ಪೊಲೀಸ್ ನಿರೀಕ್ಷಕರು ನಾಗೇಶ ನಾಯ್ಕ(ಆಚಾ), ಅಧ್ಯಕ್ಷರು, ನಾಮಧಾರಿ ಆರ್ಯ ಈಡಿಗ ಅಭಿವೃದ್ಧಿ ಸಂಘ (ರಿ.) ಬಾಲಚಂದ್ರ ನಾಯಕ, ಅಧ್ಯಕ್ಷರು, ಸ.ನೌ.ಸಂ. ಅಂಕೋಲಾ ತಾಲೂಕು, ವಿಷ್ಣು ನಾಯ್ಕ, ಹಿರಿಯ ಸಾಹಿತಿಗಳು ಡಾ. ಆರ್.ಜಿ. ಗುಂದಿ, ಹಿರಿಯ ಸಾಹಿತಿಗಳು ಮಂಗಲದಾಸ ಕಾಮತ, ಉದ್ಯಮಿಗಳು, ಅಂಕೋಲಾ ರೊ. ಶ್ರೀಧರ ನಾಯ್ಕ, ಉದ್ಯಮಿಗಳು, ಬೊಗ್ರಿಗದ್ದೆ ಜಾತವೇದ ಡಿ. ನಾಯಕ, ಅರಸ್ ಕನ್‌ಸ್ಟ್ರಕ್ಷನ್ & ಮಾರ್ಕೆಟಿಂಗ್ ನಾಗಾನಂದ ಬಂಟ, ಅಧ್ಯಕ್ಷರು, ಜಿಲ್ಲಾ ನೋಟರಿ ಸಂಘ
ಸದಸ್ಯರು	: ಸಂದೀಪ ನಾಯಕ, ತಿಮ್ಮಣ್ಣ ಭಟ್, ಕೃಷ್ಣಕುಮಾರ ಮಹಾಲೆ ಗೋಪಾಲಕೃಷ್ಣ ಸಿ. ನಾಯ್ಕ, ರವೀಂದ್ರ ಎನ್. ಶೆಟ್ಟಿ ಶ್ರೀಧರ ಎಸ್. ನಾಯ್ಕ, ಉಲ್ಲಾಸ ಹುದ್ದಾರ, ಗಣಪತಿ ನಾಯಕ ಶೀಳ್ಯ ಶಾಂತಾರಾಮ ನಾಯಕ, ಅನುರಾಧಾ ನಾಯ್ಕ

ಕನ್ನಡ ಸಾಹಿತ್ಯ ಪರಿಷತ್ತು, ಅಂಕೋಲಾ ಘಟಕ
ಅಂಕೋಲಾ ತಾಲೂಕಾ ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನ

ಉಪಸಮಿತಿಗಳು

ವೇದಿಕೆ ಸಮಿತಿ	: ಡಾ. ವಿನಾಯಕ ಹೆಗಡೆ, ಡಾ. ಪುಷ್ಪಾ ನಾಯ್ಕ, ರಾಜು ಎಚ್. ನಾಯಕ
ಊಟೋಪಚಾರ ಸಮಿತಿ	: ವಿಜಯ ನಾಯಕ, ರಮೇಶ ನಾಯಕ, ಜಯರಾಮ ಎಚ್. ನಾಯಕ, ದಿವಾಕರ ದೇವನಮನೆ, ಆನಂದು ವಿ. ನಾಯಕ, ರಾಮನಾಥ ನಾಯ್ಕ
ಸಾಂಸ್ಕೃತಿಕ ಸಮಿತಿ	: ನಾಗರಾಜ ಜಾಂಬಳೇಕರ, ಸುಜೀತ ನಾಯ್ಕ, ಕೆ. ರಮೇಶ
ಪ್ರಚಾರ ಸಮಿತಿ	: ಅರುಣ ಶೆಟ್ಟಿ, ವಿದ್ಯಾಧರ ಮೊರಬಾ, ನಾಗರಾಜ ಮಂಜಗುಣಿ, ರಾಘು ಕಾಕರಮಠ, ವಾಸುದೇವ ಗುನಗಾ, ವಿಠ್ಠಲದಾಸ ಕಾಮತ, ಸುಭಾಷ ಕಾರೇಬೈಲ್, ಕೆ. ರಮೇಶ, ಅಕ್ಷಯ ನಾಯ್ಕ, ನಾಗರಾಜ ಜಾಂಬಳೇಕರ, ಮಾರುತಿ ಹರಿಕಂತ್ರ, ವಿಲಾಸ ನಾಯಕ
ಮೆರವಣಿಗೆ/ ಧ್ವಜ ನಿರ್ವಹಣೆ ಸಮಿತಿ	: ಪ್ರಕಾಶ ಕುಂಜಿ, ಶ್ರೀಧರ ನಾಯ್ಕ, ಜಿ.ಆರ್. ನಾಯಕ ಎಂ.ಎಂ. ಕರ್ಕಿಕರ, ರಾಜೇಂದ್ರ ಕೇಣಿ, ಗಣಪತಿ ಗಾಂವಕರ
ಆರೋಗ್ಯ ಸಮಿತಿ	: ಡಾ॥ ಅರ್ಚನಾ ನಾಯಕ, ತೃಪ್ತಿ ನಾಯ್ಕ, ತಿಮ್ಮಣ್ಣ ನಾಯಕ
ಸ್ಮರಣ ಸಂಚಿಕೆ ಸಮಿತಿ	: ಶ್ಯಾಮಸುಂದರ ಗೌಡ, ಜೆ. ಪ್ರೇಮಾನಂದ, ನಿರುಪಮಾ ಅಂಕೋಲೆಕರ
ಸನ್ಮಾನ ಸಮಿತಿ	: ಎನ್.ವಿ. ರಾಠೋಡ, ಎಂ.ಬಿ. ಆಗೇರ, ಜಯಶೀಲ ಆಗೇರ, ರಫೀಕ ಶೇಖ್, ಮಂಜುನಾಥ ಇಟಗಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಪೇಟೆ, ಬೆಂಗಳೂರು – ೫೬೦ ೦೧೮

ಸ್ಥಾಪನೆ : ೧೯೧೫

ಶುಭ ಸಂದೇಶ

೨೦೨೪ ಫೆಬ್ರುವರಿ ೦೮ ರಂದು ಪ್ರೊ. ನಾಗೇಶದೇವ ಅಂಕೋಲೇಕರ ಅವರ ಅಧ್ಯಕ್ಷತೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕು ಮಟ್ಟದ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಬಹಳ ವಿಜ್ರಂಭಣೆಯಿಂದ ಜರುಗುತ್ತಿರುವುದು ಬಹಳ ಸಂತೋಷ ಮತ್ತು ಹೆಮ್ಮೆ ಪಡುವ ಸಂಗತಿ. ಇಂತಹ ಸಮ್ಮೇಳನಗಳು ಈಗ ತಾನೆ ಸಾಹಿತ್ಯ ಲೋಕಕ್ಕೆ ಪ್ರವೇಶಿಸುತ್ತಿರುವ ಹೊಸ ಪ್ರತಿಭೆಗಳು ಬೆಳಕಿಗೆ ಬರಲು ಸೂಕ್ತ ವೇದಿಕೆಗಳಾಗುತ್ತವೆ. ಈ ನಿಟ್ಟಿನಲ್ಲಿ ಸಮ್ಮೇಳನವು ಯಶಸ್ವಿಯಾಗಿ ನೆರವೇರಲಿ ಎಂದು ಆಶಿಸುತ್ತೇನೆ.

ಸಮ್ಮೇಳನದ ಸವಿನೆನಪಿಗಾಗಿ ತಾವು ಹೊರತರುತ್ತಿರುವ ಸ್ಮರಣ ಸಂಚಿಕೆಯು ಅಂಕೋಲೆಯ ಸಾಹಿತ್ಯ, ಸಂಸ್ಕೃತಿಗಳನ್ನು ನಾಡಿನ ಜನತೆಗೆ ಪರಿಚಯಿಸುವಂತಹ ಗ್ರಂಥವಾಗಿ ಮೂಡಿಬರಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ನಾಡೋಜ ಡಾ. ಮಹೇಶ ಜೋಶಿ

ಮಂಕಾಳು ವೈದ್ಯ

ಮೀನುಗಾರಿಕಾ ಬಂದರು ಮತ್ತು ಒಳನಾಡು ಜಲಸಾರಿಗೆ
ಹಾಗೂ ಉ.ಕ. ಜಿಲ್ಲಾ ಉಸ್ತುವಾರಿ ಸಚಿವರು

ಶುಭ ಸಂದೇಶ

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕು ಮಟ್ಟದ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನವು ೨೦೨೪ ಫೆಬ್ರುವರಿ ೦೮ ರಂದು ಪ್ರೊ. ನಾಗೇಶದೇವ ಅಂಕೋಲೇಕರ ಅವರ ಅಧ್ಯಕ್ಷತೆಯಲ್ಲಿ ಜರುಗುತ್ತಿರುವುದು ಬಹಳ ಸಂತೋಷದ ವಿಷಯ. ಅಂಕೋಲಾ ತಾಲೂಕಿನ ಅಧ್ಯಕ್ಷರು ಮತ್ತು ಎಲ್ಲಾ ಪದಾಧಿಕಾರಿಗಳನ್ನು ನಾನು ಈ ಸಂದರ್ಭದಲ್ಲಿ ಹಾರ್ದಿಕವಾಗಿ ಅಭಿನಂದಿಸಲು ಬಯಸುತ್ತೇನೆ.

೧೦ನೇ ಸಮ್ಮೇಳನದ ಸವಿನೆನಪಿಗಾಗಿ ಸಂಸ್ಮರಣ ಗ್ರಂಥ ಹೊರತರಲು ಉದ್ದೇಶಿಸಿರುವುದು ಅಭಿನಂದನೀಯ. ಅಂಕೋಲಾ ತಾಲೂಕು ಐತಿಹಾಸಿಕವಾಗಿ, ಭಾಷಿಕವಾಗಿ ಮತ್ತು ಪ್ರಾಕೃತಿಕವಾಗಿ ಅತ್ಯಂತ ಶ್ರೀಮಂತವಾಗಿದೆ. ತಾಲೂಕಿನ ಸಾಹಿತ್ಯಿಕ ಕೊಡುಗೆ ಹಾಗೂ ಐತಿಹಾಸಿಕ ಹಿನ್ನೋಟದಂತಹ ಅರ್ಥಪೂರ್ಣವಾದ ಲೇಖನಗಳನ್ನು ಒಳಗೊಂಡಂತೆ ಈ ಸ್ಮರಣ ಸಂಚಿಕೆ ಹೊರಬರಲಿ ಎಂದು ಹಾರೈಸುತ್ತೇನೆ.

ಈ ಸಾಹಿತ್ಯ ಸಮ್ಮೇಳನವು ಯಶಸ್ವಿಯಾಗಿ ನಡೆಯಲಿ, ಕನ್ನಡ ಭಾಷೆ ಮತ್ತು ಸಾಂಸ್ಕೃತಿಕ ಪರಿಸರಕ್ಕೆ ಹೊಸ ಚೇತನ ತುಂಬಲಿ ಎಂದು ನಾನು ಮನದುಂಬಿ ಹಾರೈಸುತ್ತೇನೆ.

ಮಂಕಾಳು ವೈದ್ಯ

ಸತೀಶ ಸೈಲ್

ಶಾಸಕರು, ಕಾರವಾರ–ಅಂಕೋಲಾ ವಿಧಾನಸಭಾ ಕ್ಷೇತ್ರ
ಅಧ್ಯಕ್ಷರು, ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ & ಅಡ್ವರ್ಟೈಸಿಂಗ್ ಲಿಮಿಟೆಡ್.

ಶುಭ ಸಂದೇಶ

ಕನ್ನಡ ನಾಡು ನುಡಿಯ ಹಬ್ಬವಾಗಿ ಆಚರಿಸಲ್ಪಡುವ ಅಂಕೋಲಾ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ವಿಜ್ರಂಭಿಸಲಿ ಎಂದು ಹೃದಯಪೂರ್ವಕವಾಗಿ ಆಶಿಸುತ್ತೇನೆ.

ಪ್ರೊ. ನಾಗೇಶದೇವ ಅಂಕೋಲೇಕರ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆಯುವ ಸಮ್ಮೇಳನದಲ್ಲಿ ಅರ್ಥಪೂರ್ಣ ವಿಚಾರಗಳು ಹೊರಹೊಮ್ಮಿ ನಮ್ಮ ನಾಡು ನುಡಿ ಇನ್ನಷ್ಟು ಶ್ರೀಮಂತಗೊಳ್ಳಲು ಕಾರಣವಾಗಲಿ.

ಸಮ್ಮೇಳನದ ಸಂದರ್ಭದಲ್ಲಿ ಹೊರತರಲಿರುವ ನೆನಪಿನ ಸಂಚಿಕೆ ಕೂಡ ನೈಜ ನೆನಪಿನ ಬುತ್ತಿಯಾಗಿ ಕನ್ನಡ ಸಾರಸ್ವತರ ಕೈ ಸೇರಲಿ ಎಂದು ನಾನು ಬಯಸುತ್ತೇನೆ. ಒಟ್ಟಾರೆಯಾಗಿ ಇಡೀ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಜರುಗಲಿ ಎಂಬುದು ನನ್ನ ಹಾರೈಕೆ.

ಸತೀಶ ಸೈಲ್

ಗಣಪತಿ ಉಳವೇಕರ

ವಿಧಾನ ಪರಿಷತ್ ಸದಸ್ಯರು

ಶುಭ ಸಂದೇಶ

ಐತಿಹಾಸಿಕ ಹಿನ್ನೆಲೆ ಹೊಂದಿರುವ ನದಿ ಕಾನನಗಳ ಬೀಡು ಅಂಕೋಲೆ. ಸಾಹಿತ್ಯ, ಸಂಸ್ಕೃತಿಗಳನ್ನು ತಮ್ಮ ಜೀವನದೊಂದಿಗೆ ಹಾಸುಹೊಕ್ಕಾಗಿ ಮೇಳೈಸಿಕೊಂಡು ಬದುಕುತ್ತಿರುವ ಅಕ್ಷರ ನಾಡಿನಲ್ಲಿ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಡುತ್ತಿರುವುದು ಅತ್ಯಂತ ಸಂತಸ ಮತ್ತು ಹೆಮ್ಮೆಯ ವಿಷಯ.

ಡಾ॥ ದಿನಕರ ದೇಸಾಯಿಯವರು ಸಾಹಿತ್ಯ ಕೃಷಿ ಮಾಡಿದ ಅಂಕೋಲೆಯ ತಾಲೂಕಾ ಸಮ್ಮೇಳನದಲ್ಲಿ ವಿಶ್ರಾಂತ ಪ್ರೊ. ನಾಗೇಶದೇವ ಅಂಕೋಲೇಕರ ಇವರನ್ನು ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಶ್ಲಾಘನೀಯ. ಸಮ್ಮೇಳನವು ಯಶಸ್ವಿಯಾಗಿ ಜರುಗಲಿ ಎಂದು ಹಾರೈಸುತ್ತೇನೆ.

ಗಣಪತಿ ಉಳವೇಕರ

ಎಸ್. ವ್ಹಿ. ಸಂಕನೂರ M.Sc., LL.B.(Spl)
ವಿಧಾನ ಪರಿಷತ್ ಸದಸ್ಯರು
ಕರ್ನಾಟಕ ಪಶ್ಚಿಮ ಪದವೀಧರ ಮತಕ್ಷೇತ್ರ

* ಮನೆ : ವಕೀಲ ಚಾಳ, ಗದಗ–582101
* ಕಛೇರಿ : ಜನಸಂಪರ್ಕ ಕಾರ್ಯಾಲಯ, ಮಿನಿ ವಿಧಾನಸೌಧ ಕಟ್ಟಡ, ಧಾರವಾಡ–580 001
* ಶಾಸಕರು ಭವನ –1, ಕೊಠಡಿ ಸಂಖ್ಯೆ – 22,23 ಬೆಂಗಳೂರು–01, ಮೊ. : 9448301983

ಶುಭ ಸಂದೇಶ

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಪಟ್ಟಣದಲ್ಲಿ ದಿನಾಂಕ ೦೮–೦೨–೨೦೨೪ ರಂದು ತಾಲೂಕು ಮಟ್ಟದ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಬಹಳ ವಿಜ್ರಂಭಣೆಯಿಂದ ಜರುಗುತ್ತಿರುವುದು ಬಹಳ ಸಂತೋಷ ಮತ್ತು ಹೆಮ್ಮೆ ಪಡುವ ಸಂಗತಿ. ಈ ಒಂದು ಸಮ್ಮೇಳನಕ್ಕೆ ಬಹಳ ವರ್ಷಗಳಿಂದ ಕನ್ನಡ ಕಟ್ಟುವ ಕೆಲಸವನ್ನು ಮಾಡುತ್ತಾ ಬಂದಿರುವ ವಿಶ್ರಾಂತ ಪ್ರೊ. ನಾಗೇಶದೇವ ಅಂಕೋಲೇಕರ ಇವರನ್ನು ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ನಿಯೋಜನೆ ಮಾಡಿರುವುದು ಶ್ಲಾಘನೀಯ ಹಾಗೂ ಅಭಿನಂದನೀಯ.

ಈ ಒಂದು ಸಮ್ಮೇಳನದಲ್ಲಿ ಹಮ್ಮಿಕೊಂಡಿರುವ ವಿವಿಧ ವಿಚಾರಗೋಷ್ಠಿಗಳಲ್ಲಿ ಉತ್ತಮ ಚರ್ಚೆ ನಡೆದು ಫಲಪ್ರದವಾದ ನಿರ್ಣಯಗಳು ಹೊರಹೊಮ್ಮಲಿ ಎಂದು ಆಶಿಸುತ್ತೇನೆ. ಇದರೊಂದಿಗೆ ರಾಜ್ಯದಲ್ಲಿ ಕನ್ನಡ ಭಾಷೆ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸಲೆಂದು ಬಯಸುವೆನು. ಒಟ್ಟಾರೆ ಕ.ಸಾಪ.ದ ಜಿಲ್ಲಾ ಘಟಕದ ಅಧ್ಯಕ್ಷರಾದ ಬಿ.ಎನ್. ವಾಸರೆ ತಾಲೂಕಾ ಅಧ್ಯಕ್ಷ ಗೋಪಾಲಕೃಷ್ಣ ನಾಯಕ, ಕಾರ್ಯದರ್ಶಿಯಾದ ಜಗದೀಶ ನಾಯಕ ಮತ್ತು ಸ್ವಾಗತ ಸಮಿತಿಯ ಅಧ್ಯಕ್ಷ ಮಹೇಶ ಗೋಳಿಕಟ್ಟೆ ಮಾರ್ಗದರ್ಶನದಲ್ಲಿ ಸಮ್ಮೇಳನವು ಯಶಸ್ವಿಯಾಗಿ ಜರುಗಲಿ ಎಂದು ಶುಭ ಹಾರೈಸುವೆನು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಎಸ್. ವ್ಹಿ. ಸಂಕನೂರ

ಪರಿವಿಡಿ

ಅಂಕೋಲೇಕರ ಅವರ ಬದುಕು-ಬರಹ

- ರಾಮಮೂರ್ತಿ ನಾಯಕ

ಅಂಕೋಲೆಯಲ್ಲಿ ಜರುಗಿದ ಹತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಪ್ರೊ. ನಾಗೇಶದೇವ ಅಂಕೋಲೆಕರರು ರಚಿಸಿದ ಲಲಿತ ಪ್ರಬಂಧಗಳ ಸಂಕಲನ "ಮೂಕಂ ಕರೋಲೆ ವಾಚಾಲಂ" ಮೂಲಕ ಕವನಗಳನ್ನು, ಚೌಪದಿಗಳನ್ನು ಬರೆದುಕೊಂಡಿದ್ದ ಲೇಖಕರು ಹೀಗೆ ಲಲಿತ ಪ್ರಬಂಧಗಳನ್ನು ಬರೆಯಬಲ್ಲರೆಂಬುದು ಸಂತಸದ ಹಾಗೂ ಸೋಜಿಗದ ಸಂಗತಿ. ಇಂಥ ಲಲಿತ ಪ್ರಬಂಧಗಳ ಸಾಹಿತ್ಯವನ್ನು ಹರಟೆಯ ಪ್ರಕಾರ ಎಂದೂ ಕರೆಯುವುದುಂಟು. ಡಾ|| ರಾಮಕೃಷ್ಣ ಗುಂದಿಯವರು ಮುನ್ನುಡಿಯಲ್ಲಿ ಬರೆದಂತೆ ಸ್ನೇಹಿತರೊಂದಿಗೆ ಹರಟೆಗೆ ನಿಂತಂತೆ ಪ್ರಬಂಧಗಳನ್ನು ಅತ್ಯಂತ ಸರಳವಾಗಿ ನಿರೂಪಿಸುತ್ತಾರೆ. ಈ ಸಹಜತೆಯೇ ಅವರ ನಿರೂಪಣೆಯ ವೈಶಿಷ್ಟವೂ ಹೌದು!

ಪ್ರಸ್ತುತ ಸಂಕಲನದಲ್ಲಿ ಒಟ್ಟೂ ಇಪ್ಪತ್ತೆರಡು ಪ್ರಬಂಧಗಳಿವೆ. ವಸ್ತು ವೈವಿದ್ಯತೆಯ ಜೊತೆಗೇ ಲೇಖಕರು ತಾನು ಬೆಳೆದು ಬಂದ ಪರಿಸರದೊಂದಿಗೆ ಮುಖಾಮುಖಿಯಾದರೂ ಎಲ್ಲಿಯೂ ಅತಿರೇಕವಾಗಲೀ, ಪ್ರತಿಭಟನೆಯಾಗಲೀ ಮಾಡದೇ ತನ್ನ ಸಾತ್ವಿಕ ಸಿಟ್ಟು ಮತ್ತು ನಿರ್ಲಿಪ್ತತೆಯಿಂದ ಪ್ರಬಂಧವನ್ನು ಓದುವ ತುಡಿತವನ್ನು ಜಾರಿ ಇಟ್ಟಿರುತ್ತದೆ.

* ಮೊದಲ ಪ್ರಬಂಧ 'ಕತ್ತೆ ಭವಿಷ್ಯ'ದಲ್ಲಿ ಕೆಲವೇ ಸಾಲುಗಳಲ್ಲಿ ಹುಟ್ಟಿದೂರು ಅಂಕೋಲೆಯ ವೈಶಿಷ್ಟವನ್ನು ಕಟ್ಟಿಕೊಡುತ್ತಾರೆ. ಈಗ ಶಿಕ್ಷಣದ ವ್ಯಾಪಾರ ವಹಿವಾಟಿನಿಂದ ಪ್ರಸಿದ್ಧವಾದ ಅಂಕೋಲೆ ಬ್ರಿಟಿಷರ ಕಾಲದಲ್ಲಿ ಪರಂಗಿಗಳ ವಿರುದ್ಧ ಸೆಟೆದು ನಿಂತ ಕರ್ನಾಟಕದ ಬಾರ್ಡೋಲಿ ಎನಿಸಿಕೊಂಡ ಹೆಗ್ಗಳಿಕೆ. ಚಾಲುಕ್ಯ ರಾಷ್ಟ್ರಕೂಟ ಮುಸ್ಲಿಂ ದೊರೆಗಳು, ಶಿವಾಜಿ ಆಳ್ವಿಕೆಯನ್ನು ಸ್ಮರಿಸುತ್ತಾರೆ. ಸುಮಾರು 50-60 ವರ್ಷಗಳ ಅಂಕೋಲೆಯ ಸಾಂಸ್ಕೃತಿಕ ಪರಿಸರವನ್ನು ನೆನೆಯುತ್ತಾರೆ. ವರ್ಷವಿಡೀ ಹಬ್ಬಗಳು ಅಂಕೋಲೆಯ ಎಂದಿನ ವೈಶಿಷ್ಟ. ಬಂಡಿ ಹಬ್ಬದ ಕಾಲಕ್ಕೆ ಅಂಕೋಲೆಗೆ ಬಂದ ಹಲವಾರು ಆಟಗಳಲ್ಲಿ ಕತ್ತೆಯ ಆಟವು ಸೇರಿತ್ತು. ಜೈ ಹಿಂದ್ ಮೈದಾನದಲ್ಲಿ ಆ ಕತ್ತೆ ತೋರಿದ ಚಮತ್ಕಾರ ಖಂಡಿತ ಚನ್ನಾಗಿತ್ತು. ಕಳ್ಳನನ್ನು ಹುಡುಕಿದ್ದು, ಆಲಸಿ ಹುಡುಗಿಯನ್ನು ತೋರಿಸಿದ್ದು, ಅನ್ಯೋನ್ಯ ದಂಪತಿಗಳನ್ನು ಕಂಡು ಹಿಡಿದಿದ್ದು, ಬುದ್ಧಿವಂತನಾದ ಜಾಣ ವ್ಯಕ್ತಿಯನ್ನು ಸೂಚಿಸಿದ್ದು ಒಂದೇ ಎರಡೇ.... ಎಷ್ಟೊಂದು ಚನ್ನಾಗಿತ್ತು ಆ ಕತ್ತೆಯ ಭವಿಷ್ಯ !

* ಅಕ್ಷರಗಳು ಸ್ಥಾನ ಪಲ್ಲಟಗೊಂಡಾಗ ಆಗುವ ಆವಾಂತರ ಓದಿಯೇ ಆನಂದಿಸಬೇಕು. ಕೊಂಕಣಿ ಮಾತೃ ಭಾಷೆಯ ಕವಿಯ ಮಗ "ನಾಗದೇವತಾ" ಎಂಬ ರಿಕ್ಷಾದ ತಲೆಬರಹವನ್ನು 'ನಾಗ್ದೆವತಾ' ಎಂದು ಓದಿದಾಗ ಆಗುವ ಆಭಾಸ ಎಂಥದ್ದು ನೋಡಿ. ಕಂಡ ಕಂಡ ಬೋರ್ಡುಗಳಲ್ಲಿ ತಪ್ಪನ್ನು ಹುಡುಕುವ ನಮ್ಮ ಲೇಖಕರ ಜಾಣ್ಮೆಯನ್ನು ಮೆಚ್ಚಲೇಬೇಕು. ಬಸ್ಸಿನಲ್ಲಿ ಬರೆದ ಸೂಚನೆಗಳಿಗೂ ನಮ್ಮವರು ವರ್ತಿಸುವುದಕ್ಕೂ ತಾಳಮೇಳವಿಲ್ಲ. ಹಿರಿಯ ನಾಗರಿಕ, ಸ್ವಾತಂತ್ರ್ಯ ಯೋಧ, ಅಂಗವಿಕಲ, ಮಹಿಳೆಯರಿಗೆ ಎಂದು ಬರೆದ ಕಡೆಯಲ್ಲಿ ತರುಣ ತರುಣಿಯರೇ ಕುಳಿತುಕೊಳ್ಳುವುದು ವಿಪರ್ಯಾಸ ಇದರ ಬಗ್ಗೆ ಪ್ರಬಂಧಕಾರರು ಬೆಳಕು ಚೆಲ್ಲಿದ್ದಾರೆ.

* ಅರವತ್ತಕ್ಕೆ ಅರಳು ಮರಳು ಎಂಬುದು ಹಳೆಯ ಮಾತು. 'ವಯಸ್ಸಾಗಬೇಕು-ಮನಸ್ಸಿಗಲ್ಲ' ಎಂಬ ಲೇಖನದಲ್ಲಿ ಮನಸ್ಸಿನ ಸ್ವಾಸ್ಥದ ಕುರಿತು ಹೇಳಿದ್ದಾರೆ. ಮನಸ್ಸಿನ ಎಳೆತನ, ತಾರುಣ್ಯ ಬದುಕಿನಲ್ಲಿ ಮುಖ್ಯವಾದುದು. ಲೇಖಕರು ವೃತ್ತಿಯಿಂದ ನಿವೃತ್ತರಾದರೂ ನೋಡಲು ಎಳೆಯರಂತೆ ಕಾಣಿಸುವುದಕ್ಕೆ ಯೌವನದ ದಿನಗಳಲ್ಲಿ ಮಲ್ಲಾಡಿ ಹಳ್ಳಿಯ ತಿರುಕರ ಆಶ್ರಮದಲ್ಲಿದ್ದು ಕಲಿತು ಆಚರಿಸಿದ ಯೋಗಾಸನಗಳೇ ಕಾರಣ ಎಂದು ನಿರೂಪಿಸಿರುತ್ತಾರೆ.

* 'ಆಕ್ಸಿಡೆಂಟ್' ಎಂಬ ಪ್ರಬಂಧ'ದ ಆರಂಭದಲ್ಲಿಯೆ ಮೊಟ್ಟೆ ಮತ್ತು ಹಾಲನ್ನು ಕೊಡುವ ಏಕೈಕ ಸಸ್ತನಿ ಎಂದರೆ 'ಅಂಗನವಾಡಿ ಟೀಚರ್' ಎಂಬ

ಹೊಸ ಸೂತ್ರವನ್ನು ಕಂಡುಹಿಡಿದ ಅವರ ಮಗನ ಜಾಣ್ಮೆಯನ್ನು ಮೆಚ್ಚಲೇಬೇಕು. ಅವರ ಮಗನಿಗೆ ಈವರೆಗೆ ಮೂರ್ನಾಲ್ಕು ಮಾರಣಾಂತಿಕ ಆಕ್ಸಿಡೆಂಟ್‌ಗೊಳಗಾದರೂ ಲೇಖಕರು ಎಲ್ಲಿಯೂ ತೂಕ ತಪ್ಪದೆ ಶಾಂತಚಿತ್ತದಿಂದ ನಿರೂಪಿಸಿರುತ್ತಾರೆ. ಮನೆಗೆ ಬರಲಿರುವ ಅತಿಥಿಗಳಿಗೆ ಮನೆಯ ದಾರಿ ತೋರಿಸುವುದಕ್ಕೆ ಕೈಗೆ ಪ್ಲಾಸ್ಟರ್ ಹಾಕಿದ ಹುಡುಗ ಬರ್ತಾನೆ ಎಂದು ಮೊಬೈಲಿನಲ್ಲಿ ಹೇಳಿದ್ದಲ್ಲದೆ ಹೆದ್ದಾರಿ ಪಕ್ಕದಲ್ಲಿ ನಿಂತು ದಾರಿ ತೋರಿಸಿದ್ದು ಆತನ ಧೈರ್ಯ ಮೆಚ್ಚುವಂತದ್ದೇ. ಮನೆಗೆ ಬಂದ ಅತಿಥಿಗಳಿಗೆ ಮನೆ ಹುಡುಕಲು ತೊಂದ್ರೆ ಆಗಿಲ್ಲವಷ್ಟೇ ಎಂದು ಕೇಳಿದಾಗ... ಇಲ್ಲ ಅಲ್ಲೊಬ್ಬ ಕೈಗೆ ಪ್ಲಾಸ್ಟರ್ ಹಾಕಿದ ಹುಡುಗ ದಾರಿ ತೋರಿಸಿದ ಎಂದರು. ಲೇಖಕರು ನಗುತ್ತ ಇವನೇ ನೋಡು ಎಂದು ಆಗಷ್ಟೇ ಒಳಬರ್ತಿದ್ದ ಹುಡುಗನನ್ನ ತೋರಿಸಿದಾಗ ಹೌದು ಹೌದು ಇವನೇ ಎಂದಳಾಕೆ. ಸರಿಯಾಗಿ ನೋಡು ಎಂದಾಗ ಅರೇ ತಮಾ ಮಂಜೂ....ಸಾರಿ ನಾನು ಗುರುತಿಸಲಿಲ್ಲ ಎಂದು ಹಳಹಳಸಿದ್ದು ನನ್ನ ಪ್ರೀತಿಯ ವಿದ್ಯಾರ್ಥಿನಿ ಶ್ರೀಮತಿ ಅಕ್ಷತಾ ಕೃಷ್ಣಮೂರ್ತಿ.

* ಲೇಖಕರು 'ಅಸಂಬದ್ಧ ಪ್ರಲಾಪ'ದಲ್ಲಿ ಲಾಫ್ ವಿತ್ ಮತ್ತು ಲಾಫ್ ಎಟ್ –ಎಂಬ ಎರಡು ರೀತಿಯ ಹಾಸ್ಯ ಪ್ರಕಾರಗಳನ್ನು ಪ್ರಸ್ತಾಪಿಸುತ್ತಾರೆ. ಮಗಳನ್ನು ಎಸ್.ಬಿ.ಐ. ಪರೀಕ್ಷೆಗೆ ಹುಬ್ಬಳ್ಳಿಗೆ ಕರೆದೊಯ್ದಾಗಿನ ಘಟನೆಯನ್ನು ವಿವರಿಸುತ್ತಾರೆ. ಏನೇನು ಕಾಗದ ಪತ್ರ (ಡಾಕ್ಯುಮೆಂಟ್ಸ್) ತರಬೇಕೆಂದು ಅಧಿಕಾರಿಗಳು ಹೇಳಿದರು ನೂರಾರು ಪರೀಕ್ಷಾರ್ಥಿಗಳು ಕೇಳಿದನ್ನೇ ಪುನಃ ಪುನಃ ಕೇಳಿದಾಗ ರೋಸಿ ಹೋದ ಆ ಅಧಿಕಾರಿ ಯಾರ್ಯಾರು ಆಧಾರ್ ಕಾರ್ಡ್, ಹಾಲ್ ಟಿಕೇಟ್ ತಂದಿಲ್ಲ ಕೈ ಎತ್ತಿ ಎಂದಾಗ ಎತ್ತಿದ ಒಂದೇ ಒಂದು ಕೈ ಲೇಖಕರದ್ದು. ಯಾಕ್ರೀ ತರಲಿಲ್ಲ ಎಂದು ಏರಿದ ಧ್ವನಿಯಲ್ಲಿ ಕೇಳಿದರಂತೆ. ಲೇಖಕರು ಕೈ ಅಲ್ಲಾಡಿಸುತ್ತಾ ನಾನು ಪರೀಕ್ಷೆಗೆ ಬರ್ಲಿಲ್ಲ ಮಗಳ ಸಂಗಡ ಬಂದಿದ್ದೇನೆ ಎಂದರಂತೆ!!!.

* ಲೇಖಕರ ಶ್ರೀಮತಿ ಹದಿನಾರು ಸೋಮವಾರಗಳ ವೃತ ಆಚರಿಸಿದ್ದನ್ನು ನೆನಪಿಸುತ್ತಾರೆ. ಸುಮಾರು ನಾಲ್ಕು ತಿಂಗಳಲ್ಲಿ ಮುಗಿಯಬೇಕಾಗಿದ್ದ ವೃತಗಳು ಕೆಲ ತಾಪತ್ರಯಗಳಿಂದಾಗಿ ಪೂರ್ತಿ ಒಂಭತ್ತು ತಿಂಗಳು ಎಳೆದಾಡಿದ್ದನ್ನು ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ.

* ಲೇಖಕರು ಪಣಜಿಯಲಿ ಕಂಡ 'ಮಹಾತ್ಮಾ ಗಾಂಧಿ ಮಟನ್ ಸ್ಟಾಲ್' ಬೋರ್ಡನ್ನು ಕಂಡು ಅಹಿಂಸಾ ವೃತಸ್ಥ ಮಹಾತ್ಮಾ ಗಾಂಧಿಜಿಯವರ ಹೆಸರಿನ ದುರುಪಯೋಗವನ್ನು 'ನಾನ್ಸೆನ್ಸ್ ಅನ್‌ಲಿಮಿಟೆಡ್' ಎಂಬ ಪ್ರಬಂಧದಲ್ಲಿ ಪ್ರಸ್ತಾಪಿಸಿರುತ್ತಾರೆ.

* 'ಆಲ್ ಈಜ್ ವೆಲ್' ಪ್ರಬಂಧದಲ್ಲಿ ಲೇಖಕರ ಸಂಬಂಧಿ ಶಾಲಾ ಹುಡುಗನೊಬ್ಬ ಆನೆ ಸವಾರಿಯ ಝಲಕ್ ವರ್ಣಿತವಾಗಿದೆ. ತಮಾಷೆಗೆಂದು ಹೊಸ ಹೊಸ ವಿಧಾನ ಹುಡುಕಿದರೂ ಹುಡುಗ ಓದು ಬರಹಗಳ ಮೂಲಕ ಸಮರ್ಥ ಎನಿಸಿಕೊಂಡು ಎಲ್ಲರ ಮೆಚ್ಚುಗೆ ಗಳಿಸುತ್ತಾನೆ.

* ಅಂಕೋಲೆಯ ಅಂಬಾರಕೊಡ್ಲದ ಸಾಹಿತ್ಯ ಸಾಂಸ್ಕೃತಿಕ ನಾಯಕ ರಾಜ್ಯೋತ್ಸವ ಪ್ರಶಸ್ತಿ ವಿಜೇತ ದಿ. ವಿಷ್ಣು ನಾಯ್ಕರೊಡನೆಯ ಆತ್ಮೀಯ ಒಡನಾಟವನ್ನು ಕುರಿತು ಹೇಳುತ್ತಾ ದಿ. ವಿಷ್ಣು ನಾಯ್ಕರ ಗುಣಗ್ರಾಹಿತನವನ್ನು ವರ್ಣಿಸಿದ್ದಾರೆ. 'ಹೂವಿನೊಡನೆನಾರು' ಎಂಬಂತೆ ಹಲವು ಸಲ ಅವರೊಡನೆ ತನಗೆ ವೇದಿಕೆ ಪ್ರಾಪ್ತವಾದುದರ ಹೆಮ್ಮೆ ಕೃತಜ್ಞತೆ ಇದೆ.

* ಕಣ್ಣಿನ ಆಪರೇಷನ್ ಪ್ರಸಂಗವನ್ನು ಕುರಿತು ಪ್ರಸ್ತಾಪಿಸುತ್ತಾ ಕಣ್ತೆರೆಯುವುದರಿಂದ ಆರಂಭಿಸಿ ಕಣ್ಮುಚ್ಚುವವರೆಗಿನ ಪರಿಯನ್ನು ಲೇಖಕರ ಮಾತಿನಲ್ಲಿಯೇ ಕೇಳಿ ಆನಂದಿಸಬೇಕು.

* ಎಷ್ಟೋ ಸಲ ನಮಗೆ ಕೆಲವು ಪದಗಳು ಗೊತ್ತಾಗ್ತವೆಯೇ ಹೊರತು ಅದರ ಅರ್ಥ ಕೇಳಬೇಡಿ. ಸ್ಮರಣೆಯ ಅಪಭ್ರಂಶ ರೂಪವೇ ಸಿಮ್ರಾನ್. ಅದೀಗ ಹೆಸರಿಗಷ್ಟೇ ಸೀಮಿತವಾಗಿದೆ. ಹಾಗೆಯೇ ಪ.ಜಾ, ಪ.ಪಂ.ಗೆ ಸಂವಿಧಾನರೀತ್ಯಾ ಕೊಡಮಾಡಿದ 11+7=18 ಶೇಕಡಾ ಮೀಸಲಾತಿಯನ್ನು ಕುರಿತು ಬಲಿತವರು ಟೀಕಿಸುತ್ತಾರೆ. ಆದರೆ ಇನ್ನುಳಿದ 82% ABCDEF ಗಳು ಪಡೆಯುವುದನ್ನ ಮಾತನಾಡುವದೇ ಇಲ್ಲ. ಹಾಗೆಯೇ ಭಾರತದ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರರರು ಕೇವಲ ದಲಿತ ನಾಯಕರಾಗಿರದೇ ಅವರು ದೇಶ ವಿದೇಶಗಳಲ್ಲಿ ಮಾನ್ಯತೆ ಪಡೆದ ಜ್ಞಾನದ ಸಂಕೇತ ಎಂದು ವರ್ಣಿಸುತ್ತಾರೆ.

* ನಮ್ಮ ಲೇಖಕರು ಬರೆಯಲು ಆರಂಭಿಸಿದ್ದೇ ಸುಮಾರು 50 ರ ಆಸುಪಾಸಿನಲ್ಲಿ. ಮೊದಲು ಕವನ

ಸಂಕಲನದ ಮೂಲಕ ನಂತರ ಸುಮಾರು 20 ವರ್ಷಗಳ ಫಾಸಲೆಯಲ್ಲಿ ಎರಡು ಚೌಪದಿ, ಒಂದು ಕವನ ಸಂಕಲನ ಮತ್ತು ಒಂದು ಲಲಿತ ಪ್ರಬಂಧ-ಸಂಕಲನ ಪ್ರಕಟಿಸಿದ್ದಾರೆ. ಹಾಗಾಗಿ ಲೇಖಕರು 'ಉದಯೋನ್ಮುಖ ಹಿರಿಯ ಕವಿ' ಎಂಬುದು ಡಾ. ವಸ್ತ್ರದ ಅವರ ಅಂಬೋಣ.

* ನಿದ್ರೆಯೆಂದರೆ ಕಣ್ಮುಚ್ಚುವುದಲ್ಲದೇ, ಲೇಖಕರಿಗೂ ನಿದ್ರೆಗೂ ಹತ್ತಿರದ ಬಾಂಧವ್ಯ . ನಿದ್ದೆ ಕ್ಷಣಿಕವಾದದು. ಆಯಾಸದ ಪರಿಹಾರಕ್ಕೆ ಪ್ರಕೃತಿ ಒದಗಿಸಿದ ಒಂದು ವ್ಯವಸ್ಥೆ. ತನಗೆ ಬರುವ ನಿದ್ರೆಯ ನಿಮಿತ್ತ ಲೇಖಕರು ಮೊದಲ ಸಾಲಿನಲ್ಲಿ ಕುಳಿತು ಕೊಳ್ಳುವುದಿಲ್ಲವಂತೆ. ಬಾಗಿಲ ಬಳಿಯೋ ಕಿಟಕಿಯ ಬಳಿಯೋ ಹಿಂದೆ ಕುಳಿತರೆ ಆಗಾಗ ಹೊರಹೋಗಿ ಸುಧಾರಿಸಿಕೊಳ್ಳಬಹುದೆಂಬುದು ಅವರ ವಾದ.

* 'ಲೈಫ್ ಇಸ್ ಸ್ಟ್ರೇಂಜರ್ ದೆನ್ ಫಿಕ್ಷನ್' ಎಂಬ ಮಾತಿನ ಹಿನ್ನೆಲೆಯಲ್ಲಿ 'ಅಸಂಬದ್ಧಗಳ ಸರಮಾಲೆ' ಪ್ರಬಂಧಗಳನ್ನು ಚಿತ್ರಿಸಿದ್ದಾರೆ. ಎರಡನೇ ವರ್ಷದ ತರಗತಿಯಲ್ಲಿ ಹಾಜರಿ ತೆಗೆದುಕೊಳ್ಳುವಾಗ ರೋಲ್ ನಂಬರ್ 109 ಎಂದು ಎರಡು ಸಲ ಕರೆದಾಗಲೂ ಉತ್ತರವಿಲ್ಲ. ಯಾರಿರಬಹುದು ಮುಂದಿನ ಸಾಲಿನಲ್ಲಿ ಕುಳಿತ ಹುಡುಗಿಯೊಬ್ಬಳು ತನ್ನ ಜಂಬದ ಚೀಲದ ಝಿಫ್ ಸರಿ ಮಾಡುತ್ತಿದ್ದಳು. ಅವಳ ಪಕ್ಕದ ಹುಡುಗಿ ತಿವಿದು ಎಚ್ಚರಿಸಿದಳು. ಅವಳು ಎದ್ದು ನಿಂತದ್ದೇ ತಡ, ಇಡೀ ತರಗತಿಯವರು ಹೋ ಎಂದು ನಗೆಯಾಡಲಾರಂಭಿಸಿದರು. ಯಾಕಂದ್ರೆ ಎದ್ದು ನಿಂತ ಹುಡುಗಿಯ ಅಪ್ಪ ನಮ್ಮ ಲೇಖಕರಾಗಿದ್ದರು.

* ಕೊರೋನಾ ಕಾಲದಲ್ಲಿನ ಅನುಭವಗಳ ಹಿನ್ನೆಲೆಯಲ್ಲಿ ರಚಿತ ಪ್ರಬಂಧ 'ನೋಡಿ ಸ್ವಾಮಿ ನಾವಿರೋದೇ ಹೀಗೆ'. 'ನುಡಿಯೆ ಸಿರಿ' ಎಂದು ಕವಿ ಮಧುರಚನ್ನ ಸಾರಿದ್ದಾರೆ. ಭೂಮಿಯಲ್ಲಿ ವಾಸಿಸುವ ಪ್ರಾಣಿಗಳಲ್ಲಿ ಮನುಷ್ಯ ಮಾತ್ರ ಭಾಷೆಯನ್ನು ಸಾಧಿಸಿ ತಾಯ್ನುಡಿಯನ್ನು ಬೆಳಗಿಸಿದ್ದಾನೆ. ಈ ದಿನಗಳಲ್ಲಿ ಲೇಖಕರು ಎರಡು ರಾತ್ರಿ ಒಂದು ಹಗಲು ಮೌನವ್ರತ ಆಚರಿಸಿದ್ದನ್ನು ನೆನಪಿಸುತ್ತಾರೆ. ದಿವ್ಯಮೌನ, ಅಖಂಡ ಶಾಂತಿ ಆತ್ಮಸಂತೋಷವೆಂದರೆ ಇದೇ ಇರಬಹುದೇನೋ!

* ಊಟದ ಸ್ವಾರಸ್ಯದ ಕುರಿತು ಹೇಳುತ್ತ 'ಅನ್ನದ ಮುಂದೆ ಅಳಬಾರದು, ನಗದ ಮುಂದೆ ನಗಬಾರದು' ಎಂಬ ಕಿವಿ ಮಾತನ್ನು ಹೇಳುತ್ತಾರೆ. ಲೇಖಕರಿಗೆ ಅನ್ನ ಅಂದ್ರೆ ದೇವರು, ಬ್ರಹ್ಮ ಅದನ್ನು ಗೊಣಗದೆ ಉಣ್ಣಬೇಕು. ಪಾಪ ನಮ್ಮ ಹೆಣ್ಮಕ್ಕಳು ಅದೆಷ್ಟು ಕಷ್ಟಪಟ್ಟು ದೇವರ ಕೆಲಸವೆಂದು ಅಡಿಗೆ ಮಾಡುತ್ತಾರೆ. ಊಪಚಾರ ಸ್ಮರಣೆ ಮಾಡುವುದಿರಲಿ, ಉಪ್ಪು ಖಾರದ ಕುರಿತು ರಂಪಾಟ ಮಾಡುವ ಜನರ ಬಗ್ಗೆ ಲೇಖಕರು ಅಸಮಧಾನ ವ್ಯಕ್ತಪಡಿಸುತ್ತಾರೆ. 'ಕೈಬಿಡದವಳು ಕೈಹಿಡಿದವಳು' ಎಂಬ ಪ್ರಬಂಧದ ಸ್ವಾರಸ್ಯ ಓದಿ ಆರಾಧಿಸಬೇಕು.

* 'ಮತ್ಸ ಪುರಾಣ'ದಲ್ಲಿ ಬಾಲ್ಯದಲ್ಲಿ ಸುಂಕಸಾಳವೆಂಬ ಊರಿನಲ್ಲಿ ಕಳೆದ ದಿನಗಳಲ್ಲಿನ ಅನುಭವ ಹೇಳುತ್ತಾರೆ. ಸುಮಾರು 65 ವರ್ಷಗಳ ಹಿಂದೆ ಈಗಿನಷ್ಟು ಸಾಗಾಟ ಸೌಕರ್ಯಗಳಿಲ್ಲದೆ, ಭರ್ತಿ ಆರು ತಿಂಗಳುಗಳ ಮಳೆಗಾಲ ಕಳೆಯುವುದೆಂದರೆ ಸಾಮಾನ್ಯವೇ? ಹೊಳೆಹಳ್ಳಗಳಲ್ಲಿ ಸಿಗುವ ಮೀನು ಏಡಿಗಳ ಜೊತೆಗೆ ಕಾಡಿನಲ್ಲಿ ಸಿಗುವ ಸೊಪ್ಪು, ಅಣಬೆ ಕಳಲೆಗಳ ಆಹಾರ ಸ್ವಾದಕ್ಕೂ ಆರೋಗ್ಯಕ್ಕೂ ಹಿತವಾಗಿತ್ತು. ಬಡತನದ ದಿನಗಳಲ್ಲಿ ಅಂಕೋಲೆಯಲ್ಲಿ ತಿಂದುಂಡ ಸಸ್ತಾ ಮೀನುಗಳನ್ನ ಲೇಖಕರು ಜ್ಞಾಪಿಸಿಕೊಳ್ಳುತ್ತಾರೆ. ಹಾಗೆಯೇ ದೊಡ್ಡವನಾಗಿ ಉದ್ಯೋಗದ ನಿಮಿತ್ತ ಬೇರೆ ಊರುಗಳಲ್ಲಿ ವಾಸವಾಗಿರುವಾಗ ಉಂಟಾದ ಮೀನು ಪೇಟೆಯ ಅನುಭವಗಳಂತೂ ತುಂಬಾ ಚನ್ನಾಗಿವೆ.

* 'ಮೂಕಂ ಕರೋತಿ ವಾಚಲಂ' ಸಂಕಲನದ 22ನೇ ಪ್ರಬಂಧ. ಅಣು ರೇಣು ತೃಣ ಕಾಷ್ಠಗಳಲ್ಲಿ ನೆಲೆನಿಂತ ಕರುಣೆ ನಮ್ಮೆಲ್ಲರ ಮೇಲಿರಲಿ ಎಂದು ಪ್ರಾರ್ಥಿಸೋಣ ಎಂಬುದು ಲೇಖಕರ ಬಯಕೆ. ನೀನೊಲಿದರೆ ಕೊರಡು ಕೊನರುವುದಯ್ಯಾ ಎಂಬುದೇ ಇಲ್ಲಿನ ಹಾರೈಕೆ. ಪ್ರಸ್ತುತ ಲೇಖನದಲ್ಲಿ ಜಗದ ಎಲ್ಲ ಬಾಲರ ಪ್ರತಿನಿಧಿಯಾಧ ಬಾಲಕೃಷ್ಣನನ್ನು ನೆನೆಯುತ್ತಾರೆ. ಮಕ್ಕಳೆಂದರೆ ದೇವರ ಅಪರಾವತಾರ ಲೇಖಕರ ವಾಚಾಳಿ ಮಗಳು ನೂರೊಂದು ಪ್ರಶ್ನೆಗಳನ್ನು ಕೇಳಿ ತಲೆ ತಿನ್ನುತ್ತಿದ್ದಳಂತೆ. ಆದ್ದರಿಂದ ಅಂಕೋಲೆಯಿಂದ ಹೊನ್ನಾವರ ಹೊಗುವವರೆಗೆ ಕಾಡಿಸದಿದ್ದರೆ ನಿನಗೆ ಐಸ್‌ಕ್ರೀಮ್ ಕೊಡಿಸುತ್ತೇನೆ ಎಂದು ಹೇಳಿದರು. ಮಗಳೂ ಮಾತನಾಡದೆ ಕೈಸನ್ನೆ ಬಾಯ್ ಸನ್ನೆಗಳಿಂದಲೇ ಮಾತಾಡ್ತಿತ್ತು. ಇದರಿಂದ ಸಹ ಪ್ರಯಾಣಿಕರಿಗೆ ಕನಿಕರ, ಪಾಪದ ಮಗು, ಮಾತು ಬರಲ್ಲ ಇಷ್ಟೊತ್ತಿಗೆ ಮಗು ಮಲಗಿತ್ತು. ದಿವಗಿಯ ಅಘನಾಶಿನಿ ಸೇತುವೆ

ಸನಿಹವಾಗುವುದಕ್ಕೂ, ಮಗಳು ಎಚ್ಚರವಾಗುವದಕ್ಕೂ ಸರಿ ಆಯಿತು. ನದಿಯ ಅಗಾಧ ಜಲರಾಶಿ ಕಂಡ ಮಗಳು ಪಪ್ಪಾ ಉದಕ್ ಎಂದು ಕೂಗಿದಳು ಅಂದರೆ ಮಗುವಿಗೆ ಮಾತು ಬರುತ್ತಾ... ಸಹಪ್ರಯಾಣಿಕರ ಮಾತಿಗೆ ಲೇಖಕರು ತಲೆ ಎತ್ತಿದರಂತೆ.

ಮುನ್ನುಡಿಯಲ್ಲಿ ಡಾ.ಗುಂದಿಯವರು ಗುರುತಿಸಿದಂತೆ ಬದುಕನ್ನು ಬಂದಂತೆ ಸ್ವೀಕರಿಸುವದು ಲೇಖಕರ ವ್ಯಕ್ತಿತ್ವದ ರೀತಿ. ದಲಿತ ಸಮುದಾಯವೊಂದರ ಪ್ರತಿನಿಧಿಯಾಗಿ ಇಲ್ಲಿನ ಸಾಮಾಜಿಕ ವೈರುಧ್ಯಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಲೇ ಇಂಥ ಸಾಮಾಜಿಕ ಶಿಕ್ಷೆಗಳಿಂದ ಬಿಡಿಸಿಕೊಂಡು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಅತಃಶಕ್ತಿಯುಳ್ಳವರು. ಆ ನಿಮಿತ್ತವಾಗಿ ತಮ್ಮ ಬದುಕಿನ ನೋವುಗಳ ಬದಲಾಗಿ ಅದನ್ನೇ ಹಾಸ್ಯಮಯವಾಗಿ ನಿರೂಪಿಸಿದ್ದಾರೆ. ತಮ್ಮ ಪ್ರಬಂಧಗಳಲ್ಲಿ ಈ ಪ್ರಬಂಧಗಳು ಸಕಾರಾತ್ಮಕ ಗುಣ ಹೊಂದಿದ್ದು ಓದಿಸಿಕೊಂಡು ಹೋಗುವ ಛಾತಿ ಪಡೆದಿವೆ.

ಹಳೆಕೊಡೆ

ಎಲ್ಲಿ ಹೋದನೋ ಆ ಕುರುಚಲ ಗಡ್ಡದವ
ಮೊದಲ ಮಳೆಯೊಡನೆ ಬರುವನವ
ಮುರುಕು ಸಂದೂಕಿನಲಿ ಹತ್ತಾರು
ಹಳೆ ಹೊಸ ಕೊಡೆ ತುಂಡುಗಳನಿಟ್ಟು
ಕೂಗುತ್ತಿದ್ದ
ಹಳೆಕೊಡೆ ಸರಿಮಾಡ್ಲೀ
ನೆತ್ತಿಕೆತ್ತಿದ ತಂತಿಹರಿದ
ಮುರಿದ ಕಡ್ಡಿಗಳ ಜೋಡಿಸಿ
ಕರಿದಾರದಲಿ ಹೊಲಿದು
ಕುದುರೆಮೀಟಿ
ಎಣ್ಣೆ ಬಿಟ್ಟು ಹಳೆಚಡ್ಡಿಯಲ್ಲಿ
ಒರೆಸಿದನೆಂದರೆ
ಈ ಮುಂಗಾರಿನಲಿ
ಹಿಡಿಯುವರುಂಟೇ ನನ್ನ
ದಾರಿಯುದ್ದ
ಪಚಪಚ ಸದ್ದಿಗೆ
ಗಿರಿಗಿರಿ ನೀರಾಟ
ಬಳಸಿಬೀಸಿ
ಹೊಸತೊಂದು ತರುವಾಗ
ಯಾಕೋ ಈಗೀಗ ನನಗೂ
ವಯಸ್ಸಾದಂತೆ ಆತಂಕ

ಎನ್. ಡಿ. ಅಂಕೋಲೆಕರ

ಅಂಕೋಲೇಕರ ಅವರ ಬದುಕು–ಬರಹ

– ಫಾಲ್ಗುಣ ಗೌಡ, ಅಚವೆ

ಅಂಕೋಲೆಯೇ ಹಾಗೆ ಅದರ ನೆಲದಲ್ಲಿ ಹುಟ್ಟಿದವರು ಏನಾದರೂ ಒಂದು ಪ್ರತಿಭೆಯನ್ನು ಸುಪ್ತವಾಗಿಟ್ಟುಕೊಂಡು ಹುಟ್ಟಿ ತನ್ನ ಆಪ್ತ ವಲಯದಲ್ಲಿ ಪ್ರಕಾಶಿಸುವಂತೆ ಮಾಡಿಬಿಡುತ್ತದೆ. ಈ ನೆಲದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ವಿವಿಧ ಚಳುವಳಿಗಳು ರೈತ ಹೋರಾಟದ ದೀರ್ಘಕಾಲದ ಆಯಾಮಗಳು ಮತ್ತು ಅದರ ಫಲಶೃತಿಯನ್ನು ಸುಗ್ಗಿ ಹಗಣ ಬಂಡಿ ಹಬ್ಬದ ಖಾಜ್ಜಿಜಿಯ ಸಿಹಿಯನ್ನು ಅಂತರ್ಗತಗೊಳಿಸಿಕೊಂಡೆ ಇಲ್ಲಿನ ಯಾವುದೇ ವ್ಯಕ್ತಿ ಹುಟ್ಟಿರುತ್ತಾನೆ. ಸರ್ವ ಜನಾಂಗದ ಶಾಂತಿಯ ತೋಟದಂತಿರುವ ಅಂಕೋಲೆ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಸಾಹಿತ್ಯಿಕವಾಗಿ ಜಿಲ್ಲೆಯ ಮುಂಚೂಣಿ ತಾಲೂಕಾಗಿ ಗುರುತಿಸಿಕೊಂಡಿದೆ ಇಂತಹ ಅಂಕೋಲೆಯ ಅಂಬಾರಕೊಡ್ಲದಲ್ಲಿ ಹುಟ್ಟಿದ ನಾಗೇಶದೇವ ಅಂಕೋಲೆಕರ್ ಅವರನ್ನು ಅಂಕೋಲೆಯ ಕನ್ನಡ ಸಾಹಿತ್ಯ ಪರಿಷತ್ತು ಘಟಕ 10ನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸಮ್ಮೇಳನವು ಯಶಸ್ವಿಯಾಗಿದೆ.

ಸಮ್ಮೇಳನದ ಸರ್ವಾಧ್ಯಕ್ಷರಾದ ನಾಗೇಶದೇವ ಅಂಕೋಲೆಕರ್ ಅವರು ತಳ ಸಮುದಾಯದಿಂದ ಬಂದು ಸಮ್ಮೇಳನ ಅಧ್ಯಕ್ಷ ಪದವಿ ಪಡೆಯುವವರೆಗೆ ಬೆಳೆದದ್ದು ಒಂದು ಸೋಜಿಗವೇ ಸರಿ. ಇವರು ಮೂಲತಃ ಮುಂಬೈಯ ಸಾವಂತವಾಡಿ ಇಂದ ಒಂದು ಸಮುದಾಯವಾಗಿ ಇಲ್ಲಿಗೆ ಬಂದಿರಬೇಕೆಂದು ಊಹಿಸುತ್ತಾರೆ. ಇವರ ತಂದೆ ಮಿಲಿಟರಿಯಿಂದ ಬಂದು ಇಲ್ಲಿ ಫಾರೆಸ್ಟ್ ಗಾರ್ಡ್ ಕೆಲಸ ಮಾಡುತ್ತಿದ್ದರು. ತಿಂಗಳಿಗೆ ಐದರಿಂದ ಆರು ರೂಪಾಯಿ ಸಂಬಳ ಜೀವನ ನಿರ್ವಹಣೆಗೆ ಸಾಲುತ್ತಿರಲಿಲ್ಲ. ತಾಯಿ ಕಾಡಿಗೆ ಹೋಗಿ ಬಿದಿರು (ಶಾಮ ಕೋಲು) ತಂದು, ಬುಟ್ಟಿ, ಮೊರ, ಶಿಬ್ಲ ಮಾಡುತ್ತಿದ್ದರು. ಸಂಜೆ ಬಂಡಿಬಜಾರದ ಕಟ್ಟೆಯ ಮೇಲಿಟ್ಟು ಮಾರಾಟ ಮಾಡುತ್ತಿದ್ದರು. ಮಾರಿದರೆ ಸಿಗುವುದು ಆರು ಆಣೆಯಿಂದ ಎಂಟಾಣೆ. ಅಂಕೋಲೆಕರ್ ಅವರು ತಾಯಿಯ ಜೊತೆ ಗೋಕರ್ಣ ಜಾತ್ರೆಗೂ ಹೋಗಿ ಮಾರುತಿದ್ದರು. ಅವರು ತಮ್ಮ ಪಿಯುಸಿ ವಿದ್ಯಾಭ್ಯಾಸದವರಿಗೂ ಮೊರ, ಬುಟ್ಟಿ ಮಾರುವುದನ್ನು ಬಿಟ್ಟಿರಲಿಲ್ಲ.

ಅಂಕೋಲೆಕರ್ ಅವರು ಕನ್ನಡ ಶಾಲೆಗೆ ಹೋಗುವಾಗಲೂ ಕೂಡ ಬಾಳೆಗುಳಿ ಹೊಳೆಯಲ್ಲಿ ಟ್ರಕ್ ತೊಳೆದು ನಂತರ ಶಾಲೆಗೆ ಹೋಗುತ್ತಿದ್ದರು. ಬೆಳಿಗ್ಗೆ ಆರು ಗಂಟೆಯಿಂದ ಏಳು ಗಂಟೆಯವರೆಗೆ ಟ್ರಕ್ ತೊಳೆದರೆ ನಾಲ್ಕು ಆಣೆ ಸಿಗುತ್ತಿತ್ತು. ಅದನ್ನು ಪಠ್ಯ ಪುಸ್ತಕ ತರಲು ಬಳಸುತ್ತಿದ್ದರು. ಇವರು ಸೇರಿ ಏಳು ಮಕ್ಕಳ ಕುಟುಂಬವಾದ್ದರಿಂದ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿತ್ತು. ತಂದೆ ಮಿಲಿಟರಿಯಲ್ಲಿ ಕೆಲಸ ಮಾಡಿದ್ದರೂ ಮಿಲಿಟರಿ ನಂತರದ ಯಾವ ಸೌಲಭ್ಯವು ಸಿಕ್ಕಿರಲಿಲ್ಲ. ಹೀಗೆ ಟ್ರಕ್ ತೊಳೆದು ಬಿದಿರಿನ ಬುಟ್ಟಿ ಮಾರಿ ಶಾಲೆಗೆ ಹೋಗಿ ಶಿಕ್ಷಣ ಕಲಿತ ವ್ಯಕ್ತಿ ಮುಂದೆ ಜಿಸಿ ಕಾಲೇಜಿನಲ್ಲಿ ಗುರುಗಳಾದ ಪ್ರೊಫೆಸರ್ ವಿ.ಎ. ಜೋಗಿ ಅವರ ಕೃಪೆಯಿಂದ ಕನ್ನಡ ಉಪನ್ಯಾಸಕರಾಗಿ ಸೇರುತ್ತಾರೆ. ಜಿ. ಸಿ. ಕಾಲೇಜಿನ ಸಾಹಿತ್ಯಿಕ ವಾತಾವರಣ ಅಂಕೋಲೇಕರ್ ಅವರನ್ನು ತೀವ್ರವಾಗಿ ಸೆಳೆಯುದಿಲ್ಲವಾದರೂ ಆ ಕಡೆಗೆ ವಾಲುವುದಕ್ಕೆ ತೊಡಗಿದ ಹಿನ್ನೆಲೆಯಲ್ಲಿ ಸಾಹಿತ್ಯ ಅವರನ್ನು ಕೈಹಿಡಿಯಿತು. ಪ್ರತಿ ವಾರ್ಷಿಕೋತ್ಸವಕ್ಕೆ ಜಿ.ಸಿ. ಕಾಲೇಜಿಗೆ ಬರುವ ಶಿವರಾಮ ಕಾರಂತ, ಲಂಕೇಶ್ ಹೀಗೆ ಗಣ್ಯಾತಿಗಣ್ಯರ ಮಾತುಗಳು ಸಾಹಿತ್ಯದ ಓದು ಕಾವ್ಯದ ಕಡೆಗೆ ಒಲಿಯುವಂತೆ ಮಾಡಿತು.

ಅಂಕೋಲೆಕರ್ ಅವರ ಮನೆ ಹತ್ತಿರದಲ್ಲಿ ಎಚ್.ಡಿ. ನಾಯ್ಕ್ ಅಂತ ಪ್ರೇಮ್ ಚೋಪ್ರಾ ಹಾಗೆ ಕಾಣಿಸುವ ಒಬ್ಬರು ಇವರಿಗೆ ಪರಿಚಯವಾಗುತ್ತಾರೆ. ಅದು ಕನ್ನಡ ಶಾಲೆಗೆ ಹೋಗುವ ಸಮಯದಲ್ಲಿ. ಅವರ ಮನೆಗೆ ಇವರು ಹೋಗಿ ಅವರ ಮನೆಯ ಆವರಣವನ್ನು ಗೂಡಿಸಿ ಸ್ವಚ್ಛ ಮಾಡಿದರೆ ಅವರು 10 ಪೈಸೆ ಕೊಡುತ್ತಿದ್ದರು. ಮತ್ತು ಅವರ ಮನೆಗೆ ಬರುವ ಸಂಯುಕ್ತ

ಕರ್ನಾಟಕ ಪತ್ರಿಕೆ ಓದಬಹುದಿತ್ತು. ಒಂದಿನ ಅವರು ತಮ್ಮ ಕಥಾ ಸಂಕಲನ ತರಂಗವನ್ನು ಇವರಿಗೆ ಕೊಡುತ್ತಾರೆ. ಅದು ಕೂಡ ಸಾಹಿತ್ಯದ ಕಡೆಗೆ ವಾಲಲು ಕಾರಣವಿರಬಹುದು. ವಿಷ್ಣು ನಾಯ್ಕರು ಸಾಹಿತ್ಯಿಕ ಸಂಘಟನೆ ಸಾಂಸ್ಕೃತಿಕ ಕಾರ್ಯಕ್ರಮ ಸಂಘಟಿಸುವ ಸಂದರ್ಭದಲ್ಲಿ ಅವರ ಕಣ್ಣಿಗೆ ಬಿದ್ದು ಮನಸ್ಸಿನ ಆಳದಲ್ಲಿ ಮೂಡಿದ ಕಾವ್ಯದ ಭಾವಗಳು ಚಿಗುರೊಡೆಯಲು ಕಾರಣವಾಗುತ್ತದೆ.

ವಿಷ್ಣು ನಾಯಕರು ಸಂಘಟಿಸಿದ ಕಾವ್ಯಕಮ್ಮಟದ ಕಮ್ಮಟಾರ್ಥಿಯಾಗಿ ಕಾವ್ಯ ಕಟ್ಟುವ ಕಲೆಯನ್ನು ಕರಗತ ಮಾಡಿಕೊಂಡಾಗ ಸಂತೋಷಗೊಂಡ ವಿಷ್ಣು ನಾಯ್ಕರು ತಾವು ನಡೆಸುವ ಕವಿಗೋಷ್ಠಿಗಳಲ್ಲಿ ಇವರನ್ನು ಕವಿತೆ ಓದಲು ಕರೆಯುತ್ತಾರೆ. ನಂತರ ಅಂಕೋಲೇಕರ್ ಅವರ 'ಲೆಕ್ಕವಿಲ್ಲದವರು' ಕವನ ಸಂಕಲನವನ್ನು ತಮ್ಮ ರಾಘವೇಂದ್ರ ಪ್ರಕಾಶನದ ಮೂಲಕ ಪ್ರಕಟಿಸುತ್ತಾರೆ ನಂತರ 'ಜೆನ್‌ಧನಿ' ಎಂಬ ಚುಟುಕುಗಳ ಸಂಕಲನ ಪ್ರಕಟವಾಗುತ್ತದೆ. ಇತ್ತೀಚೆಗೆ 'ನಿರ್ನಾಮಿಕರು' ಕವನ ಸಂಕಲನ ಮತ್ತು 'ಮೂಕಮ್ ಕರೋತಿ ವಾಚಲಂ' ಎಂಬ ಪ್ರಬಂಧಗಳ ಸಂಕಲನ ಮತ್ತು 'ಮನದ ಮಾದೇಶ' ಎಂಬ ವಚನಗಳ ಸಂಕಲನ ಪ್ರಕಟವಾಗಿವೆ. ಅಂಕೋಲೇಕರ್ ಅವರಿಗೆ ದಲಿತ ಬಂಡಾಯ ಚಳುವಳಿಯ ಪ್ರಭಾವ ಅಷ್ಟಾಗಿ ಆಗಿಲ್ಲ ಎಂದೇ ಹೇಳಬೇಕು. ಅದರ ಸಂವೇದನೆ ಇರಲೇ ಇಲ್ಲ ಅಂತಲ್ಲ ಅವರ ಲೆಕ್ಕವಿಲ್ಲದವರು, ನಿರ್ನಾಮಿಕರು ಕವನ ಸಂಕಲನಗಳ ಕೆಲಸ ಕವಿತೆಗಳು ದಲಿತ ಸಂವೇದನೆಯನ್ನು ಬಿಂಬಿಸುತ್ತದೆ. ಉದಾಹರಣೆಗೆ ಈ ಕವಿತೆಯ ಸಾಲನ್ನು ಗಮನಿಸಬಹುದು

ಕಾಲವೇ ಹಾಗೆ
ಮುಚ್ಚಿ ಹಾಕುತ್ತದೆ
ನನ್ನಂಥವರ ಮನೆಗಳಲ್ಲಿ
ಮೊಳೆಯುವ ತಣ್ಣನೆಯ
ಬೆಂಕಿಯನ್ನು
ಮರದೊಳಗಣ ಕಿಚ್ಚಿನಂತೆ

ಈ ಕವಿತೆ ಓದುವಾಗಲೆಲ್ಲ ಜಂಬಣ್ಣ ಅಮರಚಿಂತ ಅವರ 'ಪೆಟ್ರೋಮ್ಯಾಕ್ಸ್ ಹೊತ್ತವರು' ಕವಿತೆ, ಡಾ. ರಾಮಕೃಷ್ಣ ಗುಂದಿಯವರ 'ಚಾಜುದಾರರು' ಕಥೆ ನೆನಪಾಗುತ್ತದೆ. ಎಷ್ಟೇ ಪ್ರಭಲವಾಗಿ ಧನಿ ಎತ್ತುವ ಅವಕಾಶ ಇದ್ದರೂ ದೊಡ್ಡವರ ಮೇಲ್ವರ್ಗದ ದಬ್ಬಾಳಿಕೆ ದೌರ್ಜನ್ಯದ ಭಯದಲ್ಲಿ ಎಲ್ಲೂ ದಾಖಲಾಗುವುದಿಲ್ಲ ಮತ್ತು ಯಾರಿಗೂ ಕೇಳುವುದಿಲ್ಲ ಎಂಬ ನಿಲುವು ಸ್ಪಷ್ಟವಾಗುತ್ತದೆ. ಅವರ 'ಕುಲಕ್ಕಿಲ್ಲದ ದೇವರು' ಕವಿತೆಯಲ್ಲಿ

ಉರಿದು ಹೊರಗಾದೆವು
ನಾವು ಬದುಕಿದ್ದೇವೆ ಸತ್ತಿಲ್ಲ
ಕಕ್ಕುಲತೆಯಿಂದ ಕೇಳಲು
ನಮ್ಮ ಕುಲಕ್ಕೆ ದೇವರೇ ಇಲ್ಲ

ಎನ್ನುವಲ್ಲಿ ದಲಿತರಿಗೆ ದೇವಸ್ಥಾನದ ಒಳಗೆ ಪ್ರವೇಶವಿಲ್ಲದ ಬಗ್ಗೆ ತಕರಾರು ತೆಗೆಯುತ್ತಾರೆ. ಕವಿತೆಯ ಕೊನೆಯಲ್ಲಿ ಮೂರ್ತಿ ರೂಪದ ದೇವರಿಂದ ಆಗಿರುವ ಅವಮಾನ ಸಹಿಸಿ ನೋವಿಗೆ ಒಳಗಾಗುವುದಕ್ಕಿಂತ ಕಾಣದ ಆ ದೇವರನ್ನು ನೋಡದಿರುವುದೇ ಲೇಸು ಎಂದು ಅಭಿಪ್ರಾಯ ಪಡುತ್ತಾರೆ. ಅಂಬೇಡ್ಕರ್ ಅವರೇ ನಮ್ಮ ದೇವರು ಎಂಬ ಬಗ್ಗೆ ನಿರ್ಧಾರಕ್ಕೆ ಬರುತ್ತಾರೆ. ಅವರ 'ನೆಲದ ಮಕ್ಕಳು' ಕವಿತೆಯಲ್ಲಿ ಹೀಗೆ ವಿಷದ ವ್ಯಕ್ತಪಡಿಸುತ್ತಾರೆ

ಎಷ್ಟೊಂದು ಸುಡುತ್ತೀರಿ
ಉರಿದು ಉರಿದು ಕೆಂಡವಾಗಿದೆ ಕಟ್ಟಿಗೆ
ಉಳಿದ ಬೂದಿ ಕೂಡ ಹಾರಿದೆ
ಬದುಕಿನುದ್ದಕ್ಕೂ ಕೊಲ್ಲುತ್ತಾ ಕೊಲ್ಲಿಸುತ್ತ
ಬಂದ ನೀವು ಕೂಡ
ಕೊನೆಗೆ ಹಿಡಿಯುವುದು
ನಮ್ಮ ದಾರಿಯೇ
ಎಂಬಲ್ಲಿನ ಆಕ್ರೋಶ ಹೊರಹಾಕುತ್ತಾರೆ.
ಹೊಲೆಯವ ಹೊರಗಟ್ಟು
ಉಸಿರು ತುಂಬುವ ಗಾಳಿ ಹೇಳಲಿಲ್ಲ
ಸಮಗಾರನೀತ ಸರಿದೂರ
ಎಂದಿತ್ತೆ ಕಣ್ಣು ತುಂಬುವ ಬೆಳಕು?
ಮಾದಿಗ ಮುಳುಗಿ ನಿಂದರೆ ಮೈಲಿಗೆ
ಎನಲಿಲ್ಲ ಸಕಲರ ಪೊರೆವ ಜೀವಜಲ
ಕಸಬರಿಗೆಯವಗೆ ಕೊಳ್ಳಿಯಿಡಲಾರೆ
ಎಂದಿತ್ತೆ ಬೂದಿ ತುಂಬುವ ಬೆಂಕಿ?

ಎಂದು ಹೇಳುವ ಕವಿ ತನ್ನ ಕಾಲದ ಜೀವಂತ ಅಸ್ಪೃಶ್ಯತೆಯನ್ನ ಪ್ರಶ್ನಿಸುತ್ತಾ ಹಾಗೆ ತಣ್ಣಗಾಗುತ್ತಾ ಹೀಗೆ ಹೇಳುತ್ತಾನೆ.

ಕಳೆದು ಕತ್ತಲೆಯ ತರತಮ
ತುಂಬಲಾರಿರಾ ನಮ್ಮೆದೆಗಳಲ್ಲಿ ಭ್ರಾತೃಪ್ರೇಮವ
ಮತ್ತೆ ಹರಿಯಲಿ ಯಮುನೆ
ತೀರದಿಂದ ಉಕ್ಕಿ ಹರಿಯಲಿ
ಮಹಾ ಚೈತ್ರ ಎಂದು ಸುತ್ತಲಿನ ಪ್ರಪಂಚಕ್ಕೆ ಕೇಳಿಕೊಳ್ಳುತ್ತಾರೆ.

ಆದರೆ ಹಿಂದಿನ ಕಾಲದ ಅಸ್ಪೃಶ್ಯತೆ ಬಗ್ಗೆ ನಾನು ಏನನ್ನು ಹೇಳಲಾರೆ. ನಾನು ಬಲ್ಲವನಾದಾಗಿನಿಂದ ಅಂಕೋಲೆಕರ್ ಅವರನ್ನು ಮತ್ತು ಅವರ ಸಮುದಾಯವನ್ನು ತುಚ್ಛವಾಗಿ ಕಂಡುಕೊಂಡ ಬಗ್ಗೆ ಅನಿಸುತ್ತಿಲ್ಲ. ಅವರನ್ನು ಅವರ ಸಮುದಾಯವನ್ನು ಅಂಕೋಲೆ ಭ್ರಾತೃ ಪ್ರೇಮದಿಂದಲೇ ನೋಡಿದೆ. ಈ ಹಿನ್ನೆಲೆಯಲ್ಲಿ ಅಂಕೋಲೆಯ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವುದು. ಅದಕ್ಕೆ ಅವರೊಬ್ಬ ಕವಿಯಾಗಿ ಪ್ರಾಧ್ಯಾಪಕರಾಗಿ ಸಮ್ಮಿತ್ರರಾಗಿ ಅಂಕೋಲೆ ಜನರಿಗೆ ಕಾಣಿಸಿದ್ದು ಇಲ್ಲಿ ಯಾವುದೇ ಜಾತಿ ಪಂಗಡ ಎಂಬುದು ಸಾಹಿತ್ಯಕ್ಕಿರುವುದಿಲ್ಲ. ಸಾಮಾಜಿಕ ಕೌಟುಂಬಿಕತೆಂಯು ಭಾಗವಾಗಿ ಕವಿ ಮೂಡಿಬಂದಿರುವುದರಿಂದ ಸಾಹಿತ್ಯ ಕೂಡ ಸಮಾಜದ ಪ್ರತಿಬಿಂಬ ಆಗಿರುವುದರಿಂದ ಕೊನೆಗೂ ಮನಸ್ಸಿನಲ್ಲಿ ಉಳಿಯುವುದು ಜನ ಮೆಚ್ಚುವ ಸಾಹಿತ್ಯ ಮತ್ತು ಅದನ್ನು ರಚನೆ ಮಾಡಿರುವ ಕವಿಯೇ ಆಗಿರುತ್ತಾನೆ.

ದಲಿತ ಇರಲಿ ಯಾವುದೇ ಇರಲಿ ಸಾಹಿತ್ಯದ ಕಾವ್ಯದ ಓದನ್ನು ಗಂಭೀರವಾಗಿ ತೆಗೆದುಕೊಳ್ಳದಿರುವುದೇ ಅವರ ಬಗೆಗಿರುವ ಬೇಸರ. ಈ ಮೇಲೆ ಉಲ್ಲೇಖಿಸಿರುವ ಕಾವ್ಯದ ಸಾಲುಗಳು ಅವರ ಅಂತರಂಗದಿಂದಲೇ ಬಂದಿರುವುದರಿಂದ ಇವುಗಳಂತೆ ಎಲ್ಲಾ ಪದ್ಯಗಳನ್ನು ಬರೆಯಲು ಪ್ರಯತ್ನಿಸಲಿಲ್ಲವಲ್ಲ ಎಂಬುದು ಕೂಡ ಅವರ ಬಗ್ಗೆ ಸಿಟ್ಟು ಬರುವುದಕ್ಕೆ ಕಾರಣವಾಗಿದೆ ಈಗಲೂ ಕೂಡ ಇಂತಹ ಗಂಭೀರ ಕವನಗಳನ್ನು ಬರೆಯಲಿ ಎಂಬುದೇ ನಮ್ಮ ಆಶಯ.

ದಾರಿ

ಎಲ್ಲಿಂದ
ಈ ದಾರಿಗಳು ಅರಳಿವೆಯೋ
ಎಲ್ಲೆಂದರಲ್ಲಿ
ಈ ದಾರಿಗಳು ಹೊರಳಿವೆಯೋ
ತನ್ನಿಚ್ಛೆಯಂತೆ ಬೇಕೆನಿಸಿದಲ್ಲಿ
ಮರಳುವ
ಚೋದ್ಯ ಸೋಜಿಗದೀ ದಾರಿಗಳು
ನಡೆಯೋಣ ಬಾ ಮತ್ತೊಮ್ಮೆ ಇಲ್ಲಿ
ಅಪರಿಚಿತರಂತೆ ನಾನು ನೀನು
ಜೊತೆ ಜೊತೆಯಾಗಿ
ಯಾರು ಬಲ್ಲರು
ಒಂದಾಗ ಬಹುದೇನೋ
ದಾರಿ ಸಾಗಿದಂತೆ
ದಾರಿಹೋಕರು
ಬದಲಾದರೇನು
ದಾರಿ ಬದಲಾಗುವುದೇ
ಇರುವುದೊಂದೇ ದಾರಿ
ಸಾಗುತಿರಬೇಕಷ್ಟೇ ಬಾರಿ
ಬಾರಿ
ದಾರಿಗಳೆಲ್ಲೂ ಹೋಗುವುದಿಲ್ಲ
ಇಲ್ಲಿಂದ ಹೋಗಲು
ನಮಗಿದೊಂದೇ ರಹದಾರಿ

ಎನ್. ಡಿ. ಅಂಕೋಲೆಕರ

ಅಂಕೋಲಾ ತಾಲೂಕಾ ೧೦ನೇ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಭಾಷಣ

– ಶಾ.ಮಂ. ಕೃಷ್ಣರಾಯ

ಉತ್ತರ ಕನ್ನಡ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರೇ, ಅಂಕೋಲಾ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರೇ, ವೇದಿಕೆಯ ಮೇಲಿನ ಗಣ್ಯರೇ ಮತ್ತು ಇಲ್ಲಿ ಸೇರಿದ ಕನ್ನಡ ಪ್ರೇಮಿಗಳೇ, ನಿಮಗೆಲ್ಲ ನನ್ನ ವಿನೀತ ಪ್ರಣಾಮಗಳು.

ನೀವು ನನ್ನನ್ನು ಅಂಕೋಲಾ ತಾಲೂಕಿನ ಹತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆಗೆ ಆಹ್ವಾನಿಸಿ ಉದ್ಘಾಟನೆ ಮಾಡುವ ಸದವಕಾಶವನ್ನು ನನಗೆ ಕೊಟ್ಟಿದ್ದೀರಿ. ನಾನಿಲ್ಲಿ ಸಂತೋಷದಿಂದ ಈ ಸಮ್ಮೇಳನ ಉದ್ಘಾಟಿಸಿದ್ದೇನೆ ಎಂದು ಘೋಷಿಸುತ್ತೇನೆ.

ನನ್ನ ಮೂಲ ಮನೆತನ ಇರುವುದು ಅಂಕೋಲೆಯ ಕಾಕರಮಠದಲ್ಲಿ ಈಗಲೂ ನನ್ನ ಚಿಕ್ಕಪ್ಪನ ಮನೆ, ನನ್ನ ಸೋದರತ್ತೆಯ ಮನೆಗಳು ಕಾಕರಮಠದಲ್ಲಿಯೇ ಇವೆ.

ಹಿಂದೊಮ್ಮೆ ಪ್ರಾಯ ೧೯೭೭ರಲ್ಲಿ ಇಲ್ಲಿ ಪಿ.ಎಂ.ಹೈಸ್ಕುಲಿನ ಶಿಕ್ಷಕ ವರ್ಗ ನನ್ನ 'ಮಾಮೂಲು' ನಾಟಕ ಅಭಿನಯಿಸುವ ದಿನ ನನ್ನನ್ನು ಕರೆದಿದ್ದರು. ಅನಂತರ ಎಷ್ಟೋ ಕಾರ್ಯಕ್ರಮಗಳು ಇಲ್ಲಿ ನಡೆದಿದ್ದರೂ ನಾನು ಇಲ್ಲಿಯವನೆಂದು ಗೊತ್ತಿದ್ದೂ ನನ್ನನ್ನು ಯಾವ ಕಾರ್ಯಕ್ರಮಕ್ಕೂ ಆಹ್ವಾನಿಸಿರಲಿಲ್ಲ. ಈಗ ನನಗೆ ಎಂಭತ್ತೆರಡು ವರ್ಷ. ಈಗ ನನ್ನ ಮಿತ್ರ ಸಂದೀಪ ನಾಯಕರ (ಮಯೂರ ಪತ್ರಿಕೆಯ ಮುಖ್ಯ ಉಪಸಂಪಾದಕರಾಗಿದ್ದರು.) ಶಿಫಾರಸ್ಸಿನಿಂದ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹೃದಯತೆಯಿಂದ ಇಲ್ಲಿಗೆ ಬಂದು ನಿಂತಿದ್ದೇನೆ. ನಿಮ್ಮ ಪ್ರೀತಿ–ವಿಶ್ವಾಸಗಳಿಗೆ ನಾನು ಋಣಿಯಾಗಿದ್ದೇನೆ.

ಪ್ರತಿಯೊಂದು ತಾಲೂಕಿನಲ್ಲಿಯೂ ಇಂಥ ಸಮ್ಮೇಳನಗಳನ್ನು ಸಂಘಟಿಸುವುದು ಸತ್‌ಸಂಪ್ರದಾಯ. ತನ್ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಅಂಬೆಗಾಲಿಕ್ಕುವವರನ್ನು, ತಾಲೂಕಿನಲ್ಲಿ ಜನ ಗುರುತಿಸುವಂತೆ ಸಾಹಿತ್ಯ ಪರಿಚಾರಿಕೆಯನ್ನು ಮಾಡುತ್ತಿರುವ ಮಹನೀಯರನ್ನು ಗುರುತಿಸುವಂತಾಗುತ್ತದೆ. ಇಂಥವರು ತಾಲೂಕಾ ಸಮ್ಮೇಳನ ಅಧ್ಯಕ್ಷರಾಗಬೇಕು. ಗೋಷ್ಠಿಗಳಲ್ಲಿ ಭಾಗವಹಿಸುವಂತಾಗಬೇಕು. ಇಂದಿನ ಅಧ್ಯಕ್ಷರಾದ ನಾಗೇಶದೇವ ಅಂಕೋಲೇಕರರು ತಮ್ಮ ಅರ್ಹತೆಯಿಂದಲೇ ಇಂದಿನ ಮನ್ನಣೆಗೆ ಪಾತ್ರರಾಗಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳು.

ಅಂಕೋಲೆಯಲ್ಲಿ ಅರಳುತ್ತಿರುವ ಪ್ರತಿಭೆಗಳು ಕೇವಲ ತಾಲೂಕಾ ಸಮ್ಮೇಳನಕ್ಕಷ್ಟೇ ಸೀಮಿತವಾಗಬಾರದು. ಅವರನ್ನು ಸಂಬಂಧಿಸಿದವರು ಜಿಲ್ಲಾ ಸಮ್ಮೇಳನಗಳಿಗೆ, ಜಿಲ್ಲೆಯ ಪ್ರತಿಭಾವಂತರನ್ನು ರಾಜ್ಯ ಸಮ್ಮೇಳನಗಳಲ್ಲಿ ತೊಡಗಿಸಲು ಶಿಫಾರಸ್ಸು ಮಾಡಬೇಕು. ಇಂದಿಗೂ ನಮ್ಮ ಅನೇಕ ಪ್ರತಿಭೆಗಳಿಗೆ ರಾಜ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಅವಕಾಶ ಸಿಗಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಉತ್ತರ ಕನ್ನಡದ ಹಿರಿಯ ಪ್ರತಿಭೆಗಳಾದ ಶಾಂತಿನಾಥ ದೇಸಾಯಿ, ಗೌರೀಶ ಕಾಯ್ಕಿಣಿ, ಯಶವಂತ ಚಿತ್ತಾಲ, ದಿನಕರ ದೇಸಾಯಿ, ಪ್ರೊ. ಬಿ.ಎಚ್.ಶ್ರೀಧರ, ಡಾ।ಎಲ್.ಆರ್.ಹೆಗಡೆ, ಪ್ರೊ. ಜಿ.ಎಚ್.ನಾಯಕರಂತಹ ಅನೇಕರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಅರ್ಹರಾಗಿದ್ದರೂ ಅವರನ್ನು ನಿರ್ಲಕ್ಷಿಸಲಾಗಿದೆಯೆಂದು ಖೇದದಿಂದ ಹೇಳಬೇಕಾಗಿದೆ. ಇನ್ನು ಮುಂದಾದರೂ ಜಿಲ್ಲೆಯ ಅಧ್ಯಕ್ಷರು ಪಟ್ಟು ಹಿಡಿದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೌರವದ ಅಧ್ಯಕ್ಷಸ್ಥಾನ ಸಿಗುವಂತೆ ಮಾಡಬೇಕಾಗಿ ಈ ವೇದಿಕೆಯಿಂದ ಒತ್ತಾಯಿಸುತ್ತಿದ್ದೇನೆ.

ಇಂದು ತರುಣ ಪ್ರತಿಭೆಗಳು ಸಾಹಿತ್ಯಕ್ಷೇತ್ರದಲ್ಲಿ ಆಶಾದಾಯಕ ಸಾಧನೆಯನ್ನು ಮಾಡುತ್ತಿದ್ದಾರೆ. ಅಂಥವರನ್ನು ಪ್ರೋತ್ಸಾಹಿಸಬೇಕು, ಬೆಂಬಲಿಸಬೇಕು. ಹುರಿದುಂಬಿಸಬೇಕು. ಪ್ರತಿಭೆಗಳನ್ನು ಜಾತಿ–ಮತ–ಕುಲ–ಗೋತ್ರಗಳಿಂದ ತೂಗಬಾರದು.

ತಾಲೂಕಾ ಸಮ್ಮೇಳನ, ಜಿಲ್ಲಾ ಸಮ್ಮೇಳನ, ರಾಷ್ಟ್ರ ಮಟ್ಟದ ಸಮ್ಮೇಳನದ ಅಧ್ಯಕ್ಷ ಪದ ಒಂದು ಗೌರವದ ಸ್ಥಾನ. ಅವರು ಮಾಡುವ ಸೇವೆಯನ್ನು ಗುರುತಿಸುವ, ಗೌರವಿಸುವ, ಹೆಮ್ಮೆಪಡುವ ಸುಸಂಸ್ಕೃತಿ ನಮ್ಮ ಜಿಲ್ಲೆಯಲ್ಲಿ ಅನೇಕ ಪ್ರತಿಭಾವಂತರು ಆಗಿ ಹೋಗಿದ್ದಾರೆ. ಕೆಲವರು ಜಿಲ್ಲೆಯಲ್ಲಿದ್ದಾರೆ, ಕೆಲವರು ಜಿಲ್ಲೆಯ ಹೊರಗಿದ್ದಾರೆ. ಹೊಟ್ಟೆಪಾಡಿಗಾಗಿ ದುಡಿಯಲು ಜಿಲ್ಲೆಯ ಹೊರಗೆ ಹೋದವರು ತಮ್ಮ ಪ್ರತಿಭೆಯಿಂದ ಜಿಲ್ಲೆಗೆ ಕೀರ್ತಿತಂದಿದ್ದಾರೆ. ಹಿಂದೆ ಸೂರಿ ವೆಂಕಟರಮಣ ಶಾಸ್ತ್ರಿಗಳು, ಸ.ಪ.ಗಾಂವಕರ, ಚಿತ್ತಾಲ ಬಂಧುಗಳು, ದಿನಕರ ದೇಸಾಯಿ, ಅರವಿಂದ ನಾಡಕರ್ಣಿ, ಸುಂದರ ನಾಡಕರ್ಣಿ, ಶಾಂತಿನಾಥ ದೇಸಾಯಿ, ಪ್ರೊ. ಜಿ.ಎಚ್.ನಾಯಕ, ಡಾ.ಕೃಷ್ಣಾನಂದ ಕಾಮತ, ಡಾ.ಜ್ಯೋತ್ಸ್ನಾ ಕಾಮತ ಮೊದಲಾದವರು ಜಿಲ್ಲೆಯಿಂದ ಹೊರಗಿದ್ದೇ ತಮ್ಮ ಸಾಹಿತ್ಯ ಕೃಷಿಯಿಂದ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಈಗಲೂ ಜಿಲ್ಲೆಯ ಹೊರಗಿದ್ದ ಕೃ.ಶಿ.ಹೆಗಡೆ (ಪುಣೆ) ಲಕ್ಷ್ಮೀನಾರಾಯಣ ಶಾಸ್ತ್ರಿ (ನಾಜಗಾರ) (ಬೆಳಗಾವಿ) ಭುವನೇಶ್ವರಿ ಹೆಗಡೆ, (ದಕ್ಷಿಣ ಕನ್ನಡ) ಎಂ.ಎಚ್. ನಾಯಕ ಬಾಡ (ಬೆಂಗಳೂರು) ಜಯಂತ ಕಾಯ್ಕಿಣಿ (ಬೆಂಗಳೂರು) ಜಿ.ಎಸ್.ಭಟ್ಟ (ಮೈಸೂರು) ಡಾ. ಎಸ್.ಎನ್.ಹೆಗಡೆ (ಮೈಸೂರು) ದಯಾನಂದ ತೊರ್ಕೆ (ಧಾರವಾಡ) ಡಾ. ಚಿಂತಾಮಣಿ ಕೊಡ್ಲೆಕೆರೆ, ಮಹಾಬಲಮೂರ್ತಿ ಕೊಡ್ಲೆಕೆರೆ, ನಾರಾಯಣ ಶಾನಭಾಗ, ರವೀಂದ್ರ ಭಟ್ಟ, ಐನಕೈ (ಬೆಂಗಳೂರು) ವಿಶ್ವೇಶ್ವರ ಭಟ್ಟ (ಬೆಂಗಳೂರು) ರವಿ ಹೆಗಡೆ (ಬೆಂಗಳೂರು) ಉದಯಕುಮಾರ ಹಬ್ಬು (ಕಿನ್ನಿಗೋಳಿ) ಸಹನಾ ಹೆಗಡೆ (ಬೆಂಗಳೂರು) ಭಾರತಿ ಹೆಗಡೆ (ಬೆಂಗಳೂರು) ಇವರೆಲ್ಲ ಜಿಲ್ಲೆಯಿಂದ ಹೊರಗಿದ್ದರೂ ಕನ್ನಡಕ್ಕೆ ಅಚ್ಚಳಿಯದ ಕಾಣಿಕೆ ಕೊಟ್ಟಿದ್ದಾರೆ. ಇಂಥವರನ್ನು ಆಹ್ವಾನಿಸಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ನೀಡಿ ಗೌರವಿಸಬೇಕಿತ್ತು. ಜಿಲ್ಲೆಯಲ್ಲಿಯೂ ಅನೇಕ ಹಿರಿಯ ಸಾಹಿತಿಗಳಿದ್ದಾರೆ. ಅವರಿಗೂ ಈ ಗೌರವದ ಸ್ಥಾನ ಸಿಗಬೇಕು. ಆದರೆ ಇತ್ತೀಚೆ ಜಿಲ್ಲೆಯ ಹೊರಗಿದ್ದ ಜಿಲ್ಲೆಯ ಸಾಹಿತಿಗಳಿಗೆ ಜಿಲ್ಲೆಯ ಅಧ್ಯಕ್ಷಸ್ಥಾನ ನೀಡಕೂಡದು ಎಂಬ ಅಲಿಖಿತ ನಿರ್ಧಾರವಾಗಿದೆ ಎಂದು ಕೇಳಿದ್ದೇನೆ. ಇದು ನಿಜವೇ ಆದರೆ ಇದು ಸಂಕಟದಿಂದ ಹೇಳಬೇಕಾಗುತ್ತದೆ. ಇದರರ್ಥ ಜಿಲ್ಲೆಯಲ್ಲಿದ್ದ ಪ್ರತಿಭೆಗಳನ್ನು ನಿರ್ಲಕ್ಷಿಸಬೇಕೆಂದಲ್ಲ. ಅವರಿಗೂ ಸ್ಥಾನಮಾನ ಸಿಗಬೇಕು. ಅನ್ಯಥಾ ಹೊರಜಿಲ್ಲೆ, ಹೊರನಾಡಿನಲ್ಲಿದ್ದವರನ್ನು ಕಡೆಗಣಿಸಬಾರದು ಎಂಬುದೇ ನನ್ನ ಮಾತಿನ ತಾತ್ಪರ್ಯ.

ಕೆಲವರು ಅಸುನೀಗುವ ಭಾಷೆಗಳಲ್ಲಿ ಕನ್ನಡವೂ ಇದೆ ಎಂದು ಆಗಾಗ್ಗೆ ಹೆದರಿಸುತ್ತಿರುತ್ತಾರೆ. ಕನ್ನಡ ಅಷ್ಟು ದುರ್ಬಲ ಭಾಷೆಯೆಂದು ನನಗೆ ಅನ್ನಿಸುವುದಿಲ್ಲ. ಇದಕ್ಕೆ ಸಾವಿರಾರು ವರ್ಷದ ಇತಿಹಾಸವಿದೆ. ಘನ ಪರಂಪರೆಯಿದೆ. ಅದು ಕತ್ತು ಹಿಚುಕಿದರೂ ಸಾಯುವ ಭಾಷೆಯಲ್ಲ, ಆದರೆ ಅದು ಅಪಾಯದಲ್ಲಿದೆ ಎಂಬುದು ಸತ್ಯ. ಕೆಲವರು ಒಣ ಪ್ರತಿಷ್ಠೆಗೆ ಇತರ ಭಾಷೆಗೆ ಜೋತು ಬಿದ್ದಿದ್ದಾರೆ.

ಭಾಷೆ ಬದುಕಿಸಬೇಕಾದರೆ ಕೊಂಕಣಿ ಭಾಷೆಯ ಕಥೆ ನೀವು ಕೇಳಬೇಕು. ಕೊಂಕಣಿ ಭಾಷೆ ಗೋವೆಯ ಮೂಲದಿಂದ ಬಂದಿದ್ದು ಎಂದು ಹೇಳುತ್ತಾರೆ. ಕ್ರಿ.ಶ. ೧೫೧೦ರಲ್ಲಿ ಗೋವೆಗೆ ಬಂದ ಪೋರ್ಚುಗೀಸರು ತಮ್ಮ ಧರ್ಮ ಮತ್ತು ಭಾಷೆಗೆ ಭದ್ರಬುನಾದಿ ಹಾಕಲು ಕ್ರಿ.ಶ.೧೫೬೦ರಲ್ಲಿ ಧರ್ಮಾಂತರ ಕಾರ್ಯದಲ್ಲಿ ತೊಡಗಿದರು. ಜೊತೆಗೆ ಭಾಷಾಂತರ ಮಾಡುವ ಕಾರ್ಯಕ್ಕೂ ಕೈ ಹಾಕಿದರು. ಧರ್ಮಾಂತರಕ್ಕೆ ಗೋವೆ ಬಿಟ್ಟು ಜನ ಕರ್ನಾಟಕಕ್ಕೆ ವಲಸೆ ಬಂದ ವಿಷಯ ನಿಮಗೆ ಗೊತ್ತು. ಅದೇ ಸಮಯ ಗೋವೆಯ ಕೊಂಕಣಿ ಭಾಷೆಯ ಸಮೂಲ ನಾಶಕ್ಕೆ ಸುಮಾರು ೧೫೦ ವರ್ಷಗಳ ಅವಧಿಯಲ್ಲಿ ನೂರಕ್ಕೂ ಹೆಚ್ಚು ಆದೇಶಗಳನ್ನು ಹೊರಡಿಸಿ ಗೋವೆಯ ಶಾಲೆಗಳಲ್ಲಿ ಕೊಂಕಣಿ ಹೊರಗೂ ಕೊಂಕಣಿಯಲ್ಲಿ ವ್ಯವಹರಿಸದಂತೆ ಕಟ್ಟುನಿಟ್ಟಾದ ಕಾನೂನು ಜಾರಿಗೆ ತಂದರೂ ಕೊಂಕಣಿ ಭಾಷೆ ಬದುಕಿ ಉಳಿದುದು ಸೋಜಿಗವೆ ! ಈ ಭಾಷೆಯನ್ನು ಬದುಕಿಸಿದವರು ಮನೆಮನೆಯಲ್ಲಿರುವ ಮಾತೆಯರು, ಸೋದರಿಯರು, ಹಿರಿಯರು!! ಸರಕಾರ ಎಷ್ಟೇ ನಿರ್ಬಂಧ ಹೇರಿದರೂ ಈ ಹೆಣ್ಣುಮಕ್ಕಳು ಭಾಷೆಯನ್ನು ಮನೆಯಲ್ಲಿಟ್ಟು ಕಾಪಾಡಿದರು. ಇಂದು ಅದು ರಾಷ್ಟ್ರೀಯ ಭಾಷೆಗಳಲ್ಲಿ ಒಂದಾಗಿದೆ.

ಹಾಗೆಯೇ ಕನ್ನಡಿಗರು ಕನ್ನಡ ಉಳಿಸಿಕೊಳ್ಳಬೇಕಾದರೆ ಯಾವ ಆಮಿಷಕ್ಕೂ ಆದೇಶಕ್ಕೂ ಒಳಗಾಗದೆ ಕನ್ನಡವನ್ನು ಹೃದಯದಲ್ಲಿ ಕಾಪಿಟ್ಟುಕೊಳ್ಳಬೇಕು. ಮನೆಯಲ್ಲಿಟ್ಟು ಕಾಪಾಡಬೇಕು.

ಒಣ ಪ್ರತಿಷ್ಠೆಗೆ ಬಲಿಯಾಗದೆ ತಮ್ಮ ಅಸ್ತಿತ್ವದ ಹೆಗ್ಗುರುತಾದ ಕನ್ನಡವನ್ನು ಉಳಿಸುವ, ಬೆಳೆಸುವ ಪಣತೊಡಬೇಕು. ಇಂದು ಕನ್ನಡ ಕೊಲ್ಲುವವರು, ಕುಲಗೆಡಿಸುವವರು ನಾವೇ ಹೊರತು ಅನ್ಯರಲ್ಲ. ಕನ್ನಡವನ್ನು ಉಳಿಸಿಕೊಂಡು, ಅದನ್ನು ಸರ್ವತೋಮುಖವಾಗಿ ಬೆಳೆಸುವ ಜವಾಬ್ದಾರಿ ನಮ್ಮದು. ನಾವು ನಮ್ಮ ಕರ್ತವ್ಯ ಲೋಪಮಾಡಿದರೆ ಮುಂದಿನ ತಲೆಮಾರು ನಮ್ಮನ್ನು ಕ್ಷಮಿಸುವುದಿಲ್ಲ.

ಈ ಸಂದರ್ಭದಲ್ಲಿ ಈ ತಾಲೂಕಿನಲ್ಲಿ ಅರಳುವ ಪ್ರತಿಭೆಗಳಿಗೆ ಕಿವಿಮಾತೊಂದು ಹೇಳುತ್ತೇನೆ. ನಿಮಗೆ ಬರೆಯಬೇಕೆಂದು ಅನಿಸಿದ್ದನ್ನು ಯಾವ ಮುಲಾಜಿಲ್ಲದೆ ಬರೆಯಿರಿ. ಬರೆಯುವಾಗ ಇನ್ನೊಬ್ಬರಿಗೆ ನೋವಾಗುವಂತೆ ಅನ್ಯರಿಗೆ ಮರ್ಮಾಘಾತವಾಗುವಂತೆ ಬರೆಯಬೇಡಿ. ಎಲ್ಲರಿಗೂ ಬರೆಯುವ ಸ್ವಾತಂತ್ರ್ಯವಿದೆ. ಅದು ಸ್ವಚ್ಛಂದವಾಗಬಾರದು. ಸಾಹಿತ್ಯಕ್ಕೆ ಜಾತಿ–ಮತ–ಕುಲ–ಗೋತ್ರ, ಪಕ್ಷಪಂಗಡಗಳ ಬಂಧನವಿಲ್ಲ. ಆದರೆ ಅದು ನಮ್ಮ ಅಭಿವ್ಯಕ್ತಿ, ನಮ್ಮ ಸ್ವಭಾವ ದರ್ಶನ ಮಾಡಿಸುತ್ತದೆಯೆಂಬುದನ್ನು ಮರೆಯಬಾರದು.

ನಮ್ಮ ಸಾಹಿತ್ಯ ಇತಿಹಾಸದ ಅವಲೋಕನ ಮಾಡುವಂತೆ ಸಮಕಾಲೀನ ಜೀವನವನ್ನು ಚಿತ್ರಿಸಬೇಕು. ನಮ್ಮ ಸಾಹಿತ್ಯ ಇನ್ನೊಬ್ಬರ ನೋವಿಗೆ, ನರಳಿಕೆಗೆ ಮಿಡುಕಬೇಕು. ಕ್ರೌಂಚಪಕ್ಷಿಯ ವಿಲವಿಲ ಒದ್ದಾಟ ನೋಡಿಯೇ ವಾಲ್ಮೀಕಿ ರಾಮಾಯಣದಂತಹ ಮಹಾಕಾವ್ಯ ಬರೆದ. ನಮ್ಮ ಸೃಜನಸಾಹಿತ್ಯ ಇಂದಿನ ಆಗುಹೋಗುಗಳನ್ನು, ಸಂಘರ್ಷ, ಮೇಲಾಟಗಳನ್ನು, ಬದುಕಿನ ಒಳಸುಳಿಗಳನ್ನು ದಾಖಲಿಸಬೇಕು. ಬದುಕಿನ ವಾಸ್ತವವನ್ನು, ವೈಚಾರಿಕ ನೆಲೆಯನ್ನು, ವೈಜ್ಞಾನಿಕ ಸ್ಥಿತ್ಯಂತರಗಳನ್ನು ಜೀವನದ ಪಲ್ಲಟಗಳನ್ನು ಪೂರ್ವಾಗ್ರಹಗಳಿಲ್ಲದೆ ಬರೆಯಬೇಕು. ಬರೆದುದು ತಕ್ಷಣ ಪ್ರಕಟವಾಗಬೇಕು. ಪ್ರಕಟವಾದುದೆಲ್ಲ ಸರ್ವಶ್ರೇಷ್ಠ ಎಂಬ ಭ್ರಮೆಯೂ ಬೇಡ. ಬರೆಹಗಾರ ಪ್ರಶಸ್ತಿ, ಪುರಸ್ಕಾರಗಳ ಬೆನ್ನುಬೀಳಬಾರದು. ಪ್ರಶಸ್ತಿಗಳು ತಾನಾಗಿ ಬಂದರೆ ಬರಲಿ, ಸ್ವೀಕರಿಸಿ. ಪ್ರಶಸ್ತಿಗಾಗಿ ವಾಮಮಾರ್ಗ ತುಳಿಯುವುದು ಅಕ್ಷಮ್ಯ. ಅದು ಅಭಿವ್ಯಕ್ತಿಯ ಅಧಃಪತಕ್ಕೆ ದಾರಿ ಮಾಡಿಕೊಡುತ್ತದೆ.

ಸಂದೀಪ ನಾಯಕರಂತಹ ತರುಣರನ್ನು, ಅನುಭವಿಗಳನ್ನಿಟ್ಟುಕೊಂಡು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹೊಸ ಲೇಖಕರಿಗೆ ಮಾರ್ಗದರ್ಶನ ಮಾಡುವ ಕಮ್ಮಟಗಳನ್ನು ಸಂಘಟಿಸಿ, ಜಿಲ್ಲೆ ಸಾಹಿತ್ಯ ಬೆಳವಣಿಗೆಗೆ ಕಾರಣವಾಗಲಿ ಎಂದು ಮನಸಾರೆ ಹಾರೈಸುತ್ತೇನೆ.

ಮೌನಮಾತು

ಮಾತಿಗೊಮ್ಮೆ ಸೋಲು
ಮೌನಕೆ ಒಂದೇ ಸಲ ಸಾವು

ಮಾತಿನ ಸೋಲಿನಲೇ
ಗೆಲ್ಲುವುದು ಮೌನ

ಮಾತನಾಡುವವರೇ ಎಲ್ಲ
ಕೇಳುವವರು ಎಲ್ಲಿ

ಮಾತಿಗೆ ಅರ್ಥ ನೂರು
ಮೌನಕ್ಕೆ ಸಾವಿರ

ಕೊಲ್ಲುವುದು ಮಾತು
ಮಾತು ಕೊಲ್ಲುವದು ಮೌನ

ಶಾಪವಾದಾಗ ಮಾತು
ಮೌನ ವರದಾನ

ಮೌನದಲಿ ಅಜ್ಞಾನ
ಮರೆಯಾಗಿ ಜ್ಞಾನ.

– ಕಲಾ ಭಟ್

(ಬಕುಲದ ದಾಹ ಸಂಕಲನದಿಂದ)

ಅಂಕೋಲಾ ತಾಲೂಕಾ ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೦೮-೦೨-೨೦೨೪

ಸಮ್ಮೇಳನದ ಸರ್ವಾಧ್ಯಕ್ಷರು

ಮನದನಿಯ ಪ್ರೊ॥ ನಾಗೇಶದೇವ ಅಂಕೋಲೆಕರ



ಅಂಕೋಲೆಯ ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವ ಪ್ರೊ॥ ನಾಗೇಶದೇವ ಅಂಕೋಲೆಕರ ಅವರು ಅಂಕೋಲಾ ತಾಲೂಕಿನ ಅಂಬಾರಕೊಡ್ಲ ಊರಿನವರು.

ಕೊಲ್ಲಾಪುರ ವಿಶ್ವವಿದ್ಯಾಲಯದಿಂದ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಇವರು ಉತ್ತರಕನ್ನಡ ಜಿಲ್ಲೆಯ ಪ್ರತಿಷ್ಠಿತ ವಿದ್ಯಾಸಂಸ್ಥೆ, ಅಂಕೋಲೆಯ ಗೋಖಲೆ ಜನ್ಮಶತಾಬ್ದಿ ಮಹಾ ವಿದ್ಯಾಲಯದಲ್ಲಿ ಬಹುಕಾಲ ಕನ್ನಡ ಪ್ರಾಧ್ಯಾಪಕರಾಗಿ ಸೇವಿಸಲ್ಲಿಸಿ ನಿವೃತ್ತರಾಗಿರುವ ಇವರು, ಕೆಲಕಾಲ ಭಾರತೀಯ ಅಂಚೆ ಇಲಾಖೆಯಲ್ಲಿಯೂ ಸೇವೆ ಸಲ್ಲಿಸಿದ್ದಾರೆ.

ತಮ್ಮ ಸರಳ-ಸೌಮ್ಯ ವ್ಯಕ್ತಿತ್ವದಿಂದ ಸಾಹಿತ್ಯ ವಲಯದಲ್ಲಿ ಸುಪರಿಚಿತರಾಗಿರುವ ಪ್ರೊ. ನಾಗೇಶದೇವ ಅಂಕೋಲೆಕರ ಅವರು 'ಲೆಕ್ಕವಿಲ್ಲದವರು' ಹಾಗೂ 'ನಿರ್ನಾಮಿಕರು' ಎಂಬ ಕವನ ಸಂಕಲನವನ್ನು 'ಝುನ್‌ದನಿ' ಮತ್ತು 'ಮನದ ಮಾದೇಸ' ಎಂಬ ಚೌಪದಿ ಸಂಕಲನಗಳನ್ನು ಹಾಗೂ 'ಮೂಕಂ ಕರೋತಿ ವಾಚಾಲಂ' ಎಂಬ ಲಲಿತ ಪ್ರಬಂಧ ಕೃತಿಗಳನ್ನು ಪ್ರಕಟಿಸಿದ್ದಾರೆ.

ಸಾಹಿತ್ಯ ಸ್ನೇಹಿ ಚಟುವಟಿಕೆಗಳಿಂದ ವಿದ್ಯಾರ್ಥಿ ವೃಂದದಲ್ಲಿ ಹಾಗೂ ಸಾಹಿತ್ಯ ವಲಯದಲ್ಲಿ ಸುಪರಿಚಿತರಾಗಿರುವ ಪ್ರೊ. ನಾಗೇಶದೇವ ಅಂಕೋಲೆಕರ ಅವರ ನವಿರಾದ ಹಾಸ್ಯಪ್ರಜ್ಞೆಯಿಂದ ಕೂಡಿದ ಲಲಿತ ಪ್ರಬಂಧಗಳು ಹಾಗೂ ಅಂತರಂಗದ ನೋವು-ನಲಿವುಗಳನ್ನು ಮನದ ಮಾದೇಸನ ಮೂಲಕ ಮನದಿಂದ ಮನಕ್ಕೆ ಮುಟ್ಟಿಸುವ ಚೌಪದಿಗಳು ಶಬ್ದಮಿತಿಯಲ್ಲೇ ಅಮಿತ ಭಾವಗಳನ್ನು ಹೊರಹೊಮ್ಮಿಸಿ ಗಮನ ಸೆಳೆಯುತ್ತವೆ.

ದಿನಾಂಕ ೦೮-೦೨-೨೦೨೪ರಂದು ತಮ್ಮ ೭೪ನೇ ವಯಸ್ಸಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗುವುದರೊಂದಿಗೆ ತಮ್ಮ ಮನದ ಮಾತಿನಿಂದ ಸಮ್ಮೇಳನವನ್ನು ಮುದಗೊಳಿಸಿದರು.

ಅವರ ಕವನದ ಸಾಲುಗಳು ಹೀಗಿವೆ :

ಕಾಲವೇ ಹಾಗೆ
ಎಂಥ ಅಪಮಾನವನ್ನೂ
ಮುಚ್ಚಿ ಹಾಕುತ್ತದೆ
ಮರುಭೂಮಿಯ
ಮಾಯಾ ಮರಳಂತೆ

– ಜೀ. ಪ್ರೇಮಾನಂದ

ಪ್ರೊ॥ ಎನ್. ಡಿ. ಅಂಕೋಲೆಕರ ಅವರ ಸರ್ವಾಧ್ಯಕ್ಷೀಯ ಭಾಷಣ

ಎಲ್ಲ ಕನ್ನಡದ ಹೃದಯ ಮನಸ್ಸುಗಳಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳು...

ಅಂಕೋಲೆಯ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷನಾಗಿ ಆಯ್ಕೆಯಾಗಿ ನಾನು ನಿಮ್ಮೆದುರು ನಿಂತಿರುವುದು ನನಗೆ ಅತ್ಯಂತ ಹೆಮ್ಮೆ ಮತ್ತು ಸಂತೋಷ ಎನಿಸುತ್ತದೆ. ನನ್ನ ಸಮುದಾಯದವರು ಸುಮಾರು ೪೫೦ ರಿಂದ ೫೦೦ ವರ್ಷಗಳ ಹಿಂದೆ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಿಂದ ವಲಸೆ ಬಂದವರಂತೆ. ಹೊಸ ನೆಲ, ಹೊಸ ಭಾಷೆ, ಹೊಸ ಜನ, ಹೊಸ ಉದ್ಯೋಗ ಇವುಗಳ ತುಮುಲದಲ್ಲಿ ಒದ್ದಾಡುವಾಗ ಅಂಕೋಲೆ ನನ್ನ ಇಡೀ ಸಮುದಾಯವನ್ನು ಸಾಕಿ ಸಲುಹಿದ್ದು, ನಮ್ಮ ಭಾಗ್ಯವೇ ಸರಿ. ನನಗೆ ನನ್ನ ಸಮುದಾಯದ ಅಸ್ತಿತ್ವಕ್ಕೆ ಒಂದು ಆಳವನ್ನು, ಒಂದು ಅಗಲವನ್ನು, ನೀಡಿದ್ದು ಈ ನಮ್ಮ ಅಂಕೋಲೆ. ಅಂಕೋಲೆಗೆ ತನ್ನದೇ ಆದ ವಿಶೇಷ ಅಸ್ಮಿತೆ ಇದೆ. ವೈವಿಧ್ಯಮಯ ಸಮುದಾಯಗಳು. ವೈವಿಧ್ಯಮಯ ಭಾಷೆ, ಬೆಟ್ಟ, ಗುಡ್ಡ, ಕಡಲು, ಬಯಲು, ದಂಡೆ ಒಂದೇ ಎರಡೇ. ಇವೆಲ್ಲವೂ ನನ್ನ ಮೇಲೆ ತುಂಬಾ ಪ್ರಭಾವ ಬೀರಿವೆ.

ಪ್ರಾಂತ ನೆಲವೆಂದು ಹೆಸರಾಗಿರುವ ಅಂಕೋಲೆಗೆ ಎರಡು ಮಹತ್ವಗಳಿವೆ. ಇಡೀ ರಾಜ್ಯವನ್ನು ಪ್ರತಿನಿಧಿಸುವ ಎರಡು ಪ್ರಮುಖ ಹೋರಾಟಗಳು ನಡೆದಿವೆ. ಬ್ರಿಟಿಷರ ದಾಸ್ಯದಿಂದ ಬಿಡುಗಡೆ ಪಡೆಯಲು ಮಾಡಿದ ಸ್ವಾತಂತ್ರ್ಯ ಹೋರಾಟ ಮತ್ತು ಅದರ ನೇತೃತ್ವ ವಹಿಸಿದ ನಾಡವರು ಮತ್ತು ಇನ್ನುಳಿದ ಜನಾಂಗಗಳು ಪ್ರಾತಃಸ್ಮರಣೀಯರು. ಜಿಲ್ಲೆಯ ಮೂಲ ನಿವಾಸಿಗಳೆಂದೇ ಕರೆಯಲ್ಪಡುವ ಹಾಲಕ್ಕಿಗಳ ತುಂಡು ಭೂಮಿಯನ್ನು ಕಸಿದುಕೊಂಡ ಭೂಮಾಲಿಕರ ವಿರುದ್ಧ ಸುಮಾರು ೪೦ ವರ್ಷಗಳವರೆಗೆ ನಡೆಸಿದ ಜನಸೇವಕ ಡಾ. ದಿನಕರ ದೇಸಾಯಿಯವರ ರೈತ ಹೋರಾಟ ಇಡೀ ಅಂಕೋಲೆಗೆ ಗೌರವ ತಂದುಕೊಟ್ಟಿದೆ ಎನ್ನಬಹುದು.

ಅಂಕೋಲೆ ಎಂದರೆ ಜೋಗಿ ಬೀರಣ್ಣ ನಾಯಕ, ಸೂರ್ವೆ ವೆಂಕಣ್ಣ ನಾಯಕ, ಹರಿ ಅನಂತ ಪೈ ಮುಂತಾದವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನೆಲವಿದು. ಅಂಕೋಲೆ ಎಂದರೆ ಹೋರಾಟ, ಸಮಾಜವಾದ, ರೈತ ಚಳವಳಿ. ಡಾ. ದಿನಕರ ದೇಸಾಯಿ ಕೆನರಾ ವೆಲ್‌ಫೇರ್ ಟ್ರಸ್ಟ್, ಜನತಾ ವಿದ್ಯಾಲಯಗಳಂತಹ ಶೈಕ್ಷಣಿಕ ಸಂಸ್ಥೆಗಳು ಅಂಕೋಲೆಯ ಹಾಳುಬಿದ್ದ ಕೋಟೆ, ಈಶಾಡ ಹಣ್ಣುಗಳು, ಗುಡಿ, ಮಸೀದಿ, ಚರ್ಚುಗಳು. ಅಂಕೋಲೆ ಎಂದರೆ ಸ.ಪ.ಗಾಂವಕರ, ವಿ.ಜೇ.ನಾಯಕ, ಎರಡೆರಡು ಪದ್ಮಶ್ರೀ ಪಡೆದ ಸುಕ್ರಜ್ಜಿ, ತುಳಸಿ ಗೌಡರು. ಬೆಳಂಬಾರದ ಔಷಧಿ, ವಿಭೂತಿ, ದೊಣ್ಣೆ ಜಲಪಾತಗಳು ಅಂಕೋಲೆಯ ಅಸ್ಮಿತೆ ಎನ್ನಬಹುದು.

ಇಲ್ಲಿನ ಹಾಲಕ್ಕಿಗಳ ಸುಗ್ಗಿ, ತಾರ್ಲೆ, ಮುಗಡಿ ಪ್ರಸಿದ್ಧ. ಗೌಡ, ನಾಮಧಾರಿ, ಕೋಮಾರಪಂಥ, ಹಳ್ಳೇರ ಮುಂತಾದ ಜನಾಂಗಗಳು ಆಚರಿಸುವ ಸುಗ್ಗಿ ಇಡೀ ಅಂಕೋಲೆಯ ಸಾಂಸ್ಕೃತಿಕ ಶ್ರೀಮಂತಿಕೆ ಮೆರಗು ನೀಡಿವೆ. ಇಲ್ಲಿನ ಪ್ರತಿ ಜನಾಂಗಕ್ಕೊಂದು ಭಾಷೆ, ಸಂಸ್ಕೃತಿ, ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಈ ಮಣ್ಣಿನ ವಿಶೇಷವೆಂದರೆ ಇಲ್ಲಿ ಹುಟ್ಟಿದವರು ಬಹುತೇಕ ಬಹುಮುಖ ಪ್ರತಿಭೆಗಳೇ ಆಗಿರುತ್ತಾರೆ. ಯಕ್ಷಗಾನ, ನಾಟಕ, ಸಾಹಿತ್ಯ, ಕಲೆ, ಸಾಂಸ್ಕೃತಿಕ, ಶ್ರೀಮಂತ ಪ್ರತಿಭೆಗಳು ಇಲ್ಲಿದ್ದಾರೆ. ಒಟ್ಟಿನಲ್ಲಿ ಅಂಕೋಲೆ ಎಂದರೆ ನಿರಂತರ ಉತ್ಸಾಹದ ಬತ್ತದ ಚಿಲುಮೆ, ಸೌಹಾರ್ದತೆಯ ತೊಟ್ಟಿಲು. ನಮ್ಮ ಅಂಕೋಲೆ ಎಂದರೆ ಸರ್ವ ಜನಾಂಗದ ಶಾಂತಿಯ ತೋಟ. ಇವೆಲ್ಲವೂ ನನ್ನ ಸಾಹಿತ್ಯಕ್ಕೆ, ಅಸ್ತಿತ್ವಕ್ಕೆ ತಳಪಾಯವಾಗಿದೆ ಎಂದು ನೆನೆಯುತ್ತೇನೆ.

"ಆನೋ ಭದ್ರಾಹ ಕೃತವೋಯಂತು ವಿಶ್ವತಃ"

ಹೌದು, ಜ್ಞಾನದ ಬೆಳಕು ಎಲ್ಲಿಂದ ಬಂದರೂ ಅದನ್ನು ಅಪ್ಪಿಕೊಳ್ಳಬೇಕು. ಈ ಅರಿವಿನ ಬೆಳಕನ್ನು

ನೀಡಿದ ನೀಡುತ್ತಿರುವ ಪ್ರಮುಖರೆಂದರೆ ಶಿಕ್ಷಕರು. ಆದ್ದರಿಂದ ಈ ಬೆಳಕಿನ, ಅರಿವಿನ ಜ್ಞಾನದ ಅರಿವನಿತ್ತ ಎಲ್ಲ ಪೂರ್ವ ಸೂರಿಗಳಿಗೆ ನನಗಿತ್ತ ಇಂದಿನ ಈ ಗೌರವವನ್ನು ಪ್ರಾಂಜಲ ಮನಸ್ಸಿನಿಂದ ಸಮರ್ಪಿಸುತ್ತೇನೆ.

ಏನೇನೂ ಅಲ್ಲದ ಗಣನೆಗೆ ಬಾರದ ಶೂನ್ಯದಿಂದ ಬಂದ ನಾಗೇಶದೇವ ಅಂಕೋಲೆಕರ ಎಂಬಾತನಿಗೆ ಈ ಗೌರವಯುತವಾದ ಅಂಕೋಲೆಯ ಕನ್ನಡ ಸಾಹಿತ್ಯ ಸಮ್ಮೇಳನದ ದಶಮಾನೋತ್ಸವದ ಸಂದರ್ಭದಲ್ಲಿ ಸರ್ವಾಧ್ಯಕ್ಷನನ್ನಾಗಿ ಮಾಡಿದ ಅಂಕೋಲಿಗರ ಹೃದಯ ವೈಶಾಲ್ಯತೆಗೆ ಸಾವಿರ ಪ್ರಣಾಮಗಳು. ಆ ಮೂಲಕ ಇದೀಗ ತಾನೇ ಅಕ್ಷರ ಸಂಸ್ಕೃತಿಗೆ ತೆರೆದುಕೊಳ್ಳುತ್ತಿರುವ ತಳ ಸಮುದಾಯವನ್ನು ಸಮಾಜದ ಮುಖ್ಯ ವಾಹಿನಿಗೆ ಸೇರಿಸಿಕೊಳ್ಳುವ ಹೃದಯ ವೈಶಾಲ್ಯತೆಯನ್ನು ಮೆರೆದಿದ್ದೀರಿ. ನನಗೆ ಈ ಗೌರವ ಕೊಡಮಾಡುವುದರ ಹಿಂದೆ ಕೆಲಸ ಮಾಡಿದ ನನಗರಿಯದ ಎಲ್ಲ ಕೈಗಳಿಗೆ ಸುಮನಸ್ಸುಗಳಿಗೆ ನನ್ನ ಹೃದಯಪೂರ್ವಕವಾದ ನಮನಗಳು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಶ್ರೀ ಬಿ.ಎನ್.ವಾಸರೆ ಮತ್ತು ಅವರ ಸಹಾಯಕರು. ಕನ್ನಡ ಸಾಹಿತ್ಯ ಪರಿಷತ್ತು ಅಂಕೋಲಾದ ಅಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ನಾಯಕ ಮತ್ತವರ ಸಹಾಯಕರಿಗೆ ನನ್ನ ಆತ್ಮೀಯ ನಮಸ್ಕಾರಗಳು. ಬಂಧುಗಳೇ, ಇದೆಲ್ಲ ಸಾಧ್ಯವಾದುದು ನಮ್ಮ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರರು ನಮ್ಮ ದೇಶಕ್ಕೆ ಕೊಡಮಾಡಿದ ಸಂವಿಧಾನವೆಂಬ ಮಂತ್ರದಿಂದ ಮತ್ತು ಶಿಕ್ಷಣದಿಂದ. ಹಾಗಾಗಿ ಭಾರತಾಂಬೆಗೆ, ನಮ್ಮ ಸಂವಿಧಾನಕ್ಕೆ, ಆ ಸಂವಿಧಾನ ಶಿಲ್ಪಿಗೆ ನಮಸ್ಕರಿಸುತ್ತೇನೆ. ನಾನು ಸ್ವಾತಂತ್ರ್ಯೋತ್ತರ ಭಾರತದ ಅಕ್ಷರಸ್ಥ. ಹೀಗಾಗಿ ನನ್ನ ಅಕ್ಷರ ಜ್ಞಾನ ಕೆಲವೇ ವರ್ಷಗಳಷ್ಟು ಎಳೆಯದು. ತಪ್ಪು ತಡೆಗಳು ಸಹಜ. ತಾವೆಲ್ಲ ತಿಳಿದವರು. ದೊಡ್ಡ ಮನಸ್ಸಿನಿಂದ ಮೆಚ್ಚಿ ಹಾರೈಸುತ್ತೀರೆಂದು ಪ್ರಾರ್ಥಿಸುತ್ತೇನೆ. ನಮ್ಮೂರಿನ ಕವಿ ಶ್ರೀ ವಿಷ್ಣು ನಾಯ್ಕರು ನನ್ನನ್ನು ಅಂಕೋಲೆಗೆ ಪರಿಚಯಿಸಿದರೆ ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ರೋಹಿದಾಸ ನಾಯ್ಕರು ಜಿಲ್ಲಾ ಸಮ್ಮೇಳನಗಳಲ್ಲಿ ಕವಿಯಾಗಿ ನನ್ನ ಪರಿಚಯಿಸಿದರು. ಅಲ್ಲಿಂದಿಚೆಗೆ ತಾಲೂಕಾ ಮತ್ತು ಜಿಲ್ಲಾ ಸಮ್ಮೇಳನಗಳಲ್ಲಿ ಕವಿತೆ ವಾಚಿಸುವ ಭಾಗ್ಯ ನನ್ನದಾಗಿದೆ. ಉಪಕಾರ ಮಾಡಿದವರನ್ನು ಸ್ಮರಿಸಬೇಕು. ಹಾಗೇ ಅವರು ಮಾಡಿದ ಉಪಕಾರವನ್ನು ಸ್ಮರಿಸಬೇಕು. ಈ ಮಹನೀಯರಿಗೆಲ್ಲ ನಾನು ಕೃತಜ್ಞನಾಗಿದ್ದೇನೆ.

ನಾನು ಅಂಕೋಲೆಗೆ ಬಂದಿದ್ದೇ ಆಕಸ್ಮಿಕ. ಹೊಟ್ಟೆಪಾಡಿಗಾಗಿ ಅಂಚೆ ಇಲಾಖೆಗೆ ಸೇರಿದ್ದು. ಅಲ್ಲಿರುವಾಗಲೇ ಬಾಹ್ಯ ವಿದ್ಯಾರ್ಥಿಯಾಗಿ ಕನ್ನಡ ಎಂ.ಎ ಮಾಡಿದೆ. ನನ್ನ ಗುರುಗಳಾದ ದಿ.ವಿ.ಎ.ಜೋಶಿಯವರು ಕರೆದು ಹೇಳದಿದ್ದರೆ ನಾನು ಅರ್ಜಿಯನ್ನು ಹಾಕುತ್ತಿರಲಿಲ್ಲ. ಇಲ್ಲಿ ಬಂದೆ ಆನಂತರದ್ದು ಇತಿಹಾಸ. ಕೆಲಸಕ್ಕೆ ಸೇರಿದ ಹೊಸತರಲ್ಲಿ ಸಾಕಷ್ಟು ಹೈರಾಣಾದದ್ದು ನಿಜ. ಆದರೆವೃತ್ತಿ, ಪ್ರವೃತ್ತಿಯಲ್ಲಿ ನಾನು ಆಯ್ಕೆ ಮಾಡಿ ಆಚರಿಸಿದ್ದು ಒಂದೇ ಮಂತ್ರ ಅಧ್ಯಯನ-ಅಧ್ಯಾಪನ ಇದರ ಹೊರತಾಗಿ ನನಗೆ ಬೇರೆನೂ ಗೊತ್ತಿಲ್ಲ. ನಿಮ್ಮೆಲ್ಲರ ಪ್ರೀತಿ ನನ್ನನ್ನು ಇಲ್ಲಿಯವರೆಗೆ ತಂದು ನಿಲ್ಲಿಸಿದೆ.

ಸರ್ವರಿಗೂ ಅನುಕೂಲವಾದ ಅಂಕೋಲೆಗೆ ಈ ಹೆಸರು ಬಂದದ್ದಾದರೂ ಹೇಗೆ? ಪ್ರಸಿದ್ಧ ತುಳಸಿ ಗುಡ್ಡದಲ್ಲಿ ವಿಶಾಲವಾದ ಎತ್ತರದ ಅಂಕೋಲ ಎಂಬ ಮರವಿತ್ತಂತೆ. ಮೀನುಗಾರ ಬಂಧುಗಳು ದೂರ ಸಮುದ್ರದಿಂದ ಮರಳುವಾಗ ಈ ಮರವನ್ನು ದಿಕ್ಸೂಚಿಯಾಗಿಟ್ಟುಕೊಂಡು ದಂಡೆಗೆ ಮರಳುತ್ತಿದ್ದರಂತೆ. ಅವರು ಹಾಗೇ ಕರೆಯುತ್ತಿದ್ದ ಅಂಕೋಲ ಕಾಲಾನುಕ್ರಮದಲ್ಲಿ ಅಂಕೋಲೆ ಆಗಿ ಪರಿವರ್ತಿಸಿರಬೇಕೆಂದು ರಾಜ್ಯ ಪ್ರಶಸ್ತಿ ವಿಜೇತ ಅಂಕೋಲೆಯ ಕವಿ ಶ್ರೀ ವಿಷ್ಣು ನಾಯ್ಕರು ಅಭಿಪ್ರಾಯ ಪಡುತ್ತಾರೆ.

ಹಾಗೆಯೇ ಅಂಕ+ವಲ್ಲಿ=ಅಂಕ್ವಲ್ಲಿ (ಸೀಮೆಯ ಸೆರಗು) ಅಂಕೋಲೆ ಆಗಿರಬಹುದು. ಅಂಕ+ಓಳಿ=ಅಂಕೋಳಿ (ಯುದ್ಧದ ಕಣ) ಅಂಕೋಲೆ ಎಂದಾಗಿರಬಹುದು ಎಂಬುದು ತಿಳಿದವರ ಅಭಿಪ್ರಾಯವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಒಂದು ತಾಲೂಕು ಅಂಕೋಲೆ. ಕಾರವಾರ-ಕುಮಟೆಯ ನಡುವಣ ಭೂ ಪ್ರದೇಶ. ಸುಮಾರು ೯೧೯ ಚದರ ಕಿ.ಮೀ. ವೈಶಾಲ್ಯತೆ ಹೊಂದಿರುವ ನಮ್ಮ ತಾಲೂಕು ಪಶ್ಚಿಮದಲ್ಲಿ ಅರಬ್ಬಿ ಸಮುದ್ರವನ್ನು ದಂಡೆಯಾಗಿಸಿದೆ. ಪೂರ್ವದಲ್ಲಿ ಯಲ್ಲಾಪುರ, ಶಿರಸಿ, ಉತ್ತರದಲ್ಲಿ ಕಾರವಾರ, ದಕ್ಷಿಣದಲ್ಲಿ ಕುಮಟಾ ತಾಲೂಕುಗಳೊಂದಿಗೆ

ಗಡಿಗಳನ್ನು ಹಂಚಿಕೊಂಡಿದೆ. ದಕ್ಷಿಣೋತ್ತರವಾಗಿ ಸಹ್ಯಾದ್ರಿ ಬೆಟ್ಟಗಳ ಮೆರವಣಿಗೆ ಸಾಗಿದೆ. ಇಲ್ಲಿಂದ ಅಗಾಧ ಪ್ರಮಾಣದ ಝರಿ, ಹೊಳೆ, ಹಳ್ಳ, ನದಿಗಳು ಸಾಗರದತ್ತ ಮುಖ ಮಾಡಿವೆ.

ಅಂಕೋಲೆ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ವರ್ಣಮಯ ಇತಿಹಾಸ ಹೊಂದಿದೆ. ಅಂಕೋಲೆ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಆಳ್ವಿಕೆಯ ನಂತರ ವಿಜಯ ನಗರದ ಸಾಮ್ರಾಜ್ಯದ ಆಡಂಬೋಲವಾಗಿತ್ತು. ಅಲ್ಲಿನ ಒಳ ಜಗಳದ ಲಾಭ ಪಡೆದು ಪೋರ್ಚುಗೀಸರು ಅಂಕೋಲೆ ಸೀಮೆಯನ್ನು ತಮ್ಮ ಆಡಳಿತಕ್ಕೊಳಪಡಿಸಿಕೊಂಡರು. ಆದರೆ ಗೋವೆಯನ್ನು ರಕ್ಷಿಕೊಳ್ಳುವ ಧಾವಂತದಲ್ಲಿ ಕನ್ನಡ ಕರಾವಳಿಯಿಂದ ಹಿಂದೆ ಸರಿದರು. ಈ ವೇಳೆಗೆ ಅಂಕೋಲೆ ಗೇರುಸೊಪ್ಪೆಯ ಕಾಳು ಮೆಣಸಿನ ರಾಣಿಯ ಆಳ್ವಿಕೆಗೆ ಒಳಪಟ್ಟಿತು. ಅದೇನು ಕಾರಣವೋ ಶಿವಾಜಿಪ್ರಭು ಎರಡೆರಡು ಬಾರಿ ಅಂಕೋಲೆಯ ಮೇಲೆ ದಾಳಿ ಮಾಡಿದವನಂತೆ. ಸರ್ಪಮಲ್ಲಿಕನೆಂಬ ದೊರೆ ಅಂಕೋಲೆಯಲ್ಲಿ ಕೋಟೆ ಕಟ್ಟಿ ಆಳಿದ ಬಗ್ಗೆಯೂ ಐತಿಹ್ಯವಿದೆ. ಕ್ರಿಸ್ತ ಶತಾಬ್ದಿಯ ಕಾಲದಿಂದ ಬ್ರಿಟಿಷರು ಆಳ್ವಿಕೆ ನಡೆಸಿದ ಕಾಲದವರೆಗೂ ಅಂಕವಲ್ಲಿಯಲ್ಲಿ ಸಸ್ಯ ಸಂಪತ್ತು ಮಸಾಲೆ ಸಂಪತ್ತು ಹೇರಳವಾಗಿಯೇ ಇತ್ತಂತೆ. ಇದುವೆ ಕಾರಣ ಹಲವಾರು ಸತ್ತೆಗಳ ಕಾಲ್ಚೆಂಡಾಟಕ್ಕೆ ಒಳಗಾಗಿ ಬಡವಾಗುತ್ತ ಇಪ್ಪತ್ತನೆಯ ಶತಮಾನದ ಕಾಲಕ್ಕೆ ಬರುವವರೆಗೆ ಅಂಕೋಲೆ ಬಡತನಕ್ಕೆ ಒಳಗಾಯಿತು.

ಬುದ್ಧಿ ಮತ್ತು ಭಾವವನ್ನು ಉದ್ದೀಪನಗೊಳಿಸುವುದೇ ಸಾಹಿತ್ಯ ಬದುಕಿಗೆ ಒದಗಿಬಂದ ಭಾಗ್ಯ ಅನುಭವ ಸಂಪತ್ತು ಸಾಹಿತ್ಯ ಜೀವಾಳ. ಅಂಕೋಲೆಯ ಸಾಹಿತ್ಯ ಕೃಷಿಯ ಸಂದರ್ಭದಲ್ಲಿ ಮುಂಚೂಣಿಯಲ್ಲಿ ಹೊಸಗನ್ನಡ ಅರುಣೋದಯದ ಕಾಲದಲ್ಲಿ ಬೆಳಗುತ್ತ ತಮ್ಮ ಕಾಣ್ಕೆಯನ್ನು ಕೊಟ್ಟು ಅಂಕೋಲೆಯಲ್ಲಿ ಮನೆ ಮಾತಾದ ಈವರೆಗಿನ ಒಂಭತ್ತು ಸರ್ವಾಧ್ಯಕ್ಷರನ್ನು ನಮ್ರತೆಯಿಂದ ಗೌರವದಿಂದ ಸ್ಮರಿಸುತ್ತೇನೆ.

ಸಾಹಿತ್ಯ ನಿಂತ ನೀರಲ್ಲ, ಸದಾ ಹರಿಯುವ ಶಾಲ್ಮಲೆ. ನಮಗೆ ಅರಿವಿಲ್ಲದೇ ನಮ್ಮನ್ನು ಪ್ರಭಾವಿಸುವಂಥದ್ದು ಸಾಹಿತ್ಯ. ಕಾಲಕಾಲಕ್ಕೆ ತನ್ನೊಳಗಿನ ಸತ್ವದಿಂದ ಓದುಗನನ್ನು ಪ್ರಗತಿಯತ್ತ ಒಯ್ಯುತ್ತಲೇ ಇರುವಂಥದ್ದು. ತನ್ನೊಳಗಿನ ಅಂತಃಸತ್ವದಿಂದ ಮುಂದಿನ ತಲೆಮಾರುಗಳನ್ನು ಪ್ರಭಾವಿಸುವ ಮತ್ತು ಆ ಮೂಲಕ ಸಮಾಜದ ಮುಖ್ಯಧಾರೆಯೊಂದಿಗೆ ಸಂಬಂಧ ಏರ್ಪಡಿಸುವ ಶಕ್ತಿ ಸಾಹಿತ್ಯಕ್ಕಿದೆ. ಅಂಥ ಸಾಧನೆಗೈದು ಮುಂದಿನ ತಲೆಮಾರುಗಳನ್ನು ಪ್ರಭಾವಿಸಿದ ಕೆಲವರನ್ನು ಪರಿಚಯಿಸುತ್ತೇನೆ, ಹಾಗೆಂದು ಉಳಿದವರ ಸಾಧನೆಯೇನೂ ಕಡಿಮೆಯೆಂದಲ್ಲ. ಸಮಯಾಭಾವ ಅಷ್ಟೇ!

೧. ಅಂಕೋಲೆಯ ಲಕ್ಷ್ಮಣ ಬಾಬಣಿ ಪೈಗಳು ಸಂಸ್ಕೃತ ಕನ್ನಡದಲ್ಲಿ ಘನ ವಿದ್ವಾಂಸರು. ವೇದ ಉಪನಿಷತ್ತು ರಾಮಾಯಣ-ಮಹಾಭಾರತಗಳನ್ನು ಕನ್ನಡಕ್ಕೆ ಅನುವಾದಿಸಿದವರು. ಭಗವದ್ಗೀತೆಯನ್ನು ಭಾಮಿನಿಷಟ್ಪದಿಯಲ್ಲಿ ರಚಿಸಿದ ಹೆಗ್ಗಳಿಕೆ ಇವರದು.

೨. ಸ.ಪ. ಗಾಂವಕರವರು ಉತ್ತರ ಕನ್ನಡದ ಕವಿಕುಲ ಪುರೋಹಿತರೆಂದು ಪ್ರಸಿದ್ಧರಾದವರು. ಶಿಕ್ಷಕ ಕವಿಯಾದ ಇವರು ಪ್ರಚಾರದಿಂದ ಗಾವುದ ದೂರ ಇದ್ದರು.

೩. ಕವಿ ಶಿಕ್ಷಕ ವಿ.ವೆ. ತೊರ್ಕೆ ಸಮಾಜಮುಖಿ ಸಾಹಿತ್ಯ ರಚಿಸಿದರು.

೪. ಡೆಂಗ ನಾಯ್ಕ ಮಾಸ್ತರರು ಸುಧಾರಣಾವಾದಿಗಳು.

೫. ಸಾಹಿತಿ ಕವಿ ರಾಜಕಾರಣಿ ನಮ್ಮ ಜಿಲ್ಲೆಯ ಶೈಕ್ಷಣಿಕ ಹರಿಕಾರ ಚುಟುಕು ಬ್ರಹ್ಮ ಡಾ. ದಿನಕರ ದೇಸಾಯಿಯವರ ಸಾಧನೆಯಂತೂ ನೂರಾರು ವರುಷ ಚಿರಾಯು. ಜನಸೇವಕವೆಂಬ ಪತ್ರಿಕೆಯ ಮೂಲಕ ರಾಜ್ಯದ ರಾಷ್ಟ್ರದ ವಿದ್ಯಾಮಾನವನ್ನು ತೆರೆದಿಟ್ಟವರು.

೬. ಜಾನಪದ ತಜ್ಞ ಡಾ. ಎನ್.ಆರ್. ನಾಯಕ ದಂಪತಿಗಳು ಜಾನಪದ ಅಧ್ಯಯನಕ್ಕೆ ಒಂದು ಶಿಸ್ತು ಒದಗಿಸಿದವರು.

೭. ವಿಚಾರವಾದಿ ಆದರ್ಶ ಶಿಕ್ಷಕರಾದ ಶ್ರೀ ವಿ.ಜೆ. ನಾಯಕ, ಶ್ರೀ ಶಾಂತಾರಾಮ ನಾಯಕ ಹಿಚಕಡರವರ ಕೊಡುಗೆ ಅಪಾರ. ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೌರವಕ್ಕೆ ಪಾತ್ರರಾದವರು.

೮. ಅಂಕೋಲೆಯನ್ನು ರಾಜ್ಯಮಟ್ಟದಲ್ಲಿ ಜನಪ್ರಿಯಗೊಳಿಸಿದ ರಾಜ್ಯ ಪ್ರಶಸ್ತಿ ವಿಜೇತ ಶ್ರೀ ವಿಷ್ಣು ನಾಯ್ಕರು, ಚಿಂತಕ, ಶಿಕ್ಷಣ ತಜ್ಞ, ಕವಿ, ನಟ, ನಾಟಕಕಾರ, ನಿರ್ದೇಶಕ, ಸಂಘಟನಾಶೂರ ಇತ್ಯಾದಿ ದೈತ್ಯ ಪ್ರತಿಭೆ ಉಳ್ಳವರು. ಅವರು ರಾಘವೇಂದ್ರ ಪ್ರಕಾಶನದ ಮೂಲಕ

ಹಲವಾರು ಕವಿ ಕಾವ್ಯ ಕಮ್ಮಟಗಳನ್ನು ಏರ್ಪಡಿಸಿ, ಆಸಕ್ತರಿಗೆ ಪ್ರಶಿಕ್ಷಣವನ್ನು ಕೊಡಿಸಿದರು. ರಾಘವೇಂದ್ರ ರಂಗಸಂಘದ ಮೂಲಕ ಬೀದಿ ನಾಟಕ, ನಾಟಕಗಳನ್ನು ರಚಿಸಿ ನಟಿಸಿ, ನಿರ್ದೇಶಿಸಿದರು. ಅವರ ಗರಡಿಯಲ್ಲಿ ಪಳಗಿದ ನೂರಾರು ಜನ ಸಾಹಿತ್ಯ ಕೈಂಕರ್ಯ ಕೈಗೊಂಡಿದ್ದಾರೆ. ವಿಷ್ಣು ನಾಯ್ಕರೆಂದರೆ ಒನ್ ಮೆನ್ ಆರ್ಮಿ, ವರ್ಸೈಟೈಲ್ ಜಿನೀಯಸ್, ನಾನು ಆ ಪರಿವಾರಕ್ಕೆ ಸೇರಿದವನೆಂಬುದು ಹೆಮ್ಮೆ. ಅಂಕೋಲೆಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಗೌರವಾಧ್ಯಕ್ಷರಾದ ಶ್ರೀ ಶ್ಯಾಮ ಹುದ್ದಾರ ಇವರು ದೂರದ ಬಾಗಲಕೋಟೆಯಿಂದ ಅಂಕೋಲೆಗೆ ಬಂದು ಡಾ. ದಿನಕರ ದೇಸಾಯಿಯವರ ಜನಸೇವಕ ಬಳಗ ಸೇರಿ ಸೇವೆ ಮಾಡುತ್ತ ಸಾಹಿತ್ಯ ಸೇವೆ ಮಾಡಿದವರು.

೧೦.ದಶಕಗಳ ಕಾಲ 'ನುಡಿಜೇನು' ಎಂಬ ಪತ್ರಿಕೆ ನಡೆಸುತ್ತಲೇ ಸಾಹಿತ್ಯ ಕೈಂಕರ್ಯ ಮಾಡಿದವರು ಬಿ. ಹೊನ್ನಪ್ಪ ಅವರು. ಅವರ ಅನುಪಮ ಸೇವೆಗೆ ತಾಲೂಕಾ ಕನ್ನಡ ಸಾಹಿತ್ಯದ ಸಮ್ಮೇಳನದ ಗೌರವಾಧ್ಯಕ್ಷರನ್ನಾಗಿ ಗೌರವಿಸಿದೆ.

೧೧. ಶ್ರೀಯುತ ಅಮ್ಮೆಂಬಳ ಆನಂದರು ದಕ್ಷಿಣ ಕನ್ನಡದಿಂದ ಬಂದವರಾದರೂ ದೇಸಾಯಿಯವರ ಜನಸೇವಕ ಗರಡಿ ಸೇವೆ ಇಂದಿಗೂ ಜನಪ್ರಿಯತೆ ಗಳಿಸಿದ್ದಾರೆ. ಕಾಲೇಜಿನ ಆರಂಭದಲ್ಲಿಯೇ ಜಿ.ಸಿ. ಕಾಲೇಜನ್ನು ಸೇರಿ ಕನ್ನಡ ವಿಭಾಗವನ್ನು ಕಟ್ಟಿ ಬೆಳಸಿದ ಶ್ರೇಯಸ್ಸು ಪ್ರೊ. ವಿ.ಎ. ಜೋಶಿಯವರಿಗೆ ಸಲ್ಲುತ್ತದೆ. ಹಾಗೆಯೇ ವಿಜ್ಞಾನದ ಪ್ರಾಧ್ಯಾಪಕರಾಗಿಯೂ ಕನ್ನಡದಲ್ಲಿ ಹಲವಾರು ಕೃತಿಗಳನ್ನು ರಚಿಸಿದ ಪ್ರೊ. ಹಬ್ಬುರವರು ನಟ, ನಿರ್ದೇಶಕರಾಗಿ ಹೆಸರಾದವರು. ಉತ್ತಮ ಕನ್ನಡ ಪ್ರಾಧ್ಯಾಪಕರಾದ ಡಾ. ರಾಮಕೃಷ್ಣ ಗುಂದಿಯವರು ಕನ್ನಡದಲ್ಲಿ ಕಥೆಗಳನ್ನು ಬರೆದು ಹೆಸರಾದವರು. ಅಭಿನವ ಚಿಟ್ಟಾಣಿ ಎಂದು ಯಕ್ಷಪ್ರಿಯರ ಹೃದಯದಲ್ಲಿ ಗೌರವದ ಸ್ಥಾನ ಪಡೆದಿದ್ದಾರೆ.

ಸ್ವಾತಂತ್ರ್ಯೋತ್ತರದ ದಿನಗಳಲ್ಲಿ ಅಂಕೋಲೆಯ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ ಹೆಣ್ಣು ಮಕ್ಕಳಿದ್ದಾರೆ. ಅದರಲ್ಲಿ ಮುಖ್ಯವಾಗಿ ಶ್ರೀಮತಿ ರೇಣುಕಾ ರಮಾನಂದ, ಅಕ್ಷತಾ ಕೃಷ್ಣಮೂರ್ತಿ, ಶ್ರೀದೇವಿ ಕೆರೆಮನೆ, ನಾಗರೇಖಾ ಗಾಂವಕರ, ಡಾ. ಅರ್ಚನಾ ನಾಯಕ, ನಿಕಟಪೂರ್ವ ಅಧ್ಯಕ್ಷರಾದ ಶ್ರೀಮತಿ ಹೊನ್ನಮ್ಮ ನಾಯಕರು ತಮ್ಮ ಕೊಡುಗೆಯನ್ನು ನೀಡಿದ್ದನ್ನು ನೆನಪಿಸಬಯಸುತ್ತೇನೆ. ಸಮಯದ ಅಭಾವದಿಂದ ಕೇವಲ ಪ್ರಾತಿನಿಧಿಕವಾಗಿ ಹೆಸರಿಸಿದ್ದೇನೆ. ನಮ್ಮ ಅಂಕೋಲೆಯಲ್ಲಿ ಇರುವಷ್ಟು ಕವಿಗಳು ಬೇರೆಲ್ಲೂ ಕಾಣಸಿಗದು. ಇವರಿಗೆಲ್ಲ ನನ್ನ ಹಾರ್ದಿಕ ಅಭಿನಂದನೆಗಳು.

ಒಂದು ಕಾಲಕ್ಕೆ ಕೇವಲ ಉತ್ತರ ಭಾರತಕ್ಕೆ ಮಾತ್ರ ಸೀಮಿತವಾಗಿದ್ದ ಐಎಎಸ್, ಐಪಿಎಸ್, ಐಎಫ್‌ಎಸ್‌ಗಳಂತಹ ಕಠಿಣ ಪರೀಕ್ಷೆಗಳನ್ನು ಭೇದಿಸಿ ನಮ್ಮ ಯುವ ತರುಣ–ತರುಣಿಯರು ಊರಿಗೆ ಹೆಮ್ಮೆ ತಂದಿದ್ದಾರೆ. ಅದರಂತೆ ಕೆಎಎಸ್, ಕೆಪಿಎಸ್‌ಸಿಗಳಲ್ಲಿ ಸಾಧನೆ ಮೆರೆದ ನಾಗರಿಕ ಸೇವೆಗೆ ತಮ್ಮನ್ನು ಒಪ್ಪಿಸಿಕೊಂಡಿದ್ದಾರೆ. ಪೊಲೀಸ್ ಅಧಿಕಾರಿಗಳಾಗಿ ನಮ್ಮೂರಿನ ಯುವ ಪಡೆ ಹೆಮ್ಮೆ ಪಡುವ ಕೆಲಸ ಮಾಡಿದ್ದಾರೆ. ಅವರೆಲ್ಲರಿಗೆ ಒಳ್ಳೆಯದಾಗಲಿ. ಅವರಿಂದ ನಾಡಿಗೆ, ಜನತೆಗೆ ಒಳ್ಳೆಯದಾಗಲಿ.

ಅಂಕೋಲೆ ದೇಶಕ್ಕಾಗಿ ತ್ಯಾಗ ಮಾಡುವುದರಲ್ಲಿ ಎಂದೂ ಮುಂದೆ. ಸ್ವಾತಂತ್ರ್ಯ ನಂತರ ರಾಷ್ಟ್ರದ ಅಭಿವೃದ್ಧಿಗಾಗಿ ಅವರು ಮಾಡಿದ ತ್ಯಾಗ ಅನನ್ಯ. ಚತುಷ್ಪಥ ರಸ್ತೆಗಾಗಿ, ನೌಕಾನೆಲೆಗಾಗಿ, ಕೊಂಕಣರೈಲು ಯೋಜನೆಗೆ ಮನೆ ಮಾರು ಕಳೆದುಕೊಂಡವರು ಅನೇಕ. ಕೆಲವರಿಗಂತೂ ಪರಿಹಾರ ಮರೀಚಿಕೆಯಾಗಿಯೇ ಇದೆ. ಇದೀಗ ವಿಮಾನ ನಿಲ್ದಾಣಕ್ಕಾಗಿ ಮತ್ತೆ ನಿರಾಶ್ರಿತರಾಗಬೇಕಾಗಿದೆ. ಒಂದು ದೇಶದ ಪ್ರಗತಿಗಾಗಿ ಇದೆಲ್ಲವೂ ಸಹಿಸಿಕೊಳ್ಳಬೇಕೆಂಬುದು ದಿಟವಾದರೂ ಅವರ ಭವಿತವ್ಯವನ್ನೂ ಚಿಂತಿಸಬೇಕಲ್ಲವೇ?

ಈ ಬದುಕು ನಾವು ಖರೀದಿಸಿದ್ದಲ್ಲ. ನಿಸರ್ಗ ನಮಗೆ ನೀಡಿದ ಕೊಡುಗೆ. ಸಮಾಜದಿಂದ ಪಡೆದಿದ್ದೇವೆ ಎಂಬ ಎಚ್ಚರ ಋಣ ಸಂದಾಯ ನಮ್ಮ ಪ್ರಜ್ಞೆ ನಮ್ಮ ಮನಸ್ಸು ಹೃದಯದಲ್ಲಿರಬೇಕು. ನಾವು ನಮಗಿಂತ ಎತ್ತರದಲ್ಲಿರುವವರನ್ನು ನೋಡಿ ದುಃಖ ಪಡುವುದಕ್ಕಿಂತ ನಮಗಿಂತ ಕೆಳಸ್ಥರದಲ್ಲಿರುವವರನ್ನು ಕಂಡು ನಮ್ಮ ಭಾಗ್ಯಕ್ಕೆ ಆನಂದಿಸಬೇಕು. ಮಾತ್ರವಲ್ಲ ಅವರ ಏಳ್ಗೆಗೆ ನಮ್ಮಿಂದಾದಷ್ಟು ಕೆಲಸ, ಸಹಾಯ ಮಾಡಬೇಕು. ಇಂತವರಿಗಾಗಿ ನಮ್ಮ ಒಂದಿಷ್ಟು ಸಮಯ ಆದಾಯ ಹಾಗೂ ಬುದ್ಧಿಶಕ್ತಿಗಳನ್ನು ಬಳಕೆ ಮಾಡಬೇಕು. ಇಂದು ಕನ್ನಡ ಭಾಷೆ ಅಪಾಯಕಾರಿ ಸಂದರ್ಭದಲ್ಲಿದೆ. ಒಂದು ಕಾಲಕ್ಕೆ ಕಾವೇರಿಯಿಂದ ಗೋದಾವರಿಯವರೆಗೆ

ಆಡಿಕೊಂಡಿದ್ದ ಭಾಷೆ ಇಂದು ಕರ್ನಾಟಕದಲ್ಲಿಯೇ ಶೋಚನೀಯ ಸ್ಥಿತಿಗೆ ತಲುಪಿದೆ. ಅತಿಯಾದ ಇಂಗ್ಲೀಷ್ ವ್ಯಾಮೋಹ ಕನ್ನಡ ಭಾಷೆಯ ಕಲಿಕೆಗೆ ಹಿನ್ನಡೆಯಾಗಿದೆ. ನಾವೆಲ್ಲರೂ ಕನ್ನಡವನ್ನು ಕನ್ನಡದ ಅಸ್ಮಿತೆಗಾಗಿ ಹೋರಾಡಬೇಕಾಗಿದೆ. ಕನಿಷ್ಠ ೧೦ ವರ್ಷ ಕನ್ನಡ ಮಾಧ್ಯಮದಲ್ಲಿ ಓದಿದ ಮಕ್ಕಳಿಗೆ ಕರ್ನಾಟಕದಲ್ಲಿ ಉದ್ಯೋಗದ ಭರವಸೆಯಿರಬೇಕು. ಸರಕಾರ ಕನ್ನಡಸಾಹಿತ್ಯ ಪರಿಷತ್ತು, ಕನ್ನಡ ಸಂಘಟನೆ, ಶಿಕ್ಷಣ ತಜ್ಞರು, ಭಾಷಾ ತಜ್ಞರು, ಕಾನೂನು ತಜ್ಞರೆಲ್ಲರೂ ಸೇರಿ ಕ್ರಿಯಾ ಯೋಜನೆ ತಯಾರಿಸಿ ಕನ್ನಡ ನಾಡಿನಲ್ಲಿ ಕನ್ನಡವೇ ಪ್ರಥಮ ಎಂಬ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕಾಗಿದೆ. ಮಾತೃಭಾಷೆಯಲ್ಲಿ ಶಿಕ್ಷಣವಿಲ್ಲದಿದ್ದರೆ ಸಮಾನ ಶಿಕ್ಷಣ ನೀತಿ ಸಾಧ್ಯವಿಲ್ಲ. ಬರಿ ಯೋಚನೆ, ಯೋಜನೆ ಮಾಡಿದರೆ ಪ್ರಯೋಜನವಿಲ್ಲ. ಅದರ ಹಿಂದೆ ಬಿದ್ದು ಪ್ರಯತ್ನ ಸಾಗಬೇಕು. ಪ್ರತಿಯೊಬ್ಬರು ಕನಸು ಕಂಡರೆ ಸಾಲದು ಅದನ್ನು ನನಸಾಗಿಸಲು ಪ್ರಯತ್ನಶೀಲರಾಗಬೇಕು.

ನಾನೊಬ್ಬ ನಿದ್ದೆಮಾಡಿದೆನಾದರೆ
ಅದು ಒಬ್ಬನ ಸುಖಕೆ
ನಾನೊಬ್ಬ ಎಚ್ಚೆತ್ತು ದುಡಿದೆನಾದರೆ
ಅದು ಊರಿನ ಎಲ್ಲರ ಹಿತಕೆ

ಶ್ರಮ ಸಂಸ್ಕೃತಿಗೆ ಇದಕ್ಕಿಂತ ಒಳ್ಳೆಯ ಉದಾಹರಣೆ ಇಲ್ಲ. ಈ ದಶಮಾನೋತ್ಸವದ ಸಂದರ್ಭದಲ್ಲಿ ನನ್ನನ್ನು ಸರ್ವಾಧ್ಯಕ್ಷನನ್ನಾಗಿ ಸ್ಥಾನಮಾನ ನೀಡಿ ಗೌರವಿಸಿದ್ದೀರಿ. ಇದು ಪ್ರಾಜ್ಞರಾದ ನನ್ನ ಅಂಕೋಲೆಯ ಸಹೃದಯರು ನೀಡಿದ ದೊಡ್ಡ ಗೌರವ. ನಾನು ಇದನ್ನು ತಲೆಬಾಗಿ ಸ್ವೀಕರಿಸಿದ್ದೇನೆ. ಇದಕ್ಕೆ ಕಾರಣರಾದ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ, ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ, ಪದಾಧಿಕಾರಿಗಳಿಗೆ ಸಾಹಿತ್ಯ ಬಳಗದ ಎಲ್ಲ ಸ್ನೇಹಿತರಿಗೆ ನನ್ನ ಅನಂತಾನಂತ ಕೃತಜ್ಞತೆಗಳನ್ನು ಶಿರಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸಬಯಸುತ್ತೇನೆ.

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ
ಜಯ ಕರ್ನಾಟಕ ಜಯ ಭಾರತ

ಕಾಲವೇ ಹಾಗೆ

ಕಾಲವೇ ಹಾಗೆ
ಎಂಥ ಅಪಮಾನವನ್ನೂ
ಮುಚ್ಚಿಹಾಕುತ್ತದೆ
ಮರುಭೂಮಿಯ
ಮಾಯಾ ಮರಳಂತೆ

ತುಳಿದವರ ಸೊಕ್ಕನ್ನು
ತುಳಿಸಿ ಕೊಂಡವರ ಎದೆಯಲ್ಲಿ
ಹೆಪ್ಪುಗಟ್ಟಿದನೋವನ್ನು
ಬಗೆದು ತೋರುವುದಿಲ್ಲ
ಹರಿವ ನೀರಿನಂತೆ

ಯುಗ ಉರುಳಿ ಮರಳಿದರೂ
ಅದೇ ಹೊಲ ದುಡಿವ ಕೈ
ಹಸಿದ ಹೊಟ್ಟೆ ಬೆನ್ನುತಾಗಿದೆ
ಒಡೆಯ ಬದಲಾಗಿಲ್ಲ
ಬೀಸುವ ಚಾಟಿಯಂತೆ

ದೇಶ ಬೇರೆ ವೇಷಬೇರೆ
ಜಗದಗಲದ ಭಾಷೆ ಒಂದೇ
ನಮ್ಮೆದೆಗಳ ಮೇಲೆ ಕುಣಿದವರಿಗೆ
ಬಸವಗಾಂಧಿಗಳ ನುಡಿಕೇಳುವುದಿಲ್ಲ
ಕಿವಿಯಿಲ್ಲದ ಕಿವುಡರಂತೆ

ಕಾಲವೇ ಹಾಗೆ
ಮುಚ್ಚಿಹಾಕುತ್ತದೆ
ನನ್ನಂಥವರ ಎದೆಗಳಲ್ಲಿ
ಉರಿಯುವ ತಣ್ಣನೆಬೆಂಕಿಯನ್ನು
ಮರದೊಳಗಣ ಕಿಚ್ಚಿನಂತೆ.

ಕಾಲವೇ ಹಾಗೆ
ಎಂಥ ಅಪಮಾನವನ್ನೂ
ಮುಚ್ಚಿಹಾಕುತ್ತದೆ
ಮರುಭೂಮಿಯ
ಮಾಯಾಮರಳಂತೆ !

ಎನ್. ಡಿ. ಅಂಕೋಲೆಕರ

ವಿಚಾರ ಗೋಷ್ಠಿ

ವಿಷಯ : ಅಂಕೋಲಾದಲ್ಲಿ ಮೀನುಗಾರಿಕೆ ಅವಕಾಶ ಮತ್ತು ಸವಾಲುಗಳು

– *ಪ್ರಮೋದ ಹರಿಕಾಂತ*

ಎಲ್ಲರಿಗೂ ನಮಸ್ಕಾರ....

ಸಾಹಿತ್ಯ ಎನ್ನುವುದು ಬದುಕಿನ ಕನ್ನಡಿ. ಸಾಹಿತ್ಯ ಸಮ್ಮೇಳನದಲ್ಲಿ ಅಂಕೋಲಾದ ಜೀವನಾಡಿಯಾದ ಮೀನುಗಾರಿಕೆಯನ್ನು ಚರ್ಚಾ ವಿಷಯವಾಗಿ ಆಯ್ಕೆ ಮಾಡಿಕೊಂಡಿರುವುದು ಅತ್ಯಂತ ಯೋಗ್ಯ ಮತ್ತು ಸಕಾಲಿಕ. ಮೀನುಗಾರಿಕೆಯಲ್ಲಿ ಒಂದು ಮಾತಿದೆ. ಸಿಕ್ಕರೆ ಶಿಕಾರಿ, ಇಲ್ಲದಿದ್ದರೆ ಬಿಕಾರಿ ಎಂದು. ಅಂದರೆ ಆ ದಿನ ಮೀನು ಸಿಗದೇ ಇದ್ದರೆ ಊಟಕ್ಕೂ ತತ್ವಾರ ಎನ್ನುವ ಬದುಕು ಅದು. ದಿನಕರ ದೇಸಾಯಿ ಅವರ ಚುಟುಕುಗಳನ್ನು ಓದಿದರೆ ಮೀನುಗಾರಿಕೆ ಜೀವನ ಅದೆಷ್ಟು ಕ್ಲಿಷ್ಟ, ಸಾಮಾಜಿಕ ಸ್ಥಿತಿ ಎಂಥದ್ದು ಎಂದು ಗೊತ್ತಾಗುತ್ತದೆ.

ತುಂಡು ಕಡಲ ತೀರ : ಅಂಕೋಲಾದ ಕರಾವಳಿ ತೀರ ಹಾರವಾಡದಿಂದ ಶುರುವಾಗಿ ಮಂಜಗುಣಿಯಲ್ಲಿ ಮುಗಿಯುತ್ತಿದೆ. ಇದರಲ್ಲಿ ಇರುವುದೆಲ್ಲವೂ ತುಂಡು ಕಡಲ ತೀರಗಳು. ಅಂದರೆ, ಮಧ್ಯದಲ್ಲಿ ಗುಡ್ಡಗಳೇ ನೇರವಾಗಿ ಸಮುದ್ರಕ್ಕೆ ಚಾಚಿಕೊಂಡಿವೆ. ೮–೧೦ ಕಡಲತೀರಗಳು ಅಂಕೋಲಾದಲ್ಲಿವೆ. ಕುಮಟಾ–ಅಂಕೋಲಾ ತಾಲೂಕು ಗಡಿಯಲ್ಲಿ ಗಂಗಾವಳಿ ನದಿ ಹರಿಯುತ್ತದೆ. ಇಷ್ಟರಲ್ಲಿ ನಾವು ಹುಡುಕುತ್ತಿರುವ ಮೀನುಗಾರಿಕೆ ಅವಕಾಶ ಮತ್ತು ಸವಾಲುಗಳು ನಮ್ಮ ಎದುರು ವಿಚಿತ್ರ ಪ್ರಶ್ನೆಗಳು ತಂದಿಡುತ್ತದೆ.

ಅಂಕೋಲಾದಲ್ಲಿ ಇನ್ನೂ ಕಡಲತೀರ ನಮ್ಮದೇ ಕೈಯಲ್ಲಿದೆ, ಇನ್ನೂ ಮೀನುಗಾರಿಕೆ ನಡೆಯುತ್ತಿದೆ ಎನ್ನುವುದೇ ಮೀನುಗಾರಿಕೆಯ ನಿಜವಾದ 'ಅವಕಾಶ'. ಅದನ್ನು ನಮ್ಮ ಕೈಯಲ್ಲಿಯೇ ಉಳಿಸಿಕೊಳ್ಳುವುದು ಹೇಗೆ ಎನ್ನುವುದು ದೊಡ್ಡ ಸವಾಲು. ಕೇವಲ ಅಂಕೋಲಾ ಅಷ್ಟೇ ಅಲ್ಲ, ಉತ್ತರ ಕನ್ನಡ ಜಿಲ್ಲೆಯ ಎಲ್ಲ ಕಡಲತೀರಗಳು ಇದೇ ರೀತಿ ಅಪಾಯದಲ್ಲಿವೆ. ಕಡಲತೀರಗಳು ಅಪಾಯದಲ್ಲಿವೆ ಎಂದರೆ, ಮೀನುಗಾರಿಕೆಗೆ ಅಪಾಯ ಬಂದಿದೆ ಎಂದೇ ಅರ್ಥ.

ಮೀನುಗಾರಿಕೆ ಅಪಾಯದಲ್ಲಿದೆ ಎಂದರೆ ಒಮ್ಮೆ ಊಹಿಸಿಕೊಳ್ಳಿ; ನಮ್ಮ ಜೀವನ ಏನಾಗಬಹುದು ಎಂದು. ವಾರದಲ್ಲಿ ಒಮ್ಮೆ ಬರುವ ಶನಿವಾರ, ಸೋಮವಾರಕ್ಕೇ ತರಕಾರಿ ಊಟ ಕಷ್ಟ ಎನಿಸುತ್ತದೆ. ಅಂಥದ್ದರಲ್ಲಿ ಯಾವ ದಿನವೂ ಮೀನು ಸಾರಿಲ್ಲ, ಬಂಗುಡೆ ಫ್ರೈ ಇಲ್ಲ, ಕಲ್ಗ, ಚಿಪ್ಪಿಕಲ್ಲು ಸುಕ್ಕಾ ಇಲ್ಲ, ಒಣ ಮೀನು, ಒಣ ಶೆಟ್ಲಿ ಘಮ ಇಲ್ಲ. ಬಸಲೆ ಸಾರಿಗೆ ಬೆರಕೆ ಇಲ್ಲ ಎಂದರೆ ಹೇಗಾಗಬೇಡ... ಇದೆಲ್ಲವೂ ನೆನಪು ಮಾತ್ರ ಎನ್ನುವ ಜಗತ್ತನ್ನು ಊಹಿಸಿಕೊಳ್ಳುವುದಕ್ಕಾದರೂ ಸಾಧ್ಯವಿದೆಯೇ..ಹೊಟ್ಟೆ ಹಸಿವಾದಾಗ ಇಂಥ ಮಾತನಾಡಿದರೆ ಇನ್ನೂ ಕಷ್ಟ ಆಗುತ್ತದೆ.

ಭಾಷಾವಾರು ಪ್ರಾಂತ್ಯ ರಚನೆಯಾದರೂ ಬಾಂಧವ್ಯ :

ಅಂಕೋಲಾದಲ್ಲಿ ಮೀನುಗಾರಿಕೆ ನಡೆಸುವ ಸುಮಾರು ೧೦ ಜಾತಿಗಳನ್ನು ಗುರುತಿಸಲಾಗುತ್ತದೆ. ಅದರಲ್ಲಿ ಕನ್ನಡ, ಕೊಂಕಣಿ ಭಾಷಿಕರು ಹೆಚ್ಚು. ಈ ಭಾಷೆಯಲ್ಲಿಯೂ ವೈವಿಧ್ಯತೆ ಇದೆ. ಭಾಷಾವಾರು ಪ್ರಾಂತ್ಯಗಳು ರಚನೆಯಾದರೂ ಅಂಕೋಲಾದಲ್ಲಿ ಮೀನುಗಾರರ ನಡುವಿನ ಬಾಂಧವ್ಯಕ್ಕೆ ಯಾವ ತೊಂದರೆ ಇಲ್ಲ. ಇಲ್ಲಿನ ಮೀನುಗಾರಿಕೆಯಲ್ಲೂ ಸಾಹಿತ್ಯ ಇತ್ತು. ಅದಕ್ಕೆ ಪ್ರಚಾರ ಸಿಗಲಿಲ್ಲ. ಬಲೆ, ದೋಣಿ ಎಳೆಯುವಾಗ ಪ್ರಾಸದ ಸಾಹಿತ್ಯದ ಮೂಲಕವೇ ಮೀನುಗಾರರು ಶಕ್ತಿ ವೃದ್ಧಿಸಿಕೊಳ್ಳುತ್ತಾರೆ.

ಉದ್ಯೋಗ ಕ್ಷೇತ್ರ :

ಮೀನುಗಾರಿಕೆ ನಂಬಿಕೆಯ ಮೇಲೆ ನಡೆಯುವ ಕ್ಷೇತ್ರ. ಭಾರತದ ಪಾಲಿಗೆ ಮೀನುಗಾರಿಕೆಯು ಅತಿದೊಡ್ಡ ಆದಾಯ ಮತ್ತು ಉದ್ಯೋಗದ ಕ್ಷೇತ್ರ. ನಮ್ಮ ದೇಶದಲ್ಲಿ ಹೆಚ್ಚು ಉದ್ಯೋಗ ಕೊಟ್ಟಿರುವುದು ರೈಲ್ವೆ ಇಲಾಖೆ ಎನ್ನುತ್ತಾರೆ. ನಂತರ ಮೀನುಗಾರಿಕೆ ಕ್ಷೇತ್ರ ಎಂದು ಹೇಳಲಾಗುತ್ತದೆ. ಬೋಟಿನಲ್ಲಿ ದುಡಿಯುವ ಕಾರ್ಮಿಕರ ಆಧಾರದ ಮೇಲೆ ಈ ಲೆಕ್ಕ ಮಾಡಲಾಗಿದೆ. ಮೀನು

ಮಾರಾಟಗಾರರು, ದೋಣಿಯಲ್ಲಿ ಮೀನುಗಾರಿಕೆ ಮಾಡುವವರನ್ನು ಲೆಕ್ಕ ಹಾಕಿದರೆ ಮೀನುಗಾರಿಕೆ ಕ್ಷೇತ್ರದಲ್ಲಿಯೇ ಅತಿ ಹೆಚ್ಚಿನ ಉದ್ಯೋಗ ಸಿಗುತ್ತಿದೆ.

ಜಿಡಿಪಿ ಪಾಲು

ಮೀನುಗಾರಿಕೆಯು ನಮ್ಮ ದೇಶದ ಆರ್ಥಿಕತೆಯ ಬೇರು. ಈಗ ದೇಶದ ಜಿಡಿಪಿಯಲ್ಲಿ ಮೀನುಗಾರಿಕೆ ವಲಯದ ಪಾಲು ಶೇ.೧.೦೪ ಇದೆ. ಸುಮಾರು ಮೂರು ಕೋಟಿ ಜನ ಮೀನುಗಾರಿಕೆಯಲ್ಲಿ ತೊಡಗಿದ್ದಾರೆ. ಮೂರು ಕೋಟಿ ಅಂದರೆ ಕರ್ನಾಟಕದ ಅರ್ಧ ಜನಸಂಖ್ಯೆ ಆಗುತ್ತದೆ. ದೇಶದಲ್ಲಿ ಉತ್ಪಾದನೆಯಾಗುವ ಮೀನುಗಾರಿಕೆ ಮೌಲ್ಯ ಸುಮಾರು ೪೬,೬೬೨ ಸಾವಿರ ಕೋಟಿ ರೂಪಾಯಿ ಎಂದು ಅಧಿಕೃತವಾಗಿ ಲೆಕ್ಕ ಹಾಕಲಾಗಿದೆ. ಅಲ್ಲದೆ, ಜಗತ್ತಿನಲ್ಲಿ ಮೀನು ಉತ್ಪಾದನೆಯಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ.

ಕಾಣೆಯಾದ ರಂಪಣಿ

೨೦–೨೫ ವರ್ಷಗಳ ಹಿಂದೆ ರಂಪಣಿ ಎಂಬ ಮೀನುಗಾರಿಕೆ ಪದ್ಧತಿ ಇತ್ತು. ಸಮುದ್ರ ದಂಡೆಯಲ್ಲಿ ದೊಡ್ಡ ಬಲೆಹಾಕಿ ಎಳೆದರೆ ಒಂದು ತಿಂಗಳಾದರೂ ಖಾಲಿಯಾಗದಷ್ಟು ಮೀನು ಸಂಗ್ರಹವಾಗುತ್ತಿತ್ತು. ಈಗ ರಂಪಣಿ ಬಲೆ ಸಣ್ಣದಾಗಿ ಏಂಡಿಗೆ ಬಂದು ಮುಟ್ಟಿದೆ. ಏಂಡಿ ಬಲೆ ಹಾಕಿದರೆ ಮೀನಿಗಿಂತ ಜಾಸ್ತಿ ಪ್ಲಾಸ್ಟಿಕ್‌ಗಳೇ ಸಿಗುತ್ತವೆ. ಸೊಂಟಕ್ಕೆ ಅಡ್ಡಿ ಸಿಕ್ಕಿಸಿ ರಟ್ಟೆ ಗಟ್ಟಿ ಮಾಡಿ ಎಳೆದರೂ ಅರ್ಧ ಬುಟ್ಟಿ ಮೀನಿಗೂ ತತ್ವಾರ. ಅಂಥ ಸ್ಥಿತಿ ಈಗಿದೆ.

ಮೀನು ನಮ್ಮ ಆಹಾರ

ಮೀನು ನಮ್ಮೆಲ್ಲರ ಆಹಾರ. ಮೀನು ಇಲ್ಲದ ಊಟಕ್ಕೆ ಬೆಲೆಯೂ ಕಡಿಮೆ. ಇತ್ತೀಚೆಗೆ ಮೀನು ತಿನ್ನುತ್ತಿರುವವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗಿದೆ. ಹಾಗಾಗಿ ಮೀನುಗಾರಿಕೆ ಕ್ಷೇತ್ರದ ಮೇಲಿನ ಕಾಳಜಿ ಮೀನುಗಾರರಿಗೆ ಅಷ್ಟೇ ಅಲ್ಲ, ಮೀನು ತಿನ್ನುವವರಿಗೂ ಇರಬೇಕು. ಯಾಕೆಂದರೆ ನಮ್ಮ ಆಹಾರವನ್ನು ನಾವು ನಿರ್ಲಕ್ಷಿಸಬಾರದು. ರಕ್ಷಿಸಿಕೊಳ್ಳುವುದು ಎಲ್ಲರ ಜವಾಬ್ದಾರಿ. ಮೀನುಗಾರಿಕೆ ಅವಲಂಭಿಸಿ ಅನೇಕ ಉದ್ಯಮಗಳು ನಡೆಯುತ್ತಿವೆ. ಅದರಲ್ಲಿ ಮೀನುಗಾರರಲ್ಲದ ಸಮುದಾಯವೂ ಇದೆ.

ದ್ವಂದ್ವ ಯೋಜನೆಗಳು

ಅಂಕೋಲಾದ ಮೀನುಗಾರಿಕೆ ಬಗ್ಗೆ ಮಾತನಾಡಬೇಕೆಂದರೆ, ಇಲ್ಲಿನ ಕೆಲ ವಿಚಾರಗಳು ಆಶ್ಚರ್ಯ ಮತ್ತು ಆತಂಕ ಉಂಟುಮಾಡುತ್ತದೆ. ಎಲ್ಲ ನಾಯಕರು ಕಡಲತೀರ ಅಭಿವೃದ್ಧಿ ಮಾಡುತ್ತೇವೆ ಎಂದು ಅವಕಾಶ ಸಿಕ್ಕಾಗಲೆಲ್ಲ ಹೇಳುತ್ತಿದ್ದಾರೆ. ಪ್ರವಾಸೋದ್ಯಮ ಇಲಾಖೆ ಎಲ್ಲ ಕಡಲತೀರದಲ್ಲಿ ಪ್ರವಾಸೋದ್ಯಮ ಬೆಳೆಸುತ್ತೇವೆ ಎಂದು ಮಾಸ್ಟರ್ ಪ್ಲಾನ್ ರೂಪಿಸಿದೆ. ಬಂದರು ಇಲಾಖೆ ಎಲ್ಲೆಲ್ಲಿ ವಾಣಿಜ್ಯ ಬಂದರು ಮಾಡಬಹುದು ಲೆಕ್ಕ ಹಾಕುತ್ತಿದೆ. ಮೀನುಗಾರಿಕೆ ಇಲಾಖೆ ಮೀನುಗಾರರಿಗಾಗಿ ಸಮುದ್ರಕ್ಕೇ ಮೀನು ಬಿಟ್ಟು ಬೆಳೆಸುತ್ತೇವೆ ಎಂದು ಹೇಳಿಕೊಳ್ಳುತ್ತಿದೆ.

ಇವರು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುತ್ತಿರುವ ಕಡಲ ತೀರದಲ್ಲಿ ನಿಜವಾಗಿ ಏನಾದರು ಸಮಸ್ಯೆ ಇದೆಯೇ, ಹೊಸ ಯೋಜನೆ ಅಗತ್ಯ ಇದೆಯೇ ಎಂದು ಯಾರಿಗೂ ಗೊತ್ತಿಲ್ಲ. ಬಂದರು ಇದ್ದಲ್ಲಿ ಪ್ರವಾಸೋದ್ಯಮ ಹೇಗೆ ಮಾಡುತ್ತಾರೆ. ಪ್ರವಾಸೋದ್ಯಮ ಇದ್ದಲ್ಲಿ ಬಂದರು ಹೇಗೆ ನಿರ್ಮಿಸುತ್ತಾರೆ. ಇವೆರಡು ಇದ್ದಲ್ಲಿ ಮೀನುಗಾರಿಕೆ ಎಲ್ಲಿ ನಡೆಸುತ್ತಾರೆ, ಮೀನುಗಾರರಿಗೆ ಯಾವ ನ್ಯಾಯ ಕೊಡುತ್ತಾರೆ. ಇಂಥ ತಾಳಮೇಳ ಇಲ್ಲದ ಅಭಿವೃದ್ಧಿಯೇ ಜಿಲ್ಲೆಯನ್ನು ಹಾಳು ಮಾಡುತ್ತಿದೆ.

ಕರ್ನಾಟಕ ಕರಾವಳಿ ಪ್ರವಾಸೋದ್ಯಮ ಯೋಜನೆ

ಆಶ್ಚರ್ಯ ಎನಿಸಬಹುದು. ಕರ್ನಾಟಕ ಕರಾವಳಿ ಪ್ರವಾಸೋದ್ಯಮ ಯೋಜನೆ ೨೦೧೯ರ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ೪೭ ಕಡಲ ತೀರಗಳ ಪೈಕಿ ಮೀನುಗಾರಿಕೆ ನಡೆಯುತ್ತಿರುವುದು ಕೇವಲ ಆರು ಕಡೆ ಮಾತ್ರ ಅಂತೆ. ಅಂಕೋಲಾದಲ್ಲಿ ಎಂಟು ಕಡಲ ತೀರಗಳು ಇವೆ. ಅದರಲ್ಲಿ ಕೇಣಿ, ಬೆಳಂಬಾರ ಕಡಲ ತೀರದಲ್ಲಿ ಮಾತ್ರ ಮೀನುಗಾರಿಕೆ ಚಟುವಟಿಕೆ ನಡೆಯುತ್ತಿದೆ ಎಂದು ಅಧಿಕಾರಿಗಳು ವರದಿ ರೂಪಿಸಿದ್ದಾರೆ. ಉಳಿದ ಕಡಲತೀರಗಳಲ್ಲಿ ಮೀನುಗಾರರೇ ಇಲ್ಲವೆ?

ಪ್ರವಾಸೋದ್ಯಮ ಇಲಾಖೆ ಪ್ರವಾಸಿ ಚಟುವಟಿಕೆ ನಡೆಸಲು ಗುರುತಿಸಿದ ಅಂಕೋಲಾದ ಬೀಚುಗಳು ಇವು.

ಹಾರವಾಡ ಬೀಚ್– ಕ್ಲೀನ್ ಬೀಚ್

ಬೇಲೇಕೇರಿ ಬೀಚ್– ಕ್ಲೀನ್ ಬೀಚ್

ಬಾವಿಕೇರಿ ಬೀಚ್– ಕ್ಲೀನ್ ಬೀಚ್

ನದಿಭಾಗ ಬೀಚ್– ಕ್ಲೀನ್ ಬೀಚ್

ಕೇಣಿ ಬೀಚ್– ಕ್ಲೀನ್ ಬೀಚ್+ ಮೀನುಗಾರಿಕೆ

ಬೆಳಂಬಾರ ಬೀಚ್– ಕ್ಲೀನ್ ಬೀಚ್+ ಮೀನುಗಾರಿಕೆ

ಹನಿ ಬೀಚ್– ಕ್ಲೀನ್ ಬೀಚ್

ಮಂಜಗುಣಿ ಬೀಚ್– ಕಸದ ರಾಶಿ.

ಸಿಆರ್‌ಝೆಡ್ ಕಾನೂನು ಮೀನುಗಾರರ ಬದುಕಿಗೆ ದೊಡ್ಡ ಹೊಡೆತ ಕೊಡುತ್ತಿದೆ. ಕಡಲತೀರಗಳಲ್ಲಿ ಮೀನುಗಾರಿಕೆ ಬಿಟ್ಟು ಬೇರೆ ಉದ್ದೇಶವನ್ನು ತೋರಿಸುತ್ತಿದ್ದಾರೆ. ಅದರ ಬಗ್ಗೆ ಪ್ರಶ್ನೆ ಮಾಡದೇ ಇದ್ದರೆ ಮುಂದೆ ಚೆಂಡಿಯಾ, ಅಲಿಗದ್ದಾ, ಮುದಗಾ ಕಳೆದುಕೊಂಡಂತೆ ಅಂಕೋಲಾದ ಬೀಚುಗಳನ್ನೂ ಕಳೆದುಕೊಳ್ಳಬೇಕಾಗುತ್ತದೆ. ಅಂಕೋಲಾ, ಕಾರವಾರ ಎಂಬ ಗಡಿ ನಮಗಷ್ಟೇ. ಮೀನುಗಳಿಗೆ ಅಂಕೋಲಾ ಯಾವುದು, ಕಾರವಾರ ಯಾವುದು ಎಂದು ಗೊತ್ತಿಲ್ಲ.

ಅಂಕೋಲಾ ಕಡಲತೀರ ಪ್ರದೇಶಗಳು ಹೆಚ್ಚು ಜಾತಿಯ ಮೀನುಗಳು ಸಿಗುವ ಸ್ಥಳ. ಇಲ್ಲಿ ತುಂಡು ಕಡಲತೀರಗಳು ಜಾಸ್ತಿ. ಆ ಕಡಲತೀರಗಳಲ್ಲಿ ಮೀನುಗಾರಿಕೆ ಸುಮುದಾಯ ದಟ್ಟವಾಗಿ ನೆಲೆಸಿದೆ. ಆ ಸಮುದಾಯಕ್ಕೆ ಮೀನುಗಾರಿಕೆ ಬಿಟ್ಟು ಬೇರೆ ಉದ್ಯೋಗ ಇನ್ನೂ ಕೈಗೂಡಿಲ್ಲ. ಶೇ.೯೦ರಷ್ಟು ಮೀನುಗಾರಿಕೆ ಸಮುದಾಯಗಳು ಈಗಲೂ ಮೀನುಗಾರಿಕೆಯನ್ನೇ ನಡೆಸುತ್ತಿವೆ. ಅದೇ ಮೀನುಗಾರಿಕೆ ಪ್ರದೇಶ ಅಪಾಯದಲ್ಲಿದೆ.

ವಾಣಿಜ್ಯ ಬಂದರು

ಕರಾವಳಿ ತೀರದ ಮೇಲೆ ವಾಣಿಜ್ಯ ಬಂದರು ಆಸಕ್ತಿ ಹೆಚ್ಚುತ್ತಿದೆ. ಪರಿಸರಕ್ಕೆ ಹಾನಿ ಮಾಡುವುದಿಲ್ಲ ಎಂದು ಗ್ರೀನ್ ಫೀಲ್ಡ್ ಪೋರ್ಟ್ ನಿರ್ಮಿಸುತ್ತೇವೆ ಎನ್ನುತ್ತಿದ್ದಾರೆ. ಬಂದರು ಮೇಲೆ ನಾಲ್ಕು ಗಿಡ ಬೆಳೆಸಬಹುದು. ಮಾಲಿನ್ಯ ನಿಯಂತ್ರಣ ಮಾಡಬಹುದು. ಹಡಗುಗಳ ಸಂಚಾರದಿಂದ ತೈಲ ಸೋರಿಕೆಯಾಗಿ ಸಮುದ್ರ ತೀರ ಕಲುಷಿತವಾಗುತ್ತದೆಯಲ್ಲ ಅದಕ್ಕೆ ಹೊಣೆ ಯಾರು. ನೀರು ಕಲುಷಿತವಾದಾಗ ಮೀನುಗಳು ಬೆಳೆಯುವುದಿಲ್ಲ. ಮೀನಿಲ್ಲದೆ ಮೀನುಗಾರರಿಗೆ ಬದುಕಿಲ್ಲ, ಹಾಗಾದರೆ ಅಂಕೋಲಾ ಜನತೆ ಊಟದಲ್ಲಿ ಸತ್ವವೇ ಇರುವುದಿಲ್ಲ.

ಬಂದರು ಸರಕು ಇವತ್ತು ಬೇಡ ನಾಳೆ ತಂದುಕೊಡು ಎಂದರೆ ನಡೆಯುತ್ತದೆ. ಮೀನುಗಾರಿಕೆ ಇವತ್ತು ಬೇಡ ನಾಳೆ ಎಂದರೆ ಆಗುವುದಿಲ್ಲ. ಮೀನಿಲ್ಲದ ಊಟ ಹೊಟ್ಟೆಗೆ ಇಳಿಯುವುದಿಲ್ಲ. ಒಂದಿಬ್ಬರು ನಾಲ್ಕು ದಿನ ಮೀನು ತಿನ್ನುವುದಿಲ್ಲ ಎನ್ನಬಹುದು. ಪಕ್ಕದ ಮನೆಯವರು, ಓಣಿಯವರೆಲ್ಲರೂ ಮೀನು ತಿನ್ನದೇ ಇರಲು ಸಾಧ್ಯವೇ. ಇಂಥ ಕಲ್ಪನೆಗಳೇ ಭೀಕರ. ಹಾಗಾಗಿ ಕಡಲ ತೀರ ಉಳಿಸಿಕೊಳ್ಳುವುದೇ ದೊಡ್ಡ ಸವಾಲು. ಉಳಿಸಿಕೊಳ್ಳುವುದು ಎಂದರೆ ಕೇವಲ ಯೋಜನೆಗಳಿಂದ ಅಷ್ಟೇ ಅಲ್ಲ, ಪ್ಲಾಸ್ಟಿಕ್ ಮಾಲಿನ್ಯದಿಂದಲೂ ಉಳಿಸಬೇಕು.

ಮಾರುಕಟ್ಟೆ ಕಾಳಜಿ

ಅಂಕೋಲಾದಲ್ಲಿ ತರಕಾರಿ ಮಾರುಕಟ್ಟೆ, ಸಿನಿಮಾ ಥಿಯೇಟರ್, ಕಿರಾಣಿ ಅಂಗಡಿಗೆ ಹೋಗದ ಜನ ಇರಬಹುದು. ಮೀನು ಮಾರುಕಟ್ಟೆಗೆ ಹೋಗದ ಮಾಂಸಹಾರಿ ಸಿಗುವುದು ಅಪರೂಪ. ಅಂಕೋಲಾ ಮೀನುಗಾರಿಕೆ ಎಷ್ಟು ಸೊಗಸಾಗಿದೆ ಎನ್ನುವುದು ತಿಳಿಯಲು ಮೀನು ಮಾರುಕಟ್ಟೆಗೆ ಹೋದರೆ ಸಾಕು. ಸಮುದ್ರ ಮೀನುಗಳು ಒಂದೆಡೆಯಾದರೆ, ನದಿ, ಹಳ್ಳ, ಗಜನಿಯಲ್ಲಿ ಹಿಡಿದ ಕಾಂಗಳಸಿ, ಕಲ್ಗ, ಏಡಿ (ಹೆಸುಡೆ), ಶೆಟ್ಲಿ (ಸಿಗಡಿ) ಹೀಗೆ ರುಚಿಯಾದ ಮೀನು ಕಾಣುತ್ತವೆ.

ಆದರೆ, ಮಾರುಕಟ್ಟೆ ರಸ್ತೆ, ಮೀನುಗಾರ ಮಹಿಳೆಯರು ಮಾರಾಟಕ್ಕೆ ಕುಳಿತುಕೊಳ್ಳುವ ಸ್ಥಳವನ್ನು ಅಂತರಾಳದಿಂದ ನೋಡಿದವರಿಗೆ ಸಂಕಟ ಆಗದೆ ಇರದು. ಅದು ಕೇವಲ ಮೀನು ಮಾರಾಟಗಾರರ ಜಾಗ ಅಲ್ಲ, ಮೀನು ಖರೀದಿದಾರರು ಹೋಗುವುದು ಅಲ್ಲಿಗೇ. ನಮಗೆ ಸ್ವಚ್ಛವಾದ ಮೀನು ಮಾರುಕಟ್ಟೆ ಬೇಕು ಎಂಬ ಯೋಚನೆ ನಮ್ಮಲ್ಲಿ ಯಾಕೆ ಹೊಳೆಯುವುದಿಲ್ಲ. ನಮ್ಮ ಆಹಾರ ಅಲ್ಲವೆ ಅದು. ಸ್ಥಳೀಯ ಸಂಸ್ಥೆಯ ಕಿವಿ ಹಿಂಡಬೇಕಲ್ಲವೆ.

ಅಂಕೋಲಾದಲ್ಲಿ ಕಡಿಮೆ ಮೀನು

ಜಿಲ್ಲೆಯ ಕರಾವಳಿಯಲ್ಲಿ ಮೀನು ಉತ್ಪಾದನೆ ಅಂಕೋಲಾದಲ್ಲಿಯೇ ಕಡಿಮೆ ಇದೆ. ಈ ವರ್ಷ ಹತ್ತು ಸಾವಿರ ಕ್ವಿಂಟಾಲ್ ಮೀನು ಹಿಡಿಯಲಾಗಿದೆ. ಬೇರೆ ತಾಲೂಕುಗಳಿಗೆ ಹೋಲಿಸಿದರೆ ಇದು ಬಹಳ ಕಡಿಮೆ. ಇಲ್ಲಿ ಮೀನು ಉತ್ಪಾದನೆ ಯಾಕೆ ಕಡಿಮೆ ಎಂದರೆ ಮೀನುಗಾರಿಕೆಗೆ ಬೇಕಾದ ಸರಿಯಾದ ಮೂಲ ಸೌಕರ್ಯವೇ ಅಂಕೋಲಾದಲ್ಲಿ ಇಲ್ಲ. ಬೇಲೇಕೇರಿ

ಬಂದರಿಗೆ ಸರಿಯಾದ ವ್ಯವಸ್ಥೆ ಇಲ್ಲ. ಹೂಳು ತುಂಬಿದೆ. ಮಂಜಗುಣಿ ಬಂದರಿನಲ್ಲಿ ದೊಡ್ಡ ಎರಡು ಬೋಟು ನಿಂತರೆ ಬಂದರು ಭರ್ತಿಯಾಗುತ್ತದೆ.

ಗಂಗಾವಳಿ ನದಿಯಲ್ಲೂ ಸಾಕಷ್ಟು ಮೀನು ಉತ್ಪಾದನೆ ಆಗುತ್ತದೆ. ಮೀನುಗಾರಿಕೆಯಲ್ಲಿ ನದಿಯ ಪಾತ್ರವೂ ದೊಡ್ಡದು. ಗಂಗಾವಳಿ ನದಿಯಲ್ಲಿ ಸುಮಾರು ೬೭ ಜಾತಿಯ ಮೀನುಗಳು ಇವೆ ಎಂದು ಅಧ್ಯಯನದಿಂದ ಗೊತ್ತಾಗಿದೆ. ಅದರ ಮೇಲೂ ಯೋಜನೆಗಳ ಭಾರ ಹೇರುವ ತಯಾರಿ ನಡೆಯುತ್ತಿದೆ. ನದಿಗಳು ಸರಾಗವಾಗಿ ಸಮುದ್ರ ಸೇರದೆ ಇದ್ದರೆ ಮೀನುಗಳು ಬೆಳೆಯುವುದಿಲ್ಲ. ಕಾಳಿ, ಶರಾವತಿ ನದಿಗಳು ಈಗಾಗಲೇ ದುಸ್ಥಿತಿಗೆ ತಲುಪಿವೆ.

ಗಂಗಾವಳಿ ದಂಡೆ ಹಾಳು

ಗಂಗಾವಳಿ ನದಿ ದಂಡೆಯಲ್ಲಿಯೂ ಎಷ್ಟೊಂದು ಗಜನಿಗಳು ಇದ್ದವು. ಸಿಗಡಿ ಬೆಳೆಯುತ್ತಿದ್ದ ಗಜನಿಗಳೆಲ್ಲ ಬರಡಾಗುತ್ತಿವೆ. ನದಿಯ ಒಂದು ದಡ ಕುಮಟಾ ಭಾಗಕ್ಕಿದ್ದರೆ, ಇನ್ನೊಂದು ದಂಡೆ ಅಂಕೋಲಾಕ್ಕೆ ಸೇರುತ್ತದೆ. ಅಂಕೋಲಾದ ದಂಡೆಗಳು ಒಡೆದು ಉಪ್ಪು ನೀರು ಹೊಲಗಳಿಗೆ ನುಗ್ಗುತ್ತಿದ್ದರೂ ಕೇಳುವವರೇ ಇಲ್ಲ. ಸಿಗಡಿ ಬೆಳೆಯುವ ಗಜನಿಗಳೆಲ್ಲ ಬರ್ಬಾದ್ ಆಗಿವೆ. ಆದರೆ, ಕುಮಟಾ ಭಾಗದ ದಂಡೆಗೆ ಅಚ್ಚುಕಟ್ಟಾಗಿ ಕಾಲ್ರ್ಯಾಂಡ್ ಕಟ್ಟಲಾಗಿದೆ.

ಕುಚಲಕ್ಕಿ ಜತೆ ಮೀನಿನ ಸಾರು

ಮೀನು ಆಹಾರ ಕರಾವಳಿ ಭಾಗದ ಬ್ಯಾಂಡ್ ಅದು. ಮೀನು ಪಳದಿಯ ಜತೆಗೆ ಕುಚಲಕ್ಕಿ ಅನ್ನ. ಅದುವೇ ನಮ್ಮ ಮೃಷ್ಟಾನ್ನ. ಈಗ ಕುಚಲಕ್ಕಿ ಹೋಗಿ ಬೆಣತಕ್ಕಿ ಬರುತ್ತಿದೆ. ಹಿಂದಿನ ವರ್ಷ ರಾಜ್ಯ ಸರಕಾರ ಈ ಭಾಗದ ಜನರಿಗೆ ರೇಷನ್ ಅಂಗಡಿಯಲ್ಲಿ ಕುಚಲಕ್ಕಿ ಕೊಡಲು ನಿರ್ಧಾರ ಮಾಡಿ ಭತ್ತ ಖರೀದಿಸಲು ಮುಂದಾಗಿತ್ತು. ಇಡೀ ಜಿಲ್ಲೆಯಲ್ಲಿ ಕುಚಲಕ್ಕಿ ಕೊಡಲು ಸಾಧ್ಯವಾಗಿದ್ದು ಅಂಕೋಲಾ ತಾಲೂಕಿಗೆ ಮಾತ್ರ. ನಮ್ಮ ಕೃಷಿ ಏನಾಗಿದೆ ಎಂಬುದು ಕೂಡ ಯೋಚನೆ ಮಾಡಬೇಕಾಗಿದೆ.

ಅವಕಾಶಗಳು ಏನೇನು?

ಇಷ್ಟೆಲ್ಲ ಚರ್ಚೆಯಾದ ಮೇಲೆ ಹಾಗಾದರೆ ಅಂಕೋಲಾವನ್ನು ಏನು ಮಾಡಬೇಕು ಎಂಬ ಪ್ರಶ್ನೆಗೆ ಉತ್ತರ ಹೇಳದೆ ಇದ್ದರೆ ಮಾತು ಅಪೂರ್ಣ ಆಗುತ್ತದೆ. ಮೀನುಗಾರರು ಮೀನು ಹಿಡಿದಷ್ಟು ಅಂಕೋಲಾಕ್ಕೆ ಲಾಭ ಜಾಸ್ತಿ. ಅಂಕೋಲಾಕ್ಕೆ ಲಾಭ ಜಾಸ್ತಿ ಆದಷ್ಟು ಮೀನುಗಾರರಿಗೆ ಅನುಕೂಲ. ಅಂಕೋಲಾ ಕರಾವಳಿ ತೀರವನ್ನು ಮೀನುಗಾರರ ಬದುಕಿನೊಂದಿಗೆ ಪ್ರೋತ್ಸಾಹಿಸಬೇಕು. ಅಂದರೆ, ಮೀನುಗಾರಿಕೆ ಸಂಸ್ಕೃತಿಯೂ ಪ್ರವಾಸೋದ್ಯಮದ ಭಾಗವಾಗಿ ಪ್ರಚಾರ ಮಾಡಬೇಕು.

ಉದ್ಯಮಿಗಳು ಮೀನು ಉತ್ಪನ್ನಗಳ ಮೌಲ್ಯವರ್ಧನೆಗೆ ಹೂಡಿಕೆ ಮಾಡಬಹುದು. ಅಂದರೆ, ಇಲ್ಲಿ ಒಂದು ಮೀನೆಣ್ಣೆ ಘಟಕದ ಅಗತ್ಯ ಇದೆ. ಅಂಕೋಲಾದ ಸಾಕಷ್ಟು ಮೀನುಗಳು ಕೇರಳ ಮೀನೆಣ್ಣೆ ಘಟಕಗಳಿಗೆ ಹೋಗುತ್ತಿವೆ. ಇಲ್ಲಿಯೇ ಮೀನೆಣ್ಣೆ ಘಟಕ ಮಾಡುವವರಿಗೆ ಸ್ಥಳೀಯವಾಗಿ ಮೀನು ದೊರೆಯುತ್ತದೆ. ಮೀನುಗಾರರಿಗೆ ಮಾರುಕಟ್ಟೆ ಸಿಗುತ್ತದೆ. ಏಡಿಗಳು ವಿದೇಶಕ್ಕೆ ರಫ್ತಾಗುತ್ತಿವೆ. ಸಿಗಡಿ ಉಪ್ಪಿನಕಾಯಿ ಕೂಡ ವಿಮಾನದಲ್ಲಿ ಸಾಗಾಟ ಆಗುತ್ತಿವೆ. ಅದನ್ನು ದೊಡ್ಡ ಉದ್ಯಮ ಮಾಡಬಹುದು. ಮೀನು ಮಾರುಕಟ್ಟೆ ವಿಸ್ತರಣೆ ಮಾಡಿ, ಒಣ ಮೀನಿಗೆ ವಿಶೇಷ ಮಾರುಕಟ್ಟೆ ಕಲ್ಪಿಸಬೇಕು. ಬೆಳಂಬಾರ ತೈಲ ಹೇಗೆ ಬ್ರಾಂಡ್ ಆಗಿದೆಯೋ ಅದೇ ರೀತಿ ಅಂಕೋಲಾ ಮೀನು ಬ್ರಾಂಡ್ ಮಾಡಬಹುದು.

ಸೈಲಿಂಗ್ ಕ್ರೀಡೆ

ಸೈಲಿಂಗ್ ಅನ್ನೋ ಕ್ರೀಡೆ ಇದೆ. ಕನ್ನಡದಲ್ಲಿ ಹಾಯಿದೋಣಿ ಸ್ಪರ್ಧೆ. ಕರ್ನಾಟಕದ ಅನೇಕರ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಹಾಯಿದೋಣಿ ಓಡಿಸುತ್ತಾರೆ. ಅವರಲ್ಲಿ ಯಾರೂ ಕರಾವಳಿ ಭಾಗದವರು ಇಲ್ಲ. ಸ್ವಿಮ್ಮಿಂಗ್ ಫೂಲ್‌ನಲ್ಲಿ ಈಜು ಕಲಿತು, ಜಲಾಶಯಗಳ ಹಿನ್ನೀರಿನಲ್ಲಿ ದೋಣಿ ಓಡಿಸಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟು ಆಗುತ್ತಿದ್ದಾರೆ. ಒಂದು ವರ್ಷದ ಹಿಂದೆ ಆ ಕ್ರೀಡಾಪಟುಗಳಿಗೆ ಕಾರವಾರದಲ್ಲಿ ಸಮುದ್ರ ತೀರದಲ್ಲಿ ತರಬೇತಿ ನೀಡಲಾಗಿತ್ತು.

ಬುದ್ಧಿ ಬಂದಾಗಲೇ ನೀರಿನಲ್ಲಿ ಈಜಿ ದೋಣಿ ಓಡಿಸುವ ಮೀನುಗಾರರಿಗೆ ಇದರ ಪರಿಚಯವೇ ಇಲ್ಲ. ಆಡಳಿತ ವ್ಯವಸ್ಥೆಯೂ ಇಂಥದ್ದೊಂದು ಅವಕಾಶವನ್ನು ಪರಿಚಯಿಸಿಲ್ಲ. ಹಾಯಿದೋಣಿ ಸ್ಪರ್ಧೆ ತರಬೇತುದಾರರು ಏನು ಹೇಳುತ್ತಾರೆ ಎಂದರೆ,

ಮೀನುಗಾರರು ಈ ಕ್ರೀಡೆಗೆ ಬಂದರೆ ಅರ್ಧ ತರಬೇತಿ ಮೊದಲೇ ಮುಗಿದಿರುತ್ತದೆ. ರೂಲ್ಸ್ ಕಲಿಸುವುದಷ್ಟೇ ಬಾಕಿ ಎಂದು. ಸಮುದ್ರದೊಂದಿಗೆ ಬದುಕುವ ಕೌಶಲವನ್ನು ಸರಿಯಾಗಿ ಬಳಸಿಕೊಳ್ಳಬೇಕು.

ಸವಾಲುಗಳು

ಮೀನುಗಾರಿಕೆ ಸವಾಲುಗಳ ಬಗ್ಗೆ ನಾವು ಚರ್ಚಿಸುವುದಲ್ಲ. ಅಂಕೋಲಾ ಜನರನ್ನು ತೃಪ್ತಿ ಪಡಿಸುವುದು ಹೇಗೆ ಎನ್ನುವ ಸವಾಲು ವ್ಯವಸ್ಥೆಗೆ ಎದುರಾಗಬೇಕು. ಶಾಸಕ, ಸಂಸದರಿಗೆ ಬರಬೇಕು. ಮೀನುಗಾರರು ಮೀನು ಹಿಡಿಯಬೇಕು. ಉದ್ಯಮಿಗಳು ಅದೇ ಮೀನನ್ನು ಖರೀದಿಸಿ ಮೌಲ್ಯವರ್ಧನೆ ಮಾಡಬೇಕು. ಕಡಲತೀರವನ್ನು ನಾವು ಹೆಚ್ಚು ಹೆಚ್ಚು ಬಳಸಬೇಕು. ಆಗ ಯೋಜನೆಗಳ ಕಣ್ಣು ಕಡಿಮೆಯಾಗುತ್ತದೆ. ಸಮುದ್ರದ ತಾಜ ಮೀನು ತಿನ್ನುವ ನಾವು ಭಾಗ್ಯವಂತರು. ನಮ್ಮಲ್ಲಿ ಜಾತಿ ಭೇದ ಇಲ್ಲ, ಆಹಾರ ಬೇಧ ಇಲ್ಲ.

ಹಾರವಾಡ, ಕೇಣಿ, ಬೆಳಂಬಾರದ ಸಮುದ್ರ ತೀರದಿಂದ ಶುರುವಾಗುವ ನಮ್ಮ ಮೀನುಗಾರಿಕೆಯ ಆರ್ಥಿಕತೆ ಪ್ರತಿಯೊಬ್ಬರ ಅಡುಗೆ ಮನೆಯವರೆಗೂ ಬಂದು ನಾವು ತಿಂದು ಬಿಟ್ಟ ಮೀನಿನ ಮುಳ್ಳು ಬೆಕ್ಕು, ನಾಯಿಯ ಹೊಟ್ಟೆ ಸೇರುವವರೆಗೆ ಆರ್ಥಿಕತೆ ಇರುತ್ತದೆ. ಬೆಕ್ಕು, ನಾಯಿಗೆ ಮೀನಿಗಿಂತ ವಿಶೇಷ ಆಹಾರ ಇನ್ನೇನೂ ನಾವು ಹಾಕುವುದಿಲ್ಲ. ಮೀನುಗಾರಿಕೆ ಉದ್ಯೋಗ ಅಲ್ಲ; ಅದು ಬದುಕು. ನಮ್ಮ ಸಂಸ್ಕೃತಿ. ಅದಕ್ಕೆ ನಾವೆಲ್ಲರೂ ಬೆಂಗಾವಲಾಗಿ ಇದ್ದು ಸವಾಲು ಗೆಲ್ಲೋಣ.

ಧನ್ಯವಾದ

ಕವಿ


ಕವಿಯ ತಿಳಿಯಲು ಕವಿಗೆ ಹೊಳೆಯದು
ಹೊಳೆದುದಾಲಿಗೆ ಕವಿಜನ
ಕವಿಗೆ ಹೊಳೆದುದು ಕವಿಗೆ ತಿಳಿಯದು
ತಿಳಿದುದಾಲಿಗೆ ಕವಿಜನ
ಕವಿಯು ಕಾಣದ ಕವಿಯ ಕಂಡರು
ಭಲರೆ ಭಪ್ಪರೆ ಬಹುಜನ

ಕನಸು ನನಸಿನ ಕನಕ ಸೃಷ್ಟಿಯ
ಬೆನಕನಾಗಿಹೆ ಭವದಲಿ
ಘನತರದ ಸೌಂದರ ಶಾಲಿನಿ-
ಗನುವುಗೊಂಡಿಹೆ ಜಗದಲಿ
ಚಣ ಚಣಕೆ ಕಣಿಗೊಂಬ ಕರುಳಿನ
ಖಣಿಯ ಖಣಿ ಖಣಿಲಾಗಿಹೆ

ಪದುಳದಲ್ಲಿ ಪದ ಪದೆದು ನಾದದಿ
ವಿದಯ ಹೊಂದಿದೆ ಭಾವದಿ
ವಿದಿತ ವ್ಯಾಕರ್ಣಾದಿ ತೀರ್ಥರ
ವಿಧಿಬರಹ ಬದಿಗಿಟ್ಟಿಹೆ
ಮುದಿತ ಮಾತ್ರಾ ಮೈತ್ರಿ ಸಮುದಿತ
ಪದಗಳಾಗಿಹೆ ಹೃದಯದಿ


ಗುರುವು ಗತಿಗೊಡೆ ಪದಗಳೆಂಬವು
ಅರರೆ, ಬರುತಿವೆ ಭಾಗ್ಯದಿ
ಕರೆದು ಬರುತಿವೆ ಕವಿದು ಬರುತಿವೆ
ಮೊರೆದು ಬರುತಿವೆ ಮೋದದಿ
ಅರಿವಿಗರಿಯದ ಶಬ್ದ ಸೃಷ್ಟಿಯ
ಚಿತ್ರವನ ವೈಚಿತ್ರ್ಯದಿ

– ಸ. ಪ. ಗಾಂವಕರ
(ಪ್ರೇರಣೆ ಸಂಕಲನದಿಂದ)



ಉತ್ತರ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

ಅಂಕೋಲಾ ತಾಲ್ಲೂಕು ಕ.ಸಾ.ಪ. ಘಟಕ



ಅಂಕೋಲಾ ತಾಲ್ಲೂಕು ೧೧ನೇ ಕನ್ನಡ ಸಾಹಿತ್ಯ ಸಮ್ಮೇಳನ



ದಿನಾಂಕ : ೦೮ ಫೆಬ್ರವರಿ ೨೦೨೪. ಸ್ಥಳ : ನಾಡವರ ಸಮುದಾಯ ಭವನ, ಅಂಕೋಲಾ (ಉ.ಕ.)

ಪ್ರೊ. ಜಿ.ಎಚ್. ನಾಯಕ ವೇದಿಕೆ

ನೆನಪಿನ ದ್ವಾರಗಳು : ಡಾ. ಅವಿನಾಶ ತಿನೈಕರ, ಬಿ. ಹೊನ್ನಪ್ಪ ಭಾವಿಕೇರಿ, ವಿಠೋಬ ನಾಯಕ ವಂದಿಗೆ, ಗಣೇಶ ಶೆಟ್ಟಿ, ಕೆ.ಎಲ್. ನಾಯ್ಕ



ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು, ಕೇಂದ್ರ ಕಸಾಪ, ಬೆಂಗಳೂರು



ಪ್ರೊ. ನಾಗೇಶದೇವ ಅಂಕೋಲೆಕರ
ಸಮ್ಮೇಳನದ ಸರ್ವಾಧ್ಯಕ್ಷರು



ಶ್ರೀ ಬಿ.ಎನ್. ವಾಸರೆ
ಅಧ್ಯಕ್ಷರು, ಜಿಲ್ಲಾ ಕಸಾಪ, ಉತ್ತರ ಕನ್ನಡ



ಶ್ರೀ ಗೋಪಾಲಕೃಷ್ಣ ನಾಯಕ
ಅಧ್ಯಕ್ಷರು, ತಾಲ್ಲೂಕು ಕಸಾಪ, ಅಂಕೋಲಾ

ಕನ್ನಡ ಮನಸ್ಸುಗಳಿಗೆ ಆದರದ ಸ್ವಾಗತ

ಅಧ್ಯಕ್ಷರು
ಅಂಕೋಲಾ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು

"ಕನ್ನಡ ಸಾಹಿತ್ಯ ಸಮ್ಮೇಳನವು "ಕನ್ನಡಿಗರೆಲ್ಲರ ಹಬ್ಬ"
ಇಲ್ಲಿ ಎಲ್ಲ ಕನ್ನಡಿಗರೂ ಸಮಾನರು, ಎಲ್ಲರೂ ಸಮಾನ ಗೌರವಕ್ಕೆ ಪಾತ್ರರು"

೧

ಧ್ವಜಾರೋಹಣ

೦೮-೦೨-೨೦೨೪, ಗುರುವಾರ, ಬೆಳಗ್ಗೆ ೮-೩೦ ಗಂಟೆ

ರಾಷ್ಟ್ರ ಧ್ವಜಾರೋಹಣ : ಶ್ರೀ ಅನಂತ ಶಂಕರ, ತಹಶೀಲ್ದಾರರು, ಅಂಕೋಲಾ
ಪರಿಷತ್ತಿನ ಧ್ವಜಾರೋಹಣ : ಶ್ರೀ ಬಿ.ಎನ್. ವಾಸರೆ, ಅಧ್ಯಕ್ಷರು, ಜಿಲ್ಲಾ ಕಸಾಪ, ಉತ್ತರ ಕನ್ನಡ
ನಾಡ ಧ್ವಜಾರೋಹಣ : ಶ್ರೀ ಗೋಪಾಲಕೃಷ್ಣ ನಾಯಕ, ಅಧ್ಯಕ್ಷರು, ಕಸಾಪ, ಅಂಕೋಲಾ
ಗೌರವ ಉಪಸ್ಥಿತಿ : ಶ್ರೀ ಆರ್.ಟಿ. ಮಿರಾಶಿ, ಜಿ.ಪಂ. ಮಾಜಿ ಸದಸ್ಯರು
ಡಾ. ಸಂಜು ಟಿ. ನಾಯಕ, ಜಿಲ್ಲಾ ಕಮಾಂಡೆಂಟ್, ಗೃಹ ರಕ್ಷಕ ದಳ, ಉ.ಕ.
ಶ್ರೀ ವಿಠ್ಠಲದಾಸ ಕಾಮತ, ಅಧ್ಯಕ್ಷರು, ಕರ್ನಾಟಕ ಸಂಘ, ಅಂಕೋಲಾ
ಶ್ರೀ ಉಮೇಶ ನಾಯ್ಕ, ವಕೀಲರು, ಅಂಕೋಲಾ
ಶ್ರೀ ಉದಯ ನಾಯ್ಕ, ಅಧ್ಯಕ್ಷರು, ಕ.ರ.ವೇ, ಅಂಕೋಲಾ

ರಾಷ್ಟ್ರಗೀತೆ : ವಿ.ಕೆ. ಗರ್ಲ್ಸ್ ಹೈಸ್ಕೂಲ್ ವಿದ್ಯಾರ್ಥಿಗಳು
ಗೌರವ ರಕ್ಷೆ : ಶ್ರೀ ಜಿ.ಆರ್. ತಾಂಡೇಲ

ಸಮ್ಮೇಳನಾಧ್ಯಕ್ಷರ ಮೆರವಣಿಗೆ

ಬೆಳಗ್ಗೆ ೯ ಗಂಟೆ

ಮೆರವಣಿಗೆಗೆ ಚಾಲನೆ : ಶ್ರೀ ಭಾಸ್ಕರ ನಾರ್ವೇಕರ, ಅಧ್ಯಕ್ಷರು, ದಿ ಅಂಕೋಲಾ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ., ಅಂಕೋಲಾ
ಗೌರವ ಉಪಸ್ಥಿತಿ : ಶ್ರೀಮತಿ ಸವಿತಾ ಶಾಸ್ತ್ರೀಮಠ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಅಂಕೋಲಾ
ಶ್ರೀ ಕಾಳಪ್ಪ ಎನ್. ನಾಯಕ, ಹಿರಿಯ ಚಿಂತಕರು, ಅಂಕೋಲಾ
ಶ್ರೀಮತಿ ಸುಜಾತಾ ಗಾಂವಕಾರ, ಮಾಜಿ ಅಧ್ಯಕ್ಷರು, ತಾಲ್ಲೂಕು ಪಂಚಾಯತ, ಅಂಕೋಲಾ
ಶ್ರೀ ಜಿ.ಎಂ. ಶೆಟ್ಟಿ, ಜಿ.ಪಂ. ಮಾಜಿ ಸದಸ್ಯರು
ಶ್ರೀ ಜಿ.ಯು. ನಾಯಕ, ಅಧ್ಯಕ್ಷರು, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು, ಉ.ಕ.
ಶ್ರೀ ಬಿ.ಡಿ. ನಾಯ್ಕ, ವಕೀಲರು, ಅಂಕೋಲಾ
ಶ್ರೀ ಅರುಣ ಶೆಟ್ಟಿ, ಅಧ್ಯಕ್ಷರು, ಕಾರ್ಯನಿರತ ಪತ್ರಕರ್ತರ ಸಂಘ, ಅಂಕೋಲಾ
ಡಾ. ಪ್ರಕಾಶ ನಾಯಕ, ನಿಕಟಪೂರ್ವ ಅಧ್ಯಕ್ಷರು, ಕಸಾಪ, ಅಂಕೋಲಾ
ಶ್ರೀ ಗೋಪು ನಾಯಕ, ಅಧ್ಯಕ್ಷರು, ತಾಲ್ಲೂಕು ಯುವ ಒಕ್ಕೂಟ, ಅಂಕೋಲಾ
ಶ್ರೀ ಎಂ.ಎಂ. ಕರ್ಕಿಕರ, ನಿವೃತ್ತ ಶಿಕ್ಷಕರು

ಸ್ವಾಗತ : ಶ್ರೀ ರಾಜೇಂದ್ರ ಕೇಣಿ
ನಿರ್ವಹಣೆ : ಶ್ರೀ ಪ್ರಕಾಶ ಕುಂಜಿ
ವಂದನಾರ್ಪಣೆ : ಶ್ರೀ ಕೃಷ್ಣ ನಾಯ್ಕ

೨

ಉದ್ಘಾಟನಾ ಸಮಾರಂಭ

ಬೆಳಗ್ಗೆ ೧೦ ಗಂಟೆ

ಸ್ವಾಗತ : ಡಾ. ಮಹೇಶ ಜಿ. ಗೋಳಿಕಟ್ಟೆ, ಅಧ್ಯಕ್ಷರು, ಸ್ವಾಗತ ಸಮಿತಿ
ಪ್ರಾಸ್ತಾವಿಕ ಮಾತು : ಶ್ರೀ ಗೋಪಾಲಕೃಷ್ಣ ನಾಯಕ, ಅಧ್ಯಕ್ಷರು, ಕಸಾಪ, ಅಂಕೋಲಾ
ಆಶಯ ನುಡಿ : ಶ್ರೀ ಬಿ.ಎನ್. ವಾಸರೆ, ಅಧ್ಯಕ್ಷರು, ಕಸಾಪ, ಉ.ಕ.
ಉದ್ಘಾಟನೆ : ಶ್ರೀ ಶಾ.ಮಂ. ಕೃಷ್ಣರಾಯ, ಹಿರಿಯ ಸಾಹಿತಿಗಳು
ಸ್ಮರಣ ಸಂಚಿಕೆ ಬಿಡುಗಡೆ : ಶ್ರೀ ಸತೀಶ ಕೆ. ಸೈಲ್, ಮಾನ್ಯ ಶಾಸಕರು, ಕಾರವಾರ-ಅಂಕೋಲಾ ವಿಧಾನಸಭಾ ಕ್ಷೇತ್ರ
ಪುಸ್ತಕ ಮಳಿಗೆ ಉದ್ಘಾಟನೆ : ಶ್ರೀ ಗಂಗಾಧರ ಹಿರೇಗುತ್ತಿ, ಹಿರಿಯ ಪತ್ರಕರ್ತರು, ಕಾರವಾರ
ದ್ವಾರಗಳ ಉದ್ಘಾಟನೆ : ಶ್ರೀಮತಿ ತುಳಸಿ ಗೌಡ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು
ಧ್ವಜ ಹಸ್ತಾಂತರ : ಶ್ರೀಮತಿ ಹೊನ್ನಮ್ಮ ನಾಯಕ, ನಿಕಟಪೂರ್ವ ಸಮ್ಮೇಳನಾಧ್ಯಕ್ಷರು
ಮುಖ್ಯ ಅತಿಥಿಗಳು : ಶ್ರೀಮತಿ ಮಂಗಳಲಕ್ಷ್ಮಿ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅಂಕೋಲಾ
ಸಮ್ಮೇಳನಾಧ್ಯಕ್ಷರ ಭಾಷಣ : ಶ್ರೀ ನಾಗೇಶದೇವ ಅಂಕೋಲೆಕರ, ಹಿರಿಯ ಸಾಹಿತಿಗಳು, ಅಂಕೋಲಾ
ಗೌರವ ಉಪಸ್ಥಿತಿ : ಶ್ರೀ ಶಾಂತಾರಾಮ ನಾಯಕ, ಹಿರಿಯ ಸಾಹಿತಿಗಳು, ಹಿಚ್ಕಡ
ಶ್ರೀ ವಿಷ್ಣು ನಾಯ್ಕ, ಹಿರಿಯ ಸಾಹಿತಿಗಳು
ಪ್ರೊ. ಮೋಹನ ಹಬ್ಬು, ಹಿಂದಿನ ಸಮ್ಮೇಳನಾಧ್ಯಕ್ಷರು
ಡಾ. ರಾಮಕೃಷ್ಣ ಗುಂದಿ, ಹಿಂದಿನ ಸಮ್ಮೇಳನಾಧ್ಯಕ್ಷರು
ಶ್ರೀ ಎನ್.ವಿ. ನಾಯಕ, ಭಾವಿಕೇರಿ, ಹಿಂದಿನ ಸಮ್ಮೇಳನಾಧ್ಯಕ್ಷರು
ಶ್ರೀ ವಿಠ್ಠಲ ಗಾಂವಕಾರ, ಹಿಂದಿನ ಸಮ್ಮೇಳನಾಧ್ಯಕ್ಷರು
ಶ್ರೀ ನಾಗೇಂದ್ರ ನಾಯಕ, ತೊರ್ಕೆ, ಹಿಂದಿನ ಸಮ್ಮೇಳನಾಧ್ಯಕ್ಷರು
ಶ್ರೀ ಪಿ.ಆರ್. ನಾಯ್ಕ, ಗೌರವ ಕಾರ್ಯದರ್ಶಿ, ಕ.ಸಾ.ಪ., ಉ.ಕ.
ಶ್ರೀ ಜಾರ್ಜ್ ಫರ್ನಾಂಡೀಸ್, ಗೌರವ ಕಾರ್ಯದರ್ಶಿ, ಕ.ಸಾ.ಪ., ಉ.ಕ.
ಶ್ರೀ ಮುರ್ತುಜಾ ಹುಸೇನ್ ಆನೆಹೊಸೂರ, ಗೌರವ ಕೋಶಾಧ್ಯಕ್ಷರು, ಕ.ಸಾ.ಪ., ಉ.ಕ.
ಶ್ರೀ ಸಂತೋಷ ಶೆಟ್ಟಿ, ಪೊಲೀಸ್ ನಿರೀಕ್ಷಕರು, ಅಂಕೋಲಾ
ಶ್ರೀ ಸುರೇಶ ನಾಯಕ, ಉದ್ಯಮಿಗಳು, ಅಲಗೇರಿ
ಶ್ರೀ ಬಾಲಚಂದ್ರ ಎನ್. ನಾಯಕ, ಅಧ್ಯಕ್ಷರು, ಸ.ನೌ. ಸಂಘ
ಶ್ರೀ ಜಗದೀಶ ಜಿ. ನಾಯಕ, ಅಧ್ಯಕ್ಷರು, ಪ್ರಾ.ಶಾ.ಶಿ. ಸಂಘ
ಶ್ರೀ ಮೋಹನ ನಾಯಕ, ಅಧ್ಯಕ್ಷರು, ಪ್ರೌ.ಶಾ.ಶಿ. ಸಂಘ

ಸಮ್ಮೇಳನಾಧ್ಯಕ್ಷರ ಪರಿಚಯ : ಡಾ. ಪುಷ್ಪಾ ನಾಯ್ಕ
ನಾಡಗೀತೆ : ವಿ.ಕೆ. ಗರ್ಲ್ಸ್ ಹೈಸ್ಕೂಲ್ ವಿದ್ಯಾರ್ಥಿಗಳು
ನಿರೂಪಣೆ : ಶ್ರೀ ಗಣಪತಿ ಎಚ್. ನಾಯಕ
ವಂದನಾರ್ಪಣೆ : ಶ್ರೀ ಜಗದೀಶ ಜಿ. ನಾಯಕ

೩

ಗೋಷ್ಠಿ ೧

ವಿಚಾರ ಗೋಷ್ಠಿ

ಮಧ್ಯಾಹ್ನ ೧೨ ಗಂಟೆ

ಅಧ್ಯಕ್ಷತೆ : ಪ್ರೊ. ಶ್ರೀಧರ ನಾಯಕ, ನಿವೃತ್ತ ಉಪನ್ಯಾಸಕರು
ಆಶಯ ನುಡಿ : ಶ್ರೀ ರವೀಂದ್ರ ಕೇಣಿ, ನಿವೃತ್ತ ಪ್ರಾಚಾರ್ಯರು, ಅಂಕೋಲಾ

ಅಂಕೋಲಾ ತಾಲ್ಲೂಕಿನ ಪ್ರಸ್ತಾವಿತ ಬೃಹತ್ ಯೋಜನೆಗಳು ಮತ್ತು ಸ್ಥಳೀಯರಿಗೆ ಉದ್ಯೋಗ :
ಶ್ರೀಮತಿ ಅಕ್ಷತಾ ಕೃಷ್ಣಮೂರ್ತಿ, ಲೇಖಕಿ

ಅಂಕೋಲಾ ತಾಲೂಕಿನ ಮೀನುಗಾರಿಕೆ ಅವಕಾಶ ಮತ್ತು ಸವಾಲುಗಳು :
ಶ್ರೀ ಪ್ರಮೋದ ಹರಿಕಾಂತ, ಪತ್ರಕರ್ತರು

ಸ್ವಾಗತ : ಶ್ರೀ ರಾಜೀವ ಜಿ. ನಾಯಕ
ನಿರ್ವಹಣೆ : ಶ್ರೀ ಎನ್.ವಿ. ರಾಠೋಡ
ವಂದನಾರ್ಪಣೆ : ಶ್ರೀ ಎಂ.ಬಿ. ಆಗೇರ

ಮಧ್ಯಾಹ್ನ ೧.೧೫ ಗಂಟೆ :
ಊಟದ ವಿರಾಮ

ಗೋಷ್ಠಿ ೨

ಸರ್ವಾಧ್ಯಕ್ಷರ ಬದುಕು ಬರಹ

ಮಧ್ಯಾಹ್ನ ೨ ಗಂಟೆ

ಸರ್ವಾಧ್ಯಕ್ಷರ ಬದುಕು ಬರಹದ ಕುರಿತು ಮಾತನಾಡುವವರು :
ಶ್ರೀ ರಾಮಮೂರ್ತಿ ನಾಯಕ, ಉಪನ್ಯಾಸಕರು
ಶ್ರೀ ಫಾಲ್ಗುಣ ಗೌಡ, ಪ್ರಾಚಾರ್ಯರು, ಪಿ.ಎಂ. ಪ.ಪೂ. ಕಾಲೇಜು

ಸ್ವಾಗತ : ಶ್ರೀ ಮಹಾಂತೇಶ ರೇವಡಿ
ನಿರ್ವಹಣೆ : ಶ್ರೀ ಜಯಶೀಲ ಆಗೇರ
ವಂದನಾರ್ಪಣೆ : ಶ್ರೀ ತಿಮ್ಮಣ್ಣ ಭಟ್

೪

ಗೋಷ್ಠಿ ೩

ಕವಿ ಗೋಷ್ಠಿ

ಮಧ್ಯಾಹ್ನ ೩.೩೦ ಗಂಟೆ

ಅಧ್ಯಕ್ಷತೆ : ಪ್ರೊ. ಮನೋಹರ ನಾಯಕ, ಸಾಹಿತಿಗಳು, ಜಮಗೋಡ

ಆಶಯ ನುಡಿ : ಡಾ. ವಿನಾಯಕ ಹೆಗಡೆ, ಪ್ರಾಚಾರ್ಯರು, ಕೆ.ಎಲ್.ಇ. ಬಿ.ಇಡಿ. ಕಾಲೇಜು

ಭಾಗವಹಿಸುವ ಕವಿಗಳು : ಶ್ರೀ ರಮೇಶ ವಿ. ನಾಯಕ
ಶ್ರೀ ಮೋಹನ ಗೌಡ, ಹೆಗ್ರೆ
ಶ್ರೀ ದಿನಕರ ಎನ್. ನಾಯಕ
ಡಾ॥ ಅರ್ಚನಾ ನಾಯಕ
ಶ್ರೀಮತಿ ಲಕ್ಷ್ಮಿ ನಾಯಕ
ಶ್ರೀ ಅರುಣ ಗೌಡ, ಜೂಗ
ಶ್ರೀಮತಿ ಸುವರ್ಣ ವಿ. ಶೆಟ್ಟಿ
ಶ್ರೀ ಸಾತು ಗೌಡ, ಅಂಬಾರಕೊಡ್ಲ
ಕು. ಚೈತ್ರಾ ಗಜಾನನ ಆಚಾರಿ
ಶ್ರೀ ತಿಮ್ಮಪ್ಪ ಗೌಡ, ಜೂಗ
ಕು. ದೀಪಾ ಜಟ್ಟಿ ನಾಯ್ಕ
ಕು. ಭಾವನಾ ನಾಯಕ
ಶ್ರೀ ಜೆ.ಆರ್. ತಾಂಡೇಲ
ಶ್ರೀ ರಾಮಚಂದ್ರ ಶೆಟ್ಟಿ
ಶ್ರೀ ರಾಜೇಶ ನಾಯಕ, ಸೂರ್ವೆ
ಶ್ರೀ ಶ್ರೀಧರ ನಾಯ್ಕ
ಶ್ರೀಮತಿ ಚಂದ್ರಕಲಾ ನಾಯಕ
ಶ್ರೀಮತಿ ರಮ್ಯಾ ಹೆಗಡೆ
ಕು. ಹರ್ಷಾ ಎಂ.ಎಚ್.
ಶ್ರೀಮತಿ ಸಂಧ್ಯಾ ನಾಯ್ಕ
ಶ್ರೀ ನಿತಿನ್ ನಾಯ್ಕ
ಶ್ರೀ ನಿಶಾಂತ ಆಗೇರ
ಶ್ರೀಮತಿ ಪಲ್ಲವಿ ಶೆಟ್ಟಿ
ಶ್ರೀ ನವೀನ ಭಟ್ಟ, ಶೇವಕಾರ
ಶ್ರೀ ನಾಗೇಶ ಆಗೇರ, ಅಗ್ಗರಗೋಣ
ಶ್ರೀಮತಿ ಭಾರತಿ ನಾಯಕ
ಶ್ರೀ ಸಾಯಿನಾಥ ಹನುಮಂತ ನಾಯ್ಕ

ಸ್ವಾಗತ : ಶ್ರೀ ಮಾರುತಿ ಹರಿಕಂತ್ರ
ನಿರ್ವಹಣೆ : ಶ್ರೀ ಸುಜಿತ್ ನಾಯ್ಕ
ವಂದನಾರ್ಪಣೆ : ಶ್ರೀ ರಫೀಕ್ ಶೇಖ್

೫

ಸನ್ಮಾನ ಹಾಗೂ ಸಮಾರೋಪ ಸಮಾರಂಭ

ಸಂಜೆ ೫ ಗಂಟೆ

ಅಧ್ಯಕ್ಷತೆ : ಶ್ರೀ ಬಿ.ಎನ್. ವಾಸರೆ, ಅಧ್ಯಕ್ಷರು, ಜಿಲ್ಲಾ ಕಸಾಪ, ಉತ್ತರ ಕನ್ನಡ

ಸಮಾರೋಪ ಭಾಷಣ : ಡಾ. ವಿಕ್ರಮ ವಿಸಾಜಿ
ಪ್ರಾಧ್ಯಾಪಕರು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ಸಮ್ಮೇಳನಾಧ್ಯಕ್ಷರ ನುಡಿ : ಶ್ರೀ ನಾಗೇಶದೇವ ಅಂಕೋಲೆಕರ, ಹಿರಿಯ ಸಾಹಿತಿಗಳು, ಅಂಕೋಲಾ

ನಿರ್ಣಯಗಳ ಮಂಡನೆ : ಡಾ. ಸಿದ್ಧಲಿಂಗಸ್ವಾಮಿ ವಸ್ತ್ರದ, ಕೋಶಾಧ್ಯಕ್ಷರು, ಕಸಾಪ, ಅಂಕೋಲಾ

ಅತಿಥಿಗಳು : ಶ್ರೀ ಗಣಪತಿ ಉಳ್ವೇಕರ, ವಿಧಾನ ಪರಿಷತ್ ಸದಸ್ಯರು
ಶ್ರೀ ಆನಂದ ಅಸ್ನೋಟಿಕರ, ಮಾಜಿ ಸಚಿವರು
ಶ್ರೀಮತಿ ರೂಪಾಲಿ ನಾಯ್ಕ
ಮಾಜಿ ಶಾಸಕರು, ಕಾರವಾರ–ಅಂಕೋಲಾ ವಿಧಾನಸಭಾ ಕ್ಷೇತ್ರ
ಶ್ರೀ ಹನುಮಂತ ಗೌಡ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ನಾಟಿ ವೈದ್ಯರು

ಸನ್ಮಾನಿತರು : ಶ್ರೀ ಜನಾರ್ದನ ನಾಯಕ (ಸಾಹಿತ್ಯ)
ಶ್ರೀ ಗಣಪತಿ ಓನಮ್ ಶೆಟ್ಟಿ (ಸಂಘ ಸಂಸ್ಥೆ)
ಶ್ರೀ ಥಾಮಸ್ ಜಾನ್ (ಸಮಾಜ ಸೇವೆ)
ಶ್ರೀಮತಿ ದೇವಿ ಗೌಡ (ನಾಟಿ ವೈದ್ಯೆ)
ಶ್ರೀ ರಾಘವೇಂದ್ರ ನಾಯ್ಕ (ಸಾವಯವ ಕೃಷಿ)
ಶ್ರೀ ಶಶಿಕಾಂತ ಹೇಮು ನಾಯ್ಕ (ವೃತ್ತಿಪರ)
ಶ್ರೀ ನಾಗಪ್ಪ ಗೌಡ, ಬೆಳಂಬಾರ (ನಾಟಿ ವೈದ್ಯ)
ಶ್ರೀ ವಿಜಯಕುಮಾರ ನಾಯ್ಕ (ಸಮಾಜ ಸೇವೆ)
ಶ್ರೀ ಸುಭಾಷ ಕಾರೇಬೈಲ್ (ಪತ್ರಕರ್ತ)
ಶ್ರೀ ಉದಯ ರಾಮಚಂದ್ರ ನಾಯ್ಕ (ಸಮಾಜ ಸೇವೆ)
ಶ್ರೀ ಇಂದ್ರಕುಮಾರ ಗೌಡ (ಯಕ್ಷಗಾನ)
ಶ್ರೀ ದಿನೇಶ ಮೇತ್ರಿ (ಕಲಾಕಾರ)
ಶ್ರೀ ರಾಘವೇಂದ್ರ ಭಟ್ (ಶ್ವಾನ ಸಂಗೋಪನೆ)
ಶ್ರೀ ಎನ್.ಯು. ಷಹಾ (ಸಮಾಜ ಸೇವೆ)

ಸ್ವಾಗತ : ಶ್ರೀ ಮಹೇಶ ಬಿ. ನಾಯಕ
ಅತಿಥಿ ಪರಿಚಯ : ಶ್ರೀ ಮಂಜುನಾಥ ಇಟಗಿ
ನಿರ್ವಹಣೆ : ಶ್ರೀಮತಿ ವೀಣಾ ಹೆಗಡೆ
ವಂದನಾರ್ಪಣೆ : ಶ್ರೀ ರಾಘು ಕಾಕರಮಠ

೬

ಸಾಂಸ್ಕೃತಿಕ ಕಾರ್ಯಕ್ರಮ

ವಿವಿಧ ತಂಡಗಳಿಂದ ಕಲಾ ಪ್ರದರ್ಶನ.

ಸಂಜೆ ೭ರಿಂದ

ಸ್ವಾಗತ : ಶ್ರೀ ನಾಗರಾಜ ಜಾಂಬಳೇಕರ
ನಿರೂಪಣೆ : ಶ್ರೀ ಕೆ. ರಮೇಶ
ವಂದನಾರ್ಪಣೆ : ಶ್ರೀ ಅಕ್ಷಯ ನಾಯ್ಕ

ಸರ್ವರಿಗೂ ಸ್ವಾಗತ ಕೋರುವವರು

ಸ್ವಾಗತ ಸಮಿತಿ

ಗೌರವಾಧ್ಯಕ್ಷರು : ಶ್ರೀ ಸತೀಶ ಸೈಲ್, ಮಾನ್ಯ ಶಾಸಕರು. **ಅಧ್ಯಕ್ಷರು** : ಡಾ. ಮಹೇಶ ಗೋಳಿಕಟ್ಟೆ,
ಪ್ರಧಾನ ಕಾರ್ಯದರ್ಶಿ : ಗೋಪಾಲಕೃಷ್ಣ ಜಿ. ನಾಯಕ. **ಸಹ ಕಾರ್ಯದರ್ಶಿಗಳು** : ಜಗದೀಶ ನಾಯಕ, ಜಿ.ಆರ್. ತಾಂಡೇಲ
ಖಜಾಂಚಿ : ಡಾ. ಎಸ್.ವಿ. ವಸ್ತ್ರದ. **ಸಂಘಟನಾ ಕಾರ್ಯದರ್ಶಿಗಳು** : ಎಂ.ಬಿ. ಆಗೇರ, ಸುಜೀತ ನಾಯ್ಕ

ಉಪಾಧ್ಯಕ್ಷರು : ಮೋಹನ ಹಬ್ಬು, ಡಾ॥ ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ, ರವೀಂದ್ರ ಕೇಣಿ, ಅಧ್ಯಕ್ಷರು, ದಿನಕರ ವೇದಿಕೆ,
ವಸಂತ ನಾಯಕ, ಅಧ್ಯಕ್ಷರು, ಶ್ರೀರಾಮ ಪರಿಸರ ಕ್ರೆಡಿಟ್ ಸೊಸೈಟಿ, ಅಂಕೋಲಾ
ರಾಘವೇಂದ್ರ ಡಿ. ನಾಯಕ, ಅಧ್ಯಕ್ಷರು, ಗೋದಾವರಿ ಕ್ರೆಡಿಟ್ ಸೊಸೈಟಿ, ಅಂಕೋಲಾ
ಸವಿತಾ ಶಾಸ್ತ್ರಿಮಠ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಂತೋಷ ಶೆಟ್ಟಿ, ಪೊಲೀಸ್ ನಿರೀಕ್ಷಕರು
ನಾಗೇಶ ನಾಯ್ಕ (ಆಚಾ), ಅಧ್ಯಕ್ಷರು. ನಾಮಧಾರಿ ಆರ್ಯ ಈಡಿಗ ಅಭಿವೃದ್ಧಿ ಸಂಘ. ಅಂಕೋಲಾ (ರಿ)
ಬಾಲಚಂದ್ರ ನಾಯಕ, ಅಧ್ಯಕ್ಷರು, ಸ.ನೌ.ಸಂ. ಅಂಕೋಲಾ ತಾಲೂಕು, ವಿಷ್ಣು ನಾಯ್ಕ, ಹಿರಿಯ ಸಾಹಿತಿಗಳು
ಡಾ. ಆರ್.ಜಿ. ಗುಂದಿ, ಹಿರಿಯ ಸಾಹಿತಿಗಳು, ಮಂಗಲದಾಸ ಕಾಮತ, ಉದ್ಯಮಿಗಳು, ಅಂಕೋಲಾ
ರೊ. ಶ್ರೀಧರ ನಾಯ್ಕ, ಉದ್ಯಮಿಗಳು, ಬೊಗ್ರಿಗದ್ದೆ, ಜಾತವೇದ ಡಿ. ನಾಯಕ, ಅರಸ್ ಕನ್‌ಸ್ಟ್ರಕ್ಷನ್ & ಮಾರ್ಕೆಟಿಂಗ್
ನಾಗಾನಂದ ಬಂಟ, ಅಧ್ಯಕ್ಷರು, ಜಿಲ್ಲಾ ನೋಟರಿ ಸಂಘ

ಸದಸ್ಯರು : ಸಂದೀಪ ನಾಯಕ, ತಿಮ್ಮಣ್ಣ ಭಟ್, ಕೃಷ್ಣಕುಮಾರ ಮಹಾಲೆ, ಗೋಪಾಲಕೃಷ್ಣ ಸಿ. ನಾಯ್ಕ, ರವೀಂದ್ರ ಎನ್. ಶೆಟ್ಟಿ,
ಶ್ರೀಧರ ಎಸ್. ನಾಯ್ಕ, ಉಲ್ಲಾಸ ಹುದ್ದಾರ, ಗಣಪತಿ ನಾಯಕ ಶೀಳ್ಯ, ಶಾಂತಾರಾಮ ನಾಯಕ, ಅನುರಾಧಾ ನಾಯ್ಕ

ವೇದಿಕೆ ಸಮಿತಿ : ಡಾ. ವಿನಾಯಕ ಹೆಗಡೆ, ಡಾ. ಪುಷ್ಪಾ ನಾಯ್ಕ, ರಾಜು ಎಚ್. ನಾಯಕ

ಊಟೋಪಚಾರ ಸಮಿತಿ : ವಿಜಯ ನಾಯಕ, ರಮೇಶ ನಾಯಕ, ಜಯರಾಮ ಎಚ್. ನಾಯಕ,
ದಿವಾಕರ ದೇವನಮನೆ, ಆನಂದು ವಿ. ನಾಯಕ, ರಾಮನಾಥ ನಾಯ್ಕ

ಸಾಂಸ್ಕೃತಿಕ ಸಮಿತಿ : ನಾಗರಾಜ ಜಾಂಬಳೇಕರ, ಸುಜೀತ ನಾಯ್ಕ, ಕೆ. ರಮೇಶ

ಪ್ರಚಾರ ಸಮಿತಿ : ಅರುಣ ಶೆಟ್ಟಿ, ವಿದ್ಯಾಧರ ಮೊರಬಾ, ನಾಗರಾಜ ಮಂಜಗುಣಿ, ರಾಘು ಕಾಕರಮಠ,
ವಾಸುದೇವ ಗುನಗಾ, ವಿಠ್ಠಲದಾಸ ಕಾಮತ, ಸುಭಾಷ ಕಾರೇಬೈಲ್, ಕೆ. ರಮೇಶ, ಅಕ್ಷಯ ನಾಯ್ಕ,
ನಾಗರಾಜ ಜಾಂಬಳೇಕರ, ಮಾರುತಿ ಹರಿಕಂತ್ರ, ವಿಲಾಸ ನಾಯಕ

ಮೆರವಣಿಗೆ, ಧ್ವಜ ನಿರ್ವಹಣೆ ಸಮಿತಿ : ಪ್ರಕಾಶ ಕುಂಜಿ, ಶ್ರೀಧರ ನಾಯ್ಕ, ಜಿ.ಆರ್. ನಾಯಕ, ಎಂ.ಎಂ. ಕರ್ಕಿಕರ,
ರಾಜೇಂದ್ರ ಕೇಣಿ, ಗಣಪತಿ ಗಾಂವಕರ

ಆರೋಗ್ಯ ಸಮಿತಿ : ಡಾ॥ ಅರ್ಚನಾ ನಾಯಕ, ತೃಪ್ತಿ ನಾಯ್ಕ, ತಿಮ್ಮಣ್ಣ ನಾಯಕ

ಸ್ಮರಣ ಸಂಚಿಕೆ ಸಮಿತಿ : ಶ್ಯಾಮಸುಂದರ ಗೌಡ, ಜೆ. ಪ್ರೇಮಾನಂದ, ನಿರುಪಮಾ ಅಂಕೋಲೆಕರ

ಸನ್ಮಾನ ಸಮಿತಿ : ಎನ್.ವಿ. ರಾಠೋಡ, ಎಂ.ಬಿ. ಆಗೇರ, ಜಯಶೀಲ ಆಗೇರ, ರಫೀಕ ಶೇಖ, ಮಂಜುನಾಥ ಇಟಗಿ

೭

ಸರ್ವರಿಗೂ ಸ್ವಾಗತ ಕೋರುವವರು

ಕೇಂದ್ರ ಕಸಾಪ ಸಮಿತಿ ಬೆಂಗಳೂರು

ನಾಡೋಜ ಡಾ. ಮಹೇಶ ಜೋಶಿ ಅಧ್ಯಕ್ಷರು	ನೇ.ಭ. ರಾಮಲಿಂಗ ಶೆಟ್ಟಿ ಗೌರವ ಕಾರ್ಯದರ್ಶಿ	ಡಾ. ಪದ್ಮಿನಿ ನಾಗರಾಜ ಗೌರವ ಕಾರ್ಯದರ್ಶಿ	ಡಾ. ಬಿ.ಎಂ. ಪಟೇಲಪಾಂಡು ಗೌರವ ಕೋಶಾಧ್ಯಕ್ಷರು

ಜಿಲ್ಲಾ ಕಸಾಪ ಸಮಿತಿ ಉತ್ತರ ಕನ್ನಡ

ಬಿ.ಎನ್. ವಾಸರೆ ಅಧ್ಯಕ್ಷರು	ಪಿ.ಆರ್. ನಾಯ್ಕ ಗೌರವ ಕಾರ್ಯದರ್ಶಿ	ಜಾರ್ಜ್ ಫರ್ನಾಂಡೀಸ್ ಗೌರವ ಕಾರ್ಯದರ್ಶಿ	ಮುರ್ತುಜಾ ಹುಸೇನ, ಆನೆಹೊಸೂರ ಗೌರವ ಕೋಶಾಧ್ಯಕ್ಷರು

ತಾಲ್ಲೂಕು ಕಸಾಪ ಸಮಿತಿ ಅಂಕೋಲಾ

ಗೋಪಾಲಕೃಷ್ಣ ನಾಯಕ ಅಧ್ಯಕ್ಷರು	ಜಗದೀಶ ನಾಯಕ ಗೌರವ ಕಾರ್ಯದರ್ಶಿ	ಜಿ.ಆರ್. ತಾಂಡೇಲ ಗೌರವ ಕಾರ್ಯದರ್ಶಿ	ಡಾ. ಎಸ್.ವಿ. ವಸ್ತ್ರದ ಗೌರವ ಕೋಶಾಧ್ಯಕ್ಷರು

ತಾಲ್ಲೂಕು ಕಾರ್ಯಕಾರಿ ಸಮಿತಿ ಸದಸ್ಯರು

ಮಂಗಳಲಕ್ಷ್ಮಿ ಎಂ. ಪಾಟೀಲ	ಡಾ. ವಿನಾಯಕ ಹೆಗಡೆ	ಪ್ರಕಾಶ ರಾಮಾ ಕುಂಜಿ	ಗೌರೀಶ ನಾಯಕ
ರಫೀಕ್ ಶೇಖ್	ಸುಜೀತ ಎನ್. ನಾಯ್ಕ	ಮಹಾಂತೇಶ ರೇವಡಿ	ಡಾ॥ ಅರ್ಚನಾ ನಾಯಕ
ಡಾ. ಪುಷ್ಪಾ ನಾಯ್ಕ	ರಾಘು ಕಾಕರಮಠ	ಎನ್.ವಿ. ರಾಠೋಡ	ರಾಜೇಂದ್ರ ಕೇಣಿ
ಡಾ. ಪ್ರಕಾಶ ಬಿ. ನಾಯಕ	ಬಾಲಚಂದ್ರ ಎನ್. ನಾಯಕ	ಅರುಣ ಶೆಟ್ಟಿ	ಎಂ.ಬಿ. ಆಗೇರ



ಬನ್ನಿ, ತಮಗೆಲ್ಲರಿಗೂ ಆದರದ ಸ್ವಾಗತ

೮

ಆಮಂತ್ರಣ ಗ್ರಾಫಿಕ್, ಅಂಕೋಲಾ

ಸಮ್ಮೇಳನದ ವರದಿ

ಆ ದಿನ, 08 ಫೆಬ್ರುವರಿ, 2024, ಅಂಕೋಲೆಯ ಸಾಹಿತ್ಯ ಚರಿತ್ರೆಯಲ್ಲಿ ತೆರೆದುಕೊಂಡ ಮತ್ತೊಂದು ಸ್ವರ್ಣಪುಟ. ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಅಂಕೋಲಾ ತಾಲೂಕಿನ ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನ ಅಂದು ಜರುಗಿತು. ಅಂಕೋಲೆಯ ಸಾಹಿತಿಗಳ, ಸಾಹಿತ್ಯಾಭಿಮಾನಿಗಳ ನಿರಂತರ ಸಾಹಿತ್ಯಿಕ ಪರಿಕ್ರಮಣ ಒಂದು ಚಾರಿತ್ರಿಕ ಮೈಲುಗಲ್ಲನ್ನು ತಲುಪಿದ ದಿನ. ಅಂಕೋಲಾ ತಾಲೂಕಾ ಸಾಹಿತ್ಯ ಪರಿಷತ್ ಘಟಕದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಒಂದು ತಿಂಗಳ ಶ್ರಮ ಅಂದು ಸಾರ್ಥಕತೆ ಪಡೆಯಿತು. ಅಂಕೋಲೆಯ ಜನಮಾನಸದಲ್ಲಿ ಅಚ್ಚಳಿಯದ ಪುಟವಾಗಿ ಆ ಗುರುವಾರ ದಾಖಲುಗೊಂಡಿತು.

ಅಂದು ಮುಂಜಾನೆ ಶುಭ್ರ ನೀಲಕಾಶದಲ್ಲಿ ದಿನಮಣಿಯು ಮೇಲೇರಿ ಬರುತ್ತಿದ್ದಂತೆಯೇ ಸಮ್ಮೇಳನಾಂಗಣಕ್ಕೆ ಆಗಮಿಸಿದ ಸಮ್ಮೇಳನದ ಸರ್ವಾಧ್ಯಕ್ಷ, ಅಂಕೋಲೆಯ ಹಿರಿಯ ಕವಿ ಪ್ರೊ. ನಾಗೇಶದೇವ ಅಂಕೋಲೆಕರರನ್ನು ಸ್ವಾಗತ ಸಮಿತಿಯ ಅಧ್ಯಕ್ಷ ಡಾ. ಮಹೇಶ ಗೋಳಿಕಟ್ಟೆಯವರ ಹಿರಿತನದಲ್ಲಿ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ತದನಂತರದಲ್ಲಿ ಕ.ಸಾ.ಪ. ಜಿಲ್ಲಾಧ್ಯಕ್ಷ ಶ್ರೀ ಬಿ. ಎನ್. ವಾಸರೆ, ಸಮ್ಮೇಳನದ ಉದ್ಘಾಟಕರಾಗಿ ಬಂದ ಶ್ರೀ ಶಾ.ಮಂ. ಕೃಷ್ಣರಾಯರು, ತಹಶೀಲ್ದಾರ ಶ್ರೀ ಬಿ. ಅನಂತ ಶಂಕರ ಹಾಗೂ ಅಂಕೋಲೆಯ ಹಿರಿ–ಕಿರಿಯ ಸಾಹಿತಿಗಳು, ಸಾಹಿತ್ಯಾಭಿಮಾನಿಗಳು ಆಗಮಿಸಿದರು. ಇವರನ್ನೆಲ್ಲ ಪಂಚವಾಲಗದವರು ವಾದನ ಮತ್ತು ನರ್ತನಗಳೊಂದಿಗೆ ಸ್ವಾಗತಿಸಿ ಕರೆತಂದರು. ಈ ಎಲ್ಲ ಅತಿಥಿ ಗಣ್ಯರ ಸಮ್ಮುಖದಲ್ಲಿ ಗೌರವದ ದ್ಯೋತಕವಾಗಿ ತಹಶೀಲ್ದಾರ ಬಿ. ಅನಂತ ಶಂಕರ ಅವರು ರಾಷ್ಟ್ರಧ್ವಜವನ್ನು ಉ.ಕ. ಜಿಲ್ಲಾ ಕ.ಸಾ.ಪ. ಅಧ್ಯಕ್ಷ ವಾಸರೆಯವರು ಕನ್ನಡ ಸಾಹಿತ್ಯ ಪರಿಷತ್ತಿನ ಧ್ವಜವನ್ನೂ ಅಂಕೋಲಾ ಘಟಕದ ಅಧ್ಯಕ್ಷ ಗೋಪಾಲಕೃಷ್ಣ ನಾಯಕರು ಕನ್ನಡ ಧ್ವಜಾರೋಹಣ ಮಾಡಿದರು. ನೆರೆದಿದ್ದ ಕನ್ನಡಾಭಿಮಾನಿಗಳ ಹರ್ಷೋದ್ಗಾರದೊಂದಿಗೆ ಕನ್ನಡ ಧ್ವಜ ಬಾನಂಗಳದಲ್ಲಿ ಫಡಫಡಿಸಿತು.

ಸಮ್ಮೇಳನಕ್ಕೆ ಸ್ಥಳಾವಕಾಶ ನೀಡಿ ಅಂಕೋಲೆಯ ನಾಡವರ ಸಮುದಾಯ ಭವನದ ಆವರಣವು ಇನ್ನೊಂದು ಶಾಶ್ವತ ನೆನಪಿಗೆ ಭೂಮಿಕೆಯನ್ನೊದಗಿಸಿದಂತಾಯಿತು. ಸಮ್ಮೇಳನಕ್ಕಾಗಿ ಸಿದ್ಧಗೊಂಡ ಸಭಾಂಗಣವು ಆ ಸುಂದರ ಮುಂಜಾವಿನಲ್ಲಿ ನವವಧುವಿನಂತೆ ಕಂಗೊಳಿಸುತ್ತಿತ್ತು. ದಿ. ಡಾ॥ ಅವಿನಾಶ ತಿನ್ನೈಕರ, ದಿ. ಬಿ. ಹೊನ್ನಪ್ಪ ಭಾವಿಕೇರಿ, ದಿ. ವಿಠೋಬ ನಾಯಕ ವಂದಿಗೆ, ದಿ. ಗಣೇಶ ಶೆಟ್ಟಿ, ದಿ. ಕೆ. ಎಲ್. ನಾಯ್ಕ ಅವರ ನೆನಪಿನ ದ್ವಾರಗಳನ್ನು ಶ್ರೀಮತಿ ಮಂಗಳಲಕ್ಷ್ಮೀ ಪಾಟೀಲ ಉದ್ಘಾಟಿಸಿದರು. ಆ ನೆನಪಿನ ದ್ವಾರಗಳು ನಮ್ಮಿಂದ ಅಗಲಿಹೋಗಿರುವ ಆ ಸಾಹಿತ್ಯ ಚೇತನಗಳ ನೆನಪು ತರಿಸಿ ಕಂಗಳು ಹನಿಸುವಂತೆ ಮಾಡುತ್ತಿದ್ದವು.

ಧ್ವಜಾರೋಹಣದ ನಂತರ ದಿ ಅಂಕೋಲಾ ಅರ್ಬನ್ ಕೋ.ಆಪರೇಟಿವ್ ಬ್ಯಾಂಕ್ ಲಿ. ಅಧ್ಯಕ್ಷ ಭಾಸ್ಕರ ಕೆ. ನಾರ್ವೇಕರ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಚಾಲನೆ ನೀಡಿದರು. ಅಂಕೋಲೆ ನಗರದ ಪ್ರಮುಖ ರಸ್ತೆಗಳ ಮೂಲಕ ಸಾಗಿದ ಸಾಹಿತ್ಯದ ರಥ ಸಮ್ಮೇಳನಾಂಗಣಕ್ಕೆ ಬಂದು ತಲುಪಿತು.

ಸಾಲಂಕೃತವಾಗಿ ಕಂಗೊಳಿಸುತ್ತಿದ್ದ ನಾಡಿನ ಖ್ಯಾತ ವಿಮರ್ಶಕ ಡಾ. ಜಿ.ಎಚ್. ನಾಯಕರ ಹೆಸರಿನ ಸಮ್ಮೇಳನದ ವೇದಿಕೆಯ ಮೇಲೆ ಮುಂಜಾನೆಯ ಹತ್ತು ಗಂಟೆಗೆ ಸರಿಯಾಗಿ ಅಂಕೋಲಾ ತಾಲೂಕಾ ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭವು ಆರಂಭವಾಯಿತು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ನಾಡಿನ ಹಿರಿಯ ಸಾಹಿತಿ ಶಾ.ಮ. ಕೃಷ್ಣರಾಯರು ‘ಸಾಹಿತ್ಯ ಮನಸ್ಸಿನ ಉಮ್ಮಳದಿಂದ ಹುಟ್ಟುವ ಕ್ರಿಯೆ. ಇನ್ನೊಬ್ಬರ ನೋವಿಗೆ ಸ್ಪಂದಿಸುವ ಗುಣ ಸಾಹಿತಿಗಳಲ್ಲಿರಬೇಕು. ಸಮಾಜಮುಖಿ ಸ್ಪಂದನೆ ಇಲ್ಲದೆ ಇದ್ದಲ್ಲಿ

ಸಾಹಿತ್ಯಕ್ಕೆ ಅರ್ಥವಿಲ್ಲ. ಆಶಯ, ಭಾವ ತುಂಬಿದ ಜೀವಕಳೆ ಇರುವ ಸಾಹಿತ್ಯ ರಚಿಸಬೇಕು. ಸಾಹಿತ್ಯ ಘಟಕಗಳು ಹೊಸಬರಿಗೆ ಅವಕಾಶ ನೀಡುವುದರ ಜೊತೆ ಹೊಸತನದ ಆವಿಷ್ಕಾರಗಳು ನಡೆಯಬೇಕು. ಹೊಸತನವನ್ನು ಸ್ವೀಕರಿಸಿದಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ. ಸಾಹಿತ್ಯ ಪ್ರಶಸ್ತಿಗಳಿಗಾಗಿ ಅಲ್ಲ, ಬದುಕುವ ಮೌಲ್ಯಯುತ ಸಾಹಿತ್ಯ ರಚಿಸಿ. ಅದಕ್ಕೆ ಜನ ಗುರುತಿಸಿ ಬೆಲೆ ನೀಡುತ್ತಾರೆ' ಎಂದು ಯುವ ಸಾಹಿತಿಗಳಿಗೆ ಕಿವಿ ಮಾತು ಹೇಳಿದರು. ಮುಂದುವರೆದು ಮಾತನಾಡಿದ ಅವರು 'ಅಂಕೋಲಾದಲ್ಲಿ ಒಂದು ಕಲ್ಲು ಎಸೆದರೆ ಅದು ಸ್ವಾತಂತ್ರ್ಯ ಹೋರಾಟಗಾರರ ಮನೆಯ ಮೇಲೆ ಬೀಳುತ್ತದೆ. ಈ ದೇಶದ ವೀರರು, ಶೂರರು, ಹುಟ್ಟಿದ ನಾಡು ಅಂದರೆ ಅಂಕೋಲಾ. ಈ ತಾಲೂಕಿನ ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಹೆಚ್ಚಿನ ಸೇವೆ ನೀಡಿದ್ದಾರೆ. ಜತೆ ಜತೆಗೆ ಸಾಹಿತಿಗಳು ಸೇವೆ ನೀಡಿದ್ದಾರೆ. ಇದರಿಂದಾಗಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಇಲ್ಲಿ ಸಾಹಿತ್ಯದ ಪ್ರಭಾವವಿದೆ' ಎಂದರು.

ಕಸಾಪ ಜಿಲ್ಲಾಧ್ಯಕ್ಷ ಬಿ.ಎನ್.ವಾಸರೆ ತಮ್ಮ ಆಶಯ ನುಡಿಗಳಲ್ಲಿ, ಜಿಲ್ಲೆಯಲ್ಲಿ ಅತಿ ಹೆಚ್ಚು ತಾಲೂಕು ಸಮ್ಮೇಳನ ನಡೆಸಿದ ಗೌರವಕ್ಕೆ ಅಂಕೋಲಾ ತಾಲೂಕು ಭಾಜನವಾಗಿದೆ. ಕಳೆದ ಎರಡು ವರ್ಷಗಳಿಂದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜಿಲ್ಲೆಯ ಮನೆ ಮನೆಗೆ ತಲುಪಿಸಿದ್ದೇವೆ. ಕೇವಲ ನಾಲ್ಕು ತಾಲೂಕು ಸಮ್ಮೇಳನದ ಅನುದಾನ ಬಿಡುಗಡೆಯಾಗಿದ್ದು, ಏಳು ತಾಲೂಕುಗಳ ಅನುದಾನ ಬಿಡುಗಡೆಯಾಗಿಲ್ಲ ಎಂದರು.

ಕಸಾಪ ತಾಲೂಕು ಘಟಕದ ಅಧ್ಯಕ್ಷ ಗೋಪಾಲಕೃಷ್ಣ ನಾಯಕ ಮಾತನಾಡಿ, ಅಂಕೋಲಾ ಐತಿಹಾಸಿಕ ಪರಂಪರೆಯ ರೈತ ಚುಳವಳಿಯ ನಾಡು. ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪ್ರದೇಶ. ತಾಲೂಕಿನ ಸಾಹಿತ್ಯಕೃಷಿಗೆ ಆಡಳಿತ ವ್ಯವಸ್ಥೆಯಿಂದ ಸೂಕ್ತ ಪ್ರಾಧಾನ್ಯತೆ ದೊರೆತಿಲ್ಲ ಎಂದರು. ಕಸಾಪ ಉ.ಕ.ದ ಗೌರವ ಕಾರ್ಯದರ್ಶಿ ಜಾರ್ಜ್ ಫರ್ನಾಂಡೀಸ್, ಬಿಇಓ ಮಂಗಳಲಕ್ಷ್ಮೀ ಪಾಟೀಲ್ ಮಾತನಾಡಿದರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷೆ ಹೊನ್ನಮ್ಮ ನಾಯಕ ಸಮ್ಮೇಳನಾಧ್ಯಕ್ಷ ನಾಗೇಶದೇವ ಅಂಕೋಲೆಕರ ಅವರಿಗೆ ಧ್ವಜ ಹಸ್ತಾಂತರಿಸಿದರು.

ಪುಸ್ತಕ ಮಳಿಗೆ ಉದ್ಘಾಟಿಸಿದ ಹಿರಿಯ ಪತ್ರಕರ್ತ ಕರಾವಳಿ ಮುಂಜಾವು ವ್ಯವಸ್ಥಾಪಕ ಸಂಪಾದಕ ಗಂಗಾಧರ ಹಿರೇಗುತ್ತಿ ಮಾತನಾಡಿ 'ಈ ತಿಂಗಳ ಆರಂಭದಲ್ಲಿ ಜೈಪುರ ಸಾಹಿತ್ಯ ಸಮ್ಮೇಳನದಲ್ಲಿ ವಿಶೇಷವಾಗಿ ಪುಸ್ತಕ ಪ್ರಕಾಶಕರ ಗೋಷ್ಠಿಯಲ್ಲಿ ದೇಶದಲ್ಲಿ ಮಲೆಯಾಳಂ ಪುಸ್ತಕೋದ್ಯಮದ ಹೊರತಾಗಿ ಉಳಿದ ಭಾಷೆಗಳಲ್ಲಿ ಪುಸ್ತಕೋದ್ಯಮ ನಶಿಸತೊಡಗಿರುವ ಆತಂಕದ ಧ್ವನಿಗಳು ಕೇಳಿಬಂದಿದೆ. ಮಾತೃಭಾಷೆಯ ಪುಸ್ತಕದ ಉದ್ಯಮದ ಅನಾಸಕ್ತಿಗೆ ಶಿಕ್ಷಣದಲ್ಲಿ ಮಾತೃಭಾಷೆಯನ್ನು ಕಡ್ಡಾಯವಾಗಿಸದಿರುವುದು ಮುಖ್ಯ ಕಾರಣವಾದರೆ, ಆಯಾ ಕಾಲಕ್ಕೆ ಯಾವ ವಿಷಯದ ಕುರಿತಾಗಿ ಬರೆಯಬೇಕೆಂಬುದರ ಅಪಡೇಟ್ ಆಗದಿರುವುದು ಲೇಖಕರ ದೌರ್ಬಲ್ಯವೆಂದು ಆಪಾದಿಸಿದರು. ಮಲೆಯಾಳಿ ಭಾಷೆಯಲ್ಲಿ ಪುಸ್ತಕಗಳೇ ಸಿನೇಮಾಗಳಿಗೆ ಸಮಾನ ಸಂಖ್ಯೆಯಲ್ಲಿ ಪ್ರಕಟವಾಗುತ್ತಿದೆ. ಇಂಗ್ಲೀಷಿನಲ್ಲಿ ಸಹ ಪ್ರಕಟಗೊಳ್ಳುತ್ತಿದೆ ಎಂದರು. ನಮ್ಮ ಲೇಖಕರಿಗೆ ತಾನೊಂದು ಸಾಹಿತಿ ಎನ್ನುವ ಬ್ರಾಂಡ್ ಬೇಕಾಗಿದೆ ಹೊರತು ಅವರಿಗೆ ಪುಸ್ತಕ ಕೊಳ್ಳುವುದು ಬೇಕಿಲ್ಲ. ಪುಸ್ತಕ ಬರೆಯುವಷ್ಟು ಪ್ರೌಢಿಮೆಯನ್ನು ಸಾಹಿತ್ಯದ ಮೂಲಕ ಗಳಿಸಿಕೊಳ್ಳಬೇಕಾಗಿಲ್ಲ. ಕ.ಸಾ.ಪ ಪದಾಧಿಕಾರಿಗಳು ಸದಸ್ಯರ ಎಷ್ಟು ಮನೆಗಳಲ್ಲಿ ವಾಚನಾಲಯಗಳಿವೆ?' ಎಂದು ಪ್ರಶ್ನಿಸಿದರು.

ಸಮ್ಮೇಳನಾಧ್ಯಕ್ಷರ ಭಾಷಣ: ಹಿರಿಯ ಸಾಹಿತಿ ಪ್ರೊ. ನಾಗೇಶದೇವ ಅಂಕೋಲೇಕರ ತಮ್ಮ ಭಾಷಣದಲ್ಲಿ ಸಾಹಿತ್ಯ ನಿಂತ ನೀರಲ್ಲ, ಸದಾ ಹರಿಯುವ ಶಾಲ್ಮಲೆ, ನಮಗೆ ಅರಿವಿಲ್ಲದೇ ನಮ್ಮನ್ನು ಪ್ರಭಾವಿಸುವಂಥದ್ದು ಸಾಹಿತ್ಯ. ಕಾಲಕಾಲಕ್ಕೆ ತನ್ನೊಳಗಿನ ಸತ್ವದಿಂದ ಓದುಗನನ್ನು ಪ್ರಗತಿಯತ್ತ ಒಯ್ಯುತ್ತಲ್ಲೇ ಇರುವಂಥದ್ದು. ತನ್ನೊಳಗಿನ ಅಂತಃಸತ್ವದಿಂದ ಮುಂದಿನ ತಲೆಮಾರುಗಳನ್ನು ಪ್ರಭಾವಿಸುವ ಮತ್ತು ಆ ಮೂಲಕ ಸಮಾಜದ ಮುಖ್ಯಧಾರೆಯೊಂದಿಗೆ ಸಂಬಂಧ ಏರ್ಪಡಿಸುವ ಶಕ್ತಿ ಸಾಹಿತ್ಯಕ್ಕಿದೆ ಎಂದರು. 'ಇಂದು ಕನ್ನಡ ಭಾಷೆ ಅಪಾಯಕಾರಿ ಸಂದರ್ಭದಲ್ಲಿದೆ. ಒಂದು ಕಾಲಕ್ಕೆ ಕಾವೇರಿಯಿಂದ ಗೋದಾವರಿವರೆಗೆ ಆಡಿಕೊಂಡಿದ್ದ ಭಾಷೆ ಇಂದು ಕರ್ನಾಟಕದಲ್ಲಿಯೇ ಶೋಚನೀಯ

ಸ್ಥಿತಿಗೆ ತಲುಪಿರುವುದು ವಿಷಾದನೀಯ. ಅತಿಯಾದ ಇಂಗ್ಲಿಷ್ ವ್ಯಾಮೋಹ ಕನ್ನಡ ಭಾಷೆಯ ಕಲಿಕೆಗೆ ಹಿನ್ನೆಡೆಯಾಗಿದೆ. ನಾವೆಲ್ಲರೂ ಕನ್ನಡವನ್ನು ಉಳಿಸಲು, ಕನ್ನಡದ ಅಸ್ಮಿತೆಗಾಗಿ ಹೋರಾಡಬೇಕಾಗಿದೆ' ಎಂದು ಕರೆ ನೀಡಿದರು.

ಹಿರಿಯ ಸಾಹಿತಿಗಳಾದ ಶಾಂತಾರಾಮ ನಾಯಕ, ಮೋಹನ ಹಬ್ಬು, ವಿಠ್ಠಲ ಗಾಂವಕರ, ಪಿ.ಆರ್.ನಾಯ್ಕ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷ ಡಾ. ಮಹೇಶ ಜಿ.ಗೋಳಿಕಟ್ಟೆ ಸ್ವಾಗತಿಸಿದರು. ಶಿಕ್ಷಕ ಪ್ರಶಾಂತ ನಾಯ್ಕ, ಉಪನ್ಯಾಸಕಿ ಡಾ.ಪುಷ್ಪಾ ನಾಯ್ಕ ಪರಿಚಯಿಸಿದರು. ಸ್ಮರಣ ಸಂಚಿಕೆಯ ಪ್ರಧಾನ ಸಂಪಾದಕ ಶ್ಯಾಮಸುಂದರ ಗೌಡ ನೆನಪಿನ ಹೊತ್ತಿಗೆಯ ಕುರಿತು ಮಾತನಾಡಿದರು. ವಿ.ಕೆ. ಗರ್ಲ್ಸ್ ಹೈಸ್ಕೂಲ್ ವಿದ್ಯಾರ್ಥಿಗಳು ನಾಡಗೀತೆ ಪ್ರಸ್ತುತ ಪಡಿಸಿದರು. ಪತ್ರಕರ್ತ ಸುಭಾಶ ಕಾರೇಬೈಲ್, ಜಗದೀಶ ಜಿ. ನಾಯಕ ನಿರ್ವಹಿಸಿದರು.

ಮಧ್ಯಾಹ್ನ ವಿಜಯ ನಾಯಕರ ನೇತೃತ್ವದ ತಂಡ ಅತ್ಯಂತ ವ್ಯವಸ್ಥಿತವಾಗಿ ಊಟೋಪಚಾರವನ್ನು ನಡೆಸಿಕೊಟ್ಟಿತು. ಈ ಸಾಹಿತ್ಯ ಜಾತ್ರೆಯ ಸಂಭ್ರಮದಲ್ಲಿ ಊಟ ಕೂಡ ವಿಶೇಷವಾಗಿ ಗಮನ ಸೆಳೆದಿತ್ತು. ಜನಪದದ ಸಂಸ್ಕೃತಿ ಸಾರುವ ಗೋದಿಕಡಿ ಪಾಯಸ, ಮಜ್ಜಿಗೆ ವಿಶೇಷವಾಗಿ ಊಟದ ಸ್ವಾದಿಷ್ಟ, ಸವಿಗೆ ಕಾರಣವಾದವು.

ತದನಂತರ ಆರಂಭವಾದ ವಿಚಾರಗೋಷ್ಠಿ ಪ್ರಭುದ್ಧತೆಯನ್ನು ಮೆರೆಯಿತು. 'ಅಂಕೋಲಾ ತಾಲೂಕಿನ ಪ್ರಸ್ತಾವಿತ ಬೃಹತ್ ಯೋಜನೆಗಳು ಮತ್ತು ಸ್ಥಳಿಯರಿಗೆ ಉದ್ಯೋಗ' ವಿಷಯದ ಮೇಲೆ ಲೇಖಕಿ ಅಕ್ಷತಾ ಕೃಷ್ಣಮೂರ್ತಿ ಹಾಗೂ 'ಅಂಕೋಲಾ ತಾಲೂಕಿನ ಮೀನುಗಾರಿಕೆ ಅವಕಾಶ ಮತ್ತು ಸವಾಲುಗಳು' ವಿಷಯದ ಮೇಲೆ ಪತ್ರಕರ್ತ ಶ್ರೀ ಪ್ರಮೋದ ಹರಿಕಾಂತ ಮಾತನಾಡಿದರು. ನೌಕಾನೆಲೆ ಮೊದಲು ಕಾರವಾರದಲ್ಲಿ ಆರಂಭಗೊಂಡು ನಂತರ ಅಂಕೋಲಾವನ್ನು ಕೂಡ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಆದರೆ ದೇಶಕ್ಕಾಗಿ ಭೂಮಿ ತ್ಯಾಗ ಮಾಡಿದವರಿಗೆ ಸರಿಯಾದ ಉದ್ಯೋಗ, ಪರಿಹಾರ, ನಿವೇಶನ ಸೇರಿದಂತೆ ಅವರ ಅಭಿವೃದ್ಧಿಗೆ ಯಾವುದೇ ವಿಶೇಷ ಸೌಲಭ್ಯಗಳು ದಕ್ಕಿಲ್ಲ ಎಂದು ಲೇಖಕಿ ಅಕ್ಷತಾ ಕೃಷ್ಣಮೂರ್ತಿ ಹೇಳಿದರು.

ಇನ್ನು ಕೈಗಾದಿಂದ ಕೂಡ ನಮ್ಮ ತಾಲೂಕಿಗೆ ಅಪಾಯವಿದೆ. ರೈಲ್ವೆ ಮಾರ್ಗಕ್ಕಾಗಿ ಸಾಕಷ್ಟು ಜಾಗವನ್ನು ನೀಡಿದ್ದೇವೆ. ಚತುಷ್ಪಥ ಹೆದ್ದಾರಿಗಾಗಿ ಸಾಕಷ್ಟು ಗಿಡಮರಗಳನ್ನು ಕಡಿಯಲಾಗಿದೆ. ಇಲ್ಲಿಯ ವಾತಾವರಣದ ವೈಪರಿತ್ಯದಿಂದಾಗಿ ಗೇರು, ಮಾವಿನ ಮರಗಳಿಗೆ ವಿಳಂಬವಾಗಿ ಹೂವು ಬಿಡುವಂತಾಗಿದೆ. ಇಲ್ಲಿಯ ಜನರು ಕೆಲಸ ಅರಸಿ ಹೊರ ಪ್ರದೇಶಕ್ಕೆ ತೆರಳುತ್ತಿದ್ದಾರೆ. ಇಲ್ಲಿ ರೆಸಾರ್ಟ್, ಪಾರ್ಕ್ ಸೇರಿದಂತೆ ವಿವಿಧ ಯೋಜನೆಗಳನ್ನು ಹಮ್ಮಿಕೊಂಡು ಉತ್ತಮ ಪ್ರವಾಸಿ ತಾಣವನ್ನಾಗಿ ಮಾಡಬಹುದು. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಚಿಂತಿಸಬೇಕು ಎಂದು ಅಕ್ಷತಾ ಕೃಷ್ಣಮೂರ್ತಿ ವಿವರಿಸಿದರು.

ಪತ್ರಕರ್ತ ಪ್ರಮೋದ ಹರಿಕಂತ್ರ ಮಾತನಾಡಿ, ಹಾರವಾಡದಿಂದ ಮಂಜಗುಣಿಯವರೆಗೆ 8 ಕಡಲ ತೀರಗಳು ಕಾಣಸಿಗುತ್ತವೆ. ಇಲ್ಲಿ ಸುರಕ್ಷಿತ ಕಡಲತೀರವಿದ್ದರೂ ಕೂಡ ಅದನ್ನು ಅಭಿವೃದ್ಧಿಪಡಿಸುವಲ್ಲಿ ವ್ಯವಸ್ಥೆ ವಿಫಲವಾಗಿದೆ. ಹಾಗೇ ನೋಡಿದರೆ ಕಡಲ ತೀರಗಳು ಕೂಡ ಅಪಾಯದಲ್ಲಿವೆ. ಬೇರೆ ಬೇರೆ ಯೋಜನೆಗಳಿಗಾಗಿ ಬಂದರು ಪ್ರದೇಶಗಳನ್ನು ಸೇರಿ ಈಗ ಸಮುದ್ರವನ್ನು ಕೂಡ ನೌಕಾಪಡೆಯವರು ತಮ್ಮ ಕಬ್ಬಾ ಮಾಡಿಕೊಂಡಿದ್ದಾರೆ. ಅವರ ವ್ಯಾಪ್ತಿಯಲ್ಲಿ ಮೀನುಗಾರಿಕೆ ನಡೆಸುವಂತಿಲ್ಲ. ಈ ಭಾಗದ ಜನರಿಗೆ ಮೀನು ಅತಿಮುಖ್ಯ ಆಹಾರವಾಗಿದೆ. ಮೀನು, ಮೀನುಗಾರಿಕೆ, ಬಂದರು, ಸಮುದ್ರ ಉಳಿಸಿಕೊಳ್ಳಬೇಕಾದ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದರು. ಈ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ನಿವೃತ್ತ ಉಪನ್ಯಾಸಕ ಶ್ರೀಧರ ನಾಯಕ ವಹಿಸಿದ್ದರು. ನಿವೃತ್ತ ಪ್ರಾಚಾರ್ಯ ರವೀಂದ್ರ ಕೇಣಿ ಆಶಯ ನುಡಿಗಳನ್ನಾಡಿದರು. ರಾಜೀವ ಜಿ. ನಾಯಕ ಸ್ವಾಗತಿಸಿದರು. ಎನ್.ವಿ.ರಾಠೋಡ ನಿರ್ವಹಿಸಿದರು. ಎಂ.ಬಿ.ಆಗೇರ ವಂದಿಸಿದರು.

ಮಧ್ಯಾಹ್ನ 3.30 ಗಂಟೆಗೆ ಹಿರಿಯ ಸಾಹಿತಿ ಪ್ರೊ. ಮನೋಹರ ನಾಯಕರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿ ಸಾಹಿತ್ಯಾಸಕ್ತರನ್ನು ರಂಜಿಸಿತು– ರಮೇಶ ವಿ. ನಾಯಕ, ತಿಮ್ಮಪ್ಪ ಗೌಡ, ಭಾವನಾ ನಾಯಕ, ನಿತಿನ್ ನಾಯ, ನಿಶಾಂತ ಆಗೇರ, ಶ್ರೀಮತಿ ಪಲ್ಲವಿ ಶೆಟ್ಟಿ, ನವೀನ ಭಟ್ಟ ಶೇವಕಾರ, ಸಾಯಿನಾಥ ಹನುಮಂತ ನಾಯ್ಕ, ಮೋಹನ ಗೌಡ, ದಿನಕರ ಎನ್. ನಾಯಕ, ಡಾ॥ ಅರ್ಚನಾ ನಾಯಕ, ಶ್ರೀಮತಿ ಲಕ್ಷ್ಮಿ ನಾಯಕ, ಅರುಣ ಗೌಡ, ಶ್ರೀಮತಿ ಸುವರ್ಣ ವಿ. ಶೆಟ್ಟಿ, ಸಾತು ಗೌಡ ಅಂಬಾರಕೊಡ್ಲ, ಚೈತ್ರಾ ಗಜಾನನ ಆಚಾರಿ, ದೀಪಾ ಜಟ್ಟಿ ನಾಯ್ಕ, ಜಿ. ಆರ್. ತಾಂಡೇಲ, ರಾಮಚಂದ್ರ ಶೆಟ್ಟಿ, ರಾಜೇಶ ನಾಯಕ ಸೂರ್ವೆ, ಶ್ರೀಧರ ನಾಯ್ಕ, ಶ್ರೀಮತಿ ಚಂದ್ರಕಲಾ ನಾಯಕ, ಶ್ರೀಮತಿ ರಮ್ಯಾ ಹೆಗಡೆ, ಹರ್ಷಾ ಎಂ.ಎಚ್., ಶ್ರೀಮತಿ ಸಂಧ್ಯಾ ನಾಯ್ಕ, ನಾಗೇಶ ಆಗೇರ ಅಗ್ಗರಗೋಣ, ಶ್ರೀಮತಿ ಭಾರತಿ ನಾಯಕ ತಮ್ಮ ಕವನಗಳನ್ನು ವಾಚಿಸಿದರು. ಕೆ.ಎಲ್.ಇ.ಎಸ್. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿನಾಯಕ ಹೆಗಡೆ ಆಶಯ ನುಡಿಗಳನ್ನಾಡಿದರು. ಶ್ರೀ ಮಾರುತಿ ಹರಿಕಂತ್ರ ಸ್ವಾಗತಿಸಿದರು. ಶ್ರೀ ಸುಜಿತ ನಾಯ್ಕ ನಿರ್ವಹಿಸಿದರು. ಶ್ರೀ ರಫೀಕ ಶೇಖ್ ವಂದಿಸಿದರು.

ಸಾಯಂಕಾಲ 5–00 ಗಂಟೆಗೆ ಉಪನ್ಯಾಸಕ ಶ್ರೀ ಮಹೇಶ ಬಿ. ನಾಯಕರ ಸ್ವಾಗತದೊಂದಿಗೆ ಕಸಾಪಾ ಜಿಲ್ಲಾಧ್ಯಕ್ಷ ಶ್ರೀ ಬಿ.ಎನ್. ವಾಸರೆ ಅವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭವು ಆರಂಭಗೊಂಡಿತು. ಕಲಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ವಿಕ್ರಮ ವಿಸಾಜಿಯವರು ಸಮಾರೋಪ ಭಾಷಣವನ್ನು ಮಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಗಣ್ಯರನ್ನು ಕಸಾಪ ಅಂಕೋಲಾ ಘಟಕದ ವತಿಯಿಂದ ಸನ್ಮಾನಿಸಲಾಯಿತು. ಶ್ರೀ ಜನಾರ್ದನ ನಾಯಕ (ಸಾಹಿತ್ಯ), ಶ್ರೀ ಗಣಪತಿ ಓನಮ್ ಶೆಟ್ಟಿ (ಸಂಘ ಸಂಸ್ಥೆ), ಶ್ರೀ ಥಾಮಸ್ ಜಾನ್ (ಸಮಾಜ ಸೇವೆ), ಶ್ರೀಮತಿ ದೇವಿ ಗೌಡ (ನಾಟಿ ವೈದ್ಯೆ), ಶ್ರೀ ರಾಘವೇಂದ್ರ ನಾಯ್ಕ (ಸಾವಯವ ಕೃಷಿ), ಶ್ರೀ ಶಶಿಕಾಂತ ಹೇಮು ನಾಯ್ಕ (ವೃತ್ತಿಪರ), ಶ್ರೀ ನಾಗಪ್ಪ ಗೌಡ, ಬೆಳಂಬಾರ (ನಾಟಿ ವೈದ್ಯ), ಶ್ರೀ ವಿಜಯಕುಮಾರ ನಾಯ್ಕ (ಸಮಾಜ ಸೇವೆ), ಶ್ರೀ ಸುಭಾಷ ಕಾರೇಬೈಲ್ (ಪತ್ರಕರ್ತ), ಶ್ರೀ ಉದಯ ರಾಮಚಂದ್ರ ನಾಯ್ಕ (ಸಮಾಜ ಸೇವೆ), ಶ್ರೀ ಇಂದ್ರಕುಮಾರ ಗೌಡ (ಯಕ್ಷಗಾನ), ಶ್ರೀ ದಿನೇಶ ಮೇತ್ರಿ (ಕಲಾಕಾರ), ಶ್ರೀ ರಾಘವೇಂದ್ರ ಭಟ್ (ಶ್ವಾನ ಸಂಗೋಪನೆ), ಶ್ರೀ ಎನ್.ಯು. ಷಹಾ (ಸಮಾಜ ಸೇವೆ) ಇವರುಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾಡಿದ ಅಸಾಧಾರಣ ಸೇವೆಗಾಗಿ ಸನ್ಮಾನಿಸಲ್ಪಟ್ಟರು.

ಕಸಾಪ ಅಂಕೋಲಾ ಘಟಕದ ಕೋಶಾಧ್ಯಕ್ಷ ಡಾ. ಸಿದ್ಧಲಿಂಗ ಸ್ವಾಮಿ ವಸ್ತ್ರದ ಸಮ್ಮೇಳನದಲ್ಲಿ ಸ್ವೀಕರಿಸಿದ ನಿರ್ಣಯಗಳನ್ನು ವಾಚಿಸಿದರು. ಶ್ರೀ ಮಂಜುನಾಥ ಇಟಗಿ ಅತಿಥಿಗಳನ್ನು ಸ್ವಾಗತಿಸಿದರೆ ಶ್ರೀಮತಿ ವೀಣಾ ಹೆಗಡೆ ನಿರ್ವಹಿಸಿದರು. ಪತ್ರಕರ್ತ ರಾಘು ಕಾಕರಮಠ ವಂದಿಸಿದರು. ಸಮ್ಮೇಳನದ ಸರ್ವಾಧ್ಯಕ್ಷರನ್ನು, ಸ್ವಾಗತ ಸಮಿತಿಯ ಅಧ್ಯಕ್ಷರುಗಳನ್ನು ಸನ್ಮಾನಿಸುವ ಪಾರಂಪರಿಕ ವಿಧಿಗಳನ್ನು ಪೂರೈಸುವುದರೊಂದಿಗೆ ಓದುಗರ ಹಾಗೂ ಸಾಹಿತಿಗಳ ಸಮಾಗಮದಲ್ಲಿ ವೈಶಿಷ್ಟ್ಯಪೂರ್ಣವಾಗಿ ಅಂಕೋಲಾ ತಾಲೂಕಿನ ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಲಾಯಿತು.

ಪತ್ರಿಕಾ ವರದಿ



ಕನ್ನಡಪ್ರಭ

ಯುವಕರು ಮೌಲ್ಯಯುತ ಸಾಹಿತ್ಯ ನೀಡಲಿ

ಹಿರಿಯ ಸಾಹಿತಿ ಶಾ.ಮಂ. ಕೃಷ್ಣರಾಯ ಆಶಯ | ಅಂಕೋಲಾ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆ

ಸಾಹಿತ್ಯೋತ್ಸವ ಅನಾವರಣ



ಜನಮಾಧ್ಯಮ

ಅಂಕೋಲಾ ಸಾಹಿತ್ಯ ಸಮ್ಮೇಳನ ಉದ್ಘಾಟನೆ

ಇನ್ನೊಬ್ಬರ ನೋವಿಗೆ ಸ್ಪಂದಿಸುವ ಗುಣ ಸಾಹಿತಿಗಳಲ್ಲಿರಬೇಕು: ಶ್ಯಾ.ಮಂ.ಕೃಷ್ಣರಾಯ

Janamadyama Edition
Feb 9, 2024 Page No. 4
Powered by : eReleGo.com



ಕನ್ನಡಪ್ರಭ

ಅಂಕೋಲಾ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ 10ನೇ ಸಾಹಿತ್ಯ ಸಮ್ಮೇಳನದ ಮುಖ್ಯದ್ವಾರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಲಕ್ಷ್ಮೀ ಪಾಟೀಲ ಉದ್ಘಾಟಿಸಿದರು. ಈ ವೇಳೆ ಅಧಿಕಾರಿಗಳು, ಸಾಹಿತಿಗಳು ಹಾಜರಿದ್ದರು.

ಬುದ್ಧಿ ಭಾವವನ್ನು ಉದ್ದೀಪನಗೊಳಿಸಬಲ್ಲ ದಿವ್ಯ ಶಕ್ತಿ ಸಾಹಿತ್ಯದಲ್ಲಿದೆ: ಪ್ರೊ. ಅಂಕೋಲೇಕರ



ಹೊಸ ದಿಗಂತ

ಶುಕ್ರವಾರ, 9 ಫೆಬ್ರವರಿ 2024, ಹುಬ್ಬಳ್ಳಿ

ಸಾಹಿತಿ ಸಮಾಜಮುಖಿಯಾಗಿರಲಿ

ಅಂಕೋಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ | ಶಾ.ಮಂ.ಕೃ ಅಭಿಮತ

ಅಂಕೋಲಾ: ಸಾಹಿತಿಯಾದವನು ಸಮಾಜಮುಖಿಯಾಗಿರಬೇಕು. ಸಾಹಿತಿಯ ಅಂತರಂಗದಲ್ಲಿ ಸಮಾಜದ ಕುರಿತು ಸ್ಪಂದನ ಇದ್ದರೆ ಮಾತ್ರ ಓದುಗರ ಮನ ತಟ್ಟುವ ಸಾಹಿತ್ಯ ಹೊರ ಹೊಮ್ಮಲು ಸಾಧ್ಯ ಎಂದು ಹಿರಿಯ ಸಾಹಿತಿ ಶಾ.ಮಂ.ಕೃಷ್ಣರಾಯರು ಅಭಿಪ್ರಾಯಪಟ್ಟರು.



ಲೋಕಧ್ವನಿ

ಸಮಾಜಮುಖಿ ಸ್ಪಂದನೆ ಸಾಹಿತ್ಯಕ್ಕೆ ಅತೀ ಅಗತ್ಯ

ಅಂಕೋಲಾ ತಾಲೂಕು ಸಾಹಿತ್ಯ ಸಮ್ಮೇಳನ ಉದ್ಘಾಟಿಸಿದ ಸಾಹಿತಿ ಶ್ಯಾ.ಮಂ ಕೃಷ್ಣರಾಯ



ಲೋಕಧ್ವನಿ

ನೌಕಾನೆಲೆಗಾಗಿ ಜಮೀನು ತ್ಯಾಗ ಮಾಡಿದವರಿಗೆ ಸೌಲಭ್ಯಗಳೇ ದಕ್ಕಿಲ್ಲ

ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಯಲ್ಲಿ ಲೇಖಕಿ ಅಕ್ಷತಾ ಕೃಷ್ಣಮೂರ್ತಿ ಅಭಿಮತ

ಸಮ್ಮೇಳನದ ಸ್ಮೃತಿಚಿತ್ರಗಳು



ಧ್ವಜಾರೋಹಣ



ಸ.ಪ.ಗಾಂವಕರ ಪುತ್ಥಳಿಗೆ ಮಾಲಾರ್ಪಣೆ



ಶ್ರೀ ಭಾಸ್ಕರ ನಾರ್ವೇಕರ ಅವರಿಂದ
ಸಮ್ಮೇಳನದ ಮೆರವಣಿಗೆಗೆ ಚಾಲನೆ



ಸಮ್ಮೇಳನಾಧ್ಯಕ್ಷರ ಮೆರವಣಿಗೆ



ನೆನಪಿನ ದ್ವಾರಗಳು



ಶ್ರೀಮತಿ ಮಂಗಲಲಕ್ಷ್ಮೀ ಪಾಟೀಲ ಅವರಿಂದ
ನೆನಪಿನ ದ್ವಾರಗಳ ಉದ್ಘಾಟನೆ



ಪುಸ್ತಕ ಮಳಿಗೆಗಳು



ಶ್ರೀ ಗಂಗಾಧರ ಹಿರೇಗುತ್ತಿ ಅವರಿಂದ
ಪುಸ್ತಕ ಮಳಿಗೆಗಳ ಉದ್ಘಾಟನೆ



ಸರ್ವಾಲಂಕೃತ ಸಮ್ಮೇಳನದ ವೇದಿಕೆ



ಸರ್ವರನ್ನೂ ಸ್ವಾಗತಿಸುತ್ತಿರುವ ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ. ಮಹೇಶ ಜಿ. ಗೋಳಿಕಟ್ಟೆ



ಪ್ರಾಸ್ತಾವಿಕ ನುಡಿಗಳನ್ನಾಡುತ್ತಿರುವ ಕ.ಸಾ.ಪ. ಅಂಕೋಲಾ ಘಟಕದ ಅಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ನಾಯಕ



ಕ.ಸಾ.ಪ. ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಬಿ. ಎನ್. ವಾಸರೆ ಅವರಿಂದ ಆಶಯ ನುಡಿಗಳು



ದೀಪಬೆಳಗಿ ಸಮ್ಮೇಳನದ ಉದ್ಘಾಟನೆ



ಉದ್ಘಾಟಕರನ್ನು ಸಭೆಗೆ ಪರಿಚಯಿಸುತ್ತಿರುವ ಶ್ರೀ ಪ್ರಶಾಂತ ನಾಯ್ಕ



ಉದ್ಘಾಟಕರಾದ ಶ್ರೀ ಶಾ. ಮಂ. ಕೃಷ್ಣರಾಯರ ಮಾತು



ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಹೊನ್ನಮ್ಮ ನಾಯಕರಿಂದ ಧ್ವಜ ಹಸ್ತಾಂತರ



ಸ್ಮರಣ ಸಂಚಿಕೆ 'ಒಡಲಾಳ'ದ
ಸಾಂಕೇತಿಕ ಬಿಡುಗಡೆ



'ಒಡಲಾಳ'ದ ಪ್ರಧಾನ ಸಂಪಾದಕರಾದ
ಶ್ರೀ ಶ್ಯಾಮಸುಂದರ ಗೌಡ ಅವರ ನುಡಿ



ಪುಸ್ತಕ ಮಳಿಗೆಗಳ ಉದ್ಘಾಟಿಸಿದ
ಶ್ರೀ ಗಂಗಾಧರ ಹಿರೇಗುತ್ತಿ ಅವರ ನುಡಿಗಳು



ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾದ
ಶ್ರೀಮತಿ ಮಂಗಲಲಕ್ಷ್ಮೀ ಪಾಟೀಲ ಅವರ ನುಡಿಗಳು



ಕ.ಸಾ.ಪ. ಉ.ಕ. ಜಿಲ್ಲಾ ಘಟಕದ ಗೌರವ ಕಾರ್ಯದರ್ಶಿಗಳಾದ
ಶ್ರೀ ಜಾರ್ಜ್ ಫರ್ನಾಂಡೀಸ್ ಅವರ ಮಾತು



ಸಮ್ಮೇಳನಾಧ್ಯಕ್ಷರನ್ನು ಸಭೆಗೆ ಪರಿಚಯಿಸುತ್ತಿರುವ
ಡಾ. ಪುಷ್ಪಾ ನಾಯ್ಕ



ಪ್ರೊ. ಎನ್.ಡಿ.ಅಂಕೋಲೇಕರ್ ಅವರಿಂದ
ಸರ್ವಾಧ್ಯಕ್ಷೀಯ ಭಾಷಣ



ಕ.ಸಾ.ಪ ತಾಲೂಕಾ ಘಟಕದ ಕಾರ್ಯದರ್ಶಿ
ಜಗದೀಶ ನಾಯಕ ಹೊಸ್ಕೇರಿ ಅವರಿಂದ ವಂದನಾರ್ಪಣೆ



ವಿಚಾರ ಗೋಷ್ಠಿಯ ಆಶಯ ನುಡಿಗಳನ್ನಾಡುತ್ತಿರುವ
ಶ್ರೀ ರವೀಂದ್ರ ಕೇಣಿ



ವಿಚಾರ ಗೋಷ್ಠಿಯಲ್ಲಿ ಪ್ರಬಂಧ ಮಂಡಿಸುತ್ತಿರುವ
ಶ್ರೀಮತಿ ಅಕ್ಷತಾ ಕೃಷ್ಣಮೂರ್ತಿ



ವಿಚಾರ ಗೋಷ್ಠಿಯಲ್ಲಿ ಪ್ರಬಂಧ ಮಂಡಿಸುತ್ತಿರುವ
ಶ್ರೀ ಪ್ರಮೋದ ಹರಿಕಾಂತ



ವಿಚಾರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ
ಪ್ರೊ. ಶ್ರೀಧರ ನಾಯಕರ ಮಾತು



ಸರ್ವಾಧ್ಯಕ್ಷರ ಬದುಕು-ಬರಹದ ಕುರಿತಾದ
ನುಡಿಗಳಾಡುತ್ತಿರುವ ಶ್ರೀ ಫಾಲ್ಗುಣ ಗೌಡ



ಸರ್ವಾಧ್ಯಕ್ಷರ ಬದುಕು-ಬರಹದ ಕುರಿತಾದ
ನುಡಿಗಳಾಡುತ್ತಿರುವ ಶ್ರೀ ರಾಮಮೂರ್ತಿ ನಾಯಕ



ಕವಿಗೋಷ್ಠಿಯ ಆಶಯ ನುಡಿಗಳನ್ನಾಡುತ್ತಿರುವ
ಡಾ. ವಿನಾಯಕ ಹೆಗಡೆ



ಕವಿ ಗೋಷ್ಠಿಯ ಅಧ್ಯಕ್ಷತೆ ವಹಿಸಿದ
ಪ್ರೊ. ಮನೋಹರ ನಾಯಕರ ನುಡಿಗಳು





ಕವಿ ಗೋಷ್ಠಿಯಲ್ಲಿ ಕವನ ವಾಚಿಸುತ್ತಿರುವ ಕವಿಗಳು



ಶ್ರೀ ಮಹೇಶ ನಾಯಕರಿಂದ
ಸಮಾರೋಪ ಸಮಾರಂಭದ ಸ್ವಾಗತ



ಶ್ರೀ ಮಂಜುನಾಥ ಇಟಗಿ ಅವರಿಂದ
ಸಮಾರೋಪ ಸಮಾರಂಭದ ಅತಿಥಿಗಳ ಪರಿಚಯ



ಸಮಾರೋಪ ಭಾಷಣ ಮಾಡುತ್ತಿರುವ
ಡಾ. ವಿಕ್ರಮ ವಿಸಾಜಿ



ಸಮ್ಮೇಳನದ ನಿರ್ಣಯಗಳ ಮಂಡಿಸುತ್ತಿರುವ
ಡಾ. ಸಿದ್ಧಲಿಂಗಸ್ವಾಮಿ ವಸ್ತ್ರದ





ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸುತ್ತಿರುವ ಕ್ಷಣ



ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು
ಸನ್ಮಾನಿಸುತ್ತಿರುವ ಕ್ಷಣ



ಸಮಾರೋಪ ಸಮಾರಂಭದ ಅತಿಥಿಗಳಾದ
ಶ್ರೀ ಹನುಮಂತ ಗೌಡ ಅವರ ನುಡಿಗಳು



ಸಮ್ಮೇಳನದ ಸರ್ವಾಧ್ಯಕ್ಷರನ್ನು
ಸನ್ಮಾನಿಸುತ್ತಿರುವ ಕ್ಷಣ



ಕ.ಸಾ.ಪ. ಜಿಲ್ಲಾ, ತಾಲೂಕಾ ಘಟಕ
ಮತ್ತು ಸ್ವಾಗತ ಸಮಿತಿಯ ಅಧ್ಯಕ್ಷರುಗಳಿಗೆ ಸನ್ಮಾನ



ಸಮ್ಮೇಳನದ ವಿವಿಧ ಕಾರ್ಯಕ್ರಮಗಳ
ನಿರೂಪಕರು



ಸಮ್ಮೇಳನದಲ್ಲಿ ಉಪಸ್ಥಿತರಿದ್ದ
ಮಾಧ್ಯಮ ಮಿತ್ರರು





ಗಣ್ಯರ ಮಾತುಗಳನ್ನಾಲಿಸುತ್ತಿರುವ ಅಂಕೋಲೆಯ ಸಾಹಿತ್ಯ ಪ್ರಿಯರು

ಲೇಖನಗಳು

ಚರಿತ್ರೆಯ ಒಡಲಲ್ಲಿ ಅಂಕೋಲೆ

– ಶ್ಯಾಮಸುಂದರ ಗೌಡ

ಸ್ವಾತಂತ್ರ್ಯ ಆಂದೋಲನ, ರೈತ ಚಳುವಳಿ, ಸರಾಯಿ ವಿರೋಧಿ ಹೋರಾಟ.... ಹೀಗೆ ಒಂದಕ್ಕೊಂದು ಹೆಣೆದುಕೊಂಡು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿ ದಾಸ್ಯದ ಸಂಕೋಲೆಗಳನ್ನು ಕಿತ್ತೆಸೆದು ನಾಡಿನಾದ್ಯಂತ ಖ್ಯಾತಿ–ವಿಖ್ಯಾತಿಯನ್ನು ಗಳಿಸಿಕೊಂಡ ಸಿದ್ಧ–ಪ್ರಸಿದ್ಧವಾದ ಊರು ನನ್ನ ಅಂಕೋಲೆ. ಚಾರಿತ್ರಿಕವಾದ ಬೇರೆ–ಬೇರೆ ಕಾರಣಗಳಿಗಾಗಿ ನಾಡಿನಲ್ಲೂ, ದೇಶದಲ್ಲೂ ಹೆಸರು ಮಾಡಿದ ತಾಲೂಕು ಅಂಕೋಲೆ.

ಪಶ್ಚಿಮ ಘಟ್ಟಗಳು ಮತ್ತು ಕಡಲ ನಡುವಿನ ನೆಲಪಟ್ಟಿಯ ಭೂಸಂರಚನೆಯ ಪ್ರಾಚೀನತೆ ಹಾಗೂ ಅದರ ಹಂತಗಳನ್ನೂ ತಿಳಿಸುತ್ತದೆ. ಪಶ್ಚಿಮ ಘಟ್ಟಗಳು ಅಪರೂಪದ ಸಸ್ಯ ಸಂಪತ್ತಿನ ನೆಲೆ. ಪಶ್ಚಿಮದಲ್ಲಿರುವ ಸಮುದ್ರವು ಮತ್ಸ್ಯ ಸಂಪತ್ತಿನ ಸೆಲೆಯಾಗಿದೆ. ಗುಡುಗು ಮಿಂಚುಗಳಿಂದ ಒಡಗೂಡಿ ಬಂದು ಹೋಗುವ ಮಳೆಗಾಲ; ಬೆಟ್ಟಗಳ ಬೆನ್ನಲ್ಲಿ, ಅರಣ್ಯಗಳ ಮೆತ್ತೆಯಲ್ಲಿ ಮೋಡಗಳ ಸವಾರಿ; ನಿರಭ್ರ ಆಗಸದಲ್ಲಿ ನಕ್ಷತ್ರಗಳ ಮಿನುಗು; ಮತ್ತೆ ಗರಿಗರಿಯಾಗಿ, ಅಲೆಅಲೆಯಾಗಿ ಕವಿಯುವ ಬೆಳ್ಳಿಮೋಡಗಳು ಇಲ್ಲಿಯ ವೈಶಿಷ್ಟ್ಯಗಳಾಗಿವೆ. ತಮ್ಮ ಪ್ರಾದೇಶಿಕ ವಿಶೇಷತೆಗಳನ್ನು ಉಳಿಸಿಕೊಂಡ ಇಲ್ಲಿಯ ಜನರು ಪ್ರಾಚೀನದಿಂದ ಅರ್ವಾಚೀನದವರೆಗೆ ವಿಸ್ತೃತ ರಾಜ್ಯಾಡಳಿತದ ವ್ಯವಸ್ಥೆಗೆ ಒಳಗಾದವರು. ಸ್ವಾತಂತ್ರ್ಯ ಹೋರಾಟ ಹಾಗೂ ಸ್ವತಂತ್ರ್ಯಾ ನಂತರದ ದಿನಗಳಲ್ಲಿ ಅಂಕೋಲೆ ರಾಷ್ಟ್ರ ವ್ಯವಸ್ಥೆಯ ಭಾಗವಾಗಿ ಹೊಸ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳನ್ನು ಕಂಡಿದೆ.

ನಿಸರ್ಗದ ಚೆಲುವು, ಶ್ರೀಮಂತಿಕೆ ಹಾಗೂ ಭವ್ಯತೆ ಎಲ್ಲವನ್ನೂ ಒಟ್ಟಿಗೆ ಹೊಂದಿರುವ ಅಂಕೋಲಾ ತಾಲೂಕಿಗೆ ಒಂದು ದೀರ್ಘವಾದ ಇತಿಹಾಸವಿದೆ. ರಾಜನೀತಿಯ ತಂತ್ರ–ಕುತಂತ್ರಗಳ, ಕದನ–ಕ್ರಾಂತಿಗಳ ಉಜ್ವಲ ಚರಿತ್ರೆಯಿದೆ. ಬದಲಾದ ಛತ್ರಾಧಿಪತ್ಯಗಳ ಕಥೆಯಿದೆ. ಹತ್ತಿರ–ಹತ್ತಿರ ಎರಡು ಸಾವಿರ ವರ್ಷಗಳಷ್ಟು ಸುದೀರ್ಘ ಐತಿಹಾಸಿಕ ಪರಂಪರೆಯನ್ನು ಹೊಂದಿರುವ ಸಂಗತಿಯನ್ನು ಸಾಕ್ಷೀಕರಿಸುವ ಹಲವಾರು ವೀರಗಲ್ಲುಗಳು, ಅವನ್ನು ದಾಖಲಿಸಿಕೊಂಡ ಶಾಸನಗಳು ಇಲ್ಲಿವೆ. ಈವರೆಗೂ ಅಂಥ ಗಮನಿಸಬಹುದಾದಂತಹ ಯಾವುದೇ ಗಂಭೀರ ಅಧ್ಯಯನಗಳು ನಡೆಯದೇ ಇರುವ ಅಂಕೋಲಾ ತಾಲೂಕಿನ ಇತಿಹಾಸದ ಕೆಲವು ಪ್ರಮುಖ ಅಂಶಗಳನ್ನು ಪರಿಚಯ ಮಾಡುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಕ್ರಿ.ಶ.೧೭೯೯ರಲ್ಲಿ ಶ್ರೀರಂಗಪಟ್ಟಣದ ಯುದ್ಧದಲ್ಲಿ ಟಿಪ್ಪು ಸುಲ್ತಾನನು ಇಂಗ್ಲೀಷರ ಈಸ್ಟ್ ಇಂಡಿಯಾ ಕಂಪನಿಗೆ ಸೋತು, ಸತ್ತ ನಂತರ ಅವನ ಮೈಸೂರು ರಾಜ್ಯವೆಲ್ಲ ಕಂಪನಿ ಸರ್ಕಾರದ ಅಧೀನಕ್ಕೆ ಬಂತು. ಈಸ್ಟ್ ಇಂಡಿಯಾ ಕಂಪನಿಯವರು ಟಿಪ್ಪುವಿನ ಮೈಸೂರು ರಾಜ್ಯದ ಭಾಗವಾಗಿದ್ದ ಇಂದಿನ ಉಡುಪಿ ಜಿಲ್ಲೆಯನ್ನೂ ಒಳಗೊಂಡಂತೆ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳನ್ನು ಕೂಡಿಯೇ ಕನ್ನಡ ಕರಾವಳಿಯ ಒಂದು ಅಖಂಡ ಸೀಮೆಯಾಗಿ 'ಕೆನರಾ ಡಿಸ್ಟ್ರಿಕ್ಟ್' ಎಂಬ ಹೆಸರಿನಡಿಯಲ್ಲಿ ಮದ್ರಾಸ ಪ್ರೆಸಿಡೆನ್ಸಿಗೆ ಸೇರಿಸಿದರು. ಈ ಸಮಯದಲ್ಲಿ (ಕ್ರಿ.ಶ.೧೮೦೦) ಅಂಕೋಲೆಯನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸಲಾಯಿತು. ೧೮೯೯ರಲ್ಲಿ ಅಂಕೋಲೆಯನ್ನು ಒಂದು ಮಹಲ್ ಎಂದು (ಉಪತಾಲೂಕು) ವಿಂಗಡಿಸಿ ಕುಮಟಾ ತಾಲೂಕಿಗೆ ಸೇರಿಸಲಾಯಿತು. ನಂತರ ೧೮೮೦ರಲ್ಲಿ ೨೧ ಹಳ್ಳಿಗಳನ್ನು ಒಳಗೊಂಡಿರುವ ಅಂಕೋಲೆಯನ್ನು ಸ್ವತಂತ್ರ ತಾಲೂಕನ್ನಾಗಿ ಘೋಷಿಸಲಾಯಿತು.

ಅಂಕೋಲಾ ತಾಲೂಕಿನ ಇತಿಹಾಸ ಮತ್ತು ಶಾಸನಗಳ ಪೂರ್ವ ಅಧ್ಯಯನಗಳು :

ಅಂಕೋಲಾ ತಾಲೂಕಿನ ಶಾಸನಗಳ ಪ್ರಕಟಣೆ ಮತ್ತು ಪೂರ್ವ ಅಧ್ಯಯನದೆಡೆಗೆ ನೋಡಿದಾಗ ಫಲಿತಾಂಶ ಮಾತ್ರ ತೀರಾ ನಿರಾಶಾದಾಯಕ. ನಾನು

ಅಂಕೋಲಾ ತಾಲೂಕಿನ ಶಾಸನಗಳ ಅಧ್ಯಯನದತ್ತ ಆಸಕ್ತನಾಗಿ ಕ್ಷೇತ್ರಕಾರ್ಯ ಆರಂಭಿಸಿದ ನಂತರ ಈ ಪ್ರಬಂಧದ ಸಿದ್ಧತೆಯವರೆಗೆ ನನಗೆ ಒಟ್ಟೂ ಆರವತ್ತು ಶಾಸನಗಳು ದೊರೆತವು. ಇದರಲ್ಲಿ ಒಂದು ಕದಂಬ ರವಿವರ್ಮನ ಕಾಲದ ತಾಮ್ರಶಾಸನವಾಗಿದ್ದು ಇದನ್ನು ಡಾ. ಸಂಕಲಿಯಾ ಅವರು 'Indian Antiquary Vol. IV'ರಲ್ಲಿ ಪ್ರಕಟಿಸಿದ್ದಾರೆ. ಇದೇ ಶಾಸನವನ್ನು ಹದಿನೈದು ವರ್ಷಗಳ ನಂತರ ಡಾ. ಜಿ.ಎಸ್ ಗಾಯ್ ಅವರು ಎಪಿಗ್ರಾಫಿಯಾ ಇಂಡಿಕಾ ಸಂಪುಟ ೩೨ರಲ್ಲಿ ಇನ್ನಷ್ಟು ಪರೀಷ್ಕರಣೆಯೊಂದಿಗೆ ಪ್ರಕಟಿಸಿದ್ದಾರೆ.

ಉಳಿದವುಗಳಲ್ಲಿ ೧೬ ಶಾಸನಗಳು ಕನ್ನಡ ಸಂಶೋಧನ ಸಂಸ್ಥೆ ಧಾರವಾಡದವರು ೧೯೬೬ರಲ್ಲಿ ಪ್ರಕಟಿಸಿದ Summaries of Inscriptions 1943-44 to 1949-50ರಲ್ಲಿ ವರದಿಯಾಗಿವೆ. ವರದಿಯಾದ ಈ ಹದಿನಾರು ಶಾಸನಗಳಲ್ಲಿ ಕೇವಲ ೯ ಶಾಸನಗಳು ಡಾ. ಬಿ.ಆರ್. ಗೋಪಾಲ ಅವರ ಸಂಪಾದಕತ್ವದಲ್ಲಿ ೧೯೭೩ರಲ್ಲಿ ಪ್ರಕಟಿಸಿದ 'ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಸಂಪುಟ ೬'ರಲ್ಲಿ ಶಾಸನ ಪಾಠ ಮತ್ತು ಸಂಕ್ಷಿಪ್ತ ಸಾರಾಂಶದೊಂದಿಗೆ ಪ್ರಕಟವಾಗಿವೆ. ೧೯೮೬ರಲ್ಲಿ ಡಾ. ಎಚ್.ಆರ್.ರಘುನಾಥ ಭಟ್ಟ ಅವರು ವಿಜಯನಗರದ ಸಂಗಮ ವಂಶದ ವೀರ ಬುಕ್ಕರಾಯನ ಶಾಸನವನ್ನು ಜೆ.ಇ.ಎಸ್.ಐ. ಸಂಪುಟ ೧೩ರಲ್ಲಿ ಪ್ರಕಟಿಸಿರುತ್ತಾರೆ. ಡಾ. ಹೇಮಂತ ಎಚ್. ಭಟ್ಟ ಅವರು ೨೦೦೩–೦೪ರಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಹೊಸದಾಗಿ ೩ ಶಾಸನಗಳನ್ನು ಪತ್ತೆ ಮಾಡಿ ಅವುಗಳ ಸಾರಾಂಶವನ್ನು ಮಾತ್ರ ತಮ್ಮ ಪಿ.ಎಚ್.ಡಿ. ಮಹಾ ಪ್ರಬಂಧದಲ್ಲಿ ಪ್ರಕಟಿಸಿರುತ್ತಾರೆ. ಈ ಶಾಸನಗಳ ಪಾಠ ಪ್ರಕಟವಾಗಿರುವುದಿಲ್ಲ.

ಹೀಗೆ ಈ ಪ್ರಬಂಧದ ಸಿದ್ಧತೆಗೂ ಪೂರ್ವದಲ್ಲಿ ಅಂಕೋಲಾ ತಾಲೂಕಿನ ಒಟ್ಟೂ ೨೧ ಶಾಸನಗಳು ಪತ್ತೆಯಾಗಿ ಅವುಗಳಲ್ಲಿ ೧೧ ಶಾಸನಗಳ ಪಾಠ ಮಾತ್ರ ಪ್ರಕಟವಾಗಿದ್ದು, ಉಳಿದವುಗಳ ಕೇವಲ ಸಾರಾಂಶದ ವರದಿಯಾಗಿವೆ ಅಷ್ಟೆ. ನನ್ನ ಕ್ಷೇತ್ರಕಾರ್ಯದಲ್ಲಿ ೧೯ ಹೊಸ ಶಾಸನಗಳನ್ನು ಪತ್ತೆಮಾಡಿ ಅವುಗಳ ಪಾಠವನ್ನು ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸಿದ್ದೇನೆ. ಇಲ್ಲಿ ನನ್ನ ಅಧ್ಯಯನಕ್ಕೂ ಪೂರ್ವದಲ್ಲಿ ಪ್ರಕಟವಾದ ೧೧ ಶಾಸನಗಳ, ಮತ್ತು ಹಿಂದೆ ವರದಿಯ ಹಂತದಲ್ಲಿದ್ದ ೧೦ ಶಾಸನಗಳ, ನಾನು ಹೊಸದಾಗಿ ಪತ್ತೆಮಾಡಿ ಪ್ರಕಟಿಸಿದ ೧೯ ಶಾಸನಗಳ ಹಾಗೂ ಕೆಳದಿ ಗುಂಡಾ ಜೋಯಿಸ ಮತ್ತು ಕೆಳದಿ ವೆಂಕಟೇಶ ಜೋಯಿಸರು, ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ಕಡತಗಳಲ್ಲಿರುವ ಶಾಸನಗಳ ಪಾಠಗಳನ್ನು ಸಂಪಾದಿಸಿ ಪ್ರಕಟಿಸಿದ 'ಗೋಕರ್ಣ ಇತಿಹಾಸ ಶಾಸನಗಳು' ಎಂಬ ಶೀರ್ಷಿಕೆಯ ಎರಡು ಸಂಪುಟಗಳಲ್ಲಿದ್ದ ಅಂಕೋಲಾ ತಾಲೂಕಿಗೆ ಸಂಬಂಧಿಸಿದ ೨೦ ಶಾಸನಗಳು ಸೇರಿ ಒಟ್ಟೂ ೬೦ ಶಾಸನಗಳ ಪಾಠಗಳನ್ನು ವಿಶೇಷ, ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸಿ ಈ ಪ್ರಬಂಧದ ಸಿದ್ಧತೆಗೆ ಬಳಸಿಕೊಂಡಿದ್ದೇನೆ.

ಅಂಕೋಲೆಯಲ್ಲಿ ವಿಭಿನ್ನ ಜಾತಿ, ಜನಾಂಗ, ಬುಡಕಟ್ಟುಗಳು, ವಿವಿಧ ಧಾರ್ಮಿಕ ಪಂಗಡಗಳು, ಅವರ ನಂಬಿಕೆಗಳು, ಆಚರಣೆಗಳು, ವೈವಿಧ್ಯಮಯವಾದ ಪ್ರಾದೇಶಿಕ ಭಾಷೆ, ಪ್ರಾಚೀನ ಸಾಹಿತ್ಯ ಹೀಗೆ ಹಲವು ಹತ್ತು ವಿಷಯಗಳು ತಮ್ಮದೇ ಆದ ಸ್ಥಾನಮಾನವನ್ನು ಹೊಂದಿವೆ. ಅಂಕೋಲೆಯ ಸಂಸ್ಕೃತಿಯನ್ನು ಸಾರುವ ದೇವಾಲಯಗಳ, ವಾಸ್ತು–ಶಿಲ್ಪ ಸ್ಮಾರಕಗಳ ಅಂದಿನ ಚಾರಿತ್ರಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ದೃಷ್ಟಿಯ ಮಹತ್ವದ ವಿಚಾರಗಳನ್ನು ಶಾಸನಗಳನ್ನು ಆಧಾರವಾಗಿಟ್ಟುಕೊಂಡು ವಿವೇಚಿಸಿದ್ದೇನೆ.

ಅಂಕೋಲಾ ತಾಲೂಕಿನ ಚಾರಿತ್ರಿಕ ಭೂಪ್ರದೇಶವು ಇಂದಿನ ಸಂಪೂರ್ಣ ಅಂಕೋಲಾ ತಾಲೂಕು ಒಳಗೊಂಡಂತೆ, ದಕ್ಷಿಣದಲ್ಲಿ ಗೋಕರ್ಣ, ಹಿರೇಗುತ್ತಿ, ಮಿರ್ಜಾನ್‌ಗಳವರೆಗೂ, ಪೂರ್ವದಲ್ಲಿ ಶಿರಸಿ ತಾಲೂಕಿನ ಸೋದೆಯವರೆಗೂ, ಅಂಜದೀವ ದ್ವೀಪವೂ ಸೇರಿದಂತೆ ಉತ್ತರದಲ್ಲಿ ಕಾರವಾರದ ಸದಾಶಿವಗಡದವರೆಗೆ ವ್ಯಾಪಿಸಿತ್ತು. ಈ ಪ್ರದೇಶವು ಅನೇಕ ಉಪಸಂಸ್ಕೃತಿಗಳ ವಿಭಿನ್ನ ಜನಾಂಗಗಳ ಸಂಗಮವಾಗಿದೆ.

'ಅಂಕೋಲಾ' ಹೆಸರಿನ ಮೂಲ ಮತ್ತು ಪ್ರಾಚೀನತೆ :

ಒಂದು ಪ್ರದೇಶದ ಚರಿತ್ರೆಯ ಅಧ್ಯಯನದಲ್ಲಿ ಆ ಸ್ಥಳದ ಸ್ಥಳನಾಮಗಳಿಗೆ ತನ್ನದೇ ಆದ ಮಹತ್ವವಿದೆ. ಸ್ಥಳಗಳ ಹೆಸರುಗಳ ಅಭ್ಯಾಸವು ಇತಿಹಾಸದ ಸಂಶೋಧನೆಯ ಸಂದರ್ಭದಲ್ಲಿ ಎದುರಾಗುವ ಅನೇಕ ತೊಡಕುಗಳನ್ನು ಪರಿಹರಿಸಿಕೊಳ್ಳುವಲ್ಲಿ ಸಹಕಾರಿಯಾಗುತ್ತದೆ.

ಸ್ಥಳದ ಹೆಸರಿನ ಸರಿಯಾದ ಅರ್ಥವಿವರಣೆಯ ತಿಳಿಯುವ ಅಧ್ಯಯನ ಆ ಪ್ರದೇಶದ ಚರಿತ್ರೆ ಸಾಗಿಬಂದ ಪಥವನ್ನು ಗುರುತಿಸುವಲ್ಲಿ ನೆರವಾಗುತ್ತದೆ. ಅಲ್ಲದೇ ಸ್ಥಳನಾಮಗಳ ಅಭ್ಯಾಸ ಜನಾಂಗೀಯ ಅಧ್ಯಯನಕ್ಕೂ ಬಹುಮುಖ್ಯವಾದ ಆಧಾರಗಳನ್ನು ಒದಗಿಸುತ್ತದೆ. ಸ್ಥಳದ ಹೆಸರು ಬರಿಯ ಹೆಸರಾಗಿರದೇ ಅದು ಸಂಸ್ಕೃತಿ ಸಂಸ್ಕರಿಸಲ್ಪಟ್ಟ ಜಾಡಿಯೂ ಆಗಿರುತ್ತದೆ. ಈ ಹಿನ್ನಲೆಯಲ್ಲಿ ಸ್ಥಳನಾಮದ ಅಧ್ಯಯನ ಪ್ರಾಮುಖ್ಯತೆಯನ್ನು ಗಳಿಸಿಕೊಳ್ಳುತ್ತದೆ.

ಒಂದು ಪ್ರದೇಶದ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಸ್ಥಿತ್ಯಂತರಗಳನ್ನು ತಮ್ಮಲ್ಲಿ ಸೆರೆಹಿಡಿದಿಟ್ಟುಕೊಂಡಿರುವ ಸ್ಥಳನಾಮಗಳು ಪ್ರಾಚೀನ ಅವಶೇಷಗಳ ಕುರುಹಿನಂತಿರುವುದರಿಂದ ಅವುಗಳ ಮೂಲವನ್ನು ಕಂಡುಹಿಡಿಯುವುದು ತುಂಬ ಕಷ್ಟದಾಯಕವಾಗಿದೆ. ಸ್ಥಳನಾಮಗಳ ಅಭ್ಯಾಸದ ಹಾದಿಯಲ್ಲಿ ಸಿಗುವ ಅನೇಕ ಅರ್ಥವಿವರಣೆಗಳು ಸ್ಪಷ್ಟವಾಗಿವೆಯೆಂದೂ, ಸರಿಯಾಗಿವೆಯೆಂದೂ ಅನ್ನಿಸಿದರೂ ಸಹ ಅವುಗಳನ್ನು ಪುಷ್ಟೀಕರಿಸುವ ಆಧಾರಗಳು ದೊರೆಯುವುದಿಲ್ಲ. ಅನೇಕ ಸ್ಥಳನಾಮಗಳ ಬಗ್ಗೆ ಐತಿಹ್ಯಗಳಿದ್ದರೂ ಅವುಗಳನ್ನು ದಾಖಲೆಗಳಿಂದ ದೃಢೀಕರಿಸಲು ಸಾಧ್ಯವಾಗುವುದಿಲ್ಲ. ಸ್ಥಳಕ್ಕೆ ಆ ಹೆಸರೇ ಏಕೆ ಬಂದಿದೆ? ಎನ್ನುವ ಕಾರಣಗಳು ಬಹುತೇಕ ಅವಶೇಷಗಳಲ್ಲಿ ಹೂತುಹೋಗಿರುತ್ತದೆ. ಈ ಎಲ್ಲ ಎಚ್ಚರದೊಂದಿಗೆ ಅಂಕೋಲಾ ತಾಲೂಕಿನ ಶೀರ್ಷಿಕೆ ಸ್ಥಳನಾಮದ ಸಮೀಕ್ಷೆಯನ್ನು ಇಲ್ಲಿ ಮಾಡಲಾಗಿದೆ.

ಅಂಕೋಲೆಗೆ ಈ ಹೆಸರು ಎಂದಿನಿಂದ ಬಂತು ಎನ್ನುವುದು ನಿಖರವಾಗಿ ತಿಳಿಯುವುದಿಲ್ಲ. ಈ ಬಗ್ಗೆ ನಮಗೆ ದೊರೆಯುವ ಅತ್ಯಂತ ಪ್ರಾಚೀನ ದಾಖಲೆಯೆಂದರೆ, ಏಳನೇ ಶತಮಾನದ ಬಸವನಪುರದ ಪುನ್ನಾಟರ ತಾಮ್ರ ಶಾಸನದಲ್ಲಿ. ಸಂಸ್ಕೃತ–ಕನ್ನಡ ದ್ವಿಭಾಷಾ ಶಾಸನವಾದ ಇದರಲ್ಲಿ ಸ್ಥಳದ ಗಡಿ ಗುರುತಿಸುವಾಗ ಅಂಕೋಲೆಗಾಲೆ ಎಂಬ ಪ್ರಯೋಗ ದೊರೆಯುತ್ತದೆ. ಕ್ರಿ.ಶ. ೬೩೧ ರ ಅಚಲಪುರದ ರಾಷ್ಟ್ರಕೂಟರ ತಾಮ್ರಶಾಸನದಲ್ಲಿ ಶಲಾ ನದಿಯ ದಡದ ಮೇಲಿನ ಅಂಕೋಲಿಕಾ ಗ್ರಾಮವನ್ನು 'ನನ್ನರಾಜ' ದಾನ ಮಾಡಿದ ಎಂದಿದೆ. ಶಕ ವರ್ಷ ೧೦೦೦ದ ಕ್ರಿ.ಶ. ೧೦೭೮ಕ್ಕೆ ಸರಿ ಹೊಂದುವ ಕೆಕ್ಕಾರ ಸ್ತಂಭ ಶಾಸನದಲ್ಲಿ, ಸ್ತಂಭವನ್ನು ಕೆತ್ತಿದ ಶಿಲ್ಪಿಯ ಹೆಸರು ಹೇಳುವಾಗ ಆತ ಅಂಕೋಲೆಯವನು ಎಂಬ ಪ್ರಸ್ತಾಪ ಬರುತ್ತದೆ. ಅನಂತರದ ಕ್ರಿ.ಶ. ೧೩೬೧ರ ಅವಧಿಗೆ ಸೇರುವ ಭಾವಿಕೇರಿ ಶಿಲಾಶಾಸನದಲ್ಲಿ ಈ ಪ್ರದೇಶವನ್ನು 'ಅಂಕೋಲೆ ನಾಡು' ಎಂದು ಕರೆಯಲಾಗಿದೆ. ಈ ಎಲ್ಲ ಶಾಸನಗಳಲ್ಲಿ ಅಂಕೋಲೆ ಎಂದು ಸ್ಪಷ್ಟವಾಗಿ ಸಂಬೋಧಿಸುವುದರಿಂದ ಶಾಸನ ಕಾಲಕ್ಕಿಂತ ಕೆಲವು ಶತಮಾನಗಳಷ್ಟಾದರೂ ಹಿಂದೆಯೇ ಈ ಪ್ರದೇಶವನ್ನು ಅಂಕೋಲೆಯೆಂದು ಕರೆಯಲಾಗುತ್ತಿತ್ತು ಎನ್ನುವುದಕ್ಕೆ ಕೆಕ್ಕಾರಿನ ವೀರಗಂಬ ಶಾಸನದಿಂದ ಪುಷ್ಠಿ ದೊರೆಯುತ್ತದೆ.

ಪೂರ್ವ ಅಭಿಪ್ರಾಯಗಳು:

ಅಂಕೋಲೆಗೆ ಆ ಹೆಸರು ಬಂದಿರುವ ಬಗ್ಗೆ ಅನೇಕ ಅಭಿಪ್ರಾಯಗಳಿವೆ. ಕೆಲವು ವಿದ್ವಾಂಸರು 'ಅಂಕಲೇಶ್ವರ' ಎನ್ನುವ ದೇವಾಲಯದಿಂದ ಈ ಊರಿಗೆ ಅಂಕೋಲಾ ಎನ್ನುವ ಹೆಸರು ಬಂದಿದೆ ಎನ್ನುತ್ತಾರೆ. ಆದರೆ ಅಂಕಲೇಶ್ವರ ಎನ್ನುವ ಹೆಸರಿನ ದೇವಾಲಯ ಇಂದು ಅಂಕೋಲೆಯಲ್ಲಿಲ್ಲ. ಅಂಕಲೇಶ್ವರ ದೇವಾಲಯದಿಂದಾಗಿ ಅಂಕೋಲೆಗೆ ಆ ಹೆಸರು ಬಂದಿದೆ ಎನ್ನುವುದಕ್ಕೆ ಯಾವುದೇ ಆಧಾರಗಳ ಬೆಂಬಲವೂ ಇಲ್ಲ. ಹಲವು ಶತಮಾನಗಳ ಹಿಂದೆ ಗಂಗಾವಳಿ ನದಿಗೆ 'ಅಂಕಲೇಶ್ವರ ನದಿ' ಎಂಬ ಹೆಸರಿದ್ದಿತ್ತು. ಆ ನದಿಯಿಂದಾಗಿ ಈ ಊರಿಗೆ ಅಂಕೋಲೆ ಎಂದು ಹೆಸರು ಬಂದಿದೆ ಎನ್ನುವುದು ಇನ್ನೊಂದು ವಾದ. ಈ ವಾದಕ್ಕೂ ಯಾವುದೇ ಆಧಾರಗಳ ಬಲವಿಲ್ಲ. ಇದು ಒಂದು ಊಹೆ ಅಷ್ಟೇ. ಗಂಗಾವಳಿ ನದಿಯ ದಂಡೆಗೆ ಹೊಂದಿಕೊಂಡಿರುವ ಎಲ್ಲ ಹಳ್ಳಿಗಳು ಬೇರೆ–ಬೇರೆ ಹೆಸರುಗಳಿಂದ ಗುರುತಿಸಲ್ಪಟ್ಟಿವೆ. ನದಿಯು ಸಮುದ್ರ ಸೇರುವಲ್ಲಿ ದಕ್ಷಿಣ ದಂಡೆಯ ಊರು ಗಂಗಾವಳಿ ಎನ್ನುವ ಹೆಸರಿನಿಂದ ಗುರುತಿಸಿದರೆ, ಉತ್ತರದ ದಡದ ಊರನ್ನು ಮಂಜಗುಣಿ ಎಂದು ಕರೆಯಲಾಗಿದೆ. ಈ ಮಂಜಗುಣಿಯಲ್ಲಿ ಸಾಳುವ ಕೃಷ್ಣದೇವರಸ ವೊಡೆಯನ ಕಾಲದ ಒಂದು ಶಿಲಾಶಾಸನವಿದ್ದು, ಅದರಲ್ಲಿ ಮದಲ ಹೊಳೆ ಎಂದು ಉಲ್ಲೇಖಿಸಲಾಗಿದೆ. ಗಂಗಾವಳಿ ನದಿಗೆ ಅಂಕಲೇಶ್ವರ ನದಿ ಎಂಬ ಹೆಸರಿದ್ದ ಬಗ್ಗೆ ಯಾವುದೇ ದಾಖಲೆಗಳು ದೊರೆಯಲಾರವು.

ಇನ್ನು ಅಂಕೋಲಾ ತಾಲೂಕಿನ 'ತುಳಸಿ ಗುಡ್ಡ' ಎಂಬ ಸಾನು ಪ್ರದೇಶದಲ್ಲಿ 'ಅಂಕೋಲ' ಎಂಬ ಜಾತಿಯ ಒಂದು ವೃಕ್ಷ ಇತ್ತಂತೆ. ಈ ಕರಾವಳಿ ಭಾಗದ ಬಹುತೇಕ ಮೀನುಗಾರರು ಅತಿ ದೂರದವರೆಗೆ ಸಮುದ್ರದಲ್ಲಿ ಮೀನು ಹಿಡಿಯಲೆಂದು ಹೊರಟಾಗ ಈ 'ಅಂಕೋಲ' ಮರವನ್ನೇ ತಮ್ಮ ದಿಕ್ಸೂಚಿಯಾಗಿಟ್ಟುಕೊಂಡು ತಮ್ಮ ಮೂಲ ನೆಲೆಗಳಿಗೆ ವಾಪಸ್ಸಾಗುತ್ತಿದ್ದರಂತೆ. ಕ್ರಮೇಣ ಆ ಮರದ ಹೆಸರೇ ಸುತ್ತಲಿನ ಪ್ರದೇಶಕ್ಕೂ ವ್ಯಾಪಿಸಿ, ಹಾಗೆಯೇ ಕರೆಯುವ ಪರಿಪಾಠ ಬೆಳೆದು ಮೊದಲು 'ಅಂಕೋಲ' ಇದ್ದದ್ದು ಕ್ರಮೇಣ 'ಅಂಕೋಲೆ'ಯಾಗಿ ಪರಿಣಮಿಸಿತೆಂದು ಹೇಳುತ್ತಿರುವ ಬಗ್ಗೆ ಸಾಹಿತಿ ದಿ. ವಿಷ್ಣು ನಾಯ್ಕರು 'ಅಂಕೋಲಾ : ಒಂದು ನುಡಿ ಚಿತ್ರ' ಎಂಬ ತಮ್ಮ ಪ್ರಬಂಧದಲ್ಲಿ ವಿವರಿಸಿದ್ದಾರೆ. ಶ್ರೀ ಎಮ್. ಕೇಶವರಾವ್ ಬೆಂಗಳೂರುರವರು ಕಿರಿಯರ ಕರ್ನಾಟಕ ಗ್ರಂಥದಲ್ಲಿ 'ಅಂಕೋಲ' ಎಂಬ ಸಸ್ಯದಿಂದಲೇ ಅಂಕೋಲೆಗೆ 'ಅಂಕೋಲ' ಎಂಬ ಹೆಸರು ಬಂದಿದೆ ಎಂದು ತಿಳಿಸಿ, ಹಾಲಕ್ಕಿ ಒಕ್ಕಲು ಈ 'ಅಂಕೋಲ' ಎಂಬ ಸಸ್ಯವನ್ನು ಪೂಜಿಸುತ್ತಾರೆ ಎಂದು ತಿಳಿಸಿದ್ದಾರೆ.

ಪೌರಾಣಿಕ ನೆಲೆಯಲ್ಲಿ ಅಭ್ಯಾಸ :

'ಶ್ರೀ ಮದ್ಗೋಕರ್ಣ ಪುರಾಣ'ದಲ್ಲಿ ಈ ಅಂಕೋಲೆಯನ್ನು 'ಶಾಕ್ತಗ್ರಾಮ' ಅಥವಾ 'ಶಾಕ್ತಕ್ಷೇತ್ರ' ಎಂದು ಕರೆಯಲಾಗಿದೆ. ಶಾಕ್ತಗ್ರಾಮ ಎಂದರೆ ಆದಿಶಕ್ತಿಗಳಾದ ದೇವತೆಗಳನ್ನು ಪೂಜಿಸಲಾದ ಸ್ಥಳ ಎಂದರ್ಥ. ಆದ್ದರಿಂದ ಈ ಗ್ರಾಮಕ್ಕೆ ಮಹಾಪುರಾಣಗಳ ಕಾಲದಲ್ಲಿ 'ಅಂಕವಲ್ಲಿ' ಎಂದು ಕರೆಯಲಾಗುತ್ತಿತ್ತು ಎಂದು ಭಾರತಿ ನೇರಲಕಟ್ಟೆಯವರು ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. ಇವರು ಅದೇ ಲೇಖನದಲ್ಲಿ ಮುಂದುವರಿದು, ರಾವಣನು ತನ್ನ ತಪಸ್ಸಿನಿಂದ ಶಿವನನ್ನು ಮೆಚ್ಚಿಸಿ ಆತನಿಂದ ಪಾರ್ವತಿಯನ್ನು ಪಡೆದು ದಕ್ಷಿಣಾಭಿಮುಖವಾಗಿ ಹೊರಟಾಗ ಪಾರ್ವತಿಯನ್ನು ಇಂದಿನ ಅಂಕೋಲೆಯ ಶಿರಕುಳಿ ಗ್ರಾಮದ ನೆಲದ ಮೇಲಿಟ್ಟನಂತೆ. ಪಾರ್ವತಿಯು ರಕ್ಷಣೆಗಾಗಿ ಆದಿಶಕ್ತಿಯನ್ನು ದಯಪಾಲಿಸಿದನು. ಹೀಗೆ ನಿಸ್ತೇಜಳಾದ ಪಾರ್ವತಿಯನ್ನು ಶಿವನು ತನ್ನ ಬಾಹುಗಳಿಂದ ರಕ್ಷಿಸಿದ ಈ ರಕ್ಷೀ ಕ್ಷೇತ್ರಕ್ಕೆ 'ಅಂಕವಲ್ಲಿ' ಎಂದು ಕರೆಯಲಾಯಿತು ಎಂದಿದ್ದಾರೆ.

ರಾಮಾಯಣ, ಮಹಾಭಾರತ, ಪುರಾಣಗಳ ನೆಲೆಯಲ್ಲಿ ಅಭ್ಯಾಸ ಮಾಡಿದಾಗ ಸ್ಥಳನಾಮದ ಅನೇಕ ಸುಳಿವುಗಳು ದೊರೆಯುತ್ತವೆ. ಪ್ರಾಚೀನ ಕರ್ನಾಟಕದಲ್ಲಿ ನಾಗ, ಮಲ್ಲ, ಗೊಂಡ, ಕನ್ನ, ಕಡ, ಗಂಗ, ಹಲ, ಸಿರ, ಸಿಂಗ, ಮನ್ನ, ನಲ್ಲ, ಬಳ್ಳ, ಅಂಕ, ಕೋಲ ಎನ್ನುವ ಸಮುದಾಯಗಳು ಅಥವಾ ಜನಾಂಗಗಳು ಸಿಗುತ್ತವೆ. ಈ ಜನಾಂಗಗಳು ವಾಸಿಸುತ್ತಿದ್ದ ಪ್ರದೇಶಗಳಿಗೆ ಈ ಜನಾಂಗಗಳ ಹೆಸರಿನಿಂದಲೇ ಗುರುತಿಸಿರುವುದು ಬಹುತೇಕ ಕಡೆಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ನಾಗ ಜನಾಂಗದವರು ವಾಸಿಸುತ್ತಿದ್ದ ಸ್ಥಳಗಳನ್ನು ನಾಗಕುಪ್ಪಾ, ನಾಗತಾಣಾ, ನಾಗನಹಳ್ಳಿ ಇತ್ಯಾದಿ ಹೆಸರುಗಳಿಂದ ಗುರುತಿಸಲಾಗಿದೆ. ಹೀಗೆ ಕರ್ನಾಟಕದಲ್ಲಿ ಒಟ್ಟು ೩೧೩ ಹಳ್ಳಿಗಳು 'ನಾಗ' ಎನ್ನುವ ಶಬ್ದದೊಂದಿಗೆ ಪ್ರಾರಂಭವಾಗುತ್ತದೆ. ಅಂತೆಯೇ ಈ ಮೂಲ ಜನಾಂಗಗಳಲ್ಲಿ 'ಅಂಕ' ಎನ್ನುವುದು ಕೂಡ ಒಂದು. ಅಂಕದಿಂದ ಪ್ರಾರಂಭವಾಗುವ ಒಟ್ಟು ೬೯ ಊರುಗಳು ಕರ್ನಾಟಕದಲ್ಲಿವೆ. ಅದರಲ್ಲಿ ಅಂಕೋಲವೂ ಸೇರಿದೆ. ಅಂಕ ಜನಾಂಗದ ಅಸ್ತಿತ್ವದ ಬಗ್ಗೆ ಹೆಚ್ಚಿನ ಸಂಗತಿಗಳು ತಿಳಿಯಲಾರವು, ಮಹಾಭಾರತದಲ್ಲಿ ಬರುವ ಅಂಗದೇಶವು ಅಂಕರ ನೆಲೆವೀಡಾಗಿತ್ತೆಂದು ಊಹಿಸಲಾಗಿದೆ.

'ಅಂಕ' ಎನ್ನುವ ಶಬ್ದಕ್ಕೆ 'ಮಲ್ಲ' ಎನ್ನುವ ಅರ್ಥವಿದೆ. ಈ 'ಮಲ್ಲ' ಎನ್ನುವ ಹೆಸರಿನ ಜನಾಂಗವೂ ಸಹ ಅಸ್ಥಿತ್ವದಲ್ಲಿತ್ತು. ಕರ್ನಾಟಕದಲ್ಲಿ ೩೮೦ ಸ್ಥಳನಾಮಗಳು ಮಲ್ಲ ಪದದಿಂದ ಪ್ರಾರಂಭವಾಗುತ್ತದೆ. ಮಹಾಭಾರತ, ಮನುಸ್ಮೃತಿ ಇತ್ಯಾದಿಗಳಲ್ಲಿ ಮಲ್ಲರ ಉಲ್ಲೇಖಗಳಿವೆ. ಉತ್ತರ ಭಾರತದಲ್ಲಿನ ಮಲ್ಲರು ಆರ್ಯರೊಂದಿಗಿನ ಯುದ್ಧಗಳಲ್ಲಿ ಸೋತು, ದಸ್ಯುಗಳಾಗಿ ಬಾಳಿದರು. ಅದರೆ ದಕ್ಷಿಣ ಭಾರತದಲ್ಲಿನ ಮಲ್ಲರು ಉಚ್ಚ ಸ್ಥಿತಿಯಲ್ಲಿಯೇ ಬಾಳಿದರು. ಮಹಾಭಾರತದಲ್ಲಿ ಇವರನ್ನು ದಕ್ಷಿಣ ಭಾರತದ ಮಲ್ಲರು ಎಂದು ಗುರುತಿಸಲಾಗಿದೆ. ದಕ್ಷಿಣದಲ್ಲಿ 'ಮಲ್ಲ' ಪದದ ಅರ್ಥ ಶೂರ, ಜಟ್ಟಿ ಎಂದಾಗುತ್ತದೆ. ಕೋಲ ಎನ್ನುವ ಇನ್ನೊಂದು ಸಮುದಾಯವೂ ಇತ್ತು. ಹೀಗೆ ಈ ಜನಾಂಗಿಕ ಹೆಸರುಗಳನ್ನು ಭಾಷಿಕ ವೈಶಿಷ್ಟ್ಯದೊಡನೆ ಅಭ್ಯಾಸಕ್ಕೆ ಬಳಸಿಕೊಂಡಾಗ ಹಲವು ಸಂಗತಿಗಳ ಅನಾವರಣವಾಗುತ್ತದೆ. ಅಂಕ, ಕೋಲ ಮತ್ತು ಮಲ್ಲ

ಈ ಸಮುದಾಯಗಳ ಹೆಸರುಗಳ ಹಿನ್ನಲೆಯಲ್ಲಿ ಅಂಕೋಲೆಯ ಸ್ಥಳನಾಮದ ಅಭ್ಯಾಸವನ್ನು ಈ ರೀತಿಯಾಗಿ ಮಾಡಬಹುದು.

ಭಾಷಾ ಶಾಸ್ತ್ರೀಯ ಅಭ್ಯಾಸ:

'ಅಂಕೋಲೆ' ಎನ್ನುವ ಹೆಸರು 'ಅಂಕವಲೆ' ಎಂಬ ಪದದಿಂದ ಬಂದಿರಬೇಕು. 'ಅಂಕವಲೆ' ಇದು 'ಅಂಕವಲ' ಎನ್ನುವುದರ ಅಪಭ್ರಂಶ ರೂಪ. ಏಕೆಂದರೆ 'ಅಂಕವಲೆ' ಎನ್ನವುದಕ್ಕೆ ಸ್ಪಷ್ಟವಾದ ಅರ್ಥವಿಲ್ಲ. 'ಅಂಕವಲ' ಈ ಪದವು ಅಂಕ+ಪೊಲ ಎಂಬೆರಡು ಶಬ್ದಗಳಿಂದಾಗಿದೆ. 'ಅಂಕವಲ' ಎನ್ನುವುದಕ್ಕೆ ಗುರುತು ಮಾಡಿದ ಪ್ರದೇಶ, ಮೀಸಲು ಹೊಲ ಇತ್ಯಾದಿ ಅರ್ಥಗಳಿವೆ. ಕದಂಬ, ಚಾಲುಕ್ಯ, ರಾಷ್ಟ್ರಕೂಟರಂತ ಬೃಹತ್ ಸಾಮ್ರಾಜ್ಯದಲ್ಲಿ ಈ ಊರು ಆ ಸಾಮ್ರಾಜ್ಯಗಳ ಒಂದು ಬದಿಯಲ್ಲೇ ಇತ್ತು. ಹೀಗೆ ಒಂದು ಪಾರ್ಶ್ವದಲ್ಲಿರುವ ಅಥವಾ ಒಂದು ಮಗ್ಗಲಿನಲ್ಲಿರುವ ಸೀಮೆ ಅಥವಾ ಕೇರಿ ಇದಾಗಿದ್ದರಿಂದ ಇದಕ್ಕೆ 'ಅಂಕವಲ' ಎನ್ನುವ ಹೆಸರು ಬಂದಿರುವ ಸಾಧ್ಯತೆಗಳುಂಟು.

'ಅಂಕ' ಎನ್ನವುದಕ್ಕೆ 'ಮಲ್ಲಯುದ್ಧವೇ ತನ್ನ ವೃತ್ತಿಯಾಗುಳ್ಳ ವೀರ' ಅಥವಾ 'ಜಟ್ಟಿ' ಎನ್ನುವ ಅರ್ಥಗಳುಂಟು. ಇಂದಿನ ಅಂಕೋಲೆಯಲ್ಲಿ 'ಮಲ್ಲಾಪುರ' 'ಮಲ್ಲನಗುಂದೆ' ಇತ್ಯಾದಿ ಸ್ಥಳಗಳಿವೆ. ಈ ಸ್ಥಳನಾಮಗಳನ್ನು ಗಮನಿಸಿದಾಗ ಹಿಂದೊಮ್ಮೆ ಇಲ್ಲಿ ಮಲ್ಲಯುದ್ಧ ಪರಿಣಿತರು ಇದ್ದಿರಬಹುದಾದ ಸಾಧ್ಯತೆಗಳಿಲ್ಲದೇ ಇಲ್ಲ. ಇಂದಿನ ಅಂಕೋಲೆಯ ಒಂದು ಭಾಗವಾಗಿರುವ ಲಕ್ಷ್ಮೇಶ್ವರ ಗ್ರಾಮದ ದಕ್ಷಿಣಕ್ಕಿರುವ 'ಮಲ್ಲನಗುಂದೆ' ಎಂಬ ಸ್ಥಳವು ಹಿಂದೆ ಮಲ್ಲರು ಕಸರತ್ತು ಮಾಡುವ ಗರಡಿಯ ಮನೆಯಾಗಿತ್ತೆಂದು ಊರಿನ ಹಿರಿಯರು ಕಥೆ ಹೇಳುತ್ತಿದ್ದರು. ಹೀಗೆ ಜಟ್ಟಿಗಳಿರುವ ಪ್ರದೇಶ ಇದಾಗಿದ್ದರಿಂದ ಇದಕ್ಕೆ 'ಅಂಕವಲ' ಎನ್ನುವ ಹೆಸರು ಬಂದಿರುವ ಇನ್ನೊಂದು ಸಾಧ್ಯತೆಯೂ ಇದೆ. ಅಂಕೋಲೆಯಲ್ಲಿ 'ಮಲ್ಲಾಪುರ' ಎನ್ನುವ ಹೆಸರಿನ ಇನ್ನೊಂದು ಹಳ್ಳಿಯೂ ಕೋಟೆಬಾವಿಯ ಸಮೀಪದಲ್ಲಿದೆ.

ಅದೇ ರೀತಿ 'ವಲಿ' ಎನ್ನುವ ಒಂದು ಶಬ್ದಕ್ಕೆ ಅಧೀನ ಪ್ರಾಂತ, ಅಧೀನ, ವಶ, ಅಧಿಕಾರ, ಆಳ್ವಿಕೆ, ಭೂಮಿ, ರಾಜ್ಯ ಇತ್ಯಾದಿ ಅರ್ಥಗಳಿವೆ. ಹಿಂದೆಂದಾರೂ ಈ ಅಂಕೋಲೆಯ ಪ್ರದೇಶ ಮಲ್ಲಯುದ್ಧ ವೀರರ ಅಂದರೆ ಜಟ್ಟಿಗಳ ಅಧೀನದಲ್ಲಿದ್ದಾಗ ಅಥವಾ ಅವರ ಆಳ್ವಿಕೆಗೆ ಒಳಪಟ್ಟ ಸಮಯದಲ್ಲಿ ಜಟ್ಟಿ ಎನ್ನುವ ಅರ್ಥ ನೀಡುವ 'ಅಂಕ' ಪದದ ಮುಂದೆ 'ವಲಿ' ಪದವು ಸೇರಿ ಈ ಪ್ರಾಂತಕ್ಕೆ 'ಅಂಕವಲಿ' ಎನ್ನುವ ಹೆಸರು ಬಂದು ಅನಂತರದಲ್ಲಿ 'ಅಂಕವಲೆ'ಯಾಗಿ ಅಂಕೋಲೆಯಾಗಿ ಪರಿಣಮಿಸಿರಬಹುದಾದ ಸಾಧ್ಯತೆಗಳನ್ನೂ ಅಲ್ಲಗಳೆಯುವಂತಿಲ್ಲ.

'ಅಂಕ' ಎನ್ನುವುದಕ್ಕೆ ಹೋರಾಟ, ಕಾಳಗ ಎನ್ನುವ ಅರ್ಥಗಳೂ ಉಂಟು. ಹಿಂದೆ ಅಂಕೋಲೆಯ ಪ್ರದೇಶದಲ್ಲಿ ಅನೇಕ ಕಾಳಗಗಳು ನಡೆದ ಬಗ್ಗೆ ಆಧಾರಗಳು ದೊರೆಯುತ್ತವೆ. ಅನೇಕ ಜನಪದ ಕಥನ ಕವನಗಳಲ್ಲೂ ಯುದ್ಧದ ವಿವರಣೆಯಿದೆ. ಅಂಕೋಲೆ ಸೀಮೆಯುದ್ದಕ್ಕೂ ದೊರೆಯುವ ವೀರಗಲ್ಲುಗಳೂ ಈ ಬಗ್ಗೆ ಸಾಕಷ್ಟು ಪುರಾವೆಯೊದಗಿಸುತ್ತದೆ. ಈ ರೀತಿ ಸತತ ಯುದ್ಧಗಳು ನಡೆಯುವ ಪ್ರದೇಶ ಇದಾಗಿದ್ದರಿಂದ ಈ ಊರಿಗೆ 'ಅಂಕವಲ' ಎನ್ನುವ ಹೆಸರು ಬಂದು ಕ್ರಮೇಣ ಅದು ಅಪಭ್ರಂಶಗೊಂಡು 'ಅಂಕವಲೆ'ಗೊಂಡು ಅಂಕೋಲೆಯಾಗಿ ಮಾರ್ಪಟ್ಟಿರುವ ಸಾಧ್ಯತೆಗಳೂ ಇವೆ. ಸರಿಸುಮಾರು ಒಂದು ಸಾವಿರ ವರ್ಷಗಳಷ್ಟು ಹಿಂದೆಯೇ ಈ ನೆಲಕ್ಕೆ 'ಅಂಕೋಲೆ' ಎನ್ನುವ ಹೆಸರಿದ್ದು, ಇಂದಿಗೂ ಅದೇ ಹೆಸರು ಪ್ರಚಲಿತವಿದೆ. ಅಂದಿನ 'ಅಂಕೋಲೆ' ಸಂಸ್ಕೃತೀಕರಣಗೊಂಡು 'ಅಂಕೋಲಾ' ಆಗಿದೆ.

ಶಾಸನಗಳಲ್ಲಿ ಅಂಕೋಲೆಯ ಉಲ್ಲೇಖ :

ಶಾಸನೋಕ್ತವಾಗಿ ಅಂಕೋಲೆಯ ಪ್ರಸ್ತಾಪ ಸಿಗುವುದು ಏಳನೇ ಶತಮಾನದ ಬಸವನಪುರದ ಪುನ್ನಾಟರ ತಾಮ್ರ ಶಾಸನದಲ್ಲಿ. ಸಂಸ್ಕೃತ-ಕನ್ನಡ ದ್ವಿಭಾಷಾ ಶಾಸನವಾದ ಇದರಲ್ಲಿ ಸ್ಥಳದ ಗಡಿ ಗುರುತಿಸುವಾಗ 'ಅಂಕೋಲೆಗಾಲೆ' ಎಂಬ ಪ್ರಯೋಗ ದೊರೆಯುತ್ತದೆ. ಸಂಸ್ಕೃತದಲ್ಲಿ ಪ್ರಾರಂಭವಾಗುವ ಈ ತಾಮ್ರಪಟದ ೨೨-೨೩ನೇ ಸಾಲಿನಲ್ಲಿ ದತ್ತಿಗೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿ 'ಎಡೆತ್ತೊಜೆನಾಡು ವಿಷಯೇ.... ಮುಟ್ಟಲವ್ವಿಯೂರ್ನ್ನಮಗ್ರಾಮಂ ಸರ್ವ್ವಭಾದಾ ಪರಿಹಾರಂ ಉದರಪೂರ್ವ್ವಂನ್ದತ್ತಃ' ಎಂದು ಹೇಳಿ, 'ತಸ್ಯ ಸೀಮಾಂತರಂ' ಎಂದು ಮುಂದೆ

ಕನ್ನಡದಲ್ಲಿ ಗಡಿಯನ್ನು ಹೀಗೆ ಗುರುತಿಸಲಾಗಿದೆ. '....ಪೂರ್ವ್ವಸ್ಯಾನ್ದಿಶಿ ತುಟಿದ್ದಿಲ್ಗಾಲೆ ಅನ್ತೆಬನ್ದು ಕಳರಾಬಾಯ್ಕಾಲುಳ್ ಕೂಡಿ ಅನ್ತೆಬನ್ದು ನೆಜಿಲ್ಗಾಲೆ ಅನ್ತೆಬನ್ದು ಕೊಣ್ಣಿನ್ದಗಾಲೆ ಆನ್ತೆ ಅಂಕೊಲೆಗಾಲೆ ಅನ್ತೆಬನ್ದು ತೊಜಿಯಳ್ ಕೂಡಿತ್ತು ದಕ್ಷಿಣಾದೆಸೆಗೆಲ್ಲಂ ತೊಜಿಏ ಅನ್ತೆಬನ್ದು ಪಶ್ಚಿಮಾದೆಶೆಗೆಲ್ಲಂ ಮತ್ತಂ ತೊಜಿಏ ಅನ್ತೆಬನ್ದು ಉತ್ತರಸ್ಯಾನ್ದಿಶಿ ಕೊಟ್ಟುಗೂಡಲೆ ಅನ್ತೆಬನ್ದು ಮೂಡಾಯಿನೀಟ್ತಿನ್ದ ನಿರೀಟಿವೆ ಅನ್ತೆಬನ್ದು ತೊಲ್ಮೊಜಿಡಿಏ ಕಲ್ಕುಪ್ಪೆಏ ಅನ್ತೆಬನ್ದು ಕೊನ್ದೆವಡಿಏ ಅನ್ತೆಬನ್ದು ಬೆಟ್ಟದಾ ಮೂಡಾಯ್ ಪೊರೆಏ ಬನ್ದು ತುಟಿದ್ದಿಲ್ಗಾಲೊಳ್ಕುಡಿತ್ತು ಸೀಮೆ..' ಹೀಗೆ ಗಡಿಯನ್ನು ಗುರುತಿಸುವಾಗ ಅಂಕೋಲೆ ಸ್ಥಳನಾಮದ ಉಲ್ಲೇಖ ಸಿಗುತ್ತದೆ. ಕ್ರಿ.ಶ. ೬೩೧ರ ಅಚಲಪುರದ ರಾಷ್ಟ್ರಕೂಟರ ತಾಮ್ರಶಾಸನದಲ್ಲಿ ಶಲಾ ನದಿಯ ದಡದ ಮೇಲಿನ ಅಂಕೋಲಿಕಾ ಗ್ರಾಮವನ್ನು 'ನನ್ನರಾಜ' ದಾನ ಮಾಡಿದ್ದನ್ನು ಈತನ ಆಜ್ಞೆಯ ಮೇರೆಗೆ ಚಂದ್ರನ ಮಗ ದುರ್ಗಾದಿತ್ಯ ಕ್ಷತ್ರೀಯ ದಾಖಲಿಸಿದನು. ಇವು ಶಾಸನೋಕ್ತವಾಗಿರುವ 'ಅಂಕೋಲೆ' ಎಂಬ ಪದದ ಪ್ರಾಚೀನ ಉಲ್ಲೇಖಗಳು.

ಆನಂತರದ ದಿನಗಳಲ್ಲಿ ಸಿಗುವ ಅಂಕೋಲೆ ಹೆಸರಿನ ಶಾಸನೋಕ್ತ ಉಲ್ಲೇಖವೆಂದರೆ, ಹೊನ್ನಾವರ ತಾಲೂಕಿನ ಕೆಕ್ಕಾರದ ಅಮ್ಮನವರ ದೇವಸ್ಥಾನದಲ್ಲಿರುವ ಶಕ ವರ್ಷ ೧೦೦೦ದ ಕ್ರಿ.ಶ. ೧೦೭೮ಕ್ಕೆ ಸರಿ ಹೊಂದುವ ವೀರಗಂಬ ಶಾಸನದಲ್ಲಿ. ಈ ಶಾಸನವು ಪಂಚಮಹಾಶಬ್ಧ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಮತ್ತಲೆ ಸಿಂಘ, ಸಂಗ್ರಾಮ ಗರುಡ, ಪಡವಳ ಬುದ್ಧ ಗೋಕರ್ಣದಲ್ಲಿ ಅಸುನೀಗಿದ ಬಗ್ಗೆ ಮೊದಲಲ್ಲಿ ವಿವರಣೆ ನೀಡುತ್ತದೆ. ತದನಂತರ ಕಡತೋಕೆಯ ರಕ್ಷಪಾಲ ಕಾಮದೇವನ ಕಟ್ಟಿದಲಗು, ಮೊದಲಾದ ಬಿರುದಾವಳಿಗಳನ್ನು ಹೊಂದಿದ್ದ ಪಡವಳ ಬುದ್ದನ ಮೊಮ್ಮಗನಾದ ಪಡವಳ ಹಾಚ ಮತ್ತು ಬೋಗೋರಿಕ ಕೂಡಿ ಹೈವೆ, ತೆಂಕಲು, ಕೊಂಕಣದಲ್ಲಿಯ ವೈರಿಗಳನ್ನು ಇರಿದು ಪಡವಳ ಬುದ್ಧನಿಗೆ ಶಕವರ್ಷ ೧೦೦೦ದಲ್ಲಿ ವೀರಗಲ್ಲನ್ನು ಮಾಡಿಸಿದರೆಂದು ತಿಳಿಸುತ್ತದೆ. ವೀರಗಂಬವನ್ನು ಅಂಕೋಲೆಯ ನಂದಿಓಜನು ಮಾಡಿದರೆ ಕೇಶವನು ಶಾಸನವನ್ನು ಬರೆದಿದ್ದಾನೆ. ಎಂದು ತಿಳಿಸುತ್ತದೆ. ನಂತರದ ಕ್ರಿ.ಶ. ೧೩೬೨ರ ಭಾವಿಕೇರಿ ಶಿಲಾಶಾಸನದಲ್ಲಿ ಈ ಪ್ರದೇಶವನ್ನು 'ಅಂಕೋಲೆ ನಾಡು' ಎಂದು ಕರೆಯಲಾಗಿದೆ. ಶಕವರ್ಷ ೧೨೮೪ ಪ್ಲವ ಸಂವತ್ಸರದ ಕಾರ್ತಿಕ ಶುದ್ಧ ಪ್ರತಿಪದೆಯಂದು ಬಸವೆಯ ದಂಡನಾಯಕನು ವಿಜಯನಗರದ ಸಾಮ್ರಾಟ ವೀರ ಬುಕ್ಕರಾಯರಿಂದ ಅಂಕೋಲೆ ನಾಡೊಳಗಿನ ಬಾವಿಯಕೇರಿಯ ಗ್ರಾಮವನ್ನು ಕೊಂಡು ಶ್ರೀಗುರು ಕ್ರಿಯಾಶಕ್ತಿ ಯತೀಶ್ವರರಿಗೆ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ವಿಜಯನಗರದ ಅವಧಿಗೆ ಸೇರುವ ೨೦ ಕಡತ ಶಾಸನಗಳಲ್ಲಿ ಅಂಕೋಲೆ ಮತ್ತು ಈ ತಾಲೂಕಿನ ಇತರ ಹಳ್ಳಿಗಳ ಹೆಸರುಗಳನ್ನು ಪ್ರಸ್ತಾಪಿಸಲಾಗಿದೆ.

ಇತ್ತೀಚೆಗೆ ನನ್ನ ಗಮನಕ್ಕೆ ಬಂದ ಅಂಕೋಲೆಯ ಗೋಪಿನಾಥ ವಿನಾಯಕ ಅರಸ ಅವರ ಮನೆಯಲ್ಲಿದ್ದ ಹಲವು ತುಂಡುಗಳಲ್ಲಿ ಒಡೆದಿರಬಹುದಾದ ಶಾಸನದಲ್ಲಿ ಒಟ್ಟೂ ಒಂಭತ್ತು ಸಾಲುಗಳ ಭಾಗಶಃ ಪಠ್ಯ ದೊರೆಯುತ್ತದೆ. ಈ ಶಾಸನದಲ್ಲಿ ಬಳಸಲಾದ ಲಿಪಿಯನ್ನು ಅಭ್ಯಸಿಸಲಾಗಿ ಇದು ೧೬–೧೭ನೇ ಶತಮಾನದ್ದು ಎಂದು ಗುರುತಿಸಬಹುದಾಗಿದೆ. 'ಶಿವ ಪೂಜೆ ಪೂಜಿಸಲು ಅರಮನೆಯ ಕರಣಿಕರು ಧಾರಾಪೂರ್ವಕವಾಗಿ, ಮೂರು ಗ್ರಾಮಗಳ ದಾರಿಯಲ್ಲಿ ನಿಲ್ಲಿಸಿದ ಗಡಿಕಲ್ಲು, ಈ ತರಹನಾಗಿ ಆವೃತ್ತವಾದ ಭೂಮಿಯನ್ನು ದಾನಮಾಡಿರುವುದನ್ನು ತಿಳಿಸುತ್ತದೆ. 'ಅಂಕಲೆ'ಯನ್ನು ಉಲ್ಲೇಖಿಸುತ್ತದೆ. ಇಲ್ಲಿ ಉಲ್ಲೇಖಿತ 'ಅಂಕಲೆ' ಹಿಂದೆ ಉಲ್ಲೇಖಿಸಿದ ಶಾಸನಗಳಲ್ಲಿ ಬಂದ 'ಅಂಕೋಲೆ'ಯೇ ಆಗಿದೆ.

ಹೀಗೆ ಏಳನೇ ಶತಮಾನದ ಮಧ್ಯ ಭಾಗದಿಂದ ಅಂದರೆ ಸುಮಾರು ಸಾವಿರದ ನಾನೂರೈವತ್ತು ವರ್ಷಗಳಷ್ಟು ಹಿಂದಿನಿಂದ ಈ ನೆಲಕ್ಕೆ ಅಂಕೋಲೆ ಎನ್ನುವ ಹೆಸರಿರುವ ವಿಷಯ ನಮಗೆ ಶಾಸನಗಳಿಂದ ಮನದಟ್ಟಗುತ್ತದೆ. ಮುಖ್ಯವಾಗಿ ಅಂದಿನಿಂದ ಇಂದಿನವರೆಗೆ ಈ ಹೆಸರು ಯಾವುದೇ ಹೆಚ್ಚಿನ ಅಪಭ್ರಂಶಗಳಿಗೆ ತುತ್ತಾಗದೇ ಮೂಲ ರೂಪದಲ್ಲೇ ಕಾಣಸಿಗುತ್ತದೆ. ಇದು ಈ ನೆಲ ಚರಿತ್ರೆಯಲ್ಲಿ ಬಹು ಮುಖ್ಯ ಭೂಮಿಕೆಯನ್ನು ನಿಭಾಯಿಸಿರುವುದಕ್ಕೆ ಬಲವಾದ ಸಾಕ್ಷಿಯಾಗಿದೆ.

ಅಂಕೋಲೆಯ ಪ್ರಾಗೈತಿಹಾಸಿಕ ನೆಲೆಗಳು:

'ಗಂಡು ಮೆಟ್ಟಿನ ನೆಲ ಅಂಕೋಲೆ', 'ಕರ ನಿರಾಕರಣೆಯ ಕರ್ಮಭೂಮಿ', 'ಸ್ವಾತಂತ್ರ್ಯ ಹೋರಾಟದ ಪುಣ್ಯಭೂಮಿ'... ಹೀಗೆ ಅಂಕೋಲೆಯ ಚರಿತ್ರೆಯ ಕುರಿತಾಗಿ ಮಾತನಾಡುವಾಗ ಮೇಲಿಂದ ಮೇಲೆ ಕೇಳಿಬರುತ್ತಿದ್ದ ಮತ್ತು ಕೇಳಿಬರುತ್ತಿರುವ ಮಾತುಗಳಿವು. ಚಿಕ್ಕವನಿದ್ದಾಗ ಇಂಥ ಮಾತುಗಳನ್ನು ಕೇಳಿದಾಗ ಬಹಳ ಹೆಮ್ಮೆಯಾಗುತ್ತಿತ್ತು. ಇದು ಅಂಕೋಲೆಯ ಬಹು ದೊಡ್ಡ ಇತಿಹಾಸ ಎನ್ನುವ ಕಲ್ಪನೆ ಮನಸ್ಸಿನಲ್ಲಿ ರೂಪು ತಳೆದಿತ್ತು. ನಂತರದ ದಿನಗಳಲ್ಲಿ ಅರಿವಿನ ವಿಸ್ತಾರ ಹನಿ ಹನಿಯಾಗಿ ಬೆಳೆಯುತ್ತಿದ್ದಂತೆ ಸ್ವಾತಂತ್ರ್ಯ ಚಳುವಳಿಯ ಇತಿಹಾಸ ಶತಮಾನದೀಚಿನ ಇತಿಹಾಸ, ಆ ಮೊದಲಿನ ಅಂಕೋಲೆಯ ಇತಿಹಾಸ ಏನು? ಎನ್ನುವ ಪ್ರಶ್ನೆ-ಕುತೂಹಲ ಮೂಡಲು ಆರಂಭವಾಯಿತು. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾಗಲೆಲ್ಲ ಏನಾದರೊಂದು ಹೊಸ ವಿಷಯ ಗೋಚರಿಸತೊಡಗಿತು. ಅಂಕೋಲೆಯ ಇತಿಹಾಸದ ಕುರಿತಾದ ಕಲ್ಪನೆಗಳೆಲ್ಲ ಕರಗಿ ನೈಜತೆ ಎದುರಾಗತೊಡಗಿತು. ಶಾಸನ, ವೀರಗಲ್ಲುಗಳ ಪರಿಚಯವಾದ ಮೇಲಂತೂ ಅಂಕೋಲೆಯ ಚರಿತ್ರೆಯ ಒಂದೊಂದೇ ಅಧ್ಯಾಯಗಳು ತೆರೆದುಕೊಳ್ಳತೊಡಗಿದವು. ಕೆಲವೇ ದಶಕಗಳ ಮಿತಿಯಲ್ಲಿದ್ದ ಚರಿತ್ರೆ ಹಲವು ಶತಮಾನಗಳ ಹಿಂದಿನ ವ್ಯಾಪ್ತಿಯನ್ನು ಪಡೆಯತೊಡಗಿತು. ಅಂಕೋಲೆಯ ಚರಿತ್ರೆಯ ಅಧ್ಯಯನ, ಶೋಧನೆಯು ನನ್ನ ಆಸಕ್ತಿಯ ಕ್ಷೇತ್ರವಾಗಿ ಬೆಳೆಯಿತು. ಉದ್ಯೋಗ ಬದಲಾದರೂ ಈ ಅಧ್ಯಯನ, ಶೋಧನೆ ಹವ್ಯಾಸವಾಗಿ ಮುಂದುವರೆದಿದೆ.

ಕಳೆದ ಶತಮಾನದ ಇತಿಹಾಸದಿಂದ ಸ್ಫೂರ್ತಿಪಡೆದು ಅಂಕೋಲೆಯ ಚರಿತ್ರೆಯನ್ನು ಅರಸುತ್ತ ಕ್ರಿಸ್ತ ಶಖಾರಂಭದವರೆಗೆ ಅಂಕೋಲೆಯ ಚರಿತ್ರೆಯ ಬೇರುಗಳು ಹಬ್ಬಿರುವುದು ಕಂಡುಕೊಂಡೆ. ಅಲ್ಲಲ್ಲಿ ಒಂದಷ್ಟು ಕೊಂಡಿಗಳು ಕಳಚಿದ್ದುದರ ಹೊರತಾಗಿಯೂ ಸುಮಾರು ಎರಡು ಸಾವಿರ ವರ್ಷಗಳ ನಿರಂತರ ಚರಿತ್ರೆ ಅಂಕೋಲೆಗಿದೆ ಎನ್ನುವುದು ಮನದಟ್ಟಾಯಿತು. ಈ ಸಂದರ್ಭದಲ್ಲಿ ನಾನು ಅಂಕೋಲೆಯ ಚರಿತ್ರಪೂರ್ವಕಾಲದ ಇತಿಹಾಸವನ್ನು ಗಮನಿಸಿದ್ದು ತೀರಾ ಕಡಿಮೆಯೇ ಆಗಿತ್ತು. ಆಗೀಗ ಚೂರು ಪಾರು ಗಮನಿಸಿದ್ದರೂ ಅದನ್ನು ಗಂಭೀರವಾಗಿ ಪರಿಗಣಿಸಿದ ಸಂದರ್ಭಗಳಿರಲಿಲ್ಲ. ಈ ಪ್ರಬಂಧದ ಸಿದ್ಧತೆಯಲ್ಲಿದ್ದಾಗ ಹಿರಿಯರಾದ ಗೋಪಾಲಕೃಷ್ಣ ನಾಯಕರು (ಕಾಂತ ಮಾಸ್ತರರು) ತಮ್ಮೂರು 'ವಾಸರಕುದ್ರಿಗೆಗೆ ಹೋಗುವ ದಾರಿಯಲ್ಲಿ ಕೊಡ್ಸಣಿ ಹತ್ತಿರ 'ದಿಬ್ಬಣಗಲ್ಲು' ಎಂದು ಕರೆಯುವ ಕೆಲವು ಕಲ್ಲುಗಳಿವೆ ಅವುಗಳನ್ನು ನೋಡಿಕೊಂಡು ಬರುವಾ' ಎಂದು ಕರೆದುಕೊಂಡು ಹೋದರು. ಸ್ಥಳಕ್ಕೆ ಹೋಗಿ ನೋಡಿದಾಗ ಗುಡ್ಡದ ಇಳಿಜಾರು ಮತ್ತು ಗಂಗಾವಳಿ ನದಿಯ ದಡದ ನಡುವಿನ ಜಾಗದಲ್ಲಿ ಬಿದಿಗೆ ಚಂದ್ರಾಕಾರದಲ್ಲಿ ಒಂಭತ್ತು ಕಲ್ಲುಗಳನ್ನು ನೆಟ್ಟಿರುವುದು ಕಾಣಿಸಿತು. ಮಧ್ಯದಲ್ಲಿ ಒಂದೆರಡು ಇತ್ತೀಚಿನ ಹೊಸ ಕಲ್ಲುಗಳು ಸೇರಿಕೊಂಡಿವೆ. ಅದರ ಹೊರತಾಗಿ ಇದು ಶಿಲಾ ಸಂಸ್ಕೃತಿಯ ಕಾಲದ ಸಮಾಧಿ ಸ್ಥಳವಾಗೇ ಕಾಣಿಸುತ್ತಿತ್ತು. ಬೃಹತ್ ಶಿಲಾ ವೃತ್ತದ ಒಂದು ಭಾಗ ಇದಾಗಿರುವ ಸಾಧ್ಯತೆಗಳಿವೆ ಎಂದು ತಿಳಿಸಿದೆ. 'ಸ್ಥಳಿಯ ಹೆಂಗಸರು ಅಲ್ಲಿಂದ ಹಾದು ಹೋಗುವಾಗ ತಾವು ಮುಡಿದ ಹೂವಿನ ಒಂದು ಭಾಗ ಈ ಸ್ಥಳದಲ್ಲಿ ಎಸೆದು ಹೋಗುವುದು ಒಂದು ಪದ್ಧತಿ. ಹಿಂದೆ ಯಾವುದೋ ಒಂದು ಕಾಲದಲ್ಲಿ ಮದುವೆಯ ದಿಬ್ಬಣವೊಂದು ಈ ಸ್ಥಳದಲ್ಲಿ ಹಾದುಹೋಗುವಾಗ ಅಲ್ಲಿ ಮುಡಿದ ಹೂವನ್ನು ಎಸೆದಿರಲಿಲ್ಲವಂತೆ. ಅದರಿಂದಾಗಿ ಪೂರ್ತಿ ದಿಬ್ಬಣವೇ ಮಾಯವಾಗಿ ಹೋಯಿತಂತೆ. ಮಾಯವಾದ ಆ ದಿಬ್ಬಣದ ಜನಗಳೇ ಕಲ್ಲುಗಳಾಗಿ ನಿಂತಿವೆ.' ಇತ್ಯಾದಿ ಈ ಕೊಡ್ಸಣಿಯ ದಿಬ್ಬಣಗಲ್ಲಿನ ಕುರಿತಾಗಿ ಇರುವ ಐತಿಹ್ಯ.

ಶಿವಮೊಗ್ಗ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಈ ಬಗೆಯ ಕಲ್ಲುಗಳು ಕಂಡುಬಂದಿದ್ದು ಅವುಗಳನ್ನೂ ಸಹ ದಿಬ್ಬಣಗಲ್ಲು ಎನ್ನುವುದಾಗಿ ಗುರುತಿಸುತ್ತಾರೆ. ಆ ಎಲ್ಲ ಸ್ಥಳಗಳೂ ಶಿಲಾಯುಗದ ಮಾನವನ ನೆಲೆಗಳಾಗಿದ್ದವು ಎಂದು ಈಗಾಗಲೇ ವಿದ್ವಾಂಸರು ದೃಢೀಕರಿಸಿದ್ದಾರೆ. ಆದ್ದರಿಂದ ಕೊಡ್ಸಣಿಯ ಈ ದಿಬ್ಬಣಗಲ್ಲೂ ಒಂದು ಪ್ರಾಗೈತಿಹಾಸಿಕ ನೆಲೆಯಾಗಿರುವ ಸಾಧ್ಯತೆಗಳಿವೆ ಎಂದು ಪ್ರೊ. ದೇವರಾಜಸ್ವಾಮಿಯವರು ತಿಳಿಸಿದರು. ಈ ಕುರಿತಂತೆ ಇನ್ನಷ್ಟು ಅಧ್ಯಯನ ಕೈಗೊಂಡಾಗ ಕೊಡ್ಸಣಿಯಿಂದ ಕೆಲವೇ ಕಿ.ಮೀ. ದೂರದಲ್ಲಿರುವ ಮೊಗಟಾ ಗ್ರಾಮದ ಪರಿಸರದಲ್ಲೂ ಈ ಬಗೆಯ

ಕಲ್ಲುಗಳಿರುವುದು ಗಮನಕ್ಕೆ ಬಂತು. ಹಾಗೆಯೇ ಹೆಗ್ಗರಣಿಯಲ್ಲೂ ನಿಲಿಸುಗಲ್ಲು ಮಾದರಿಯ ಕಲ್ಲುಗಳು, ಗಾಬಿತ ಕೇಣಿಯ ಗುಡ್ಡದಲ್ಲಿ ಕಲ್ಲಗುಳಿಗಳು ಕಂಡುಬಂದವು. ಬಸಾಕಲ್ಲು ಗುಡ್ಡದಲ್ಲಿ ಬೃಹತ್ ಗಾತ್ರದ ಒಂದು ಶಿಲಾಗುಹೆಯಿದ್ದು ಅಲ್ಲಿಯೂ ಗುಹಾ ಚಿತ್ರಗಳಂತ ಪ್ರಾಗೈತಿಹಾಸಿಕ ಅವಶೇಷಗಳು ಸಿಗುವ ಸಾಧ್ಯತೆಗಳಿವೆ. ಈ ಎಲ್ಲ ನೆಲೆಗಳನ್ನು ಇನ್ನಷ್ಟು ವೈಜ್ಞಾನಿಕವಾಗಿ ಶೋಧಿಸಬೇಕಾದ ಅವಶ್ಯಕತೆಯಿದೆ.

ಅಂಕೋಲೆಯ ಪ್ರಾಗೈತಿಹಾಸಿಕ ಅವಶೇಷಗಳ ಕುರಿತು ಹುಡುಕುವಾಗ ಗಮನಕ್ಕೆ ಬಂದ ಪ್ರಮುಖ ಅವಶೇಷವೆಂದರೆ ಬೊಳೆ ಗ್ರಾಮದಲ್ಲಿರುವ ಹೊರೆಚಾಚು ಎಂದು ಗುರುತಿಸಲ್ಪಡುವ ರಚನೆ. ಇದು ಫ್ರಾನ್ಸ್ ಮೊದಲಾದ ಯುರೋಪಿನ ದೇಶಗಳಲ್ಲಿ ಬೃಹದಾಕಾರವಾಗಿ ಕಂಡುಬರುವ ಡಾಲ್ಮೆನ್‌ಗಳ ರೀತಿಯಲ್ಲಿದ್ದು. ೧:೨ ಅಡಿ ದಪ್ಪದ ಐದುವರೆ ಅಡಿ ಎತ್ತರದ ಮೂರು ಲ್ಯಾಟರೈಟ್ (ಚೀರೆ) ಕಲ್ಲಿನ ಕಂಬಗಳ ಮೇಲೆ ಅದೇ ಗಾತ್ರದ ಮತ್ತೊಂದು ಕಲ್ಲನ್ನು ಅಡ್ಡಲಾಗಿ ಇಡಲಾಗಿದೆ. ಸಾಮಾನ್ಯವಾಗಿ ಬೃಹತ್ ಶಿಲಾಯುಗದ ಈ ಬಗೆಯ ರಚನೆಗಳಲ್ಲಿ ಉಳಿಯ ಪೆಟ್ಟುಗಳು ಕಂಡುಬರುವುದಿಲ್ಲ. ಬೊಳೆಯಲ್ಲಿನ ಕಲ್ಲಿನಲ್ಲಿ ಅಲ್ಲಲ್ಲಿ ಲೋಹದ ಸಲಕರಣೆಯ ಗೀಟುಗಳು ಕಂಡುಬಂದಿವೆ. ಜನವಸತಿ ಪ್ರದೇಶದಲ್ಲಿರುವುದರಿಂದ ಈ ಗೀಟುಗಳು ನಂತರದ ದಿನಗಳಲ್ಲಿ ಆಗಿರಬಹುದಾದ ಸಾಧ್ಯತೆಗಳೂ ಇವೆ. ಸ್ಥಳೀಯವಾಗಿ ಇದನ್ನು ಹೊರೆಚಾಚು ಎಂದು ಕರೆಯುತ್ತಾರೆ. ಹಿಂದೆ ತಲೆಯ ಮೇಲೆ ಸರಕುಗಳನ್ನು ಹೊತ್ತುಕೊಂಡು ಹೋಗುವಾಗ ತಲೆಯಮೇಲಿನ ಭಾರವನ್ನು ಇಂಥ ಕಲ್ಲುಗಳ ಮೇಲೆ ಚಾಚಿ ತುಸು ಆಯಾಸ ಪರಿಹರಿಸಿಕೊಳ್ಳುತ್ತಿದ್ದರು. ಆದ್ದರಿಂದ ಇದನ್ನು ಹೊರೆಚಾಚು ಕಲ್ಲು ಅನ್ನುತ್ತಾರೆ ಎನ್ನುವುದು ಪ್ರಚಲಿತದಲ್ಲಿರುವ ಮಾತು. ಬೊಳೆಯ ಈ ಕಲ್ಲಿನಿಂದ ಸುಮಾರು ಮುನ್ನೂರು ಮೀಟರ ದೂರದಲ್ಲಿ ಹೊಸಗದ್ದೆ ಕ್ರಾಸಿನಲ್ಲಿ ಒಂದು ಹಾಗೂ ಅಲ್ಲಿಂದ ಮತ್ತೆ ಮುನ್ನೂರು ಮೀಟರ ದೂರದಲ್ಲಿ ಜಮಗೋಡ ಪ್ರದೇಶದಲ್ಲಿ ಇನ್ನೊಂದು ಹೀಗೆ ಎರಡು ಪ್ರತ್ಯೇಕ ಒಂಟಿ ಕಂಬಗಳಿವೆ. ಈ ಬಗೆಯ ಒಂಟಿ ಕಂಬಗಳನ್ನು 'ಮೆನ್‌ಹೀರ್'ಗಳೆಂದು ಕರೆಯುತ್ತಾರೆ. ಬೋಳೆ–ಜಮಗೋಡ ಮಧ್ಯದಲ್ಲಿ ಇಂಥ ಇನ್ನೂ ಅನೇಕ ಶಿಲಾ ರಚನೆಗಳು ಈ ಹಿಂದೆ ಇದ್ದಿರಬೇಕು. ಕಾರಣಾಂತರಗಳಿಂದ ಅವು ಈಗ ನಾಶವಾಗಿರುವ ಸಾಧ್ಯತೆಗಳಿವೆ. ಈಗ ಉಳಿದಿರುವ ಶಿಲಾರಚನೆಗಳಂತಹ ರಚನೆಗಳು ಗೋವಾದಿಂದ ಕೇರಳದವರೆಗೂ, ತಮಿಳುನಾಡಿನ ಕೆಲವು ಭಾಗಗಳಲ್ಲೂ, ಶ್ರೀಲಂಕಾದಲ್ಲೂ ಕಂಡುಬಂದಿವೆ ಹಾಗೂ ಅವುಗಳಲ್ಲಿ ಬಹುತೇಕ ಸ್ಥಳಗಳು ಬೃಹತ್ ಶಿಲಾ ಸಮಾಧಿಗಳೆಂದು ದೃಢಪಟ್ಟಿವೆ. ಈ ಕಾರಣದಿಂದಾಗಿ ಬೋಳೆ ಪರಿಸರದಲ್ಲಿರುವ ಲ್ಯಾಟರೈಟ್ ಕಲ್ಲಿನ ರಚನೆಗಳು ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ಡಾಲ್ಮೆನ್ ಮತ್ತು ಮನ್‌ಹೀರ್‌ಗಳಾಗಿರುವ ಸಾಧ್ಯತೆಗಳು ಹೆಚ್ಚಾಗಿವೆ.

ಹೊರೆಚಾಚು ಎಂದು ಗುರುತಿಸಲ್ಪಡುವ ಬೋಳೆಯ ಡಾಲ್ಮೆನ್ ಬೃಹತ್ ಶಿಲಾಯುಗದ ಕಾಲದ್ದೆಂದು ಊಹಿಸಲು ಕೆಲವು ಆಧಾರಗಳೂ ಇವೆ. ಇದೇ ಬೋಳೆ ಗ್ರಾಮದಲ್ಲಿ ಜಂಬಿಟ್ಟಿಗೆಯ (ಲ್ಯಾಟರೈಟ್ ಕಲ್ಲಿನ) ವಿಶಾಲ ಹಾಸುಬಂಡೆಯ ಮೇಲೆ ಎರಡು ಎದುರುಬದುರಾಗಿ ನಿಂತ ಹಸುಗಳು ಅಥವಾ ಗೂಳಿಗಳ ಚಿತ್ರ, ಸೊಂಡಿಲನ್ನು ಎತ್ತಿದ ಆನೆ, ಹಾವು, ಜಿಂಕೆ, ಮೀನು ಮತ್ತು ನಾಲ್ಕು ಭಾಗಗಳಿರುವ ಆಯತಾಕೃತಿ ಇಷ್ಟು ರೇಖಾಚಿತ್ರಗಳು ದೊರೆತಿವೆ. ಈ ನೆಲೆಯನ್ನು ಪರಿಶೀಲಿಸಿದ ಖ್ಯಾತ ಪುರಾತತ್ತ್ವ ಶಾಸ್ತ್ರಜ್ಞರಾದ ಡಾ. ಅ. ಸುಂದರವರು "ಈ ಚಿತ್ರಗಳ ಶೈಲಿ ಹಾಗೂ ಮಾದರಿಗಳನ್ನು ರೇಖೆಗಳ ಲಕ್ಷಣಗಳನ್ನು ಗಮನಿಸಿದರೆ, ಈ ಚಿತ್ರಗಳು ಬಹುಮಟ್ಟಿಗೆ ಶಿಲಾ–ತಾಮ್ರಯುಗ–ಆದಿ ಬೃಹತ್‌ಶಿಲಾ ಸಂಸ್ಕೃತಿಯ ಕಾಲದವೆಂದು ತೋರುತ್ತವೆ ಎಂದು ಅಭಿಪ್ರಾಯ ದಾಖಲಿಸಿದ್ದಾರೆ. ಇದರಿಂದ ಬೋಳೆಯ ಪರಿಸರ ಶಿಲಾ–ತಾಮ್ರಯುಗ–ಆದಿ ಬೃಹತ್‌ಶಿಲಾ ಸಂಸ್ಕೃತಿಯ ಕಾಲದ ನೆಲೆಯಾಗಿತ್ತು ಎನ್ನುವುದು ದೃಢವಾಗುತ್ತದೆ. ಈ ಹಿನ್ನೆಲೆಯಲ್ಲಿ ಬೊಳೆಯಲ್ಲಿರುವ ಹೊರೆಚಾಚು ಎನ್ನುವ ಡಾಲ್ಮೆನ್ ಡಾ. ಅ.ಸುಂದರ ಅವರು ಸೂಚಿಸುವ ಕಾಲಾವಧಿಯದೇ ಆಗಿರಬೇಕು. ಹಾಗೆಯೇ ಇದೇ ಬೋಳೆ ಗ್ರಾಮದಲ್ಲಿ ಶಾತವಾಹನರ ಕಾಲದ ಒಂದು ಇಟ್ಟಿಗೆ ದೇವಾಲಯದ ಅವಶೇಷ ಹಾಗೂ ಶಿವಲಿಂಗ ದೊರೆತಿರುವುದಾಗಿಯೂ ಡಾ. ಅ.ಸುಂದರ ಅವರು ದಾಖಲಿಸಿದ್ದಾರೆ.

ಬೊಳೆಯ ಡಾಲ್ಮೆನ್‌ನಲ್ಲಿ ಮೂರು ಕಲ್ಲುಗಳನ್ನು ನೆಟ್ಟಗೆ ನಿಲ್ಲಿಸಿ ಅದರ ಮೇಲೆ ಒಂದು ಕಲ್ಲನ್ನು ಅಡ್ಡವಾಗಿ ಇಡಲಾಗಿದೆ. ಇದರಿಂದಾಗಿ ಒಟ್ಟಾರೆ ರಚನೆಯಲ್ಲಿ

ಎರಡು ಕಿಂಡಿಗಳು ನಿರ್ಮಾಣವಾಗಿವೆ. ಈ ರೀತಿಯ ಕಿಂಡಿಗಳಿರುವ ಡಾಲ್ಮೆನ್‌ಗಳು ಪವಿತ್ರವಾದವುಗಳು ಎನ್ನುವ ಭಾವನೆಗಳಿವೆ ಎನ್ನುವುದು ಸಿಡ್ನಿ ಹಾರ್ಟ್ಲ್ಯಾಂಡ್ ಅವರ ಅಭಿಪ್ರಾಯವಾಗಿದೆ. ವ್ಯಕ್ತಿಗಳು ಪಾಪಗಳನ್ನು ಕಳೆದುಕೊಳ್ಳಲು, ಅಥವಾ ಅನಾರೋಗ್ಯದಿಂದ ಪಾರಾಗಲು ಇಂತಹ ಕಿಂಡಿಗಳ ಮೂಲಕ ಹಾದು ಹೋಗುತ್ತಿದ್ದರು ಎನ್ನುವುದು ಅವರ ಅಭಿಪ್ರಾಯ. ಇದೇ ಬಗೆಯಲ್ಲಿ ಪ್ರಮಾಣ ವಚನಗಳನ್ನು ಸ್ವೀಕರಿಸಲು ಅಥವಾ ಯಾವುದಾದರೂ ಗಂಭೀರ ವಿಷಯದ ಕುರಿತು ಪ್ರತಿಜ್ಞೆ ಮಾಡುವಾಗ ಇಂತಹ ಡಾಲ್ಮೆನ್‌ಗಳ ಮೂಲಕ ಹಾದುಹೋಗುತ್ತಿದ್ದರು ಎಂದು ಹೇಸ್ಟಿಂಗ್ ಜೇಮ್ಸ್ ದಾಖಲಿಸುತ್ತಾರೆ.

ಬೋಳೆಯಿಂದ ಏಳು ಕಿ.ಮೀ. ದೂರದಲ್ಲಿರುವ ಬೇಲೇಕೇರಿಯಲ್ಲಿ ಸೂಕ್ಷ್ಮ ಶಿಲಾಯುಗದ ನೆಲೆಯಿದೆ. ತುಲನಾತ್ಮಕವಾಗಿ ಇದರ ಕಾಲ ಸುಮಾರು ಕ್ರಿಸ್ತಪೂರ್ವ ೫೦೦೦ ಎಂದು ಡಾ. ಅ.ಸುಂದರರವರು ದಾಖಲಿಸಿದ್ದಾರೆ. ಕರ್ನಾಟಕದಲ್ಲಿ ಪ್ರಾಚೀನತಮ ಮಾನವನ ವಿಕಾಸದ ಹಂತಗಳ ಕುರಿತು ಬರೆಯವಾಗ, ಸೂಕ್ಷ್ಮ ಶಿಲಾಯುಗದ ಜನರು ಹೆಚ್ಚು ಸಂಖ್ಯೆಯ ನಿವೇಶನಗಳಲ್ಲಿ ವಾಸಿಸುತ್ತಿದ್ದರು. ಅವರ ನೆಲೆಗಳು ಭಿನ್ನ ಭಿನ್ನ ಸಮತಟ್ಟಿನ ಮೇಲೆ, ಎತ್ತರದ ಪ್ರಸ್ತಭೂಮಿಯ ಮೇಲೆ, ಬೆಟ್ಟಗಳ ಇಳುಕಲಿನಲ್ಲಿ, ಬಯಲುಗಳಲ್ಲಿ, ಗವಿಗಳಲ್ಲಿ, ಕಲ್ಲಾಸರೆಗಳಲ್ಲಿ, ವಿರಳ ಕಾಡುಗಳಲ್ಲಿ, ದಟ್ಟ ಅರಣ್ಯಗಳಲ್ಲಿ, ನದಿ ದಡಗಳ ಮೇಲೆ, ಕೆರೆ ದಂಡೆಗಳ ಮೇಲೆ, ಸಮುದ್ರ ತೀರದಲ್ಲಿ ಹೀಗೆ ಎಲ್ಲಕಡೆಗಳಲ್ಲಿಯೂ ಇವೆ. ಡಾ. ಆರ್.ಎಸ್. ಪಪ್ಪುರವರು 'ಬೇಲೇಕೇರಿ ಗಮನಿಸಬೇಕಾದ ಸೂಕ್ಷ್ಮ ಶಿಲಾಯುಗದ ನಿವೇಶನವಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ನಾನು ಅಂಕೋಲೆಯ ಪ್ರಾಗೈತಿಹಾಸಿಕ ಅವಶೇಷಗಳ ಕುರಿತು ಹುಡುಕುವಾಗ ಗಮನಕ್ಕೆ ಬಂದ ಪ್ರಮುಖ ನೆಲೆಗಳಲ್ಲಿ ಬೇಳಾದ ಬಸಾಕಲ್ಗುಡ್ಡವೂ ಒಂದು. ಬಸಾಕಲ್ಲು ಗುಡ್ಡದ ಸಮುದ್ರ ದಂಡೆಯಲ್ಲಿ ಗುಡ್ಡದ ಕೊರಕಲಿನಲ್ಲಿ 'ಅಂಡಾಸ್ಕಾಳಿಗೆ' ಎಂಬ ಸ್ಥಳದಲ್ಲಿ ಬೃಹತ್ ಗಾತ್ರದ ಒಂದು ಶಿಲಾಗುಹೆಯಿದ್ದು ಅಲ್ಲಿಯೂ ಬೂದಿ ದಿಬ್ಬ, ಗುಹಾ ಚಿತ್ರಗಳಂತಹ ಪ್ರಾಗೈತಿಹಾಸಿಕ ಅವಶೇಷಗಳು ಸಿಗುವ ಸಾಧ್ಯತೆಗಳಿವೆ. ದಶಕದ ಹಿಂದೆಯೇ ನಾನು ಗುಹೆಯಲ್ಲಿ ಇಳಿದು ಶೋಧಿಸುವ ಸಾಹಸ ಮಾಡಿದ್ದೆ. ಈ ಗುಹೆ ಕಿರಿದಾದ ಬಾಯಿ ಹೊಂದಿದ್ದು ಒಳಗಡೆ 200 ರಿಂದ 250 ಚದರ ಅಡಿ ವಿಸ್ತಾರದ ವಿಶಾಲವಾದ ಕೋಣೆಯಿದೆ. ಮುಂದೆ ಗುಹೆ ಮೂರು ಕವಲುಗಳಲ್ಲಿ ವಿಭಾಗವಾಗಿದೆ. ನಡುಹಗಲಿನಲ್ಲೂ ಗುಹೆಯಲ್ಲಿ ಅತಿಯಾದ ಕತ್ತಲೆಯಿಂದಾಗಿ ಇದು ಬಾವಲಿಗಳ ಆವಾಸ ಸ್ಥಾನವಾಗಿದೆ. ಗುಹೆಯ ಕೋಣೆಯ ಮಧ್ಯದಲ್ಲಿ ಹಾಸುಗಲ್ಲಿನಂತಿರುವ ಮಂಚದಂತ ಒಂದು ರಚನೆಯಿದೆ. ಸಾವಿರಾರು ವರ್ಷಗಳಿಂದ ಅಸಂಖ್ಯ ಬಾವಲಿಗಳು ಇಲ್ಲಿ ನೆಲೆಯಿರುವುದರಿಂದ ಗುಹೆಯ ನೆಲಹಾಸಿನ ಮೇಲೆ ಒಂದೆರಡು ಅಡಿಗಳಷ್ಟು ದಪ್ಪದಲ್ಲಿ ಅವುಗಳ ಹಿಕ್ಕೆ ತುಂಬಿಕೊಂಡಿದೆ. ಬೆಳಕಿನ ಕೊರತೆ ಮತ್ತು ಬಾವಲಿಗಳ ಮಲ–ಮೂತ್ರಗಳ ವಾಸನೆಯಿಂದಾಗಿ ನಮ್ಮ ಉಸಿರಾಟಕ್ಕೆ ತೊಂದರೆಯಾದ ಕಾರಣ ಗುಹೆಯಲ್ಲಿ ಹೆಚ್ಚಿನ ಶೋಧನೆ ಮಾಡಲಾಗದೇ ಹಿಂದಿರುಗಬೇಕಾಯಿತು. ಆಮ್ಲಜನಕದ ಸಿಲಿಂಡರ್, ಸರ್ಚ್‌ಲೈಟ್, ಗುಹೆ ಶೋಧನೆಯ ಹಾಗೂ ಜೀವರಕ್ಷಕ ಆಧುನಿಕ ಉಪಕರಣಗಳ ಜೊತೆಯಲ್ಲಿ ಈ ಗುಹೆಯನ್ನು ಶೋಧಿಸಿದರೆ ಖಂಡಿತವಾಗಿ ಅಂಕೋಲೆಯ ಇತಿಹಾಸ ಏಳಸಾವಿರ ವರ್ಷಗಳ ಹಿಂದೆಹೋಗುವ ವಿಶ್ವಾಸ ನನಗಿದೆ. ಈ ಅಂಡಾಸ್ಕಾಳಿಗೆಯ ದಕ್ಷಿಣಕ್ಕೆ ಗುಡ್ಡದ ಇಳಿಜಾರಿನಲ್ಲಿ ಕಲ್ಲಾಸರೆಯ ಸ್ಥಳಗಳಿದ್ದು ಅಲ್ಲೆಲ್ಲಾ ಶಿಲಾಪರಿಕರಗಳಂತ ಚಿಕ್ಕ ದೊಡ್ಡ ಕಲ್ಲುಗಳ ರಾಶಿಯೇ ಇದ್ದವು. ಇಂದು ಅವೆಲ್ಲ ಹಲವರ ಮನೆಯ ಉದ್ಯಾನಗಳ ಅಲಂಕಾರಕ್ಕಾಗಿ ಸಾಗಿಸಲಾಗಿದೆಯಂತೆ.

ಇತ್ತೀಚೆಗೆ ನಾನು ಬೇಳಾಗ್ರಾಮದಲ್ಲಿ ಕ್ಷೇತ್ರಕಾರ್ಯಕ್ಕೆ ಹೋದಾಗ ಶ್ರೀ ಸುಜೀತ ನಾರಾಯಣ ನಾಯ್ಕ ಅವರು ತಮ್ಮ ಕೆಲ ಅನುಭವಗಳನ್ನು ನನ್ನೊಂದಿಗೆ ಹಂಚಿಕೊಂಡರು. ಬಸಾಕಲ್ಗುಡ್ಡದ ಉತ್ತರ ದಿಕ್ಕಿನಲ್ಲಿ ಗ್ರಾಮಪಂಚಾಯತದವರು ಸಮುದ್ರ ದಂಡೆಗೆ ತೆರಳಲು ಒಂದು ರಸ್ತೆ ನಿರ್ಮಿಸಿದ್ದಾರೆ. ಈ ರಸ್ತೆ ನಿರ್ಮಾಣಕ್ಕಾಗಿ ಜೇಸಿಬಿಯಿಂದ ಗುಡ್ಡದ ಇಳಿಜಾರು ಕತ್ತರಿಸಿ ಮಣ್ಣು ತೆಗೆಯುವಾಗ ನಾಲ್ಕಾರು ಅಡಿಗಳಷ್ಟು ಅಗಲದ ಕಲ್ಲಿನ ಹಲಗೆಗಳಿಂದ ಮಾಡಿದ ಕೋಣೆಯ ಮನೆಯೊಂದು ದೊರೆತಿತ್ತು. ಚಾರಿತ್ರಿಕವಾದ ಯಾವುದೇ ಮಹತ್ವ ಅರಿಯದ ಜೇಸಿಬಿ ಚಾಲಕ ಅದನ್ನು ಅಗೆದು ಹಾಕಿದ ಎಂದು ತಿಳಿಸಿ, ಅದು ದೊರೆತ ಸ್ಥಳವನ್ನೂ

ತೋರಿಸಿದರು. ಸ್ಥಳ ಪರಿಶೀಲಿಸಿದಾಗ ಗುಡ್ಡದ ಮಣ್ಣಿನಲ್ಲಿ ಸಿಕ್ಕಿಹಾಕಿಕೊಂಡಿರುವ ಶಿಲಾಫಲಕದ ತುಂಡೊಂದು ಗೋಚರಿಸಿತು. ಆಗ ಹಿರೇಬೆಣಕಲ್ಲಿನ ಬೃಹತ್ ಶಿಲಾ ಸಮಾಧಿಗಳ ಫೋಟೋವನ್ನು ಸುಜೀತ ನಾಯ್ಕರಿಗೆ ತೋರಿಸಿದಾಗ 'ಹೌದು, ಥೇಟ್ ಹೀಗೆಯೇ ಇತ್ತು' ಎಂದರು.

ಈ ಸ್ಥಳದಿಂದ ಉತ್ತರಕ್ಕೆ ನೂರು ಮೀಟರ್ ಅಂತರದಲ್ಲಿ ಒಂದು ದಿಬ್ಬವಿದ್ದು ಅದರ ಮೇಲೆ ಜಟಕನ ಕಂಬವಿದೆ. ಈ ಜಟಕನ ಕಂಬದ ಎದುರಿನಲ್ಲಿ ಮೂರು ಗುತ್ತಿನ ಕಲ್ಲುಗಳನ್ನೆ ಸಿಮೆಂಟಿನಿಂದ ಜೋಡಿಸಲಾಗಿದೆ. ಅದರಲ್ಲಿ ಒಂದು ಶಿಲಾಯುಗದ ಪರಿಕರದಂತೆ ತೋರುತ್ತಿದೆ. ಇಲ್ಲಿಂದ ನೂರು ಮೀಟರನಷ್ಟು ದೂರ ವಾಯವ್ಯಕ್ಕೆ ಮಾಸ್ತಿಯ ಗುತ್ತಿನ ಕಲ್ಲಿದೆ. ಅದರ ಪಕ್ಕದಲ್ಲಿ ಲ್ಯಾಟರೈಟ್(ಚೀರೆ) ಕಲ್ಲಿನಿಂದ ಕಟ್ಟಿದ ಮೂರು ಅಡಿ ವ್ಯಾಸದ ನೆಲಬಾವಿಯಿದ್ದು ಅದು ಸಹ ಶತಮಾನಗಳ ಹಿಂದೆ ಕಟ್ಟಿರುವಂತೆ ತೋರುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ಮೂವತ್ತು ನಲವತ್ತು ಅಡಿ ದೂರದಲ್ಲಿ ದಿಬ್ಬದಂತ ರಚನೆಗಳಿವೆ.

ಕಾಳಿನದಿ ತೀರದ ಸುಂಕೇರಿಯಲ್ಲಿ ಆದಿ ಶಿಲಾಯುಗದ ಆಯುಧಗಳು ಹೇರಳವಾಗಿ ದೊರೆತಿವೆ. ಹಟ್ಟಿಕೇರಿ, ಭಾವಿಕೇರಿ, ಕಂಚಿನ ಬೈಲ್, ಶಿರಗುಂಜಿ ಮೊದಲಾದೆಡೆಗಳಲ್ಲಿ ಮಧ್ಯ ಶಿಲಾಯುಗದ ಅವಶೇಷಗಳು ದೊರೆತಿವೆ. ಗೋಕರ್ಣದ ಹತ್ತಿರದ ರಾಮತೀರ್ಥ, ಕಾರವಾರದ ಅನಮೋಡ, ಜೊಯಿಡಾದ ಅಣಸಿ, ಸುಪಾ ಹತ್ತಿರದ ಶಿವಪುರ, ಕುಮಟಾದ ನೀಲಕೊಂಡಗಳಲ್ಲಿ ನೂತನ ಶಿಲಾಯುಗದ ಅವಶೇಷಗಳು ಆಯುಧಗಳೂ ದೊರೆತಿವೆ. ಬನವಾಸಿ ಹತ್ತಿರದ ಮುತ್ತಾಲಕೊಪ್ಪದಲ್ಲಿರುವ ನೆಟ್ಟಕಲ್ಲಿನ ವರ್ತುಲಗಳು, ಸಿದ್ಧಾಪುರದ ಹತ್ತಿರದ ಕಿಲಾರ ಎಂಬಲ್ಲಿರುವ ಲೆಟರೈಟ್ ಕಲ್ಲಿನಲ್ಲಿ ಕೊರೆದ ಕಲ್ಲಗೋರಿ, ಶಿರಳಗಿ, ದಾಂಡೇಲಿಗಳಲ್ಲಿ ದೊರೆತಿರುವ ಗೋರಿಯ ಅವಶೇಷಗಳು ಬೃಹತ್ ಶಿಲಾಯುಗಕ್ಕೆ ಸೇರಿದವಾಗಿವೆ ಎಂದು ಕೇಂದ್ರ ಪುರಾತತ್ವ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ಎಸ್.ಎಸ್. ನಾಯಕ ದಾಖಲಿಸಿದ್ದಾರೆ.

ಹೀಗೆ ಅಂಕೋಲೆಯ ಸುತ್ತಲಿನಲ್ಲಿ ಶಿಲಾಯುಗ ಸಂಸ್ಕೃತಿಯ ಮಾನವರು ನೆಲಸಿದ ಬಗ್ಗೆ ಆಧಾರಗಳು ದೊರೆಯುತ್ತವೆ. ಹಿರಿಯ ವಿದ್ವಾಂಸರು ದಾಖಲಿಸಿದ ಬೋಳೆಯ ಬಂಡೆ ಚಿತ್ರಗಳನ್ನು, ಬೇಲೇಕೇರಿಯ ಸೂಕ್ಷ್ಮಶಿಲಾಯುಗದ ನೆಲೆಗಳನ್ನು ಇಂದು ಮರುಶೋಧಿಸಬೇಕಾದ ಅನಿವಾರ್ಯತೆಯಿದೆ. ಈ ಪ್ರದೇಶಗಳು ಜನವಸತಿ ಪ್ರದೇಶಗಳಾಗಿದ್ದು ಇಂದು ಆ ಪ್ರಾಚೀನ ಅವಶೇಷಗಳು ಎಷ್ಟು ಸುರಕ್ಷಿತವಾಗಿವೆ ಎನ್ನುವುದನ್ನೂ ಗಮನಿಸಬೇಕಾಗಿದೆ. ಬೋಳೆಯ ಡೊಲ್ಮೆನ್, ಮೆನ್‌ಹೀರ್‌ಗಳು, ಕೊಡ್ಸಣಿಯ ದಿಬ್ಬಣಗಲ್ಲುಗಳು, ಗಾಬೀತಕೇಣಿಯ ಕಲ್ಗುಳಿಗಳ ಕುರಿತು ಬಸಾಕಲ್ಲುಗುಡ್ಡದ ಗವಿಯ ಕುರಿತು ಅಂತರ್ ಶಾಸ್ತ್ರೀಯ ಅಧ್ಯಯನ ಮಾದರಿಯ ಅಭ್ಯಾಸಗಳನ್ನು ಮಾಡಿದರೆ ಅಂಕೋಲೆಯ ಭವ್ಯ ಇತಿಹಾಸ ಐದುಸಾವಿರ ವರ್ಷಗಳಿಗೂ ಹಿಂದೆಹೋಗುವುದರಲ್ಲಿ ಅನುಮಾನವಿಲ್ಲ.

ಅಂಕೋಲಾ ತಾಲೂಕಿನ ಸ್ಮಾರಕ ಶಿಲೆಗಳು

ಅಂಕೋಲಾ ತಾಲೂಕಿನ ಪ್ರತಿ ಹಳ್ಳಿಯಲ್ಲೂ ಒಂದಾದರೂ ನಾಲ್ಕಾರು ಪಟ್ಟಿಕೆಗಳಲ್ಲಿ ಉಬ್ಬುಶಿಲ್ಪಗಳಿರುವ ಶಿಲಾಫಲಕ ಕಂಡು ಬರುತ್ತದೆ. ಸಾಮಾನ್ಯವಾಗಿ ಇಂತ ಶಿಲಾಫಲಕಗಳನ್ನು ವೀರಗಲ್ಲುಗಳೆಂದು ಕರೆಯುವುದು ವಾಡಿಕೆ. ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಮಡಿದ ವೀರನೊಬ್ಬನ ಸ್ಮಾರಕವಾಗಿ ನಿಲ್ಲಿಸಿದ ಶಿಲೆಯೇ ವೀರಗಲ್ಲುಗಳು. ಇದನ್ನು 'ವೀರಗಲ್ಲು' ಎಂಬ ಪದದಿಂದ ನಾವೀಗ ಗುರುತಿಸುತ್ತಿದ್ದರೂ ಶಾಸನಗಳಲ್ಲಿ ಈ ಪದ ಬಳಕೆ ಬಹಳ ಅಪರೂಪ. ಇದಕ್ಕೆ ಬದಲಾಗಿ 'ಕಲ್ಲು' ಎಂದು ಇದನ್ನು ಕಂಡರಿಸಿದ ಲಿಪಿಶಿಲ್ಪಿಗಳು ಮತ್ತು ಪ್ರತಿಷ್ಠಾಪಿಸಿದ ಪೋಷಕರು ಕರೆದಿರುವರು. 'ಕಲ್ಲ ಒಯ್ದೊರ್' ಕಲ್ಲ.... ವರದ 'ಕಲ್ಲ ಬೆಸೆಗೆಯ್ದು', 'ಕಲ್ಲ ನಿರ್ಮಿಸಿದ' "ಕಲ್ಲನ್ನು ನೆಡೆಸಿದುದು" ಇತ್ಯಾದಿಯಾಗಿ ಹೇಳಲಾಗಿದೆ. ಒಂಭತ್ತನೆಯ ಶತಮಾನದ ಆಲನಹಳ್ಳಿಯ ಶಾಸನದಲ್ಲಿರುವ 'ಕಲ್ಲ ನಟು ವಡೆದ' ಎಂಬ ವಾಕ್ಯ ಇದಕ್ಕೊಂದು ಉದಾಹರಣೆ. ಹಳದಿಪುರದ ಚಂಡೇಶ್ವರದ ಕಂಬದ ಮೇಲೆ 'ಭೂತಬೆಗಲ್ಲತ್ತಿಯಲಜ್ಜಮಗೆಲ್ಲನ ಮಗಳು ಮಾರಬ್ಬೆ ಮಾಡಿಸಿದ ಕಲ್ಲು..' ಎಂದು, ಬಡಗೇರಿಯ ಕಂಬದ ಮೇಲೆ 'ಪವಿತ್ರಮಾಗಿ ಸಂದ ತಮ್ಮಯ್ಯಗೆ ಇಪ್ಪತ್ತು ಗದ್ಯಾಣಗಳನ್ನು ಪೋಲ ಮಾಡಿಸಿ ಕೊಳರುಮಂ ಮಾಡಿ ಕಲ್ಲನಿರಿಸಿದ' ಎಂಬುದಾಗಿ ಬರೆದಿದೆ.

ಅಂಕೋಲಾ ತಾಲೂಕಿನ ವ್ಯಾಪ್ತಿಯಲ್ಲಿ ಸಾವಿರಕ್ಕೂ ಹೆಚ್ಚು ವೀರಗಲ್ಲುಗಳು ದೊರಕಿವೆ. ವಿರಳವಾಗಿ ಇವುಗಳ ಮೇಲೆ ಬರಹಗಳೂ ಕಾಣಸಿಗುತ್ತವೆ. ವೀರಗಲ್ಲುಗಳೇ ಅಲ್ಲದೇ ಅಷ್ಟೇ ಸಂಖ್ಯೆಯಲ್ಲಿ ಮಾಸ್ತಿ ಕಲ್ಲುಗಳೂ ಅಂಕೋಲೆಯಲ್ಲಿವೆ. ಜೊತೆಗೆ ಮಾಸ್ತಿ ಕಲ್ಲುಗಳಂತೇ 'ಕನ್ಯೆಯರು' ಅಥವಾ 'ಅಚ್ಚ ಕನ್ಯೆಯರು' ಎನ್ನುವ ವಿಶಿಷ್ಟ ಪ್ರಕಾರದ ಸ್ಮಾರಕ ಕಲ್ಲುಗಳು ಈ ಭಾಗದಲ್ಲಿವೆ. ಜೈನರ ಸಲ್ಲೇಖನ ವ್ರತವನ್ನೂ ಅದನ್ನು ತೆಗೆದುಕೊಂಡು ಪ್ರಾಣತ್ಯಾಗ ಮಾಡಿದ ಮಹನೀಯರ ವಿಷಯವನ್ನು ಹೇಳುವ 'ನಿಶಿದಿಗಲ್ಲು' ಎಂಬ ಇನ್ನೊಂದು ಬಗೆಯ ಶಾಸನಗಳೂ ಇಲ್ಲಿ ಉಂಟು.

ಸ್ಮೃತಿ ಕಲ್ಲುಗಳು :

ವೀರಗಲ್ಲು ಮತ್ತು ಮಾಸ್ತಿಕಲ್ಲು ಎರಡೂ ಒಂದೇ ಬಗೆಯ ಸ್ಮಾರಕಗಳು ವೀರ ಯಾವುದೋ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ರಣಸ್ಥಳದಲ್ಲಿ ಮಡಿಯುತ್ತಾನೆ. ಸ್ತ್ರೀ ಆ ವೀರಪತಿಗಾಗಿ ಚಿತೆಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾಳೆ. ಎರಡರ ಮೂಲದಲ್ಲಿ ಕೃತಜ್ಞತೆ, ಸ್ವಾಮಿನಿಷ್ಠೆ, ಅನುಪಮ ತ್ಯಾಗ ಇವೆ. ಅಂತಹ ವೀರ ಮತ್ತು ಮಹಾಸತಿಯರ ಬಗ್ಗೆ ಜನ ಮೆಚ್ಚುಗೆಯಿಂದ ಮತ್ತು ಭಕ್ತಿಯಿಂದ ಅವರ ಚಿತ್ರಗಳನ್ನು ಕಲ್ಲಿನಲ್ಲಿ ಕೆತ್ತಿಸಿ ಅವರ ವಿಷಯವನ್ನು ಕಲ್ಲಿನ ಮೇಲೆ ಬರೆಯಿಸಿದರು. ಅವರ ಹೆಸರು ಈ ಲೋಕದಲ್ಲಿ ಶಾಶ್ವತವಾಗಿ ಉಳಿಯಲೆಂದು ಹಾರೈಸಿದರು. ಅವರ ಅದ್ಭುತ ಕಾರ್ಯಗಳು ತಮಗೆ ಮತ್ತು ಮುಂದಿನ ತಲೆಮಾರುಗಳಿಗೆ ನಿರಂತರ ಪ್ರಚೋದನೆಯನ್ನು ಕೊಡುತ್ತ ತಾವು ನಂಬಿದ್ದ ಮೌಲ್ಯಗಳಿಗೆ ಅವರು ಸಂಕೇತವಾಗಿ ಮುಂದಿನ ಜನಕ್ಕೆ ಆ ಮೌಲ್ಯಗಳನ್ನು ಉದ್ದಕ್ಕೂ ಜ್ಞಾಪಿಸುತ್ತಿರಲೆಂದು ಅಪೇಕ್ಷಿಸಿದರು. ಯಾವುದೋ ಕಾಲದಲ್ಲಿ ಯಾರೋ ನಿಲ್ಲಿಸಿದ ಆ ವೀರಗಲ್ಲು, ಮಾಸ್ತಿಕಲ್ಲುಗಳನ್ನು ಇಂದಿಗೂ ಎಷ್ಟೋ ಕಡೆಗಳಲ್ಲಿ ಜನ ಪೂಜಿಸುತ್ತಿದ್ದಾರೆ. ಅಂತೆಯೇ ಅಚ್ಚಕನ್ಯೆಯರ ಕಲ್ಲುಗಳು ನಿಶದಿಗಲ್ಲುಗಳು. ಗತದ ಯಾವುದೋ ಕಾಲಘಟ್ಟದಲ್ಲಿ ಘಟಿಸಿದ ಸಂಗತಿಯನ್ನು ತಲತಲಾಂತರದಿಂದ ನೆನಪಿಸುತ್ತ ಬಂದ ವೀರಗಲ್ಲು, ಮಾಸ್ತಿಗಲ್ಲು, ನಿಶಿದಿಗಲ್ಲು ಇತ್ಯಾದಿಗಳನ್ನು ಇಲ್ಲಿ 'ಸ್ಮೃತಿಕಲ್ಲು'ಗಳು ಎಂದು ಕರೆದಿರುವರು.

ವೀರಗಲ್ಲುಗಳು : ವೀರನೊಬ್ಬನ ತ್ಯಾಗವನ್ನು ನೆನೆಯುತ್ತಾ ನೆಡೆಸಿದ ಕಲ್ಲೇ ವೀರಗಲ್ಲು. ಇಂತ ವೀರಗಲ್ಲುಗಳನ್ನು ಗುರುತಿಸುವುದು ಸುಲಭ. ಸಾಮಾನ್ಯವಾಗಿ ಅವುಗಳ ಮೇಲೆ ಮೂರು ಹಂತದ ಚಿತ್ರಗಳಿರುತ್ತವೆ. ಕೆಳಗಿನ ಹಂತದಲ್ಲಿ ವೀರ ತನ್ನ ಶತ್ರುಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಯುದ್ಧದಲ್ಲಿ ಮಡಿದ ಅವನನ್ನು ದೇವತಾ ಸ್ತ್ರೀಯರು ಅಥವಾ ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆಯೂ ಮೇಲಿನ ಹಂತದಲ್ಲಿ ಅವನು ಭಗವಂತನ ಸಾನಿಧ್ಯದಲ್ಲಿ ಇರುವಂತೆಯೂ ಕೆತ್ತಲಾಗಿರುತ್ತದೆ. ಕೆಲವು ವೇಳೆ ನಾಲ್ಕು, ಐದು, ಎಂಟು ಹಂತಗಳಲ್ಲಿ ಚಿತ್ರಿಸಿರುವುದು ಉಂಟು. ಇನ್ನು ಕೆಲವು ವೀರಗಲ್ಲುಗಳ ಮೇಲೆ ವಿವಿಧ ಹಂತಗಳಿರದೇ ಕುದುರೆ ಸವಾರನು, ಆನೆಯ ಮೇಲಿರುವ ವೀರನ ಚಿತ್ರವೋ, ಇಲ್ಲವೇ ರಣರಂಗದ ಚಿತ್ರವೋ ಇರುವುದುಂಟು. ಯುದ್ಧವನ್ನೋ ರಣರಂಗವನ್ನೋ ನೆನಪಿಗೆ ತರುವ ಯಾವುದೇ ಚಿತ್ರವಿದ್ದರೂ ಅದನ್ನು ವೀರಗಲ್ಲೆಂದು ಸ್ಥೂಲವಾಗಿ ಹೇಳಿಬಿಡಬಹುದು. ಎಷ್ಟೋ ಕಡೆಗಳಲ್ಲಿ ವೀರನ ವಿಷಯ ಪ್ರಸ್ತಾಪ ಮಾಡಿ ಆತನ ಶೌರ್ಯದ, ತ್ಯಾಗದ ಗುಣಗಾನ ಮಾಡಿರಲೂಬಹುದು. ಅಂದರೆ ಬರಹವೂ ಇರಬಹುದು ಆದರೆ ವೀರಗಲ್ಲಿನ ಮೇಲೆ ಬರಹ ಇರಲೇಬೇಕೆಂದೇನಿಲ್ಲ. ಅಲಗೇರಿಯಂತ, ಮೊಗಟಾದಂತ ಊರಿನಲ್ಲಿ ಊರುಗಳಲ್ಲಿ ಒಟ್ಟಾಗಿ ಅನೇಕ ವೀರಗಲ್ಲುಗಳು ದೊರೆಯುತ್ತವೆ. ಅಂದರೆ ಅಲ್ಲಿ ಯಾವುದೋ ಭಾರಿ ಯುದ್ಧವೊಂದು ನಡೆದಿರಬೇಕೆಂದು ತಿಳಿದುಬರುತ್ತದೆ.

ವೀರರ ಬಗ್ಗೆ ಶಿಲ್ಪ ಬರೆಯಿಸಲು ಎರಡು ಉದ್ದೇಶಗಳಿರುತ್ತವೆ. ಹಿಂದೆ ಸೂಚಿಸಿದಂತೆ ಸತ್ತ ವೀರನ ನೆನಪು ಶಾಶ್ವತವಾಗಿರಲೆಂದು ಜನ ಅವನ ಹೆಸರಿನಲ್ಲಿ ಸ್ಮಾರಕ ಶಿಲೆಯನ್ನು ನೆಡುತ್ತಿದ್ದರು. ಇವು ಒಂದು ಉದ್ದೇಶ. ಇನ್ನೊಂದು ಉದ್ದೇಶವು ಅಷ್ಟೇ ಮುಖ್ಯವಾದುದು. ವೀರನೇನೋ ತನ್ನ ಪ್ರಾಣವನ್ನು ಲೆಕ್ಕಿಸದೇ ಯುದ್ಧದಲ್ಲಿ ಹೋರಾಡಿ, ಕಳ್ಳರಿಂದ ಊರನ್ನು ರಕ್ಷಿಸಲೋ, ಸ್ತ್ರೀಯರ ಮಾನ ಕಾಯಲೋ, ಗೋವುಗಳನ್ನು ಬಿಡಿಸಲೋ ಹೋಗಿ ಪ್ರಾಣವನ್ನು ಕಳೆದುಕೊಂಡಿರಬಹುದು. ಜನ ಹಾಗೇ ಸತ್ತ ಶೂರನನ್ನು ಹೊಗಳುವ ಭರದಲ್ಲಿ ಆತನ ಸಂಸಾರವನ್ನು ಮರೆಯಲಿಲ್ಲ. ವೀರ ಸತ್ತಿದ್ದರಿಂದ ಆತನ

ತಂದೆ–ತಾಯಿ, ಹೆಂಡತಿ, ಮಕ್ಕಳು ಅನಾಥವಾಗಿರಬಹುದು. ಅವರನ್ನು ಸಾಕುವ ಹೊಣೆಯನ್ನು ರಾಜನೋ, ಸಮಾಜವೋ ವಹಿಸಿಕೊಳ್ಳುತ್ತಿದ್ದಿತು. ವೀರನ ಸ್ಮಾರಕವಾಗಿ ದಾನಗಳನ್ನು ಮಾಡಿ ಅದನ್ನು ಅವನ ಸಂಸಾರಕ್ಕೆ ಕೊಡುತ್ತಿದ್ದರು. ಕೆಲವೊಮ್ಮೆ ಇದನ್ನು ಕಲ್ಲಿನ ಮೇಲೆ ಬರಹದಲ್ಲಿ ದಾಖಲಿಸುತ್ತಿದ್ದರು. ಆ ಕಲ್ಲು ವೀರನ ಶೌರ್ಯವನ್ನು ಕೊಂಡಾಡುವಂತೆ ಊರಿನ ಜನರ ಕರ್ತವ್ಯವನ್ನೂ ಹೊಣೆಗಾರಿಕೆಯನ್ನು ನೆನಪು ಮಾಡುತ್ತಿರುತ್ತವೆ.

ಪ್ರಾಚೀನರು ಈ ರೀತಿ ಪ್ರಾಣತ್ಯಾಗ ಮಾಡಲು ಮೂಲ ಪ್ರಚೋದನೆಯೊಂದಿದೆ. ಅದನ್ನು ಜನರು ಅಕ್ಷರಶಃ ನಂಬಿದ್ದರೋ, ಇಲ್ಲವೋ ತಿಳಿಯದು ಬಹುಶಃ ನಂಬಿದ್ದರು.

ಜೀತೇನ ಲಭ್ಯತೇ ಲಕ್ಷ್ಮೀ ಮೃತೇನಾಡಿ ಸುರಾಂಗನಾ
ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ॥

ಯುದ್ಧದಲ್ಲಿ ಗೆದ್ದರೆ, ಇಹಲೋಕದಲ್ಲಿ ಸತ್ತರೆ, ಪರಲೋಕದಲ್ಲಿ ಸುಖಿಸಬಹುದು ಎಂಬುದೇ ಆ ನಂಬಿಕೆ. ಆ ನಂಬಿಕೆಯ ಪ್ರಕಾರ ರಣರಂಗದಲ್ಲಿ ಸತ್ತ ವೀರನಿಗಾಗಿ ದೇವಲೋಕದ ಕನ್ಯೆಯರು ಕಾದು ಕುಳಿತಿರುತ್ತಿದ್ದರಷ್ಟೇ ಅಲ್ಲ ಅವನನ್ನು ಪಡೆಯಲು ಅವರಲ್ಲಿ ಪೈಪೋಟಿಯು ನಡೆಯುತ್ತಿತ್ತು. ಅವನನ್ನು ದೇವಾಂಗನೆಯರು ಸ್ವರ್ಗಕ್ಕೋ, ಶಿವನೋಲಗಕ್ಕೋ ಕೊಂಡೊಯ್ಯುತ್ತಾರೆ.

1015ರ ಕಾಲದ ಒಂದು ಶಾಸನದಲ್ಲಿ ಬರುವ ಈ ಉಕ್ತಿಯನ್ನು ಗಮನಿಸಿ "ದ್ವಾವಿವತಾ ಪುರುಷೌ ಲೋಕೇ ಸೂರ್ಯ ಮಂಡಲ ಭೇದಿ ನೌ। ಪರಿವ್ರಾಹ್ಯೋಗಯುಕ್ತಶ್ಚರಣೇ ಚಾಭಿಮುಖೇ ಹತಃ" ಸೂರ್ಯ ಮಂಡಲವನ್ನು ಭೇದಿಸಿ ಮೇಲೆ ಹೋಗಬಲ್ಲವರು ಇಬ್ಬರೇ ಪರಿವ್ರಾಜಕನಾದ ಯೋಗಿ ಮತ್ತು ಹೋರಾಡುತ್ತ ಸತ್ತ ವೀರ. ವೀರ ಯೋಗಿಗೆ ಸಮಾನವಾದ ವ್ಯಕ್ತಿಯೆಂದು ಗೌರವಿಸುವುದನ್ನು ಇಲ್ಲಿ ಕಾಣಬಹುದು.

ಯುದ್ಧದಲ್ಲಿ ಗೆದ್ದು ಹಿಂದಕ್ಕೆ ಬರುವುದು ಅಥವಾ ಸೋತು ಪ್ರಾಣ ತ್ಯಾಗ ಮಾಡುವುದು ಎರಡಕ್ಕೂ ಸಮಾನವಾದ ಗೌರವವಿದೆ. ಸೋತು ಹಿಂದಕ್ಕೆ ಬರುವುದು ಸಾವಿಗಿಂತ ಕಡೆಯಾದುದು. ಮೃತ್ಯುವು ಕ್ಷಣಿಕ ದುಃಖವನ್ನು ತಂದರೆ ಮಾನ ಭಂಗವೋ ದಿನದಿನವೂ ದುಃಖವನ್ನು ತರುತ್ತದೆ ಹೀಗೆ ವೀರಗಲ್ಲುಗಳು ಉದಾತ್ತ ಉದ್ದೇಶದಿಂದ ಪ್ರಾಣತ್ಯಾಗ ಮಾಡಿದ ವೀರರ ಸ್ಮಾರಕಗಳಾಗಿ ನಿಂತಿವೆ. ಜಿಲ್ಲೆಯಲ್ಲಿ ಕಂಡುಬರುವ ವೀರಗಲ್ಲುಗಳಲ್ಲಿ ಯುದ್ಧದಲ್ಲಿ ಮಡಿದ ವೀರರ ಕುರಿತಾದ ಸ್ಮಾರಕ ಶಿಲೆಗಳು ಅಲ್ಲದೇ, ವೇಳೆವಾಳಿ, ಬೇಟೆ ಇತ್ಯಾದಿ ಯುದ್ದೇತರ ವಿಷಯಗಳಿಗಾಗಿ ಮಡಿದ ಮಹನೀಯರ ನೆನಪಿಗೆ ನೆಟ್ಟ ಕಲ್ಲುಗಳೂ ಇವೆ. ವೀರಗಲ್ಲುಗಳ ಮೇಲೆ ಚಿತ್ರಿತವಾಗಿರುವ ಚಿತ್ರಗಳಿಂದ ಇದನ್ನು ಗುರುತಿಸಬಹುದು.

ವೇಳೆವಾಳಿ ವೀರಗಲ್ಲುಗಳು: ರಾಜನೊಬ್ಬ ಸತ್ತರೆ ಅವನ ಜೊತೆ ತಾವೂ ಮಡಿಯುವುದಾಗಿ ರಾಜ ಬದುಕಿರುವಾಗಲೇ ಪ್ರತಿಜ್ಞೆಯನ್ನು ಮಾಡುತ್ತಿದ್ದರು. ಇವರನ್ನೂ ಶಾಸನಗಳು ವೇಳೆವಾಳಿಗಳು ಗರುಡರು ಎಂದು ಕರೆದಿದ್ದಾರೆ. ಇವರು ತಮ್ಮ ಪ್ರತಿಜ್ಞೆಯಂತೆ ರಾಜ ಸತ್ತಾಗ ಅವನೊಂದಿಗೆ ಪ್ರಾಣತ್ಯಾಗ ಮಾಡುತ್ತಿದ್ದು ಇಂತಹ ಸ್ಮರಣಾರ್ಥ ನಿಲ್ಲಿಸಿದ ವೀರ ಕಲ್ಲುಗಳಿಗೆ ವೇಳೆವಾಳಿ ವೀರಗಲ್ಲುಗಳೆನ್ನುತ್ತಾರೆ. ಅಂಕೋಲೆಯ ಹೆಗ್ರೆ ಮತ್ತು ಅಲಗೇರಿಯಲ್ಲಿ ಇಂತ ವೇಳೆವಾಳಿ ವೀರಗಲ್ಲುಗಳನ್ನು ಕಾಣಬಹುದಾಗಿದೆ.

ಬೇಟೆ ವೀರಗಲ್ಲುಗಳು: ಜನರಿಗೆ ಉಪದ್ರವ ಕೊಡುತ್ತಿದ್ದ ಹುಲಿ, ಚಿರತೆ, ಕಾಡುಹಂದಿಗಳನ್ನು ಕೊಂದು ಮಡಿದ ವೀರ ಸ್ಮಾರಕಗಳಾಗಿ ನೆಟ್ಟ ಕಲ್ಲುಗಳನ್ನು ಬೇಟೆಯ ವೀರಗಲ್ಲುಗಳೆಂದಿದ್ದಾರೆ. ಹಳೆಪೇಟೆಯ ಗಣಪತಿ ದೇವಸ್ಥಾನದ ಹತ್ತಿರದ ನಾಗರಕಟ್ಟೆಯ ಮೇಲೆ ಒಂದು ಹುಲಿಬೇಟೆಯ ವೀರಗಲ್ಲಿದೆ. ಭಾವಿಕೇರಿಯ ಐಯ್ನಗದ್ದೆಯಲ್ಲಿ ಹಂದಿ ಹಾಗೂ ಚಿರತೆಯ ಬೇಟೆಯ, ಅಲಗೇರಿಯಲ್ಲಿ ಚಿರತೆ ಬೇಟೆಯ ಸಂದರ್ಭದಲ್ಲಿ ಮಡಿದ ವೀರರ ಸ್ಮಾರಕ ಶಿಲೆಗಳಿವೆ.

ಮಾಸ್ತಿಗಲ್ಲು : ಮಾಸ್ತಿ ಎನ್ನುವುದು ಸಂಸ್ಕೃತದ **'ಮಹಾಸತಿ'** ಎನ್ನುವುದರ ಸಂಕ್ಷಿಪ್ತ ರೂಪ. ತನ್ನ ಗಂಡ ಸತ್ತಾಗ ಆತನೊಡನೆ ಸಹಗಮನ ಮಾಡಿ ಅಂದರೆ ಪತಿಯ ಜೊತೆಯಲ್ಲಿಯೇ ಚಿತೆಯನ್ನೇರಿ, ಅಥವಾ ಅಥವಾ ಅನುಗಮನ ಅಂದರೆ ಪತಿಯ ಹೆಸರಿನಲ್ಲಿ ಪ್ರತ್ಯೇಕ ಚಿತೆಯನ್ನು ಪ್ರವೇಶಿಸಿ ಪ್ರಾಣತ್ಯಾಗ ಮಾಡಿದ

ಸತಿಯರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ 'ಮಾಸ್ತಿಗಲ್ಲು'ಗಳು.

ನಮ್ಮ ಪ್ರಾಚೀನ ಜನಪದರು ಈ ಲೋಕದಂತಹದೇ ಇನ್ನೊಂದು ಲೋಕವಿದೆಯೆಂದು ದೃಢವಾಗಿ ನಂಬಿದ್ದರು. ವ್ಯಕ್ತಿ ಸತ್ತ ಮೇಲೆ ಪರಲೋಕಕ್ಕೆ ಹೋಗುತ್ತಾನೆಂದೂ ಅಲ್ಲಿ ಅವನ ಭೋಗಕ್ಕೆ ಅವನಿಗಿಷ್ಟವಾದ ವಸ್ತುಗಳನ್ನು ಇಲ್ಲಿಂದ ಕಳುಹಿಸಬೇಕೆಂದೂ ಭಾವಿಸಿದ್ದರು. ಬಹುಶಃ ಸಹಗಮನ ಪದ್ಧತಿಗೆ ಇದೇ ಮೂಲವಿರಬಹುದು ಅಥವಾ ತಾನು ಸತ್ತ ಮೇಲೆ ತನ್ನ ಪ್ರೇಯಸಿಯು ಇನ್ನೊಬ್ಬನ ವಶವಾಗುವ ಸಾಧ್ಯತೆಯನ್ನು ಕಲ್ಪಿಸಿಕೊಂಡ ಪುರುಷನ ಅಸೂಯೆಯು ಕಾರಣವಾಗಿರಬಹುದು.

ಕ್ರಿ. ಶ. ನಾಲ್ಕನೇ ಶತಮಾನದ ನಂತರ ಸಹಗಮನ ಪದ್ಧತಿ ಹೆಚ್ಚು ಪ್ರಚಾರಕ್ಕೆ ಬಂದಿರಬಹುದು. ಗಂಡನ ಸಾವಿನ ನಂತರ ಹೆಂಡತಿಯೂ ಅಗ್ನಿ ಪ್ರವೇಶ ಮಾಡಿದರೆ ಅವಳೂ ಅವಳ ಗಂಡನೂ ಪಾಪಗಳಿಂದ ಮುಕ್ತರಾಗುವರಲ್ಲದೇ ಮೂರುವರೆ ಕೋಟಿ ವರ್ಷ ಸ್ವರ್ಗದಲ್ಲಿ ಸುಖವಾಗಿರುತ್ತಾರೆ ಎಂದು ಹಾರೀತ ಸಂಹಿತೆ ಮುಂತಾದವು ಹೇಳಿದ್ದರಿಂದ ಸಹಗಮನ ಪದ್ಧತಿ ವ್ಯಾಪಕ ಪ್ರಚಾರ ಪಡೆದಿರಬಹುದು ಆದರೆ ಕರಾವಳಿ ಭಾಗದಲ್ಲಿ ಈ ಪದ್ಧತಿ ಹತ್ತನೇ ಶತಮಾನದವರೆಗೂ ಕಂಡು ಬರುವುದಿಲ್ಲ. ಹತ್ತನೇ ಶತಮಾನದ ಆರಂಭದಲ್ಲಿ ಈ ಭಾಗದಲ್ಲಿ ಪ್ರವಾಸ ಮಾಡಿದ ಅರಬ್ಬಿ ವರ್ತಕ ಸಿಲೇಮಾನನು ಹೇಳುವಂತೆ ಎಲ್ಲೋ ವಿರಳವಾಗಿ ಮಾತ್ರ ರಾಣಿಯರು ತಮ್ಮ ಗಂಡಂದಿರ ಚಿತೆಗಳನ್ನೇರುತ್ತಿದ್ದರು. ಅಲ್ಲಿಯೂ ಬಲವಂತವಿರಲಿಲ್ಲ. ಚಿತೆಯೇರುವುದು ಬಿಡುವುದು ಅವರಿಷ್ಟವಾಗಿತ್ತು.

ಮಾಸ್ತಿ ಕಲ್ಲುಗಳ ಲಕ್ಷಣಗಳು : ಬಹುತೇಕ ಮಾಸ್ತಿಗಲ್ಲುಗಳು ಮೇಲ್ನೋಟಕ್ಕೆ ವೀರಗಲ್ಲುಗಳಂತೆ ಕಂಡೂ ಬಂದರೂ ಅವುಗಳಿಂದ ತುಸು ಭಿನ್ನವಾಗಿರುತ್ತವೆ. ಆದರೂ ಇವುಗಳನ್ನು ಗುರುತಿಸುವುದು ತುಂಬಾ ಸುಲಭ. ಡಾ|| ಎಂ. ಚಿದಾನಂದ ಮೂರ್ತಿಯವರು ತಮ್ಮ "ವೀರಗಲ್ಲುಗಳು ಮತ್ತು ಮಾಸ್ತಿ ಕಲ್ಲುಗಳು" ಎಂಬ ಪುಸ್ತಕದಲ್ಲಿ ಮಾಸ್ತಿಕಲ್ಲುಗಳ ಕೆಲವು ಪ್ರಮುಖ ಲಕ್ಷಣಗಳನ್ನು ಈ ರೀತಿಯಾಗಿ ವಿವರಿಸಿದ್ದಾರೆ.

1) ಶಸ್ತ್ರಧಾರಿಯಾದ ಪುರುಷ ಮತ್ತು ಅವನ ಜೊತೆ ಇನ್ನೊಬ್ಬ ಸ್ತ್ರೀಯ ಚಿತ್ರವಿದ್ದರೆ ಅವನು ಹೋರಾಡಿ ಸತ್ತ ವೀರನೆಂದೂ ಅವಳು ಅವನ ಜೊತೆ ಸಹಗಮನ ಮಾಡಿದ ಅವನ ಹೆಂಡತಿಯೆಂದೂ ತಿಳಿಯಬೇಕು. ಕೆಲವೊಮ್ಮೆ ಮೂವರು, ನಾಲ್ವರು ಸ್ತ್ರೀಯರ ಚಿತ್ರವಿದ್ದು ಅವರೆಲ್ಲ ತಮ್ಮ ಗಂಡನ ಸಮೇತ ಸಹಗಮನ ಮಾಡಿರುತ್ತಾರೆ.

2) ಕೆಲವು ಮಾಸ್ತಿಕಲ್ಲುಗಳ ಮೇಲೆ ಬರಿಯ ಸ್ತ್ರೀ ವಿಗ್ರಹವಿರುತ್ತದೆ. ಅಕಸ್ಮಾತ್ ಪುರುಷನ ಚಿತ್ರವಿದ್ದರೆ ಅದನ್ನು ಒಂದು ಮೂಲೆಯಲ್ಲಿ ಚಿಕ್ಕದಾಗಿ ತೋರಿಸಿರುತ್ತದೆ.

3) ಕೆಲವು ಮಾಸ್ತಿ ಕಲ್ಲುಗಳ ಮೇಲೆ ಒಂದು ಕಂಬ ಮತ್ತು ಅದರ ಬಲ ಭಾಗದಿಂದ ಹೊರಟಿರುವಂತೆ ಒಂದು ಕೈ ಇರುತ್ತದೆ. ಆ ಕೈಯ ತುಂಬ ಬಳೆ, ತೋಳ್ಬಳೆಗಳಿರುತ್ತವೆ. ಇವನ್ನು "ಒಂಟಿ ಕೈ ಮಾಸ್ತಿಕಲ್ಲು"ಗಳೆಂದೂ "ವ್ಯಾಸನ ತೋಳು"ಗಳೆಂದೂ ಹಳ್ಳಿಗಳಲ್ಲಿ ಕರೆಯುವುದುಂಟು. ಕೆಲವು ಕಡೆಗಳಲ್ಲಿ ಕಂಬದಿಂದ ಎರಡು ಕೈ ಹೊರಟಿರುವಂತೆ ಚಿತ್ರಿಸಿದ್ದರೆ ಅದನ್ನು 'ಇಕ್ಕೈ ಮಾಸ್ತಿಕಲ್ಲು' ಎಂದು ಕರೆಯುತ್ತಾರೆ. ಇಂತಹ ಮಾಸ್ತಿಕಲ್ಲುಗಳು ಬಹಳ ವಿರಳ. ಎರಡೂ ರೀತಿಯಲ್ಲೂ ಎಲ್ಲೋ ಒಂದು ಕಡೆ ಗಂಡ ಹೆಂಡಿರನ್ನು ಕೆತ್ತಿರುವುದುಂಟು

ಮಾಸ್ತಿಕಲ್ಲುಗಳಲ್ಲಿ ಸ್ತ್ರೀ ವಿಗ್ರಹಗಳಿರುವಲ್ಲಿ ಕೆಲವು ಸಂಗತಿಗಳನ್ನು ಗಮನಿಸಬೇಕು. ಸ್ತ್ರೀ ಅಥವಾ ಮಾಸ್ತಿ ಸಾಮಾನ್ಯವಾಗಿ ತನ್ನ ಬಲಗೈಯನ್ನು ಮೇಲಕ್ಕೆ ಚಾಚಿ ಎಡಗೈಯಲ್ಲಿ ಒಂದು ಕಲಶವನ್ನು ಹಿಡಿದಿರುತ್ತಾಳೆ. ಎಡಗೈಯಲ್ಲಿ ಕನ್ನಡಿ ಹಿಡಿದಿರುವಂತೆ ತೋರಿಸುವುದೂ ಇದೆ. ಬಲಗೈ ಹೆಬ್ಬೆರಳು ಮತ್ತು ಅದರ ಪಕ್ಕದ ಬೆರಳುಗಳ ಮಧ್ಯೆ ನಿಂಬೆಯ ಹಣ್ಣನ್ನು ಹಿಡಿದಿರುತ್ತಾಳೆ. ಕೆಲವು ಮಾಸ್ತಿಯ ಕೈಯಲ್ಲಿ ಮಾದಲದ ಹಣ್ಣು ಇರುತ್ತದೆ. ಎರಡು ಕೈ ತುಂಬ ಬಳೆಗಳಿರುತ್ತವೆ. ತಲೆಯ ಹಿಂದೆ ಪ್ರಭಾವಳಿಯಂತೆ ಕಾಣುವುದು ಬೆಂಕಿಯ ಜ್ವಾಲೆಯ ದ್ಯೋತಕವಾಗಿರುತ್ತದೆ. ವೀರನ ಜೊತೆಯಲ್ಲಿ ಇಬ್ಬರೂ ಮೂವರು ಹೆಂಗಸರ ಚಿತ್ರವಿದ್ದು ಅವರಲ್ಲಿ ಒಬ್ಬಳ ಹಿಂದೆ ಮಾತ್ರ ಜ್ವಾಲೆಯ ಚಿತ್ರವಿದ್ದರೆ ಅವಳು ಮಾತ್ರ ಸಹಗಮನ ಮಾಡಿದಳೆಂದೂ, ಇನ್ನೊಬ್ಬಳು ಹಾಗೇ

ಉಳಿದಳೆಂದೂ ಭಾವಿಸಬೇಕು. ಕಲಶ, ಕನ್ನಡಿ, ಬಳೆಗಳು, ತೋಳುಬಂದಿ, ನಿಂಬೆ ಅಥವಾ ಮಾದಲದ ಹಣ್ಣು ಇವು ಮಂಗಳ ದ್ರವ್ಯಗಳಾಗಿದ್ದು, ಮಾಸ್ತಿಯು ಮುತ್ತೈದೆಯಾಗಿ ತನ್ನ ಗಂಡನಿರುವ ಸ್ವರ್ಗಕ್ಕೆ ಹೋದದನ್ನು ತಿಳಿಸುತ್ತದೆ. ಎತ್ತಿದ ಬಲಗೈ ಜನತೆಗೆ ಆಶೀರ್ವಾದ ಮಾಡುವುದನ್ನು ಸೂಚಿಸುತ್ತದೆ.

ವೀರಗಲ್ಲುಗಳಂತೆ ಮಾಸ್ತಿಕಲ್ಲುಗಳ ಮೇಲೂ ಬರಹಗಳಿರುವುದು ವಿರಳ. ಕೆಲವು ಮಾಸ್ತಿಕಲ್ಲುಗಳ ಮೇಲೆ ಆ ಮಹಾಸತಿಯ ವಿವರಗಳು ಬರೆದಿರುತ್ತವೆ. ಆ ಮಾಸ್ತಿಕಲ್ಲುಗಳಿಗೆ ದೇವಾಲಯಗಳಿಲ್ಲ. ಅವು ಬಯಲಲ್ಲಿ ನಿಂತಿವೆ. (ಇತ್ತಿಚೀಗೆ ಕೆಲವು ಕಡೆ ಬೃಹತ್ ದೇವಾಲಯಗಳನ್ನು ನಿರ್ಮಿಸಿದ್ದಾರೆ.) ಯಾರು ಯಾವಾಗ ಬೇಕಾದರೂ ಬಂದು ಪೂಜೆ ಮಾಡಿ ಹೋಗಬಹುದು. ಸಣ್ಣ ಮಕ್ಕಳಿಗೆ, ದನಗಳಿಗೆ ಕಾಯಿಲೆ ಎಂದರೆ, ಮಳೆ ಬರದಿದ್ದರೆ ವಿಶೇಷ ಪೂಜೆಗಳಾಗುತ್ತವೆ. ಮಂಗಳವಾರ, ಶುಕ್ರವಾರಗಳಿಗೆ ಉಳಿದ ದಿನಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯವುಂಟು. ಅಂಕೋಲೆಯಲ್ಲಿ ಬೀರ, ಜಟ್ಟಿಗರಂತೆಯೇ ಮಾಸ್ತಿಯೂ ಗ್ರಾಮದೈವವಾಗಿದ್ದಾಳೆ. ಸಹಗಮನ ಮಾಡಿದ ಸ್ತ್ರೀಯ ಬಗ್ಗೆ ಜನತೆ ತಾಳಿದ ಭಕ್ತಿ, ಗೌರವ, ಆದರಗಳ ಪ್ರತೀಕ ಇದು. ಗಂಡನಿಗಾಗಿ ಮಡಿದ ಮಾಸ್ತಿಯರ ಬಗ್ಗೆ ಜನ ಇಟ್ಟಿರುವ ಗೌರವ ಭಯ, ಭಕ್ತಿಗಳು ಇಲ್ಲಿ ಎದ್ದು ಕಾಣುತ್ತವೆ. ನಮ್ಮ ಜನರ ಕಣ್ಣಲ್ಲಿ ಮಾಸ್ತ್ಯಮ್ಮ ಒಬ್ಬ ದೇವತೆ. ಆಕೆ ಮೇಲಿನಿಂದ ಇಳಿದು ಬಂದವಳಲ್ಲ ಇಲ್ಲಿಂದ ಏರಿ ಹೋದವಳು.

ವೀರರ ಸ್ಮಾರಕಗಳಾಗಿ ವೀರಗಲ್ಲುಗಳನ್ನು, ಮಾಸ್ತಿಗಲ್ಲುಗಳನ್ನು ಸ್ಥಾಪಿಸಿ ಅವುಗಳಿಗೆ ಕಲಶ ಕನ್ನಡಿ ದೀಪ ಪೂಜೆಗಳ ಗೌರವವನ್ನು ಏರ್ಪಡಿಸುತ್ತಿದ್ದರು. ಮನುಷ್ಯದ್ದವರು ವೀರಮರಣಗೈದಾಗ, ಸಹಗಮನ– ಅನುಗಮನ ಪದ್ಧತಿಗಳನ್ನು ಅನುಸರಿಸಿದಾಗ ಅವರು ದೈವಾಂಶ ಸಂಭೂತರಾಗುತ್ತಿದ್ದರು. ತಮ್ಮ ಶುಚಿತೆ ವೀರತೆಗಳಿಂದ ಜನಮನವನ್ನು ಗೆದ್ದು ದೈವಗಳಾಗಿ ಪರಿಣಮಿಸಿದ ಅನೇಕ ಉದಾಹರಣೆಗಳನ್ನು ನಾವು ಚರಿತ್ರೆಯಲ್ಲಿ ಕಾಣಬಹುದು. ಅಂಕೋಲೆಯಾದ್ಯಂತ ವೀರರು ದೈವದ ಮಟ್ಟಕ್ಕೇರಿ ಪೂಜೆಗೊಳ್ಳುತ್ತಿರುವ ನೂರಾರು ನಿದರ್ಶನಗಳಿವೆ. ಇಂಥ ವೀರರ ಪೌರುಷ, ಕಿಚ್ಚು, ಸ್ವಾಭಿಮಾನ, ತ್ಯಾಗಗಳು ನಮ್ಮ ಜನಪದದ ಹೆಮ್ಮೆಗೆ ಕಾರಣವಾಗಿವೆ.

ಮಹಾಮಂಡಳೇಶ್ವರ ನಾಗವರ್ಮರಸನ ರಣಗಂಬಗಳು:

'ತುರುಗೋಳೊಳ್ ಪೆಣ್ಣುಯ್ಯಲೊ
ಳೆರೆವಸದೊಳ್ ನಂಟನೆಡರೊಳ್ ಊರಳಿವಿನೊಳಂ ।
ತರಿಸಂದು ಗಂಡುತನಮನೆ
ನೆರಪದವಂ ಗಂಡನಲ್ಲನೆಂತುಂ ಷಂಡಂ ॥'

'ತುರುಗೋಳಿನಲ್ಲಿ, ಪೆಣ್ಣುಯ್ಯಲಿನಲ್ಲಿ, ಸ್ವಾಮಿಕಾರ್ಯದಲ್ಲಿ, ನಂಟನಿಗೆ ತೊಂದರೆ ಬಂದಾಗ, ಊರು ನಾಶವಾಗುವಾಗ ಯಾವನು ದೃಢನಿರ್ಧಾರ ಮಾಡಿ ತನ್ನ ಗಂಡುತನವನ್ನು ಮೆರೆಯುವುದಿಲ್ಲವೋ ಅವನು ಗಂಡಸಲ್ಲ ಷಂಡ, ನಪುಂಸಕ' ಎನ್ನುವುದು ಕವಿಚಕ್ರವರ್ತಿ ಬಿರುದಾಂಕಿತ ಮಹಾಕವಿ ರನ್ನ ತನ್ನ 'ಗದಾಯುದ್ಧ ಅಥವಾ ಸಾಹಸ ಭೀಮವಿಜಯ' ಎಂಬ ಕಾವ್ಯದಲ್ಲಿ ದ್ರೌಪದಿಯ ಮೂಲಕ ಹೇಳಿಸುವ ಈ ಮಾತುಗಳ ತಾತ್ಪರ್ಯ. ಚರಿತ್ರಾರಂಭದ ಕಾಲದಿಂದಲೂ ಶೌರ್ಯಕ್ಕೆ, ಪರಾಕ್ರಮಕ್ಕೆ ಹೆಸರಾದ ಕರ್ನಾಟಕದ ಜನಪದ ಈ ಬಗೆಯ ನುಡಿಗಳಿಂದಲೆ ಸ್ಫೂರ್ತಿಪಡೆದು ಸಮಷ್ಟಿಯ ಹಿತಕ್ಕಾಗಿ ಪ್ರಾಣಾರ್ಪಣೆಗೈಯ್ಯುವುದು ತಮ್ಮ ಬದುಕಿನ ಪರಮೋಚ್ಚ ಗುರಿಯಾಗಿ ಭಾವಿಸಿದ್ದಿತು. ಈ ಬಗೆಯಲ್ಲಿ ಸತ್ತ ವೀರರ ಸಾಧನೆಗಳನ್ನು ಸ್ಮರಿಸಿ ನೆಟ್ಟ ಸ್ಮಾರಕ ಶಿಲೆಗಳೇ ವೀರಗಲ್ಲುಗಳು.

ಅಂಕೋಲಾ ತಾಲೂಕಿನ ಪ್ರತಿ ಹಳ್ಳಿಯಲ್ಲೂ ಒಂದಾದರೂ ನಾಲ್ಕಾರು ಪಟ್ಟಿಕೆಗಳಲ್ಲಿ ಉಬ್ಬುಶಿಲ್ಪಗಳಿರುವ ಶಿಲಾಫಲಕ ಕಂಡುಬರುತ್ತದೆ. ವೀರನೊಬ್ಬನ ತ್ಯಾಗವನ್ನು ನೆನೆಯುತ್ತಾ ನಡೆಸಿದ ಇಂತ ವೀರಗಲ್ಲುಗಳನ್ನು ಗುರುತಿಸುವುದು ಸುಲಭ. ಸಾಮಾನ್ಯವಾಗಿ ಅವುಗಳ ಮೇಲೆ ಮೂರು ಹಂತದ ಚಿತ್ರಗಳಿರುತ್ತವೆ. ಕೆಳಗಿನ ಹಂತದಲ್ಲಿ ವೀರ ತನ್ನ ಶತ್ರುಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಯುದ್ಧದಲ್ಲಿ ಮಡಿದ ಅವನನ್ನು ದೇವತಾ ಸ್ತ್ರೀಯರು ಅಥವಾ ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆಯೂ ಮೇಲಿನ ಹಂತದಲ್ಲಿ ಅವನು ಭಗವಂತನ ಸಾನಿಧ್ಯದಲ್ಲಿ ಇರುವಂತೆಯೂ ಕೆತ್ತಲಾಗಿರುತ್ತದೆ. ಕೆಲವು ವೇಳೆ ನಾಲ್ಕು, ಐದು, ಎಂಟು ಹಂತಗಳಲ್ಲಿ ಚಿತ್ರಿಸಿರುವುದೂ ಉಂಟು. ಇನ್ನು ಕೆಲವು ವೀರಗಲ್ಲುಗಳ ಮೇಲೆ ವಿವಿಧ ಹಂತಗಳಿರದೇ ಕುದುರೆ ಸವಾರನು, ಆನೆಯ ಮೇಲಿರುವ ವೀರನ ಚಿತ್ರವೋ,

ಇಲ್ಲವೇ ರಣರಂಗದ ಚಿತ್ರವೋ ಇರುವುದುಂಟು. ಯುದ್ಧವನ್ನೋ ರಣರಂಗವನ್ನೋ ನೆನಪಿಗೆ ತರುವ ಯಾವುದೇ ಚಿತ್ರವಿದ್ದರೂ ಅದನ್ನು ವೀರಗಲ್ಲೆಂದು ಸ್ಥೂಲವಾಗಿ ಹೇಳಿಬಿಡಬಹುದು.

ಆದರೆ ಈ ಸಾಮಾನ್ಯ ಲಕ್ಷಣಗಳಿಂದ ಭಿನ್ನವಾದ ಪ್ರತ್ಯೇಕ ಮಾದರಿಯ ಸ್ಥಂಭ ವೀರಗಲ್ಲುಗಳನ್ನು ಅಂಕೋಲಾ ತಾಲೂಕಿನಲ್ಲಿ ಕಾಣಬಹುದು. ಬಹಳಷ್ಟು ಕಡೆಗಳಲ್ಲಿಯ ಸ್ಥಳೀಯರು ಈ ಸ್ಥಂಬ ವೀರಗಲ್ಲುಗಳನ್ನು 'ರಣಗಂಬ'ಗಳೆಂದು ಕರೆಯುತ್ತಾರೆ. ಅಂಕೋಲಾ ತಾಲೂಕಿನ ಬಡಗೇರಿ, ವಂದಿಗೆ, ವಾಸರೆ, ಅಂಗಡಿಬೈಲು, ಮಾಬಗಿ ಮೊದಲಾದ ಕಡೆಗಳಲ್ಲಿ ಇಂತ ರಣಗಂಬಗಳು ದೊರೆತಿವೆ. ಇವುಗಳಲ್ಲಿ ಸುಮಾರು ಬಡಗೇರಿಯ ಕಂಬದಲ್ಲಿ ಶಾಸನವಿದ್ದು ಅದು ಕ್ರಿ.ಶ. ೧೧೧೩ರ ಅವಧಿಯದಾಗಿದೆ. ಆರು–ಏಳು ಅಡಿ ಎತ್ತರದ ಒಂದು–ಒಂದುಕಾಲು ಅಡಿ ಚೌಕ ವಿನ್ಯಾಸದಲ್ಲಿ ರಚಿಸಿರುವ ಈ ರಣಗಂಬಗಳು ಒಂದು ಸೀಮಿತ ಅವಧಿಯಲ್ಲಿ ಮತ್ತು ಸೀಮಿತ ಪ್ರದೇಶದಲ್ಲಷ್ಟೇ ಕಂಡುಬಂದಿದೆ. ಈ ಅವಧಿ ಮತ್ತು ಪ್ರದೇಶ ನಾಗವರ್ಮರಸನ ಆಳ್ವಿಕೆಯದ್ದೇ ಆಗಿರುವುದರಿಂದ, ನಾಗವರ್ಮರಸನ ಹೆಸರಿಲ್ಲದ ಮತ್ತು ಪೂರ್ಣ ಪ್ರಮಾಣದಲ್ಲಿ ಶಾಸನ ರಹಿತವಾದ ರಣಗಂಬಗಳ ಶಿಲ್ಪ ವಿನ್ಯಾಸಗಳನ್ನು, ಅವುಗಳ ಕಥಾ ನಿರೂಪಣಾ ಶೈಲಿ, ಲಿಪಿಯ ಹೋಲಿಕೆ ಇತ್ಯಾದಿಗಳ ಸಮಾನ ಅಂಶಗಳಿಂದ ಇವೆಲ್ಲವು ನಾಗವರ್ಮರಸನ ಅವಧಿಯವೆ ಆಗಿವೆ ಎಂದು ದೃಢವಾಗಿ ಹೇಳಬಹುದು.

ಏಳು ಅಡಿ ಎತ್ತರ ಮತ್ತು ಹದಿನೈದು ಅಂಗುಲ ಅಗಲದ ನಾಲ್ಕು ಮುಖಗಳ ಇಲ್ಲವೇ ಆರು ಅಡಿ ಎತ್ತರ ಒಂದು ಅಡಿ ಅಗಲದ ನಾಲ್ಕು ಮುಖಗಳ ಆಯತ ಘನ ಆಕಾರದ ಕಂಬಗಳು ಎರಡು ಅಥವಾ ಮೂರು ಮುಖಗಳಲ್ಲಿ ಉಬ್ಬುಶಿಲ್ಪಗಳನ್ನೂ ಒಂದು ಅಥವಾ ಎರಡು ಮುಖಗಳಲ್ಲಿ ಶಾಸನವನ್ನೂ ಕೆತ್ತಲಾಗಿದೆ. ಉಬ್ಬು ಶಿಲ್ಪಗಳಿರುವ ಪ್ರತಿ ಮುಖದಲ್ಲಿ ಕೆಲವೆಡೆ ಐದು ಮತ್ತೆ ಕೆಲವೆಡೆ ಏಳು ಕೋಷ್ಟಕಗಳನ್ನು ಮಾಡಿ ಅವುಗಳಲ್ಲಿ ಶಿಲ್ಪಗಳನ್ನು ಬಿಡಿಸಲಾಗಿದೆ. ಸಾಮಾನ್ಯ ವೀರಗಲ್ಲುಗಳಲ್ಲಿ ಕಂಡುಬರುವ ಯುದ್ಧನಿರತ ವೀರ, ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವದು ಹಾಗೂ ವೀರನು ಸ್ವರ್ಗದಲ್ಲಿ ಇಷ್ಟ ದೇವತೆಯ ಸಾನಿಧ್ಯ ಪಡೆದಿರುವದನ್ನು ಚಿತ್ರಿಸುವ ಪಟ್ಟಿಕೆಗಳಿಗಷ್ಟೇ ಈ ರಣಗಂಬಗಳ ಉಬ್ಬುಶಿಲ್ಪಗಳು ಸೀಮಿತವಾಗಿಲ್ಲ, ಯುದ್ಧದ ಬಹುಮುಖ ದರ್ಶನ ಕಾಣಸಿಗುತ್ತದೆ. ಅಶ್ವದಳ, ಗಜದಳ, ಕಾಲಾಳುಗಳ ಬಿಲ್ಯುದ್ಧ, ಖಡ್ಗಯುದ್ಧ, ಕೋಟೆ ಕಾಳಗದ ದೃಶ್ಯಗಳು ಹೀಗೆ ರಣಾಂಗಣದ ಸಮಗ್ರ ಚಿತ್ರಣವನ್ನು ಉಬ್ಬು ಶಿಲ್ಪಗಳಲ್ಲಿ ಕಂಡರಿಸಲಾಗಿದೆ. ಈ ರಣಗಂಬಗಳಲ್ಲಿ ಕಾಣಸಿಗುವ ಅರಸರ ಅಧಿಕಾರಿಗಳ, ಆಳುಗಳ, ಸ್ತ್ರೀಯರ ಪೋಷಾಕುಗಳು, ಆಭರಣಗಳು, ಆಯುಧಗಳು ವೈವಿಧ್ಯಮಯವಾಗಿದ್ದು ಅವೆಲ್ಲವೂ ಒಂದು ಪ್ರಾದೇಶಿಕ ವೈಶಿಷ್ಟ್ಯದಿಂದ ಕೂಡಿರುವುದನ್ನೂ ಗುರುತಿಸಬಹುದಾಗಿದೆ.

ನಾಗವರ್ಮರಸನ ಅವಧಿಯ ಈ ರಣಗಂಬಗಳು ಆಳೆತ್ತರದ ಏಕಶಿಲಾ ಸ್ತಂಭಗಳು. 'ತಲೆಯಲ್ಲಿ ಆಮಲಕ ಶಿಲೆಯ ಮೇಲೆ ಪೂರ್ಣಕಲಶವನ್ನು, ಇಲ್ಲವೆ ದೊಡ್ಡ ಪೂರ್ಣಕಲಶವನ್ನು ಮಾತ್ರ ಹೊತ್ತಿವೆ. ಬದಿಗಳಲ್ಲಿ ಅಡ್ಡ ಪಟ್ಟಿಕೆಗಳಾಗಿ ಉಬ್ಬುಶಿಲ್ಪಗಳಿವೆ. ಇಂಥ ಶಿಲ್ಪಗಳು ಎರಡು ಇಲ್ಲವೆ ಮೂರು ಬದಿಗಳಲ್ಲಿರಬಹುದು. ಒಂದು ಅಥವಾ ಎರಡು ಬದಿಗಳಲ್ಲಿ ವಿಷಯ ತಿಳಿಸುವ ಶಾಸನವಿರುತ್ತದೆ. ಇದಿಷ್ಟು 'ವೀರಗಂಬ'ಗಳ ಸ್ಥೂಲ ಸ್ವರೂಪ. ಸೂಕ್ಷ್ಮವಾಗಿ ಗಮನಿಸಿದರೆ ಇವು ಕೂಟ ಮಾದರಿಯ ಕಪೋತ–ಗ್ರೀವ ಸಹಿತ, ಏಕತಲ ಏಕಶಿಲಾ ದೇಗುಲದ ಪ್ರತಿರೂಪಗಳೋ ಎನಿಸುತ್ತವೆ' ಎಂದು ಡಾ. ಶ್ರೀನಿವಾಸ ಪಾಡಿಗಾರ ಅವರು ಅಭಿಪ್ರಾಯಪಟ್ಟಿದ್ದಾರೆ.

ಈ ರಣಗಂಬಗಳ ಮೇಲಿರುವ ಉಬ್ಬು ಶಿಲ್ಪಗಳ ಬಹುಮುಖ್ಯ ವೈಶಿಷ್ಟವೆಂದರೆ ರಾಮಾಯಣದಿಂದಾಯ್ದ ದೃಶ್ಯಗಳು. ಸುಗ್ರೀವನಿಂದ ರಾಮನ ಬಿಲ್ವಿದ್ಯೆಯ ಪರೀಕ್ಷೆ, ವಾಲಿ ಸುಗ್ರೀವರ ಕಾಳಗ, ರಾವಣನಿಂದ ಜಟಾಯುವಿನ ವಧೆ. ಅಶೋಕವನದಲ್ಲಿ ಕುಳಿತಿರುವ ಸೀತೆ, ಹನುಮಂತನು ಸೀತೆಗೆ ಉಂಗುರವನ್ನು ನೀಡುತ್ತಿರುವುದು, ವಾನರ ಸೇನೆಯಿಂದ ಲಂಕೆಗೆ ಸೇತುವೆಯ ನಿರ್ಮಾಣ ಇತ್ಯಾದಿ ಉಬ್ಬು ಶಿಲ್ಪಗಳು ಹೆಬ್ಬಾರನಕೆರೆಯ ರಣಗಂಬದಲ್ಲಿವೆ. ರಾವಣನು ಶಿವಲಿಂಗವನ್ನು ಕೀಳಲು ಪ್ರಯತ್ನಿಸುತ್ತಿರುವ ದೃಶ್ಯವೂ ಇಂತ ರಣಗಂಬಗಳಲ್ಲಿ ಚಿತ್ರಿಸಿರುವುದು ಗೋಕರ್ಣ ಮಹಾತ್ಮೆಯ ಪೌರಾಣಿಕ ಕಥೆಯ ಪ್ರಾಚೀನತೆಯ ದ್ಯೋತಕವಾಗಿದೆ. ಬಡಗೇರಿಯ ರಣಗಂಬದಲ್ಲಿ ೧೨

ಅಂಗುಲ ಅಗಲ ಮತ್ತು ೯ ಅಂಗುಲ ಎತ್ತರದ ಕೋಷ್ಟಕಗಳನ್ನು ಮಾಡಿಕೊಂಡು ಅದರಲ್ಲಿ ಯುದ್ಧದ ದೃಶ್ಯಗಳನ್ನು ವೀರನ ಸ್ವರ್ಗಾರೋಹಣದ ದೃಶ್ಯಗಳನ್ನು, ಕೈಲಾಸ ಮತ್ತು ವೈಕುಂಠದ ದೃಶ್ಯಗಳನ್ನು ಚಿತ್ತರಿಸಲಾಗಿದೆ. ಪ್ರತಿ ಕೋಷ್ಟಕಗಳ ನಡುವೆ ೩ ಅಂಗುಲ ಎತ್ತರದಲ್ಲಿ ಪುಷ್ಪಲತೆಗಳನ್ನು ಚಿತ್ರಿಸಲಾಗಿದೆ. ದಕ್ಷಿಣ ಮತ್ತು ಉತ್ತರದ ಮುಖದಲ್ಲಿ ತಲಾ ೫ ಕೋಷ್ಟಕಗಳನ್ನೂ ಉತ್ತರದ ಮುಖದಲ್ಲಿ ೩ ಕೋಷ್ಟಕಗಳನ್ನೂ ಚಿತ್ರಿಸಲಾಗಿದೆ. ಉತ್ತರದ ಮುಖದ ಮೇಲಿನ ಕೋಷ್ಟಕದಲ್ಲಿ ಶೇಷಶಯನ ವಿಷ್ಣುವನ್ನೂ, ಅವನ ನಾಭಿಯಿಂದ ಹೊರಟ ಕಮಲದಲ್ಲಿ ಬ್ರಹ್ಮನನ್ನೂ, ಕಾಲಬಳಿಯಲ್ಲಿ ಲಕ್ಷ್ಮೀಯನ್ನೂ ಕೆತ್ತಲಾಗಿದೆ. ಪಶ್ಚಿಮ ಮುಖದ ಮೇಲಿನ ಕೋಷ್ಟಕದಲ್ಲಿ ಮಂಟಪವನ್ನೂ ಚಿತ್ರಿಸಿದ್ದು ಮಧ್ಯದಲ್ಲಿ ಶಿವಲಿಂಗವನ್ನೂ, ಲಿಂಗದ ಅಕ್ಕ-ಪಕ್ಕದಲ್ಲಿ ಉದ್ದ ಜಟೆ ಹೊಂದಿರುವ ಯತಿಯನ್ನೂ, ವೀರನನ್ನೂ ಕೆತ್ತಲಾಗಿದೆ. ಮಂಟಪದ ಒಂದು ಪಕ್ಕಕ್ಕೆ ಗಣಪತಿಯನ್ನೂ, ಇನ್ನೊಂದು ಪಕ್ಕಕ್ಕೆ ಕೋಣವನ್ನು ಮೆಟ್ಟಿನಿಂತ ಮಹಿಷಮರ್ಧಿನಿಯನ್ನು ಚಿತ್ರಿಸಲಾಗಿದೆ. ಯುದ್ಧದ ದೃಶ್ಯವನ್ನು ತೋರಿಸುವಾಗ ಮುಖ್ಯ ವೀರನನ್ನು ಕಿರೀಟಧಾರಿಯಾಗಿ ಮಾನವರೂಪದಲ್ಲಿ, ಅವನ ಸಹಚರರನ್ನು ವಾನರ ರೂಪದಲ್ಲಿ ತೋರಿಸಿದರೆ, ಶತ್ರುಗಳನ್ನು ರಾಕ್ಷಸ ರೂಪದಲ್ಲಿ ತೋರಿಸಲಾಗಿದೆ. ಆತ್ಮಾರ್ಪಣೆ ಮಾಡಿಕೊಂಡ ವೀರನನ್ನು ಸ್ವರ್ಗಕ್ಕೆ ಅಪ್ಸರೆಯರ ಬದಲು ವಾನರರು ಕರೆದುಕೊಂಡು ಹೋಗುತ್ತಿರುವುದು ಅಪರೂಪದ ದೃಶ್ಯವಾಗಿದೆ. ಹೆಬ್ಬಾರನಕೆರೆಯ ಕಂಬದಲ್ಲಿ ನೇರವಾಗಿ ರಾಮಾಯಣದ ಚಿತ್ರಗಳನ್ನು ಚಿತ್ರಿಸಿದ್ದರೆ, ಬಡಗೇರಿಯ ಕಂಬದಲ್ಲಿ ವಾಸ್ತವಿಕ ಸನ್ನಿವೇಷಗಳನ್ನು ರಾಮಾಯಣದ ದ್ರಶ್ಯಗಳಿಗೆ ಸಮೀಕರಿಸಿ ಚಿತ್ರಿಸಿರುವುದು ವಿಶೇಷವಾಗಿದೆ.

ಬಲು ಅಪರೂಪಕ್ಕೆ ಎನ್ನುವಂತೆ ಈ ರಣಗಂಬಗಳ ಮೇಲೆ ಅಶ್ಚರ್ಯವೆನಿಸುವಂತೆ ಕಾಮಕೇಳಿಯ ದೃಶ್ಯಗಳೂ ಕಂಡುಬಂದಿವೆ. ಮಾಬಗಿಯಲ್ಲಿ ದೊರೆತಿರುವ ಕಂಬಗಳಲ್ಲಿ ರತಿಕ್ರೀಡಾ ನಿರತ ದಂಪತಿಗಳ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಮಾಬಗಿಯ ಕಂಬದಲ್ಲಿ ಕಾಮಕೇಳಿಯ ದೃಶ್ಯವಿರುವ ಕೋಷ್ಟಕದ ಸರಿಯಾಗಿ ವಿರುದ್ಧ ದಿಕ್ಕಿನಲ್ಲಿರುವ ಕೋಷ್ಟಕದಲ್ಲಿ ಶಿಶು ಜನಿಸುತ್ತಿರುವ ಚಿತ್ರವನ್ನೂ ಕೆತ್ತಲಾಗಿದೆ. ವೀರಗಂಬವೊಂದರಲ್ಲಿ ಈಬಗೆಯ ಶಿಲ್ಪವಿರುವುದು ಇದು ಏಕೈಕ ನಿದರ್ಶನವಾಗಿದೆ. ವಾಸರೆ, ಅಂಗಡಿಬೈಲು, ಬಡಗೇರಿ, ಮಾಬಗಿ, ಮೊದಲಾದೆಡೆಗಳಲ್ಲಿಯ ರಣಗಂಬಗಳ ಮೇಲ್ಬಾಗದಲ್ಲಿ ಅಭಿಷೇಕ ಲಕ್ಷ್ಮಿಯ ಆಕೃತಿಗಳಿವೆ. ಶಿಲ್ಪ ಶೈಲಿಯ ದೃಷ್ಟಿಯಿಂದಲೂ ಈ ರಣಗಂಬಗಳು ಗಮನಾರ್ಹವಾಗಿವೆ. ಚಿತ್ರಿತ ವ್ಯಕ್ತಿಗಳ ಮೈಕಟ್ಟು ಉಡುಪು, ಆಭರಣಗಳು, ವಿಶಿಷ್ಟ ರೀತಿಯ ಆಯುಧಗಳ ಚಿತ್ರಣಗಳೆಲ್ಲ ಅಪ್ಪಟ ಪ್ರಾದೇಶಿಕ ಶಿಲ್ಪಶೈಲಿಯ ಸ್ವಂತಿಕೆಯನ್ನು ತೋರಿಸುತ್ತವೆ. ಮಾನವ ದೇಹಗಳಿಗೆ ಪ್ರಾಣಿರೂಪದ ತಲೆಯನ್ನು ಕೊಟ್ಟಿರುವುದನ್ನು ಗಮನಿಸಿದಾಗ ಇವು ಆಗ್ನೇಯ ಏಷ್ಯಾದ ಶಿಲ್ಪಗಳನ್ನು ಕೆಲಮಟ್ಟಿಗೆ ಹೋಲುವಂತೆ ತೋರಿದರೂ ಇವುಗಳನ್ನು ಕೆತ್ತಿದ ಶಿಲ್ಪಿಗಳು ಸ್ಥಳಿಯರು ಎನ್ನುವುದು ಈ ರಣಗಂಭಗಳ ಮೇಲಿರುವ ಶಾಸನಗಳಿಂದಲೇ ನಮಗೆ ತಿಳಿಯುತ್ತದೆ. ಬಡಗೇರಿಯ ರಣಗಂಬವನ್ನು ಲಕ್ಕಣ್ಣೋಜನ ಅಳಿಯ ಚಂದನ ಬಳಿಯ ಗೋರವೋಜ ಕಂಡರಿಸಿದ್ದಾನೆ. ಹೊನ್ನಾವರದ ಕೆಕ್ಕಾರಿನ ಒಂದು ಕಂಬವನ್ನು ಅಂಕೋಲೆಯ ಲಕ್ಕಣ್ಣೋಜ ಕೆತ್ತಿದರೆ ಮತ್ತೊಂದು ಕಂಬವನ್ನು ಆತನ ಅಳಿಯ ನಂದಿ ಓಜ ಮಾಡಿದ್ದಾನೆ. ಲೊಕ್ಕುಂಡಿಯ ಮದಿಗ, ಬೊಪ್ಪೋಜ ಮೊದಲಾದ ಶಿಲ್ಪಿಗಳ ಹೆಸರುಗಳೂ ಈ ರಣಗಂಬಗಳಲ್ಲಿ ದೊರೆಯುತ್ತವೆ.

ನಾಗವರ್ಮರಸನ ಕಾಲದ ಈ ಎಲ್ಲ ರಣಗಂಬಗಳನ್ನು ಮಾಡಿಸಿದ್ದು ಮಡಿದ ವೀರ ಸಂಬಂಧಿಗಳೆನ್ನುವುದೂ ಮತ್ತೊಂದು ವಿಶೇಷ. ಪಡವಳಬುದ್ಧ ಮಡಿದಾಗ ಆತನ ಮೊಮ್ಮಗನಾಗಿದ್ದ ಪಡವಳ ಹಾಚ ಮತ್ತು ಬೋಗೀರಿಕರು ಸೇರಿ ಪಡವಳ ಬುದ್ಧನಿಗೆ ಕಂಬವನ್ನು ಮಾಡಿಸುತ್ತಾರೆ. ಮಾರಸಿಂಗನು ಮಡಿದಾಗ ಆತನ ಹೆಂಡತಿ ಹೊನ್ನಬ್ಬೆ ಹೆಗ್ಗಡತಿ, ಗೋನು ಮತ್ತು ಮೇರು ಸೇರಿ ಕಂಬ ಮಾಡಿಸುತ್ತಾರೆ. ಜಳವಳಿಯ ಬಡಮ್ಮ ಮಡಿದಾಗ ಹಿರಿಯ ಹೆಗ್ಗಡೆ ಹಾಚ, ಪೊನ್ನಯ್ಯರು ಕಂಬ ನೆಡಿಸುತ್ತಾರೆ. ತತ್ರಹಾಳ ಜವನುಗನ ಮಗನಾದ ಮುದ್ದುಗಹಳಿ ಮಡಿದಾಗ ಆತನ ವಧು ಬನ್ದಿಯಬ್ಬೆ ಮತ್ತು ಬೂತಬ್ಬೆ ಮತ್ತು ಅಜ್ಜಮಗೆಲ್ಲನ ಮಗಳಾದ ಮಾರಬ್ಬೆಯರು ಮಾಡಿಸಿದ್ದಾರೆ. ಹಾಗೆಯೇ 'ಅರಸಿಂಗನಾಡಿಂಗಡಿತ್ತು ಗುಡದೆ ಪಚ್ಚವರಿಗೆ ಬೆಂಗಾಣದ ಗಂಡ' ಬಿರುದಾಂಕಿತ ರಕ್ಕಸರಿದನು ಸುರಲೋಕ ಪ್ರಾಪ್ತನಾದ(ಮರಣವನ್ನಪ್ಪಿದ). ಸಿಂಹದ ದವಡೆಗೆ ವಜ್ರದ

ಮುಕುಟ ಮೂಡುವಂತೆ ಹುಟ್ಟಿದ ರಕ್ಕಸರಿದನ ಮಗ ಗುಣಖುವಾರಿದನು ಇಪ್ಪತ್ತು ಗದ್ಯಾಣಗಳನ್ನು ವ್ಯಯಿಸಿ ಬನದಂತಿರುವ ಅಡಹಾನ ಬಳಗವೆಂಬ ಬಳಿಗೆ ಪವಿತ್ರನಾದ ತನ್ನ ತಂದೆಗೆ ಕಾರ್ಯಗಳನ್ನು ಮಾಡಿ ಈ ಕಲ್ಲನ್ನು ನಿಲ್ಲಿಸಿದ ವಿಷಯವನ್ನು ಬಡಗೇರಿಯ ರಣಗಂಬದ ಶಾಸನ ತಿಳಿಸುತ್ತದೆ. ಈ ರಣಗಂಬಗಳ ಮೇಲಿನ ಶಾಸನಗಳೆಲ್ಲ ನಾಗವರ್ಮರಸನ ಆಡಳಿತವನ್ನು ಉಲ್ಲೇಖಿಸುತ್ತವೆ. ಮಹಾಮಂಡಳೇಶ್ವರನಾಗಿದ್ದ ಅರಸನ ಅವಧಿಯಲ್ಲಿ ತನ್ನ ಪ್ರಜೆಗಳ ಹೆಸರಿನಲ್ಲಿಯೇ ಶಾಸನಗಳನ್ನು ಹಾಕಿರುವ ಉದಾಹರಣೆಗಳು ಸಹ ಒಂದು ಪ್ರತ್ಯೇಕ ಅಧ್ಯಯನ ವಿಷಯವೇ ಆಗಿದೆ.

ಅಂಕೋಲೆ ಪರಿಸರದ ಬೀರ ಮತ್ತು ಬೊಮ್ಮಯ್ಯ ದೇವರು :

ಒಂದು ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಪರಂಪರೆಗಳ ಅಧ್ಯಯನಕ್ಕೆ ಹೆಚ್ಚಿನ ಮಹತ್ವವಿದೆ. ಪರಂಪರೆಗಳು ಇದ್ದಕ್ಕಿದ್ದ ಹಾಗೆ ಪ್ರಾರಂಭವಾಗುವುದಿಲ್ಲ ಮತ್ತು ಇದ್ದಕ್ಕಿದ್ದಂತೆ ಮಾಯವಾಗುವುದಿಲ್ಲ, ಹೊಸ ಸಂಪ್ರದಾಯಗಳು ಬಂದರೂ ಹಳೆಯ ಸಂಪ್ರದಾಯಗಳೊಡನೆ ಬೆರೆತು ಮುಂದುವರಿಯುತ್ತವೆ. ಇಂತಹ ಸಂಪ್ರದಾಯಗಳಲ್ಲಿ ಪರಂಪರೆಯಲ್ಲಿ ಯಾವುದು ಪ್ರಾಚೀನ ಯಾವುದು ಆರ್ವಾಚೀನ ಎಂದು ಬೇರ್ಪಡಿಸುವುದು ಕಷ್ಟದ ಕೆಲಸ. ಆದರೂ ಸಾಹಿತ್ಯ ಮತ್ತು ಶಾಸನಾಧಾರಗಳಿಂದ ಸ್ವಲ್ಪ ಮಟ್ಟಿಗೆ ತಿಳಿಯಲು ಸಾಧ್ಯ. ಪರಂಪರೆಗಳು, ಸಂಪ್ರದಾಯಗಳು ಯಾವಾಗ ಹೇಗೆ? ಏಕೆ? ಪ್ರಾರಂಭವಾದವು ಎಂಬ ಸಂಗತಿಯನ್ನು ಸೂಕ್ಷ್ಮವಾಗಿ ವಿಚಾರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂಕೋಲಾ ತಾಲೂಕು ಹಾಗೂ ಸುತ್ತಮುತ್ತಲಿನ ಪರಿಸರದಲ್ಲಿ ಪೂಜಿಸಲ್ಪಡುವ 'ಬೀರ' ಮತ್ತು 'ಬೊಮ್ಮಯ್ಯ' ಎಂಬ ಎರಡು ದೇವರುಗಳ ಪರಂಪರೆಯನ್ನು ಅವಲೋಕಿಸಲಾಗಿದೆ.

ಅಂಕೋಲೆಯಲ್ಲಿ ಶಿಷ್ಟ ಸಂಪ್ರದಾಯದ ದೇವರುಗಳಿಗಿಂತ ಜನಪದ ದೇವರುಗಳ ಸಂಖ್ಯೆ ಅಧಿಕವಾದುದು. ಬೀರ, ಬೊಮ್ಮಯ್ಯ, ಮುರ್ಕುಂಡಿ, ಹೊನ್ನಾರಾಕಾ, ಹಿರೇಹೊನ್ನಪ್ಪ, ಹೊಲೆವಟರ, ರಾಕೇಶ, ಅಮ್ಮನವರು, ಕನ್ನೆ, ಅಚ್ಚಕನ್ನೆ, ಚೌಡಿ ಹೀಗೆ ಈ ಪಟ್ಟಿ ಬೆಳೆಯುತ್ತದೆ. ಇಂಥ ದೈವಗಳ ಉಗಮ, ವಿಕಾಸ, ಸಂಸ್ಕೃತಿ, ಭೌಗೋಳಿಕ ಪರಿಸರದ ಜೊತೆಗಿನ ಪರಸ್ಪರ ಸಂಬಂಧ ಇತ್ಯಾದಿಗಳ ಕುರಿತು ಈವರೆಗೆ ಸಮಗ್ರ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಬೀರಪ್ಪ ಮತ್ತು ಬೊಮ್ಮಯ್ಯ ದೇವರುಗಳ ಕುರಿತು ಕೆಲವು ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅಂಕೋಲೆಯ ಪರಿಸರದಲ್ಲಿ ಬಹುಸಂಖ್ಯಾತ ಜನಪದರ ಆರಾಧ್ಯ ದೈವವಾಗಿರುವ 'ಬೀರದೇವ' ಮತ್ತು 'ಬೊಮ್ಮಯ್ಯದೇವ'ರ ಉಗಮ ಮತ್ತು ವಿಕಾಸದ ಕುರಿತು ಚರ್ಚಿಸಿ ಒಂದು ನಿರ್ಧಾರಕ್ಕೆ ಬರುವುದು ಅಷ್ಟು ಸುಲಭವಲ್ಲ. ಆದರೂ ಉಪಲಬ್ಧವಿರುವ ಆಕರಗಳ ನೆರವಿನಿಂದ ಪುರಾಣ ಮತ್ತು ಜನಪದಿಯ ಹಿನ್ನಲೆಯಲ್ಲಿ ಈ ಎರಡು ದೇವರುಗಳ ಮೂಲ ಪರಂಪರೆಯನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಬೀರದೇವರ ಪರಂಪರೆ:

'ಬೀರ' ಎನ್ನುವ ದೇವರು ಅಂಕೋಲೆಯ ಪ್ರತಿ ಹಳ್ಳಿಯಲ್ಲೂ ಕಾಣಸಿಗುತ್ತದೆ. ಬಹುತೇಕ ಸಂದರ್ಭದಲ್ಲಿ ಈ ಹೆಸರಿನ ಜೊತೆ ಒಂದು ವಿಶೇಷಣವೂ ಸೇರಿರುತ್ತದೆ. ಇದರಿಂದ 'ಬೀರದೇವ'ನನ್ನು 'ಮಾಣಿಬೀರ', 'ಊಲಿಬೀರ', 'ಗುಂಡುಬೀರ', 'ಬೇಟೆಬೀರ' 'ಜೈನಬೀರ', 'ಕಾನಬೀರ', 'ಕುಂಟಬೀರ' 'ಚಂಡಕಿಬೀರ', 'ದೊಡ್ಡ ಚಂಡಕಿಬೀರ', 'ಸಣ್ಣಚಂಡಕಿಬೀರ', 'ಜಡೆಬೀರ', 'ಕತ್ತಿಬೀರ', 'ಕೋಡಿಬೀರ' ಇತ್ಯಾದಿ ರೂಪಗಳಲ್ಲಿಯೂ ಪೂಜಿಸಲಾಗುತ್ತದೆ. 'ಬೀರ' ಇದು 'ವೀರ' ಪದದ ತದ್ಭವ ರೂಪ. ಅಂಕೋಲೆಯ ಪರಿಸರದಲ್ಲಿ ದಂಡಿನ ಕಾಳಗದಲ್ಲಿ, ಕಳ್ಳಕಾಕರ ವಿರುದ್ಧ, ಗೋವುಗಳ ರಕ್ಷಣೆಗಾಗಿ, ಗ್ರಾಮಗಳ ರಕ್ಷಣೆಗಾಗಿ, ಸ್ತ್ರೀಯರ ಮಾನ ಕಾಪಾಡುವುದಕ್ಕಾಗಿ ಹೀಗೆ ವಿವಿಧ ಕಾರಣಗಳಿಗಾಗಿ ಹೋರಾಡಿ ಪ್ರಾಣತ್ಯಾಗಮಾಡಿದ ವೀರರ ಸ್ಮಾರಕಗಳು ಈ 'ಬೀರದೇವ'ರ ಗುತ್ತುಗಳು. 'ಮಾಣಿಬೀರ', 'ಊಲಿಬೀರ', 'ಗುಂಡುಬೀರ', 'ಬೇಟೆಬೀರ' 'ಜೈನಬೀರ', 'ಕಾನಬೀರ', 'ಕುಂಟಬೀರ' 'ಚಂಡಕಿಬೀರ', 'ದೊಡ್ಡ ಚಂಡಕಿಬೀರ', 'ಸಣ್ಣಚಂಡಕಿಬೀರ', 'ಜಡೆಬೀರ', 'ಕತ್ತಿಬೀರ', 'ಕೋಡಿಬೀರ' ಮೊದಲಾದವರು ಈ ಭಾಗದ ಸಾಂಸ್ಕೃತಿಕ ನಾಯಕರುಗಳು. ಈ ನಾಯಕರು ತಮ್ಮ ಅಗಾಧ ಶೌರ್ಯ–ಸಾಹಸಗಳಿಂದ, ಸಮಷ್ಟಿಯ ಹಿತಕ್ಕಾಗಿ ತಮ್ಮ ಬದುಕನ್ನೇ ಧಾರೆಯೆರೆದಂತ

ಸಾಧನೆಗಳಿಂದ ಜನಮಾನಸದಲ್ಲಿ ನೆಲೆನಿಂತು ದೈವತ್ವಕ್ಕೇರಿ ಪೂಜಿಸಲ್ಪಟ್ಟಿದ್ದಾರೆ. ಬೀರದೇವನ ಜೊತೆಗಿರುವ ವಿಶೇಷಣಗಳು ಆಯಾ ವೀರರ ಹೆಸರು, ಬಿರುದು, ವ್ಯಕ್ತಿತ್ವ, ರೂಪ, ವೀರನ ಪ್ರಾದೇಶಿಕತೆ, ವಂಶ ಅಥವಾ ಮನೆತನ ಇತ್ಯಾದಿಗಳನ್ನು ತಿಳಿಸುತ್ತವೆ. ಭಾವಿಕೇರಿ ಹಾಗೂ ಮೊಗಟಾ ಗ್ರಾಮದಲ್ಲಿರುವ ವೀರಗಲ್ಲುಗಳು, 'ಸೋದೆ ಶೂರ'ನ ವಿವರಣೆ ನೀಡುವ ಜನಪದ ಕಥನ ಕಾವ್ಯಗಳು ಈ ಅಭಿಪ್ರಾಯಕ್ಕೆ ಬಲ ಒದಗಿಸುತ್ತವೆ. ಕೆಲವು ಕಡೆಗಳಲ್ಲಿ ವಿಶೇಷಣಗಳು ಗೌಣವಾಗಿ ಅಥವಾ ಕ್ಷೀಣವಾಗಿ ಕೇವಲ 'ಬೀರದೇವ' ಎನ್ನುವುದಷ್ಟೇ ಉಳಿದಿದೆ.

ಬೀರ ದೇವರುಗಳ ಗುತ್ತುಗಳು ಅಥವಾ ಪೂಜಾ ಸ್ಥಾನಗಳು ಅಂಕೋಲೆಯ ಪರಿಸರದಲ್ಲಿ ವ್ಯಾಪಕವಾಗಿ ಕಂಡುಬಂದರೂ, ಒಬ್ಬ ವೀರನನ್ನು ದೇವರಾಗಿ ಆರಾಧಿಸುವ ಪರಂಪರೆ ಎಂದಿನಿಂದ? ಹೇಗೆ? ಆರಂಭವಾಯಿತೆನ್ನುವುದು ತಿಳಿಯಲು ಸ್ಥಳೀಯವಾಗಿ ಸಿಗುವ ಆಧಾರಗಳು ವಿರಳ. ಶಾಸನದಂತ 'ದಾಖಲು ಸಾಹಿತ್ಯ'ದಲ್ಲಿ ಉಲ್ಲೇಖವಾಗಿರುವ "ಬರದೋಂ ಬೀರಯ್ಯ"(ಕ್ರಿ.ಶ. 930), "ಯೀ ಬೀರಲಿಂಗಕ್ಕೆ ಹೊಲಬಾವಿ ಕಳೆಕೊಟ್ಟರು" (ಕ್ರಿ.ಶ. 1061) ಇಂಥ ಸಾಲುಗಳು ಬೀರ ದೇವರ ಪ್ರಾಚೀನತೆಯನ್ನು ತಿಳಿಯಲು ಸಹಕಾರಿಯಾಗುತ್ತವೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲೂ ಸಾಂದರ್ಭಿಕವಾಗಿ 'ಬೀರಪ್ಪ', 'ಬೀರದೇವ'ರ ಕುರಿತಾಗಿ ತಿಳಿಸುತ್ತವೆ. ಶಿವ ಶರಣರ ವಚನಗಳಲ್ಲಿಯೂ 'ಮಾರಯ್ಯ', 'ಬೀರಯ್ಯ', 'ಕೇತಯ್ಯ' ಎಂಬ ದೈವಗಳನ್ನು ದಾಖಲಿಸಿದ್ದಾರೆ. ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಅವಲೋಕಿಸಿದಾಗ ಹಾಲುಮತ ಕಾವ್ಯ ಪುರಾಣಗಳು ಬೀರದೇವನ ಉಗಮದ ವಿಷಯವನ್ನು ತಿಳಿಸುತ್ತವೆ. ಇದರ ಪ್ರಕಾರ ಬರಮದೇವ(ಬ್ರಹ್ಮದೇವ) ಮತ್ತು ಸುರಾವಿತಿ(ಸರಸ್ವತಿ) ಬೀರದೇವನ ತಂದೆ–ತಾಯಿಗಳು. ಕಾಳಿನಾರಾಯಣ ಎನ್ನುವವ ಈತನ ಸೋದರಮಾವ. ಅಕ್ಕ ಮಾಯವ್ವಳು ಬೀರದೇವನನ್ನು ಸಾಕಿ ಬೆಳೆಸುತ್ತಾಳೆ. ಅಪ್ರತಿಮ ಪರಾಕ್ರಮಶಾಲಿಯಾದ ಬೀರದೇವನು ದೈತ್ಯ ಕೋಣಾಸುರನ ಸಂಹಾರ ಮಾಡುತ್ತಾನೆ. ಹಾವನ್ನು ಮರ್ಧಿಸಿ ಅದರ ಹೆಡೆ ಏರುತ್ತಾನೆ. ಸೋದರಮಾವ ಕಾಳಿನಾರಾಯಣನ ಅನೇಕ ಕುತಂತ್ರಗಳನ್ನು ಹಿಮ್ಮೆಟ್ಟಿಸುತ್ತಾನೆ. ಇತ್ಯಾದಿಯಾಗಿ ಹಾಲುಮತ ಪುರಾಣಗಳು ವಿವರಿಸುತ್ತವೆ.(ಈ ಕಥೆಗಳು ಭಾಗವತದ ಕೃಷ್ಣ–ಕಂಸರ ಸಂಘರ್ಷದ ಜನಪದಿಯ ರೂಪವಾಗಿ ಕಾಣುತ್ತದೆ.) ಇಂಥ ಪರಾಕ್ರಮಶಾಲಿಯಾದ 'ಬೀರ'ನನ್ನು ಜನಪದರು ಆರಾಧನೆ ಮಾಡುತ್ತ ಬಂದರು. ಈ ಕಾರಣವಾಗಿ ದೈವತ್ವಕ್ಕೇರಿ ಜನಮಾನಸದಲ್ಲಿ ಪ್ರಸಿದ್ಧನಾಗಿ ಆರಾಧನೆಗೊಳ್ಳುತ್ತಿದ್ದಾನೆ. ಹೀಗಾಗಿ ನಾಡಿನಾದ್ಯಂತ ಈತನ ಹೆಸರಿನಲ್ಲಿ ಗುಡಿ–ಗುಂಡಾರಗಳು, ದೇವಾಲಯಗಳು ಸ್ಥಾಪನೆಗೊಂಡಿವೆ. ಕೋಣಗನೂರು, ಮುರಗುಂಡಿ, ಅಲಕನೂರು, ರಾಯಭಾಗ, ಹಾರೂಗೇರಿ, ತಾಳಿಕಟ್ಟೆ ಮೊದಲಾದವು ಈತನ ಪ್ರಸಿದ್ಧ ನೆಲೆಯಾಗಿವೆ. ಕರುಬರ ಪ್ರತಿಯೊಂದು ಮನೆಯಲ್ಲಿ ವ್ಯಕ್ತಿಗಳಿಗೆ ಬೀರಪ್ಪ, ಬೀರಯ್ಯ, ಬೀರೇಶ, ಬೀರಲಿಂಗ, ಬೀರಮ್ಮ ಎಂಬ ಹೆಸರಿಡುವ ಪದ್ಧತಿ ಈಗಲೂ ಕಾಣಬಹುದು. ಕುರುಬರು ಈತನನ್ನು ನಾನಾ ರೀತಿಯಾಗಿ ಆರಾಧನೆ ಮಾಡುತ್ತಾರೆ.

ಅಂಕೋಲೆಯ ಸಂದರ್ಭದಲ್ಲಿ ಈ ಕುರುಬರನ್ನು ನಾವು ಕುರುಬರು ಎನ್ನುವುದಕ್ಕಿಂತ ಪಶುಪಾಲಕ ವೃತ್ತಿಯ ಕೃಷಿಕರಾಗಿ ಗುರುತಿಸುವುದು ಹೆಚ್ಚು ಸೂಕ್ತ. ಇಂಥ ಒಂದು ಸಮುದಾಯ ಯಾವುದೋ ಒಂದು ಹಂತದಲ್ಲಿ ಅಂಕೋಲೆ ಪರಿಸರಕ್ಕೆ ಬಂದು ನೆಲೆಸಿರಬೇಕು. ಇಲ್ಲಿನ ಪ್ರಕೃತಿಯ ಮಿತಿಯಲ್ಲಿ ತಮ್ಮ ಕಸುಬನ್ನು ಹೊಂದಿಸಿಕೊಂಡು ಶಾಶ್ವತವಾಗಿ ಇಲ್ಲಿನ ಮಣ್ಣಿನೊಡನೆ ತಮ್ಮ ಸಂಬಂಧವನ್ನು ಗಟ್ಟಿಗೊಳಿಸಿರಬೇಕು. ಜೊತೆಯಲ್ಲಿ ತಾವು ಆರಾಧಿಸುವ ದೇವರನ್ನ, ತಮ್ಮ ಸಂಪ್ರದಾಯ–ಪರಂಪರೆಗಳನ್ನು ಈ ನೆಲದ ಗುಣವಾಗಿಸಿರಬೇಕು. ನಂತರದ ತಲೆಮಾರುಗಳು ಈ ಪರಂಪರೆಗಳನ್ನು ಮುಂದುವರೆಸಿದಾಗ ಅದು ಮೂಲ ಸ್ವರೂಪದಿಂದ ಸ್ವಲ್ಪ ಸ್ವಲ್ಪವೇ ಬದಲಾಗುತ್ತ ಇಲ್ಲಿನ ಪ್ರಾದೇಶಿಕ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡು ವ್ಯಾಪಕವಾಗಿ ರೂಢಿಯಾಗಿರುವಂತೆ ತೋರುತ್ತದೆ. (ಇಲ್ಲಿನ ಬಂಡಿಹಬ್ಬದ ಆಚರಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತ ಸಾಗಿದರೆ ಈ ಈಡಿಯ ಕರ್ನಾಟಕದಲ್ಲಿ ಈ ಸಂಸ್ಕೃತಿ ವ್ಯಾಪಿಸಿರುವುದು ಕಂಡುಬರುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಕರಗದ ರೂಪದಲ್ಲಿದ್ದರೆ, ಉತ್ತರ ಕರ್ನಾಟಕದಲ್ಲಿ ಅದು ಸಿಡಿ ಆಡುವ ರೂಪದಲ್ಲಿದೆ. ಇವೆರಡರ ಮಿಶ್ರ ರೂಪದಲ್ಲಿ ಅದು ಬಂಡಿಹಬ್ಬವೆಂದು ನಮ್ಮಲ್ಲಿ ಆಚರಿಸಲ್ಪಡುತ್ತಿದೆ.) ಅಲ್ಲದೇ ಅಂಕೋಲಾ–ಕುಮಟಾ ಭಾಗದಲ್ಲಿ ಆಗಿಹೋದ ವೀರರ

ಮೂರ್ತಿವಮಾಡಿ ಪೂಜಿಸಿರುವುದು ಸರ್ವೇ ಸಾಮಾನ್ಯವಾಗಿದೆ. ಈ ರೀತಿ ಅಂಕೋಲೆಯ ಸಾಂಸ್ಕೃತಿಕ ಚರಿತ್ರೆಯ ಆರಂಭಿಕ ದಿನಗಳಿಂದಲೇ ಬೀರ(ವೀರ)ರನ್ನು ದೈವತ್ವಕ್ಕೇರಿಸಿ ಆರಾಧಿಸುವ ಪರಂಪರೆಯನ್ನು ಗುರುತಿಸಬಹುದಾಗಿದೆ.

ಬೊಮ್ಮಯ್ಯ ದೇವರ ಪರಂಪರೆ:

ಅಂಕೋಲೆಯಲ್ಲಿ ಬೀರದೇವರಷ್ಟೇ ಸಂಖ್ಯೆಯಲ್ಲಿ ಭಕ್ತರನ್ನು ಹೊಂದಿರುವ ಇನ್ನೊಂದು ದೇವರೆಂದರೆ 'ಬೊಮ್ಮಯ್ಯ' ದೇವರು. ಎಲ್ಲಿ ಬೀರ ದೇವರ ಗುತ್ತು ಇದೆಯೋ ಬಹುತೇಕ ಅಲ್ಲೆಲ್ಲ ಬೊಮ್ಮಯ್ಯ ದೇವನಿದ್ದಾನೆ. ಆದರೆ ಬೀರ ದೇವರಿಗಿಂತ ಭಿನ್ನವಾಗಿ ಹಾಗೂ ವಿಶಿಷ್ಟವಾಗಿ ಗುರುತಿಸಿಕೊಂಡಿದ್ದಾನೆ. ಬೀರದೇವರಂತೆ ಬೊಮ್ಮಯ್ಯ ದೇವರು ಬಿಲ್ಲು ಬಾಣಗಳನ್ನಾಗಲಿ, ಕತ್ತಿಯನ್ನಾಗಲಿ ಹಿಡಿದುಕೊಂಡು ಕುದುರೆ ಅಥವಾ ಆನೆಯ ಮೇಲೆ ಸವಾರಿ ಹೊರಟಂತ್ತಿದ್ದರೂ ಬೀರದೇವರಂತೆ ವೀರರ ನೆನಕೆಯಾಗಿ ಕಾಣದೆ ಪ್ರತ್ಯೇಕವಾಗಿ ಗುರುತಿಸಿಕೊಳ್ಳುತ್ತದೆ. ಕೆಲವು ಪ್ರಾಜ್ಞರು ಬೊಮ್ಮಯ್ಯನ ಕುರಿತು "ಭೂಮಿಯ ಅಯ್ಯ ಬೊಮ್ಮಯ್ಯ, ಎತ್ತರದಲ್ಲಿ ಕುಳಿತು ಹೊಲ–ಗದ್ದೆಗಳನ್ನು ಕಾಯುವ ದೇವರು" ಇತ್ಯಾದಿಯಾಗಿ ಅಭಿಪ್ರಾಯ ಪಡುತ್ತಾರೆ. ಬೊಮ್ಮಯ್ಯ ಹೆಸರನ್ನು ಸರಿಯಾಗಿ ಒಡೆದು ಬರೆದಾಗ ಬೊಮ್ಮ + ಅಯ್ಯ ಎಂದಾದದ್ದು ಕಾಣುತ್ತೇವೆ. ಬೊಮ್ಮ ನಾಮ ಪದದ ಮುಂದೆ ಅಯ್ಯ ಪ್ರತ್ಯೇಯ ಸೇರಿ ಬೊಮ್ಮಯ್ಯ ಆಗಿದೆ. ಬೊಮ್ಮ ಇದು ಬ್ರಹ್ಮ ಪದದ ತದ್ಭವ ರೂಪ. ಅಂತೆಯೇ ಬ್ರಹ್ಮಯ್ಯದ ತದ್ಭವ ರೂಪವೇ ಬೊಮ್ಮಯ್ಯ. ಬ್ರಹ್ಮ ಅಥವಾ ಬೊಮ್ಮದ ಜೊತೆಯಲ್ಲಿ ಅಯ್ಯ ಪ್ರತ್ಯಯ ಸೇರಿರುವುದು ಕಂಡಾಗ ಈತ ಸ್ಥಾನಮಾನದಲ್ಲಿ ಬೀರದೇವರಿಗಿಂತ ಮೇಲಿರುವುದನ್ನೂ ಗುರುತಿಸಬಹುದು.

ಈ ಬಗೆಯ ವಿಶ್ಲೇಷಣೆಯನ್ನು ಕೆಲ ಪ್ರಾಜ್ಞರು ಸಂಧಿ ಬಿಡಿಸಿ ದೇವರ ಮೂಲ ಹುಡುಕುವವರು ಎಂದು ಮೂದಲಿಸುವುದಿದೆ. ಮುಂದುವರೆದು ಹಿರೇಹೊನ್ನಪ್ಪ, ಮುರ್ಕುಂಡಿ ಇತ್ಯಾದಿ ದೇವರುಗಳ ಹೆಸರುಗಳನ್ನು ಯಾವ ರೀತಿ ಬಿಡಿಸುವಿರಿ ಎಂದೂ ಪ್ರಶ್ನೆಮಾಡುವುದಿದೆ. ಭಾಷೆ ಅನ್ನುವುದು ಒಂದು ಸಂಸ್ಕೃತಿಯ ಸಂವಹನ ರೂಪವಾಗಿರುವುದರಿಂದ ಸಾಂಸ್ಕೃತಿಕ ಪರಂಪರೆಯ ಅವಲೋಕನದ ಸಂದರ್ಭದಲ್ಲಿ ಭಾಷಾಶಾಸ್ತ್ರೀಯ ನೆಲೆಯಲ್ಲಿ ಅಭ್ಯಾಸಮಾಡುವುದು ಅಧ್ಯಯನದ ಒಂದು ಆಯಾಮವಾಗಿದೆ. ಹೇಗೆ ಬೊಮ್ಮನ ಎದುರು ಅಯ್ಯ ಸೇರಿದೆಯೋ ಹಾಗೆಯೇ ಅಯ್ಯ ಪದದ ಸಮಾನಾರ್ಥಕ ಅಪ್ಪ ಪದ ಹೊನ್ನನ ಎದುರು ಸೇರಿ ಹೊನ್ನಪ್ಪ ಆಗಿದೆ. ಇಬ್ಬರು ಹೊನ್ನಪ್ಪರಿದ್ದಾಗ ಅವರನ್ನು ಗುರುತಿಸುವ ಅನುಕೂಲಕ್ಕಾಗಿ ಹಿರಿಯ ಹೊನ್ನಪ್ಪ ಎಂದು ಕರೆದಿರುವುದು ನಂತರದ ದಿನಗಳಲ್ಲಿ ಆಡುಮಾತಿನ ಓಘದಲ್ಲಿ ಹಿರೇಹೊನ್ನಪ್ಪ ಆಗಿರುತ್ತದೆ.

ಅಂಕೋಲೆಯ ವೀರ ಪರಂಪರೆಯ ದೇವರುಗಳ ಜೊತೆ ಜೊತೆಯಲ್ಲಿಯೇ ಇದ್ದು ಆ ದೇವರುಗಳ ಅನುಯಾಯಿಗಳನ್ನೇ ತನ್ನ ಭಕ್ತರನ್ನಾಗಿ ಹೊಂದಿಯೂ ಪ್ರತ್ಯೇಕವಾಗಿ ಅಸ್ತಿತ್ವ ಪಡೆದಿರುವ ಬೊಮ್ಮಯ್ಯ ದೇವ ಯಾರು? ಅಂಕೋಲೆಯಲ್ಲಿ ಬೊಮ್ಮಯ್ಯ ದೇವಾರಾಧನೆ ಹೇಗೆ ಆರಂಭವಾಯಿತು? ಇತ್ಯಾದಿ ಪ್ರಶ್ನೆಗಳನ್ನು ಎದುರಲ್ಲಿಟ್ಟುಕೊಂಡು ಉತ್ತರ ಕಂಡುಕೊಳ್ಳಲು ಚರಿತ್ರೆಯ ಮೂಲಾಧಾರಗಳನ್ನು ಪರಿಶೀಲಿಸಿದಾಗ ಈ ಮುಂದಿನ ವಿಷಯಗಳು ತಿಳಿದುಬರುತ್ತವೆ.

ಕ್ರಿ.ಶ. 1184ರ ಹೊಯ್ಸಳ ಎರಡನೇ ವೀರಬಲ್ಲಾಳನ ಕಾಲಾವಧಿಯ ಒಂದು ಶಾಸನ ಪದ್ಯ ಈ ರೀತಿಯಾಗಿ ಪ್ರಾರಂಭವಾಗುತ್ತದೆ.

"ಕತ್ತುರಿಯ ಕಂಪು ಕೈಸುರಿಗೆ ಹಟ್ಟಿಗೆ ಸಣ್ಣಗಗರಂ
ಮುತ್ತಿನ ದಂಡೆ ತೋಳಮಣಿ ಬೈತಲೆ
ಬೆತ್ತದ ಸೆಂಡುಕೋಲು ತೂಲಜನ್ನುರಂ ಮೊರೆವ
ದಂತದ ಪಾವುಗೆ
ಬೃಂಗದೋಲೆ ಮೈಯಿ
ವೆತ್ತಿರೆ ರಾತ್ರಿಯೊಳು ಸುಳಿವ ಬ್ರಹ್ಮಯ್ಯನೀಗೆ ಯಮಗಿಷ್ಟ
ಸಿದ್ಧಿಯಂ" ಎಂದು ಪ್ರಾರ್ಥಿಸಿ ಅನಂತರ ಎರಡನೇ ವೀರಬಲ್ಲಾಳನವರೆ ಹೊಯ್ಸಳ ರಾಜಮನೆತನದ ವಿವರಗಳನ್ನೂ, ಹೆಗ್ಗಡೆ ಕೇತುಮಲ್ಲನು ಬ್ರಹ್ಮದೇವನಿಗೆ ಮಂಟಪ ಕಟ್ಟಿಸಿದ ವಿವರಗಳನ್ನು ತಿಳಿಸುತ್ತದೆ. ಈ ವಿವರಗಳಲ್ಲಿ ಮುಖ್ಯವಾಗಿ ಗುರುತಿಸಬೇಕಾದದ್ದು ಬ್ರಹ್ಮದೇವರ ಪ್ರತಿಮೆಯ ವರ್ಣನೆ. ಈ ಶಾಸನ ಪದ್ಯದಲ್ಲಿ ವರ್ಣಿಸಿರುವ ಬ್ರಹ್ಮ ಚತುರ್ಮುಖ ಬ್ರಹ್ಮನಲ್ಲ. ಕತ್ತುರಿಯ ಕಂಪಿನಿಂದ ಕೂಡಿದ ಬೈತಲೆ ಬಾಚಿಕೊಂಡಿದ್ದಾನೆ. ಕೈಸುರಿಗೆಯನ್ನು ಹಿಡಿದಿದ್ದಾನೆ. ಕಿವಿಯಲ್ಲಿ ಓಲೆಯನ್ನು

ಧರಿಸಿದ್ದಾನೆ. ಕೈಸುರಿಗೆಯನ್ನು ಇಡಲು ಹೊನ್ನಿನ ಹೊರೆಯನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದಾನೆ. ಈ ಹೊನ್ನಿನ ಹೊರೆಗೆ ಸಣ್ಣಗುಗ್ಗರಗಳನ್ನು ಕಟ್ಟಿಕೊಂಡಿದ್ದಾನೆ. ಕೊರಳಲ್ಲಿ ಮುತ್ತಿನ ದಂಡೆಯನ್ನು ತೋಳಿನಲ್ಲಿ ತೋಳ ಮಣಿಯನ್ನು ಹಾಕಿಕೊಂಡಿದ್ದಾನೆ. ಅವನು ಹಾಕಿಕೊಂಡಿರುವ ಜನಿವಾರ ಹೆಗಲಿನಿಂದ ತೂಗಾಡುತ್ತಿದೆ. ಮತ್ತೊಂದು ಕೈಲಿ ಬೆತ್ತದ ಸಂಡುಗೋಲು ಹಿಡಿದಿದ್ದಾನೆ. ಮೊರ ಮೊರ ಶಬ್ಧಮಾಡುವ ದಂತದ ಹಾವಿಗೆಯನ್ನು ಮೆಟ್ಟಿದ್ದಾನೆ ಮತ್ತು ರಾತ್ರಿಯ ವೇಳೆಯಲ್ಲಿ ಸಂಚರಿಸುತ್ತಾನೆ. ಈ ಎಲ್ಲ ಲಕ್ಷಣಗಳು ಚತುರ್ಮುಖ ಬ್ರಹ್ಮನಿಗೆ ಇಲ್ಲಾ. ಹಾಗಾದರೆ ಈ ಬ್ರಹ್ಮ ಯಾರು? ಎನ್ನುವ ಪ್ರಶ್ನೆ ಎದುರಾಗುತ್ತದೆ.

ಈ ನಾಡಿನ ಪ್ರಾಚೀನ ಮತಧರ್ಮಗಳಲ್ಲಿ ಪ್ರಮುಖವಾಗಿರುವವೆಂದರೆ ಬೌದ್ಧ, ಜೈನ, ಮತ್ತು ವೈದಿಕ ಧರ್ಮಗಳು. ವೈದಿಕ ಧರ್ಮದಲ್ಲಿ ಬ್ರಹ್ಮನಿಗೆ ಪೂಜೆ ಇಲ್ಲಾ. ಬೌದ್ಧಧರ್ಮದಲ್ಲಿ ತ್ರಿಮೂರ್ತಿಗಳ ಪೂಜೆಯೇ ಇಲ್ಲಾ. ಜೈನ ಧರ್ಮದಲ್ಲಿ ಬ್ರಹ್ಮನೆಂಬ ಒಬ್ಬ ಯಕ್ಷನ ಪೂಜೆಯಿದೆ. ಯಕ್ಷ, ಯಕ್ಷಿಯರು ಜೈನ ತೀರ್ಥಂಕರರ ಸಹಾಯಕರು. ಯಕ್ಷನಾದ ಬ್ರಹ್ಮನು ಜೈನರ ಹತ್ತನೇ ತೀರ್ಥಂಕರನಾದ ಶೀತಲನಾಥನ ಯಕ್ಷನೆಂದು ಪೂಜೆಗೊಳ್ಳುತ್ತಿದ್ದಾನೆ. ಜೈನಧರ್ಮದಲ್ಲಿ ಬ್ರಹ್ಮದೇವನು ಮೋಕ್ಷ ನೀಡುವ ದೇವರಾಗಿರದೇ ಕೇವಲ ಕ್ಷೇತ್ರಪಾಲನಷ್ಟೇ ಆಗಿದ್ದಾನೆ.

ಈ ಹಿನ್ನೆಲೆಯಲ್ಲಿ ಅಂಕೋಲೆ ಪರಿಸರದ ಬೊಮ್ಮಯ್ಯ ದೇವರುಗಳನ್ನು ಜೈನ ಯಕ್ಷ ಬ್ರಹ್ಮನೊಡನೆ ಸಮನ್ವಯಿಸಿ ನೋಡಿದಾಗ ಇವು ಕೂಡ ಜೈನ ಮೂಲದ್ದೇ ಎಂದು ಬಲವಾಗಿ ಸಮರ್ಥಿಸಬಹುದು. ಈ ಹಿಂದೆ ಉಲ್ಲೇಖಿಸಿದ ಶಾಸನ ಪದ್ಯ ವರ್ಣಿಸುವ ರೀತಿಯಲ್ಲೇ ಇರುವ ಕುದುರೆಯ ಮೇಲೆ ಕೆಲವು ಕಡೆಗಳಲ್ಲಿ ಆನೆಯ ಮೇಲೆ ಕುಳಿತಿರುವ ಇಲ್ಲಿನ ಬೊಮ್ಮಯ್ಯ ದೇವರುಗಳು ಇಂದಿಗೂ ಜನಪದರ ರಕ್ಷಕ ದೇವರಾಗಿ ಗುರುತಿಸಲ್ಪಡುತ್ತವೆ. ಅಂಕೋಲೆಯಲ್ಲಿ ಜೈನಧರ್ಮ ಸಾಕಷ್ಟು ಪ್ರಭಾವಶಾಲಿಯಾಗಿತ್ತೆಂದು ತಿಳಿಸುವ ಅನೇಕ ಸಾಕ್ಷ್ಯಾಧಾರಗಳು ನಮಗೆ ಲಭ್ಯವಿದೆ. ಈ ಪ್ರದೇಶವನ್ನಾಳಿದ ಶಿಶುಗಲಿ ಪಾಂಡ್ಯರು, ಚಂದಾವರದ ಕಾದಂಬರು, ಗೇರುಸೊಪ್ಪೆ ಮತ್ತು ಹಾಡುಹಳ್ಳಿಯ ಸಾಳುವರು ಜೈನಧರ್ಮಕ್ಕೆ ರಾಜಾಶ್ರಯ ಕೊಟ್ಟು ಪೋಷಿಸಿದ್ದಾರೆ. ಮಾರುಗದ್ದೆ, ಹಿರೇಗುತ್ತಿ ಮುಂತಾದೆಡೆಯಲ್ಲಿ ಜೈನ ಬಸದಿಗಳ ಅವಶೇಷಗಳು ದೊರೆತಿವೆ. ಜೈನಧರ್ಮೀಯರಿಗೆ ಬ್ರಹ್ಮ ಅಥವಾ ಬ್ರಹ್ಮಯ್ಯ ಮನೆದೇವರು ಕೂಡ ಆಗಿದ್ದಾನೆ. ಯಾವುದೋ ಒಂದು ಹಂತದಲ್ಲಿ ಜೈನ ಮತ ತನ್ನ ಪ್ರಾಬಲ್ಯವನ್ನು ಕಳಕೊಂಡು ಅವನತಿಯತ್ತ ಸಾಗಿದಾಗ, ಇಲ್ಲಿನ ಜೈನರು ಪ್ರಭಲವಾಗುತ್ತಿರುವ ಶೈವ, ವೈಷ್ಣವ ಮತಗಳನ್ನು ಅನುಸರಿಸಿರಬೇಕು. ಇವರ ಮನೆದೇವರಾದ ಬ್ರಹ್ಮಯ್ಯನು ವೈದಿಕ ಮತದಲ್ಲಿ ವಿಲೀನನಾಗಿರಬೇಕು. ನಂತರದ ಪೀಳಿಗೆಗಳು ಈ ಹೊಸ ಪರಂಪರೆಯನ್ನೇ ಬದಲಾದ ಸನ್ನಿವೇಷಗಳಲ್ಲಿ ಮಾರ್ಪಾಡುಗಳನ್ನು ಮಾಡುತ್ತ ಮುಂದುವರೆಸಿಕೊಂಡು ಬಂದುದರಿಂದ ಇಂದಿನ ಬೊಮ್ಮಯ್ಯ ದೇವನನ್ನು ಕಾಣಬಹುದಾಗಿದೆ.

ಬೀರ ಮತ್ತು ಬೊಮ್ಮಯ್ಯ ದೇವರ ಸಂಕೀರ್ಣಗಳು :

ಅಂಕೋಲಾ ತಾಲೂಕಿನ ಬಹುತೇಕ ಹಳ್ಳಿಗಳಲ್ಲಿ ಬೀರ ಮತ್ತು ಬೊಮ್ಮಯ್ಯ ದೇವರು ಒಟ್ಟೊಟ್ಟಿಗೆ ಇವೆ. ಕೊಗ್ರೆ, ಹೊನ್ನೇಬೈಲು, ಶಿರಗುಂಜಿ, ವಾಸರೆ–ಕುದ್ರಿಗೆ ಇತ್ಯಾದಿಗಳನ್ನು ಹೆಸರಿಸಬಹುದು. ಅಂತೆಯೇ ಎಲ್ಲಿ ಬೀರ ಮತ್ತು ಬೊಮ್ಮಯ್ಯ ಒಟ್ಟಿಗೆ ಇದ್ದಾರೋ ಅಲ್ಲಿ ಒಂದು ಹೆಣ್ಣುದೇವತೆಯೂ ಇರುವುದು ಕಂಡುಬರುತ್ತದೆ. ಬಹುತೇಕ ಹಳ್ಳಿಗಳಲ್ಲಿ ಹೆಣ್ಣು ದೇವತೆಯನ್ನು ಅಮ್ಮನವರು ಎಂದೇ ಕರೆಯುತ್ತಾರೆ. ಈ ವಿಗ್ರಹಗಳ ಅಸ್ಥಿತ್ವ ಹೇಗೆ ಪ್ರಾರಂಭವಾಯಿತೆನ್ನಲು ಮಾಹಿತಿಗಳಿಲ್ಲ.

ಅಂಕೋಲೆಯ ಜನಪದರು ಮೊದಲಿಗೆ ಆರಾಧಿಸಿದ್ದು ಬೀರದೇವರನ್ನೇ. ಜೈನಧರ್ಮ ರಾಜಾಶ್ರಯ ಪಡೆದು ಪ್ರಭಲವಾದಾಗ ಬ್ರಹ್ಮಯ್ಯ ದೇವರ ಆರಾಧನೆಯೂ ಈ ಪ್ರದೇಶದಲ್ಲಿ ಪ್ರಚಲಿತವಾಯಿತು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಅಂಕೋಲೆಯ ಜನಪದರು ಬೇರೆ ಬೇರೆ ಮತಗಳ ಅನುಯಾಯಿಗಳಾದರೂ ತಮ್ಮ ಪೂರ್ವಮತದ ದೇವರಗಳನ್ನು ತ್ಯಜಿಸಲಿಲ್ಲ. ಹೊಸ ಸಂಪ್ರದಾಯದೊಂದಿಗೆ ಹಳೆಯ ಪರಂಪರೆಯನ್ನೂ ಮುಂದುವರೆಸಿದರು. ನಿನ್ನೆಯ ಜೊತೆ ಇಂದಿನ ಸಂಪ್ರದಾಯಗಳನ್ನೂ ಒಟ್ಟಿಗೆ ಸೇರಿಸಿ ಹೊಸ ಪರಂಪರೆಗೆ

ನಾಂದಿಯಾದರು. ಇದರ ಪರಿಣಾಮವೇ ಇಂಥ ದೇವರುಗಳ ಸಂಕೀರ್ಣ ಹುಟ್ಟಿಕೊಂಡಿವೆ. ಇದರಲ್ಲಿ ಪೌರಾಣಿಕ ಹಿನ್ನಲೆಯ ಬೊಮ್ಮಯ್ಯ(ಬ್ರಹ್ಮಯ್ಯ) ಹಿರಿಯ ಸ್ಥಾನವನ್ನು ಅಲಂಕರಿಸಿದ್ದಾನೆ. ಅಲ್ಲದೇ ಹಾಲುಮತ ಪುರಾಣ ಕಾವ್ಯಗಳ ಪ್ರಕಾರ ಬೀರದೇವನ ತಂದೆ ಬರಮದೇವ (ಬ್ರಹ್ಮದೇವ) ಎನ್ನುವುದೂ ಕಾರಣವಿರಬಹುದು.

ಇನ್ನೂ ಬೀರ ಮತ್ತು ಬೊಮ್ಮಯ್ಯ ದೇವರ ಸಂಕೀರ್ಣದಲ್ಲಿ ಹೆಣ್ಣು ದೇವರ(ಅಮ್ಮನವರು) ಸಂಬಂಧದ ಕುರಿತು ಹುಡುಕಹೋದಾಗ ದೊರೆಯುವ ಮಾಹಿತಿಯೂ ಕುತೂಹಲಕಾರಿಯಾದದ್ದು. ಸಾಮಾನ್ಯವಾಗಿ ಅಮ್ಮನವರನ್ನು ಬೀರ ಮತ್ತು ಬೊಮ್ಮಯ್ಯ ದೇವರ ಸಹೋದರಿ ಎನ್ನುವುದು ಅಂಕೋಲೆಯ ಈಚಿನ ಜನಪದರ ನಂಬಿಕೆ. ಆದರೆ ಚಾರಿತ್ರಿಕ ಆಧಾರಗಳನ್ನು ವಿಶ್ಲೇಷಿಸಿದಾಗ ಬೇರೆಯದೇ ಕೆಲವು ಹೊಸ ಸಂಗತಿಗಳು ದೊರೆಯುತ್ತವೆ. ಜೈನಧರ್ಮದಲ್ಲಿ ಪ್ರತಿಯೊಬ್ಬ ತೀರ್ಥಂಕರನಿಗೂ ಸಹಾಯಕರಾಗಿ ಒಬ್ಬ ಯಕ್ಷ ಮತ್ತು ಯಕ್ಷಿ ಇರುತ್ತಾರೆ. ಜೈನರ 10ನೇ ತೀರ್ಥಂಕರನಾದ ಶೀತಲನಾಥನ ಯಕ್ಷ ಬ್ರಹ್ಮ ಮತ್ತು ಯಕ್ಷಿ ಮಾನವಿ. ಬ್ರಹ್ಮನ ವಿಗ್ರಹಗಳನ್ನು ಕುದುರೆಯ ಮೇಲೆ ಕುಳಿತು ಕತ್ತಿ ಹಿಡಿದಿರುವಂತೆ ನಿರ್ಮಿಸಲಾಗಿದೆ. ಕರ್ನಾಟಕದಲ್ಲಿರುವ ಕೆಲವು ಮೈಲಾರ ಲಿಂಗನ ವಿಗ್ರಹಗಳೂ ಇದೇ ಮಾದರಿಯದಾಗಿವೆ. ಹಾಲುಮತ ಪುರಾಣ ಕಾವ್ಯಗಳ ಪ್ರಕಾರ ಈ ಮೈಲಾರಲಿಂಗ ಮತ್ತು ಬೀರದೇವ ಇಬ್ಬರೂ ಒಬ್ಬರೇ. ಮತ್ತು ಮೈಲಾರನ ಹೆಂಡತಿಯ ಹೆಸರು ಮಾಳಮ್ಮ. ಇಲ್ಲಿ ಬ್ರಹ್ಮ ಯಕ್ಷನ ಜೊತೆಯಲ್ಲಿನ ಯಕ್ಷಿ ಮಾನವಿ ಹೆಸರು ಮಾಳವಿಯಾಗಿ ಮಾಳಮ್ಮನಾಗಿರಬಹುದು ಅಥವಾ ಮಾಳಮ್ಮ ಸಂಸ್ಕೃತೀಕರಣಗೊಂಡು ಮಾನವಿಯಾಗಿರಬಹುದು. ಇಲ್ಲಿ ಮತ್ತೊಂದು ಊಹೆಗೂ ಅವಕಾಶವಿದೆ. ಹಾಲುಮತ ಪುರಾಣ ಕಾವ್ಯಗಳೇ ತಿಳಿಸುವಂತೆ ಬೀರ ದೇವನ ಅಕ್ಕ ಮಾಯವ್ವ. ಈ ಮಾಯವ್ವಳೇ ಅಮ್ಮನಾಗಿ ಬೀರದೇವರ ಸಂಕೀರ್ಣದಲ್ಲಿ ನೆಲೆಸಿರಬಹುದು. ಅಮ್ಮ ಬೀರದೇವನ ಸಹೋದರಿ ಎನ್ನುವ ನಮ್ಮ ಜನಪದರ ನಂಬಿಕೆಯೂ ಇದಕ್ಕೆ ಪುಷ್ಟಿನೀಡುತ್ತದೆ. ಹೀಗೆ ಬೀರ ಬೊಮ್ಮಯ್ಯ ದೇವರ ಸಂಕೀರ್ಣದಲ್ಲಿ ಅಮ್ಮನೂ ಸಮಾನ ಸ್ಥಾನಮಾನಗಳನ್ನು ಪಡೆದಿದೆ. ಈ ಹಿನ್ನಲೆಯಲ್ಲಿ ಅಂಕೋಲೆಯ ಶಾಂತಾದುರ್ಗಾ ದೇವರ ಆವರಣವೂ ಬೀರ–ಬೊಮ್ಮಯ್ಯರ ಸಂಕೀರ್ಣವೇ ಆಗಿದೆ. ಶೈವ ಮತದ ಪ್ರಾಬಲ್ಯದ ದಿನಗಳಲ್ಲಿ ಪೂರ್ವ ಪರಂಪರೆಯ ಅಮ್ಮನನ್ನು ದುರ್ಗೆಯ ಅವತಾರವಾಗಿ, ಬೀರ ಮತ್ತು ಬೊಮ್ಮಯ್ಯ ದೇವರುಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ಆರಾಧಿಸಿದ್ದರಿಂದ ಇಂದು ಶಾಂತಾದುರ್ಗೆ ಭೂಮ್ತಾಯಿಯಾಗಿ ಪ್ರಖ್ಯಾತಳಾಗಿದ್ದಾಳೆ.

ಈವರೆಗಿನ ವಿವೇಚನೆಯಿಂದ ಕಂಡು ಬರುವ ಸಂಗತಿ ಎಂದೆರೆ, ಪ್ರಾಚೀನ ಕಾಲದಲ್ಲಿ ಅಂಕೋಲೆಯಲ್ಲಿ ನೆಲೆಯಿದ್ದ ಪಶುಪಾಲಕ ವೃತ್ತಿಯ ಜನಪದರು ತಮ್ಮ ಹಿರಿಯರನ್ನು ಅಥವಾ ವೀರ ನಾಯಕರನ್ನು ದೈವತ್ವಕ್ಕೇರಿಸಿ ಪೂಜಿಸಿದ ಪರಂಪರೆಯ ದೇವರು "ಬೀರದೇವರು". ಜೈನಧರ್ಮದಿಂದ ಪ್ರಾರಂಭವಾದ ಯಕ್ಷ ಬ್ರಹ್ಮನ ಪೂಜೆ ಪೌರಾಣಿಕ ಕಟ್ಟಲೆಗಳನ್ನು ಕಳಚಿಕೊಂಡ ಆರಾಧನೆಯ ಪರಂಪರೆಯ ದೇವರು "ಬೊಮ್ಮಯ್ಯ ದೇವ" ಈ ಎರಡೂ ದೈವಗಳ ಸಂಪ್ರದಾಯ, ನಂಬಿಕೆ, ಆಚರಣೆಗಳಲ್ಲಿ ಸಾಕಷ್ಟು ಸಾಮ್ಯತೆಗಳನ್ನು ಕಾಣಬಹುದಾಗಿದೆ. ಸಾವಿರಾರು ವರ್ಷಗಳ ಹಿಂದೆ ಆರಂಭವಾದ ಇಂಥ ಆರಾಧನೆಗಳು ಇಂದು ಕೂಡ ನಡೆಸಿಕೊಂಡು ಬರುತ್ತಿರುವುದು ಪರಂಪರೆಗಳು, ಸಂಪ್ರದಾಯಗಳು ಜನರ ಜೀವನ ವಿಧಾನದಲ್ಲಿ ಸಾಂಸ್ಕೃತಿಕ ಕಟ್ಟುಪಾಡುಗಳನ್ನು ಮೀರಿ ಮುಂದುವರೆಯುತ್ತಿರುವುದು ಕಂಡುಬರುತ್ತದೆ.


ಹೀಗೆ ಅಂಕೋಲೆಯ ಸಾಂಸ್ಕೃತಿಕ ಚರಿತ್ರೆಯು ಬಹು ವಿಸ್ತಾರವಾದದ್ದು. ಇಲ್ಲಿ ದಾಖಲಿಸಿದ್ದು ಕೆಲವೇ ಕೆಲವು ಸಂಗತಿಗಳನ್ನು. ಹಲವು ಗ್ರಂಥಗಳಿಗಾಗುವಷ್ಟು ವಿಷಯ ವಿಸ್ತಾರದ ಚರಿತ್ರೆಯು ಅಂಕೋಲೆಯ ಒಡಲಾಳದಲ್ಲಿದೆ.

(ಮುಂದಿನ ಪುಟದಲ್ಲಿ ಅಂಕೋಲೆಯ ಚರಿತ್ರೆಯ ಪ್ರಾಚೀನತೆ ಮತ್ತು ಭವ್ಯತೆಗೆ ಸಾಕ್ಷಿಯಾಗುವ ನಾಲ್ಕು ಚಿತ್ರಗಳಿವೆ.)




ಅಂಕೋಲೆಯಲ್ಲಿರುವ ಪ್ರಮುಖ ಪ್ರಾಗೈತಿಹಾಸಿಕ ಕುರುಹು
ಬೋಳೆಯಲ್ಲಿರುವ ಡಾಲ್ಮೆನ್

(ಕಾಲ ಕ್ರಿ.ಪೂ. ೫೦೦೦)




ಬೋಳೆಯಲ್ಲಿ ದೊರೆತ ಶಾತವಾಹನರ ಕಾಲದ ಶಿವಲಿಂಗ
ಹಾಗೂ ಇಟ್ಟಿಗೆಯ ದೇವಾಲಯದ ಕುರುಹು

(ಕಾಲ ಕ್ರಿ.ಶ. ೧ನೇ ಶತಮಾನ)



ಈವರೆಗೆ ದೇಶದಲ್ಲಿ ದೊರೆತ ಏಕೈಕ ಕ್ರಿಯಾಶಕ್ತಿಯ
ವಿಗ್ರಹ (ಸ್ಥಳ : ಅಂಕೋಲೆಯ ಕೋಟೆಯ ಆವರಣ)

(ಕಾಲ ಕ್ರಿ.ಶ. ೧೫ನೇ ಶತಮಾನ)



ಶಿರಗುಂಜಿಯಲ್ಲಿ ದೊರೆತ ಆದ್ಯ ಕದಂಬರ ಅವಧಿಯ
ದ್ವಿಬಾಹು ನರಸಿಂಹ ವಿಗ್ರಹ

(ಕಾಲ ಕ್ರಿ.ಶ. ೫ನೇ ಶತಮಾನ)

ಅಂಕೋಲೆಯ ಜಾನಪದ ಸಂಪತ್ತು

– ಡಾ|| ಎನ್. ಆರ್. ನಾಯಕ

ಸುಮಾರು ನಾಲ್ವತ್ತು ಐವತ್ತು ವರ್ಷಗಳ ಹಿಂದೆ ಅಂಕೋಲಾ ತಾಲೂಕು ಜಾನಪದ ಸಿರಿ ಸಂಪತ್ತಿನ ಆಗರವಾಗಿತ್ತು. ಇಲ್ಲಿಯ ಹಾಲಕ್ಕಿ ಒಕ್ಕಲಿಗರು, ಕೋಮಾರಪಂತರು, ನಾಮಧಾರಿಗಳು, ನಾಡವರು, ಆಗೇರರು, ಕುಂಬಾರರು, ಹವ್ಯಕರು, ಹರಕಂತರು, ಅಂಬೇರು ಈ ಮುಂತಾದ ಜಾತಿಯವರಲ್ಲಿ ಜಾನಪದ ಅವರ ಬದುಕಿನ ಒಂದಂಗವಾಗಿ ಬೆರತು, ಅವರ ಬದುಕಿಗೆ ಪ್ರೇರಕ ಶಕ್ತಿಯೂ ಆಗಿತ್ತು. ಆದರೆ ಈಗಿತ್ತಲಾಗಿ ಹಾಲಕ್ಕಿ ಒಕ್ಕಲಿಗರನ್ನು ಹೊರತುಪಡಿಸಿ ಉಳಿದ ಜಾತಿ, ವರ್ಗದವರು ಆಧುನಿಕತೆಯ ಹಾವಳಿಗೆ ತುತ್ತಾಗಿ ಜಾನಪದವನ್ನು ಅವಜ್ಞತೆಯಿಂದ ಕಂಡು, ಜಾನಪದದಿಂದ ದೂರ ಸರಿಯುತ್ತಿರುವುದು ಅತ್ಯಂತ ಖೇದಕರ ಸಂಗತಿಯಾಗಿದೆ. ಹಾಲಕ್ಕಿಗಳಲ್ಲಿ ಮಾತ್ರ, ಜಾನಪದ ಆಧುನಿಕತೆಗೆ ಸಂಪೂರ್ಣವಾಗಿ ಸೋಲದೆ, ಇನ್ನೂ ಗಟ್ಟಿಯಾಗಿಯೇ ಉಸಿರಾಡಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಜಾನಪದದಲ್ಲಿ ನಾಡಿನ ಸರ್ವೋಚ್ಚ ಪ್ರಶಸ್ತಿಯಾದ 'ಜಾನಪದ ಶ್ರೀ' ಪ್ರಶಸ್ತಿ ಪುರಸ್ಕೃತೆ ಸುಕ್ರಿ ಗೌಡ, ಅಂಕೋಲಾ ತಾಲೂಕಿನ ಹಾಲಕ್ಕಿ ಬುಡಕಟ್ಟು ಮಹಿಳೆಯೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಇಲ್ಲಿಯ 'ಜಾನಪದ'ವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವವರಲ್ಲಿ ಹಾಲಕ್ಕಿ ಒಕ್ಕಲಿಗರೇ ಪ್ರಮುಖರು. ಕೊಮಾರಪಂತರು, ನಾಮಧಾರಿಗಳು, ಆಗೇರರು, ನಾಡವರು, ಹವ್ಯಕರು ಈ ಮುಂತಾದವರಲ್ಲಿ ಬಯಲಾಟವನ್ನು ಬಿಟ್ಟರೆ, ಉಳಿದ ಜಾನಪದ ಪ್ರಕಾರಗಳ ಅಬ್ಬರ ಕಡಿಮೆ. ಆದರೂ ಜಾನಪದ ದಾಖಲೀಕರಣಕ್ಕೆ ಅಂಕೋಲೆಯ ನೆಲ ಇನ್ನೂ ಬರಡಾಗಿಲ್ಲ. ಸುತ್ತ ಕಣ್ಣಾಡಿಸಿದರೆ ಅಲ್ಲಲ್ಲಿ ಅದು ಸಮೃದ್ಧವಾಗಿಯೇ ಇದೆ. ಇಲ್ಲಿ ಜಾನಪದದ ಪ್ರಮುಖ ಶಾಖೆಗಳಾದ ಸಾಹಿತ್ಯ, ರೂಢಿ, ನಂಬಿಕೆ, ಸಂಪ್ರದಾಯ ಕಲೆ, ಕಸಬು, ಕ್ರೀಡೆ, ಮದ್ದು (ವೈದ್ಯ) ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಜಾನಪದ ತನ್ನ ಬೇರು ಬಿಟ್ಟಿದೆ.

ಜನಪದ ಸಾಹಿತ್ಯದಲ್ಲಿ ಪದ, ಹಾಡು, ಕಥೆ, ಒಗಟು, ಗಾದೆಗಳು ಪ್ರಮುಖವಾಗಿವೆ. ಅಂಕೋಲಾ ತಾಲೂಕಿನಲ್ಲಿ ಗಂಡಸರು ಹೇಳುವ ಗೀತಗಳನ್ನು 'ಪದ'ಗಳೆಂದು, ಹೆಂಗಸರು ಹಾಡುವ ಗೀತಗಳನ್ನು ಹಾಡುಗಳೆಂದು ಕರೆಯುವ ವಾಡಿಕೆ. ಹೀಗಾಗಿ ಇಲ್ಲಿ ಹೆಂಗಸು 'ಪದ' ಹೇಳಲಾರಳು, ಗಂಡಸು ಹಾಡು ಹಾಡಲಾರ. ಗಂಡಸರ ಪದಗಳಲ್ಲಿ ಗುಮಟೆಯ ಪದಗಳದ್ದೇ ಸಿಂಹಪಾಲು. ಸಾಮಾನ್ಯವಾಗಿ ಈ ಪದಗಳು ಹಾಲಕ್ಕಿ ಒಕ್ಕಲಿಗರು ಹಾಗೂ ಕೊಮಾರಪಂತರಲ್ಲಿ ಪ್ರಚಲಿತವಿದೆ. ಗುಮಟೆಯ ಪದವನ್ನು ಸುಗ್ಗಿಯ ಸಮಯದಲ್ಲಿ ಹಾಡುವುದು ಹೆಚ್ಚು. ಸಂಕ್ರಾಂತಿಯಿಂದ ಬಂಡಿಯ ಹಬ್ಬದವರೆಗೆ ಗುಮಟೆ ಪದದ ರಂಗು ರವುಸು ಹೆಚ್ಚು. ಗುಮಟೆ ಪದದಲ್ಲಿ ರಾಮಾಯಣ, ಮಹಾಭಾರತ, ಭಾಗವತ ಕಥೆಗಳ, ಐತಿಹ್ಯ ಹಾಗೂ ಸಾಮಾಜಿಕ ವಸ್ತುಗಳು ಒಳಗೊಂಡಿರುತ್ತವೆ. ಅನೇಕ ಗುಮಟೆ ಪದಗಳು ಸಾಹಿತ್ಯ ಸತ್ವದಿಂದ ಕೂಡಿದ್ದು ಜನಪದ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಇಂಥ ಗುಮಟೆಯ ಪದಗಳು ನೂರಾರು ಸಂಖ್ಯೆಯಲ್ಲಿ ಉಪಲಬ್ಧವಿದ್ದು ಅವುಗಳನ್ನು ಮ. ಗ. ಶೆಟ್ಟರ 'ಒಕ್ಕಲಿಗರ ಹಾಡು', ಡಾ|| ಎನ್. ಆರ್. ನಾಯಕರ 'ಹೇಳೇವೋ ಗುಪ್ಪೆ ಪದನಾವಾ', 'ಸುಗ್ಗಿ ಹಬ್ಬ', 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ' ಈ ಗ್ರಂಥಗಳಲ್ಲಿ ಡಾ|| ಎಲ್. ಆರ್. ಹೆಗಡೆಯವರ 'ಗುಮಟೆಯ ಪದಗಳು' ಎಂಬ ಗ್ರಂಥದಲ್ಲಿ ಓದಬಹುದಾಗಿದೆ.

ಗುಮಟೆ ಪಾಂಗ (ಚಿಕ್ಕ ಗುಮಟೆ)ನ್ನು ಬಾರಿಸುತ್ತ ಗಣೇಶ ಚವತಿ, ನವರಾತ್ರಿ ಶಾರದೋತ್ಸವ ಸಂದರ್ಭಗಳಲ್ಲಿ ಭಜನೆ ಪದಗಳನ್ನು ಹಾಡುತ್ತ ಭಕ್ತಿ ಭಾವುಕತೆಯಲ್ಲಿ ಮುಳುಗುವ ಪರಿಪಾಠವಿದೆ. ಭಜನೆ ಪದಗಳನ್ನು ಭಜನಾ ಸಪ್ತಾಹವನ್ನು ಆಚರಿಸಿ, ಡೋಲಕಿ ಮತ್ತು ತಾಳಗಳ ಗತ್ತಿಗೆ ಅನುಗುಣವಾಗಿ ಹಾಡಿ ಕುಣಿಯುತ್ತಾರೆ. ಇಂಥ ಅನೇಕ ಭಜನೆ ಪದಗಳು ಚಿಕ್ಕಚಿಕ್ಕ ಪುಸ್ತಿಕೆಗಳಾಗಿ ಪ್ರಚಲಿತವಿವೆ. ಭಕ್ತಿಪ್ರಚೋದಕ ಪದಗಳವು.

ಸುಗ್ಗಿಯ ಕೋಲುಪದಗಳು ಸುಗ್ಗಿ ಕುಣಿತದ ಕಾಲಕ್ಕೆ ಬಳಕೆಯಾಗುತ್ತವೆ. ಈ ಕೋಲು ಪದಗಳು ಹೆಚ್ಚಾಗಿ ದ್ವಿಪದಿಯಾಗಿರುವುದೇ ಹೆಚ್ಚು ಒಮ್ಮೊಮ್ಮೆ ಕತೆಗಳನ್ನು ದ್ವಿಪದಿಯಲ್ಲಿ ಹೆಣೆದು ಕೋಲು ಪದಗಳಿಗೆ ಅಳವಡಿಸಿರುವುದನ್ನೂ ನೋಡಬಹುದಾಗಿದೆ. ಸುಗ್ಗಿಯ ಕೋಲುಪದಗಳನ್ನು ಡಾ॥ ಎನ್. ಆರ್. ನಾಯಕರ 'ಸುಗ್ಗಿಯ ಪದಗಳು' ಹಾಗೂ 'ಸುಗ್ಗಿಯ ಹಬ್ಬ' ಎಂಬ ಗ್ರಂಥಗಳಲ್ಲಿ ಗಮನಿಸಬಹುದು. ಸುಗ್ಗಿಯ ಪದಗಳು, ಕಾಮ, ಅವನ ಹೆಂಡತಿ ರತಿರಂಬೆ, ನಂದನವನ, ಆವನದ ಗಿಳಿ, ನವಿಲು ಈ ಮುಂತಾದ ನವಿರಾದ, ಉತ್ಸಾಹದ ನೊರಕೀಳಿಸುವ ವಸ್ತುವಿನ್ಯಾಸವುಳ್ಳವು. ಬಡಗೇರಿ, ಬೆಳಂಬಾರ, ಹೊಸಗದ್ದೆ ಹಾಲಕ್ಕಿ ಸುಗ್ಗಿ ಕುಣಿತ, ಹಟ್ಟಿಕೇರಿ, ಹಾರವಾಡ, ಅಲಗೇರಿ ಕೋಮಾರಪಂತರ ಸುಗ್ಗಿ ಕುಣಿತ, ದೇಶವ್ಯಾಪಿ ಜನಪ್ರಿಯತೆಯನ್ನು ಗಳಿಸಿವೆ. ಬೆಳಂಬಾರದ ಸುಗ್ಗಿ ಕುಣಿತದ ಬೆಡಗಿನ ವೈಖರಿಗೆ ಮಾರು ಹೋದ ಬ್ರಿಟಿಷ್ ಅಧಿಕಾರಿಯೊಬ್ಬ ಅಂಕೋಲೆಯ ತಾಲೂಕು ಕಚೇರಿಯ ಮುಂದೆ ಪ್ರತಿವರ್ಷ ಹೋಳಿ ಹುಣ್ಣಿಮೆಯಂದು ಬೆಳಂಬಾರದ ಸುಗ್ಗಿಯ ಕೋಲಾಟವನ್ನು ಆಡಲೇಬೇಕೆಂದು ಆದೇಶಿಸಿ ಹೋಗಿದ್ದಾನೆ. ಅವನ ಆದೇಶ ಪಾಲನೆ ಇಂದಿನವರೆಗೂ ಅನೂಚಾನಾಗಿ ನಡೆದುಕೊಂಡೇ ಬಂದಿದೆ. ಬೆಳಂಬಾರ ಸುಗ್ಗಿ ಕುಣಿತ ಹಾಗೂ ಹಗಣವನ್ನು ನೋಡಲು ಅಂಕೋಲೆಯ ತಾಲೂಕು ಕಚೇರಿಯ ಮುಂದೆ ಸಾವಿರಾರು ಸಂಖ್ಯೆಯಲ್ಲಿ ಜನ ನೆರೆದು, ಅಂದಿನ ಉತ್ಸವಕ್ಕೆ ಒಂದು ಜಾತ್ರೆಯ ಸ್ವರೂಪವೇ ಬಂದು ಬಿಟ್ಟಿದೆ.

ಭಾರವಾದ ವಸ್ತುವನ್ನು ಬಹುಜನರು ಸೇರಿ ಹಗ್ಗಕಟ್ಟಿ ಎಳೆಯುವಾಗ, ಸೊನ್ನೆಯಿಂದ ಒತ್ತಿ ಸರಿಸಿ ಎತ್ತುವಾಗ ಬಹುಮಂದಿಯ ಶಕ್ತಿಯ ಕ್ರೋಢೀಕರಣಕ್ಕಾಗಿ, ನೆರೆದವರಲ್ಲಿ ಬಲ್ಲವನೊಬ್ಬ ಪದದ ಸೊಲ್ಲೊಂದನ್ನು ಎಳೆತದ ಲಯಕ್ಕನುಗುಣವಾಗಿ ಎತ್ತುಗಡೆ ಮಾಡಿದಾಗ ಉಳಿದವರೆಲ್ಲ 'ಯಾಲ್ಲ' ಎಂದು ತಮ್ಮ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಎಳೆಯುವರು ಇಂಥ 'ಯಾಲ್ಲಪದ'ಗಳೂ ಪ್ರಚಲಿತವಿವೆ.

ಅಂಬಿಗರು ದೋಣಿಗಳ ಮೂಲಕ ಪ್ರವಾಸಿಗರನ್ನು ನದಿ ತಾರಿ ದಾಟಿಸುವಾಗ ದೋಣಿಯ ಹುಟ್ಟು ಹಾಕುತ್ತಾ 'ಹೋಬೇಲೇಸೋ' ಎಂಬ ಪಲ್ಲವಿಯ ಜೊತೆಯಲ್ಲಿ 'ದೋಣಿ ಪದ'ಗಳನ್ನು ಹಾಕುತ್ತಾರೆ ಈಗ ದೋಣಿಪಯಣವೂ ಹೆಚ್ಚಿನ ಪ್ರಮಾಣದಲ್ಲಿ ಮಾಯವಾಗಿ, ದೋಣಿಯ ಪದಗಳೂ ಕೇಳಬರುತ್ತಿಲ್ಲ.

ಹೂಡುವಾಗ, ಗಾಡಿ ಹೊಡೆಯುವಾಗ, ಗಾಣ ಆಡುವಾಗ ಗಂಡಸರು ಪದ ಹಾಡುವುದನ್ನು ನಾನು ಚಿಕ್ಕವನಿರುವಾಗ ಕೇಳಿದ್ದಿದೆ. ಈಗ ಆ ಪದಗಳು ಕೇಳಿ ಬರುತ್ತಿಲ್ಲ.

ಗಾಂವಕರರು, ಹೆಗಡೆಯವರು ಮುಂತಾದ ಪ್ರತಿಷ್ಠಿತರ ಮದುವೆಯ ಸಂದರ್ಭದಲ್ಲಿ ವಧೂವರರನ್ನು 'ಮಂಚಾಲ'(ಪಲ್ಲಕ್ಕಿ)ದಲ್ಲಿ ಕುಳ್ಳಿಸಿಕೊಂಡು ಛತ್ರ ಚಾಮರಾದಿಗಳನ್ನು ಹಿಡಿದು ಹಗಲು ದಿವಟಿಗೆ ಹೊತ್ತಿಸಿಕೊಂಡು, ಹೋಗುವಾಗ ಅಂಬೇರು ತಮ್ಮ ಶ್ರಮ ಪರಿಹಾರಕ್ಕಾಗಿ 'ಮಂಚಾಲ ಪದ'ಗಳನ್ನು ಹಾಡುತ್ತಿದ್ದರು. ಮಂಚಾಲ ಹೋರುವ ಈ ಅಮಾನವೀಯ ಪದ್ಧತಿ ಇಂದು ಕಣ್ಮರೆಯಾಗಿ ಅದರ ಜೊತೆಗೇ ಈ ಪದಗಳೂ ಹೇಳಲು ಹೆಸರಿಲ್ಲದೇ ಹೋಗಿವೆ.

ಜೋಗಿಗಳೆಂಬ ವೃತ್ತಿನಾಯಕರು ಸುಗ್ಗಿ, ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಇಲ್ಲಿಯ ಬೇಸಾಯಗಾರರ ಮನೆಗಳಿಗೆ ಬಂದು, ತಂಬೂರಿಯನ್ನು ನುಡಿಸುತ್ತ ಅದರ ಶ್ರುತಿಗನುಗುಣವಾಗಿ ಪದಗಳನ್ನು ಹಾಡಿ ಕುಣಿದು, ಜನಮನ ರಂಜಿಸಿ 'ಪಡಿ' ವಸ್ತ್ರದಾನಾದಿಗಳನ್ನು ಪಡೆಯುವ ವಾಡಿಕೆಯಿತ್ತು ಈ ಜೋಗಿ ಜಂಗಮರ ವಿಷಯದಲ್ಲಿ ಜಾನಪದರಿಗೆ ಅತ್ಯಂತ ಗೌರವ. ಇವರ ವೇಷ-ಭೂಷಣ, ಹಾಡು, ಕುಣಿತಾದಿಗಳನ್ನು, ಅವರ ನಡುವಳಿಕೆಗಳನ್ನು ಅಭಿವ್ಯಕ್ತಿಸುವ ಅನೇಕ ಪದ ಹಾಗೂ ಹಾಡುಗಳು ದೊರಕುತ್ತವೆ.

ಇಂದು ಗುಮಟೆ ಪದ, ಕೋಲು ಪದ, ಭಜನೆ ಪದಗಳ ಹೊರತಾಗಿ ಬೇರೆಯ ಗಂಡಸರ ಪದಗಳು ಕೇಳಬರುತ್ತಿಲ್ಲ. ಗಂಡಸರ ಪದಗಳ ವಿಚಾರವಾಗಿ ವಿವರವಾದ ವಿವರಣೆಗಳನ್ನು ಡಾ। ಎನ್. ಆರ್. ನಾಯಕ 'ಕಾರವಾರ ಜಿಲ್ಲೆಯ ಜಾನಪದ ಗೀತೆಗಳು' ಎಂಬ ಸಂಶೋಧನಾತ್ಮಕ ಮಹಾಪ್ರಬಂಧದಲ್ಲಿ ನೋಡಬಹುದು.

ಹೆಂಗಸರ ಹಾಡುಗಳು ಮುಂದುವರಿದ ವರ್ಗದವರಲ್ಲಿ ಬಹುಮಟ್ಟಿಗೆ ಕಡಿಮೆಯಾಗಿವೆ. ಹಿಂದುಳಿದ ವರ್ಗದ ಹಾಲಕ್ಕಿ ಒಕ್ಕಲು, ಕೋಮಾರಪಂತರು, ನಾಮಧಾರಿ, ಆಗೇರರು ಮುಂತಾದವರಲ್ಲಿ ಉಳಿದುಕೊಂಡಿವೆ. ಇವುಗಳಲ್ಲಿ ಭತ್ತ

ಮೆರೆಯುವ, ತೊಟ್ಟಿಲು ತೂಗುವ, ಮಕ್ಕಳಾಡಿಸುವ ಕಳೆಗೆಯ್ಯುವ ಸಂದರ್ಭದ ಹಾಡುಗಳು, ಮದುವೆ, ದಿಂಡು ಮುಂತಾದ ಮಂಗಳಕಾರ್ಯಗಳ ಹಾಗೂ ಹಬ್ಬ ಹರಿದಿನ ಸಂದರ್ಭದ ಹಾಡುಗಳು ಮುಖ್ಯವಾಗಿವೆ.

ಸುಮಾರು ಮೂವತ್ತು–ನಾಲ್ವತ್ತು ವರ್ಷಗಳ ಹಿಂದೆ ಬೇಸಾಯಗಾರರ ಮನೆಯಂಗಳವು ಭತ್ತ ಮೆರೆಯುವ ಕಾಲಕ್ಕೆ ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಹಾಡಿನ ರಂಗಸ್ಥಳವಾಗಿ ಮಾರ್ಪಡುವುದನ್ನು ನಾನು ಗಮನಿಸಿದ್ದೇನೆ. ಆ ಸಂದರ್ಭದಲ್ಲಿ ಸಾಹಿತ್ಯಕ ಸತ್ವವುಳ್ಳ ಭಾವಗೀತಾತ್ಮಕವಾದ ಬಿಡಿ ತ್ರಿಪದಿಗಳನ್ನು ಒನಕೆಯ ಕುಟ್ಟುವಿಕೆಯ ಲಯಕ್ಕೆ ತಕ್ಕಂತೆ ರಾಗಲಯ ಬದ್ಧವಾಗಿ ಹಾಡಲಾಗುತ್ತಿತ್ತು. ಮಧ್ಯಾಹ್ನದಿಂದ ಸಂಜೆಯವರೆಗೆ ರೈತರ ಕೇರಿಯೇ ಹಾಡಿನ ಬಯಲು ಆಲಯವಾಗಿ ಪರಿವರ್ತನೆಗೊಂಡು, ರೈತಾಬಿ ಜನರು ಪಟ್ಟ ಪಾಡವೆಲ್ಲವೂ ಹಾಡಾಗಿ ಹರಿದು, ಅವರ ಸಾಂಸ್ಕೃತಿಕ ಬದುಕಿನ ವರ್ಣ ಚಿತ್ತಾರವನ್ನು ಕಣ್ಮುಂದೆ ಹಿಡಿಯುತ್ತಿತ್ತು. ಅಂಕೋಲಾ ತಾಲೂಕಿನ ನಾಡವರು, ಹಾಲಕ್ಕಿ ಒಕ್ಕಲು, ನಾಮಧಾರಿಗಳಲ್ಲಿ ಬಳಕೆಯಲ್ಲಿರುವ ಭತ್ತ ಮೆರೆಯುವ ಹಾಡುಗಳನ್ನು ಡಾ॥ ಎನ್. ಆರ್. ನಾಯಕರು ತಮ್ಮ 'ಪಡುಕೋಗಿಲೆ' 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ' ಹಾಗೂ 'ಜೇಂಗೊಡ' ಗ್ರಂಥಗಳಲ್ಲಿ ಪ್ರಕಟಿಸಿದ್ದಾರೆ. ವಿ. ವಿಂ. ತೊರ್ಕೆಯವರ 'ಹಳ್ಳಿಯ ಹಾಡುಗಳು' ಎಂಬ ಕಿರುಹೊತ್ತಿಗೆಯಲ್ಲಿ ನಾಡವರ ಹಾಡುಗಳಿವೆ. ಆಗೇರರು, ಕೋಮಾರಪಂತರು, ಹರಿಕಂತರು ಈ ಮುಂತಾದವರ ಹಾಡುಗಳು ಡಾ। ಎನ್. ಆರ್. ನಾಯಕರ ಅಪ್ರಕಟಿತ ಕಡತದಲ್ಲಿವೆ.

ಮದುವೆ, ದಿಂಡು, ಬಸುರಿ, ಬಾಳಂತಿ ಈ ಮುಂತಾದ ಶಾಸ್ತ್ರಗಳಿಗೆ ಸಂಬಂಧಿಸಿದ ಹಾಡುಗಳು ಈ ತಾಲೂಕಿನಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿವೆ. ಇಂದು ಈ ಹಾಡುಗಳನ್ನು ಹಾಡುವವರ ಸಂಖ್ಯೆ ಮಾತ್ರ ಕರಗುತ್ತಲಿದೆ. ಈ ಹಾಡುಗಳು ಆಯಾ ಶಾಸ್ತ್ರದ ವಿಧಿ–ವಿಧಾನಗಳನ್ನು ಸೊಗಸಾಗಿ ನಿರೂಪಿಸುತ್ತವೆ. ಮದುವೆಯ ಹಾಡುಗಳ ಬೃಹತ್ ಸಂಕಲನವೊಂದನ್ನು ಡಾ॥ ಎನ್. ಆರ್. ನಾಯಕರು 'ಕೂಸಾಯ್ತು ನಮ್ಮಾ ಕೋಮಾರಾಗೆ' ಎಂಬ ತಲೆ ಬರಹದಡಿಯಲ್ಲಿ ಪ್ರಕಟಿಸಿದ್ದಾರೆ. ಆ ಗ್ರಂಥದಲ್ಲಿ ಅಂಕೋಲೆಯ ಹಾಲಕ್ಕಿ ಒಕ್ಕಲು, ನಾಮಧಾರಿ ಹಾಗೂ ನಾಡವರ ಮದುವೆಯ ಹಾಡುಗಳಿವೆ. ಡಾ। ನಾಯಕರ ಹತ್ತಿರ ಅಂಕೋಲಾ ತಾಲೂಕಿನ ಕೋಮಾರಪಂತರು, ಆಗೇರು, ಮುಂತಾದವರ ಮದುವೆಯ ಹಾಡುಗಳು, ದಿಂಡು, ಬಸುರಿ, ಬಾಳಂತಿ, ನಾಮಕರಣ, ಮನೆಯರವಣ ಈ ಶಾಸ್ತ್ರಗಳಿಗೆ ಸಂಬಂಧಿಸಿದ ಹಾಡುಗಳಿದ್ದರೂ ಅವಿನ್ನೂ ಪುಸ್ತಕ ರೂಪದಲ್ಲಿ ಪ್ರಕಟವಾಗಿಲ್ಲ.

ಶಾಸ್ತ್ರದ ಹಾಡುಗಳಲ್ಲಿ ಮದುವೆಯ ಹಾಡುಗಳು ಸಾವಿರಾರು ಸಂಖ್ಯೆಯಲ್ಲಿದ್ದು ಆ ಹಾಡುಗಳು ಮದುವೆಯ ಶಾಸ್ತ್ರವಿಧಿಯನ್ನು ನಿರೂಪಿಸುವದರ ಜೊತೆಗೆ ರಸವತ್ಕಾವ್ಯಗಳಂತೆ ಮನ ಸೆಳೆಯುತ್ತವೆ.

ಹೊಸತು, ಹೊಸಕ್ಕಿ, ದೀಪಾವಳಿ, ತುಳಸಿ, ಸುಗ್ಗಿ, ಬಂಡಿ ಹಬ್ಬ ಹಾಗೂ ಹರಿದಿನಗಳಿಗೆ ಸಂಬಂಧಿಸಿದ ಹಾಡುಗಳು, ಅಮ್ಮ ಬೊಮ್ಮಯ್ಯ, ಬೀರ, ಜಟಗ, ಮಾಸ್ತಿ ದೇವತೆಗಳಿಗೆ ಸಂಬಂಧಿಸಿದ ಹಾಡುಗಳು ದೊರೆಯುತ್ತಿದ್ದು ಅವೆಲ್ಲ ಡಾ॥ ಎನ್. ಆರ್. ನಾಯಕರ 'ತುಳಸಿ ತಿಮ್ಮಪ್ಪರಾಯ' 'ಬಂದಾನೆ ಬಲಿಯಂದರಾಯಾ' 'ಉತ್ತರ ಕನ್ನಡ ಜಿಲ್ಲೆಯ ಗ್ರಾಮದೇವತೆಗಳ ಹಾಡುಗಳು' ಹಾಗೂ 'ಕಾರವಾರ ಜಿಲ್ಲೆಯ ಜನಪದ ಗೀತೆಗಳು' ಈ ಮುಂತಾದ ಗ್ರಂಥಗಳಲ್ಲಿ ಬೆಳಕು ಕಂಡಿವೆ. ಭಕ್ತಿ ಪ್ರಧಾನವಾದ ಈ ಹಾಡುಗಳು ಇಲ್ಲಿಯ ಗ್ರಾಮೀಣ ಅಕುಟಿಲ ಭಕ್ತಿಯ ಹೊಂಬೆಳಕನ್ನು ಹೊರಚೆಲ್ಲುವಲ್ಲಿ ಸಫಲವಾಗಿವೆ.

ತೊಟ್ಟಿಲು ತೂಗುವಾಗ, ಮಕ್ಕಳನ್ನು ತೊಡೆಯ ಮೇಲೆ ಆನೆಯಾಡಿಸಿ ಮಲಗಿಸುವಾಗ, ಹೇಳುವ 'ಲಾಲಿ'ಯ ಹಾಡುಗಳೂ ಬೇಕಷ್ಟಿದ್ದು ಆ ಹಾಡುಗಳು ಡಾ॥ ಎನ್. ಆರ್. ನಾಯಕರ 'ಪಡುಕೋಗಿಲೆ' 'ಜೇಂಗೊಡ' ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ' ಹಾಗೂ ಬೇರೆ ಬೇರೆ ಲೇಖನಗಳಲ್ಲಿ ಪ್ರಕಟಗೊಂಡಿವೆ.

ಲಾಲಿಯ ಹೊರತಾಗಿ ಹಲವಾರು ಶಿಶು ಗೀತೆಗಳೂ ಈ ತಾಲೂಕಿನಲ್ಲಿ ವಿಪುಲ ಸಂಖ್ಯೆಯಲ್ಲಿ ದೊರೆಯುತ್ತಿದ್ದು ಇವುಗಳು ಇನ್ನೂ ಪುಸ್ತಕ ರೂಪದಲ್ಲಿ ಹೊರಬಂದಿಲ್ಲ. ಡಾ। ಎನ್. ಆರ್. ನಾಯಕರ ಕಾರವಾರ ಜಿಲ್ಲೆಯ ಜನಪದ ಗೀತೆಗಳು ಎಂಬ ಸಂಶೋಧನಾ ಗ್ರಂಥದಲ್ಲಿ ಈ ಶಿಶುಗೀತೆಗಳ ಸಮಾಲೋಚನೆ ಮಾಡಲಾಗಿದೆ. ಪ್ರಕಟಣೆಯ ದಾರಿ ಕಾಯುತ್ತಿರುವ ಶಿಶು ಗೀತೆಗಳು ಹಲವಾರು ನನ್ನ ಬಳಿಯಿವೆ.

ಈ ಭಾಗದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಜನಪದ ಕಥೆಗಳು ಸಿಗುತ್ತಿದ್ದು ಅವು ಪದ್ಯ ಹಾಗೂ ಗದ್ಯಾತ್ಮಕವಾಗಿವೆ. ಕೆಲವು ಪದ್ಯ ಕಥೆಗಳನ್ನು

ಡಾ॥ ಎನ್. ಆರ್. ನಾಯಕರು, 'ಪಾಠಾಂತರ ಕಥನ ಕವನಗಳು' 'ಕಪಟಿಗಳ ಕಥೆ' 'ಕೋಮಾರಪಂತರ ಕಥನ ಕವನಗಳು' 'ಸುಗ್ಗಿ ಹಬ್ಬ' 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ' 'ಹೇಳ್ತವೊ ಗುಮ್ಟೆಪದನಾವಾ' ಈ ಗ್ರಂಥಗಳಲ್ಲಿ ಪ್ರಕಟಿಸಿದ್ದಾರೆ. ಕಾರವಾರ ಜಿಲ್ಲೆಯ ಜನಪದ ಗೀತೆಗಳು ಎಂಬ ಮಹಾಪ್ರಬಂಧದಲ್ಲಿ ಈ ಕಥೆಗಳನ್ನು ತುಲನಾತ್ಮಕವಾಗಿ ವ್ಯಾಖ್ಯಾನಿಸಿದ್ದಾರೆ. ಡಾ॥ ಎಲ್. ಆರ್. ಹೆಗಡೆಯವರು 'ಜನಪದ ಮಹಾಭಾರತ ಕತೆಗಳು' ಎಂಬ ಗ್ರಂಥದಲ್ಲಿ ಅಂಕೋಲಾ ತಾಲೂಕಿನ ಹಾಲಕ್ಕಿ ಒಕ್ಕಲಿಗರ ಗುಮಟೆ ಪದದಲ್ಲಿ ಪ್ರಚಲಿತವಿರುವ, ಮಹಾಭಾರತ ಕಥನ–ಕವನಗಳ ಗದ್ಯಾನುವಾದವನ್ನು ನೋಡಬಹುದಾಗಿದೆ. ಸಾಮಾನ್ಯವಾಗಿ ಹೆಚ್ಚಿನ ಕಥನ ಕವನಗಳು ಸ್ತ್ರೀ ಕೇಂದ್ರಿತವಾಗಿದ್ದು, ದುರಂತ ವಿನ್ಯಾಸವುಳ್ಳವುಗಳಾಗಿವೆ. ಹಾಡುಗಳು ಜೀ–ಜೀ, ತಾನಾ, ದುಂಬಿಲಾ, ರಾಮರಾಮ, ಸುವಿ – ಈ ಮುಂತಾದ ಸೊಲ್ಲುಗಳಿಂದ ಕೂಡಿದ್ದು, ರಗಳೆಯಂತೆ ಮುಂದುವರಿಯುತ್ತವೆ.

ಕಥೆಗಳ ವಿವಿಧ ಪ್ರಕಾರಗಳಾದ ಪ್ರಾಣಿ ಕಥೆ, ಪುರಾಣ ಕಥೆ, ಕಿನ್ನರಿ ಕಥೆ, ಸಾಮಾಜಿಕ ಕಥೆ ಹೀಗೆ ಎಲ್ಲಾ ಬಗೆಯ ಕಥಾ ಪ್ರಕಾರಗಳು ಅಂಕೋಲಾ ತಾಲೂಕಿನಲ್ಲಿ ವಿಪುಲ ಸಂಖ್ಯೆಯಲ್ಲಿವೆ. ಆದರೆ ಅವುಗಳ ಸಂಗ್ರಹ ಕಾರ್ಯ ಮಾತ್ರ ವ್ಯಾಪಕ ಪ್ರಮಾಣದಲ್ಲಿ ಆಗಿಲ್ಲವೆಂದೇ ಹೇಳಬೇಕು. ಡಾ। ಎಲ್. ಆರ್. ಹೆಗಡೆ, ಶಾಂತಿ ನಾಯಕ ಡಾ॥ ಎನ್. ಆರ್. ನಾಯಕ ಮುಂತಾದವರು ಈ ಕ್ಷೇತ್ರದಲ್ಲಿ ಕೈಯಾಡಿಸಿದವರಾದರೂ, ಅವರ ಕ್ಷೇತ್ರ ಕಾರ್ಯ ಇನ್ನೂ ಸಮಗ್ರವಾಗಿಲ್ಲ. ಇನ್ನೂ ಆಗಬೇಕಾದ ಕಾರ್ಯ ಬಹಳಷ್ಟಿದೆಯೆಂದು ನನ್ನ ಕ್ಷೇತ್ರ ಕಾರ್ಯದ ಅನುಭವದಿಂದ ಹೇಳುತಲಿದ್ದೇನೆ. ಈ ತಾಲೂಕಿನಲ್ಲಿ ಹಲವಾರು ಜಾತಿಯವರಲ್ಲಿದ್ದ ಆಡು ಭಾಷೆಯ ಸೊಗಡಿನಿಂದ ಕೂಡಿದ ನೂರಾರು ಜನಪದ ಕಥೆಗಳು ಕ್ಷೇತ್ರಕಾರ್ಯ ನಡೆಸುವವರ ಅಭಾವದಿಂದ ಕಾಲಗರ್ಭದಲ್ಲಿ ಹೂತು ಹೋಗುತ್ತಲಿದೆ. ಡಾ॥ ಎಲ್. ಆರ್. ಹೆಗಡೆ ಮತ್ತು ಶ್ರೀಮತಿ ಶಾಂತಿ ನಾಯಕರು ಇಲ್ಲಿಯ ಕೆಲವು ಜನಪದ ಕಥೆಗಳನ್ನು ಬೇರೆ–ಬೇರೆ ಪತ್ರಿಕೆಗಳಲ್ಲಿ, ಡಾ॥ ಎನ್. ಆರ್. ನಾಯಕರು ಕೆಲವು ಗದ್ಯ ಕಥೆಗಳನ್ನು ತಮ್ಮ ವಿವಿಧ ಗ್ರಂಥಗಳಲ್ಲಿ ಪ್ರಕಟಿಸಿದ್ದಾರೆ. ಡಾ॥ ಪರಮಶಿವಯ್ಯನವರ 'ಕರ್ನಾಟಕದ ಜನಪದ ಗೀತೆಗಳು' ಎಂಬ ಗ್ರಂಥದಲ್ಲಿ ಅವರು ಸಂಗ್ರಹಿಸಿದ ಎರಡು ಕಥೆಗಳಿವೆ. ಇವುಗಳನ್ನು ಹೊಸ ಭಾಗದ ಆಗೇರ ದೇವಿಯಿಂದ ಸಂಗ್ರಹಿಸಿದ 'ದೇವಿ ಹೇಳಿದ ಕಥೆಗಳು' ಎಂಬ ಹಸ್ತಪ್ರತಿಯನ್ನು ಕರ್ನಾಟಕ ವಿಶ್ವವಿದ್ಯಾಲಯದವರು ಪ್ರಕಟಣೆಗೆತ್ತಿಕೊಂಡಿದ್ದಾರೆ. ಆಗೇರರು, ನಾಡವರು, ಹಾಗೂ ಹಾಲಕ್ಕಿಗಳ ಅನೇಕ ಜನಪದ ಕಥೆಗಳು ಡಾ॥ ಎನ್. ಆರ್. ನಾಯಕ ಮತ್ತು ಶಾಂತಿ ನಾಯಕರ ಕಡಿತದಲ್ಲಿದ್ದು ಅವು ಪ್ರಕಟವಾಗಬೇಕಿದೆ.

ಜನಪದ ಗದ್ಯ ಕಥೆಗಳು ಪದ್ಯ ಕಥೆಗಳಂತೆ ಬಹುಪ್ರಮಾಣದಲ್ಲಿ ದುರಂತಮುಖಿಯಾಗಿ, ಸ್ತ್ರೀ ಕೇಂದ್ರಿತವಾಗಿರದೆ ಬಹುಮುಖಗಳಲ್ಲಿ ತೆರೆದುಕೊಳ್ಳುತ್ತವೆ. ಈ ಕಥೆಗಳು ಹಾಸ್ಯ, ವಿಡಂಬನೆ, ಜಾಣೆ, ಯುಕ್ತಿ ಕುಯುಕ್ತಿಗಳಿಂದ ಕೂಡಿದ್ದು ಜನಪದ ಜೀವನದ ಹಲವು ಮಗ್ಗಲುಗಳನ್ನು ಅಂದವಾಗಿ ಚಿತ್ರಿಸುತ್ತವೆ.

ಒಗಟು ಮತ್ತು ಗಾದೆಗಳೂ ಸಹ ಜನಪದ ಸಾಹಿತ್ಯ ಪ್ರಕಾರದಲ್ಲಿ ಒಳಗೊಳ್ಳುತ್ತವೆ. ಒಗಟಿನ ಪರ್ಯಾಯವಾಗಿ ಅಂಕೋಲಾ ತಾಲೂಕಿನಲ್ಲಿ ಕನ್ನಡ, ಕಣ್ಣಿ ಸೂಳ್, ಹದಿರು ಎಂಬ ಪದಗಳು ಬಳಕೆಯಲ್ಲಿವೆ. ಶಾಂತಿ ನಾಯಕರ 'ಜಾಣೆ ಕನ್ನಡವ ತಿಳಿದ್ದೇಳೆ' ಎನ್ನುವ ಒಗಟುಗಳ ಸಂಕಲನ ಗ್ರಂಥದಲ್ಲಿಯ ಅನೇಕ ಒಗಟುಗಳು ಅಂಕೋಲಾ ತಾಲೂಕಿನಲ್ಲಿ ಸಂಗ್ರಹಿಸಿದವುಗಳಾಗಿವೆ. ಡಾ॥ ಎನ್. ಆರ್. ನಾಯಕರು 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ' 'ನಾಡವರ ಸಂಸ್ಕೃತಿ' ಹಾಗೂ ಅವರ ಅನೇಕ ಬಿಡಿ ಲೇಖನಗಳಲ್ಲಿ ಅಂಕೋಲಾ ತಾಲೂಕಿನ ಹಲವಾರು ಒಗಟುಗಳನ್ನು ಉದಾಹರಿಸಿದ್ದಾರೆ.

ಅಂಕೋಲಾ ತಾಲೂಕಿನಲ್ಲಿ ಬಳಕೆಯಲ್ಲಿರುವ ಗಾದೆಗಳ ವಿಷಯವಾಗಿ ಈವರೆಗೆ ಪ್ರತ್ಯೇಕ ಗ್ರಂಥಗಳ ಪ್ರಕಟಣೆಯಾಗಿಲ್ಲ. ಇಲ್ಲಿಯ ಹಾಲಕ್ಕಿ ಒಕ್ಕಲು, ಆಗೇರರು, ನಾಡವರು, ನಾಮಧಾರಿಗಳು, ಹವ್ಯಕರು ಮುಂತಾದವರಲ್ಲಿ ಪ್ರಚಲಿತವಿರುವ ಗಾದೆಗಳ ಪ್ರಸ್ತಾಪವನ್ನು ಡಾ॥ ಎಲ್. ಆರ್. ಹೆಗಡೆ ಮತ್ತು ಡಾ॥ ಎನ್. ಆರ್. ನಾಯಕರು, ಪ್ರಾಸಂಗಿಕವಾಗಿ ಅಲ್ಲಲ್ಲಿ ಪ್ರಸ್ತಾಪ ಮಾಡಿ ಕೆಲವನ್ನು ತಮ್ಮ ಲೇಖನಗಳಲ್ಲಿ ಅಲ್ಲಲ್ಲಿ ಬಳಸಿಕೊಂಡರೂ, ಈ ದಿಸೆಯಲ್ಲಿ ಅವರು

ವ್ಯಾಪಕ ಕ್ಷೇತ್ರಕಾರ್ಯವನ್ನು ನಡೆಸಿಲ್ಲವೆಂದೇ ಹೇಳಬೇಕು. ಮಾತು ಮಾತಿಗೆ ಗಾದೆಯನ್ನು ಕಟ್ಟುವುದರಲ್ಲಿ ನಿಸ್ಸಿಮರಾದ ನನ್ನ ತಂದೆ ಖ್ಯಾತಿಯ ರಾಮಣ್ಣನವರು ಹೇಳಿದ ಹಲವಾರು ಗಾದೆಗಳು ನನ್ನ ಅಪ್ರಕಟಿತ ಸಂಗ್ರಹದಲ್ಲಿವೆಯಾದರೂ, ಅವುಗಳ ಪ್ರಕಟಣೆಗೆ ಇನ್ನೂ ಕಾಲ ಒದಗಿ ಬಂದಿಲ್ಲ.

ಇಲ್ಲಿಯ ನಂಬಿಕೆ ನಿಷೇದಗಳನ್ನು ಸಂಗ್ರಹಿಸಿ ಡಾ। ಎನ್. ಆರ್. ನಾಯಕರು, 'ಏಶಿಯನ್ ಸ್ಟಡೀಸ್' ಎಂಬ ಇಂಗ್ಲೀಷ್ ವಿಶ್ವಕೋಶದಲ್ಲಿ 'ನಂಬಿಕೆ ಮತ್ತು ನಿಷೇದಗಳು' ಎಂಬ ಸುದೀರ್ಘ ಲೇಖನವೊಂದನ್ನು ಬರೆದಿದ್ದಾರೆ. ಇನ್ನೂ ಹಲವಾರು ನಂಬಿಕೆ ನಿಷೇಧಗಳು ಅವರ ಕಡತದಲ್ಲಿವೆ. ಈ ಕ್ಷೇತ್ರದಲ್ಲಿಯೂ ಕಾರ್ಯಕೈಗೊಳ್ಳಲು ಸಾಕಷ್ಟು ಅವಕಾಶಗಳಿವೆ.

ಜನಪದ ವೈದ್ಯ ಕ್ಷೇತ್ರದಲ್ಲಿ ಈ ತಾಲೂಕು ಮುಂಚೂಣಿಯಲ್ಲಿದೆ. ಬೆಳಂಬಾರದ ಶಿವು ಬೊಮ್ಮು ಗೌಡ, ಹನುಮಂತ ಗೌಡರು ಅರ್ಧಾಂಗ ವಾಯುವಿಗೆ ನೀಡುವ 'ಮದ್ದು' ದೇಶ–ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿದೆ. ಇಲ್ಲಿ ಬೇರೆ–ಬೇರೆ ರೋಗಗಳಿಗೆ 'ಮದ್ದು' ಕೊಡುವ ಹಲವು ಜನಪದ ವೈದ್ಯರಿಗೆ ಹಿಂದೆ ಹಳ್ಳಿಯ ಮನೆ ಮನೆಗಳಲ್ಲಿಯೂ 'ಮದ್ದಿನ ಪೆಟ್ಟಿಗೆ' ಗಳಿದ್ದುದ್ದನ್ನು ನಾನು ಕಂಡಿದ್ದೇನೆ. ನಮ್ಮ ತಾಯಿಯ ಮನೆಮದ್ದಿನ ಆರೈಕೆಯಲ್ಲಿ ನಾನು ಬೆಳೆದಿದ್ದೇನೆ. ಡಾ॥ ಎಲ್. ಆರ್. ಹೆಗಡೆಯವರ 'ಮನೆಮದ್ದು', ಶ್ರೀಮತಿ ಶಾಂತಿ ನಾಯಕರ 'ಸಿಂಕೋನಾ' ಮತ್ತು 'ಜನಪದ ವೈದ್ಯಕೀಯ ಅಡಿಗೆಗಳು' ಎಂಬ ಗ್ರಂಥದಲ್ಲಿ ಅಂಕೋಲಾ ಸೀಮೆಯಲ್ಲಿ ಬಳಕೆಯಲ್ಲಿರುವ ಹಲವಾರು ಮನೆಮದ್ದುಗಳ ವಿವರಗಳಿವೆ.

ಮಾಂತ್ರಿಕ ವೈದ್ಯದಲ್ಲಿಯೂ ಅಂಕೋಲಾ ತಾಲೂಕು ಹಿಂದಿಲ್ಲ. ಮಾಯ, ಮಾಟದಿಂದ ರೋಗ ಗುಣಪಡಿಸುವ ಮಂತ್ರ ವೈದ್ಯರಿದ್ದಾರೆ. ಮಾಟ ಮಂತ್ರಗಳಲ್ಲಿ ಪಳಗಿದ ಗುನಗ, ಗಾಡಗ, ಪೂಜಾರಿಗಳಿದ್ದಾರೆ. ಕೊಮಾರಪಂತರ ಮಂಡಗಳಿವೆ. ದೇವರಲ್ಲಿ ಪುಡವಿ, ಪ್ರಸಾದ ಕೇಳಿ 'ಇಚಾರ' ಹಾಕಿ, ತೀರ್ಥ ಪ್ರೋಕ್ಷಣೆ ಮಾಡಿಸಿಕೊಂಡು ರೋಗ ವಿಮುಕ್ತಿ ಪಡೆಯುವುದು ಇಲ್ಲಿ ವಿಶೇಷವಾಗಿದೆ. ಈ ವೈದ್ಯಕ್ಕೆ ಮನೋವೈಜ್ಞಾನಿಕ ಹಿನ್ನೆಲೆಯಿದೆ. ಹಾಲಕ್ಕಿ ಒಕ್ಕಲಿಗರಲ್ಲಿ ಬೆಳೆಗಳಿಗೆ ರೋಗ ತಟ್ಟಿದಾಗ, ಅದನ್ನು ಮಾಂತ್ರಿಕ ಉಪಾಸನೆಯಿಂದ ನಿಯಂತ್ರಿಸುವ ಮಾಂತ್ರಿಕರಿದ್ದರಂತೆ, ಆಗೇರರಲ್ಲಿ 'ಗಾಡಗ' ತನ ಹೊಡೆದು ಜಾನಪದರ ರೋಗ ಗುಣಪಡಿಸುವರಿದ್ದಾರೆ. ಆದರೆ ಇಂದಿನ ವೈಜ್ಞಾನಿಕ ಯುಗದಲ್ಲಿ ಇದನ್ನೆಲ್ಲ ನಂಬುವವರು ತೀರ ಕಡಿಮೆ.

ಜನಪದ ಅಡುಗೆ, ಆಹಾರ, ಪಾನೀಯಗಳ ನೂರಾರು ಬಗೆಗಳು ಇಲ್ಲಿವೆ. ಹೊಂಬೆಸರು, ಉದ್ದು, ಎಳ್ಳು, ರಾಗಿ ಮುಂತಾದ ಧಾನ್ಯಗಳಿಂದ ಮಾವು, ಬೇಲ, ಮುಂತಾದ ಹಣ್ಣುಕಾಯಿಗಳಿಂದ, ಹಾಡೆ, ಮಂದಾರಿ, ದಾಸವಾಳ ಸೊಪ್ಪಿನಿಂದ ಹಲವಾರು ಬಗೆಯ ಪೇಯಗಳನ್ನು ಮಾಡಿ ಕುಡಿಯುವ ರೂಢಿ ಇಂದಿನ ಕೋಕೋಕೋಲಾ ಸಂಸ್ಕೃತಿಯಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾದರೂ ಹಳ್ಳಿಗಳಲ್ಲಿ ಸಂಪೂರ್ಣ ನಶಿಸಿ ಹೋಗಿಲ್ಲ. ಇಲ್ಲಿಯ ಅಡುಗೆ ಆಹಾರ ಪಾನೀಯಗಳ ಬೃಹತ್ ಸಂಗ್ರಹ ಶಾಂತಿ ನಾಯಕರಲ್ಲಿದೆ. 'ಜನಪದ ಆಹಾರ ಪಾನೀಯಗಳು' ಎಂಬ ಗ್ರಂಥದಲ್ಲಿ ಇವುಗಳಲ್ಲಿ ಕೆಲವು ಬೆಳಕು ಕಂಡಿವೆ.

ಇಲ್ಲಿಯ ಜಾತಿಜಾತಿಗಳ ಸಂಪ್ರದಾಯಿಕ ಉಡುಗೆ ತೊಡುಗೆಗಳಲ್ಲಿ ಭಿನ್ನತೆಯಿದೆ. ಇವುಗಳನ್ನು ಉಡುವ–ತೊಡುವ ವಿಧಾನ ವಿನ್ಯಾಸಗಳನ್ನು ಪರಿಶೀಲಿಸಿ ಡಾ॥ ಸವಿತಾ ನಾಯಕರು, 'ಉತ್ತರ ಕನ್ನಡ ಜಿಲ್ಲೆಯ ಕೆಲವು ಬುಡಕಟ್ಟುಗಳಲ್ಲಿ ಪ್ರಸಾಧನ ಕಲೆ', ಎಂಬ ಮಹಾಪ್ರಬಂಧ ಪ್ರಕಟಿಸಿದ್ದಾರೆ. ಅಲ್ಲಿ ಅಂಕೋಲೆಯ ಹಾಲಕ್ಕಿ , ಕರೆ ಒಕ್ಕಲ ಪ್ರಸಾಧನದ ವಿವರಣೆಯಿದೆ. ಶಾಂತಿ ನಾಯಕರು ಏಶಿಯನ್ ಸ್ಟಡೀಸ್ ಎಂಬ ವಿಶ್ವಕೋಶಕ್ಕೆ ಬರೆದ 'ಡ್ರೆಸ್ ಎಂಡ್ ಆರ್ನಾಮೆಂಟ್ಸ್ ಇನ್ ಕರ್ನಾಟಕ' ಎಂಬ ಲೇಖನದಲ್ಲಿ ಅಂಕೋಲೆಯ ನಾಡವರು, ಹಾಲಕ್ಕಿ, ಕರೆ ಒಕ್ಕಲು ಮುಂತಾದವರ ಉಡುಗೆ ತೊಡುಗೆಗಳ ಸಂಕ್ಷಿಪ್ತ ವಿವರಣೆಗಳಿವೆ. ಡಾ॥ ಎನ್. ಆರ್. ನಾಯಕರ 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ' 'ನಾಡವರ ಸಂಸ್ಕೃತಿ' ಎಂಬ ಗ್ರಂಥಗಳಲ್ಲಿ ಆಯಾ ಜಾತಿಯವರ ಉಡುಗೆ ತೊಡುಗೆಗಳು ಪ್ರಸ್ತಾಪವಿದೆ.

ಹಗಣ, ಬಯಲಾಟ, ಕೋಲಾಟ, ಪುಗಡಿ, ತಾರ್ಲೆ ಮರಕಾಲಕುಣಿತ ಈ ಮುಂತಾದವು ಇಲ್ಲಿಯ ಜನಮನ ರಂಜಿಸುವ ಮಹತ್ವಪೂರ್ಣ ಕಲೆಗಳು. ಬಯಲಾಟ ಪ್ರಕಾರಗಳಲ್ಲಿಯೇ ಅತ್ಯಂತ ಪ್ರಾಚೀನವಾದ, ಇಂದಿನ ಬೀದಿ ನಾಟಕಕ್ಕೆ ಮೂಲ ಪ್ರೇರಣೆಯಿತ್ತ 'ಹಗಣ' ವೆನ್ನುವ ಸಶಕ್ತ ಮನೋರಂಜಕ ಕಲೆ, ಅಂಕೋಲೆಯ ಸುಗ್ಗಿ, ಯುಗಾದಿಯ ಕರಡಿ ಹಬ್ಬ, ಬಂಡಿ ಹಬ್ಬಗಳಲ್ಲಿ ಪ್ರಚಲಿತವಿದೆ. ಇಲ್ಲಿಯ ಜಾನಪದರ ಪ್ರಮುಖ

ಮನೋರಂಜಕ ಕಲೆ ಬಯಲಾಟ. ಅಂಕೋಲೆ ಸೀಮೆಯಲ್ಲಿ ಪ್ರತಿ ವರ್ಷ ಬಯಲಾಟವಾಗದೇ ಇರುವ ಗ್ರಾಮ ಇಲ್ಲವೆಂದರೂ ಸಲ್ಲುವುದು. ಯಕ್ಷಗಳ ಕಲೆಯಲ್ಲಿ ಹೆಸರು ವಾಸಿಯಾದ ಅನೇಕ ಕಲಾವಿದರು ಇಲ್ಲಿ ಆಗಿ ಹೋಗಿದ್ದಾರೆ. ಈಗಲೂ ಅನೇಕರು ಪ್ರಖ್ಯಾತಿ ಪಡೆದಿದ್ದಾರೆ. ಯಕ್ಷಗಾನ ನಟ ಡಾ॥ ಆರ್. ಜಿ. ಗುಂದಿಯವರು ಯಕ್ಷಗಾನ ಪ್ರಸಂಗಕರ್ತರೂ ಹೌದು. ಇವರಲ್ಲದೇ ಬುದ್ಧು ಭಾಗ್ವತ ಹಾಗೂ ಎಮ್. ಎಮ್. ನಾಯಕ,ಅಗ್ಗರಗೋಣ ಇವರು ಪ್ರಸಂಗಕರ್ತರಾಗಿದ್ದಾರೆ. ಯಕ್ಷಗಾನ ನಟರಾದ ವಿ. ಜೇ. ನಾಯಕರು 'ಯಕ್ಷಗಾನ' ಎಂಬ ಗ್ರಂಥವನ್ನು, ಡಾ॥ ಎನ್. ಆರ್. ನಾಯಕರು 'ಕನ್ನಡ ಬಯಲಾಟ ಪರಂಪರೆ' ಹಾಗೂ 'ಕರಾವಳಿಯ ಸೋಗುಗಳ ಬಹುರೂಪ' ಎಂಬ ಬಯಲಾಟಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ರಚಿಸಿದ್ದಾರೆ. ಹಟ್ಟಿಕೇರಿ, ಬೇಲೇಕೇರಿಯ ಕೊಮಾರಪಂತರು ಮೂಡಲಪಾಯ ಬಯಲಾಟವನ್ನು, ಆಗೇರರು ಹರಿಕಂತರು ಮತ್ತು ಕೋಮಾರಪಂತರು ಸಂಗ್ಯಾಬಾಳ್ಯಾ, ಗುಂಡು ಬರ್ಮ ಸಣ್ಣಾಟವನ್ನು ಕ್ವಚಿತವಾಗಿ ಆಡುವ ರೂಢಿಯಿಟ್ಟುಕೊಂಡಿದ್ದಾರೆ.

ತಾರ್ಲೆ, ಪುಗಡಿ, ಕುಣಿತಗಳು ಹಾಲಕ್ಕಿ ಆಗೇರರು, ಕೊಮಾರಪಂತ, ಹರಿಕಂತ ಹೆಂಗಸರಲ್ಲಿ ಕ್ವಚಿತವಾಗಿ ಕಂಡುಬರುವ ಕಲಾಪ್ರಕಾರಗಳು. ಗಂಡಸರಲ್ಲಿ ಸುಗ್ಗಿ ಕುಣಿತ, ಮರಕಾಲು ಕುಣಿತ, ಮೊಕ್ವಾಡ ಕುಣಿತ, ಸಾವಿ ಮಕ್ಕಳ ಕುಣಿತಗಳಿವೆ.

ದೇವಳಿ ಹಾಗೂ ಆಗೇರರ ಪಂಚವಾದ್ಯಗಳು ಪ್ರಖ್ಯಾತವಾಗಿದ್ದು, ಮದುವೆ, ಹಬ್ಬ, ಹರಿದಿನಗಳಲ್ಲಿ ಇವುಗಳ ಬಳಕೆಯಾಗುತ್ತದೆ. ಆಗೇರರ ರಣ ಹಲಿಗೆಯೂ ಅತ್ಯಂತ ಪ್ರಖ್ಯಾತ. ಅಂಕೋಲೆಯ ಹನುಮಂತ ದೇವರಿಗೆ ಭಾರ ಬರಲು ಆಗೇರರ ರಣ ಹಲಗೆಯ ಅಬ್ಬರ ಬಿಡ್ತಿಗೆಯೇ ಬೇಕಂತೆ. ಡಾ॥ ಎನ್. ಆರ್. ನಾಯಕರ 'ಉತ್ತರ ಕನ್ನಡ ಜಿಲ್ಲೆಯ ಜನಪದ ಕಲೆಗಳು' ಎಂಬ ಲೇಖನದಲ್ಲಿ 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ' ಗ್ರಂಥದಲ್ಲಿ ಹಾಗೂ ಜಿ. ಪಿ ನಾಯಕರು ಬರೆದ 'ಉತ್ತರ ಕನ್ನಡ ಜಿಲ್ಲೆಯ ಜನಪದ ಕಲೆಗಳು' ಎಂಬ ಕಿರು ಹೊತ್ತಿಗೆಯಲ್ಲಿ ಅಂಕೋಲೆಯ ಜನಪದ ಕಲಾ ಪ್ರಕಾರಗಳ ವಿವರಣೆ ಇದೆ.

ನಾನು ಚಿಕ್ಕವನಿರುವಾಗ ಗುಡುಗುಡಿ (ಕಬಡ್ಡಿ) ಸೋಡ್ಸ, ಗಿಡಗನ ಸೋತ್ಸ ಪಗಡೆ, ಪಗ್ಗ ಕವಡೆ, ಗೋಲಿ, ಹಾಣೆಗೆಂಡೆ, ಕೆಂಗಿನ ಕಿಟ್ಟಾಟ, ಪಿಕ್ಯ, ಗಿಡಮಂಗ ಹಳ್ಳಾಟ ಹೀಗೆ ಸುಮಾರು ಐವತ್ತಕ್ಕೂ ಮಿಕ್ಕಿ ಆಟಗಳನ್ನು ಆಡಿದ್ದೇನೆ. ಇಂದಿನ ಕ್ರಿಕೆಟ್ ಹಾವಳಿ ಹಳ್ಳಿಗೆ ಕಾಲಿರಿಸದ ನನ್ನ ಬಾಲ್ಯದ ಸಮಯದಲ್ಲಿ ಹಾಣೆಯಾಟವೇ ನಮಗೆ ಕ್ರಿಕೆಟ್ಟಿಗೆ ಪರ್ಯಾಯ ಆಟವಾಗಿತ್ತು. ಹಾಣೆ, ಸೋಡ್ಯಾದಿ, ಜನಪದ ಆಟಗಳನ್ನು ಶಾಲೆ ಕಾಲೇಜು ಮಟ್ಟದಲ್ಲಿ ಆಡಿ ಜನಪ್ರಿಯಗೊಳಿಸಿದರೆ, ವಿದೇಶಿ ಆಟಗಳಿಂದ ಸೊರಗಿ ಹೋಗುತ್ತಿರುವ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಸ್ವಲ್ಪ ಮಟ್ಟಿಗೆ ಹದ್ದುಬಸ್ತಿಗೆ ತರಬಹುದೇನೋ? ಅಂಕೋಲೆಯ ಸುತ್ತಿನ ಅನೇಕ ಆಟಗಳು ಡಾ। ಎನ್. ಆರ್. ನಾಯಕ ಮತ್ತು ಶಾಂತಿ ನಾಯಕರು ಸಂಪಾದಿಸಿದ 'ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು' ಗ್ರಂಥದಲ್ಲಿ ಬೆಳಕು ಕಂಡಿವೆ. ಕರ್ನಾಟಕದಲ್ಲಿ ಜನಪದ ಆಟಗಳ ಕುರಿತಾಗಿರುವ ಆದ್ಯ ಗ್ರಂಥವಿದು.

ಅಂಕೋಲೆಯ ಕೊಮಾರಪಂತರಲ್ಲಿ ಪ್ರಚಲಿತವಿರುವ 'ಹೊಂಡೆ' ಹಾಗೂ ಅನೇಕ ಹಿಂದುಳಿದ ಜಾತಿಯವರಲ್ಲಿ ಚಾಲ್ತಿಯಲ್ಲಿರುವ ಕೋಳಿಅಂಕ, ಬೇಟೆಗಳು ಇಲ್ಲಿಯವರ ಮನೋರಂಜಕ ಕ್ರೀಡೆಗಳಾಗಿವೆ. ಬೇಟೆ ಹಾಗೂ ಕೋಳಿ ಅಂಕಗಳಿಗೆ ನಿಷೇಧವಿದ್ದರೂ, ಅವನ್ನಾಡದಿದ್ದಲ್ಲಿ ಬೇಟೆನಾಸ ಹಾಗೂ ಅಂಕದೇವತೆ ಮುನಿಯುವವೆಂಬ ಭಯದಿಂದ ಪೋಲಿಸರ ಕಣ್ಣು ತಪ್ಪಿಸಿ ವರ್ಷಕೊಮ್ಮೆಯಾದರೂ ಕೋಳಿಯಂಕ, ಬೇಟೆಯನ್ನಾಡುತ್ತಾರೆ.

ಇಲ್ಲಿಯ ಗರತಿಯರು 'ಹಲಿ' ಹೊಯ್ಯುವುದರಲ್ಲಿ ನಿಪುಣೆಯರು, ವಿವಿಧ ಹಬ್ಬ ಹರಿದಿನಗಳಲ್ಲಿ, ಮದುವೆ ಮುಂತಾದ ಮಂಗಲ ಕಾರ್ಯಗಳಲ್ಲಿ ಮನೆಯ ಒಳ–ಹೊರಗೆ ಹೊಯ್ಯುವ 'ಹಲಿ'ಗಳು, ದೀಪಾರಾಧನೆಯ ವೇಳೆ 'ಹಾಣಜಿ'ಯಲ್ಲಿ ಬಿಡಿಸುವ 'ಹಲಿ' ಮದುವೆ 'ಹಸಗೆ' ಬೋರಜ್ಜಿ ಗೋಡೆಯ ಹಲಿಗಳು ಚಿತ್ತಾಕರ್ಷಕವಾಗುತ್ತವೆ. ಇಲ್ಲಿಯ ಹಲವಾರು ದೇವಸ್ಥಾನಗಳು ಹಾಗೂ ಮಹಡಿಯ ಮನೆಯ ಗೋಡೆಗಳ ಮೇಲೆ ಬಿಡಿಸಿದ ಕಾವಿಯ ಚಿತ್ರಗಳು ಸಹ ಗಮನಾರ್ಹವಾದವು.

ಅಂಕೋಲೆಯ ಗುಡಿಗಾರ ಕಾಷ್ಠ ಶಿಲ್ಪ ಹಾಗೂ ಗುಡಿಗಾರಿಕೆಯ ಕುಸುರಿ ಕಲೆಗಳು, ಗಣೇಶ ಚವತಿಯ ಸಂದರ್ಭದಲ್ಲಿ ಮಾಡುವ ಮಣ್ಣಿನ ಗಣಪತಿ ಹಾಗೂ ಪ್ರೇಕ್ಷಕರನ್ನು ಆಕರ್ಷಿಸಲು ನಿರ್ಮಿಸಿದ ವಿವಿಧ ಬಗೆಯ

ವಿಗ್ರಹಗಳು, ಶಾರದಾ ಪೂಜೆಯ ಸರಸ್ವತಿ ವಿಗ್ರಹ ಮುಂತಾದವುಗಳು ಜನಪದ ಕಲಾವಿದರ ಕಲಾನೈಪುಣ್ಯಕ್ಕೆ ಹಿಡಿದ ಸಾಕ್ಷಿಗಳು, ಮಣ್ಣಿನ ಮೂರ್ತಿಗಳನ್ನು ತಯಾರಿಸುವುದನ್ನೇ ಹವ್ಯಾಸಿ ವೃತ್ತಿಯನ್ನಾಗಿಸಿಕೊಂಡ ಅನೇಕ ಕಲಾಕಾರರು ಅಂಕೋಲೆಯಲ್ಲಿದ್ದಾರೆ. ಇವರಲ್ಲಿ ಮಹಾಲೆ ಮನೆತನದವರು ಮುಖ್ಯರು.

ಜಾನಪದದ ರಕ್ಷಕ ದೇವತೆಗಳಾದ ಅಮ್ಮ ಭೂಮ್ತಾಯಿ, ದೇವ್ತಿ, ಕಾಳಮ್ಮ ಮಾಸ್ತಿ, ಸಂಚಾರಿ ದೇವತೆ, ಮುರ್ಕಿಯಮ್ಮ, ಬೀರ, ಜೈನಬೀರ, ಬೊಮ್ಮಯ್ಯ ಹನುಮಂತ, ಜಟಕ, ಬರ್ಮಜಟಗ ಮುಂತಾದ ದೇವತೆಗಳು ಅವುಗಳ ಮನೆ, ಗುಡಿ, ಗುತ್ತು, ತಾನಗಳು, ಈ ದೇವತೆಗಳ ಹೆಸರಿನಲ್ಲಿ ಆಗುವ ಬಂಡಿ ಹಬ್ಬ, ತೇರು, ಜಾತ್ರೆ, ವನಭೋಜನ, ದಹಿಕಾಲು, ಮಾನಮ್ಮಿ (ಮಹಾನವಮಿ) ಮುಂತಾದ ಹಬ್ಬ, ಉತ್ಸವಗಳು ಇಲ್ಲಿಯ ಜಾನಪದರ ಭಕ್ತಿ ಭಾವುಕತೆಯ ಶ್ರದ್ಧಾ ಕೇಂದ್ರಗಳಾಗಿವೆ. ಈ ಪ್ರದೇಶದಲ್ಲಿ ಕೀಳಿ, ಚಾಳಿ, ನಾಸ, ಕನ್ನೆ–ಕೋಲೆ, ಕನ್ನೇರು, ಸುಪ್ಪಡತಿ, ಹೆಮ್ಮಲತಿ, ಚೌಡಿ, ಹಂದಿಗಿರಿ, ಹಾಯ್ಗುಳಿ, ಹುಲಿ, ಮುಂತಾದ ರಕ್ಷಕ ಶಕ್ತಿ ದೇವತೆಗಳು, ಅವುಗಳ ಗುತ್ತು ತಾನಗಳೂ ಸಹ ಸಾಕಷ್ಟಿವೆ. ಈ ದೇವತೆಗಳಿಗೆ ಕೋಳಿ–ಕುರಿಗಳನ್ನು ಸಮರ್ಪಿಸಿ, ಭಯ–ಭಕ್ತಿಯಿಂದ ಕೈ ಮುಗಿದು ಕೃತಾರ್ಥತೆಯನ್ನು ಪಡೆಯುವಲ್ಲಿ ಇಲ್ಲಿಯ ಜಾನಪದರು ಖುಷಿಪಡುವರು.

ಅಂಕೋಲೆಯು ಅನೇಕ ಸಾಮಾಜಿಕ ಉಪಭಾಷೆಗಳ ಆಡುಂಬೊಲ. ಇಲ್ಲಿಯ ವಿವಿಧ ಜಾತಿಯವರ ಸಾಮಾಜಿಕ ಉಪಭಾಷೆ ಭಿನ್ನವಾಗಿದ್ದು ಅವು ತಮ್ಮ ತಮ್ಮ ಅನನ್ಯತೆಗಳನ್ನು ಉಳಿಸಿಕೊಂಡಿವೆ. ಕನ್ನಡ ಶಬ್ಧಕೋಶಗಳಲ್ಲಿ ಕಂಡರಿಯದ ನೂರಾರು ಅತ್ಯಮೂಲ್ಯ ಹೊಸ ಹೊಸ ಶಬ್ಧಗಳು, ಭಾಷಾ ಶಾಸ್ತ್ರಜ್ಞರಿಗೇ ಸವಾಲು ಒಡ್ಡುವ ವಿವಿಧ ಭಾಷಾ ಪ್ರಯೋಗಗಳು, ಕನ್ನಡದ ಅತ್ಯಂತ ಪ್ರಾಚೀನ ನುಡಿಗಟ್ಟುಗಳನ್ನು ಇಲ್ಲಿಯ ಸಾಮಾಜಿಕ ಉಪ ಭಾಷೆಗಳು ಒಳಗೊಂಡಿವೆ. ಒಬ್ಬ ವ್ಯಕ್ತಿ ಆಡುವ ಮಾತಿನಿಂದ ಆತ ಯಾವ ಜಾತಿಗೆ ಸೇರಿದವನೆನ್ನುವದನ್ನು ತತ್‌ಕ್ಷಣದಲ್ಲಿ ಇಲ್ಲಿ ಗುರುತಿಸಬಹುದು.

ಅಂಕೋಲೆಯ ಸಮೃದ್ಧ ಜಾನಪದ ಹಲವಾರು ಜಾನಪದ ವಿದ್ವಾಂಸರಿಗೆ ಪ್ರೇರಣೆಯ ಸವಾಲಾಗಿದೆ. ಇಲ್ಲಿಯ ಜಾನಪದರಿಂದ ಪ್ರಭಾವಿತವಾದ ನಾಲ್ಕು ಪಿ.ಎಚ್.ಡಿ. ಮಹಾ ಪ್ರಬಂಧಗಳಿವೆ. ಡಾ। ಎನ್. ಆರ್. ನಾಯಕ 'ಕಾರವಾರ ಜಿಲ್ಲೆಯ ಜನಪದ ಗೀತೆಗಳು' ಎಂಬ ಗ್ರಂಥದಲ್ಲಿ ಅಂಕೋಲೆಯ ಜನಪದ ಸಾಹಿತ್ಯ, ಕಲೆ, ಸಂಪ್ರದಾಯಗಳಿಗೆ ಸೇರಿದ ಬಹಳಷ್ಟು ಗೀತಗಳು, ಕಥನ ಕವನಗಳು ಅನುಸಂಧಾಕ್ಕೊಳವಟ್ಟಿವೆ. ಜಾನಪದ ವಿಷಯದಲ್ಲಿ ಉತ್ತರಕನ್ನಡ ಜಿಲ್ಲೆಯ ಪ್ರಥಮ (೧೯೭೫) ಸಂಶೋಧನಾ ಗ್ರಂಥವಿದು. ಕರ್ನಾಟಕದಲ್ಲಿ ಮೂರನೆಯ ಗ್ರಂಥ ಡಾ। ಸವಿತಾ ನಾಯಕರ 'ಉತ್ತರ ಕನ್ನಡ ಜಿಲ್ಲೆಯ ಕೆಲವು ಬುಡಕಟ್ಟುಗಳಲ್ಲಿ ಪ್ರಸಾಧನ ಕಲೆ'ಯೆನ್ನುವ ಸಂಶೋಧನ ಗ್ರಂಥದಲ್ಲಿ ಹಾಲಕ್ಕಿ ಒಕ್ಕಲು ಮತ್ತು ಕರೆ ಒಕ್ಕಲರ ಪ್ರಸಾಧನಗಳು ಸೇರ್ಪಡೆಯಾಗಿವೆ. ಈ ಗ್ರಂಥ ಪ್ರಸಾಧನದ ವಿಷಯದಲ್ಲಿ ಕನ್ನಡದಲ್ಲಿ ಬಂದ ಆದ್ಯ ಗ್ರಂಥ ಡಾ। ಆರ್. ಜಿ. ಗುಂದಿಯವರ 'ಉತ್ತರ ಕನ್ನಡ ಜಿಲ್ಲೆಯ ಆಗೇರರು ಒಂದು ಸಾಂಸ್ಕೃತಿ ಅಧ್ಯಯನ' ಎಂಬ ಅಪ್ರಕಟಿತ ಗ್ರಂಥ ಅಂಕೋಲಾ ತಾಲೂಕಿನಲ್ಲಿಯೇ ಹೆಚ್ಚಾಗಿ ನೆಲೆಸಿರುವ ಆಗೇರರ ಸಾಂಸ್ಕೃತಿಕ ಅಧ್ಯಯನವಾಗಿದೆ. ಹಾಲಕ್ಕಿ ಒಕ್ಕಲಿಗರ ಕುರಿತಾಗಿರುವ ಡಾ।ಎಲ್. ಜಿ. ಭಟ್ಟರ ಅಪ್ರಕಟಿತ ಗ್ರಂಥದಲ್ಲಿ ಚಂದಾವರ ಸೀಮೆಯ ಹಾಲಕ್ಕಿಗಳ ಸಂಸ್ಕೃತಿಯ ಕಡೆಗೇ ಹೆಚ್ಚಿನ ಒತ್ತು ಇದ್ದು, ಅಂಕೋಲೆಯ ಹಾಲಕ್ಕಿಗಳ ಪ್ರಸ್ತಾಪ ಕೇವಲ ಪ್ರಾಸಂಗಿಕವಾಗಿದೆ.

ಇಲ್ಲಿಯ ಜಾನಪದರ ಬದುಕಿನಲ್ಲಿ ಅವಿನಾಭಾವಿಯಾಗಿ ಬೆರೆತಿರುವ 'ಜಾನಪದ' ಇಲ್ಲಿ ಸಾಕಷ್ಟು ಸಮೃದ್ಧವಾಗಿದೆ. ಸಮೃದ್ಧಿಯ ಆ ನೆಲೆಯ ಕೆಲವು ನಿಲ್ದಾಣಗಳ ಕಿರುಪರಿಚಯವನ್ನು ಈ ಪುಟ್ಟ ಪ್ರಬಂಧದಲ್ಲಿ ನಿರೂಪಿಸಲಾಗಿದೆ. ಇಲ್ಲಿಯ, ಜಾನಪದ ಸಮೃದ್ಧಿ ಕಳವನ್ನು ಪರಿಚಯಿಸಿದ ಗ್ರಂಥ ಹಾಗೂ ಗ್ರಂಥಕರ್ತರ ಕುರಿತಾಗಿಯೂ ಕೆಲವು ಮಾತು ಹೇಳಿದ್ದಾರೆ. ಈ ವಿಷಯದಲ್ಲಿ ವ್ಯಾಪಕ ಅಧ್ಯಯನ ನಡೆಸಬಯಸುವವರು, ಇನ್ನೂ ಹೆಚ್ಚಿನ ಕ್ಷೇತ್ರಕಾರ್ಯವನ್ನು ಮಾಡಿ, ಸಂಶೋಧನೆ ನಡೆಸಿದಲ್ಲಿ ಈ ನೆಲ ಜಾನಪದ ಲೋಕಕ್ಕೆ ಹೊಸ ದಿಕ್ಕನ್ನು ತೋರಿಸಬಹುದಾಗಿದೆ.

(೨೦೦೬ರಲ್ಲಿ ಪ್ರಕಟಗೊಂಡ 'ಅಂಕೋಲೆ' ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಯಿಂದ)

ಅಂಕೋಲೆಯ ಸಾಹಿತ್ಯ ಸಮೃದ್ಧಿ

– ವಿಷ್ಣು ನಾಯ್ಕ

ಆಧುನಿಕ ಕನ್ನಡ ಸಾಹಿತ್ಯದ ಅಭ್ಯಾಸಿಗಳಿಗೆ ಜಿಲ್ಲಾವಾರು ಅಥವಾ ತಾಲೂಕಾವಾರು ಮಾಹಿತಿಗಳ ಕೊರತೆ ಎದ್ದು ಕಾಣುತ್ತದೆ. ಇತ್ತೀಚಿನ ವರ್ಷಗಳಲ್ಲಿ ಅಲ್ಲಲ್ಲಿ ಜಿಲ್ಲಾವಾರು ಸಾಹಿತ್ಯ ಸಮೀಕ್ಷಾ ಗ್ರಂಥಗಳನ್ನು ಹೊರತರುವ ಪ್ರಯತ್ನ ನಡೆದದ್ದುಂಟು. ಬಹುಶಃ ದಕ್ಷಿಣ ಕನ್ನಡ ಜಿಲ್ಲೆಯಿಂದ ಅಂಥ ಒಂದು ಪ್ರಯತ್ನ ಆರಂಭವಾಯಿತೆನ್ನಬಹುದು. ತಾಲೂಕಾವಾರು ಸಮೀಕ್ಷೆಗಳು ನಡೆದಿರುವುದು ತೀರಾ ಕ್ವಚಿತ. ಆದರೆ ಅದರ ಅಗತ್ಯ ಕೂಡ ಇದೆಯೆಂಬುದನ್ನು ನಾವು ಮನಗಾಣಬೇಕಾದ ಕಾಲ ಈಗ ಬಂದಿದೆ. ಸಾಕ್ಷರತೆಯ ಪ್ರಮಾಣ ಗಣನೀಯವಾಗಿ ಹೆಚ್ಚತೊಡಗಿದೆ. ಅದರಲ್ಲೂ ಇದುವರೆಗೆ ಅಕ್ಷರವಂಚಿತವಾದ ವರ್ಗಗಳಿಂದ ದೊಡ್ಡ ಪ್ರಮಾಣದಲ್ಲಿ ಸುಶಿಕ್ಷಿತರು ಹೊರಬರುತ್ತಿದ್ದಾರೆ. ಆ ವರ್ಗದ ಇತ್ತೀಚಿನ ತಲೆಮಾರು ತಮ್ಮ ನೋವು–ನಲಿವುಗಳಿಗೆ ಅಕ್ಷರದ ಮೂಲಕ ಧ್ವನಿಕೊಡತೊಡಗಿದೆ. ಅವುಗಳಲ್ಲಿ ಬಹಳಷ್ಟು ಸಾಹಿತ್ಯ ಕೃತಿಗಳಾಗಿ ನಿಲ್ಲತೊಡಗಿವೆ. ಹೀಗಾಗಿ ಪ್ರತಿ ತಾಲೂಕಿನಲ್ಲೂ ಸೃಜನಶೀಲ ಬರಹಗಾರರ ಸಂಖ್ಯೆ ಬೆರಗು ಹುಟ್ಟಿಸುವ ರೀತಿಯಲ್ಲಿ ಹೆಚ್ಚತೊಡಗಿದೆ. ಈ ಬೆಳವಣಿಗೆ ತಾಲೂಕಾವಾರು ಸಾಹಿತ್ಯ ಸಮೀಕ್ಷೆಗೂ ಕೂಡ ನಮ್ಮನ್ನು ಒತ್ತಾಯಿಸುವಂತೆ ಮಾಡಿದೆ.

ಚಾರಿತ್ರಿಕವಾದ ಬೇರೆ–ಬೇರೆ ಕಾರಣಗಳಿಗಾಗಿ ನಾಡಿನಲ್ಲೂ, ದೇಶದಲ್ಲೂ ಹೆಸರು ಮಾಡಿದ ತಾಲೂಕು ಅಂಕೋಲೆ. ಗಾಂಧೀಜಿಯವರ ನೇತೃತ್ವ ಈ ದೇಶಕ್ಕೆ ಸಿಕ್ಕಿದ ಮೇಲೆ ಆ ಘನವ್ಯಕ್ತಿತ್ವಕ್ಕೆ ಮಾರು ಹೋಗಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಅರ್ಪಿಸಿಕೊಂಡ ಕೆಲವೇ ಕೆಲವು ಮುಂಚೂಣಿ ನೆಲೆಗಳಲ್ಲಿ ಅಂಕೋಲೆ ಕೂಡ ಒಂದು. ಹಾಗೆಯೇ ರೈತ ಕೂಲಿಕಾರರ ಆರ್ಥಿಕ ಸ್ವಾತಂತ್ರ್ಯಕ್ಕಾಗಿ, ಉಳುವವನೇ ಹೊಲದೊಡೆಯನಾಗಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ನಾಡಿಗೇ ಮೊದಲೆಂಬಂತೆ ಜನಾಭಿಪ್ರಾಯವನ್ನು ರೂಪಿಸಿ ಭೂಸುಧಾರಣಾ ಕಾನೂನಿಗಾಗಿ ಸುದೀರ್ಘಕಾಲ ಜನಾಂದೋಲನವನ್ನು ಸಂಘಟಿಸಿದ ಕೀರ್ತಿ ಕೂಡ ಇದೇ ಅಂಕೋಲೆಗೆ ಸಲ್ಲುತ್ತದೆ.

ಹೀಗೆ ೨೦ನೇ ಶತಮಾನದಲ್ಲಿ ರಾಜಕೀಯ ಮತ್ತು ಸಾಮಾಜಿಕ ನೆಮ್ಮದಿಗಾಗಿ ಜಾಗ್ರತ ಪ್ರಜ್ಞೆಯನ್ನು ಮೆರೆದ ಅಂಕೋಲೆ ಸಾಹಿತ್ಯ, ಕಲೆ, ಶಿಕ್ಷಣ ಮತ್ತಿತರ ಸಾಂಸ್ಕೃತಿಕ ರಂಗಕ್ಕೆ ನೀಡಿದ ಕೊಡುಗೆ ಕೂಡ ಸಾಮಾನ್ಯದ್ದಲ್ಲ. ಪ್ರಸ್ತುತ ನನ್ನ ಪಾಲಿಗೆ ಈಗ ಬಂದದ್ದು ಈ ತಾಲೂಕಿನ ಸಾಹಿತ್ಯ ಸಮೃದ್ಧಿ ಕುರಿತಾದ ಪರಿಚಯ ಮಾಡಿಕೊಡುವ ಕೆಲಸ.

ಯಾವುದೇ ಒಂದು ಪ್ರದೇಶದ ಸಾಧಕರ ಇಲ್ಲವೇ ಪ್ರತಿಭೆಗಳ ಪರಿಚಯ ಮಾಡಿಕೊಡುವವರಿಗೆ ಸಾಮಾನ್ಯವಾಗಿ ಎದುರಾಗಬಹುದಾದ ಆರಂಭದ ಒಂದು ತೊಡಕನ್ನೇ ಇಲ್ಲಿ ನಾನೂ ಎದುರಿಸಬೇಕಾಗಿ ಬಂದಿದೆ. ಅಂಕೋಲೆಯ ಸಾಹಿತ್ಯ ಸಮೃದ್ಧಿ ಕುರಿತು ಬರೆಯುವಾಗ – ಒಬ್ಬ ವ್ಯಕ್ತಿ ಅಂಕೋಲೆಯವ ಎಂದು ಪರಿಗಣಿಸುವುದಕ್ಕೆ ಅನುಸರಿಸಬೇಕಾದ ಮಾನದಂಡ ಯಾವುದು – ಎಂಬುದೇ ಆ ತೊಡಕು. ಆ ಕುರಿತ ಪುಟ್ಟ ಸ್ಪಷ್ಟೀಕರಣವನ್ನು ದಾಖಲಿಸುವುದು ಒಳಿತೆಂದು ಭಾವಿಸಿದ್ದೇನೆ. ಕನ್ನಡ ಸಾಹಿತ್ಯದ ಕಣಜಕ್ಕೆ ಕಾಳು ಸೇರಿಸಿದವರಲ್ಲಿ ಈ ನೆಲದ ಋಣವುಂಡ ಮೂರು ಮಾದರಿಯ ಬರಹಗಾರರಿದ್ದಾರೆ. ಮೊದಲನೆಯದಾಗಿ, ಈ ತಾಲೂಕಿನಲ್ಲೇ ಹುಟ್ಟಿ, ಇಲ್ಲಿಯೇ ಬೆಳೆದು, ಇಲ್ಲಿಯೇ ಬದುಕನ್ನು ಸವೆಸಿ ಸಾಹಿತ್ಯಕೃಷಿ ಮಾಡಿಕೊಂಡಿರುವವರು. ಎರಡನೆಯದಾಗಿ, ಇಲ್ಲೇ ಹುಟ್ಟಿ–ಬೆಳೆದು, ಈ ಭಾಗದ ಜೀವಸತ್ವವನ್ನೂ, ಸಾಂಸ್ಕೃತಿಕ ಸೊಗಡನ್ನೂ ಮೈಗೂಡಿಸಿಕೊಂಡು ಕೇವಲ ಉದ್ಯೋಗಾರ್ಥ ಬೇರೆ–ಬೇರೆ ಪ್ರದೇಶಗಳಲ್ಲಿ ಇದ್ದು ಸಾಹಿತ್ಯ ಕೃಷಿ ಮಾಡಿದವರು. ಮೂರನೆಯದಾಗಿ, ಈ ತಾಲೂಕಿನ ಹೊರಗೆ ಬೇರಾವುದೋ ನೆಲದಲ್ಲಿ ಹುಟ್ಟಿ, ಉದ್ಯೋಗದ ನಿಮಿತ್ತ ಈ ನೆಲಕ್ಕೆ ಬಂದು ಸರಿಸುಮಾರು ಒಂದು ತಲೆಮಾರನ್ನಾದರೂ ಪ್ರಭಾವಿಸುವಷ್ಟು ಕಾಲ ಇಲ್ಲಿದ್ದೇ ಸಾಹಿತ್ಯ ಕೃಷಿ ಮಾಡಿದವರು. ಈ ಲೇಖನದೊಳಗೆ ಈ ಮೂರೂ ಮಾದರಿಯ ಬರಹಗಾರರು ಬರುತ್ತಾರೆ.

ಲಕ್ಷ್ಮಣ ಬಾಬಣಿ ಪೈ

ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಸಮಾನ ಪಾಂಡಿತ್ಯ–ಪರಿಣತಿ ಹೊಂದಿದ್ದ ಲಕ್ಷ್ಮಣ ಬಾಬಣಿ ಪೈ ಅವರ ಸಾಧನೆಯ ಸ್ಮರಣೆಯೊಂದಿಗೆ ನನ್ನ ಈ ಕೆಲಸ ಶುರುವಾಗುತ್ತದೆ. ಇವರ ಕುರಿತು ಕನ್ನಡದ ಹೆಸರಾಂತ ಸಂಶೋಧಕರೂ, ವಿದ್ವಾಂಸರೂ ಆದ ಡಾ। ಶ್ರೀನಿವಾಸ ಹಾವನೂರ ಅವರು ತಮ್ಮ 'ಹೊಸಗನ್ನಡದ ಅರುಣೋದಯ' ಗ್ರಂಥದಲ್ಲಿ ಬರೆದಿರುವುದು ಹೀಗೆ:

'ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯಲ್ಲಿ ಲಕ್ಷ್ಮಣ ಬಾಬಣಿ ಪೈ ಎಂಬ ವಿದ್ವಾಂಸನು ಆಗಿ ಹೋದನು. (೧೮೫೩–೧೯೨೭), ಇಂಗ್ಲೀಷ್ ಶಿಕ್ಷಣವನ್ನು ಪಡೆದವನಾದರೂ ಮನೆತನದ ಪರಂಪರೆಯ ಪ್ರಭಾವದಿಂದಾಗಿ ಸಂಸ್ಕೃತ ಶಾಸ್ತ್ರಗ್ರಂಥವನ್ನು ವ್ಯಾಸಂಗ ಮಾಡಿ, ಅವನು ವೇದ ಉಪನಿಷತ್ತು, ರಾಮಾಯಣ, ಮಹಾಭಾರತಗಳನ್ನು ಅಮೂಲಾಗ್ರವಾಗಿ ಕನ್ನಡಿಸಿದನು. ಮುಮ್ಮಡಿ ಕೃಷ್ಣರಾಜರ ಆಸ್ಥಾನ ವಿದ್ವಾಂಸರಿಂದ ನಡೆದ ಕಾರ್ಯವನ್ನು ಇದು ನೆನಪಿಗೆ ತರುತ್ತದೆ. ಒಬ್ಬನೇ ವ್ಯಕ್ತಿಯು ಹೊರಗಿನ ಪ್ರೇರಣೆ ಯಾವುದೂ ಇಲ್ಲದೇ ಧಾರ್ಮಿಕ ಆಸಕ್ತಿಯಿಂದಲೂ ಕನ್ನಡದ ಮೇಲಿನ ಪ್ರೇಮದಿಂದಲೂ ಇದಕ್ಕೆ ಉದ್ಯುಕ್ತನಾದುದು ಸಾಹಸದ ಮಾತೆನ್ನಬೇಕು. ಲಕ್ಷ್ಮಣ ಬಾಬಣಿ ಪೈ ಭಗವದ್ಗೀತೆಯನ್ನು ಭಾಮಿನೀ ಷಟ್ಪದಿಯಲ್ಲೇ ಪರಿವರ್ತಿಸಿದ್ದಾನೆ. (ಆದಾಗಲೇ ಬೇರೆ ಹಲವರ ಅನುವಾದಗಳು ಸಿದ್ಧವಾಗಿದ್ದುದನ್ನು ನೋಡಿದ್ದೇವೆ.) ಯಕ್ಷಗಾನದಲ್ಲಿಯೂ ಅವನಿಗೆ ಆಸಕ್ತಿ ಇದ್ದಿತು.' (ಪುಟ ೨೮೮ ಮತ್ತು ೨೮೯)

ಡಾ। ಶ್ರೀನಿವಾಸ ಹಾವನೂರ ಅವರು ತಮ್ಮ ಗ್ರಂಥದಲ್ಲಿ ದಾಖಲಿಸಿದ ಹೇಳಿಕೆಯು ಲಕ್ಷ್ಮಣ ಬಾಬಣಿ ಪೈ ಅವರ ಕೃತಿಗಳ ಶೋಧನೆಯ ಬಗ್ಗೆ ನಮ್ಮನ್ನು ವಿಶೇಷವಾಗಿ ಒತ್ತಾಯಿಸುತ್ತದೆ. ಅವರು ಅನುವಾದಿಸಿದ ಋಗ್ವದ, ಯಜುರ್ವೇದ ಗ್ರಂಥಗಳನ್ನು ನಾನು ಓದಿರುವೆ. ಡೆಮಿ ೧/೭ ಅಳತೆಯದಿರಬಹುದಾದ ಆ ಗ್ರಂಥವನ್ನು ನಾನು ಓದಿದ್ದು ೧೯೭೪ರಲ್ಲಿ,– ದಾಂಡೇಲಿಯ ಹೈಸ್ಕೂಲಿನಲ್ಲಿ ಶಿಕ್ಷಕನಾಗಿದ್ದಾಗ, ಹುಬ್ಬಳ್ಳಿಯ ಸಾಹಿತ್ಯ ಭಂಡಾರದ ಮೂರ್ತಿಯವರು ನನಗೆ ಆ ಸಂಪುಟಗಳನ್ನು ಪರಿಚಯಿಸಿದವರು. ಹಾವನೂರ ಅವರು ತಿಳಿಸಿರುವಂತೆ ಲಕ್ಷ್ಮಣ ಬಾಬಣಿ ಪೈ ಅವರು ಕನ್ನಡಿಸಿದ ರಾಮಾಯಣ ಮಹಾಭಾರತವಾಗಲಿ, ಭಾಮಿನಿ ಷಟ್ಪದಿಗೆ ಪರಿವರ್ತಿಸಿದ್ದರೆನ್ನಲಾದ ಭಗವದ್ಗೀತೆಯನ್ನಾಗಲಿ ನಾನು ಕಂಡಿಲ್ಲ; ಹುಡುಕಾಟ ಇದ್ದೇ ಇದೆ. ಇವರ ಅನುವಾದ ಮತ್ತು ಅರ್ಥವಿವರಣೆಗಳನ್ನು ಸವಿದಿರುವ ನನಗೆ ಈ ಮನುಷ್ಯನೊಳಗೆ ಒಬ್ಬ ಪಂಡಿತ ಕವಿ ಇರುವ ಬಗ್ಗೆಯೂ ಅನುಮಾನ ಉಳಿದಿಲ್ಲ. ಈ ವ್ಯಕ್ತಿಯ ಸ್ವತಂತ್ರ ಕೃತಿಗಳೂ ಇದ್ದಿರಬಹುದಾದ ಸಾಧ್ಯತೆಗಳಿವೆ. ಆ ದಿಶೆಯಲ್ಲಿ ಹೆಚ್ಚಿನ ಸಂಶೋಧನೆಯ ಅಗತ್ಯ ಕಾಣುತ್ತದೆ.

ಸ. ಪ. ಗಾಂವಕಾರ

ಉತ್ತರ ಕನ್ನಡ ಜಿಲ್ಲೆಯ ಕವಿಕುಲಪುರೋಹಿತರೆಂಬ ಗೌರವಕ್ಕೆ ಪಾತ್ರರಾಗಿದ್ದ ಕವಿ ಸ. ಪ. ಗಾಂವಕಾರ ಹುಟ್ಟಿನಿಂದ ಕುಮಟಾ ತಾಲೂಕಿನ ತೊರ್ಕೆ ಗ್ರಾಮಕ್ಕೆ ಸೇರಿದವರಾದರೂ ಅಂಕೋಲೆಯನ್ನೇ ತಮ್ಮ ಸಾರ್ವಜನಿಕ ಬದುಕಿನ ಕರ್ಮಭೂಮಿಯಾಗಿ ಆಯ್ಕೆ ಮಾಡಿಕೊಂಡವರು. ಸೇವಾನಿವೃತ್ತಿಯ ನಂತರವೂ ಅಂಕೋಲೆಯಲ್ಲೇ ವಾಸ್ತವ್ಯ ಮಾಡಿದವರು. ಸಂತಪರಂಪರೆಗೆ ಸೇರಿದ ಭಾವುಕ ಕವಿ ಎಂದು ಇವರನ್ನು ಗುರುತಿಸಲಾಗುತ್ತಿದೆ. ಇವರ ಪ್ರಕಟಿತ ಮೂರು ಸ್ವತಂತ್ರ ಕೃತಿಗಳು ನನ್ನ ಈ ಅಭಿಪ್ರಾಯವನ್ನು ಬೆಂಬಲಿಸುವಂತಿವೆ. 'ಮುಗಿಲು' (೧೯೩೩) ಇವರ ಪ್ರಥಮ ಸ್ವತಂತ್ರ ಕವನ ಸಂಕಲನ. ೧೯೬೯ ರಲ್ಲಿ ಪ್ರೊ. ಜಿ. ಎಚ್. ನಾಯಕ ಅವರು ಡಾ। ಸದಾನಂದ ನಾಯಕ, ಡಿ. ಎನ್. ರಾಯ್ಕರ, ವಿ. ಜೆ. ನಾಯಕ, ದೇವನೂರ ಮಹಾದೇವ, ಸು. ರಮಾಕಾಂತ ಮುಂತಾದವರ ಸಹಕಾರ ಪಡೆದು ಪಿ.ಎಸ್. ಗಾಂವಕಾರ ಅವರ ಹೆಸರಿನಲ್ಲಿ ಪ್ರಕಟಿಸಿದ 'ಪ್ರಕೃತಿ – ಪ್ರೀತಿ' ಮತ್ತು 'ಪ್ರೇರಣೆ ಶೋಧನೆ' ಎಂಬ ಸಂಕಲನಗಳು ಗಾಂವಕಾರರ ಜೀವನ ಮತ್ತು ಕಾವ್ಯಜೀವನಗಳೆರಡರ ಮೇಲೂ ಬೆಳಕುಚೆಲ್ಲುವ ಅನೇಕ ಕವಿತೆಗಳನ್ನು ಒಳಗೊಂಡವುಗಳಾಗಿವೆ. ಈ ಸಂಕಲನಗಳ ಹೊರತಾಗಿ ಕವಿ ರವೀಂದ್ರರ 'ಗೀತಾಂಜಲಿ'ಯನ್ನು ಗಾಂವಕಾರರು ಅನನ್ಯ ಎಂಬ ರೀತಿಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದು ಒಂದು ಮಹತ್ವದ ಕಾರ್ಯವೆಂದೇ ನಾನು ನಂಬಿದ್ದೇನೆ. ಬಂಗಾಲಿಮೂಲದ 'ಗೀತಾಂಜಲಿ'ಯ ಆಶಯಕ್ಕೆ ತನ್ನ ಈ ಅನುವಾದಿತ ಕೃತಿ ಕಿಂಚಿತ್ತೂ ಹೊರತಾಗಿರಬಾರದು

ಎಂಬ ಕಳಕಳಿಯಿಂದ ಅವರು ಆಂಗ್ಲ ಭಾಷೆಯ 'ಗೀತಾಂಜಲಿ' ತಮ್ಮ ಬಳಿ ಇದ್ದರೂ ಅದನ್ನು ಅವಲಂಬಿಸದೆ ಬಂಗಾಲಿಯನ್ನು ಕಲಿತು, ಮೂಲದ ಕೃತಿಯೊಂದಿಗೆ ತಮ್ಮ ಅನುವಾದಿತ ಕವನಗಳ ಭಾವವನ್ನು ತಾಳೆಹಾಕಿ ನೋಡಿದ್ದರೆಂಬ ಸಂಗತಿ ನಂಬುವುದಕ್ಕೆ ಸಾಧ್ಯವಿಲ್ಲವೆನಿಸಿದರೂ, ಸತ್ಯ ಸಂಗತಿಯಾಗಿದೆ ಮತ್ತು ಸಾಹಿತ್ಯಾನುವಾದದಲ್ಲಿ ಆಸಕ್ತಿ ತಳೆದಿರುವವರಿಗೆಲ್ಲ ಆದರ್ಶದ ನಡುವಳಿಕೆಯೂ ಆಗಿದೆ.

ಗಾಂವಕಾರರು ಪ್ರಚಾರಪ್ರಿಯರಾಗಿರಲಿಲ್ಲ. ಅವರ ಕವಿತೆಗಳನ್ನು ಓದಿ ಮೆಚ್ಚಿ, ಹಾಡಿ ಹೋಗಳುವಂಥ ಸಾಹಿತ್ಯಾಭಿಮಾನಿ ಗೆಳೆಯರ ಗುಂಪೂ ಅವರ ಸುತ್ತ ಇರಲಿಲ್ಲ. ಬಹುಶಃ ಆ ಕಾರಣದಿಂದಾಗಿಯೇ 'ಮುಗಿಲು' ಪ್ರಕಟವಾದ ಮೇಲೆ ಅವರು ಬರೆದ ನೂರಾರು ಕವನಗಳು ಪುಸ್ತಕ ರೂಪದಲ್ಲಿ ಹೊರಬರದೆ ಉಳಿದುಕೊಂಡಿದ್ದವೆಂದು ತೋರುತ್ತದೆ. ಸ್ವ ಆನಂದಕ್ಕಾಗಿ ಬರೆದು ಹಾಡಿ, ಅಷ್ಟಕ್ಕೇ ತೃಪ್ತಿ ಪಡುವ ಇವರ ಸ್ವಭಾವಗುಣವೂ ಇನ್ನೊಂದು ಕಾರಣವಾಗಿರಬಹುದು. ಯಾಕೆ ಈ ಮಾತನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆಂದರೆ ಗಾಂವಕಾರರು ಬರೆದ ಕವಿತೆಗಳು ನವೋದಯದ ಆರಂಭದ ಕವಿಗಳ ಕವಿತೆಗಳ ಜೊತೆಗೆ ನಿಲ್ಲಬಲ್ಲಂಥವುಗಳು. ಆದರೆ ಕ್ಲುಪ್ತ ಸಮಯದಲ್ಲಿ ಸಂಕಲನರೂಪ ಕಾಣದೇ ಇದ್ದುದರಿಂದಲೋ ಏನೋ ಕವಿತೆಯ ಗುಣದೋಷಗಳಿಗೆ ಸಂಬಂಧಿಸಿದಂತೆ ಆಯಾ ಕಾಲದಲ್ಲಿ ಚರ್ಚೆಗೆ ಒಳಪಡದೆ ಉಳಿದು ಬಿಟ್ಟಿತು. ನನ್ನ ಈ ಅನಿಸಿಕೆ ೧೯೬೯ ರಷ್ಟು ಹಿಂದೆ ಪ್ರೊ. ಜಿ. ಎಚ್. ನಾಯಕ ಅವರು ಇವರ ಕವನ ಕುರಿತು ವ್ಯಕ್ತ ಪಡಿಸಿದ ಅಭಿಪ್ರಾಯದ ಮುಂದುವರಿಕೆಯಾಗಿದೆ, ಅಷ್ಟೆ. 'ಇಲ್ಲಿನ ಕವನಗಳು ಆಯಾ ಕಾಲದಲ್ಲಿಯೇ ಪ್ರಕಟವಾಗಿದ್ದುದಾದರೆ ಆ ಕಾಲದ ಮಹಿಮೆಯಿಂದ ಸಮಕಾಲೀನ ಹವಾಮಾನದಲ್ಲಿನ ಕಾವಿನಿಂದ ಸಹೃದಯರನ್ನು ಇನ್ನಷ್ಟು ಮುದಗೊಳಿಸಬಹುದಿತ್ತು' ಎಂಬುದು ಜಿ. ಎಚ್. ನಾಯಕರ ಅಭಿಪ್ರಾಯವಾಗಿದೆ. ('ಪ್ರೇರಣೆ ಶೋಧನೆ' ಸಂಕಲನದ ಮೊದಲ ಮಾತಿನಲ್ಲಿ)

ಸ. ಪ. ಗಾಂವಕಾರರ ಪ್ರಕೃತಿ ಪ್ರೀತಿ ಅಸಾಮಾನ್ಯವಾದುದು. 'ಸಸ್ಯಶ್ಯಾಮಲೆಯ ಸೊಬಗು', 'ಪ್ರಭಾತರವಿ', 'ಅಮರಸಂಗೀತ', 'ವನಪುಷ್ಪ', 'ಆನಂದವೇ ಆನಂದವಿದೊ'ದಂಥ ಅನೇಕ ಕವನಗಳನ್ನು ಇಲ್ಲಿ ಉದಾಹರಿಸಬಹುದು. ಸಸ್ಯಶ್ಯಾಮಲೆಯ ಸೊಬಗನ್ನು ಬಣ್ಣಿಸುತ್ತ,

'ದೇವನನು ನಾ ಕಾಣೆ ದೇವನೆಲ್ಲಿಹನೊ
ದೇವಿಸನಿಹದೊಳಿರಲು ದೇವ ದೂರಿಲ್ಲ'

ಎಂದು ಉದ್ಗರಿಸಿದ ಕವಿ ಈತ. 'ಅಜ್ಞಾತ ಹಕ್ಕಿಯ ಸಿಳ್ಳು' ನೂರ್ಕಾಲ ನೆನಪಿನಲ್ಲಿರುವಂಥ ಇವರ ಒಂದು ಉತ್ತಮ ಕವನ. ಬೆಳಗಾಗೆದ್ದು ಅಜ್ಞಾತ ಹಕ್ಕಿಯ ಸಿಳ್ಳೊಂದನ್ನು ಕೇಳಿದ ಕವಿ, ಆ ಸಿಳ್ಳಿನ ಮೂಲವನ್ನು ಹುಡುಕಾಡುತ್ತ ಕೊನೆಯಲ್ಲಿ ನೀಡುವ ಸಂದೇಶ ಅವರ ಜನಪರವಾದ – ಬಡವರ ಪರವಾದ ನಿಲುವು ಮತ್ತು ಕಳಕಳಿಗಳ ಪ್ರತೀಕದಂತಿದೆ.

'ಹೊಡೆ ಸಿಳ್ಳನು ಹೊಡೆ ಹೊಡೆ ಸಿಳ್ಳನ್ನು ಹೊಡೆ
ಬಡವರ ಒಡಲಿನ ಹಸಿವೆಯ ಸಿಳ್ಳು
ಗುಡುಗಲಿ, ಗುಡುಗುಡಿಸಲಿನ ಸಿಳ್ಳು
ಕಡಲಿನ ಕಾರ್ಗಾಲದ ಕೊನೆಸಿಳ್ಳು
ಘರ್ಷಣೆಯಿಲ್ಲದ ಸಂಸಾರ
ಖಾಸಿಗೂ ಬೇಡದ ನಿಸ್ಸಾರ'

– ಸಂಘರ್ಷಮಯ ಬದುಕು ಈ ಅಸಮಾನತೆಯ ನೆಲದಲ್ಲಿ ಅನಿವಾರ್ಯ ಎಂಬುದನ್ನು ಒಂದು ರೀತಿಯ ಕ್ರಾಂತಿಗೀತೆಯೋಪಾದಿಯಲ್ಲಿ ಈ ಕವನದೊಳಗೆ ಕಡೆದಿಟ್ಟಿದ್ದಾರೆ. ೧೯೪೧ರ ಡಿಸೆಂಬರ ೧೪ ರಂದು 'ಅಂಕೋಲೆಯ ವಾಸ' ಎಂಬ ಶೀರ್ಷಿಕೆಯ ಒಂದು ಕವನವನ್ನು ಇವರು ಬರೆದಿದ್ದಾರೆ. ಅದು 'ಪ್ರೇರಣೆ ಶೋಧನೆ' ಎಂಬ ಸಂಕಲನದಲ್ಲೂ ಸೇರ್ಪಡೆಯಾಗಿದೆ. ಸೂಕ್ತವಾಗಿ ಆ ಕವನವನ್ನು ಗ್ರಹಿಸಿದವರಿಗೆ ಅಂಕೋಲೆಯ ಇವರ ವಾಸದ ಕುರಿತು ಹೊರಗಿನ ಮತ್ತು ಒಳಗಿನ ಪ್ರತಿಕ್ರಿಯೆಗಳೇನಿದ್ದಿರಬಹುದು ಎಂಬುದರ ಸುಳಿವು ಸಿಗುತ್ತದೆ. ಆ ಕವನದಲ್ಲಿರುವ ಈ ಸಾಲುಗಳನ್ನು ಗಮನಿಸಿ,

'ಎಲ್ಲಿ ಕೇಳಿದರಲ್ಲಿ ಚಿಲ್ಲರೆಯ ಮನೆಮಾತು
ಗುಲ್ಲುಗೈದಿದೆ ಕಾಣೋ ಗೃಹಛಿದ್ರವೆಸಗಿ
ಒಳ್ಳೆಯವ ನಾನಾಗೆ ಒಳಿತೈ ಜಗವೆಲ್ಲ
ಮುಳ್ಳುಮೊನೆ ಮಾತೆಲ್ಲಿ, ಒಳ್ಳೆತನವೆಲ್ಲಿ?
ಎಲ್ಲಿಯಿದ್ದರೆಯೇನು ಎಲ್ಲವೂ ನನ್ನದೈ
ಗುಲ್ಲು ಹಾಕದೆ ಗೈಯು ಗೃಹಕಾರ್ಯವೆಂದು'

ಒಳ–ಹೊರಗಿನ ಚಿಲ್ಲರೆಯ ಮಾತುಗಳಿಗೆ ಪ್ರತಿಕ್ರಿಯಿಸಿದ ಕವಿಮನಸು ತನಗೆತಾನೇ ಸಾಂತ್ವನ ಹೇಳಿಕೊಂಡು ಸಾತ್ವಿಕಪಥ ಕಂಡುಕೊಳ್ಳುವ, ತೋರಿಸುವ ಇಲ್ಲಿಯ ನಿಲುವು ಆದರ್ಶದ್ದಾಗಿದೆ.

ಡೆಂಗಾ ದೇವಾ ನಾಯಕ

ವಯಸ್ಸಿನಲ್ಲಿ ಸ. ಪ. ಗಾಂವಕಾರರಿಗಿಂತ ಐದು ವರ್ಷಗಳಷ್ಟು ಹಿರಿಯರಾಗಿದ್ದ ಡೆಂಗಾ ದೇವಾ ನಾಯಕ (ಡೆಂಗಾ ಮಾಸ್ತರ) ನವೋದಯ ಕಾಲದ ಅಂಕೋಲೆಯ ಇನ್ನೋರ್ವ ಬರಹಗಾರರು (ಕಾಲ ೧೮೮೧–೧೯೬೭), ಕಾವ್ಯ ಮತ್ತು ನಾಟಕಗಳು ಇವರ ಅಭಿವ್ಯಕ್ತಿಯ ಮುಖ್ಯ ಮಾಧ್ಯಮ, ಅಸ್ಪೃಶ್ಯತಾ ನಿವಾರಣಾ ಎಂಬ ಒಂದು ನಾಟಕವನ್ನು ೧೯೪೧ರ ವೇಳೆಗೆ ಬರೆದು ತುಸು ತಡವಾಗಿ ಪ್ರಕಟಿಸಿದ್ದಾಗಿ ಹೇಳಿಕೊಂಡಿದ್ದಾರೆ.

ಮಹಾತ್ಮಾಗಾಂಧಿ ಹರಿಜನೋದ್ಧಾರದ ಬಗ್ಗೆ ಕರೆ ನೀಡಿದ್ದು, ಅಸ್ಪೃಶ್ಯತೆ ನಿವಾರಣೆ ಕುರಿತಾದ ಜನಾಂದೋಲನಕ್ಕೆ ಪ್ರೇರಣೆ ನೀಡಿತೆಂದೂ, ತಾನೂ ಕೂಡ ತಮ್ಮ ಈ ಅಸ್ಪೃಶ್ಯತಾ ನಿವಾರಣಾ ನಾಟಕವನ್ನು ಗಾಂಧೀಜಿಯವರ ಕರೆಯ ಪ್ರೇರಣೆಯಿಂದಾಗಿಯೇ ಬರೆದೆನೆಂದೂ ಹೇಳಿಕೊಂಡಿದ್ದಾರೆ. ಆ ಕಾಲಮಾನಕ್ಕೆ ಹೋಲಿಸಿದಲ್ಲಿ ಅವರು ನಾಟಕದ ಬರವಣಿಗೆಯಲ್ಲಿ ಅನುಸರಿಸಿದ ತಂತ್ರ ಕೂಡ ತುಂಬ ಹೊಸತನದಿಂದ ಕೂಡಿದ್ದಾಗಿದೆ.

ಗಾಂಧೀಜಿಯವರ ಕರೆಯಮೇರೆಗೆ ಅಸ್ಪೃಶ್ಯತೆಯ ಕುರಿತು ಜನಸಾಮಾನ್ಯರಿಗೆ ತಿಳಿವಳಿಕೆ ಮಾಡಿಕೊಡುವುದಕ್ಕಾಗಿ ರತ್ನ ಮತ್ತು ಪ್ರೇಮ ಎಂಬ ಸ್ವಯಂಸೇವಕಿಯರು (ಹೆಸರುಗಳೂ ಕೂಡ ಧ್ವನಿಪೂರ್ಣವಾಗಿವೆ) ಅಂಕೋಲೆಯಿಂದ ಗೋಕರ್ಣ ಮಾರ್ಗವಾಗಿ ಇಡೀ ಉತ್ತರ ಜಿಲ್ಲೆಯನ್ನು ಸುತ್ತುವ ಸಂದರ್ಭದಲ್ಲಿ ಪಡೆದ ಸಾಮಾಜಿಕ ಅಸಮಾನತೆಯ ಅನುಭವ ಈ ನಾಟಕದಲ್ಲಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಆನಂತರ ಅವರು ನೆರೆಯ ಜಿಲ್ಲೆಯ ಸಿರಹಟ್ಟಿಯ ಕಡೆಗೂ ಹೊರಡುತ್ತಾರೆ. ಮೇಲ್ವರ್ಗದವರು ದಲಿತ–ಶೂದ್ರವರ್ಗದವರೊಂದಿಗೆ ವ್ಯವಹರಿಸುವಾಗ ಅನುಸರಿಸುವ ಮಡಿಮೈಲಿಗೆಯ ಭಾವನೆ ಈ ನಾಟಕದಲ್ಲಿ ಪ್ರಮುಖ ಚರ್ಚೆಯ ವಸ್ತುವಾಗುತ್ತದೆ. ಹಲವು ಕಟುಅನುಭವಗಳೂ ಕೂಡ ಚರ್ಚೆಗೆ ಒಳಗಾಗುತ್ತವೆ. ವಿಶೇಷವಾಗಿ ದೇವಸ್ಥಾನಗಳಲ್ಲಿ ಹೊಟೇಲುಗಳಲ್ಲಿ ದಲಿತವರ್ಗವನ್ನು ಮೇಲ್ವರ್ಗದ ಜನ 'ಕೊಂಬು ಬಾಲಗಳಿಲ್ಲದ ದ್ವಿಪಾದ ಪಶುಗಳಂತೆ' (ಇದು ನಾಟಕದೊಳಗೇ ಬರುವ ಮಾತು) ನಡೆಸಿಕೊಳ್ಳುವುದನ್ನು ಕಂಡಾಗ, ಇದಕ್ಕೆ ಪರಿಹಾರದ ದಾರಿಯನ್ನು ಕಂಡುಹಿಡಿಯಲೇಬೇಕೆಂದು ದಿನದಿಂದ ದಿನಕ್ಕೆ ಮನಸ್ಸನ್ನು ಗಟ್ಟಿಮಾಡಿಕೊಳ್ಳುತ್ತ ಸಾಗುವ ಪರಿ ಒಂದು ಸಹಜ ಬೆಳವಣಿಗೆಯೆಂಬಂತೆ ಕಾಣುತ್ತದೆ. ನಾಟಕವು ಕೊನೆಗೊಳ್ಳುವ ಪರಿ ಕೂಡ ತರ್ಕಬದ್ಧವಾಗಿದೆ. ರತ್ನ ಮತ್ತು ಪ್ರೇಮ ಸಿದ್ದಾಪುರದ ಕಡೆ ಹೊರಟಾಗ, ಅಲ್ಲಿಯ ಹೊಸೂರು ರಾಮ ನಾಯಕ ಎಂಬುವರ ಪರಿಚಯವಾಗುತ್ತದೆ. ಸಮಾನ ಉದ್ದೇಶದ ಈ ತಂಡ ಗಾಂಧಿವಾದಿಯೊಬ್ಬರನ್ನು ಸಂಪರ್ಕಿಸಿ, ಹರಿಜನರನ್ನು ಮೈಲಿಗೆಯ ಜನರಂತೆ ಕಾಣುವ ಮನೋವೃತ್ತಿಯ ಬಗ್ಗೆ ತೋಡಿಕೊಳ್ಳುತ್ತದೆ. ಆ ಗಾಂಧಿವಾದಿ ಶಿರಹಟ್ಟಿಯಲ್ಲಿ ಸೇವೆ ಸಲ್ಲಿಸುತ್ತಿರುವ ಮಾಸ್ತರರೊಬ್ಬರ ಹೆಸರು ಹೇಳಿ, ಅವರಿಂದ ಸಲಹೆಯ ಪಡೆದು, ನಿಮ್ಮ ಅಸ್ಪೃಶ್ಯತಾ ನಿವಾರಣಾ ಕಾರ್ಯಯೋಜನೆ ರೂಪಿಸಿಕೊಳ್ಳಿ ಎನ್ನುತ್ತಾರೆ. ಆ ಸಲಹೆ ಎಳೆ ಹಿಡಿದು ಶಿರಹಟ್ಟಿಗೆ ಹೊರಟ ಸ್ವಯಂ ಸೇವಕರು ಅಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟದ ನಿರ್ದಿಷ್ಟವೂ, ನಿರ್ದುಷ್ಟವೂ ಆದ ಕಾರ್ಯ ಯೋಜನೆಯನ್ನು ರೂಪಿಸುವಲ್ಲಿಗೆ ನಾಟಕ ಕೊನೆಗೊಳ್ಳುತ್ತದೆ. ನಾಟಕದ ನಡು–ನಡುವೆ ಅನೇಕ ದೇಶಿಯ ನುಡಿಗಟ್ಟುಗಳು ಎದುರಾಗುವುದರಿಂದ ಕೃತಿಗೆ ಇನ್ನಷ್ಟು ತೂಕ ಬಂದಂತಾಗಿದೆ.

'ನಾಮಧಾರಿ ಜಾತಿ ಪೌರಾಣಿಕ ಚರಿತ್ರೆ' ಇದು ಡೆಂಗಾಮಾಸ್ತರರು ಭೋಗ ಷಟ್ಪದಿ ಛಂದಸ್ಸನ್ನು ಬಳಸಿ ಬರೆದಿರುವ ೨೦ ಪುಟಗಳ ಪುಸ್ತಿಕೆಯಾಗಿದೆ. ವಿಜಯನಗರದ ಅರಸರ ಆಡಳಿತಾವಧಿಯಲ್ಲಿ ಸೇನಾತುಕಡಿಗಳ ನಾಯಕರಾಗಿ ಸೇವೆಸಲ್ಲಿಸುತ್ತಿದ್ದ ಹಳೇಪೈಕರು, ನಾಮಧಾರಿಗಳೆಂಬ ಹೆಸರು ಪಡೆದದ್ದು ಹೇಗೆ ಎಂಬ ಕುರಿತಾದ ಪರಿಚಯ ಈ ಪುಸ್ತಕದಲ್ಲಿದೆ. ಒಂದು ರೀತಿಯ ದಂತಕಥೆಯ ಮಾದರಿಯಲ್ಲಿ ಹೆಣೆಯಲ್ಪಟ್ಟ ಈ ಕಥಾನಕದ ಚಾರಿತ್ರಿಕ ಸತ್ಯಾಸತ್ಯತೆಯ ಬಗೆಗಿನ ಅಭಿಪ್ರಾಯ ಏನೇ ಇರಲಿ ಭೋಗ ಷಟ್ಪದಿಯ ೭೬ ನುಡಿಗಳನ್ನೊಳಗೊಂಡ ಈ ಕೃತಿ ಚೆನ್ನಾಗಿ ಓದಿಸಿಕೊಳ್ಳುವದಂತೂ ನಿಜ. ಕಸುಬುಗಳನ್ನು ಆಧರಿಸಿ ಕುಲ ಹೇಗೆ ನಿರ್ಮಾಣವಾದವು ಎಂಬುದನ್ನು ತಿಳಿಸುವ – ಸತ್ಯಕ್ಕೆ ಹತ್ತಿರವಾದ ಒಂದು ನುಡಿಯನ್ನೂ ಈ ಕತೆ ಒಳಗೊಂಡಿದೆ.

'ಕೆಲವು ಜನರು ಹಣದ ಕೆಲಸ
ಹಲವು ಜನರು ಕೃಷಿಯ ಕೆಲಸ

ಬಲುಮೆ ಜನರು ಸೇನೆ ಕೆಲಸದಲ್ಲಿ ನಿರತರು
ಕೆಲರು ಮತ್ತೆ ರಾಜಸೇವೆ
ಕೆಲವು ಜನರು ಬೇಟೆಯಾಟ
ಕೆಲವು ಜನರು ಮದ್ದಿನಲ್ಲಿ ಬುದ್ಧಿತೋರ್ವರು.'

'ಶಿರಹಟ್ಟಿಯ ಶ್ರೀ ಫಕೀರಸ್ವಾಮಿ ಮಹಾತ್ಮೆ', ಡೆಂಗಾ ಮಾಸ್ತರರು ಬರೆದ ಇನ್ನೊಂದು ಕಥನಕವನದ ಪುಸ್ತಿಕೆಯಾಗಿದೆ. ಸ್ವತಃ ಶಿರಹಟ್ಟಿಯಲ್ಲಿ ಇವರು ಮುಖ್ಯಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಬಹುಶಃ ಅಲ್ಲಿದ್ದಾಗ ಫಕೀರಸ್ವಾಮಿ ಮಠದ ಸಂಪರ್ಕ ಪ್ರಭಾವದಿಂದಾಗಿ ಈ ಕೃತಿ ಹೊರಬಂದಿರಬಹುದು. ಈ ಪುಸ್ತಿಕೆ ೮೩ ನುಡಿಗಳನ್ನು ಹೊಂದಿದೆ.

'ಶ್ರೀ ತಿರುಪತಿ ವೆಂಕಟ್ರಮಣ ಮಹಾತ್ಮೆ' ಈ ಕವಿ ಬರೆದ ಇನ್ನೊಂದು ಭಕ್ತಿಗೀತಗಳ ಸಂಕಲನ. ಇದರಲ್ಲಿ ೨೨೦ ನುಡಿಗಳಿವೆ. ಇವುಗಳ ಹೊರತಾಗಿ ಪ್ರಕಟವಾಗದೆ ಉಳಿದಿರುವ ಇನ್ನೂ ಕೆಲವು ಬಿಡಿಗವನಗಳೂ ಇವೆ.

ವಿ. ವೆ. ತೊರ್ಕೆ

ವಿ. ವೆ. ತೊರ್ಕೆ ಹೆಚ್ಚಕಡಿಮೆ ಸ. ಪ. ಗಾಂವಕಾರರ ಜೊತೆ–ಜೊತೆಯಲ್ಲಿಯೇ ಕವಿತೆ ಬರೆಯಲು ಆರಂಭ ಮಾಡಿದವರು. ಅವರ ಮೊದಲನೆಯ ಕವನ ಸಂಕಲನದ ಹೆಸರು 'ಕವಿತಾ ಕಲಾಪ', 'ಚಂದಿರಾನಂದ' ಎಂಬ ಕಾವ್ಯನಾಮದೊಂದಿಗೆ ಅದನ್ನವರು ೧೯೨೯ ರಲ್ಲಿ ಪ್ರಕಟಿಸಿದ್ದಾರೆ. ಆ ಸಂಕಲನಕ್ಕೆ ಮುನ್ನುಡಿಯನ್ನೂ ತಾವೇ (ಭಾಮಿನಿ ಷಟ್ಪದಿಯಲ್ಲಿ) ಬರೆದಿದ್ದಾರೆ. ಆ ನುಡಿ ಇಂತಿದೆ:

'ಪೂರ್ವ ಕವಿಗಳ ಕೃತಿಯ ನೋಡುತೆ
ಸಾವಧಾನದೊಳಿದನು ಬರೆದನು
ಕೋವಿದರೆ ಕುಂದುಗಳನೀಕ್ಷಿಸುತನ್ನ ನಿಂದಿಸದೆ
ನೀವು ಹಂಸಕ್ಷೀರ ನ್ಯಾಯವ
ಭಾವಿಸುತಲೀ ಕೃತಿಯ ಕೊಳ್ವುದು
ಗಾವಿಲನು ನಾನಿರಲು ಕವಿಗಳೆ! ಪೇಳ್ವುದಿನ್ನೇನು'

'ಕವಿತಾ ಕಲಾಪ'ದ ನಂತರ ಬಂದ ಸಂಕಲನ 'ನೀರಮುಳಕ', ೧೯೪೦ ರಲ್ಲಿ ಪ್ರಕಟವಾದ ಈ ಸಂಕಲನಕ್ಕೆ ಶಿವರಾಮ ಕಾರಂತರ ಪುಟ್ಟ ಮುನ್ನುಡಿಯಿದೆ. ಈ ಸಂಕಲನದ ಅರಿಕೆಯಲ್ಲಿ ವಿ. ವೆ. ತೊರ್ಕೆ ಅವರು ತನ್ನನ್ನು 'ಕನ್ನಡಿಗರಡಿಯಾಳು' ಎಂದು ವಿನಯದಿಂದ ಪರಿಚಯಿಸಿಕೊಂಡಿದ್ದಾರೆ. ಮುಂದೆ ೧೯೫೪ ರಲ್ಲಿ 'ಸುಮಾಂಜಲಿ' ಎಂಬ ಕವನ ಸಂಕಲನ ಬಂತು. ಅದಕ್ಕೆ ವಿ. ಸೀತಾರಾಮಯ್ಯನವರ ಮುನ್ನುಡಿ. ಇದನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ, ತೊರ್ಕೆಯವರಿಗೆ ಅವರ ಬರವಣಿಗೆಯ ದಿನಗಳಲ್ಲಿ ಕನ್ನಡದಲ್ಲಿ ಸಾಹಿತ್ಯ ದಿಗ್ಗಜರೆಂಬವರ ಸಹವಾಸಸುಖ ಕೂಡ ಲಭಿಸಿತ್ತು ಎಂಬುದನ್ನು ತಿಳಿಸುವದಕ್ಕಾಗಿ.

೧೯೩೩ರಲ್ಲಿ ತೊರ್ಕೆಯವರು ಪ್ರಕಟಿಸಿದ 'ಹಳ್ಳಿಯ ಹಾಡುಗಳು' ಎಂಬ ಜನಪದ ಹಾಡುಗಳ ಸಂಕಲನವು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಬಹಳ ಮಹತ್ವದ ಕೃತಿಯಾಗಿದೆ. 'ಹಲಸಂಗಿ ಸಹೋದರರು ತಮ್ಮ ಗರತಿಯರ ಹಾಡುಗಳ ಸಂಗ್ರಹವನ್ನು ಪ್ರಕಟಿಸಿದ್ದು ಬಿಟ್ಟರೆ ಆ ಅವಧಿಯೊಳಗೆ ಇಡೀ ನಾಡಿನಲ್ಲಿ ಜನಪದ ಕ್ಷೇತ್ರಕಾರ್ಯ ನಡೆಸಿದ ದೊಡ್ಡ ಕೀರ್ತಿ ವಿ. ವೆ. ತೊರ್ಕೆಯವರಿಗೆ ಸಲ್ಲುತ್ತದೆ. ಈ ಹಳ್ಳಿಯ ಹಾಡು ಸಂಕಲನದಲ್ಲಿ ೧೫೦ ತ್ರಿಪದಿಗಳಿದ್ದು, ಪ್ರತಿಯೊಂದು ತ್ರಿಪದಿಗಳು ತಮ್ಮಷ್ಟಕ್ಕೆ ತಾವೇ ಮಹತ್ವದ್ದೆನಿಸಿವೆ. ಇದೊಂದು ಅಪರೂಪದ ದಾಖಲೆಯಾಗಿ ಜಾನಪದ ಕ್ಷೇತ್ರದ ಸಂಶೋಧಕರನ್ನು ಸೆಳೆದುಕೊಂಡಿರುವುದು ಮಹತ್ವದ ಘಟನೆ.

ವಿ. ವೆ. ತೊರ್ಕೆಯವರ ಕುರಿತು ೧೮–೭–೧೯೯೨ರಲ್ಲಿ ನಾನೊಂದು ಲೇಖನವನ್ನು ಬರೆದು (ಮುಂಗಾರು ದೈನಿಕದ 'ನೆನಹು' ಅಂಕಣದಲ್ಲಿ) ಈತ ದೊಡ್ಡ ಮನಸ್ಸಿನ ಧೀರಕವಿ ಎಂದು ಕರೆದಿದ್ದೆ ಮತ್ತು ಅವರ ಶತಮಾನೋತ್ಸವವನ್ನು ಆಚರಿಸುವುದಕ್ಕೆ ಅವರ ಕುಟುಂಬವರ್ಗ ಮತ್ತು ಅಭಿಮಾನಿಬಳಗ ಮುಂದಾಗಬೇಕು ಎಂದೂ ತಿಳಿಸಿದ್ದೆ. ಮುಂದೆ ಅಂಥ ಶತಮಾನೋತ್ಸವ ಕಾರ್ಯಕ್ರಮವೊಂದು ನಡೆದು ನನ್ನ ಸಂಪಾದಕತ್ವದಲ್ಲೇ ವಿ. ವೆ. ತೊರ್ಕೆ ಸಮಗ್ರ ಕಾವ್ಯ ಸಂಪುಟವೊಂದು ಹೊರಬಂತು. ಅದರಲ್ಲಿ ಇದುವರೆಗೆ ನಾನು ಹೇಳಿದ ಎಲ್ಲ ಕವನ ಸಂಕಲನಗಳೂ ಸೇರ್ಪಡೆಯಾಗಿದ್ದು ಈಗಲೂ ಆ ಗ್ರಂಥ ಓದುಗರಿಗೆ ಲಭ್ಯವಿದೆ.

'ಭಂಗಿ' 'ಕುಲಮೇಂ' 'ವಿಧವೆಯ ಬಾಳಗೋಳು' ಇವರ ಪ್ರಗತಿಪರ ನಿಲುವಿಗೆ ನಿದರ್ಶನವಾಗಬಲ್ಲ ಉತ್ತಮ ಕವನಗಳು.

ಉದಾಹರಣೆಗೆ,

ಮುಳ್ಳಿನ ಗಿಡದಲಿ ಚೆಲ್ವ ಗುಲಾಬಿಯು
ಅರಳಿದೆ– ಮೋಹವ ಸೂಸುತಿದೆ

ಕೆಸರಿನ ಕೊಳದಲಿ ಕೋಮಲ ಕಮಲಿನಿ
ನಗುತಿದೆ–ಕವಿಗಳ ಕರೆಯುತಿದೆ

ಎಂಬಲ್ಲಿಂದ ಬೆಳೆಯುವ ಆ ಕವಿತೆ,

'ರಾಮಾಯಣ ಕೃತಿಕಾರನು ಯಾರೈ?
ಕನಕನ ಹೆಸರಿಗೆ ಕುಂದುಂಟೇ? – ಎಂಬ ಪ್ರಶ್ನೆಯನ್ನೂ ಎತ್ತುತ್ತದೆ. ಹೀಗೆ ಪ್ರಗತಿಪರ ವಿಚಾರಧಾರೆಯ ಹಲವು ಕವನಗಳ ಮೂಲಕ ಸುಧಾರಣಾವಾದಿ ಕವಿಗಳಲ್ಲಿ ತಾವೂ ಒಬ್ಬರೆಂದು ಗುರುತಿಸಿಕೊಂಡ ವಿ. ವೆ. ತೊರ್ಕೆ, ಸ. ಪ. ಗಾಂವಕಾರರಂತೆ ಮೂಲತಃ ಹುಟ್ಟಿದ್ದು ಕುಮಟಾ ತಾಲೂಕಿನ ತೊರ್ಕೆಯಲ್ಲಾದರೂ (ಜುಲೈ ೧೯, ೧೮೯೫) ತಮ್ಮ ಜೀವಿತಾವಧಿಯ, ಅದರಲ್ಲೂ ಬರವಣಿಗೆ ಬದುಕಿನ ಮಹತ್ವದ ವರ್ಷಗಳನ್ನು ಕಳೆದದ್ದು ಅಂಕೋಲೆಯಲ್ಲಿ.

ದಿನಕರ ದೇಸಾಯಿ

ದಿನಕರ ದೇಸಾಯಿ (೧೯೦೯ – ೧೯೮೨) ಕನ್ನಡ ಸಾಹಿತ್ಯಕ್ಕೆ ಅಂಕೋಲೆಯ ದೊಡ್ಡ ಕೊಡುಗೆ. 'ಭಾರತ ಸೇವಕ ಸಮಾಜ'ದ ಆಜೀವ ಕಾರ್ಯಕರ್ತರಾಗಿ ಇಡೀ ದೇಶವನ್ನೇ ತನ್ನ ಸೇವಾಕ್ಷೇತ್ರವನ್ನಾಗಿ ಮಾಡಿಕೊಂಡಿದ್ದ ದೇಸಾಯಿ ಬರೆದಂತೆ ಬದುಕಿದ ಕನ್ನಡದ ಬೆರಳೆಣಿಕೆಯ ಹಿರಿಯ ಲೇಖಕರಲ್ಲಿ ಪ್ರಮುಖರು.

ಕರ್ನಾಟಕ ಸರಕಾರದಿಂದ 'ಅಭಿನವ ಸರ್ವಜ್ಞ' ಎಂಬ ಗೌರವ ಪ್ರಶಸ್ತಿಯನ್ನು (ರಾಜ್ಯೋತ್ಸವದ ಸಂದರ್ಭದಲ್ಲಿ) ಪಡೆದ ದೇಸಾಯಿ ಒಬ್ಬ ಅಪ್ಪಟ ಜನಪರವಾದ ಲೇಖಕರಾಗಿದ್ದವರು. ಪದ್ಯ ಮತ್ತು ಗದ್ಯಗಳೆರಡರಲ್ಲೂ ಸಿದ್ಧಹಸ್ತರಾಗಿದ್ದ ದಿನಕರ ದೇಸಾಯರ ಸಾಹಿತ್ಯ ಕೃತಿಗಳು ಸಂಖ್ಯಾಮಾನದಲ್ಲಿ ಬಹಳಿಲ್ಲದಿದ್ದರೂ ಪ್ರಭಾವ ಮತ್ತು ಪರಿಣಾಮದ ದೃಷ್ಟಿಯಿಂದ ಚಿರಕಾಲ ನಿಲ್ಲುವಂಥವು. ಅಧ್ಯಯನದ ಅನುಕೂಲಕ್ಕಾಗಿ ಇವರ ಕವಿತೆಗಳನ್ನು ನಾಲ್ಕು ಭಾಗವಾಗಿ ವಿಂಗಡಿಸುವ ಅಗತ್ಯವಿದೆ. ೧) ಕ್ರಾಂತಿಗೀತೆಗಳು ೨) ಭಾವಗೀತೆಗಳು ೩) ಮಕ್ಕಳ ಪದಗಳು ೪) ಚೌಪದಿಗಳು, ಗದ್ಯ ಸಾಹಿತ್ಯವನ್ನೂ ಕೂಡ ನಾಲ್ಕು ಭಾಗಗಳಾಗಿ ಅಧ್ಯಯನಕ್ಕೆ ಒಳಪಡಿಸಬೇಕಾಗುತ್ತದೆ. ೧) ಪ್ರವಾಸ ಕಥನ ೨) ಸಾಮಾಜಿಕ, ಶೈಕ್ಷಣಿಕ ಹೋರಾಟದ ನೆಲೆಯಲ್ಲಿ ಅಭಿವ್ಯಕ್ತಿ ಪಡೆದ ಸಾಹಿತ್ಯ ೩) ಸಂಶೋಧನಾಪರ ಬರಹಗಳು ೪) ಪತ್ರಿಕಾ ಸಾಹಿತ್ಯ

ಈ ವಿಂಗಡನಾಕ್ರಮದಲ್ಲಿ ದಿನಕರ ದೇಸಾಯರ ಸಾಹಿತ್ಯವನ್ನು ವಿಶ್ಲೇಷಣೆಗೆ ಒಳಪಡಿಸುವದಕ್ಕೆ ಈ ಲೇಖನದಲ್ಲಿ ಅವಕಾಶವಿಲ್ಲ, ಈ ಮಾತು ಬೇರೆ.

೧) ರೈತರ ಹಾಡು ೨) ಮಕ್ಕಳ ಗೀತೆಗಳು
೩) ಕವನ ಸಂಗ್ರಹ ೪) ಮಕ್ಕಳ ಪದ್ಯಗಳು
೫) ಹೂಗೊಂಚಲು ೬) ಮಕ್ಕಳ ಪದ್ಯ
೭) ದಿನಕರನ ಚೌಪದಿ ೮) ದಾಸಾಳ – ಇವು ದಿನಕರ ದೇಸಾಯರ ಕವನ ಸಂಕಲನಗಳಾಗಿವೆ.

'ದಿನಕಾರಾಲಿ ಕವನ' ಎಂಬ ಕೊಂಕಣಿ ಸಂಕಲನವನ್ನೂ ಕೂಡ ಇಲ್ಲಿ ನೆನೆದುಕೊಳ್ಳಬಹುದು. 'ಪ್ರಪಂಚದ ಕೆಲಸಗಾರರು' (ಶ್ರಮಜೀವನ ಮತ್ತು ಶ್ರಮಜೀವಿಗಳ ಕುರಿತ ಹೊತ್ತಿಗೆ) 'ನಾ ಕಂಡ ಪಡುವಣ' (ಪ್ರವಾಸ ಕಥನ) 'ಭಾರತದಲಿ ಪ್ರಾಥಮಿಕ ಶಿಕ್ಷಣ' ಇವು ಗದ್ಯ ಕೃತಿಗಳು. `The Vakkals - The Aboriginals of Kanara' ಜನಾಂಗೀಯ ಅಧ್ಯಯನಕ್ಕೆ ಸೇರಿದ ಕಿರುಹೊತ್ತಿಗೆ. The Mahamandaleshwaras Under the Chalukyas of Kalyani – ಇದು ಇವರ ಸಂಶೋಧನಾತ್ಮಕ ಪ್ರಕಟಿತ (ಇಂಗ್ಲೀಷ್‌ನಲ್ಲಿದೆ) ಮಹಾಪ್ರಬಂಧ.

ಹೀಗೆ ಸುಮಾರು ೧೫ ಕೃತಿಗಳನ್ನು ತಮ್ಮ ಅರ್ಧ ಶತಮಾನದ ಬರವಣಿಗೆಯ ಬದುಕಿನಲ್ಲಿ ನೀಡಿರುವ ದಿನಕರ ದೇಸಾಯಿ ಮುಖ್ಯವಾಗಿ ಕವಿ. ಇವರ ಹಾಡು ಇಂದು ಇಡೀ ನಾಡಿನ ಮಕ್ಕಳಿಂದ ಮುದುಕರ ನಾಲಿಗೆಯಲ್ಲಿ ನಲಿದಾಡುತ್ತಿವೆ. ಅದಕ್ಕೆ ಮುಖ್ಯ ಕಾರಣ ಅವರ ಕಾವ್ಯದ ಸರಳತೆ ಮತ್ತು ನೇರತೆ. ಸರ್ವಜ್ಞನನ್ನು ಈ ನಾಡು ಜನತಾಕವಿ ಎಂದು ಗುರುತಿಸಿದೆ. ಈ ಮಾತು ಸರ್ವಜ್ಞನ ನಂತರ ಇನ್ನಾರಿಗಾದರೂ ಅನ್ವಯಿಸಿ ಹೇಳಬಹುದಾದರೆ ಅದು ದಿನಕರ ದೇಸಾಯರಿಗೆ ಮಾತ್ರ ಎಂದು ತೋರುತ್ತದೆ.

೧೯೫೨ರಲ್ಲಿ ಪ್ರಕಟವಾದ ಇವರ 'ಕವನ ಸಂಗ್ರಹ'ದಲ್ಲಿ ಅನೇಕ ಭಾವಗೀತೆಗಳೂ, ಕ್ರಾಂತಿಗೀತೆಗಳೂ, ಮಕ್ಕಳಗೀತೆಗಳೂ ಸೇರಿಕೊಂಡಿವೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಕಾಲಘಟ್ಟ ಎಂಬುದೊಂದು ವಿಮರ್ಶಕರನೇಕರ ಗಮನ ಸೆಳೆದಿದೆ.

೧೯೪೦ ರಿಂದ ೫೦ರ ನಡುವಿನ ಪ್ರಮುಖ ಲೇಖಕರಲ್ಲಿ ದಟ್ಟವಾಗಿ ಕಾಣಿಸಿಕೊಳ್ಳುವ ಪ್ರಗತಿಶೀಲ ನಿಲುವು, ದಿನಕರ ದೇಸಾಯರ ಕಾವ್ಯದಲ್ಲಿಯೂ ನೋಡಬಹುದಾಗಿದೆ. ಆ ನಂತರ ಬಂದ ಅವರ 'ಹೂಗೊಂಚಲು' (೧೯೫೮) ಮತ್ತು 'ದಾಸಾಳ' (೧೯೮೩) ಸಂಕಲನಗಳಲ್ಲೂ ಕೂಡ ಅದೇ ಲಕ್ಷಣಗಳನ್ನು ಕಾಣುತ್ತೇವೆ.

ಕೆಲವರು ನೂರು ಸಾಲುಗಳಲ್ಲಿ ಹೇಳುತ್ತಿರುವುದನ್ನು ದೇಸಾಯಿ ಒಂದೆರಡು ಸಾಲುಗಳಲ್ಲಿ ಹೇಳಬಲ್ಲಂಥ ವಿಶಿಷ್ಟ ಪ್ರತಿಭೆಯನ್ನೂ ಒಳಗಿಟ್ಟುಕೊಂಡವರು. ಒಂದು ಪುಟ್ಟ ಉದಾಹರಣೆ ಇಲ್ಲಿದೆ:

'ತಾಯಿಯು ದೇವರಿಗಿಂತಲೂ ಮೇಲು
ದೇವರ ಮೊಲೆಯಲಿ ದೊರೆವುದೆ ಹಾಲು'
(ತಾಯಿ)

ಅಪ್ಪಟ ಜನಪರ ನಿಲುವಿನ ಈ ಕವಿ ನವೋದಯ, ಪ್ರಗತಿಶೀಲರ ಕಾಲಾವಧಿಯಲ್ಲಿ ಬಂಡಾಯದ ದನಿ ಮೊಳಗಿಸಿದವರಲ್ಲೂ ಮುಖ್ಯರೆನಿಸುತ್ತಾರೆ. 'ಚೀನಾದ ಕ್ರಾಂತಿ' ಎಂಬ ಇವರ ಕವನದಲ್ಲಿ ಮತ್ತು ೧೯೪೯ ರಲ್ಲಿ ಪ್ರಕಟವಾದ 'ರೈತರ ಹಾಡುಗಳು' ಪುಸ್ತಿಕೆಯಲ್ಲಿ ಈ ಬಂಡಾಯದ ಗುಣಗಳು ನಿಚ್ಚಳವಾಗಿ ಕಾಣುತ್ತವೆ. ಉಳುವವನಿಗೆ ನೆಲದೊಡೆತನ ಬೇಕೆಂದು ರಾಜ್ಯಕ್ಕೆ ಮಾದರಿಯೆಂಬಂತೆ ರೈತ ಹೋರಾಟವನ್ನು ತಮ್ಮ ೩೦ ರ ಹರೆಯದಲ್ಲೇ ಹುಟ್ಟು ಹಾಕಿದ ದಿನಕರ ದೇಸಾಯಿ,

'ಅನ್ನ ದೇವರ ಮುಂದೆ ಇನ್ನು ದೇವರು ಇಲ್ಲ'
ಸಿದ್ಧಾಂತ ಸಿದ್ಧಿಯೇ ನರನ ಶಾಂತಿ

– ಎಂದು ಹಾಡಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ವ್ಯವಸ್ಥೆಯ ಪೊಳ್ಳುಮರಗಳನ್ನೆಲ್ಲ ಭೂಮಿಗುರುಳಿಸಲಿಕ್ಕೆ ಬಿರುಗಾಳಿಯೇ ಬೇಕೆಂಬುದು ದೇಸಾಯರ ನಿಲುವು. ಬಹುಶಃ ಈ ಕಾರಣಕ್ಕಾಗಿಯೇ ಏನೋ ಅವರು ನಿಸರ್ಗ ವರ್ಣನೆಯಲ್ಲಿ ಹೆಚ್ಚುಕಾಲ ಕಳೆಯದೆ, ಈ ಪ್ರಪಂಚದ ಒಳಗಡೆ ಇರುವ ಅಸಮಾನತೆಯ ಬಗ್ಗೆ, ಮನುಷ್ಯನ ವಿಲಕ್ಷಣ ಸ್ವಭಾವಗುಣಗಳ ಬಗ್ಗೆ ಬರೆಯುತ್ತ ಹೊರಟರು. ಮೌಢ್ಯದ ವಿರುದ್ಧ ಬರೆದರು. ಹಸಿವೆಯ ಬಗ್ಗೆ ಬರೆದರು.

ಹುಚ್ಚ ನೀನು ಹಳ್ಳಿಗೋಡು
ದೀನಜನರ ಪಾಡನೋಡು
ಇರಲು ಗುಡಿಯು ಇಲ್ಲವಲ್ಲ
ಹೊಟ್ಟೆ ತುಂಬ ಅನ್ನವಿಲ್ಲ

– ಎಂದು ಹಾಡಿದರು. ಹರಿಗೆ ಗುಡಿ ಕಟ್ಟುವುದನ್ನು ವಿರೋಧಿಸಿದರು. ತಮ್ಮ ಸಮಕಾಲೀನ ಕವಿಗಳನ್ನು ಚೌಪದಿಯೊಂದರಲ್ಲಿ ಹೀಗೆ ಜರೆದರೂ ಕೂಡ:

'ಎಲೆ ಕವಿಯೇ, ಸುಡು ನಿನ್ನ ಕವನಗಳ ಕೀರ್ತಿ
ತಿಳಿಬಾನು, ಗಿರಿಕಾನುಗಳೆ ನಿನ್ನ ಸ್ಫೂರ್ತಿ
ಕೇರಿ– ಕೇರಿಗಳಲ್ಲಿ ಉರಿದರೂ ಜ್ವಾಲೆ
ಕವನಕಟ್ಟುವೆ ನೀನು ಮಲ್ಲಿಗೆಯ ಮೇಲೆ'

ಸಾಹಿತ್ಯ ಮಾಡಬೇಕಾದ ತುರ್ತು ಕರ್ತವ್ಯ ಯಾವುದೆಂಬುದರ ಬಗ್ಗೆ ಮನನ ಮಾಡಿಕೊಳ್ಳಬೇಕಾದ ಪರೋಕ್ಷ ಸಲಹೆ ಈ ಚೌಪದಿಯಲ್ಲಿರುವುದನ್ನು ಕಾಣಬಹುದು. ಹೀಗೆ ಇವರ ಕಾವ್ಯ ಇವರ ದೀನ–ದಲಿತರ ಪರವಾದ ಹೋರಾಟದ ಒಂದು ಭಾಗವಾಗಿಯೇ ಅಭಿವ್ಯಕ್ತಿ ಪಡೆಯತೊಡಗಿದ್ದನ್ನು ಉದ್ದಕ್ಕೂ ನಾವು ನೋಡಬಹುದು. 'ಕನ್ನಡಕ್ಕೆ ಇಂದಿಗೂ ಒಬ್ಬನೇ ದಿನಕರ' ಎಂದು ೫೦ ರ ದಶಕಾರಂಭದಲ್ಲಿ ಡಾ. ವಿ. ಕೃ ಗೋಕಾಕ ಉದ್ಧರಿಸಿದುದ್ದರ ಹಿಂದೆ ಹಸಿದವರ ಬಗೆಗಿನ, ದೀನದಲಿತರ ಬಗೆಗಿನ ಅವರ ಮಿಡಿತಗಳ ಪ್ರಭಾವವೇ ಇದ್ದಿರಬೇಕೆಂದು ತೋರುತ್ತದೆ.

ಒಬ್ಬ ಮಕ್ಕಳ ಕವಿಯಾಗಿಯೂ ದಿನಕರ ದೇಸಾಯಿ ಇಡೀ ನಾಡಿಗೆ ಚಿರಪರಿಚಿತರು. ಅವರ 'ಬೆಕ್ಕೆ ಬೆಕ್ಕೆ', 'ತಿಪ್ಪಾ ಭಟ್ಟರು', 'ಗಡಿಯಾರ', ಮುಂತಾದವು ಸೋಲಿಲ್ಲದ – ಸಾವಿಲ್ಲದ ಮಕ್ಕಳ ಹಾಡುಗಳಾಗಿವೆ.

ಇವರ ಚೌಪದಿಗಳಂತೂ ಕನ್ನಡಕ್ಕೆ ವಿಡಂಬನ ಸಾಹಿತ್ಯದ ಒಂದು ಮಹಾಪೂರವೇ ಹರಿದು ಬರುವಂತೆ ಮಾಡಿದವು. ಸರ್ವಜ್ಞನ ನಂತರ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಿರುಗವನ ಬರೆದ ಇನ್ನೊಬ್ಬರು ಸಿಗಲಾರರೇನೊ! ಚುಟುಕು ಸಾಹಿತ್ಯದಲ್ಲಿ ಏನಿದೆಯೆಂದು ಉಪೇಕ್ಷೆ ಮಾಡುವವರಿಗೆ ದಿನಕರ ಚೌಪದಿಗಳು, 'ಅಲ್ಲಿ ಏನಿಲ್ಲ?' ಎಂಬ ಪ್ರಶ್ನೆಗಳನ್ನು ಕೇಳತೊಡಗಿದಂತೆ ಕನ್ನಡಕ್ಕೆ ಮುಕ್ತಕಗಳ ಪ್ರವಾಹವೇ ಹರಿದುಬಂದದ್ದು ಒಂದು ಚಾರಿತ್ರಿಕ ಬೆಳವಣಿಗೆಯೆನ್ನಬಹುದಾಗಿದೆ. ಅಂಥ ಒಂದು ಹೆದ್ದಾರಿಯನ್ನು ನಿರ್ಮಿಸಿದ ಶ್ರೇಯಸ್ಸು ದಿನಕರ ದೇಸಾಯರದು. ದಾಖಲೆಗಳಿಗಾಗಿ ಒಂದೆರಡು ಚೌಪದಿಗಳನ್ನಷ್ಟೇ ಇಟ್ಟು ಮುಂದೆ ಹೋಗುತ್ತೇನೆ.

'ತ್ರಿಭುವನಕೆ ದಾರಿ ತೋರಿಸಿದೆ ಬಾಪೂಜಿ
ನಿನ್ನ ಕೈಯೊಳಗಿತ್ತು ಕಾಂಚನದ ಸೂಜಿ

ಚೆಂದಿಯಾದರು ಪ್ರಥಿವಿ ಹೋರಾಟದಿಂದ
ಅದನುಹೊಲೆಯುವ ಶಕ್ತಿ ನಿನಗಿತ್ತು ತಂದೆ'

'ಒಂದು ಬದಿ ಸಹ್ಯಾದ್ರಿ ಒಂದು ಬದಿ ಕಡಲು
ನಡುಮಧ್ಯದಲಿ ಅಡಿಕೆ ತೆಂಗುಗಳ ಮಡಲು
ಸಿರಿಗನ್ನಡದ ಚಪ್ಪರವೆ ನನ್ನ ಜಿಲ್ಲೆ
ಇಲ್ಲಿಯೇ ಇನ್ನೊಮ್ಮೆ ಹುಟ್ಟುವೆನು ನಲ್ಲೆ'

ದಿನಕರ ದೇಸಾಯರ ಬಹಳಷ್ಟು ಚೌಪದಿಗಳಲ್ಲಿ ಪ್ರಾಸಗಳನ್ನು ಎಳೆದು ತರಲಾಗುತ್ತದೆ ಎಂಬ ಆಕ್ಷೇಪ ವಿಮರ್ಶಕ ವಲಯದಲ್ಲಿದೆ. ಅದು ಭಾಗಶಃ ಸತ್ಯಕೂಡ. ಆದರೆ ಮೇಲೆ ಉದ್ಧರಿಸಿದ ಚೌಪದಿಗಳಲ್ಲಿ ಪ್ರಾಸಗಳಿದ್ದರೂ, ಅವು ಪ್ರಾಸಕ್ಕಾಗಿಯೇ ಬಂದವುಗಳಲ್ಲ ಎಂಬುದನ್ನು ಗಮನಿಸತಕ್ಕದ್ದಿದೆ.

ನನ್ನ ಕನ್ನಡ ನುಡಿಯೆ, ನೀನೆಷ್ಟು ಚೆಂದ !
ಏನು ಗೀಚಿದರೂ ಆಗುವುದು ಶ್ರೀಗಂಧ
ಸಿಂಗರದ ಗಣಿ ನಿನ್ನ ಶಬ್ದ ಸಂಪತ್ತು
ಬಂಗಾರಕಿಂತಲೂ ಶ್ರೇಷ್ಠ ನುಡಿಮುತ್ತು

ಕನ್ನಡ ನುಡಿಯ ಶ್ರೀಮಂತಿಕೆಯ ಬಗೆಗಿನ – ಕೊಂಕಣಿ ಮಾತೃಭಾಷೆಯಾಗಿರುವ – ದೇಸಾಯರ ಅಭಿಮಾನ ಇಲ್ಲಿ ಗಮನಿಸತಕ್ಕದ್ದಿದೆ. ಆಧುನಿಕ ಕನ್ನಡ ಸಾಹಿತ್ಯ ಕಂಡ ಕೆಲವೇ ಕೆಲವು ಅತ್ಯುತ್ತಮ ಪ್ರವಾಸಕಥನಗಳಲ್ಲಿ ತಲೆಯೆತ್ತಿ ನಿಲ್ಲಬಲ್ಲಂಥ ಹೊತ್ತಿಗೆ ದಿನಕರ ದೇಸಾಯರ 'ನಾ ಕಂಡ ಪಡುವಣ'ವಾಗಿದೆ. ಇವರ ಪತ್ರಿಕಾ ಲೇಖನಗಳ ಸಮೃದ್ಧಿಯ ವಿಶ್ಲೇಷಣೆಗಾಗಿಯೇ ಪ್ರತ್ಯೇಕ ಹೊತ್ತಿಗೆಬೇಕು. 'ಸಮಾಜವಾದಿ ಸಂಸ್ಕಾರ'ದ ಈ ಕವಿ ಕನ್ನಡದ ನೇರ ನಡೆ–ನುಡಿಸು ಮತ್ತು ಬರೆದಂತೆ ಬದುಕಿದ ಅಪರೂಪದ ಚೇತನವಾಗಿದ್ದಾರೆ.

ಮ. ಗ. ಶೆಟ್ಟಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅನುವಾದ ಸಾಹಿತ್ಯಕ್ಕೂ ಕೂಡ ವಿಶಿಷ್ಟವಾದ ಸ್ಥಾನ ಮತ್ತು ಮಹತ್ವ ಇದೆ. ದೇಶ ವಿದೇಶಗಳ ಜ್ಞಾನರಾಶಿ, ಕಲ್ಪನಾ ವಿಲಾಸ, ಚರಿತ್ರೆಯ ಸಂಗತಿ ಹಾಗೂ ಬಳಕೆಯಾದ ಪ್ರತಿಭೆಗಳನ್ನು ನಮ್ಮೊಳಗೆ ತೆಗೆದುಕೊಂಡು ನಮ್ಮದಾಗಿಸಿಕೊಳ್ಳಲು ಮತ್ತು ಆ ಮೂಲಕ ನಮ್ಮ ಅನುಭವದ ಕ್ಷಿತಿಜವನ್ನು ಹಿಗ್ಗಿಸಿಕೊಳ್ಳಲು ಅನುವಾದ ಸಾಹಿತ್ಯ ತುಂಬಾನೆ ಸಹಾಯ ಮಾಡಬಲ್ಲದು.

ಅಂಕೋಲೆಯ ಅಂಬಾರಕೊಡ್ಲದಲ್ಲಿ ಹುಟ್ಟಿ (ಅಜ್ಜಿ ಮನೆಯಲ್ಲಿ) ಇಲ್ಲಿಯೇ ದೊಡ್ಡವನಾಗಿ, ಇಲ್ಲಿಯ ಜನಪರ ಹೋರಾಟಗಳಲ್ಲಿ ಸಕ್ರಿಯರಾಗಿದ್ದು, ಈ ಭಾಗದ ಎಲ್ಲಾ ಮನೆಗಳ ಮಗನಂತೆ ಹೊಂದಾಣಿಕೆಯಿಂದ ಬದುಕಿದ ಮ.ಗ. ಶೆಟ್ಟಿ ಅವರ ಕುಟುಂಬ ಮೂಲತಃ ಕುಮಟಾ ತಾಲೂಕಿನ ಬಂಕಿಕೊಡ್ಲದಲ್ಲಿದ್ದರೂ ಇವರು ಮಾತ್ರ ಅಂಕೋಲೆಯನ್ನೇ ತಮ್ಮ ಕರ್ಮಭೂಮಿಯನ್ನಾಗಿ ಆರಿಸಿಕೊಂಡವರು. ಪಿಕಳೆ, ದಿನಕರ ದೇಸಾಯಿ, ನಾಡಕರ್ಣಿ ಮುಂತಾದವರ ಜೊತೆಗೆ ಹೆಗಲಿಗೆ ಹೆಗಲು ಕೊಟ್ಟು – ಕೆಲವೊಮ್ಮೆ ಅವರಿಗಿಂತ ಹೆಚ್ಚಿನ ರಿಸ್ಕ್ ತೆಗೆದುಕೊಂಡು – ರೈತ ಚಳುವಳಿಯಲ್ಲಿ ಭಾಗವಹಿಸಿದವರು. ಸಾಹಿತ್ಯದಲ್ಲೂ ಅಪಾರವಾದ ಆಸಕ್ತಿಯನ್ನು ಬೆಳೆಸಿಕೊಂಡಿದ್ದ ಮ.ಗ. ಶೆಟ್ಟರು ಕನ್ನಡದ ಅನುವಾದ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಅಸಾಮಾನ್ಯವಾದುದು. ಹಾಗೆ ನೋಡಿದರೆ ಇವರ ಸಾರ್ವಜನಿಕ ಸೇವಾ ಬದುಕಿನ ಬೀಸು ಇಡೀ ಕರ್ನಾಟಕವನ್ನು ವ್ಯಾಪಿಸಿತ್ತು. ಆದರೆ ಕೇಂದ್ರ ಸ್ಥಾನ ಅಂಕೋಲೆಯಾಗಿತ್ತು. ಬಿಹಾರ ಮೂಲದ ವಿಯೋಗಿ ಎಂಬ ಪ್ರಸಿದ್ಧ ಕಾದಂಬರಿಕಾರ ಬರೆದ 'ಮಹಾಮಂತ್ರಿ' ಎಂಬ ಸುಮಾರು ೨೭೦ ಪುಟಗಳ ಐತಿಹಾಸಿಕ ಕಾದಂಬರಿಯನ್ನು ಮ. ಗ. ಶೆಟ್ಟಿ ಅವರು – ಇದು ಅನುವಾದ ಎಂಬ ಭಾವನೆ ಬರೆದಿರುವ ಹಾಗೆ–ಬಹಳ ಸುಂದರವಾಗಿ ಕನ್ನಡಕ್ಕೆ ತಂದಿದ್ದಾರೆ. ರಾಜ ಅಶೋಕನ ಆಡಳಿತದಲ್ಲಿ ಬರುವ ಅನೇಕ ಮನೋಜ್ಞ ಪ್ರಸಂಗಗಳು, ಅಶೋಕನು ಧರ್ಮವನ್ನು ವಿಶಾಲ ಅರ್ಥದಲ್ಲಿ ಸ್ವೀಕರಿಸಿ ಅದನ್ನು ರಾಜಧರ್ಮವಾಗಿ ಪರಿವರ್ತಿಸಿಕೊಂಡ ರೀತಿ, ಅವನ ದಾನಗುಣ, ಅವನ ದಿನಚರಿ, ಪ್ರಜೆಗಳು ಮತ್ತು ಮಂತ್ರಿ ಪರಿಷತ್ತಿಗೆ ನೀಡುತ್ತಿದ್ದ ಗೌರವ – ಇವುಗಳ ಜೊತೆಗೆ ಮುಖ್ಯವಾಗಿ ಮಹಾಮಂತ್ರಿ ರಾಧಾಗುಪ್ತನ ಕುಲುಮೆಯಲ್ಲಿ ಹಾದು ಅಪರಂಜಿಯಾದ ಅಶೋಕನ ಬದುಕು – ಇವುಗಳನ್ನೆಲ್ಲ ಈ ಕಾದಂಬರಿ ಮನಂಬುಗುವಂತೆ ಹಿಡಿದಿಟ್ಟಿದೆ.

ಉಪನಿಷತ್ತಿನ ಹದಿನಾಲ್ಕು ಕಥೆಗಳನ್ನು ಅನುವಾದಿಸಿ, ಮ.ಗ. ಶೆಟ್ಟರು, 'ಹದಿನಾಲ್ಕು ಕಥೆಗಳು' ಎಂಬ ಹೆಸರಿನಲ್ಲಿಯೇ ಪ್ರಕಟಿಸಿರುವುದು ಇನ್ನೊಂದು ಉಲ್ಲೇಖನಾರ್ಹ ಕಾರ್ಯವಾಗಿದೆ. ಕಠೋಪನಿಷತ್ತು, ಛಾಂದೋಗ್ಯ ಕೇನೋಪನಿಷತ್ತು, ತೈತ್ತರ್ಯ ಬ್ರಾಹ್ಮಣ ಮತ್ತು ಬೃಹದಾರಣ್ಯಕ ಉಪನಿಷತ್ತುಗಳಿಂದ ಆಯ್ದುಕೊಂಡ ಈ ಅನುವಾದಿತ ಕತೆಗಳು ಓದುಗರನ್ನು ಪ್ರಜ್ಞಾವಿವೇಕಿಗಳನ್ನಾಗಿ ಮಾಡುವಲ್ಲಿ ತುಂಬ ಉಪಯುಕ್ತವಾಗಿವೆ. 'ದಿವ್ಯಭವ್ಯ' (ಮೂಲ ಲೇಖಕ ಆಚಾರ್ಯ ಕಾಕಾ ಕಾಲೇಕರ) ಮ.ಗ. ಶೆಟ್ಟರು ಅನುವಾದಿಸಿದ ಎರಡು ಪ್ರಬಂಧಗಳಿರುವ

ಇನ್ನೊಂದು ಮುಖ್ಯ ಕೃತಿ. ಅಜಿತವೀರ ಬಾಹುಬಲಿ ಮತ್ತು ಜೋಗ ಜಲಪಾತದ ಕುರಿತ ಪ್ರಬಂಧಗಳವು. ಮೊದಲನೆಯದು ದಿವ್ಯ ಎರಡನೆಯದು ಭವ್ಯ 'ದೇವದಾಸಿ' ಮರಾಠಿ ಮೂಲದಿಂದ ಶೆಟ್ಟರು ಅನುವಾದಿಸಿದ ಇನ್ನೊಂದು ಸುಪ್ರಸಿದ್ಧ ಕಾದಂಬರಿ.

ಕೇವಲ ಅನುವಾದ ಸಾಹಿತ್ಯಕ್ಕೆ ಮಾತ್ರ ಮೀಸಲಾಗಿದ್ದ ಬರವಣಿಗೆ ಅಲ್ಲ ಅವರದು. ೭೦ ರ ದಶಕಾರಂಭದಿಂದ ೮೦ರ ದಶಕದ ಕೊನೆಯವರೆಗೆ ಮೇಲೆ ಹೆಸರಿಸಿದ ಅನುವಾದಿತ ಗ್ರಂಥಗಳು ಪ್ರಕಟವಾದರೆ, ೧೯೭೭ ರಲ್ಲಿ ಇವರೇ ಬರೆದು ಪ್ರಕಟಿಸಿದ 'ಅನಕೃ ಜೀವನ – ಕಾರ್ಯ' ಎಂಬ ಪುಸ್ತಕವನ್ನು ಕನ್ನಡ ಸಾಹಿತ್ಯ ಪರಿಷತ್ತು – ಜಿ. ನಾರಾಯಣ ಅವರು ಅಧ್ಯಕ್ಷರಾಗಿದ್ದ ಕಾಲಾವಧಿಯಲ್ಲಿ ಪ್ರಕಟಿಸಿದ್ದು ಇಲ್ಲಿ ಉಲ್ಲೇಖವಾಗಬೇಕಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಸ್ತಾಪವಾಗುವ ಪ್ರಗತಿಶೀಲ ಚಳುವಳಿಯ ಮುಖ್ಯಾತಿಮುಖ್ಯ ಲೇಖಕರಾಗಿದ್ದ ಅನಕೃ ಅವರ ಮನೆತನ, ಶಿಕ್ಷಣ, ಮದುವೆ, ಅವರ ಆಸಕ್ತಿಯ ಬರವಣಿಗೆ ಕ್ಷೇತ್ರಗಳಾದ ನಾಟಕ, ಸಣ್ಣಕಥೆ, ಕಾದಂಬರಿ, ಕಲೆ ಮತ್ತು ಸಾಹಿತ್ಯ ಪತ್ರಿಕೋದ್ಯಮ, ನೃತ್ಯಕಲೆ, ಸಂಗೀತ – ಹೀಗೆ ಎಲ್ಲ ವಿಷಯಗಳನ್ನೊಳಗೊಂಡ ಒಂದು ಸಂಗ್ರಹಯೋಗ್ಯ ಪುಸ್ತಕವಾಗಿ ಇದು ನಮ್ಮ ಮಧ್ಯೆ ಇದೆ. 'ಗ್ರಾಮೋದ್ಯೋಗವೇ ಏಕೆ?' ಮ. ಗ. ಶೆಟ್ಟರ ಇನ್ನೊಂದು ಸ್ವತಂತ್ರ ಕೃತಿ. ೧೯೭೯ರಲ್ಲಿ ಇದನ್ನು ಬಿ.ಎನ್. ಗುಪ್ತಾ ಸ್ಮಾರಕ ಗ್ರಂಥಮಾಲೆ ಪ್ರಕಟಿಸಿದೆ. ಈ ವಿಷಯವನ್ನು ವಿವರಿಸುವಾಗ ಮ.ಗ. ಶೆಟ್ಟಿ ಅವರು ಅನುಸರಿಸಿದ ಬರವಣಿಗೆಯ ತಂತ್ರ ಹೊಸ ರೀತಿಯದು. ರಾಮಾಶ್ವಮೇಧ ಕತೆಯಲ್ಲಿ ಬರುವ ಮುದ್ದಣ– ಮನೋರಮೆಯರ ಸರಸ – ಸಲ್ಲಾಪದ ಬಗ್ಗೆ ನಮಗೆ ತಿಳಿದಿದೆ. ಈ ಪುಸ್ತಕವೂ ನಲ್ಲ–ನಲ್ಲೆಯರ ಸರಸ ಸಲ್ಲಾಪದ ಪತ್ರಮಾಲಿಕೆಯಾಗಿದೆ. ಮುದ್ದಣನ ಸಲ್ಲಾಪದ ಮಾಧುರ್ಯ ಇಲ್ಲಿ ಇಲ್ಲದಿದ್ದರೂ ಜಟಿಲವಾದ ವಿಷಯವನ್ನು ಆತ್ಮೀಯವಾಗಿ ಹೇಳುವ ಪ್ರಯತ್ನವಿದೆ ಎಂಬ ಮಾತನ್ನು ಮ. ಗ. ಶೆಟ್ಟಿಯವರೇ ತಮ್ಮ 'ಎರಡು ಮಾತು'ಗಳಲ್ಲಿ (ಪ್ರಾಸ್ತಾವಿಕ ಮಾತಿನಲ್ಲಿ) ಹೇಳಿಕೊಂಡಿದ್ದಾರೆ.

'ಮನದನ್ನೆ' ಎಂಬ ಸಂಬೋಧನೆಯೊಂದಿಗೆ ಆರಂಭವಾಗುವ ಈ ಪುಸ್ತಕವು 'ಪ್ರಿಯೆ' ಎಂದು ಶುರುವಾಗುವ ೨೫ನೇ ಪತ್ರದ ಮೂಲಕ ಮುಕ್ತಾಯಗೊಳ್ಳುತ್ತದೆ. 'ಗೆಲುವಿನ ಗುಟ್ಟು' ಶೆಟ್ಟರು ಸಂಗ್ರಹಿಸಿದ ಚಿಂತನಪರ ಕಿರುಲೇಖನಗಳ ಒಂದು ಮಹತ್ವದ ಹೊತ್ತಿಗೆಯಾಗಿದೆ. ಬದುಕಿಗೆ ಬೇಕಾದ ಎಲ್ಲ ಬಗೆಯ ವಿಚಾರಗಳನ್ನು ಈ ಅಂತರ್‌ಭಾರತಿ ಪ್ರಕಟಣೆಯಲ್ಲಿ ಹಿಡಿದಿಡಲಾಗಿದೆ. 'ಬಿತ್ತಿದ್ದನ್ನು ಬೆಳಕೊ' ಎಂಬ ಕೃತಿಯೊಂದನ್ನು ಮ. ಗ. ಶೆಟ್ಟರು ಬರೆದು ಪ್ರಕಟಿಸಿದ್ದಾರೆಂದು ಕೇಳಿದ್ದೇನೆಯೇ ಹೊರತು ನೋಡಲು ಸಿಕ್ಕಿಲ್ಲ.

ಮ. ಗ. ಶೆಟ್ಟಿ ಅವರು ಕೆಲವು ಕಾಲ ಬೆಂಗಳೂರಿನ ಬಿ.ಎನ್.ಗುಪ್ತಾ ಸ್ಮಾರಕ ಗ್ರಂಥಮಾಲೆಯ ಸಂಪಾದಕರಾಗಿಯೂ ಕೆಲಸ ಮಾಡಿರುವುದರಿಂದ ಆ ಸಂದರ್ಭದಲ್ಲಿ ಪ್ರಕಟವಾದ 'ಮಹಮ್ಮದ ಪೈಗಂಬರರು', 'ಅಂಗದ ದೈತ್ಯ', 'ಮೋಹನ ಮಹಾತ್ಮನಾದ', 'ನಂದಗೋಕುಲ', (ಕಥಾ ಸಂಕಲನ, ಲೇಖಕಿ : ಪ್ರಭಾ ಕೇಣಿಕರ) 'ದೆವ್ವನ ಮನೆ' (ನಾಟಕ), 'ಸಂಪೂರ್ಣ ಕ್ರಾಂತಿ' ಮುಂತಾದ ಕೃತಿಗಳು ಕನ್ನಡ ಸಾಹಿತ್ಯಕ್ಕೆ ಲಭ್ಯವಾಗಿರುವುದರ ಹಿಂದೆ ಮ. ಗ. ಶೆಟ್ಟಿ ಅವರ ದೂರದೃಷ್ಟಿ ಹಾಗೂ ಪರಿಶ್ರಮ ಇರುವುದನ್ನು ಕೂಡ ಗೌರವದಿಂದ ಈ ಸಂದರ್ಭದಲ್ಲಿ ನೆನೆಯಬೇಕಾಗಿದೆ.

ಪ್ರೊ. ಜಿ. ಎಚ್. ನಾಯಕ

ನಾಡಿನ ಪ್ರಥಮ ಶ್ರೇಣಿಯ ವಿಮರ್ಶಕರಲ್ಲಿ ಬಹುಮುಖ್ಯರೆಂದು ವಿದ್ವತ್ ವಲಯವು ಈಗಾಗಲೇ ಒಪ್ಪಿಕೊಂಡಿರುವ ಪ್ರೊ. ಜಿ. ಎಚ್. ನಾಯಕ ಅವರು ಅಂಕೋಲೆಯ ಸೂರ್ವೆಯವರು. ಇಲ್ಲಿ ಓದುತ್ತಿದ್ದಾಗಲೇ ತಮ್ಮ ಸಾಹಿತ್ಯಾಸಕ್ತಿಯನ್ನು ಕವಿತೆಗಳ ರಚನೆಯ ಮೂಲಕ ದಾಖಲಿಸಿದವರು. ಉನ್ನತ ವಿದ್ಯಾಭ್ಯಾಸ ಮತ್ತು ಉದ್ಯೋಗ ನಿಮಿತ್ತ ಮೈಸೂರಿನಲ್ಲಿ ನೆಲೆಸಬೇಕಾಗಿ ಬಂದರೂ ಅಂಕೋಲೆಯ ಇಂಚಿಂಚನ್ನೂ ತಮ್ಮ ಎದೆಗೆ ಹಚ್ಚಿಕೊಂಡು ಇಂದಿಗೂ ಈ ನೆಲದ ಚರಿತ್ರೆಯನ್ನು ಈ ಭಾಗದ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು, ಸಾಮಾಜಿಕ ಜೀವನವನ್ನು ಒಟ್ಟಾರೆ ಈ ನೆಲದ ಸೊಗಡನ್ನು ತಮ್ಮ ಬರವಣಿಗೆಗೆ ಬಳಸಿಕೊಂಡವರು.

ಬೇರೆ–ಬೇರೆ ಪ್ರಕಾರಗಳಲ್ಲಿ ಬರವಣಿಗೆಯಿದ್ದರೂ ಇವರ ಮುಖ್ಯ ಕೊಡುಗೆ ವಿಮರ್ಶೆಯೆ. ಅರವತ್ತರ ದಶಕದಲ್ಲಿ ಆರಂಭವಾದ ಜಿ. ಎಚ್. ನಾಯಕರ ವಿಮರ್ಶಾ ಬರವಣಿಗೆ 'ಸಮಕಾಲೀನ'ವೆಂಬ ಗ್ರಂಥರೂಪದಲ್ಲಿ ಮೊಟ್ಟ ಮೊದಲಿಗೆ ಕಾಣಿಸಿಕೊಂಡಿದ್ದು ೧೯೭೩ ರಲ್ಲಿ. ಅಲ್ಲಿಂದ ಇಲ್ಲಿಯವರೆಗೆ ಇವರು ಬರೆದು ಪ್ರಕಟಿಸಿದ ವಿಚಾರ– ವಿಮರ್ಶೆಗೆ ಮೀಸಲಾದ ಕೃತಿಗಳು

ಇಂತಿವೆ: 'ಸಮಕಾಲೀನ' (೧೯೭೩), 'ಅನಿವಾರ್ಯ' (೧೯೮೦), 'ನಿರಪೇಕ್ಷ' (೧೯೮೪), 'ವಿನಯ ವಿಮರ್ಶೆ' (೧೯೯೩), 'ಸಕಾಲಿಕ (೧೯೯೫) 'ಹರಿಶ್ಚಂದ್ರ ಕಾವ್ಯ: ಓದು, ವಿಮರ್ಶೆ' (೨೦೦೨), ವಿಮರ್ಶೆಯ ವಿವೇಕ ಈ ಕೃತಿಗಳಲ್ಲಿ ಅನನ್ಯ ಎಂಬಂತೆ ಹೆಪ್ಪುಗಟ್ಟಿದೆ. 'ಗುಣಗೌರವ' ಎಂಬ ಹೆಬ್ಬೊತ್ತಿಗೆಯೊಂದರಲ್ಲಿ ವಿವಿಧ ವ್ಯಕ್ತಿಗಳ ಬಗ್ಗೆ ಇವರು ಬರೆದ ಸಮತೂಕದ ಪರಿಚಯ ಲೇಖನಗಳಿವೆ. 'ಕನ್ನಡ ಸಣ್ಣ ಕಥೆಗಳು' ೧೯೭೪ರಲ್ಲಿ ನ್ಯಾಷನಲ್ ಬುಕ್ ಟ್ರಸ್ಟಿನವರಿಗಾಗಿ ಇವರು ಸಂಪಾದಿಸಿದ ಗ್ರಂಥವಾದರೆ, 'ಹೊಸಗನ್ನಡ ಕವಿತೆ' (೧೯೯೫) ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಸಂಪಾದಿಸಿದ ಗ್ರಂಥ. ಈ ಗ್ರಂಥಗಳಿಗೆ ಸಂಪಾದಕನಾತೆಯಿಂದ ಬರೆದ ಪ್ರಸ್ತಾವನೆ ಆ ಸಾಹಿತ್ಯ ಪ್ರಕಾರಗಳ ಒಟ್ಟಾರೆ ಬೆಳವಣಿಗೆ ಹಾಗೂ ಸಾರ–ಸತ್ವವನ್ನು ದಾಖಲಿಸಿದ ವಿಮರ್ಶಾ ಲೇಖನಗಳಾಗಿಯೂ ನಿಲ್ಲಬಲ್ಲವಾಗಿವೆ.

ಜಾತ್ಯತೀತ ನಿಲುವು, ಪ್ರಜಾಪ್ರಭುತ್ವದ ಉಳಿವು ಹಾಗೂ ಸಾಮಾಜಿಕ ನ್ಯಾಯದ ಪರವಾಗಿರುವ ಇವರ ಅನೇಕ ಬಿಡಿಬರಹಗಳು ಇನ್ನೂ ಪುಸ್ತಕ ರೂಪದಲ್ಲಿ ಬರಬೇಕಾಗಿವೆ. ರಾಮಮಂದಿರ –ಬಾಬ್ರಿಮಸೀದಿ ಕುರಿತ ವಿವಾದದ ಹಿನ್ನಲೆಯಲ್ಲಿ ಹೊರಬಂದ ಪುಸ್ತಿಕೆಯೊಂದು ಇಡೀ ನಾಡಿನ ಗಮನ ಸೆಳೆದಿದೆ. 'ದಲಿತ ಹೋರಾಟ, ಗಂಭೀರ ಸವಾಲುಗಳು, ಗಮನಿಸಲೇಬೇಕಾದ ಇನ್ನೊಂದು ವೈಚಾರಿಕ ಕೃತಿ. ಇವುಗಳ ಹೊರತಾಗಿ ಅಂಕೋಲೆಯ ರಾಘವೇಂದ್ರ ಪ್ರಕಾಶನದ ವಿನಂತಿಯ ಮೇರೆಗೆ 'ಶತಮಾನದ ಕನ್ನಡ ಸಾಹಿತ್ಯ' ಎಂಬ ಶೀರ್ಷಿಕೆಯ ವಿಮರ್ಶಾ ಸಂಪುಟಗಳಿಗೆ ಇವರು ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದು, ಮೊದಲ ಸಂಪುಟ ಈಗಾಗಲೇ ಪ್ರಕಟವಾಗಿದೆ.

ಸಮತೂಕದ ಕೃತಿನಿಷ್ಠ ವಿಮರ್ಶಕರಾಗಿ ಇಡೀ ನಾಡಿನ ಗಮನ ಸೆಳೆದಿರುವ ಜಿ. ಎಚ್. ನಾಯಕರ 'ವಿನಯ ವಿಮರ್ಶೆ' ಎಂಬ ಕೃತಿ ಎಲ್ಲ ತಲೆಮಾರಿಗೂ ಬೇಕಾಗಿರುವಂಥ ಅನೇಕ ವಿಚಾರಗಳನ್ನು ಒಳಗೊಂಡದ್ದಾಗಿದೆ. ಒಂದು ಕೃತಿಯ ಶೋಧದ ವಿಚಾರದಲ್ಲಿ ಅಥವಾ ಒಂದು ಕೃತಿಯ ಮೌಲ್ಯಮಾಪನದ ಸಂದರ್ಭದಲ್ಲಿ ವಿಮರ್ಶಕನಾದವನು ಹೊರಗಿನ ಎಲ್ಲ ಉಪಾದಿಗಳಿಂದ ಬಿಡಿಸಿಕೊಂಡವನಾಗಿರಬೇಕು. ಕೃತಿಯ ಗುಣ–ದೋಷಗಳ ಪಟ್ಟಿ ಮಾಡುವಾಗ ಒಳಗಿನ ಆಧಾರ ಮುಖ್ಯವೇ ಹೊರತು, ಹೊರಗಿನ (ವ್ಯಕ್ತಿಗತ) ಸಂಬಂಧಗಳಲ್ಲ ಎಂಬುದನ್ನು ಅಲ್ಲಿಂದ ಇಲ್ಲಿಯವರೆಗೂ ಅವರು ತಮ್ಮ ಬರವಣಿಗೆಯಲ್ಲಿ ತೋರಿಸಿಕೊಡುತ್ತಲೇ ಬಂದಿದ್ದಾರೆ. ಹೀಗೆ ಕನ್ನಡ ಸಾಹಿತ್ಯದ ವೈಚಾರಿಕ ಮತ್ತು ವಿಮರ್ಶಾ ಕ್ಷೇತ್ರಕ್ಕೆ ಅಂಕೋಲೆಯು ನೀಡಿದ ಬಹುದೊಡ್ಡ ಕೊಡುಗೆಯಾಗಿ ಪ್ರೊ. ಜಿ. ಎಚ್. ನಾಯಕ ಇರುವುದು ಅಭಿಮಾನ ಪಡತಕ್ಕ ಸಂಗತಿಯಾಗಿದೆ.

ಡಾ. ಎನ್. ಆರ್. ನಾಯಕ

ಉತ್ತರ ಕನ್ನಡ ಜಿಲ್ಲೆಯ ಜನಪದ ಸಾಹಿತ್ಯದ ಸಾರ–ಸತ್ವವನ್ನು ನಾಡಿನ ಆಸಕ್ತ ವಲಯಕ್ಕೆ ಅತ್ಯಂತ ಸಮರ್ಥವಾಗಿ ಪರಿಚಯಿಸಿದ ಶ್ರೇಯಸ್ಸು ಡಾ. ಎನ್. ಆರ್. ನಾಯಕರಿಗೆ ಸಲ್ಲುತ್ತದೆ. ವಿ. ವೆ. ತೊರ್ಕೆ ಅವರಿಂದ ಆರಂಭಗೊಂಡ ನಮ್ಮ ಜನಪದ ಕ್ಷೇತ್ರ ಕಾರ್ಯಕ್ಕೆ ಡಾ. ಎಲ್. ಆರ್. ಹೆಗಡೆಯವರು ನಾಡೇ ಬೆರಗುಗೊಳ್ಳುವಂತೆ ತಮ್ಮ ಒಟ್ಟಾರೆ ಶ್ರಮ ಮತ್ತು ಶಕ್ತಿಯನ್ನು ವಿನಿಯೋಗಿಸಿ ಕನ್ನಡದ ಬೆರಳಣಿಕೆಯ ಜಾನಪದ ತಜ್ಞರಲ್ಲಿ ಒಬ್ಬರೆನಿಸಿದರು. ಎಲ್. ಆರ್. ಹೆಗಡೆಯವರ ಸಮ–ಸಮವಾಗಿ, ಕೆಲವೆಡೆ ಒಂದು ಗುಂಜಿ ಮೇಲೆಂಬಂತೆ ಡಾ. ಎನ್.ಆರ್.ನಾಯಕ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಆ ಕಾರ್ಯವನ್ನು ಮುಂದುವರಿಸಿದರು ಮಾತ್ರವಲ್ಲ, 'ಜಾನಪದ ದೀಪಾರಾಧನೆ' ಎಂಬ ಹೆಸರಿನಲಿ ಉತ್ತರ ಕರಾವಳಿ ಪ್ರಾಂತದ ಜಾನಪದ–ಸೊಗಡನ್ನು ತಮ್ಮ ಪತ್ನಿ ಶಾಂತಿ ನಾಯಕರ ಸಹಯೋಗದೊಂದಿಗೆ – ಕರ್ನಾಟಕದ ಆಚೆಗೂ ಪರಿಚಯಿಸಿ ಆ ಕ್ಷೇತ್ರದಲ್ಲಿಯ ತಮ್ಮ ಶ್ರದ್ಧೆ ಮತ್ತು ವಿದ್ವತ್ತನ್ನು ದಾಖಲಿಸಿದವರು. ಮೂಲತಃ ಭಾವಿಕೇರಿಯವರಾದ ಡಾ. ಎನ್.ಆರ್. ನಾಯಕ ಪ್ರಸ್ತುತ ಸುಮಾರು ನಾಲ್ಕು ದಶಕಗಳಿಂದ ಹೊನ್ನಾವರದಲ್ಲಿ ವೃತ್ತಿ ಜೀವನ ನಡೆಸಿ ಮನೆ ಮಾಡಿಕೊಂಡಿದ್ದರೂ ಅವರ ಸಾಹಿತ್ಯಾಸಕ್ತಿಗೆ ಪ್ರೇರಣೆಯಾದ ನೆಲ ಮೂಲತಃ ಅಂಕೋಲೆಯೇ ಹೊರತು ಹೊನ್ನಾವರ ಅಲ್ಲ ಎಂಬುದು ಈ ಲೇಖಕನ ಭಾವನೆಯಾಗಿದೆ. ಜನಪದ ಸಾಹಿತ್ಯದ ಜೊತೆ–ಜೊತೆಯಲ್ಲೇ ಸೃಜನಶೀಲ ಶಿಷ್ಟ ಸಾಹಿತ್ಯದ ಲೇಖಕರೂ ಆಗಿರುವ ನಾಯಕರು ೧೯೬೮ ರಷ್ಟು ಹಿಂದೆಯೇ 'ವಿಮೋಚನೆ' ಎಂಬ ನಾಟಕವೊಂದನ್ನು ಬರೆದರು. 'ಕಾದು ಅರಳು' ಎಂಬ ಕವನ ಸಂಕಲನವೊಂದನ್ನು ೮೦ ರ ದಶಕಾರಂಭದಲ್ಲಿ ಪ್ರಕಟಿಸಿದರು. ಆ ನಂತರ ಪ್ರಕಟಿಸಿದ 'ಹಂಸಪಥ' (೨೦೦೧) ಕವನ ಸಂಕಲನವೇ

ಆಗಲಿ, ಇತ್ತೀಚೆ ಪ್ರಕಟಿಸಿದ 'ಕಾಡು–ಹಾಡು' ಕವನ ಸಂಗ್ರಹವೇ ಆಗಲಿ ನಾಯಕರ ಕಾವ್ಯದ ದಾರಿ, ಕವಿತೆ ಹೇಗಿರಬೇಕೆಂಬ ಅವರ ನಿಲುವುಗಳಿಗೆ ಮಾದರಿಯಾಗಿವೆ.

'ಜನಪದ' ಸಾಹಿತ್ಯ ಸಂಗ್ರಹ ಕಾರ್ಯದಲ್ಲೂ ಕೂಡ ನಾಯಕರದು 'ಏಕತಾನೀಯ ನಡಿಗೆಯಲ್ಲ' ಎಂಬುದಕ್ಕೆ ಅವರ ಲಭ್ಯವಿರುವ ಕೃತಿಗಳನ್ನೇ ಉದಾರಿಸಬಹುದು. ಜನಪದ ಹಾಡು, ಜನಪದ ಕತೆಗಳು, ಜನಪದ ಕಥನಕವನಗಳು, ಗ್ರಾಮದೇವತೆಗಳ ಹಾಡುಗಳು, ಜನಪದ ಆಟಗಳು– ಹೀಗೆ ಬೇರೆ ಬೇರೆ ಪ್ರಕಾರಗಳ ಸಂಗ್ರಹಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ನಾಯಕರು 'ಅಭಿಮನ್ಯು' ಎಂಬ ಜನಪದ ಖಂಡಕಾವ್ಯವನ್ನೂ ಕೂಡ ಸಂಪಾದಿಸಿದವರಾಗಿದ್ದಾರೆ. ಹಾಲಕ್ಕಿಗಳು, ನಾಮಧಾರಿಗಳು, ನಾಡವರು, ಕೋಮಾರಪಂಥರೇ ಮೊದಲಾಗಿ ವಿವಿಧ ಜಾತಿವರ್ಗಕ್ಕೆ ಸೇರಿದ ಜನಪದ ಸಾಹಿತ್ಯದ ಪ್ರಮುಖ ವಕ್ತಾರರಾಗಿ ಇಂದು ಅವರು ನಮ್ಮ ಮಧ್ಯೆ ಇದ್ದಾರೆ. ಕೇವಲ ಸಂಗ್ರಹ ಮತ್ತು ಪ್ರಕಟಣೆ ಮಾತ್ರವಲ್ಲದೇ ಉತ್ತರ ಕನ್ನಡ ಜಿಲ್ಲೆಯ ಸಂಸ್ಕೃತಿಯ ಕುರಿತು ಜಿಲ್ಲೆಯ ಜಾನಪದದ ಒಟ್ಟಾರೆ ಶ್ರೀಮಂತಿಕೆಯ ಕುರಿತು ಅಧ್ಯಯನಯೋಗ್ಯ ಪ್ರಬಂಧಗಳನ್ನು ಮಂಡಿಸಿ ಕೃತಿರೂಪದಲ್ಲಿ ಪ್ರಕಟಿಸಿದವರಾಗಿದ್ದಾರೆ. ಇವರು ಸಂಗ್ರಹಿಸಿದ ಜನಪದ ಸಾಹಿತ್ಯದ ಪಟ್ಟಿ ಸಾಕಷ್ಟು ದೊಡ್ಡದಿದೆ. 'ಕಾರವಾರ ಜಿಲ್ಲೆಯ ಜನಪದ ಗೀತೆಗಳು', 'ಕನ್ನಡ ಬಯಲಾಟ ಪರಂಪರೆ' 'ಕರ್ನಾಟಕದ ಶಕ್ತಿದೇವತೆಗಳು', 'ಜಾನಪದ ಮೆಲಕು' ಜಾನಪದ ಕವಳಪೇಳಿ', 'ಹಾಲಕ್ಕಿ ಒಕ್ಕಲಿಗರ ಜನಪದ ಗೀತೆಗಳು', 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ', 'ಗಾಮೊಕ್ಕಲು: ಒಂದು ಸಾಂಸ್ಕೃತಿಕ ಅಧ್ಯಯನ', 'ಜೇಂಗೊಡ', 'ಪಡುಕೋಗಿಲೆ', 'ಹೇಳುತೇವೋ ಗುಮಟೆ ಪದ ನಾವ', ಕೂಸಾಯ್ತು ನಮ್ಮ ಕೊಮಾರಗೆ' 'ತುಳಸಿ ತಿಮ್ಮಪ್ಪರಾಯ', 'ಬಂದಾನೆ ಬಲಿಯಂದ್ರರಾಯ', 'ಗಾಮೊಕ್ಕಲ ಮಹಾಭಾರತ', 'ಹಳ್ಳೇರ ಜನಪದ ಸಾಹಿತ್ಯ', 'ಮುಕ್ರಿಗಳ ಜನಪದ ಗೀತೆ ಮತ್ತು ಕತೆಗಳು', ಇತ್ಯಾದಿ ಇತ್ಯಾದಿ.

ಒಂದೆಡೆ ಜನಪದ ಕತೆ, ಕವನ, ಕಲೆ, ಕ್ರೀಡೆಗಳ ಸಂಗ್ರಹಕಾರ್ಯ, ಇನ್ನೊಂದೆಡೆ ವಿವಿಧ ಜನಾಂಗಗಳ ಸಾಂಸ್ಕೃತಿಕ ಅಧ್ಯಯನ ಕಾರ್ಯ, ಮತ್ತೊಂದೆಡೆ ಜಾನಪದ ಲೋಕದ ವಿಮರ್ಶಾಕಾರ್ಯ– ಹೀಗೆ ತಮ್ಮ ಬದುಕಿನ ಬಹುಭಾಗವನ್ನು ಜಾನಪದಕ್ಕೆ ಅರ್ಪಿಸಿಕೊಂಡ ಎನ್.ಆರ್. ನಾಯಕರು ಅಂಕೋಲೆಯವರೆಂಬುದೊಂದು ಅಭಿಮಾನದ ಸಂಗತಿಯಾಗಿದೆ. ಹೊನ್ನಾವರದಲ್ಲಿ 'ಜಾನಪದ ಪ್ರಕಾಶನ' ಸಂಸ್ಥೆಯೊಂದನ್ನೂ ನಡೆಸಿಕೊಂಡು ಬರುತಿದ್ದಾರೆ.

ವಿಷ್ಣು ನಾಯ್ಕ

ಅಂಕೋಲೆಯಲ್ಲಿ ಹುಟ್ಟಿ, ಉತ್ತರ ಕನ್ನಡ ಜಿಲ್ಲೆಯನ್ನು ತಮ್ಮ ಸಾಂಸ್ಕೃತಿಕ ಕಾರ್ಯಕ್ಷೇತ್ರವಾಗಿ ಸ್ವೀಕರಿಸಿ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗದಲ್ಲಿ ಹತ್ತು ಹಲವು ಪ್ರಯೋಗಗಳನ್ನು ನಡೆಸಿ ನಾಡಿನ ಸಾಂಸ್ಕೃತಿಕ ವಲಯದಲ್ಲಿ ಅಂಕೋಲೆಗೆ ಒಂದು ವಿಶಿಷ್ಟ ಸ್ಥಾನ ಪ್ರಾಪ್ತವಾಗುವಂತೆ ಮಾಡುವಲ್ಲಿ ಯಶಸ್ವಿಯಾದ ಅಂಬಾರಕೊಡ್ಲದ ವಿಷ್ಣು ನಾಯ್ಕರು ಕಾವ್ಯ ನಾಟಕ, ಕಥೆ, ಅಂಕಣಬರಹ, ಸ್ಮೃತಿಚಿತ್ರಗಳು, ಪ್ರಬಂಧ, ವಿಮರ್ಶೆ, ವ್ಯಕ್ತಿ ಚಿತ್ರಣ, ಮಾನವಿಕ, ಸಂಶೋಧನೆ – ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿ ನಾಡಿನ ಗಮನ ಸೆಳೆದ ಪ್ರಮುಖ ಚಿಂತನ ಬರಹಗಾರರಲ್ಲಿ ಒಬ್ಬರೆನಿಸಿದ್ದಾರೆ.

ತಮ್ಮ ೪೫ ವರ್ಷಗಳ ಬರವಣಿಗೆಯ ಬದುಕಿನಲ್ಲಿ ಈಗಾಗಲೇ ೫೫ ಗ್ರಂಥಗಳನ್ನು ಕನ್ನಡ ಸಾಹಿತ್ಯಕ್ಕ ಕೊಟ್ಟಿರುವ ವಿಷ್ಣು ನಾಯ್ಕರ ಹನ್ನೊಂದು ಕವನ ಸಂಕಲನಗಳು, ೮ ನಾಟಕಗಳು, ವಿಚಾರ–ವಿಮರ್ಶೆ, ಚರಿತ್ರೆ ಮತ್ತು ಅಂಕಣ ಸಾಹಿತ್ಯಕ್ಕೆ ಸೇರಿದ ಹತ್ತು ಸ್ವತಂತ್ರ ಗ್ರಂಥಗಳಿವೆ. ಡಾ. ಗೌರೀಶ ಕಾಯ್ಕಿಣಿ ಸಮಗ್ರ ಸಾಹಿತ್ಯವನ್ನು ಹತ್ತು ಬೃಹತ್ ಸಂಪುಟಗಳಲ್ಲಿ ಸಂಪಾದಿಸಿ ನಾಡಿಗೆ ಉಪಕಾರ ಮಾಡಿದ್ದಾರೆ. 'ಅಕಬರ ಅಲಿ ಜೀವನ ಸಾಹಿತ್ಯ', 'ಸಾಹಿತ್ಯದಲ್ಲಿ ನವ್ಯತೆ,' 'ಉತ್ತರ ಕನ್ನಡದ ಕವನಗಳು' (ಶ್ಯಾಮ ಹುದ್ದಾರರೊಂದಿಗೆ) 'ಜಿನದೇವ ನಾಯಕ ಬದುಕು– ಬರಹ', 'ದಿನಕರ ದೇಸಾಯಿ ಆಯ್ದ ಚೌಪದಿಗಳು', ವಿ. ವೆ. ತೊರ್ಕೆ ಸಮಗ್ರ ಸಾಹಿತ್ಯ' 'ನೀವೂ ದಾರಕಟ್ಟಿ' (ಬಹುಮಾನಿತ ಕಥಾ ಸಂಕಲನ) ಮುಂತಾದ ಇನ್ನೂ ಅನೇಕ ಗ್ರಂಥಗಳನ್ನು ಸಂಪಾದಿಸಿಕೊಟ್ಟಿದ್ದಾರೆ. 'ಸುಮನ' (೧೯೭೩), 'ಆ ರತಿ ಈ ರೀತಿ' (೧೯೭೮), 'ನನ್ನ ಅಂಬಾರಕೊಡಲು'(೧೯೮೩), 'ವಾಸ್ತವ' (೧೯೮೮), 'ಹೊಸಬತ್ತ' (೧೯೯೨), 'ಕಳಕೊಂಡ ಕವಿತೆ' (೧೯೯೬), 'ಆಲ ಮತ್ತು ಬಾಲ'(೧೯೯೮), 'ನೋವು ಪ್ರೀತಿಯ ಪ್ರಶ್ನೆ' (೧೯೯೮ ರವರೆಗಿನ ಆಯ್ದ ಕವನಗಳ ಸಂಗ್ರಹ), 'ಮುಚ್ಚಿದ ಬಾಗಿಲು ಮತ್ತು ಮರಿಗುಬ್ಬಿ'

(೨೦೦೦), 'ಬೆಳಕಿನ ಕರೆ' (೨೦೦೨)', 'ಭಾವ' (೨೦೦೩)– ಇವು ವಿಷ್ಣು ನಾಯ್ಕರ ಕವನ ಸಂಕಲನಗಳು. 'ಸರಾಯಿ ಸೂರಪ್ಪ', 'ಬೋಳುಗುಡ್ಡ', 'ಭಿನ್ನಹಕೆ ಬಾಯಿಲ್ಲ', 'ಒಂದು ಹನಿ ರಕ್ತ', 'ಅಯ್ನೋರ ಪೂಜೆ', 'ಸಾವಿನ ಹಾದಿ', 'ಯುದ್ಧ', 'ಪ್ರೀತಿ ಜಗತ್ತಿನ ದೊರೆ', – ಇವು ವಿಷ್ಣು ನಾಯ್ಕರು ಬರೆದು ರಂಗಭೂಮಿಯಲ್ಲಿ ಪ್ರಯೋಗಿಸಿ ಪ್ರಕಟಿಸಿದ ನಾಟಕಗಳು, 'ದುಡಿಯುವ ಕೈಗಳ ಹೋರಾಟದ ಕತೆ' ನಾಯಕರು ಬರೆದ ಚಾರಿತ್ರಿಕವಾಗಿ ಮಹತ್ವದ್ದೆನಿಸಿದ ಸಮಾಜವಾದಿ ರೈತಜನಾಂದೋಲನಕ್ಕೆ ಸೇರಿದ ಕೃತಿ. (ಇದಕ್ಕೆ ಇತ್ತೀಚೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನವೂ ಬಂದಿದೆ.) 'ಮರ್ಯಾದೆ', 'ಪ್ರಮಾಣ' 'ವರ್ತಮಾನ ಕಣ್ಣು' ಮುಂತಾದ ವಿಚಾರ– ವಿಮರ್ಶೆಗೆ ಸೇರಿದ ಹೊತ್ತಿಗೆಗಳು. ಎರಡು ಸಂಪುಟಗಳಲ್ಲಿ ಪ್ರಕಟವಾದ 'ಅರೆಖಾಸಗಿ' ನಾಡಿನ ಗಮನ ಸೆಳೆದ ನಾಯಕರ ಸ್ಮತಿಚಿತ್ರಗಳಿರುವ ಅಂಕಣ ಬರಹಗಳ ಸಂಕಲನ, ಜನಸೇವಕ – ಕವಿ ದಿನಕರ ದೇಸಾಯಿ', 'ಸರ್ವಪಲ್ಲಿ ರಾಧಾಕೃಷ್ಣನ್' 'ಪರಿಮಳ' (ಸಂತ ಚರಿತ್ರೆ)– ಇವು ವ್ಯಕ್ತಿ ಪರಿಚಯದ ಹೊತ್ತಿಗೆಗಳು. 'ಕಣ್ಣೀರ ಕತೆಗಳು' ೧೯೭೪ ರಷ್ಟು ಹಿಂದೆಯೇ ಬಂದ ಕಥಾಸಂಕಲನವಾಗಿದೆ. 'ಹದ್ದು ಪಾರಿನ ಹಿಂದೆ ಮುಂದೆ' ರೈತ ಹೋರಾಟದ ಕಿರುಚಿತ್ರ ಇರುವ ಹೊತ್ತಿಗೆ. 'ಕವಿ– ಕರ್ಮಯೋಗಿ ದಿನಕರ ದೇಸಾಯಿ' ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಂಗವು ಪ್ರಕಟಿಸಿದ ಜನಪ್ರಿಯ ಕಿರು ಹೊತ್ತಿಗೆ. ಇವರು ಬರೆದು, ರಂಗ ಪ್ರಯೋಗದಲ್ಲಿ ಯಶಸ್ಸನ್ನು ಕಂಡ ಇನ್ನೂ ೨೩ ಅಪ್ರಕಟಿತ ನಾಟಕಗಳು ಪುಸ್ತಕರೂಪದಲ್ಲಿ ಹೊರಬೇಕಾಗಿವೆ.

ಕಾವ್ಯದಲ್ಲೂ, ಗದ್ಯದಲ್ಲೂ ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ದಾಖಲಿಸತೊಡಗಿರುವ ವಿಷ್ಣು ನಾಯ್ಕರು ರಾಘವೇಂದ್ರ ಪ್ರಕಾಶನವೆಂಬ ಸಾಂಸ್ಕೃತಿಕ ವೇದಿಕೆಯ ಮೂಲಕ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಸೇರಿದ ಸುಮಾರು ೧೬೫ ಗ್ರಂಥಗಳನ್ನು ಪ್ರಕಟಿಸುವ ಮೂಲಕವೂ ಕನ್ನಡದ ನುಡಿಶ್ರೀಮಂತಿಕೆಯನ್ನು ಪರಿಚಯಿಸಿದವರಾಗಿದ್ದಾರೆ.

ಗೀತಾ ಮನೋಹರ (ಕುಸುಮಾ ಕೇಣಿಕರ)

ಕುಸುಮಾ ಕೇಣಿಕರ (ಮದುವೆಯ ನಂತರ ಗೀತಾ ಮನೋಹರ) ೭೦ರ ದಶಕಾರಂಭದಲ್ಲೇ ಬರೆಯ ತೊಡಗಿದ ಹೊಸ ತಲೆಮಾರಿನ ಅಂಕೋಲೆಯ ಮೊದಲನೆಯ ಲೇಖಿಕಿ ಎಂಬ ಗೌರವಕ್ಕೆ ಪಾತ್ರರಾದವರು. ೧೯೭೩ ಮತ್ತು ೭೪ರಲ್ಲಿ ಮಕ್ಕಳ ಕತೆಗಳು ಭಾಗ – ೧ ಮತ್ತು ಮಕ್ಕಳ ಕತೆಗಳು ಭಾಗ – ೨ ಎಂಬ ಇವರ ಎರಡು ಪುಸ್ತಕಗಳು ಕ್ರಮವಾಗಿ ಪ್ರಕಟವಾದವು. ಕುಸುಮ ಅವರು ಗ್ರಹಿಸಿದ ಮಕ್ಕಳ ಮನಃಶಾಸ್ತ್ರ ಅವರ ಬರವಣಿಗೆಯ ಮುಖ್ಯ ಶಕ್ತಿಯಾಗಿತ್ತೆನ್ನಬಹುದು. ಆ ಎರಡು ಸಂಕಲನಗಳು ಅತ್ತ ಅನುವಾದವೂ ಅಲ್ಲ, ಇತ್ತ ಸ್ವಂತದ್ದೂ ಅಲ್ಲ ಎಂಬ ರೀತಿಯಲ್ಲಿ ಮೂಡಿ ಬಂದಿದ್ದವು. ತೀರ ಹಳೆಯ ಕಾಲದ ಇಂಗ್ಲೀಷ್ ಮತ್ತಿತರ ಭಾಷೆಗಳ ಮಕ್ಕಳ ಕತೆಗಳನ್ನು ಆಧರಿಸಿ, ಕುಸುಮಾ ಅವನ್ನು ಕನ್ನಡದ ಮಕ್ಕಳಿಗೆ ಇಷ್ಟವಾಗುವ ರೀತಿಯಲ್ಲಿ ಹೆಣೆದಿದ್ದರು.

ಅವರು, 'ಗೀತಾ ಮನೋಹರ' ಆದ ಮೇಲೆ ಕ್ರಮವಾಗಿ ೧೯೭೮ ಮತ್ತು ೧೯೮೦ ರಲ್ಲಿ ಎರಡು ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ಎರಡೂ ಬಿ. ಎನ್. ಗುಪ್ತಾ ಸ್ಮಾರಕ ಗ್ರಂಥಮಾಲೆಯಿಂದ ಹೊರ ಬಂದಿವೆ. 'ಕವನ ಕುಸುಮ' ಎಂಬ ಮೊದಲನೆಯ ಸಂಕಲನವೂ ಕೂಡ ಮಕ್ಕಳಿಗಾಗಿಯೇ ಬರೆದಿದ್ದು. ಆದರೆ ತೀರ ಚಿಕ್ಕ ಮಕ್ಕಳಿಗಾಗಿ ಅಲ್ಲ. ಹದಿಹರೆಯದ ವಿದ್ಯಾರ್ಥಿಗಳೂ ಕೂಡ ಓದಿ ಸಂತೋಷ ಪಡುವಂತಹದ್ದು. ಎರಡನೆಯದು 'ಕಾವ್ಯಲತಾ' ಎಂಬ ಹೆಸರಿನ ಸಂಕಲನ. ಇದರಲ್ಲಿಯೂ ಕೂಡ ೬ ರಿಂದ ೧೬ ರ ನಡುವಿನ ಮಕ್ಕಳು ಓದಿ ಸಂತೋಷ ಪಡಬಹುದಾದ ಸುಮಾರು ೩೦ ರಷ್ಟು ಕವನಗಳಿವೆ. ಮೊದಲ ಕವನ ಸಂಕಲನಕ್ಕೆ ಗೌರೀಶ ಕಾಯ್ಕಿಣಿಯವರ ಆಶೀರ್ವಾದ ಇದ್ದರೆ, ಎರಡನೆಯ ಸಂಕಲನಕ್ಕೆ ರಾಷ್ಟ್ರಕವಿ ಕುವೆಂಪು ಅವರದ್ದು. ಮಕ್ಕಳ ಮನಸ್ಸನ್ನು ಹಿಗ್ಗಿಸಿ. ಹೃದಯವನ್ನು ಅರಳಿಸಿ, ಅವರ ಬಾಳಿನ ಬುಗ್ಗೆಯಲ್ಲಿ ಉಲ್ಲಾಸ ಉತ್ಸಾಹ ಚೆಲ್ಲಾಡುವಂತೆ ಮಾಡುವ ಹಿರಿಯಾಸೆ ಗೀತಾ ಮನೋಹರ ಅವರದು ಎಂದಿದ್ದಾರೆ ಕಾಯ್ಕಿಣಿ. 'ಕಾವ್ಯಲತಾ' ಸಂಕಲನದಲ್ಲಿ 'ಉದಾತ್ತ ಹಾಗೂ ಉನ್ನತ ಭಾವಗಳಿವೆ. ಅವು ಹೀಗೆಯೇ ಬೆಳೆದು, ಬಲಿತು ಮಾಗಿ ಮುಂದೆ ಉತ್ಕೃಷ್ಟವಾದ ಕೃತಿಗಳು ಮೂಡುವಂತಾಗಲಿ.' ಎಂದು ಹರಿಸಿದ್ದಾರೆ– ಕುವೆಂಪು.

ಗೀತಾ ಮನೋಹರ ಅವರು ಬರೆದ ಇನ್ನೊಂದು ಮುಖ್ಯ ಕೃತಿ – ಪಾಟೀಲ ಪುಟ್ಟಪ್ಪನವರ ಜೀವನ ಪರಿಚಯಕ್ಕೆ ಸಂಬಂಧಪಟ್ಟದ್ದು. ಅಂಕೋಲೆಯ 'ಶ್ರೀ ಗೌರಿ ಮಂಜುನಾಥ ಪ್ರಕಾಶನ' ಎಂಬ ಪ್ರಕಾಶನದ

ಮೂಲಕ, 'ದಿಟ್ಟ ಪತ್ರಕರ್ತ ಪಾಟೀಲ ಪುಟ್ಟಪ್ಪನವರು' ಎಂಬ ಶೀರ್ಷಿಕೆಯ ಈ ಹೊತ್ತಿಗೆ ಬಂದಿದೆ. ಇದಕ್ಕೆ ದೇಜಗೌ ಅವರ ಆಶೀರ್ವಾದ ನುಡಿಗಳಿವೆ. ಪುಟ್ಟಪ್ಪನವರ ಎಳೆಯ ಜೀವನದ ಘಟನೆಗಳನ್ನು ಎಳೆ ಎಳೆಯಾಗಿ ಇದರಲ್ಲಿ ಚಿತ್ರಿಸಿದ್ದಾರೆ. ಅವರ ವ್ಯಕ್ತಿತ್ವದ ಮತ್ತು ವಿದ್ವತ್ತಿನ ವಿವಿಧ ಮುಖಗಳ ಪರಿಚಯವೂ ಇದೆ. ಈ ಪುಸ್ತಕಕ್ಕಿಂತ ಮೊದಲು ಇವರು ಇನ್ನೊಂದು ಹಿರಿಯ ಚೇತನದ ಪರಿಚಯ ಕೃತಿಯನ್ನು ಪ್ರಕಟಿಸಿದ್ದಾರೆ (೧೯೮೧). ನಿಷ್ಕಾಮ ಕರ್ಮಿ ವೆಂಕಟಾಚಲಪತಿಯವರು ಎಂಬುದು ಆ ಪುಸ್ತಕದ ಹೆಸರು. ೮೦ ರ ದಶಕದ ನಂತರ ಲೇಖನ ಸನ್ಯಾಸ ಸ್ವೀಕರಿಸಿದ ಈ ಲೇಖಕಿ, 'ಸಕಾಲಿಕ' ಸಾಪ್ತಾಹಿಕದಲ್ಲಿ ಬಿಡಿಬರಹಗಳ ಮೂಲಕ ಮತ್ತೆ ಕಾಣಿಸಿಕೊಂಡದ್ದನ್ನು ಇಲ್ಲಿ ನೆನೆಯಬಹುದಾಗಿದೆ.

ಶ್ರೀನಿವಾಸ ಶೆಟ್ಟಿ

ಮಕ್ಕಳ ಸಾಹಿತ್ಯ ಎಂದೊಡನೆ ಒಂದು ಕಾಲಕ್ಕೆ ಉತ್ತರ ಕನ್ನಡ ಜಿಲ್ಲೆಯಲ್ಲಿ ತಟ್ಟನೆ ಎರಡು ಹೆಸರುಗಳು ನೆನಪಾಗುತ್ತಿದ್ದವು. ಮೊದಲನೆಯವರು ದಿನಕರ ದೇಸಾಯರಾದರೆ, ಎರಡನೆಯದು ಶ್ರೀನಿವಾಸ ಶೆಟ್ಟಿಯವರದು. ೧೯೭೪ ರಲ್ಲಿ ರಾಘವೇಂದ್ರ ಪ್ರಕಾಶನದ ಮೂಲಕ ಪ್ರಕಟವಾದ ಶ್ರೀನಿವಾಸ ಶೆಟ್ಟರ ಮೊದಲ ಮಕ್ಕಳ ಕವನ ಸಂಕಲನದ ಹೆಸರು 'ಬಾಲವನ'. 'ಕಡಲ ಹಕ್ಕಿ' ಶೆಟ್ಟರ ಇನ್ನೊಂದು ಮಹತ್ವದ ಮಕ್ಕಳ ಕವನ ಸಂಕಲನ 'ಇಲಿಮರಿಯ ಜಾಣತನ' ಎಂಬ ಇವರ ಶಿಶುಗೀತೆಯು ಪ್ರಜಾವಾಣಿ ಪತ್ರಿಕೆ ತನ್ನ ದೀಪಾವಳಿ ಸಂಚಿಕೆಯ ಸಂದರ್ಭದಲ್ಲಿ ಏರ್ಪಡಿಸಿದ ಶಿಶುಕಾವ್ಯ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದದ್ದನ್ನು ಇಲ್ಲಿ ಸರಿಸಬಹುದಾಗಿದೆ. ಅದೇ ರೀತಿ 'ಗುಬ್ಬಿಮರಿ ಮತ್ತು ಬಾತುಕೋಳಿ' ಎಂಬ ಇನ್ನೊಂದು ಶಿಶುಗೀತೆ ಕೂಡ ೧೯೯೦ ರಲ್ಲಿ 'ಪ್ರಜಾವಾಣಿ' ಪತ್ರಿಕೆ ಏರ್ಪಡಿಸಿದ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದುಕೊಂಡಿತು. ೧೯೯೪ರಲ್ಲಿ ಅದೇ ಪತ್ರಿಕೆ ಏರ್ಪಡಿಸಿದ ಸ್ಪರ್ಧೆಯಲ್ಲಿ ಇವರ 'ಮಗು ಮತ್ತು ಹಕ್ಕಿ' ಎಂಬ ಕವನ ಪುನಃ ಇನ್ನೊಮ್ಮೆ ಬಹುಮಾನವನ್ನು ಗೆದ್ದುಕೊಂಡಿತು. ಈ ಉಲ್ಲೇಖ ಯಾಕೆ ಮಾಡುತ್ತಿದ್ದೇನೆಂದರೆ ಶ್ರೀನಿವಾಸ ಶೆಟ್ಟರು ಶಿಶುಗೀತೆ ಬರೆಯುವಾಗ ಶಿಶುವಿನ ಮುಗ್ಧತೆಯನ್ನು ಇಡಿಯಾಗಿ ಅನುಭವಿಸುವ ಪರಿ ಅವರ ಎಲ್ಲ ಮಕ್ಕಳ ಕವನಗಳಲ್ಲೂ ಕಾಣಬಹುದಾಗಿದೆ. ಶೆಟ್ಟರು 'ಮುಳ್ಳುಗಳ್ಳಿ' ಎಂಬ ಹೆಸರಿನ ಭಾವಗೀತೆಗಳ ಸಂಕಲನವೊಂದನ್ನು ಹೊರತಂದಿದ್ದು, ಕೆಲವೆಡೆ ಅಪೂರ್ವ ಕಲ್ಪನೆಗಳ ಜೊತೆಗೆ ಹರಿತ ವಿಡಂಬನೆಯನ್ನೂ ಇಲ್ಲಿಯ ಕವನಗಳು ನಮ್ಮ ಅನುಭವಕ್ಕೆ ತರುತ್ತವೆ. ಇವುಗಳ ಹೊರತಾಗಿ ಇವರ ಒಂದೆರಡು ಪುಟಾಣಿ ಪದ್ಯ ಸಂಕಲನಗಳು ಬಂದಿವೆಯೆಂದು ಕೇಳಿರುವೆನಾದರೂ ಓದಲು ಸಿಕ್ಕಿಲ್ಲ.

ಶಾಂತಾರಾಮ ನಾಯಕ ಹಿಚಕಡ

'ಕಾಡ ಹೆಣ್ಣು' ಕವನ ಸಂಕಲನದ ಮೂಲಕ (೧೯೭೬) ನಾಡಿಗೆ ಪರಿಚಿತರಾದ ಕವಿ ಶಾಂತಾರಾಮ ನಾಯಕ ಅಲ್ಲಿಂದ ಇಲ್ಲಿಯವರೆಗೆ ಪದ್ಯ ಮತ್ತು ಗದ್ಯಗಳೆರಡರಲ್ಲೂ ತಮ್ಮ ಸೃಜನಶೀಲ ಪ್ರತಿಭೆಯನ್ನು ದಾಖಲಿಸುತ್ತಲೇ ಬಂದವರು. ಇದುವರೆಗೆ ಐದು ಕವನ ಸಂಕಲನಗಳನ್ನು, ಸ್ವಾತಂತ್ರ್ಯ ಹೋರಾಟದ ಚರಿತ್ರೆಗೆ ಸಂಬಂಧಪಟ್ಟ ಗ್ರಂಥವೊಂದನ್ನು, ವೈಚಾರಿಕ ಬಿಡಿಬರಹಗಳ ಹೊತ್ತಿಗೆಯೊಂದನ್ನು ಹೊರತಂದಿರುವ ಶಾಂತಾರಾಮ ನಾಯಕ ಒಬ್ಬ ಭಾವಜೀವಿ. ಅಂತೆಯೇ ಅವರ ಕವನಗಳಲ್ಲಿ ಭಾವನೆಯ ಭಾರ ಎಲ್ಲೆಲ್ಲೂ ವ್ಯಕ್ತವಾಗುವುದನ್ನು ಕಾಣುತ್ತೇವೆ.

'ಕಾಡ ಹೆಣ್ಣು', (೧೯೭೬) 'ದಾರಿಮಾಡಿಕೊಡಿ' (೧೯೮೪), 'ಅನುಭವ'(೧೯೮೮), 'ಆತಂಕ'(೧೯೯೮), 'ಅನುರಾಗ'(೨೦೦೬)–ಇವು ಶಾಂತಾರಾಮ ನಾಯಕರ ಪ್ರಕಟಿತ ಕವನ ಸಂಕಲನಗಳು. 'ಚರಿತ್ರೆಯಲ್ಲಿ ಮರೆತವರ ಕತೆ' (೧೯೯೫), ಸ್ವಾತಂತ್ರ್ಯ ಹೋರಾಟದಲ್ಲಿ ದೇಶಕ್ಕಾಗಿ ಹೋರಾಡಿಯೂ, ತ್ಯಾಗ ಮಾಡಿಯೂ ಉಪೇಕ್ಷೆಗೆ ಒಳಗಾದವರೆನ್ನಲಾದ ಸಾಮಾನ್ಯ ಜನರ ಅಸಮಾನ್ಯ ಸಾಹಸದ ಕತೆಗಳಿಂದ ಕೂಡಿರುವ ಗ್ರಂಥವಾಗಿದೆ. 'ಹಂಬಲ' (೨೦೦೪) ಎನ್ನುವುದು ಆಗಲೇ ಹೇಳಿದಂತೆ ಬಿಡಿ ಲೇಖನಗಳ ಸಂಕಲನ. ಇವುಗಳ ಹೊರತಾಗಿ ಗ್ರಂಥ ರೂಪದಲ್ಲಿ ಕಾಣಿಸಿಕೊಳ್ಳದೆ ಇರುವ ಬಿಡಿಲೇಖನಗಳು, ಕತೆ–ಕವನಗಳು ಜನಾಂಗೀಯ ಅಧ್ಯಯನಕ್ಕೆ ಸಂಬಂಧಪಟ್ಟ ಇನ್ನೂ ಬಹಳಷ್ಟು ಲೇಖನಗಳಿವೆಯೆಂದು ಕೇಳಿದ್ದೇನೆ.

೮೦ರ ದಶಕದಲ್ಲಿ ತನ್ನ ಊರು ಹಿಚಕಡದಲ್ಲಿ ಇವರು ಆರಂಭಿಸಿದ ಜಿನದೇವ ಪ್ರಕಾಶನದಿಂದ ಈಗಾಗಲೇ ೨೦ಕ್ಕಿಂತ ಹೆಚ್ಚು ಪುಸ್ತಕಗಳು ಪ್ರಕಟವಾಗಿದ್ದು, ಆ ಮೂಲಕವೂ ಕೂಡ ಕನ್ನಡದ ಕೆಲಸವನ್ನು

ಶಾಂತಾರಾಮ ನಾಯಕರು ಮಾಡುತ್ತಿದ್ದಾರೆ. ಆದರ್ಶ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಉದ್ದಕ್ಕೂ ಜನಮುಖಿಯಾಗಿ ಮೂಡಿ ಬಂದ ಇವರ ಬರವಣಿಗೆ, ಆ ಕಾರಣಕ್ಕಾಗಿಯೂ ಉಲ್ಲೇಖಕ್ಕೆ ಅರ್ಹವಾಗಿದೆ.

ಶ್ಯಾಮ ಹುದ್ದಾರ

ಶ್ಯಾಮ ಹುದ್ದಾರ ಮೂಲತಃ ಬಾಗಲಕೋಟೆ–ಯವರಾದರೂ ಕಳೆದ ೫೦ ವರ್ಷಗಳಿಂದ ಅಂಕೋಲೆಯ ಜನ–ಮನದಲ್ಲಿ ಬೆರೆತು ಇಲ್ಲಿಯೇ ನೆಲೆನಿಂತವರು. ಅತ್ಯುತ್ತಮ ಹರಟೆಗಳನ್ನು ಬರೆಯುತ್ತ ಗ್ರಂಥರೂಪದಲ್ಲಿ ಕಾಣಿಸಿಕೊಳ್ಳುವ ಮೊದಲೇ ನಾಡು ಗುರುತಿಸಿದ ಲೇಖಕರಾಗಿದ್ದಾರೆ. ೧೯೭೬ರಲ್ಲಿ ಪ್ರಕಟವಾದ ಇವರ ೧೨ ಹರಟೆಗಳ ಸಂಕಲನ 'ಖಾನಾವಳಿ ಡಬ್ಬಿ', ಆ ಕಾಲಮಾನಕ್ಕೆ ಹೋಲಿಸಿದರೆ ಅದುವರೆಗೆ ಬಂದ ಅತ್ಯುತ್ತಮ ಲಲಿತ ಪ್ರಬಂಧಗಳ ಸಂಕಲನಗಳಲ್ಲೊಂದೆನಿಸಿದೆ. ಅನೇಕರು ನಿರ್ಲಕ್ಷಿಸಿಬಿಡಬಹುದಾಗಿದ್ದ ವಸ್ತುಗಳನ್ನು ಎತ್ತಿಕೊಂಡು ಹುದ್ದಾರರು ಸೊಗಸಾಗಿ ಹರಟೆಗಳನ್ನು ಬರೆದರು. ಸುಪ್ತ ಮನದಲ್ಲಿರುವ ಅವರ ಹಾಸ್ಯಪ್ರಜ್ಞೆಯಲ್ಲಿ ಅನನ್ಯತೆ ಇದೆ. ಯಾಕೋ ಈ ಸಾಹಿತ್ಯ ಪ್ರಕಾರದಲ್ಲಿ ನಿರೀಕ್ಷೆಯಂತೆ ಅವರು ಮುಂದುವರಿಯಲೇ ಇಲ್ಲ. ಅಷ್ಟರಮಟ್ಟಿಗೆ ಅದೊಂದು ಕೊರತೆ ಎಂದೇ ಹೇಳಬಹುದು. ತೀಕ್ಷ್ಣ ವಿಡಂಬನೆ, ನವುರಾದ ಹಾಸ್ಯ ಇವರ ಬರವಣಿಗೆಯ ಪ್ರಧಾನ ಲಕ್ಷಣಗಳು.

ಹರಟೆ ಬರೆಯಲು ಪ್ರಾರಂಭಿಸಿದಾಗ ಅಥವಾ ಅದಕ್ಕಿಂತ ಪೂರ್ವದಲ್ಲಿ ಕೂಡ ಹುದ್ದಾರರು ಸೊಗಸಾದ ಚೌಪದಿಗಳನ್ನು ಬರೆಯುತ್ತಿದ್ದರು. ಕಾಲ ಕ್ರಮೇಣ ಈ ಚೌಪದಿಯ ನೆಗಸು ನಾಡಿನ ನಾಲ್ಕೂ ದಿಕ್ಕಿನಿಂದ ಮೀರಿ ಹರಿಯತೊಡಗಿದಂತೆ, ಹುದ್ದಾರರು ಅದರಿಂದ ತಪ್ಪಿಸಿಕೊಂಡರು. ಚೌಪದಿಯ ಬದಲಿಗೆ ಆಧುನಿಕ ತ್ರಿಪದಿಗಳನ್ನು ಬರೆಯಲು ಪ್ರಾರಂಭಿಸಿದರು. ನಾಡಿನ ನಾಮಾಂಕಿತ ಪತ್ರಿಕೆಗಳ ಗಮನ ಸೆಳೆದ ಇವರ ತ್ರಿಪದಿಗಳು ಮುಂದೆ, 'ಉಸುಕಿನ ಭೂಮ್ಯಾಗ ಕುಸುಬೀಯ ಬಿತ್ತೇನ' ಎಂಬ ಹೆಸರಿನಲ್ಲಿ (೧೯೯೬) ಪ್ರಕಟವಾದುದನ್ನು ಇಲ್ಲಿ ನೆನೆಯಬಹುದಾಗಿದೆ. ಇವರ 'ಖಾನಾವಳಿ ಡಬ್ಬಿ' ಯಾಗಲಿ, ತ್ರಿಪದಿ ಸಂಕಲನವಾದ 'ಉಸುಕೀನ ಭೂಮ್ಯಾಗ ಕುಸುಬೀಯ ಬಿತ್ತೇನ' ಎಂಬ ಸಂಕಲನವಾಗಲಿ ಸಾವಿಲ್ಲದ ಹೊತ್ತಿಗೆಗಳೆಂದೇ ನನ್ನ ಭಾವನೆ. ಆಗಾಗ ಬಿಡಿಲೇಖನಗಳನ್ನೂ ಬರೆದಿದ್ದಾರೆ. ವಿಷ್ಣು ನಾಯ್ಕರ ಜೊತೆ ಸೇರಿ 'ಉತ್ತರ ಕನ್ನಡದ ಕವನಗಳು' ಎಂಬ ಗ್ರಂಥವನ್ನು ಸಂಪಾದಿಸಿದ್ದಾರೆ. ಇವರ ಎಲ್ಲ ಕೃತಿಗಳನ್ನು ರಾಘವೇಂದ್ರ ಪ್ರಕಾಶನವೇ ಪ್ರಕಟಿಸಿದೆ.

ಶಾಂತಿ ನಾಯಕ

ಜನಪದ ಸಾಹಿತ್ಯ ಕ್ಷೇತ್ರಕಾರ್ಯದಲ್ಲಿ ಎನ್. ಆರ್. ನಾಯಕರ ಜೊತೆಗೂಡಿ ಬಹುಉಪಯುಕ್ತವಾಗಿ ದುಡಿದ ಶ್ರೀಮತಿ ಶಾಂತಿ ನಾಯಕ, ಸಾಹಿತ್ಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಡಾ. ಎನ್. ಆರ್. ನಾಯಕ ಮತ್ತು ಶಾಂತಿ ನಾಯಕ ಇವರಿಬ್ಬರ ಕ್ಷೇತ್ರಕಾರ್ಯದಲ್ಲಿ ಮತ್ತು ಬರವಣಿಗೆಯಲ್ಲಿ ಯಾರ ಪ್ರಭಾವ ಯಾರ ಮೇಲೆ ಆಯಿತೆಂಬುದು ತಿಳಿಯದು. ಆದರೆ ಪರಸ್ಪರ ಒಬ್ಬರನ್ನೊಬ್ಬರು ಪ್ರಭಾವಿಸಿಯೂ ಪ್ರತ್ಯೇಕವಾಗಿ ನಿಂತು, ಜನಪದ ಕ್ಷೇತ್ರಕಾರ್ಯದ ಅಸ್ತಿತ್ವವನ್ನು ದಾಖಲಿಸಿರುವ ತಾಕತ್ತುಳ್ಳವರು ಎಂಬುದೇ ಹೆಚ್ಚು ಸರಿಯಾದುದಾಗಿದೆ.

'ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಕತೆಗಳು', 'ಜಾಣೆ ಕನ್ನಡವ ತಿಳಿದ್ದೇಳೆ', 'ಜಾನಪದ ಸುಧಾಸಂಚಯ', 'ಕಾಗಕ್ಕ–ಗುಬ್ಬಕ್ಕ', 'ಜಾನಪದ ವೈದ್ಯಕೀಯ ಅಡುಗೆಗಳು', 'ಕುಡಿತ ನಿಮಗೆಷ್ಟು ಹಿತ?', 'ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಹುಡುಕುವುದೆ?', 'ದೇವಕಿ ಓದಿದಳು', 'ಸಿಂಕೋನ' 'ಜಾನಪದ ಲೇಖನ ಸಂಚಯ' – ಇವು ಶ್ರೀಮತಿ ಶಾಂತಿ ನಾಯಕರು ಬರೆದ ಮತ್ತು ಸಂಪಾದಿಸಿದ ಹೊತ್ತಿಗೆಗಳು. ಉತ್ತರ ಕನ್ನಡ ಜಿಲ್ಲೆಯಲ್ಲಿ ಜನಪದ ಕ್ಷೇತ್ರದೊಳಗೆ ಇವರಂತೆ ದುಡಿದ ಇನ್ನೊಬ್ಬ ಮಹಿಳೆ ಸಿಗುವುದಿಲ್ಲ.

ಶಾಂತಾರಾಮ ಬಾಳೆಗುಳಿ

ಶಾಂತಾರಾಮ ಬಾಳೆಗುಳಿ ಉತ್ತರ ಕನ್ನಡ ಜಿಲ್ಲೆ ಕಂಡ ಚಿಂತನಶೀಲ ಕವಿಗಳಲ್ಲಿ ಒಬ್ಬರು. ನಾನು ಸಮಯ ಸಂದರ್ಭ ಸಿಕ್ಕಾಗಲೆಲ್ಲ ಇವರನ್ನು 'ಕಸಬರಿಗೆ'ಯ ಕವಿ ಎಂದೇ ಕರೆಯುತ್ತಿದ್ದುದಿದೆ. 'ಕಸಬರಿಗೆ' ಇದು ಇವರ ಚೌಪದಿ ಸಂಕಲನವೊಂದರ ಹೆಸರೂ ಕೂಡ. ಜನಸಾಮಾನ್ಯರ ನಿತ್ಯದ ಸಮಸ್ಯೆಗಳನ್ನು, ಗಬ್ಬೆದ್ದು ನಾರುತ್ತಿರುವ ನಮ್ಮ ರಾಜಕೀಯ ಕ್ಷೇತ್ರವನ್ನು ಮತ್ತು ಇತರ ಎಲ್ಲ ಕ್ಷೇತ್ರಗಳಲ್ಲಿ ಕಂಡುಬರುತ್ತಿರುವ ಮುಖವಾಡದ ಬದುಕನ್ನು ಶಾಂತಾರಾಮ ಬಾಳೆಗುಳಿ

(ಶಾಂತಾರಾಮ ಚೂಡ್ಯಾ ನಾಯ್ಕ) ತಮ್ಮ ಚೌಪದಿಗಳಿಗೆ ವಸ್ತುವನ್ನಾಗಿ ಮಾಡಿಕೊಂಡು ಅತ್ಯಂತ ಹರಿತವಾದ ಕಟಕಿಗಳೊಂದಿಗೆ ದಾಖಲೆಗೊಳಿಸಿದ್ದು ನೂರ್ಕಾಲ ನೆನೆಯಬಹುದಾದ ಸಂಗತಿ, 'ಕೋಲಸಂಪಿಗೆ' ಇವರು ೧೯೮೪ ರಲ್ಲಿ ಹೊರತಂದ ಭಾವಗೀತೆಗಳ ಮತ್ತು ಸಾಂದರ್ಭಿಕ ಗೀತೆಗಳ ಕವನ ಸಂಕಲನವಾಗಿದೆ. ಇವರ ಚೌಪದಿಗಳಲ್ಲಿರುವ ಚುರುಕುತನ ಹಾಗೂ ಹರಿತ ವಿಡಂಬನೆಗಳು ಈ ಸಂಕಲನದ ಕವಿತೆಗಳಲ್ಲಿ ಇಲ್ಲದಿದ್ದರೂ ಕೆಲವು ಕವಿತೆಗಳು ಉತ್ತಮವಾಗಿರುವ ಕಾರಣಕ್ಕಾಗಿ ಓದುಗರ ಮೆಚ್ಚುಗೆ ಪಡೆದಿದೆ.

ಇವುಗಳ ಹೊರತಾಗಿ ಶಾಂತಾರಾಮ ಬಾಳೆಗುಳಿ ಅವರು ಬರೆದ ಕನ್ನಡದ ಗಾದೆಗಳ ಪುಸ್ತಕ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗಾದೆ ಮಾತುಗಳನ್ನು ವಿಸ್ತರಿಸುವುದರ ಬಗೆ ಹೇಗೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ನೀಡುತ್ತಿದ್ದು, ಈಗಾಗಲೇ ಅದರ ಸುಮಾರು ೧೦ ಸಾವಿರಕ್ಕಿಂತ ಹೆಚ್ಚು ಪ್ರತಿಗಳು ಧಾರವಾಡದ ಸಮಾಜ ಪುಸ್ತಕಾಲಯದ ಮೂಲಕ ಮಾರಾಟವಾಗಿರುವುದು ವಿಶೇಷ ಉಲ್ಲೇಖಕ್ಕೆ ಅರ್ಹವಾದ ಸಂಗತಿಯಾಗಿದೆ. ಅಂತೆಯೇ ಒಂದು ಪುಟ್ಟ ಪ್ರಬಂಧ ಸಂಕಲನವನ್ನೂ ಬರೆದಿದ್ದಾರೆಂದು ಕೇಳಿದ್ದೇನೆ, ಓದಲು ಸಿಕ್ಕಿಲ್ಲ.

ಜಿನದೇವ ನಾಯಕ

ಕಾವ್ಯ ಮತ್ತು ವಿಮರ್ಶಾ ಕ್ಷೇತ್ರಗಳಲ್ಲಿ ಅಪಾರವಾದ ಆಸಕ್ತಿಯನ್ನು ಮೈಗೂಡಿಸಿಕೊಂಡಿದ್ದ ಪ್ರೊ. ಜಿನದೇವ ನಾಯಕ ಅವರು ಅಂಕೋಲಾ ತಾಲೂಕಿನ ಅಗ್ರಗೋಣದವರು (೧೯೩೭). ವಿಮರ್ಶೆಯ ಹಾದಿಯಲ್ಲಿರುವ ಇವರ ಆರಂಭದ ಹೆಜ್ಜೆಗಳು ಅಂಕೋಲೆ ಇನ್ನೊಬ್ಬ ಜಿ. ಎಚ್. ನಾಯಕರನ್ನು ನಾಡಿಗೆ ನೀಡಲಿದೆಯೇ ಎಂಬ ಕುತೂಹಲವನ್ನು ಹುಟ್ಟಿಸಿ ಬಿಟ್ಟಿದ್ದವು. ೧೯೬೫ ರಲ್ಲಿ ಕಾರವಾರದೊಳಗೆ ೪೫ನೆಯ ಕನ್ನಡ ಸಾಹಿತ್ಯ ಸಮ್ಮೇಲನ ನಡೆದಾಗ ಜಿನದೇವ ನಾಯಕರ ಸಂಪಾದಕತ್ವದಲ್ಲಿ 'ಕಡಲಧ್ವನಿ' ಎಂಬ ಒಂದು ವಿಶೇಷ ಹೊತ್ತಿಗೆ (ಸಮ್ಮೇಳನದ ವಿಶೇಷ ಸಂಚಿಕೆಯ ಹೊರತಾಗಿ) ಬಂದದ್ದು ಈ ಸಂದರ್ಭದಲ್ಲಿ ನೆನಪಾಗುತ್ತದೆ. ಆ ಹೊತ್ತಿಗೆಯಲ್ಲಿ ನಾಯಕರು, ಹಿರಿಯರಾದ ವಿ. ಸೀ. ಶಿವಾರಾಮ ಕಾರಂತ, ದಿನಕರ ದೇಸಾಯಿ, ಬಿ. ಎಚ್. ಶ್ರೀಧರ, ಜಿ. ವೆಂಕಟಸುಬ್ಬಯ್ಯ ಬಡಕ್ಕಿಲ ಕೃಷ್ಣ ಭಟ್, ಎಲ್. ಆರ್. ಹೆಗಡೆ, ಗೌರೀಶ ಕಾಯ್ಕಿಣಿ, ಜಿ. ಆರ್. ಪಾಂಡೇಶ್ವರ, ಜಿ. ಎಚ್. ನಾಯಕ, ಡಿ. ಎನ್.ರಾಯ್ಕರ ಮುಂತಾದವರ ಪ್ರಬುದ್ಧ ಬರಹಗಳನ್ನು ಪೋಣಿಸಿ ಅದನ್ನೊಂದು ಮಹತ್ವದ ಆಕರಗ್ರಂಥವನ್ನಾಗಿ ರೂಪಿಸಿದರು. ಜಿನದೇವ ನಾಯಕರ ಸಾಹಿತ್ಯಾಸಕ್ತಿ ಮಾತ್ರವಲ್ಲದೇ ಅವರು ಇಷ್ಟಪಡುವ ಬರವಣಿಗೆಯ ದಾರಿದಿಕ್ಕುಗಳನ್ನು ಕೂಡ ಸೂಚ್ಯವಾಗಿ ಪರಿಚಯಿಸಬಹುದಾದ ಕೆಲವು ಲೇಖನಗಳು ಆ ಹೊತ್ತಿಗೆಯಲ್ಲಿ ಉಳಿದುಕೊಂಡಿವೆ.

'ಕೌರವರೂ ಪಾಂಡವರೂ ಕ್ಷೇಮದಿಂದಿರುವರೇ?' – ಇದು ಅಂಕೋಲೆಯ ರಾಘವೇಂದ್ರ ಪ್ರಕಾಶನದ ಮೂಲಕ ಜಿನದೇವ ನಾಯಕರು ೧೯೮೧ ರಷ್ಟು ಹಿಂದೆ ಹೊರತಂದ ಕವನ ಸಂಕಲನವಾಗಿದೆ. ಈ ಚೊಚ್ಚಲು ಕೃತಿ ನವ್ಯದ ಜಾಡಿನಲ್ಲಿದೆ. ಕನ್ನಡ ಸಾಹಿತ್ಯದ ಎಲ್ಲ ಕಾಲಘಟ್ಟಗಳ ಮುಖ್ಯ ಕೃತಿಗಳನ್ನು ಓದಿ ಜೀರ್ಣಿಸಿಕೊಂಡ ಮಾಗಿದ ಮನಸೊಂದನ್ನು ಇಲ್ಲಿಯ ಕವನಗಳಲ್ಲಿ ಕಾಣಬಹುದಾಗಿದೆ.

ಈ ಸಂಕಲನ ಬಂದ ಎರಡೇ ವರ್ಷಗಳಲ್ಲಿ (೨೯–೧–೧೯೮೩) ಜಿನದೇವ ನಾಯಕರು, ಅನಿರೀಕ್ಷಿತವಾದ ಆಘಾತವನ್ನು ಸಾರಸ್ವತ ಲೋಕದಲ್ಲಿ ದಾಖಲಿಸಿ – ಹೊರಟು ಹೋಗಿದ್ದಾರೆ.

ಪ್ರೊ. ವಿ. ಎ. ಜೋಶಿ

ಹಾಗೆ ನೋಡಿದರೆ ಅಂಕೋಲೆಯ ಮಣ್ಣು ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಸ್ಫೂರ್ತಿಯನ್ನು ತುಂಬಿದೆಯೆನ್ನಬಹುದು. ಅವರು ಇಲ್ಲಿ ಹುಟ್ಟಿ–ಬೆಳೆದು ನೆಲೆಸಿದವರಿರಬಹುದು, ಹೊರಗಿನಿಂದ ಬಂದು ಈ ತಾಲೂಕನ್ನು ನೆಚ್ಚಿಕೊಂಡವರಿರಬಹುದು ಅಥವಾ ಇಲ್ಲಿ ಹುಟ್ಟಿ ಬೆಳೆದು ಉದ್ಯೋಗ ನಿಮಿತ್ತ ಹೊರಗೆ ಹೋಗಿ ನೆಲೆಸಿದವರಿರಬಹುದು. ಒಟ್ಟಾರೆ ಈ ನೆಲ, ಇಲ್ಲಿಯ ಜನಜೀವನ, ಇಲ್ಲಿಯ ಜಾಗ್ರತ ಮನಸ್ಸು, ಇಲ್ಲಿಯ ಹೋರಾಟಗಳ ಕತೆ, ಇಲ್ಲಿ ಸಿಗುತ್ತಿರುವ ಶೈಕ್ಷಣಿಕ – ಸಾಂಸ್ಕೃತಿಕ ಸಂಸ್ಕಾರಗಳು ಬರವಣಿಗೆಯ ವಿವಿಧ ಪ್ರಕಾರಗಳಲ್ಲಿ ಇವರೆಲ್ಲ ಪ್ರಯೋಗಕ್ಕೆ ಇಳಿಯುವಂತೆ ಪ್ರೇರಣೆ ನೀಡಿದ್ದಂತೂ ನಿಜ. ಹೀಗೆ ಪ್ರೇರಣೆ ಪಡೆದ ಮುಖ್ಯರ ಮಾಲಿಕೆಯಲ್ಲಿ ಸುಮಾರು ಮೂರು ದಶಕಗಳಿಗಿಂತ ಹೆಚ್ಚು ಕಾಲ ಅಂಕೋಲೆಯಲ್ಲೇ ಇದ್ದು, ಒಂದು ತಲೆಮಾರನ್ನೇ ಪ್ರಭಾವಿಸಿದ ಪ್ರೊ. ವಿ. ಎ.

ಜೋಶಿ ಒಬ್ಬರು. ವಿ. ಎ. ಜೋಶಿಯವರ ಬರವಣಿಗೆ ಪ್ರಮುಖವಾಗಿ ಎರಡು ಕವಲಾಗಿ ಒಡೆದು ಫಲ ಕೊಟ್ಟಿದೆ. ಮುಖ್ಯವಾಗಿ ನಗೆಬರಹ ಮತ್ತು ಜೀವನ ಚರಿತ್ರೆಗಳೆಂದು ಅವನ್ನು ವಿಂಗಡಿಸಬಹುದಾಗಿದೆ. ೭೦ರ ದಶಕದಲ್ಲೇ ಆರಂಭವಾದ ಇವರ ನಗೆಬರಹಗಳ ಸೆಲೆ ಇಂದಿಗೂ ಬತ್ತಿಲ್ಲ. ನಾಡಿನ ನಾಮಾಂಕಿತ ನಿಯತಕಾಲಿಕೆಗಳು ಇವರ ನಗೆಬರೆಹಗಳನ್ನು ಪ್ರಕಟಮಾಡಿವೆ. ಮಾಡುತ್ತಲೇ ಇವೆ. ಕನ್ನಡದಲ್ಲಿ ಗೊರೂರು, ಬೀಚಿ, ಎನ್ಕೆ, ನಾ. ಕಸ್ತೂರಿ ಮುಂತಾದ ಹಿರಿಯ ತಲೆಮಾರಿನ ಲೇಖಕರ ನಂತರ ಅ. ರಾ. ಮಿತ್ರ ಹಾಗೂ ವಿ. ಎ. ಜೋಶಿಯವರು ಮುಖ್ಯವಾಗಿ ಆ ಪರಂಪರೆಯನ್ನು ಮುಂದುವರೆಸಿದವರಾಗಿದ್ದಾರೆ. 'ಲಘು ಹಾಸ್ಯಗಳು', 'ಅದಲು ಬದಲು', ಇಪ್ಪತ್ತು ನಗೆಬರಹಗಳು' ಜೋಶಿಯವರು ಪ್ರಕಟಿಸಿದ ಮಹತ್ವದ ಸಂಕಲನಗಳು, 'ಮದರ ಥೇರೆಸಾ', 'ಬಾಬಾ ಅಮಟೆ' ಜೋಶಿಯುವರು ಬರೆದ ಸಂಗ್ರಹಯೋಗ್ಯ ಜೀವನಚರಿತ್ರೆಗಳು, ಎಳೆಯರಿಗಾಗಿಯೂ ಕೂಡ 'ಮಹಾತ್ಮಾ ಗಾಂಧೀಜಿ', 'ಕಿತ್ತೂರ ಚೆನ್ನಮ್ಮ', ಜವಹರಲಾಲ ನೆಹರು', 'ಗೋಪಾಲಕೃಷ್ಣ ಗೋಖಲೆ', 'ಲಾಲಬಹದ್ದೂರ ಶಾಸ್ತ್ರಿ ಮುಂತಾದ ವ್ಯಕ್ತಿ ಪರಿಚಯ ಪುಸ್ತಕಗಳನ್ನೂ ಬರೆದಿದ್ದಾರೆ. ಜನಪದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ, ಮಣ್ಣಿನ ಮಕ್ಕಳ ಸಾಹಸಕತೆಗಳು, ಕನ್ನಡ ಕವಿಗಳು ಕಂಡ ನಾಲ್ಕು ಹಬ್ಬಗಳು, ಹರಿದಾಸ ಕೀರ್ತನ ಮಂಜರಿ, ಗ್ರಾಮಾಂತರ ಸಮುದಾಯಗಳಲ್ಲಿ ನಾಯಕತ್ವದ ನಿರ್ಮಾಣ, 'ಅಂಕೋಲಾ ತಾಲೂಕು ದರ್ಶನ' ಇವೆಲ್ಲ ಜೋಶಿಯವರು ಬರೆದ ಇತರೇ ಗ್ರಂಥಗಳು. ಹಿತಮಿತವಾದ ವಿಡಂಬನೆ, ಆಡಂಬರವಿಲ್ಲದ ಶೈಲಿ ಜೋಶಿಯವರ ಬರಹಗಳನ್ನು ಓದುಗರು ಪ್ರೀತಿಸುವಂತೆ ಮಾಡಿವೆ.

ಡಾ। ಶ್ರೀಪಾದ ಶೆಟ್ಟಿ

ಹೊನ್ನಾವರ ತಾಲೂಕಿನ ಮುಗ್ವಾ ಗ್ರಾಮದ ಶ್ರೀಪಾದ ಶೆಟ್ಟರು ೧೯೭೭ ರಿಂದ ಸುಮಾರು ೨೦ ವರ್ಷಗಳವರೆಗೆ ಅಂಕೋಲೆಯ ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಕಾಲಾವಧಿಯಲ್ಲಿ ವಿವಿಧ ಸಂಘ-ಸಂಸ್ಥೆಗಳ ಮೂಲಕ ಸಾಹಿತ್ಯ ಕಲೆ, ಸಂಸ್ಕೃತಿಗೆ ಸಂಬಂಧಪಟ್ಟ ಚಟುವಟಿಕೆಗಳಲ್ಲಿ ಗುರುತಿಸಿಕೊಂಡವರು. ಕಾವ್ಯ ಮತ್ತು ಗದ್ಯಗಳೆರಡರಲ್ಲೂ ಹಿಡಿತ ಸಾಧಿಸಿಕೊಂಡಿರುವ ಶ್ರೀಪಾದ ಶೆಟ್ಟರು 'ಪ್ರಿಯ ಶರಾವತಿ' ಎಂಬ ತಮ್ಮ ಚೊಚ್ಚಲು ಕವನ ಸಂಕಲನದ ಮೂಲಕ ಸಾಹಿತ್ಯ ವಲಯದಲ್ಲಿ ಪರಿಚಿತರು. ಒಬ್ಬ ಪ್ರತಿಭಾವಂತ ಬರಹಗಾರ-ರಾಗಿರುವಂತೆ, ಉತ್ತಮ ವಾಗ್ಮಿ ಕೂಡ.

'ಕಡಲ ಒಡಲಿನಲ್ಲಿ ಮುತ್ತು ಬಿತ್ತು' 'ಮೌನ ಕಣಿವೆಯ ಒಡಲು' ಎಂಬ ಇನ್ನೆರಡು ಕವನ ಸಂಕಲನಗಳನ್ನು ಇವರು ಪ್ರಕಟಿಸಿದ್ದಾರೆ. (ಈ ಲೇಖಕನಿಗೆ ಓದಲು ಸಿಕ್ಕಿಲ್ಲ) 'ನಿಸರ್ಗ ಜಲಪಾತಗಳು' ನವಸಾಕ್ಷರರಿಗಾಗಿ ಶ್ರೀಪಾದ ಶೆಟ್ಟರು ಬರೆದ ಇನ್ನೊಂದು ಕೃತಿ. ಇವರ ಸಂಶೋಧನ ಪ್ರಬಂಧವಾದ, 'ದಿನಕರ ದೇಸಾಯಿ ಬದುಕು-ಬರಹ' ಗ್ರಂಥವನ್ನು ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಅನೇಕ ಬಿಡಿಲೇಖನ ಹಾಗೂ ಅಂಕಣ ಬರಹಗಳ ಮೂಲಕವೂ ಗಮನ ಸೆಳೆದಿರುವ ಶ್ರೀಪಾದ ಶೆಟ್ಟರದು ಕ್ರಿಯಾಶೀಲ ವ್ಯಕ್ತಿತ್ವ.

ಡಾ. ರಾಮಕೃಷ್ಣ ಗುಂದಿ

ಡಾ. ರಾಮಕೃಷ್ಣ ಗುಂದಿಯವರನ್ನು ನಮ್ಮ ನಡುವಿನ ಹಿರಿಯ ಸಾಹಿತಿ ಡಾ. ಆರ್. ವಿ. ಭಂಡಾರಿಯವರು 'ಉತ್ತರ ಕನ್ನಡದ ದೇವನೂರು' ಎಂದೇ ಗುರುತಿಸುತ್ತಾರೆ. ಆ ಹೋಲಿಕೆ ಧ್ವನಿಪೂರ್ಣವಾಗಿಯೂ ಇರುವದನ್ನು ಗುಂದಿಯವರ ಬದುಕು-ಬರಹಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ ಯಾರಿಗೇ ಆದರೂ ಅರ್ಥವಾಗಬಹುದಾಗಿದೆ.

೧೯೮೪ರಲ್ಲಿ 'ಆವಾರಿ' ಎಂಬ ಕಥಾಸಂಕಲನವನ್ನು ಪ್ರಕಟಿಸಿದ ಗುಂದಿಯವರು ಮೊದಲ ಸಂಕಲನದಿಂದಲೇ ನಾಡಿನ ಗಮನ ಸೆಳೆದವರಾಗಿದ್ದಾರೆ. ಆನಂತರ ಇವರ 'ಕಡಲ ಬೆಳಕಿನ ದಾರಿಗುಂಟ' ಎಂಬ ೨ನೆಯ ಕಥಾಸಂಕಲನ (೧೯೯೬) ಇವರಿಗೆ ಇನ್ನಷ್ಟು ಪ್ರಸಿದ್ಧಿಯನ್ನು ತಂದುಕೊಟ್ಟಿತ್ತು. (ಎರಡೂ ಸಂಕಲನಗಳ ಪ್ರಕಾಶಕರು ರಾಘವೇಂದ್ರ ಪ್ರಕಾಶನ) 'ದಲಿತರ ನೋವು – ನಷ್ಟಗಳಿಗೆ ನುಡಿಕೊಡುವಾಗ ಗುಂದಿಯವರು ತಮ್ಮ ಕತೆಗಳನ್ನು ಕಲೆಯಾಗಿಸುವಲ್ಲೂ ಸಾಕಷ್ಟು ಎಚ್ಚರ ವಹಿಸುತ್ತಾರೆಂಬುದು ಗಮನಿಸಬೇಕಾದ ಅಂಶವಾಗಿದೆ. ಆಕ್ರೋಶ – ಆರ್ಭಟಗಳಿಗೆ ಒತ್ತುಕೊಡದೆ ತಣ್ಣನೆ ಸಿಡಿಯುವುದು ಗುಂದಿಯವರ ಕಥಾ ಬರವಣಿಗೆಯ ದಾರಿಯಾಗಿದೆ.

ಈ ಎರಡು ಕಥಾ ಸಂಕಲನಗಳ ಹೊರತಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರ ವಿನಂತಿಯ

ಮೇರೆಗೆ ಇವರು ಬರೆದುಕೊಟ್ಟ 'ಆಗೇರರ ಸಂಸ್ಕೃತಿ' ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಅಧ್ಯಯನಮಾಲೆಯಲ್ಲಿ ಪ್ರಕಟವಾಗಿದ್ದು, ಒಂದು ಮಹತ್ವದ ದಾಖಲೆಯೆನಿಸಿದೆ. 'ನಾಗಲೋಕ ವಿಜಯ' 'ಅತಿಕ್ರಾಂತ' – ಇವು – ಯಕ್ಷಗಾನದ ಅಭಿಜಾತ ಕಲಾವಿದರೂ ಆಗಿರುವ ಗುಂದಿಯವರ 'ಯಕ್ಷಗಾನ ಪ್ರಸಂಗ ಪುಸ್ತಿಕೆಗಳು', 'ಒಂದೇ ಮಾತರಂ' ಎಂಬ ಬೀದಿ ನಾಟಕವನ್ನೂ ಪ್ರಕಟಿಸಿದ್ದಾರೆ. ತಮ್ಮ ಸಮಾಜದ ಹಿರಿಯ ಚೇತನವಾಗಿದ್ದ ಸುಕ್ರು ಮಾಸ್ತರರ ಬದುಕಿನ ಚಿತ್ರಣವಿರುವ 'ಆಗೇರ ಜನಾಂಗದ ಬಾಳಿಗೆ ಆರಂಭದ ಬೆಳಕು' ಎಂಬ ಕೃತಿಯನ್ನೂ ಹೊರತಂದಿದ್ದಾರೆ.

'ಹಿಂಗಾರ' ರಾಮಕೃಷ್ಣ ಗುಂದಿಯವರು ರಾಘವೇಂದ್ರ ಪ್ರಕಾಶನದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಸಂಪಾದಿಸಿಕೊಟ್ಟ ಉದಯೋನ್ಮುಖ ಲೇಖಕರ ಸಣ್ಣ ಕತೆಗಳ ಸಂಕಲನವಾಗಿದೆ.

ಎನ್. ಬಿ. ಕಾಮತ

ಮೂಲತಃ ಉಡುಪಿ ತಾಲೂಕಿನ ನಾಗರಮಠದವರಾದ ಎನ್. ಬಿ. ಕಾಮತರು ವೃತ್ತಿನಿಮಿತ್ತ ಉತ್ತರ ಕನ್ನಡದ ಕೆನರಾ ವೆಲ್‌ಫೆರ್ ಟ್ರಸ್ಟಿಗೆ ಸೇರಿಕೊಂಡು ಕಾಲಕ್ರಮೇಣ ಅಂಕೋಲೆಯ ರಹವಾಸಿಯಾದವರು.

'ಆಹುತಿ' ಎಂಬುದು ಅಂಕೋಲೆಗೆ ಬರುವ ಪೂರ್ವದಲ್ಲೇ ಅವರು ಬರೆದು ಪ್ರಕಟಿಸಿದ ಕಿರುಕಾದಂಬರಿ. ೧೯೬೨ ರಲ್ಲಿ 'ಜ್ಯೋತ್ಸ್ನಾ' ಎಂಬ ಕವನ ಸಂಕಲನವನ್ನು ಬರೆದು ಪ್ರಕಟಿಸಿದ್ದಾರೆ. 'ಮೋಗ್ ಮೊಗಾರೆ' ಎಂಬ ಕೊಂಕಣಿ ಕವನ ಸಂಕಲನವೂ ಬಿಡುಗಡೆಯಾಗಿದೆ. ಆ ವರ್ಷವೇ 'ಗಣಪತಿ ಬಟ್ಟಾಲೋ ಸತ್ಯನಾರಾಯಣ' ಕೊಂಕಣಿ ನಾಟಕ ಪ್ರಕಟವಾಯಿತು. 'ತೀನ ನಾಟಕ' ಎಂಬ ಇನ್ನೊಂದು ಪುಸ್ತಕ ಕೂಡ (೧೯೬೫) ಹೊರತಂದಿದ್ದಾರೆಂದು ಕೇಳಿದ್ದೇನೆ. ಕೊನೆಯ ಮೂರು ಪುಸ್ತಕಗಳು ಈ ಲೇಖಕನ ಓದಿಗೆ ಸಿಕ್ಕಿಲ್ಲ.

ಬಿ. ಹೊನ್ನಪ್ಪ

'ಕೇದಿಗೆ' ಎಂಬ ಕವನ ಸಂಕಲನದ ಮೂಲಕ ಸುಮಾರು ೬೦ ರ ದಶಕದಲ್ಲೇ ತುಂಬಾ ಭರವಸೆ ಹುಟ್ಟಿಸಿದ ಬಿ. ಹೊನ್ನಪ್ಪ ಅದ್ಯಾಕೋ ತಮ್ಮ ಸೃಜಶೀಲ ಶಕ್ತಿಯನ್ನು ಆನಂತರದ ವರ್ಷಗಳಲ್ಲಿ ಕಾವ್ಯ ಕಟ್ಟುವ ಕ್ರಿಯೆಗೆ ಗಂಭೀರವಾಗಿ ದುಡಿಸಿಕೊಂಡಂತೆ ಕಾಣುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಅವರು ಚುಟುಕು ಹಾಗೂ ಒಂದಷ್ಟು ಬಿಡಿಗವನಗಳನ್ನು ಬರೆಯುತ್ತಿರುವರೆಂಬುದು ಈ ಲೇಖಕನಿಗೆ ತಿಳಿದೂ ಈ ಮಾತನ್ನು ಹೇಳುತ್ತಿದ್ದೇನೆ. ಬಹುಶಃ ಭಾರತ ಸರಕಾರದ ಸಂಗೀತ ಕಲಾವಿದರಾಗಿ ಊರೂರು ಸುತ್ತುವ ಕೆಲಸ ಮತ್ತು ಅವರು ಕಟ್ಟಿಕೊಂಡ 'ನುಡಿಜೇನು' ಪತ್ರಿಕೆಯ ಹೊಣೆಗಾರಿಕೆ ನಿರೀಕ್ಷಿಸಿದ ಪ್ರಮಾಣದಲ್ಲಿ ಕಾವ್ಯಕೃಷಿ ಆಗುವುದಕ್ಕೆ ತೊಡಕಾದವು ಅಂದುಕೊಂಡಿದ್ದೇನೆ. ಇಷ್ಟರ ಮೇಲೆಯೂ ಅವರೊಬ್ಬ ಸದಭಿರುಚಿಯ ಸೃಜನಶೀಲ ಲೇಖಕ ಎಂಬುದನ್ನು ನಿರ್ಲಕ್ಷಿಸುವಂತಿಲ್ಲ. ಅನೇಕ ಬಿಡಿಬರಹಗಳನ್ನು ಬರೆದಿದ್ದು, ಪುಸ್ತಕ ರೂಪದಲ್ಲಿ ಬರಬೇಕಾಗಿದೆ.

ವಿಠ್ಠಲ ಗಾಂವಕರ

ಅಂಕೋಲೆಯ ಬಾಸ್ಗೋಡಿನಲ್ಲಿ ಹುಟ್ಟಿ ಇಲ್ಲಿಯೇ ಓದಿದ್ದ ವಿಠಲ ವಿ. ಗಾಂವಕರ ಅವರು ದಕ್ಷಿಣ ಕನ್ನಡ ಮತ್ತು ಇಂದಿನ ಉಡುಪಿ ಜಿಲ್ಲೆಗಳಲ್ಲಿ ಅಧ್ಯಾಪಕರಾಗಿ ಹೆಸರು ಮಾಡಿದವರು. ರಾಜ್ಯದ ಒಬ್ಬ ಆದರ್ಶ ಶಿಕ್ಷಕ ಎಂದು ಇಲಾಖೆಯ ಗೌರವಕ್ಕೆ ಪಾತ್ರರಾದವರು. ವಿದ್ಯಾರ್ಥಿ ಸಮುದಾಯಕ್ಕೆ ಪ್ರಯೋಜನಕಾರಿಯಾದ ಅನೇಕ ಪುಸ್ತಕಗಳನ್ನು ಹೊರತಂದಿದ್ದಾರೆ.

'ಬದುಕು' ಎಂಬುದು ಇವರ ಚೊಚ್ಚಲು ಕವನ ಸಂಕಲನ. 'ಹೂ ಬಾಣ' ಎಂಬ ಇನ್ನೊಂದು ಸಂಕಲನವೂ ಬಂದಿದೆ. 'ಪರಿಸರ ಪ್ರಬಂಧಗಳು', 'ಕನ್ನಡ ವ್ಯಾಕರಣ ಮತ್ತು ತತ್ಸಮ – ತದ್ಭವ ಕೈಪಿಡಿ', 'ಗಾದೆಗಳ ನುಡಿ', 'ಪ್ರಬಂಧ ಹಾಗೂ ಭಾಷಣ ಕಲೆ', 'ಕನ್ನಡ ಛಂದಸ್ಸು ಹಾಗೂ ಅಲಂಕಾರ', 'ಚಿಂತನ ಕತೆಗಳು' ಇತ್ಯಾದಿ ವಿದ್ಯಾರ್ಥಿಕೇಂದ್ರಿತ ಅನೇಕ ಕೃತಿಗಳು ಬಂದಿವೆ.

ಪ್ರಕಾಶ ಕಡಮೆ

ಪ್ರಕಾಶ ಕಡಮೆ ಹುಟ್ಟಿದ್ದು ಕುಮಟಾ ತಾಲೂಕಿನ ಕಡಮೆಯಲ್ಲಾದರೂ, ಬೆಳೆದದ್ದು, ಓದಿದ್ದು ಮತ್ತು ತನ್ನ ಕಷ್ಟ–ಸುಖ, ಸಾಂಸ್ಕೃತಿಕ ಒಲವು – ನಲಿವುಗಳನ್ನು ಹಂಚಿಕೊಳ್ಳುತ್ತ ಬದುಕಿನ ಮುಖ್ಯಭಾಗವನ್ನು ಕಳೆದದ್ದು ಅಂಕೋಲೆಯಲ್ಲಿ. ರಾಘವೇಂದ್ರ ಪ್ರಕಾಶನವು ೧೯೮೭ ರಲ್ಲಿ ಪ್ರಕಟಿಸಿದ 'ಗಾಣದೆತ್ತು ಮತ್ತು ತೆಂಗಿನ ಮರ' ಎಂಬ ಕವನ ಸಂಕಲನದೊಂದಿಗೆ ಪರಿಚಿತರಾದ ಪ್ರಕಾಶ ಕಡಮೆ, ಅದಕ್ಕಿಂತ ದಶಕದಷ್ಟು ಪೂರ್ವದಲ್ಲೇ

ಬಿಡಿಕವಿತೆಗಳನ್ನು ಬರೆಯಲಾರಂಭಿಸಿದವರು. ಸ್ಪರ್ಧೆಯಲ್ಲಿ ಭಾಗವಹಿಸಿ ಗೆದ್ದವರು. ವಿದ್ಯಾರ್ಥಿಯಾಗಿದ್ದಾಗಲೇ ಬರೆದ 'ಬಿ. ಎ. ಬೇಕ್ರಿ ಬಿ. ಎ.' ಎಂಬ ಕವನ ಈಗಲೂ ಈ ಭಾಗದ ಅನೇಕ ಓದುಗರ ಮನಸ್ಸಿನಲ್ಲಿದೆ. ಪ್ರಕಾಶ ಶೆಟ್ಟಿಯವರ ಮೊದಲ ಸಂಕಲನಕ್ಕೆ ಮುನ್ನುಡಿ ಬರೆದ ಸು. ರಂ. ಎಕ್ಕುಂಡಿಯವರು, ಇವರ ಕಾವ್ಯಾಸಕ್ತಿ ಹಾಗೂ ಕಾವ್ಯೋದ್ಯಮಗಳಲ್ಲಿ ಭಾವನೆಗಳ ಮತ್ತು ಕಾವ್ಯಗಳ ತುಮುಲ ಇರುವುದನ್ನು ಗುರುತಿಸಿದ್ದಾರೆ.

೧೯೯೮ ರಲ್ಲಿ ಹೊರಬಂದ 'ಆ ಹುಡುಗಿ' ಎಂಬ ಎರಡನೇ ಕವನ ಸಂಕಲನವು ಸಾಹಿತ್ಯಾಸಕ್ತರಲ್ಲಿ ಇವರ ಬಗ್ಗೆ ಇನ್ನೂ ಹೆಚ್ಚಿನ ಭರವಸೆ ಹುಟ್ಟಿಸುವಲ್ಲಿ ಯಶಸ್ವಿಯಾಗಿದೆ. ಈ ಕೃತಿಗೆ ಮುನ್ನುಡಿ ಬರೆದ ಕವಿ ರಂಜಾನದರ್ಗಾ, ಪ್ರಕಾಶ ಕಡಮೆ ಸಂವೇದನಾಶೀಲ ಕವಿ ಮಾತ್ರವಲ್ಲ, ಸಂವೇದನಾಶೀಲ ಮನುಷ್ಯ ಕೂಡ ಎಂದಿರುವುದನ್ನು ಗಮನಿಸತಕ್ಕದ್ದಿದೆ. 'ಮಾನವನ ಭಾವನೆಗಳಿಗೆ ಸ್ಪಂದಿಸುವ ವ್ಯಕ್ತಿ, ಅಲ್ಲ ಶಕ್ತಿ ಒಂದು ಬೇಕಾಗಿದೆ' ಎಂದು ಹುಡುಕಾಡುವ ಪ್ರಕಾಶ ಕಡಮೆ, 'ನಮ್ಮ ಮನೆಗೆ ತೂಗು ಹಾಕಿದ ಕ್ಯಾಲೆಂಡರೊಂದು ನಾಪತ್ತೆಯಾಗಿದೆ ಎಂಬ ಆತಂಕ ಹುಟ್ಟಿಸುವ ಮೂಲಕ ಕಾವ್ಯದ ದಾರಿಯಲ್ಲಿ ಕುತೂಹಲ ಹುಟ್ಟಿಸಿ, ಪ್ರಸ್ತುತ ತುಸು ಸಂಯಮಕ್ಕೆ ಶರಣಾದಂತಿದೆ.

ಕೃಷ್ಣ ನಾಯಕ ಹಿಚಕಡ

ಪ್ರಕಾಶ ಕಡಮೆ ಮತ್ತು ಕೃಷ್ಣ ನಾಯಕ ಅಂಕೋಲೆಯ ಅವಳಿಕವಿ ಸಹೋದರರೆಂಬಂತೆ ಹೆಚ್ಚಕಡಿಮೆ ಏಕಕಾಲಕ್ಕೆ ರಂಗ ಪ್ರವೇಶಿಸಿದವರು. ೧೯೮೮ ರಲ್ಲಿ ಪ್ರಕಟವಾದ ಕೃಷ್ಣ ನಾಯಕರ 'ಕೋಗಿಲೆ ಅಳುತಿದೆ' ಎಂಬ ಕವನಸಂಕಲನ ತನ್ನ ಶೀರ್ಷಿಕೆಯ ಮೂಲಕವೇ ಇಡೀ ವ್ಯವಸ್ಥೆಯ ವ್ಯಂಗಕ್ಕೆ ಧ್ವನಿಕೊಟ್ಟದ್ದಾಗಿದೆ. ಕಾವ್ಯ ಕಸುಬನ್ನು ಬಹುಗಂಭೀರವಾದ ನೆಲೆಯಲ್ಲಿ ಸ್ವೀಕರಿಸಿರುವ ಕೃಷ್ಣ, ತನ್ನ ಚೊಚ್ಚಲು ಸಂಕಲನದಲ್ಲೇ ಸಾಕಷ್ಟು ಒಳನೋಟಗಳಿರುವ ಕವಿತೆಗಳನ್ನು ಕೊಟ್ಟವರು. 'ಮುನ್ನುಡಿ'ಕಾರ ಜಿ. ಎಸ್. ಅವಧಾನಿ ಸರಿಯಾಗಿಯೇ ಗುರುತಿಸಿದಂತೆ, ಇವರ ಕವಿತೆಗಳ ಸ್ಥಾಯಿಸ್ವರ ವಿಷಾದ. ವಾಸ್ತವಕ್ಕೆ ಕಲ್ಪನೆಯ ಹೂ ಮುಡಿಸಲು ಈ ಕವಿ ಸಿದ್ಧನಿಲ್ಲ ಎಂಬುದನ್ನು ಇವರ ಆರಂಭದ ಕವನಗಳೇ ಹೇಳುತ್ತವೆ.

೧೯೯೯ ರಲ್ಲಿ ಪ್ರಕಟವಾದ ಕೃಷ್ಣ ನಾಯಕರ ಎರಡನೆ ಕವನ ಸಂಕಲನ 'ಭೂಗೋಳ ಪ್ರಶ್ನೆ'. 'ಹುಟ್ಟಿ ಬರಲಿ ಹೊಸ ಸೂರ್ಯ ದಿಕ್ಕು ಯಾವುದೇ ಇರಲಿ' ಎಂಬ ಅರ್ಥಪೂರ್ಣ ಪ್ರಾರ್ಥನೆಯ ಸೊಲ್ಲಿನೊಂದಿಗೆ ಆರಂಭವಾದ ಇಲ್ಲಿಯ ಸಾಲುಗಳಲ್ಲಿ ವಿಷಾದದ ಜೊತೆಗೆ ವ್ಯಂಗ್ಯ ಮತ್ತು ಆತಂಕಗಳು ಕೂಡ ಮಡುಗಟ್ಟಿರುವುದನ್ನು ಕಾಣಬಹುದಾಗಿದೆ. ಈ ಕವಿಯ ಮೂಲ ಕಾಳಜಿ ಜೀವಕೇಂದ್ರಿತ ಎಂಬ ರಂಜಾನ್‌ದರ್ಗಾ ಅವರ ಮಾತಿನಲ್ಲಿ ಉತ್ಪ್ರೇಕ್ಷೆಯಿದೆನಿಸುವದಿಲ್ಲ. ಕೃಷ್ಣ ನಾಯಕರ ಚಿಂತನ ವಿಧಾನಕ್ಕೆ ಆರೋಗ್ಯಪೂರ್ಣ ಆಯಾಮಗಳಿವೆ ಎಂಬುದನ್ನು ಈ ಸಂಕಲನದ ಹೆಚ್ಚಿನ ಕವನಗಳ ಮೂಲಕವೇ ನಮ್ಮ ಗ್ರಹೀತಕ್ಕೆ ತೆಗೆದುಕೊಳ್ಳಬಹುದಾಗಿದೆ. ಕೃಷ್ಣ ನಿಸ್ಸಂದೇಹವಾಗಿಯೂ ಭರವಸೆಯ ಕವಿ, ಸಂಯಮಶೀಲ ಎಡಪಂಥೀಯ ಕವಿ.

ಮೋಹನ ಹಬ್ಬು

ಪ್ರೊ. ಮೋಹನ ಹಬ್ಬು ಮೂಲತಃ ಯಲ್ಲಾಪುರ ತಾಲೂಕಿನ ಮಂಚಿಕೇರಿ ಗ್ರಾಮಕ್ಕೆ ಸೇರಿದವರಾದರೂ ವೃತ್ತಿನಿಮಿತ್ತ ಅಂಕೋಲೆಗೆ ಬಂದವರು. ಇಲ್ಲಿಯ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಪರಿಸರದ ಅವಿಭಾಜ್ಯ ಅಂಗವಾಗಿ ಒಂದು ತಲೆಮಾರನ್ನೇ ಪ್ರಭಾವಿಸಿದವರು. ನಿವೃತ್ತಿಯ ನಂತರವೂ ಇಲ್ಲಿಯೇ ನೆಲೆಸಿದರು. ಬಿಡಿಕವನಗಳ ಮೂಲಕ ೭೦ ರ ದಶಕದಿಂದಲೂ ವೇದಿಕೆಗಳನ್ನು ಹಂಚಿಕೊಳ್ಳುತ್ತಿದ್ದ ಹಬ್ಬು ತುಸು ತಡವಾಗಿ ಅಂದರೆ, ೧೯೯೬ರಲ್ಲಿ ತಮ್ಮ ಮೊದಲನೆಯ ಕವನ ಸಂಕಲನವನ್ನು ('ತೆಂಕನ ಹಸಿರು ನಿಶಾನೆ') ಪ್ರಕಟಿಸಿದ್ದಾರೆ. ಭಾವನಿರ್ಭರತೆ ಮತ್ತು ಗೇಯಗುಣಗಳಿಂದ ಮನಸೆಳೆಯುವ ಇವರ ಕಾವ್ಯಕೃಷಿ ಒಂದೇ ಸಂಕಲನಕ್ಕೆ ತೃಪ್ತ ಪಟ್ಟದ್ದು – ಬಹುಶಃ ಇವರ ಪ್ರತಿಭೆ ಬಹುಮುಖವಾಗಿ ಹಂಚಿಹೋದುದರ ಪರಿಣಾಮವೂ ಆಗಿದ್ದಿರಬಹುದು.

ಒಬ್ಬ ಅಭಿಜಾತ ರಂಗಕಲಾವಿದರೂ ಆದ ಮೋಹನ ಹಬ್ಬು ಅವರು ನಾಟಕಗಳನ್ನೂ ಬರೆದಿದ್ದಾರೆ. ರಾಘವೇಂದ್ರ ಪ್ರಕಾಶನದ ಬೆಳ್ಳಿ ಸ್ಮರಣೆ ಮಾಲೆಯ ಮೂಲಕ ಪ್ರಕಟವಾದ ನಾಟಕ 'ಕರ್ಣ' ಪುರಾಣ ಕಥೆಯನ್ನಾಧರಿಸಿ ಹಬ್ಬು ಅವರು ರಚಿಸಿರುವ ಒಂದು ಗಮನಾರ್ಹಕೃತಿಯಾಗಿದೆ. 'ಸಾವಸುತ್ತ' ಎಂಬುದು ಮೋಹನ ಹಬ್ಬು ಅವರು ಬರೆದಿರುವ ಚುರುಕಾದ

ಬೀದಿ ನಾಟಕ. ಪ್ರಚಲಿತ ಭ್ರಷ್ಟವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಈ ಬೀದಿ ನಾಟಕ ಪ್ರಯೋಗದಲ್ಲೂ ಯಶಸ್ವಿಯಾಗಿದೆ. 'ವೈಶಾಖದ ಮಳೆ' ಹಬ್ಬು ಅವರ ಕಥಾ ಸಂಕಲನ, 'ಪ್ರಜ್ಞಾ ಪ್ರಕಾಶನ'ವೆಂಬ ತಮ್ಮದೇ ಆದ ಒಂದು ಪ್ರಕಾಶನ ವೇದಿಕೆಯನ್ನು ಆರಂಭಿಸುವ ಮೂಲಕ ಇತ್ತೀಚಿನ ವರ್ಷದಲ್ಲಿ ಹೊರತಂದ (೨೦೦೪) ಈ ಕಥಾ ಸಂಕಲನದಲ್ಲಿ ಬಹಳಷ್ಟು ಒಳ್ಳೆಯ ಕತೆಗಳಿವೆ. ಹಬ್ಬು ಅವರು ತಮ್ಮ ದಿವಂಗತ ತಂದೆ–ಸಗುಣ ಶಂಕರ ಹಬ್ಬು ಅವರ ಅಪ್ರಕಟಿತ ಬರಹಗಳನ್ನು (ಕವನ ಮತ್ತು ಬಿಡಿ ಲೇಖನಗಳು) ಸೊಗಸಾಗಿ ಸಂಪಾದಿಸಿ, 'ಅನಾಮಿಕನ ಉಲುಹು' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ರಾಘವೇಂದ್ರ ಪ್ರಕಾಶನಕ್ಕಾಗಿ ಉದಯೋನ್ಮುಖ ಬರಹಗಾರರ ಸಂಕಲನವನ್ನು 'ಹಿಂಗಾರ' (ಭಾಗ – ೨) ಎಂಬ ಹೆಸರಿನಲ್ಲಿ ಸಂಪಾದಿಸಿಕೊಟ್ಟಿದ್ದಾರೆ. ಕರ್ನಾಟಕದ ವಿಶ್ವವಿದ್ಯಾಲಯದ ಪ್ರಸಾರಾಂಗವು ಇವರ, 'ಬೆಳಕು : ವೈಜ್ಞಾನಿಕ ವಿವೇಚನೆ' ಎಂಬ ಕಿರುಹೊತ್ತಿಗೆ ಪ್ರಕಟಿಸಿರುವುದನ್ನೂ ಇಲ್ಲಿ ನೆನೆಯಬಹುದಾಗಿದೆ.

ನಾಗೇಂದ್ರ ನಾಯಕ ತೊರ್ಕೆ

ಅಂಕೋಲಾ ತಾಲೂಕಿನ ಸಾಹಿತ್ಯ ಸಮೃದ್ಧಿಯನ್ನು ಹೆಚ್ಚಿಸುವಲ್ಲಿ ನೆರೆಯ ಕುಮಟಾ ತಾಲೂಕಿನ ತೊರ್ಕೆ ಗ್ರಾಮಮೂಲದ ಲೇಖಕರ ಕೊಡುಗೆ ಗಣನೀಯವಾಗಿದೆ. ಈಗಾಗಲೇ ನಾವು ಮೂಲತಃ ಅದೇ ಭಾಗಕ್ಕೆ ಸೇರಿದ ಹಿರಿಯರಾದ ಸ. ಪ. ಗಾಂವಕಾರ, ವಿ. ವೆ. ತೊರ್ಕೆಯುವರ ಕೊಡುಗೆಯನ್ನು ನೋಡಿದ್ದೇವೆ. ಅದೇ ಊರಿಗೆ ಸೇರಿದ ನಾಗೇಂದ್ರ ನಾಯಕ ತೊರ್ಕೆ ಅವರು ವೃತ್ತಿಯಲ್ಲಿ ಶಿಕ್ಷಕರಾಗಿ ಬದುಕಿನ ಹೆಚ್ಚಿನ ಭಾಗವನ್ನೆಲ್ಲ ಈ ತಾಲೂಕಿನಲ್ಲೇ ಕಳೆದವರು. ೧೯೮೮ ರಲ್ಲಿ ಹೊರಬಂದ ಅವರ 'ಮಗು– ನಗು' ಎಂಬ ಮಕ್ಕಳ ಕವನ ಸಂಕಲನಕ್ಕೆ ಕವಿ ಈಶ್ವರ ಕಮ್ಮಾರ ಅವರ ಮುನ್ನುಡಿಯಿದೆ. ಇವರ ಕವನಗಳಲ್ಲಿ ಮಕ್ಕಳ ಸಹಜ ಒಲವು–ನಿಲುವು, ಆಶೆ–ಆಕಾಂಕ್ಷೆಗಳು ಚೆನ್ನಾಗಿ ಪ್ರತಿಬಿಂಬವಾಗಿರುವುದನ್ನು ಗುರುತಿಸಿದ್ದಾರೆ. ತಮ್ಮ ತಂದೆ ನಾರಾಯಣ ತೊರ್ಕೆ ಅವರಿಂದ ಪ್ರೇರಣೆ ಪಡೆದು, ಈ ದಾರಿಯಲ್ಲಿ ಶ್ರದ್ಧೆಯಿಂದ ಮುಂದೆ ಸಾಗಿದ ನಾಗೇಂದ್ರ ತೊರ್ಕೆ ನಿವೃತ್ತಿಯ ನಂತರವೂ ಮಕ್ಕಳ ಬಗೆಗಿನ ಅದೇ ಉತ್ಸಾಹವನ್ನೂ ಕಳಕಳಿಯನ್ನೂ ತುಂಬಿಕೊಂಡು ಬರೆಯತೊಡಗಿದ್ದಾರೆ.

ಇತ್ತೀಚೆ (೨೦೦೫) ಅಂಕೋಲೆಯ ರಾಘವೇಂದ್ರ ಪ್ರಕಾಶನದ ಮೂಲಕ ಪ್ರಕಟಗೊಂಡ 'ಗುಬ್ಬಿಗೂಡು' ಎಂಬ ಅವರ ಮಕ್ಕಳ ಕವನ ಸಂಕಲನವು ವಿಮರ್ಶಕ ವಲಯದಿಂದಲೂ ಕೂಡ ಒಳ್ಳೆಯ ಅಭಿಪ್ರಾಯಗಳನ್ನು ಗಳಿಸುತ್ತಿರುವುದು ತೊರ್ಕೆಯವರ ಬೆಳವಣಿಗೆಯನ್ನು ತೋರಿಸುತ್ತದೆ. ಕನ್ನಡದ ಮಕ್ಕಳ ಸಾಹಿತ್ಯಕ್ಕೆ ಉತ್ತರ ಕನ್ನಡ ಜಿಲ್ಲೆಯ ಒಂದು ಮಹತ್ವದ ಕೊಡುಗೆಯಾಗಿ ಈ ಸಂಕಲನ ನಿಲ್ಲಲಿದೆ. ಲೋಕಜ್ಞಾನದ ಮೂಲಕ ಮಕ್ಕಳ ಅರಿವಿನ ಕ್ಷಿತಿಜವನ್ನು ಹಿಗ್ಗಿಸುವುದು ಈ ಕವಿಯ ಮುಖ್ಯ ಉದ್ದೇಶವಾಗಿದೆ. ಮಕ್ಕಳ ಕವನಗಳ ಹೊರತಾಗಿ ನಾಗೇಂದ್ರ ತೊರ್ಕೆಯವರು ಪ್ರಬುದ್ಧರು ಓದುವಂತ ಕವನಗಳನ್ನೂ ಬರೆದಿದ್ದಾರೆ.

ದಯಾನಂದ ಪ್ರಭು

ಶಿರೂರಿನ ದಯಾನಂದ ಪ್ರಭು ಅವರು (ಆರ್. ಎಂ. ಪ್ರಭು) ಆಕಸ್ಮಿಕವೆಂಬಂತೆ ಲೇಖಕರಾಗಿ ಪರಿವರ್ತನೆಗೊಂಡು ಪ್ರಕಟಿಸಿದ ತಮ್ಮ ಏಕಮಾತ್ರ ಕೃತಿಯು ಮೂಲಕ ನಾಡಿನಾದ್ಯಂತ ಹೆಸರು ಮಾಡಿದವರು. ಸ್ವಾತಂತ್ರ್ಯ ಹೋರಾಟ ಕಾಲದ ತಮ್ಮ ನೆನಪುಗಳನ್ನು ದಯಾನಂದ ಪ್ರಭು ಅವರು ತಮ್ಮದೇ ಆದ ಕೊಂಕಣಿಮಿಶ್ರಿತ ದೇಶೀಯ ಕನ್ನಡದಲ್ಲಿ ಬರೆಯುತ್ತ ಹೋದಂತೆ ಅದಕ್ಕೆ ಅಂಕೋಲೆಯ ಉಪ್ಪಿನ ಸತ್ಯಾಗ್ರಹ ಕರನಿರಾಕರಣೆ ಸ್ಮಾರಕ ಟ್ರಸ್ಟಿನವರು (ವಿಶೇಷವಾಗಿ ವಿ. ಜೇ. ನಾಯಕರು) ಪುಸ್ತಕದ ರೂಪಕೊಟ್ಟು, 'ಭೂಗತನ ನೆನಪುಗಳು' ಎಂಬ ಹೆಸರಿಟ್ಟು ಪ್ರಕಟಿಸಿದವರು. ಆ ಗ್ರಂಥಕ್ಕೆ ಕರ್ನಾಟಕ ಸಾಹಿತ್ಯ ಆಕಾಡೆಮಿಯು ಸಂಕೀರ್ಣ ಸಾಹಿತ್ಯ ಪ್ರಕಾರದಲ್ಲಿ ಅತ್ಯುತ್ತಮ ಗ್ರಂಥವೆಂದು ಗುರುತಿಸಿ, ಬಹುಮಾನ ನೀಡಿರುವುದು ಇಲ್ಲಿ ಉಲ್ಲೇಖವಾಗಬೇಕಾದ ಸಂಗತಿಯಾಗಿದೆ.

ಗಿರಿ ಪಿಕಳೆ

ಹಿರಿಯರಾದ ಗಿರಿ ಪಿಕಳೆಯವರು (ಶೇಷಗಿರಿ ವಿ. ಪಿಕಳೆ) ಬಹಳ ತಡವಾಗಿ, ಅಂದರೆ, ತಮ್ಮ ನಿವೃತ್ತಿ ನಂತರ ದಶಕಗಳೇ ಕಳೆದ ಮೇಲೆ ಬರವಣಿಗೆಯ ಕಡೆ, ಗಮನಹರಿಸಿದ್ದು ಒಂದು ಕುತೂಹಲಕರ ಬೆಳವಣಿಗೆಯಾಗಿ ಉಳಿದಿದೆ. ಒಂದು ಕಾಲಕ್ಕೆ ದಿನಕರ ದೇಸಾಯರ ನಿಕಟ ಒಡನಾಡಿಯಾಗಿದ್ದ ಪಿಕಳೆಯವರು ಮಕ್ಕಳ ಪದ್ಯಗಳೂ ಸೇರಿದಂತೆ ದೇಸಾಯರು ಸಾಹಿತ್ಯದ

ವಿವಿಧ ಪ್ರಕಾರಗಳಲ್ಲಿ ಜನಪ್ರಿಯರಾಗುತ್ತಿದ್ದುದನ್ನು ಸಮೀಪದಿಂದ ಕಂಡವರಾದರೂ ಅವರಿಂದ ಯಾವುದೇ ಪ್ರಭಾವಕ್ಕೂ ಒಳಗಾಗದೆ ಶಿಕ್ಷಣ ಮತ್ತು ಬಡರೈತರ ಕಲ್ಯಾಣದ ಬಗ್ಗೆ ತಮ್ಮೆಲ್ಲ ಗಮನವನ್ನು ಹರಿಸಿದವರು. ಆದರೆ ಇದ್ದಕ್ಕಿದ್ದಂತೆ ೯೦ರ ದಶಕದಲ್ಲಿ ಮಕ್ಕಳ ಕವಿಯಾಗಿ ಪ್ರಸಿದ್ಧಿಗೆ ಬಂದುಬಿಟ್ಟರು. ಇವರ ಮಕ್ಕಳ ಪದಗಳನ್ನು ಓದುತ್ತ ಹೋದಂತೆ ಉದ್ದಕ್ಕೂ 'ಪಿಕಳೆ ಟಚ್' ಎದ್ದು ಕಾಣುತ್ತದೆ. ಇವರ ಚೊಚ್ಚಲು ಮಕ್ಕಳ ಕವನ ಸಂಕಲನದ ಹೆಸರು 'ಮಕ್ಕಳ ಪದಗಳು' (೧೯೯೬) ಹೊಸದಾಗಿ ಜಗತ್ತನ್ನು ತಮ್ಮ ಮನಸ್ಸಿನ ಒಳಗಡೆ ತೆಗೆದುಕೊಳ್ಳುವ ಮಕ್ಕಳಿಗೆ ಅಗತ್ಯವಿರುವ ಗಾಳಿ – ಬೆಳಕಿನ ವಿಚಾರ, ಪ್ರಾಣಿ–ಪಕ್ಷಿಗಳ ವಿಚಾರ, ಆಹಾರ–ಆರೋಗ್ಯಗಳ ವಿಚಾರ ಅತ್ಯಂತ ಸಮರ್ಪಕವಾಗಿ ಈ ಸಂಕಲನದ ಕವನಗಳಲ್ಲಿ ಮೂಡಿ ಬಂದಿದೆ. ಇದಕ್ಕೆ ಮುನ್ನುಡಿ ಬರೆದ ಗೌರೀಶ ಕಾಯ್ಕಿಣಿಯವರ ಮಾತಿನಲ್ಲೇ ಹೇಳುವುದಾದದಲ್ಲಿ 'ವೈಜ್ಞಾನಿಕ ಕುತೂಹಲ, ಬಾಹ್ಯಸೃಷ್ಟಿಯ ಸ್ಥಿರ–ಚರಗಳೊಂದಿಗೆ ಬಾಲಮನೋವೃತ್ತಿಯ ಸಂಪರ್ಕ ಸಮಾಗಮ ಹುಟ್ಟಿಸುವುದು' ಇವರ ಕವನಗಳ ಮುಖ್ಯ ಕಾಳಜಿಯಾಗಿದೆ.

'ಗಿಳಿ ಹೇಳಿದ ಕತೆ' (೧೯೯೮) ಪಿಕಳೆಯವರು ಮಕ್ಕಳಿಗಾಗಿಯೇ ಬರೆದ ಕಥಾಸಂಕಲನವಾಗಿದೆ. ಒಂದು ಗಿಳಿ ಐದಾರು ವಯಸ್ಸಿನ ಹುಡುಗನೊಬ್ಬನಿಗೆ ಕತೆ ಹೇಳುತ್ತಿರುವಂತೆ ಬರವಣಿಗೆಯ ತಂತ್ರವನ್ನು ಪಿಕಳೆ ಇಲ್ಲಿ ಬಳಸಿದ್ದಾರೆ. ಮಕ್ಕಳಿಗೆ ಅಗತ್ಯವಿರುವ ಅನೇಕ ಅಪರೂಪದ ಮಾಹಿತಿಗಳು ಈ ಕತೆಯ ಒಳಗಡೆ ಜೀವಂತವಾಗಿರುವುದನ್ನು ಕಾಣಬಹುದಾಗಿದೆ.

'ಬದುಕು–ಬೆರಗು' ಗಿರಿ ಪಿಕಳೆಯವರು ಬರೆದ ಇನ್ನೊಂದು ಕಥಾ ಸಂಕಲನ, ಕೇವಲ ಮಕ್ಕಳು ಮಾತ್ರವಲ್ಲ, ಹದಿಹರೆಯದ ಮಕ್ಕಳು ಕೂಡ ಓದಿ ಸಂತೋಷ ಪಡುವಂಥ ಅನೇಕ ಕತೆಗಳು ಈ ಸಂಕಲನದಲ್ಲಿವೆ. ಇತ್ತೀಚೆ ಪ್ರಕಟಿಸಿರುವ 'ಹೂದೋಟ' ಎಂಬ ಮಕ್ಕಳ ಕವನಗಳು ಗಿರಿ ಪಿಕಳೆಯವರ ಬರವಣಿಗೆಯ ಹಸಿವು ತಣಿಯಲಿಲ್ಲ ಎನ್ನುವುದಕ್ಕೆ ನಿದರ್ಶನವಾಗಬಲ್ಲಂಥ ಇನ್ನೊಂದು ಮಕ್ಕಳ ಕವನ ಸಂಕಲನ. ಇಲ್ಲಿಯೂ ಕೂಡ ಮಕ್ಕಳಿಗೆ ಇಷ್ಟವಾಗಬಹುದಾದಂಥ ಅನೇಕ ಕವನಗಳಿವೆ.

ವಿ. ಜೆ. ನಾಯಕ

ಬರಹಗಾರನೊಬ್ಬನಿಗೆ ಇರಬೇಕಾದ ಆರೋಗ್ಯಪೂರ್ಣ ಚಿಂತನೆಯ ಕ್ರಮ, ಬರೆಯಬಲ್ಲ ಸಾಮರ್ಥ್ಯ, ಶೈಲಿ ಎಲ್ಲ ಗೊತ್ತಿದ್ದೂ ಬದುಕಿನ ಸುದೀರ್ಘಕಾಲದವರೆಗೂ ಬರವಣಿಗೆಯನ್ನು ಅಭಿವ್ಯಕ್ತಿಯ ಮುಖ್ಯ ಮಾಧ್ಯಮವಾಗಿ ತೆಗೆದುಕೊಳ್ಳದೇ ಕೇವಲ ಸಾಹಿತ್ಯ ಪ್ರೋತ್ಸಾಹಕರಾಗಿ, ಚರ್ಚೆಯ ಪಾಲುದಾರರಾಗಿ, ಸಂಘಟನೆಗಳ ಮೇಲ್ವಿಚಾರಕರಾಗಿ ಮಾತ್ರವೇ ಉಳಿದ ವಿ.ಜೆ. ನಾಯಕ ಅವರು ಕೂಡ ಪಿಕಳೆಯವರಂತೆಯೇ ಬಹಳ ತಡವಾಗಿ (೯೦ರ ದಶಕದಲ್ಲಿ) ರಂಗ ಪ್ರವೇಶ ಮಾಡಿದರು. ರಾಘವೇಂದ್ರ ಪ್ರಕಾಶನದ ಮೂಲಕ ೧೯೯೬ರಲ್ಲಿ ಪ್ರಕಟವಾದ ಇವರ 'ಯಕ್ಷಗಾನ' ಕೃತಿಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನ ಕೂಡ ಬಂದಿವೆ. ಒಬ್ಬ ಸತ್ವಶಾಲಿ ಬರಹಗಾರ ನೇಪಥ್ಯದಲೇ ಉಳಿದುಕೊಂಡದ್ದು ಅಷ್ಟರ ಮಟ್ಟಿಗೆ ಸಾಂಸ್ಕೃತಿಕ ನಷ್ಟವೇ. ಯಕ್ಷಗಾನ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಗೌರೀಶ ಕಾಯ್ಕಿಣಿಯವರು ಇವರ ಕುರಿತು ಬರೆದ ಮಾತೊಂದು ಮನನ ಯೋಗ್ಯವಾಗಿದೆ. 'ಏನು ಹೇಳಬೇಕು, ಅದನ್ನು ಹೇಗೆ ಹೇಳಬೇಕು' ಎರಡನ್ನೂ ಬಲ್ಲ ಲೇಖಕ: ಅಧ್ಯಾಪಕನ ಬೋಧನೆ, ಕಲಾವಿದನ ತಜ್ಞತೆ, ಸಾಹಿತಿಯ ಸಮದೃಷ್ಟಿ ಮತ್ತು ರಸಿಕನ ಸಹೃದಯತೆಯೊಂದಿಗೆ ನಿರ್ಲಿಪ್ತವಾಗಿ, ಮಾರ್ಮಿಕವಾಗಿ ಅಷ್ಟೇ ಪ್ರಾಂಜಲ ಪ್ರಾಮಾಣಿಕ ಎಂದಿದ್ದಾರೆ.

ಇವರು ಬರೆದು ಪ್ರಕಟಿಸಿದ ಇತ್ತೀಚಿನ (೨೦೦೫) ಇನ್ನೊಂದು ಗ್ರಂಥ 'ಯಕ್ಷಗಾನ ಪ್ರಸಂಗ ಕತೆಗಳು'. ಈ ಪುಸ್ತಕದಲ್ಲಿ ಜನಪ್ರಿಯ 'ಶ್ರೀ ಕೃಷ್ಣ ಸಂಧಾನ', 'ಶ್ರೀರಾಮ ಪಟ್ಟಾಭಿಷೇಕ', 'ಪಂಚವಟಿ' (ವಾಲಿ–ಸುಗ್ರೀವರ ಕಾಳಗ). ಚೂಡಾಮಣಿ ಪ್ರಸಂಗ', 'ಲಂಕಾದಹನ' ಈ ಯಕ್ಷಗಾನ ಪ್ರಸಂಗಗಳ ಪದ್ಯಗಳಿಗೆ ಗದ್ಯದಲ್ಲಿ ಅರ್ಥ ಬರೆಯಲಾಗಿದೆ. ಬಹುಶಃ ಹಿಂದೆಂದೋ ಬರೆದಿರಬಹುದಾದ ಗದ್ಯಾನುವಾದಗಳಿವು. ಪ್ರತಿ ಪದ್ಯವನ್ನು ತಮಗೆ, ತಮ್ಮ ಸಮರ್ಥನೆಗೆ ತಕ್ಕಂತೆ ಬಗ್ಗಿಸಿ, ಒಗ್ಗಿಸಿಕೊಳ್ಳುವ ತುಸು ಅತಿರೇಕದ ಬೆಳವಣಿಗೆಗಳು ರಂಗದ ಮೇಲೆ ನಡೆಯುತ್ತಿರುವ ಈ ಕಾಲದಲ್ಲಿ ಈ ಗದ್ಯಾನುವಾದ ಗ್ರಂಥ ಪಳಗಿದ ಕಲಾವಿದರಿಗೆ ಎಷ್ಟರ ಮಟ್ಟಿಗೆ ನೆರವಾಗುತ್ತದೋ ಕಾಣೆ. ಆದರೆ ಯಕ್ಷಗಾನ ಕಲೆಗೆ ಮಾರುಹೋಗಿ ಹೊಸದಾಗಿ ಪಾತ್ರನಿರ್ವಹಿಸುವವರಿಗೆ ಇದೊಂದು 'ಕೈಪಿಡಿ'ಯಾಗಬಲ್ಲದು.

ಜೆ. ಪ್ರೇಮಾನಂದ

ಮುಟ್ಟಿದರೆ ಮುದುಡುವ 'ಪತಿವ್ರತೆ ಗಿಡ'ದಂಥ ಸ್ವಭಾವ ಗುಣವನ್ನು ಮೈಗೂಡಿಸಿಕೊಂಡಿರುವ ಸೂಕ್ಷ್ಮಸಂವೇದಿ, ನಿರಾಡಂಬರ ಕವಿ ಅಂಕೋಲೆಯ ಜೆ. ಪ್ರೇಮಾನಂದ ಅವರು, ರಾಘವೇಂದ್ರ ಪ್ರಕಾಶನದ ಮೂಲಕ ೧೯೯೬ ರಲ್ಲಿ ಪ್ರಕಟವಾದ ಇವರ ಮೊದಲ ಕವನ ಸಂಕಲನ 'ನಕ್ಷತ್ರಗಳು'. ಸುಮಾರು ೧೫೦ ಹನಿಗವನಗಳಿರುವ ಈ ಸಂಕಲನ ಮೊನಚಾದ ವಿಡಂಬನೆಗಳ ಧ್ವನಿಸಾಮರ್ಥ್ಯದ ಮೂಲಕ ಓದುಗನ ನೆನಪಿನಂಗಳದಲ್ಲಿ ಉಳಿದಿದೆ.

೨೦೦೨ನೇ ಸಾಲಿನಲ್ಲಿ ಪ್ರಕಟವಾದ 'ಕನಸುಗಳು ಜೀವಂತ' ಎಂಬ ಕವನ ಸಂಕಲನವಂತೂ ಯಾರನ್ನಾದರೂ ಒಲಿಸಿ, ಓದಿಸಿಕೊಳ್ಳುವಂಥ ಬಹಳಷ್ಟು ಉತ್ತಮ ಕವನಗಳನ್ನು ಒಳಗೊಂಡದ್ದಾಗಿದೆ. ಈ ಸಂಕಲನಕ್ಕೆ ಬೆನ್ನುಡಿ ಬರೆದ ಇದೇ ಲೇಖಕ, ಪ್ರೇಮಾನಂದ ನೆಲದ ಕವಿ, ನೀತಿಯ ಕವಿ, ನಯಗಾರಿಕೆಯ ಕವಿ, ಒಳಕುಲುಮೆಯಿಂದ ಸಿಡಿಯುವ ಕಿಡಿಗಳನ್ನು ಹಿಡಿದು ಕವಿತೆ ಮಾಡುವ ಕಲೆಗಾರಿಕೆಯಲ್ಲಿ ಪಳಗತೊಡಗಿದ ಕವಿ ಎಂದದ್ದಿದೆ. ಇನ್ನೂ ಅನೇಕ ಬಿಡಿಗವನಗಳನ್ನೂ, ಹನಿಗವನಗಳನ್ನೂ ಪ್ರೇಮಾನಂದ ಬರೆದಿದ್ದಾರೆ. ಪ್ರಕಟವಾಗಬೇಕಾಗಿದೆ.

ಪ್ರೊ. ಸಿದ್ದಲಿಂಗಸ್ವಾಮಿ ವಸ್ತ್ರದ

ಮೂಲತಃ ಇಂದಿನ ಗದಗ ಜಿಲ್ಲೆಯ ರೋಣ ತಾಲೂಕಿನ ಕುರಡಗಿಯವರಾದ ಸಿದ್ದಲಿಂಗಸ್ವಾಮಿ ವಸ್ತ್ರದ ಅವರದು ವೈಚಾರಿಕ ನೆಲೆಯಲ್ಲೇ ಹುರಿಗೊಂಡ ಕವಿಮನಸು.

'ಒಂಟಿ ಹಕ್ಕಿಯ ಹಾಡು' ಇವರ ಚೊಚ್ಚಲು ಕವನ ಸಂಕಲನ, 'ಪ್ರಥಮರಾತ್ರಿಯಲೊಂದು ಸಖಿಗೀತ' ಓದಬೇಕಾದ ಇನ್ನೊಂದು ಮುಖ್ಯ ಕವನ ಸಂಕಲನ. ಪ್ಲೇಟೋನ ಅಪಾಲಜಿಯನ್ನು ಅತ್ಯಂತ ಸೊಗಸಾಗಿ (ಸರಿಯಾಗಿ) ಕನ್ನಡಕ್ಕೆ ಅನುವಾದಿಸುವ ಮೂಲಕ ಓದುಗರಿಗೆ ಉಪಕಾರ ಮಾಡಿದ್ದಾರೆ. 'ಜಂಗಮ ಪ್ರಕಾಶನ' ಎಂಬ ಹೆಸರಿನ ಸ್ವಂತ ಪ್ರಕಾಶನ ಸಂಸ್ಥೆಯೊಂದನ್ನು ಆರಂಭಿಸಿ ಸ್ವಂತದ್ದಲ್ಲದೆ ಇತರರ ಕೃತಿಗಳನ್ನೂ ಹೊರತಂದಿದ್ದಾರೆ. ವೈಚಾರಿಕ ಎಚ್ಚರ, ಕಾವ್ಯದಮಾಧುರ್ಯ ಹಾಗೂ ವಿಮರ್ಶನ ಪ್ರಜ್ಞೆ ಮುಪ್ಪುರಿಗೊಂಡ ಇವರ ಬರವಣಿಗೆ ಇನ್ನೂ ಬೇಕೆನಿಸುತ್ತದೆ.

ಡಾ. ಟಿ. ವಿ. ನಾಯ್ಕ

ಅಂಕೋಲೆಯ ಕಾಕರಮಠದಲ್ಲಿ ಹುಟ್ಟಿ ಇಲ್ಲಿಯೇ ಓದಿ ಉದ್ಯೋಗ ನಿಮಿತ್ತ ಮುಂಬೈಗೆ ಹೋಗಿದ್ದ ತಿಮ್ಮಣ್ಣ ವೆಂಕಟಯ್ಯ ನಾಯ್ಕರು ನಿವೃತ್ತಿ ನಂತರ ಪುನಃ ಇಲ್ಲಿಗೇ ಬಂದು ನೆಲೆಸಿ ಸಾರ್ವಜನಿಕ ಬದುಕಿನಲ್ಲಿ ಕ್ರಿಯಾಶೀಲ ವ್ಯಕ್ತಿಯಾಗಿ ಬೆರೆತವರು, ಸಾಹಿತ್ಯ ಕಲೆ, ಸಂಸ್ಕೃತಿಯ ವಿಚಾರದಲ್ಲಿ ಆರಂಭದಿಂದಲೂ ಸದಭಿರುಚಿಯನ್ನು ಕಾದುಕೊಂಡು ಬಂದಿದ್ದ ಟಿ.ವಿ. ನಾಯ್ಕರು, 'ಪುರಂದರದಾಸ ಮತ್ತು ಸಂತ ತುಕಾರಾಮ: ತುಲನಾತ್ಮಕ ಸಮೀಕ್ಷೆ' ಎಂಬ ಒಂದು ಸಂಶೋಧನಾ ಗ್ರಂಥವನ್ನು ಅಂಕೋಲೆಯ ರಾಘವೇಂದ್ರ ಪ್ರಕಾಶನದ ಮೂಲಕ ೧೯೯೫ ರಲ್ಲಿ ಪ್ರಕಟಿಸಿದರು. ಪಿ.ಎಚ್.ಡಿ. ಸಂಶೋಧನೆಗಾಗಿ ಅವರು ಆಯ್ದುಕೊಂಡಿದ್ದ ವಿಷಯವೇ ಗ್ರಂಥ ರೂಪದಲ್ಲಿ ಈಗ ಪ್ರಕಟವಾಗಿದೆ. ಮಹಾರಾಷ್ಟ್ರದ ಸಂತ ತುಕಾರಾಮ, ಕರ್ನಾಟಕದ ಪುರಂದರದಾಸ ಇಬ್ಬರೂ ವಿಠಲನ ಭಕ್ತರು. ಭಾಷೆಗೆ ಭಕ್ತಿಗೆ ಭಾವನೆಗಳ ಕೊಡಕೊಳ್ಳುವಿಕೆಗೆ ಗಡಿಗೋಡೆಗಳು ತೊಡಕಾಗಬೇಕಾಗಿಲ್ಲ ಎಂಬುದಕ್ಕೆ ಈ ಸಂತಕವಿಗಳಿಬ್ಬರ ತುಲನಾತ್ಮಕ ಸಮೀಕ್ಷಾ ಗ್ರಂಥದಲ್ಲಿ ಪುಷ್ಕಳ ಒಳಸುಳಿವುಗಳು ಸಿಗುತ್ತವೆ. ನಮ್ಮ ಭಕ್ತಿಪಂಥ, ದಾಸ ಪರಂಪರೆ, ಮಹಾರಾಷ್ಟ್ರದ ಸಂತಪರಂಪರೆ – ಈ ಎಲ್ಲ ಸಂಗತಿಗಳು ಈ ಗ್ರಂಥದಲ್ಲಿ ಚರ್ಚೆಗೆ ಬಂದಿವೆ.

ಜೋಗಿ ಬೊಮ್ಮಯ್ಯ ನಾಯಕ

ಒಬ್ಬ ಆದರ್ಶ ಶಿಕ್ಷಕರಾಗಿ ರಾಷ್ಟ್ರಮಟ್ಟದ ಕೀರ್ತಿ ಸಂಪಾದಿಸಿದ ಬೋಳೆಯ ಜೋಗಿ ಬೊಮ್ಮಯ್ಯ ನಾಯ್ಕರು ಆಕಸ್ಮಿಕವೆಂಬಂತೆ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಇಳಿವಯಸ್ಸಿನಲ್ಲಿ ಕಾಣಿಸಿಕೊಂಡವರು. ತಮ್ಮನ್ನು ಅಗಲಿದ ಪ್ರೀತಿಯ ಮಗ ಕಾಮೇಶ್ವರನ ಅನ್ಯಾದೃಶವಾದ ಪ್ರತಿಭೆ, ಕರ್ತವ್ಯ ನಿಷ್ಠೆ, ಸದ್ಗುಣ ಮುಂತಾದವುಗಳನ್ನು – ಎಳೆಯ ಪೀಳಿಗೆಗೆ ದಾರಿದೀಪವಾಗಲಿ ಎಂಬ ಕಾರಣಕ್ಕಾಗಿ – ಒಂದು ನೀಳ್ಗತೆಯ ರೂಪದಲ್ಲಿ ಬರೆದು, ಹಿಚಕಡದ ಜೀನದೇವ ಪ್ರಕಾಶನದ ಮೂಲಕ ಎರಡು ದಶಕಗಳಷ್ಟು ಹಿಂದೆಯೇ (೧೯೮೫) ಪ್ರಕಟಿಸಿದ್ದಾರೆ.

ಹೆತ್ತವರ ಕಕ್ಕುಲಾತಿ ಮಾತ್ರವೇ ಈ ಕೃತಿಗೆ ಪ್ರೇರಣೆ ಎಂದು ಶರಾ ಎಳೆಯುವುದರಿಂದ ಜೋಗಿ ಬೊಮ್ಮಯ್ಯ ನಾಯಕರ ಬರವಣಿಗೆಯ ಶಕ್ತಿಯನ್ನು ಬಹಳಷ್ಟು ಸರಳಗೊಳಿಸಿದಂತಾಗುತ್ತದೆ. ಬೇಗುದಿಯಲ್ಲಿದ್ದ ಆ

ಮನಸ್ಸು ಸಹಜವಾಗಿಯೇ ಮಗನ ನೆನಪು ಚಿರಸ್ಥಾಯಿಗೊಳಿಸಲು ಈ ಕೆಲಸ ಮಾಡಿಸಿರಬಹುದಾದರೂ ಅದರ ಹಿಂದಿನ ಮುಖ್ಯ ಉದ್ದೇಶ ನಮ್ಮ ಎಳೆಯ ಪ್ರತಿಭೆಗಳು ಮನಸ್ಸು ಮಾಡಿದರೆ, ಮೈತುಂಬಾ ಕನಸುಗಳನ್ನು ತುಂಬಿಕೊಂಡು ಸಾಧನೆಯ ದಾರಿಯಲ್ಲಿ ಹೇಗೆ ಸಾಗಬಹುದು ಎಂಬುದನ್ನು ತೋರಿಸಿಕೊಡುವುದಾಗಿದೆ. ಜೋಗಿ ನಾಯಕರು ಈ ಪುಸ್ತಕದ ಹೊರತಾಗಿಯೂ ಸಾಕಷ್ಟು ಬರೆದಿದ್ದಾರೆ. ಜೀವನ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಇವರು ಬರೆದ ಸುದೀರ್ಘ ಕಥನ 'ಸಕಾಲಿಕ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಹರಿದು ಬಂದಿದ್ದು ಗ್ರಂಥ ರೂಪದಲ್ಲಿ ಪ್ರಕಟವಾಗಬೇಕಾಗಿದೆ.

ಅಮ್ಮೆಂಬಳ ಆನಂದ

೧೯೫೫ರ ವೇಳೆಗೆ ಒಬ್ಬ ಪತ್ರಕರ್ತರಾಗಿ ದಿನಕರ ದೇಸಾಯರ ಆಮಂತ್ರಣದಮೇರೆಗೆ ಅಂಕೋಲೆಗೆ ಬಂದಿದ್ದ ಅಮ್ಮೆಂಬಳ ಆನಂದರು ಅರ್ಧಶತಮಾನದಷ್ಟು ಸುದೀರ್ಘ ಕಾಲ ಈ ನೆಲದಲ್ಲೇ ನಿಂತು ಈ ತಾಲೂಕು ಮತ್ತು ಜಿಲ್ಲೆಯ ಎಲ್ಲ ಸುಖ-ದುಃಖಗಳೊಂದಿಗೆ ಭಾಗಿಯಾಗುತ್ತ ಎಳೆ ತಲೆಮಾರಿನ ಅನೇಕ ಪ್ರತಿಭೆಗಳ ದಾರಿಬೆಳಕಾದವರು. 'ಜನಸೇವಕ' ವಾರಪತ್ರಿಕೆಯ ಸಂಪಾದಕರಾಗಿ ಸುಮಾರು ಹದಿನೇಳುವರೆ ವರ್ಷಗಳ ಕಾಲ ಕೆನರಾವೆಲ್‌ಫೇರ್ ಟ್ರಸ್ಟಿನಲ್ಲಿ ಸೇವೆ ಸಲ್ಲಿಸಿದ ಆನಂದರು, ಆ ಕೆಲಸದ ಜೊತೆಗೇ ಅಂದಿನ ಎಲ್ಲ ಪ್ರಮುಖ ದೈನಿಕಗಳಿಗೆ ವರದಿಗಾರರೂ ಆಗಿದ್ದವರು. ತಮ್ಮ ಅನುಭವವನ್ನು ಅವರು 'ಪತ್ರಿಕೋದ್ಯಮ ಮತ್ತು ಉತ್ತರ ಕನ್ನಡ' ಎಂಬ ಪುಸ್ತಕದಲ್ಲಿ ಸೆರೆ ಹಿಡಿದಿದ್ದಾರೆ. ಪತ್ರಿಕಾ ಅಕಾಡೆಮಿ ಏರ್ಪಡಿಸಿದ ವಿಶೇಷ ಉಪನ್ಯಾಸ ಕಾರ್ಯಕ್ರಮವೊಂದರಲ್ಲಿ ಓದಿದ ಪ್ರಬಂಧವೇ ಇಲ್ಲಿ ಸಂಗ್ರಹವಾಗಿ ಪುಸ್ತಕ ರೂಪ ತಾಳಿದೆ. ಉತ್ತರ ಕನ್ನಡ ಜಿಲ್ಲೆಯ ಪತ್ರಿಕೋದ್ಯಮ ನಡೆದು ಬಂದ ಒಂದು ಸ್ಥೂಲ ಪರಿಚಯ ಈ ಕೃತಿಯಿಂದ ಆಗುತ್ತದೆ.

ಅಮ್ಮೆಂಬಳ ಆನಂದರು ಈ ಪುಸ್ತಕದ ಹೊರತಾಗಿ ನೂರಾರು ಬಿಡಿ ಲೇಖನಗಳನ್ನು ಜನಸೇವಕದಲ್ಲೂ, ಇತರೇ ಪತ್ರಿಕೆಗಳಲ್ಲೂ- ಕಾಲ ಸಂದರ್ಭದ ಕರೆಯಮೇರೆಗೆ-ಬರೆದು ಪ್ರಕಟಿಸಿದ್ದು, ಅವೆಲ್ಲ ಗ್ರಂಥರೂಪದಲ್ಲಿ ಬರಬೇಕಾಗಿದೆ.

ವೆಂಕಟ್ರಮಣ ಗೌಡ

ಅಂಕೋಲೆಯು ೯೦ರ ದಶಕದಲ್ಲಿ ನಾಡಿಗೆ ಪರಿಚಯಿಸಿದ ತುಂಬು ಭರವಸೆಯ ಸೃಜನಶೀಲ ಪ್ರತಿಭೆಗಳಲ್ಲಿ ಅಚವೆ ಭಾಗದ ವೆಂಕಟ್ರಮಣ ಗೌಡ ಪ್ರಮುಖರು. ಕಾವ್ಯ ಮತ್ತು ಕಥೆ ಈ ಎರಡೂ ಪ್ರಕಾರಗಳಲ್ಲಿ ಸಮಸಮ ಎಂಬಂತೆ ತಮ್ಮ ಪ್ರತಿಭೆಯನ್ನು ದುಡಿಸಿಕೊಳ್ಳತೊಡಗಿದ ವೆಂಕಟ್ರಮಣ ಗೌಡ ಅವರು ಕಿರು ಕಾದಂಬರಿಯೊಂದನ್ನೂ ಬರೆದಿದ್ದಾರೆ.

೧೯೯೮ರಲ್ಲಿ ಪ್ರಕಟವಾದ 'ಪಾಂಗು' ವೆಂಕಟ್ರಮಣ ಗೌಡರ ಚೊಚ್ಚಲು ಕವನ ಸಂಕಲನ, ಬೆಂಗಳೂರಿನ ಕ್ರೈಸ್ಟ ಕಾಲೇಜಿನ ಕನ್ನಡ ಸಂಘ ಇದನ್ನು ಪ್ರಕಟಿಸಿದೆ. ವಿದ್ಯಾರ್ಥಿ ಕವಿಯಾಗಿ, ಕತೆಗಾರನಾಗಿ ಮಿಂಚಿದ ವೆಂಕಟ್ರಮಣ ಗೌಡರು ಕನಸುಗಳನ್ನು ಕಣ್ಣಲ್ಲಿ ತುಂಬಿಕೊಂಡು ಬಾಲ್ಯದ ಅನುಭವಗಳನ್ನು ಬೆನ್ನಿಗೆ ಕಟ್ಟಿಕೊಂಡು, ನೆಲದ ಸೊಗಡನ್ನು ಪ್ರೀತಿಯಿಂದ ಒಳಗಿಟ್ಟುಕೊಂಡು ತಮ್ಮ ಕೃತಿಗಳಲ್ಲಿ ಇವನ್ನೆಲ್ಲ ಭಟ್ಟಿ ಇಳಿಸಿದವರು.

'ಪಾಂಗು' ಕವನ ಸಂಕಲನದ ನಂತರ ಪ್ರಕಟವಾದ 'ಈ ಸರ್ತಿಯ ಸುಗ್ಗಿ' (೨೦೦೦) ಎಂಬ ಕಥಾ ಸಂಕಲನ ಕೂಡ ಅನೇಕ ಕಾರಣಗಳಿಗಾಗಿ ಓದುಗರ ಮನಸ್ಸಿನಲ್ಲಿ ಬಹುಕಾಲ ನಿಲ್ಲುತ್ತದೆ. ಆ ನಂತರ ಬಂದ 'ತರುವಾಯ' (೨೦೦೧) ಕಿರು ಕಾದಂಬರಿಯಲ್ಲಿ ವೆಂಕಟ್ರಮಣ ಗೌಡರು ನಮ್ಮ ಮಧ್ಯದ ಹೆಣ್ಣು ಮಕ್ಕಳ ಬಗೆಗಿನ ಸಮಾಜದ ಹುಸಿ ನಂಬಿಕೆಗಳನ್ನು ಚರ್ಚೆಗೆ ಎಳೆದಿದ್ದಾರೆ. ಇನ್ನೂ ಬೆಳೆಯಬಲ್ಲ ಎಲ್ಲ ಶಕ್ತಿ ಹೊಂದಿರುವ ವೆಂಕಟ್ರಮಣ ಗೌಡರಿಂದ ಈಗ ಬಂದಿರುವ ಕೃತಿಗಳನ್ನೂ ಮೀರಿಸುವಂಥ ಬರವಣಿಗೆಯನ್ನು ನಾಡು ನಿರೀಕ್ಷಿಸುತ್ತದೆ.

ಮನೋಹರ ಮಲ್ಮನೆ

ಮೂಲತಃ ಅಂಕೋಲಾ ತಾಲೂಕಿನ ಭಾವಿಕೇರಿಯವರಾದ ಮತ್ತು ಸಾಹಿತ್ಯ, ಕಲೆ, ಮುಂತಾದ ಉತ್ತಮ ಅಭಿರುಚಿಗಳನ್ನು ಮನಸ್ಸಿನಲ್ಲಿ ತುಂಬಿಕೊಂಡು ವೃತ್ತಿ ನಿಮಿತ್ತವಾಗಿ ತಾಲೂಕಿನಿಂದ ಹೊರಗಿರುವ ಮನೋಹರ ಮಲ್ಮನೆ ನವೋದಯ ಶೈಲಿಗೆ ಮಾರು ಹೋದ ನವ್ಯೋತ್ತರ ಕಾಲಘಟ್ಟದ ಕವಿ.

ಮನೋಹರ ಮಲ್ಮನೆಯವರು ಪ್ರಕಟಿಸಿದ ಚೊಚ್ಚಲು ಕವನ ಸಂಕಲನದ ಹೆಸರು 'ಕಲ್ಪನಾ ತರಂಗ'.

೭೦ರ ದಶಕದಿಂದಲೇ ಕವಿತೆ ಬರೆಯುವ ಗೀಳನ್ನು ಹಚ್ಚಿಕೊಂಡು ಬೆಳೆದವರು. 'ಮುನ್ನುಡಿ' ಕಾರ ಗೌರೀಶ ಕಾಯ್ಕಿಣಿಯವರು ಇವರ ಬರವಣಿಗೆಯ ಬಗ್ಗೆ ಪ್ರೀತಿಯಿಂದ ಬರೆದ ಮಾತುಗಳಿವು : 'ಇಲ್ಲಿಯ ೪೫ ಕವನಗಳಲ್ಲಿ ಏನೆಲ್ಲ ಎಷ್ಟೆಲ್ಲ ವಸ್ತುಗಳ ವ್ಯಾಖ್ಯಾನವಿದೆ... ವಿವಿಧ ವಿಷಯುಗಳು ವಿವರಪೂರ್ಣವಾಗಿ ವರ್ಣನೆಗೊಂಡಿವೆ. 'ಹೊಸ ಕ್ಯಾಮರಾ' ಉಡುಗೊರೆಯಾಗಿ ಪಡೆದ ಹಿಗ್ಗಿನಲ್ಲಿ ಹರೆಯದ ಹುಡುಗ ಕಂಡುಕಂಡದ್ದನ್ನೆಲ್ಲ ಶೂಟು ಮಾಡುವಂತೆ ಈ ಉತ್ಸಾಹಿ ಕವಿಯ ಕಾವ್ಯಾವೇಶವು ತಾನು ಕಂಡುಂಡ ವಸ್ತುಗಳನ್ನೆಲ್ಲ ಶಬ್ದಗಳಲ್ಲಿ ಸೆರೆಹಿಡಿಯುತ್ತ ಸಡಗರದಿಂದ ಸಾಗಿದೆ'. ಮನೋಹರ ಮಲ್ಮನೆ ಈಗಲೂ ಬರೆಯುತ್ತಲೇ ಇದ್ದಾರೆ.

ರಾಮಚಂದ್ರ ಶೇಟ

ಅಂಕೋಲೆಯ ಕೋಟೆವಾಡದ ಶ್ರೀ ರಾಮಚಂದ್ರ ಎಮ್. ಶೇಟ ಅವರು 'ಆರಂ' ಎಂಬ ಹೆಸರಿನಲ್ಲಿ ಕವಿತೆಗಳನ್ನೂ, ಕತೆ, ಕಾದಂಬರಿಗಳನ್ನೂ ಬರೆಯುತ್ತ ಬಂದವರು. ೯೦ರ ದಶಕದಲ್ಲಿ ಇವರು ಬರೆದು ಪ್ರಕಟಿಸಿದ 'ಶಾಲ್ಮಲೆ ಶಶಿ' ಎಂಬ ಕಾದಂಬರಿ ಇವರ ಸಾಹಿತ್ಯ ಪ್ರೀತಿ ಮತ್ತು ಜೀವನ ಶ್ರದ್ಧೆಗಳ ದಾಖಲೆ ಪುಸ್ತಕವಾಗಿ ಉಳಿದಿದೆ. ಇನ್ನೂ ಒಂದೆರಡು ಕೃತಿಗಳು ಹೊರಬಂದಿವೆಯೆಂದು ಕೇಳಿದ್ದೇನೆ. ಓದಲು ಸಿಕ್ಕಿಲ್ಲ. ಕೊಂಕಣಿ ಭಾಷೆಯಲ್ಲಿ ಹೆಚ್ಚು ಪ್ರಸಿದ್ಧಿ ಪಡೆದಿರುವ ಈ ಲೇಖಕ ಬಹುಮುಖ ಪ್ರತಿಭೆಯುಳ್ಳವರಾಗಿದ್ದಾರೆ.

ಬಿ. ಜಿ. ನಾಯಕ

ಅಂಕೋಲಾ ತಾಲೂಕಿನ ಸಗಡಗೇರಿಯ ಬಿ. ಜಿ. ನಾಯಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಾಹಿತ್ಯ ಪ್ರೇಮಿ ಮತ್ತು ಬರಹಗಾರ, 'ರಾಣಿ ಶಶಿಪ್ರಭ' ಇವರು ಬರೆದ ಪೌರಾಣಿಕ ನಾಟಕ. 'ಸೃಷ್ಟಿ ಸೌರಭ' ಹೊರ ತಂದಿರುವ ಕವನ ಸಂಕಲನ. 'ತೆಂಕಣಗಾಳಿ' ಇವರು ಪ್ರಕಟಿಸಿದ ಸುಮಾರು ನಾಲ್ಕುನೂರು ಚುಟುಕುಗಳ ಉತ್ತಮ ಸಂಕಲನವಾಗಿದೆ. 'ಪಾರ್ವತಿ ಪ್ರಕಾಶನ, ಸಗಡಗೇರಿ' ಎಂಬ ಹೆಸರಿನಲ್ಲಿ ಪ್ರಕಾಶನ ಸಂಸ್ಥೆಯೊಂದನ್ನು ತಮ್ಮ ಶ್ರೀಮತಿಯವರ ನೆರವಿನೊಂದಿಗೆ ಆರಂಭಿಸಿ, ಆ ಮೂಲಕ ತಮ್ಮೆಲ್ಲ ಗ್ರಂಥಗಳನ್ನು ಪ್ರಕಟಿಸುತ್ತಿರುವ ಬಿ. ಜಿ. ನಾಯಕರ ಈವರೆಗೆ ಹೆಸರಿಸಿದ ಮೂರು ಪುಸ್ತಕಗಳಲ್ಲಿ ಮೊದಲಿನ ಎರಡು ಪುಸ್ತಕಗಳು ಈ ಲೇಖಕನಿಗೆ ಓದಲು ಸಿಕ್ಕಿಲ್ಲ. ನಮ್ಮ ಜಿಲ್ಲೆಯ ಅನೇಕ ಕವಿಗಳ ಮೇಲೆ ಡಾ. ದಿನಕರ ದೇಸಾಯರ ಚೌಪದಿಗಳ ಪ್ರಭಾವ ದಟ್ಟವಾಗಿಯೇ ಬಿದ್ದಿದೆ. ಅಂಥ ಪ್ರಭಾವಕ್ಕೆ ಒಳಗಾದವರಲ್ಲಿ ಬಿ. ಜಿ. ನಾಯಕರೂ ಒಬ್ಬರು.

ಜನಾರ್ಧನ ನಾಯಕ

ಮೂಲತಃ ಅಂಕೋಲಾ ತಾಲೂಕಿನ ಅಗ್ರಗೋಣ ಭಾಗದವರಾದ ಜನಾರ್ಧನ ನಾಯಕ ಅವರ 'ಸೀಯಾಳ' ಕವನ ಸಂಕಲನವು ಓದಿಸಿಕೊಂಡು ಹೋಗುವಂಥ ಮಾಧುರ ಗುಣಗಳಿರುವ ಅನೇಕ ಭಾವಗೀತೆಗಳನ್ನು ಒಳಗೊಂಡದ್ದಾಗಿದೆ. ಹಿರಿಯ ಕವಿ ಚೆನ್ನವೀರ ಕಣವಿಯವರ ಮುನ್ನುಡಿ ಇರುವ ಈ ಸಂಕಲನದಲ್ಲಿ ಸಾಮಾನ್ಯ ಓದುಗರು ಹೆಚ್ಚು ಇಷ್ಟ ಪಡಬಹುದಾದಂಥ ರಮ್ಯಗೀತಗಳಿವೆ.

ಜನಾರ್ಧನ ನಾಯಕರು ಕತೆ ಹಾಗೂ ಬಿಡಿಲೇಖನಗಳಲ್ಲೂ ಕೈಯಾಡಿಸಿದವರು. ಇನ್ನೂ ಒಂದೆರಡು ಕೃತಿಗಳು ಹೊರಬಂದ ಬಗ್ಗೆ ಕೇಳಿದ್ದೇನೆ. ಆದರೆ ಓದಲು ಸಿಕ್ಕಿಲ್ಲ. ಬ್ಯಾಂಕ ಅಧಿಕಾರಿಯಾಗಿರುವ ಜನಾರ್ಧನ ನಾಯಕರು ಸಮಾಜವನ್ನು ಮುಕ್ತ ಮನಸ್ಸಿನಿಂದ ನೋಡಬಲ್ಲ ಒಬ್ಬ ಹೃದಯವಂತ ಕವಿಯಾಗಿ ನೆನಪಿನಲ್ಲಿ ಉಳಿಯಬಲ್ಲವರು.

ಎನ್. ವಿ. ನಾಯಕ

ಭಾವಿಕೇರಿಯ ಭಾವಜೀವಿಯಾಗಿರುವ ಶಿಕ್ಷಕ – ಕವಿ ಎನ್. ವಿ. ನಾಯಕರು ದಶಕಗಳಿಂದ ಕಾವ್ಯ ರಚನೆ ಮತ್ತು ಗಾಯನದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ನೂರಾರು ಕವನಗಳಲ್ಲಿ ೪೩ ನ್ನು ಹೆಕ್ಕಿ 'ನಿತ್ಯ ಚೇತನ' (ರಾಘವೇಂದ್ರ ಪ್ರಕಾಶನ) ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ (೨೦೦೩). ಈ ಕವಿಯ ಎದೆಯಾಳದ ಉದ್ದೇಶ ಮಕ್ಕಳು ಹಾಡಿ, ಆಡಿ ನಲಿಯಬೇಕೆಂಬುದು. ಆ ಉದ್ದೇಶಕ್ಕೆ ಪೂರಕವಾಗಿಯೇ ಎನ್. ವಿ. ನಾಯಕರು ತಮ್ಮ ಕವಿತೆಗಳನ್ನು ಬರೆದಿದ್ದಾರೆ.

ತನ್ನ ಊರು, ಅಲ್ಲಿಯ ನೆಲ–ಜಲ, ಗಿಡ–ಮರಗಳ ಬಗ್ಗೆ ಈ ಕವಿಗೆ ತೀರದ ಅಭಿಮಾನ, ಪ್ರೀತಿ, ನೀತಿ ಜೊತೆ ಜೊತೆಯಲ್ಲಿಯೇ ನಡೆಯಬೇಕೆನ್ನುವ ಈ ಕವಿ ಬರೆದದ್ದು ಬಹಳ. ಪ್ರಕಟಿಸಿದ್ದು ಕಡಿಮೆ. ಬರೆಯುತ್ತಲೇ ಇರುವ ಈ ಕವಿಯ ಬಳಿ ಇನ್ನೂ ಬಹಳಷ್ಟು ಬಿಡಿಗವನಗಳಿವೆ.

ನಾಗಪತಿ ಹೆಗಡೆ

ತಮ್ಮ ಚೊಚ್ಚಲು ಕಥಾ ಸಂಕಲನವಾದ 'ಉತ್ತರಾರ್ಧ'ದ ಮೂಲಕವೇ ಸಾಹಿತ್ಯ ಕ್ಷೇತ್ರದ ಪ್ರಾಜ್ಞವಲಯದಲ್ಲಿ ವಿಶೇಷವಾದ ಭರವಸೆಯನ್ನು ಹುಟ್ಟಿಸಿರುವ ಹುಳಗೋಳ ನಾಗಪತಿ ಹೆಗಡೆಯವರು ಮೂಲತಃ ಶಿರ್ಸಿ ತಾಲೂಕಿನವರಾದರೂ ಅಂಕೋಲೆಯಲ್ಲೇ ಶಿಕ್ಷಕವೃತ್ತಿ ಕೈಗೊಂಡು ತಮ್ಮ ಸೃಜನಶೀಲ ಅಭಿವ್ಯಕ್ತಿಗಾಗಿ ಈ ನೆಲವನ್ನೇ ನೆಚ್ಚಿಕೊಂಡಂತೆ ತೋರುತ್ತದೆ.

ತಮ್ಮದೇ ಆದ 'ನಮ್ರತಾ ಪ್ರಕಾಶನ'ವನ್ನು ಆರಂಭಿಸಿ ಅದರ ಚೊಚ್ಚಲು ಪ್ರಕಟಣೆಯಾಗಿ 'ಉತ್ತರಾರ್ಧ'ವನ್ನು (೨೦೦೪) ಹೊರತಂದುದಲ್ಲದೆ, ಸ್ಥಳೀಯ ಲೇಖಕರ ಕೃತಿಗಳಾದ 'ರುಗ್ಗಾಯಣ' ಎಂಬ ಯಕ್ಷಗಾನ ಕಥಾನಕವನ್ನೂ 'ಆಧುನಿಕ ಶಿಕ್ಷಣದ ಆಯಾಮಗಳು' ಎಂಬ ಪ್ರಬಂಧ ಸಂಕಲನವನ್ನೂ ಹೊರ ತಂದಿದ್ದಾರೆ. ವಸ್ತುವಿನ ಆಯ್ಕೆಯಲ್ಲೂ, ಬರವಣಿಗೆಯ ತಂತ್ರದಲ್ಲೂ ಸ್ವಂತಿಕೆಯ ಛಾಪು ಮೂಡಿಸಲು ಪ್ರಯತ್ನಿಸುತ್ತಿರುವರು. ಈ ಅಭಿಪ್ರಾಯಕ್ಕೆ ಸಮರ್ಥನೆಯಾಗಬಲ್ಲ ಅನೇಕ ಕುರುಹುಗಳನ್ನು ತಮ್ಮ ಚೊಚ್ಚಲು ಸಂಕಲನದ ಕಥೆಗಳಲ್ಲೇ ನೀಡಿದ್ದಿದೆ. 'ಉತ್ತರಾರ್ಧ' ಕಥಾಸಂಕಲನಕ್ಕೆ ಕಲಕತ್ತಾದ ಭಾರತೀಯ ಭಾಷಾಪರಿಷತ್ತಿನ ಗೌರವ ಕೂಡ ಸಂದಿದೆ. ಬಿಡಿ ಕವನಗಳನ್ನು, ಬಿಡಿಬಿಡಿಯಾದ ನುಡಿಚಿತ್ರಗಳನ್ನು ಕಾಲೋಚಿತ ನೆಲೆಯಲ್ಲಿ ಬರೆಯುತ್ತಲೇ ಇರುವ ನಾಗಪತಿಯವರ ಬಗ್ಗೆ ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯಾಸಕ್ತರು ಬಹಳಷ್ಟು ಕುತೂಹಲವನ್ನು ಇಟ್ಟುಕೊಂಡಿದ್ದಾರೆ. ಹಾಗೂ ಇನ್ನೂ ವಿಶೇಷವಾದುದನ್ನು ನಿರೀಕ್ಷಿಸುತ್ತಿದ್ದಾರೆ.

ಸುನಂದಾ ಪ್ರಕಾಶ ಕಡಮೆ

ಸುನಂದಾ ಪ್ರಕಾಶ ಕಡಮೆ ಅಂಕೋಲೆಯ ಅಲಗೇರಿಯವರು. ಇಲ್ಲೇ ಓದಿ ಇಲ್ಲೇ ಬೆಳೆದವರು. ಕಾರಣಾಂತರದಿಂದ ಈ ಜಿಲ್ಲೆಯಿಂದ ಹೊರಗಿದ್ದರೂ, ಮೊದಲೂ, ಕೊನೆಗೂ ತಾನು ಅಂಕೋಲೆಯವಳೇ ಎಂಬ ಅಭಿಮಾನವನ್ನು ಎದೆಯಲ್ಲಿ ತುಂಬಿಕೊಂಡವರು. ಹೊಸ ತಲೆಮಾರಿನ ಸೃಜನಶೀಲ ಲೇಖಕಿಯಲ್ಲಿ ಇಂದು ನಾಡೇ ಮೆಚ್ಚಿಕೊಂಡಾಡುತ್ತಿರುವ ಬೆರಳೆಣಿಕೆಯ ಪ್ರತಿಭೆಗಳಲ್ಲಿ ಸುನಂದಾ ಒಬ್ಬರೆಂಬುದು ಅಂಕೋಲೆಗೊಂದು ಹೆಮ್ಮೆಯ ಕೋಡಾಗಿದೆ.

ನಾಡಿನ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಇವರ ಕತೆ, ಕವನ, ನುಡಿಚಿತ್ರಗಳು ಪ್ರಕಟವಾಗಿವೆ. ರಾಜ್ಯ ಮಟ್ಟದ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಲಿರುವ ಸುನಂದಾ ಗೆಲ್ಲುತ್ತಲೇ ಇದ್ದಾರೆ. ಸಮಕಾಲೀನ ಲೇಖಕರ ಮತ್ತು ವಿಮರ್ಶಕರ ಮುಕ್ತ ಪ್ರಶಂಸೆಗೆ ಒಳಗಾಗಿರುವ ಇವರ ಚೊಚ್ಚಲು ಕಥಾ ಸಂಕಲನದ ಹೆಸರು 'ಪುಟ್ಟ ಪಾದದ ಗುರುತು' (೨೦೦೫), ಬೆಂಗಳೂರಿನ 'ಚೆಂದ ಪುಸ್ತಕ ಪ್ರಕಾಶನ' ಇದನ್ನು ಪ್ರಕಟಿಸಿದೆ. ಮಧ್ಯವರ್ಗದ ಕುಟುಂಬ ವ್ಯವಸ್ಥೆಯ ಮನಸುಗಳನ್ನು ಎಳೆ ಎಳೆಯಾಗಿ ತಮ್ಮ ಕತೆಗಳಲ್ಲಿ ಬಿಡಿಸಿಡುವ ಸುನಂದಾ ಇಂದು ಬಹುಬೇಡಿಕೆಯ ಲೇಖಕಿಯಾಗಿದ್ದಾರೆ. ಒಬ್ಬ ಸೃಜನಶೀಲ ಲೇಖಕಿ ಯಶಸ್ವಿ ಗ್ರಂಥಸಂಪಾದಕಿಯಾಗಿಯೂ ಆಗಬಲ್ಲಳು ಎಂಬುದನ್ನು ಇವರು – ತಮ್ಮ ಬಾಳಸಂಗಾತಿ ಪ್ರಕಾಶ ಕಡಮೆ ಜೊತೆಗೂಡಿ – ಹೊರತಂದ 'ಪರಿಮಳದಂಗಳ' ಎಂಬ ಅಭಿನಂದನ ಗ್ರಂಥದಿಂದಲೂ ಕಂಡುಕೊಳ್ಳಬಹುದಾಗಿದೆ.

ಸಂದೀಪ ನಾಯಕ

೯೦ ರ ದಶಕದಿಂದಲೇ ತಮ್ಮ ಬಿಡಿಕವನ ಮತ್ತು ಕತೆಗಳ ಮೂಲಕ ನಾಡಿನ ಗಮನ ಸೆಳೆದ ಮುಖ್ಯ ಯುವಬರಹಗಾರರಲ್ಲಿ ಅಂಕೋಲೆಯ ಸಂದೀಪ ನಾಯಕ ಒಬ್ಬರು.

'ಅಗಣಿತ ಚಹರೆ' ಸಂದೀಪ ನಾಯಕರು ಇತ್ತೀಚೆ ಹೊರತಂದ ಚೊಚ್ಚಲು ಕವನ ಸಂಕಲನ (೨೦೦೫). ಈ ಸೂಕ್ಷ್ಮಸಂವೇದಿ ಕವಿ, ಉತ್ಕೃಷ್ಟವೆನ್ನಬಹುದಾದ ಹಲವು ಕತೆಗಳನ್ನೂ ಬರೆದಿದ್ದಾರೆ. ಅವು ನಾಡಿನ ನಾಮಾಂಕಿತ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಇವರ 'ಕರೆ' ಎಂಬ ಕತೆಗೆ ವಿಜಯ ಕರ್ನಾಟಕ ಪತ್ರಿಕೆ ಏರ್ಪಡಿಸಿದ ಸ್ಪರ್ಧೆಯಲ್ಲಿ ೨೫,೦೦೦ ರೂ. ಮೊತ್ತದ ಪ್ರಥಮ ಬಹುಮಾನ ಬಂದಿರುವುದನ್ನು ಇಲ್ಲಿ ನೆನಪುಮಾಡಿಕೊಳ್ಳಬಹುದಾಗಿದೆ. ಸಂದೀಪ ನಾಯಕರದು ಸಡಗರವಿಲ್ಲದ ಶೈಲಿ. ಅತ್ಯಂತ ನವುರಾದ ಒಳನೋಟ. ನಿರುದ್ವಿಗ್ನ ನಡಿಗೆ. ನಾಡು ಇವರಿಂದ ಬಹಳಷ್ಟನ್ನು ಪಡೆಯಲಿಕ್ಕಿದೆ.

ನಾಗೇಶದೇವ

ದಶಕಗಳಿಂದ ಕಾವ್ಯ ಕೃಷಿಯಲ್ಲಿ ಸದ್ದಿಲ್ಲದೇ ತೊಡಗಿಕೊಂಡಿದ್ದ ನಾಗೇಶದೇವ ಅವರು ಇತ್ತೀಚೆ (೨೦೦೫) ರಾಘವೇಂದ್ರ ಪ್ರಕಾಶನದ ಮೂಲಕ

'ಲೆಕ್ಕವಿಲ್ಲದವರು' ಎಂಬ ಉತ್ತಮ ಕವನ ಸಂಕಲನವೊಂದನ್ನು ಹೊರತಂದಿದ್ದಾರೆ. ಒಂದು ಕಾಲಕ್ಕೆ ತೀರಾ ಅವಮಾನಕ್ಕೆ ಒಳಗಾದ ದಲಿತ ಕುಟುಂಬವೊಂದರಿಂದ ಬಂದ ನಾಗೇಶದೇವ ಅವರ ಈ ಚೊಚ್ಚಲು ಸಂಕಲನದ ಶೀರ್ಷಿಕೆ ಕೂಡ ಧ್ವನಿಪೂರ್ಣವಾಗಿದೆ.

'ದಲಿತ ಸಂವೇದನೆ' ಇವರ ಕವಿತೆಗಳಲ್ಲಿ ಹೆಪ್ಪುಗಟ್ಟಿದೆ. ಅಕ್ರೋಶ ಇಲ್ಲದಿದ್ದರೂ ವ್ಯವಸ್ಥೆಯ ಬಗೆಗಿನ ಆತಂಕಗಳು ತುಂಬಿಕೊಂಡಿವೆ. ನಾಗೇಶದೇವ ತಡವಾಗಿ ರಂಗಕ್ಕೆ ಬಂದರೆಂಬುದೇ ಸದ್ಯದ ನಮ್ಮ ಆತಂಕ.

ಎ. ಎ. ಸಣ್ಣಿ

ಬಿಡಿಗವನ ಮತ್ತು ಲೇಖನಗಳನ್ನು ಆಗಾಗ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಜಿಲ್ಲೆಯ ಜನರಿಗೆ ಪರಿಚಿತರಾಗಿರುವ ಎ. ಎ. ಸಣ್ಣಿ ಅವರದು ಮುಖ್ಯವಾಗಿ ದಲಿತ ಸಂವೇದನೆ. 'ಡಾ. ದಿನಕರ ದೇಸಾಯರ ಜೀವನ ಕಾರ್ಯ' ಕುರಿತಾದ ಪುಸ್ತಕವೊಂದನ್ನು ಬರೆದು ಪ್ರಕಟಿಸಿದ್ದಾರೆ.

'ಕಾಗೆ' ಎಂಬ ಕವನ ಸಂಕಲನ ಪ್ರಕಟಿಸಿದ್ದಾರೆಂದು ಕೇಳಿದ್ದೇನೆ, ಓದಲು ಸಿಕ್ಕಿಲ್ಲ.

ರಮೇಶ ನಾಯಕ

'ಕರಾವಳಿ ಚುಟುಕು' ಎಂಬ ಸಂಕಲನದ ಮೂಲಕ ಗುರುತಿಸಿಕೊಂಡ ರಮೇಶ ವಿ. ನಾಯಕ ಅವರ ಅಭಿವ್ಯಕ್ತಿಯ ಮುಖ್ಯ ಮಾಧ್ಯಮ ಚೌಪದಿಗಳು. ಕೆಲವು ಬಿಡಿಗವನಗಳನ್ನು ಬರೆದಿರುವರಾದರೂ ಇವರಿಗೆ ಇಷ್ಟವಾದ ಪ್ರಕಾರ ಚುಟುಕು ಸಾಹಿತ್ಯವೇ. ಹಿರಿಯರ ಬಗೆಗಿನ ಗೌರವ, ಆದರ್ಶದ ಕನಸುಗಳು ಇವರ ಚುಟುಕುಗಳಲ್ಲಿ ಕಾಣುತ್ತವೆ. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳು ಪರಿಚಯಿಸಿದ ಹಿರಿಯರ ಕಾವ್ಯ ಕೃತಿಗಳ ಗಂಭೀರ ಓದಿಗೆ ಇವರು ತಮ್ಮನ್ನು ಒಡ್ಡಿಕೊಂಡಲ್ಲಿ ಹೆಚ್ಚಿನದನ್ನು ಸಾಧಿಸಿಕೊಳ್ಳುವರೆಂಬ ಭರವಸೆ ಇಟ್ಟುಕೊಳ್ಳಬಹುದಾಗಿದೆ.

ಡಾ. ಎಸ್. ಡಿ. ನಾಯ್ಕ

ಮೂಲತಃ ಆಂಕೋಲೆಯ ಬೊಬ್ರುವಾಡ ಗ್ರಾಮಕ್ಕೆ ಸೇರಿದ ಡಾ. ಎಸ್. ಡಿ. ನಾಯ್ಕರು ಕಳೆದ ಸುಮಾರು ಕಾಲು ಶತಮಾನದಿಂದ ಉದ್ಯೋಗ ನಿಮಿತ್ತ ಕಾರವಾರದಲ್ಲಿ ನೆಲೆಸಿ ಕತೆ, ಕವನ, ಬಿಡಿಗವನಗಳ ಮೂಲಕ ಪರಿಚಿತರು. ಇವರು 'ಕನ್ನಡಿ' ಎಂಬ ಕವನ ಸಂಕಲನವೊಂದನ್ನು ಹೊರತಂದಿದ್ದಾರೆಂದು ಕೇಳಿದ್ದೇನೆ. ಓದಲು ಸಿಕ್ಕಿಲ್ಲ.

ಡಾ. ಜಿ. ಎಸ್. ನಾಯಕ

ಪ್ರಸ್ತುತ ಅಂಕೋಲಾ ತಾಲೂಕಾ ಪಂಚಾಯತದ ಕಾರ್ಯನಿರ್ವಹಣಾಧಿಕಾರಿಗಳಾದ ಜಿ. ಎಸ್. ನಾಯಕರು ಇತ್ತೀಚೆ ತಮ್ಮಪತ್ನಿ ಡಾ. ಮಂಜುಳಾ ಅವರೊಂದಿಗೆ, 'ನಾಗವಲ್ಲಿ ಸಸ್ಯಲೋಕ' ಎಂಬ ಉಪಯುಕ್ತ ಪುಸ್ತಕವನ್ನು ಪ್ರಕಟಿಸಿದ್ದಾರೆ. ಮಧುಮೇಹ ಮುಂತಾದ ಕಾಯಿಲೆಗಳಿಗೆ ದಿವ್ಯೌಷಧಿ ಆಗಬಲ್ಲ ನಾಗವಲ್ಲಿ ಸಸ್ಯದ ಕುರಿತು ಸಂಶೋಧನಾತ್ಮಕ ಅನೇಕ ಸಂಗತಿಗಳು ಈ ಸಂಕಲನದಲ್ಲಿ ಹರಳುಗಟ್ಟಿರುವುದರಿಂದ ಈ ಹೊತ್ತಿಗೆಗೆ ಅದರದೇ ಆದ ಮಹತ್ವ ಪ್ರಾಪ್ತವಾಗಿದೆ.

ಡಾ. ಶಿವಾನಂದ ನಾಯಕ

ಇತ್ತೀಚೆ ಹೊರಬಂದ 'ಆಧುನಿಕ ಶಿಕ್ಷಣದ ಆಯಾಮಗಳು' ಎಂಬ ಪ್ರಬಂಧ ಸಂಕಲನದ ಮೂಲಕ ಅಂಕೋಲೆಯ ಬರಹಗಾರರ ಬಳಗಕ್ಕೆ ಸೇರಿಕೊಂಡಿರುವ ಡಾ. ಶಿವಾನಂದ ನಾಯಕರು ಸಾಹಿತ್ಯ ಪರಿಚಾರಿಕೆಯಲ್ಲಿ ಮನಮುಟ್ಟಿ ತೊಡಗಿಸಿಕೊಂಡವರಾಗಿದ್ದಾರೆ. ಸಾಹಿತ್ಯ ಕೃಷಿಯಷ್ಟೇ ಮುಖ್ಯವಾದುದು ಸಾಹಿತ್ಯದ ವಾತಾವರಣ ಸೃಷ್ಟಿ ಮಾಡುವ ಸಂಘಟನೆ ಕೂಡ. ಅದು ಸಂಸ್ಕೃತಿಯನ್ನು ಕಟ್ಟುವ ಕೆಲಸ. ಈ ಕೆಲಸದಲ್ಲೇ ಹೆಚ್ಚು ಲವಲವಿಕೆಯನ್ನು ತೋರುತ್ತಿರುವ ಶಿವಾನಂದ ನಾಯಕರು ಬಿಡುವಿನ ವೇಳೆಯಲ್ಲಿ ಕತೆ, ಕವನ, ಚುಟುಕುಗಳನ್ನು ಬರೆಯುತ್ತಿರುವರಾದರೂ ಪುಸ್ತಕ ರೂಪದಲ್ಲಿ ಪ್ರಕಟವಾಗಬೇಕಾಗಿದೆ.

ಹೊನ್ನಪ್ಪ ನಾರಾಯಣ ನಾಯಕ

'ಶಿಕ್ಷಣ ಹಾಗೂ ಶಿಕ್ಷಕ' ಎಂಬ ಶೀರ್ಷಿಕೆಯ ಕಿರುಹೊತ್ತಿಗೆಯೊಂದನ್ನು ಪ್ರಕಟಿಸಿರುವ ಹೊನ್ನಪ್ಪ ಎನ್. ನಾಯಕ ಅವರು ೯೦ರ ದಶಕದಲ್ಲೇ ಕುತೂಹಲ ಹುಟ್ಟಿಸಿದ ಬರಹಗಾರ. ವಿದ್ಯೆ ಮತ್ತು ಸಂಸ್ಕಾರ, ಶಿಕ್ಷಣ ಮತ್ತು ಶಿಕ್ಷಕ, ಶಿಕ್ಷಣದಲ್ಲಿ ವ್ಯಕ್ತಿತ್ವ ಬೆಳವಣಿಗೆ ಮುಂತಾದ ಉಪಯುಕ್ತ ಲೇಖನಗಳು ಈ ಸಂಕಲನದಲ್ಲಿದೆ. ಪ್ರಬುದ್ಧ ಎನ್ನಲಾಗದಿದ್ದರೂ ಪ್ರಾಮಾಣಿಕ ಶಿಕ್ಷಕನೊಬ್ಬನ ಅಂತರಾಳದ ಮಾತುಗಳು ಇವರ ಲೇಖನಗಳಲ್ಲಿವೆ.

ಬಿ. ಎಚ್. ನಾಯಕ

'ಸೀಮಾಸುತ' ಎಂಬ ಕಾವ್ಯನಾಮದಲ್ಲಿ ಕವಿತೆ, ಚುಟುಕುಗಳನ್ನು ಬರೆದ, ಬರೆಯುತ್ತಿರುವ ಬಿ.ಎಚ್.ನಾಯಕ ಅವರು ದೂರ ಸಂಪರ್ಕ ಇಲಾಖೆಯಲ್ಲಿ ಬಿಡುವಿಲ್ಲದ ದುಡಿಮೆಯಲ್ಲಿದ್ದರೂ ಸೃಜನಶೀಲ ಮನಸ್ಸನ್ನು ಇಟ್ಟುಕೊಂಡವರು, 'ಮಲೆನಾಡ ಮಲ್ಲಿಗೆ' ಇವರು ಪ್ರಕಟಿಸಿದ ಕವನ ಸಂಕಲನವೆಂದು ಕೇಳಿದ್ದೇನೆ, ಓದಲು ಸಿಕ್ಕಿಲ್ಲ.

ಪಾಲ್ಗುಣ ಗೌಡ ಅಚವೆ

ಹಲವು ಬಿಡಿಗವನ, ಕಥೆ ಹಾಗೂ ಲೇಖನಗಳ ಮೂಲಕ ಜಿಲ್ಲೆಯ ಸಾಹಿತ್ಯವಲಯದಲ್ಲಿ ಮಾತ್ರವಲ್ಲ, ಅದರಾಚೆಯೂ ಭರವಸೆ ಮೂಡಿಸಿರುವ ಹೊಸ ತಲೆಮಾರಿನ ಮುಖ್ಯ ಯುವ ಲೇಖಕರಲ್ಲಿ ಅಚವೆಯ ಪಾಲ್ಗುಣ ಗೌಡ ಒಬ್ಬರು. ಸಂಕಲನಗಳಿಗೆ ಸಾಲುವಷ್ಟು ಕತೆ, ಕವನಗಳನ್ನು ಇವರು ಬರೆದರೂ ಕೂಡ ಅದೇನು ಕಾರಣವೋ ಸಂಕಲನವಿನ್ನೂ ಹೊರ ಬಂದಿಲ್ಲ. ಆದರೆ ನಿಸ್ಸಂದೇಹವಾಗಿಯೂ ಬೆಳೆಯುವ ಮತ್ತು ಬೆಳೆಯಬಲ್ಲ ಎಲ್ಲ ಲಕ್ಷಣಗಳಿರುವ ಲೇಖಕರಾಗಿದ್ದಾರೆ.

ಎಲ್. ಎಸ್. ನಾಯಕ

'ಕೃಷ್ಣ ಸಂಧಾನ' ಎಂಬ ಕೃತಿಯನ್ನು ಪ್ರಕಟಿಸಿರುವ ಎಲ್. ಎಸ್. ನಾಯಕರು ಉತ್ತಮ ಶಿಕ್ಷಕರಾಗಿ ಹೆಸರು ಮಾಡಿದವರು. ಮೂಲತಃ ಅಂಕೋಲಾ ತಾಲೂಕಿನ ಹೊಸಕೇರಿಯವರಾದ ನಾಯಕರ ಭಾವಜಗತ್ತು ವಿಶಿಷ್ಟವಾದುದಾಗಿದೆ. 'ಎಲ್. ಎಸ್. ನಾಯಕರ ಚುಟುಕುಗಳು' ಎಂಬುದು ಇವರ ಇನ್ನೊಂದು ಸಂಕಲನ, ಚುಟುಕು ಮತ್ತು ಬಿಡಿಗವನಗಳನ್ನು ಬರೆಯುತ್ತಲೇ ಇದ್ದಾರೆ. ಇವರ ಸಂಕಲನಗಳು ಕೂಡ ನನ್ನ ಓದಿಗೆ ಸಿಕ್ಕಿಲ್ಲ.

ಪ್ರೊ. ಶಿವಾನಂದ ನಾಯಕ

ನಾನು ಆಗಲೇ ಹೇಳಿದಂತೆ ಡಾ. ದಿನಕರ ದೇಸಾಯರ ಚೌಪದಿಗಳ ಪ್ರಭಾವಕ್ಕೆ ಒಳಗಾದ ಕವಿಗಳ ಸಂಖ್ಯೆ ಈ ತಾಲೂಕು, ಈ ಜಿಲ್ಲೆ ಮಾತ್ರವಲ್ಲ, ಇಡೀ ರಾಜ್ಯದಲ್ಲೇ ದೊಡ್ಡ ಪ್ರಮಾಣದಲ್ಲಿದೆ. ಮೂಲತಃ ಅಂಕೋಲಾ ತಾಲೂಕಿನ ಸಗಡಗೇರಿಯವರಾದ ಪ್ರೊ. ಶಿವಾನಂದ ನಾಯಕ ಅವರು ದೇಸಾಯರ ಬರವಣಿಗೆಯಿಂದ ಪ್ರಭಾವಿತರಾದವರಲ್ಲಿ ಒಬ್ಬರು. 'ವರ್ತಮಾನ' ಎಂಬ ಹೆಸರಿನ ಚುಟುಕು ಸಂಕಲನವೊಂದನ್ನು ನಾಯಕರು ಪ್ರಕಟಿಸಿದ್ದಾರೆಂದು ಕೇಳಿದ್ದೇನೆ. ನನ್ನ ಓದಿಗೆ ಸಿಕ್ಕಿಲ್ಲ.

ಬುದ್ದು ಭಾಗ್ವತ

ಕರಾವಳಿ ಜಿಲ್ಲೆಗಳಲ್ಲಿ ಕಾಣಸಿಗುವ ಯಕ್ಷಗಾನ ಪ್ರಸಂಗಗಳನ್ನೂ ಕೂಡ ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾಗಿ ಸ್ವೀಕರಿಸಬೇಕಾಗುತ್ತದೆ. ಅಂಕೋಲೆ ಕೂಡ ಈ ವಿಚಾರದಲ್ಲಿ ಹಿಂದಿಲ್ಲ. ಪಳಗಿದ ಡಾ. ರಾಮಕೃಷ್ಣ ಗುಂದಿಯವರ ಪ್ರಸಂಗಗಳ ಪ್ರಸ್ತಾಪ ಹಿಂದೆಯೇ ಬಂದಿದೆ. ಅದೇ ದಲಿತ ಸಮುದಾಯದಿಂದ ಬಂದ ಬುದ್ದು ಭಾಗ್ವತ (ಬಿ. ಎಸ್. ಭಾಗ್ವತ) ಅವರು ಆ ದಾರಿಯಲ್ಲಿ ಪ್ರಯತ್ನಶೀಲರಾಗಿ ಯಶಸ್ವಿಯಾದವರಲ್ಲೊಬ್ಬರು. 'ಕೀರ್ತಿಸಾಗರ – ವಿಜಯ ಸಾಗರ', ವಿಜಯ – ವಿಕ್ರಮ' ಇವರು ಪ್ರಕಟಿಸಿದ ಯಶಸ್ವಿ ಯಕ್ಷಗಾನ ಪ್ರಸಂಗಗಳು, ಅಂಬಾರಕೊಡ್ಲದ ದಾಮೋದರ ಜಿ. ನಾಯ್ಕ ಅವರ ಕಥಾವಸ್ತುವನ್ನಾಧರಿಸಿ ಇವರು ಬರೆದ 'ರುಗ್ಣಾಯಣ' ಯಕ್ಷಗಾನ ಪ್ರಸಂಗವು ('ಏಡ್ಸ್' ಮಾರಿಯ ಕುರಿತಾದದು) ಪ್ರಯೋಗದ ನಂತರ ಸಿ. ಡಿ. ರೂಪದಲ್ಲೂ ಹೊರಬಂದಿರುವುದು ಉಲ್ಲೇಖನೀಯ ಸಂಗತಿಯಾಗಿದೆ.

ಶ್ರೀಧರ ನಾಯಕ

ಅಂಕೋಲಾ ತಾಲೂಕಿನ ಬೇಲೇಕೇರಿಯ ಶ್ರೀಧರ ನಾಯಕರು ಸಾಕಷ್ಟು ಒಳನೋಟಗಳನ್ನು ಇಟ್ಟುಕೊಂಡ ಲೇಖಕ ಹಾಗೂ ಭರವಸೆ ಮೂಡಿಸಿದ ಸಹೃದಯ ಸಾಹಿತ್ಯ ಸಮೀಕ್ಷಕ. ಇವರ ಬಿಡಿಬರಹಗಳು, ವಿಮರ್ಶಾತ್ಮಕ ಬರಹಗಳು, ಆದಷ್ಟು ಬೇಗ ಸಂಕಲನ ರೂಪದಲ್ಲಿ ಬರಬೇಕಾದುದರ ಅಗತ್ಯ ಇದೆ. ಗಂಭೀರ ಓದು – ಅಧ್ಯಯನದಿಂದಾಗಿ ತನಗೆ ಒಪ್ಪಿಸಿದ ಕಾರ್ಯವನ್ನು ಶ್ರದ್ಧೆಯಿಂದ ನಿಭಾಯಿಸುವ ಶಿಸ್ತುಳ್ಳ ಶ್ರೀಧರ ನಾಯಕರಿಂದ ಜಿಲ್ಲೆಯ ಹಿರಿಯ ವಿದ್ವಾಂಸರು ಬಹಳಷ್ಟನ್ನು ನಿರೀಕ್ಷಿಸಿದ್ದಾರೆ.

ಕೆ. ಟಿ. ನಾಯಕ

ಅಂಕೋಲೆಯ ವಂದಿಗೆ ಗ್ರಾಮಕ್ಕೆ ಸೇರಿದ ಹೊಸಗದ್ದೆಯಲ್ಲಿ ಕೆಲವು ವರ್ಷಗಳಿಂದ 'ರಮಣದಾಸ ಆಶ್ರಮ' ಕಟ್ಟಿಕೊಂಡು ನಿವೃತ್ತಿ ಬದುಕನ್ನು ಆಧ್ಯಾತ್ಮಿಕದಲ್ಲಿ ಕಳೆಯುತ್ತಿರುವ ಕೆ. ಟಿ. ನಾಯಕರು, 'ಆಧ್ಯಾತ್ಮಿಕ ದಾರಿಯಲ್ಲಿ ನನ್ನ ಅನುಭವ ಕಥನ' ಎಂಬ ಪುಸ್ತಕವೊಂದನ್ನು ಬರೆದಿದ್ದಾರೆ (೨೦೦೪), ಲೇಖಕರ ಹೆಸರು ರಮಣದಾಸ ಎಂದೇ ಇದೆ. ಆಧ್ಯಾತ್ಮಿಕ

ಸಾಧನೆಯ ದಾರಿಯಲ್ಲಿ ತಮ್ಮ ಅನುಭವವೇನು ಎಂಬುದನ್ನು ಸುಮಾರು ೧೭೫ ಪುಟಗಳ ಈ ಗ್ರಂಥದಲ್ಲಿ ಅವರು ವಿವರಿಸುತ್ತ ಸಾಗಿದ್ದಾರೆ. ಕೆಲವು ಪವಾಡ ಸದೃಶ ಘಟನೆಗಳೂ ಪುಸ್ತಕದಲ್ಲಿವೆ.

ಮರೆಯಲಾದವರು :

ಮೂಲತಃ ಅಂಕೋಲೆಯ ತೆಂಕಣಕೇರಿಯವರಾದ ಡಾ॥ ಸಚ್ಚಿದಾನಂದ ಎಲ್. ಶಿರೋಡಕರ ಹಾಗೂ ಅಲಗೇರಿಯವರಾದ ಪ್ರೊ. ಡಿ. ಎನ್. ರಾಯ್ಕರ, ಅಂಕೋಲೆಯ ಪ್ರೊ. ಸದಾನಂದ ಹೆಗಡೆಕಟ್ಟೆ ಇವರನ್ನು ನಾವು ಮರೆಯಲಿಕ್ಕೆ ಸಾಧ್ಯವಿಲ್ಲ. ಶಿರೋಡ್ಕರ ಅವರು ಬರೆದ 'ಅರ್ಥಶಾಸ್ತ್ರ' ಕನ್ನಡದಲ್ಲಿ ಲಭ್ಯವಾದ ಮೊದಲನೇ ಅರ್ಥಶಾಸ್ತ್ರ ಗ್ರಂಥವಾಗಿದ್ದು, ನಾನದನ್ನು ಇಡಿಯಾಗಿ ಓದಿದ್ದೇನೆ. ಡಿ. ಎನ್. ರಾಯ್ಕರ ಹಾಗೂ ಸದಾನಂದ ಹೆಗಡೆಕಟ್ಟೆಯವರ ಕೃತಿಗಳನ್ನು ಬಿಡಿಬಿಡಿಯಾಗಿ ಓದಿದ್ದೇನೆ. ಸಂಕಲನ ರೂಪದಲ್ಲಿ ಸಿಕ್ಕಿಲ್ಲ. ಆದರೆ, ಇವರೆಲ್ಲ ಗಮನಿಸಲೇಬೇಕಾದ ಹೊಣೆಯರಿತ ಹಿರಿಯ ಬರಹಗಾರರು.

ಇದುವರೆಗೆ ಅಂಕೋಲಾ ತಾಲೂಕಿನ ಸಾಹಿತ್ಯ ಸಮೃದ್ಧಿಯ ಕುರಿತು ನಡೆಸಿದ ಸಿಂಹಾವಲೋಕನ ಒಂದು ಪರಿಪೂರ್ಣ ಪರಿಚಯ ಲೇಖನವೆಂದು ನಾನು ಭಾವಿಸಿಲ್ಲ. ಮರೆತು ಹೋಗುವ ಮುನ್ನ ಅಥವಾ ಅವಜ್ಞೆಗೆ ಒಳಗಾಗುವ ಮುನ್ನ ನಮ್ಮ ತಾಲೂಕಿನ ಹಿರಿಕಿರಿಯ ಬರಹಗಾರರೆಲ್ಲರನ್ನು ಒಂದೆಡೆ ನೆನಪಿಸಿಕೊಳ್ಳೋಣ ಎಂಬ ಕಾರಣದಿಂದ ನನಗೆ ಗೊತ್ತಿರುವವರ ಬಗ್ಗೆ ಕಿರುಪರಿಚಯ ಕೊಡುವ ಒಂದು ಪುಟ್ಟ ಪ್ರಯತ್ನ ಮಾಡಿದ್ದೇನೆ, ಅಷ್ಟೆ. ಇವರ ಹೊರತಾಗಿಯೂ ಬರೆಯುತ್ತಿರುವವರು ಇದ್ದಾರೆ ಎಂಬ ಅರಿವು ನನಗೆ ಇಲ್ಲದೆ ಇಲ್ಲ. ಉದಾಹರಣೆಗೆ ಆಗ್ರಗೋಣದ ವಸಂತ ನಾಯಕ ಹಾಗೂ ಹಾರವಾಡದ ವಿಶ್ವಂಬರ ಆಚಾರಿಯವರನ್ನು ಈ ಸಂದರ್ಭದಲ್ಲಿ ಮುಖ್ಯವಾಗಿ ಉಲ್ಲೇಖಿಸಬೇಕಾಗುತ್ತದೆ. ಇವರಿಬ್ಬರೂ ನಮ್ಮ ನವೋದಯ ಪರಂಪರೆಯಿಂದ ಪ್ರೇರಣೆ ಪಡೆದು ಬಿಡಿಬರಹಗಳನ್ನು ಬರೆಯುತೊಡಗಿದವರು. ಆದರೆ ಸೃಜನಶೀಲ ಅಭಿವ್ಯಕ್ತಿಕ್ರಮವನ್ನು ಗಂಭೀರವಾಗಿ ತೆಗೆದುಕೊಂಡಂತೆ ಕಾಣುವುದಿಲ್ಲ. ತೆಗೆದುಕೊಂಡಿದ್ದರೆ ಯಾವತ್ತೋ ಸಂಕಲನಗಳನ್ನು ಹೊರತರುತ್ತಿದ್ದರು. ಹರಿತ ವಿಡಂಬನೆಗಳಿಂದ ಇಬ್ಬರೂ ಓದುಗರನ್ನು ಮುಟ್ಟಬಲ್ಲವರಾಗಿದ್ದಾರೆ. ಜಿ.ಸಿ. ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರಭಾಕರ ನಾಯಕ (ಪಿ. ಎಚ್. ನಾಯಕ), ಸಮೀಪದ ಬೆಳಂಬಾರದ ಬಾಲಕೃಷ್ಣ ದೇವನಮನೆ, ಅದೇ ಊರಿನ ಪೂರ್ಣಿಮಾ ನಾಯ್ಕ, ಸ್ಮಿತಾ ನಾಯ್ಕ, ಶಾಂತಲಾ ನಾಯ್ಕ, ಮಂಜಗುಣಿಯ ಗಣಪತಿ ತಾಂಡೇಲ – ಇವರೆಲ್ಲ ತಮ್ಮ ಬಿಡಿಕತೆ ಕವನಗಳ ಮೂಲಕ ಈಗಾಗಲೇ ವೇದಿಕೆಗೆ ಬಂದು ಹೋದವರು. ಇದೇ ಮಾತನ್ನು ಅಂಬಾರಕೊಡ್ಲದ ಭಾರತಿ ಉಮೇಶ, ಅಮಿತಾ ನಾಯ್ಕ ಇವರ ಬಿಡಿಬರಹಗಳ ಬಗ್ಗೂ ಹೇಳಬಹುದಾಗಿದೆ.

ಉಮೇಶ ನಾಯ್ಕರಂತೂ ಕತೆ, ಕವನಗಳ ಹಾಗೂ ಆಪ್ತವಾದ ನುಡಿಚಿತ್ರಗಳ ಮೂಲಕ ತಮ್ಮೊಳಗಿರುವ ಕ್ರಿಯೇಟಿವಿಟಿಯನ್ನು ಈಗಾಗಲೇ ಪತ್ರಿಕೆಗಳಲ್ಲಿ ದಾಖಲಿಸಿದ್ದಾರೆ. ಅವರ ಸಂಕಲನಗಳಿಗಾಗಿ ಎದುರು ನೋಡುವಂತಾಗಿದೆ. ಯುವ ಬರಹಗಾರ ಶ್ಯಾಮಸುಂದರ ಗೌಡ ಅವರೂ ಸೇರಿದಂತೆ ಇನ್ನೂ ಅನೇಕ ಕವಿಗಳೂ, ಕವಯಿತ್ರಿಯರೂ ಇದ್ದಾರೆ. ಹಾಗೆ ನೋಡಿದರೆ ಅಂಕೋಲೆಯ ಜನಪದ ಸಾಹಿತ್ಯ ಸಮೃದ್ಧಿಯೇನು ಕಡಿಮೆಯೇ? ಒಬ್ಬಗುಲಾಬಿ (ಗುಬ್ಬಿ), ಒಬ್ಬ ಸುಕ್ರಿ, ಒಬ್ಬ ಬುದವಂತಿ, ಒಬ್ಬ ಕರಿಯಮ್ಮ, ಒಬ್ಬ ಮಂಕಾಳಕ್ಕಾ ಒಬ್ಬ ರಾಕು, ಒಬ್ಬ ಬೀರಮ್ಮ – ಹೀಗೆ ಅನೇಕರು ತಮ್ಮದೇ ಆದ ಒಂದು ಸಂಗ್ರಹಕ್ಕೆ ಸಾಕಾಗುವಷ್ಟು ಹಾಡಿದ್ದಾರೆ. ಅದಕ್ಕೆಲ್ಲ ಒಂದು ಪ್ರತ್ಯೇಕ ಅಧ್ಯಯನವೇ ಬೇಕು. ಪುಸ್ತಕರೂಪದಲ್ಲಿ ಪರಿಚಿತರಾಗಿಯೂ ನನ್ನ ಮರೆವಿನಿಂದ ಅಥವಾ ನನ್ನ ಲಕ್ಷಕ್ಕೆ ಬಾರದೆ ಈ ಲೇಖನದಿಂದ ಯಾರಾದರೂ ಹೊರಗುಳಿದಲ್ಲಿ ಅವರು ಅನ್ಯಥಾ ಭಾವಿಸದಿರಲಿ ಎಂದು ಸಂಕೋಚವಿಲ್ಲದೆ ಕೇಳುವುದರೊಂದಿಗೆ, – ಸಧ್ಯಕ್ಕೆ ಇಷ್ಟು ಸಾಕು.

(೨೦೦೬ರಲ್ಲಿ ಪ್ರಕಟಗೊಂಡ 'ಅಂಕೋಲೆ' ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಯಿಂದ)

ಅಂಕೋಲೆಯ ಸ್ವಾತಂತ್ರ್ಯ ಸಂಗ್ರಾಮ

– **ಶಾಂತಾರಾಮ ನಾಯಕ, ಹಿಚಕಡ**

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ ಅಂಕೋಲೆ ಮರೆಯದ ಹೆಸರು. ಅಂಕೋಲೆ ಸ್ವಾತಂತ್ರ್ಯ ಸಂಗ್ರಾಮದ ತಪೋಭೂಮಿ, ಕರನಿರಾಕರಣೆಯ ಕರ್ಮಭೂಮಿ, ಚಳುವಳಿಯ ಗಂಡು ಮೆಟ್ಟಿನ ಸ್ಥಳವೆಂದು ಹೆಸರಾಗಿದೆ. ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ವಿರುದ್ಧ ಕರನಿರಾಕರಣೆ ಎಂಬ ಅಮೋಘ ಶಸ್ತ್ರವನ್ನು ಯಶಸ್ವಿಯಾಗಿ ಪ್ರಯೋಗಿಸಿ ಭಾರತದ ಎರಡನೆಯ ಬಾರ್ಡೋಲಿಯೆಂದು ಖ್ಯಾತಿ ಪಡೆದ ಹಿರಿಮೆ ಅಂಕೋಲೆಯದು.

ಅಸಹಕಾರ ಚಳುವಳಿಯಿಂದ ಮೊದಲ್ಗೊಂಡು ಚಲೇಜಾವ ಚಳುವಳಿಯವರೆಗೆ ಅವಿರತವಾಗಿ ಸ್ವಾತಂತ್ರ್ಯ ಸಂಗ್ರಾಮದ ಉದ್ದಕ್ಕೂ ರೋಮಾಂಚಕ ಹೋರಾಟದ ದಿಟ್ಟ ಹೆಜ್ಜೆಗಳನ್ನಿಟ್ಟು ಇತಿಹಾಸ ನಿರ್ಮಿಸಿದ ಕೀರ್ತಿ ಅಂಕೋಲೆಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಲ್ಲುತ್ತದೆ. ಅಂಕೋಲೆಯ ಸ್ವಾತಂತ್ರ್ಯ ಹೋರಾಟವೆಂದರೆ ಸಾಮಾನ್ಯ ಜನರ ಅಸಾಮಾನ್ಯ ಹೋರಾಟದ ವೀರ ವಿಕ್ರಮದ ಕಥೆಯಾಗಿದೆ.

೧೯೨೧ ರಿಂದ ಅಂಕೋಲೆಯಲ್ಲಿ ಸಾಮೂಹಿಕ ರಾಜಕೀಯ ಜಾಗೃತಿ ಉಂಟಾಯಿತು. ಗೇರುಸೊಪ್ಪೆಯ ಕೀರ್ತನಕಾರ ಜಯರಾಮಾಚಾರ್ಯರ ಕೀರ್ತನೆ ಚಳುವಳಿಗೆ ಸ್ಫೂರ್ತಿ ನೀಡಿತು. ಅಸಹಕಾರ ಚಳುವಳಿಯ ಕಾವು ಹಳ್ಳಿಗಳಿಗೂ ತಟ್ಟಿತು. ವಿದೇಶೀ ವಸ್ತು ಬಹಿಷ್ಕಾರ ಚಳುವಳಿ ಅಂಕೋಲೆಯಲ್ಲಿ ಬಹು ಜನಪ್ರಿಯವಾಯಿತು. ಅಂಕೋಲೆಯ ಮಹಿಳೆಯರೇ ಮುಖ್ಯವಾಗಿ ಪಾಲ್ಗೊಂಡು ಶ್ರೀಮತಿ ಯಶೋಧಾ ಶಾಮರಾವ ಶೇಣ್ವಿಯವರ ಧುರೀಣತ್ವದಲ್ಲಿ ಚಳುವಳಿ ಯಶಸ್ವಿಯಾಯಿತು.

ಉಪ್ಪಿನ ಸತ್ಯಾಗ್ರಹ: ಚಿಟಿಕೆ ಉಪ್ಪು ಸ್ವಾತಂತ್ರ್ಯದ ಮಂತ್ರದಂಡವಾಗಿ ಫಲಿಸಿದ ಅಹಿಂಸಾತ್ಮಕ ಹೋರಾಟ ಉಪ್ಪಿನ ಸತ್ಯಾಗ್ರಹ. ಧಾರವಾಡದಲ್ಲಿ ಸೇರಿದ ಕೆ.ಪಿ.ಸಿ.ಸಿ. ಸಭೆಯಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಅಂಕೋಲೆಯಲ್ಲಿ ಪ್ರಾರಂಭಿಸಬೇಕೆಂದು ನಿರ್ಧರಿಸಲಾಯಿತು. ಉಪ್ಪಿನ ಸತ್ಯಾಗ್ರಹ ಸಂಘಟನೆಗಾಗಿ ಕೌಜಲಗಿ ಹನುಮಂತರಾಯರು ಮತ್ತು ತಿಮ್ಮಪ್ಪ ನಾಯಕರು (ನಾಯಕ ಮಾಸ್ತರ) ನಿಯುಕ್ತರಾದರು. ಎಪ್ರಿಲ್ ೧೨ ರಂದು ಉಪ್ಪಿನ ಕಾಯದೆ ಭಂಗ ಮಾಡುವುದನ್ನು ನಿರ್ಧರಿಸಲಾಯಿತು. ಈ ಸತ್ಯಾಗ್ರಹ ಇಡೀ ಕರ್ನಾಟಕದ ಪರವಾಗಿ ನಡೆಯುವ ಹೋರಾಟವಾದುದರಿಂದ ರಾಜ್ಯದ ನಾನಾ ಕಡೆಗಳಿಂದ ಸತ್ಯಾಗ್ರಹಿಗಳು ಸ್ವಯಂ ಸೇವಕ ಪಥಗಳು ಪಾದಯಾತ್ರೆಯ ಮೂಲಕ ಅಂಕೋಲೆಗೆ ತಲುಪಿದವು.

ಅಂಕೋಲೆಯ ದತ್ತಾಬಾಯಿ ನಾರ್ವೇಕರರ ದೊಡ್ಡ ಮನೆಯಲ್ಲಿ ಸತ್ಯಾಗ್ರಹ ಶಿಬಿರ ಸೇರಿತು. ಶಾಮರಾವ್ ಶೇಣ್ವಿಯವರ ಮದುವೆ ಚಪ್ಪರವು ಸತ್ಯಾಗ್ರಹಿಗಳ ಬಿಡಾರವಾಗಿತ್ತು. ಸತ್ಯಾಗ್ರಹದ ದಿನ ಡಾ॥ಹರ್ಡಿಕರರು ನಿಗದಿಗೊಳಿಸಿದ ಸಮಯಕ್ಕೆ ಅಂಕೋಲೆ ತಲುಪಲು ಸಾಧ್ಯವಾಗದೇ ಇದ್ದುದರಿಂದ ಅವರ ಬದಲಾಗಿ ಶ್ರೀ ಎಂ. ಪಿ. ನಾಡಕರ್ಣಿಯವರ ಮುಂದಾಳುತನದಲ್ಲಿ ಮಧ್ಯಾಹ್ನ ೧ ಗಂಟೆಗೆ ಸರಿಯಾಗಿ ಒಂದೂವರೆ ಮೈಲುದ್ದದ ಮೆರವಣಿಗೆಯಲ್ಲಿ ಪ್ರಚಂಡ ಜಯಘೋಷಗಳೊಂದಿಗೆ ವಿಶಾಲವಾದ 'ಪೂಜಗೇರಿ' ಊರಿನ ಬಯಲಿನಲ್ಲಿ ಸೇರಿ ಸಮುದ್ರ ದಂಡೆಯಿಂದ ಉಪ್ಪು ಮಣ್ಣು, ಉಪ್ಪು ನೀರು, ತೆಗೆದುಕೊಂಡು ಅಂಕೋಲೆಯ – ತಾಲೂಕು ಕಛೇರಿಯ ಎದುರಿಗೆ ಬಂದು ಉಪ್ಪು ತಯಾರಿಸಿ ಉಪ್ಪಿನ ಕಾಯದೆಯನ್ನು ಭಂಗಮಾಡಲಾಯಿತು. ಕರಕೊಡದೆ ತಯಾರಿಸಿದ ಉಪ್ಪನ್ನು ಶ್ರೀ ನಾಡಕರ್ಣಿಯವರು ಹರಾಜಿಗಿಟ್ಟರು. ಹರಾಜಿಗಿಟ್ಟ ಉಪ್ಪಿನ ಮೊದಲ ಪೊಟ್ಟಣವನ್ನು ೨೦೧– ರೂಪಾಯಿಗಳಿಗೆ ಹಿಚಕಡದ ದೇವು ಹೊನ್ನಪ್ಪ ನಾಯ್ಕರು ಕೊಂಡು ಉಪ್ಪಿನ ಕಾಯದೆ ಭಂಗ ಮಾಡಿದ ಮೊದಲ ಸತ್ಯಾಗ್ರಹಿ ಎಂಬ ಕೀರ್ತಿಗೆ ಪಾತ್ರರಾದರು.

ಸುತ್ತಲಿನ ಹಳ್ಳಿಗಳಿಂದ ಜನರು ತಂಡೋಪತಂಡವಾಗಿ ಬಂದು ಉಪ್ಪು ತಯಾರಿಸಿ ಉಪ್ಪಿನ ಕಾಯದೆ ಭಂಗ ಮಾಡಿದರು. ಉಪ್ಪಿನ ಸಂತೆ ಮಾಡಿ, ಉಪ್ಪು ಮಾರಾಟ

ಮಾಡಿದರು. ಅದೊಂದು ಅಪೂರ್ವ ಸ್ವಾತಂತ್ರ್ಯ ದಾಹದ ದೇಶಭಕ್ತಿಯ ಅಮಲಿನ ಸಂತೆಯಾಗಿತ್ತು. ಆ ಉಪ್ಪು ಮಾರುವ ಸಂತೆಯಲ್ಲಿ ಬಹು ಸಂಖ್ಯಾತರು ನಾಡವರಿದ್ದರು. ಉಪ್ಪು ಮಾರುತ್ತಿದ್ದ ನಾಡವರ ಧುರೀಣರಾದ ಶ್ರೀ ಶೆಟಗೇರಿ ಜೋಗಿ ನಾಯಕ ಮೊದಲಾದವರನ್ನು ಮತ್ತು ಅಂಕೋಲೆಯ ಧುರೀಣ ಶಾಮರಾವ ಶೇಣ್ವಿಯವರನ್ನು ಬಂಧಿಸಿದರು.

ನಾಡವರು ಉಪ್ಪಿನ ಕಾಯದೆ ಭಂಗದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದನ್ನು ಕಂಡು ಅಂಕೋಲೆಯ ಶ್ರೀ ದಿನಕರ ದೇಸಾಯಿಯವರ ಕವಿ ಹೃದಯ ತುಂಬಿ ಆ ಕಾಲಕ್ಕೆ ಹೊರಹೊಮ್ಮಿದ ಕಾವ್ಯವು ನಾಡವರಲ್ಲಾದ ಜಾಗೃತಿಯನ್ನು ವ್ಯಕ್ತಪಡಿಸುವಂತಿದೆ. (ಕರಾನಿರಾಕರಣೆಯ ಕಥೆ–ಪುಟ ೨೧ ರಂಗನಾಥ ದಿವಾಕರ)

ನಾಡವರೇ ನಿಜ ನಾಡಿಗರು
ನೋಡು ಕಾಳಗವ ಹೂಡಿಹರು ॥ ಪಲ್ಲ॥
ಸ್ವಾತಂತ್ರ್ಯದ ಸುಖದೂಟವನುಂಡು
ಜಯನಗರದಲಿ ಕಾದಿದ ದಂಡು ।
ನಾಡವರಿಂದಿನ ದಾಸ್ಯವ ಕಂಡು
ಉಪ್ಪು ಮಾಡುವರು ಮುಂದಕೆ ಬಂದು ।
ಹಿಂದಿನ ಹುರುಪೇ ಇಂದಿಗೆ ಮೂಡಿ
ನಾಡವರೆಲ್ಲರೂ ಒಂದೆಡೆಗೂಡಿ ।
ಗಾಂಧಿ ಮಹಾತ್ಮರ ಕೊಂಬಿನು ಕೇಳಿ
ನೆಗೆದು ಕಾದುವರು ಧೈರ್ಯವ ತಾಳಿ ।
ನಾಡವರೇ ನಿಜ ನಾಡಿಗರು.

'ನಾಡವರು ಉಪ್ಪಿನ ಕಾಯದೆ ಭಂಗದಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿರುವುದನ್ನು ನೋಡಿ ಒಕ್ಕಲರಲ್ಲಿ ತಾವೂ ಕಾಯದೆ ಭಂಗ ಮಾಡಬೇಕೆಂಬ ಉತ್ಸಾಹ ಜಾಗೃತವಾಯಿತು. ನಾಡವರ ಧುರೀಣರ ಬಂಧನದ ಮಾರನೇ ದಿನ ಸುತ್ತಲಿನ ಹಳ್ಳಿಗಳಿಂದ ಒಕ್ಕಲರು (ಹಾಲಕ್ಕಿ ಗೌಡರು) ಮೆರವಣಿಗೆಯಲ್ಲಿ ಅಂಕೋಲೆಗೆ ಬಂದು ಉಪ್ಪಿನ ಕಾಯಿದೆ ಭಂಗ ಮಾಡಿದರು. (ಕರನಿರಾಕರಣೆಯ ವೀರ ಕಥೆ– ದಿವಾಕರ – ಪುಟ–೨೨)

ಗಾಂಧೀಜಿಯವರ ಅಸಹಕಾರದ ಕರೆಗೆ ಓಗೊಟ್ಟು ಗಿಬ್ ಹೈಸ್ಕೂಲ ತೊರೆದು ಶ್ರೀ ಹರಿ ಪೈಯವರು ಅಂಕೋಲೆಯ ಬಾಬು ಕಾಮತ, ಸುಬ್ರಾವ ನಾಡಕರ್ಣಿ, ಅನಂತ ಮಲ್ಕ ಮೊದಲಾದವರು ಪಾಲ್ಗೊಂಡರು.

ಎಡ್ವರ್ಡ್ ಹೈಸ್ಕೂಲಿನ (ಈಗಿನ ಜೈಹಿಂದ ಹೈಸ್ಕೂಲ್) ವಿದ್ಯಾರ್ಥಿಗಳನೇಕರು ಶ್ರೀ ಶಂಕರ ದೇಸಾಯಿ ಮಾಸ್ತರರ ನೇತೃತ್ವದಲ್ಲಿ ಚಳುವಳಿ ಸೇರಿ ಜೈಲು ಕಂಡರು. ಉಪ್ಪಿನ ಸತ್ಯಾಗ್ರಹದಲ್ಲಿ ಸ್ತ್ರೀಯರೂ ಕೂಡ ಅಷ್ಟೇ ಹುರುಪಿನಿಂದ ಭಾಗವಹಿಸಿದರು.

ಅಂಕೋಲೆಯಲ್ಲಿ ಜಂಗಲ್ ಸತ್ಯಾಗ್ರಹ ಮಾಡಿದ ರೀತಿ ಅಪೂರ್ವವಾಗಿತ್ತು. ಈ ಸತ್ಯಾಗ್ರಹಿಗಳ ಸ್ವಾತಂತ್ರ್ಯ ಹುಚ್ಚು ಹಾಗೂ ಕೆಚ್ಚುಗಳನ್ನು ಕಂಡು ಡಿ. ಎಸ್. ಪಿ. ನಾನಾವಟಿ ಸಾಹೇಬ ದಂಗು ಬಡಿದನು.

ಕರನಿರಾಕರಣೆ ಚಳುವಳಿ : ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯಲ್ಲಿ ಅಂಕೋಲೆಯ ನಾಡವರ ಹಾಗೂ ಸಿದ್ದಾಪುರದ ಹವ್ಯಕ ಬ್ರಾಹ್ಮಣರ ಸಮಾಜ ಇಡಿಯಾಗಿ ತಮ್ಮನ್ನು ಚಳುವಳಿಯಲ್ಲಿ ತೊಡಗಿಸಿ ಸಮರ್ಪಿಸಿಕೊಂಡ ಚಾರಿತ್ರಿಕ ಸತ್ಯವನ್ನು ಮರೆಯಲಾಗದು. ಈ ಮಾತು ಚರಿತ್ರೆಯ ಸತ್ಯವೇ ಹೊರತು ಅಭಿಮಾನದ ನುಡಿ ಅಲ್ಲ.

ರಾಜಕೀಯ ಉದ್ದೇಶಕ್ಕಾಗಿ ಮಾಡಿದ ಉಗ್ರ ಹೋರಾಟವೇ ಕರಾನಿರಾಕರಣೆ ಚಳುವಳಿ. ಇದು ಸ್ವಾಭಿಮಾನಿ ಸ್ವಾತಂತ್ರ್ಯ ಪ್ರಿಯರು ಅಗ್ನಿ ಪರೀಕ್ಷೆಗೆ ತಮ್ಮನ್ನು ಒಡ್ಡಿಕೊಂಡ ಚಳುವಳಿಯಾಗಿತ್ತು. ಜಿಲ್ಲೆಯಲ್ಲಿ ಪ್ರಥಮವಾಗಿ ನಿರಾಕರಣೆಯನ್ನು ಘೋಷಿಸಿದ ಕೀರ್ತಿ ಅಂಕೋಲಾ ತಾಲೂಕಿಗೆ ಸಲ್ಲುತ್ತದೆ. ಕರನಿರಾಕರಣ ಚಳುವಳಿಯ ಮೊದಲ ಸಭೆ ನಾಡವರ ಹಳ್ಳಿ ಸೂರ್ವೆಯ ಕಲಶ ದೇವಸ್ಥಾನದಲ್ಲಿ, ರಂಗನಾಥ ದಿವಾಕರ ಮತ್ತು ದ. ಪ. ಕರಮರಕರರ ನೇತೃತ್ವದಲ್ಲಿ ನಡೆಯಿತು. ಸುತ್ತಮುತ್ತಲಿನ ನಾಡವರ ಹಳ್ಳಿಯ ಪ್ರಮುಖರೆಲ್ಲ ಆಗಮಿಸಿದ್ದರು. ದಿವಾಕರ, ಕರಮರಕರರು ಚಳುವಳಿಯ ಕಷ್ಟ ತಾಪತ್ರಯಗಳನ್ನು, ಸರಕಾರದ ದಬ್ಬಾಳಿಕೆ, ಹಿಂಸೆಯ ಪ್ರತಿರೋಧವನ್ನು ಸಭೆಯ ಮುಂದಿಟ್ಟು ಕೂಡಿದ ಜನರ ಅಭಿಪ್ರಾಯಗಳನ್ನು ತಿಳಿಸಿಕೊಂಡರು. ಈಗಾಗಲೇ ಸ್ವಾತಂತ್ರ್ಯ ಸಮರವೆಂಬ ಯಜ್ಞದಲ್ಲಿ ತಮ್ಮನ್ನು ಅರ್ಪಿಸಿಕೊಂಡ ನಾಡವರ ಪ್ರಮುಖರು ಚಳುವಳಿಯ ಉಗ್ರ ಸವಾಲನ್ನು ಸ್ವೀಕರಿಸಿದರು. ಸಭೆಯಲ್ಲಿದ್ದ ನಾಡವರ ಪ್ರಮುಖ ನಾಯಕ ಬಾಸಗೋಡ ರಾಮಾ ನಾಯಕರು 'ಅಳಿಯುವದು ಕಾಯ, ಉಳಿಯುವುದು ಕೀರ್ತಿ' ಎಂದು ಆವೇಶದಿಂದ ಭಾಷಣ ಮಾಡಿ

ಕರನಿರಾಕರಣೆಯ ನಿರ್ಣಯ ಸ್ವೀಕರಿಸುವುದು ನಮ್ಮ ಧರ್ಮ ಎಂದು ಹೇಳಿದರು. ಶೆಟಗೇರಿಯ ಜೋಗಿ ನಾಯಕರು ಉತ್ಸಾಹದಿಂದ ಚಳುವಳಿಯನ್ನು ಸ್ವಾಗತಿಸಿ ಪ್ರಚೋದಿಸಿದರು. ಇದರಿಂದ ಸ್ಫೂರ್ತಿಗೊಂಡ ಸೂರ್ವೆಯ ಬೊಮ್ಮಯ್ಯ ಪೊಕ್ಕ ನಾಯಕ ಇವರು ಎದ್ದು ನಿಂತು ಯಾರು ಮಾಡಲಿ ಬಿಡಲಿ, ನಾನು ಮಾತ್ರ ಆ ಮಹಾತ್ಮರನ್ನು ಸ್ಮರಿಸಿ ಕರನಿರಾಕರಣೆಯನ್ನು ಮಾಡಿಯೇ ತೀರುವೆನು ಎಂದು ಗದ್ಗದಿತ ಕಂಠದಿಂದ ದೊಡ್ಡ ಧ್ವನಿಯಿಂದ ಸಾರಿ ಹೇಳಿದರು. ಅವರ ಪಕ್ಕದಲ್ಲಿಯೇ ಕುಳಿತ ಬೋಳೆಯ ದೇವಣ್ಣ ನಾಯಕರು ತಟ್ಟನೆ ಎದ್ದು ನಿಂತು 'ಭೂಮಿ ಹೋದರೆ ಹೋಗಲಿ, ಬೇಕಾದ ಆಪತ್ತು ಬರಲಿ, ನಮ್ಮ ಊರಿನಲ್ಲಿ ನಾನೊಬ್ಬನಂತೂ ಕರನಿರಾಕರಣೆ ಮಾಡಲು ಸಿದ್ಧನಿದ್ದೇನೆ' ಎಂದು ಸಭೆಗೆ ಕೈ ಮುಗಿದು ಹೇಳಿ ಕುಳಿತ. (ಕರನಿರಾಕರಣೆಯ ವೀರಕಥೆ–ರಂಗನಾಥ ದಿವಾಕರ) ಇಡೀ ಸಭೆ ಜಯಘೋಷಗೈದು ಒಪ್ಪಿಗೆ ನೀಡಿತು. ಹೀಗೆ ಸೂರ್ವೆಯ ಸಭೆಯಿಂದ ಅಂಕೋಲಾ ತಾಲೂಕಿನಲ್ಲಿ ಕರನಿರಾಕರಣೆ ಚಳುವಳಿಯ ಬೀಜಾರೋಪಣವಾಯಿತು.

ನಾಡವರ ಹಳ್ಳಿಗಳಲ್ಲಿ ಸಂಘಟನೆಯು ಮಿಂಚಿನ ವೇಗದಿಂದ ನಡೆಯಿತು. ಹಾಲಕ್ಕಿಒಕ್ಕಲ ಗೌಡರಲ್ಲಿ ಸ್ವಂತ ಭೂಮಿ ಇದ್ದವರ ಸಂಖ್ಯೆ ಕಡಿಮೆ. ಅಲ್ಪ–ಸ್ವಲ್ಪ ಇದ್ದವರು ಶಹರದ ಜಮೀನುದಾರರ ಭೂಮಿಯನ್ನು ಸಾಗುವಳಿಗೆ ಹಿಡಿದವರಾದುದರಿಂದ ಅವರ ವರ್ಚಸ್ಸಿಗೆ ಒಳಗಾಗುವುದು ಸ್ವಾಭಾವಿಕವಾಗಿತ್ತು. ಶಹರದ ಜಮೀನುದಾರರು ಅವರಿಗೆ ಬೆದರಿಕೆ ಹಾಕಿದ್ದರಿಂದ ಮುಂದಡಿ ಇಡಲಾರದಾದರು. ಆದರೆ ಉಳುವರೆಯ ರಾಮದಾಸ, ಹೊನ್ನಾದಾಸ ಮೊದಲಾದವರು ಮಾತ್ರ ಎಂಥ ಕಷ್ಟ ನಷ್ಟಗಳು ಬಂದರೂ ಚ್ಯುತಿ ಹೊಂದದೆ ಕರನಿರಾಕರಣೆಯ ಅಂದೋಲನದಲ್ಲಿ ನಾಡವರಿಗೆ ದೊರೆತ ಕೀರ್ತಿಯಲ್ಲಿ ಒಕ್ಕಲ ಗೌಡರು ಪಾಲುಗಾರರೆಂಬುದನ್ನು ಸಿದ್ಧ ಮಾಡಿಕೊಟ್ಟರು. (ಕರನಿರಾಕರಣೆಯ ವೀರ–ಕಥೆ– ದಿವಾಕರ–ಪುಟ–೫೨)

ಸರಕಾರ ಎಷ್ಟೇ ಬಲತ್ಕಾರ ಮಾಡಿದರೂ ಖಾತೆದಾರರೂ ತೀರ್ವೆ ಕೊಡಲಿಲ್ಲ. ತೀವ್ರ ವಸೂಲಿಗೆ ಸೂರ್ವೆ ಊರಿಗೆ ಮಾಮಲೇದಾರರು ಬಂದಾಗ ಸೂರ್ವೆಯ ತಿಪ್ಪು ಹಮ್ಮಣ್ಣ ನಾಯಕ ಎಂಬ ಹೆಣ್ಣು ಮಗಳು, 'ನಾವು ಮಹಾತ್ಮಾಗಾಂಧಿಯವರ ಮಾತಿನಿಂದ ಕರಬಂಧಿ ನಡೆಸಿದ್ದೇವೆ. ಗಾಂಧಿಯವರಂತೆ ನೀವು ತಿಳಿದವರಲ್ಲ. ಅವರಿಗಿಂತ ದೊಡ್ಡವರೇನಲ್ಲ. ನಿಮ್ಮ ಒಂದು ನೌಕರಿಗಾಗಿ ಸ್ವರಾಜ್ಯಕ್ಕೆ ಅಡ್ಡ ಬಂದು ಪಾಪ ಕಟ್ಟಿಕೊಳ್ಳಬೇಡಿರಿ. ನೌಕರಿಯನ್ನು ಬಿಟ್ಟು ನೀವು ಚಳುವಳಿಗೆ ಬನ್ನಿರಿ' ಎಂದು ದಿಟ್ಟತನದಿಂದ ಆ ಅಶಿಕ್ಷಿತ ಮಹಿಳೆ ಉತ್ತರ ನೀಡಿ ಸ್ವಾತಂತ್ರ್ಯದ ಉತ್ಕಟ ಹಂಬಲವನ್ನು ವ್ಯಕ್ತ ಪಡಿಸಿದ ಸಂಗತಿ ಇಡೀ ಸ್ತ್ರೀ ಸಮೂಹಕ್ಕೆ ಗೌರವ ತರುವಂತಾಗಿದೆ.

ತೀರ್ವೆ ನಿರಾಕರಿಸಿದ ರೈತರ ಮೇಲೆ, ಅವರ ಕುಟುಂಬದ ಮೇಲೆ ಸರಕಾರದ ದಬ್ಬಾಳಿಕೆ – ತೀವ್ರತರವಾಗಿತ್ತು. ಮುಖಂಡರನ್ನೆಲ್ಲ ಬಂಧಿಸತೊಡಗಿದರು. ಅಂಕೋಲಾ ಶಹರದ ಮುಖಂಡರಾದ ರಾಮುರಾವ್ ಶೇಣ್ವಿ, ಸುಬ್ರಾಯ ನಾಡಕರ್ಣಿ, ಹರಿ ಪೈ ಮತ್ತು ಬಾಬು ಕಾಮತ ಮೊದಲಾದವರನ್ನು ಸೆರೆಹಿಡಿದಿದ್ದರಿಂದ ಮುಖಂಡರ ಮಾರ್ಗದರ್ಶನ ಹಳ್ಳಿಯ ಕಾರ್ಯಕರ್ತರಿಗೆ ದೊರೆಯಲಿಲ್ಲ. ಆಗ ಬಾಸಗೋಡ ರಾಮ ನಾಯಕರು ಕರಬಂಧಿಯ ಡಿಕ್ಟೇಟರರಾಗಿ ಅತ್ಯಂತ ದಕ್ಷತೆ ಹಾಗೂ ದಿಟ್ಟತನದಿಂದ ಚಳುವಳಿಯನ್ನು ಮುನ್ನಡೆಸಿದರು.

ಪೋಲಿಸರ ಅಸಹನೀಯವಾದ ದಬ್ಬಾಳಿಕೆ, ಮಾನಸಿಕ, ಶಾರೀರಿಕ ಹಿಂಸೆಯನ್ನು ಸಹಿಸಿಕೊಂಡು ರೈತರು ಕರನಿರಾಕರಣೆ ಚಳುವಳಿಯನ್ನು ಮುಂದುವರಿಸಿದರು. ಅಂಕೋಲೆಯ ಸ್ತ್ರೀಯರು ಕರಬಂಧಿಯ ಕಾಲಕ್ಕೆ ಅಪೂರ್ವ ತ್ಯಾಗ, ಸಾಹಸಗಳನ್ನು ಮೆರೆದಿರುವರು. ಪೋಲಿಸರ ವಿರೋಧವನ್ನು ನಿರ್ಲಕ್ಷಿಸಿ ಮನೆಯ ಬೀಗ ಮುದ್ರೆಯನ್ನು ಒಡೆಯಲು ಮುನ್ನುಗ್ಗಿದ ಮಾಣುದೇವಿಯ ಸಾಹಸವನ್ನು ನೆನೆದರೆ ಮೈನವಿರೇಳುತ್ತದೆ. ಇನ್ನೊಬ್ಬ ವೀರ ಮಹಿಳೆ ಕಣಗೀಲದ ಕಾಣಿ ಬೊಮ್ಮಕ್ಕ ಕಾರವಾರಕ್ಕೆ ಬಂದ ಗವರ್ನರ್‌ಗೆ ಕಪ್ಪು ಧ್ವಜವನ್ನು ಹಿಡಿದು ಇಂಗ್ಲೀಷ್ ಬಾರದಿದ್ದರೂ 'ಗೋ ಬ್ಯಾಕ್ ಗವರ್ನರ' ಎಂದು ಘೋಷಣೆ ಕೂಗಿ ಸಾಹಸ ಮೆರೆದಿರುವಳು.

ಕರಬಂಧಿಯ ಕಷ್ಟಗಳು ಹೇಳತೀರದಷ್ಟು ಅಮಾನುಷವಾದ, ಹೀನ ರೀತಿಯ ಜಪ್ತಿಕ್ರಮಗಳು ರಕ್ತ ಕುದಿಯುವಂತೆ ಮಾಡುತ್ತಿತ್ತು. ಕರಬಂಧಿಯಲ್ಲಿ ವಿಶೇಷವಾಗಿ ನಾಡವರು ಹೆಚ್ಚು ಕಷ್ಟ–ನಷ್ಟಗಳನ್ನು ಅನುಭವಿಸಿದರು. ಪೋಲಿಸರ ದಬ್ಬಾಳಿಕೆಯ ಚಿತ್ರ

ರಂಗನಾಥ ದಿವಾಕರರ 'ಕರನಿರಾಕರಣೆಯ ವೀರಕಥೆ'ಯಲ್ಲಿ ಚಿತ್ರಿತವಾಗಿರುವುದನ್ನು ಗಮನಿಸಬಹುದು. 'ಗಂಡಸರಿಲ್ಲದ ಮನೆಯಲ್ಲಿ ಹೀಗೇಕೆ ಹಾವಳಿ ನಡೆಸಿರುವಿರಿ?' ಎಂದು ಯಾವಳಾದರೂ ಕೇಳಿದರೆ ಅವಳ ಸೀರೆಯನ್ನು ಹಿಡಿದು ಎಳೆದು, 'ಗಂಡನನ್ನು ತಂದುಕೊಡದಿದ್ದರೆ ನಿನ್ನ ಗತಿ ನೆಟ್ಟಗಾಗಲಿಕ್ಕಿಲ್ಲ' ಎಂದು ಬೆದರಿಸುತ್ತಿದ್ದರು. ಅವಾಚ್ಯ ಶಬ್ದಗಳಂತೂ ಸರಿಯೇ ಊಟಕ್ಕೆ ಕುಳಿತಾಗ ಬಂದು ಸ್ತ್ರೀಯರನ್ನು ಎಳೆದು ಮನೆಯಿಂದ ಹೊರಗೆ ಹಾಕಿ ನಿಮ್ಮ ಗಂಡಂದಿರನ್ನು ತೋರಿಸಿ ಕೊಡಲು ನಡೆಯಿರಿ ಎಂದು ಆರ್ಭಟಿಸುತ್ತಿದ್ದರು. ಸಣ್ಣ ಕೂಸುಗಳನ್ನು ತಾಯಿಯ ಮಡಿಲಿನಿಂದ ಎಳೆದುಕೊಂಡು ಹೋಗಿ ವಾರಂಟಿದ್ದವರನ್ನು ತಂದುಕೊಟ್ಟು ಕೂಸನ್ನು ಒಯ್ಯಬೇಕೆಂದು ಪೀಡಿಸುತ್ತಿದ್ದರು. ತಮಗಾಗಲಿ, ತಮ್ಮ ಹೆಂಡರು ಮಕ್ಕಳಿಗಾಗಲಿ ಸ್ವಲ್ಪ ಮಾತ್ರ ಅಪಮಾನವಾದರೆ ಸಹಿಸಲಾರದ ನಾಡವರು ಪೋಲಿಸರ ಈ ಬಗೆಯ ಹೇಯವಾದ ವರ್ತನೆಯನ್ನು ನೋಡಿಯೂ ಕೇಳಿಯೂ ತಾಳ್ಮೆವಹಿಸಿ ಅಹಿಂಸಾ ವ್ರತವನ್ನು ಪಾಲಿಸುತ್ತಿದ್ದರು. ಇದು ಅವರ ಸತ್ವ ಪರೀಕ್ಷೆಯ ಪ್ರಸಂಗವಾಗಿ ಪರಿಣಮಿಸಿತ್ತು. ಗಾಂಧೀಜಿಯವರಲ್ಲಿ ಅವರ ಅಹಿಂಸಾ ತತ್ವದಲ್ಲಿ ನಾಡವರಿಗಿರುವ ನಿಷ್ಠೆಯ ಪರಾಕಾಷ್ಠೆಯ ದ್ಯೋತಕವಾಗಿಯೇ ಅವರು ಇಂಥ ಉದ್ವೇಗಜನಕ ಸನ್ನಿವೇಶದಲ್ಲಿ ತಾಳ್ಮೆವಹಿಸುತ್ತಿದ್ದರು. (ಕರನಿರಾಕರಣೆಯ ವೀರಕಥೆ – ಪುಟ–೧೨೫)

ಚಲೇಜಾವ್ ಚಳುವಳಿ : ಅಂಕೋಲಾ ತಾಲೂಕು ಆಸಹಕಾರ ಮತ್ತು ಸ್ವದೇಶಿ ಚಳುವಳಿಗಳಲ್ಲಿ 'ಗಾಂಧಿ ತಾಲೂಕು' ಎಂದೇ ಹೆಸರಾಗಿತ್ತು. ಉಪ್ಪಿನ ಸತ್ಯಾಗ್ರಹದಲ್ಲಿ 'ಕರ್ನಾಟಕದ ಸಮರಭೂಮಿ'ಯಾಗಿ ಸಮೃದ್ಧಿ ಪಡೆದು ಕರನಿರಾಕರಣ ಚಳುವಳಿಯಲ್ಲಿ ಕರ್ನಾಟಕದ ಬಾರ್ಡೋಲಿಯೆಂಬ ಕೀರ್ತಿ ಹೊಂದಿ ಚಲೇಜಾವ ಚಳುವಳಿಯು ಕೂಡ ಸೋಲರಿಯದ ಸಾಹಸದಿಂದ ಪ್ರಾಣದ ಹಂಗು ತೊರೆದು 'ಮಾಡಿ ಇಲ್ಲವೇ ಮಡಿ' ಎಂಬ ನುಡಿಗೆ ಬದ್ಧರಾಗಿ ಹೋರಾಡಿ ಖ್ಯಾತಿ ಪಡೆದ ತಾಲೂಕು ಅಂಕೋಲಾ.

೧೯೪೨ ಅಗಷ್ಟ ೯ರ ನಸುಕಿನಿಂದ ಚಲೇಜಾವ ಚಳುವಳಿ ಪ್ರಾರಂಭವಾಗುತ್ತಲೇ ತಾಲೂಕಿನ ಹಾಗೂ ಸ್ಥಳೀಯ ಪ್ರಮುಖ ನಾಯಕರನ್ನು ಬಂಧಿಸಲಾಯಿತು. 'ದೇಶಕ್ಕಾಗಿ ಮಾಡಿರಿ ಇಲ್ಲವೇ ಮಡಿಯಿರಿ' ಎಂಬ ಗಾಂಧೀಜಿಯವರ ಆದೇಶ ಜಿಲ್ಲೆಯ ಜನರಲ್ಲಿ ಹೊಸ ವೀರಾವೇಶವನ್ನೇ ತುಂಬಿತು. ಈ ಚಳುವಳಿಯಲ್ಲಿ ತರುಣರೇ ಮುಖ್ಯ ಸೂತ್ರಧಾರಿಗಳಾಗಿದ್ದು ವಿಶೇಷ ಸಂಗತಿ. ಗಾಂಧಿ ಸಂದೇಶದ ಬಿರುಗಾಳಿ ಬೀಸಿದ್ದೇ ತಡ ರಾತ್ರಿ ಬೆಳಗಾಗುವದರೊಳಗೆ ಅಂಕೋಲಾ – ಕುಮಟಾ ರಸ್ತೆಗುಂಟ ಇದ್ದ ತಂತಿ ಕಂಬಗಳು ಉರುಳಿ ಬಿದ್ದವು. ಸಂಕಗಳನ್ನು ಕಿತ್ತು ಕೆಡವಿದರು. ಅಂಕೋಲಾ ತಾಲೂಕಿನ ಹಟ್ಟಿಕೇರಿ ಮತ್ತು ಗಂಗಾವಳಿಯಲ್ಲಿದ್ದ ಫೊರೆಸ್ಟ್ ಡಿಪೋಗಳು ಭಸ್ಮ ಹೊಂದಿದವು. ಉಳುವರೆಯಲ್ಲಿ ಪೋಲಿಸರನ್ನೇ ನಿರಾಯುಧರನ್ನಾಗಿ ಮಾಡಲಾಯಿತು. ಅಗಸೂರಿನಲ್ಲಿ ಹುಬ್ಬಳ್ಳಿ ಬಸ್ಸನ್ನು ತಡೆದು ಟಪಾಲು ಕಸಿದರು. ಬೆಳೆಸೆಯಲ್ಲಿ ಶಾನಭೋಗರ ದಪ್ತರುಗಳನ್ನು ಸುಟ್ಟು ಹಾಕಿದರು. ಹೀಗೆ ಅಂಕೋಲಾ ತಾಲೂಕಿನ ಸತ್ಯಾಗ್ರಹಿಗಳು ಪೋಲಿಸರಿಗೆ ಹಾಗೂ ಅಧಿಕಾರಿಗಳಿಗೆ ಬಹು ವಿಧವಾಗಿ ಕಾಡಿದರು.

ಅಂಕೋಲೆಯಲ್ಲಿ ತರುಣ ನಾಯಕ ಶ್ರೀ ದಯಾನಂದ ಪ್ರಭುರವರ ನೇತೃತ್ವದಲ್ಲಿ ಚಲೇಜಾವ ಚಳುವಳಿ ಬಿರುಸಿನಿಂದ ನಡೆಯಿತು. ಆದಾಗಲೇ ಸೂರ್ವೆಯ ಬಿ. ಬಿ. ನಾಯಕರು ಆ ಭಾಗದಲ್ಲಿ ಚಳುವಳಿಯನ್ನು ಪ್ರಾರಂಭಿಸಿದ್ದರು. ಶ್ರೀ ದಯಾನಂದ ಪ್ರಭು ಅವರಿಗೆ ಹಿಚಕಡದ ಬೀರಣ್ಣ ನಾಯಕರ ಹಿರಿತನದ ಮಾರ್ಗದರ್ಶನ ಮತ್ತು ಹಿಚ್ಕಡದ ಉತ್ಸಾಹಿ ಧೀರ ಯುವಕರ ಸ್ನೇಹ ಸಂಪರ್ಕ ದೊರೆಯಿತು. 'ನಾಡವರದೇ ಪ್ರಧಾನ ವಸತಿಯುಳ್ಳ ಹಿಚಕಡ ಗ್ರಾಮವು ರಾಜಕೀಯ ಸಂಪರ್ಕ ಹಾಗೂ ಭೂಗತ ಚಟುವಟಿಕೆಗಳ ಕೇಂದ್ರವಾಗಿತ್ತು. ಈ ಚಳುವಳಿಯ ಆರಂಭದಲ್ಲಿ ಅಲ್ಲಿ ಎತ್ತರದ ದೃಢಕಾಯದ ನಾಡವ ತರುಣರ ರ್‍ಯಾಲಿ ನಡೆದಾಗ ನಾನು ನೋಡಿ ಸ್ತಂಭೀಭೂತನಾದೆ. ಹಾಗೂ ಆ ಸಂದರ್ಭವೇ ನನಗೆ ಚಳುವಳಿಯನ್ನು ರೂಪಿಸಲು ಸ್ಫೂರ್ತಿ ನೀಡಿತು.' ಎಂದು ತುಂಬಾ ಅಭಿಮಾನದಿಂದ ಶ್ರೀ ದಯಾನಂದ ಪ್ರಭು ಹೇಳಿಕೊಳ್ಳುತ್ತಾರೆ. (ಭೂಗತನ ನೆನಪುಗಳು) ಬ್ರಿಟಿಷ ಆಡಳಿತವನ್ನು ನಿಷ್ಕ್ರಿಯಗೊಳಿಸಲು ಕೈಗೊಂಡ ಹಲವಾರು ಕಾರ್ಯಕ್ರಮಗಳ ಯಶಸ್ಸಿನಿಂದ ಹುರುಪುಗೊಂಡು ಉಳುವರೆ ಜಂಗಲ್ ನಡುವೆ ಸಾಹಸದ ಕೆಲಸಕ್ಕೆ ಸಜ್ಜಾದರು. ಚಲೇಜಾವ ಚಳುವಳಿಯು ಬಹುಮುಖ್ಯವಾದ ಹಾಗೂ

ಗಂಡಾಂತರಕಾರಿ ಘಟನೆ ಈ ಉಳುವರೆ ಜಂಗಲ್ ಸುಟ್ಟ ಪ್ರಕರಣ. ಈ ಅಪೂರ್ವ ಸಾಹಸ ಘಟನೆಗೆ ಧಾರವಾಡದ ಶ್ರೀ ಕೆ. ಜಿ. ಜೋಶಿಯವರ ಸ್ಫೂರ್ತಿ ಹಿಚಕಡದ ಬೀರಣ್ಣ ನಾಯಕ ಹಾಗೂ ಶ್ರೀ ದಯಾನಂದ ಪ್ರಭುರವರ ಮುಖಂಡತ್ವ ಮತ್ತು ಸುತ್ತ-ಮುತ್ತಲು ಹಳ್ಳಿಗಳ ತರುಣರ ಮೇರೆಯಿಲ್ಲದ ಉತ್ಸಾಹ ಮತ್ತು ಹಿಚಕಡದ ಹಮ್ಮಣ್ಣ ಬೊಮ್ಮಯ್ಯ ನಾಯಕ, ಬಾಲಿಮನೆ ಮತ್ತು ಶ್ರೀ ಹಮ್ಮಣ್ಣ ವಿಠೋಬ ನಾಯಕ ಈ ತರುಣದ್ವಯರ ಅದ್ಭುತ ಸಾಹಸ ಧೈರ್ಯಗಳು ಈ ಕ್ರಾಂತಿಕಾರಿ ನಿರ್ಣಯಕ್ಕೆ ಕಾರಣವಾದವು.

ಉಳುವರೆ ಜಂಗಲ್ ಸುಟ್ಟ ಪ್ರಕರಣದಿಂದ ಇಡೀ ಜಿಲ್ಲೆಯ ಆಡಳಿತಕ್ಕೆ ಸಿಡಿಲು ಬಡಿದಂತಾಯಿತು. ಪೋಲಿಸರ ಕೈಗೆ ಯಾರೊಬ್ಬರೂ ಸಿಗದಂತೆ ಭೂಗತರಾಗಿದ್ದರು. ಪೋಲಿಸರು ಅಪಮಾನಗೊಂಡರು. ಆದ್ದರಿಂದ ಪೋಲಿಸರ ದಬ್ಬಾಳಿಕೆ ಉಗ್ರರೂಪ ಪಡೆಯಿತು. ಕೈಗೆ ಸಿಕ್ಕವರನ್ನು ಹಿಡಿದು ತಂದು ಚಿತ್ರಹಿಂಸೆ ನೀಡಿದರು. ಮೂರ್ಛೆ ಹೋಗುವಂತೆ ಹೊಡೆದರು, ಉಪವಾಸ ಹಾಕಿದರು. ಗುಪ್ತಾಂಗಗಳಿಗೆ ನೋವನ್ನುಂಟುಮಾಡಿದರು. ಡಿ. ಎಸ್. ಪಿ. ನಾನಾವತಿ ಸಾಹೇಬ ಜಂಗಲ್ ಸುಟ್ಟವರನ್ನು ಹಿಡಿಯಲು ಶತಪ್ರಯತ್ನ ಮಾಡಿದನು. ಪೋಲಿಸರಿಂದ ಕಸಿದುಕೊಂಡ ಬಂದೂಕು ಕೂಡ ಪತ್ತೆಯಾಗಲಿಲ್ಲ. ಬದಲಾಗಿ ಹಿಚಕಡ ಊರಿನ ಹೆಂಗಸರು, ಗಂಡಸರು, ಮಕ್ಕಳು ಕೂಡಿ ಈ ನಾನಾವತಿ ಸಾಹೇಬನನ್ನೇ ಅಟ್ಟಿಸಿಕೊಂಡು ಹೋದರು. ಈ ಅಪಮಾನ ಸಹಿಸದೇ ತೀವ್ರತರ ದಬ್ಬಾಳಿಕೆ ಹಾಗೂ ಅಮಾನುಷ ಹಿಂಸೆಯನ್ನು ಅಮಾಯಕರಿಗೆ ನೀಡಿದರು. ಪೋಲಿಸರ ದೌರ್ಜನ್ಯ ತಾರಕಕ್ಕೇರಿತು. ವಾರಂಟಿದ್ದವರನ್ನು ಹಿಡಿದುಕೊಡಲು ಬಹುಮಾನದ ಆಮಿಷ ಒಡ್ಡಿದರು. ಪುಂಡುಗಂದಾಯ ಹಾಕಿದರು. ಚಳುವಳಿಯ ಮೂವರು ಪುಂಡರೆಂದು ಹೆಸರಾದ ಹಿಚಕಡದ ಬೀರಣ್ಣ ನಾಯಕ, ಶ್ರೀ ದಯಾನಂದ ಪ್ರಭು ಮತ್ತು ಸಗಡಗೇರಿಯ ವೆಂಕರಮಣ ನಾಯಕರು ಕೊನೆಯವರೆಗೂ ಭೂಗತರಾಗಿದ್ದುಕೊಂಡು ಗಾಂಧೀಜಿಯವರು ಹೊರಡಿಸಿದ ಪ್ರಕಟಣೆಯಂತೆ ಸರಕಾರಕ್ಕೆ ನೋಟಿಸು ಕೊಟ್ಟು ಅಂಕೋಲಾ ಮಾಮಲೇದಾರರ ಮುಂದೆ ಹಾಜರಾಗಿ ಚಳುವಳಿಯ ವಿಜಯ ಪತಾಕೆ ಹಾರಿಸಿದರು.

ಚಲೇಜಾವ ಚಳುವಳಿಯು ಕೂಟಯುದ್ಧದ ಮಾದರಿಯಲ್ಲಿ ನಡೆದ ಹೋರಾಟ. ಇದು ಅಹಿಂಸಾತ್ಮಕವಾಗಿ ನಡೆದ ಹೋರಾಟವಾಗಿರಲಿಲ್ಲ. ಆದರೆ ಯಾರೊಬ್ಬರ ಖಾಸಗಿ ಆಸ್ತಿಗೆ ಅಥವಾ ಪ್ರಾಣಕ್ಕೆ ಹಾನಿ ಸಂಭವಿಸಲಿಲ್ಲ ಎಂಬುದು ಉಲ್ಲೇಖನೀಯವಾದುದಾಗಿದೆ.

ಭೂಗತರಾಗಿಯೇ ಉಳಿದುಕೊಂಡು ಉಳುವರೆಯ ಒಕ್ಕಲಿಗರಿಗೆ ಚಳುವಳಿಯ ಬಗ್ಗೆ ತಿಳಿಸಿ ಹೇಳಿ ಅವರು ಚಳುವಳಿಯಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡಿದ ಶ್ರೀ ಹರಿ, ರವಳು ನಾಯಕರನ್ನು ಮರೆಯಲಾಗದು. ವಿದ್ಯಾರ್ಥಿ ದೆಸೆಯಲ್ಲಿಯೇ ಚಳುವಳಿಗೆ ಧುಮುಕಿ ದೇಶಪ್ರೇಮ ಮೆರೆದ ಅಂಕೋಲೆಯ ಡಾ॥ ಕಮಲಾಕರ ನಾರ್ವೇಕರರನ್ನು ನೆನೆಯಲೇಬೇಕು. ಚಳುವಳಿಯ ಭೂಗತರನ್ನು ಕಾಣಲು ಹಿಚಕಡಕ್ಕೆ ಬಂದು ಎಲ್ಲರನ್ನು ಆಪ್ಪಿಕೊಂಡು ಭಾವುಕರಾಗಿ ಕಣ್ಣೀರು ಸುರಿಸಿದವರು ಸ. ಪ. ಗಾಂವಕಾರರು, ಆ ಇಳಿವಯಸ್ಸಿನಲೂ ಚಳುವಳಿಯಲ್ಲಿ ಭಾಗವಹಿಸಿ ಜೇಲುವಾಸ ಅನುಭವಿಸಿದರು. ಚಲೇಜಾವ ಚಳುವಳಿ ಮುಖ್ಯವಾಗಿ ಸ್ಥಳೀಯ ಜನರಿಂದಲೇ ನಡೆಯಿತು. ಹೊರಗಿನ ಧುರೀಣರು ಕೇವಲ ಗುಪ್ತ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ್ದನ್ನು ಬಿಟ್ಟರೆ, ಅವರ ಪಾತ್ರ ಅದಕ್ಕಿಂತ ಹೆಚ್ಚಿನದೇನೂ ಇರಲಿಲ್ಲ.

ಈ ನಿರಾಯುಧ ಯೋಧರು ಜೀವದ ಹಂಗು ತೊರೆದು ಹೋರಾಡಿ ಬ್ರಿಟಿಷ್ ಸರಕಾರವನ್ನು ಸೋಲಿಸಿದರು. ಚಲೇಜಾವ ಚಳುವಳಿಯೇ ಕೊನೆಯ ಚಳುವಳಿಯಾಗಿತ್ತು. ಸರಕಾರ ಉಗ್ರವಾಗಿ ಶಸ್ತ್ರಾಸ್ತ್ರ ಸಹಿತವಾಗಿ ಹೋರಾಡುತ್ತಿದ್ದರೂ ಸೋಲುತ್ತ ಬಂದಿತು. ಸತ್ಯಾಗ್ರಹಕ್ಕೆ ಎಂದೂ ಸೋಲೆಂಬುದಿಲ್ಲ ಎಂಬ ಮಹಾತ್ಮರ ಮಾತು ನಿಜವಾಯಿತು. ಬ್ರಿಟಿಷರ ರಾಜಸತ್ತೆಯೂ ಮುಗಿಯಿತು. ಭಾರತ ಸ್ವಾತಂತ್ರ್ಯವನ್ನು ಪಡೆಯಿತು.

ಅಂಕೋಲಾ ತಾಲೂಕು ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿತ್ತು. ಹೀಗೆ ಸತ್ಯಾಗ್ರಹ, ಸಂಗ್ರಾಮ, ತ್ಯಾಗಗಳ ಮೂಲಕ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

(೨೦೦೬ರಲ್ಲಿ ಪ್ರಕಟಗೊಂಡ 'ಅಂಕೋಲೆ' ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಯಿಂದ)

ಅಂಕೋಲೆಯ ರೈತ ಜನಾಂದೋಲನ

– ಸುನಂದಾ ಪ್ರಕಾಶ ಕಡಿಮೆ

ಆಂದೋಲನ ಪ್ರಾರಂಭವಾದ ಬಗೆ :

ಅಂಕೋಲೆಯಲ್ಲಿ ರೈತ ಜನಾಂದೋಲನವನ್ನು ಹುಟ್ಟು ಹಾಕಿದವರು ಡಾ|| ದಿನಕರ ದೇಸಾಯಿಯವರು. ೧೯೪೨ ರಿಂದ ೧೯೬೨ ರ ವರೆಗಿನದು ರೈತ ಹೋರಾಟದ ಅತ್ಯಂತ ಶಕ್ತಿಯುತವಾದ ಕಾಲಘಟ್ಟ ಭಾರತ ಸೇವಕ ಸಮಾಜದ ಆಜೀವ ಕಾರ್ಯಕರ್ತರಾಗಿ ೧೯೩೫ ರಲ್ಲಿ ಸೇರಿಕೊಂಡ ಮೂಲಕ ಮುಂಬಯಿಯಲ್ಲಿ ವಾಸಿಸಬೇಕಾಗಿದ್ದರೂ ದೇಸಾಯಿಯವರ ಮನಸ್ಸು ಜಿಲ್ಲೆಯ ದೀನ ದಲಿತರಿಗಾಗಿ ಮಿಡಿಯುತ್ತಿತ್ತು. ಅನ್ಯಾಯದ ವಿರುದ್ಧ ಸಿಡಿದೇಳುವಂತೆ ಮಾನಸಿಕವಾಗಿ ರೈತರನ್ನು ಹುರಿದುಂಬಿಸಿ ರೈತ ಸಭೆಗಳ ಮೂಲಕ ಸರಕಾರಕ್ಕೆ ನೋಟೀಸು ಕೊಟ್ಟು ಭೂಮಾಲಿಕರಿಗೆ ಬುದ್ದಿ ಹೇಳಿದವರು ದೇಸಾಯಿ. ೧೯೪೦ರ ಹೊತ್ತಿಗೆ ಅಂಕೋಲೆಯಲ್ಲಿ ಬಿತ್ತಿದ ಕ್ರಾಂತಿ ಮುಂದೆ ಇಡೀ ಜಿಲ್ಲೆಗೆ ಹಬ್ಬಿತು. ಅವರು ಅಂಕೋಲೆಯ ಹಳ್ಳಿ ಹಳ್ಳಿಗೆ ಕಾಲ್ನಡಿಗೆಯಲ್ಲಿ ಸಂಚರಿಸಿ ಹಾಲಕ್ಕಿ ಕೊಪ್ಪಗಳಲ್ಲಿ ಹಲವಾರು ರಾತ್ರಿಗಳನ್ನು ಕೂಟ ಕಟ್ಟುವುದರಲ್ಲಿ ಕಳೆದರು. ಹಾಲಕ್ಕಿಗಳು ದೇಸಾಯರ ಸರಳ ಕ್ರಾಂತಿ ಗೀತಗಳನ್ನು ತಮ್ಮ ಗುಮಟೆ ಪಾಂಗಿನ ತಾಳಕ್ಕೆ ಹಾಡಿ ಕುಣಿಯಲಾರಂಭಿಸಿದರು.

ತುಂಡು ಭೂಮಿಯಲ್ಲಿ ವರ್ಷವಿಡೀ ದುಡಿದು ಮನೆಗೆ ತಂದ ಕಾಳೂ ಸಹ ರೈತನ ಆಸ್ತಿಯಾಗುವುದಿಲ್ಲ. ಗೇಣಿ ರೂಪದಲ್ಲಿ ಒಡೆಯನ ಮನೆಗೆ ಅಳೆಯಬೇಕಿತ್ತು. ಉಳಿದವ ಇಲ್ಲಿ ರಾಗಿ ಅಂಬಲಿಗೂ ಬೇಡುವ ಸ್ಥಿತಿ ಇತ್ತು. ಹಾಗಾಗಿ ದೇಸಾಯಿ ಉಳುವವನೇ ಹೊಲದೊಡೆಯನಾಗುವ ಕಾನೂನಿಗಾಗಿ ರೈತರೊಂದಿಗೆ ಹೋರಾಟಕ್ಕೆ ಇಳಿದರು. ಈ ಬಾಯ್ಕಾತಿನ ಗೇಣಿ ಪದ್ಧತಿ ಹಾಗೂ ವಸೂಲಿ ಕ್ರಮ, ಮೋಸದ ಅಳತೆ ಮಾಪನ, ಮೊಟ್ಟ ಮೊದಲು ಬೆಳಕಿಗೆ ಬಂದದ್ದು ಅಂಕೋಲೆಯಲ್ಲಿ. ಒಂದು ಎಕರೆ ಗೇಣಿ ಜಮೀನನ್ನು ಹೊಂದಿದ್ದ ರೈತ, ವರ್ಷಕ್ಕೆ ನಾಲ್ಕರಿಂದ ಎಂಟು ಖಂಡುಗ ಅಕ್ಕಿ ಒಡೆಯನ ಮನೆಗೆ ಅಳೆಯಬೇಕಿತ್ತು. ಹೀಗೆ ಕೊಟ್ಟ ಕುರಿತು ದಾಖಲೆ ಸಹ ಇರಲಿಲ್ಲ. ರೈತರಿಂದ ಕಾಳುಗಳನ್ನು ಕೊಳ್ಳುವ ಮಾಪನಗಳಿಗೂ, ತಿರುಗಿ ಅದೇ ರೈತ ಮಳೆಗಾಲದಲ್ಲಿ ಈ ಒಡೆಯರಿಂದ ತಾನು ಕೊಟ್ಟ ಅಕ್ಕಿಯನ್ನು ಮರಳಿ ದುಡ್ಡು ಕೊಟ್ಟುಕೊಳ್ಳುವಾಗ ಅಳೆದು ಕೊಡುವ ಮಾಪನಕ್ಕೂ ಬಹಳಷ್ಟು ವ್ಯತ್ಯಾಸವಿರುತ್ತಿತ್ತು. ತಮ್ಮ ತಮ್ಮ ಹೊಲದ ಒಡೆತನ ಪಡೆಯುವುದು ರೈತನ ಜನ್ಮ ಸಿದ್ಧ ಹಕ್ಕು. ಈಗಿರುವ ಗೇಣಿಯ ದರವನ್ನು ಇಳಿಸುತ್ತ ಹೋಗಿ, ಮುಂದೆ ತಮ್ಮ ಹೆಸರಿನಲ್ಲಿರುವ ಜಮೀನನ್ನು ರೈತನಿಗೆ ಖಾತೆ ಹಾಕಿ ಕೊಡುವ ದೊಡ್ಡ ಮನಸು ಭೂಮಾಲಿಕರು ಮಾಡಬೇಕು. ಮಧ್ಯಮ ವರ್ಗದ ಭೂಮಾಲಿಕರು ಭೂಮಿ ಕಳೆದುಕೊಳ್ಳುವುದರಿಂದ ತೊಂದರೆಗೊಳಗಾಗದಂತೆ ನೋಡಿಕೊಳ್ಳುವ ಹೊಣೆ ಸರ್ಕಾರದ್ದು ಕರಾರುವಾಕ್ಕಾಗಿ ನಾಲ್ಕು ದಶಕಗಳಷ್ಟು ಹಿಂದೆ ಮೊಟ್ಟ ಮೊದಲು ದೇಸಾಯಿ ಸರ್ಕಾರ ಹಾಗೂ ಜನತೆಯ ಮುಂದಿಟ್ಟ ಈ ಪ್ರಗತಿಪರ ಸಲಹೆ ಅಂದಿನ ಸರ್ಕಾರಕ್ಕಾಗಲೀ, ಭೂಮಾಲಿಕರಿಗಾಗಲೀ ಬೇಕಾಗಿರಲಿಲ್ಲ. ದೇಸಾಯಿ ಹಚ್ಚಿದ ಈ ಹೋರಾಟದ ಉರಿಗೆ ಭೂಮಾಲಿಕರು ಸಿಡಿಮಿಡಿಗೊಂಡರು. ದೇಸಾಯಿಯವರನ್ನು 'ಹಾವಳಿ ಮಂಜ' ಎಂದರು. ಜಿಲ್ಲೆಯಲ್ಲಿ ಅವ್ಯವಸ್ಥೆ ಅಶಾಂತಿಯನ್ನು ಉಂಟುಮಾಡುತ್ತಿದ್ದಾನೆ ಎಂದು ಒಳಗೊಳಗೇ ಗೊಣಗಿಕೊಂಡರು. ಕೆಲವರು ಬ್ರಿಟಿಷ್ ಆಡಳಿತದ ವಿರುದ್ಧ ಸಾರಿದ ಹೊಸ ಬಗೆಯ ಸಮರವೆಂದು ಅಂದಿನ ಸರ್ಕಾರದ ಕಿವಿಯೂದಿದರು. ತತ್ಪರಿಣಾಮವಾಗಿ ಅಂದಿನ ಸರಕಾರವು ದೇಸಾಯಿಯವರನ್ನು ೧೯೪೦ ರಿಂದ ಐದು ವರ್ಷಗಳ ಕಾಲ ಜಿಲ್ಲೆಗೆ ಕಾಲಿಡದಂತೆ ಹದ್ದುಪಾರು ಮಾಡಿತು.

ವಾಸ್ತವಿಕವಾಗಿ ಕಾಗೋಡು ಸತ್ಯಾಗ್ರಹಕ್ಕಿಂತ ಹನ್ನೆರಡು ವರ್ಷಗಳಷ್ಟು ಹಿಂದೆ ಆರಂಭವಾದದ್ದು ಅಂಕೋಲೆಯ ರೈತ ಸಂಘಟನೆ. ಅಂಕೋಲೆಯಲ್ಲಿ ಮೊಟ್ಟಮೊದಲು ರೈತ ಜನಾಂದೋಲನ ಪ್ರಾರಂಭವಾದ್ದರಿಂದ ಜಿಲ್ಲೆಯ ಯಾವುದೇ ತಾಲೂಕಿನ ರೈತ ಕ್ರಾಂತಿಗೆ ಅಂಕೋಲೆಯ ರೈತ ಸಭೆಗಳು ತಳಹದಿಯಾಗಿರುತ್ತಿದ್ದವು. ಇಲ್ಲಿಯ ಕೃಷಿ ಕಾರ್ಮಿಕರ

ಪರ ಬಡ ರೈತರ ಪರ ಹೋರಾಟಕ್ಕೆ ಸಜ್ಜಾದ ಅನೇಕ ವ್ಯಕ್ತಿಗಳಿಂದ ಇಲ್ಲಿ ರೈತ ಚಳುವಳಿ ಬುಗಿಲೆದ್ದಿತು. ಇತಿಹಾಸದಲ್ಲಿ ದಾಖಲಾದ ಕಾಗೋಡು ಸತ್ಯಾಗ್ರಹಕ್ಕೆ ಒಂದು ರೀತಿ ಪ್ರೇರಣೆಯೊದಗಿಸಿದ ಅಂಕೋಲೆಯ ರೈತ ಜನಾಂದೋಲನಕ್ಕೆ ಆ ಎತ್ತರದಲ್ಲಿ ಪ್ರಚಾರ ಸಿಗಲಿಲ್ಲ. ಅದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಕಾಗೋಡಿಗೆ ರಾಮಮನೋಹರ ಲೋಹಿಯಾರಂಥ ರಾಷ್ಟ್ರ ಮಟ್ಟದ ಖ್ಯಾತಿಯಿರುವ ನಾಯಕರು ಬಂದು ಸುದ್ದಿಯಾದರು. ಮತ್ತು ಅಂಕೋಲೆಯಲ್ಲಿ ಹೋರಾಟದ ಮುಂಚೂಣಿಯಲ್ಲಿದ್ದ ದೇಸಾಯಿಯವರಾಗಲೀ ಅಥವಾ ಆ ಕಾಲದ ಅವರ ಬೆಂಬಲಿಗರಾಗಲೀ ಎಂದೂ ಪ್ರಚಾರ ಬಯಸಿದವರಲ್ಲ.

ನಂತರದ ಹೋರಾಟ ಮತ್ತು ಮುಂದಾಳುಗಳು:

೧೯೪೦ರಲ್ಲಿ ರೈತ ನಾಯಕರಾಗಿ ದಿನಕರ ದೇಸಾಯಿ ಎದ್ದು ನಿಂತಾಗ ಈ ಹೋರಾಟದಲ್ಲಿ ಮುಂದೆ ಅತ್ಯಂತ ಮಹತ್ವದ ಪಾತ್ರ ವಹಿಸಿದವರು ಗಿರಿ ಪಿಕಳೆ. ಇವರು ತಮ್ಮ ಸಂಶೋಧನ ಪ್ರಬಂಧದ ಹಿನ್ನೆಲೆಯಲ್ಲಿ ಹಾಲಕ್ಕಿಗಳ ಎಲ್ಲ ಕೊಪ್ಪಗಳನ್ನು ಸುತ್ತಿ ಬಂದರು. ದೇಸಾಯಿ, ಪಿಕಳೆ ಮತ್ತಿತ್ತರು, ಸಭೆಯೊಂದರಲ್ಲಿ ಸರಕಾರದ ಟೆನೆನ್ಸಿ ಕಾಯ್ದೆಯು ದುಡಿಯುವ ವರ್ಗದ ಹಿತಕ್ಕೆ ಕಂಟಕಪ್ರಾಯವಾದುದೆಂದೂ ಈ ಜನವಿರೋಧಿ ಕಾನೂನಿನ ವಿರುದ್ಧ ಬಂಡೇಳಬೇಕೆಂದೂ ಅಂದಿನ ಸಭೆಯ ಮೂಲಕ ರೈತರಿಗೆ ಕರೆ ನೀಡಿದರು. ಅಂಕೋಲೆಯ ಹಾಲಕ್ಕಿ ಒಕ್ಕಲ ಸಂಘವು ಚುರುಕಾಗಿ ಕಾರ್ಯ ತತ್ಪರವಾಗಿದ್ದ ಸಂದರ್ಭದಲ್ಲಿ 'ಕಾಂಗ್ರೆಸ್ ರೈತ ಸಂಘ' ಹಾಗೂ 'ಕಿಸಾನ್ ಸಭಾ' ಎಂಬ ಇನ್ನೆರಡು ಸಂಘಟನೆಗಳು ರೈತ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಕೆಲಸ ಮಾಡುತ್ತಿದ್ದವು. ಕಾಂಗ್ರೆಸ್ ರೈತ ಸಂಘದಲ್ಲಿ ಶ್ರೀ ಎಂ. ಎಂ.ಜಾಲಿಸತಿ ಮತ್ತು ಶ್ರೀ ದಯಾನಂದ ನಾಡಕರ್ಣಿ ಮುಂಚೂಣಿ ಧುರೀಣರಾಗಿದ್ದರು. ೧೯೪೮ ರಲ್ಲಿ ಅಂಕೋಲೆಯಲ್ಲಿ ಮತ್ತೊಂದು ಪ್ರಚಂಡ ಸಭೆ ನಡೆಯಿತು. ಮ. ಗ. ಶೆಟ್ಟಿ ಮತ್ತು ಗಿರಿ ಪಿಕಳೆ ಹೆಸರಿನಲ್ಲಿ ಈ ಸಭೆ ಕರೆಯಲಾಗಿತ್ತು.

ಪಿಕಳೆಯವರು ದಿನಕರ ದೇಸಾಯಿಯವರಿಗಿಂತ ಭಿನ್ನವಾದ ನೆಲೆಯಲ್ಲಿ ಹಾಲಕ್ಕಿಗಳ ಸಂಘಟನೆಗೆ ತೊಡಗಿದ್ದರು. ರೋಚಕ ಭಾಷಣಗಳಿಗಿಂತ ರಚನಾತ್ಮಕವಾದ ಕ್ಷೇತ್ರ ಕಾರ್ಯಗಳ ಮೂಲಕ ಆದಿವಾಸಿಗಳ ಹೃದಯ ಮುಟ್ಟ ಬಯಸಿದ್ದರು. ಶಿಕ್ಷಣದ ಹೊರತಾಗಿ ಈ ಹೆಬ್ಬೆಟ್ಟಿನ ಬಡ ಜನತೆಗೆ ಮುಕ್ತಿಯಿಲ್ಲ ಎಂದು ಭಾವಿಸಿ, ಆ ದಿಶೆಯಲ್ಲಿ ಅವರಲ್ಲಿ ಜಾಗೃತಿ ಮೂಡಿಸುವುದಕ್ಕೆ ಇಂಥ ಒಂದು ಸಂಘದ ಕಲ್ಪನೆ ಮಾಡಿದರೆಂದು ತೋರುತ್ತದೆ. ಹಾಲಕ್ಕಿ ಒಕ್ಕಲ ವಿದ್ಯಾವರ್ಧಕ ಸಂಘದವರು ನಡೆಸುತ್ತಿದ್ದ ಬೆಳಂಬಾರದ ಅನಾಥ ವಿದ್ಯಾರ್ಥಿಗಳ ಬೋರ್ಡಿಂಗನ್ನು ಹಾಗೂ ಬಡಗೇರಿ, ಮೂಲೆಕೇರಿಯಲ್ಲಿದ್ದ ಒಕ್ಕಲ ಕನ್ನಡ ಶಾಲೆಯನ್ನು ಇನ್ನು ಮಂದೆ ಈ ಸಂಘದವರು ನಡೆಸತಕ್ಕದೆಂದು ಠರಾವು ಪಾಸು ಮಾಡಲಾಯಿತು. ಅಂದರೆ, ಶಿಕ್ಷಣಕ್ಕಾಗಿ ಸಂಘಟನೆ, ಸಂಘಟನೆಯ ಮೂಲಕ ಶಿಕ್ಷಣ, ಆ ಮೂಲಕ ಒಗ್ಗಟ್ಟು, ಆ ಮೂಲಕ ಶೋಷಣೆಯ ವಿರುದ್ಧದ ಜನಜಾಗೃತಿ, ಅಲ್ಲಿಂದ ಶತಶತಮಾನಗಳ ಶಾಪದಂತೆ ಅಂಟಿಕೊಂಡಿರುವ ಜೀತ ವ್ಯವಸ್ಥೆಯಿಂದ ಪಾರಾಗುವುದು, ಪಿಕಳೆ ಮತ್ತು ಅಂದಿನ ಅವರ ಸಂಗಡಿಗರು ತುಳಿದ ಈ ದಾರಿ ಅವರ ಬಡಜನತೆಯ ಕುರಿತ ಕಳಕಳಿಗೆ ಒಂದು ಅತ್ಯುತ್ತಮ ನಿದರ್ಶನ.

ರೈತರ ಶಾಲೆಯಲ್ಲಿ ವಿಲೀನಗೊಂಡ ಪೀಪಲ್ಸ್ ಸ್ಕೂಲಿನಂಥ ಒಂದು ಬಗೆಯ ಚರಿತ್ರಾರ್ಹ ತಿರುವು ಅಂದಿನ ರೈತ ಜನಾಂದೋಲನಕ್ಕೆ ಹೆಚ್ಚುವರಿಯಾಗಿ ಸಿಕ್ಕಿದ ನೈತಿಕ ಬಲವೆನ್ನಬೇಕು. ಇಲಾಖೆಯ ಪಠ್ಯ ಪುಸ್ತಕದ ಹೊರತಾಗಿ ಈ ಶಾಲೆಗಳ ಮಕ್ಕಳು ಕೃಷಿ ಮತ್ತು ತೋಟಗಾರಿಕೆಯ ಕೆಲಸಗಳನ್ನು ಕಡ್ಡಾಯವಾಗಿ ಮಾಡಲೇಬೇಕಿತ್ತು.

ಮುಂದೆ ಅಮ್ಮೆಂಬಳ ಆನಂದರ ಸಂಪಾದಕತ್ವದಲ್ಲಿ ಅಂಕೋಲೆಯಿಂದ ಹೊರಬಂದ 'ಜನಸೇವಕ' ಪತ್ರಿಕೆಯಿಂದ ಇಡೀ ಜಿಲ್ಲೆಯ ರೈತ ಜನಾಂದೋಲನಕ್ಕೆ ನಾಡಿನಾದ್ಯಂತ ವ್ಯಾಪಕ ಬೆಂಬಲ ಸಿಗತೊಡಗಿತು. ರೈತಕೂಟದ ಸಕಲ ಚಟುವಟಿಕೆಗಳೂ ಈ ಪತ್ರಿಕೆಯ ಕಾರ್ಯಾಲಯದಿಂದಲೇ ನಿರ್ದೇಶಿತವಾಗುತ್ತಿದ್ದವು. ಮೇಲೆ ಹೇಳಿದ ನಾಯಕರು ಹೋರಾಟ ನಡೆಸುತ್ತಿದ್ದಾಗ ಶಂಕರ ಕೇಣಿ, ಮುಜುಂದಾರ ಮುಂತಾದ ಕ್ರಿಯಾಶೀಲ ಕಾರ್ಯಕರ್ತರು ರಾಷ್ಟ್ರ ಸೇವಾದಳದಲ್ಲಿ ಮನಮುಟ್ಟಿ ದುಡಿಯುತ್ತಿದ್ದರು. ೧೯೫೭ರ ಎರಡನೇ ಮಹಾಚುನಾವಣೆಯ ಸಂದರ್ಭದಲ್ಲಿ ಬೆಳಂಬಾರದ ನಾಟೀ ವೈದ್ಯರಾದ ಶಿವು ಬೊಮ್ಮು ಗೌಡ ಅವರನ್ನು ರೈತ ಕೂಟದ ಅಭ್ಯರ್ಥಿಯಾಗಿ ನಿಲ್ಲಿಸಲಾಗಿತ್ತು. ಹಾಲಕ್ಕಿ ಸಮಾಜದಲ್ಲಿಯೇ ಅವರೊಬ್ಬ ಪ್ರಾಮಾಣಿಕ ರೈತ

ಮುಂದಾಳು. ಆಗೆಲ್ಲ ದೇಸಾಯರ ಕಟ್ಟೆ ಭಾಷಣಗಳಲ್ಲಿ ಬೆಲೆಯೇರಿಕೆ, ಗೇಣಿ ಸಮಸ್ಯೆ, ಅರಣ್ಯ ಸಮಸ್ಯೆ, ಲೇವಿ ಆಕರಣೆ ಸಮಸ್ಯೆ, ಮೀನುಗಾರಿಕೆಯ ತೊಡಕು, ಹೀಗೆ ಬಡವರಿಗೆ ಸಂಬಂಧಿಸಿದ ವಿಷಯಗಳೇ ಹೆಚ್ಚಿರುತ್ತಿದ್ದವು. ೧೯೬೦ ಭ್ರಷ್ಟಾಚಾರದ ವಿರುದ್ಧ ದೇಶದಲ್ಲೇ ಪ್ರಥಮವೆಂಬಂತೆ ಅಂಕೋಲೆ ಹೊಸ ಚರಿತ್ರೆ ಬರೆಯಿತು. ಭ್ರಷ್ಟ ಸರಕಾರದ ಕಸ ಕೊಳೆಯನ್ನು ಗುಡಿಸಿ ಹಾಕುವುದರ ಸಂಕೇತವಾಗಿ ಪೊರಕೆ ಮೆರವಣಿಗೆ ತೆಗೆಯಬೇಕೆಂದು ದೇಸಾಯಿಯವರು ನೀಡಿದ ಕರೆಯ ಹಿನ್ನೆಲೆಯಲ್ಲಿ ಸಂಘಟಿಸಲಾದ ಪ್ರತಿಭಟನಾ ಮೆರವಣಿಗೆ ಅದು. ತಾಲೂಕಾ ಬೋರ್ಡುಗಳಿಗೆ ನಡೆದ ಪ್ರಥಮ ಚುನಾವಣೆಯಲ್ಲೇ ತಾಲೂಕಾ ಬೋರ್ಡನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದ ಅಂಕೋಲೆಯ ರೈತರಿಗೆ ಭೀಮಬಲ ಬಂದಿತ್ತು. ಪ್ರತಿಯೊಂದು ರೈತ ಸಭೆಗಳಲ್ಲಿ ದೇಸಾಯಿಯವರ ಬೆಂಗಾವಲಿಗನಂತೆ ಅನುಸರಿಸುತ್ತಿದ್ದ ಅಜಾನುಬಾಹು ವ್ಯಕ್ತಿತ್ವದ, ಕಂತ್ರಿಯ ಹಂಡನದೇವಿ ರಾಕು ಗೌಡನೊಂದಿಗೆ ದೇಸಾಯಿ, ನಾಡಕರ್ಣಿ, ಶಂಕರ ಕೇಣಿ, ಅಮ್ಮೆಂಬಳ ಆನಂದ, ವಿಷ್ಣು ನಾಯ್ಕ, ವಿ. ಜೆ. ನಾಯಕ, ಬೆಳಂಬಾರದ ಭೀಮ ಗೌಡ, ತೆಂಕಣಕೇರಿಯ ನುಗ್ಗು ನಾಯ್ಕ ಶ್ರೀಮತಿ ವಿಜಯಾ ನಾಡಕರ್ಣಿ, ಗಂಗಾಬಾಯಿ ಅಮ್ಮೆಂಬಳ ಮುಂತಾದವರೆಲ್ಲ ಮುಂಭಾಗದಲ್ಲಿದ್ದರು.

ನೆಲದ ಒಡೆತನ, ನೇಗಿಲು ಹಿಡಿದ ರೈತನದಾಗುವ ತನಕ ತಮ್ಮ ಹೋರಾಟಕ್ಕೆ ವಿಶ್ರಾಂತಿಯೆಂಬುದಿಲ್ಲ ಎಂದೇ ಅವರೆಲ್ಲ ನಂಬಿದ್ದರು. ರೈತರ ಸಂಘ ಶಕ್ತಿಯ ಅರಿವು ಸರ್ಕಾರಕ್ಕೆ ಮೂಡಬೇಕಾದಲ್ಲಿ ಮೊದಲ ಹೆಜ್ಜೆಯಾಗಿ ಎಲ್ಲಾ ತಾಲೂಕಾ ಬೋರ್ಡುಗಳಲ್ಲಿ ರೈತರ ಪ್ರತಿನಿಧಿಗಳು ಪ್ರವೇಶ ಮಾಡಬೇಕೆಂಬುದು ಎಲ್ಲ ಪ್ರಮುಖ ನಾಯಕರ ಇಚ್ಛೆಯಾಗಿತ್ತು. ಚುನಾವಣೆಯಲ್ಲಿ ಗೆಲ್ಲುವುದು ಮಾತ್ರವೇ ಸಮಾಜವಾದಿ ರೈತ ಜನಾಂದೋಲನದ ಉದ್ದೇಶವಾಗಿರಲಿಲ್ಲ. ಜನಜಾಗೃತಿ ಮತ್ತು ಆ ಮೂಲಕ ನಿರಕ್ಷರಿಗಳಿಗೆ ಹಿಂದುಳಿದವರಿಗೆ ತಮ್ಮ ಹಕ್ಕು ಮತ್ತು ಕರ್ತವ್ಯಗಳ ಪರಿಚಯ ಮಾಡಿಕೊಡುವುದು ಮುಖ್ಯ ಕಾಳಜಿಯಾಗಿತ್ತು. ಅದರಲ್ಲಿ ಈ ಪೊರಕೆ ಮೆರವಣಿಗೆ ಪರಿಣಾಮಕಾರಿಯಾದ ಫಲಕೊಟ್ಟಿತ್ತು.

ಈ ಮೆರವಣಿಗೆಯಲ್ಲಿ ಎಲ್ಲರಿಗಿಂತ ಮುಂದೆ ಮೈ–ಮನವನ್ನು ಕ್ರಾಂತಿ ಕಹಳಗೆ ಪ್ರಚೋದಿಸುವಂತಿದ್ದ ಆಗೇರರ ರಣವಾದ್ಯದ ತಂಡವೂ ಇತ್ತು. ಅಪಾರ ಸಂಖ್ಯೆಯ ಮಹಿಳೆಯರೂ ಸೇರಿದಂತೆ ಎಲ್ಲ ಜಾತಿ ವರ್ಗಗಳಿಂದ ಕೂಡಿದ ಶ್ರಮ ಜೀವಿಗಳು ಕೈಯಲ್ಲಿ ಹಿಡಿದ ಪೊರಕೆಗಳನ್ನು ಮೇಲೆತ್ತಿ ಮುಗಿಲು ಮುಟ್ಟುವ ಜಯಘೋಷ ಹಾಕುತ್ತಿದ್ದರು. ದೇಸಾಯರ ಕರೆಯೆಂದರೆ ಯಾವತ್ತೂ ದೇವರ ಕರೆಯೆಂದೇ ಭಾವಿಸಿ ಸ್ಪಂದಿಸುತ್ತಿದ್ದ ಹಾರವಾಡದ ಸೋಮಾ ನಾಯ್ಕ, ಡೊಂಗಾ ನಾಯ್ಕ, ಶಿರಕುಳಿಯ ಬಾಗಿ ನಾಗಪ್ಪ ಕಂಡುಗದ್ದೆಯ ಮಳ್ಳ ಗೌಡರಂಥ ಹಿರಿಯರಲ್ಲದೇ ಆ ಕಾಲದಲ್ಲಿ ಹೆಚ್ಚಿನ ಕೆಚ್ಚನ್ನು ಮನದಲ್ಲಿ ತುಂಬಿಕೊಂಡು ಹೇಳಿದ ಎಲ್ಲ ಕಾರ್ಯ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದ ಗಣಪತಿ ಚಿನ್ನು ನಾಯ್ಕ, ಶಿರಕುಳಿಯ ಥಾಕು ಅಪ್ಪು ನಾಯ್ಕ, ಅಂಬಾರಕೊಡ್ಲದ ಗಣಪತಿ ದಾಮು ನಾಯ್ಕ, ಕುಡ್ಲು ಬೊಮ್ಮು ಗೌಡ, ಬಾಳಾ ಮಹಾಲೆ, ಕೇಣಿಯ ಯಶ್ವಂತ ನಾಯ್ಕ ಇವರೆಲ್ಲ ಕಣ್ಣಳತೆಗೆ ಸಿಕ್ಕಿದ ಕಾರ್ಯಕರ್ತರು ಈ ಮಧ್ಯೆ ಅಂಕೋಲೆಯಲ್ಲಿ ಸಾಗುವಳಿಯೋಗ್ಯ ಅರಣ್ಯಭೂಮಿ ಅತಿಕ್ರಮಣ ಚಳುವಳಿ ಕೂಡ ಪ್ರಾರಂಭವಾಯಿತು. ಅದರಲ್ಲಿ ಪ್ರಮುಖವಾಗಿ ಕರಾವಳಿಯ ಸಮುದ್ರ ದಂಡೆಯಲ್ಲಿ ಬೆಳೆಸಿದ ಗಾಳಿಗಿಡಗಳ ಅಡವಿಯನ್ನು ಕೂಡಲೇ ರದ್ದುಗೊಳಿಸಿ, ಆ ಭೂಮಿಯನ್ನು ಮೀನುಗಾರರಿಗೆ ಮತ್ತು ಬಡ ರೈತರಿಗೆ ಹಂಚಬೇಕೆಂಬುದಾಗಿತ್ತು.

ಅಂಕೋಲಾ ತಾಲೂಕಿನ ರೈತ ಜನಾಂದೋಲನದ ಗಂಡುಮೆಟ್ಟಿನ ಸ್ಥಳಗಳಲ್ಲಿ ಒಂದಾದ ಅಂಬಾರಕೊಡ್ಲದಲ್ಲಿ ೧೯೭೦ರಲ್ಲಿ ರೈತರ ಬಹಿರಂಗ ಸಭೆ ನಡೆಯಿತು. ಸ್ಥಳೀಯ ಸಮಾಜವಾದಿ ಯುವಕ ಸಂಘವು ಈ ಸಭೆಯ ಸಂಘಟನೆಯ ಜವಾಬ್ದಾರಿ ಹೊತ್ತುಕೊಂಡದ್ದರಿಂದ ಆ ಸಂಘದ ಅಧ್ಯಕ್ಷರಾದ ಶ್ರೀ ವಿಷ್ಣು ನಾಯ್ಕ ಆ ಸಭೆಯ ಮುತುವರ್ಜಿ ವಹಿಸಿದ್ದರು. ಅಲ್ಲಿ ಅಂಕೋಲಾ ತಾಲೂಕಿನ ಬಹುತೇಕ ಹಳ್ಳಿಗಳ ಕಾರ್ಯಕರ್ತರೂ ರೈತ ಮುಂದಾಳುಗಳೂ ಭಾಗವಹಿಸಿದ್ದರು.

ರೈತ ಜನಾಂದೋಲನದ ಫಲಶ್ರುತಿ :

ಉಳುವ ರೈತರು ಹೊಲದ ಒಡೆಯನಾಗಬೇಕು ಮತ್ತು ಮಧ್ಯಮ ವರ್ಗದ ಭೂಮಾಲಿಕರಿಗೆ ಸರಕಾರದಿಂದ ಸಂಪೂರ್ಣ ಪರಿಹಾರ ಧನ ಸಿಗುವಂತಾಗಬೇಕು ಎಂಬ ದೇಸಾಯಿ ಮತ್ತವರ

ಸಂಗಾತಿಗಳ ಮೂವತ್ತೆರಡು ವರ್ಷಗಳ ಕೂಗಿಗೆ ಮೈಸೂರು ಸರ್ಕಾರದ ಪ್ರಭಾವಿ ಅರ್ಥ ಸಚಿವರಾಗಿ ೧೯೭೦ರ ದಶಕದ ಕಾಲಾವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಾಮಕೃಷ್ಣ ಹೆಗಡೆಯವರು ಮೊಟ್ಟ ಮೊದಲೆಂಬಂತೆ ಸಹಮತ ವ್ಯಕ್ತಪಡಿಸಿದರು. ಮುಂದೆ ಮುಖ್ಯಮಂತ್ರಿಯಾದ ದೇವರಾಜ ಅರಸು ಅವರಿಗೂ ಕೂಡ ಇಂಥ ಒಂದು ಕ್ರಾಂತಿಕಾರಿ ತೀರ್ಮಾನವನ್ನು ಕೈಕೊಳ್ಳುವ ಬಗ್ಗೆ ಸಮಾನ ಆಸಕ್ತಿ ಇದ್ದ ಪ್ರಯುಕ್ತ ೧೯೭೩ರಲ್ಲಿ, ಈಗ ನಮ್ಮ ರೈತರು ಪ್ರಯೋಜನ ಪಡೆಯುತ್ತಿರುವ ಭೂ ಸುಧಾರಣಾ ಕಾನೂನು ಜಾರಿಗೆ ಬಂತು. ಸದ್ರಿ ಕಾನೂನಿನಲ್ಲಿ ಅನೇಕ ನ್ಯೂನತೆಗಳಿದ್ದು, ಅದರ ಪರಿಣಾಮವನ್ನು ಇಂದಿನವರೆಗೂ ನಮ್ಮ ನಿರಕ್ಷರಿ ರೈತರು ಅನುಭವಿಸುತ್ತಲೇ ಇದ್ದಾರೆ.

(ಅಂಕೋಲೆ, ನನಗೆ ಹಾಗೂ ನನ್ನ ಬರವಣಿಗೆಗೆ ಉಸಿರಾದಂಥ ನೆಲ. ಆದರೆ ಅಂಕೋಲೆಯಲ್ಲಿ ನಡೆದ ರೈತ ಜನಾಂದೋಲನವು ನಾನು ಅಲಗೇರಿಯಲ್ಲಿ ಹುಟ್ಟುವ ಪೂರ್ವದಲ್ಲಿ ಪ್ರಾರಂಭವಾದದ್ದರಿಂದ, ಇವೆಲ್ಲ ನನಗೆ ಕೇಳಿ ಮತ್ತು ಓದಿ ಅನುಭವಿಸಿದ ರೋಮಾಂಚನ. ಆದ್ದರಿಂದ ಗುರುಗಳಾದ ಶ್ರೀ ವಿಷ್ಣು ನಾಯ್ಕರ 'ದುಡಿಯುವ ಕೈಗಳ ಹೋರಾಟದ ಕತೆ' ಗ್ರಂಥದ ನೆರವು ಪಡೆದಿದ್ದೇನೆ.– ಲೇಖಕಿ)

(೨೦೦೬ರಲ್ಲಿ ಪ್ರಕಟಗೊಂಡ 'ಅಂಕೋಲೆ' ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಯಿಂದ)

ಪ್ರಣಯ

ಚೆಲುವು ನಲಿವ ನದಿಯದಂಡ
ಇಲ್ಲಿ ಕಡಲ ಮಳಲದಂಡೆ
ಎರಡು ಬಗೆಯ ಕಂಡುಕೊಂಡೆನು,

ಬಲಿಯ ಮೈಯ ಬತ್ತಲಲ್ಲಿ
ಜಾಲಗಾರ ದೋಣಿಯಲ್ಲಿ
ಅಲೆಯ ಕೂಡ ಆಲೆಗೊಂಬನು.

ಸುತ್ತಮುತ್ತ ಎತ್ತಲಲ್ಲಿ
ವನದ ಸಿರಿಯ ಸೊಬಗು ಚೆಲ್ಲಿ
ಒಲಿದ ನದಿಗೆ ಗಿರಿಯ ಚುಂಬನ !

ನದಿಯು ಕಡಲ ಕೂಡುವಾಗ
ನೀರು ಕುಣಿವ ಮಿಲನರಾಗ
ಕಣ್ಣು ಮನವು ಕಂಡು ತಣಿವುದು.

ಹಗಲು ಇರುಳು ಕಡಲ ಮೊರೆತ
ಹೇಳುತಿಹುದು ತನ್ನ ಚರಿತ
ಕೇಳಲೆಂದು ನಾನು ಬಂದೆನು.

ಬಿಚ್ಚಿ, ಎದೆಯ ನೀಲಿನೊಡಲು
ತೆರೆಯ ಸೆರೆಗೆ ಸರಿಸಿ ಕಡಲು
ಪ್ರೇಮಿಯೊಡನೆ ಪ್ರಣಯದಾಟವು.

– *ಶಾಂತಾರಾಮ ಬಾಳೆಗುಳಿ*
(ಕೋಲಸಂಪಿಗೆ ಸಂಕಲನದಿಂದ)

ಅಂಕೋಲೆಯ ರಂಗಭೂಮಿ ಮತ್ತು ರಂಗಕೃತಿಗಳು

– ಮೋಹನ ಹಬ್ಬು

ಅಂಕೋಲೆಯ ರಂಗಭೂಮಿ

ಅಂಕೋಲಾ ರಂಗಭೂಮಿಗೆ ಸುಮಾರು ಎಂಟು ದಶಕಗಳ ಇತಿಹಾಸವಿದೆ. (೧೯೨೦–೨೦೦೦) ಅದಕ್ಕೂ ಹಿಂದಿನ ಇತಿಹಾಸದ ಅಧಿಕೃತ ದಾಖಲೆಗಳು ಸಿಗುತ್ತಿಲ್ಲ. ಈ ಸೀಮಿತ ಅವಧಿಯ ವಿವರಗಳನ್ನು ರಂಗಭೂಮಿಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಹಿರಿಯರ ಮೌಖಿಕ ಹೇಳಿಕೆಗಳ ಮೂಲಕವೇ ದಾಖಲಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನಗಳಲ್ಲಿ ಉಲ್ಲೇಖಿಸಲಾದ ಅಂಶಗಳು ಸಮಗ್ರವೆಂದು ಭಾವಿಸಬೇಕಿಲ್ಲ.

ಆಧುನಿಕ ಕನ್ನಡ ರಂಗಭೂಮಿ ಅಸ್ತಿತ್ವಕ್ಕೆ ಬಂದುದೇ ೧೯ನೇ ಶತಮಾನದ ಕೊನೆಯ ಭಾಗದಲ್ಲಿ. ಅದಕ್ಕೂ ಮೊದಲು ಬಂಗಾಲ ಮತ್ತು ಮುಂಬೈ ಪ್ರಾಂತಗಳಲ್ಲಿ ಪಾಶ್ಚಾತ್ಯ ರಂಗಭೂಮಿಯ ಪ್ರಭಾವದಿಂದ ಭಾರತೀಯ ರಂಗಭೂಮಿ ಹೊಸ ರೂಪವನ್ನು ಧರಿಸಿರಬೇಕು. ಕನ್ನಡ ರಂಗಭೂಮಿಯ ಪ್ರಾರಂಭಿಕ ನಾಟಕಗಳು ಪಾರ್ಸೀ ಕಂಪನಿಯ ನಾಟಕಗಳ ಅನುಕರಣೆಗಳಾಗಿದ್ದವು. ಇನ್ನೂ ಹಿಂದಕ್ಕೆ ಹೋದರೆ, ಪ್ರಾಯಶಃ ರಾಮಾಯಣ, ಮಹಾಭಾರತಗಳನ್ನಾಧರಿಸಿದ ಪ್ರಸಂಗಗಳು ಪ್ರದರ್ಶಿಸಲ್ಪಡುತ್ತಿದ್ದವು. ಕನ್ನಡ ರಂಗಭೂಮಿಯ ಅರುಣೋದಯ ಈ ಎಲ್ಲ ಪರಿವರ್ತನೆಗಳ ನೆರಳಲ್ಲಿ ನಡೆದಿದೆ. ಇಂಥ ರಂಗಚಟುವಟಿಕೆಗಳು ಜನಪದರಲ್ಲಿ ಹಸಿಹಸಿಯಾಗಿ ಅಭಿವ್ಯಕ್ತಗೊಂಡಿರಬೇಕು. ಅಂಕೋಲೆಯ ಮಟ್ಟಿಗೆ ಬಹುಶಃ ಹಾಲಕ್ಕಿ ಜನಾಂಗದ ಕಲಾಪ್ರಕಾರಗಳಾದ ಗುಮ್ಮೆ ನೃತ್ಯ, ಸುಗ್ಗಿ ಕುಣಿತ ಹಾಗೂ ಹಗಣ (ಹಗರಣ)ಗಳು ಅಭಿವ್ಯಕ್ತಿ ಮಾಧ್ಯಮಗಳಾಗಿ ಅವತರಿಸಿದವು ಎನ್ನಬಹುದು. ೧೯೨೦ರ ಸುಮಾರಿಗೆ ಆಡುಕಟ್ಟೆ ತುಕ್ಕು ಎಂಬ ಕಲಾವಿದ ಹಗರಣದಲ್ಲಿ ಪಾಲ್ಗೊಂಡು ಗಂಟೆಗಟ್ಟಲೆ ಹಾಸ್ಯದ ಹೊನಲನ್ನು ಹರಿಸುತ್ತಿದ್ದ ಎಂಬುದನ್ನು ಅಂಕೋಲೆಯ ಹಿರಿತಲೆಮಾರಿನ ಜನ ಈಗಲೂ ಜ್ಞಾಪಿಸಿಕೊಳ್ಳುತ್ತಾರೆ.

ಅಂಕೋಲೆಯಲ್ಲಿ ಅತ್ಯಂತ ಜನಪ್ರಿಯವಾಗಿರುವ ಯಕ್ಷರಂಗ ಕೂಡ ಹವ್ಯಾಸೀ ಮಟ್ಟದಲ್ಲೇ ಬೆಳೆದುಬಂದ ರಂಗಪ್ರಕಾರವಾಗಿದೆ. ಅಂಕೋಲೆಯ ಸಕಲ ವರ್ಗದ ಜನರನ್ನು ಈ ಕಲಾಪ್ರಕಾರ ಏಕಪ್ರಕಾರವಾಗಿ ಆಕರ್ಷಿಸುವುದನ್ನು ಗಮನಿಸಿದಾಗ ಇದರ ಅಂತಃಸತ್ವ ಎಷ್ಟೆಂಬುದನ್ನು ಅರಿಯಬಹುದಾಗಿದೆ.

ಸಂದರ್ಶನವೊಂದರಲ್ಲಿ ಶತಾಯುಷಿ ಶೆಟಗೇರಿ ಬೀರಣ್ಣ ನಾಯಕ ಅವರು ಹೀಗೆ ಹೇಳಿದ್ದಾರೆ:

'ನಾವು ಯಕ್ಷಗಾನ ಮೇಳದಲ್ಲಿ ಆಟವಾಡುವ ಮೊದಲು ಸಂಗೀತ ನಾಟಕ ಆಡುತ್ತಿದ್ದೆವು. ತೊರ್ಕೆಯ ಗೋಪಾಲ ಕೆಂಚಾ ನಾಯಕ ಭಾವಿಕೇರಿಯ ಶಿಕ್ಷಕರಾಗಿದ್ದರು. ಅವರು ಸಂಗೀತ ನಾಟಕಕಾರರಾಗಿದ್ದರು. ಭಾವಿಕೇರಿಯ ರಾಮ ನಾಯಕರ ಸಹಕಾರದಿಂದ ಅವರು ನಾಟಕ ಮಂಡಳಿಯೊಂದನ್ನು ರಚಿಸಿದರು. ನಾವೆಲ್ಲ ಸೇರಿ ಬಾಸಗೋಡದಲ್ಲಿ ಮೊದಲ ನಾಟಕ ಆಡಿದ್ದೆವು. 'ಚಂದ್ರಹಾಸ ಚರಿತೆ'ಯಲ್ಲಿ ಚಂದ್ರಹಾಸ ಪಾತ್ರ ನನ್ನದು. 'ಸದಾರಮೆ' ನಾಟಕದಲ್ಲಿ ಕಳ್ಳನ ಪಾತ್ರ ಮೋನಪ್ಪ ನಾಯಕರದು. ಬಿ.ವಿ. ನಾಯಕರ ತಂದೆ ವೆಂಕಣ್ಣ ನಾಯಕರ ಎರಡನೆಯ ಮದುವೆಯ ಸಂದರ್ಭದಲ್ಲಿ ಈ ನಾಟಕ ಆಡಿದ್ದೆವು.' ಇಷ್ಟಾಗಿ ಈ ವೇದಿಕೆಯೂ ಹವ್ಯಾಸೀ ಮಟ್ಟದಲ್ಲಿಯೇ ಯಕ್ಷಗಾನ ಪ್ರದರ್ಶನಗಳನ್ನು ಕೈಕೊಂಡಿತು ಎಂಬುದು ಗಮನಾರ್ಹ. ಜೋಗಿ ನಾಯಕರು ಹುಟ್ಟಿದ ವರ್ಷ(೧೯೦೫)ವನ್ನು ಗಣನೆಗೆ ತೆಗೆದುಕೊಂಡರೆ 'ಚಂದ್ರಹಾಸ ಚರಿತ್ರೆ' ನಾಟಕ ಪ್ರದರ್ಶನ ೧೯೧೫ರ ಆಸುಪಾಸಿನಲ್ಲಿ ನಡೆದಿರಬಹುದೆಂದು ಅಂದಾಜಿಸಬಹುದಾಗಿದೆ. ಈ ಬಗೆಯ ನಾಟಕ ಪ್ರಯೋಗಗಳು ಯಕ್ಷಗಾನದ ಒಡಲಲ್ಲಿ ನಡೆದವೇ ವಿನಾ ಅವು ಸುಸಂಘಟಿತ ಪ್ರಯತ್ನಗಳಾಗಿರಲಿಲ್ಲ.

ಭಾವಿಕೇರಿ ರಾಮ ನಾಯಕರು ಸಂಘಟಿಸಿದ 'ಸುಬೋಧ ಯಕ್ಷಗಾನ ಮಂಡಳಿ' ಯಕ್ಷಗಾನಕ್ಕೆ ಸೀಮಿತವಾಗಿದ್ದರಿಂದ ನಾಟಕ ಪ್ರಯೋಗ ಈ ವೇದಿಕೆಯಲ್ಲಿ ಮಹತ್ವ ಪಡೆಯದಿದ್ದುದು ಸಹಜವೇ ಆಗಿತ್ತು.

೧೯೩೫–೪೦ರ ಅವಧಿಯಲ್ಲಿ ಗೋವೆಯಿಂದ ನಾಟಕ ಕಂಪನಿಗಳನ್ನು ಆಹ್ವಾನಿಸಿ ನಾಟಕ ಕಂಪನಿಗಳನ್ನು ಆಹ್ವಾನಿಸಲಾಗುತ್ತಿತ್ತಂತೆ. ಇದೇ ಕಾಲದಲ್ಲಿ ಕೆಲವು ಮರಾಠಿ ವೃತ್ತಿ ನಾಟಕ ಕಂಪನಿಗಳೂ, ಗರುಡ ಸದಾಶಿವರಾಯರ ನಾಟಕ ಮಂಡಳಿಯೂ ಅಂಕೋಲೆಗೆ ಬಂದದ್ದನ್ನು ಹಿರಿಯ ರಂಗಕಲಾವಿದ ವಸಂತ ಮಹಾಲೆಯವರು ಹೇಳುತ್ತಾರೆ.

ಅಂಕೋಲೆಯ ರಂಗಭೂಮಿಗೆ ಮೂರ್ತರೂಪವನ್ನು ನೀಡಿದ ರಂಗಕರ್ಮಿಗಳಲ್ಲಿ ಎಂ.ಎನ್. ಭಟ್ ಮಾಸ್ತರರು ಅಗ್ರಗಣ್ಯರು. ಭಟ್ ಮಾಸ್ತರರ ಮಾರ್ಗದರ್ಶನದಲ್ಲಿ ಜೈಹಿಂದ್ ಹೈಸ್ಕೂಲಿನ ರಂಗಭೂಮಿ ರಂಗಚಟುವಟಿಕೆಗಳಿಂದ ನಳನಳಿಸತೊಡಗಿತು. ಸ್ವತಃ ಶ್ರೇಷ್ಠ ಕಲಾವಿದರಾಗಿದ್ದ ಭಟ್ ಮಾಸ್ತರರು ತಮ್ಮ ಗರಡಿಯಲ್ಲಿ ಹಲವು ನಟರನ್ನು ಸಿದ್ಧಗೊಳಿಸಿದರು. ಸಂಗೀತ ಅರಿತಿದ್ದ ಕೋಡ್ಕಣಿ ಮಾಸ್ತರರ ಸಹಯೋಗ ಈ ಪ್ರಯೋಗಗಳಿಗೆ ಪೂರಕವಾಗಿ ಒದಗಿಬಂತು. ಲಕ್ಮೇಶ್ವರದ ಗಂಗಾಧರ ನಾಯ್ಕ, ಶ್ರೀಧರ ವಾಜಂತ್ರಿ, ಅಂಕ್ಲೇಕರ್ ಮೊದಲಾದವರು (ಎಲ್ಲರೂ ಶಿಕ್ಷಕರು) ತಮ್ಮ ತಮ್ಮ ಶಾಲೆಗಳಲ್ಲಿ ನಾಟಕಗಳನ್ನು ಆಡಿಸತೊಡಗಿದರು. ಭಟ್ ಮಾಸ್ತರರ ಸತ್ಯ ಹರಿಶ್ಚಂದ್ರ, ಶಹಾಜುದ್ದೀನ್, ಹುಚ್ಚ, ಕೋಡ್ಕಣಿ ಮಾಸ್ತರರ ಬಹಾದ್ದೂರ್ ಗಂಡು, ತೆಂಕಣಕೇರಿ ಕಮಲಾ ಕಾಮತರ 'ಸಾಧ್ವಿ ಸ್ತ್ರೀ' ಪಾತ್ರ, ಶಾಂತಾರಾಮ ಭಟ್ಟರ ವಿಶ್ವಾಮಿತ್ರ. ನಾರದ ಪಾತ್ರಗಳು ಜನಮನದಲ್ಲಿ ಇಂದಿಗೂ ಅಚ್ಚೊತ್ತಿವೆ. ಜೈಹಿಂದ್ ಹೈಸ್ಕೂಲಿನ ರಂಗಭೂಮಿಯಲ್ಲಿ ಅದೇ ಶಾಲೆಯ ಶಿಕ್ಷಕರಾಗಿದ್ದ ಜಿ.ಜೆ. ನಾಯಕರು ಪ್ರಮುಖ ನಟರಾಗಿ ಹೊರಹೊಮ್ಮಿದರು. ಈ ವೇದಿಕೆಯ ಹಲವು ನಾಟಕಗಳಲ್ಲಿ ಅವರು ನಾಯಕ ನಟರಾಗಿ ಅಭಿನಯಿಸಿದರು. ಭಟ್ ಮಾಸ್ತರರು ಹಾಕಿಕೊಟ್ಟ ದಾರಿಯಲ್ಲಿ ಮುಂದೆ ಮಂಗೇಶ ಶೆಟ್ಟಿ ಅವರು ಮುಂದುವರಿದರು. ಸ್ವತಃ ಉತ್ತಮ ನಟರಾಗಿದ್ದ ಮಂಗೇಶ ಶೆಟ್ಟಿ ರಂಗಭೂಮಿಯ ಕುರಿತು ಅಪಾರ ನಿಷ್ಠೆ ಇಟ್ಟುಕೊಂಡವರಾಗಿದ್ದರು. ರಂಗಭೂಮಿ ಅವರ ಕಾಯಕದ ಒಂದು ಭಾಗವೇ ಆಯಿತು.

ಈ ಕಾಲಾವಧಿಯಲ್ಲಿ ಹಲವು ವೃತ್ತಿನಿರತ ಕನ್ನಡ–ಮರಾಠಿ ನಾಟಕ ಕಂಪನಿಗಳು ಅಂಕೋಲೆಗೆ ಬಂದು ವಾರಗಟ್ಟಲೆ ಠಿಕಾಣಿ ಹೂಡಿದ್ದೂ ಇತ್ತು. ಅಂದಿನ ಹವ್ಯಾಸಿ ಯುವಕಲಾವಿದರು ಕಂಪನಿ ನಾಟಕಗಳಿಂದ ಸಾಕಷ್ಟು ಪ್ರೇರಣೆ ಪಡೆದಿರಬಹುದು. ಪರಿಣಾಮವಾಗಿ, ಅಂಕೋಲೆಯಾದ್ಯಂತ ಅಲ್ಲಲ್ಲಿ ಹವ್ಯಾಸಿ ನಾಟಕ ಮಂಡಳಿಗಳು ತಲೆಯೆತ್ತಿದವು. ಜೈಹಿಂದ್ ಹೈಸ್ಕೂಲ್ ರಂಗಭೂಮಿಯಲ್ಲಿ ಕನ್ನಡ, ಮರಾಠಿ ನಾಟಕಗಳೊಂದಿಗೆ ಕೊಂಕಣಿ ನಾಟಕಗಳು ಕೂಡ ಪ್ರದರ್ಶನಗೊಂಡವು. ಭಟ್ ಮಾಸ್ತರರು 'ನಾಟಕ ಕಲಾ ಪ್ರವೀಣ' ಎಂದು ಬಿರುದಾಂಕಿತರಾದುದನ್ನೂ, ಸಂಗೀತ ನಾಟಕ ಅಕಾಡಮಿಯ ಜಿಲ್ಲಾ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸಿದ್ದನ್ನೂ ಇಲ್ಲಿ ಉಲ್ಲೇಖಿಸಬೇಕು.

ನಾಟಕ ಒಂದು ಸಾಮೂಹಿಕ ಕಲೆ. ಕೇವಲ ನಟರಿಂದಲೇ ನಾಟಕವಾಗುವುದಿಲ್ಲ. ಪ್ರಸಾಧನ, ಪರಿಕರಗಳು, ಸಂಗೀತ ಸಾಧನಗಳು ಇತ್ಯಾದಿ ಪೂರಕ ವ್ಯವಸ್ಥೆಗಳು ಅತ್ಯಗತ್ಯ. ಕೆಲವರು ಸ್ವಯಂ ಪ್ರೇರಣೆಯಿಂದ ಈ ಕ್ಷೇತ್ರದಲ್ಲಿ ಪರಿಣತಿಯನ್ನು ಸಾಧಿಸಿದರು. ವಿಠೋಬ ಅಂಕೋಲೇಕರ್ (ಹಾರ್ಮೋನಿಯಮ್), ಶ್ರೀಧರ ವಾಜಂತ್ರಿ (ತಬಲ), ಪುಂಡಲೀಕ ಮಹಾಲೆ (ಪ್ರಸಾಧನ) ಇವರೆಲ್ಲರೂ ಅಂಕೋಲೆಯ ರಂಗಪ್ರಪಂಚದಲ್ಲಿ ಹೆಸರು ಪಡೆದವರು. ಮೊದಮೊದಲು ಪರದೆ ಮತ್ತಿತರ ಪರಿಕರಗಳನ್ನು ಕಾರವಾರದ ಕುರ್ಡೇಕರ ಬಂಧುಗಳು ಒದಗಿಸುತ್ತಿದ್ದರು. ನಂತರದ ದಿನಗಳಲ್ಲಿ ಕುಂಬಾರಕೇರಿಯ ಮೋಹನ ನಾಯ್ಕ ಅವರು ಇದನ್ನೇ ಕಸುಬನ್ನಾಗಿ ಮಾಡಿಕೊಂಡು ಇಂದಿಗೂ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ.

೧೯೪೦ಕ್ಕಿಂತ ಮೊದಲು ನಾಟಕದ ಪಾತ್ರಧಾರಿಗಳ ಮುಖಗಳಿಗೆ 'ಅರದಾಳ'ವೆಂಬ ಕೇಸರಿ ಬಣ್ಣವನ್ನು ಪ್ರಸಾಧನವಾಗಿ ಬಳಸಲಾಗುತ್ತಿತ್ತು. ನಂತರದ ದಿನಗಳಲ್ಲಿ ಪ್ರಯೋಗಶೀಲ ಮನಸ್ಸಿನ ಪುಂಡಲೀಕ ಮಹಾಲೆ ಅವರು ಮೇಕಪ್ ಕಲೆಯಲ್ಲಿ ನೈಜತೆ ತರಲು ವಿವಿಧ ಬಣ್ಣಗಳ ಮಿಶ್ರಣದಿಂದ ಹೊಸಹೊಸ ಬಣ್ಣಗಳನ್ನು ತಯಾರಿಸುವಲ್ಲಿ ಸಫಲರಾದರು. ಅವರ ಸ್ನೇಹಿತನೊಬ್ಬ ಮುಂಬೈಯಿಂದ ತಂದುಕೊಟ್ಟ ಬಣ್ಣದ ಟ್ಯೂಬ್ ಅವರಿಗೆ ಪ್ರೇರಣೆ ನೀಡಿತಂತೆ. ನಾಮ್ಯಾ ಬಾಂದೇಕರ್ (ಯಕ್ಷರಂಗದ ಪ್ರಮುಖ ಪ್ರಸಾಧನ ತಜ್ಞರು) ಪುಂಡಲೀಕ ಮಹಾಲೆಯವರಿಂದಲೇ ತರಬೇತಿ ಪಡೆದರು. ನಾಮ್ಯಾ ನಾಟಕ ಪರದೆಗಳಿಗೆ ವರ್ಣಚಿತ್ರ ಬರೆಯುವಲ್ಲಿ ನಿಪುಣರಾಗಿದ್ದರು. ಬಾಬೂಟಿ ಕೂಡ ಈ ವಿಭಾಗದ ಇನ್ನೋರ್ವ ಪರಿಣತರಾಗಿದ್ದರು.

೧೯೪೫ರ ಸುಮಾರಿಗೆ ಅಂಕೋಲೆಯ ಹನುಮಟ್ಟೆಯಲ್ಲಿ ಕೆಲವು ಹವ್ಯಾಸಿ ಕಲಾವಿದರು ಸೇರಿ ನಾಟಕ ಸಂಘಟನೆಯಲ್ಲಿ ತೊಡಗಿಕೊಂಡರು. ಸುಂದರ ನಾಗ್ವೇಕರ(ಸಂಗೀತ ವಿದುಷಿ ಹೀರಾಬಾಯಿಯವರ ಪುತ್ರ), ರಮಾನಂದ ನಾಗ್ವೇಕರ, ದಿಗಂಬರ ನಾಗ್ವೇಕರ, ಶ್ರೀಮತಿ ಪಿಲ್ಲೂ ನಾಗ್ವೇಕರ ಮೊದಲಾದವರು ಈ ಯೋಜನೆಯ ರೂವಾರಿಗಳಾಗಿದ್ದರು. ಹೀರಾಬಾಯಿ ಬಹುಕಾಲ ಮುಂಬಯಿಯಲ್ಲಿದ್ದು ಸಂಗೀತವನ್ನು ಅಧ್ಯಯನ ಮಾಡಿದ್ದರು. ಈ ಕಲಾವಿದರು ಪ್ರದರ್ಶಿಸಿದ ಮೊದಲ ನಾಟಕ 'ಉಷಾಸ್ವಯಂವರ'. ಸಂಗೀತಪ್ರಧಾನವಾದ ಈ ನಾಟಕಕ್ಕೆ ಅಂಕೋಲೆಯ ಹಿರಿಯ ಹಾರ್ಮೋನಿಯಮ್ ವಾದಕ ಸುಬ್ರಹ್ಮಣ್ಯ ಶೆಟ್ಟಿ ಅವರು ಸಂಗೀತ ನೀಡಿದರು. ಈ ಅವಧಿಯಲ್ಲಿ ಸುಂದರ ನಾಗ್ವೇಕರ್ ನೇತೃತ್ವದಲ್ಲಿ ಅಭಿನಯಿಸಲ್ಪಟ್ಟ ನಾಟಕಗಳ ವಿವರ ಲಭ್ಯವಿರದಿದ್ದರೂ, ೧೯೪೮ರಲ್ಲಿ ಬಂಗಾಲ ಪ್ರಾಂತ್ಯದಲ್ಲಿ ಬರಗಾಲ ಸಂಭವಿಸಿದಾಗ ಬರಪೀಡಿತರ ಸಹಾಯಾರ್ಥ ಅವರು ಸಂಘಟಿಸಿದ 'ಶ್ರೀ ರಾಮಪಾದುಕಾ ಪಟ್ಟಾಭಿಷೇಕ' ನಾಟಕ ಉಲ್ಲೇಖನೀಯ. ಆ ಕಾಲದಲ್ಲಿ ಪ್ರದರ್ಶನಗೊಂಡ ನಾಟಕಗಳೆಲ್ಲವೂ ಸಂಗೀತಪ್ರಧಾನ ನಾಟಕಗಳೇ. ಸುಬ್ರಹ್ಮಣ್ಯ ಶೆಟ್ಟಿ, ಬಾಬೂಲಿ ನಾಗ್ವೇಕರ್ ಅವರುಗಳು ಈ ಭಾಗದಲ್ಲಿ ಪ್ರದರ್ಶನಗೊಂಡ ಅನೇಕ ನಾಟಕಗಳಿಗೆ ಕ್ರಮವಾಗಿ ಹಾರ್ಮೋನಿಯಮ್ ಹಾಗೂ ತಬಲ ಸಾಥ ನೀಡಿದರು.

೧೯೫೨ರಲ್ಲಿ ಸ.ಪ.ಗಾಂವಕರ, ಎಸ್.ವಿ. ಪಿಕಳೆ, ಹಾಗೂ ಯು. ರಾಜಗೋಪಾಲಾಚಾರ್ಯ ಅವರ ಪ್ರಯತ್ನದಿಂದ ಅಂಕೋಲೆಯಲ್ಲಿ ಕರ್ನಾಟಕ ಸಂಘ ಸ್ಥಾಪನೆಗೊಂಡಿತು. ೧೯೫೪ರಲ್ಲಿ ಶಿಕ್ಷಣಾಧಿಕಾರಿಗಳಾಗಿದ್ದ ಆರ್.ಕೆ. ನಾಯಕ, ಸಂಗೀತಜ್ಞ ಪಿ.ವಿ.ಶೆಟ್ಟಿ ಮಾಸ್ತರ್, ಬಹುಮುಖ ಪ್ರತಿಭೆಯ ಜಿ.ಪಿ.ನಾಯಕ, ಸಹೃದಯತೆಯ ಸಾಕಾರ ವಿ.ಜೆ. ನಾಯಕ ಹಾಗೂ ವಾದನತಜ್ಞ ಸುಬ್ರಹ್ಮಣ್ಯ ಶೆಟ್ಟಿ ಮುಂತಾದ ಮಹನೀಯರ ಸಹಯೋಗದಲ್ಲಿ 'ಲಲಿತ ಕಲಾ ಮಂಡಳಿ' ಎಂಬ ಸಂಸ್ಥೆ ಉದಯವಾಯಿತು. ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ವಿ.ಜೆ. ನಾಯಕ ಹಾಗೂ ಜಿ.ಪಿ. ನಾಯಕ ಕರ್ನಾಟಕ ಸಂಘದ ಅಡಿಯಲ್ಲಿ ರಂಗವೇದಿಕೆಯನ್ನು ಹುಟ್ಟುಹಾಕಿದರು. ಈ ಇಬ್ಬರೂ ಮಹನೀಯರು ಪ್ರಮುಖ ಕಲಾವಿದರಾಗಿ ಹಾಗೂ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು. ಭಾವೀಕೇರಿಯ ಎಸ್. ಎನ್. ಶೆಟ್ಟಿ ಹಾಗೂ ಕಾರವಾರ ಮೂಲದ ಟಿ.ಡಿ. ಪತ್ರೇಕರ ನಟರಾಗಿ ಮಿಂಚಿದರು. ಒಂದು ಹಂತದಲ್ಲಿ ಲಲಿತ ಕಲಾ ಮಂಡಳಿ ನಿಷ್ಕ್ರಿಯವಾದರೂ, ಕರ್ನಾಟಕ ಸಂಘವು ಹವ್ಯಾಸೀ ರಂಗಭೂಮಿಯ ನಿರಂತರತೆಯನ್ನು ಕಾಪಿಡುವಲ್ಲಿ ಬಹು ಮಟ್ಟಿಗೆ ಯಶಸ್ವಿಯಾಯಿತು.

೧೯೫೦–೮೫ರ ಅವಧಿ ಅಂಕೋಲೆಯ ಹವ್ಯಾಸಿ ರಂಗಭೂಮಿಯ ಸುವರ್ಣಕಾಲ. ಈ ಅವಧಿಯಲ್ಲಿ ಅಂಕೋಲೆಯ ಹವ್ಯಾಸಿ ರಂಗಕಲಾವಿದರು ಲಕ್ಷ್ಮಣ ಬೇಂದ್ರೆ, ಕೆ. ಗುಂಡಣ್ಣ, ಪರ್ವತವಾಣಿ, ಕುವೆಂಪು, ಕೃಷ್ಣಮೂರ್ತಿ ಪುರಾಣಿಕ ಮುಂತಾದವರು ರಚಿಸಿದ ನಾಟಕಗಳನ್ನು ಆಡಿ ತೋರಿಸಿದರು. ವಿ.ಜೆ. ನಾಯಕ ಅಭಿನಯಿಸಿ, ನಿರ್ದೇಶಿಸಿದ ಅನಕೃ ಅವರ 'ಸ್ವರ್ಣಮೂರ್ತಿ' ನಾಟಕ ಅಪಾರ ಜನಪ್ರಿಯತೆ ಗಳಿಸಿತು. ಇದೇ ಕಾಲಕ್ಕೆ ಕುವೆಂಪು ಅವರ 'ಶೂದ್ರ ತಪಸ್ವಿ'. 'ರಕ್ತಾಕ್ಷಿ', ಕೃಷ್ಣಮೂರ್ತಿ ಪುರಾಣಿಕರ 'ಸೈರಂಧ್ರಿ', 'ಮಗನ ಗೆಲುವು' ಮಾಸ್ತಿಯವರ 'ಯಶೋಧರ', ಶಿವರಾಮ ಕಾರಂತರ 'ಬಿತ್ತಿದ ಬೆಳೆ' ನಾಟಕಗಳು ರಂಗಮಂಚವನ್ನೇರಿದವು. 'ಮದುವೆಯ ಪತ್ತಲ', 'ಕಲ್ಯಾಣಿ–ನನ್ನ ಹೆಂಡತಿ'ಯಂತಹ ಕಿರುನಾಟಕಗಳು ಜನರ ಮನಸೂರೆಗೊಂಡವು.

೧೯೬೮ರಲ್ಲಿ ಜಿ.ಸಿ.ಕಾಲೇಜಿನ ಇಂಗ್ಲಿಷ್ ಅಧ್ಯಾಪಕ ಪ್ರೊ. ದಿವಸ್ಪತಿ ಹೆಗಡೆ ಗಿರೀಶ ಕಾರ್ನಾಡರ 'ತುಘಲಕ' ನಾಟಕವನ್ನು ನಿರ್ದೇಶಿಸಿ ಕಾಲೇಜು ರಂಗಭೂಮಿಯಲ್ಲಿ ಕ್ರಾಂತಿಕಾರಿ ಪರಿವರ್ತನೆಯನ್ನು ತಂದರು. ಅಲ್ಲಿಂದ ಮುಂದೆ ಅಂಕೋಲೆಯ ರಂಗಭೂಮಿ ಹೊಸ ಅಲೆಯ ನಾಟಕಗಳತ್ತ ಹೊರಳಿತು. ಎ.ಎಸ್ ಮೂರ್ತಿ ಅವರ 'ಕಟ್ಟು' ನಾಟಕ ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಗಳಿಸಿ ಮುಂದೆ ರಾಜ್ಯಮಟ್ಟದಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಂಡಿತು. ಚಂದ್ರಶೇಖರ ಕಂಬಾರ ಅವರ 'ಜೈಸಿದ್ನಾಯಕ' ಅಂಕೋಲಾ ಮತ್ತು ಕಾರವಾರಗಳಲ್ಲಿ ಪ್ರದರ್ಶನ ಕಂಡವು. ಮೋಹನ ಹಬ್ಬು ಹಿಂದಿಯಿಂದ ಕನ್ನಡಕ್ಕೆ ಭಾಷಾತರಿಸಿದ 'ಒಂದು ಕತ್ತೆಯ ಕಥೆ' (ಹಿಂದೀ ಮೂಲ: ಶರದ್ ಜೋಶಿ) ಅಂಕೋಲಾ, ಭಟಕಳ ಹಾಗೂ ಮಂಚೀಕೇರಿಗಳಲ್ಲಿ ಅಭೂತಪೂರ್ವ ಯಶಸ್ಸು ಗಳಿಸಿತು. ಹಬ್ಬು ಅವರು ಅನುವಾದಿಸಿ, ನಿರ್ದೇಶಿಸಿದ 'ತೀರ್ಪು' ಹಾಗೂ 'ಧೀರ' ಏಕಾಂಕಗಳು, ಅವರದೇ ನಿರ್ದೇಶನದ, ಅಜ್ಜೀಕಟ್ಟೆಯ ಆಗೇರ ದಲಿತ ಸಮುದಾಯದ ಹುಡುಗರು ಅಭಿನಯಿಸಿದ ಕಿಟ್ಟೀಕತೆ' (ರಚನೆ: ಚಂದ್ರಶೇಖರ ಕಂಬಾರ), ಮತ್ತು 'ಮಾ ನಿಷಾದ' (ರಚನೆ: ಗಿರೀಶ

ಕಾರ್ನಾಡ) ಅಂಕೋಲೆಯ ನೆಲದಲ್ಲಿ ಪ್ರದರ್ಶನಗೊಂಡ ಗಮನಾರ್ಹ ನಾಟಕಗಳು.

ಅಂಕೋಲೆಯ ರಂಗಭೂಮಿಯಲ್ಲಿ ಬೆಳಕಿಗೆ ಬಂದು ಮಿಂಚಿದ ನಟರ ಯಾದಿ ಸುದೀರ್ಘವಾಗಿದೆ. ಎಂ.ಎನ್. ಭಟ್, ವಿ.ಜೆ. ನಾಯಕ, ವಿಷ್ಣು ನಾಯ್ಕ, ಶ್ಯಾಮ ಹುದ್ದಾರ, ಶಂಕರ ಕೇಣಿ, ಎಸ್.ಎನ್. ಶೆಟ್ಟಿ, ಸದಾನಂದ ಮಹಾಲೆ, ಗೋವಿಂದ ಮಹಾಲೆ, ಮಂಗೇಶ ಶೆಟ್ಟಿ, ಜಿ.ಜೆ. ನಾಯಕ, ವಸಂತ ಮಹಾಲೆ, ಕೇಶವ ತೊರ್ಕೆ, ವೈ.ಟಿ. ನಾಯ್ಕ, ಆರ್.ಎಸ್.ಶೆಟ್ಟಿ, ರಾಮಕೃಷ್ಣ ಗುಂದಿ, ಮೋಹನ ಹಬ್ಬು, ಡಿ.ಕೆ. ಶಹಾಪುರಕರ, ಆರ್.ಕೆ. ನಾಯಕ, ಕೃಷ್ಣ ನಾಯಕ ಹಿಚಕಡ, ಶಾಂತಾರಾಮ ನಾಯಕ ಹಿಚಕಡ, ಪ್ರಕಾಶ ಕಡಮೆ, ಇನಾಯತ್ ಉಲ್ಲಾ ಸೈಯದ್, ಶ್ರೀಮತಿ ಮುಕ್ತಾ ನಾಯಕ, ಮಾಲತಿ ನಾಯಕ, ಅನಸೂಯಾ ತೊರ್ಕೆ, ಪೂರ್ಣಿಮಾ ಗಾಂವಕರ, ವಿಮಲಾ ತೊರ್ಕೆ, ಜಯಾ ಶೆಡಗೇರಿ, ತಾರಾ ಭಾಗ್ವತ್–ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತದೆ.

ಮೂಲತಃ ಗ್ರಾಮೀಣ ಭಾಗವಾಗಿದ್ದ – ಇಂದು ಅಂಕೋಲೆಯ ಉಪನಗರವಾದ – ಅಂಬಾರಕೊಡ್ಲದಲ್ಲಿ ವಿಷ್ಣು ನಾಯ್ಕರು ಸ್ಥಾಪಿಸಿದ 'ಜನತಾ ನಾಟ್ಯ ಮಂಡಳಿ' ಅಂಕೋಲೆಯ ರಂಗಭೂಮಿಗೆ ಮಹತ್ವದ ಕೊಡುಗೆ ನೀಡಿತು. ೧೯೬೨ರಲ್ಲಿ ಪ್ರಾರಂಭಗೊಂಡ ಈ ಮಂಡಳಿ ೨೪ ವರ್ಷಗಳ ಕಾಲ ಅಂಬಾರಕೊಡ್ಲದ ಬಾಳ ಮರದ ಅಡಿಯಲ್ಲಿ ನಿರ್ಮಿಸಲಾಗುತ್ತಿದ್ದ ರಂಗಮಂಚದಲ್ಲಿ ವರ್ಷಕ್ಕೊಂದು ನಾಟಕವನ್ನು ಪ್ರದರ್ಶಿಸುತ್ತ ಬಂತು. ವಿಶೇಷವೇನೆಂದರೆ, ವಿಷ್ಣು ನಾಯ್ಕರೇ ಈ ನಾಟಕಗಳನ್ನು ಬರೆದು ನಿರ್ದೇಶಿಸಿದರು. ನಾಟಕದ ವಸ್ತುಗಳು ಸಮಕಾಲೀನ ಸಮಸ್ಯೆಗಳನ್ನು ಆಧರಿಸಿ ಇರುತ್ತಿದ್ದವು. ಪ್ರಗತಿಪರ ದೃಷ್ಟಿಕೋನವುಳ್ಳ ಈ ನಾಟಕಗಳು ಕಂಪನಿ ಮಾದರಿಯ ಪ್ರೋಸೀನಿಯಂ ರಂಗಭೂಮಿಯ ರಂಗಸಜ್ಜಿಕೆಯಲ್ಲಿಯೇ ಪ್ರದರ್ಶಿಸಲ್ಪಟ್ಟವು. ವಿಷ್ಣು ನಾಯ್ಕ ಮತ್ತು ಅವರ ಸೋದರರಾದ ರಾಮ, ಅನಂತ ಇವರೇ ಪ್ರಮುಖ ನಟರಾಗಿದ್ದ ಈ ನಾಟಕಗಳಲ್ಲಿ ಸ್ಥಳೀಯ ಹಾಲಕ್ಕಿ ಸಮಾಜದ ನಟರೂ ಪಾತ್ರ ವಹಿಸಿದರು ಎಂಬುದು ಉಲ್ಲೇಖನೀಯ. ಬುದ್ದು ಗೌಡ, ಮಂಗೇಶ ಗೌಡ, ದೇವು ಗೌಡ, ಯಂಕು ಗೌಡ ಮುಂತಾದ ನಟರು ಬೆಳಕಿಗೆ ಬಂದಿದ್ದು ಇದೇ ರಂಗಮಂಚದಲ್ಲಿ. ಅಂಬಾರಕೊಡ್ಲದ ಸುತ್ತಣ ಗ್ರಾಮೀಣ ಭಾಗಗಳಲ್ಲಿ ರಂಗಭೂಮಿ ಕ್ರಿಯಶೀಲವಾಗಿರುವಂತೆ ನೋಡಿಕೊಂಡ ವಿಷ್ಣು ನಾಯ್ಕ ಮತ್ತು ಅವರ ಸಹೋದರರ ರಂಗಸೇವೆ ಅನನ್ಯವಾದುದು. ಈ ನಾಟಕಗಳನ್ನು ನೋಡಲು ಜನ ಕಿಕ್ಕಿರಿದು ನೆರೆಯುತ್ತಿದ್ದುದನ್ನು ನೆನೆದುಕೊಂಡರೆ ಈ ವೇದಿಕೆಯ ಸಾಧನೆಯ ಅರಿವಾಗುತ್ತದೆ. ಇದೇ ವೇದಿಕೆ ೧೯೮೦ರ ದಶಕದಲ್ಲಿ ಬೀದಿ ನಾಟಕಗಳತ್ತ ಗಮನ ಹರಿಸಿತು. ಈ ವೇದಿಕೆಯ ಕಾರ್ಯಕಲಾಪಗಳಲ್ಲಿ ಹಿರಿಯ ನಟರಾಗಿದ್ದ ಮಂಗೇಶ ಶೆಟ್ಟಿ ನೀಡಿದ ಸಹಕಾರ ಹಾಗೂ ಮಾರ್ಗದರ್ಶನಗಳನ್ನು ಇಲ್ಲಿ ನೆನೆಯಬೇಕು. ಅಭಿಜಾತ ಕಲಾವಿರಾಗಿದ್ದ ಅವರು ವಿಷ್ಣು ನಾಯ್ಕರ ಬಹುತೇಕ ಎಲ್ಲ ನಾಟಕಗಳಲ್ಲಿ ನಟರಾಗಿ ಕಾರ್ಯ ನಿರ್ವಹಿಸಿದ್ದಾರೆ. ವಿಷ್ಣು ನಾಯ್ಕರ ಮಾತುಗಳಲ್ಲಿ...'೨೪ ವರ್ಷಗಳಲ್ಲಿ ೨೧ ನಾಟಕಗಳನ್ನು ನಾನೇ ಬರೆದು, ನಿರ್ದೇಶಿಸಿದ್ದು ಪ್ರತಿವರ್ಷ ಹೊಸ ಕಥಾವಸ್ತು ಇರುತ್ತಿದ್ದುದರಿಂದ ಮತ್ತು ಅಂಬಾರಕೊಡ್ಲದ ನಾಟಕಗಳು ಕಂಪನಿಯ ಜನಪ್ರಿಯ ನಾಟಕಗಳಿಗಿಂತ ಭಿನ್ನ ನಡಿಗೆ ಇರುತ್ತಿದ್ದುದರಿಂದ ವರ್ಷದಿಂದ ವರ್ಷಕ್ಕೆ ನೋಡುವವರ ಸಂಖ್ಯೆ ಹೆಚ್ಚಾಗುತ್ತ ಸಾಗಿತ್ತು. ಪಾತ್ರಧಾರಿಗಳಾಗಿ ಆರಂಭಕಾಲದಲ್ಲಿ ಅಂಬಾರಕೊಡ್ಲದ ಕಲಾವಿದರೇ ಇರುತ್ತಿದ್ದರೆ, ಕಾಲಕ್ರಮೇಣ ಸ್ವಯಂ ಪ್ರೇರಣೆಯಿಂದ ಬೇರೆಬೇರೆ ಊರುಗಳ ಕಲಾವಿದರು ಬಂದು ಇಲ್ಲಿ ಪಾತ್ರ ಮಾಡಿದ್ದಿದೆ. ಧಾರೇಶ್ವರದ ನಾಗಪ್ಪಯ್ಯ, ಮತ್ತು ಶಂಕರ ಉಪ್ಪಾರ, ದಾಂಡೇಲಿಯ ಜಾಹೀದಾ, ಕಲಘಟಗಿಯ ಸುಮತಿ, ಜಿ.ಸಿ.ಕಾಲೇಜಿನ ರಾಮಕೃಷ್ಣ ಗುಂದಿ, ಕೇಣಿಯ ಜಿ.ಬಿ. ಕೇಣೀಕರ, ಮಂಜುಗುಣಿಯ ತಾಂಡೇಲ, ಬೊಬ್ರುವಾಡದ ದುರ್ಗ ನಾಯ್ಕ, ಕನಸಿಗದ್ದೆಯ ಕಮಲಾಕರ ನಾಯ್ಕ, ಕೆರೆಕಟ್ಟೆಯ ಮಾರುತಿ ನಾಯ್ಕ, ವಂದಿಗೆಯ ಮೋಹನ ಹಬ್ಬು ಮುಂತಾವರು ಪಾತ್ರ ನಿರ್ವಹಿಸಿದ್ದಿದೆ. ಅರವತ್ತು–ಎಪ್ಪತ್ತರ ದಶಕದಲ್ಲಿ ಹೆಣ್ಣು ಮಕ್ಕಳು ನಾಟಕದಲ್ಲಿ ಬಣ್ಣ ಹಚ್ಚಿ ಕಾಣಿಸಿಕೊಳ್ಳುವುದು ಬಹಳ ಅಂದರೆ ಬಹಳ ಕಡಿಮೆ. ... ಎಪ್ಪತ್ತರ ದಶಕದಲ್ಲಿ ಮೊದಲೆಂಬಂತೆ, ನಾನು ಬರೆದ 'ರಾಕ್ಷಸರು' ಎಂಬ ನಾಟಕದಲ್ಲಿ ಫಣಿಯಮ್ಮ ಚಲನಚಿತ್ರಖ್ಯಾತಿಯ ಅಂಕೋಲೆಯ ಹುಡುಗಿ ಪೂರ್ಣಿಮಾ ಗಾಂವಕರ ಪಾತ್ರ ವಹಿಸಿದ್ದಳು. ಅವಳಿಂದ ಸ್ಫೂರ್ತಿಪಡೆದವರ ಹಾಗೆ ಅವಳೊಂದಿಗೆ ನನ್ನ ಊರಿನವರೇ ಆಗಿದ್ದ ಮಂಗಲಾ ರಾಯ್ಕರ್ ಮತ್ತು ಮುಕ್ತಾ ಶೆಟ್ಟಿ ಪಾತ್ರ ಮಾಡಿದ್ದುಂಟು.'

೧೯೮೦ರ ದಶಕದಲ್ಲಿ ಬೀದಿ ನಾಟಕ ಜನಪ್ರಿಯ ಮಾಧ್ಯಮವಾಗಿ ಮೂಡಿಬಂತು. ಕರ್ನಾಟಕ ಸಂಘ

ಈ ಚಳುವಳಿಯೊಂದಿಗೆ ಕೈ ಜೋಡಿಸಿತು. ಮೈಸೂರಿನ ನಿರ್ದೇಶಕ ಶ್ರೀನಿವಾಸ್ ಇದಕ್ಕೆ ಚಾಲನೆ ನೀಡಿದರು. ಕರ್ನಾಟಕ ಸಂಘದ ಕಲಾವಿದರು 'ಬಸಂತ' (ಬಂಡಾಯ ಸಂಘಟನಾ ತಂಡ) ಎಂಬ ವೇದಿಕೆಯನ್ನು ಕಟ್ಟಿಕೊಂಡು ಅನೇಕ ಬೀದಿ ನಾಟಕಗಳನ್ನು ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ – ಆಡಿ ತೋರಿಸಿದರು. 'ರೇಶನ್ ಕಾರ್ಡ್', 'ಸರಾಯಿ ಸೂರಪ್ಪ', 'ವಂದೇ ಮಾತರಮ್', 'ಕತ್ತೇಮೂತಿ ಪ್ರಕರಣ', 'ಸಾವ ಸುತ್ತ', 'ಒಂದು ಅಂಗೈಯ ಕತೆ' ಮುಂತಾದವು 'ಬಸಂತ' ಪ್ರದರ್ಶಿಸಿದ ಬೀದಿನಾಟಕಗಳು. ಇದೇ ಕಾಲಕ್ಕೆ ವಿಷ್ಣು ನಾಯ್ಕರು ತಮ್ಮದೇ ಆದ 'ರಾಘವೇಂದ್ರ ರಂಗಸಂಗ' ಎಂಬ ವೇದಿಕೆಯನ್ನು ದರ ಅಡಿಯಲ್ಲಿ ಹುಟ್ಟುಹಾಕಿ ಬೀದಿನಾಟಕಗಳನ್ನು ಆಡಿಸತೊಡಗಿದರು.

೧೯೬೦ರ ಆಸುಪಾಸಿನಲ್ಲಿ ಪುಂಡಲೀಕ ಮಹಾಲೆಯವರ ಕುಟುಂಬ 'ಕಾಮಾಕ್ಷಿ ನಾಟಕ ಮಂಡಳಿ'ಯನ್ನು ಹುಟ್ಟು ಹಾಕಿತು. ಮಹಾಲೆ ಕುಟುಂಬದ ಸದಸ್ಯರೇ ಮಂಡಳಿಯ ನಟನಟಿಯರು. ಹಾರ್ಮೋನಿಯಮ್, ತಬಲ, ರಂಗಸಜ್ಜಿಕೆ, ಪ್ರಸಾಧನ– ಎಲ್ಲದರಲ್ಲಿಯೂ ಮಹಾಲೆ ಬಂಧು–ಭಗಿನಿಯರೆ! ಹರಿ ಮಹಾಲೆಯವರ ತಬಲ, ರಾಜ್ಯಪ್ರಶಸ್ತಿವಿಜೇತ ಗಜಾನನ ಮಹಾಲೆಯವರ ಹಾರ್ಮೋನಿಯಮ್, ಪ್ರೇಮಾನಂದ ಮಹಾಲೆ ಮತ್ತು ಶಾಂತಾರಾಮ ಮಹಾಲೆ ಅವರ ಹಾಸ್ಯಪಾತ್ರಗಳು, ವಸಂತ ಮಹಾಲೆಯವರ ನಿರ್ದೇಶನ, ಪಂಡಲೀಕ ಮಹಾಲೆಯವರ ಮೇಕ್–ಅಪ್! ಈ ಮಂಡಳಿ ರಕ್ತದೀಪ, ಸಹೋದರ, ಮಾನವತಿ, ತವರುಮನೆ ಮುಂತಾದ ನಾಟಕಗಳನ್ನು ಅಂಕೋಲೆಯಲ್ಲಷ್ಟೇ ಅಲ್ಲ, ಹುಬ್ಬಳ್ಳಿ, ಧಾರವಾಡ, ಶಿರಸಿ ಮುಂತಾದ ಸ್ಥಳಗಳಲ್ಲಿ ಪ್ರದರ್ಶಿಸಿ ಜಯಭೇರಿ ಬಾರಿಸಿತು. ಶಾಂತಾರಾಮ ಮಹಾಲೆಯವರ ಉತ್ತರಭೂಪ ಪಾತ್ರ ಅತ್ಯಂತ ಜನಪ್ರಿಯವಾಯಿತು.

ನೆನೆಯಲೇಬೇಕಾದ ಅಂಕೋಲೆಯ ಇನ್ನೋರ್ವ ಖ್ಯಾತ ನಟರೆಂದರೆ ಕೇಶವ ತೊರ್ಕೆ. ಹಲವಾರು ವರ್ಷಗಳಲ್ಲಿ ವೃತ್ತಿ ನಾಟಕ ಕಂಪನಿಗಳಲ್ಲಿ ಕೆಲಸ ಮಾಡಿದ ಈ ನಟ ಒಂದು ಹಂತದಲ್ಲಿ ಅದನ್ನು ತ್ಯಜಿಸಿ ಅಂಕೋಲೆಯಲ್ಲಿ ನೆಲೆ ನಿಂತರು. ಅಂಕೋಲೆಯಲ್ಲಿ ಸಂಘಟಿಸಲಾದ ಹಲವು ನಾಟಕಗಳಲ್ಲಿ ಪಾಲ್ಗೊಂಡರು. ಹಾಸ್ಯ ಪಾತ್ರಗಳಲ್ಲಿ ಮಿಂಚಿದ ಕೇಶವ ತೊರ್ಕೆ ಅವರ ಅಭಿನಯವನ್ನು ಜನ ಈಗಲೂ ನೆನೆಸಿಕೊಳ್ಳುತ್ತಾರೆ.

'ನುಡಿಜೇನು' ಸಂಪಾದಕರಾಗಿದ್ದ ಬಿ. ಹೊನ್ನಪ್ಪ ಇನ್ನೋರ್ವ ರಂಗಕಲಾವಿದರು. ಮೂಲತಃ ಜಾನಪದ ಹಾಡುಗಳ ಗಾಯಕರಾಗಿದ್ದ ಅವರು ಬಾಲ್ಯದಿಂದಲೇ ನಾಟಕಗಳಲ್ಲಿ ಬಣ್ಣ ಹಚ್ಚಿದವರು. 'ಬಾಲ ಕಬೀರ', 'ನಾರೀಪರೀಕ್ಷೆ' (ರಚನೆ ಎನ್. ಆರ್. ನಾಯಕ), 'ಪಾಣಿಗ್ರಹಣ' (ರಚನೆ: ಆಚಾರ್ಯ ಅತ್ರೆ) ಮೊದಲಾದ ನಾಟಕಗಳಲ್ಲಿ ಭಾಗವಹಿಸಿದ ಹೊನ್ನಪ್ಪ ೧೯೬೦–೬೨ರ ಅವಧಿಯಲ್ಲಿ ಶ್ರೀ ಚೆನ್ನಗಿರಿ ಆರಾಧ್ಯರ 'ಕಮಲ ಕಲಾ' ಮಂಡಳಿಯಲ್ಲಿ ನಟರಾಗಿ ಸೇರಿಕೊಂಡರು. ಆ ಕಂಪನಿಯಲ್ಲಿದ್ದ ಮೂರು ವರ್ಷಗಳಲ್ಲಿ ಅವರು ನಾರದ, ಕೃಷ್ಣ ಮುಂತಾದ ಪಾತ್ರಗಳನ್ನು ನಿರ್ವಹಿಸಿ 'ಶೃಂಗಾರ ನಟ' ಎಂಬ ಬಿರುದಿಗೆ ಪಾತ್ರರಾದರು. ಸುಭದ್ರಾ ಪರಿಣಯ, ದೇವದಾಸಿ, ರಾಜಾ ವಿಕ್ರಮ ಮೊದಲಾದ ನಾಟಕಗಳಲ್ಲಿ ಅವರು ನಟರಾಗಿ ಮಿಂಚಿದರೆ, ಅಂಕೋಲೆಯಲ್ಲಿ ನೆಲೆಗೊಂಡ ನಂತರವೂ ಹಲವು ನಾಟಕಗಳಲ್ಲಿ ಪಾತ್ರ ವಹಿಸಿದರು.

೧೯೬೬ರಲ್ಲಿ ಅಂಕೋಲೆಯಲ್ಲಿ ಗೋಖಲೆ ಕಾಲೇಜು ಪ್ರಾರಂಭಗೊಂಡಿತು. ಇದರೊಂದಿಗೆ ಅಂಕೋಲೆಯ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಆಯಾಮವೊಂದು ಸೇರಿಕೊಂಡಂತಾಯಿತು. ತತ್ಕಾಲೀನ ಪ್ರಾಚಾರ್ಯ ಕೆ.ಜಿ. ನಾಯಕರ ಪ್ರೇರಣೆ, ಪ್ರೋತ್ಸಾಹಗಳಿಂದ ಕಾಲೇಜಿನ ನಾಟಕರಂಗ ಗರಿಗೆದರಿ ನಿಂತಿತು. ಪ್ರೊ. ದಿವಸ್ಪತಿ ಹೆಗಡೆ ಅವರ ನಿರ್ದೇಶನದ ಗಿರೀಶ ಕಾರ್ನಾಡ ನಾಟಕ 'ತುಘಲಕ' ಅಭೂತಪೂರ್ವ ಯಶಸ್ಸು ಪಡೆಯಿತು. ಇದೇ ವೇದಿಕೆಯಲ್ಲಿ ಪ್ರೊ. ಮೋಹನ ಹಬ್ಬು ಅವರ ನಿರ್ದೇಶನದಲ್ಲಿ ಶ್ರೀರಂಗರ 'ಸಂಧ್ಯಾಕಾಲ', ಲಂಕೇಶರ 'ದೊರೆ ಈಡಿಪಸ್' ಹಾಗೂ 'ಪೋಲೀಸರಿದ್ದಾರೆ, ಎಚ್ಚರಿಕೆ!' ಡಾ.ಎಚ್.ಕೆ ರಂಗನಾಥರ 'ರಕ್ಷತಾ', ಜೀವಿ ಕುಲಕರ್ಣಿ ಅವರ 'ಎಲ್ಲಿದೆ ನರಕ?' ಬೇಲುರು ಕೃಷ್ಣಮೂರ್ತಿ ಅವರ 'ಕಂಬನಿ' ಮುಂತಾದ ನಾಟಕಗಳು ಪ್ರದರ್ಶನಗೊಂಡವು. ಕಾಲೇಜಿನ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಜೊತೆಗೂಡಿ ಟಿ.ಪಿ.ಕೈಲಾಸಂ ಅವರ 'ಬಂಡವಾಳವಿಲ್ಲದ ಬಡಾಯಿ' ನಾಟಕವನ್ನು ಯಶಸ್ವಿಯಾಗಿ ಆಡಿದರು. 'ಶಹಾಜಹಾನ್ ನಾಟಕವನ್ನು ವಿದ್ಯಾರ್ಥಿನಿಯರೇ ನಿರ್ವಹಿಸಿದರು. ಕೊಂಕಣಿ ಭಾಷಿಕ ವಿದ್ಯಾರ್ಥಿ–ವಿದ್ಯಾರ್ಥಿನಿಯರು 'ಬುಕುಲ್ ಸನ್ಯಾಸಿ' ಎಂಬ ಕೊಂಕಣಿ ಹಾಸ್ಯನಾಟಕವನ್ನು ಅಭಿನಯಿಸಿದರು. ನಾಟಕಗಳಿಗೆಂದೇ ಕಾಲೇಜಿನಲ್ಲಿ

'ಅಭಿನಯ ಮಂಟಪ' ಎಂಬ ಹೆಸರಿನ ವೇದಿಕೆ ಹುಟ್ಟಿಕೊಂಡಿತು.

೧೯೭೦ರ ದಶಕದಲ್ಲಿ ವಸಂತ ಮಹಾಲೆ, ವಾಸುದೇವ ಶಾನಭಾಗ ಮತ್ತು ವಿನಯ ಫಾತರ್‌ಫೆಕರ್ ಮೊದಲಾದ ರಂಗಾಸಕ್ತರು ಸೇರಿ 'ಮಿತ್ರ ಕಲಾ ಮಂಡಳಿ' ಎಂಬ ನೂತನ ಹವಾಸೀ ರಂಗವನ್ನು ಹುಟ್ಟು ಹಾಕಿದರು. ಈ ವೇದಿಕೆಯ ಅಡಿಯಲ್ಲಿ 'ಮನೆ ಮಾಲಿಕ' (ಕನ್ನಡ), 'ದೆವಾಲಿ ತಕ್ರಾರ್' (ಕೊಂಕಣಿ), 'ಚಲ್ಲಿ ದಿನಾ' (ಕೊಂಕಣಿ) ಮುಂತಾದ ನಾಟಕಗಳು ಪ್ರದರ್ಶನಗೊಂಡವು. ಬಡಗೇರಿಯ ಸದಾನಂದ ಮಹಾಲೆ ಹಾಗೂ ಗೋವಿಂದ ಮಹಾಲೆ ಅಂಕೋಲಾ ರಂಗಭೂಮಿಯ ಹಿರಿಯ ಕಲಾವಿದರು. ಉತ್ತಮ ರಂಗನಟರಾಗಿದ್ದ ಈ ಸೋದರರು ಹಲವು ನಾಟಕಗಳನ್ನು ಸಂಘಟಿಸಿ ನಟಿಸಿದರು.

ಇಂದಿಗೂ ಅಂಕೋಲೆಯ ಸುತ್ತಣ ಹಳ್ಳಿಗಳಲ್ಲಿ ಆಗಾಗ ನಾಟಕಗಳು ನಡೆಯುತ್ತಿರುತ್ತವೆ. ಊರ ಉತ್ಸಾಹಿ ನಟರು ವರ್ಷಕ್ಕೊಮ್ಮೆ ನಾಟಕಗಳನ್ನು ಆಡುತ್ತಾರೆ. ಆದರೆ, ಅವೆಲ್ಲವೂ ಕಂಪನಿ ನಾಟಕಗಳು. ಮನೋರಂಜನೆಯೇ ಪ್ರಧಾನ ಅಂಶವಾಗಿರುವ ಈ ನಾಟಕಗಳಲ್ಲಿ ಪ್ರಯೋಗಶೀಲತೆ ಕಡಿಮೆ.

ರಂಗಕೃತಿಗಳು

ಸಾಹಿತ್ಯದ ಇತರ ಕ್ಷೇತ್ರಗಳ ಕೃತಿಗಳ ಸಂಖ್ಯಾಮಾನದಲ್ಲಿ ರಂಗಕೃತಿಗಳ ಸಂಖ್ಯೆ ಕಡಿಮೆಯೇ ಸರಿ. ಅಂಕೋಲೆಯ ನೆಲದಲ್ಲಿ ಬೆಳಕಿಗೆ ಬಂದ ರಂಗಕೃತಿಗಳ ಸಂಖ್ಯೆ ತೀರಾ ಕಡಿಮೆ ಎನ್ನಬಹುದು. ಕಾರಣ ಸ್ಪಷ್ಟವಾಗಿಯೇ ಇದೆ. ರಂಗಕೃತಿಯ ನಿರ್ಮಿತಿಗೆ ತಕ್ಕ ಮನೋಭೂಮಿಕೆಯು ಅಗತ್ಯವಿದೆ. ರಂಗಕೃತಿಯೊಂದರ ಸಾರ್ಥಕತೆ ಇರುವುದು ಅದು ರಂಗಭೂಮಿಯಲ್ಲಿ ಪ್ರದರ್ಶನಗೊಂಡಾಗ ಮಾತ್ರ. ಅದು ಕೇವಲ ಓದಬಹುದಾದ ಕೃತಿಯಾಗುವುದನ್ನು ಮೀರಿ 'ನಾಟಕ'ವಾಗಬೇಕು. ಅಂದರೆ, ಅದು ನಟನೆಯ ಭಾಷೆಗೆ ಒಗ್ಗಿಕೊಳ್ಳಬೇಕು. ರಂಗಕೃತಿಕಾರ ಎಂದೆನಿಸಿಕೊಳ್ಳಬೇಕಾದರೆ ಆತನಿಗೆ ರಂಗಭೂಮಿಯ ವ್ಯಾಕರಣದ ಪರಿಚಯ ಇರಬೇಕಾದುದು ಅತ್ಯಗತ್ಯ. ರಂಗಕೃತಿಯ ಹೆಸರಿನಲ್ಲಿ ಪ್ರಕಟಗೊಂಡ ಎಷ್ಟೋ ಕೃತಿಗಳು ರಂಗಭೂಮಿಯಲ್ಲಿ ಪ್ರಕಟಗೊಳ್ಳದೇ ಕೇವಲ ಬರೆಹದಲ್ಲಿ ಕಣ್ಮರೆಯಾದ ಎಷ್ಟೋ ಕೃತಿಗಳಿವೆ ಎಂಬುದನ್ನು ಗಮನಿಸಬಹುದು.

ಅಂಕೋಲೆಯ ರಂಗಕೃತಿಕಾರರ ಸಂಖ್ಯೆ ಬೆರಳೆಣಿಕೆಯದು. ಅವರಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿ ಮಾಡಿರುವ ವಿಷ್ಣು ನಾಯ್ಕ ಅಗ್ರಗಣ್ಯರು. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ಅವರು ರಂಗಭೂಮಿಯ ಗೀಳನ್ನು ಹಚ್ಚಿಕೊಂಡವರು. ಆರನೆಯ ತರಗತಿಯಲ್ಲಿ ಓದುತ್ತಿದ್ದಾಗ ಅವರು ಸಾರ್ವಜನಿಕ ವೇದಿಕೆಯಲ್ಲಿ ಕಾಣಿಸಿಕೊಂಡು 'ಭೀಮಸೇನ'ನಾಗಿ ಕಾಣಿಸಿಕೊಂಡು ಒಂದು ರೂಪಾಯಿ ಬಹುಮಾನ ಗಳಿಸಿದವರು. ನಾಟಕಗಳಲ್ಲಿ ನಟನಾಗಿ, ನಿರ್ದೇಶಕರಾಗಿ, ಜೊತೆಗೆ ರಂಗಕೃತಿಕಾರ/ನಾಟಕಕಾರರಾಗಿ ವಿಷ್ಣು ನಾಯ್ಕ ರಂಗಭೂಮಿಗೆ ೫೦ ವರ್ಷಗಳ ಕಾಲ ಅಪೂರ್ವವಾದ ಸೇವೆ ಸಲ್ಲಿಸಿದ ಬಗ್ಗೆ ದಾಖಲೆ ಇದೆ. (ನೋಡಿ: 'ಅಂಬಾರ', ಪುಟ ೧೧೭)

ನಾಟಕರಚನೆಯ ಬಗೆಗೆ ವಿಷ್ಣು ನಾಯ್ಕ ಅವರಿಗೆ ತಮ್ಮದೇ ಆದ ನಿಲುಮೆ ಇತ್ತು. ಅವರೇ ಹೇಳಿದಂತೆ, 'ನಾನು ನಾಟಕಗಳನ್ನು ಬರೆಯುವುದು ಕೇವಲ ಮನರಂಜನೆಗಾಗಿ ಅಲ್ಲ; ಜನಶಿಕ್ಷಣಕ್ಕಾಗಿ ಎಂಬುದನ್ನು ನನ್ನೊಳಗಡೆ ಮೊದಲೇ ಸ್ಪಷ್ಟವಾಗಿ ಸ್ಪಷ್ಟ ಪಡಿಸಿಕೊಂಡಿದ್ದೆ. ದಲಿತರಿಗೆ ಒಂದು ಕಾಲದಲ್ಲಿ ಗೆರಟೆಯಲ್ಲಿ ಚಹ ಕೊಡುತ್ತಿದ್ದುದನ್ನು ನಾನು ಕಂಡವನಿದ್ದೆ. ... ನಾನು ಆಡುತ್ತಿದ್ದ ಅರವತ್ತು–ಎಪ್ಪತ್ತರ ದಶಕಗಳಲ್ಲಿ ಆ ಪ್ರಮಾಣದಲ್ಲಿ ಈ ಪದ್ಧತಿ ಇಲ್ಲದಿದ್ದರೂ, ಮಡಿ–ಮೈಲಿಗೆ ಯ ಅಸಹನೀಯ ವಾತಾವರಣ ನಮ್ಮ ಸುತ್ತ ಇದ್ದುದನ್ನು ಬಲ್ಲವನಾಗಿದ್ದೆ. ಈ ಹಿನ್ನೆಲೆಯಲ್ಲಿ, ಮುಂದೊಂದು ದಿನ 'ಮಾರಿಕೊಂಡವರು' ಎಂಬ ನಾಟಕವೊಂದನ್ನು ಬರೆದು ಆ ನಾಟಕದಲ್ಲಿ ದಲಿತರು, ಶೂದ್ರರು ಸೇರಿದಂತೆ ಎಲ್ಲ ಜಾತಿಯವರು ಕೂಡಿ ಪಾತ್ರ ವಹಿಸುವಂತೆ ಮಾಡಿದ್ದೆ'

ಈ ಮೇಲಿನ ರಂಗಭೂಮಿ ಕುರಿತಾದ ವಿಷ್ಣು ನಾಯ್ಕ ಅವರ ಬರೆಹದಿಂದ ಆಯ್ದ ಉಲ್ಲೇಖಗಳು ನಾಟಕರಚನೆಯ ಕುರಿತಾದ ಅವರ ನಿಲುಮೆಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಸಾಮಾಜಿಕ ಲೋಪ–ದೋಷಗಳನ್ನು ಎತ್ತಿ ಹೇಳುವುದು ಮತ್ತು ಈ ಕುರಿತಾದ ಜನಸಾಮಾನ್ಯರ ನಂಬಿಕೆಗಳನ್ನು ಪ್ರಶ್ನಿಸಿ ಅವರ ಮನದಲ್ಲಿ ಪ್ರಗತಿಪರ ವಿಚಾರಗಳನ್ನು ಬಿತ್ತಿ ಸಾಮಾಜಿಕ ಪರಿರ್ತನೆಗೆ ಚಾಲನೆ ನೀಡುವುದು ಅವರ ನಾಟಕಗಳ ಧ್ಯೇಯೋದ್ದೇಶಗಳಾಗಿದ್ದವು ಎಂಬುದು ಸ್ಪಷ್ಟ. ಈ ಉದ್ದೇಶಕ್ಕಾಗಿ ಅವರು ತಮ್ಮ ನಾಟಕಗಳ ಪ್ರದರ್ಶನಕ್ಕಾಗಿ ಆ ಕಾಲದಲ್ಲಿ ವೃತ್ತಿ ನಾಟಕಗಳ ಪದ್ಧತಿಯನ್ನೇ

ಆಯ್ದುಕೊಂಡರು. ದೃಶ್ಯ ಬದಲಾವಣೆಗಾಗಿ ಪರದೆಯನ್ನೆತ್ತುವ, ಇಳಿಸುವ ಹಳೆಯ ಮಾದರಿಯಲ್ಲೇ ಅವರ ನಾಟಕಗಳು ಪ್ರದರ್ಶನಗೊಂಡವು. ನಾಟಕಕ್ಕೆ ಒದಗಿಸಲಾಗುತ್ತಿದ್ದ ಸಂಗೀತ ಕೂಡ ಕಂಪನಿ ನಾಟಕಗಳ ಮಾದರಿಯಲ್ಲೇ ಇರುತ್ತಿತ್ತು.

ಅವರು ಬರೆದ ನಾಟಕಗಳಲ್ಲಿ ಪ್ರಮುಖವಾದವು : ಬರಗಾಲದ ಬವಣೆಗಳು ಹಾಗೂ ಬರದ ನೆಲದಲ್ಲಿ ಹಿತಾಸಕ್ತರು ನಡೆಸುವ ಶೋಷಣೆ ಮುಂತಾದವುಗಳನ್ನು ಚಿತ್ರಿಸುವ 'ಬರ ಬಿದ್ದ ನೆಲದಲ್ಲಿ', ಕಾರ್ಮಿಕರ ಬದುಕು ಬವಣೆಗಳನ್ನು ಬಿಂಬಿಸುವ 'ವರಲಕ್ಷ್ಮಿ ಒಡಲಲ್ಲಿ', ಪುರುಷಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸುವ 'ಹೆಣ್ಣಲ್ಲವೆ ನಿಮ್ಮ ತಾಯಿ?', ರಾಜಕೀಯ ಮೃಗಗಳಲ್ಲಿ ಚಿತ್ರಿಸುವ ಹುಲಿಯೂರಿನ ತೋಳ', ದಲಿತ ವರ್ಗದವರ ಶೋಷಣೆ ಗೈವ ಚಿತ್ರಣವುಳ್ಳ 'ಅಯ್ನೋರ ಪೂಜೆ' ಮುಂತಾದ ನಾಟಕಗಳು. ಇದಲ್ಲದೆ, ಪ್ರೇಮದ ಹೂ, ಮಾಡಿದ್ದುಣ್ಣೋ ಮಹಾರಾಯ, ಯಾರು ಹಿತವರು?, ಅವಳ ದೇವರು, ನಿಂಗೇ ಗೌಡ, ತ್ಯಾಗ, ಅನಿವಾರ್ಯ, ಕೈ ಜಾರಿದ ಕನ್ನಡಿ, ಮೈಲಿಗೆಯವನು, ಸಾವೇ ಇಲ್ಲದ ಹೂ, ಸೋತು ಗೆದ್ದವರು, ಬಿರುಗಾಳಿ, ಹದ್ದುಗಳೂ ಹೆಗ್ಗಣಗಳೂ–ಹೀಗೆ ನಾಟಕಗಳ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಇವುಗಳಲ್ಲಿ ಕೆಲವು ಈಗಾಗಲೇ ಪ್ರಕಟಗೊಂಡಿದ್ದು ಹಲವು ಅಪ್ರಕಟಿತ ಸ್ಥಿತಿಯಲ್ಲೇ ಉಳಿದುಕೊಂಡಿವೆ.

ಒಟ್ಟಿನಲ್ಲಿ, ಅಂಕೋಲೆಯ ರಂಗಭೂಮಿಗೆ ಸುದೀರ್ಘ ಕಾಲ ಚೈತನ್ಯ ನೀಡಿ ಕ್ರಿಯಾಶೀಲ–ವಾಗಿರಿಸುವಲ್ಲಿ ಬಹು ಮುಖ್ಯ ಪಾತ್ರ ವಹಿಸಿದ ರಂಗಕೃತಿಕಾರರಾಗಿ ವಿಷ್ಣು ನಾಯ್ಕ ಕಂಗೊಳಿಸುತ್ತಾರೆ. ತಮ್ಮ ಹರೆಯದ ಕಾಲದಲ್ಲಿ ನಾಟಕದ ಗೀಳನ್ನು ಹಚ್ಚಿಕೊಂಡ ಖ್ಯಾತ ಜಾನಪದ ವಿದ್ವಾಂಸ ಅವರು. ೧೯೫೮ರಲ್ಲಿ ಭಾಷಾಮಾಧ್ಯಮದ ವಿಷಯವನ್ನು ಕೈಗೆತ್ತಿಕೊಂಡು 'ವಿಮೋಚನೆ?' ಎಂಬ ನಾಟಕವನ್ನು ಬರೆದರು. 'ನಾಟಕದ ನಾಯಕ ಕನ್ನಡ ನಾಡು, ನುಡಿಗಾಗಿ ಸಮಾಜದಲ್ಲಿ ಸಮಾನತೆಗಾಗಿ ತನ್ನ ವಿದ್ಯಾರ್ಥಿ ಜೀವನದಲ್ಲಿಯೇ ಹೋರಾಟ ಮಾರ್ಗವನ್ನು ತುಳಿದು ಅದನ್ನು ಸಾಧಿಸಲಾಗದೇ ತಲೆ ಕೆಡಿಸಿಕೊಳ್ಳುತ್ತಾನೆ.' (ಕೃತಿಯ ಬೆನ್ನುಡಿಯಲ್ಲಿನ ಮಾತು.) ಭಾವನಾತ್ಮಕ ಕತೆಯ ಹಿನ್ನೆಲೆಯಲ್ಲಿ ಈ ನಾಟಕ ನಾಟಕೀಯವಾಗಿ ಹಾಗೂ ಅತ್ಯಂತ ರೋಚಕವಾಗಿ ಚಲಿಸುತ್ತದೆ. ಈ ನಾಟಕ ಪ್ರದರ್ಶನಗೊಂಡ ೬೬ ವರ್ಷಗಳ ನಂತರವೂ ಈ ಸಮಸ್ಯೆಯನ್ನು ಪರಿಹರಿಸುವ ಯಾವುದೇ ಯತ್ನ ನಡೆಯದೆ ಯಥಾಸ್ಥಿತಿ ಮುಂದುವರೆಯುವಂತಾಗಿದೆ ಎಂಬುದು ವಿಷಾದದ ಸಂಗತಿ.

ವಿಷ್ಣು ನಾಯ್ಕ ಅವರ ಸಮಕಾಲೀನ ನಾಟಕ ಕರ್ತೃಗಳಾಗಿ ವಂದಿಗೆಯ ಮೋಹನ ಹಬ್ಬು ಎದ್ದು ಕಾಣುತ್ತಾರೆ. ವಿಷ್ಣು ನಾಯ್ಕರದೇ ವಯಸ್ಸಿನ ಮೋಹನ ಹಬ್ಬು ಹೆಚ್ಚೂಕಡಿಮೆ ಅವರದೇ ಪಡಿಯಚ್ಚಿನ ಬದುಕನ್ನು ಕಂಡವರು. ಐದನೆಯ ತರಗತಿಯಲ್ಲಿದ್ದಾಗ ದಿನಕರ ದೇಸಾಯಿಯವರ 'ಅಂಚೆಯವ' ಹಾಡಿನ ಮೂಲಕ ರಂಗಪ್ರವೇಶ ಮಾಡಿದ ಇವರು ಯಲ್ಲಾಪುರ ತಾಲೂಕಿನ ಮಂಚೀಕೇರಿಯ ಸುತ್ತಣ ಭರತನಹಳ್ಳಿ ಸೀಮೆಯ ರಂಗಭೂಮಿಯಿಂದ ಪ್ರೇರಿತರಾದವರು. ಪ್ರೌಢಶಾಲೆಯಲ್ಲಿದ್ದಾಗಲೇ ನಾಟಕಗಳನ್ನು ನೋಡುತ್ತ, ನಾಟಕಗಳಲ್ಲಿ ಅಭಿನಯಿಸುತ್ತ ಬೆಳೆದವರು.

೧೯೬೭ರಲ್ಲಿ ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕಾರ್ಯಆರಂಭ ಮಾಡಿದ ಮೋಹನ ಹಬ್ಬು ಪಾಠಪ್ರವಚನಗಳ ಹೊರತಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡರು. ರಂಗಭೂಮಿಯಲ್ಲಿ ವಿಶೇಷ ಆಸಕ್ತಿಯುಳ್ಳ ಅವರು ಸಹ ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯೊಂದಿಗೆ ನಾಟಕಗಳಲ್ಲಿ ನಟ, ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು. ೧೯೬೮ರಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ಮಾಡಿದ ಪ್ರೊ. ದಿವಸ್ಪತಿ ಹೆಗಡೆ ಅವರ ದಿಗ್ದರ್ಶನದಲ್ಲಿ ಗಿರೀಶ ಕಾರ್ನಾಡರ 'ತುಘಲಕ್ ನಾಟಕದಲ್ಲಿ ಸಹನಟರಾಗಿ ಪಾಲ್ಗೊಂಡರು. ಮುಂದಿನ ದಿನಗಳಲ್ಲಿ ಅವರು ಲಂಕೇಶರ ಇಡೀಪಸ್, ಶ್ರೀರಂಗರ ಸಂಧ್ಯಾಕಾಲ, ಚಂದ್ರಶೇಖರ ಕಂಬಾರರ ಜೈಸಿದ್ನಾಯ್ಕದಂತಹ ಹೊಸ ಅಲೆಯ ನಾಟಕಗಳನ್ನು ಕಾಲೇಜು ರಂಗಭೂಮಿಯಲ್ಲಿ ಪ್ರದರ್ಶನಕ್ಕೆ ಅಣಿಗೊಳಿಸಿದರು. ವಿಷ್ಣು ನಾಯ್ಕ ಮತ್ತು ಮೋಹನ ಹಬ್ಬು ಅವರ ಜೋಡಿ ನಿರ್ದೇಶನದಲ್ಲಿ 'ಕಟ್ಟು' ಎಂಬ ನಾಟಕ ಜಿಲ್ಲಾ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿತಲ್ಲದೆ, ರಾಜ್ಯ ಮಟ್ಟದಲ್ಲೂ ಪ್ರದರ್ಶನಗೊಂಡಿತು. ಅವರು ನಿರ್ದೇಶಿಸಿದ ಇನ್ನೊಂದು ಮಹತ್ವದ ಏಕಾಂಕ ನಾಟಕ ಲಂಕೇಶ್ ವಿರಚಿತ 'ಪೋಲೀಸರಿದ್ದಾರೆ' ಎಚ್ಚರಿಕೆ' ಇದಲ್ಲದೆ, ಅವರು ಸಂಸ್ಕೃತ ನಾಟಕ 'ಕೃಪಣಖಲ್ವಾಟ ಚರಿತಮ್' ಎಂಬ ಹಾಸ್ಯ ನಾಟಕದ ಕನ್ನಡ ಅವತರಣಿಕೆಯನ್ನೂ ನಿರ್ದೇಶಿಸಿದರು. ಹಿಂದಿ ನಾಟಕ 'ಏಕ್

ಥಾ ಗಧಾ...' ನಾಟಕವನ್ನು ಕನ್ನಡಕ್ಕೆ ಅನುವಾದಿಸಿ ನಿರ್ದೇಶಿಸಿದ ಅವರ 'ಒಂದು ಕಥೆಯ ಕಥೆ' ಅಂಕೋಲೆಯಷ್ಟೇ ಅಲ್ಲ, ಭಟಕಳ ಮತ್ತು ಮಂಚೀಕೇರಿ ರಂಗಭೂಮಿಯಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡಿತು.

ನಾಟಕಗಳನ್ನು ನಿರ್ದೇಶಿಸುವುದರೊಂದಿಗೆ ಮೋಹನ ಹಬ್ಬು ನಾಟಕ ರಚನೆಯಲ್ಲೂ ತಮ್ಮನ್ನು ತೊಡಗಿಸಿಕೊಂಡರು. ಅವರ 'ಏಕಲವ್ಯ ಮತ್ತು ಇತರ ಏಕಾಂಕ ನಾಟಕಗಳು' ಪ್ರೌಢಶಾಲಾ ಮಕ್ಕಳಿಗೋಸ್ಕರ ಬರೆದಂಥವು. ೧೯೬೦ರ ಸುಮಾರಿಗೆ ಅವರು 'ಕರ್ಣ' ಎಂಬ ನಾಟಕವನ್ನು ರಚಿಸಿದರು. ಅಂದಿನ ದಿನಗಳಲ್ಲಿ ನಮ್ಮ ರಾಜ್ಯದಲ್ಲಿ ಬಂಡಾಯ ಸಾಹಿತ್ಯ ಏರುಗತಿಯಲ್ಲಿತ್ತು. 'ಏಕಲವ್ಯ' ಮತ್ತು 'ಕರ್ಣ' ನಾಟಕಗಳು ಈ ಕಾಲಾವಧಿಯಲ್ಲಿ ಆಕಾರ ಪಡೆದವು. ನಾಟಕಗಳ ರಚನೆಯ ಜೊತೆಗೆ ಮೋಹನ ಹಬ್ಬು ಇತರ ಭಾಷೆಗಳಿಂದ ನಾಟಕಗಳನ್ನು ಆಯ್ದು ಕನ್ನಡಕ್ಕೆ ಅನುವಾದಿಸಿದರು. ಅವರು ಅನುವಾದಿಸಿದ 'ಧೀರ' ಮತ್ತು 'ತೀರ್ಪು' ಏಕಾಂಕ ನಾಟಕಗಳು ಕರ್ನಾಟಕ ಸಂಘದ ಆಶ್ರಯದಲ್ಲಿ ಪ್ರದರ್ಶನವನ್ನು ಕಂಡವು. ಅವರು ರೂಪಾಂತರಿಸಿದ 'ಆ ಕರಾಳ ರಾತ್ರಿ' ಕಾಲೇಜು ರಂಗಭೂಮಿಯಲ್ಲಿ ಪ್ರದರ್ಶನಗೊಂಡಿದ್ದಲ್ಲದೇ, ಕಾಲಾಂತರದಲ್ಲಿ ಚಲನಚಿತ್ರವಾಗಿ ಹೆಸರು ಪಡೆಯಿತು. ನಂತರದ ದಿನಗಳಲ್ಲಿ ಅವರು ಹವ್ಯಕ ಆಡುಭಾಷೆಯಲ್ಲಿ ಆ ಸಮುದಾಯದ ಜ್ವಲಂತ ಸಮಸ್ಯೆಗಳನ್ನು ಚಿತ್ರಿಸುವ 'ಉತ್ತರಣ' ಎಂಬ ಪೂರ್ಣ ಪ್ರಮಾಣದ ನಾಟಕವನ್ನು ರಚಿಸಿದರು.

೧೯೮೦–೮೫ರ ಅವಧಿಯಲ್ಲಿ ಅಂಕೋಲೆಯಲ್ಲಿ ಬೀದಿನಾಟಕಗಳು ಜನಪ್ರಿಯತೆಯನ್ನು ಪಡೆದವು. ವಿಷ್ಣು ನಾಯ್ಕ ಅವರ 'ಒಂದು ಹನಿ ರಕ್ತ' ಮತ್ತು 'ಸರಾಯಿ ಸೂರಪ್ಪ' ಜನಪ್ರಿಯ ಬೀದಿನಾಟಕಗಳಾಗಿದ್ದು ಅವು ಮುದ್ರಣವನ್ನು ಕಂಡಿವೆ. ಮೋಹನ ಹಬ್ಬು ಅವರ 'ಸಾವ ಸುತ್ತ' ಮತ್ತು 'ಒಂದು ಅಂಗೈಯ ಕಥೆ' ಹಾಗೂ ರಾಮಕೃಷ್ಣ ಗುಂದಿ ಅವರ 'ವಂದೇ ಮಾತರಂ' ಕೂಡ ಮುದ್ರಿತಗೊಂಡಿದ್ದು ಯಶಸ್ವಿಯಾಗಿ ಪ್ರದರ್ಶನಗೊಂಡಿವೆ.

ಉಲ್ಲೇಖಿಸಬೇಕಾದ ಇತರ ನಾಟಕಕಾರರೆಂದರೆ ಪಿ.ಎಂ. ಪ್ರೌಢಶಾಲೆಯ ಎನ್. ಬಿ. ಕಾಮತ, ನಿವೃತ್ತ ಬ್ಯಾಂಕ್ ಅಧಿಕಾರಿ ಜನಾರ್ಧನ ನಾಯಕ ಹಾಗೂ ಭಾವಿಕೇರಿಯ ಬಾಲಚಂದ್ರ ನಾಯಕ. ಎನ್.ಬಿ. ಕಾಮತರು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಏಕಾಂಕ ನಾಟಕಗಳನ್ನು ಬರೆದಿದ್ದು ಅವು ಸಂಕಲನದ ರೂಪದಲ್ಲಿ ಬೆಳಕು ಕಂಡಿವೆ. ಅವರು ಕೊಂಕಣಿ ನಾಟಕಗಳನ್ನು ಕೂಡ ರಚಿಸಿದ್ದಾರೆ ಎಂಬುದು ಉಲ್ಲೇಖನೀಯ. ಜನಾರ್ಧನ ನಾಯಕ ಅವರು 'ರಣಸಾಕ್ಷಿ' ಹಾಗೂ 'ಛಿದ್ರ' ಎಂಬ ಎರಡು ನಾಟಕಗಳನ್ನು ಬರೆದಿದ್ದು 'ಛಿದ್ರ' ನಾಟಕ ಬೆಂಗಳೂರಿನ ಆಕಾಶವಾಣಿಯಲ್ಲಿ ಪ್ರಸಾರಗೊಂಡಿದೆ. ಈ ಕೃತಿಗೆ ಮುನ್ನುಡಿ ಬರೆದ ರಂಗ ನಿರ್ದೇಶಕ ಹುಲಗಪ್ಪ ಕಟ್ಟೀಮನಿ ಅದನ್ನು ಶ್ರಾವ್ಯ ನಾಟಕ ಎಂದು ಕರೆದಿದ್ದಾರೆ. ನಾಟಕವು ದುರಂತಮಯ ಕಥಾನಕವನ್ನು ಹೊಂದಿದ್ದು ಅದನ್ನು ನಾಟಕಕಾರರು ಅತ್ಯಂತ ಶಿಷ್ಟ ಭಾಷೆಯಲ್ಲಿ ಹಾಗೂ ಭಾವುಕ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಬಾಲಚಂದ್ರ ನಾಯಕ ತಾವು ನಾಲ್ಕು ನಾಟಕಗಳನ್ನು ರಚಿಸಿರುವುದಾಗಿಯೂ, ಅವುಗಳಲ್ಲಿ ಎರಡು ಮುದ್ರಣ ಕಂಡಿವೆ ಎಂದು ಹೇಳಿಕೊಂಡಿದ್ದಾರೆ. ವೃತ್ತಿ ನಾಟಕಗಳನ್ನು ಬರೆದವರಲ್ಲಿ ಕೃಷ್ಣ ನಾಯ್ಕ, ಸುಜೀತ ನಾಯ್ಕ ಅವರ ಹೆಸರುಗಳು ಕೇಳಿ ಬರುತ್ತಿವೆ. ಮುದ್ರಣಗೊಂಡ ಬಗ್ಗೆ ಮಾಹಿತಿ ಇಲ್ಲ.

ಉಪಸಂಹಾರ

ಅಂಕೋಲೆಯ ರಂಗಭೂಮಿಯ ಹಿಂದಿನ ವೈಭವಕ್ಕೆ ಇಂದು ಮಂಕು ಕವಿದಿದೆ. ರಂಗಭೂಮಿಯ ಸ್ಥಾನವನ್ನು ವಿದ್ಯುನ್ಮಾನ ಮಾಧ್ಯಮಗಳು ಆಕ್ರಮಿಸಿವೆ. ಯುವಜನಾಂಗ – ವಿಶೇಷವಾಗಿ, ಗ್ರಾಮೀಣ ಯುವಜನಾಂಗ – ಈ ಮಾಧ್ಯಮಗಳಿಗೆ ಮಾರು ಹೋಗಿ ದಿನೇದಿನೇ ತಮ್ಮ ಒಳಗಣ ಸೃಜನಶೀಲತೆಯನ್ನು ಕಳೆದುಕೊಳ್ಳುತ್ತಿದೆ. ಸಾಂಸ್ಕೃತಿಕ ಬದುಕು ವಿಘಟನೆಗೊಳ್ಳುತ್ತಿದೆ. ಕಾಲೇಜು ರಂಗಭೂಮಿ ಭಣಗುಡುತ್ತಿದೆ. ಈ ಬಗೆಯ ಪ್ರತಿಗಾಮಿ ಪ್ರವಾಹವನ್ನು ತಡೆಯುವ ಬಗೆ ಹೇಗೆ ಎಂದು ಯಾರೂ ಚಿಂತಿಸುತ್ತಿಲ್ಲ. ದೊಡ್ಡ ದೊಡ್ಡ ನಗರಗಳಲ್ಲಿರುವ ರಂಗಮಂದಿರಗಳಲ್ಲಿ ಆಗಾಗ ಕನ್ನಡ ನಾಟಕಗಳ ಪ್ರದರ್ಶನಗಳು ಸುದ್ದಿ ಮಾಡುತ್ತವೆಯಾದರೂ ಹಳ್ಳಿಗಾಡಿನ ಜನ ರಂಗಚಟುವಟಿಕೆಗಳನ್ನು ಬದಿಗೆ ಸರಿಸಿದಂತೆ ಕಾಣುತ್ತಿದೆ. ನಾಡಿನ ಪ್ರಜ್ಞಾವಂತರು ಎಚ್ಚರಗೊಂಡು ಈ ಸಮಸ್ಯೆಯನ್ನು ಪರಿಹರಿಸುವುದರ ಕುರಿತು ಗಂಭೀರವಾಗಿ ಚಿಂತನೆ ನಡೆಸಬೇಕಿದೆ.

ಅಂಕೋಲೆಯಲ್ಲಿ ನಡೆದ ಬೀದಿ ನಾಟಕ ಚಳುವಳಿ

– ಜೀ. ಪ್ರೇಮಾನಂದ

'ಅಂಕೋಲೆ' ಎಂಬ ಪದವೆ ಕಿವಿಗೆ ಇಂಪನ್ನು ನೀಡುವಷ್ಟು ಹಿತವಾಗಿದೆ. ಶಾಂತಿಪ್ರಿಯರಾಗಿರುವ ಅಂಕೋಲೆಯ ಜನ ಸೌಜನ್ಯದಿಂದ ಬದುಕುವುದರ ಜೊತೆಯಲ್ಲೇ ಜನಪರವಾದ ಚಿಂತನೆಗಳಿಗೆ ಮೊದಲಿನಿಂದಲೂ ಸಾಂದರ್ಭಿಕವಾಗಿ ಚಾಲನೆಯನ್ನು ನೀಡುತ್ತಲೇ ಬಂದಿದ್ದಾರೆ. ರಾಜಕೀಯ, ಸಾಮಾಜಿಕ, ಹಾಗೂ ಸಾಂಸ್ಕೃತಿಕ ಹೋರಾಟದ ನೆಲವಾಗಿ ಹಿಂದಿನಿಂದಲೂ ಗುರುತಿಸಿಕೊಂಡು ಬಂದಿರುವ ಈ ಅಂಕೋಲೆ, ಸಾಮಾಜಿಕ ಸ್ವಾಸ್ಥ್ಯಕ್ಕೆ ಮಾರಕವಾದ ಪರಿಸ್ಥಿತಿಗಳಿಗೆ ಆಗಾಗ ಸಂಕೋಲೆಯನ್ನು ಸಹ ತೊಡಿಸುತ್ತಲೇ ಬಂದಿದೆ. ಹಾಗಾಗಿಯೇ ಈ ನೆಲದಲ್ಲಿ ಕರನಿರಾಕರಣೆ ಚಳುವಳಿ, ಚಲೇಜಾವ ಚಳುವಳಿ, ಗೋಕಾಕ ಚಳುವಳಿ, ಜೆ.ಪಿ. ಆಂದೋಲನ, ರೈತ ಆಂದೋಲನ, ಸಾಕ್ಷರತಾ ಆಂದೋಲನ ಮುಂತಾದವುಗಳು ಯಶಸ್ವಿಯಾಗಿ ನಡೆದು ದೇಶದ ಇತಿಹಾಸದ ಪುಟಗಳಲ್ಲಿ ನಮ್ಮ ಅಂಕೋಲೆಯ ಹೆಸರು ದಾಖಲಾಗಿರುವುದು ಒಂದು ವಿಶೇಷ, ಸಮಾಜಮುಖಿ ಚಟುವಟಿಕೆಗಳಲ್ಲಿ ಮೊದಲಿನಿಂದಲೂ ಬಹಳ ಆಸಕ್ತಿಯಿಂದ ತೊಡಗಿಸಿಕೊಂಡ ಸಾಂಸ್ಕೃತಿಕ ಮನೋಭಾವದ ಇಲ್ಲಿಯ ಜನ, ಬೀದಿ ನಾಟಕವನ್ನೂ ಸಹ ಸದುದ್ದೇಶಕ್ಕಾಗಿ ಚಳುವಳಿಯೋಪಾದಿಯಲ್ಲಿ ಬಳಸಿಕೊಂಡದ್ದು ಒಂದು ಉತ್ತಮ ಬೆಳವಣಿಗೆ ಎಂದೇ ಹೇಳಬೇಕು.

ಬೀದಿ ನಾಟಕದ ಕುರಿತು ಎರಡು ಮಾತಿನಲ್ಲಿ ಹೇಳುವದಾದರೆ, ಮಧ್ಯಯುಗದಲ್ಲಿ ಇಂಗ್ಲೆಂಡಿನ ಬೀದಿಗಳಲ್ಲಿ ಸಂಚಾರಿ ರಂಗಮಂಟಪವನ್ನು ಉಪಯೋಗಿಸಿಕೊಂಡು ಬೀದಿ ನಾಟಕಗಳು ಪ್ರದರ್ಶಿತವಾಗುತ್ತಿದ್ದವು. ನಾಟಕದ ಕುರಿತ ಇಂಥ ಹೊಸ ಬಗೆಯ ಕಲ್ಪನೆಗಳು ಕಾಲಕ್ರಮೇಣ ನಮ್ಮ ಭಾರತೀಯ ರಂಗಭೂಮಿಯನ್ನು ಆಕರ್ಷಿಸಿ ತದನಂತರ ನಮ್ಮ ಕನ್ನಡ ನಾಡಿಗೂ ಪ್ರವೇಶಿಸಿತು. ಶ್ರೇಷ್ಠ ನಾಟಕಕಾರ ಜರ್ಮನಿಯ ಬ್ರೆಕ್ಟನ ರಂಗಭೂಮಿ ತಂತ್ರವನ್ನು ಬಳಸಿ ಈ ಬೀದಿ ನಾಟಕಗಳು ರೂಪಗೊಂಡವು ಎಂದು ಹೇಳಲಾಗುತ್ತಿದೆ. ಕರ್ನಾಟಕದಲ್ಲಿ ಎ. ಎಸ್. ಮೂರ್ತಿಯವರ ನೇತೃತ್ವದಲ್ಲಿ 'ಸಮುದಾಯ' ಹಾಗೂ 'ಚಿತ್ರ' ಎಂಬ ಸಂಘಟನೆಗಳು 'ಕೂಲಿ', 'ಉಳ್ಳವರ ನೆರಳು' ಮುಂತಾದ ಬೀದಿ ನಾಟಕಗಳನ್ನು ಪ್ರದರ್ಶಿಸಲಾಗಿತ್ತು ಎಂದು ತಿಳಿದು ಬಂದಿದೆ.

೮೦ರ ದಶಕದಲ್ಲಿ ನಾಟಕದ ಬಗ್ಗೆ ಜನರ ಅಭಿರುಚಿ ಬದಲಾಗುತ್ತಿದ್ದಂತೆ ಯಾವುದೇ ಸಿದ್ಧ ರಂಗ ಸಜ್ಜಿಕೆ, ಉಡುಗೆ–ತೊಡುಗೆ, ಮೇಕಪ್ ಮುಂತಾದ ಪರಿಕರಗಳನ್ನು ಉಪಯೋಗಿಸದೇ ಪ್ರೇಕ್ಷಕರು ಸುಲಭವಾಗಿ ದೊರೆಯುವಂತ ಬೀದಿಗಳಲ್ಲಿ ಎಲ್ಲರಿಗೂ ಕಾಣುವಂತ ಸ್ಥಳಗಳಲ್ಲಿ ಅಭಿನಯಿಸುವ ಪರಿಪಾಠ ಬೀದಿ ನಾಟಕಗಳಿಂದ ಪ್ರಾರಂಭವಾಯಿತು. ಇದರ ಮೂಲ ಉದ್ದೇಶ ಜನರಿಗೆ ತುರ್ತಾಗಿ ಇಲ್ಲವೇ ಅವರ ಒಳಿತಿಗಾಗಿ ಕೆಲವೊಂದು ವಿಚಾರಗಳನ್ನು ತಿಳಿಸಿ ಹೇಳುವುದು. ಪ್ರತಿಯೊಬ್ಬರ ದೈನಂದಿನ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಕಥಾವಸ್ತುಗಳೇ ಈ ಬೀದಿನಾಟಕಗಳ ಜೀವಾಳ. ಪ್ರೇಕ್ಷಕರಲ್ಲಿ ಅವರ ಹಕ್ಕುಗಳ ಬಗ್ಗೆ ಹಾಗೂ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿ, ಅವರೇ ಸ್ವತಃ ಚಿಂತಿಸುವಂತೆ ಮಾಡಿ, ಸಾಮಾಜಿಕ ಹಾಗೂ ವೈಚಾರಿಕ ವಿಕಸನಕ್ಕೆ ದಾರಿ ಮಾಡಿಕೊಡುವುದು ಈ ಬೀದಿನಾಟಕಗಳ ಮೂಲ ಆಶಯ.

ಅಂಕೋಲೆಯಲ್ಲಿ ಬೀದಿ ನಾಟಕಕ್ಕೆ ಮೊಟ್ಟ ಮೊದಲು ಬಾಗಿಲನ್ನು ತೆರೆದುಕೊಟ್ಟಿದ್ದೇ ಇಲ್ಲಿಯ ಕರ್ನಾಟಕ ಸಂಘ. ೧೯೮೦–೮೬ ರ ಅವಧಿಯಲ್ಲಿ ಇಲ್ಲಿಯ ವಿ. ಜೆ. ನಾಯಕರು ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿದ್ದಾಗ, ಅಕಾಡೆಮಿಯು ರಾಜ್ಯದ ಪ್ರತಿಜಿಲ್ಲಾ ಕೇಂದ್ರದಲ್ಲಿ ಬೀದಿನಾಟಕದ ತರಬೇತಿಗಾಗಿ ವಿಶೇಷ ಶಿಬಿರಗಳನ್ನು ಏರ್ಪಡಿಸಿತ್ತು. ೧೯೮೩ ನೇ ಇಸವಿ ಡಿಸೆಂಬರ ತಿಂಗಳಿನಲ್ಲಿ ನಾಟಕ ಅಕಾಡೆಮಿಯವರು ಕಾರವಾರದ 'ಗರಂ' (ಗಜಾನನ ರಂಗಭೂಮಿ) ಕಲಾವಿದರ ಸಹಕಾರದೊಂದಿಗೆ ಒಂದು

ಕಮ್ಮಟವನ್ನು ಏರ್ಪಡಿಸಿದ್ದರು. ಅದರ ಸಂಪನ್ಮೂಲ ವ್ಯಕ್ತಿಯಾಗಿ ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾದ ಪದವಿಧರರಾಗಿದ್ದ ಮೈಸೂರಿನ ರಂಗ ನಿರ್ದೇಶಕರಾಗಿದ್ದ ಎನ್. ಶ್ರೀನಿವಾಸ ಎಂಬುವವರು ಬಂದಿದ್ದರು. ಆಗ ಕಾರವಾರದ 'ಗರಂ' ಕಲಾವಿದರ ಬಳಗದ ನೇತೃತ್ವ ವಹಿಸಿದ್ದ ಮೂಲತಃ ಅಂಕೋಲೆಯವರೇ ಆದ ಗಜಾನನ ಆಳ್ವಾ ಅವರು ಎನ್. ಶ್ರೀನಿವಾಸ ಅವರ ಮಾರ್ಗದರ್ಶನದಲ್ಲಿ ಇಲ್ಲಿಯ ಕರ್ನಾಟಕ ಸಂಘದ ಸಹಕಾರದೊಂದಿಗೆ ಅಂಕೋಲೆಯ ಮೀನುಪೇಟೆಯ ಎದುರು ರಾಜಕಾರಣಿಗಳ ಬೂಟಾಟಿಕೆಯನ್ನು ಎತ್ತಿ ತೋರಿಸುವ 'ಬೆಲೆ ಇಳಿದಿದೆ' ಎಂಬ ವಿಡಂಬನಾತ್ಮಕ ಬೀದಿ ನಾಟಕವನ್ನು ಪ್ರದರ್ಶಿಸಿದರು. ಇದೇ ಅಂಕೋಲೆಯಲ್ಲಿ ನಡೆದ ಮೊಟ್ಟ ಮೊದಲ ಬೀದಿನಾಟಕವೆಂದು ಪರಿಗಣಿಸಲಾಗಿದೆ. ಅಲ್ಪ ಸಮಯದಲ್ಲಿ ಎನ್. ಶ್ರೀನಿವಾಸ ಅವರಿಂದ ದೊರೆತ ನಾಟಕದ ಪರಿಕಲ್ಪನೆ ಹಾಗೂ ಮಾರ್ಗದರ್ಶನ ಮುಂದೆ ಅಂಕೋಲೆಯಲ್ಲಿ ಕರ್ನಾಟಕ ಸಂಘದ ಕಲಾವಿದರಿಗೆ ಉತ್ತಮ ಪ್ರೇರಣೆಯನ್ನು ಒದಗಿಸಿತು ಎಂದು ಹೇಳಬಹುದು. ಅಲ್ಲಿಂದ ಮುಂದೆ ಕರ್ನಾಟಕ ಸಂಘದ ಕಲಾವಿದರು ಅಂಕೋಲೆಯಲ್ಲಿ ಬೀದಿನಾಟಕ ಪರಂಪರೆಯನ್ನು ಮುಂದುವರಿಸಿದರು.

ಆಗ ಚಾಲ್ತಿಯಲ್ಲಿದ್ದ ಇಲ್ಲಿಯ 'ಬಸಂತ' (ಬಂಡಾಯ ಸಂಘಟನೆ ತಂಡ)ದ ಕಲಾವಿದರು ಶ್ಯಾಮ ಹುದ್ದಾರ ಅವರ ಪರಿಕಲ್ಪನೆಯ ಸರಕಾರಿ ಆಡಳಿತದ ಲೋಪದೋಷಗಳನ್ನು ತಿಳಿಸಿಹೇಳುವ 'ರೇಶನ್ ಕಾರ್ಡ್' ಹಾಗೂ 'ನಾಯಿಗಳು' ಎಂಬ ಬೀದಿ ನಾಟಕಗಳನ್ನು ಮತ್ತು ರಾಮಕೃಷ್ಣ ಗುಂದಿಯವರ ಪರಿಕಲ್ಪನೆಯ ಬೂಟಾಟಿಕೆಯ ಮುಖವಾಡವನ್ನು ಕಳಚಿ ಹಾಕುವ 'ಕತ್ತೆ–ಮೋತಿ' ಮತ್ತು ಸ್ವತಂತ್ರ ಭಾರತ ವಿಫಲತೆಯನ್ನು ಬಿಚ್ಚಿ ತೋರಿಸುವ 'ವಂದೇ ಮಾತರಂ' ಎಂಬ ನಾಟಕಗಳನ್ನು ಅಭಿನಯಿಸಿದರು. ಅವು ಜನರಲ್ಲಿ ಹೊಸ ಬಗೆಯ ಅಭಿರುಚಿಯನ್ನು ಮೂಡಿಸುವುದರೊಂದಿಗೆ ಜನಮೆಚ್ಚುಗೆ ಪಡೆದವು. ಇವುಗಳ ಹೊರತಾಗಿ ಕೌಟುಂಬಿಕ ಹಾಗೂ ಸಾಮಾಜಿಕ ಅನಿಷ್ಟಗಳ ಮೇಲೆ ಬೆಳಕು ಚೆಲ್ಲುವ 'ವರದಕ್ಷಿಣೆ', 'ಕೋಳಿ ಅಂಕ', 'ಟಿಕೆಟ್', 'ಸ್ವತಂತ್ರ ಭಾರತ' ಮುಂತಾದವುಗಳೂ ಪ್ರದರ್ಶನ ಕಂಡಿವೆ.

ಅದೇ ವೇಳೆಗೆ ಕರ್ನಾಟಕ ಸಂಘದ ಪ್ರಮುಖ ಕಲಾವಿದರಲ್ಲಿ ಒಬ್ಬರಾದ ವಿಷ್ಣು ನಾಯ್ಕ ಅವರು ಈ ಬೀದಿ ನಾಟಕ ಪರಂಪರೆಗೆ ಒಂದು ಹೊಸ ತಿರುವನ್ನು ಕೊಟ್ಟದ್ದು ಮಾತ್ರವಲ್ಲ, ಅದು ಬಹುಕಾಲದವರೆಗೆ ತನ್ನ ನಿರಂತರತೆಯನ್ನು ಕಾಯ್ದುಕೊಳ್ಳುವಂತೆ ಮಾಡಿದ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ. ಆಯಾಕಾಲದ ಅಗತ್ಯತೆಗೆ ತಕ್ಕಂತೆ ಒಂದೊಂದು ಹೊಸ ಹೊಸ ಬೀದಿನಾಟಕಗಳನ್ನು ಬರೆದು ಅದನ್ನು ವ್ಯವಸ್ಥಿತವಾಗಿ ತಮ್ಮ ರಾಘವೇಂದ್ರ ರಂಗ ಸಂಘದ ಕಲಾವಿದರಿಂದ ಪರಿಣಾಮಕಾರಿಯಾಗಿ ಪ್ರದರ್ಶಿಸುತ್ತ ಬಂದರು. ಹೆಚ್ಚು ಕಡಿಮೆ ವಿಷ್ಣು ನಾಯ್ಕ ಅವರು ಬರೆದು, ನಿರ್ದೇಶಿಸಿ, ಸಹಕಲಾವಿದರೊಂದಿಗೆ ನಟಿಸಿದ ಎಲ್ಲ ಬೀದಿನಾಟಕಗಳೂ ಸಾಮಾಜಿಕ ಅನಿಷ್ಟಗಳ ಕುರಿತು ಪ್ರೇಕ್ಷಕರಿಗೆ ಅರಿವು ಮೂಡಿಸುವಲ್ಲಿ ಸಫಲವಾದವು ಎನ್ನಬಹುದು. ಪರಿಸರದ ಬಗ್ಗೆ ಪ್ರಜ್ಞೆಯನ್ನು ಮೂಡಿಸುವ 'ಬೋಳುಗುಡ್ಡ' (ಅಕ್ಟೋಬರ೧೯೮೮), ಕುಡಿತದ ಅನರ್ಥವನ್ನು ಬಿಚ್ಚಿಡುವ 'ಸರಾಯಿ ಸೂರಪ್ಪ (ಅಕ್ಟೋಬರ ೧೯೯೦) ರಾಜಕೀಯ ಪಕ್ಷಾಂತರದ ವಿಪರ್ಯಾಸವನ್ನು ಬಿಂಬಿಸುವ 'ಬಿನ್ನಹಕ್ಕೆ ಬಾಯಿಲ್ಲ (ಅಕ್ಟೋಬರ ೧೯೯೧) ಕೋಮು ಸೌಹಾರ್ದತೆಯ ಮಹತ್ವವನ್ನು ಪ್ರತಿಪಾದಿಸುವ 'ಒಂದು ಹನಿ ರಕ್ತ' (ಜನವರಿ ೧೯೯೩), ಗುಟ್ಕಾ, ಏಡ್ಸ್, ಮುಂತಾದ ದುಶ್ಚಟಗಳ ಬಗ್ಗೆ ಅರಿವು ಮೂಡಿಸುವ 'ಸಾವಿನ ಹಾದಿ' (ಜನವರಿ ೧೯೯೯) ಮುಂತಾದವುಗಳು ಅಂಕೋಲೆಯಲ್ಲಿ ಒಂದು ಚಳುವಳಿಯೋಪಾದಿಯಲ್ಲಿ ಪ್ರದರ್ಶನಗೊಂಡು ಜನರ ಮನಸ್ಸಿನಲ್ಲಿ ಪ್ರಭಾವ ಬೀರಲು ಪ್ರಾರಂಭಿಸಿದವು. ಈ ನಡುವೆ ಮೋಹನ ಹಬ್ಬು ಅವರು ಬರೆದ ಭ್ರಷ್ಟಾಚಾರದ ವಸ್ತುಗಳನ್ನೊಳಗೊಂಡ 'ಸಾವಸ್ತುತ' (೧೯೯೭) ಹಾಗೂ 'ಒಂದು ಅಂಗೈ ಕತೆ' ಇವು ಸಹ ಉತ್ತಮ ಬೀದಿನಾಟಕಗಳಾಗಿ ವಿವಿದೆಡೆ ಪ್ರದರ್ಶನ ಕಂಡಿವೆ. ಅಂಕೋಲೆಯಲ್ಲಿ ನಡೆದ ಬೀದಿನಾಟಕಗಳು ಕೇವಲ ಪ್ರದರ್ಶನವನ್ನು ಮಾತ್ರ ಪಡೆಯದೇ ಹಲವಾರು ಪುಸ್ತಕ ರೂಪದಲ್ಲಿಯೂ ಪ್ರಕಟನೆಗೊಂಡಿವೆ. ವಿಷ್ಣು ನಾಯ್ಕ ಅವರ ಒಟ್ಟು ೫ ಬೀದಿನಾಟಕಗಳು, ಮೋಹನ ಹಬ್ಬು ಮತ್ತು ರಾಮಕೃಷ್ಣ ಗುಂದಿಯವರ ತಲಾ ಒಂದು ನಾಟಕಗಳು ಈಗಾಗಲೇ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಮಾತ್ರವಲ್ಲ ವಿಷ್ಣು ನಾಯ್ಕ ಅವರು ಬರೆದ 'ಒಂದು ಹನಿ ರಕ್ತ' ನಾಟಕ ದೂರದರ್ಶನದ

'ಚಂದನ' ವಾಹಿನಿಯಲ್ಲಿ ಎರಡು ಸಲ ಪ್ರಸಾರವಾದುದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಅಂಕೋಲೆಯ ಬೀದಿ ನಾಟಕಗಳು ಪರೋಕ್ಷವಾಗಿ ಅಂದು ಚಾಲ್ತಿಯಲ್ಲಿದ್ದ ಸಾಕ್ಷರತಾ ಆಂದೋಲನಕ್ಕೂ ಹೆಚ್ಚಿನ ಪ್ರೇರಣೆ ನೀಡಿ, ಜನಜಾಗ್ರತೆಗೆ ಕಾರಣವಾದುದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಅಂಕೋಲೆಯಲ್ಲಿ ನಡೆದ ಬೀದಿನಾಟಕಗಳಿಗೆ ಸ್ಥಳೀಯ ಕಲಾವಿದರಿಂದ, ಸಂಘ–ಸಂಸ್ಥೆಗಳಿಂದ ಹಾಗೂ ಸಾರ್ವಜನಿಕರಿಂದ ಉತ್ತಮವಾದ ಪ್ರತಿಕ್ರಿಯೆ ಹಾಗೂ ಪ್ರೋತ್ಸಾಹ ಸಿಕ್ಕಿದ್ದು ಮಾತ್ರವಲ್ಲ. ಈ ಎಲ್ಲ ನಾಟಕಗಳಿಗೆ ತಾಲೂಕಿನ ಅನೇಕ ಸಂಘ–ಸಂಸ್ಥೆಗಳು, ವಿವಿಧ ವೇದಿಕೆಗಳು ಸಕ್ರಿಯವಾಗಿ ಬಳಕೆಯಾಗಿದ್ದು ಅದರ ಯಶಸ್ಸಿನ ಒಂದು ಭಾಗ ಎಂದು ಪರಿಗಣಿಸಬಹುದು. ವಿಶೇಷವಾಗಿ ಅಂಕೋಲೆಯ ಕ್ರಿಸ್ತಮಿತ್ರ ಆಶ್ರಮ ೯೦ರ ದಶಕದ ಆರಂಭದಲ್ಲಿ ಮದ್ಯಪಾನ ನಿಷೇಧದ ಕುರಿತು ಹಮ್ಮಿಕೊಂಡಿದ್ದ ಮೌನ ಮೆರವಣಿಗೆ, ಧರಣಿ ಸತ್ಯಾಗ್ರಹ, ಮಧ್ಯಪಾನ ನಿಷೇಧ ಸಪ್ತಾಹ, ಸಾರ್ವಜನಿಕ ತಿಳುವಳಿಕಾ ಸಭೆ, ವಿಶೇಷ ಉಪನ್ಯಾಸ ಜೊತೆಗೆ ಅಂದು ತೀವ್ರ ಗತಿಯಲ್ಲಿ ಚಾಲನೆ ಪಡೆದುಕೊಂಡಿದ್ದ ಬೀದಿ ನಾಟಕವೂ ಸೇರಿದಂತೆ ಅದೊಂದು ಜನಾಂದೋಲನದ ರೂಪ ಪಡೆದುಕೊಂಡಿತ್ತು ಎಂದರೆ ತಪ್ಪಾಗಲಾರದು. ಆ ಸಮಯದಲ್ಲಿ ವಿಷ್ಣು ನಾಯ್ಕ ಅವರು ಬರೆದು ನಿರ್ದೇಶಿಸಿ, ಸಹಕಲಾವಿದರೊಂದಿಗೆ ಅಭಿನಯಿಸಿದ 'ಸರಾಯಿ ಸೂರಪ್ಪ ನಾಟಕವಂತೂ ಹಳ್ಳಿ– ಪಟ್ಟಣ ಎಂಬ ತಾರತಮ್ಯವಿಲ್ಲದೇ ಇಡೀ ತಾಲೂಕಿನಾದ್ಯಂತ ಅಭೂತಪೂರ್ವ ಪ್ರದರ್ಶನ ಕಂಡಿತ್ತು. ಅಂಕೋಲೆಯ ಝಂಡಾಕಟ್ಟೆ, ಮೀನು ಪೇಟೆ, ಬಸ್‌ಸ್ಟ್ಯಾಂಡ, ಗಾಂಧಿಮೈದಾನ, ಮುಂತಾದ ಜನನಿಬಿಡ ಸ್ಥಳಗಳಲ್ಲಿ ಮತ್ತು ಬೆಳಂಬಾರ, ಬಾಸಗೋಡ, ವಂದಿಗೆ, ಹಿಚಕಡ, ಹಿಲ್ಲೂರು, ಕುಂಟಕಣಿ, ಅವರ್ಸಾ, ಅಗಸೂರ, ಬೇಲೇಕೇರಿ, ಚಂದುಮಠ ಹಾಗೂ ಇನ್ನಿತರ ಅನೇಕ ಹಳ್ಳಿಗಳಲ್ಲಿ ಪ್ರದರ್ಶನ ಕಂಡು ಮನೆಮಾತಾಗಿದೆ.

ವಿಷ್ಣು ನಾಯ್ಕ ಅವರ ರಾಘವೇಂದ್ರ ರಂಗ ಸಂಘದ ಕಲಾವಿದರು ವಿವಿಧ ವೇದಿಕೆಗಳಲ್ಲಿ ಅತಿ ಹೆಚ್ಚು ಪ್ರದರ್ಶನವನ್ನು ನೀಡಿ ತನ್ಮೂಲಕ ಸಾಮಾಜಿಕ ಜಾಗ್ರತೆಗೆ ಕಾರಣವಾಗಿರುವುದು ಅಭಿನಂದನೀಯ. ಆ ಸಮಯದಲ್ಲಿ ಈ ಬೀದಿ ನಾಟಕ ಇಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಇದನ್ನು ನೋಡಿದ ಅನೇಕ ಕುಡುಕರು ತಮ್ಮ ಕುಡಿತ ಚಟವನ್ನು ತ್ಯಜಿಸಿ ಸಾರ್ವಜನಿಕವಾಗಿ ಸನ್ಮಾನವನ್ನು ಸ್ವೀಕರಿಸಿದ ಉದಾಹಣೆಗಳೂ ಅಲ್ಲಲ್ಲಿ ಇವೆ. ಈ ಆಂದೋಲನದಲ್ಲಿ ಹಿರಿಯ ಪತ್ರಕರ್ತರಾದ ಅಮ್ಮೆಂಬಳ ಆನಂದ, ಹಿರಿಯ ಸ್ವಾತಂತ್ರ್ಯ ಯೋಧ ಜೋಗಿ ಬೀರಣ್ಣ ನಾಯಕ, ಪ್ರೊ. ಕೆ. ಜಿ. ನಾಯಕ, ಡಾ। ಕೆ. ಎಂ. ಸಾಮ್ಯುವೆಲ್, ವಿಠೋಬ ಪ್ರಭು, ಶಂಕರ ಕೇಣಿ, ವಿ. ಜೇ. ನಾಯಕ ಮುಂತಾದ ಅನೇಕ ಮಹನೀಯರು ಸಕ್ರಿಯವಾಗಿ ಭಾಗವಹಿಸಿ ಪ್ರೋತ್ಸಾಹಿಸಿದ್ದಾರೆ.

ಇವುಗಳ ಹೊರತಾಗಿ ವಿಷ್ಣು ನಾಯ್ಕ ಅವರ ಬೀದಿ ನಾಟಕಗಳನ್ನು ಹಲವಾರು ವರ್ಷ ತಪ್ಪದೇ ತಮ್ಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರದರ್ಶನ ಏರ್ಪಡಿಸುತ್ತಿದ್ದ ಕೊಗ್ರೆ ಶಿಕ್ಷಣ ಪ್ರತಿಷ್ಠಾನ, ಅಂಕೋಲಾ ತಾಲೂಕಾ ಕೋಮು ಸೌಹಾರ್ದ ಸಮಿತಿ, ಜಿ. ಸಿ. ಕಾಲೇಜ್ ಅಭಿನಯ ಮಂಟಪ, ಜಿನದೇವ ನಾಯಕ ಪ್ರಕಾಶನ, ಶ್ರೀ ರಾಘವೇಂದ್ರ ಪ್ರಕಾಶನ ಮುಂತಾದ ಸಂಘ ಸಂಸ್ಥೆಗಳು ಈ ಬೀದಿ ನಾಟಕಗಳಿಗೆ ಹೆಚ್ಚಿನ ಸಹಕಾರ ನೀಡಿದ್ದವು. ಬೀದಿನಾಟಕಗಳ ಮೂಲಕ ಮನಮುಟ್ಟುವಂತೆ ಅಭಿನಯಿಸಿ ಜನರಲ್ಲಿ ಅರಿವನ್ನು ಮೂಡಿಸಲು ಅಂಕೋಲೆಯ ಅನೇಕ ಕಲಾವಿದರು ಬಹಳ ಆಸಕ್ತಿಯಿಂದ ದುಡಿದಿದ್ದಾರೆ. ಅಂಥವರಲ್ಲಿ ಇಲ್ಲಿಯ ಶ್ಯಾಮ ಹುದ್ದಾರ, ವಿಷ್ಣು ನಾಯ್ಕ, ರಾಮಕೃಷ್ಣ ಗುಂದಿ, ಮೋಹನ ಹಬ್ಬು, ಶಾಂತಾರಾಮ ನಾಯಕ ಹಿಚಕಡ, ಶ್ರೀಪಾದ ಶೆಟ್ಟಿ, ಕೃಷ್ಣ ನಾಯಕ ಹಿಚಕಡ, ರಾಮಾ ನಾಯ್ಕ, ಅನಂತ ನಾಯ್ಕ, ಪ್ರಕಾಶ ಕಡಮೆ, ಎಂ. ಎಂ.ಕರ್ಕಿಕರ, ಪ್ರಕಾಶ ಕುಂಜಿ, ಉಮೇಶ ನಾಯ್ಕ, ರಮೇಶ ನಾಯ್ಕ, ವಿದ್ಯಾ ನಾಯ್ಕ, ತಾರಾ ಭಾಗ್ವತ, ಉಲ್ಲಾಸ ಹುದ್ದಾರ, ಕೆ. ರಮೇಶ, ಎನ್. ಡಿ. ಅಂಕೋಲೆಕರ, ರಫಿಕ್ ಶೇಖ್, ತುಕಾರಾಮ ನಾಯ್ಕ ಹಾಗೂ ಇನ್ನೂ ಅನೇಕ ಹಿರಿ–ಕಿರಿಯ ಕಲಾವಿದರು, ಕಾಲೇಜು ವಿದ್ಯಾರ್ಥಿಗಳು ಇದರಲ್ಲಿ ಉತ್ಸುಕರಾಗಿ ಭಾಗವಹಿಸಿದ್ದನ್ನು ಇಲ್ಲಿ ನೆನೆಯಲೇ ಬೇಕು. ಇಲ್ಲಿಯ ಕಲಾವಿದರ ಮನಮುಟ್ಟುವ ಅಭಿನಯನವನ್ನು ಕಂಡು ಕೇಳಿದ ಹಲವರು ಈ ತಂಡವನ್ನು ತಮ್ಮ ತಮ್ಮ ಊರಿಗೆ ಆಹ್ವಾನಿಸಿ ನಾಟಕ ಪ್ರದರ್ಶನ ಏರ್ಪಡಿಸಿದ ಅನೇಕ ಉದಾಹರಣೆಗಳು ನಡೆದಿದೆ. ಒಟ್ಟಿನಲ್ಲಿ ಅಂಕೋಲೆಯ ಚರಿತ್ರೆಯಲ್ಲಿ ೮೦ ಮತ್ತು ೯೦ ರ ದಶಕದಲ್ಲಿ ನಡೆದ

ಬೀದಿನಾಟಕಗಳು ಕೇವಲ ಮನರಂಜನೆಯ ಮಾಧ್ಯಮವಾಗದೆ ಅದೊಂದು ಚಳುವಳಿಯ ರೂಪದಲ್ಲಿ ಜನಸಾಮಾನ್ಯ ಪ್ರೇಕ್ಷಕರನ್ನು ಸೆಳೆಯುವದರೊಂದಿಗೆ ಸಾಮಾಜಿಕ ಅನಿಷ್ಟಗಳ ಕುರಿತು ಜನಸಾಮಾನ್ಯರಲ್ಲಿ ಅರಿವನ್ನು ಮೂಡಿಸಲು ನಿರೀಕ್ಷೆಗಿಂತ ಹೆಚ್ಚಿನ ರೀತಿಯಲ್ಲಿ ಫಲಕಾರಿಯಾದದ್ದು, ಅದನ್ನು ಕಂಡು ಕೇಳಿ ಅನುಭವಿಸಿದ ಎಲ್ಲರಿಗೂ ತಿಳಿದಿರುವ ಸತ್ಯ. ಅಂಕೋಲೆಯಲ್ಲಿ ಬಹುವಾಗಿ ಕಾಣಿಸಿಕೊಂಡ ಈ ಆಂದೋಲನ ತದನಂತರ ಜಿಲ್ಲಾ ಮಟ್ಟಕ್ಕೂ ವ್ಯಾಪಿಸಿ ಉತ್ತರ ಕನ್ನಡ ಜಿಲ್ಲೆಯಾದ್ಯಂತ ತನ್ನ ಪ್ರಚಾರವನ್ನು ಪಡೆದುಕೊಂಡಿತು ಎನ್ನಬಹುದು. ಆ ದಿನಗಳಲ್ಲಿ ನಮ್ಮ ಅಂಕೋಲೆಯಲ್ಲಿ ಚಳುವಳಿಯೋಪಾದಿಯಲ್ಲಿ ನಡೆದ ಬೀದಿ ನಾಟಕಗಳ ಪ್ರದರ್ಶನ ತಾಲೂಕಿನ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೇ ದಾಖಲಾಗಿ ಇಂದಿಗೂ ಮತ್ತೆ ಮತ್ತೆ ಆ ದಿನಗಳನ್ನು ನೆನೆಯುವಂತೆ ಮಾಡುವಲ್ಲಿ ಸಫಲವಾಗಿವೆ ಎನ್ನಬಹುದು.

(೨೦೦೬ರಲ್ಲಿ ಪ್ರಕಟಗೊಂಡ 'ಅಂಕೋಲೆ' ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಯಿಂದ)

ದೇವರು ದೊಡ್ಡವನು

ದೇವರು ದೊಡ್ಡವನು, ಮಹಿಮೆ ಅಪಾರ
ಆವ ಬಣ್ಣನೆಗು ನಿಲುಕದ ಆಕಾರ
ರವಿ-ಚಂದ್ರ-ಭೂ-ತಾರೆ ದೇವನ ಸೃಷ್ಟಿ
ವಿವಿಧ ವಿನ್ಯಾಸ ವಿಭವ ಸರ್ವ ಸಮಷ್ಟಿ

ಹಗಲು ರಾತ್ರಿಯ ಚಕ್ರ, ಬಗೆ ಬಗೆಯ ಚಿತ್ರ
ಖಗ-ಮೃಗ-ಮತ್ಸ್ಯಸಂಕುಲ ಬಹು ವಿಚಿತ್ರ
ಸರಸರನೆ ಹರಿವ ನದಿ, ಪಸರಿಸಿಹ ಕಡಲು
ತರುಬನ ಗಿರಿಸಿರಿ ನಿಸರ್ಗದ ಹಿರಿ ಒಡಲು

ಜೀವರಾಶಿಗೆ ಮೇಲ್ಮೆ ಮಾನವನ ಹುಟ್ಟು
ಯಾವನಿಗೆ ಗೊತ್ತು ಹುಟ್ಟು ಸಾವಿನ ಗುಟ್ಟು
ನೋವು ನಲಿವಿನ ನೋಟ ಈ ಜಗದ ಆಟ
ಕಾವದೇವನೆ ಬಲ್ಲ ಎಲ್ಲ ವೈವಾಟ

– ಜಿ. ಪಿ. ನಾಯಕ
(ಪದಸಂಪದ ಸಂಕಲನದಿಂದ)

ಕನ್ನಡದಲ್ಲಿ ಚುಟುಕು ಸಾಹಿತ್ಯ, ಅಂಕೋಲಾದ ಕೊಡುಗೆ

– ವಿಠ್ಠಲ ವಿ. ಗಾಂವಕಾರ

ಸಾಹಿತ್ಯ ಎಂದರೇನು? ಚುಟುಕು ಸಾಹಿತ್ಯ ಎಂದರೇನು? ಎಂಬ ಪ್ರಶ್ನೆಗಳು ಆಗಾಗ ಬರುತ್ತವೆ. ಚುಟುಕು ಸಾಹಿತ್ಯ, ಸಾಹಿತ್ಯದೊಳಗೆ ಸೇರಿರುವುದರಿಂದ ಮತ್ತೆ ಪ್ರತ್ಯೇಕತೆ ಏಕೆ? ಎಂಬ ವಿಚಾರವೂ ಬರುತ್ತದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಚುಟುಕು ಸಾಹಿತ್ಯದ ಒಂದು ಸರಳ ತಿಳುವಳಿಕೆ ಹೊಂದುವುದು ಒಳ್ಳೆಯದು. 'ಚುಟುಕು ಸಾಹಿತ್ಯ' ಎಂಬ ನುಡಿಗೆ, 'ಚುಟಕ ಸಾಹಿತ್ಯ' ಎಂಬ ಪದವನ್ನು ಬಳಸುವುದು ಇದೆ. ಈ ಎರಡೂ ಪದಗಳ ಬಳಕೆಯಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಬಳಸುವುದು ತಪ್ಪೂ ಅಲ್ಲ, ಚುಟುಕು ಬ್ರಹ್ಮನೆಂದು ಖ್ಯಾತಿ ಪಡೆದ ದಿನಕರ ದೇಸಾಯಿಯವರು ಎರಡೂ ಪದಗಳನ್ನು ಬಳಸಿದ್ದಾರೆ.

ಬದುಕು ಬೇರೆ ಅಲ್ಲ, ಸಾಹಿತ್ಯ ಬೇರೆ ಅಲ್ಲ, ಬದುಕೇ ಸಾಹಿತ್ಯ; ಸಾಹಿತ್ಯವೇ ಬದುಕು. ಬದುಕಿನ ಅನುಭವಗಳು ಸಾಹಿತ್ಯ. ಸಾಹಿತ್ಯ ವೈಯಕ್ತಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಅನುಭವಗಳ, ಅನುಭಾವಗಳ ಒಟ್ಟಂದದ ಚಂದವಾಗಿದೆ. ಸಾಹಿತ್ಯ ವ್ಯಕ್ತಿಗತ ಹಿತ, ಸಾಮಾಜಿಕ ಹಿತ, ದೇಶದ ಹಿತವನ್ನು ಕಾಯುವುದು. ಉತ್ತಮ ಸಮಾಜವನ್ನು ನಿರ್ಮಾಣ ಮಾಡುವುದು. ಸಾಹಿತ್ಯ ಜ್ಞಾನವನ್ನು ಹೆಚ್ಚಿಸುವುದು. ಸಾಹಿತ್ಯ ಬದುಕಿನ ಸಂಜೀವಿನಿ.

ಸಾಹಿತ್ಯ ರಚನೆಯಲ್ಲಿ ಅದರ ಆಕಾರ ಬಹಳ ಮಹತ್ವ. ಕವಿ ಮತ್ತು ಸಾಹಿತಿಗಳು ತಮ್ಮ ಸಾಹಿತ್ಯದ ಅಭಿವ್ಯಕ್ತಿಗಾಗಿ ಬಳಸುವ ಶೈಲಿ ಎನ್ನುವುದು ಭಿನ್ನ ಭಿನ್ನ ರೂಪದಲ್ಲಿರುತ್ತದೆ. ಪ್ರಧಾನವಾಗಿ ಪದ್ಯ ಮತ್ತು ಗದ್ಯ ಶೈಲಿಯನ್ನು ಬಹಳ ಹಿಂದಿನಿಂದಲೂ ಬಳಸಿಕೊಂಡು ಬಂದಿದ್ದಾರೆ. ಕನ್ನಡ ಭಾಷಾ ಸಾಹಿತ್ಯದ ಬಗ್ಗೆ ಹೇಳುವುದಾದರೆ ಕಾವ್ಯ ಶೈಲಿಯಲ್ಲಿಯೇ ನಮ್ಮ ಹಿಂದಿನ ಕವಿಗಳು ಸಮೃದ್ಧವಾಗಿ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಹಾಗೆಂದು ಗದ್ಯ ಶೈಲಿ ಬಳಕೆಯಲ್ಲಿ ಇಲ್ಲವೆನ್ನುವ ಹಾಗೆ ಇಲ್ಲ. ಶಿವಕೋಟ್ಯಾಚಾರ್ಯನ ಒಡ್ಡಾರಾಧನೆಯಂತಹ ಗ್ರಂಥ ಪಂಪನಿಗಿಂತಲೂ ಹಿಂದೆಯೇ ರಚನೆಗೊಂಡಿದೆ.

ಪದ್ಯ ಶೈಲಿ ಅರ್ಥಾತ್ ಕಾವ್ಯ ಶೈಲಿ, ಹತ್ತನೇ ಶತಮಾನದಿಂದ ಹತ್ತೊಂಬತ್ತನೇ ಶತಮಾನದ ಕೊನೆಯವರೆಗೆ ಓತಪ್ರೋತವಾಗಿ ಬೆಳೆದು ಬಂದಿದೆ. ಸಾಮಾನ್ಯವಾಗಿ ಪಂಪನಿಂದ ಮೊದಲುಗೊಂಡು ಷಡಕ್ಷರದೇವನ ವರೆಗಿನ ಕವಿಗಳೆಲ್ಲ ಕಾವ್ಯ ಮಾರ್ಗವನ್ನೇ ನೆಚ್ಚಿ, ಅಪ್ಪಿ ಕಾವ್ಯ ರಚನೆಯನ್ನು ಮಾಡಿದರು. 1870 ರಲ್ಲಿ ಜನಿಸಿದ 'ನಂದಳಿಕೆ ಲಕ್ಷ್ಮೀನಾರಾಯಣಪ್ಪ (ಮುದ್ದಣ) ಗದ್ಯ ಸಾಹಿತ್ಯ ರಚನೆಯೊಂದಿಗೆ ಹೊಸಗನ್ನಡ ಗದ್ಯ ಮಾರ್ಗವನ್ನು ತೆರೆದು ತೋರಿಸಿದನು. 'ಗದ್ಯ ಹೃದ್ಯಂ, ಪದ್ಯಂ ವಧ್ಯಂ, ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು' ಎಂಬ ಘೋಷಣೆಯೊಂದಿಗೆ ಗದ್ಯ ಸಾಹಿತ್ಯದ ಮುಂಗೋಳಿ ಎಂಬ ಹೆಸರಿಗೆ ಪಾತ್ರನಾದನು. ಜೊತೆ ಜೊತೆಯಾಗಿ ಕನ್ನಡ ಸಾಹಿತ್ಯದಲ್ಲಿ ಕವಿತೆಗಳು, ಪ್ರಬಂಧ, ಸಣ್ಣ ಕಥೆಗಳು, ಕವಿ ಸಾಹಿತಿಗಳ ಸಾಹಿತ್ಯ ಕರ್ಮದಲ್ಲಿ ಹೊಸ ಪ್ರಕಾರಗಳಾಗಿ ಹೊಸಗನ್ನಡದಲ್ಲಿ ಮೈದಳೆಯತೊಡಗಿದವು.

ಸರಿಸುಮಾರು 10ನೇ ಶತಮಾನದಿಂದ ಕನ್ನಡದಲ್ಲಿ ಹಳೆಗನ್ನಡ ಕಾವ್ಯ ಪ್ರಕಾರ ಬೆಳೆದು ಬಂದಿತ್ತು. ಅಷ್ಟಾದಶ ವರ್ಣನೆಗಳಿಂದ ಕೂಡಿದ ಉದ್ದುದ್ದ ಕಾವ್ಯಗಳ ನಿರ್ಮಾಣದ ಜೊತೆಗೆ ಪರಂಪರಾಗತವಾದ ರಾಮಾಯಣ, ಮಹಾಭಾರತ ಧಾರ್ಮಿಕ ಪುರುಷರನ್ನು, ಧರ್ಮವನ್ನು ಆಧಾರವಾಗಿಟ್ಟುಕೊಂಡು ಗತವೈಭವ ಹಾಡುವುದು ಸಾಮಾನ್ಯವಾಗಿತ್ತು. ಕವಿಗಳು ಲೌಕಿಕ ಮತ್ತು ಪಾರಲೌಕಿಕ ಉದ್ದೇಶವನ್ನು ಹೊಂದಿ ಕಾವ್ಯ ರಚನೆಯನ್ನು ಮಾಡಿದರು. ಆ ಕಾಲದ ಸಾಹಿತ್ಯ ಕೃಷಿ ಪಂಡಿತರಿಂದ ನಿರ್ಮಾಣವಾಗಿ ಪಂಡಿತರಿಗಾಗಿ ಮಾತ್ರವಾಗಿತ್ತು. ಜೊತೆಗೆ ರಾಜಮನ್ನಣೆ ಗಳಿಸುವುದು ಆಗಿತ್ತು. ಭಾರತ ನವೀನ ದಾರಿಯಲ್ಲಿ ಮುನ್ನಡೆ ಸಾಧಿಸ ತೊಡಗಿದಾಗ ಬದುಕಿನ ಎಲ್ಲ ರಂಗಗಳು ಹೊಸ ಆಯಾಮ ಪಡೆದುಕೊಂಡವು. ಬದುಕಿನ ಅವಿಭಾಜ್ಯ ಅಂಗವಾಗಿ ರೂಪುಗೊಳ್ಳುವ ಸಾಹಿತ್ಯ ಬದಲಾವಣೆಯ ಮಾರ್ಗ ಹಿಡಿಯಿತು.

ಸಾಹಿತ್ಯ ಎಲ್ಲರಿಗಾಗಿ, ಸಾಹಿತ್ಯ ಎಲ್ಲರೂ ಬಳಸುವುದಕ್ಕಾಗಿ ರೂಪುಗೊಳ್ಳಬೇಕು. ಅವುಗಳ ರಚನಾ ಬಿಗುವು ಕಡಿಮೆಯಾಗಬೇಕು. ಅವು ನಿತ್ಯ ಎಲ್ಲರ ಬದುಕಿಗೆ ಹತ್ತಿರವಾಗಬೇಕು. ಪ್ರತಿಭೆಯಿದ್ದವರು ತಮಗಿಷ್ಟವಾದ ರೀತಿಯಲ್ಲಿ ರಚಿಸುವಂತಾಗಬೇಕು ಎಂಬ ಭಾವನೆ ಮೂಡಿತು. ಜೊತೆಗೆ ಅತಿ ಕಡಿಮೆ ಓದಿನಿಂದ ಬದುಕಿನ ಎಲ್ಲ ಮುಖಗಳ ತಿಳಿವಿನಿಂದ ಹೆಚ್ಚಿನ ಜ್ಞಾನ ಮತ್ತು ಆನಂದವನ್ನು ಹೊಂದುವಂತಾಗಬೇಕು, ಓದು ಚಿಂತನೆಗೆ ಹಚ್ಚುವಂತಾಗಬೇಕು ಎಂಬ ಭಾವನೆಯೇ ಕಾವ್ಯ ಶೈಲಿಯ ಬದಲಾವಣೆಗೆ ಮೂಲವಾಯಿತು.

ಕಾವ್ಯ ರಚನಾ ಶೈಲಿಯ ಆಶಯ, ಆಕಾರ, ಗುಣ, ಲಕ್ಷಣಗಳನ್ನು ನೋಡುತ್ತ ಹೋದರೆ ಬಹುದೊಡ್ಡ ಇತಿಹಾಸವಿದೆ. ಕನ್ನಡದಲ್ಲಿ ಕಾವ್ಯಗಳು ಚಂಪೂ ಶೈಲಿಯಲ್ಲಿ ಮೊದಲುಗೊಳ್ಳುತ್ತವೆ. ಚಂಪುವಿನ ಜೊತೆಯಲ್ಲಿ ಸೇರಿ ಬಂದದ್ದು ಕಂದ, ಮುಂದೆ ವಚನ, ದೇಶೀಯ ಶೈಲಿಗಳಾದ ಷಟ್ಪದಿಗಳು, ರಗಳೆ, ದ್ವಿಪದಿ, ತ್ರಿಪದಿ, ಚೌಪದಿ, ಹೀಗೆ ಭಿನ್ನ ಭಿನ್ನ ರೂಪದಲ್ಲಿ ರಚನೆಗೊಂಡು ಕನ್ನಡ ಸಾಹಿತ್ಯ ಲೋಕವನ್ನು ಸಮೃದ್ಧಿಗೊಳಿಸಿವೆ. ಇಲ್ಲಿ ಒಂದು ಅಂಶವನ್ನು ಲಕ್ಷ್ಯದಲ್ಲಿಡಬೇಕು. ಸಾಹಿತ್ಯ ಜನಪದ ಬದುಕಿನ ಮಧ್ಯೆ, ತ್ರಿಪದಿ ಲಾವಣಿಯಂತಹ ಶೈಲಿಗಳು ಎಲ್ಲ ಕಾಲದಲ್ಲೂ ಜೀವಂತವಾಗಿವೆ.

ಕಾವ್ಯ ಮಾರ್ಗದಿಂದ ಕವಿತೆಗಳ ರಚನಾ ಮಾರ್ಗಕ್ಕೆ ಬಂದ ನಂತರ ಅದರಿಂದ ಹಲವಾರು ಭಿನ್ನ ಭಿನ್ನ ರೂಪದಲ್ಲಿ ಕವಿಗಳು ಕವಿತೆಗಳನ್ನು ರಚನೆ ಮಾಡತೊಡಗಿದರು. ಕವಿತೆಗಳಲ್ಲಿ ನಿಳ್ಗವನಗಳು, ಗೀತಕವನಗಳು, ಕಥನ ಕವನಗಳು, ಆತ್ಮನಿವೇದನಾ ಕವನಗಳು, ಇಂಗ್ಲಿಷಿನಿಂದ ಬಂದ ಸಾನೆಟ್‌ಗಳು ಇವುಗಳೆಲ್ಲವುಗಳು ದೀರ್ಘ ಕವನಗಳ ಗುಂಪುಗಳು. ಇದರ ಜೊತೆ ಜೊತೆಯಾಗಿಯೇ ಕನ್ನಡದಲ್ಲಿ ಚುಟುಕು ಸಾಹಿತ್ಯ ಶೈಲಿ ಜನಪ್ರಿಯವಾಯಿತು. ಈ ಚುಟುಕು ಸಾಹಿತ್ಯದಲ್ಲಿ ಪ್ರಧಾನವಾಗಿ ಚೌಪದಿಗಳದೇ ಒಂದು ಪ್ರಕಾರವಾದರೆ ಉಳಿದಂತೆ ಹನಿಗವನಗಳದು ಇನ್ನೊಂದು ಗುಂಪು. ಚುಟುಕುಗಳು, ಹನಿಗವನಗಳು, ಬಿಂದುಗವನಗಳು, ಹೀಗೆ ಕವಿಗೊಂದು ಪ್ರಕಾರ ಎಂಬಂತೆ ಲೆಕ್ಕವಿಡಲು ಸಾಧ್ಯವಿಲ್ಲದಷ್ಟು ಕವಿತಾ ರಚನಾ ಮಾರ್ಗಗಳು ಬಂದಿವೆ. ಹೊಸಗನ್ನಡ ಸಾಹಿತ್ಯ ಮಾರ್ಗದಲ್ಲಿ ಕವಿತೆಗಳಲ್ಲಿ ಚುಟುಕು ಇಂದು ಬಹಳವಾಗಿ ಗುರುತಿಸಿಕೊಳ್ಳುವ ಪ್ರಕಾರವಾಗಿದೆ.

ಪದ್ಯ ಸಾಹಿತ್ಯದ ಪ್ರಕಾರಗಳಲ್ಲಿ ಅವುಗಳ ರಚನೆ, ಆಕಾರ, ಉದ್ದೇಶ, ವ್ಯಾಪ್ತಿ ಅವು ಕೊಡುವ ಪರಿಣಾಮಗಳ ದೃಷ್ಟಿಯಿಂದ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಒಂದು ಕವಿತೆ ಅಥವಾ ಕವನಗಳ ಗುಂಪು. ಇನ್ನೊಂದು ಚುಟುಕು ಸಾಹಿತ್ಯದ ಗುಂಪು. ಇವು ಆಕಾರದಲ್ಲಿಯೇ ತಾವು ಯಾವ ಗುಂಪಿಗೆ ಸೇರಿದವುಗಳೆಂದು ತೋರ್ಪಡಿಸಿಕೊಳ್ಳುತ್ತವೆ. ಸರಳವಾಗಿ ವ್ಯಾಖ್ಯಾನಿಸುವುದಾದರೆ ಕವಿತೆಗಳು ದೀರ್ಘವಾದವುಗಳು. ಹಲವಾರು ಪಾದಗಳಿಂದ (ಸಾಲು) ಕೂಡಿರಬಹುದು. ಚುಟುಕುಗಳ ಹೆಸರೇ ಹೇಳುವಂತೆ ಹ್ರಸ್ವವಾದವುಗಳು, ಕಿರು ಆಕಾರವನ್ನು ಹೊಂದಿದವುಗಳು, 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಗಾದೆಯಂತೆ ಅವುಗಳಲ್ಲಿ ಅಡಗಿರುವ ಸಾಹಿತ್ಯ ಗುಣ ದೊಡ್ಡದಿರಬಹುದು.

ಚುಟುಕು ಸಾಹಿತ್ಯವನ್ನು ಅರ್ಥೈಸಿಕೊಳ್ಳುವುದಾದರೆ ಆಕಾರದಲ್ಲಿ ಚಿಕ್ಕದಾದವುಗಳು. ಸ್ವತಂತ್ರ ಘಟಕವಾಗಿ ನಿಂತು ರೂಪುಗೊಳ್ಳುತ್ತವೆ. ಇಡಿತನ, ಕಿರಿತನ, ಚುರುಕುತನ, ತೀವ್ರತೆ, ಕುತೂಹಲ, ವ್ಯಂಗ್ಯ ಅಥವಾ ಲಘು ಹಾಸ್ಯ, ನವಿರುತನ ಎಲ್ಲಕ್ಕೂ ಹೆಚ್ಚಾಗಿ ಭಾವ ಬುದ್ಧಿಗಳು ಮೆಚ್ಚುವಂತಹ ಆಶಯವನ್ನು ಕಿರು ರಚನೆಗಳು ಕೊಟ್ಟರೆ ಅದು ಚುಟುಕು ಸಾಹಿತ್ಯ. ಈ ಚುಟುಕು ಸಾಹಿತ್ಯ ಇತ್ತೀಚೆಗೆ ರಚನೆಗೊಂಡ ಶೈಲಿಯಲ್ಲ. ಕನ್ನಡ ಸಾಹಿತ್ಯದ ಆದಿಯಿಂದಲೇ ಹುಟ್ಟಿ, ಬೆಳೆದು, ಉಳಿದು ಬಂದಿದೆ. ಇನ್ನೊಂದು ಅಂಶವನ್ನು ಗಮನಿಸಬೇಕು. ಕವಿತೆಗಳು 20ನೇ ಶತಮಾನದಲ್ಲಿ ರೂಪುಗೊಂಡವು. ಚುಟುಕುಗಳು ಸಾಹಿತ್ಯದ ಆದಿಯೊಂದಿಗೆ ಮಾನವ ಬದುಕಿನೊಂದಿಗೆ ಬೆಳೆದುಬಂದವು.

ಶಿಲಾಶಾಸನಗಳ ಮೇಲೆ ಕಂಡರಿಸಿದ ಚುಟುಕುಗಳು, ಜನಪದ ಗಾದೆಗಳು, ಒಗಟುಗಳು, ಜನಪದರು ಕಟ್ಟಿ ಹಾಡಿದ ತ್ರಿಪದಿಗಳು, ಚುಟುಕು ಸಾಹಿತ್ಯದ ಮಾದರಿಗಳೇ ಆಗಿವೆ. ನಂತರದಲ್ಲಿ ವಚನಕಾರರು ಕಟ್ಟಿದ ವಚನಗಳು, ಸರ್ವಜ್ಞನು ರಚಿಸಿದ ತ್ರಿಪದಿಗಳು, ಡಿವಿಜಿಯವರ ಮಂಕುತಿಮ್ಮನ ಕಗ್ಗ, ದಿನಕರ ದೇಸಾಯಿಯವರ ಚೌಪದಿಗಳು ಎಲ್ಲವೂ ಚುಟುಕು ಸಾಹಿತ್ಯಗಳು. ಅವು ಸ್ವತಂತ್ರವಾಗಿ ನಿಂತು.

ತಮ್ಮ ಅಭಿವ್ಯಕ್ತಿಯ ಮೂಲಕ ಮುಟ್ಟಿಸಬೇಕಾದ ಆಶಯವನ್ನು ಮುಟ್ಟಿಸುತ್ತವೆ. ಒಟ್ಟಿನಲ್ಲಿ ಚೌಪದಿಗಳು, ಮುಕ್ತಕಗಳು, ಹನಿಗವನಗಳು, ಕಿರುಗವನಗಳು, ಹಿಡಿಗವನಗಳು, ಕಿಡಿಗವನಗಳು ಎಲ್ಲವೂ ಚುಟುಕು ಸಾಹಿತ್ಯದವುಗಳು. ಇವೆಲ್ಲವುಗಳು ಓದುಗರ ಮನಸ್ಸಿಗೆ ಮುದ ನೀಡುತ್ತವೆ. ಇದನ್ನೇ ಎಸ್.ವಿ.ರಂಗಣ್ಣನವರು ಹೀಗೆ ಹೇಳಿದ್ದಾರೆ. ಚುಟುಕುಗಳು 'ಕುಳ್ಳಾಗಿದ್ದರೂ ರೂಪವತಿ ಹೆಣ್ಣಿನಂತೆ'.

ಸಾಹಿತ್ಯದ ಅಭಿವ್ಯಕ್ತಿಗೆ ಶೈಲಿಯಲ್ಲಿ ದೀರ್ಘ ರಚನೆಗಳು ಬೇಕು, ಚುಟುಕು ರಚನೆಗಳು ಬೇಕು. ಭಾರತೀಯ ಮತ್ತು ಜಗತ್ತಿನ ಎಲ್ಲ ಭಾಷೆಗಳಲ್ಲಿ ಈ ವಿಧವಾದ ಚುಟುಕು ಸಾಹಿತ್ಯ ಪ್ರಕಾರಗಳಿವೆ. ಸಂಸ್ಕೃತದಲ್ಲಿ ಶ್ಲೋಕಗಳು, ಮುಕ್ತಕಗಳು, ಹಿಂದಿಯಲ್ಲಿ ದೋಹಾ ಮತ್ತು ಪಾತಿಯಾಗಳು, ಉರ್ದೂವಿನಲ್ಲಿ ಶಾಯರಿಗಳು, ರುಬಾಯಿಗಳು, ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಎಫಿಗ್ರಾಮ್ ಮತ್ತು ಲಿಮೆರಿಕ್‌ಗಳಿವೆ. ಒಟ್ಟಿನಲ್ಲಿ ಚುಟುಕು ಸಾಹಿತ್ಯವಿಲ್ಲದ ಭಾಷೆ, ಸಾಹಿತ್ಯ ಕ್ಷೇತ್ರವೇ ಇಲ್ಲ.

ಚುಟುಕುಗಳ ರಚನೆಯಲ್ಲಿ ಚಮತ್ಕಾರವಿದೆ. ಭಾಷೆ, ಶಬ್ದ, ಪ್ರಾಸ, ಧ್ವನಿ, ಅಲಂಕಾರ, ಶ್ಲೇಷೆ, ದ್ವಿರುಕ್ತಿ ಮುಂತಾದವುಗಳನ್ನು ಚುಟುಕುಗಳ ರಚನೆಯಲ್ಲಿ ಬಳಸಿ ಬುದ್ಧಿಗೆ ಕೆಲಸ ಮತ್ತು ಕಸರತ್ತನ್ನು ಕೊಡುವ ಜಾಣ್ಮೆ ಚುಟುಕು ಸಾಹಿತ್ಯ ರಚನೆಯಲ್ಲಿ ಅಡಗಿರುತ್ತದೆ. ಓದುಗರಿಗೆ ಭಾವ ಭಾಷೆಯ ಆಶಯವನ್ನು ತಿಳಿಯುವ ತೀವ್ರತೆ ಉಂಟಾಗುತ್ತದೆ. ಹಾಸ್ಯ, ವ್ಯಂಗ್ಯ ಭಾವಗಳನ್ನು ತಲುಪಿಸುವ ಗುಣ ಚುಟುಕುಗಳಿಗಿದೆ. ಕಡಿಮೆ ಓದು, ಹೆಚ್ಚು ತಿಳಿವು ಚುಟುಕುಗಳಿಂದ ಸಿಗುತ್ತದೆ. ಹೆಚ್ಚಿನ ಏಕಾಗ್ರತೆಯನ್ನು ಓದಿನ ಮೇಲೆ ಬಯಸುತ್ತದೆ. ಆಶಯಗಳನ್ನು ನೆನಪಿಸಿಕೊಳ್ಳುವುದು ಸುಲಭ, ಮರು ಮನನ ಸುಲಭ, ವಸ್ತು ಭಾಷೆ ಭಾವ ತೀಕ್ಷ್ಣವಾಗಿದ್ದಾಗ ಚುಟುಕುಗಳು ಕುಟ್ಟುವ, ಕಾಡುವ, ಕೆಣಕುವ, ಕಚ್ಚುವ ಗುಣಗಳನ್ನು ಹೊಂದಿರುತ್ತವೆ. ಕವಿ ಬುದ್ಧಿಗೆ 'ಕೆಂಪಗೆ ಕಾಸಿ ಮೆತ್ತಗೆ ಇಡುವ ಕೆಲಸ'ವನ್ನು ಮಾಡುತ್ತಾನೆ. ಚುಟುಕು ಎನ್ನುವುದು ಈ ಸಾಹಿತ್ಯ ಶೈಲಿಗೆ ಅನ್ವರ್ಥಕ ನಾಮವಾಗಿದೆ.

ಚುಟುಕುಗಳನ್ನು ಪ್ರತ್ಯೇಕ ಅಸ್ತಿತ್ವದಲ್ಲಿ ರಚಿಸುವುದು, ಬರೆದು ಸಂಗ್ರಹ ಮಾಡಿ ಪುಸ್ತಕ ರೂಪದಲ್ಲಿ ಕೊಡುವುದು ಒಂದು ವಿಧ. ಕಾವ್ಯ ಮತ್ತು ಕವಿತೆಗಳಲ್ಲಿ ಕೆಲವೊಂದು ನಿಶ್ಚಿತ ಅಭಿಪ್ರಾಯ ವ್ಯಕ್ತಪಡಿಸುವಾಗ, ಕಾವ್ಯ ಅಥವಾ ಕವಿತೆಯ ವಸ್ತುವಿಗೆ ಪುಷ್ಟಿ ಕೊಡುವುದಕ್ಕಾಗಿ ಸುಂದರ ಆಶಯವನ್ನು ಹೊತ್ತು ನಾಲ್ಕಾರು ಪದ ಅಥವಾ ಪಾದಗಳು ಒಟ್ಟಿಗೆ ರೂಪುಗೊಳ್ಳುತ್ತವೆ. ಅವುಗಳನ್ನು ಪ್ರತ್ಯೇಕಿಸಿ ಸಂದರ್ಭೋಚಿತವಾಗಿ ಉದಾರಿಸಿದಾಗ ಚುಟುಕು ಸಾಹಿತ್ಯವಾಗಿ ನಿಲ್ಲುತ್ತದೆ, ನೆಲೆಗೊಳ್ಳುತ್ತದೆ, ಬೆಲೆಗೊಳ್ಳುತ್ತದೆ. ಮೂಲ ಕಾವ್ಯವನ್ನು ಓದದ ಓದುಗರಿಗೆ ಕವಿ ಬಳಸಿದ ಸಂದರ್ಭ ಗೊತ್ತಿಲ್ಲದಿದ್ದರೆ ಸುಂದರ ಚುಟುಕಾಗಿ ಕಾಣುತ್ತದೆ. ಕಿರಿದರಲ್ಲಿ ಹಿರಿಯದಾದ ಅಂಶವನ್ನು ಹೇಳುವ ಸಾಹಿತ್ಯದ ತುಣುಕುಗಳು. ಹೀಗಿದ್ದರೂ ಚುಟುಕು ಸಾಹಿತ್ಯದ ಕುರಿತು ತಿಳಿಯುವಾಗ, ವಿವರಿಸುವಾಗ, ವಿಶ್ಲೇಷಿಸುವಾಗ ಅವುಗಳ ರಚನೆಯ ಹಿನ್ನೆಲೆಯನ್ನು ಪ್ರತ್ಯೇಕವಾಗಿ ನೋಡಬೇಕಾಗುತ್ತದೆ. ಇಡಿಯಿಂದ ಬಿಡಿಯಾಗಿ ಹೆಕ್ಕಿದ ಒಂದೆರಡು ಚುಟುಕುಗಳು. ಉದಾಹರಣೆಗೆ ಸಂಚಿಯ ಹೊನ್ನಮ್ಮನ 'ಹದಿಬದೆಯ ಧರ್ಮ' ಕಾವ್ಯದಲ್ಲಿ ಬರುವ ಈ ಪದ್ಯ ನೋಡಿ.

ಪೆಣ್ಣಲ್ಲವೆ ನಮ್ಮನ್ನೆಲ್ಲ ಹಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು

ಕಾವ್ಯದಿಂದ ಹೊರತೆಗೆದು ಬಳಸಿದಾಗ ಒಂದು ಚುಟುಕಾಗಿ ನಿಲ್ಲುತ್ತದೆ. ಇನ್ನು ಕವಿತೆಯೊಂದರ ನಾಲ್ಕು ಸಾಲುಗಳನ್ನು ನೋಡೋಣ.

ಮನುಕುಲದ ರಕ್ತಮಯ ಇತಿಹಾಸ ಕೂಗಿತ್ತು
ನೆಲವು ನಂದನವಾಗಲೇನು ಬೇಕು?
ತಿಳಿವು ತುಂಬಿದ ಕಣ್ಣು ಒಲವು ತುಂಬಿದ ಎದೆಯು
ಛಲವನರಿಯದ ಬದುಕು, ಇಷ್ಟೇ ಸಾಕು.

ಸ್ವತಂತ್ರ ಅಸ್ತಿತ್ವದಲ್ಲಿ ಈ ಪಾದಗಳನ್ನು ಓದಿದಾಗ ಎಂತಹ ಸುಂದರ ಚುಟುಕು ಸಾಹಿತ್ಯ ಅನಿಸುತ್ತದೆ. ಈ ಸಾಲುಗಳು ಗಂಗಾಧರ ಚಿತ್ತಾಲರು ಗಾಂಧಿಯವರ ಕುರಿತು ಬರೆದ 'ಮಹಾತ್ಮ' ಪದ್ಯದ ಕೊನೆಯ ನಾಲ್ಕು ಸಾಲುಗಳು.

ಅಂಕೋಲೆಯಲ್ಲಿ ಚುಟುಕು ಸಾಹಿತ್ಯ :

ಕನ್ನಡ ಸಾಹಿತ್ಯದಲ್ಲಿ ಚುಟುಕು ಸಾಹಿತ್ಯ ಪ್ರಕಾರಕ್ಕೆ ಅಂಕೋಲೆಯದು ಬಹುದೊಡ್ಡ ಕೊಡುಗೆ. ಚುಟುಕು

ಬ್ರಹ್ಮನೆಂದು ಖ್ಯಾತಿಗೊಂಡ ದಿನಕರ ದೇಸಾಯಿಯವರ ಊರು ಅಂಕೋಲೆಯ ಅಲಗೇರಿ. 20ನೇ ಶತಮಾನದ ಮಧ್ಯದಿಂದ ಚುಟುಕುಗಳನ್ನು ಬರೆಯಲು ಪ್ರಾರಂಭಿಸಿದರು. ಸರಿಸುಮಾರು 3 ದಶಕಗಳ ಕಾಲ ನಿತ್ಯ ನಿರಂತರವಾಗಿ ಚೌಪದಿಗಳನ್ನು ಬರೆದರು. ಸಾವಿರ ಸಾವಿರ ಚೌಪದಿಗಳನ್ನು ಬರೆದರು. ಕನ್ನಡದಲ್ಲಿ ಛಂದೋಬದ್ಧವಾದ ನಾಲ್ಕು ಪಾದಗಳ (ಚೌಪದಿ) ಶೈಲಿಗೆ ಬುನಾದಿ ಹಾಕಿದರು. ಪ್ರತಿಪಾದದಲ್ಲಿಯೂ 18 ಮಾತ್ರೆಗಳ ಬೆಲೆಯಿಟ್ಟು ಪ್ರಾಸದ ಅಂದವನ್ನು ಕೊಟ್ಟು ಚೌಪದಿಗಳ ರಚನೆ ಮಾಡಿದರು. ಚೌಪದಿ ಶೈಲಿಗೆ ಒಂದು ಪರಂಪರೆಯನ್ನು ನಿರ್ಮಿಸಿಕೊಟ್ಟರು. ದಿನಕರ ದೇಸಾಯಿಯವರಷ್ಟು ವೈವಿಧ್ಯಮಯ ವಿಷಯಗಳನ್ನು ಆಯ್ದು ಸಮಕಾಲೀನ ವಿಷಯಗಳನ್ನು ಬದುಕಿನ ವಿವಿಧ ಮುಖಗಳನ್ನು ಚೌಪದಿಯಲ್ಲಿ ಕಟ್ಟಿಕೊಟ್ಟರು. ತಾವು ಬರೆದ ಚೌಪದಿಗಳನ್ನು ಸಂಗ್ರಹ ಮಾಡಿ 2500 ಚೌಪದಿಗಳುಳ್ಳ 'ದಿನಕರನ ಚೌಪದಿ' 1978 ರಲ್ಲಿ ಪ್ರಕಟ ಮಾಡಿದರು. ಇಂದಿಗೂ ಅದನ್ನು ಸರಿಗಟ್ಟುವ ಇನ್ನೊಂದು ಗ್ರಂಥ ಕನ್ನಡದಲ್ಲಿ ಹೊರಬಂದಿಲ್ಲ. ಇದು ಅಂಕೋಲೆ ಚುಟುಕು ಸಾಹಿತ್ಯಕ್ಕೆ ಕೊಟ್ಟ ದೊಡ್ಡ ಕೊಡುಗೆ. ಉದಾಹರಣೆಯಾಗಿ ಎರಡು ಚೌಪದಿಗಳು.

ಕನ್ನಡ ನುಡಿಗೆ

ನನ್ನ ಕನ್ನಡ ನುಡಿಯೆ, ನಿನೇಷ್ಟು ಚಂದ!
ಏನು ಗೀಚಿದರು ಆಗುವುದು ಶ್ರೀಗಂಧ
ಸಿಂಗರದ ಗಣಿ ನಿನ್ನ ಶಬ್ದ ಸಂಪತ್ತು
ಬಂಗಾರಕ್ಕಿಂತಲೂ ಶ್ರೇಷ್ಠ ನುಡಿಮುತ್ತು!

ಸರಸಿ ಹೆಂಡತಿ

ಸರಸಿ ಹೆಂಡತಿಯಿರಲು ಅರಸಾಗಿ ನಾನು
ಸಂಸಾರ ಸಾಗಿಸುವೆ ಕುಡಿ ಕುಡಿದು ಜೇನು
ಮೊಂಡು ಹೆಂಡತಿ ಸಿಕ್ಕಿದರೆ ನಾನು ಸತ್ತೆ
ಕೋಗಿಲೆಯ ಬದಲಾಗಿ ಕಿರುಚುವುದು ಕತ್ತೆ!

ದಿನಕರ ದೇಸಾಯಿ ಅವರ ಚೌಪದಿಗಳಲ್ಲಿ ಮೌಲ್ಯ ತುಂಬಿದ ಆಶಯವಿದೆ, ಬದುಕಿನ ಪ್ರೀತಿಯಿದೆ, ವಿಡಂಬನೆಯಿದೆ, ತಿಳಿಹಾಸ್ಯವಿದೆ, ಹಿತಮಿತವಾದ ಅಣಕವಿದೆ. ಒಟ್ಟಿನಲ್ಲಿ ಚೌಪದಿಗಳನ್ನು ಟಂಕಿಸುವುದರಲ್ಲಿ ಪರಿಪೂರ್ಣರು.

ಚೌಪದಿಗಳ ರಚನೆಯಲ್ಲಿ ಪ್ರತಿ ಪಾದದಲ್ಲಿ 18 ಮಾತ್ರೆಗಳ ಬೆಲೆಯಿಟ್ಟು ರಚಿಸುವುದು ಸುಲಭದ ಕೆಲಸವಲ್ಲ. ಆದುದರಿಂದ ನಂತರ ಬಂದ ಒಬ್ಬಿಬ್ಬರು ಕವಿಗಳನ್ನು ಬಿಟ್ಟರೆ ಈ ರೀತಿ ಛಂದೋಬದ್ಧವಾಗಿ, ಪ್ರಾಸಬದ್ಧವಾಗಿ ಬರೆದವರು ವಿರಳ. ಇಷ್ಟಿದ್ದರೂ ಅಂಕೋಲೆಯ ನೆಲದಲ್ಲಿ ಅವರಿಂದ ಪ್ರಭಾವಿತರಾಗಿ 18 ಮಾತ್ರೆಯ ಬೆಲೆಯಲ್ಲಿಯೇ ಶಾಂತಾರಾಮ ಬಾಳೆಗುಳಿಯವರು ಚೌಪದಿಗಳನ್ನು ರಚಿಸಿದರು. ಅವರ 'ಕಸಬರಿಗೆ' ಉತ್ತಮ ಕೃತಿಯಾಗಿದೆ. ಮುಂದೆ 2016 ರಲ್ಲಿ ವಿಠ್ಠಲ ಗಾಂವಕಾರರವರು ಛಂದಸ್ಸಿನ ನಿಯಮಕ್ಕೆ ಬದ್ಧವಾಗಿ 18 ಮಾತ್ರೆಯಗಳನ್ನಿಟ್ಟು 400 ಚೌಪದಿಗಳುಳ್ಳ 'ಶಬ್ದಕಾವ್ಯ' ಎಂಬ ಕೃತಿಯನ್ನು ಹೊರತಂದರು. ಉದಾಹರಣೆಗೆ ಅದರೊಳಗಿನ ಒಂದು ಚೌಪದಿ,

ಪ್ರಜಾ ಪ್ರಭುತ್ವ

ಝಳಪಿಸುವ ಕತ್ತಿ ಖಡ್ಗಗಳು ಬೇಕಿಲ್ಲ
ಸಹಬಾಳ್ವೆ ಪರಹಿತವು ಜಗದಿ ಸಾಕಲ್ಲ !
ಮಾಡದಿರಿ ಕತ್ತಿ ಖಡ್ಗಗಳ ಸನ್ಮಾನ
ತೆಗೆಯಬೇಡಿ ಪ್ರಜಾಪ್ರಭುತ್ವದ ಮಾನ

ಕನ್ನಡ ಸಾಹಿತ್ಯದಲ್ಲಿ ಚುಟುಕು ಮತ್ತು ಹನಿಗವನಗಳ ರಚನೆಯಲ್ಲಿ ಹಿರಿದಾದ ಪರಂಪರೆಯಿದೆ. ತಿ.ನಂ.ಶ್ರೀ, ಕುವೆಂಪು, ಸಿಪಿಕೆ, ರಾಜರತ್ನಂ, ಎಸ್.ವಿ ಪರಮೇಶ್ವರ ಭಟ್, ವಿ.ಜಿ.ಭಟ್, ಡಾ. ಎಂ.ಅಕ್ಬರ ಅಲಿ ಮುಂತಾದವರು ಚುಟುಕುಗಳನ್ನು ಬರೆದು ಸಂಕಲನಗಳನ್ನು ಹೊರತಂದರು. ಅದರಲ್ಲೂ ಆಧುನಿಕ ಹನಗವನಗಳ ರಚನೆಯಲ್ಲಿ ದುಂಡಿರಾಜರದು ಗುರುತಿಸಬೇಕಾದ ಹೆಸರು.

ಚುಟುಕು ಸಾಹಿತ್ಯದಲ್ಲಿ ಬಹುವಿಧದಲ್ಲಿ ರಚನೆಗೊಂಡವು ಹನಿಗವನಗಳು. ಇವು ಎಲ್ಲ ವಿಧದಿಂದಲೂ ಮುಕ್ತವಾದವುಗಳು. ಇವುಗಳಿಗೆ ಪದ, ಪಾದಗಳ ಬದ್ಧತೆಯಿಲ್ಲ. ಮಾತ್ರೆ ಗಣಗಳ ಹಂಗಿಲ್ಲ. ಒಂದು ವಿಧದಲ್ಲಿ ತೂರಿಬಿಟ್ಟ ಸಾಹಿತ್ಯ ಗುಣದಿಂದ ಕೂಡಿದ ಭಾವನೆಯ ತುಣುಕುಗಳು. ಇವು ನವೋದಯ ಮತ್ತು ನವ್ಯ ಕಾಲದಲ್ಲಿ ರೂಪುಗೊಂಡವು. ಇವು ಭಾವನೆಯ ಅಭಿವ್ಯಕ್ತಿಯಲ್ಲಿ 'ಲಾಘವತೆಯಿಂದ ಕೂಡಿದ ತುಂಟು ಮಕ್ಕಳಂತೆ'.

ಅಂಕೋಲಾದಲ್ಲಿ ಚುಟುಕು ಮತ್ತು ಹನಿಗವನಗಳ ರಚನೆ ಮಾಡಿದ ಕವಿಗಳ ಗುಂಪು ದೊಡ್ಡದಿದೆ. ಅಂಕೋಲೆಯಲ್ಲಿ ಹನಿಗವನ ಬರೆದು ಸಂಕಲನ ರೂಪದಲ್ಲಿ ಹೊರತಂದ ಮೊದಲ ಶ್ರೇಯಸ್ಸು ಜೆ. ಪ್ರೇಮಾನಂದರಿಗೆ ಸಲ್ಲುತ್ತದೆ. 1996 ರಲ್ಲಿ 'ನಕ್ಷತ್ರಗಳು'

ಎಂಬ ಹನಿಗವನ ಸಂಕಲನವನ್ನು ತಂದರು. ಅಂದಿನ ದಿನಗಳಲ್ಲಿ ಕವಿ, ಸಾಹಿತಿಗಳ, ಓದುಗರ ಗಮನ ಸೆಳೆದ ಸಂಕಲನ. ಅದರೊಳಗಿನ ಎರಡು ಹನಗವನಗಳು ಇಂತಿವೆ.

ಭಾವನೆ	**ತಾಳು**
ಭಾವನೆಗಳಿರದ	ದುಂಬಿ
ದಿನಗಳು	ನಿನಗೆಂತ ತವಕ?
ಬಾಳಿನ	ತುಸು ತಾಳು
ಓದಲಾಗದ	ನಾ ಸಂಪೂರ್ಣ
ಪುಟಗಳು	ಅರಳುವ ತನಕ

ಭಾವನೆಯೆಂದರೆ ಮನಸ್ಸು, 'ಮನ್' ಎಂಬ ಧಾತುವಿನಿಂದ ಮನುಷ್ಯನಾಗಿದ್ದಾನೆ. ಅದು ಇಲ್ಲದಾಗ ಸತ್ತ ಹಾಗೆ. ಬಾಳು ಇರುವುದೇ ಇಲ್ಲ. ಓದುವುದು ಎಲ್ಲಿ ಉಳಿಯಿತು? ಭಾವನೆಗಳು ಬದುಕಿನ ಸಂಜೀವಿನಿ.

ಎರಡನೆಯ ಹನಿಗವನ ತಾಳು. ತಾಳ್ಮೆ ಇದು ಅರಳುವುದಕ್ಕೆ ಬೆಳೆಯುವುದಕ್ಕೆ ಮೂಲ. 'ತಾಳಿದವನು ಬಾಳಿಯಾನು, ಒಳ್ಳೆಯದನ್ನು ನೋಡಿಯಾನು' ಎಂಬುದನ್ನು ತಿಳಿಸಿ ಕೊಡುವುದಕ್ಕೆ ಕವಿ ಆರೆಂಟು ಶಬ್ದಗಳಲ್ಲಿ ರಚಿಸಿದ ಹನಿಗವನ ಅದ್ಭುತ. ಸಂಕಲನದೊಳಗೆ ಪ್ರತಿಯೊಂದು ಹನಿಗವನವೂ ಅರ್ಥಪೂರ್ಣವಾಗಿದೆ. ಅವುಗಳ ಬಗೆಯನ್ನು ಬಗೆದಷ್ಟು ಬಹು ವಿಧ ಅನುಭವಗಳನ್ನು ಉಂಟುಮಾಡುತ್ತವೆ.

ಅಂಕೋಲಾದಲ್ಲಿ ಚುಟುಕು ಅಥವಾ ಹನಿಗವನಗಳನ್ನು ಬರೆದು ಪುಸ್ತಕ ರೂಪದಲ್ಲಿ ಹೊರಬಂದ ಸಾಹಿತ್ಯ ಕೃತಿಗಳು ಸತ್ವದಿಂದ ಕೂಡಿದವುಗಳು. ಅವುಗಳ ಕುರಿತು ಕವಿ ಕೃತಿಗಳನ್ನು ಮಾತ್ರ ಉಲ್ಲೇಖಿಸಿರುವನು. ಈ ಲೇಖನ ಸಂಚಿಕೆಗೆ ಬರೆದುದಾಗಿರುವುದರಿಂದ ಅತಿವ್ಯಾಪ್ತಿಗೆ ಹೋಗುವ ಹಾಗೆ ಇಲ್ಲ. ಕೃತಿ ರಚನೆ ಮಾಡಿದ ಎಲ್ಲರನ್ನು ಅಭಿನಂದಿಸುವೆನು. ಚುಟುಕು ಸಾಹಿತ್ಯ ಮತ್ತು ಹನಿಗವನಗಳಿಂದ ಸಾಹಿತ್ಯ ಕಣಜ ತುಂಬಿದ ಅಂಕೋಲೆಯ ಕವಿಗಳೆಲ್ಲ ಅಭಿನಂದನಾರ್ಹರು.

1. ದಿನಕರ ದೇಸಾಯಿ – ದಿನಕರನ ಚೌಪದಿ
2. ಜಿ.ಪಿ.ನಾಯಕ– ಚುಟುಕು ಗುಟುಕು
3. ಶಾಂತಾರಾಮ ಬಾಳೆಗುಳಿ– ಕಸಬರಗಿಗೆ (ಚೌಪದಿ)
4. ಶ್ಯಾಮ ಹುದ್ದಾರ – ಉಸುಕಿನ ಭೂಮ್ಯಾಗ ಕುಸುಬೀಯ ಬಿತ್ತೇವ (ತ್ರಿಪದಿ)
5. ವಿಷ್ಣು ನಾಯ್ಕ – ಇನ್ನೂರು ಹನಿಗಳು
6. ಮೋಹನ ಹಬ್ಬು – ಲಾಘವದ ಕ್ಷಣಗಳು
7. ವಿಠ್ಠಲ ಗಾಂವಕಾರ – ಶಬ್ದ ಕಾವ್ಯ (ಚೌಪದಿ)
8. ನಾಗೇಂದ್ರ ನಾಯಕ – ಚುಟುಕು ಚಿತ್ತಾರ
9. ಜೆ. ಪ್ರೇಮಾನಂದ – ನಕ್ಷತ್ರಗಳು
10. ಪ್ರಭಾಕರ ನಾಯಕ – ಮಂಗಳಾರತಿ
11. ಹೊನ್ನಮ್ಮ ನಾಯಕ – ಹೊನ್ನುಡಿ
12. ನಾಗೇಶದೇವ ಅಂಕೋಲೆಕರ – ಮನದ ಮಾದೇಸ
13. ಜಿ.ಯು.ನಾಯಕ – ಬೆಳಕು
14. ರಮೇಶ ವಿ. ನಾಯಕ – ಕರಾವಳಿ ಚುಟುಕುಗಳು
15. ರಮ್ಯಾ ಹೆಗಡೆ ಅಚವೆ – ಹೊಸ ನೀರು
16. ಡಿ.ಜಿ.ನಾಯಕ – ತೆಂಕಣ ಗಾಳಿ
17. ಶಿವಾನಂದ ನಾಯಕ ಸಗಡಗೇರಿ – ವರ್ತಮಾನ
18. ಶ್ರೀಪಾದ ಶೆಟ್ಟಿ – ಮಳೆಯಲ್ಲಿ ಮಿಂದ ಹೊಳೆ

ಮುಗಿಸುವ ಮುನ್ನ ಒಂದು ವಿಚಾರವನ್ನು ವಿಧಿತಪಡಿಸುವೆನು. ಕೇವಲ ಸಂಕಲನವನ್ನು ತಂದವರು ಮಾತ್ರ ಚುಟುಕು ಕವಿಗಳಲ್ಲ. ಹಲವರು ಚುಟುಕುಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಗೋಷ್ಠಿಗಳಲ್ಲಿ ವಾಚನ ಮಾಡಿದ್ದಾರೆ. ಅವರು ಸಹಿತ ಚುಟುಕು ಕವಿಗಳು. ನನ್ನ ಗಮನಕ್ಕೆ ಬಂದ ಕೃತಿಗಳನ್ನು ಮಾತ್ರ ಉಲ್ಲೇಖಿಸಿರುವೆನು. ಬಿಟ್ಟು ಹೋಗಿದ್ದರೆ ಅನ್ಯತಾ ಭಾವಿಸಬೇಡಿ.

ಅಂಕೋಲಾ ತಾಲೂಕಿನ ಕಾವ್ಯ : ಒಂದು ಕಿರು ನೋಟ

– ಕೃಷ್ಣ ನಾಯಕ ಹಿಚಕಡ

ಅಂಕೋಲಾ ತಾಲೂಕಿನ ಕಂದಾಯ ಗಡಿಯೇ ಇದರ ಮೇರೆಯಾಗಿರುವುದರಿಂದ ಈ ಗಡಿಯೊಳಗಿನ ಕವಿ–ಕಾವ್ಯಗಳನ್ನು ಗುರುತಿಸಿ ಪರಿಚಯಿಸಬೇಕಾಗಿದೆ. ಅಭಿವೃದ್ಧಿಶೀಲ ನಾಡಿನಲ್ಲಿ ಮಾನವ ಹಲವಾರು ಕಾರಣಗಳಿಂದಾಗಿ ಹುಟ್ಟಿದ ನೆಲದಲ್ಲಿ ನೆಲೆಯಾಗಿ ನಿಲ್ಲದೇ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗಿ ಬಾಳಿ ಬದುಕಬೇಕಾಗಿರುತ್ತದೆ. ಹಾಗಾಗಿ, ಕವಿಗಳನ್ನು ಆಯ್ಕೆಮಾಡುವಾಗ ಗೊಂದಲವನ್ನು ಅನುಭವಿಸಬೇಕಾಯಿತು. ಏಕೆಂದರೆ ಇಲ್ಲಿ ಹುಟ್ಟಿ ಇಲ್ಲಿಯೇ ಬೆಳೆದು ಕಾವ್ಯಕೃಷಿಯಲ್ಲಿ ತೊಡಗಿಕೊಂಡವರು ಹಲವರು ಇದ್ದರೆ, ಇಲ್ಲಿ ಹುಟ್ಟಿ ಉದ್ಯೋಗದ ನಿಮಿತ್ತ ಪರ ಊರಿನಲ್ಲಿ ನೆಲೆಸಿ ಕಾವ್ಯಾಭಿವ್ಯಕ್ತಿಯಲ್ಲಿ ನಿರತರಾಗಿರುವವರೂ ಇದ್ದಾರೆ. ಅಂತೆಯೆ ಪರ ತಾಲೂಕು, ಜಿಲ್ಲೆಗಳಿಂದ ಉದ್ಯೋಗ ಮತ್ತಿತರ ಕಾರಣಕ್ಕಾಗಿ ಇಲ್ಲಿ ನೆಲೆಸಿ, ಇಲ್ಲಿಯವರಾಗಿಯೆ ಬಾಳುತ್ತಿರುವವರೂ ಇದ್ದಾರೆ. ಕೇವಲ ಇಲ್ಲಿ ಹುಟ್ಟಿ ಇಲ್ಲಿಯೇ ಬಾಳುತ್ತಿರುವವರನ್ನು ಪರಿಗಣನೆಗೆ ಮಾನದಂಡವಾಗಿರಿಸಿಕೊಂಡರೆ ಇದು ತೀರ ಸಂಕುಚಿತವಾದ ಗಣನೆಯಾಗುತ್ತದೆ ಮತ್ತು ಮೂಲಭೂತವಾದಕ್ಕೆ ಮಣೆಹಾಕಿದಂತಾಗುತ್ತದೆ. ಅಲ್ಲದೇ ಕವಿಯಾದವನು ಎಂದಿಗೂ ಕೇವಲ ಹುಟ್ಟಿದ ಜಾತಿ, ಮತ ಮತ್ತು ನೆಲದವನಾಗಿರದೆ ಜಗದಗಲ ಅವರ ಇರುವಿಕೆಯಾಗಿರುತ್ತದೆ. ಹೊರ ಜಿಲ್ಲೆಯಲ್ಲಿ ಹುಟ್ಟಿ ಬಹುಕಾಲದವರೆಗೆ ಈ ಜಿಲ್ಲೆಯಲ್ಲಿ ನೆಲೆಸಿದ ದಿ. ಸು. ರಂ. ಎಕ್ಕುಂಡಿ, ಡಾ॥ ಅಕಬರ ಅಲಿ, ಡಾ॥ ಬಿ.ಎ.ಸನದಿ, ಶ್ಯಾಮ ಹುದ್ದಾರ ಹಾಗೇನೆ ಇಲ್ಲಿ ಹುಟ್ಟಿ ಹೊರಗಿನ ರಾಜ್ಯ, ಜಿಲ್ಲೆಗಳಲ್ಲಿ ಇರುವಂತಹ ಶ್ರೀ ಯಶವಂತ ಚಿತ್ತಾಲ, ಅರವಿಂದ ನಾಡಕರ್ಣಿ, ಶ್ರೀ ಜಿ.ಎಚ್.ನಾಯಕ, ಜಯಂತ ಕಾಯ್ಕಿಣಿ, ಕೊಡ್ಲಕೆರೆ ಸಹೋದರರು ಮತ್ತು ವಿವೇಕ ಶಾನಭಾಗ ಮುಂತಾದವರು ಎಂದೆಂದಿಗೂ ನಮ್ಮವರೇ ಆಗಿದ್ದಾರೆ. ಆಗಿರುತ್ತಾರೆ. ಈ ಅಳತೆಗೋಲನ್ನು ಗಮನದಲ್ಲಿಟ್ಟು ತೆರೆದ ಕಣ್ಣಿಗೆ ದಕ್ಕಿದ ಕವಿಗಳನ್ನು ತಬ್ಬಿಕೊಂಡು ಅಂಕೋಲೆಯ ಕಾವ್ಯದ ಕಿರು ಪರಿಚಯ ನೀಡುವ ಪ್ರಯತ್ನ ನಾನಿಲ್ಲಿ ಮಾಡಿದ್ದೇನೆ. ಯಾರದ್ದಾದರೂ ಕಾವ್ಯ ನನ್ನ ಸಮೀಕ್ಷೆಯೊಳಗೆ ಒಳಗೊಳ್ಳದಿದ್ದರೆ ಕ್ಷಮಿಸಬೇಕು. ಅದು ನನ್ನ ಅಭ್ಯಾಸದ ಕೊರತೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಕಾವ್ಯ ಎಂದರೇನು ಎಂಬುದು ಕಾವ್ಯ ಮೀಮಾಂಸೆಯ ಮೂಲಭೂತ ಪ್ರಶ್ನೆಗಳಲ್ಲೊಂದು. ಅದಕ್ಕೆ ಉತ್ತರ ಹುಡುಕುವ ಯತ್ನದಲ್ಲಿ ತತ್ವಶಾಸ್ತ್ರ, ಆಧ್ಯಾತ್ಮ ಸೌಂದರ್ಯ, ಭಾಷಾಶಾಸ್ತ್ರ ಎಲ್ಲವೂ ತೊಡಕಿಕೊಂಡು ಉತ್ತರಗಳ ಗೊಂಡಾರಣ್ಯವೇ ಬೆಳೆದುಬಿಡುತ್ತದೆ. ಕಾವ್ಯದ ಅರ್ಥಗಳನ್ನು ಸಾಧ್ಯವಾದ ಮಟ್ಟಿಗೆ ಸ್ಪಷ್ಟಪಡಿಸಿಕೊಳ್ಳುವುದು ಒಳ್ಳೆಯದು. ೧. ಛಂದಸ್ಸಿಗೆ ಬದ್ಧವಾದ ವಿಶಿಷ್ಟವಾದ ಭಾಷೆಯ ಬಳಕೆಯನ್ನು ಹೊಂದಿರುವ ಪದ್ಯರೂಪದ ಸಾಹಿತ್ಯಪ್ರಕಾರ. ೨. ಸಾಹಿತ್ಯ ಎಂಬುದರ ಪರ್ಯಾಯ ಪದ. ೩. ಮೌಲ್ಯ ನಿರ್ದೇಶಕ ಪದ ಗುಣವಾಚಕ. ೪. ಶಾಸ್ತ್ರ ಅಥವಾ ವಿಜ್ಞಾನಕ್ಕೆ ವಿರುದ್ಧವಾದ ಜ್ಞಾನದ ಭಾಗ ಹೀಗೆ ಕಾವ್ಯವನ್ನು ಹೇಗೆ ವಿವರಿಸಲು ಹೊರಟರೂ ಈ ಎಲ್ಲ ಮಾತು ಜನಪ್ರಿಯವಾಗುವಂತಹದ್ದು ಕಾವ್ಯವೆಂದರೆ ಏನೆಂಬುದು ಅನುಭವಕ್ಕೆ ಗೊತ್ತು ಬಾಯಿಮಾತಿನಲ್ಲಿ ಖಚಿತವಾಗಿ ಹೇಳುವುದು ಮಾತ್ರ ಕಷ್ಟ ಹೀಗೆ ಕಾವ್ಯವನ್ನು ಕವಿಯ ಹೃದಯಾಂತರಾಳದಿಂದ ಹೊರಟ ಆವೇಶಪೂರ್ಣ ಸಾಲುಗಳೆಂದು ಗುರುತಿಸಬಹುದಾಗಿದೆ.

ಕವಿ–ಕಲಾವಿದರ ಗುಣ ಲಕ್ಷಣವನ್ನು ಕುರಿತು ಗಾರ್ಕಿ ಹೇಳುವುದು ಹೀಗೆ, 'ಕಲಾವಿದ ತನ್ನ ದೇಶದ, ತನ್ನ ವರ್ಗದ ಹಾಗೂ ಅದರ ಕಿವಿ, ಕಣ್ಣು ಹೃದಯಗಳ ಮೇಲಾಗುವ ಪರಿಣಾಮಗಳ ಸಂವೇದನಾಶೀಲ ಗ್ರಹಿಕೆದಾರ'. ಆತನದು ತನ್ನ ಕಾಲದ ದನಿಯಾಗಿರುತ್ತದೆ, ಹೀಗೆ ಅಂಕೋಲೆಯ ಕಾವ್ಯದ ದನಿಯ ಕಾಲದ ಮೂಲವನ್ನು ಹುಡುಕಲು ಗತಕಾಲದ ಇತಿಹಾಸ ಬಗೆದು ನೋಡಿದಾಗ ಇಲ್ಲಿ ಜೈನ, ಬೌದ್ಧ ಶೈವ ಮತ್ತು ಇಸ್ಲಾಂ ಧರ್ಮಗಳ ಪ್ರಭಾವ ಇರುವುದು ಕಂಡುಬರುತ್ತದೆ. ಈ ಧರ್ಮಗಳ ಪ್ರಸಾರಕ್ಕಾಗಿ ಕಾವ್ಯ ಇಲ್ಲಿ ಬಳಕೆಯಾದದ್ದು ಗೋಚರಿಸುವುದಿಲ್ಲ. ಆದರೆ ೧೮೫೩ ರಿಂದ ೧೯೨೭

ಕಾಲದಲ್ಲಿ ಬದುಕಿದ ಲಕ್ಷ್ಮಣ ಬಾಬಣಿ ಪೈರವರು ಗೀತೋಪದೇಶವನ್ನು ಭಾಮಿನಿ ಷಟ್ಪದಿಯಲ್ಲಿ ಅನುವಾದಿಸಿರುವುದು ತಿಳಿದು ಬರುತ್ತ ಬಿಜಾಪುರದ ಸೇನಾಧಿಪತಿ ಷರೀಫ–ಉಲ್ ಮುಲ್ಕ ಕಟ್ಟಿಸಿದ ಕೋಟೆ ಕಂಡು ರಾಜಾಶ್ರಯದಲ್ಲಿ ಕಾವ್ಯರಚನೆಯಾಗಿದೆಯೇ ಎಂದು ಶೋಧಿಸಿದಾಗ ಈ ಪ್ರದೇಶವು ಕದಂಬ, ಚಾಲುಕ್ಯ, ವಿಜಯನಗರ, ಸೋಂದಾ ಮುಂತಾದ ರಾಜಮನೆತನಗಳ ಅಳ್ವಿಕೆಗೊಳಪಟ್ಟ ದಾಖಲೆಗಳು ಸಿಕ್ಕರೂ, ರಾಜಾಶ್ರಯದಲ್ಲಿ ಕಾವ್ಯ ರಚನೆಗೊಂಡ ಸುಳಿವು ಸಿಗುವುದಿಲ್ಲ.

ಜಾನಪದವೂ ಸಹ ಒಂದು ಪ್ರದೇಶ ಮತ್ತು ಕಾಲದ ದನಿಯಾಗಿರುತ್ತದೆ. ಭಾರತೀಯ ಸಮಾಜವು ಮತ, ಧರ್ಮ, ಜಾತಿ ವ್ಯವಸ್ಥೆಯೊಂದಿಗೇ ಬೆಳೆದು ನಿಂತಿದೆ. ಅಂತೆಯೇ ಈ ಪ್ರದೇಶದಲ್ಲಿ ಹಲವಾರು ಜಾತಿಗಳ ಸಮೂಹಗಳು ವಾಸಿಸುತ್ತಿವೆ. ಇಲ್ಲಿ ಬಹು ಸಂಖ್ಯೆಯಲ್ಲಿ ವಾಸಿಸುತ್ತಿರುವ ಹಾಲಕ್ಕಿಗಳ, ನಾಮಧಾರಿಗಳ, ನಾಡವರ, ಮೀನುಗಾರರ, ಹಳೆಪೈಕ ಮುಂತಾದವರ ನಾದಲಹರಿಯಲ್ಲಿ ಹರಿದುಬರುವ ಜಾನಪದದ ಹಾಡುಗಳ ಗಟ್ಟಿ ಪರಂಪರೆ ಇಲ್ಲಿದೆ. ಜಾನಪದವು ನೂರಕ್ಕೆ ನೂರು ಇದೇ ನೆಲದ್ದು ಎಂದು ಸಾಧಿಸುವುದು ಸಾಧ್ಯವಾಗದ ಮಾತು. ಆದರೆ ಜಾನಪದದ ದನಿಯ ಕೊರಳಿಗೆ ತನ್ನದೇ ಆದ ಸಹಭಾಗಿತ್ವವನ್ನು ಇಲ್ಲಿಯ ಜನಪದರು ನೀಡಿರುವುದನ್ನು ಕಾಣಬಹುದಾಗಿದೆ.

ಹೊಸಗನ್ನಡ ಕಾವ್ಯ ಪರಂಪರೆ ಪ್ರಾರಂಭವಾದದ್ದು ೧೯೨೦ರಲ್ಲಿ ಶ್ರೀ ವಿ.ಕೃ.ಗೋಕಾಕರು ಅನುವಾದಿಸಿದ ಸಮುದ್ರಗೀತ ಇಂಗ್ಲೀಷ್ ಕವಿತೆಗಳ ಅನುವಾದದಿಂದ. ಅದು ನವೋದಯ ಕಾವ್ಯ ಪ್ರಕಾರದ ಉಗಮದ ಕಾಲವೂ ಹೌದು. ಈ ನೆಲದ ಪ್ರಿಯ ಜನನಾಯಕ, ಸಮಾಜಸೇವಕ, ಕವಿ ಶ್ರೀ ಸ.ಪ.ಗಾಂವಕರ ಮತ್ತು ಸಮಕಾಲೀನರಾಗಿರುವ ಶಿಕ್ಷಕ ಶ್ರೀ ವಿ.ವಿ.ತೊರ್ಕೆಯವರ ಕಾವ್ಯ ಕೃಷಿಯೊಂದಿಗೆ ಅಂಕೋಲೆಯ ಕಾವ್ಯ ಪರಂಪರೆಯ ಕಾಲಬಿಂದು ಪ್ರಾರಂಭವಾಗುತ್ತದೆ. ನಾನು ಇಲ್ಲಿ ಪರಿಗಣಿಸಿದ್ದು ವಯಸ್ಸಿನ ಹಿರಿತನಕ್ಕಿಂತಲೂ ಮುಖ್ಯವಾಗಿ ಕಾವ್ಯ ಪ್ರಕಟಗೊಂಡ ಕಾಲ. ಹೀಗೆ ನೋಡಿದಾಗ ಬಾಸಗೋಡ ಪ್ರಾಥಮಿಕ ಶಾಲೆಯಲ್ಲಿ ಬಹುಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿ, ತಮ್ಮ ಬದುಕಿನ ಕೊನೆಯುಸಿರಿರುವವರೆಗೂ ಈ ನೆಲದಲ್ಲಿಯೇ ಬಾಳಿದ ಶ್ರೀ ವಿ.ವಿ. ತೊರ್ಕೆಯವರು ೧೯೨೯ ರಲ್ಲಿ ಪ್ರಕಟಿಸಿದ ಕವಿತಾ ಕಲಾಪ, ಸುಮಾಂಜಲಿ ಕವನ ಸಂಗ್ರಹಗಳು ಪ್ರಕಟಗೊಂಡವು. ಇನ್ನೊಂದು ಕವನ ಸಂಕಲನ ನೀರಮುಳಕ ೧೯೪೦ರಲ್ಲಿ ಪ್ರಕಟಗೊಂಡಿತು. ಕವಿತಾಕಲಾಪ ಪುರಾತನ ಶೈಲಿಯಲ್ಲಿ ರಚನೆಗೊಂಡರೆ, ಉಳಿದವುಗಳು ನವೋದಯದ ಹಾದಿಯಲ್ಲಿ ಸಾಗಿರುವುದನ್ನು ಗುರುತಿಸಬಹುದಾಗಿದೆ. ಅನೇಕ ಪ್ರಗತಿಪರ ವಿಷಯಗಳನ್ನು ಇವರು ಕಾವ್ಯದ ವಸ್ತುಗಳಾಗಿ ಆಯ್ಕೆಮಾಡಿಕೊಂಡಿರುತ್ತಾರೆ.

ಭಂಗಿಯನ್ನು ಮುಟ್ಟಲೇನು ಭಂಗ ಬರುವುದು ?
ಹಾಗೆ ಉಂಟು ಶಾಸ್ತ್ರವೆಂದು
ಹೀಗೆ ಉಂಟು ರೀತಿಯೆಂದು
ಕೂಗುತ್ತಿರುವ ಕಾಲವೆಲ್ಲ ಹಿಂದಕಾದುದು.

ಎಂದು ಅಸ್ಪಶ್ಯತೆಯನ್ನು ನಿರಾಕರಿಸುವ ಕವಿ,

ಸಧವೆ ಹದಿನಾಲ್ಕಕ್ಕೆ
ವಿಧವೆ ಹದಿನಾರಕ್ಕೆ
ಕೈತುತ್ತು ಬಾಯ್ದೆ ನಿಲುಕದೆ ಹೋಯ್ತು ಆಕಟ !
ಹಾಳಾಯ್ತು ಬಾಳು
ಲಲನೆಯರು ನಲಿಯುವರು
ಕಣ್ಮುಂದೆ ಕಾಂಬುವುದು
ಅವರಂತೆ ನಾನಲಿಯೆ ಬಿಡಲಿಲ್ಲವಾ ಕೆಟ್ಟ ಕಟ್ಟಳೆಗಳು

ಹೀಗೆ ವಿಧವೆಯ ಒಡಲಾಳದ ತಳಮಳವನ್ನು ಚಿತ್ರಿಸಿ,

ಬಾನಂಗಳದಲಿ ನಲಿನಲಿದಾಡುತ
ತಿಂಗಳ ಸ್ವಾಮಿಯ ಬಾ, ಬಾ, ಬಾ !
ಬೆಳ್ಳಿಯ ತೆರದಲಿ ಬೆಳ್ಳಗೆ ಬೆಳಗುತ
ತಿಂಗಳ ಸ್ವಾಮಿಯ ಬಾ, ಬಾ, ಬಾ !

ಮಕ್ಕಳಿಗಾಗಿಯೂ ಕವನ ರಚಿಸಿ, ಹಳ್ಳಿಯ ಹಾಡುಗಳನ್ನೂ ಸಹ ಸಂಗ್ರಹಿಸಿ ಓದುಗರಿಗೆ ನೀಡಿದ್ದಾರೆ.

೧೯೩೨ ರಲ್ಲಿ ಮುಗಿಲು, ೧೯೬೯ರಲ್ಲಿ ಪ್ರಕೃತಿ–ಪ್ರೀತಿ ಮತ್ತು ಪ್ರೇರಣೆ–ಶೋಧನೆ ಕವನ ಸಂಗ್ರಹಗಳನ್ನು ಪ್ರಕಟಿಸಿದ ಪೂಜ್ಯರಾದ ಸ.ಪ.ಗಾಂವಕರರವರು ವಿ.ವಿ.ತೊರ್ಕೆಯವರಿಗಿಂತ ೯ ವರ್ಷ ಹಿರಿಯರು. ಇವರೇ ಕಾವ್ಯರಚನೆಯಲ್ಲಿ ಮೊದಲಿಗರಾಗಿರಬಹುದು ಎಂಬುದಕ್ಕೆ ಅನುಮಾನವೇ ಇಲ್ಲ. ರಚಿಸಿದ ಕವನಗಳನ್ನು ಸರಿಯಾದ ಸಮಯದಲ್ಲಿ ಒಂದು ಕಟ್ಟಿನಲ್ಲಿ ಹಿಡಿದಿಡುವುದಕ್ಕಾಗದಷ್ಟು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು ಎನ್ನುವುದಕ್ಕೆ ಅವರ ಪ್ರಕೃತಿ–ಪ್ರೇಮ ಕವನ ಸಂಗ್ರಹದ ಮೊದಲ ಮಾತಿನಲ್ಲಿ ಇನ್ನೂ ಇಂತಹ ಎರಡು ಕವನ ಸಂಗ್ರಹವಾಗುವಷ್ಟು ಕವಿತೆಗಳು ಆಚ್ಚಾಗದೇ ಉಳಿದಿವೆ ಎನ್ನುವ ಶ್ರೀ ಜಿ.ಎಚ್.ನಾಯಕರ ಮಾತು ಇದನ್ನು

ಪುಷ್ಟಿಕರಿಸುತ್ತದೆ. ಇಲ್ಲಿರುವ ಕವನಗಳನ್ನು ಗಮನಿಸಿದಾಗ ಕವಿ ಭಾವಜೀವಿ, ಕರುಣಾಮಯಿ, ಪ್ರೀತಿಯ ಚಿಲುಮೆಯಾಗಿದ್ದರು ಎಂಬುದು ವ್ಯಕ್ತವಾಗುತ್ತದೆ.

ಹಾಯಬಿಟ್ಟಿಹರೇನೊ ಹಡಗಿನ
ಪಡೆಯು ಬೇಗನೆ ಬರುತಿದೆ
ಬಿಳಿಯ ಬಾನಿನ ಕಡಲ ತಡಿಯಲಿ
ಮೊರೆದು ಹಾರುತ ತೆರೆಯನು
ಏರಿಳಿಯುತ ತೇಲಿ ತೊನೆಯುತ ಮಿಕ್ಕಿ ಮೀರುತ ಬರುತಿದೆ.

ಎಂದು ತೇಲಿಬರುವ ಮೋಡವನ್ನು ನೋಡಿ ಭಾವತುಂಬಿ ಹಾಡುವ ಕವಿ ಇಲ್ಲಿಯ ಬಡತನ ಕಂಡು,

ಹೊಡೆ ಸಿಳ್ಳು ಹೊಡೆ ಸಿಳ್ಳು ಹೊಡೆ
ಬಡವರ ಒಡಲಿನ ಹಸಿವೆಯ ಸಿಳ್ಳು
ಗುಡುಗಲಿ ಗುಡುಗುಡಿಸಲಿನಾ ಸಿಳ್ಳು
ಘರ್ಷಣೆಯಿಲ್ಲದ ಸಂಸಾರ
ಕಾಸಗೂ ಬೇಡವು ನಿಸ್ಸಾರ

ಎಂದು ಅಜ್ಞಾತ ಹಕ್ಕಿಯ ಕೊರಳೊಳಗಿಂದ ಬಡತನದ ಸಿಳ್ಳು ಹೊಡೆದಿರುತ್ತಾರೆ.

ಒಂದು ದಿವಸ ಸಂಜೆ ಮುಂದೆ
ಚಂದವಾದ ಶಾಲೆಯಿಂದ
ಕಂಡೆ ನಾನು ಬರುವ ಮುಂದೆ
ಗಿರಿಯ ದರೆಯ ತೆರೆಯ ಮೇಲೆ
ಸರಿದು ಸರಿದು ಮೇವ ಮೆಲುವ
ಸಂದ ಸಹ್ಯ ಶಾಖೆಯಲ್ಲಿ ಕಂಡೆ ತುರುಗಳ
ನಿಂದು ಅಂಬಾ ಎಂದು ಕರೆದೆ ನಮ್ಮ ದನಗಳ
ತುರುಗಳಲ್ಲಿ ಕೆಲವು ದನಿಯ
ತಿರಿದು ಹರಿದು ಹಿಗ್ಗಿನಿಂದ ಅಂಬಾ ಎಂದವು
ಕರೆದರೆನಾರೊ ಎಂದು ತಿರುಗಿನಿಂದವು.

ಎನ್ನುವ ಪ್ರೇಮತುಂಬಿಹ ಹಾಡುಗಳು ಓದುಗರ ಎದೆ ತುಂಬುತ್ತವೆ. ರವೀಂದ್ರನಾಥ ಠಾಗೂರರವರ ಗೀತಾಂಜಲಿಯನ್ನು ಅನುವಾದಿಸಿದ ಘನತೆಯೂ ಇವರದ್ದು. ಅನುವಾದಕನಿಗೆ ಇರಬೇಕಾದ ಪಕ್ವತೆಯನ್ನು ಈ ಗ್ರಂಥದಿಂದ ಅರಿತುಕೊಳ್ಳಬಹುದಾಗಿದೆ.

೧೯೪೮ರಲ್ಲಿ ನಾಮಧಾರಿ ಜಾತಿ ಪೌರಾಣಿಕ ಚರಿತ್ರೆ ಮತ್ತು ೧೯೫೪ ರಲ್ಲಿ 'ಶಿರಹಟ್ಟಿಯ ಫಕೀರ ಸ್ವಾಮಿಯವರ ಮಹಾತ್ಮ' ಎಂಬ ಕಾವ್ಯವನ್ನು ಭೋಗ ಷಟ್ಪದಿಯಲ್ಲಿ ರಚಿಸಿದವರು ಶ್ರೀ ಡೆಂಗಾ ದೇವು ನಾಯ್ಕರವರು. ಇವರು ಶಿಕ್ಷಣವನ್ನು ಹೊನ್ನಾವರದಲ್ಲಿ ಪಡೆದು, ಅಂಕೋಲಾ, ಹೊನ್ನಾವರ ಹಾಗೂ ಬಹು ಕಾಲದವರೆಗೆ ಶಿರಹಟ್ಟಿಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ಇವರು ಸೀಮಿತವಾದ ವಿಷಯವನ್ನು ದಂತಕತೆಯಾಗಿಸಿ ಕಾವ್ಯರೂಪದಲ್ಲಿ ಹೇಳಿರುವುದನ್ನು, ಇವರ ಕವಿತೆಗಳಲ್ಲಿ ಕಾಣಬಹುದಾಗಿದೆ.

ಕೆಲವು ಜನರು ಹಣದ ಕೆಲಸ
ಹಲವು ಜನರು ಕೃಷಿ ಕೆಲಸ
ಬಲುಮೆ ಜನರು ಸೇನೆ ಕೆಲಸದಲಿ ನಿರತರು
ಕೆಲರು ಮತ್ತು ರಾಜ ಸೇವೆ
ಕೆಲವು ಜನರು ಬೇಟೆಯಾಟ
ಕೆಲವು ಜನರು ಮದ್ದಿನಲ್ಲಿ ಬುದ್ಧಿ ತೋರ್ದರು.

ಎನ್ನುವ ನಾಮಧಾರಿಗಳ ಜೀವನ ನಿರ್ವಹಣೆಯ ವಿವಿಧ ಕಾರ್ಯಗಳ ಕುರಿತು ಹೇಳಿದ ಸಾಲುಗಳು ಅಂದಿನ ಸಾಮಾಜಿಕ ಸ್ಥಿತಿಗತಿಗಳ ಮೇಲೆ ಬೆಳಕನ್ನು ಚೆಲ್ಲಬಹುದು.

ಎಲುಬುಗಳು ಕುದಿಯಾಗೆ
ಹೃದಯವೇ ನದಿಯಾಗೆ
ಹಾಡುವನು ಕವಿಯು
ಮೂಡುವನು ರವಿಯು

ಎನ್ನುವಂತೆ ಕಾವ್ಯ ವಿರಚಿಸಿ ಕನ್ನಡ ಸಾಹಿತ್ಯದಲ್ಲಿ ಚುಟುಕು ಪ್ರಕಾರಕ್ಕೆ ಒಂದು ಮಹತ್ವದ ಸ್ಥಾನವನ್ನು ತಂದುಕೊಟ್ಟವರು. ಡಾ॥ ದಿನಕರ ದೇಸಾಯಿಯವರು. ಇವರ ಕುರಿತು ಶ್ರೀ ವಿ.ಕೃ.ಗೋಕಾಕರು ಹೀಗೆ ಹೇಳಿದ್ದಾರೆ. 'ಕನ್ನಡಕ್ಕೆ ಇಂದಿಗೂ ಒಬ್ಬನೇ ದಿನಕರನೆಂದು ಹೇಳದೆ ಗತಿ ಇಲ್ಲ. ಅವರಂತೆ ಇನ್ನಾರು ಹಾಡಿಯೇ ಇಲ್ಲ....' ರಮ್ಯ–ಗಮ್ಯ ಸಮನ್ವಯ, ಶೈಲಿಯು ಈ ಸೌಕುಮಾರ್ಯ ಹಾಗೂ ಪ್ರಸಾದ ಈ ಎರೆಡೂ ಗುಣಗಳು ಶ್ರೀ ದಿನಕರ ದೇಸಾಯರ ಪ್ರತಿಭೆಗೆ ಆಧುನಿಕ ಕಾವ್ಯದಲ್ಲಿ ಒಂದು ಅನನ್ಯ ಸ್ಥಾನವನ್ನು ಕಲ್ಪಿಸಿ ಕೊಟ್ಟಿದೆ. ೧೯೫೦ರಲ್ಲಿ ಕವನ ಸಂಗ್ರಹ ಇವರ ಮೊದಲನೆ ಕೃತಿ ಪ್ರಕಟವಾದರೆ ೧೯೫೮ರಲ್ಲಿ ಹೂಗೊಂಚಲು, ೧೯೮೩ರಲ್ಲಿ ದಾಸಾಳ ಸಂಗ್ರಹ ಪ್ರಕಟವಾಗಿವೆ. ಅಲ್ಲದೆ ಸಾವಿರಾರು ಚುಟುಕುಗಳ ಒಂದು ಸಂಗ್ರಹ ನೀಡಿರುವರು. ಸಾಮಾನ್ಯವಾಗಿ ಇವರ ಕವಿತೆಗಳು ಭಾವಗೀತೆಗಳು,

ಹರಿಗೆ ಎಂದು ಗುಡಿಯನೊಂದ
ಕಟ್ಟುತ್ತಿರುವೆಯಾ ?
ದೀನಗಿಂತ ದೇವ ಬಡವ
ನೆಂದು ಬಗೆದೆಯಾ ?
ದೇವ ನೀನು ಸತ್ತರೇನು ?

ಮತ್ತು ನಾವು ಅತ್ತರೇನು ?
ಲೋಕದಲ್ಲಿ ಬಲು ಅನರ್ಥ,
ನೀನು ಬದುಕಿದರೂ ವ್ಯರ್ಥ ।

ಹೀಗೆ ಪ್ರಶ್ನೆ ಮಾಡಿ ದೇವರನ್ನು ನಿರಾಕರಿಸುವ ಕವಿ,

ಸೂರ್ಯ ಮುಳುಗಿದನಂತೆ !
ಏನು ಹೇಳಲಿ ಕಂತೆ ?

....

ಸೂರ್ಯ ಮುಳುಗುವುದಿಲ್ಲ;
ನಮ್ಮ ತಲೆ ಸರಿಯಿಲ್ಲ.
ಪೃಥಿವಿ ತಿರುಗುವ ಗತಿಗೆ
ತಲೆ ತಿರುಗುವುದು ಜತೆಗೆ.

ಎನ್ನುವ ವೈಜ್ಞಾನಿಕ ಸತ್ಯವನ್ನು ತಿಳಿಹೇಳುತ್ತ,

ಬಗೆ ಬಗೆ ಬಣ್ಣದ ಗೋಲು
ಅಂದರೆ ಒಂದೇ ಹಾಲು
ಪರಿ ಪರಿ ರಾಗದಿ ಮಿಂದೂ
ಮಾನವ ಸಂಸ್ಕೃತಿಯೊಂದು.

ಎನ್ನುವ ಸಾಲುಗಳು ವಿವಿಧ ಸಂಸ್ಕೃತಿಯನ್ನು ಹೊಂದಿರುವ ಮಾನವರೆಲ್ಲರೂ ಒಂದೇ ಎನ್ನುವುದನ್ನು ಸಾರಿ ಹೇಳುತ್ತದೆ. 'ನನ್ನ ದೇಹದ ಬೂದಿ ಗಾಳಿಯಲಿ ತೂರಿಬಿಡಿ, ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ....' ಎಂದು ಹಾಡುವ ಕವಿ 'ಭಾರತೀಯ ಸೇವಾ ಸಮಾಜ'ದ ಧ್ಯೆಯೋದ್ದೇಶಗಳನ್ನು ತಮ್ಮ ಕಾವ್ಯದುದ್ದಕ್ಕೂ ಪ್ರತಿಬಿಂಬಿಸಿ ಸಾವಿನಲ್ಲೂ ಧನ್ಯತೆಯನ್ನು ಕಾಣಬಯಸುತ್ತಾರೆ.

'ಕೇದಿಗೆ' ಕವನ ಸಂಕಲನವನ್ನು ನುಡಿಜೇನು ಪತ್ರಿಕೆಯ ಸಂಪಾದಕರು, ಖ್ಯಾತ ಜಾನಪದ ಹಾಡುಗಾರರು ಆಗಿರುವ ಶ್ರೀ ಬಿ. ಹೊನ್ನಪ್ಪ (ಭಾವಿಕೇರಿ)ರವರು ೧೯೬೮ ಪ್ರಕಟಿಸಿದರು. ರೈತನ ಜೀವನ, ದೈವ ಭಕ್ತಿ, ಸಖಿ ಸಖಿಯರ ಸಂವಾದದ ಹಾಡು, ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಚಾರಪಡಿಸುವಂತಹ ವಿಷಯಗಳ ಕುರಿತು ಸ್ಥಳೀಯ ಹಳ್ಳಿಯ ಹಾಡಿನ ದಾಟಿಯಲ್ಲಿ ಹಾಡುವುದಕ್ಕಾಗಿಯೇ ರಚಿಸಿದಂತಹ ಕವನಗಳು ಇಲ್ಲಿರುವವು.

....

ಮನ್ಮಥನಂತ ರೂಪುಂಟು ! ಮನೆಮುಂದೆ ! ಮಾತುಳ್ಳ
ಗೆಳತಿಯರ ಗುಂಪುಂಟು !! ಮಲ್ಲಿಗೆ ಮನವುಂಟು
ಮನಮೆಚ್ಚ ಫಲವುಂಟು ಬಾವಿಯ ನೀರು ಮೇಲುಂಟು
ಅಲ್ಲದೆ ನೀನುಂಟು ನಿನ್ನ ತವರುಂಟು !!

ಎಂದು ತಂಗಿಯನ್ನು ಮದುವೆಗೆ ಒಪ್ಪಿಸುವ ಪರಿ ಬೆರಗುಗೊಳಿಸುತ್ತದೆ.

ಸಾರಂಗ ನಾಯಕ ಕಾವ್ಯ ನಾಮದಲ್ಲಿ ೧೯೬೯ರಲ್ಲಿ 'ಸಾರಂಗ ಮತ್ತು ೧೯೭೪ರಲ್ಲಿ 'ಆರತಿ' ಎನ್ನುವ ಎರಡು ಕವನ ಸಂಗ್ರಹಗಳನ್ನು ಶ್ರೀ ವಿ. ಎನ್. ನಾಯಕರು ನೀಡಿರುತ್ತಾರೆ. ಇವರು ಹಿಚಿಕಡದವರಾಗಿದ್ದು, ಸದ್ಯ ಮೈಸೂರಿನ ನಿವಾಸಿಯಾಗಿರುತ್ತಾರೆ. ಭೂಗೋಳ ಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವೀಧರರಾಗಿರುವ ಇವರ ಕವನಗಳಲ್ಲಿ ಪ್ರೇಮ ಮತ್ತು ಪ್ರಕೃತಿಯೇ ಕಾವ್ಯದ ವಸ್ತುಗಳಾಗಿದ್ದುದನ್ನು ಕಾಣಬಹುದಾಗಿದೆ.

ಗುಡ್ಡದೋರೆಯಿಂದ ನೀನು
ನವಿಯ ರೂಪ ತಳೆದು ಬಾ
ಹರಿವ ನೀರ ತೋಳುಗಳಲ್ಲಿ
ಕಿನಾರೆಯಾಗಿ ನಾ ಮಲಗುವೆ.

ಎಂದು ಪ್ರೇಯಸಿಯನ್ನು ನದಿಯಾಗಿಸಿ ತಾನು ದಡವಾಗುವ ಬಯಕೆ ಈ ಕವಿಯದು.

ಡಾ॥ ದಿನಕರ ದೇಸಾಯಿಯವರು ಹುಟ್ಟು ಹಾಕಿದ ಕೆನರಾ ವೆಲಫೆರ ಟ್ರಸ್ಟಿನ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ, ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕರಾಗಿ, ರಾಘವೇಂದ್ರ ಪ್ರಕಾಶನ ಸಂಸ್ಥೆಯ ಸಂಚಾಲಕರಾಗಿ ನಿರಂತರ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಶ್ರೀ ವಿಷ್ಣು ನಾಯ್ಕರು ೧೯೭೩ರಲ್ಲಿ ಸುಮನ ಕವನ ಸಂಗ್ರಹದ ಮೂಲಕ ತಮ್ಮೊಳಗಿನ ಕಾವ್ಯ ಶಕ್ತಿಯನ್ನು ಅಭಿವ್ಯಕ್ತಿಗೊಳಿಸಿದರು. ಹೀಗೆ ೨೦೦೨ರ ವರೆಗೆ ಆ ರತಿ ಈ ರೀತಿ, ನನ್ನ ಅಂಬಾರಕೊಡಲು, ವಾಸ್ತವ, ಹೊಸಬತ್ತ ಕಳಕೊಂಡ ಕವಿತೆ, ಆಲ ಮತ್ತು ಬಾಲ, ಮುಚ್ಚಿದ ಬಾಗಿಲು ಮತ್ತು ಮರಿ ಗುಬ್ಬಿ, ಬೆಳಕಿನ ಕರೆ ಹೀಗೆ ಒಟ್ಟು ಒಂಬತ್ತು ಕವನ ಸಂಕಲನಗಳನ್ನು ಓದುಗರಿಗೆ ನೀಡಿದ ಪ್ರಮುಖ ಕವಿ, ಆದಾಗಲೇ ಕನ್ನಡ ಸಾಹಿತ್ಯವು ೧೯೨೧ರಲ್ಲಿ ನವೋದಯ, ೧೯೪೩ ರಲ್ಲಿ ಪ್ರಗತಿಶೀಲ, ೧೯೫೦ರಲ್ಲಿ ನವ್ಯ ಮತ್ತು ೧೯೭೮ರಿಂದ ಬಂಡಾಯ ಕಾವ್ಯ ಎಂಬ ಕಾವ್ಯ ಮಾರ್ಗಗಳನ್ನು ಕಂಡುಕೊಂಡಿತ್ತು. ಈ ಎಲ್ಲ ಮಾರ್ಗಗಳಲ್ಲೂ ಈ ಕವಿ ಸಾಗಿರುವುದನ್ನು ಇವರ ಕವಿತೆಗಳೇ ಸಾರುತ್ತವೆ.

ಒಂದಕ್ಕೆ ತಂದದ್ದು ಇನ್ನೊಂದಕ್ಕೆ ಒಗ್ಗ
ಇನ್ನೊಂದಕ್ಕೆ ಒಗ್ಗಿದ್ದು ಮತ್ತೊಂದಕ್ಕೆ ಆಗ.
ಇವನದೊ ಪ್ರತಿಯೊಂದರಲ್ಲೂ ಪ್ರಯೋಗ

ನೆಲದಗುಣ ನೋಡಿ, ನೀರು, ಗೊಬ್ಬರ, ಕ್ರಿಮಿನಾಶಕ

ಈ ಸಾಲುಗಳು ಇವರ ಕಾವ್ಯ ಮಾರ್ಗಗಳ ಪ್ರಯೋಗಶೀಲತೆ ಮತ್ತು ಅದರಲ್ಲಿನ ಗೊಂದಲಗಳನ್ನು ಸೂಚಿಸುತ್ತವೆ. ದಿನಕರ ದೇಸಾಯಿಯವರ ನೆರಳಲ್ಲಿ ಬಾಳಿದ ಇವರು ಅವರಂತೆ ಕವಿತೆಗಳನ್ನು ಬರೆಯದೆ ತಮ್ಮದೇ ಆದ ಛಾಪನ್ನು ಕಾವ್ಯ ರಚನೆಯಲ್ಲಿ ಮೆರೆದಿರುವುದು ಗಮನಾರ್ಹವಾದದ್ದು. ಆದರೆ ದಿನಕರ ದೇಸಾಯಿಯವರಂತೆ ಇವರ ಕವನ ಸಂಗ್ರಹಕ್ಕೂ ಅನೇಕ ಬಹುಮಾನಗಳು ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ. ಡಾ|| ಗೌರೀಶ ಕಾಯ್ಕಿಣಿಯವರು ಇವರನ್ನು ಉತ್ತರ ಕನ್ನಡದ 'ಚೆನ್ನವೀರ' ಎಂದೇ ಕರೆದಿರುತ್ತಾರೆ. ಹೀಗೆ ಕರೆಯಲು ಕಾರಣ ಬಹಳಷ್ಟು ಕವನಗಳನ್ನು ಬರೆದಿರುವುದಕ್ಕಲ್ಲ. ಇವರ ಬಹುತೇಕ ಕವಿತೆಗಳಲ್ಲಿರುವ ಶಾಂತ ಗುಣಗಳನ್ನು ಗಮನಿಸಿ ಈ ಮಾತುಗಳನ್ನು ಹೇಳಿರಬೇಕೆನ್ನುವುದು ನನ್ನ ಅನಿಸಿಕೆ. ವಿಷ್ಣು ನಾಯ್ಕರ ಕವಿತೆಗಳು ಐತಿಹಾಸಿಕ ದಾಖಲೆಯ ದೃಷ್ಟಿಯಿಂದ ಹೆಚ್ಚಿಗೆ ಮಹತ್ವವನ್ನು ಪಡೆದಿರುತ್ತವೆ. ಯಾಕೆಂದರೆ ಇವರ ಕಾವ್ಯದ ವಸ್ತುಗಳು ಅಂಬಾರಕೊಡಲನ್ನು ಕೇಂದ್ರವಾಗಿಟ್ಟುಕೊಂಡು ಅದರ ಪರಿಧಿಯೊಳಗಿನ ಸಾಮಾಜಿಕ ಸ್ಥಿತಿ, ಗತಿ, ನೋವು, ನಲಿವುಗಳಾಗಿರುತ್ತವೆ. ಮುಂದೊಂದುದಿನ ಇಲ್ಲಿಯ ಸಾಮಾಜಿಕ ಪರಿಸರವನ್ನು ಅಭ್ಯಾಸ ಮಾಡುವವರಿಗೆ ಇವು ದಾಖಲೆಗಳಾಗಬಹುದು. ಉದಾಹರಣೆಗೆ ನನ್ನ ಅಂಬಾರಕೊಡಲು, ಗುಮಟೆ ಪಾಂಗಿನ ಹಾಡು, ಅವ್ವ ಮತ್ತು ನಾನು ಮುಂತಾದವುಗಳು. ಅವ್ವ ಮತ್ತು ನಾನು ಹೆತ್ತವ್ವನ ಮತ್ತು ಮಗನ ಹಾಡಾಗಿರದೆ, ಹೊತ್ತವ್ವನ ಮತ್ತವಳ ಮಕ್ಕಳ ಪಾಡಿನ ಹಾಡಾಗಿದೆ.

ಯುದ್ಧ ನಡೆದಿತ್ತಂತೆ, ಮಾದೊಡ್ಡ
ಜಗಯುದ್ಧ ಬೆಂಕಿಉಗುಳಿದ ಯುದ್ಧ

....

ಅಂದು ಹೆತ್ತಳು ಅವ್ವ, ಅಪ್ಪ
ಕೂಲಿಗೆ ಹೊರಗೆ; ಕಣಜ ಕಟ್ಟುವರಲ್ಲಿ

....

ಬಾಣಂತಿಯೇ ಎದ್ದು ಬೆಂಕಿ
ಮಾಡಿದಳಂತೆ, ನೋವುಂಡು ಸೊಂಟಕ್ಕೆ
ಬಿಗಿದು ಸುತ್ತ ;
ದೀಪಾಳಿ ಹಬ್ಬಕ್ಕೆ ಕಾಂಬೋಕೆ ಹೋ
ದಾಗ, ಜಮಾ ಆದ ಕಚ್ಚಿಗಳೇ

ವರ್ಷಪೂರ್ತಿ,

....

ಬೆಟ್ಟಕ್ಕೆ ಹೋದವ್ವ, ಸೊಪ್ಪು ಸದೆ
ತಂದವ್ವ, ಒಣಜಿಗ್ಗು ಹಸಿಸಗಣೆ
ಹೆಕ್ಕಿದವ್ವ;
ಬೆಲೆಗೆಂಡೆ ಬೆಳೆದವ್ವ, ಸೊರೆ-ಸೌತೆ
ಕೊಯ್ದವ್ವ ಈ ಎಲ್ಲವನೂ ನನಗೆ ಕಲಿಸಿದವ್ವ.

ಹೀಗೆ ಅವ್ವ ಮತ್ತು ನಾನು ಕವನದ ಸಾಲುಗಳು ಸ್ವಾತಂತ್ರ್ಯಾನಂತರದಲ್ಲಿ ಸುಮಾರು ೧೯೭೦ದಶಕದವರೆಗಿನ ಈ ನೆಲದ ಬಡವರ ಬದುಕಿನ ದಾರುಣ ಚಿತ್ರವನ್ನು ನೀಡುತ್ತವೆ. ಅಲ್ಲದೆ ಇಲ್ಲಿ ಬಳಸಿದ ಅವರ ಮನೆ ಮಾತಿನ ಭಾಷಾಶಬ್ದಗಳು ಸಹ ಭಾಷಾಭ್ಯಾಸಕ್ಕೆ ಸಹಾಯಕವಾಗಬಹುದು. ಇಂತಹ ಅನೇಕ ಕವನಗಳನ್ನು ಉದಾಹರಿಸಬಹುದು.

ಅಂಕೋಲೆಯ ಪಿ.ಎಮ್.ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದ ಶ್ರೀ ಶ್ರೀನಿವಾಸ ಶೆಟ್ಟಿಯವರು ವಿಶೇಷವಾಗಿ ಮಕ್ಕಳಿಗಾಗಿಯೇ ಕವನ ಬರೆದು ಪ್ರಜಾವಾಣಿ ಮುಂತಾದ ಪತ್ರಿಕೆಗಳಲ್ಲಿ ಪ್ರಥಮ ಬಹುಮಾನ ಗಳಿಸಿದವರು. ಈ ಜಿಲ್ಲೆಯ ಬಹುಮುಖ್ಯ ಮಕ್ಕಳ ಕವಿಯಾದ ಇವರು ೧೯೭೪ರಲ್ಲಿ ಬಾಲವನ, ಪುಟಾಣಿ ಪುಟ್ಟ, ೧೯೮೫ರಲ್ಲಿ ಬಣ್ಣದ ಗೊಂಬೆ, ೧೯೯೫ರಲ್ಲಿ ಕಡಲಹಕ್ಕಿ ಈ ನಾಲ್ಕು ಮಕ್ಕಳ ಕವನ ಸಂಗ್ರಹವನ್ನು ಪ್ರಕಟಿಸಿರುತ್ತಾರೆ. ಪುಟ್ಟ ಮಕ್ಕಳಿಗೆ ಇನ್ನೂ ಸಮಸ್ಯೆಯಾಗಿಯೆ ಇದ್ದ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು ? ಎನ್ನುವ ಪ್ರಶ್ನೆಗೆ

ಬೆಕ್ಕಿನ ಕೊರಳಿಗೆ ಗಂಟೆಯನು
ಕಟ್ಟುವ ಹೊಸ ಹೊಸ ಯುಕ್ತಿಯನು
ಇಲಿಮರಿ ಸಭೆಯಲಿ ಮಂಡಿಸಿತು.
ಹಳೆಯ ವಿಚಾರ ಖಂಡಿಸಿತು

ಎಂದು ಇಲಿಮರಿಯ ಜಾಣತನ ಕವನದಲ್ಲಿ ವಿಚಾರ ನೀಡಿರುತ್ತಾರೆ. ಮಕ್ಕಳಿಗಾಗಿ ಮಾತ್ರ ಕವಿತೆಗಳನ್ನು ರಚಿಸದೇ ಪ್ರೌಢ ಕವನಗಳನ್ನು ಸಹ ಅವರ ಮುಳ್ಳುಗಳ್ಳಿ ಕವನ ಸಂಗ್ರಹದಲ್ಲಿ ನೀಡಿರುತ್ತಾರೆ. ಭೂಮರೆಂಗ್, ಮುಳ್ಳುಗಳ್ಳಿ ಮುಂತಾದ ಕವಿತೆಗಳು ಇವರ ಕಾವ್ಯಶಕ್ತಿಯ ಉತ್ತಮ ನಿದರ್ಶನಗಳು.

ಕಾಡಹೆಣ್ಣು ೧೯೭೬ರಲ್ಲಿ ೧೯೮೫ರಲ್ಲಿ ದಾರಿ ಮಾಡಿಕೊಡಿ, ೧೯೮೫ರಲ್ಲಿ ಅನುಭವ, ೧೯೮೮ರಲ್ಲಿ ಆತಂಕ, ೧೯೯೮ರಲ್ಲಿ ಈ ಎಲ್ಲ ಕವನ ಸಂಕಲನಗಳನ್ನು

ಪ್ರಕಟಿಸಿದರು. ಶಾಂತರಾಮ ನಾಯಕ ಹಿಚಕಡ. ಇವರು ಸತ್ಯಾಗ್ರಹ ಸ್ಮಾರಕ ವಿದ್ಯಾಲಯದ ಮುಖ್ಯಾಧ್ಯಾಪಕರಾಗಿ ನಿವೃತ್ತರಾಗಿರುವವರು. ರಾಜ್ಯಪ್ರಶಸ್ತಿ ವಿಜೇತ ಶಿಕ್ಷಕ ಕವಿಯ ಭಾವುಕ ಮನಸ್ಸಿನ ಪ್ರತಿಬಿಂಬಗಳು ಇಲ್ಲಿಯ ಕವನಗಳು.

ಸಾವು ಬಂದರೆ ಬರಲಿ, ಸ್ನೇಹಮಾತ್ರ ಇರಲಿ
ಹೊಳೆಯುತ್ತಿರಲೆಂದಿಗೂ........
ಮನದ ಬಾಂದಳದಲ್ಲಿ..................

ಎಂದು ಸ್ನೇಹಕ್ಕಾಗಿ ಹಂಬಲಿಸುವ ಕವಿ ಸು.ರ.ಎಕ್ಕುಂಡಿ, ವಿ.ಬಿ.ಗಾವಂಕರ, ವಿ.ಜೆ.ನಾಯಕ ಮುಂತಾದವರ ಕುರಿತು ಬರೆದ ಕವಿತೆಗಳು ಸುಂದರವಾಗಿ ಮೂಡಿಬಂದಿವೆ.

ಯಾರೀ ಚಲುವೆ........?
ನಮ್ಮದೇ ವಠಾರದ ಪ್ರಿಯ ಸೋದರಿ
ಸಿರಿಮುಡಿಯ ನಲ್ನುಡಿಯ
ಹೊಳಪುಗಣ್ಣಿನ ಬೆಡಗಿ
ಇವಳಲ್ಲವೆ,
'ಆಮಗಲೆ' ಕೊಂಕಣಿ ಹುಡುಗಿ !

ಎನ್ನುತ್ತ ಅನ್ಯ ಭಾಷಿಕರನ್ನೂ ತನ್ನವರೆನ್ನುವುದು ಇಲ್ಲಿಯ ಕೆಲ ಕವನಗಳ ಭಾವ.

ನಿನ್ನೊಳಗೆ ನೀ ಬತ್ತಲಾಗಿ
ತೆರೆದಿಡು ನಿನ್ನ
ಮನೆಯ ಬಾಗಿಲು
ಎಲ್ಲರಿಗೂ ಗೆಳೆಯಾ !

ಎಂದು ವಿಶ್ವಬಂಧುತ್ವಕ್ಕಾಗಿ ಹಂಬಲಿಸುವ ಕವಿ

ಹರಿವ ನೀರಿಗೆ ಭಯ
ಬೀಸುಗಾಳಿಗೆ ಜ್ವರ
ಹಾಡು ಹಕ್ಕಿಗೂ ನಡುಕ
ಎಲ್ಲೆಲ್ಲೂ ಸ್ವರ-ರಾಗ
ತಾಳ ಲಯ ತಪ್ಪಿದ ಅಪಸ್ವರ !

ಎಂದು ಹಾನಿಗೊಳಗಾಗಿರುವ ಸಾಮಾಜಿಕ ಪರಿಸರವನ್ನು ಕಂಡು ಆತಂಕ ಗೊಂಡಿರುವುದು ಸಹ ಇವರ ಕಾವ್ಯದಲ್ಲಿ ವ್ಯಕ್ತವಾಗುತ್ತದೆ.

೧೯೭೭ರಲ್ಲಿ ಕವನ ಕುಸುಮ ಮತ್ತು ೧೯೮೦ರಲ್ಲಿ ಕಾವ್ಯಲತಾ ಎಂಬೆರಡು ಮಕ್ಕಳ ಕವನ ಸಂಗ್ರಹಗಳನ್ನು ಪ್ರಕಟಸಿರುವ ಶ್ರೀಮತಿ ಗೀತಾ ಮನೋಹರ (ಕುಸುಮಾ ಕೇಣಿಕರ) ಇವರು ಕವನಗಳನ್ನು ಸಂಗ್ರಹರೂಪದಲ್ಲಿ ಪ್ರಕಟಿಸಿರುವ ಅಂಕೋಲೆಯ ಏಕೈಕ ಮಹಿಳಾ ಲೇಖಕಿ. ಇವರ ಕಾವ್ಯಲತಾ ಸಂಗ್ರಹದಲ್ಲಿ ರಾಷ್ಟ್ರಕವಿ ಕುವೆಂಪುರವರು ಆಶೀರ್ವಾದ ನುಡಿ ಬರೆದಿರುವುದು ಅಭಿಮಾನದ ಸಂಗತಿಯಾಗಿದೆ. ಮಕ್ಕಳಿಗಾಗಿ ಚಿಕ್ಕ ಕವನಗಳ ಜೊತೆಗೆ ಪುರಾಣ, ಪ್ರಕೃತಿ ಮುಂತಾದ ವಸ್ತುಗಳ ಕುರಿತು ಅತೀ ದೀರ್ಘ ಕಥನ ಕವನಗಳನ್ನು ಮಕ್ಕಳ ಮನದಾಳದಲ್ಲಿಳಿಯುವ ಹಾಗೆ ರಚಿಸಿರುವುದನ್ನು ಮನಗಾಣಬಹುದಾಗಿದೆ.

ಬೆಳ್ಳುಳ್ಳಿ ನೀನಿಲ್ಲದಾ
ಮನೆಯು ಉಂಟೆ ?
ಇಲ್ಲದಿರಲೂ ಬಹುದು
ಬೆಂಗಾಡಿನಲೂ ಒಂಟೆ !
ಮಸಾಲೆ ರಾಜನೇ ನೀನು
ಸೌಜನ್ಯ ಮೂರ್ತಿ
ಶುಭ್ರ ಬಟ್ಟೆಯೇ ನಿನಗೆ
ಎಂದೆಂದೂ ಪ್ರೀತಿ

ಎಂದು ಬೆಳ್ಳುಳ್ಳಿಯಂತಹ ವಸ್ತುಗಳ ಕುರಿತು ಕವನ ರಚಿಸಬಲ್ಲ ಸಮರ್ಥರು.

ಅಗ್ಗರಗೋಣದವರಾದ ಶ್ರೀ ಜೀನದೇವ ನಾಯಕರು ಹೊನ್ನಾವರದ ಎಸ್.ಡಿ.ಎಮ್. ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದವರು. ಉತ್ತಮ ವಾಗ್ಮಿಯಾಗಿರುವ ಇವರು ಪ್ರಗತಿಶೀಲ ಮತ್ತು ನವ್ಯ ಮಾರ್ಗವನ್ನನುಸರಿಸಿ ಕಾವ್ಯ ರಚಿಸಿ ೧೯೮೧ರಲ್ಲಿ ಕೌರವರು ಪಾಂಡವರು ಕ್ಷೇಮದಿಂದಿರುವರೇ.... ಎಂಬ ಕವನ ಸಂಗ್ರಹದ ಮೂಲಕ ಸಕಲರ ಕ್ಷೇಮ ಬಯಸಿದವರು. ನಾಗರಿಕತೆಯಿಂದುಂಟಾಗುವ ಶೋಷಣೆಯನ್ನು ತೊಲಗಿಸುವುದಕ್ಕಾಗಿ ಜೀನದೇವ ನಾಯಕರು

ಕತ್ತಿ ಗುದ್ದಲಿ ಬಂದೂಕು
ಎತ್ತು
ಸರಿಪಡಿಸು ಸಂಸ್ಕೃತಿಯ
ಸೇತುವೆಯ ಕಟ್ಟು
ಶೋಷಿತರ ಉಸುರಿನಲಿ
ಮಾನ ಕಾಯುವ ಕೃಷ್ಣ
ಮುರಿದ ಮನಸನೆಲ್ಲ

ಎಂದು ಗುಡುಗಿದ ಈ ಸಾಲುಗಳು ಇಂದಿಗೂ ಪ್ರಸ್ತುತವಾಗಿವೆ. ಈ ಸಂಕಲನದ ಬಹುತೇಕ ಕವನಗಳಲ್ಲಿ ಸಾವು ಪ್ರಶ್ನೆಯಾಗಿ ಕಾಡಿರುವುದನ್ನು ಕಾಣಬಹುದು.

ಹೊನ್ನಾವರದ ಎಸ್.ಡಿ.ಎಮ್. ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾಗಿರುವ ಕನ್ನಡ ನಾಡಿನ ಪ್ರಮುಖ ಜಾನಪದ ಸಂಶೋಧಕರಲ್ಲೊಬ್ಬರಾದ ಡಾ. ಎನ್.ಆರ್.ನಾಯಕರು ಭಾವಿಕೇರಿಯವರು. ಇವರು ಜಾನಪದ ಸಂಶೋಧನೆಯ ಜೊತೆಗೆ ಸೃಜನಶೀಲ ಲೇಖಕರೂ ಹೌದು. ೧೯೮೧ರಲ್ಲಿ ಕಾದು ಅರಳು, ೨೦೦೧ರಲ್ಲಿ ಹಂಸಪಥ ಮತ್ತು ಇತ್ತೀಚಿಗೆ ಕಾಡ ಹಾಡು ಕವನ ಸಂಕಲನಗಳನ್ನು ಪ್ರಕಟಿಸಿ ಕಾವ್ಯ ಕ್ಷೇತ್ರದಲ್ಲಿಯೂ ಬೇಸಾಯ ಮಾಡಿರುತ್ತಾರೆ.

ಗದ್ದೆಗೆ ನೀರಿಲ್ಲ ಎತ್ತಿಗೆ ಮೇವಿಲ್ಲ
ಬಿತ್ತಿದ ಬೇಸಾಯ ಉರಿದೋಯ್ತೋ
ಬಿತ್ತದ ಬೆಳೆಯಿಲ್ಲ ನೆತ್ತಿಗೆ ನೀರಿಲ್ಲ
ತುತ್ತೂಕೂಳಿಗೆ ಗತಿಯಿಲ್ಲೋ

ಬಿತ್ತಿದ ಕೆರೆಯಲ್ಲಿ ಮುತ್ತೀದೆ ಹೆಸರು
ಸುತ್ತೆಲ್ಲ ರಣರಣ ಬಿಸಿಲಲ್ಲೋ
ಒತ್ತೆಯ ಬಾಳನ್ನು ಬದುಕೋಣವಂದ್ರೆ
ಎತ್ತೆತ್ತು ಕೆಲಸ ಸಿಗವಲ್ಲೋ

ಎಂದು ತಮ್ಮ ಮನೆಮಾತಿನ ದನಿಯ ಕಾವ್ಯ ಲಹರಿಯೊಂದಿಗೆ ಕರಾವಳಿಯ ರೈತರ ಬವಣೆಯ ಬದುಕಿನ ಚಿತ್ರಗಳನ್ನು ಇವರ ಕವನಗಳಲ್ಲಿ ಕಾಣಬಹುದಾಗಿದೆ.

ಕೂಳಿಜಬ್ಬು, ಹಗ್ಗಂಡಿಮೀನು,
ನಮ್ಗೋಳ್ ಪಾಲ್ಗೆ ಮೊಳ್ಗಾಲ ಮಾತ್ರವೋ,
ನೊಗ್ಲೀಮೀನು, ಇಚ್ವಣ, ಚಟ್ನೆ
ಕಮ್ತೇರ್ಗೆಲ್ಲಾ ಉಯ್ಯಾಚ ಮೊಳಗಾಲೋ

ಕಂಡೋರ್ ದನಿನಾ ಉಳ್ಳನು ಹೆಕ್ಕಿ,
ಬರ್ದೂರಾಗಿದೆ ಚಗ್ಣಿ ಹೊಂಡವೋ,
ಚಿಗ್ಲಿ ತುಳ್ದು ಬಿಗ್ವಣಿ ಉಳ್ದೇನು
ನಾಣ್ಗೇಯೊಲಿಗೇ ಬೆಂಕಿಯುರಿಚೋಕೇ.

ಹೀಗೆ ಹಾಲಕ್ಕಿಗಳ ಅಂದಿನ ಬದುಕಿನ ನೈಜ ಚಿತ್ರಣವನ್ನು ಜಿ.ಪಿ.ರಾಜರತ್ನಂರಂತೆ ಅವರ ಆಡುಮಾತಿನ ಭಾಷೆಯಲ್ಲಿ ಕಾವ್ಯ ರಚಿಸಿರುವುದನ್ನು ಇವರ ಸಂಕಲನಗಳಲ್ಲಿ ಕಾಣಬಹುದಾಗಿದೆ.

ಅಗ್ಗರಗೋಣದವರಾದ ಶ್ರೀ ಉದಯ ನಾಯಕರವರು ಓದುವುದಕ್ಕಾಗಿ ಅಮೇರಿಕಾದ ಪಿಟ್ಸಬರ್ಗನಲ್ಲಿರುವಾಗ ಪಯಣ ಕವನ ಸಂಗ್ರಹವನ್ನು ೧೯೮೧ರಲ್ಲಿ ಪ್ರಕಟಿಸಿರುತ್ತಾರೆ. ಈ ಕವನ ಸಂಗ್ರಹದಲ್ಲಿ ತಮ್ಮ ಬದುಕಿನ ಪಯಣದಲ್ಲಿನ ಅನುಭವದ ವಿವಿಧ ಅನಿಸಿಕೆಗಳನ್ನು ಇಲ್ಲಿ ಕವನವಾಗಿಸಿರುತ್ತಾರೆ.

ಅಂಬಾ ಎಂದು ಕರೆದ
ಕೂಗಿಗೆ ಓಗೊಟ್ಟು
ದಿಕ್ಕಿಗೆ, ಚಂಗನೆ
ನೆಗೆಯುವಂತೆ, ವಾಂಟೆಂಡ್
ಕಾಲಂ ನೋಡಿ ಅರ್ಜಿ ಗುಜರಾಯಿಸಿದೆ
ಮೊದಲೇ ಸರ್ಕಾರಿ ಬಸ್ಸು,
ಅಲ್ಲಲ್ಲಿ ರಿಜರ್ವ್,
ಲಕ್ಷ್ಮೀಯ ನರ್ತನಕೆ
ಸೀಟುಗಳ ತೂರಾಟ

ಎಂದು ಉದ್ಯೋಗ ಹಣವುಳ್ಳವರ ಸೊತ್ತು ಎನ್ನುವದನ್ನು ಕವನವಾಗಿಸುವ ಬಗೆ ಮೆಚ್ಚುವಂತಹದ್ದು.

ನಡುನದಿಯಲಿ
ಚಲಿಸುತ್ತಿದ್ದರೂ,
ಚಲಿಸದಂತೆ, ಕಾಣುವ ನಾವೆಯಂತೆ
ಚಂಚಲತೆ ಚಡಪಡಿಕೆ,
ಸಂಗಾತಿ ದೋಷವೆಂಬಂತೆ,
ಕಾಳು ಕಸ ತಂದು ಗುಬ್ಬಿ
ಗೂಡು ಕಟ್ಟುವಂತೆ
ದಡ ತಲ್ಪಿದಾಗ
ಮಾತ್ರ
ನಿಶ್ಚಿಂತೆ

ಎಂದು ಜೀವನದ ಕುರಿತೂ ಸುಂದರವಾದ ಕವನವನ್ನು ತಮ್ಮ ಸಂಗ್ರಹದಲ್ಲಿ ನೀಡಿರುತ್ತಾರೆ.

ಹಿಲ್ಲೂರಿನವರಾಗಿದ್ದು ದೂರ ಸಂಪರ್ಕ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಬೀರಣ್ಣ ಹಮ್ಮಣ್ಣ ನಾಯಕರವರು ಸೀಮಾಸುತ ಕಾವ್ಯ ನಾಮದಲ್ಲಿ ೧೯೮೧ರಲ್ಲಿ ಮಲೆನಾಡ ಮಲ್ಲಿಗೆ ಕವನ ಸಂಕಲನದೊಂದಿಗೆ ಕಾವ್ಯಕ್ಷೇತ್ರದಲ್ಲಿ ಗುರುತಿಸಿಕೊಂಡರು. ಈ ಸಂಗ್ರಹದ ಹೆಸರೇ ಸೂಚಿಸುವಂತೆ ಮಲೆನಾಡಿನ ಸೊಬಗಿನ ರಮ್ಯತೆ ಇಲ್ಲಿನ ಕವನಗಳು.

ಸಹ್ಯಾದ್ರಿಯೂರು ನಮ್ಮೂರು
ಕುಣಿವಲ್ಲಿ ನವಿಲು ನೂರಾರು
ಗರಿಗೆದರಿ ಜೋಡಿ ಕುಣಿದಾಗ
ಮಯ್ಯೆಲ್ಲ ಮಿಂಚಿನಾವೇಗ

ಎಂದು ಕವಿ ಮನದುಂಬಿ ಹಾಡಿರುವರು.

೧೯೮೧ರಲ್ಲಿ ಕಲ್ಪನಾ ತರಂಗ ಕವನ ಸಂಕಲನವನ್ನು ಮನೋಹರ ಮಲ್ಮನೆಯವರು ಪ್ರಕಟಿಸಿದರು. ಇವರು ಭಾವಿಕೇರಿಯವರಾಗಿದ್ದು, ಕೆ.ಡಿ.ಸಿ.ಸಿ. ಬ್ಯಾಂಕ ಶಿರಸಿಯಲ್ಲಿ ಉದ್ಯೋಗಿಯಾಗಿರುತ್ತಾರೆ. ಈ ಕವಿ ಕಂಡದ್ದೆಲ್ಲವನ್ನು ತನ್ನ ಕವಿತೆಯ ಕಣ್ಣುಗಳ ಮುಖಾಂತರ ಕ್ಲಿಕ್ ಮಾಡಿರುತ್ತಾರೆ. ಪ್ರಕೃತಿ ಪ್ರೇಮಿಯಾದ ಕವಿ

ಎದ್ದೆದ್ದು ಎದ್ದಂತೆ
ಬಿದ್ದು ಬಿದ್ದಲ್ಲಿ
ತೂಕಡಿಸುತ್ತಿದ್ದೆ
ಸೌಂದರ್ಯೋಪಾಸನೆಯಲಿ
ನಿನ್ನ ಕಂಡಂತೆ
ನಾ ತಡವರಿಸುತ್ತಿದೆ

ಎಂದು ನಿಸರ್ಗದ ಸೊಬಗನ್ನು ಕಂಡು ಮೈಮರೆತಿರುವುದನ್ನು ಕಾಣಬಹುದಾಗಿದೆ.

ಹೊನ್ನಾವರದವರಾಗಿದ್ದು, ೧೯೭೪ರಿಂದ ಎರಡು ದಶಕಗಳ ಕಾಲ ಅಂಕೋಲೆಯ ಜಿ.ಸಿ.ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಜನಪ್ರಿಯತೆಯನ್ನು ಗಳಿಸಿದವರು ಶ್ರೀ ಶ್ರೀಪಾದಶೆಟ್ಟಿಯವರು. ಇಲ್ಲಿ ಸೇವೆ ಸಲ್ಲಿಸುತ್ತಿರುವಾಗ ೧೯೭೬ರಲ್ಲಿ ಪ್ರಿಯ ಶರಾವತಿ ಪ್ರಕಟಿಸಿದ ಇವರು, ಕಡಲಿನ ಒಡಲಿನಲಿ ಮುತ್ತುಬಿತ್ತು, ಮೌನ ಕಣಿವೆಯ ಒಡಲು ಎಂಬ ಕವನ ಸಂಕಲನವನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಿದರು. ದೀನ ದಲಿತರ ನೋವಿನ ಧ್ವನಿಗೆ ಇವರ ಕಾವ್ಯ ಕೊರಳಾಗಿರುವದನ್ನು

ಒಡ್ಯಾ!
ಮುಕ್ರೀರು ನಾವ್-ಮುಕ್ರೀರು

....

ನೀವ್ ಬಂದಾಗ ದಾರಿ ಬಿಟ್ಟು
ಸಂಕೋಚ ಪಟ್ಟು ಹೆದರ್ತಾ ನಿಂತವ್ರು

....

ಕೋಳಿ ಕೂಗ್ದಾಗಿಂದ ಹಿಡ್ದು
ಕಾಂಕಿ ಗೂಡಿಗ ಹೋಗುತಂಕ
ಬೆಗ್ರ ಸುರಿಸಿ, ಮೈ ಮುರಿ ದುಡ್ದು

....

ತೆಳಿ ಕುಡ್ದು ತಂಗಳ ತಿಂದು ಹಳ್ಸದ್ದುಂಡು
ನಿಮ್ಮೆಂಜಲ ನೆಕ್ಕಿ ತೃಪ್ತಿ ತೇಗ ತೇಗ್ದೋರು
ಮುರ್ಕಣ್ಣ ಚಾಯ್ನ ಮಾ ರುಚಿ
ಅಂತ ಬಾಯ್ಚಪ್ಪರಿಸಿ ಕುಡ್ದವ್ರು,
ಒಡ್ಯಾ ಮಕ್ರೀರು

ಇಂತಹ ಸಾಲುಗಳ ಮುಖಾಂತರ ಕಾಣಬಹುದಾಗಿದೆ.

೧೯೮೪ರಲ್ಲಿ ಕೋಲಸಂಪಿಗೆ ಕವನ ಸಂಕಲನ ಪ್ರಕಟಗೊಳಿಸಿದವರು ಕವಿ ಶಾಂತಾರಾಮ ಬಾಳೆಗುಳಿ. ತನ್ನೆದೆಗೆ ತಟ್ಟಿದ ಎಲ್ಲವುಗಳನ್ನು ಕಾವ್ಯವಾಗಿಸುವ ಕಲೆಗಾರಿಕೆಯನ್ನು ಹೊಂದಿರುವ ಭಾವುಕ ಕವಿ ಇವರು. ಶಿರಕುಳಿಯವರಾದ ಇವರು ಆಗಸೂರಿನಲ್ಲಿ ಶಿಕ್ಷಕರಾಗಿದ್ದು ಆದರ್ಶ ಶಿಕ್ಷಕರೆನಿಸಿಕೊಂಡವರು.

ಹರೆಯ ಹುರುಪುಗಳಳಿದು
ರೆಂಬೆ ಕೊಂಬೆಗಳೊಣಗಿ
ಬೋಳಾದ ವೃಕ್ಷದ
ಕಟ್ಟಕಡೆಯ ದಿನಗಳು !
ನಿರಂತರ ಭಾವತರಂಗಗಳ
ಎದೆ ಝರಿಯು ಸತ್ತು
ಬಯಕೆಗಳು ಹೆಣವಾಗಿ ಬಿದ್ದ ಹಾಗೆ

ಎಂದು ಮುಪ್ಪನ್ನು ಕುರಿತು ಹಾಡುವ ಈ ಸಾಲುಗಳಲ್ಲಿ ಕವಿಯ ಕಾವ್ಯ ಕಟ್ಟುವ ಕಲೆಗಾರಿಕೆಯನ್ನು ಕಾಣಬಹುದು. ಕೆಲವು ಚುಟುಕಗಳ ಕೆಳಗಡೆ ಲೇಖಕರ ಹೆಸರು ಬರೆಯದೇ ಇದ್ದರೆ ಆ ಚುಟುಕುಗಳು ಡಾ॥ ದಿನಕರ ದೇಸಾಯಿಯವರದ್ದೇ ಆಗಿರಬಹುದೇನೋ ಎಂದು ಭಾಸವಾಗುವ ಹಾಗೆ ಚುಟುಕುಗಳನ್ನು ಬರೆದ ಕವಿ ಶಾಂತಾರಾಮ ಬಾಳೆಗುಳಿಯವರು, ೧೯೮೫ರಲ್ಲಿ ಪ್ರಕಟಗೊಂಡ ಕಸಬರಿಗೆ ಇಂತಹ ಚುಟುಕುಗಳ ಸಂಗ್ರಹ. ಮೃದು ಸ್ವಭಾವದ ಇವರು ತಮ್ಮ ಸ್ನೇಹಿತರನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಕೆಲವರ ಕುರಿತು ಚುಟುಕಿನಲ್ಲಿ ಸಮರ್ಥವಾಗಿ ಪರಿಚಯಿಸಿರುತ್ತಾರೆ.

ವಿಷ್ಣು ನಾಯಕ ನಮ್ಮ ಕನ್ನಡದ ಹಸಿರು
ಸಾಹಸದ ಸಾಧನೆಗೆ ಇನ್ನೊಂದು ಹೆಸರು ಕೂಡಿಬಂದರೆ
ಇನ್ನೂ ಮುನ್ನಡೆವ ಶಕ್ತಿ ಮೃಷ್ಟಾನ್ನವಾಗುವುದು ಕನ್ನಡದ ಬುತ್ತಿ

ಎಂದು ವಿಷ್ಣು ನಾಯ್ಕರ ಕುರಿತು ಅಂದು ಬರೆದ ಈ ಸಾಲುಗಳನ್ನು ನಾವು ಈ ಸಂದರ್ಭದಲ್ಲಿ ಮೆಚ್ಚಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಇಲ್ಲಿ ಉಲ್ಲೇಖಿಸಿದ ಶೇ.೯೫ರಷ್ಟು ಕವಿಗಳ ಪುಸ್ತಕಗಳು ಪ್ರಕಟಗೊಂಡಿರುವುದು ವಿಷ್ಣು ನಾಯ್ಕರ ರಾಘವೇಂದ್ರ ಪ್ರಕಾಶನದ ಮೂಲಕ ಎನ್ನುವುದು ಗಮನಾರ್ಹ.

ಕುಮಟಾ ತಾಲೂಕಿನ ಕಡಮೆಯವರಾಗಿದ್ದು, ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಅಂಕೋಲೆಯಲ್ಲಿ ನೆಲೆಸಿ, ಅಂಕೋಲೆಯ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ, ಅದರ ಆಜೀವ ಸದಸ್ಯರಾಗಿರುವ ಪ್ರಕಾಶ ಕಡಮೆಯವರು ಗಾಣದೆತ್ತು ಮತ್ತು ತೆಂಗಿನ ಮರ ೧೯೮೭ರಲ್ಲಿ ಮತ್ತು ಆ ಹುಡುಗಿ ೧೯೮೮ರಲ್ಲಿ ಪ್ರಕಟಿಸಿರುತ್ತಾರೆ. ತೆರೆದ ಕಣ್ಣಿಗೆ ಕಾಣುವ ದುಡಿವ ಬಡವರ ಪಾಡು ಇವರ ಹಾಡುಗಳು.

ಹೂವ ಮಾರುವ ಹುಡುಗಿ
ಹೂವು ಮುಡಿಯಲೇ ಇಲ್ಲ
ಹಣ್ಣು ಮಾರುವ ಹುಡುಗ
ಹಣ್ಣು ತಿನ್ನಲೇ ಇಲ್ಲ

ಎನ್ನುವ ಕೊರಗು ಇವರದ್ದು.

೧೯೮೦ ಮತ್ತು ೧೯೯೦ರ ದಶಕವು ಬಂಡಾಯ ಸಾಹಿತ್ಯ ಚಳುವಳಿಯ ಪ್ರವರ್ಧಮಾನದ ಕಾಲ. ಈ ಸಮಯದಲ್ಲಿ ಕನ್ನಡ ನಾಡಿನಲೆಲ್ಲ ಹೊಸ ಹೊಸ ಲೇಖಕರು ಕಾಣಿಸಿಕೊಂಡರು. ಈ ಸಂದರ್ಭದಲ್ಲಿ ತಮ್ಮ ಧ್ವನಿಯನ್ನು ಕವಿತೆಗಳ ಮೂಲಕ ವ್ಯಕ್ತ ಪಡಿಸಿದವರು ಕೃಷ್ಣ ನಾಯಕ, ಹಿಚಕಡ. ೧೯೮೮ರಲ್ಲಿ ಪ್ರಕಟಗೊಂಡ ಕೋಗಿಲೆ ಅಳುತ್ತಿದೆ ಸಂಕಲನದ ಕುರಿತು ದಿ. ಜಿ.ಎಸ್.ಅವಧಾನಿಯವರು ಹೀಗೆ ಹೇಳುತ್ತಾರೆ. 'ಹೇಳುವುದನ್ನು ಮುಕ್ಕಾಗಿಸದೇ ಹೇಳುವ ಕಲೆ, ಭಾಷೆಯ ಬಳಕೆಯಲ್ಲಿ ತೋರುವ ಬಿಗಿ, ವಾಸ್ತವಕ್ಕೆ ಸ್ಪಂದಿಸುವ ಮನೋಧರ್ಮ, ಹೊಸ ಬದುಕನ್ನು ಕಟ್ಟುವ ಆಶಯ ನಾಯಕರ ಕವಿತೆಯುದ್ದಕ್ಕೂ ಹರುಳುಗೊಂಡಿರುವುದನ್ನು ಹೆಕ್ಕಿಡಬಹುದು'. ಡಾ|| ರಾಮಕೃಷ್ಣ ಗುಂದಿಯವರ ಅನಿಸಿಕೆ ಹೀಗೆ ತನ್ನ ಎಳೆಯ ಕೈಗಳಲ್ಲೇ ವಿಶ್ವ ಪ್ರೀತಿಯ ಬಾಚಿಕೊಳ್ಳುವ ಅದಮ್ಯ ಉತ್ಸಾಹದ ಈ ಪ್ರಯತ್ನಶೀಲತೆಗೆ ಮುಷ್ಠಿಯಷ್ಟಾದರೂ ಅಲಭ್ಯ ಎಂದು ಹೇಳುವ ಎಂಟದೆ ಯಾರಿಗಿದೆ ?

೧೯೯೯ರಲ್ಲಿ ಪ್ರಕಟಗೊಂಡ ಭೂಗೋಳ ಪ್ರಶ್ನೆಯ ಕುರಿತು ಹಸಿದ ಒಡಲನ್ನು ತಣಿಸುವುದು ಎಲ್ಲಾ ಕಾಳಜಿಗಳ, ಎಲ್ಲ ತತ್ವಗಳ ಮತ್ತು ಧರ್ಮಗಳ ಅಂತಿಮ ಗುರಿಯಾಗಲೇಬೇಕು ಎಂಬುದು ಇವರ ಕಾವ್ಯ ಸಂದೇಶವಾಗಿದೆ ಎಂದು ರಂಜಾನ್ ದರ್ಗಾ ಅಭಿಪ್ರಾಯಪಡುತ್ತಾರೆ.

ಹುಟ್ಟಿ ಬರಲಿ ಹೊಸ ಸೂರ್ಯ
ದಿಕ್ಕು ಯಾವುದೇ ಇರಲಿ
....

ಎನ್ನುವ ಆಶಯದೊಂದಿಗೆ

ನನ್ನ ಕವನ
ಅನ್ನವಲ್ಲಿದ ಹಸುಳೆಗೆ
ಬಡಿಸೀತೇ?
ಒಂದೊತ್ತಿನ ಕವಳ
ಚಣ್ಣವಿಲ್ಲದ ಮಗುವಿಗೆ
ತೊಡಿಸೀತೆ
ಬಣ್ಣದ ಉಡುಗೆ ?

ಎನ್ನುವ ಕಾಳಜಿಯನ್ನು ಕಾಣಬಹುದಾಗಿದೆ.

ಸರಳವಾದ ಭಾಷೆಯಲ್ಲಿ ಪ್ರಕೃತಿ ಮತ್ತು ವಿಜ್ಞಾನದಂತಹ ವಿಷಯಗಳನ್ನು ಸರಳವಾಗಿ, ಕಾವ್ಯಮಯವಾಗಿ ಹೇಳಿದಾಗ ಮಕ್ಕಳಿಗೆ ಅವು ಸುಲಭವಾಗಿ ಅರ್ಥವಾಗುತ್ತವೆ. ಹೀಗೆ ಮಕ್ಕಳಿಗಾಗಿ ಕವನಗಳನ್ನು ೧೯೮೮ರಲ್ಲಿ ಮಗು–ನಗು ಮತ್ತು ೨೦೦೫ ಗುಬ್ಬಿಗೂಡು ಸಂಕಲನ ನೀಡಿದವರು ಶ್ರೀ ನಾಗೇಂದ್ರ ನಾಯಕ ತೊರ್ಕೆ. ಇವರು ಪ್ರಾಥಮಿಕ ಶಾಲಾಶಿಕ್ಷಕರಾಗಿ ನಿವೃತ್ತರಾಗಿರುವರು.

ಬಿಂದು ಬಿಂದು ಸೇರಿ
ರೇಖೆ ತಿಳಿಯಿರಿ
ಸರಳ ವಕ್ರ ರೇಖೆ
ರೇಖಾಗಣಿತ ಎನ್ನಿರಿ
ಸರ್ಪದಂತೆ ಚಲಿಸಲು
ಅದುವೆ ವಕ್ರವು
ಪುಸ್ತಕದ ಅಂಚು
ಸರಳ ಇರುವವು........

ಹೀಗೆ ಬಿಂದು–ರೇಖೆ ಭೂಮಿತಿ ಗಣಿತ ಸೂತ್ರವನ್ನು ಸುಲಭವಾಗಿ ಅರ್ಥವಾಗುವಂತೆ ಕವನ ರಚಿಸಿರುತ್ತಾರೆ.

೧೯೯೯ರಲ್ಲಿ ಸೃಷ್ಟಿ ಸೌರಭ ಮತ್ತು ೧೯೯೪ರಲ್ಲಿ ಕಾಲಧರ್ಮ ಮತ್ತು ಪ್ರಕೃತಿ ಪಾರಮ್ಯ ಎನ್ನುವ ಕವನ ಸಂಕಲನ ಹಾಗೂ ತೆಂಕಣ ಗಾಳಿ ಎನ್ನುವ ಚುಟುಕು ಸಂಗ್ರಹವನ್ನು ಶ್ರೀ ಬಿ.ಜಿ.ನಾಯಕರು ಪ್ರಕಟಿಸಿರುತ್ತಾರೆ. ಇವರು ಕನ್ನಡ ಉಪನ್ಯಾಸಕರಾಗಿ, ಬಹುಕಾಲ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿ

ಸೇವೆ ಸಲ್ಲಿಸಿ ಯಶಸ್ಸನ್ನು ಸಾಧಿಸಿದವರು. ಪ್ರಕೃತಿ ಮತ್ತು ಜೀವನದ ಒಲವು ನಲಿವುಗಳು ಇವರ ಕಾವ್ಯದ ವಸ್ತುಗಳು.

ನಿಶೆಯ ಸೆರಗನ್ನು ಸರಿಸಿ
ಉಷೆಯೆದ್ದು ನಸುನಗಲು
ಬಾಳಿನಾಗಸದಲ್ಲಿ ಬೆಳಗಾಯಿತು !
ಮನದಲ್ಲಿ ಮಲ್ಲಿಗೆಯರಳಿ
ಸುಮವು ಸೌರಭ ಸೂಸಿ
ಗಂಧಮಾರುತ ತೀಡಿ ಸುಖ ತಂದಿತು

ಎಂದು ಹಾಡುವ ಈ ಸಾಲುಗಳು ಕಾವ್ಯಕ್ಕೆ ಹದವಾದ ಹೃದಯ ಇವರದ್ದು ಎನ್ನುವುದನ್ನು ಸಾಬೀತುಪಡಿಸುತ್ತವೆ.

ಭಾವರೇಖೆ ಒಂದೇ ತಲೆಬರಹದಲ್ಲಿ ೫೩ ಭಾವ ತರಂಗಗಳನ್ನು ಹೊಂದಿರುವ ಅಪರೂಪದ ಸಂಗ್ರಹ. ಇದನ್ನು ಬರೆದು ೧೯೮೯ರಲ್ಲಿ ಪ್ರಕಟಿಸಿದವರು ಅಗ್ಗರಗೋಣದವರಾಗಿದ್ದು ಗಂಗಾವತಿಯಲ್ಲಿ ಕನ್ನಡ ಉಪನ್ಯಾಸಕರಾಗಿ ಪ್ರಾಂಶುಪಾಲರಾಗಿ ಸೇವೆಸಲ್ಲಿಸಿದ್ದ ಶ್ರೀ ವಿಶ್ವನಾಥ ನಾಯಕ, ಇವರ ಭಾವರೇಖೆ, ಪ್ರಣಯ, ವಿರಹದ ಭಾವ ತುಣುಕುಗಳ ಸಂಗ್ರಹ, ತನ್ನನುಭವವನ್ನು ಕಾವ್ಯವಾಗಿಸುವ ಕಲೆಗಾರಿಕೆ ಕವಿಗಿದೆ ಎನ್ನುವುದನ್ನು ಇಲ್ಲಿಯ ಕವಿತೆಗಳು ವ್ಯಕ್ತಪಡಿಸುತ್ತವೆ.

ನನ್ನ
ಪ್ರೀತಿಯ ಮಲ್ಲಿಗೆ ಬಳ್ಳಿಗೆ
ನಿಷ್ಠೆಯ ಕಟ್ಟೆ ಕಟ್ಟಿ
ಸಂಗಮದ ಹೂ ಬಯಸಿ
ನೆನಪಿನ ನೀರೆರೆಯುತ್ತ
ಗುರಿಯಿಲ್ಲದ
ದಾರಿ ಸವೆಸುತ್ತಿದ್ದೇನೆ !!

ಹೀಗೆ ಇಲ್ಲಿನ ಭಾವರೇಖೆಗಳಲ್ಲಿ ಪ್ರೀತಿಗೆ ನಿಷ್ಠೆಯ ಕಟ್ಟೆ ಕಟ್ಟಿರುವುದನ್ನು ಕಾಣಬಹುದು.

೧೯೯೩ರಲ್ಲಿ ಜ್ಯೋತ್ಸ್ನಾ ಕವನ ಸಂಕಲನವನ್ನು ಶ್ರೀ ಎನ್.ಬಿ.ಕಾಮತರು ಪ್ರಕಟಿಸಿದರು. ಇವರು ಅಂಕೋಲೆಯ ಪಿ.ಎಮ್.ಹೆಸ್ಕೂಲಿನಲ್ಲಿ ಮುಖ್ಯ ಅಧ್ಯಾಪಕರಾಗಿ ನಿವೃತ್ತರಾದವರು. ಇವರ ಈ ಸಂಗ್ರಹದಲ್ಲಿ ಕವಿತೆಗಳು ಮತ್ತು ಚುಟುಕುಗಳ ಎರಡು ಭಾಗಗಳಿವೆ. ಕವಿ ದಾರ್ಶನಿಕನಂತೆ ಬದುಕಿನ ತತ್ವಗಳನ್ನು ಕವಿತೆಗಳಲ್ಲಿ ಹೇಳಿದರೆ ಚುಟುಕುಗಳಲ್ಲಿ ಡಾ॥ ದಿನಕರ ದೇಸಾಯಿ, ಗೌರೀಶ ಕಾಯ್ಕಿಣಿ, ಡಾ॥ ಶಿವರಾಮ ಕಾರಂತ, ತೋನ್ಸೆ ಅನಂತ ಪೈ ವೀರೇಂದ್ರ ಹೆಗ್ಗಡೆ ಮುಂತಾದವರ ಕುರಿತು (ಚುಟುಕುಗಳಲ್ಲಿ) ಚಿತ್ರಿಸಿರುತ್ತಾರೆ.

ಬಾಸಗೋಡದವರಾಗಿದ್ದು ಕುಂದಾಪುರದಲ್ಲಿ ಶಿಕ್ಷಕರಾಗಿ ಹಲವು ಪ್ರಶಸ್ತಿಗಳನ್ನು ಪಡೆದ ಶ್ರೀ ವಿಠ್ಠಲ ವಿ. ಗಾಂವಕರರವರು ಬದುಕು ಈ ಕವನ ಸಂಕಲನವನ್ನು ೧೯೯೪ರಲ್ಲಿ ಪ್ರಕಟಿಸಿದರು. ದಿನ ನಿತ್ಯ ಕಾಣುವ ಸುತ್ತ ಮುತ್ತಲಿನ ಸರಳ ಘಟನೆಗಳನ್ನು ಮತ್ತು ದೃಶ್ಯಗಳನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವ ಹಾಗೆ ಇಲ್ಲಿ ಕವನಗಳನ್ನು ಹೆಣೆದಿರುತ್ತಾರೆ.

ಎಚ್. ದುಂಡಿರಾಜ್‌ರಂತೆ ಶಬ್ದಗಳ ಜೊತೆ ಆಟವಾಡುತ್ತ ಹಾಸ್ಯ ಮತ್ತು ವಿಡಂಬನಾತ್ಮಕ ಹನಿಗವನಗಳನ್ನು ರಚಿಸಿದವರು ಶ್ರೀ ಶಿವಾನಂದ ನಾಯಕರು. ೧೯೯೫ರಲ್ಲಿ ವರ್ತಮಾನ ಚುಟುಕ ಸಂಗ್ರಹದ ಮೂಲಕ ಸಾಹಿತ್ಯರಂಗ ಪ್ರವೇಶಿಸಿದ ಇವರು ೧೯೯೮ರಲ್ಲಿ ಝರಿಗಳು ಹನಿಗವನ ಸಂಗ್ರಹವನ್ನು ಪ್ರಕಟಿಸಿರುತ್ತಾರೆ.

ಮರೆಯಬಾರದು
ನಮ್ಮ ಕಷ್ಟದಲ್ಲಿ
ನಮಗಾಗಿ ಅತ್ತವರ
ವರದಕ್ಷಿಣೆ ಕಡಿಮೆಯಾಯಿತೆಂದು
ಮದುವೆ ದಿನ ಅತ್ತ ವರ.

ಎಂದು ವಿಡಂಬಿಸುವಂತಹ ಅನೇಕ ಹನಿಗವನಗಳನ್ನು ಕಾಣಬಹುದಾಗಿದೆ.

೧೯೯೦ರಲ್ಲಿ ಒಂಟಿ ಹಕ್ಕಿಯ ಹಾಡು, ೧೯೯೬ರಲ್ಲಿ ಪ್ರಥಮ ರಾತ್ರಿಯಲ್ಲೊಂದು ಸಖಿಗೀತ ಎಂಬೆರಡು ಕವನ ಸಂಗ್ರಹಗಳನ್ನು ಶ್ರೀ ಸಿದ್ದಲಿಂಗಸ್ವಾಮಿ ವಸ್ತ್ರದರವರು ಪ್ರಕಟಿಸಿರುತ್ತಾರೆ. ಗದಗ ಜಿಲ್ಲೆಯ ಕುರುಡಿಗಿಯವರಾದ ಇವರು ಅಂಕೋಲೆಯ ಜಿ.ಸಿ.ಕಾಲೇಜಿನಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರು. ಎಡಪಂಥೀಯ ನಿಲುವನ್ನು ಹೊಂದಿರುವ ಇವರು

ಹಿಟ್ಟಿಲ್ಲದ ಹೊಟ್ಟೆಯಿಂದ
ಬೆಂಕಿಯಾಗಿ ಹುಟ್ಟುತ್ತಿದೆ ನನ್ನ ಕಾವ್ಯ
ಗೆಳತಿ
ನಿನ್ನ ಪುಷ್ಪಾಲಂಕೃತ ಜುಟ್ಟಿನಿಂದಲ್ಲ

ಎಂದು ತನ್ನ ಕಾವ್ಯದ ಕುರಿತು ಬಂಡಾಯ ಪ್ರಜ್ಞೆಯ ವ್ಯಾಖ್ಯೆ ನೀಡಿದ್ದಾರೆ. ಬಹುತೇಕ ಇಲ್ಲಿಯ ಕವನಗಳಲ್ಲಿ

ಪ್ರೀತಿ ಮತ್ತು ಪ್ರಣಯದ ನವಿರಾದ ಲೇಪವಿರುವುದನ್ನು ಕಾಣಬಹುದಾದರೂ.....

ಕಡಲಂಚಿಗೆ ತೇಲಾಡಿದೆ.
ಬೆಳ್ಳಕ್ಕಿಯ ಸಾಲು
ಒಡಲಂಚಿಗೆ ಓಲಾಡಿದೆ
ಹಾಲಕ್ಕಿಗಳ ಬಾಳು
ನಡು ಹಗಲಲಿ
ಸುಡುಧಗೆಯಲಿ ಹೊರೆ ಕಟ್ಟಿಗೆ ಹೊತ್ತು
ಮುತ್ತಿನ ಮಳೆ ಸುರಿಸುತ್ತಲೆ
ಮುನ್ನಡೆಯುವ ಗತ್ತು

ಹೀಗೆ ತನ್ನ ಸುತ್ತಲಿನ ಸಾಮಾಜಿಕ ಜೀವನದ ಸೂಕ್ಷ್ಮಗಳನ್ನು ಕಂಡು ಅವುಗಳ ಸುಂದರ ಕಾವ್ಯ ಚಿತ್ರಣವನ್ನು ನೀಡಿರುವುದನ್ನು ಕಾಣಬಹುದಾಗಿದೆ.

೮೫ ವರ್ಷ ಹಿರಿಯರಾದ ಗಿರಿ ಪಿಕಳೆಯವರು ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿದವರು. ಸಮತಾವಾದದಲ್ಲಿ ವಿಶ್ವಾಸವಿರುವ ಇವರು ಎಳೆಯ ಮಕ್ಕಳಿಗಾಗಿ ೧೯೯೬ರಲ್ಲಿ ಮಕ್ಕಳ ಪದಗಳು ಕವನ ಸಂಗ್ರಹಗಳನ್ನು ನೀಡಿರುತ್ತಾರೆ. ನಮ್ಮ ಸುತ್ತಲಿನ ಸಾಮಾಜಿಕ ಜೀವನವನ್ನು ಮಕ್ಕಳ ಮನ ತಟ್ಟುವಂತೆ ಕವನ ಕಟ್ಟಿ ಕೊಟ್ಟಿದ್ದಾರೆ.

ಕಡಲಿನ ಮಕ್ಕಳು ನಾವು – ಹಯ್ಯೋಸಾ
ದೋಣಿಯ ಒಕ್ಕಲು ನಾವು – ಹಯ್ಯೋಸಾ
ದೂಡಿರೋ ದೋಣಿಯ – ಹಯ್ಯೋಸಾ
ನೀರಲಿ ಹಾಕಿರೋ – ಹಯ್ಯೋಸಾ

* * * *

ರೈತರಿಗೆಂದು ನೇಗಿಲ ಕೋಳವನು
ಖೇಮು ಕಮ್ಮಾರ ಮಾಡುವನು
ಬುಟ್ಟಿ ಹೆಣೆಯುವ ಹರಿಜನ ಕಾನು
ಕೇರಿಯ ಜನಕೆ ಬೇಕಾದವನು.

ಇಂತಹ ಚಿತ್ರಣಗಳು ಸಂಕಲನದೊಳಗಿನ ಕವನಗಳಲ್ಲಿ ಹಾಡಲು ಸಿಗುತ್ತವೆ.

ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀ ಶ್ಯಾಮ ಹುದ್ದಾರರವರು ಡಾ॥ ದಿನಕರ ದೇಸಾಯಿ ಮತ್ತು ಜನಸೇವಕ ಪತ್ರಿಕೆಯ ಪ್ರಭಾವದೊಳಗೆ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದರು. ಬಾಗಲಕೋಟೆಯ ಸೀಮಿಕೇರಿಯವರಾದ ಇವರು ಸುಮಾರು ಐದು ದಶಕಗಳಷ್ಟು ಕಾಲದಿಂದ ಅಂಕೋಲೆಯಲ್ಲಿದ್ದು ಇಲ್ಲಿಯ ಬಹುತೇಕ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಯಲ್ಲಿ ಭಾಗವಹಿಸಿ, ಹಲವಾರು ಕವಿಗೋಷ್ಠಿಗಳಲ್ಲಿ ಕವನಗಳನ್ನು ವಾಚಿಸಿ, ಸೈ ಸೈ ಅನಿಸಿಕೊಂಡವರು. ೧೯೯೬ರಲ್ಲಿ ಪ್ರಕಟಗೊಂಡ ಇವರ ಉಸುಕಿನ ಭೂಮ್ಯಾಗ ಕುಸುಬೀಯ ಬಿತ್ತೇನ ತ್ರಿಪದಿಗಳ ಸಂಗ್ರಹ ಒಂದು ವೈಶಿಷ್ಟ್ಯ ರಚನೆಯಾಗಿದೆ. ಇವು ಜಾನಪದ ಶೈಲಿಯ ಗರತಿ ಹಾಡುಗಳಂತಹ ಆಕೃತಿಯಂತೆ ಕಂಡುಬಂದರೂ ಇಲ್ಲಿಯ ವಸ್ತು ವೈವಿಧ್ಯತೆ ಇಂದಿನ ಬದುಕಿಗೆ ತೀರ ಹತ್ತಿರವಾದದ್ದು. ಸಾರ್ವಜನಿಕ ಜೀವನದಲ್ಲಿನ ಎಲ್ಲಾ ಜಂಜಡ ಅನಿಷ್ಠಗಳನ್ನು ಅರ್ಥವತ್ತಾಗಿ ವಿನೋದವಾಗಿ ಮತ್ತು ವಿಡಂಬನಾತ್ಮಕವಾಗಿ ಎತ್ತಿ ತೋರಿಸಿರುವುದನ್ನು ಕಾಣಬಹುದಾಗಿದೆ.

ಯಾರ‍್ಯಾರೊ ಬರದದ್ದು ಹರಕೊಂಡು ತಂದಾನ
ಮತ್ತೊಮ್ಮೆ ಕುಂತು ಬರದಾನ ! ಊರಾಗ ಸಾಹಿತಿ
ತಾನಂತ ಹೊಂಟಾನ !!

ಎಂದು ಹುಸಿ ಸಾಹಿತಿಗಳ ಕುರಿತು ಹೇಳಿದರೆ, ಚುನಾವಣೆಯ ಸಂದರ್ಭದಲ್ಲಿ ಪುಡಾರಿಗಳು ನೀಡುವ ಪೊಳ್ಳು ಆಶ್ವಾಸನೆಗಳು ಕುರಿತು ಹೀಗೆ ಬರೆಯುತ್ತಾರೆ.

ಮೆಲ್ಲಕ ಮಾತಾಡಿ ಗಲ್ಲಕ ಮುದ್ದಿಟ್ಟು
ಮುತ್ತಿನ ಬಳಿಯ ತರುವೆಂದು ! ಹೋದಾವ
ಮೂಗಬಟ್ಟು ಸೈತ ತರಲಿಲ್ಲ !!

ಹೀಗೆ ತ್ರಿಪದಿಗಳಲ್ಲಿ ತಮ್ಮೆದುರಿನ ಕಟು ಸತ್ಯಗಳನ್ನು ಹಿಡಿದಿಟ್ಟಿದ್ದಾರೆ. ಹಾಸ್ಯ ವಿಡಂಬನೆಗಳಲ್ಲದೇ ನಿಸರ್ಗದ ಸೌಂದರ್ಯವನ್ನೂ ಸಹ ತಮ್ಮ ತ್ರಿಪದಿಗಳಲ್ಲಿ ಹೀಗೆ ವ್ಯಕ್ತಪಡಿಸಿರುತ್ತಾರೆ.

ಸಹ್ಯಾದ್ರಿ ತಲೆದಿಂಬ ಕಡಲಿನ ಜೋಗುಳ
ಹಸಿರ ಬಣ್ಣದ ಕೌದಿ ಮೈಮ್ಯಾಲೆ ! ಹೊದಕೊಂಡು
ಬಡತನದ ಉಸಿರು ಬಿಡತಾಳ !!

* * * *

ಭಗವಂತ ಬಿತ್ತೀದ ಚಿಕ್ಕಿ ಅಕ್ಕಿಕಾಳು
ಗಂಗಾಳ ತುಂಬ ತುಂಬ್ಯಾನ ! ಅದರಾಗ
ನೊರಿಹಾಲು ತಂದು ಸುರುವ್ಯಾನ

ಇವರ ತ್ರಿಪದಿಗಳಲ್ಲಿ ಉತ್ತರ ಕರ್ನಾಟಕದ ದೇಶೀಯ ಭಾಷೆಯ ಸೊಗಡಿದ್ದು ಹಳ್ಳಿಗಾಡಿನ ಬೆಡಗಿದೆ.

ಒಡಲೊಳಗಿನ ತಳಮಳ ಆತಂಕ; ಸಂತೋಷ ವಿಷಾದಗಳನ್ನು ಕೆಲವು ನವ್ಯದಾಕೃತಿಯಲ್ಲಿ ಇನ್ನೂ ಕೆಲವು

ಭಾವಗೀತೆ ರೂಪದಲ್ಲಿರುವ ಕವಿತೆಗಳ ಗುಚ್ಛ, ತೆಂಕನ ಹಸಿರು ನಿಶಾನೆ, ಈ ಸಂಗ್ರಹವನ್ನು ೧೯೯೬ ರಲ್ಲಿ ನೀಡಿದವರು ಪ್ರೊ. ಮೋಹನ ಹಬ್ಬುರವರು. ಇವರು ಮೂಲತಃ ಯಲ್ಲಾಪುರದ ಮಂಚಿಕೇರಿಯವರು. ಅಂಕೋಲೆಯ ಜಿ.ಸಿ.ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಬಹುಕಾಲದಿಂದ ಅಂಕೋಲೆಯಲ್ಲಿ ನೆಲೆಸಿರುವವರು.

ಸತ್ತ ಅಜ್ಜನ
ನೆರಳ ಈ ಹಳೆ
ಮನೆಯಲಿರುವುದು
ನನಗವಜ್ಞೆ
ಭಿತ್ತಿಗಳ ಮೇಲೆ
ಚಿತ್ತಾರವ ಬರೆದು
ವಿಕೃತಗೊಳಸದಿರ
ಲಪ್ಪನಾಜ್ಞೆ

ಹೀಗೆ ಪರಂಪರೆಯನ್ನು ಮೀರಿ ನಡೆಯುವ ಸಾಹಸ ಕವಿಯದ್ದೆಂದು ಈ ಕವಿತೆಗಳು ಹೇಳುತ್ತವೆ.

೧೯೯೯ರಲ್ಲಿ ನಕ್ಷತ್ರಗಳು, ಮಿನಿಗವನಗಳ ಸಂಗ್ರಹ, ೨೦೦೨ರಲ್ಲಿ ಕನಸುಗಳು ಜೀವಂತ, ದೀರ್ಘ ಕವನ ಮತ್ತು ಮಿನಿಗವನಗಳ ಮಿಶ್ರಣದ ಸಂಕಲನವನ್ನು ಅಂಕೋಲೆಯ ಜೆ. ಪ್ರೇಮಾನಂದರವರು ಪ್ರಕಟಿಸಿರುತ್ತಾರೆ. ಪ್ರನಾಳದೊಳಗಿನ ದ್ರವ್ಯಾಕೃತಿಯ ಆಕಾರದಂತಿರುವ ಇಲ್ಲಿನ ಕವನಗಳು ಮುಗುಳು ನಗುವಿನಲಿ ಮಿನುಗುತ್ತವೆ.

ಚಿಂತೆಯಲ್ಲಿ
ಭಾವನೆಗಳು
ಕೊಳೆಯುತ್ತವೆ
ಚಿಂತನೆಯಲ್ಲಿ
ಭಾವನೆಗಳು
ಮೊಳೆಯುತ್ತವೆ

ಇಂತಹ ಅನೇಕ ಚಿಂತನೆಯ ಭಾವನೆಗಳು ಇವರ ಕವನಗಳಲ್ಲಿವೆ.

ತನ್ನೊಳಗಿನ ಅನುಭವದ ತೀವ್ರತೆಯನ್ನು ಅಭಿವ್ಯಕ್ತಿಸಲು ಭಾಷೆಯ ಪ್ರೌಢಿಮೆಯಿದ್ದು, ಕಾವ್ಯ ಕಟ್ಟುವ ಕಸಬುಗಾರಿಕೆ ಇದ್ದರೆ ಶ್ರೇಷ್ಠಮಟ್ಟದ ಕವಿತೆಗಳನ್ನು ರಚಿಸಲು ಸಾಧ್ಯ ಎನ್ನುವುದನ್ನು ಅಗಸೂರಿನ ಸಮೀಪದಲ್ಲಿರುವ ಸರಳೇಬೈಲಿನವರಾಗಿದ್ದು ಈಗ ಹೈದರಾಬಾದಿನಲ್ಲಿ ಉದ್ಯೋಗದಲ್ಲಿರುವ ಶ್ರೀ ವೆಂಕಟ್ರಮಣ ಗೌಡರವರು ೧೯೮೮ರಲ್ಲಿ ಪ್ರಕಟಿಸಿದ ಪಾಂಗು ಕವನ ಸಂಗ್ರಹದಲ್ಲಿ ಸಾಬೀತುಪಡಿಸಿದ್ದಾರೆ. ೧೯೯೪-೯೫ರಲ್ಲಿ ಅಡಿಗ-ಬೇಂದ್ರೆ ಕಾವ್ಯ ಪ್ರಶಸ್ತಿ ಪಡೆದಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಕೇರಿಯ ಕತ್ತಲ
ನಡುವೆಯ ಬತ್ತಲೆ ಉಸಿರಾಡುವ ಕೆಂಡಗಳು ಹಸಿ
ನೋವಿನ ಒಳ ದಿಗಿಲು
ಗುಮಟೆಗೆ ಹದ ಧಗೆ
ಈ ಮನಸಿನ ಕಾವು
ಬಂತೋ ನಾದ ಎಂಥಾ ನಾದ
ಸತ್ತರು ಸಾಯದ ಸತ್ಯ ಸಾಧ್ಯ.
ನುಡಿ ನುಡಿ ಶಬ್ದ ಏ ಗುಮಟೆ
ಕೊಡು ಕೊಡು ಶಬ್ದ ಏ ಗುಮಟೆ

ಹೀಗೆ ತಾನು ಒಡನಾಡಿದ್ದ ಕೇರಿಯಲ್ಲಿನ ಕಿರುದಾರಿಗಳಲ್ಲಿ ತೂರಿಬರುವ ನೂರಾರು ನೋವುಗಳ ಮಿಡಿತಕ್ಕೆ ಇಲ್ಲಿ ಧ್ವನಿ ನೀಡಿರುತ್ತಾರೆ.

ಕಪ್ಪು ಕವಳ ರಾತ್ರಿ
ನೆಗೆವ ನೆನೆಪುಗಳಲ್ಲಿ
ದುಡಿದದ್ದು ಕಡಿದದ್ದು

....

ಗಾನಕ್ಕೆ ಕವಿಯಾಗಿ ನಿಂತ ಬದುಕು
ಅನ್ನಕ್ಕೆ ಹೋರಾಟ ಕಂಡ ಬದುಕು
ಎದೆ ತಿಂದ ದುಃಖಗಳ ಲೆಕ್ಕ ಬೇಡ

ಎಂದು ಒಕ್ಕಲ ಕೇರಿಯ ಹುಲ್ಲು ಗುಡಿಸಲಿನೊಳಗೆ ಜೋಗುಳ ಹಾಡಿದ ನಾದ ಈ ಸಂಕಲನದುದ್ದಕ್ಕೂ ಕಾಣಬಹುದು.

೨೦೦೩ರಲ್ಲಿ ನಿತ್ಯಚೇತನ ಕವನ ಸಂಕಲನವನ್ನು ಪ್ರಾಥಮಿಕ ಶಾಲಾಶಿಕ್ಷಕರಾದ ಭಾವಿಕೇರಿಯ ಶ್ರೀ ಎನ್. ವಿ. ನಾಯಕರು ಪ್ರಕಟಿಸಿದರು. ಸಮೂಹ ಗೀತೆಯಾಗಿ ಹಾಡಬಹುದಾದ ಇಲ್ಲಿನ ಕವನಗಳು ಸರಳ ಮತ್ತು ಸುಂದರವಾಗಿದ್ದು ಓದಿದವರು ತಮ್ಮ ಕೊರಳೊಳಗೆ ಗುನುಗಿಸಬಹುದಾದಷ್ಟು ನಾದಮಯವಾಗಿದೆ.

ನನ್ನೂರು ನನ್ನೆದೆಯ ಅಂತರಾಳದ ಗೂಡು
ಇಲ್ಲಿಹುದು ನನ್ನ ಜೀವದ ಹಾಡು
ಹಿಡಿಮಣ್ಣು ಹುಡಿಯಲ್ಲಿ ಆಡಿ ಬೆಳೆದಿಹ ದೇಹ
ಆ ಬೆಳೆಯನೇ ನಂಬಿ ನಿಂತಿದೆ ಜೀವ

ಹೀಗೆ ಕವಿತೆ ತನ್ನೂರಿನ ಬಗ್ಗೆ ಇರುವ ಅಗಾಧ ಪ್ರೀತಿ ಈ ಕವನಗಳೊಳಗೆ ಹೆಣೆದುಕೊಂಡಿದೆ.

ಪ್ರಾಥಮಿಕ ಶಾಲಾಶಿಕ್ಷಕರಾಗಿರುವ ವಂದಿಗೆಯ ಶ್ರೀ ರಮೇಶ ವಿ ನಾಯಕ ೨೦೦೪ರಲ್ಲಿ ಕರಾವಳಿ ಚುಟುಕು ಸಂಗ್ರಹವನ್ನು, ಹೊಕ್ಕೇರಿಯವರಾಗಿದ್ದು ಹಳಿಯಾಳದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಎಲ್. ಎಸ್. ನಾಯಕರು ಚುಟುಕುಗಳು ಮತ್ತು ಕವನ, ಕೃಷ್ಣ ಸಂಧಾನ ಎಂಬ ಸಂಗ್ರಹವನ್ನು ಮತ್ತು ೨೦೦೫ರಲ್ಲಿ ದಿವೇಕರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿರುವ ಅಂಕೋಲೆಯ ಡಾ॥ ಎಸ್. ಡಿ. ನಾಯ್ಕರವರು ಕನ್ನಡಿ ಕವನಸಂಗ್ರಹವನ್ನು, ಪ್ರೊ. ನಾಗೇಶ ದೇವ ಅಂಕೋಲೆಕರವರು ಲೆಕ್ಕವಿಲ್ಲದವರು ಪ್ರಕಟಿಸಿರುತ್ತಾರೆ.

ಈ ಸಂದರ್ಭದಲ್ಲಿ ಉಲ್ಲೇಖಿಸಬೇಕಾದವರೆಂದರೆ ಶ್ರೀ ವಿವೇಕ ಶಾನಭಾಗ, ವಿವೇಕ ಇಂದು ಕನ್ನಡದ ಒಬ್ಬ ಶ್ರೇಷ್ಠಕತೆಗಾರ, ಕನ್ನಡ ಪತ್ರಿಕಾಲೋಕದಲ್ಲೇ ವಿನೂತನವಾದ ದೇಶ ಕಾಲ ತ್ರೈಮಾಸಿಕದ ಸಂಪಾದಕ. ಈ ಎಲ್ಲಾ ಆಗುವುದಕ್ಕಿಂತ ಮೊದಲು ಆತ ಉತ್ತಮ ಕವಿ. ವಿವೇಕನ ಕವಿತೆಗಳು ಮೊಟ್ಟಮೊದಲು ಮೊಳೆತದ್ದು ಅಂಕೋಲೆಯ ನೆಲದಲ್ಲಿ ಅವನ ಕತೆಯೊಳಗಿನ ಅನೇಕ ಪಾತ್ರಗಳು ಅಂಕೋಲೆಯ ಪರಿಸರದ್ದು.

ಈಗಾಗಲೇ ನಾಡಿನ ಪತ್ರಿಕೆಗಳಲ್ಲಿ ಕವನಗಳನ್ನು ಪ್ರಕಟಿಸಿ ಸಾಹಿತ್ಯಾಸಕ್ತರ ಗಮನ ಸೆಳೆದಿರುವ ಯುವ ಕವಿಗಳೆಂದರೆ ಶೆಟಗೇರಿಯ ಸಂದೀಪ ನಾಯಕ, ಅಚವೆಯ ಫಾಲ್ಗುಣ ಗೌಡ, ಅಲಗೇರಿಯ ಸುನಂದಾ ಕಡಮೆ ವಾಸ್ರೆ ರಾಜೀವ ನಾಯಕ, ಸಗಡಗೇರಿಯ ರಾಜೇಂದ್ರ ನಾಯಕ.

ಪುಸ್ತಕ ರೂಪದಲ್ಲಿ ಪ್ರಕಟಿಸಬಹುದಾದಷ್ಟು ಕವಿತೆಗಳನ್ನು ಬರೆದಿರುವ ಹಿರಿಯರಾದ ಸತ್ಯಾಗ್ರಹ ಸ್ಮಾರಕ ವಿದ್ಯಾಲಯದ ಮುಖ್ಯ ಅಧ್ಯಾಪಕರಾಗಿ, ರಾಷ್ಟ್ರಪ್ರಶಸ್ತಿ ವಿಜೇತರಾಗಿ ಸೇವೆಯಿಂದ ನಿವೃತ್ತರಾಗಿರುವ ವಂದಿಗೆಯ ಶ್ರೀ ವಿ.ಜೆ.ನಾಯಕ, ಅಗ್ಗರಗೋಣದ ಶ್ರೀ ಕೆ.ಎನ್.ಗುನಗಾ, ಜಿ. ಸಿ. ಕಾಲೇಜಿನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿರುವ ಪ್ರಭಾಕರ ನಾಯಕ, ವಂದಿಗೆಯಲ್ಲಿರುವ ಮಾಸ್ಕೇರಿ ನಾರಾಯಣ ನಾಯಕ, ಉಮೇಶ ನಾಯ್ಕ, ಬಾಸಗೋಡಿನ ರಾಮಮೂರ್ತಿ ನಾಯಕ, ಬೇಲೇಕೇರಿಯ ಶ್ರೀಧರ ನಾಯಕ ಮುಂತಾದವರು ಇಲ್ಲಿ ಉಲ್ಲೇಖನೀಯರು. ಅಲ್ಲದೇ ಡಾ. ರಾಮಕೃಷ್ಣ ಗುಂದಿ, ಹೆಗ್ಗಾರಿನ ಅನಂತ ವೈದ್ಯ, ಬೀರಣ್ಣ ನಾಯಕ, ಮೊಗಟಾ, ಅಲಗೇರಿಯ ಚಂದ್ರಶೇಖರ ನಾಯಕ, ಶಿಂಗನಮಕ್ಕಿಯ ವಸಂತ ಅಣ್ವೇಕರ, ಅಂಬಾರಕೊಡಲಿನ ರಾಮಾ ನಾಯ್ಕ, ಶ್ರೀಮತಿ ಮಹದೇವಿ ಹಿಚ್ಚಡ, ಭಾವಿಕೇರಿಯ ರಾಜಮ್ಮ ನಾಯಕ ಮುಂತಾದವರು ಕವಿಯಾಗಿ ಮಿಂಚಿದನ್ನು ಈ ಸಮಯದಲ್ಲಿ ನೆನಪಿಸಿಕೊಳ್ಳ ಬಯಸುತ್ತೇನೆ.

ಶಾಂತಾ ಬಾಬಾ ನಾಯ್ಕ, ಭಾರತಿ ವಿಷ್ಣು ನಾಯ್ಕ, ಸೀಮಾ ನಾಯ್ಕ, ಹೊನ್ನಪ್ಪ ಎನ್. ನಾಯಕ, ಜಿ.ಆರ್.ನಾಯಕ, ರಾಮಚಂದ್ರ ನಾಯಕ, ಗೋವಿಂದ ರಾಮಾ ನಾಯಕ, ಶಾಂತಲಾ ಕೇ. ನಾಯ್ಕ, ಮೋಹನ ಹಾರಾಡೇಕರ, ಬಾಲಕೃಷ್ಣ ದೇವನಮನೆ, ನಾಗರಾಜ ಮುಳಗುಂದ, ಅಕ್ಷತಾ ಬಾಸಗೋಡ, ನಿತ್ಯಾನಂದ ಭಟ್ಟ, ಜಲಜಾ ನಾಯಕ ಹಿಚ್ಕಡ, ರಮೇಶ ನಾಯಕ ಬಳಲೆ, ಅಕ್ಷಯ ನಾಯಕ ಸೂರ್ವೆ, ರಾಮಚಂದ್ರ ಶೆಟ್ಟಿ ಮತ್ತು ತಿಮ್ಮಪ್ಪ ದೇವು ಗೌಡ ಮುಂತಾದವರು ಕವಿತೆಗಳ ರಚನೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಇವರೆಲ್ಲರ ಕಾವ್ಯದ ಕೃಷಿ ಸಮೃದ್ಧವಾಗಲಿ ಎಂದು ಹಾರೈಸೋಣ.

ಯಕ್ಷಗಾನದ ಹಾಡುಗಳನ್ನು ರಚಿಸಿದ ಅನೇಕ ಕವಿಗಳೂ ಇಲ್ಲಿರುತ್ತಾರೆ. ಮಾಕ್ಕೇರಿಯ ಕೃಷ್ಣ ಶ್ರೀ ವಿ.ಜೇ. ನಾಯಕ, ಶ್ರೀ ಬಿ.ಎಸ್.ಭಾಗ್ವತ, ಸೂರ್ವೆಯ–ಭಾಗವತ ಹಮ್ಮಣ್ಣ ನಾಯಕ, ಶೆಟಗೇರಿಯ ಜೋಗಿ ನಾಯಕ ಅಗ್ಗರಗೋಣದ ವಿಠೋಬ ರಾಮ ನಾಯಕ, ರಾಮಾ ಜಟ್ಟಿ ನಾಯಕ, ಎಂ. ಎಂ. ನಾಯಕ ಮತ್ತು ನಾಗೇಶ ಪೂಜಾರಿ, ಅಂಕೋಲೆಯ ಡಾ॥ ರಾಮಕೃಷ್ಣ ಗುಂದಿ, ಆಗಸೂರಿನ –ನಾರಾಯಣ ನಾಯಕ ಮುಂತಾದವರನ್ನು ಹೆಸರಿಸಬಹುದಾಗಿದೆ.

ಸಕಲರ ಒಳಿತು, ಜನಪ್ರೀತಿ, ಈ ಮಣ್ಣಿನಗುಣ ಎಂಬುವುದನ್ನು

ಬೆಲ್ಲ ಕೊಟ್ಟಮ್ಮಗೆ ಎಲ್ಲ ಭಾಗ್ಯವೂ ಬರಲಿ ಪಲ್ಲಂಗದ
ಮೇಲೆ ಮಗ ಬರಲಿ
ಮಲ್ಲಿಗೆ ಮುಡಿವ ಸೊಸೆ ಬರಲಿ

ಎನ್ನುವ ಹಳ್ಳಿಯೊಳಗಿನ ತಾಯಿ ಮನಸ್ಸಿನ ಕಾವ್ಯ ಮತ್ತು

ಮಾಳಕೆ ಯಾರ್ಯಾರ ಕಾವಲೊ
ಮನುಷಾರ ಕಾವಲೊ
ಮನುಷಾಗೆ ಯಾರ್ಯಾರ ಕಾವಲೊ
ಮನುಷಾಗೆ ಸ್ವಾಮೀಯ ಕಾವಲೊ
ಸ್ವಾಮಿಗೆ ಯಾರ್ಯಾರ ಕಾವಲೊ
ಭೂಮಿಗೆ ಯಾರ್ಯಾರ ಕಾವಲೊ
ಭೂಮಿಗೆ ಮೋಳೆಯಾ ಕಾವಲೊ

ಮೊಳೆಗೆ ಯಾರ್ಯಾರ ಕಾವಲೊ
ಮೊಳೆಗೆ ಮೋಡದ ಕಾವಲೊ
ಮೋಡಕೆ ಯಾರ್ಯಾರ ಕಾವಲೊ
ಮೋಡಕೆ ಗಾಳಿಯ ಕಾವಲೊ
ಗಾಳಿಗೆ ಯಾರ್ಯಾರ ಕಾವಲೊ
ಗಾಳಿಗೆ ಗುಡ್ಡೆಯ ಕಾವಲೊ
ಗುಡ್ಡೆಗೆ ಯಾರ್ಯಾರ ಕಾವಲೊ
ಗುಡ್ಡಗೆ ಮರಗೋಳೇ ಕಾವಲೊ
ಮರಗೋಳಿಗೆ ಯಾರ್ಯಾರ ಕಾವಲೊ
ಮರಗೋಳಿಗೆ ತುರಿಯೇ ಕಾವಲೋ

ಎಂದು ನೆಲ ಮುಗಿಲುಗಳ ನಡುವಿನ ನಿಸರ್ಗ ನಿರ್ಮಿತ ಜೀವನ ಚಕ್ರ ಚಿತ್ರಣ ನೀಡುವ ಹಾಲಕ್ಕಿಗಳ ಗುಮಟೆಪಾಂಗಿನ ಹಾಡು (ಈ ಹಾಡನ್ನು ವಿಷ್ಣು ನಾಯ್ಕರ ಅಪ್ರಕಟಿತ ಜಾನಪದ ಹಾಡುಗಳ ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ.) ಮುಂತಾದವುಗಳು ಅಂಕೋಲೆಯ ಕಾವ್ಯದೊಳಗೆ ಮೇಳೈಸಿರುವುದನ್ನು ಕಾಣಬಹುದಾಗಿದೆ. ಹೀಗೆ ಅಂಕೋಲೆಯ ಕವಿಗಳು ನಿಸರ್ಗ ಪ್ರೀತಿಯ ಜೊತೆಗೆ ದೇಶ, ಪ್ರೇಮ, ಸಾಮಾಜಿಕ ಕಾಳಜಿ ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದಿರುವುದನ್ನು ಅವರ ಕವನಗಳಲ್ಲಿ ಕಾಣಬಹುದಾಗಿದೆ. ಕನ್ನಡ ಸಾರಸ್ವತ ಲೋಕದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಕವಿಗಳೂ ಇಲ್ಲಿರುವುದು ಹೆಮ್ಮೆಯ ಸಂಗತಿಯಾಗಿದೆ. ಗಮನಿಸಬಹುದಾದ ಇನ್ನೊಂದು ಅಂಶವೆಂದರೆ ಇಲ್ಲಿಯ ಕವಿಗಳು ಹೆಚ್ಚಿನವರು ವೃತ್ತಿಯಿಂದ ಶಿಕ್ಷಕರು.

ಈ ಎಲ್ಲ ಕವಿಗಳು ಅಂಕೋಲೆಯ ನೆಲದ ಕಸುವಿನಲ್ಲಿ ಹದವರಿತು ಬೆಳೆದ ಕಾವ್ಯದ ಕಾಳನ್ನು ಆಯ್ದು ನಿಮ್ಮೆದುರು ತೂರಿದ ಸುಗ್ಗಿಯ ಹಿಗ್ಗು ನನಗಿದೆ. ಇದು ಪರಿಪೂರ್ಣವಾಗಿರಲಾರದು, ಆದರೆ ಇದೊಂದು ಪ್ರಾರಂಭಿಕ ಪ್ರಯತ್ನವಾಗಿದೆ.

******

ಈ ಮೇಲಿನ ಪ್ರಬಂಧವನ್ನು ೨೦೦೮ರಲ್ಲಿ ಜರುಗಿದ ಎರಡನೆ ಅಂಕೋಲಾ ತಾಲೂಕಿನ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಯಲ್ಲಿ ನಾನು ಮಂಡಿಸಿದ್ದೆ. ಅಂದಿನಿಂದ ಮೇ ೨೦೨೪ರ ಅವಧಿಯಲ್ಲಿ ಅಂಕೋಲಿಗರ ಸಾಹಿತ್ಯ ಕೃಷಿ ಸಮೃದ್ಧವಾಗಿದೆ. ಅದರಲ್ಲೂ ಕಾವ್ಯ ಕ್ಷೇತ್ರ ಹೆಚ್ಚಿನ ಫಲವತ್ತತೆಯಿಂದ ತುಂಬಿಕೊಂಡಿದೆ.

ಈಗಾಗಲೆ ಕಾವ್ಯ ರಚನೆಯಲ್ಲಿ ಗುರುತಿಸಿಕೊಂಡಿರುವ ಹಿರಿಯ ಕವಿಗಳಾದ ಶಾಂತಾರಾಮ ನಾಯಕ ಹಿಚ್ಕಡ ರವರು –'ನಿನಾದ', 'ಸಂಭ್ರಮ', 'ಒಡಲಗೀತ'; ವಿಷ್ಣು ನಾಯ್ಕರ– 'ಸಂಜೆ ಸೂರ್ಯ', 'ನರಳುವ ನೆರಳಿನ ಸ್ವಗತ', 'ಭೂಮಿತೂಕದ ಹೆಣ್ಣು', 'ಹೆಣ ಮನೆಯ ಕಾವಲಿಗ', 'ಇನ್ನೂರು ಹನಿಗಳು', 'ಸೆಕ್ಯುರ ಎಂಬ ಪ್ರಬಂಧ ಧ್ವನಿ', 'ಸುನೀತಗಳು'; ಡಾ. ಎನ್.ಆರ್. ನಾಯಕರವರ –'ನೂರು ಪದ ನೂರು ಹದ', 'ಮಕ್ಕಳೇ ದೇವರು','ಮರುಡ ಅರಳು', 'ಚಿಕ್ಕಳ ಬುಡ್ಡಿ', 'ಮೌನಮಿಂಚು', 'ಮೂಡಲಿ ಬೆಳಕು', 'ಹಾಲುಕ್ಕಿತೋ ಹರ್ವಣ', 'ಬೋನ್ಸಾಯ್ ವಟವೃಕ್ಷ', 'ಬಾಲಬೋಧಿ', 'ನಾ ಕಟ್ಟಲಾರೆ ತಾಜಮಹಲು', 'ಬದುಕು ಮಹಾ ಕಾವ್ಯ (ಸಂಪುಟ–I ಮಕ್ಕಳ ಕಾವ್ಯ)', 'ಖ್ಯಾತಿ ವೃಕ್ಷ', 'ಬದುಕು ಮಹಾ ಕಾವ್ಯ (ಸಂಪುಟ–II ವರ್ಧಮಾನ ಮಹಾಕಾವ್ಯ)', 'ಕನಸು ಕವನ', 'ಯಾಕೆ ಬಂದಿಹೆ ಹಕ್ಕಿ ಇಲ್ಲಿಗೆ', 'ಬದುಕು ಮಹಾಕಾವ್ಯ (ಸಂಪುಟ–III)', 'ಚಂದ್ರ ಬಿಂಬ ಸಪ್ಪಗೆ(ಸಂಪುಟ–೩ ವರ್ಧಮಾನ ಮಹಾಕಾವ್ಯ)', 'ಸೂರ್ಯಬಿಂಬ ನೆಟ್ಟಗೆ)'; ಹಬ್ಬು ರವರ –'ಕುಸುರಿಯೊಳಗಣ ಕಸರು','ಲಾಘವದ ಕ್ಷಣಗಳು', 'ನಾಗಮುರಿ'; ನಾಗೇಂದ್ರ ನಾಯಕ ತೊರ್ಕೆ ಯವರ ಕೃಷ್ಣ ನಾಯಕ ಹಿಚ್ಕಡರವರ– 'ಹದ', ಎನ್.ವಿ.ನಾಯಕ, ಭಾವಿಕೇರಿ ಅವರ – 'ಋತುಗಾನ'; ವಿಠ್ಠಲ ಗಾಂವಕರ ರವರ– 'ಮೌಲ್ಯ', 'ಶಬ್ದ ಕಾವ್ಯ', 'ಅವ್ವಳ ನುಡಿ ದಂಡೆ'; ವೆಂಕಟ್ರಮಣ ಗೌಡ ರವರ– 'ಉರಿವ ಜಾತ್ರೆ'; ಜೇ.ಪ್ರೇಮಾನಂದರವರ– 'ಕನಸುಗಳು ಜೀವಂತ' ಕೃತಿ ನಾಗೇಶದೇವ ಅಂಕೋಲೆಕರ ರವರ–ಲೆಕ್ಕವಿಲ್ಲದವರು, ಝುನ್–ದನಿ(ಚೌಪದಿಗಳು), ಮನದ ಮಾದೇಸ '(ಚೌಪದಿಗಳು), ನಿರ್ನಾಮಕರು; ಮುಂತಾದ ಕಾವ್ಯ ಸಂಗ್ರಹಗಳನ್ನು ನೀಡಿ ಸಾಹಿತ್ಯ ಸೇವೆ ಸಲ್ಲಿಸಿರುತ್ತಾರೆ.

ಈ ಮುಂದಿನ ತಲೆಮಾರಿನ ಅಂಕೋಲೆಯ ಲೇಖಕ/ಲೇಖಕಿಯರು ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಕೊಡುಗೆಯನ್ನು ನೀಡಿರುವದು ವಿಶೇಷವಾಗಿದೆ. ಇದರಲ್ಲೂ ಮಹಿಳಾ ಲೇಖಕಿಯರು ಕನ್ನಡ ನಾಡಿನ ಗಡಿ ದಾಟಿ ತಮ್ಮ ಪ್ರತಿಭೆ ಮೆರೆದಿರುವುದಲ್ಲದೇ ಹಲವಾರು ಬಹುಮಾನಗಳಿಗೆ ಭಾಜನರಾಗಿರುವುದು ನಮಗೆಲ್ಲ ಹೆಮ್ಮೆಯ ಸಂಗತಿಯಾಗಿದೆ. ಇವರಲ್ಲಿ ಮುಖ್ಯವಾಗಿ ಸುನಂದಾ ಕಡಮೆ, ಲತಾ ಆರ್. ನಾಯಕ, ಶ್ರೀದೇವಿ

ಕೆರಮನೆ, ರೇಣುಕಾ ರಮಾನಂದ, ಅಕ್ಷತಾ ಕೃಷ್ಣಮೂರ್ತಿ, ನಾಗರೇಖಾ ಗಾಂವಕರ ಮೂದಲಾದವರು.

ಸುನಂದಾ ಪ್ರಕಾಶ ಕಡಮೆರವರ– 'ಸೀಳು ದಾರಿ'; ಶ್ರೀಲತಾ ಅರಮನೆ ಎಂಬ ಕಾವ್ಯನಾಮದಲ್ಲಿ ಬರೆದ ಲತಾ ಆರ್. ನಾಯಕ ಅವರ–'ಕೌದಿಯೊಳಗಿನ ಮನಸ್ಸು', 'ಅನಾವರಣ', 'ಹೊಸದಿಕ್ಕಿಗೆ', 'ಹೆಜ್ಜೆಗೊಂದು ಹೂ', 'ಬಿರುಕಿನಲ್ಲೂ ಮೊಳಕೆ'; ಶ್ರೀದೇವಿ ಕೆರಮನೆ ಅವರು –'ನಾನು ಗೆಲ್ಲುತ್ತೇನೆ', 'ಮೌನದ ಮಹಾ ಕೋಟೆಯೊಳಗೆ', 'ಗೆಜ್ಜೆ ಕಟ್ಟಿದ ಕಾಲಲ್ಲಿ', 'ಅಲೆಯೊಳಗಿನ ಮೌನ' (ಗಜಲ್ ಸಂಕಲನ), 'ಬೈಟೂ ಚಹಾ', 'ನನ್ನದನಿಗೆ ನಿನ್ನ ದನಿಯು' (ಗಜಲ್ ಜುಗಲ್), 'ಮೈ ಮುಚ್ಚಲೊಂದು ತುಂಡು ಬಟ್ಟೆ', 'ನಗುವಿಗೊಂದು ಧನ್ಯವಾದ', 'ಆಸೆಯೆಂಬ ಶೂಲದ ಮೇಲೆ' ಮಂತಾದ ಕವನ ಸಂಗ್ರಹಗಳನ್ನು ಪ್ರಕಟಿಸಿದ್ದು, ಮುಖ್ಯವಾಗಿ ಗಜಲ್ ಪ್ರಕಾರದಲ್ಲಿ ತಮ್ಮ ಕುಶಲತೆಯನ್ನು ಮೆರೆದಿದ್ದಾರೆ. ರೇಣುಕಾ ರಮಾನಂದರವರ– 'ಮೀನುಪೇಟೆಯ ತಿರುವು', 'ಸಾಂಬಾರ ಬಟ್ಟಲ ಕೊಡಿಸು', ಈ ಕೃತಿಗಳು ಪ್ರಕಟಣೆಯ ಮೊದಲು ಹಸ್ತಪ್ರತಿಗಾಗಿ ನೀಡುವ ಬಹಮಾನ ಪಡೆದಿರುವುದು ವಿಶೇಷವಾಗಿದೆ. ಶ್ರೀಲತಾ ಅರಮನೆಯವರ – 'ಕೌದಿಯೊಳಗಿನ ಮನಸು', 'ಅನಾವರಣ', 'ಹೊಸದಿಕ್ಕಿಗೆ', 'ಹೆಜ್ಜೆಗೊಂದು ಹೂವು', 'ಜೀವಂತ ಕ್ಯಾನವಾಸ್', 'ಬಿರುಕಿನಲ್ಲೂ ಮೊಳಕೆ'; ಅಕ್ಷತಾ ಕೃಷ್ಣಮೂರ್ತಿಯವರ–'ಹನ್ನೆರಡು ದಡ ಬೆಲ್ಲ', 'ಕೋಳ್ಗಂಬ', 'ನಾನು ದೀಪ ಹಚ್ಚಬೇಕೆಂದಿದ್ದೆ'; ನಾಗರೇಖಾ ಗಾಂವಕರರವರ–'ಏಣಿ', 'ಪದಗಳೊಂದಿಗೆ ನಾನು', 'ಬರ್ಫದ ಬೆಂಕಿ'; ಗೋಪಾಲಕೃಷ್ಣ ನಾಯಕರ– 'ಗಾನದ ಹುಟ್ಟು' (ಮಕ್ಕಳ ಕವಿತೆ), 'ಹಾಯದೋಣಿ,; ಬಿ.ಎನ್.ವಾಸರೆಯವರ– 'ಎಷ್ಟೊಂದು ಮನುಷ್ಯರು'; ಹೊನ್ನಮ್ಮ ನಾಯಕರವರ–'ಚೈತ್ರದ ನಡಿಗೆ', 'ಹೊನ್ನುಡಿ'; ಡಾ. ಪ್ರಭಾಕರ ನಾಯಕರವರ– 'ಮಂಗಳಾರತಿ', 'ನಮ್ಮೆದೆಯ ಹಾಡು', 'ನಮ್ಮೊಡಲ ಹಾಡು' (ಗುಮಟೆ ಪದಗಳು); ಕಲಾ ಭಟ್ಟರವರ– 'ಪರದಿ ಇರದ ದಾರಿ', 'ಬಕುಲದ ದಾಹ',; ಡಾ.ಅರ್ಚನಾ ನಾಯ್ಕ ರವರ– 'ಮೊದಲ ಮಳೆ'; ಸಾತು ಗೌಡ ಬಡಗೇರಿ ರವರ 'ಪುಟ್ಟಿ ಮತ್ತು ಕನ್ನಡಿ' (ಮಕ್ಕಳ ಕಾವ್ಯ); ರಮ್ಯಾ ಹೆಗಡೆ ಅಚವೆ ಅವರ 'ಹೊಸ ನೀರು' (ಚುಟುಕುಗಳು); ಚಂದ್ರಕಲಾ ನಾಯಕ, ಭಾವಿಕೇರಿ ಅವರ 'ಕನಸಿನ ಚಿತ್ತಾರ'; ಅರುಣ ಮಂಜು ಗೌಡ, ಜೂಗರವರ 'ಗುಮಟೆ ಪಾಂಗ'(ಚುಟುಕು ಮತ್ತು ಕವಿತಗಳ ಸಂಗ್ರಹ) ಗೌರಮ್ಮ ನಾಯಕರವರ– 'ಬೇಲಿಯ ಹೂ'; ಬೇಲೆಕೇರಿಯ ನಾಗಮಣಿ ನಾಯಕರವರ ಕವಿತಾ ಸಂಗ್ರಹ– ಶಾರದಾ ಎನ್. ನಾಯಕರವರ– 'ನಮನ'; ತಾಳೇಬೈಲ್‌ನ ಎ. ಆರ್. ಗೌಡರವರ– 'ಅವ್ವನ ಮಡಿಲು'; ಬೇಲೆಕೇರಿಯ ಗುರುರಾಜ ನಾಯಕರವರ –'ಮುಖವಾಡ', 'ಹೃದಯ ಸ್ಪರ್ಶಿ'; ಉಮೇಶ ನಾಯ್ಕರವರ–ಪೂರ್ಣ ಸತ್ಯವಲ್ಲ ರಸ್ತೆಗಳು, ಕತ್ತಲ ಧ್ಯಾನಿಸಿದ ನಂತರ,; ಸಗಡಗೇರಿಯ ರಾಜೇಂದ್ರ ನಾಯಕರ– 'ಭಾಂದವ್ಯ'; ತೆಂಕಣಕೇರಿಯ ಸಚಿನ ನಾಯ್ಕರ–'ನಾನೂ ಹೆಣ್ಣಾಗಬೇಕಿತ್ತು'; ಶಶಿಕಾಂತ ಶೆಟ್ಟಿಯವರ–'ಬದುಕು'; ಅಗ್ಗರಗೋಣದ ಜನಾರ್ದನ ನಾಯಕರ–'ಸಿಯಾಳ'; ನಾಗರಾಜ ಮಂಜಗುಣಿರವರ– 'ಸಿಂಚನ'; ಬಾಸಗೋಡದ ರಾಮಮೂರ್ತಿಯವರ– 'ಅಂಬರ ಗುಬ್ಬಿ'; ಎಚ್. ಆರ್ ನಾಯಕ ವಂದಿಗೆ ರವರ–'ಬಾಳೊಂದು ನಂದನ'; ವಾಸರೆಯ ದಿನಕರ ನಾಯಕರ 'ಕಡಲ ಹಕ್ಕಿ'; ಮುಂತಾದ ಕವನ ಸಂಕಲನಗಳು ಪ್ರಕಟಗೊಂಡು ಅಂಕೋಲೆಯ ಕಾವ್ಯ ಸುಗ್ಗಿಗೆ ಮೆರಗು ನೀಡಿವೆ.

ಈ ಎಲ್ಲಾ ಕವಿಗಳ ಕವಿ, ಕಾವ್ಯ, ದೃಷ್ಟಿಕೋನ ವಿಭಿನ್ನವಾಗಿವೆ. ಇವುಗಳ ವಿಶ್ಲೇಷಣೆಗೊಳಪಡಿಸುವುದು ಸೂಕ್ತ. ಈ ಪ್ರದೇಶದ ಕಾವ್ಯದ ಕುರಿತು ಅಧ್ಯಯನ ನಡೆಸುವವರಿಗೆ ಈ ಲೇಖನ ಸಹಕರಿಯಾದೀತು ಎನ್ನುವ ಭರವಸೆ ನನ್ನದು. ಅಂಕೋಲೆಯ ನೆಲದಲ್ಲಿ ಸಾಹಿತ್ಯ ಲೋಕಕ್ಕೆ ಕಾವ್ಯದ ಫಸಲನ್ನು ನೀಡಿದ ಎಲ್ಲ ಕವಿ/ಕವಿಯತ್ರಿಯರಿಗೆ ಕೃತಜ್ಞತೆಗಳು.

ಅಂಕೋಲೆಯ ಸೃಜನಶೀಲ ಗದ್ಯ ಸಾಹಿತ್ಯ

ಕಥೆ–ಪ್ರಬಂಧ–ಅಂಕಣ ಬರಹ–ಕಾದಂಬರಿ–ನಾಟಕ

– ಫಾಲ್ಗುಣ ಗೌಡ, ಅಚವೆ

ರಾಜ್ಯದ ನಕ್ಷೆಯಲ್ಲಿ ಜಲಪಾತಗಳ ಜಿಲ್ಲೆ ಎಂದು ಹೆಸರಾದ ಉತ್ತರ ಕನ್ನಡ ಜಿಲ್ಲೆ, ತನ್ನದೇ ಆದ ವಿಶಿಷ್ಟ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯನ್ನು ಸಾಹಿತ್ಯ ಕಲೆಯನ್ನು ರಾಜಕೀಯ ಧಾರ್ಮಿಕ ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡು ಸಮೃದ್ಧತೆಯನ್ನು ಗರ್ಭೀಕರಿಸಿಕೊಂಡು ಗುರುತಿಸಿಕೊಂಡಿದೆ. ಮಲೆನಾಡು ಬಯಲು ಸೀಮೆ ಕರಾವಳಿಯನ್ನು ಆವರಿಸಿಕೊಂಡಿರುವ ಉತ್ತರ ಕನ್ನಡ 'ಕರ್ನಾಟಕದ ಕಾಶ್ಮೀರ' ಎಂದು ಹೆಸರಾಗಿದೆ. ತನ್ನದೇ ಆದ ವೈವಿಧ್ಯಮಯ ಸಂಸ್ಕೃತಿ ಭಾಷೆಯನ್ನು ಹೊಂದಿರುವ ಈ ಜಿಲ್ಲೆ 'ಸಂಭಾವಿತರ ನಾಡು' ಎಂದು ಹೆಸರಾಗಿದೆ. ಅದರಲ್ಲೂ ಜಿಲ್ಲೆಯ ಪ್ರಮುಖ ತಾಲೂಕು ಎಂದು ಗುರುತಿಸಿಕೊಂಡ ಅಂಕೋಲ ಸ್ವಾತಂತ್ರ್ಯಾಂದೋಲನದ ಕಾಲದಲ್ಲಿ ಉಪ್ಪಿನ ಸತ್ಯಾಗ್ರಹ ಕರ ನಿರಾಕರಣೆ ಮುಂತಾದ ಚಳುವಳಿಗಳ ಮೂಲಕ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ನಡೆದ ಎಲ್ಲಾ ಚಟುವಟಿಕೆಗಳನ್ನು ಯಶಸ್ವಿಯಾಗಿ ಸಂಘಟಿಸಿ ಭಾಗವಹಿಸಿ ತ್ಯಾಗ ಬಲಿದಾನದ ಮೂಲಕ 'ಕರ್ನಾಟಕದ ಬಾರ್ಡೋಲಿ' ಎಂದು ದೇಶ ಮಟ್ಟದಲ್ಲಿ ಗುರುತಿಸಿಕೊಂಡು ಚರಿತ್ರೆಯಲ್ಲಿ ಒಂದು ಇತಿಹಾಸವಾಗಿ ದಾಖಲಾಗಿದೆ. ಅಂಕೋಲೆಯನ್ನು ಗಾಂಧಿ ತಾಲೂಕು ಎಂದು ಕರೆಯಲಾಗುತ್ತದೆ.

ಅಂಕೋಲೆಯ ವೈಶಿಷ್ಟ್ಯವೆಂದರೆ ಇಲ್ಲಿನ ವಿಶಿಷ್ಟ ಭಾಷೆ ಮತ್ತು ಸಂಸ್ಕೃತಿ, ಸಮೃದ್ಧ ಕಾಡು, ಗುಡ್ಡಗಾಡು, ಮಲೆನಾಡು ಕರಾವಳಿಯಿಂದ ಆವೃತವಾದ ಪ್ರದೇಶವಾಗಿದೆ. ಇಲ್ಲಿ ಎಲ್ಲರೂ ಆಡುವ ಭಾಷೆ ಕನ್ನಡವಾದರೂ ಇಲ್ಲಿ ಜನಾಂಗಕ್ಕೊಂದು ಭಾಷೆ ಇದೆ, ಸಂಸ್ಕೃತಿ ಇದೆ, ಸಂಸ್ಕಾರವಿದೆ. ಮೂಲ ನಿವಾಸಿಗಳಾಗಿ ಇಲ್ಲಿ ನೆಲೆಸಿರುವ ಹಾಲಕ್ಕಿಗಳು, ನಾಡವರು, ಬ್ರಾಹ್ಮಣರು, ನಾಮಧಾರಿ, ಕೊಮಾರಪಂಥರು, ಆಗೇರರು, ಹಳ್ಳೇರರು, ಮುಕ್ರಿಯರು, ಪಟಗಾರರು, ಮೀನುಗಾರರು ಮುಂತಾದ ಜನಾಂಗಗಳು ಆಡುವ ಭಾಷೆ ಕನ್ನಡವಾದರೂ ಅದರ ಧ್ವನಿ ಬೇರೆಯಾಗಿ ಇದೆ. ನನಗೆ ತಿಳಿದಂತೆ ರಾಜ್ಯದ ಯಾವ ಭಾಗದಲ್ಲೂ ಇಂತಹ ಭಾಷಾ ವೈವಿಧ್ಯತೆಯನ್ನು ಕಾಣಲು ಸಾಧ್ಯವಿಲ್ಲ. 'ಕುರಿತೋದದೆಯಂ ಕಾವ್ಯ ಪರಿಣಿತ ಮತ್ತಿಗಳ್' ಎಂಬ ಉಕ್ತಿಯಂತೆ ಇಲ್ಲಿನ ಪ್ರತಿ ಜನಾಂಗಕ್ಕೂ ಒಂದು ಜನಪದ ಹಿನ್ನೆಲೆ ಇದೆ. ಕಥೆ ಹಾಡುಗಳು ಇವೆ. ಜನಪದ ಕಥೆ ಕೇಳಿದ ಮಕ್ಕಳು, ಹಾಡುಗಳನ್ನು ಹೇಳಿದ ತಾಯಂದಿರು, ಎಲ್ಲ ಜನಾಂಗದಲ್ಲೂ ಕಾಣಬಹುದು. ಸಂಪ್ರದಾಯ ನಂಬಿಕೆಗಳು ನಮ್ಮಲ್ಲಿ ರಕ್ತಗತವಾಗಿಯೇ ಬಂದಿರುವುದರಿಂದ ಇಲ್ಲೊಂದು ಸಂಸ್ಕೃತಿಯನ್ನು ಕಟ್ಟುವ ಹೊಣೆಗಾರಿಕೆ ಇದ್ದುದರಿಂದ ಸಮಕಾಲೀನ ಸಂದರ್ಭದಲ್ಲಿ ಸಮಾಜ, ಜೀತದಾಳು ಪದ್ಧತಿ, ಜಾತಿ ಪದ್ಧತಿ, ಮೇಲು ಕೀಳಿನ ಸಂಘರ್ಷದ ನೆಲೆ ಕೂಡ ವಿಶೇಷವಾಗಿ ಈ ಹಿಂದೆ ಇಲ್ಲಿರುವುದರಿಂದ, ಬಡವ–ಬಲ್ಲಿದ, ಬಡತನ, ಪ್ರಕೃತಿ ಸೌಂದರ್ಯ, ಸಮುದಾಯಗಳ ನಡುವಿನ ಮೌಲ್ಯಗಳು, ಕೆಳವರ್ಗದ ಸಂಘರ್ಷ ಈ ಹಿಂದೆ ದಟ್ಟವಾಗಿರುವುದರಿಂದ ಇವೆಲ್ಲವುಗಳನ್ನು ನೋಡುವ ವಿಶಾಲದೃಷ್ಟಿ ಮುಖ್ಯ ಪಾತ್ರವನ್ನು ನಿರ್ವಹಿಸತೊಡಗಿದ ಚಾರಿತ್ರಿಕ ಹಿನ್ನೆಲೆ ಅಂಕೋಲೆಯಲ್ಲಿಯೂ ಸಾಹಿತ್ಯ ಸೃಷ್ಟಿಗೆ ಭೂಮಿಕೆಯಾಗಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಅಂಕಣ ಸಾಹಿತ್ಯ ಹೀಗೆ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿದ ಹೆಮ್ಮೆ ಅಂಕೋಲೆಯ ಲೇಖಕರಿಗೆ ಸಲ್ಲುತ್ತದೆ.

ಕಥಾ ಸಾಹಿತ್ಯ :

ಮನುಷ್ಯ ತಾನು ಕೇಳಿ, ಕಂಡು ಅನುಭವಿಸಿದ್ದನ್ನು ಮತ್ತೊಬ್ಬನೊಂದಿಗೆ ವಿನಿಮಯಿಸಿ ಮನಸ್ಸು ಹಗುರ ಮಾಡಿಕೊಂಡ ನೆಲೆಯಲ್ಲಿ ಹುಟ್ಟಿಕೊಂಡ ಜನಪದ ಕಥೆ ಮೂಲವಾಗಿ ಶಿಷ್ಟ ಭಾಷೆಯಲ್ಲಿ ಕಟ್ಟುವ ರೂಢಿ ಕ್ರಿಯಾತ್ಮಕವಾಯಿತು. ಮಾತೃಭಾಷೆಯನ್ನು ಮೂಲ ಮಾಧ್ಯಮವಾಗಿಸಿಕೊಂಡು ಆಯಾ ಜಾಯಮಾನ ಜನಾಂಗಕ್ಕೆ ಅನುಗುಣವಾಗಿ ಹುಟ್ಟಿ ತಮ್ಮ ಸಂಸ್ಕೃತಿಯನ್ನು ಕಟ್ಟುವಲ್ಲಿ ಹೊಸ ದರ್ಶನವನ್ನು,

ಸಾಕ್ಷಿಗಳನ್ನು ಕಟ್ಟಿ ಕೊಡುತ್ತೇವೆ. ಸಾಹಿತ್ಯದಲ್ಲಿ ಸೃಜನ–ಸೃಜನೇತರ ಈ ಎರಡು ಪ್ರಕಾರಗಳಲ್ಲಿ ಗದ್ಯವು ಪ್ರಕಟಿಸಿರುವ ಅಭಿವ್ಯಕ್ತಿ ಸಾಧ್ಯತೆಗಳು ಅಪಾರವಾದವು. ವಸ್ತುವಿನ ಸಂವಹನ ದೃಷ್ಟಿಯಿಂದ ಮಾತ್ರವಲ್ಲದೆ ಕಾವ್ಯಾತ್ಮಕ ಅಭಿವ್ಯಕ್ತಿಗೂ ಕೂಡ ಹೊಸ ಆಯಾಮವನ್ನು ನೀಡಿದ ಹೆಗ್ಗಳಿಕೆ ಇದರದಾಗಿದೆ.

ಸ್ವಭಾವ ಸಹಜವಾಗಿ ಮೂಡಿಬಂದ ಮಾನವನ ವಿವಿಧ ಪ್ರವೃತ್ತಿಗಳಲ್ಲಿಯೇ ವಿವಿಧ ಕಲೆಗಳ ಉಗಮವಿದೆ. ಸಂತೋಷ, ದುಃಖ, ಜಿಗುಪ್ಸೆ, ಭೀತಿಗಳು ಉಂಟಾದಾಗ ಆತನ ವಿರುದ್ಧ ಆತನ ವಿವಿಧ ರೀತಿಯ ಹಾವಭಾವಗಳಿಂದ ಅವು ವ್ಯಕ್ತವಾಗುತ್ತವೆ. ಇಂತಹ ಸಹಜವಾದ ಭಾವ–ಭಾವನೆಗಳನ್ನು, ಅನುಭವಿಸಿದ ಸುಖ ದುಃಖಗಳನ್ನು, ಇನ್ನೊಬ್ಬನಿಗೆ ಹೇಳಲು ಮಾನವನು ಕಾತರನಾಗುತ್ತಾನೆ. ಆ ಕಾತರವೇ ಶಬ್ದ ರೂಪ ಪಡೆದು ಕಥೆಯಾಗಲಾರದು. ಮನುಷ್ಯನ ಭಾವನೆ ಕಲ್ಪನೆಗಳು ಸಂಸ್ಕಾರಗಳಿಗೀಡಾಗಿ, ಚಿತ್ತ ವೇದಕವಾಗಿ, ಸೌಂದರ್ಯಯುಕ್ತವಾಗಿ ಪರಿಣಮಿಸಿದರೆ ಕಥೆಯ ರೂಪ ಪಡೆಯುತ್ತದೆ. ಹಾಗೆ ನೋಡಿದರೆ ಮಾನವನ ಜೀವನವೇ ಒಂದು ಕಥೆಯಾಗಿದೆ. ಕಥೆಗಳು ಹುಟ್ಟುವುದು ವಿಶೇಷವಾಗಿ ಮನುಷ್ಯ ಸಂಬಂಧಗಳಲ್ಲಿಯೇ ಎನ್ನಬಹುದು. ಇಂತಹ ಜನಪ್ರಿಯ ಕಥಾ ಸಾಹಿತ್ಯದಲ್ಲಿ ಕೃಷಿ ಮಾಡಿದ ಅಂಕೋಲೆಯ ಕಥೆಗಾರರು ಹಲವರಿದ್ದಾರೆ. ಕತೆಯ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಅಂಬಾರಕೊಡ್ಲದಲ್ಲಿದ್ದ ತುಂಬಾ ಹಳೆಯ ಸಾಹಿತಿ ಎಚ್. ಡಿ ನಾಯ್ಕ 'ತರಂಗ' ಎನ್ನುವ ಕಥಾ ಸಂಕಲನ ಬಹಳ ಹಿಂದೆ ಪ್ರಕಟಿಸಿದ್ದರು. ವಿಷ್ಣು ನಾಯ್ಕರು ಕಾವ್ಯದ ಮೂಲಕ ಸಾಹಿತ್ಯ ಪ್ರವೇಶಿಸಿದರೂ ಅವರ ಸಾಹಿತ್ಯ ಪ್ರೀತಿ ಕಥಾ ಸಾಹಿತ್ಯಕ್ಕೂ ವಿಸ್ತರಿಸಿತ್ತು. 'ಕಣ್ಣೀರ ಕಥೆಗಳು', 'ದೇವರ ಮರ', 'ತಿಮ್ಮಪ್ಪನ ಕಥೆಗಳು', 'ಮಕ್ಕಳ ತೋಟ', (ಮಕ್ಕಳ ಕಥೆ) 'ಮಕ್ಕಳ ಮೂವತ್ತು ಕಥೆಗಳು' ಎಂಬ ಹಲವಾರು ಸಂಕಲನಗಳನ್ನು ಹೊರತಂದಿದ್ದಾರೆ. ಅವರ ಜೊತೆ ಜೊತೆಗೆ ಬೆಳೆದ ಉತ್ತರ ಕನ್ನಡದ 'ದೇವನೂರು ಮಹಾದೇವ' ಎಂದು ಕರೆಸಿಕೊಂಡ ಡಾ. ರಾಮಕೃಷ್ಣ ಗುಂದಿ ಅವರು 'ಅವಾರಿ', 'ಕಡಲ ಬೆಳಕಿನ ದಾರಿಗುಂಟ', 'ಅತಿಕ್ರಾಂತ', 'ಸೀತೆ ದಂಡೆ ಹೂವೆ', 'ಸಮಗ್ರ ಕಥೆಗಳು' ಹೀಗೆ ಹಲವಾರು ಸಂಕಲನವನ್ನು ಪ್ರಕಟಿಸಿ ಜಿಲ್ಲೆಯ ದಲಿತ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಅವರ 'ಅವಾರಿ' ಸಂಕಲನದ ಬಗ್ಗೆ ಲಂಕೇಶ್ ಅವರು ತಮ್ಮ 'ಲಂಕೇಶ್ ಪತ್ರಿಕೆ'ಯಲ್ಲಿ ವಿಮರ್ಶೆ ಬರೆದಿದ್ದರು.

ಮೋಹನ ಹಬ್ಬು (ನಿವೃತ್ತ ಪ್ರಾಂಶುಪಾಲರು) ಅವರು ಅಂಕೋಲೆಯ ಕಥಾ ಸಾಹಿತ್ಯ ಬೆಳೆಸಿದ ಒಬ್ಬ ಒಳ್ಳೆಯ ಸೂಕ್ಷ್ಮ ಸಂವೇದನೆಯ ಕಥೆಗಾರ. 'ವೈಶಾಖದ ಮಳೆ', 'ವೃತ್ತದೊಳಗೊಂದು ವೃತ್ತ', 'ಸತ್ಯದ ಕದಪಿಗೆ ಸುಳ್ಳಿನ ಮಚ್ಚೆ' ಎಂಬ ಸಂಕಲನಗಳನ್ನ ಪ್ರಕಟಿಸಿದ್ದಾರೆ. ಶಾಂತಾರಾಮ ನಾಯಕರು ಕಾವ್ಯ, ವೈಚಾರಿಕತೆ ಮುಂತಾದ ಪ್ರಕಾರಗಳಲ್ಲಿ ಹೆಚ್ಚಾಗಿ ಗುರುತಿಸಿಕೊಂಡರೂ ಕಥೆಗಳನ್ನೂ ಬರೆದಿದ್ದಾರೆ. 'ಮಂಡಕ್ಕಿ ತಿಂದ ಗಂಗೆ' ಎಂಬ ಏಕೈಕ ಕಥಾಸಂಕಲನ ಪ್ರಕಟಿಸಿದ್ದಾರೆ. ವೆಂಕಟರಮಣ ಗೌಡರ 'ಈ ಸರ್ತಿ ಸುಗ್ಗಿ' ಸಂಕಲನ ಪ್ರಕಟಿಸಿದ್ದಾರೆ. ಸೂಕ್ಷ್ಮ ಸಂವೇದನೆ ಕಥೆಗಾರ್ತಿ ಅಲಗೇರಿಯ ಸುನಂದ ಕಡಿಮೆ ಕಥೆಗಾರ್ತಿಯಾಗಿ ನಾಡಿನಾದ್ಯಂತ ಸುಪರಿಚಿತರು. 'ಪುಟ್ಟ ಪಾದದ ಗುರುತು', 'ಗಾಂಧಿ ಚಿತ್ರದ ನೋಟು', 'ಕಂಬಗಳ ಮರೆಯಲ್ಲಿ', 'ತುದಿ ಮಡಿಚಿಟ್ಟ ಪುಟ', 'ನೀರ ಮಣಿಗಳ ಮಾಲೆ' ಎಂಬ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಾವ್ಯ ಕಡಿಮೆಯವರು 'ಮಾಕೋನಾ ಏಕಾಂತ', 'ತೊಟ್ಟು ಕ್ರಾಂತಿ' ಎಂಬ ಎರಡು ಸಂಕಲನ ಪ್ರಕಟಿಸಿದ್ದಾರೆ. ಅಂಕೋಲೆಯ ಸಂದೀಪ ನಾಯಕ 'ಗೋಡೆಗೆ ಬರೆದ ನವಿಲು' ಎಂಬ ಏಕೈಕ ಸಂಕಲನ ಪ್ರಕಟಿಸಿದ್ದಾರೆ. ಪಾಲ್ಗುಣ ಗೌಡರ 'ಬಕ್ಕೆಮರ' ಸಂಕಲನ ಅಚ್ಚಿನಲ್ಲಿದೆ. ಜೆ. ಪ್ರೇಮಾನಂದರ 'ಮಳೆಗಾಲದ ನದಿ', 'ದೃಷ್ಟಾಂತ ಕಥೆಗಳು', ಶ್ರೀದೇವಿ ಕೆರೆಮನೆಯವರ 'ಬಿಕ್ಕೆಹಣ್ಣು', 'ಚಿತ್ತ ಚಿತ್ತಾರ', ಅಕ್ಷತಾ ಕೃಷ್ಣಮೂರ್ತಿ ಅವರ 'ಅಬ್ಬೋಲಿ' ಎಂಬ ಸಂಕಲನ ಪ್ರಕಟವಾಗಿವೆ. ನಾಗರೇಖಾ ಗಾಂವಕರರ 'ಮೌನದೊಳಗೊಂದು ಅಂತರ್ದಾನ', ಗೋಪಾಲಕೃಷ್ಣ ನಾಯಕರ 'ಜಂತ್ರೋಡಿ', 'ಪಾತಿದೋಣಿ', 'ಗೋಳಿ ಮರ', ವಿಠಲ್ ಗಾಂವಕರವರ 'ಚಿಂತನ ಕಥೆಗಳು', ನಾಗರಾಜ ಮಂಜುಗುಣಿಯವರ 'ಪುಟ್ಟ ಪಾದ' ಎಂಬ ಸಂಕಲನಗಳು ಪ್ರಕಟವಾಗಿವೆ. ಮುಂಬೈಯಲ್ಲಿ ಕೆಲಸಗಿಟ್ಟಿಸಿಕೊಂಡು ಅನಿವಾಸಿ ಅಂಕೋಲಾದವರಾದ

ರಾಜೀವ ನಾಯಕರು 'ಗುರ್ಬಾಣಕ್ಕಿ' ಕಥಾಸಂಕಲನದ ಮೂಲಕ ಸಾಹಿತ್ಯಾಸಕ್ತರ ಗಮನ ಸೆಳೆದಿದ್ದರು. ಅವರ ಇನ್ನೊಂದು ಸಂಕಲನ 'ಲಾಸ್ಟ್ ಲೋಕಲ್ ಲಾಸ್ಟ್ ಲವ್' ಎಂಬುದಾಗಿದೆ. ಗಿರಿ ಪಿಕಳೆಯವರು 'ಬದುಕು ಬೆರಗು', 'ಗಿಳಿ ಹೇಳಿದ ಕಥೆ' ಪ್ರಕಟಿಸಿದ್ದಾರೆ. ನಾಗಪತಿ ಹೆಗಡೆಯವರ 'ಉತ್ತರಾರ್ಧ', ನಾಗೇಂದ್ರ ನಾಯಕ ತೊರ್ಕೆಯವರ 'ನೀತಿ ಕಥೆಗಳು', ಗೀತಾ ಮನೋಹರ ಅವರ 'ಮಕ್ಕಳ ಕಥೆಗಳು ಭಾಗ ಒಂದು–ಎರಡು', ಎಸ್. ಬಿ. ಜೋಗೂರ ಅವರ 'ಮುಗ್ಗುಲು ಮನಸಿನ ಪದರುಗಳು', 'ಇರದೆ ತೋರುವ ಬಗೆ' ಎಂಬ ಎರಡು ಕಥಾ ಸಂಕಲನಗಳು, ಶ್ರೀಮತಿ ಪ್ರಭಾಕೇಣಿಕರ ಅವರ 'ಮಕ್ಕಳ ಕಥೆಗಳು' ಮುಂತಾದ ಸಂಕಲನಗಳು ಅಂಕೋಲೆಯ ಪರಿಸರ ಬದುಕು ಸಂಸ್ಕೃತಿಯನ್ನು ಚಿತ್ರಿಸಿವೆ ಎನ್ನಬಹುದು.

ನಾಟಕ

ಅಂಕೋಲೆ ಸಾಮಾಜಿಕ ನಾಟಕಗಳ ತವರೂರು ಎನ್ನಬಹುದು. ಪ್ರತಿ ಹಳ್ಳಿಯಲ್ಲೂ ಸ್ಪರ್ಧೆಗೆ ಬಿದ್ದಂತೆ ನಾಟಕ ಆಡಿ ತೋರಿಸುವ, ಸಮಾಜವನ್ನು ಆ ಮೂಲಕ ಒಗ್ಗೂಡಿಸುವ ಕೆಲಸ ಮಾಡುತ್ತಾ ಬಂದಿದ್ದಾರೆ. ಬಹುತೇಕರು ಅದರಲ್ಲಿಯೂ ಸುಜಿತ್ ನಾಯ್ಕ ಮುಂತಾದವರು ಸಾಮಾಜಿಕ ನಾಟಕಗಳನ್ನು ಬರೆದು ಆಡಿ ತೋರಿಸಿದ್ದಾರೆ. ಆದರೆ ಸಾಹಿತ್ಯದ ದೃಷ್ಟಿಯಿಂದ ಅಂಕೋಲೆಯಲ್ಲಿ ನಾಟಕಗಳ ಕೃತಿಗಳು ಕಥಾಪ್ರಕಾರದಷ್ಟೇ ಸಮೃದ್ಧವಾಗಿಲ್ಲ ಎಂದೇ ಹೇಳಬೇಕು. ನಾಟಕದ ಬಗ್ಗೆ ಒಂದೆರಡು ಮಾತು ಹೇಳಬೇಕೆಂದರೆ ಆಧುನಿಕ ನಾಟಕಗಳ ಬೆಳವಣಿಗೆಯನ್ನು ಗಮನಿಸಿದಾಗ ಮಾತಿನಿಂದ ನಾದಕ್ಕೆ, ನಾದದಿಂದ ಮಾತಿಗೆ ಹರಿದು ರಂಗಯಾನವನ್ನಾಗಿ ನಾವು ಗುರುತಿಸಬಹುದು. ನಾಟಕ ಬರಿ ಓದಿನ ಸಾಹಿತ್ಯವಾಗಿ ಉಳಿದು ಬಿಡುವುದಾದರೆ ಅದು ನಾಟಕ ಪ್ರಕಾರಕ್ಕೆ ಬಗೆದ ಅನ್ಯಾಯವಾಗುತ್ತದೆ. ನಾಟಕವೊಂದರ ಯಶಸ್ಸು ಮುಖ್ಯವಾಗಿ ಎರಡು ಪ್ರತ್ಯೇಕ ಕಲಾ ಮಾಧ್ಯಮಗಳ ಅರ್ಥಪೂರ್ಣ ಸಂಯೋಜನೆಯ ಯಶಸ್ವಿ ಬಿಂದುವಿನಲ್ಲಡಗಿರುತ್ತದೆ. ಒಂದು ಸೃಜನಶೀಲ ಕೃತಿಯಾಗಿ ನಾಟಕವೊಂದಕ್ಕೆ ಸಲ್ಲುವ ಗೌರವವೇ ಬೇರೆ. ಆದರೆ ಅದೇ ಕೃತಿ ದೃಶ್ಯ ಮತ್ತು ಶ್ರವ್ಯ ಮಾಧ್ಯಮದಲ್ಲಿ ರಾಗ ಪ್ರಯೋಗದೊಂದಿಗೆ ಅದರ ಅಂತಿಮ ಸಾರ್ಥಕ್ಯವನ್ನು ಕಾಣಲು ಸಾಧ್ಯ. ಪ್ರಸ್ತುತ ನಾಟಕ ಕ್ಷೇತ್ರದಲ್ಲಿ ಹಿರಿಯ ತಲೆಮಾರಿನ ಡೆಂಗಾ ಮಾಸ್ತರ್ ಹೆಚ್ಚು ಪ್ರಸ್ತುತ ಆಗುತ್ತಾರೆ. ಕವಿಯಾಗಿಯೂ ಅವರು 1950–60ರ ಪೂರ್ವದಲ್ಲಿ ಸಾಮಾಜಿಕ ನಾಟಕಗಳನ್ನು ಬರೆದು ಅವರ 'ಅಸ್ಪೃಶ್ಯತಾ ನಿವಾರಣೆ' ನಾಟಕ ಆಗಿನ ಕಾಲದಲ್ಲೇ ಹೊಸ ಅಂತ್ಯವನ್ನು ಬೆಳೆಸಿಕೊಂಡಿರುವುದು ಕಂಡುಬರುತ್ತದೆ. ಅಂಕೋಲೆಯ ನಾಟಕ ಕ್ಷೇತ್ರಕ್ಕೆ ವಿಷ್ಣು ನಾಯಕರ ಕೊಡುಗೆ ಅಪಾರವಾದದ್ದು. ನಾಟಕಕಾರರಷ್ಟೇ ಅಲ್ಲದೆ ಉತ್ತಮ ನಟ–ನಿರ್ದೇಶಕರೂ ಆಗಿರುವ ವಿಷ್ಣು ನಾಯ್ಕರು ಅಂಬಾರಕೊಡ್ಲದ ಗದಗಿನ ದೇವಸ್ಥಾನದಲ್ಲಿ ಸುಮಾರು 30 ವರ್ಷಗಳಿಂದ ನಾಟಕಗಳನ್ನು ಪ್ರತಿವರ್ಷ ಬರೆದು ಆಡಿಸುತ್ತಿದ್ದರು. ಅವುಗಳಲ್ಲಿ 'ಸಾರಾಯಿ ಸೂರಪ್ಪ', 'ಒಂದು ಹನಿ ರಕ್ತ', 'ಭಿನ್ನಹಕ್ಕೆ ಬಾಯಿಲ್ಲ', 'ಅಯ್ನೋರ ಪೂಜೆ', 'ಸಾವಿನ ಹಾದಿ', 'ಯುದ್ಧ', 'ಶ್ರೀಮತಿಯ ಸ್ವಯಂವರ', 'ಒಂದು ನೇಣಿನ ಸುತ್ತ', 'ಕೋಳಿಯಂಕ', 'ಪ್ರೀತಿ ಜಗತ್ತಿನ ದೊರೆ', 'ಹುಡುಗ ನೋಡುತ್ತಾನೆ ಹುಡುಗಿ', 'ಸತ್ತ ಮನಸ್ಸಿನ ಮಂದಿ', 'ಬರಬಿದ್ದ ನೆಲದಲ್ಲಿ', 'ವರಲಕ್ಷ್ಮಿ ಒಡಲಲ್ಲಿ' ಮುಂತಾದ ನಾಟಕಗಳನ್ನು ಬರೆದಿದ್ದಾರೆ. 'ಬರಬಿದ್ದ ನೆಲದಲ್ಲಿ' ಮತ್ತು 'ಒಂದು ಹನಿ ರಕ್ತ' ನಾಟಕಗಳು ಅವರಿಗೆ ಅಪಾರ ಜನಪ್ರಿಯತೆ ತಂದು ಕೊಟ್ಟಿದ್ದವು. ಮೋಹನ ಹಬ್ಬು ಅವರ 'ಏಕಲವ್ಯ ಮತ್ತು ಇತರ ನಾಟಕಗಳು', 'ಆ ಕರಾಳ ರಾತ್ರಿ', ಹವ್ಯಕ ಭಾಷೆಯಲ್ಲಿ ಬರೆದ 'ಉತ್ತರಣ', 'ಕರ್ಣ', 'ಏಕಾಂತ ಪಂಚಕ' ಎಂಬ ನಾಟಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಡಾ. ರಾಮಕೃಷ್ಣ ಗುಂದಿಯವರು 'ವಂದೇ ಮಾತರಂ' ಎಂಬ ಏಕೈಕ ನಾಟಕ ಬರೆದಿದ್ದಾರೆ. ನಾಗಪತಿ ಹೆಗಡೆಯವರು 'ವೀರ ಪುಲಕೇಶಿ ಮತ್ತು ಇತರ ನಾಟಕಗಳು', ನಾಗಮಣಿ ಜಿ. ನಾಯಕ ಅವರ 'ಮಕ್ಕಳ ಕಿರು ನಾಟಕ', 'ಹಾಸ್ಯ ಚಟಾಕಿ', ಕಾವ್ಯ ಕಡಮೆಯವರ 'ಸಾಜೀವಿನ ಸ್ಪೋರ್ಸ್', 'ಆಳದೊಳಗೊಂದು ಆಳ' ಮುಂತಾದವರ ಕೃತಿಗಳು ಪ್ರಕಟವಾಗಿವೆ.

ಪ್ರಬಂಧ

ಕನ್ನಡದಲ್ಲಿ ಪ್ರಬಂಧ ಸಾಹಿತ್ಯವು ಐತಿಹಾಸಿಕವಾಗಿ ಸಾಹಿತ್ಯಿಕವಾಗಿ ಸಾಕಷ್ಟು ಸುಭದ್ರವಾದ ಪರಂಪರೆಯನ್ನು ಹೊಂದಿದೆ. ಕಾವ್ಯ, ಕಾದಂಬರಿ, ನಾಟಕ, ಕಥೆ

ಮೊದಲಾದ ಬೇರೆ ಬೇರೆ ಅಭಿವ್ಯಕ್ತಿ ಪ್ರಕಾರದಲ್ಲಿ ಬರೆಯುತ್ತಲೇ ಪ್ರಬಂಧ ಪ್ರಕಾರದಲ್ಲೂ ಬರೆಯುತ್ತ ಬಂದಿದ್ದಾರೆ. ಪ್ರಬಂಧವೆಂದರೆ ಒಂದು ನಿರ್ದಿಷ್ಟ ಚೌಕಟ್ಟಿನೊಳಗೆ ನಿರ್ದಿಷ್ಟವಾದ ವಸ್ತು ವಿಷಯವನ್ನು ಬಂಧಿಸಿ ಇಡುವುದೇ ಆಗಿದೆ. ಈ ಪ್ರಬಂಧವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿಸಿಕೊಂಡ ಅಂಕೋಲೆಯವರ ಕೊಡುಗೆ ಸಾಕಷ್ಟಿದೆ.

ಶ್ಯಾಮ ಹುದ್ದಾರ ಅವರ ಮೊದಲ ಪ್ರಬಂಧ ಸಂಕಲನ 'ಖಾನಾವಳಿ ಡಬ್ಬಿ'. 1977ರಲ್ಲಿ ಪ್ರಕಟವಾದ ಈ ಸಂಕಲನ ಮುಚ್ಚಳ ತೆಗೆದರೆ ಓದುಗರಿಗೆ ತಿಳಿಹಾಸ್ಯದ ಊಟ ಬಡಿಸುತ್ತಾರೆ. ಅಂಕೋಲೆಯ ಜಿ.ಸಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಪ್ರೊಫೆಸರ್ ವಿ.ಎ. ಜೋಶಿಯವರ 'ಇಪ್ಪತ್ತು ನಗೆ ಬರಹಗಳು' ಕನ್ನಡದ ಬಹುತೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹಾಸ್ಯ ಸಾಹಿತಿಗಳು ವಸ್ತುವನ್ನು ಹುಡುಕಿಕೊಂಡು ಹೋಗುವುದಿಲ್ಲ, ಅವರು ಹೋದ ಕಡೆಯಲ್ಲಿಯೇ ಪ್ರಸಂಗಗಳು ಸೃಷ್ಟಿಯಾಗುತ್ತವೆ ಎಂಬುದಕ್ಕೆ ಜೋಶಿಯವರ 'ನಾನು ಭಾಷಣಕ್ಕೆ ಹೋಗಿದ್ದೆ' ಹಾಸ್ಯ ಪ್ರಬಂಧ ಸಾಕ್ಷಿಯಾಗಿದೆ. 'ಅದಲು ಬದಲು' ಲಘು ಹಾಸ್ಯ ಪ್ರಬಂಧಗಳು ಮುಂತಾದ ಹತ್ತಾರು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ.

ಶಾಂತರಾಮ ನಾಯಕರ 'ಚರಿತ್ರೆಯಲ್ಲಿ ಮರೆತವರು' ಕೃತಿ 'ಹಂಬಲ' ಎಂಬ ಪ್ರಬಂಧ ಸಂಕಲನದ ಜೊತೆ 'ಹೋರಾಟ', 'ಒಡನಾಟ', 'ಮತ್ತೆ ಮತ್ತೆ ನೆನಪಾಗುವ ಗಾಂಧಿ', 'ನೆನಪಿನ ಹಾಲಾಡಗಿ', 'ಭಾವತರಂಗಿಣಿ' ಕೃತಿಗಳನ್ನು ಪ್ರಕಟಿಸಿದ್ದಾರೆ. ಪಾಲ್ಗುಣ ಗೌಡರ ಪ್ರಬಂಧ ಸಂಕಲನ 'ಅಶಾಂತ ಕಡಲು ಪ್ರಶಾಂತ ಮುಗಿಲು' ಪ್ರಕಟವಾಗಿದೆ. ನಾಗೇಶದೇವ ಅಂಕೋಲೆಕರವರ 'ಮೂಕಮ್ ಕರೋತಿ ವಾಚಲಂ', ಜೆ. ಪ್ರೇಮಾನಂದರ 'ಪ್ರಬಂಧ ಸಿಂಚನ', ವಿಠಲ ಗಾಂವ್ಕರ ಅವರ 'ಪರಿಸರ ಪ್ರಬಂಧಗಳು', ವೈಶಾಲಿ ಹೆಗಡೆಯವರ 'ಒದ್ದೆ ಹಿಮ ಉಪ್ಪು ಗಾಳಿ' ಸಂಕಲನ ಬಾಸಗೋಡಿನ ರಾಮಮೂರ್ತಿ ನಾಯಕರ 'ಊರಸೂರಿನೊಳಗೆ', ಸುನಂದ ಕಡಿಮೆಯವರ 'ಕಥೆಯಲ್ಲದ ಕಥೆ', ಮ.ಗ.ಶೆಟ್ಟಿ ಅವರ 'ಗೆಲುವಿನ ಗುಟ್ಟು' ಮುಂತಾದ ಪ್ರಬಂಧ ಸಂಕಲನಗಳು ಪ್ರಕಟವಾಗಿವೆ.

ಅಂಕಣ ಬರಹ

ಅಂಕಣ ಬರಹವನ್ನು ಹಿಂದಿ ಸಾಹಿತ್ಯದ ಪರಿಧಿಯೊಳಗೆ ತರಲು ಸಂಕೋಚ ಪಡಬೇಕಾದ ಕಾಲವಿತ್ತು. ಅಂಕಣ ಬರಹ ಬರೆಯ ಹೊರಟವರನ್ನು ಅಂಕಣ ಬದ್ದರು, ಅವರಿಗೆ ಅಂಕಣ ಬಲ ಕೂಡಿಬಂದಿದೆ ಎಂಬ ಮಾತುಗಳು ಕೇಳಿ ಬರುತ್ತಿದ್ದವು. ಆದರೆ ಈಗ ಅಂತಹ ಸಂಕೋಚಕ್ಕೆ ಆಸ್ಪದ ಇಲ್ಲದೆ ಪ್ರತಿ ದೈನಿಕ, ಮಾಸಿಕ, ಪಾಕ್ಷಿಕ, ವಾರಪತ್ರಿಕೆಗಳಲ್ಲಿ ಸುಪ್ರಸಿದ್ಧರ ಅಂಕಣಗಳು ರಾರಾಜಿಸುತ್ತವೆ. ದೈನಿಕಕ್ಕೆ ವಾರಪತ್ರಿಕೆಗೆ ಅಂಕಣ ಬರೆಯುವುದು ಅಷ್ಟು ಸುಲಭವೇನಲ್ಲ. ಅದಕ್ಕೆ ತುಂಬಾ ತಯಾರಿ ಸಮಯ ಕಾಪಿಟ್ಟುಕೊಳ್ಳುವುದು ಅನಿವಾರ್ಯ. ಈ ಅಂಕಣ ಕ್ಷೇತ್ರಕ್ಕೆ ಸೇರ್ಪಡೆಗೊಂಡ ಅಂಕೋಲೆಯ ಮೊದಲ ಹೆಸರು ವಿಷ್ಣು ನಾಯಕರದ್ದು. ಅವರು ವಾರಪತ್ರಿಕೆ 'ಸಕಾಲಿಕ'ಕ್ಕೆ ಬರೆದ 'ಅರೆಖಾಸಗಿ' ಅಂಕಣ ತುಂಬಾ ಜನಪ್ರಿಯತೆಗಳಿಸಿತ್ತು. ಹಿರಿಯ ತಲೆಮಾರಿನ ಲೇಖಕರು ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದ್ದರು. 'ಅರೆ ಖಾಸಗಿ' ಎರಡು ಸಂಪುಟಗಳಲ್ಲಿ ಪ್ರಕಟವಾಗಿದೆ. ನಂತರ 'ಕಾಲೋಚಿತ', 'ಪ್ರಚಲಿತ' ಎಂಬ ಸಂಕಲನಗಳು ಪ್ರಕಟವಾಗಿದೆ.

ಪ್ರೊ. ಎಸ್.ವಿ.ವಸ್ತ್ರದ ಅವರ 'ಅಂಕಣದ ಅಂಗಳದಲ್ಲಿ' ಡಾ. ಶ್ರೀಪಾದ್ ಶೆಟ್ಟಿ ಅವರ 'ಬಯಕೆ ತೋಟದ ಬೇಲಿ', ನಾಗರೇಖಾ ಗಾಂವ್ಕರ್ ಅವರ 'ಪಶ್ಚಿಮಾತ್ಯ ಲೋಕ', 'ಆಂಗ್ಲ ಸಾಹಿತ್ಯ ಲೋಕ', ಅಕ್ಷತಾ ಕೃಷ್ಣಮೂರ್ತಿಯವರ 'ಇಸ್ಕೂಲು' 'ಟಿಪ್ಪಣಿಸಾಲು', ಸುನಂದ ಕಡಮೆಯವರ 'ಪಿಸುಗುಡುವ ಬೆಟ್ಟ ಸಾಲು', 'ಪಡುವಣದ ಕಡಲು', ಪ್ರಕಾಶ ಕಡಮೆಯವರ 'ಕಾವ್ಯದೊಡಲ ತೆರೆ', ಶ್ರೀದೇವಿ ಕೆರೆಮನೆಯವರ 'ಉರಿವ ಉಡಿ', 'ಹೆಣ್ತನದ ಆಚೆ ಈಚೆ', 'ವರ್ತಮಾನದ ಉಯ್ಯಾಲೆ', 'ಗೂಡು ಕಟ್ಟುವ ಸಂಭ್ರಮದಲ್ಲಿ', 'ಕಾಡುವ ಗರ್ಭ', 'ಕಡಲು ಕಾನನಗಳ ನಡುವೆ'... ಇವಿಷ್ಟು ಅಂಕಣಗಳಲ್ಲಿ ಕೆಲವು ಪುಸ್ತಕವಾಗಿ ಪ್ರಕಟವಾಗಿವೆ. ಇನ್ನೂ ಕೆಲವರು ಬರೆಯುತ್ತಿದ್ದಾರೆ, ಪುಸ್ತಕಗಳು ಪ್ರಕಟವಾಗಬೇಕಿದೆ.

ಕಾದಂಬರಿ

ಅಂಕೋಲೆಯ ಸಾಂಸ್ಕೃತಿಕ ಸಂದರ್ಭ ಕತೆ, ನಾಟಕ, ಅಂಕಣ ಬರಹದ ಸಮೃದ್ಧತೆಯಲ್ಲಿ

ಕಾದಂಬರಿಯ ಕುರಿತು ಅಷ್ಟೊಂದು ಗಂಭೀರವಾಗಿ ಗಮನಕ್ಕೆ ತಂದುಕೊಂಡಿಲ್ಲ ಎಂದೇ ಹೇಳಬೇಕು. ಕಾದಂಬರಿಯು ವಿಶಾಲತೆಗಿಂತ ಕಥೆಯು ಸಂಕ್ಷಿಪ್ತತೆಯಲ್ಲಿಯೇ ಸೃಜನಶೀಲ ಅನ್ವೇಷಣೆಯಲ್ಲಿ ತೊಡಗಿದ್ದನ್ನು ನಾವು ಗುರುತಿಸಬಹುದು. ಕಾದಂಬರಿಗೆ ವಸ್ತುವಾಗಬಲ್ಲ ಸಾಂಸ್ಕೃತಿಕ ಚಾರಿತ್ರಿಕ ಸಂದರ್ಭಗಳು ಇಲ್ಲಿನ ಲೇಖಕರನ್ನು ಕಾಡಿದರೂ ಕಾದಂಬರಿಗೆ ಸಲ್ಲಬೇಕಾದ ಸಾಹಿತ್ಯಿಕ ನೆಲೆ ತೀರಗೌಣ ಎಂದೇ ಹೇಳಬೇಕು. ಅಂತದ್ದರಲ್ಲಿ ಕಾದಂಬರಿ ಬರೆಯಲು ಹೊರಟ ಮ.ಗ. ಶೆಟ್ಟಿ ಅವರಂತಹ ಹಿರಿಯರು ಮೊದಲು ಗುರುತಿಸಲ್ಪಡುತ್ತಾರೆ. ಮರಾಠಿ ಮೂಲದ 'ದೇವದಾಸಿ' ಅವರ ಮೊದಲ ಅನುವಾದಿತ ಕಾದಂಬರಿ ಎನ್ನಬೇಕು. ಶಿಕ್ಷಕರಾಗಿದ್ದ ಎಸ್.ಬಿ.ಕಾಮತ ಅವರು 1968ರಲ್ಲಿ 'ಆಹುತಿ' ಎಂಬ ಕಾದಂಬರಿ ಬರೆದಿದ್ದರು. ನಂತರ ವೆಂಕಟರಮಣ ಗೌಡರು 'ತರುವಾಯ', ಸೂಕ್ಷ್ಮ ಸಂವೇದನೆಯ ಬರಹಗಾರ್ತಿ ಸುನಂದ ಕಡಮೆಯವರು 'ಬರೀ ಎರಡು ರೆಕ್ಕೆ', 'ದೋಣಿ ನಡೆಸುವ ಹುಟ್ಟು', 'ಹೈವೇ ನಂಬರ್ 68' ಎಂಬ ಮೂರು ಕಾದಂಬರಿ ಪ್ರಕಟಿಸಿದ್ದಾರೆ. ಕಾವ್ಯ ಕಡಮೆಯವರು 'ಪುನರಪಿ' ಎಂಬ ಏಕೈಕ ಕಾದಂಬರಿ ಬರೆದಿದ್ದಾರೆ. ನಾಗರೇಖಾ ಗಾಂವ್ಕರ್ ಅವರು 'ದ ಡೈರಿ ಆಫ್ ಯಂಗನ್ ಫ್ರೆಂಡ್' ಎಂಬ ಇಂಗ್ಲೀಷ್ ಕಾದಂಬರಿ ಅದೇ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ರಾಜೀವ ನಾಯಕರ 'ಪ್ರೀತ್ಸು' ಕಾದಂಬರಿ ಪ್ರಕಟವಾಗಿದೆ. ವಿಷ್ಣು ನಾಯಕರಿಗೆ ತುಂಬಾ ಜನಪ್ರಿಯತೆ ತಂದುಕೊಟ್ಟ 'ಜಂಗುಂ ಜಕ್ಕುಂ' ಕಾದಂಬರಿ ಅಂಕೋಲೆಯ ಹಾಲಕ್ಕಿ ಹಳೆಪೈಕರ ಜೀವನ ಸಂಗತಿಯುನ್ನು ಹೇಳುತ್ತದೆ. ಅದರ ಮುಂದುವರಿಕೆಯಾಗಿ 'ಬಾಳ ಮರದ ಬಯಲು' ಎಂಬ ಇನ್ನೊಂದು ಕಾದಂಬರಿ ಪ್ರಕಟಿಸಿದ್ದಾರೆ. ತುಂಬಾ ಹಿಂದೆಯೇ ರಾಮಚಂದ್ರ ಶೇಟ ಅವರು 'ಶಾಲ್ಮಲೆ ಶಶಿ' ಎಂಬ ಕಾದಂಬರಿ ಪ್ರಕಟಿಸಿದ್ದಾರೆ. ಎಸ್. ಬಿ. ಜೋಗುರವರು 'ಜಾತಕ' ಎಂಬ ಕಿರುಕಾದಂಬರಿ ಪ್ರಕಟಿಸಿದ್ದಾರೆ. ಪ್ರಕಾಶ ಅನಂತ ನಾಯ್ಕ 'ಮದುವೆ' ಎಂಬ ಕಾದಂಬರಿ ಬರೆದಿದ್ದಾರೆ. ಇವಿಷ್ಟು ಹೊರತುಪಡಿಸಿದರೆ ಕಾದಂಬರಿ ಬರೆದ ಮಹನೀಯರು ಕಡಿಮೆ ಎಂದೇ ಹೇಳಬೇಕು. ಅದಕ್ಕೆ ಬೇಕಾದ ತಯಾರಿ, ಕಥೆ, ಕಥೆ ಬೆಳೆಸುವ, ಕಥೆ ಹೇಳುವ ಅನುಭವದ ವಿಶಾಲತೆ, ಭಾಷೆ, ಇವೆಲ್ಲಕ್ಕಿಂತ ವಿಶೇಷವಾಗಿ ಕಾದಂಬರಿಗಾಗಿಯೇ ಬೇಕಾಗುವ ಸಮಯ–ತಾಳ್ಮೆ ಅಂಕೋಲಿಗರಿಗೆ ಕಡಿಮೆ ಎಂದೇ ಹೇಳಬೇಕು. ಅಂಕೋಲೆಯ ಕಾವ್ಯಾಸಕ್ತರ ಕಾವ್ಯ ಕ್ಷೇತ್ರ ಹುಲಸಾಗಿ ಬೆಳೆದು ಕಥೆ ಅದರ ನಂತರದ ಸ್ಥಾನ ಪಡೆದುಕೊಳ್ಳುತ್ತದೆ. ಒಟ್ಟಾರೆಯಾಗಿ ಅಂಕೋಲೆ ಸಾಹಿತ್ಯ ಕ್ಷೇತ್ರದಲ್ಲಿ ಜಿಲ್ಲೆಗೆ ಹೆಸರು ತಂದ ತಾಲೂಕೆನ್ನಬಹುದು.

ಸಿರಿಗನ್ನಡಂ ಗೆಲ್ಗೆ

ಕವಿಗೆ ಕಿವಿಮಾತು

ಜಗದಗಲ ತುಂಬಿರುವ
ನೋವಿನಲಿ ಪೆನ್ನದ್ದು,
ಅರಳುವುದು ಅಕ್ಷರವು ಕವನವಾಗಿ:
ನೋವು ಸಾಯುವವರೆಗೆ
ಕವನ ಸಾಯುವುದಿಲ್ಲ
ನಿಲ್ಲುವುದು ಸಾಂತ್ವನದ ಸಿಲುಬೆಯಾಗಿ.

ಜಗದಗಲ ಹರಡಿರುವ
ಪ್ರೀತಿಯಲ್ಲಿ ಪೆನ್ನದ್ದು,
ಅರಳುವುದು ಅಕ್ಷರವು ಹೂವೇ ಆಗಿ;
ಪ್ರೀತಿ ಸಾಯುವವರೆಗೆ
ಕವನ ಬಾಡುವುದಿಲ್ಲ
ಸಲ್ಲುವುದು ಮಾನವನ ಮಾನವಾಗಿ.

ವಿಷ್ಣು ನಾಯ್ಕ
(ಸಮಗ್ರ ಕಾವ್ಯ)

ಅಂಕೋಲಾ ತಾಲೂಕಿನ ಸೃಜನೇತರ ಸಾಹಿತ್ಯ

– ಶ್ರೀಧರ ನಾಯಕ

ಸಾಹಿತ್ಯ ವಿವಿಧ ಅನುಭವ ಹಾಗೂ ಪ್ರಜ್ಞೆಯಿಂದ ಸಂಯೋಜನೆಗೊಂಡು ಭಾಷೆಯಲ್ಲಿ ಅಭಿವ್ಯಕ್ತಗೊಳ್ಳುವ ಸಂವೇದನೆ. ಭಾವ ಮತ್ತು ಬುದ್ಧಿಯನ್ನು ನೆಲೆಯಾಗಿಸಿಕೊಂಡು ಸೃಷ್ಟಿಯಾದ ಸಾಹಿತ್ಯ ಕೇವಲ ಭಾವನಾತ್ಮಕವಾಗಿರುವುದಿಲ್ಲ ಅಥವಾ ಕೇವಲ ಬೌದ್ಧಿಕವಾಗಿರುವುದಿಲ್ಲ. ಭಾವನಾತ್ಮಕತೆಯು ವಿವೇಕದಿಂದ ವಂಚಿತವಾಗಿ ಅತಿಭಾವುಕತೆಯನ್ನು ಹೊಂದಬಹುದು. ಹಾಗೆಯೇ ಬೌದ್ಧಿಕತೆಯು ಅತಿ ತಾರ್ಕಿಕತೆಯನ್ನು ಹೊಂದಿ ಸೃಜನಶೀಲವಲ್ಲದ ಸಾಮಾನ್ಯ ವರದಿಯಾಗಬಹುದು. ಆದರೆ ಸಮಕಾಲೀನ ಸಂದರ್ಭದಲ್ಲಿ ಸಾಹಿತ್ಯವು ಏಕಕಾಲಕ್ಕೆ ಸೃಜನಶೀಲವೂ ಚಿಂತನಶೀಲವೂ ಆಗಿರುತ್ತದೆ. ಚಿಂತನಶೀಲತೆಯಲ್ಲಿ ಸೃಜನಶೀಲತೆ, ಸೃಜನಶೀಲತೆಯಲ್ಲಿ ಚಿಂತನಶೀಲತೆಯನ್ನು ಒಳಗೊಳ್ಳುವ ಅಭಿವ್ಯಕ್ತಿ ಉತ್ತಮ ಸಾಹಿತ್ಯವಾಗುತ್ತದೆ.

ಸಾಮಾನ್ಯವಾಗಿ ಸಾಹಿತ್ಯವನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಪ್ರಕಾರಗಳಲ್ಲಿ ವಿಭಾಗಿಸಲಾಗುತ್ತದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ ಮೊದಲಾದವುಗಳು ಸೃಜನ ಸಾಹಿತ್ಯವಾದರೆ, ವಿಮರ್ಶೆ ಸಂಶೋಧನೆ, ಚರಿತ್ರೆ ಅನುವಾದ ಸಂಪಾದನೆ ಮೊದಲಾದವುಗಳು ಸೃಜನೇತರ ಸಾಹಿತ್ಯ ಎಂದು ಗುರುತಿಸಲಾಗುತ್ತದೆ. ಹಾಗೆಂದು ಸೃಜನೇತರ ಸಾಹಿತ್ಯವು ಸೃಜನಶೀಲತೆಯಿಂದ ದೂರವಾದುದಲ್ಲ. ಚಿಂತನಶೀಲತೆಯನ್ನು ಪ್ರಧಾನ ಗುಣಲಕ್ಷಣವನ್ನಾಗಿಸಿಕೊಂಡ ಸೃಜನೇತರ ಸಾಹಿತ್ಯದೊಳಗೆ ಸೃಜನಶೀಲತೆಯ ಸೆಳೆತ ಇದ್ದೇ ಇರುತ್ತದೆ. ಆದ್ದರಿಂದ ಸೃಜನೇತರವನ್ನು ಚಿಂತನಪ್ರಧಾನ ಸಾಹಿತ್ಯವೆಂದು ಪರಿಗಣಿಸಬಹುದು.

ಹಾಗೆಯೇ ಸೃಜನಶೀಲವೆಂದು ಗುರುತಿಸುವ ಸಾಹಿತ್ಯವಿಭಾಗದಲ್ಲಿ ಚಿಂತನಶೀಲತೆ ಇರುವುದಿಲ್ಲವೆಂದಲ್ಲ; ಉತ್ತಮ ಸೃಜನಶೀಲ ಸಾಹಿತ್ಯದಲ್ಲಿ ಯಾವಾಗಲೂ ಚಿಂತನಶೀಲತೆ ಇದ್ದೇ ಇರುತ್ತದೆ. ಒಟ್ಟಿನಲ್ಲಿ ಸೃಜನಶೀಲವೆಂದು ಕರೆಸಿಕೊಳ್ಳುವ ಸಾಹಿತ್ಯವು ಸೃಜನಪ್ರಧಾನ ಸಾಹಿತ್ಯವಾಗಿದ್ದು ಅದು ಚಿಂತನಶೀಲತೆಯನ್ನು ಒಳಗೊಂಡಿರುತ್ತದೆ. ಸೃಜನೇತರವೆಂದು ಕರೆಸಿಕೊಳ್ಳುವ ಸಾಹಿತ್ಯವು ಚಿಂತನ ಪ್ರಧಾನ ಸಾಹಿತ್ಯವಾಗಿದ್ದು ಅದರಲ್ಲಿ ಸೃಜನಶೀಲತೆಯೂ ಇರುತ್ತದೆ. ಆದ್ದರಿಂದ ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯಗಳನ್ನು ಕ್ರಮವಾಗಿ ಸೃಜನಪ್ರಧಾನ ಸಾಹಿತ್ಯ ಮತ್ತು ಚಿಂತನಪ್ರಧಾನ ಸಾಹಿತ್ಯ–ಎಂದು ಕರೆಯಬಹುದಾಗಿದೆ. ಈ ಸೃಜನ ಮತ್ತು ಸೃಜನೇತರ ಎಂಬ ವಿಭಾಗ ಕ್ರಮ ಅಭ್ಯಾಸದ ಅನುಕೂಲತೆಗಾಗಿಯೇ ಹೊರತು ಶಾಸ್ತ್ರೀಯವಾದುದಲ್ಲ ಎಂದು ಹೇಳಬಹುದು.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಸಾಂಸ್ಕೃತಿಕ ಎಚ್ಚರವನ್ನು ಇಟ್ಟುಕೊಂಡಿರುವ ಪ್ರದೇಶ. ಇಲ್ಲಿ ಹೋರಾಟ, ಸಂಸ್ಕೃತಿ, ಸಾಹಿತ್ಯ ಎಲ್ಲವೂ ಒಂದರೊಳಗೊಂದು ಬೆಸೆದುಕೊಂಡು ಬೆಳೆದು ಬಂದಿವೆ.ಸಮೃದ್ಧ ಜಾನಪದ ಸಾಹಿತ್ಯದ ಜೊತೆಯಲ್ಲಿಯೇ ಸೃಜನಶೀಲ ಸಾಹಿತ್ಯವೂ ನಿರ್ಮಾಣವಾಗಿದೆ. ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಿಗಿಂತ ಕಾವ್ಯ ನಿರ್ಮಾಣ ಹೆಚ್ಚಾಗಿದೆ. ಹಾಗೆಂದು ಸೃಜನೇತರ ಸಾಹಿತ್ಯದ ಕೃತಿಗಳ ಪ್ರಮಾಣ ಕಡಿಮೆಯೇನಿಲ್ಲ.

ಅಂಕೋಲಾ ತಾಲೂಕಿನ ಸೃಜನೇತರ ಸಾಹಿತ್ಯದ ಇತಿಹಾಸವನ್ನು ಅರಸುತ್ತ ಸಾಗಿದಾಗ ಮಠಾಕೇರಿಯ ಲಕ್ಷ್ಮಣ ಬಾಬಣಿ ಪೈ ಅವರ ಹೆಸರು ಮೊದಲು ಲಭ್ಯವಾಗುತ್ತದೆ. ಸಂಸ್ಕೃತ, ಇಂಗ್ಲೀಷ್ ಮತ್ತು ಕನ್ನಡ ಭಾಷೆಯಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಲಕ್ಷ್ಮಣ ಪೈ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತಗಳನ್ನು ಕನ್ನಡಕ್ಕೆ ಅನುವಾದಿಸಿರುವ ವಿಷಯ ತಿಳಿದು ಬರುತ್ತದೆ. ಭಗವದ್ಗೀತೆಯನ್ನು ಕನ್ನಡಕ್ಕೆ ಪರಿವರ್ತಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಲಕ್ಷ್ಮಣ ಪೈ ಅವರಿಂದಾಗಿ ಈ ಭಾಗದ ಅಕ್ಷರಸ್ಥರಿಗೆ ಚತುರ್ವೇದಗಳ ಪರಿಚಯವಾಯಿತು.

ಸ್ವಾತಂತ್ರ ಚಳವಳಿ ಮತ್ತು ರೈತ ಚಳುವಳಿಯಲ್ಲಿ ಸಕ್ರೀಯವಾಗಿದ್ದ ಈ ಭಾಗದ ಯುವಕರನ್ನು ನೈತಿಕ

ಮಾರ್ಗದಲ್ಲಿ ಸಾಗುವಂತೆ ಮಾಡುವ ಜವಾಬ್ದಾರಿ ಅಂದಿನ ಹಿರಿಯರ ಮೇಲಿತ್ತು. ಈ ಹಿರಿಯರು ತಮ್ಮ ಜವಾಬ್ದಾರಿಯಿಂದ ಹಿಂದೆ ಸರಿಯಲಿಲ್ಲ. ಇಂದು ನಾವು ಯಾವುದನ್ನು ವ್ಯಕ್ತಿತ್ವ ವಿಕಸನ ಎಂದು ಕರೆಯುತ್ತವೆಯೋ ಆ ವಿಷಯದ ಮೇಲೆ ಆ ಕಾಲಕ್ಕಾಗಲೇ ಲೇಖನಗಳನ್ನು ಬರೆದು ಯುವಕರಿಗೆ ಮಾರ್ಗದರ್ಶನ ನೀಡಿದ ಶ್ರೇಯಸ್ಸು ಮ.ಗ.ಶೆಟ್ಟಿಯವರಿಗೆ ಸಲ್ಲುತ್ತದೆ.ಅವರ "ಗೆಲುವಿನ ಗುಟ್ಟು" ಮತ್ತು "ಬಿತ್ತಿದನ್ನು ಬೆಳೆದುಕೋ" ಎಂಬ ಕೃತಿಗಳು ಯುವಕರಲ್ಲಿ ಆತ್ಮವಿಶ್ವಾಸ ಮೂಡಿಸಿ ಕ್ರಿಯಾಶೀಲರಾಗುವಂತೆ ಮಾಡುವ ಉದ್ದೇಶವನ್ನು ಹೊಂದಿದ್ದವು. ಉತ್ತಮ ಅನುವಾದಕರೂ ಆಗಿದ್ದ ಮ.ಗ ಶೆಟ್ಟಿಯವರು ಮರಾಠಿ ಭಾಷೆಯ "ದೇವದಾಸಿ" ಕಾದಂಬರಿಯನ್ನು, ಬಿಹಾರಿ ಮೂಲದ "ಮಹಾಮಂತ್ರಿ" ಎಂಬ ಐತಿಹಾಸಿಕ ಕಾದಂಬರಿಯನ್ನು ಯಶಸ್ವಿಯಾಗಿ ಅನುವಾದಿಸಿದ್ದಾರೆ. ಉಪನಿಷತ್ತುಗಳಲ್ಲಿನ ಅನೇಕ ಕಥೆಗಳನ್ನು ಶೆಟ್ಟಿಯವರು ಕನ್ನಡಕ್ಕೆ ತಂದಿದ್ದಾರೆ.

೧೯೬೦ರ ದಶಕದಲ್ಲಿಯೇ ಜನಸೇವಕದಿಂದ ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದ ಕುಸುಮಾ ಕೇಣಿಕರ ಅಂಕೋಲೆಯ ಸಾಹಿತ್ಯದ ಸಂದರ್ಭದಲ್ಲಿ ಮೊದಲ ಮಹಿಳಾ ಸಾಹಿತಿ ಎನಿಸಿಕೊಳ್ಳುತ್ತಾರೆ. "ನಿಷ್ಕಾಮಕರ್ಮಿ ವೆಂಕಟಾಚಲಪತಿಯವರು" ಮತ್ತು "ದಿಟ್ಟ ಪತ್ರಕರ್ತ ಪಾಟೀಲ ಪುಟ್ಟಪ್ಪನವರು" ಎಂಬ ಎರಡು ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ.

ಚುಟುಕು ಬ್ರಹ್ಮ ಎಂದು ಹೆಸರಾದ ದಿನಕರ ದೇಸಾಯಿ ಅಂಕೋಲೆಯ ಹೆಮ್ಮೆಯ ಪುತ್ರ. ಬಹುಮುಖ ವ್ಯಕ್ತಿತ್ವದ ಅವರು ಕೇವಲ ನಾಲ್ಕು ಸಾಲುಗಳ ಚುಟುಕನ್ನು ಪರಿಣಾಮಕಾರಿಯಾಗಿ ಬಳಸಿ ಕನ್ನಡ ಸಾಹಿತ್ಯಕ್ಕೆ ಹೊಸ ಸಾಧ್ಯತೆಯನ್ನು ತೋರಿಸಿಕೊಟ್ಟವರು. ದಿನಕರ ದೇಸಾಯಿ ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಿದರೂ ಅಲ್ಲಿ ಪರಿಪೂರ್ಣತೆ ಇದೆ. ಅವರು ಯಶಸ್ವಿ ಕವಿಯಾದಂತೆ ಯಶಸ್ವಿ ಗದ್ಯ ಲೇಖಕರೂ ಹೌದು. ಅಂತರಾಷ್ಟ್ರೀಯ ಕಾರ್ಮಿಕರ ಪರಿಷತ್ತಿಗೆ ಹಡಗು ಕೆಲಸಗಾರರ ಪ್ರತಿನಿಧಿಯಾಗಿ ಡೆನ್ಮಾರ್ಕಿಗೆ ಹೋದ ಸಂದರ್ಭದಲ್ಲಿನ ಅನುಭವ ಕಥನವನ್ನು "ನಾ ಕಂಡ ಪಡುವಣ" ಎಂಬ ಕೃತಿಯಲ್ಲಿ ನೀಡಿದ್ದಾರೆ. ಇಲ್ಲಿ ವ್ಯಂಗ್ಯ ವಿಡಂಬನೆಗಳನ್ನು ಸ್ವಾರಸ್ಯಪೂರ್ಣವಾಗಿ ಬಳಸಿಕೊಂಡಿರುವ ದಿನಕರ ದೇಸಾಯಿಯವರ ಹಾಸ್ಯಪ್ರಜ್ಞೆ ಗಮನಸೆಳೆಯುತ್ತದೆ. ಈ ಪ್ರವಾಸ ಕಥನದುದ್ದಕ್ಕೂ ದೇಸಾಯಿಯವರ ಸಂಶೋಧಕ ಮನಸ್ಸು ಕೆಲಸ ಮಾಡಿದೆ. ೪೦ ಅಧ್ಯಾಯಗಳನ್ನು ಒಳಗೊಂಡ ಈ ಕೃತಿಯಲ್ಲಿ ಬ್ರಿಟನ್ ಮತ್ತು ಡೆನ್ಮಾರ್ಕಿನ ಜನರ ನಡುವಳಿಕೆ ಅವರ ಅಭಿರುಚಿ, ಆಸಕ್ತಿ, ರಾಷ್ಟ್ರೀಯ ಮನೋಭಾವ, ಶಿಕ್ಷಣಸಂಸ್ಥೆಗಳೂ ಮತ್ತು ಶಿಕ್ಷಣ ಪದ್ಧತಿಗಳ ಪರಿಣಾಮಕಾರಿ ನಿರೂಪಣೆ ಇದೆ. "ಪ್ರಪಂಚದ ಕೆಲಸಗಾರ" ಎಂಬುದು ದಿನಕರ ದೇಸಾಯಿಯವರ ಇನ್ನೊಂದು ಮಹತ್ವದ ಪುಸ್ತಕ. ಈ ಪುಸ್ತಕದಲ್ಲಿ ಅಂತರಾಷ್ಟ್ರೀಯ ಕೆಲಸಗಾರರ ಸಂಘದ ಪರಿಚಯವಿದೆ. ಒಟ್ಟು ೮ ಅಧ್ಯಾಯಗಳನ್ನು ಒಳಗೊಂಡ ಈ ಪುಸ್ತಕದಲ್ಲಿ ಕೆಲಸಗಾರರ ಬಗ್ಗೆ, ಅವರ ಸಂಘಟನೆಯ ಬಗ್ಗೆ ದಿನಕರರಿಗೆ ಇದ್ದ ಒಲವು ಕಳಕಳಿ ಮತ್ತು ಕಾರ್ಮಿಕರ ಯೋಗಕ್ಷೇಮದ ಕುರಿತು ಅವರಿಗಿದ್ದ ಕಾಳಜಿಯನ್ನು ಗುರುತಿಸಬಹುದು. ದಿನಕರ ದೇಸಾಯಿಯವರು ಕನ್ನಡವಲ್ಲದೆ ಇಂಗ್ಲೀಷ್ ಭಾಷೆಯಲ್ಲಿಯೂ ಕೆಲವು ಪುಸ್ತಕಗಳನ್ನು ಬರೆದಿದ್ದಾರೆ. "Mahamandaleshwaras under the Chalukyas of Kalyani", "Primary Education in India", "Maritime labour in India" "Vakkalas the aboriginal of Canara" ಎಂಬ ಪುಸ್ತಕಗಳು ಗಮನ ಸೆಳೆಯುತ್ತವೆ.

೨೦ನೇ ಶತಮಾನದವರೆಗೂ ನಮ್ಮ ಸಾಹಿತ್ಯ ಸಂದರ್ಭದಲ್ಲಿ ವಿಮರ್ಶೆಯ ಪರಿಕಲ್ಪನೆ ಸ್ಪಷ್ಟವಾಗಿ ವ್ಯಕ್ತವಾಗದೆ ಕಾವ್ಯ ವ್ಯಾಖ್ಯಾನ, ರಸ-ಧ್ವನಿ, ವಕ್ರೋಕ್ತಿ ಮುಂತಾದವುಗಳ ಕುರಿತು ಚರ್ಚಿಸಲಾಗುತ್ತಿತ್ತು. ಆದರೆ ಪಾಶ್ಚಾತ್ಯ ಸಾಹಿತ್ಯದ ಅಭ್ಯಾಸದಿಂದ ವಿಮರ್ಶೆ ಕನ್ನಡದಲ್ಲಿ ಪರಿಚಯಿಸಲ್ಪಟ್ಟಿತು. ಪಾಶ್ಚಾತ್ಯ ಮತ್ತು ಪೌರಾತ್ಯ ಎರಡು ನೆಲೆಯ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಕನ್ನಡ ವಿಮರ್ಶಾ ಕ್ಷೇತ್ರ ಇಂದು ಹುಲುಸಾಗಿ ಬೆಳೆದು ಬಂತು. ಇಂತಹ ಸಮೃದ್ಧ ವಿಮರ್ಶಾಕ್ಷೇತ್ರದ ಅಗ್ರಗಣ್ಯರಲ್ಲಿ ಒಬ್ಬರಾದ ಶ್ರೀ ಜಿ.ಎಚ್.ನಾಯಕರು ಅಂಕೋಲೆಯ ಕೊಡುಗೆ. "ಸಮಕಾಲೀನ", "ಅನಿವಾರ್ಯ", "ನಿರಪೇಕ್ಷ"," ನಿಜದನಿ", "ಸಕಾಲಿಕ", "ವಿನಯ ವಿಮರ್ಶೆ", "ಹರಿಶ್ಚಂದ್ರ ಕಾವ್ಯ, ಓದು-ವಿಮರ್ಶೆ", "ದಲಿತ ಹೋರಾಟ: ಗಂಭೀರ ಸವಾಲುಗಳು", "ಸ್ಥಿತಿಪ್ರಜ್ಞೆ ,"ಮತ್ತೆ ಮತ್ತೆ ಪಂಪ", "ಸಾಹಿತ್ಯ ಸಮೀಕ್ಷೆ" , "ಉತ್ತರಾರ್ಧ" ಅವರ ವಿಮರ್ಶಾ ಕೃತಿಗಳು.

ಕನ್ನಡ ಸಣ್ಣ ಕಥೆಗಳು, ಹೊಸಗನ್ನಡ ಕವಿತೆ, ಶತಮಾನದ ಕನ್ನಡ ಸಾಹಿತ್ಯ ಸಂ.೧ ಶತಮಾನದ ಕನ್ನಡ ಸಾಹಿತ್ಯ ಸಂ.೨ ಕೃತಿಗಳನ್ನು ಸಂಪಾದಿಸಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಜಿ.ಎಚ್. ನಾಯಕರವರ ಸಂವೇದನೆ ರೂಪಗೊಂಡದ್ದು ಅಂಕೋಲೆಯಲ್ಲೇ ಎಂಬುದು ಗಮನಾರ್ಹ. ಸಹೃದಯರ ಕುತೂಹಲವನ್ನು ಕೆರಳಿಸಿ ಹೊಸ ಹೊಸ ಆಲೋಚನೆಯ ಮಗ್ಗಲುಗಳನ್ನು ಪರಿಚಯಿಸುವ ಸಾಮರ್ಥ್ಯವುಳ್ಳ ಜಿ.ಎಚ್.ನಾಯಕರು ಸಮತೂಕದ ವಿಮರ್ಶೆಗೆ ಹೆಸರುವಾಸಿಯಾದವರು. ವಿಮರ್ಶೆಗೆ ಅವರು ಬಳಸುವ ಭಾಷೆ ತುಂಬಾ ಅಪರೂಪವಾದದ್ದು ವಿಮರ್ಶೆಯ ಪರಿಭಾಷೆಯನ್ನು ಕಟ್ಟುನಿಟ್ಟಾಗಿ ಬಳಸದೇ ಅದಕ್ಕೆ ಸೃಜನಶೀಲತೆಯ ಸ್ಪರ್ಶ ನೀಡಿದ ಶ್ರೇಯಸ್ಸು ಜಿ.ಎಚ್.ನಾಯಕರಿಗೆ ಸಲ್ಲುತ್ತದೆ. ಅವರ ವಿಮರ್ಶೆಯಲ್ಲಿ ಸತ್ಯವನ್ನು ಶೋಧಿಸುವ ನಿಷ್ಠುರತೆ ಇದೆ. ಸಕಲರ ಒಳಿತನ್ನು ಪರಿಭಾವಿಸುವ ಕಲ್ಯಾಣ ಗುಣವಿದೆ. ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ರಾಜಕೀಯ, ವೈಚಾರಿಕ ಹೀಗೆ ವಿಸ್ತಾರವಾಗಿ ಚಾಚಿಕೊಂಡ ನಾಯಕರ ಚಿಂತನೆಗಳು ಪ್ರಜಾಪ್ರಭುತ್ವ ಮತ್ತು ಸಮಾನತೆ ನೆಲಗಟ್ಟಿನ ಮೇಲೆ ನಿಂತಿದೆ. 'ಮೀಸಲಾತಿ', 'ಸ್ವಾತಂತ್ರ ಸಮಾನತೆ', 'ರಾಮಜನ್ಮಭೂಮಿ ಬಾಬರಿಮಸೀದಿ ವಿವಾದ ಕುರಿತು', 'ನಿರಂಕುಶ ಅಭಿವ್ಯಕ್ತಿ ಸ್ವಾತಂತ್ರ್ಯ ಅಗತ್ಯವೇ 'ಕರ್ನಾಟಕ ತುಘಲಕ್ ವಸ್ತು ವಿಶ್ಲೇಷಣೆ', 'ಹೊಸಗನ್ನಡ ಕವಿತೆ, ಪರಿಕಲ್ಪನಾತ್ಮಕ ನೆಲೆಗಳು' ಮುಂತಾದ ಲೇಖನಗಳು ನಾಯಕರ ತೀಕ್ಷ್ಣ ವೈಚಾರಿಕ ದೃಷ್ಟಿಗೆ ಸಾಕ್ಷಿಗಳಾಗಿ ನಿಲ್ಲುತ್ತವೆ. ಅವರ ಆತ್ಮಕಥನ 'ಬಾಳು' ಕೇವಲ ವೈಯಕ್ತಿಕ ನೋವು ನಲಿವುಗಳ ನಿರೂಪಣೆಯಾಗದೇ ಒಂದು ಕಾಲಘಟ್ಟದ ಸಾಮಾಜಿಕ, ರಾಜಕೀಯ ಸ್ಥಿತಿಗಳನ್ನು ವಿವರಿಸುವ ಸಾಂಸ್ಕೃತಿಕ ಪಠ್ಯವಾಗುತ್ತದೆ. ಈ ಕೃತಿ ಕಥೆಯ ಸೂಕ್ಷ್ಮತೆಯನ್ನು ಒಳಗೊಂಡಿದ್ದು, ಕಾದಂಬರಿಯ ಲವಲವಿಕೆಯನ್ನು ಪಡೆದಿದೆ.

ಆಧುನಿಕ ಯಾಂತ್ರಿಕ ಜಗತ್ತಿನಲ್ಲಿ ನಮ್ಮತನವನ್ನು ಕಳೆದುಕೊಂಡು ಒದ್ದಾಡುತ್ತಿರುವಾಗ ಸ್ವಸ್ವರೂಪದ ಅರಿವನ್ನುಂಟು ಮಾಡಿಕೊಡುವ ಸಾಮರ್ಥ್ಯ ಜಾನಪದಕ್ಕಿದೆ. ಇಂದಿನ ಗಡಿಬಿಡಿಯ ಕಾಲಘಟ್ಟದಲ್ಲಿ ಜಾನಪದವನ್ನು ಪುನರುಜ್ಜೀವನಗೊಳಿಸಿ ನಮ್ಮ ಸಾಂಸ್ಕೃತಿಕ ಜೀವನದಲ್ಲಿ ಸಂಪೂರ್ಣವಾಗಿ ಅಳವಡಿಸಿಕೊಳ್ಳುವುದು ಅಸಾಧ್ಯವಾದರೂ ಈ ಜಾನಪದವನ್ನು ಜೀವಂತವಾಗಿರುವಂತೆ ಕಾಪಾಡಿಕೊಳ್ಳುವ ಅವಶ್ಯಕತೆ ಇದೆ. ಇಂತಹ ಪ್ರಯತ್ನದಲ್ಲಿ ಹಲವಾರು ಮಹನೀಯರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ದುಡಿಯುತ್ತಿದ್ದಾರೆ. ಅಂತಹವರಲ್ಲಿ ಡಾ॥ ಎನ್.ಆರ್.ನಾಯಕ ಮೊದಲ ಸಾಲಿನಲ್ಲಿ ನಿಲ್ಲುತ್ತಾರೆ. ಮೂಲತಃ ಅಂಕೋಲೆಯ ಭಾವಿಕೇರಿಯವರಾದ ಎನ್.ಆರ್.ನಾಯಕರು ತಮ್ಮನ್ನು ಸಂಪೂರ್ಣವಾಗಿ ಜಾನಪದ ಸಾಹಿತ್ಯ ಸಂಶೋಧನೆಯಲ್ಲಿ ತೊಡಗಿಸಿಕೊಂಡವರು. ಕಾರವಾರ ಜಿಲ್ಲೆಯ ಜನಪದ ಗೀತೆಗಳು ಎಂಬ ಸಂಶೋಧನ ಮಹಾಪ್ರಬಂಧ ನಾಯಕರ ಸೂಕ್ಷ್ಮ ಮತ್ತು ವಿಸ್ತ್ರತ ಅಧ್ಯಯನಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಈ ಗ್ರಂಥದಲ್ಲಿ ಇಡೀ ಕಾರವಾರ ಜಿಲ್ಲೆಯ ಜನರ ಬದುಕಿನ ಚಿತ್ರಣ ದೊರಕುತ್ತದೆ. ಜನಪದ ಗೀತೆಗಳ ಮೂಲಕ ಜನಪದ ಸಾಂಸ್ಕೃತಿಕ ಬದುಕಿನ ಶ್ರೀಮಂತಿಕೆಯನ್ನು ಗುರುತಿಸುವಲ್ಲಿ ಎನ್.ಆರ್. ನಾಯಕರು ಯಶಸ್ವಿಯಾಗಿದ್ದಾರೆ. 'ಜಾನಪದ ಸಿಂಹಾವಲೋಕನ', 'ಜಾನಪದ ಸಾಂಬಾರ ಬಟ್ಟಲು', 'ಜಾನಪದ ಕವಳ ಪೇಳಿ', 'ಜಾನಪದ ಮೆಲಕು' ಮುಂತಾದವು ಅವರ ಕೆಲವು ಕೃತಿಗಳು. ಇಲ್ಲಿನ ಸಂಶೋಧನಾ ಪ್ರಬಂಧಗಳು ಜನಪದ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಮಾರ್ಗದರ್ಶಕಗಳಾಗಿವೆ. ಉತ್ತರ ಕನ್ನಡ ಜಿಲ್ಲೆಯ ಹೆಚ್ಚುಕಡಿಮೆ ಎಲ್ಲಾ ಜನಾಂಗಗಳಲ್ಲಿರುವ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದ ಶ್ರೇಯಸ್ಸು ಡಾ॥ ನಾಯಕರದು. 'ಜೇಂಗೊಂಡ', 'ಹೇಳೇವೋ ಗುಮಟೆ ಪದನಾವ', 'ಪಡುಕೋಗಿಲೆ', 'ಬಂದಾನೆ ಬಲೀಂದ್ರರಾಯ', 'ಗ್ರಾಮೊಕ್ಕಲ ಮಹಾಭಾರತ', 'ಕೋಮಾರಪಂತರ ಕಥನ ಕವನಗಳು' ಹೀಗೆ ಹತ್ತು ಹಲವಾರು ಕೃತಿಗಳನ್ನು ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಪ್ರಕಟಿಸಿದ್ದಾರೆ, ಮಾತ್ರವಲ್ಲ ಅವುಗಳಿಗೆ ಪಾಂಡಿತ್ಯಪೂರ್ಣವಾದ ಸಂಶೋಧನಾಪರವಾದ ಸುದೀರ್ಘ ಪ್ರಸ್ತಾವನೆಯನ್ನು ನೀಡಿದ್ದಾರೆ. 'ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ', 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ', 'ಉತ್ತರ ಕನ್ನಡ ಜಿಲ್ಲೆಯ ನಾಡವರ ಸಂಸ್ಕೃತಿ', 'ಗಾಮೊಕ್ಕಲು ಒಂದು ಸಾಂಸ್ಕೃತಿಕ ಅಧ್ಯಯನ' ಮುಂತಾದ ಕೃತಿಗಳು ಆಯಾ ಜನಾಂಗದ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವಲ್ಲಿ ಯಶಸ್ವಿಯಾಗಿವೆ. ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ೫೦ಕ್ಕೂ ಹೆಚ್ಚು ಕೃತಿಗಳನ್ನು ನೀಡಿದ ಶ್ರೇಯಸ್ಸು ಎನ್.ಆರ್.ನಾಯಕರಿಗೆ ಸಲ್ಲುತ್ತದೆ.

ಇದೇ ಕ್ಷೇತ್ರದಲ್ಲಿ ಅವರ ಹೆಗಲಿಗೆ ಹೆಗಲುಕೊಟ್ಟು ದುಡಿದವರು ಅವರ ಪತ್ನಿ ಶ್ರೀಮತಿ ಶಾಂತಿ ನಾಯಕರು,

ಜಾನಪದದ ಸ್ಪಷ್ಟ ಕಲ್ಪನೆಯನ್ನು ಹೊಂದಿರುವ ಶಾಂತಿನಾಯಕರು ತಾವು ಸಂಗ್ರಹಿಸಿದ ಜಾನಪದ ಸಾಮಗ್ರಿಯನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸುತ್ತಾರೆ. 'ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಕಥೆಗಳು', 'ಜನಪದ ವೈದ್ಯಕೀಯ ಅಡುಗೆಗಳು, 'ಕಾಕಕ್ಕ ಗುಬ್ಬಕ್ಕ' ಕೃತಿಗಳನ್ನು ಶಾಂತಿ ನಾಯಕ ಸಂಗ್ರಹಿಸಿದ್ದು, 'ಜಾಣೆ ಕನ್ನಡವ ತಿಳಿದೇಳೆ' ಎಂಬ ಕೃತಿ ಅಪರೂಪದ ಒಗಟುಗಳ ಸಂಗ್ರಹವಾಗಿದೆ. ಈ ಕೃತಿಯು ಪ್ರಸ್ಥಾವನೆ ಸಂಶೋಧನೆ ಮತ್ತು ವಿಶ್ಲೇಷಣೆಯಿಂದ ಕೂಡಿದೆ. 'ಜಾನಪದ ಸುಧಾ ಸಂಚಯ' ಮತ್ತು 'ಜಾನಪದ ಲೇಖನ ಸಂಚಯ' ಕೃತಿಗಳು ಸಂಶೋಧನಾ ಪ್ರಬಂಧಗಳನ್ನು ಒಳಗೊಂಡಿದ್ದು ಜಾನಪದ ಅಭ್ಯಾಸದ ವಿವಿಧ ಮಗ್ಗಲುಗಳ ಪರಿಚಯ ನೀಡುತ್ತವೆ. ಈ ಎರಡು ಗ್ರಂಥಗಳು ಅತ್ಯುತ್ತಮ ಆಕರ ಗ್ರಂಥಗಳಾಗಿವೆ.

ಅಮ್ಮೆಂಬಳ ಆನಂದರು ಉತ್ತರ ಕನ್ನಡ ಜಿಲ್ಲೆಯ ಹಿರಿಯ ಪತ್ರಿಕೋದ್ಯಮಿ. ನಮ್ಮ ನೆರೆಯ ಜಿಲ್ಲೆಯವರಾದರೂ ಅಂಕೋಲೆಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಆಯ್ದು ಕೊಂಡವರು. ಜನಸೇವಕ ಪತ್ರಿಕೆಯ ಸಂಪಾದಕರಾಗಿ ನಾಡಿನ ಜನಮಾನಸದಲ್ಲಿ ಸ್ಥಾನ ಪಡೆದವರು. ಅವರ ಪತ್ರಿಕೋದ್ಯಮ ಮತ್ತು ಉತ್ತರ ಕನ್ನಡ ಜಿಲ್ಲೆ ಎಂಬ ಕೃತಿ ಪತ್ರಿಕೋದ್ಯಮಕ್ಕೆ ಉತ್ತರ ಕನ್ನಡ ಜಿಲ್ಲೆಯ ಕೊಡುಗೆಯನ್ನು ತಿಳಿಸಿಕೊಡುತ್ತದೆ. ಈ ಜಿಲ್ಲೆಯ ಹಿಂದಿನ ಮತ್ತು ಇಂದಿನ ಪತ್ರಿಕೆಗಳ ಕಿರು ಪರಿಚಯವು ಇಲ್ಲಿದೆ. ಪತ್ರಕರ್ತರಾಗಬಯಸುವವರಿಗೆ ದಾರಿದೀಪವಾಗಬಲ್ಲ ಅನುಭವದ ಮಾತುಗಳು ಈ ಕೃತಿಯಲ್ಲಿವೆ. ಜನಸೇವಕನ ನೆನಪಿನಂಗಳ ಅಮ್ಮೆಂಬಳರ ಜೀವನ ವೃತ್ತಾಂತವಾಗಿದ್ದು ಬದುಕಿನಲ್ಲಿ ಅವರು ಎದುರಿಸಿದ ನಿರೀಕ್ಷಿತ ಮತ್ತು ಅನಿರೀಕ್ಷಿತ ತಿರುವುಗಳನ್ನು ಸಮಚಿತ್ತದಿಂದ ನಿರೂಪಿಸಿದ್ದಾರೆ. ಅಪ್ಪಟ ಸಮಾಜವಾದಿ ಪತ್ರಕರ್ತರ ಈ ಪ್ರಾಮಾಣಿಕ ಆತ್ಮಕಥನ ಅಪೂರ್ವ ದಾಖಲೆಯಾಗಿದೆ.

ಮೂಲತಃ ಅಂಕೋಲೆಯವರೇ ಆದ ಡಾ॥ ಟಿ.ವಿ.ನಾಯ್ಕರು 'ಪುರಂದರದಾಸ ಮತ್ತು ಸಂತ ತುಕಾರಾಮ ತುಲನಾತ್ಮಕ ಸಮೀಕ್ಷೆ' ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪ್ರಕಟಿಸಿದ್ದಾರೆ. ಹೆಚ್ಚು ಕಡಿಮೆ ಒಂದೇ ಕಾಲಘಟ್ಟದಲ್ಲಿ ಎರಡು ವಿಭಿನ್ನ ಭಾಷಾ ಪ್ರದೇಶದಲ್ಲಿದ್ದ ಇಬ್ಬರು ಸಂತರ ವಿಠಲ ಭಕ್ತಿ ವೈರಾಗ್ಯ ಮತ್ತು ಅವರ ಕೃತಿಗಳ ತೌಲನಿಕ ಅಧ್ಯಯನ ಇಲ್ಲಿದೆ. ಭಾಷಾವಾರು ಮತ್ತು ಪ್ರಾಂತೀಯವಾದ ವಿವಾದಗಳ ಸಂಕ್ರಮಣಕಾಲದಲ್ಲಿ ಕರ್ನಾಟಕದ ಪುರಂದರ ಮತ್ತು ಮಹಾರಾಷ್ಟ್ರದ ತುಕಾರಾಮರ ಸಾರ್ವತ್ರಿಕ ಮೌಲ್ಯಗಳಿಂದ ಕೂಡಿದ ಸಂದೇಶಗಳನ್ನು ನಾವಿಂದು ಆಚಾರಗಳಲ್ಲಿ ಅಳವಡಿಸಿಕೊಳ್ಳುವುದರಿಂದ ಭೇದ ಭಾವಗಳು ಮಾಯವಾಗಿ ಅನ್ಯೋನ್ಯ ಪ್ರೀತಿ ಮತ್ತು ಸೌಹಾರ್ದ ಭಾವನೆಯಿಂದ ಬಾಳಲು ಸಾಧ್ಯವಿದೆ ಎಂಬ ಆಶಯ ಈ ಕೃತಿಯಲ್ಲಿದೆ. ಕರ್ನಾಟಕದ ದಾಸಪರಂಪರೆ ಮಹಾರಾಷ್ಟ್ರದ ಸಂತಪರಂಪರೆಯ ಪರಿಚಯವನ್ನು ಈ ಕೃತಿ ಒಳಗೊಂಡಿದೆ.

ಬೋಳೆಯ ಜೋಗಿ ಬೊಮ್ಮಯ್ಯ ನಾಯಕ ಆದರ್ಶ ಶಿಕ್ಷಕರಾಗಿ ಹೆಸರು ಮಾಡಿದವರು. ತಮ್ಮನ್ನು ಅಗಲಿದ ಪ್ರೀತಿಯ ಮಗ ಕಾಮೇಶ್ವರನ ನೆನಪಿನಲ್ಲಿ ಅವರು ಬರೆದ ಕೃತಿ "ಮುದುಡಿದ ಯುವ ಪ್ರತಿಭೆ ಕಾಮೇಶ್ವರ". ತನ್ನ ಪ್ರತಿಭೆ, ಕರ್ತವ್ಯನಿಷ್ಠೆ, ಸದ್ಗುಣಗಳಿಂದ ತನ್ನ ಸುತ್ತಲಿನವರ ಗಮನಸೆಳೆದ ಈತನ ವ್ಯಕ್ತಿತ್ವ ಮುಂದಿನ ತಲೆಮಾರಿನವರಿಗೆ ದಾರಿದೀಪವಾಗಲಿ ಎಂಬ ಉದ್ದೇಶದಿಂದ ಈ ಕೃತಿ ರಚಿತವಾಗಿದೆ. ಈ ಕೃತಿಯನ್ನು ಓದಿದರೆ ಈ ಭಾಗದ ಯುವಜನತೆ ಬೇರೆ ಯಾರನ್ನೋ ಮಾದರಿಯಾಗಿ ಇಟ್ಟುಕೊಳ್ಳುವ ಬದಲು ಈ ಪರಿಸರದಲ್ಲಿಯೇ ಹುಟ್ಟಿ ಬೆಳೆದು ಕಿರಿವಯಸ್ಸಿನಲ್ಲಿಯೇ ಗಮನಾರ್ಹ ಸಾಧನೆ ಮಾಡಿದ ಕಾಮೇಶ್ವರರನ್ನು ಮಾದರಿಯಾಗಿಟ್ಟುಕೊಳ್ಳುವುದು ಸೂಕ್ತ ಎಂಬ ಭಾವನೆ ಮೂಡುತ್ತದೆ. ಅಕಾಲದಲ್ಲಿ ಮಗನನ್ನು ಕಳೆದುಕೊಂಡ ತಂದೆಯ ಮನದ ಬೇಗುದಿ ಈ ಕೃತಿಯಲ್ಲಿದೆಯಾದರೂ ಕಾಮೇಶ್ವರನ ವ್ಯಕ್ತಿತ್ವ ಗಮನ ಸೆಳೆಯುತ್ತದೆ. ಕೃತಿಯನ್ನು ಓದಿದಾಗ ವಾಸಂತಿ ಪಡುಕೋಣೆಯವರು ತಮ್ಮ ಮಗ ಗುರುದತ್ತನ ನೆನಪಿನಲ್ಲಿ ಬರೆದ ಕೃತಿ ನೆನಪಾಗುತ್ತದೆ.

ವಿ.ಜೆ.ನಾಯಕರು ಉತ್ತರ ಕನ್ನಡ ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಪಟು. ಯಕ್ಷಗಾನದ ಕುರಿತು ಅಧಿಕಾರಯುತವಾಗಿ ಮಾತನಾಡುವ, ಬರೆಯುವ ಸಾಮರ್ಥ್ಯ ಅವರಲ್ಲಿದೆ. ಅತ್ಯಂತ ಆರೋಗ್ಯಪೂರ್ಣವಾಗಿ ಚಿಂತಿಸಬಲ್ಲ ವಿ.ಜೆ.ನಾಯಕರು ಬರೆದದ್ದು ಕಡಿಮೆಯಾದರೂ ಅವೆಲ್ಲ ಸತ್ವಪೂರ್ಣವಾದವುಗಳು. ನಾನು ಬರಹಗಾರನಲ್ಲ ಎಂದು ಹೇಳಿಕೊಳ್ಳುತ್ತಲೇ ವಿದ್ವತ್‌ಪೂರ್ಣವಾದ ಹತ್ತು ಲೇಖನಗಳನ್ನೊಳಗೊಂಡ "ಯಕ್ಷಗಾನ" ಎಂಬ ಕೃತಿಯನ್ನು ಅವರು ನೀಡಿದ್ದಾರೆ.

ಸಂಶೋಧನಾತ್ಮಕ ಅಥವಾ ವಿಮರ್ಶಾತ್ಮಕ ಪ್ರಬಂಧಗಳೇನೂ ಅಲ್ಲ ಎಂದು ಹೇಳುವ ಅವರು ಚಿಕಿತ್ಸಕ ದೃಷ್ಟಿ ಧೋರಣೆಯ ಲೇಖನಗಳನ್ನು ಇಲ್ಲಿ ನೀಡಿದ್ದಾರೆ. ಯಕ್ಷಗಾನ ಕಲೆಯ ಸಾಮಾನ್ಯ ಪರಿಚಯ ಮಾಡಿಕೊಡುವ ಇಲ್ಲಿನ ಲೇಖನಗಳಲ್ಲಿ ಉತ್ತರ ಕನ್ನಡದ ಯಕ್ಷಗಾನ ಮೇಳಗಳು ಮತ್ತು ಪ್ರಸಂಗ ಕರ್ತೃಗಳ ಪರಿಚಯವಿದೆ. ಯಕ್ಷಗಾನಕ್ಕೆ ಮಾಂತ್ರಿಕ ಸ್ಪರ್ಶ ನೀಡಿದ ಡಾ॥ ಶಿವರಾಮ ಕಾರಂತರ ಯಕ್ಷಗಾನ ಸ್ವಾರಸ್ಯ ಮತ್ತು ಮಹತ್ವಗಳ ವಿವರಣೆ ಇಲ್ಲಿದೆ. ಯಕ್ಷಗಾನದಲ್ಲಿ ಮಾತುಗಾರಿಕೆ ಹೇಗಿದೆ, ಹೇಗಿರಬೇಕು ಎಂಬುದನ್ನು ಸೂಚಿಸುವ ಲೇಖನವು ಯಕ್ಷಗಾನ ಕ್ಷೇತ್ರದಲ್ಲಿ ಅಡಿಯಿಡುತ್ತಿರುವ ಹೊಸಬರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತದೆ.

'ಯಕ್ಷಗಾನ ಪ್ರಸಂಗ ಕಥೆಗಳು' ಒಂದು ಅಪರೂಪದ ಕೃತಿ. ನಾಲ್ಕು ಯಕ್ಷಗಾನ ಪ್ರಸಂಗಗಳ ಗದ್ಯ ನಿರೂಪಣೆ ಈ ಕೃತಿಯಲ್ಲಿದೆ. ಹಳಗನ್ನಡ ಕಾವ್ಯಗಳ ಗದ್ಯನಿರೂಪಣೆ ಆ ಕಾವ್ಯಗಳನ್ನು ಅರ್ಥಮಾಡಿಕೊಳ್ಳುವಲ್ಲಿ ನೆರವಾಗುವಂತೆ ಈ ಕೃತಿಯು ಯಕ್ಷಗಾನದ ಕುರಿತು ಆಸಕ್ತಿ ಮೂಡಿಸಲು ಸಫಲವಾಗುತ್ತದೆ.ಅವರ "ದಿನಚರಿಯ ಸಾಲುಗಳ ನಡುವೆ", "ಕಾಲ್ನಡಿಗೆಯ ಪಯಣ", "ತೆರೆದ ಬಾಗಿಲು" ಕೃತಿಗಳು ತತ್ಕಾಲೀನ, ವಿಮರ್ಶಾತ್ಮಕ, ಸಂಶೋಧನಾತ್ಮಕ, ತಾತ್ವಿಕ, ವ್ಯಕ್ತಿ ಪರಿಚಯ ಹೀಗೆ ವೈವಿಧ್ಯಮಯ ಲೇಖನಗಳ ಜೊತೆಗೆ ಆತ್ಮಕಥಾನಕ ಟಿಪ್ಪಣಿಗಳನ್ನು ಒಳಗೊಂಡು ಗಮನ ಸೆಳೆಯುತ್ತವೆ.

ಶಾಂತಾರಾಮ ನಾಯಕ ಹಿಚಕಡ ಮುಖ್ಯವಾಗಿ ಕಾವ್ಯಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಉತ್ತಮ ಕವಿಯಾದ ಅವರು ಒಳ್ಳೆಯ ಗದ್ಯ ಬರಹಗಾರರೂ ಹೌದು. "ಹಂಬಲ", "ಹುಡುಕಾಟ" ಎಂಬ ಕೃತಿಗಳು ಸರಳ ಶೈಲಿಯ ಮೂಲಕವೇ ವೈಚಾರಿಕತೆಯನ್ನು ಬಿತ್ತುವಲ್ಲಿ ಯಶಸ್ವಿಯಾಗುತ್ತವೆ ಈ ಪುಸ್ತಕಗಳ ಎಲ್ಲ ಬರಹಗಳು ಚಿಂತನಶೀಲವಾಗಿದ್ದು ಜೀವನ್ಮುಖಿಯಾದ ಧೋರಣೆಯನ್ನು ಹೊಂದಿವೆ, ವೈಚಾರಿಕ ಲೇಖನಗಳಾಗಿದ್ದರೂ ಸಮತೂಕದ ಭಾಷೆಯನ್ನು ಅವರು ಇಲ್ಲಿ ಬಳಸಿದ್ದಾರೆ. "ಒಡನಾಟ" ಶಾಂತಾರಾಮ ನಾಯಕರು ಇನ್ನೊಂದು ಕೃತಿ. ತಮ್ಮ ಸ್ನೇಹದ ಪರಿಧಿಯಲ್ಲಿ ಬಂದ ಮಹಾನ್ ವ್ಯಕ್ತಿಗಳ ಒಡನಾಟವನ್ನು ಆತ್ಮೀಯವಾಗಿ ಚಿತ್ರಿಸುತ್ತಾರೆ. ತೇಜಸ್ವಿ, ಲಂಕೇಶ್ ಮಾತ್ರವಲ್ಲ, ನಮ್ಮ ಜಿಲ್ಲೆಯ ಹಿರಿಯ ಸಾಹಿತಿಗಳ ಜೊತೆಗಿನ ಸಂಬಂಧವನ್ನು ಯಾವುದೇ ಉತ್ಪ್ರೇಕ್ಷೆಯಿಲ್ಲದೇ ನಿರೂಪಿಸುತ್ತಾರೆ. ಹಾಗಾಗಿ ಈ ಕೃತಿ ಆಪ್ತ ಎನಿಸಿಕೊಳ್ಳುತ್ತದೆ. "ನಾಡವರು ಒಂದು ಸಾಂಸ್ಕೃತಿಕ ಅಧ್ಯಯನ" ಕೃತಿಯು ಜನಾಂಗದ ಅಸ್ಮಿತೆಯನ್ನು ನಿರೂಪಿಸುವ ಸಂಶೋಧನಾತ್ಮಕ ಕೃತಿಯಾಗಿದೆ. ಆದರೆ ಅಂಕೋಲೆಯ ಸ್ವಾತಂತ್ರ ಚಳುವಳಿಯ ಕುರಿತು ಬರೆದ "ಚರಿತ್ರೆಯಲ್ಲಿ ಮರೆತವರ ಕಥೆ", "ಸ್ವಾತಂತ್ರ್ಯ ಹೋರಾಟದ ಹೊರಳು ನೋಟ", "ಸ್ವಾತಂತ್ರ್ಯ ಹೋರಾಟದಲ್ಲಿ ನಾಡವರು", "ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು" ಎಂಬ ಕೃತಿಗಳಲ್ಲಿ ಸ್ವಾತಂತ್ರ ಚಳುವಳಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಮನೆಮಠಗಳನ್ನು ಕಳೆದುಕೊಂಡು ಅಸಹನೀಯ ಚಿತ್ರಹಿಂಸೆಯನ್ನು ಅನುಭವಿಸಿದ ತಲೆಮಾರೊಂದರ ಚಿತ್ರಣ ಇಲ್ಲಿವೆ. ಇವು ಚರಿತ್ರೆಯನ್ನು ಕುರಿತಾದ ಕೃತಿಗಳಾದರೂ ನೀರಸವಾಗಿಲ್ಲ. ಬಾಸಗೋಡ ರಾಮಾ ನಾಯಕ, ಉಳುವರೆಯ ರಾಮದಾಸ ಗೌಡ, ಹಸಲರ ದೇವಿ, ತಿಪ್ಪು ಹಮ್ಮಣ್ಣ ನಾಯಕ, ಕಾಣಿ ಬೊಮ್ಮಕ್ಕ, ಮಾಣುದೇವಿ ಮೊದಲಾದ ಸ್ವಾತಂತ್ರವೀರರ ವೀರಗಾಥೆಯನ್ನು ಈ ಕೃತಿಗಳು ಸವಿವರವಾಗಿ ನಿರೂಪಿಸುತ್ತವೆ. ಈ ಭಾಗದಲ್ಲಿ ಆದರ್ಶ ವ್ಯಕ್ತಿಗಳಾಗಿ ಹೊಸ ತಲೆಮಾರಿಗೆ ಮಾದರಿಯಾಗಬಹುದಾದ ಮಹನೀಯರ ಜೀವನ ಚರಿತ್ರೆಯನ್ನು ಶಾಂತಾರಾಮ ನಾಯಕರು ಕಟ್ಟಿಕೊಟ್ಟಿದ್ದಾರೆ. ಮಾನಧನ ಎಂ.ಎಚ್ ನಾಯಕ, ಗೊನೆಹಳ್ಳಿಯ ಬೆಳಕು ವೆಂಕಣ್ಣ ನಾಯಕ, ಕವಿ ವಿ.ವೆ.ತೊರ್ಕೆ, ಸ.ಪ. ಗಾಂವಕರ ಈ ಜೀವನ ಚರಿತ್ರೆಗಳು ಸರಳ ಸಹಜ ನಿರೂಪಣೆಯಿಂದ ಮನ ಮುಟ್ಟುತ್ತವೆ. "ನೆನಪಿನ ಹಾಲಡ್ಗಿ" ಶಾಂತಾರಾಮ ನಾಯಕರ ವಿಶಿಷ್ಟ ಕೃತಿಯಾಗಿದ್ದು, ಅತ್ತ ಆತ್ಮಚರಿತ್ರೆಯೂ ಅಲ್ಲದ ಇತ್ತ ಲಲಿತ ಪ್ರಬಂಧವೂ ಅಲ್ಲದ ಆತ್ಮಕಥಾನಕದ ಟಿಪ್ಪಣಿಗಳನ್ನು ಒಳಗೊಂಡು ಸಹಜ ಶೈಲಿಯಿಂದ ಗಮನಸೆಳೆಯುತ್ತದೆ.

ಕನ್ನಡದ ಪ್ರಮುಖ ಸೃಜನಶೀಲ ಲೇಖಕರಲ್ಲಿ ಒಬ್ಬರೆಂದು ಪರಿಗಣಿಸಲ್ಪಡುವ ವಿಷ್ಣು ನಾಯ್ಕ ನಾಡಿನ ಉದ್ದಗಲದ ಸಾಹಿತ್ಯ ವಲಯದಲ್ಲಿ ಚಿರಪರಿಚಿತ ಹೆಸರು. ಅವರು ಕವಿಯೂ ಹೌದು, ಕತೆಗಾರರೂ ಹೌದು. ನಾಟಕಕಾರ, ಸಂಪಾದಕರೂ ಹೌದು, 'ರಾಘವೇಂದ್ರ ಪ್ರಕಾಶನ' ಎಂಬ ಸಾಹಿತ್ಯಿಕ ವೇದಿಕೆಯ ಮೂಲಕ ನಾಡಿನ ಎಲ್ಲ ಭಾಗಗಳ ಲೇಖಕರ ಪುಸ್ತಕಗಳನ್ನು ಪ್ರಕಟಿಸಿದ ಪ್ರಕಾಶಕರು ಹೌದು. ಸೃಜನಶೀಲ ಲೇಖಕರಾಗಿ ಮಾತ್ರವಲ್ಲ ಸೃಜನೇತರ ಲೇಖಕರಾಗಿಯೂ ಗಮನ ಸೆಳೆಯುತ್ತಾರೆ.

ಅವರು ಬರೆದದ್ದು ಕಥೆಯೇ ಆಗಲಿ, ಇನ್ನಿತರ ಗದ್ಯವೇ ಆಗಲಿ ಕಾವ್ಯದ ಅನುಭವ ನೀಡುವ ವಿಶಿಷ್ಟತೆಯನ್ನು ಅದು ಪಡೆದಿದೆ. ಅವರ ಸೃಜನೇತರ ಕೃತಿಗಳು ಇದಕ್ಕೆ ಸಾಕ್ಷಿಯಾಗಿವೆ. 'ಪ್ರಮಾಣ' ವಿಷ್ಣು ನಾಯ್ಕರ ವಿಚಾರ ವಿಮರ್ಶೆ ಲೇಖನಗಳು, ವಿವಿಧ ವಿಚಾರ ಸಂಕಿರಣಗಳಲ್ಲಿ ಅವರು ಮಂಡಿಸಿದ ಪ್ರಬಂಧಗಳು ಇಲ್ಲಿ ಪುಸ್ತಕದ ರೂಪ ಪಡೆದಿವೆ. 'ಮರ್ಯಾದೆ' ವಿಷ್ಣು ನಾಯ್ಕರ ಚಿಂತನಪರ ಬರಹಗಳ ಸಂಕಲನ ಆಕಾಶವಾಣಿಯ ಮೂಲಕ ಪ್ರಸಾರಗೊಂಡ ಭಾಷಣಗಳು ಇಲ್ಲಿವೆ. ೧೫ ರಿಂದ ೨೫ರ ನಡುವಿನ ವಯೋಮಿತಿಯ ಯುವಕರನ್ನು ಗಮನದಲ್ಲಿ ಇಟ್ಟುಕೊಂಡು ಪ್ರಕಟಿಸಿರುವ ಈ ಲೇಖನಗಳು ಅವರಿಗೆ ಮಾರ್ಗದರ್ಶನ ನೀಡುವ ರೀತಿಯಲ್ಲಿ ಅಪ್ಯಾಯಮಾನವಾಗಿ ಸಂಯಮದ ನಿರೂಪಣೆಯಿಂದ ಕೂಡಿವೆ. ಕಿರಿಯರಿಗೆ ತಿಳಿಸಿ ಹೇಳುವ ಹಿರಿಯನೊಬ್ಬನ ಗುಣ ಇಲ್ಲಿಯ ಲೇಖನದಲ್ಲಿದೆ. "ಜನಸೇವಕ ಕವಿ ದಿನಕರ ದೇಸಾಯಿ" ಕೃತಿ ದಿನಕರ ದೇಸಾಯಿಯವರ ಬಹುಮುಖ ವ್ಯಕ್ತಿತ್ವದ ಪರಿಚಯವನ್ನು ಸರಳವಾದ ಭಾಷೆಯಲ್ಲಿ ಮಾಡಿಕೊಡುವ ಒಂದು ಯಶಸ್ವಿ ಪ್ರಯೋಗ.

ಸಾಮಾನ್ಯವಾಗಿ ಚರಿತ್ರೆಯೆಂದರೆ ರಾಜ ಮಹಾರಾಜ ಸಾಧನೆಯ ಚಿತ್ರಣ ಎಂಬ ಕಲ್ಪನೆ ನಮ್ಮಲ್ಲಿದೆ. ಆದರೆ ಚರಿತ್ರೆಯಲ್ಲಿ ಆಳುವವರಿಗಿಂತ ಆಳಿಸಿಕೊಳ್ಳುವವರು ಮುಖ್ಯರಾಗುತ್ತಾರೆ. ಇದುವರೆಗೆ ನಮ್ಮಲ್ಲಿ ರಚಿತವಾದ ಎಲ್ಲ ಇತಿಹಾಸ ಗ್ರಂಥಗಳು ಆಳುವವರ ದೃಷ್ಟಿಕೋನವನ್ನೇ ಮುಖ್ಯವಾಗಿಸಿಕೊಂಡಿವೆ. ಇದಕ್ಕೆ ಕೆಲವು ಅಪವಾದಗಳಿರಬಹುದು. ವಿಷ್ಣು ನಾಯ್ಕ ಅವರ "ದುಡಿಯುವ ಕೈಗಳ ಹೋರಾಟದ ಕಥೆ" ಇಂತಹ ಅಪರೂಪದ ಕೃತಿಗಳಲ್ಲಿ ಒಂದು. 'ಹದ್ದು ಪಾರಿನ ಹಿಂದೆ ಮುಂದೆ' ಎಂಬ ಕಿರು ಹೊತ್ತಗೆಯ ವಿಸ್ತೃತರೂಪವೇ ಈ ಗ್ರಂಥ. ದಿನಕರ ದೇಸಾಯಿಯವರು ಗೇಣಿದಾರರ ಹಕ್ಕಿಗಾಗಿ ಅಂಕೋಲೆಯಲ್ಲಿ ಪ್ರಾರಂಭಿಸಿದ ಹೋರಾಟದ ಚರಿತ್ರಾರ್ಹ ಕಥನವನ್ನು ಈ ಕೃತಿ ಒಳಗೊಂಡಿದೆ. ಯಾವ ನೆಲದಲ್ಲಿ ಸ್ವಾತಂತ್ರ್ಯದ ಹಸಿವಿನಿಂದ ಬ್ರಿಟಿಷ ರಾಜಪ್ರಭುತ್ವದ ವಿರುದ್ಧ ಹೋರಾಟ ನಡೆಯಿತೋ ಅದೇ ನೆಲದಲ್ಲಿ ಅನ್ನದ ಹಸಿವಿನಿಂದ ಸಾಮಾಜಿಕ ನ್ಯಾಯ ಕೇಳಿ ನಡೆದ ಜನಾಂದೋಲನದ ಕಥೆ ಇದು. ಇತಿಹಾಸಕಾರರ ಅವಜ್ಞೆಗೆ ಒಳಗಾದ ಈ ಹೋರಾಟದ ಕಥೆಯನ್ನು ಅಕ್ಷರರೂಪಕ್ಕಿಳಿಸಿ ಪ್ರಕಟಿಸಿದ ಶ್ರೇಯಸ್ಸು ವಿಷ್ಣು ನಾಯ್ಕರಿಗೆ ಸಲುತ್ತದೆ. 'ನೇಗಿಲು ಹಿಡಿದವನಿಗೆ ನೆಲದ ಒಡೆತನವಿರಬೇಕು' ಎಂಬ ಉದ್ದೇಶದಿಂದ ಸಂಘಟಿಸಿದ ಈ ಜನಾಂದೋಲನದ ಪ್ರಧಾನ ಕಾಳಜಿ ಆದಿವಾಸಿಗಳೆಂದು ಭಾವಿಸಲಾದ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿಗಳು, ನಾಮಧಾರಿಗಳು, ಕೋಮಾರಪಂಥರು, ಪಡ್ತಿ ನಾಡವ ಮುಂತಾದ ಶ್ರಮಜೀವಿ ವರ್ಗಗಳ ಗುಲಾಮಿ ಸದೃಶ ಯಾತನೆಯ ಬಾಳಿಗೆ ನೆಮ್ಮದಿಯ ದಾರಿ ಕಾಣಿಸುವುದೇ ಆಗಿತ್ತು ಎಂಬ ಅಭಿಪ್ರಾಯವನ್ನು ವಿಷ್ಣು ನಾಯ್ಕರು ವ್ಯಕ್ತಪಡಿಸಿದ್ದಾರೆ. ದಿನಕರ ದೇಸಾಯಿಯವರ ನಾಯಕತ್ವದಲ್ಲಿ ರೂಪಗೊಂಡ ಗೇಣಿದಾರರ ಪರವಾದ ಈ ಹೋರಾಟ ಉತ್ತರ ಕನ್ನಡ ಜಿಲ್ಲೆಯ ರೈತವರ್ಗದಲ್ಲಿ ಹೆಚ್ಚು ಹಿಂದುಳಿದವರಾದ ಹಾಲಕ್ಕಿ ಒಕ್ಕಲಿಗರಿಗೆ ಒಂದು ವಿಧವಾದ ಐಡೆಂಟಿಟಿಯನ್ನು ದೊರಕಿಸಿಕೊಟ್ಟಿತು. ಉತ್ತರ ಕನ್ನಡ ಜಿಲ್ಲೆಯಾದ್ಯಂತ ವ್ಯಾಪಿಸಿದ ಈ ಹೋರಾಟ ರಾಜಕೀಯ ಪರಿವರ್ತನೆಗೂ ಕಾರಣವಾಯಿತೆಂಬುದನ್ನು ಲೇಖಕರು ಗಮನಿಸಿದ್ದಾರೆ. ಈ ಹೋರಾಟದಲ್ಲಿ ವಿಷ್ಣುನಾಯ್ಕರು ಸ್ವತಃ ಭಾಗವಹಿಸಿದ್ದರಿಂದ ಈ ಗ್ರಂಥಕ್ಕೆ ಹೆಚ್ಚು ಅಧಿಕೃತತೆ ದೊರೆತಿದೆ. ಒಟ್ಟಿನಲ್ಲಿ ಈ ಕೃತಿ ಚರಿತ್ರೆಯಲ್ಲಿ ದಾಖಲಾಗದ ಹೋರಾಟವೊಂದರ ನೈಜ ಚಿತ್ರಣವನ್ನು ನೀಡುತ್ತದೆ. ವಿಷ್ಣು ನಾಯ್ಕರ ಲವಲವಿಕೆಯ ಭಾಷೆ ಈ ಕೃತಿಯನ್ನು ಹೆಚ್ಚು ಆಪ್ತವನ್ನಾಗಿ ಮಾಡುತ್ತದೆ. ವಿಷ್ಣು ನಾಯ್ಕರು ಸಂಪಾದಿಸಿದ 'ಜಿನದೇವ ನಾಯಕ ಬದುಕು ಬರಹ' ಒಂದು ಅಪೂರ್ವ ಕೃತಿ. ಜಿನದೇವ ನಾಯಕ ಅಂಕೋಲೆಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ಶಾಶ್ವತವಾಗಿ ನೆನಪಿಟ್ಟುಕೊಳ್ಳಬಹುದಾದ ಹೆಸರು. ಅವರು ಬದುಕಿದ್ದು ಅಲ್ಲ ಕಾಲವಾದರೂ ಶಾಶ್ವತವಾಗಿ ನೆನಪಿಟ್ಟುಕೊಳ್ಳಬಹುದಾದ ಹೆಸರು. ಅವರು ಬದುಕಿದ್ದು ಅಲ್ಪ ಕಾಲವಾದರೂ ಸಾರ್ಥಕವಾಗಿ ಬದುಕಿದವರು. ಅವರ ಸ್ಮರಣೆಯಲ್ಲಿ ಹೊರತಂದ ಈ ಸಂಸ್ಮರಣ ಗ್ರಂಥದಲ್ಲಿ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ಜಿನದೇವ ನಾಯಕರನ್ನು ಕುರಿತು ಅವರ ಆತ್ಮೀಯರು ಬರೆದ ಲೇಖನಗಳಿವೆ. ಈ ಎಲ್ಲ ಲೇಖನಗಳು ಜಿನದೇವನಾಯಕರ ಸಮಗ್ರ ವ್ಯಕ್ತಿತ್ವವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗುತ್ತವೆ. ಸ್ವತಃ ಕವಿಯಾಗಿದ್ದ ಜಿನದೇವ ನಾಯಕರ ವಿಮರ್ಶಾಲೇಖನಗಳು ಈ ಸಂಕಲನದ ಎರಡನೇ ಭಾಗದಲ್ಲಿವೆ. ಹೊಸ ರೀತಿಯಲ್ಲಿ ಯೋಚನೆ ಮಾಡುವ ಚಿಂತಕ ಅವರಲ್ಲಿದ್ದ ಎಂಬುದನ್ನು ಇಲ್ಲಿನ ವಿಮರ್ಶಾಲೇಖನಗಳ ಮೂಲಕ ಅರ್ಥ ಮಾಡಿಕೊಳ್ಳಬಹುದು. ಇಂದು ವಿಮರ್ಶಾಕ್ಷೇತ್ರದಲ್ಲಿ

ಪ್ರಮುಖವಾಗಿ ಚರ್ಚಿಸುವ ಸಾಂಸ್ಕೃತಿಕ ಅಂಶಗಳನ್ನು ಬಹು ಹಿಂದೆಯೇ ಗುರುತಿಸಿದ ಚಿಕಿತ್ಸಕ ದೃಷ್ಟಿಕೋನ ಅವರದಾಗಿತ್ತು ನೇರ ನಿರ್ದಿಷ್ಟ ಬರವಣಿಗೆಯ ವಿಧಾನ ಜಿನದೇವ ನಾಯಕರದಾಗಿತ್ತು. ಅವರ ಅಗಲಿಕೆಯಿಂದ ಕನ್ನಡ ವಿಮರ್ಶಾಕ್ಷೇತ್ರಕ್ಕೆ ತುಂಬಲಾರದ ಹಾನಿಯಾಗಿದೆ ಎಂದರೆ ತಪ್ಪಾಗಲಾರದು. ನಾಯಕರಾಗಿ ನಾಯಕರ ಕುರಿತು ಇಂತಹ ಅಪೂರ್ವ ಗ್ರಂಥವನ್ನು ಸಂಪಾದಿಸಿದ ವಿಷ್ಣು ನಾಯ್ಕರು ಅಭಿನಂದನಾರ್ಹರು. 'ಪ್ರವೇಶ', 'ವರ್ತಮಾನದ ಕಣ್ಣು', 'ಮರ್ಯಾದೆ', 'ಅರೆಖಾಸಗಿ-೧', 'ಅರೆಖಾಸಗಿ-೨, 'ಕಾಲೋಚಿತ', 'ದಿನಕರ ದೇಸಾಯಿ', 'ಸರ್ವಪಲ್ಲಿ ರಾಧಾಕೃಷ್ಣನ್,' 'ಹಳ್ಳಿಹಾಡಿನ ಕಣಜ ನಾಡೋಜ ಸುಕ್ರಿ', 'ಪರಿಮಳ', 'ಉತ್ತರ ಕನ್ನಡ : ಮೆಲಕು – ಮುನ್ನೋಟ' ಇವು ಹೆಸರಿಸ ಬೇಕಾದ ವಿಷ್ಣು ನಾಯ್ಕರ ಮತ್ತೆ ಕೆಲವು ಪುಸ್ತಕಗಳು.

ಹಾಸ್ಯ ಲೇಖಕರಾಗಿ ಚಿರಪರಿಚಿತರಾದ ಪ್ರೊ.ವಿ.ಎ.ಜೋಶಿಯವರು ಲಲಿತ ಪ್ರಬಂಧಗಳ ಜೊತೆಯಲ್ಲಿ ಹಲವು ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. 'ಮದರ ತೆರೆಸಾ', 'ಬಾಬಾ ಆಮ್ಟೆ', 'ಮಹಾತ್ಮಾ ಗಾಂಧೀಜಿ, 'ಗೋಪಾಲಕೃಷ್ಣ ಗೋಖಲೆ' ಮುಂತಾದವರ ಕುರಿತು ಅವರು ರಚಿಸಿರುವ ಕೃತಿಗಳು ಗಮನ ಸೆಳೆಯುತ್ತವೆ. ಅತ್ಯುತ್ತಮವಾಗಿ ಸಾಹಿತ್ಯ ಚರಿತ್ರೆಯನ್ನು ಬೋಧಿಸುತ್ತಿದ್ದ ಜೋಶಿಯವರು ತಾವೊಬ್ಬ ಉತ್ತಮ ಚರಿತ್ರಾಕಾರರೂ ಎಂಬುದನ್ನು ಈ ಕೃತಿಗಳ ಮೂಲಕ ತೋರಿಸಿಕೊಟ್ಟಿದಾರೆ. ನಿರಾಡಂಬರವಾದ ಭಾಷೆ ಜೋಷಿಯವರ ಬರಹದ ಶಕ್ತಿಯೂ ಆಗಿದೆ.

ಸ್ವಾತಂತ್ರ ಹೋರಾಟಗಾರರಾದ ದಯಾನಂದ ಪ್ರಭು ರಚಿಸಿರುವ 'ಭೂಗತನ ನೆನಪುಗಳು' ಒಂದು ಗಮನಾರ್ಹ ಕೃತಿ. ಆಕಸ್ಮಿಕವಾಗಿ ಸ್ವಾತಂತ್ರ ಹೋರಾಟದಲ್ಲಿ ಧುಮುಕಿದ ದಯಾನಂದ ಪ್ರಭು ತಾವು ಅನುಭವಿಸಿದ ದುಃಖ –ದುಮ್ಮಾನಗಳನ್ನು ಮನಮುಟ್ಟುವಂತೆ ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಸ್ವಾತಂತ್ರ ಹೋರಾಟದಲ್ಲಿ ಭಾಗಿಯಾದ ಸಮಕಾಲೀನರ ನೆನಪುಗಳನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ. ಆಡುಮಾತಿನ ಶೈಲಿಯಲ್ಲಿ ಇರುವ ಈ ಕೃತಿ ಸ್ವಾತಂತ್ರ್ಯ ಚಳುವಳಿಯ ನೆನಪನ್ನು ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ.

ತಮ್ಮ ವೃತ್ತಿ ಬದುಕಿನ ಬಹುಪಾಲು ದಿನಗಳನ್ನು ಅಂಕೋಲೆಯಲ್ಲಿ ಕಳೆದ ಡಾ. ಶ್ರೀಪಾದ ಶೆಟ್ಟಿ, ಕವಿಯಾಗಿ ಹೆಸರು ಮಾಡಿದವರು. ಅವರ ಸಂಶೋಧನಾ ಮಹಾಪ್ರಬಂಧ "ದಿನಕರ ದೇಸಾಯಿ ಬದುಕು ಬರಹ" ದಿನಕರ ದೇಸಾಯಿಯುವ ವ್ಯಕ್ತಿತ್ವದ ಹಲವು ಆಯಾಮಗಳನ್ನು ಡಾ॥ ಶೆಟ್ಟಿಯುವರು ಈ ಮಹಾಪ್ರಬಂಧದಲ್ಲಿ ಗುರುತಿಸಿದ್ದಾರೆ. ವ್ಯಾಪಕವಾದ ಕ್ಷೇತ್ರಕಾರ್ಯ,ದಿನಕರರನ್ನು ಹತ್ತಿರದಿಂದ ಬಲ್ಲವರನ್ನು ಸಂದರ್ಶಿಸಿ, ದಿನಕರರ ಬರಹಗಳ ಮೂಲಕ ಅವರ ವ್ಯಕ್ತಿತ್ವ ಧೋರಣೆಯನ್ನು ವಿಶಿಷ್ಟ ನೆಲೆಯಲ್ಲಿ ಗ್ರಹಿಸಿರುವುದು ಈ ವಿಶೇಷತೆ. ದಿನಕರರ ಬರಹದ ಪ್ರಮುಖ ಮಾಧ್ಯಮವಾದ ಚುಟುಕುಗಳ ಆರೋಗ್ಯಪೂರ್ಣ ಅಭ್ಯಾಸ ಈ ಕೃತಿಯಲ್ಲಿದೆ.

ಡಾ॥ ರಾಮಕೃಷ್ಣ ಗುಂದಿಯವರು ಕನ್ನಡದ ಉತ್ತಮ ಕಥೆಗಾರರು. ಅತ್ಯುತ್ತಮ ಯಕ್ಷಗಾನ ಕಲಾವಿದರಾದ ಅವರು ಯಕ್ಷಗಾನ ಪ್ರಸಂಗಗಳನ್ನೂ ರಚಿಸಿದ್ದಾರೆ. ಸಾಂಸ್ಕೃತಿಕ ಅಧ್ಯಯನ ಕ್ಷೇತ್ರದಲ್ಲಿ ಅವರ ಕಾರ್ಯ ಗಮನಾರ್ಹವಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಮಾಲೆಯಲ್ಲಿ ಪ್ರಕಟಿಸಿದ "ಆಗೇರ ಸಂಸ್ಕೃತಿ" ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಒಂದು ಮಹತ್ವಪೂರ್ಣ ಕೃತಿಯಾಗಿದೆ. "ಆಗೇರರು : ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನಾ ಮಹಾ ಪ್ರಬಂಧವು ಈ ಭಾಗದ ದಲಿತ ಜನಾಂಗವಾದ ಆಗೇರರ ಬದುಕಿನ ಸಮಗ್ರ ಚಿತ್ರಣವನ್ನು ನೀಡುತ್ತದೆ. ಆಗೇರರ ಸಾಮಾಜಿಕ ಸ್ಥಾನಮಾನ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳನ್ನು ಸಮೀಕ್ಷಿಸಿರುವ ಈ ಸಮಾಜದ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುತ್ತಾರೆ. ಆಗೇರರ ಜೀವನಮಟ್ಟ ಸುಧಾರಣೆಗೆ ಅತ್ಯಗತ್ಯವಾದ ಅನೇಕ ಸೂಚನೆಗಳನ್ನು ಅವರು ಇಲ್ಲಿ ನೀಡಿದ್ದಾರೆ. ಹೀಗಾಗಿ ಈ ಕೃತಿ ಸಮಾಜೋ ಸಾಂಸ್ಕೃತಿಕ ಅಧ್ಯಯನದಲ್ಲಿ ಮಾದರಿ ಕೃತಿ ಎನ್ನಿಸುತ್ತದೆ. "ಪ್ರಾಂಜಲ" ಡಾ. ರಾಮಕೃಷ್ಣ ಗುಂದಿಯವರ ಇನ್ನೊಂದು ಕೃತಿ.ಇದು ಹಲವು ಪುಸ್ತಕಗಳ ಅವಲೋಕನವನ್ನು ಒಳಗೊಂಡಿದೆ.ವಿಮರ್ಶೆಯ ಮಾನದಂಡಗಳನ್ನು ಒಳಗೊಂಡಿರದ ಇಲ್ಲಿನ ಲೇಖನಗಳು ಲೇಖಕರ ಬೆನ್ನು ತಟ್ಟುವ ಪ್ರೋತ್ಸಾಹಕ ಗುಣವನ್ನು ಹೊಂದಿವೆ. "ಕೇರಿ ಕೊಪ್ಪಗಳ ನಡುವೆ" ರಾಮಕೃಷ್ಣ ಗುಂದಿಯವರ ಆತ್ಮಕಥನವಾಗಿದ್ದು ಬದುಕಿನಲ್ಲಿ ತಾವು ಎದುರಿಸಿದ ನೋವು ಅವಮಾನಗಳನ್ನು ವಿವರಿಸುವುದರ ಜೊತೆಯಲ್ಲಿಯೇ ಬದುಕನ್ನು ಸಹ್ಯವಾಗಿಸಿದ ವಿವರಗಳನ್ನು ನೀಡುತ್ತಾರೆ.ಸಾಧನೆಯ ದಾರಿಯಲ್ಲಿ ಮಾಡಿದ ಹೋರಾಟದ ಚಿತ್ರವೂ ಇಲ್ಲಿದೆ.

ಮೂಲತಃ ವಿಜ್ಞಾನದ ಪ್ರಾಧ್ಯಾಪಕರಾದ ಮೋಹನ ಹಬ್ಬು ಸಾಂಸ್ಕೃತಿಕ ಪ್ರಜ್ಞೆಯನ್ನು ಇಟ್ಟುಕೊಂಡ ಸಂವೇದನಾಶೀಲರು.ಅವರೊಳಗೊಬ್ಬ ಲೇಖಕ ಹುದುಗಿಕೊಂಡಿದ್ದು ಆಗಾಗ ಪ್ರಕಟವಾಗುತ್ತ ಅಚ್ಚರಿ ಮೂಡಿಸುತ್ತಾರೆ. ನಿವೃತ್ತಿಯ ನಂತರ ಅವರು ಅತ್ಯುತ್ತಮ ಕತೆಗಾರರಾಗಿ ಗುರುತಿಸಿಕೊಂಡರು. ಅವರು ಉತ್ತಮ ಅನವಾದಕರೂ ಹೌದು.ಮರಾಠಿ ಕವಯತ್ರಿ ನೀತಾ ತೋರಣೆಯವರ ಕವಿತೆಗಳನ್ನು ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ವಿಜ್ಞಾನ ಲೇಖಕರಾಗಿ 'ಬೆಳಕು: ವೈಜ್ಞಾನಿಕ ವಿವೇಚನೆ' ಎಂಬ ಕಿರು ಪುಸ್ತಕದಲ್ಲಿ ಬೆಳಕಿನ ಸಂಕೀರ್ಣ ಸ್ವಭಾವ–ಗುಣಧರ್ಮಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಪರಿಚಯಿಸಿದ್ದಾರೆ. ವಿಜ್ಞಾನದ ಸಂಕಥನಗಳು ಇನ್ನೊಂದು ವೈಜ್ಞಾನಿಕ ಪ್ರಬಂಧಗಳ ಸಂಕಲನವಾಗಿದ್ದು, ಹದಿಮೂರು ಲೇಖನಗಳನ್ನು ಒಳಗೊಂಡಿದೆ. ಜನಸಾಮಾನ್ಯರಿಗೆ ಕಬ್ಬಿಣದ ಕಡಲೆಯಂತಿರುವ ವಿಜ್ಞಾನದ ಸಂಗತಿಗಳನ್ನು ಸರಳವಾಗಿ ನಿರೂಪಿಸುವ ಪ್ರಯತ್ನದಲ್ಲಿ ಅವರು ಯಶಸ್ವಿಯಾಗಿದ್ದಾರೆ. 'ಮುಸ್ಸಂಜೆಯ ಆಲಾಪ' ಮೋಹನ ಹಬ್ಬು ಅವರ ಆತ್ಮಕತೆಯಾಗಿದ್ದು,ಅಲ್ಲಿನ ದಾರುಣತೆ ಮನಕಲಕುತ್ತದೆ. ಸಾಮಾನ್ಯನೊಬ್ಬ ಬದುಕಿನ ದಾರಿಯಲ್ಲಿ ಎದುರಿಸಿದ ಸಂಕಷ್ಟಗಳ ಚಿತ್ರಣ ತಲ್ಲಣವನ್ನುಂಟು ಮಾಡುತ್ತದೆ.

ಮೂಲತಃ ಶಿಕ್ಷಕರಾದ ಹೊನ್ನಪ್ಪ ನಾಯಕರವರು 'ಶಿಕ್ಷಣ ಹಾಗೂ ಶಿಕ್ಷಕ' ಕಿರುಕೃತಿಯನ್ನು ಪ್ರಕಟಿಸಿದ್ದಾರೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರಕ್ಕೆ ಅನುಗುಣವಾದ ಶಿಕ್ಷಣ ನೀಡುವುದರ ಮೂಲಕ ಮಗುವಿನ ಸುಪ್ತ ಚೈತನ್ಯವನ್ನು ಜಾಗೃತಗೊಳಿಸಬೇಕು ಎಂಬ ಹಂಬಲ ಈ ಕೃತಿಯ ಹಿನ್ನಲೆಯಲ್ಲಿದೆ.

ರಮಣದಾಸ ಎಂಬ ಹೆಸರಿನಲ್ಲಿ 'ಆಧ್ಯಾತ್ಮಿಕ ದಾರಿಯಲ್ಲಿ ನನ್ನ ಅನುಭವ ಕಥನ' ಎಂಬ ಕೃತಿಯೊಂದನ್ನು ರಚಿಸಿರುವ ಕೆ.ಟಿ.ನಾಯಕರು ತಮ್ಮ ಆಧ್ಯಾತ್ಮಿಕ ಜೀವನದ ಅನುಭವಗಳನ್ನು ಅಭಿವ್ಯಕ್ತಿಸಿದ್ದಾರೆ. ತಮಗಾದ ಅಲೌಕಿಕ ಅನುಭವಗಳನ್ನು ಇಲ್ಲಿ ನಿರೂಪಿಸಿದ್ದಾರೆ. ಅವರ ಅಭಿಪ್ರಾಯಗಳನ್ನು ನಂಬುವವರು ನಂಬಬಹುದು, ನಂಬದೆಯೇ ಇರಬಹುದು. ಆದರೆ ಕೃತಿ ಮಾತ್ರ ಗಮನ ಸೆಳೆಯುತ್ತದೆ.

ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಸದುದ್ದೇಶದಿಂದ ಸ್ವತಃ ಶಿಕ್ಷಕರಾದ ವಿಠ್ಠಲ ಗಾಂವಕರರವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ತತ್ಸಮ ತದ್ಭವ,ಪರಿಸರ ಪ್ರಬಂಧಗಳು, ಗಾದೆಗಳ ಗುಡಿ, ಪ್ರಬಂಧ ಮತ್ತು ಭಾಷಣ ಕಲೆ, ಜ್ಞಾನ ಬಿಂದುಗಳ ಸಿಂಧು, ಕನ್ನಡ ಛಂದಸ್ಸು ಹಾಗೂ ಅಲಂಕಾರ, ಹತ್ತು ಪ್ರಬಂಧಗಳು, ಪ್ರತ್ಯರ್ಥ ಪದ ಪ್ರಯೋಗ, ಶಾಲಾ ಶಿಕ್ಷಣ ಮತ್ತು ಜೀವನ ಮೌಲ್ಯಗಳು, ಗಾಂಧೀಜಿ ನಡೆದ ಸಪ್ತಪದಿ, ಮೂರು ದಶಕಗಳ ಬೆಳ್ಳಿರೇಖೆ. ಬಾಂಧವ್ಯದ ಹೊತ್ತಗೆ, ಗಾದೆಗಳ ಲೋಕ, ವೃತ್ತಿ ಜೀವನದ ಹೆಜ್ಜೆಗಳು, ನುಡಿಗಟ್ಟು–ನುಡಿಗುಟ್ಟು, ಚಂದದ ಚೌಕದ ಹಳ್ಳಿ ಮತ್ತು ಬೊಮ್ಮಯ್ಯ ದೇವರು, ಬದುಕಿಗಾಗಿ ಸಾಹಿತ್ಯ ಪ್ರಬಂಧ ಕುಸುಮ, ಮಕ್ಕಳಿಗೆ ಬದುಕು ಕಲಿಸಿ ನಮ್ಮ ದಿನಕರ ದೇಸಾಯಿ– ಈ ಮುಂತಾದ ಕೃತಿಗಳು ಪ್ರೌಢಶಾಲಾ ವಿದ್ಯಾರ್ಥಿಗಳು ಮತ್ತು ಭಾಷಾಭ್ಯಾಸಿಗಳಿಗೆ ಭಾಷೆಯ ಕುರಿತು ತಿಳುವಳಿಕೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತವೆ.

ಭಟ್ಕಳದಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊ. ಆರ್.ಎಸ್. ನಾಯಕ ಅವರು ತಮ್ಮ ವಿಮರ್ಶೆಗಳಿಂದ ಗಮನ ಸೆಳೆಯುತ್ತಿದ್ದಾರೆ. ಕುವೆಂಪು ವಿರಚಿತ ಶ್ಮಶಾನ ಕುರುಕ್ಷೇತ್ರ– ಒಂದು ಅಧ್ಯಯನ, ನೀಲಾಂಜನ,ಸಾಹಿತ್ಯ ರಸದೀವಿಗೆ, ಉದಾತ್ತ ನಾರಾಯಣ ಮತ್ತು ಇತರ ಲೇಖನಗಳು, ಶಬ್ದಮಣಿದರ್ಪಣ ಸಂಗ್ರಹ ಮತ್ತು ವಿವರಣೆ ಎಂಬ ಕೃತಿಗಳು ಅವರಲ್ಲಿನ ವಿಮರ್ಶನ ಪ್ರಜ್ಞೆಯನ್ನು ದಾಖಲು ಮಾಡುತ್ತವೆ.

ಶ್ರೀದೇವಿ ಕೆರೆಮನೆ ಸಮಕಾಲೀನ ಸಾಹಿತ್ಯದ ಸಂದರ್ಭದಲ್ಲಿ ಕವಿಯಾಗಿ ಹೆಸರು ಮಾಡಿದವರು. ಆದರೆ ಅವರ ಬರವಣಿಗೆ ಕೇವಲ ಕಾವ್ಯಕ್ಕೆ ಸೀಮಿತವಾಗದೇ ಹಲವು ಪ್ರಕಾರಗಳಿಗೆ ವ್ಯಾಪಿಸಿಕೊಂಡಿದೆ. ಅವರ ಬರವಣಿಗೆ ಮತ್ತು ಓದಿನ ವ್ಯಾಪ್ತಿ ನಿಜಕ್ಕೂ ಬೆರಗು ಮೂಡಿಸುತ್ತದೆ. ಅಂಕಣ ಬರಹದಲ್ಲಿಯೂ ಅವರು ಸಿದ್ಧಹಸ್ತರು. ಈಗಾಗಲೇ ಪ್ರಕಟಗೊಂಡಿರುವ ಇಪ್ಪತ್ತು ಪುಸ್ತಕಗಳಲ್ಲಿ ಕಾವ್ಯ, ಗಜಲ್, ಕಥಾ ಸಂಕಲನಗಳಲ್ಲದೇ ಪ್ರಬಂಧ ಮತ್ತು ವಿಮರ್ಶಾ ಸಂಕಲನಗಳೂ ಇವೆ.ಪ್ರೀತಿ ಎಂದರೆ ಇದೇನಾ, ಹೆಣ್ತನದ ಆಚೆ ಈಚೆ, ಉರಿವ ಉಡಿ, ಮನದಾಳದ ಮಾತು, ವರ್ತಮಾನದ ಉಯ್ಯಾಲೆ, ಗೂಡು ಕಟ್ಟುವ ಸಂಭ್ರಮದಲ್ಲಿ, ಕಡಲು ಕಾನನಗಳ ನಡುವೆ ಎಂಬ ಸಂಕಲನಗಳ ಪ್ರಬಂಧಗಳು ತಮ್ಮ ಸಾಮಾಜಿಕ, ವೈಚಾರಿಕ, ಶೈಕ್ಷಣಿಕ, ಪರಿಸರ ಪ್ರಜ್ಞೆಗಳೊಂದಿಗೆ ಗಮನ ಸೆಳೆಯುತ್ತವೆ. ಅಂಗೈಯೊಳಗಿನ ಬೆಳಕು ಎಂಬ ವಿಮರ್ಶಾ ಸಂಕಲನ ಅವರ ವಿಶಿಷ್ಟ ವಿಮರ್ಶನಾ ಪ್ರಜ್ಞೆಯನ್ನು

ಅನಾವರಣಗೊಳಿಸಿದರೆ ಎಲ್ಲೆಗಳ ಮೀರಿ ಎಂಬ ಅನುವಾದ ಕೃತಿ ಅವರ ಅನುವಾದ ಕೌಶಲ್ಯವನ್ನು ಪ್ರಕಟಿಸುತ್ತದೆ.

ಅಕ್ಷತಾ ಕೃಷ್ಣಮೂರ್ತಿ ಅಂಕೋಲೆಯ ಇನ್ನೊಬ್ಬ ಮಹತ್ವದ ಲೇಖಕಿ. ಸೃಜನಶೀಲ ಬರವಣಿಗೆಯ ಜೊತೆಯಲ್ಲಿಯೇ ಸೃಜನೇತರ ಸಾಹಿತ್ಯದಲ್ಲಿಯೂ ತಮ್ಮ ಹೆಜ್ಜೆಗುರುತು ಮೂಡಿಸಿದ್ದಾರೆ. ಹಾಲಕ್ಕಿ ಒಕ್ಕಲಿಗರು ಎಂಬ ಕೃತಿ ಜನಾಂಗಿಕ ಅಧ್ಯಯನವಾದರೆ ಹಾಲಕ್ಕಿ ಹಾಡು ಕೋಗಿಲೆ ಸುಕ್ರಿ ಗೌಡ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ರಚನೆಯಾದ ಕೃತಿ. ಹಾಡಿನ ಕಣಜ ಸುಕ್ರಿ ಬೊಮ್ಮಗೌಡ ಎಂಬುದು ಜೀವನ ಚರಿತ್ರೆಯಾದರೆ, ಹಾಲಕ್ಕಿ ಕೋಗಿಲೆ ಸಂಪಾದಿತ ಕೃತಿ. ಮಧುರಚೆನ್ನ ಜೀವನ ಪರಿಚಯವಾದರೆ ಕೇದಿಗೆಯ ಕಂಪು ಡಾ. ಎನ್. ಆರ್. ನಾಯಕರ ಕಾವ್ಯಾವಲೋಕನವಾಗಿದೆ. ತುಷಾರ ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾದ ಅಂಕಣ ಬರಹಗಳ ಸಂಕಲನ ಇಸ್ಕೂಲು ಅವರಿಗೆ ರಾಜ್ಯವ್ಯಾಪಿ ಪ್ರಸಿದ್ಧಿಯನ್ನು ದೊರಕಿಸಿತು.

ದಾಂಡೇಲಿಯಲ್ಲಿರುವ ನಾಗರೇಖಾ ಗಾಂವಕರ ಮೂಲತಃ ಅಂಕೋಲೆಯವರು. ಇಂಗ್ಲೀಷ್ ಸಾಹಿತ್ಯದ ಗಂಭೀರ ಅಭ್ಯಾಸಿಯಾಗಿರುವ ಅವರು ತಮ್ಮ ಚಿಂತನಶೀಲ ಲೇಖನಗಳಿಂದ ಗಮನಸೆಳೆಯುತ್ತಾರೆ. ಪಾಶ್ಚಿಮಾತ್ಯ ಸಾಹಿತ್ಯ ಲೋಕ, ಆಂಗ್ಲ ಸಾಹಿತ್ಯ ಲೋಕ ಕೃತಿಗಳು ಆಂಗ್ಲ ಸಾಹಿತ್ಯದ ಅವಲೋಕನಗಳಾದರೆ ಸ್ತ್ರೀ ಸಮಾನತೆಯ ಸಂಧಿ ಕಾಲದಲ್ಲಿ ಅಂಕಣ ಬರಹಗಳ ಸಂಕಲನವಾಗಿದೆ. ಕವಾಟ ಪುಸ್ತಕ ಪರಿಚಯಗಳನ್ನು ಒಳಗೊಂಡರೆ ಬಣ್ಣದ ಕೊಡೆ ಲಲಿತ ಪ್ರಬಂಧ ಸಂಕಲನ. ದಿ ಡೈರಿ ಆಫ್ ಯಂಗ್ ಗರ್ಲ್ ಎಂಬ ಬಹು ಚರ್ಚಿತ ಕೃತಿಯನ್ನು ಅನುವಾದಿಸಿರುವ ಅವರು ಕನ್ನಡ ಪ್ರಜ್ಞೆಯ ಸುತ್ತಮುತ್ತ ಎಂಬ ಕೃತಿಯನ್ನು ಸಂಪಾದಿಸಿದ್ದಾರೆ.

ಹಿಚ್ಕಡದ ಪ್ರವೀಣ ನಾಯಕರು ತಮ್ಮ ವೈಚಾರಿಕ ಲೇಖನಗಳ ಕಾರಣಕ್ಕೆ ಗಮನಾರ್ಹರಾಗುತ್ತಾರೆ. ಕತ್ತಲೆಯ ಗೌರವಿಸಿ ಮತ್ತು ಈ ಸಮಯ ಕಳೆದು ಹೋಗುತ್ತದೆ ಎಂಬುದು ಅವರ ವೈಚಾರಿಕ ಲೇಖನಗಳ ಸಂಕಲನಗಳಾದರೆ ಅವ್ವನೆಂಬ ಹೊಂಗೆಯ ನೆರಳು ಸಂಪಾದಿತ ಕೃತಿಯಾಗಿದೆ.

ಹಾಗೆ ನೋಡಿದರೆ ಅಂಕೋಲೆಯಲ್ಲಿ ಐತಿಹಾಸಿಕ ಸಂಶೋಧನೆ ನಡೆದಿದ್ದು ಕಡಿಮೆ. ಈ ಕೊರತೆಯನ್ನು ನೀಗಿಸಿದವರು ಶ್ಯಾಮಸುಂದರ ಗೌಡ. ಅಪಾರ ಶ್ರಮ ಮತ್ತು ತಾಳ್ಮೆ ಬಯಸುವ ಸಂಶೋಧನಾ ಕ್ಷೇತ್ರವನ್ನು ಪ್ರಜ್ಞಾಪೂರ್ವಕವಾಗಿ ಆಯ್ದುಕೊಂಡ ಅವರು ಖಚಿತ ಆಧಾರವನ್ನು ಇಟ್ಟುಕೊಂಡೇ ತಮ್ಮ ಸಮೀಕರಣವನ್ನು ಮಂಡಿಸುತ್ತಾರೆ. ಶಾಸನಗಳ ಅನ್ವೇಷಣೆ, ವಿಶ್ಲೇಷಣೆ ಮತ್ತು ಮಂಡನೆಯಲ್ಲಿ ಸಧ್ಯ ಉತ್ತರ ಕನ್ನಡ ಜಿಲ್ಲೆಯ ಮಟ್ಟಿಗೆ ಅವರು ಅದ್ವಿತೀಯರು. ಈಗಾಗಲೇ ಅವರು ಇಮ್ಮಡಿ ತೈಲಪನ ಕುಂಬಾರಕೇರಿ ತಾಮ್ರ ಶಾಸನಗಳು, ನಾಗವರ್ಮರಸನ ರಣಗಂಬಗಳು, ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯ನೇ ಶತಮಾನದಲ್ಲಿ ನಡೆದ ಬ್ರಿಟಿಷ್ ವಿರೋಧಿ ಹೋರಾಟಗಳು, ಅಂಕೋಲಾ ತಾಲೂಕಿನಲ್ಲಿರುವ ವಿಜಯನಗರದ ಶಾಸನಗಳು, ಚೆನ್ನಭೈರಾ ದೇವಿಯರ ಶಾಸನಗಳು, ಬನವಾಸಿ ಕದಂಬರು ಮತ್ತು ಅವರ ಶಾಸನಗಳು ಎಂಬ ಕಿರು ಕೈಪಿಡಿಗಳನ್ನು ಪ್ರಕಟಿಸಿದ್ದಾರೆ.

"ಉತ್ತರ ಕನ್ನಡ ಜಿಲ್ಲೆಯ ಶಾಸನಗಳು" ಎಂಬ ಬೃಹತ್ ಗ್ರಂಥ ಮತ್ತು "ಅಂಕೋಲಾ ತಾಲೂಕಿನ ಶಾಸನೋಕ್ತ ಇತಿಹಾಸ" ಎಂಬ ಪುಸ್ತಕ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಣೆಗೆ ಸಿದ್ಧವಾಗಿವೆ. ಉತ್ತರ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ೮೬ ಸಂಶೋಧನಾ ಪ್ರಬಂಧಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು, ಜಿಲ್ಲೆಯ ಚರಿತ್ರೆಯ ಪುನರ್‌ವ್ಯಾಖ್ಯಾನಕ್ಕೆ ಕಾರಣವಾಗಿವೆ.

ವಿಘ್ನೇಶ್ವರ ಎನ್. ಗುನಗಾ ಅವರ ಭೂಮ್ತಾಯಿ ಇತ್ತೀಚಿನ ದಿನಗಳಲ್ಲಿ ಅಂಕೋಲೆಯ ಪರಿಸರದಲ್ಲಿ ಹೆಚ್ಚು ಚರ್ಚೆಯನ್ನು ಹುಟ್ಟುಹಾಕಿದ ಸಂಶೋಧನಾ ಕೃತಿ. ಜಾನಪದ ದೇವರುಗಳು ಪುರಾಣದ ದೇವರುಗಳಾಗಿ ಪರಿವರ್ತನೆ ಹೊಂದುತ್ತಿರುವ ಸಂದರ್ಭದತ್ತ ಅವರು ಗಮನ ಸೆಳೆಯುತ್ತಿದ್ದಾರೆ. ಭೂಮ್ತಾಯಿಯ ಆರಾಧನೆ ಪದ್ಧತಿ ಮತ್ತು ಆಚರಣೆಗಳನ್ನು ಬಳಸಿಕೊಂಡು ವಿಶ್ಲೇಷಣೆ ಇರುವದು ಗಮನಾರ್ಹ. ಶಿಷ್ಟ ಮತ್ತು ಜಾನಪದ ಆಧಾರಗಳ ಹಿನ್ನಲೆಯಲ್ಲಿ ಅಧ್ಯಯನ ನಡೆಸಿರುವದು ಈ ಕೃತಿಯ ವಿಶೇಷ.

ಸಗುಣ ಶಂಕರ ಹಬ್ಬು ಅವರ 'ಅನಾಮಿಕನ ಉಲುಹು', ನಾಗೇಂದ್ರ ನಾಯಕ ತೊರ್ಕೆಯವರ 'ಮಂಚಾಲೆ ರಾಗಪ್ಪ', 'ನಾಡವರು', ಶ್ರೀಮತಿ ಲತಾ ಆರ್. ನಾಯಕರ 'ಮಹಾಮಹಿಮ ವೆಂಕಟರಮಣ', ಡಾ॥ ಶಿವಾನಂದ ನಾಯಕರವರ 'ಆಧುನಿಕ ಶಿಕ್ಷಣದ

ಆಯಾಮಗಳು', ಬಾಸಗೋಡ ರಾಮಮೂರ್ತಿ ನಾಯಕರ 'ಊರು ಸೂರಿನೊಳಗೆಲ್ಲ', ಡಾ. ಪ್ರಕಾಶ ಬಿ. ನಾಯಕರ' ಜಾನಪದ ಜಂಗಮ ಡಾ.ಎಸ್. ಕೆ. ಕರೀಂಖಾನ್, 'ಡಾ.ಪುಷ್ಪಾ ನಾಯ್ಕರ ಬಬ್ರುವಾಡದ ಬಬ್ರುದೇವ, ನಾಗರಾಜ ನಾಯ್ಕ, ತೆಂಕಣಕೇರಿ ಅವರ 'ತೆಂಕಣ ದರ್ಶನ' ಮತ್ತು 'ಬೆಳಂಬರದ ಬೆಳಕು', ನಾಗರಾಜ ವಿ ಗುನಗ, ಸೂರ್ವೆ ಅವರ 'ಆವಿಗೆ ಮನೆ', ಗೋಪಾಲಕೃಷ್ಣ ನಾಯಕ ಅವರ 'ವಾಸರ ಕುದ್ರಗಿ –ಸ್ಥಳ ಅಧ್ಯಯನ', ಆರ್.ವಿ.ನಾಯಕ, ಬೇಲೇಕೇರಿ ಅವರ 'ಪರಿಸರ ಮತ್ತು ನಾನು', ನಾಗರಾಜ ಮಂಜುಗುಣಿ ಅವರ 'ಮರು ಹುಟ್ಟು', ಜಿ.ಎಸ್. ನಾಯಕ ಅವರ 'ನಾಗವಲ್ಲಿ ಸಸ್ಯಲೋಕ' ಇವು ಉಲ್ಲೇಖಿಬೇಕಾದ ಇನ್ನು ಕೆಲವು ಕೃತಿಗಳು.

ಕವಯತ್ರಿ ರೇಣುಕಾ ರಮಾನಂದ ಅವಧಿ ಈ–ಪತ್ರಿಕೆಯಲ್ಲಿ ಬರೆದ ಅಂಕಣ ಬರಹಗಳು ಇನ್ನೂ ಪುಸ್ತಕ ರೂಪದಲ್ಲಿ ಪ್ರಕಟವಾಗಬೇಕಿದೆ.

ಸಿದ್ದಲಿಂಗಸ್ವಾಮಿ ವಸ್ತ್ರದ, ಜೆ.ಪ್ರೇಮಾನಂದ ಉಮೇಶ ನಾಯ್ಕ, ರಾಜೇಶ ನಾಯಕ ಸೂರ್ವೆ, ಮಹೇಶ ನಾಯಕ ಹಿಚ್ಕಡ,ರೂಪಾ ಭಟ್, ಮಹಾಂತೇಶ ರೇವಡಿ, ಉಲ್ಲಾಸ ಹುದ್ದಾರ, ನಿತಿನ್ ನಾಯ್ಕ, ಶ್ರೀನಿವಾಸ ನಾಯಕ ಹೀಗೆ ಸೃಜನೇತರ ಸಾಹಿತ್ಯದಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿರುವವರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಇತ್ತೀಚಿನ ದಿನಗಳಲ್ಲಿ ದೃಶ್ಯ ಮಾಧ್ಯಮಗಳು ಪ್ರಬಲವಾಗುತ್ತಿರುವುದರಿಂದ ನಮ್ಮ ಯುವ ಜನತೆ ಓದುವ ಬರೆಯುವ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಕಂಪ್ಯೂಟರ್, ಮೊಬೈಲ್‌ಗಳ ಪ್ರಪಂಚದಲ್ಲಿ ತಮ್ಮನ್ನು ತಾವೇ ಮರೆಯುತ್ತಿದ್ದಾರೆ. ಸಂವೇದನೆಗಳು ಅಭಿವ್ಯಕ್ತಗೊಳ್ಳದಿದ್ದರೆ ಮನುಷ್ಯ ಜಡವಾಗುತ್ತಾನೆ. ಪರಂಪರೆ– ಸಂಸ್ಕೃತಿ ನಶಿಸಲು ಪ್ರಾರಂಭವಾಗುತ್ತದೆ. ಆದ್ದರಿಂದ ಯುವ ಜನತೆ ತಂತ್ರಜ್ಞಾನದ ಮಾಯಾಜಾಲದಿಂದ ಹೊರಬಂದು ಮನಸ್ಸಿಗೆ ಮುದನೀಡುವ ಭಾವಾಭಿವ್ಯಕ್ತಿಯತ್ತ ಗಮನ ನೀಡುವ ಅಗತ್ಯತೆ ಇದೆ.

ಇದು ಅಂಕೋಲೆಯ ಸೃಜನೇತರ ಸಾಹಿತ್ಯ ಕೃತಿಗಳ ಅವಲೋಕನವಾಗಲೀ, ಸಮಗ್ರ ಸಮೀಕ್ಷೆಯಾಗಲಿ ಅಲ್ಲ. ಅವು ಯಾವುದೇ ನಿರ್ದಿಷ್ಟ ಕ್ರಮದಲ್ಲಿಯೂ ಇಲ್ಲ. ನನ್ನ ಅರಿವಿಗೆ ದಕ್ಕಿದ ವಿವರಗಳನ್ನು ದಾಖಲಿಸಬೇಕೆಂದು ಹಂಬಲ ಮಾತ್ರ ಇಲ್ಲಿದೆ. ಯಾರದಾದರೂ ಹೆಸರುಗಳು ಇಲ್ಲಿ ಬಿಟ್ಟು ಹೋಗಿದ್ದರೆ ಅದಕ್ಕೆ ನನ್ನ ಅವಜ್ಞತೆ ಕಾರಣವೇ ಹೊರತು ಉದ್ದೇಶಪೂರ್ವಕ ಅಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಹಾಗೆ ಹೆಸರು ತಪ್ಪಿದವರು ವಿವರಗಳನ್ನು ಕೊಟ್ಟರೆ ಲೇಖನವನ್ನು ಪರಿಷ್ಕರಿಸುವಾಗ ಸೇರಿಸುವ ವಾಗ್ದಾನ ನೀಡುತ್ತೇನೆ.

ಮಕ್ಕಳು ನಕ್ಕರು

ಅಂಗಳದಲ್ಲಿ ಕೇಳುತಲಿತ್ತು
ಆಡುವ ಮಕ್ಕಳ ಕೇಕೆ.
ಅನ್ನವು ಬೇಕೆ ? ಪಲ್ಲೆಯು ಬೇಕೆ ?
ಪಾಯಸ, ಹೋಳಿಗೆ ಬೇಕೆ ?

ಮಕ್ಕಳು ಮಣ್ಣಿನ ಅಡಿಗೆಯ ಆಟವ
ಆಡುತಲಿದ್ದರು ಅಲ್ಲಿ.
ಪಂಕ್ತಿಯು ಹೂಡಿದ ಮಕ್ಕಳಿಗೆಲ್ಲಾ
ಬಡಿಸುತ್ತಲಿದ್ದಳು, ದೊಳ್ಳಿ.

ಸಂಡಿಗೆ, ಚಟ್ನಿ ಉಪ್ಪಿನಕಾಯಿ
ಎಲೆಯಲಿ ಹಾಕಲು ಸಾರು,
ಮಕ್ಕಳು ಬರಿದೇ ತೇಗುತೆ ಉಂಡರು
ಕುಡಿದರು ಬರಿ ಬರಿ ನೀರು.

ಊಟದ ಭರದಲಿ ಪೆದ್ದನು ನುಂಗಿದ
ಮಣ್ಣಿನ ಪಾಯಸ, ರೊಟ್ಟಿ
ಪೆದ್ದನ ಬಾಯಲಿ ಮಣ್ಣನು ನೋಡಿ
ಮಕ್ಕಳು ನಕ್ಕರು ಗಟ್ಟಿ.

– *ಶ್ರೀನಿವಾಸ ಶೆಟ್ಟಿ*
(ಬಾಲವನ ಸಂಕಲನದಿಂದ)

ಅಂಕೋಲೆಯ ಅಚ್ಚುಮನೆಗಳು

– ಜಿ. ಪ್ರೇಮಾನಂದ

ಭಾಷೆ ಬರಹವಾಗಿ ರೂಪಗೊಂಡಾಗ ಅದಕ್ಕೊಂದು ನಿರಂತರವಾದ ನೆಲೆ ನೀಡುವ ನಿಟ್ಟಿನಲ್ಲಿ ಹುಟ್ಟಿಕೊಂಡ ಪ್ರಭಾವಶಾಲಿ ವ್ಯವಸ್ಥೆಯೇ 'ಮುದ್ರಣ ಮಾಧ್ಯಮ' (Print Media) ಎನ್ನಬಹುದು. ಜಗತ್ತಿನಾದ್ಯಂತ ವಿವಿಧ ಆವಿಷ್ಕಾರಗಳಿಗೆ ಒಳಪಟ್ಟು ಬೆಳೆದುಬಂದ ಈ ಮುದ್ರಣ ಕಲೆಯ ಇತಿಹಾಸ ಬೆರಗುಗೊಳಿಸುವಂತಿದೆ.

ಜರ್ಮನಿಯ ಜೋಹಾನ್ಸ್ ಗುಟೆನ್‌ಬರ್ಗ್ ಎಂಬ ವೃತ್ತಿನಿರತ ಅಕ್ಕಸಾಲಿಗನೊಬ್ಬ ಕ್ರಿ.ಶ. 1440 ರ ಸುಮಾರಿಗೆ ಲೋಹದ ಅಚ್ಚುಮೊಳೆ ಆಧಾರಿತ 'ಛಾಪಖಾನೆ'ಯನ್ನು (Printing Press) ಪ್ರಾರಂಭಿಸಿದನು ಎಂಬ ಉಲ್ಲೇಖ ಇತಿಹಾಸದ ಪುಟಗಳಲ್ಲಿ ಸಿಗುತ್ತದೆ.

ಭಾರತದ ಮಟ್ಟಿಗೆ ಹೇಳುವುದಾದರೆ ಕಾಗದದ ಬಳಕೆ ಬಂದ ನಂತರ ಛಾಪಖಾನೆಯ ಕಾರ್ಯವು ಮೊಟ್ಟಮೊದಲು ಆರಂಭಗೊಂಡಿದ್ದು ಗೋವಾದಲ್ಲಿ ಎಂಬ ಉಲ್ಲೇಖವಿದೆ. 1577ರಲ್ಲಿ ಗೋನ್ಸಾಲ್ವಿಸ್ ಎಂಬುವವರು ಭಾರತೀಯ ಭಾಷೆಯಲ್ಲಿ ಮೊಟ್ಟಮೊದಲು ಅಚ್ಚುಮೊಳೆಗಳನ್ನು ತಯಾರಿಸಿದರು ಎಂದು ತಿಳಿದುಬಂದಿದೆ.

ಕನ್ನಡದಲ್ಲಿ ಪುಸ್ತಕಗಳ ಪ್ರಕಟಣೆ, ಪತ್ರಿಕೋದ್ಯಮ ಹಾಗೂ ಮುದ್ರಣ ಅಭಿವೃದ್ಧಿ ಇವು ಒಟ್ಟೊಟ್ಟಿಗೆ ಬೆಳೆದುಬಂದಂತೆ ತೋರುತ್ತದೆ. 1841ರಲ್ಲಿ ಜರ್ಮನಿಯಿಂದ ಮಂಗಳೂರಿಗೆ ಬಂದ ಬಾಸೆಲ್ ಮಿಶನರಿಗಳು ಕನ್ನಡದಲ್ಲಿ ಮೊದಲು 'ಕಲ್ಲಚ್ಚು ಮುದ್ರಣ' ಆರಂಭಿಸಿದರು. ಕರ್ನಾಟಕದ ಮಂಗಳೂರು ಹಾಗೂ ಬಳ್ಳಾರಿಗಳಲ್ಲಿ ಕಲ್ಲಿನ ಛಾಪೆಯಲ್ಲಿ ಕನ್ನಡದ ಅಕ್ಷರಗಳು ಅಚ್ಚಾಗುತ್ತಿದ್ದವು. ತದನಂತರ 1852 ರಲ್ಲಿ ಜರ್ಮನ್ ಮಿಶನರಿಗಳು ಕನ್ನಡದಲ್ಲಿ ಅಕ್ಷರ ಮೊಳೆಗಳನ್ನು ಮಾಡಲು ಪ್ರಯತ್ನಿಸಿದರು. 1853ರಲ್ಲಿ ಕನ್ನಡದ ಮೊದಲ ಮುದ್ರಾಯಂತ್ರ ಬಳಕೆಗೆ ಬಂತೆಂದು ತಿಳಿದುಬಂದಿದೆ. ಆ ಸಮಯದಲ್ಲಿ ಮಂಗಳೂರಿನ ಅನಂತಾಚಾರಿ ಎಂಬ ಅಕ್ಕಸಾಲಿಗರು ಕನ್ನಡದ ಅಕ್ಷರವನ್ನು ಸುಂದರವಾಗಿ ಎರಕ ಹೊಯ್ದರು ಎಂಬ ಮಾಹಿತಿಯನ್ನು ಸಂತೋಷಕುಮಾರ ಗುಲ್ವಾಡಿ ಅವರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಆರಂಭದಲ್ಲಿ ಅಕ್ಷರಗಳನ್ನು ಕೈಯಿಂದ ಅಚ್ಚು ಹಾಕಿ ಸಿದ್ಧಪಡಿಸುತ್ತಿದ್ದರು, ನಂತರ ಕಾಲಿನಿಂದ ಸ್ವಲ್ಪ ಸುಲಭವಾಗಿ ಅಚ್ಚು ಮಾಡುವ Treadle Machineಗಳು ಬಳಕೆಗೆ ಬಂದವು. ಆಮೇಲೆ ಉಗಿಶಕ್ತಿ (Steam Power) ಮತ್ತು ನಂತರ ವಿದ್ಯುತ್ ಬಳಕೆಯ ಸ್ವಯಂಚಾಲಿತ ಮುದ್ರಣ ಯಂತ್ರಗಳು ಅವಿಷ್ಕಾರಗೊಂಡವು. ಈಗ ಅಚ್ಚು ಮೊಳೆಗಳ ಬದಲಿಗೆ ಕಂಪ್ಯೂಟರ್ ಆಧಾರಿತ ಡಿ.ಟಿ.ಪಿ. ವ್ಯವಸ್ಥೆ ಹಾಗೂ ಮುದ್ರಣಕ್ಕಾಗಿ ಅತ್ಯಾಧುನಿಕ ಆಫ್‌ಸೆಟ್ ಯಂತ್ರಗಳು ಬಳಕೆಗೆ ಬಂದಿವೆ. ಮಾತ್ರವಲ್ಲ ಮುದ್ರಣಕ್ಕಾಗಿ ಬಳಸುವ ಶಾಯಿ (Ink)ಯಲ್ಲಿಯೂ ಸಹ ಅನೇಕ ಗುಣಾತ್ಮಕ ಪರಿವರ್ತನೆಗಳು ಬಂದು Multi Colour Lab ವ್ಯವಸ್ಥೆ ಎಲ್ಲೆಡೆ ಬಳಕೆಯಲ್ಲಿದೆ.

ಸಾಹಿತ್ಯಕ್ಕೂ ಮುದ್ರಣಾಲಯಗಳಿಗೂ ಒಂದು ಬಗೆಯ ಅವಿನಾಭಾವ ಸಂಬಂಧ. ಕನ್ನಡ ಸಾರಸ್ವತ ಲೋಕಕ್ಕೆ ನೂರಾರು ಲೇಖಕರನ್ನು ನೀಡಿದ ಅಂಕೋಲೆಯಲ್ಲಿ ಮುದ್ರಣಾಲಯಕ್ಕೂ ಹೆಚ್ಚು-ಕಡಿಮೆ ಶತಮಾನದ ಇತಿಹಾಸವಿದೆ. ಅದು ನಡೆದು ಬಂದ ದಾರಿಯನ್ನು ಪರಿಚಯಿಸುವ ಒಂದು ಪುಟ್ಟ ಪ್ರಯತ್ನವೇ ಈ ಲೇಖನದ ಉದ್ದೇಶ.

ಗಜಾನನ ಪ್ರಿಂಟಿಂಗ್ ಪ್ರೆಸ್ :

ಒಂದು ಅಂದಾಜಿನ ಪ್ರಕಾರ 1930ರಲ್ಲಿ ಅಂಕೋಲೆಯ ಹಳೆಯ ಬಜಾರದಲ್ಲಿ ತೆಂಕಣಕೇರಿಯ ನಾರಾಯಣ ಗಣೇಶ ಮಹಾಲೆಯವರು ಆರಂಭಿಸಿದ ಈ 'ಗಜಾನನ ಪ್ರಿಂಟಿಂಗ್ ಪ್ರೆಸ್' ಕೆಲಕಾಲದ ನಂತರ ಈಗಿನ ಬಂಡಿ ಬಜಾರದಲ್ಲಿ ಇರುವ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡು ಮುಂದುವರಿಯಿತು. ಅಂಕೋಲೆಯಲ್ಲಿ ಮೊಟ್ಟಮೊದಲು Printing Press

ಸ್ಥಾಪಿಸಿದ ಖ್ಯಾತಿ ಮಹಾಲೆ ಕುಟುಂಬದವರಿಗೆ ಸಲ್ಲುತ್ತದೆ. ನಂತರದ ವರ್ಷಗಳಲ್ಲಿ ಅವರ ಮಕ್ಕಳಾದ ರಾಮಚಂದ್ರ ಹಾಗೂ ರಾಮಕೃಷ್ಣ ಮಹಾಲೆಯವರು ಇದನ್ನು ಅರ್ಧ ಶತಮಾನಕ್ಕಿಂತ ಅಧಿಕ ವರ್ಷಗಳವರೆಗೆ ನಡೆಸಿಕೊಂಡು ಬಂದಿದ್ದರು ಎಂದು ತಿಳಿದುಬಂದಿದೆ.

ಜೈಹಿಂದ್ ಪ್ರಿಂಟಿಂಗ್ ಪ್ರೆಸ್ :

ಭಾರತ ಸ್ವಾತಂತ್ರ್ಯದ ಪರಿಕಲ್ಪನೆಯಲ್ಲಿ 'ಜೈಹಿಂದ್' ಎಂಬ ಹೆಸರಿನೊಂದಿಗೆ ಇಲ್ಲಿಯ ರಾಮಚಂದ್ರ ವೈಕುಂಠ ಮಹಾಲೆಯವರು 1946ರಲ್ಲಿ ಅಂಕೋಲೆಯ ಮುಖ್ಯ ಬಜಾರನಲ್ಲಿ ಆರಂಭಿಸಿದ ಈ ಪ್ರಿಂಟಿಂಗ್ ಪ್ರೆಸ್ ಅಂದು ಜಿಲ್ಲೆಯಾದ್ಯಂತ ಹೆಸರುವಾಸಿಯಾಗಿತ್ತು. ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲಾ ಪ್ರಶ್ನೆ ಪತ್ರಿಕೆಗಳನ್ನು ಅತ್ಯಂತ ಶಿಸ್ತುಬದ್ಧವಾಗಿ ಮುದ್ರಿಸಿ ನೀಡುತ್ತಿದ್ದ ಕಾರ್ಯಕ್ಕೆ ಆಗಿನ ಜಿಲ್ಲಾಧಿಕಾರಿಗಳಿಂದ ಗೌರವ ಪ್ರಶಸ್ತಿಯನ್ನು ಈ ಪ್ರೆಸ್ ಪಡೆದಿತ್ತು ಎಂದು ತಿಳಿದುಬಂದಿದೆ. ನಂತರ 1968 ರಿಂದ 1972 ರವರೆಗೆ ಶೇಷಗಿರಿ ವೈಕುಂಠ ಮಹಾಲೆ ಅವರು ಇದನ್ನು ಉತ್ತಮ ರೀತಿಯಲ್ಲಿ ನಡೆಸಿದರು. ಅನಂತರ 1968ರಿಂದ ಮುಂದೆ ರಾಮಚಂದ್ರ ಮಹಾಲೆಯವರ ಮಗ ಜೀವನ ರಾಮಚಂದ್ರ ಮಹಾಲೆಯವರು ಈ ಪ್ರೆಸನ್ನು ಬಹುಕಾಲದಿಂದ ಈವರೆಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಜನ ಮುದ್ರಣ :

ಶಿಕ್ಷಣ ತಜ್ಞ ಡಾ. ದಿನಕರ ದೇಸಾಯಿಯವರು ತಮ್ಮ 'ಜನಸೇವಕ' ಪತ್ರಿಕೆಗಾಗಿ 1954ರಲ್ಲಿ ಪ್ರಾರಂಭಿಸಿದ 'ಜನಮುದ್ರಣ ಪ್ರೆಸ್ ಮೊದಲು ಎಗ್ರಿಕಲ್ಚರ್ ಸ್ಕೂಲ್‌ನ ಹಳೆಕಟ್ಟಡದಲ್ಲಿ ಕಾರ್ಯಾರಂಭ ಮಾಡಿತು. ನಂತರ ಇಲ್ಲಿಯ ಶಾಂತಾದುರ್ಗಾ ದೇವಸ್ಥಾನದ ಹತ್ತಿರದ ಥಕ್ಕರ ಬಾಪಾ ಸೇವಾ ಕೇಂದ್ರದ ಕಟ್ಟಡಕ್ಕೆ ಸ್ಥಳಾಂತರಗೊಂಡು 1972ರವರೆಗೂ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿತು. ಕೆಲಕಾಲ ಶಿಕ್ಷಕ ಮಾಧವ ನಾಯ್ಕ ಅವರ ನಿರ್ವಹಣೆಯಲ್ಲಿದ್ದ ಈ ಛಾಪಖಾನೆ ನಂತರ ಅದು ನಿಲುಗಡೆಯಾಗುವವರೆಗೂ ಸಾಹಿತಿ ಶ್ಯಾಮ್ ಹುದ್ದಾರ ಅವರ ಜವಾಬ್ದಾರಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿತು. ಈ ಪ್ರೆಸ್‌ನಲ್ಲಿ ಪ್ರಕಟವಾಗುತ್ತಿದ್ದ 'ಜನಸೇವಕ' ಪತ್ರಿಕೆಗೆ ಹಿರಿಯ ಪತ್ರಕರ್ತ ಅಮ್ಮೆಂಬಳ ಆನಂದ ಅವರು ಸಂಪಾದಕರಾಗಿದ್ದರು ಎಂಬುದು ಇಲ್ಲಿ ಉಲ್ಲೇಖನೀಯ.

ಅಜಂತಾ ಪ್ರಿಂಟಿಂಗ್ ಪ್ರೆಸ್ :

ಮುಂಬೈಯ ಪ್ರೆಸ್ ಒಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಹಾಲೆ ಕುಟುಂಬದ ಹಿರಿಯರಾದ ಶೇಷಗಿರಿ ವೈಕುಂಠ ಮಹಾಲೆಯವರು ಇಲ್ಲಿಯ ಜೈಹಿಂದ್ ಪ್ರೆಸ್‌ನಲ್ಲಿ 1968 ರಿಂದ 1972ರ ವರೆಗೆ ಉತ್ತಮ ಸೇವೆ ಸಲ್ಲಿಸಿ ನಂತರ 1973 ರಲ್ಲಿ ತಾವೇ ಸ್ವತಂತ್ರವಾಗಿ ಇಲ್ಲಿಯ ಆಡುಕಟ್ಟೆಯ ಬಳಿ 'ಅಜಂತಾ ಪ್ರಿಂಟಿಂಗ್ ಪ್ರೆಸ್' ಎಂಬ ಹೆಸರಿನಲ್ಲಿ ಅಚ್ಚುಮನೆಯನ್ನು ಆರಂಭಿಸಿದರು. ಅತ್ಯುತ್ತಮ ಮುದ್ರಣ ಕೌಶಲ್ಯ ಹೊಂದಿದ ಶೇಷಗಿರಿಯವರು ಏಕಾಂಗಿಯಾಗಿ ಸತತ 32 ವರ್ಷಗಳ ಕಾಲ ಇದನ್ನು ನಡೆಸಿದರು. ಈಗ ಇಲ್ಲಿಯ ಮಠಾಕೇರಿಯಲ್ಲಿ ವಾಸವಾಗಿರುವ 83 ವರ್ಷ ವಯಸ್ಸಿನ ಹಿರಿಯರಾದ ಅವರು, ಮುದ್ರಣ ಜಗತ್ತಿನ ಅಪಾರ ಸಿಹಿ–ಕಹಿ ಅನುಭವಗಳನ್ನು ಸ್ವಾರಸ್ಯಕರವಾಗಿ ನೆನಪಿಸುತ್ತಾರೆ.

ಅರುಣೋದಯ ಮುದ್ರಣಾಲಯ :

ಹಿರಿಯ ಜಾನಪದ ಕಲಾವಿದ ಭಾವಿಕೇರಿಯ ಬಿ. ಹೊನ್ನಪ್ಪ ಅವರು ತಮ್ಮ 'ನುಡಿಜೇನು' ಪತ್ರಿಕೆಗಾಗಿ ಅಂಕೋಲೆಯಲ್ಲಿ 'ಅರುಣೋದಯ ಮುದ್ರಣಾಲಯ' –ವನ್ನು 1973 ರಲ್ಲಿ ಆರಂಭಿಸಿದರು. ಅಪ್ಪಟ ಗ್ರಾಮೀಣ ಸೊಗಡಿನ 'ನುಡಿಜೇನು' ಪತ್ರಿಕೆಯನ್ನು ಮುದ್ರಿಸುತ್ತಿದ್ದ ಈ ಪ್ರೆಸ್, ಇತರೇ ಮುದ್ರಣ ಕಾರ್ಯವನ್ನು ನೆರವೇರಿಸುತ್ತಿತ್ತು. ಇದು ನಿಲುಗಡೆಯಾಗುವದಕ್ಕೂ ಪೂರ್ವ ಕೆಲಕಾಲ ಇದನ್ನು ಸದಾನಂದ ಲಕ್ಷ್ಮೇಶ್ವರ ಅವರು ಬಿ. ಹೊನ್ನಪ್ಪ ಅವರ ಪರವಾಗಿ ನಡೆಸುತ್ತಿದ್ದರು ಎಂದು ತಿಳಿದುಬಂದಿದೆ.

ಕ್ವಾಲಿಟಿ ಪ್ರಿಂಟರ್ಸ್ :

ಅಂಕೋಲೆಯ ಹಳೆ ಬಜಾರದಲ್ಲಿ 1977ರಲ್ಲಿ ಕೇಣಿಯ ನಾರಾಯಣ ರಾಮಚಂದ್ರ ಶೆಟ್ಟಿ ಅವರು ಬಾಲಚಂದ್ರ ಕಲ್ಮನೆಯವರೊಂದಿಗೆ ಜೊತೆಗೂಡಿ ಆರಂಭಿಸಿದ ಈ ಪ್ರೆಸ್ ಅಲ್ಪಾವಧಿಯಲ್ಲೇ ಹೆಚ್ಚಿನ ಜನಪ್ರಿಯತೆ ಪಡೆದಿತ್ತು. ಹೊಸಬಗೆಯ ವಿವಿಧ ವಿನ್ಯಾಸದ ಅಚ್ಚುವೊಳೆಗಳನ್ನು ಮುದ್ರಣಕ್ಕೆ ಅಳವಡಿಸುವದರೊಂದಿಗೆ ಅಂಕೋಲೆಯ ಮುದ್ರಣ ಕ್ಷೇತ್ರದಲ್ಲಿ ಹೊಸ ಸಂಚಲನ ಮೂಡಿಸಿದ ಶ್ರೇಯಸ್ಸು ಈ ಪ್ರೆಸ್ಸಿಗೆ ಸೇರುತ್ತದೆ.

ಶಾರದಾ ಪ್ರಿಂಟರ್ಸ್ :

1983ರಲ್ಲಿ ಇಲ್ಲಿಯ ಕಾಕರಮಠದಲ್ಲಿ ಸಂಜೀವ ಗೋವಿಂದ ಕಾಕರಮಠ ಅವರು ಈ ಪ್ರೆಸ್ ಆರಂಭಿಸಿದರು. ಗುಡಿ ಕೈಗಾರಿಕೆಯ ಮಾದರಿಯಲ್ಲಿ ಬೆಳೆದುಬಂದ ಈ ಪ್ರೆಸ್, ಕಳೆದ ಸುಮಾರು ಮೂರು ದಶಕದಲ್ಲಿ ದಿನದಿಂದ ದಿನಕ್ಕೆ ತನ್ನ ಸೇವೆಯನ್ನು ವಿಸ್ತರಿಸಿಕೊಳ್ಳುತ್ತ ಸಾಗುತ್ತಿದೆ. ಕಛೇರಿಯ ವ್ಯವಹಾರಗಳಲ್ಲಿ ವಿಶೇಷವಾಗಿ ಬಳಸಲ್ಪಡುವ 'ರಬ್ಬರ್ ಸ್ಟಾಂಪ್'ಗಳನ್ನು ಮೊಟ್ಟಮೊದಲು ಅಂಕೋಲೆಯಲ್ಲಿ ಸಿದ್ಧಪಡಿಸಿ ನೀಡಿದ ಕೀರ್ತಿ ಇವರಿಗಿದೆ.

ನ್ಯೂ ಪ್ರಿಂಟರ್ಸ್ :

1989ರಲ್ಲಿ ಇಲ್ಲಿಯ ಮಠಾಕೇರಿ ರಸ್ತೆಯಲ್ಲಿ ಅಸ್ತಿತ್ವಕ್ಕೆ ಬಂದ 'ನ್ಯೂ ಪ್ರಿಂಟರ್ಸ್' ಛಾಪಖಾನೆಯನ್ನು ಇಲ್ಲಿಯ ಮೋಹನ ಗಣಪತಿ ನಾಯ್ಕ ಅವರು ಆರಂಭಿಸಿದರು. ಈಗ ಇದನ್ನು ಮುದ್ರಣ ಕ್ಷೇತ್ರದಲ್ಲಿ ಸಾಕಷ್ಟು ಅನುಭವ ಹೊಂದಿರುವ ಹನುಮಟ್ಟಾದ ಹೊನ್ನಪ್ಪ ಮಹಾದೇವ ನಾಯ್ಕ ಅವರು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಸರಕಾರದ ಟ್ರೈಸಮ್ ಸ್ಕೀಮ್‌ನಿಂದ ಮುದ್ರಣ ತರಬೇತಿಗಾಗಿ ಬರುವ ಅತಿ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ ಹೆಗ್ಗಳಿಕೆ ಈ ಪ್ರೆಸ್‌ಗೆ ಇದೆ.

ಚಿತ್ರಾ ಅಚ್ಚುಕೂಟ :

ವಂದಿಗೆಯ ಗ್ರಾಮೀಣ ಭಾಗದಲ್ಲಿ ಅಚ್ಚಕನ್ನಡದ ಹೆಸರಿನಿಂದ ಸೇವೆ ಆರಂಭಿಸಿದ 'ಚಿತ್ರಾ ಅಚ್ಚುಕೂಟ' ಎಂಬ ಅಚ್ಚುಮನೆಯನ್ನು ಇಲ್ಲಿಯ ಹಿರಿಯ ಸಾಹಿತಿ ವಿ. ಜೆ. ನಾಯಕ ಅವರ ಪುತ್ರರಾದ ಶ್ಯಾಮಸುಂದರ ವಿ. ನಾಯಕ ಅವರು 1990ರಲ್ಲಿ ಆರಂಭಿಸಿದರು. ತದನಂತರ 2000ನೇ ಇಸವಿಯಲ್ಲಿ ಆಧುನಿಕ ರೀತಿಯ ಆಫ್‌ಸೆಟ್ ಮುದ್ರಣ ವ್ಯವಸ್ಥೆಯೊಂದಿಗೆ ಸೇವೆಯಲ್ಲಿ ಮುಂದುವರೆದಿದೆ.

ಅಕ್ಷಯ ಪ್ರಿಂಟರ್ಸ್ :

ಇಲ್ಲಿಯ ಅಂಬಾರಕೊಡ್ಲದ ಸದಾನಂದ ಪೇಟು ನಾಯ್ಕ ಅವರು 1992ರಲ್ಲಿ ಅಂಕೋಲಾ ಕಣಕಣೇಶ್ವರ ದೇವಸ್ಥಾನದ ಹತ್ತಿರ 'ಅಕ್ಷಯ ಪ್ರಿಂಟರ್ಸ್' ಎಂಬ ಹೆಸರಿನಲ್ಲಿ ಪ್ರೆಸ್ ಅನ್ನು ಆರಂಭಿಸಿದರು. ಇತ್ತೀಚೆ ಇವರು ಸ್ಕ್ರೀನ್ ಪ್ರಿಂಟಿಂಗ್ ಹಾಗೂ ಬುಕ್ ಬೈಂಡಿಂಗ್ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿ ಸೇವೆಯಲ್ಲಿ ಮುಂದುವರೆದಿದ್ದಾರೆ.

ಮಂಜು ಶ್ರೀ ಆಫ್‌ಸೆಟ್ ಪ್ರಿಂಟರ್ಸ್ :

'ನ್ಯೂ ಪ್ರಿಂಟರ್ಸ್' ಪ್ರೆಸ್ ಆರಂಭಿಸಿದ ಮೋಹನ ನಾಯ್ಕ ಅವರು 1998 ರಲ್ಲಿ ಇಲ್ಲಿಯ ಕಾರವಾರ ರಸ್ತೆಯಲ್ಲಿ 'ಮಂಜುಶ್ರೀ ಆಫ್‌ಸೆಟ್ ಪ್ರಿಂಟರ್ಸ್' ಎಂಬ ಇನ್ನೊಂದು ಪ್ರೆಸ್‌ನ್ನು ಆರಂಭಿಸಿದರು. ಅಂಕೋಲೆಯಲ್ಲಿ ಪ್ರಪ್ರಥಮವಾಗಿ ಆಫ್‌ಸೆಟ್ ಮಷಿನ್ ಇವರಿಂದ ಕಾರ್ಯಾರಂಭ ಮಾಡಿತು. ಡಿ.ಟಿ.ಪಿ. ಹಾಗೂ ಪ್ರಿಂಟಿಂಗ್ ಸೌಲಭ್ಯ ಹೊಂದಿದ್ದ ಈ ಪ್ರೆಸ್ ಕೆಲವು ವರ್ಷಗಳವರೆಗೆ ಸೇವೆಯಲ್ಲಿ ನಿರತವಾಗಿತ್ತು.

ಹೊಂಬೆಳಕು ಆಫ್‌ಸೆಟ್ ಪ್ರಿಂಟರ್ಸ್ :

ಇಲ್ಲಿಯ ದಿನಕರ ದೇಸಾಯಿ ರಸ್ತೆಯಲ್ಲಿ 1998ನೇ ಇಸವಿಯಲ್ಲೇ ಇನ್ನೊಂದು ಆಫ್‌ಸೆಟ್ ಪ್ರಿಂಟಿಂಗ್ ಪ್ರೆಸ್‌ಅನ್ನು ಯುವ ಉದ್ಯಮಿ ಪಾಂಡುರಂಗ ನಾಯಕ ಅವರ ಪತ್ನಿ ಶ್ರೀಮತಿ ಸುಮಿತ ಪಿ. ನಾಯಕ ಅವರು ಆರಂಭಿಸಿದರು. ಡಿ.ಟಿ.ಪಿ. ಹಾಗೂ ಪ್ರಿಂಟಿಂಗ್ ಸೌಲಭ್ಯ ಹೊಂದಿದ್ದ ಈ ಪ್ರೆಸ್ ಕೆಲವು ವರ್ಷ ಸೇವೆಯಲ್ಲಿ ನಿರತವಾಗಿತ್ತು.

ಕರಾವಳಿ ಸುಪ್ರಭಾತ :

2001ರಲ್ಲಿ 'ಕರಾವಳಿ ಸುಪ್ರಭಾತ' ಎಂಬ ದಿನಪತ್ರಿಕೆ ಆರಂಭವಾದಾಗ ಪತ್ರಿಕೆಯ ಮುದ್ರಣ ನಿರ್ವಹಣೆಗಾಗಿ ಆರಂಭಿಸಿದ ಇನ್ನೊಂದು ಆಫ್‌ಸೆಟ್ ಮುದ್ರಣ ವ್ಯವಸ್ಥೆ ಇದಾಗಿತ್ತು. ವಿನಾಯಕ ಸಿ. ನಾಯ್ಕ ಅವರ ನೇತೃತ್ವದಲ್ಲಿ ಈ ಮುದ್ರಣ ಘಟಕ ಕೆಲಕಾಲ ಕಾರ್ಯ ನಿರ್ವಹಿಸಿತ್ತು.

ವಿಜಯ ಪ್ರಕಾಶನ :

ಶೆಟಗೇರಿಯ ಗ್ರಾಮೀಣ ಪರಿಸರದಲ್ಲಿ ವಿಜಯಾ ಬ್ಯಾಂಕಿನ ನಿವೃತ್ತ ಅಧಿಕಾರಿಗಳಾದ ನಾರಾಯಣ ಬೀರಣ್ಣ ನಾಯಕ ಅವರು ತಮ್ಮ ಮಗ ವಾಸುದೇವ ಅವರ ನೇತೃತ್ವದಲ್ಲಿ 2002ರಲ್ಲಿ 'ವಿಜಯ ಪ್ರಕಾಶನ' ಎಂಬ ಆಫ್‌ಸೆಟ್ ಪ್ರೆಸ್ ಆರಂಭಿಸಿ ಗ್ರಾಮೀಣ ಭಾಗದಲ್ಲಿ ಕಾರ್ಯ ನಿರ್ವಹಿಸಿದರು. ಅವರ ಪ್ರೀತಿಯ ಮಗ ವಾಸುದೇವ ಅವರ ಅಕಾಲಿಕ ನಿಧನದ ನಂತರ 2008 ರಲ್ಲಿ ಇದನ್ನು ಮಗನ ನೆನಪಿಗಾಗಿ 'ವಾಸು ಆಫ್‌ಸೆಟ್

ಪ್ರಿಂಟಿಂಗ್' ಎಂಬ ಹೆಸರಿನಲ್ಲಿ ಈಗ ವಂದಿಗೆಯಲ್ಲಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ನ್ಯೂ ಕ್ವಾಲಿಟಿ ಗ್ರಾಫಿಕ್ಸ್ :

1977ರಲ್ಲಿ ಕ್ವಾಲಿಟಿ ಪ್ರಿಂಟರ್ಸ್ ಎಂಬ ಹೆಸರಿನಿಂದ ಪ್ರೆಸ್‌ಅನ್ನು ಆರಂಭಿಸಿ ಜನಪ್ರಿಯತೆ ಗಳಿಸಿದ ನಾರಾಯಣ ಶೆಟ್ಟಿಯವರು 2004 ರಲ್ಲಿ ಕೇಣಿ ಊರಿನ ಗ್ರಾಮೀಣ ಪ್ರದೇಶದಲ್ಲಿ ಅತ್ಯಾಧುನಿಕ ಸೌಕರ್ಯ ಒಳಗೊಂಡ 'ನ್ಯೂ ಕ್ವಾಲಿಟಿ ಗ್ರಾಫಿಕ್ಸ್' ಎಂಬ ಹೆಸರಿನಲ್ಲಿ ಹೊಸ ಪ್ರೆಸ್ ಆರಂಭಿಸಿ ತಮ್ಮ ಎಂದಿನ ಶಿಸ್ತು ಹಾಗೂ ಗುಣಮಟ್ಟದೊಂದಿಗೆ ಸೇವೆಯಲ್ಲಿ ಮುಂದುವರೆದಿದ್ದಾರೆ.

ಕ್ವಾಲಿಟಿ ಪ್ರೆಸ್ :

1977ರಲ್ಲಿ ಆರಂಭವಾದ ಕ್ವಾಲಿಟಿ ಪ್ರಿಂಟರ್ಸ್ ನಲ್ಲಿ ನಾರಾಯಣ ಶೆಟ್ಟಿಯವರೊಂದಿಗಿದ್ದ ಬಾಲಚಂದ್ರ ಲಕ್ಷಣ ಕಲ್ಮನೆಯವರು 2007 ರಿಂದ 'ಕ್ವಾಲಿಟಿ ಪ್ರೆಸ್' ಹೆಸರಿನಲ್ಲಿ ಇಲ್ಲಿಯ ಕೆ. ಸಿ. ರಸ್ತೆಯಲ್ಲಿ ಆಫ್‌ಸೆಟ್ ಮುದ್ರಣ ವ್ಯವಸ್ಥೆಯೊಂದಿಗೆ ಸ್ವತಂತ್ರವಾಗಿ ಮುಂದುವರೆಸಿಕೊಂಡು ಸೇವೆಯಲ್ಲಿ ನಿರತರಾಗಿದ್ದಾರೆ.

ಸಾಯಿ ಪ್ರಿಂಟರ್ಸ್ :

ಅಂಕೋಲಾ ನಗರದಲ್ಲಿ ಹೊಸದಾಗಿ 'ಸಾಯಿ ಪ್ರಿಂಟರ್ಸ್' ಎಂಬ ಆಫ್‌ಸೆಟ್ ಪ್ರೆಸ್ಸನ್ನು ಇಲ್ಲಿಯ ಅರುಣ ನಾಯ್ಕ ಅವರು 2011ರಲ್ಲಿ ಆರಂಭಿಸಿದ್ದಾರೆ. ಮುದ್ರಣ ವಿಭಾಗದಲ್ಲಿ ಈಗಾಗಲೇ ತಾವು ಹೊಂದಿರುವ ಅನುಭವದೊಂದಿಗೆ ಈಗ ಸ್ವತಂತ್ರವಾಗಿ ಪ್ರಿಂಟಿಂಗ್ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

ಹೀಗೆ ಅಂಕೋಲೆಯಲ್ಲಿ ಸರಿಸುಮಾರು ನೂರು ವರ್ಷಗಳಲ್ಲಿ ಅನೇಕ ಅಚ್ಚುಮನೆಗಳು ಕಾರ್ಯನಿರ್ವಹಿಸಿ ತಮ್ಮ ಅಮೂಲ್ಯ ಸೇವೆಯನ್ನು ದಾಖಲಿಸಿವೆ. ಮುದ್ರಣ ಮಾಧ್ಯಮದ ಈ ಮಹಾಕಾರ್ಯದಲ್ಲಿ ಸೇವೆಗೈದ ಎಲ್ಲ ಹಿರಿ–ಕಿರಿಯ ಮಹನೀಯರಿಗೆ ಗೌರವದ ವಂದನೆಗಳು.

ವಜನವಿಲ್ಲದ ಖುರ್ಚಿಗಳು

ಈಗಿನ ಖುರ್ಚಿಗಳಿಗೆ ವಜನವೇ ಇಲ್ಲ
ಭದ್ರವಾಗಿ ಕುಳಿತುಕೊಳ್ಳಬೇಕೆಂದರೆ ಹಿಡಿದುಕೊಳ್ಳಲು
ಕೈಗಳೂ ಇರುವುದಿಲ್ಲ.
ಯಾರು ಯಾರದೋ ಕೈ
ಹಿಡಿದು ಕೂಡ್ರಿಸುತ್ತಾರೆ ಮತ್ತೆ
ಅಕಸ್ಮಾತಾಗಿ ನೂಕಿ ದಬ್ಬುತ್ತಾರೆ.
ಕೂಡ್ರಿಸುವುದಕ್ಕೂ ಒದ್ದೋಡಿಸುವುದಕ್ಕೂ ಸಲೀಸಾಗಲಿ
ಎಂದೇ ಕೈ-
ಯಿಲ್ಲದ ಖುರ್ಚಿಗಳನ್ನೇ ಇಟ್ಟಿರುತ್ತಾರೇನೊ !
ಇಂಥ ಖುರ್ಚಿಗಳ ಮೇಲೆ
ನೀವು ಎದುರು ಮುಖ ಮಾಡಿಯೇ
ಕೂಡ್ರಬೇಕೆಂದೇನು ಇಲ್ಲ;
ಎಡ ಬಲ ಅನುಕೂಲ ನೋಡಿ
ಮೈಮುಖ ತಿರುಗಿಸಿ ಹೇಗಾದರೂ ಕೂಡ್ರಬಹುದು
ಬೆನ್ನದಿಕ್ಕೊಂದು ಬಿಟ್ಟು
ಮೂರು ದಾರಿಗಳಿವೆ ಪಾರಾಗುವುದಕ್ಕೆ
ಒಳಪ್ರವೇಶಕ್ಕೂ ಕೂಡ ;
ಎದುರಾಳಿಯ ಕಣ್ತಪ್ಪಿಸಿ ಅಡ್ಡ -
ದಾರಿಯಿಂದ ಒಳನುಗ್ಗಬಹುದು
ಸಂದರ್ಭ ಸರಿ ಇಲ್ಲ ಎಂದಾಗ
ಜಾಗ ಬಿಟ್ಟು ಓಡಲುಬಹುದು
ಪಾರಾಗಲೂಬಹುದು.
ಆದರೆ ಈ ವಜನವಿಲ್ಲದ ಖುರ್ಚಿಯ ಮೇಲೆ
ಕುಳಿತಿರುವಷ್ಟು ದಿನವೂ
ತಲೆಯ ಮೇಲೊಂದು ಕತ್ತಿ
ತೂಗುತ್ತಲೇ ಇರುತ್ತದೆ ;
ಬೆನ್ನ ಹಿಂದೊಂದು ಚೂರಿಯೂ ಕೂಡ
ಕಾದುಕೊಂಡೇ ಇರುತ್ತದೆ.

– ವಿ. ಜೆ. ನಾಯಕ

(ದಿನಚರಿಯ ಸಾಲುಗಳ ನಡುವೆ ಕವನ ಸಂಕಲನದಿಂದ)

ಅಂಕೋಲೆಯ ಸಂಗೀತ ಪರಂಪರೆ ಮತ್ತು ಸಂಗೀತಗಾರರು

– ಡಾ. ಗಣೇಶ ಸದಾನಂದ ನಾಗ್ವೇಕರ

ಪೀಠಿಕೆ :

ಸಂಗೀತ ಎನ್ನುವುದೊಂದು ಸಂಸ್ಕಾರ, ಸಂಗೀತವೊಂದು ಶಾಸ್ತ್ರ, ಸಂಗೀತ ಶಾಸ್ತ್ರವೆಂಬುದು ಬಹುಶಿಸ್ತಿನ ಅಧ್ಯಯನಗಳಿಂದ ಸಮ್ಮಿಳಿತಗೊಂಡ ಒಂದು ಕಲಾ ಪ್ರಕಾರ, ಸಂಗೀತ ಕಲೆಯೊಂದು ದೈವಿದತ್ತವಾದ ಕೊಡುಗೆ. ಸುರ, ನರ, ಕಿನ್ನರ, ಗಂಧರ್ವ ಯಕ್ಷ ಲೋಕದಿಂದ ನಾರದಾದಿಯಾಗಿ ತುಂಬುರ, ನಂದಿ, ಭೃಂಗಿ, ಶೃಂಗಿ ಅಪ್ಸರೆ ಮುಂತಾದವರಿಂದಾಗಿ ಭೂಲೋಕದವರೆಗೂ ಅವ್ಯಾಹತವಾಗಿ ಹರಿದು ಬಂದಿರುವ ಬ್ರಹ್ಮನ ರಾಣಿ ಸರಸ್ವತಿ ದೇವಿ ಒಲಿದಿರುವ ದೈವ ಸಾಕ್ಷಾತ್ಕಾರದ ಪುರಾತನ ಪರಂಪರೆಯಾಗಿದೆ.

ಸಂಗೀತದ ನಾದ ಲಹರಿಗೆ ಮನ ಸೋಲದವರೇ ಇಲ್ಲ. ಖಗ– ಮೃಗಗಳ ಕೂಗಿನ ಕಲರವದಲ್ಲಿ , ತರು–ಲತೆಗಳ ಕಂಪನದಲ್ಲಿ, ನದ–ನದಿಗಳ ಹರಿವಿನಲ್ಲಿ , ನೊರೆ–ತೆರೆಗಳ ಉನ್ಮಾದದಲ್ಲಿ ಬೀಸುವ ತಂಗಾಳಿಯುಲ್ಲಿಯೂ ಸಹ ಸಂಗೀತವನ್ನು ಆಲ್ಹಾದಿಸಬಹುದು ಎನ್ನುವುದು ವಾಸ್ತವಿಕ ಮತ್ತು ಪ್ರಾಯೋಗಿಕ ಸಿದ್ಧಾಂತದ ಮೇಲೆ ಪ್ರತಿಪಾದಿಸಿದ ಸಾರ್ವತ್ರಿಕ ಸತ್ಯ ವಿಚಾರವಾಗಿದೆ. ವೇದಗಳಲ್ಲೂ ಸಹ ಸಂಗೀತ ಆರಾಧನೆಯನ್ನು ಉಲ್ಲೇಖಿಸಲಾಗಿದೆ. ಆಧುನಿಕ ವೈದ್ಯಕೀಯ ಶಾಸ್ತ್ರದಲ್ಲಿಯೂ ಸಹ "ಸಂಗೀತಚಿಕಿತ್ಸೆ" ಎಂಬ ಪರಿಕಲ್ಪನೆ ಅಡಿಯಲ್ಲಿ ಅನೇಕ ಆರೋಗ್ಯ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಲಾಗುತ್ತಿದೆ.

ಸಂಗೀತ ಶಾಸ್ತ್ರ :

ಗಾಯನ–ವಾದನ–ನರ್ತನ ಇವುಗಳ ತಾರ್ಕಿಕ ಸಂಯೋಜನೆಯೇ ಸಂಗೀತದ ಜೀವಾಳ ಇವುಗಳ ಪ್ರಸ್ತುತಿಕರಣದ ಮೇಲಿಂದ ಭಾರತಿಯ ಸಂಗೀತ, ಪಾಶ್ಚಾತ್ಯ ಸಂಗೀತ, ದೇಸಿಯ ಸಂಗೀತ, ಪ್ರಾಂತೀಯ ಸಂಗೀತ ಜನಪದ ಪ್ರಕಾರಗಳನ್ನು ಕಾಣಬಹುದಾಗಿದೆ.

ಭಾರತೀಯ ಸಂಗೀತ ಪ್ರಕಾರವನ್ನು ಮುಖ್ಯವಾಗಿ ಹಿಂದೂಸ್ಥಾನಿ ಶಾಸ್ರೀಯ ಸಂಗೀತ ಮತ್ತು ಕರ್ನಾಟಕಿ ಶಾಸ್ತ್ರೀಯ ಸಂಗೀತವೆಂದು ವಿಂಗಡಿಸಲಾಗಿದೆ. ಇವುಗಳಲ್ಲಿ ಶಾಸ್ತ್ರೀಯ ಸಂಗೀತ, ಲಘುಶಾಸ್ತ್ರೀಯ ಸಂಗೀತ, ಸುಗಮ ಸಂಗೀತವೆಂದು ವರ್ಗೀಕರಿಸಿ ಕಲಿಕಾರ್ಥಿಗಳ ಸ್ಪಂದನೆಗೆ, ಮತ್ತು ಕಲಿಕಾಸಕ್ತಿಯ ಮಿಡಿತವನ್ನರಿತು ಸಂಗೀತ ಕಲಿಯಲು ಅವಕಾಶ ಕಲ್ಪಿಸಿಕೊಡಲಾಗುತ್ತಿದೆ.

ಸಂಗೀತ ಶಾಸ್ತ್ರ, ಪರಂಪರೆ ಮತ್ತು ಹಿನ್ನೆಲೆ :

ಹಿಂದಿನ ಕಾಲದಲ್ಲಿ ಶಾಲಾ ಪಠ್ಯಕ್ರಮಗಳಿಲ್ಲದ ಕಾರಣ ಗುರುಕುಲದಲ್ಲಿಯೇ ಸಂಗೀತ ಅಭ್ಯಾಸವನ್ನು ಪ್ರಶಿಕ್ಷಣಾರ್ಥಿಯು ಅರ್ಹತೆ, ಆಸಕ್ತಿ ಮತ್ತು ಆದ್ಯತೆಗನುಸಾರವಾಗಿ ಕಲಿಯುಲು ಅವಕಾಶ ಕಲ್ಪಿಸಲಾಗುತ್ತಿತ್ತು. ಕಾಲಕ್ರಮೇಣ ಸಂಗೀತ ಶಾಸ್ತ್ರದಲ್ಲಿ ಪರಿಣಿತಿಯನ್ನು ಪಡೆದು ಪ್ರದರ್ಶನ ನೀಡಲು ಸಾಧ್ಯವಾಗುವಷ್ಟರ ಮಟ್ಟಿಗೆ ಗುರುಕುಲ ಪದ್ಧತಿಯಲ್ಲಿಯೇ ಕೇವಲ ಸಂಗೀತ ಶಾಸ್ತ್ರವನ್ನು ಮಾತ್ರ ಹೇಳಿಕೊಡುವ ಮನೆತನಗಳು ಪ್ರಚಲಿತವಾದವು. ಇಂತಹ ವಿಶೇಷ ಸಂಗೀತ ಶಾಸ್ತ್ರವನ್ನು ಕಲಿಸಿಕೊಡುವ ಮನೆತನಗಳಿಗೆ "ಘರಾಣೆ" ಎಂದು ಕರೆಯಲಾಯಿತು.

ಹೊಸ ಹೊಸ ಪದ್ಧತಿಗಳು ಅವಿಷ್ಕಾರಗೊಳ್ಳುತ್ತ ಹೋದಂತೆ ಸ್ಪರ್ಧೆಗಳು ಏರ್ಪಟ್ಟು ಮೂಲ ಘರಾಣೆಗಳಲ್ಲಿಯೇ ಟಿಸಿಲೊಡೆದು ಹೊಸ ಘರಾಣೆಗಳ ಉತ್ಪತ್ತಿಗೆ ಕಾರಣವಾಯಿತು. ಸಂಗೀತ ಕ್ಷೇತ್ರದಲ್ಲಿ ಆಸಕ್ತಿ ಇರುವ ರಾಜಮನೆತನಗಳು ತಮಗೆ ಸರಿಹೊಂದುವ ಮತ್ತು ವಿಶಿಷ್ಟ ಘರಾಣೆಯ ಕಲಾವಿದರಿಗೆ ತಮ್ಮ ಆಸ್ಥಾನದಲ್ಲಿ ಸ್ಥಾನ ಕಲ್ಪಿಸಿಕೊಟ್ಟು ಸಂಗೀತಕ್ಕೆ ರಾಜಮನ್ನಣೆಯನ್ನು ನೀಡಲಾಯಿತು. ಇದರಿಂದಾಗಿ ಉತ್ತಮ ಸಂಖ್ಯೆಯ ಸಂಗೀತ ಘರಾಣೆಯ ಕಲಾವಿದರು ಹುಟ್ಟಿಕೊಂಡರು ಮತ್ತು ರಾಜಾಶ್ರಯ ಪಡೆದು ಸಂಗೀತ ಕೃಷಿಯನ್ನು ಮಾಡಿಕೊಂಡು ಹೊಸ ಹೊಸ ಕೃತಿಗಳನ್ನು ರಚಿಸುತ್ತಾ, ಅವುಗಳನ್ನು ಪ್ರಸ್ತುತಪಡಿಸುತ್ತ ಸಂಗೀತ ಪ್ರಚಾರಕ್ಕೆ ಉತ್ತಮ ಬುನಾದಿಯನ್ನು ಒದಗಿಸಿಕೊಟ್ಟರು.

ಇದರಿಂದಾಗಿ ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಬಹುತೇಕ ಕಡೆಗೆ ಭಾರತೀಯ ಸಂಗೀತ ಪರಂಪರೆ ವಿನಿಮಯಗೊಂಡಿತು.

ಆಸ್ಥಾನದ ಸಂಗೀತಗಾರರಿಗೆ ಸಿಗುವ ಮನ್ನಣೆ ಮತ್ತು ರಾಜಾಶ್ರಯದ ಸವಲತ್ತುಗಳಿಂದ ಪ್ರೇರಿತರಾದ ಅನೇಕ ಸಂಗೀತಗಾರರು ಕುಟುಂಬ ನಿರ್ವಹಣೆಗಾಗಿ ಇದನ್ನೇ ಉದ್ಯೋಗವನ್ನಾಗಿ ಮಾಡಿಕೊಂಡು ತಮ್ಮ ಮುಂದಿನ ಪೀಳಿಗೆಗೂ ಸಹ ಎರವಲಾಗಿ ಸಂಗೀತ ಶಾಸ್ತ್ರ ಕಲಿಸುವುದನ್ನೇ ರೂಡಿಯಾಗಿಸಿಕೊಂಡರು. ನಂತರದ ದಿನಗಳಲ್ಲಿ ರಾಜಮನೆತನಗಳು ಅಳಿದು ಸ್ವತಂತ್ರ ಭಾರತದಲ್ಲಿ ವಿಲೀನಗೊಂಡಿದ್ದರಿಂದ್ದ ಸಂಗೀತವನ್ನೇ ನಂಬಿ ಜೀವನೋಪಾಯ ಕಂಡುಕೊಂಡವರೆಲ್ಲ ಬೇರೆ ಉದ್ಯೋಗವನ್ನು ಮಾಡಲಾಗದೆ ಪರಿತಪಿಸುವಂತಾಯಿತು. ಅಂತಹ ಸಂದರ್ಭಗಳಲ್ಲಿ ಅವರೆಲ್ಲ ನಂಬಿದ್ದು ದೇವರನ್ನು ಮತ್ತು ಆಶ್ರಯ ಪಡೆದದ್ದು ದೇವಾಲಯಗಳಲ್ಲಿ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಂಗೀತ ಘರಾಣೆಗಳು ತಮ್ಮ ಮೂಲಭೂತ ಸಂಪ್ರದಾಯಗಳನ್ನು ಬದಲಿಸಿ ಸಂಗೀತ ಶಾಸ್ತ್ರಕ್ಕೆ ಸಮ್ಮತವಾದ ವಿಚಾರಗಳನ್ನು ಮೇಳೈಸಿಕೊಂಡು ಸಂಗೀತವನ್ನು ಪ್ರಚುರಪಡಿಸಲು ಮತ್ತು ಜೀವನೋಪಾಯಕ್ಕಾಗಿ ಸ್ಪರ್ಧೆಗಳಲ್ಲಿ ಭಾಗವಹಿಸುವುದು, ಸಂಗೀತ ಕಚೇರಿಗಳಲ್ಲಿ ಭಾಗವಹಿಸುವುದು, ಸಂಗೀತ ಕಛೇರಿಯನ್ನು ನಡೆಸುವುದು, ಕಾರ್ಯಕ್ರಮಗಳನ್ನು ಏರ್ಪಡಿಸುವುದುನ್ನು ರೂಡಿಸಿಕೊಂಡು ಜೀವನವನ್ನು ಸಾಗಿಸುವಂತಾಯಿತು.

ಅಂಕೋಲೆಯಲ್ಲಿ ಸಂಗೀತ ಪರಂಪರೆ :

ಅಂ ಅಕ್ಷರದಿಂದ ಪ್ರಾರಂಭವಾಗುವ ಅಂಕೋಲಾ ತಾಲ್ಲೂಕು ಅಃ ಎನ್ನುವಷ್ಟರ ಮಟ್ಟಿಗೆ ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಂಡ ಕಾಲಘಟ್ಟವೊಂದು ಈ ತಾಲೂಕಿನಲ್ಲಿ ಗತಿಸಿಹೋಗಿರುವುದು ಸತ್ಯ.

ಧಾರ್ಮಿಕ ಅಪಮೌಲ್ಯ ಮತ್ತು ನೈತಿಕ ತುಷ್ಟೀಕರಣದ ಕಾಲಘಟ್ಟದಲ್ಲಿ ಅಂದರೆ ಹದಿನೆಂಟನೇ ಶತಮಾನದಿಂದ ಇಪ್ಪತ್ತನೇ ಶತಮಾನದ ಪ್ರಾರಂಭವರೆಗಿನ ಅಂಕೋಲಾ ಇತಿಹಾಸವನ್ನು ಅವಲೋಕಿಸಿದಾಗ ಸಂಗೀತ ಪರಂಪರೆಗೆ ಸಂಬಂಧಿಸಿದಂತೆ ಕೆಲವು ಕುರುಹುಗಳು ನಾವು ಇಂದಿಗೂ ಕಾಣಬಹುದಾಗಿದೆ.

ಅಂಕೋಲಾ ತಾಲ್ಲೂಕು ಪ್ರಸಿದ್ಧ ಸುಂದರ ದೇವಾಲಯಗಳಿಂದ ಕಂಗೊಳಿಸುವ ಆಲಾಯಾಶ್ರಿತ ಗ್ರಾಮಗಳಲ್ಲಿ ಒಂದಾಗಿದೆ. ಇಲ್ಲಿರುವ ಅನೇಕ ದೇವ–ದೇವತೆಗಳು ನೆರೆಯ ಗೋವ ರಾಜ್ಯದಿಂದ ವಲಸೆ ಬಂದಂತಹುಗಳು ಎಂದು ಐತಿಹಾಸಿಕ ದಾಖಲೆ ಮತ್ತು ದೇವಾಲಯದ ವಾಸ್ತುಶಿಲ್ಪವನ್ನು ಗಮನಿಸಿದಾಗ ಕಂಡುಬರುವ ಸಾಮ್ಯತೆಯಿಂದ ತಿಳಿದುಬರುತ್ತದೆ. ಇಂದಿನವರೆಗೂ ಅಂಕೋಲಾದ ಬಹುತೇಕ ಪ್ರಮುಖ ದೇವಾಲಯಗಳಲ್ಲಿ ಪ್ರಾತಃಕಾಲದಿಂದ ರಾತ್ರಿಯವರೆಗೂ ನಡೆಯುವ ಎಲ್ಲ ವಿಧಿ ವಿಧಾನಗಳು ಸಹ ಸಂಗೀತಾಧಾರಿತವಾಗಿರುವುದನ್ನು ಕಾಣಬಹುದಾಗಿದೆ. ದೇವಾಲಯಗಳಲ್ಲಿ ನಡೆಯುವ ಪೂಜೆ, ಹೋಮ ಹವನ, ಜಾಗರಣೆ, ಪಾರಣೆ, ಮೆರವಣಿಗೆ, ಉತ್ಸವ ಹರಕೆಸೇವೆ ಮುಂತಾದ ಸಂದರ್ಭಗಳಲ್ಲಿ ಸಂಗೀತಾಧಾರಿತ ನಾದಕ್ಕೆ ಪ್ರಾಶಸ್ತ್ಯವಿರುವುದನ್ನು ಇಂದಿಗೂ ಸಹ ಕಾಣಬಹುದಾಗಿದೆ. ಇದರಿಂದ ತಿಳಿದು ಬರುವ ಪ್ರಮುಖ ಅಂಶವೇನೆಂದರೆ ವಿಧಿವತ್ತಾಗಿ, ಶಾಸ್ತ್ರಬದ್ಧವಾಗಿ, ಲಯಬದ್ಧವಾಗಿ, ತಾಳಬದ್ಧವಾಗಿ, ನುಡಿಸುವ ವಿವಿಧ ವಾದ್ಯ ಪ್ರಕಾರಗಳನ್ನು, ಗಮನಿಸಿದಾಗ ಈ ಎಲ್ಲ ಕಲೆಗಳಲ್ಲಿಯೂ ಪಾರಂಗತರಾಗಿರುವ ನೈಪುಣ್ಯ ಕಲಾವಿದರ ಕುಟುಂಬಗಳು ಈ ಊರಲ್ಲಿ ನೆಲೆಸಿದ್ದವು ಎಂಬುದಕ್ಕೆ ಸಾಕ್ಷಿ

ಕೊಂಬು, ಕಹಳೆ, ನಗಾರಿ, ಚಂಡೆ, ಡೋಲು, ತಾಸೆ, ತುತ್ತೂರಿ, ತಮಟೆ, ಕಂಸಾಳೆ, ಉಡುಕು ಕರ್ಣವಾದ್ಯ ಸೂರ್ಯವಾದ್ಯ ಮುಂತಾದ ರಣವಾದ್ಯಗಳು. ಶಂಖ , ಜಾಗಟೆ, ಮದ್ದಲೆ, ಕೊಳಲು, ಸುಂದರಿ ಗುಮಟೆ, ಸಂಬಳ ಮುಂತಾದ ಪಾರಂಪರಿಕ ವಾದ್ಯಗಳು.

ತಬಲಾ, ಪಖಾವಜ, ಶಹನಾಯಿ, ಸಾರಂಗಿ, ಹಾರ್ಮೋನಿಯಂ ಮುಂತಾದ ಶಾಸ್ತ್ರೀಯ ಸಂಗೀತದ ವಾದ್ಯಗಳನ್ನು ನುಡಿಸುವವರನ್ನು ಸಹ ನಾವು ಅಂಕೋಲಾದಲ್ಲಿ ಇಂದಿಗೂ ಕಾಣಬಹುದಾಗಿದೆ. ಆದರೆ ರಾಜಾಶ್ರಯದಲ್ಲಿ ಇದ್ದುಕೊಂಡು ಸಂಗೀತ ಪರಂಪರೆಯನ್ನು ಬೆಳಗಿಸಿದ ಕಲಾನೈಪುಣ್ಯರು ಕಾಲಕ್ರಮೇಣ ದೇವಾಲಯಗಳಲ್ಲಿ ಆಶ್ರಯವನ್ನು ಪಡೆದು ಗಾಯನ ವಾದನ ಹಾಗೂ ನರ್ತನದ ಪರಂಪರಾನುಗತ ಸೇವೆಗೈಯುತ್ತಾ ಜೀವನೋಪಾಯ ಕಂಡುಕೊಂಡರು. ಕಾಲಕ್ರಮೇಣ ಕುಟುಂಬ ನಿರ್ವಹಣೆ

ಕಷ್ಟಸಾಧ್ಯವಾದಾಗ, ತಮ್ಮ ಕಲೆಗಾರಿಕೆಯನ್ನು ಮರೆತು ಅನ್ಯ ಉದ್ಯೋಗವನ್ನು ಅರಸಿಕೊಂಡು ನೆರೆಯ ಗೋವಾ, ಮಹಾರಾಷ್ಟ್ರ ರಾಜ್ಯಗಳಿಗೆ ವಲಸೆ ಹೋದರು. ಇದರಿಂದ ಅಂಕೋಲಾದಲ್ಲಿದ್ದ ಪರಂಪರಾನುಗತ ಸಂಗೀತ ಪರಂಪರೆಯ ಸರಪಳಿಯಕೊಂಡಿ ಕಳಚಿಬಿತ್ತು ಎನ್ನುವುದು ಒಡಲಾಳದ ಸತ್ಯ. ನಂತರದ ದಿನಗಳಲ್ಲಿ ಸಂಗೀತದ ಪ್ರಾಮುಖ್ಯತೆಯನ್ನೇ ಅರಿಯದ ಸಂಗೀತಗಾರರ ಕುಟುಂಬದ ಸದಸ್ಯರು ತಮ್ಮ ಕುಟುಂಬದ ಹಿರಿಯರು ಇಲ್ಲಿ ಬಿಟ್ಟು ಹೋದ ಸಂಗೀತದ ಅಮೂಲ್ಯ ಪರಿಕರಗಳನ್ನು ತಬಲ, ತಂಬೂರಿ, ಸಾರಂಗಿ ಮುಂತಾದ ವಾದ್ಯ ಸಾಮಗ್ರಿಗಳನ್ನು ಗುಜರಿಗೆ ಮಾರಿಕೊಂಡದ್ದನ್ನು ನೋಡಿದರೆ ಸಂಗೀತ ಶಾಸ್ತ್ರಕ್ಕಾದ ಲೋಕಾಪಮಾನವೋ? ಅಥವಾ ಉದ್ದೇಶಪೂರಿತ ಅಸಡ್ಡೆಯ ಪ್ರತೀಕವೋ? ಎನ್ನುವುದು ಮಾತ್ರ ಪ್ರಶ್ನಾರ್ಥಕವಾಗಿಯೇ ಉಳಿದಿದೆ.

ಸಂಗೀತಗಾರರ ಪರಿಚಯ :

ಅಂಕೋಲಾ ತಾಲೂಕಿನಲ್ಲಿ ಅನೇಕ ಪ್ರಕಾರದ ಸಂಗೀತ ಪರಂಪರೆಯ ಕಲಾಕಾರರು ಎಲೆಮರೆಯ ಕಾಯಿಯಂತೆ ತಮ್ಮ ವಿದ್ವತ್ತನ್ನು ದೇಶದ ಬಹುತೇಕ ಕಡೆಯಲ್ಲಿ ಅನಾಮಿಕರಾಗಿ ಪಸರಿಸಿದನ್ನು ಕೇಳಿ ತಿಳಿದುಕೊಳ್ಳುವ ಸರದಿ ಇಂದಿನ ಪೀಳಿಗೆಯದ್ದಾಗಿದೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕಾರರು, ತಬಲಾ ಕಲಾವಿದರು, ಸಾರಂಗಿವಾದಕರು, ಶಹನಾಯಿ ವಾದಕರು, ಕೊಳಲು ನುಡಿಸುವವರು, ಚಂಡೆ ಮದ್ದಳೆಕಾರರು, ಕೂಚಿಪುಡಿ, ಕಥಕ ನರ್ತಕರು, ನಾಟಕಕಾರರು, ಚಿತ್ರಗಾರರು, ಶಿಲ್ಪಿಗಳು, ಮರ ಕೆತ್ತನೆಗಾರರು ಮುಂತಾದ ಕಲಾವಿದರಿಂದ ಶೋಭಿಸುತ್ತಿದ್ದ ಅಂಕೋಲಾದಲ್ಲಿ ಇಂದಿಗೆ ಕೇವಲ ಬೆರಳೆಣಿಕೆಯಲ್ಲಿ ಗುರುತಿಸುವಷ್ಟು ಕಲಾವಿದರನ್ನು ಮಾತ್ರ ಕಾಣಬಹುದಾಗಿದೆ.

ಹಿಂದೂಸ್ತಾನಿ ಗಾಯಕರಲ್ಲಿ ಪ್ರಮುಖವಾಗಿ ಲಕ್ಷ್ಮಿಬಾಯಿ ಕೇರಕರ್, ಶ್ರೀಮತಿ ನಾರ್ವೇಕರ್, ಶಾಲಿನಿ ನಾರ್ವೇಕರ್, ಬಿಮಲ್ ಘಾತರಪೇಕರ, ಹಿರಾಬಾಯಿ ಅಂಕೋಲೆಕರ, ನೀಲಾಂಬರಿ ಮುಂತಾದವರು ಮುಂಚೂಣಿಯಲ್ಲಿದ್ದರು. ಶ್ರೀಮತಿ ನಾರ್ವೇಕರ್ ಇವರು ಸುರ ಸಾಮ್ರಾಜ್ಞಿ ದಿ॥ ಕಿಶೋರಿ ಅಮೋಣಕರ ರವರ ಗುರುಗಳೂ ಹೌದು. ಭಾರತದಾದ್ಯಂತ ಬಹುತೇಕ ಆಕಾಶವಾಣಿ ಕೇಂದ್ರಗಳಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಗಾಯನವನ್ನು ಮೊದಲು ಪ್ರಸ್ತುತ ಪಡಿಸಿದ ಕೀರ್ತಿ ಇವರದ್ದಾಗಿದೆ. ಪ್ರತಿ ವರ್ಷ ತಮ್ಮ ಸ್ವಗೃಹದಲ್ಲಿ ನಡೆಯುವ ದತ್ತ ಜಯಂತಿ ಉತ್ಸವದಲ್ಲಿ ಶ್ರೀಮತಿ ನಾರ್ವೇಕರ್ ಮತ್ತು ಶಾಲಿನಿ ನಾರ್ವೇಕರ್ ಇವರ ದ್ವಂದ್ವ ಗಾಯನ ಕೇಳುವ ಅವಕಾಶ ಅಂಕೋಲಾ ಜನರಿಗೆ ಅನೇಕ ವರ್ಷಗಳ ಕಾಲ ದೊರೆತಿದ್ದು ಸುದೈವ. ಅದೇ ರೀತಿ ಲಕ್ಷ್ಮಿಬಾಯಿ ಕೇರಕರ್ ಇವರು ದಿಲ್ಲಿಯ ಸಂಗೀತ ಸಭಾ ಮತ್ತು ಆಕಾಶವಾಣಿಯಲ್ಲಿ ಸುಮಾರು 2 ದಶಕಗಳ ಕಾಲ ನಿರಂತರ ಶಾಸ್ತ್ರೀಯ ಸಂಗೀತವನ್ನು ಹಾಡಿ ಪಾರುಪತ್ಯವನ್ನು ಮೆರೆದ ಕೀರ್ತಿಗೆ ಪಾತ್ರರಾಗಿರುತ್ತಾರೆ.

ಮನೆತನದ ತಬಲಾ ಪರಂಪರೆಯನ್ನೇ ವಿಶ್ವ ವಿಖ್ಯಾತಗೊಳಿಸಿದ್ದ ಸುಬ್ರಾಯ ಅಂಕೋಲೆಕರವರ (ಸುಬ್ರಾಯ ಮಾಮಾ) ಹೆಸರನ್ನು ಸಹ ಮರೆತಿದ್ದೇವೆ. ಅದೇ ರೀತಿ ದ್ರುಪದ ಶೈಲಿಯ ತಬಲಾ ವಾದನದಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿದ್ದ ದತ್ತ ಹನುಮಟ್ಟೆಕರ, ಚಂದ ಅಂಕೋಲೆಕರ, ಶಿವಾ ನಾಗ್ವೇಕರ ಮುಂತಾದವರ ಸಾಧನೆಯನ್ನು ನಾವು ಸ್ಮರಿಸುತ್ತಿಲ್ಲ.

ಸುಬ್ರಾಯ ಅಂಕೋಲೆಕರ ಇವರು ಮೂಲತಃ ಹನುಮಟ್ಟದವರು. ಇವರ ವಿದ್ಯೆಗೆ ಪ್ರಚಾರ ದೊರಕಿದ್ದು ನೆರೆಯ ಮುಂಬೈ ಪ್ರಾಂತ್ಯದಲ್ಲಿ ದೇಶದ ಅತ್ಯುನ್ನತ ತಬಲಾ ಕಲಾವಿದರಾದ ಪಂಡರಿನಾಥ ನಾಗೇಶಕರ, ವಿನಾಯಕ ರಾವ ಘಾಂಪ್ರೇಕರ, ಪಂಡಿತ ತಾರಾನಾಥ ನಂತರ ಅವರು ಸುಬ್ರಾಯ ಅಂಕೋಲೆಕರವರ ಶಿಷ್ಯ ಪರಂಪರೆಯುಲ್ಲಿ ತಬಲಾ ವಾದನ ಕಲಿತು ಪಾರಂಗತರಾದವರು.

ಬಾಬು ರಾವ ಅಂಕೋಲೆಕರ ಮೈಸೂರಿನ ರಾಜ ಮನೆತನದಲ್ಲಿ ಸಾರಂಗಿ ವಾದಕರಾಗಿ ರಾಜ ಮನ್ನಣೆ ಪಡೆದವರು, ದೇಶಾದ್ಯಂತ ಪ್ರಸಿದ್ಧಿಯನ್ನು ಪಡೆದು ವೃದ್ಯಾಪ್ಯದಲ್ಲಿ ಅಂಕೋಲೆಗೆ ಬಂದು ತಮ್ಮ ಶಿಷ್ಯಂದಿರಿಗೆ ಹಾರ್ಮೋನಿಯಮ್ ಮತ್ತು ಕೊಳಲು ವಾದನದಲ್ಲಿ ಪರಿಣಿತರಾಗುವಂತೆ ಪ್ರೇರೆಪಿಸಿದ್ದರು. ಅವರಲ್ಲಿ ವಿದ್ಯೆ ಕಲಿತ ಶಿಷ್ಯರೆಂದರೆ ದಿಗಂಬರ ನಾಗ್ವೇಕರ, ಶಾಂತಿ ಥಾಮಸ್, ಅಪ್ಪಾ ಮರಾಠೇ ಮುಂತಾದವರು.

ಮೈಸೂರು ಒಡೆಯರಿಂದ ಅತ್ಯುತ್ಕೃಷ್ಟ ಪದಕ ಪಡೆದ ಲಕ್ಷ್ಮಣ ಸೈಲಕರ ಮತ್ತು ಅವರಿಂದ ಪ್ರೇರಿತರಾಗಿ

ಶಹನಾಯಿ ವಾದನವನ್ನು ಕರಗತ ಮಾಡಿಕೊಂಡ ನಾಗೇಶ ಬಾಡಕರ, ಶ್ರೀಧರ ವಾಂಜತ್ರಿ, ಶಂಕರ ಕಾಶೇಕರ, ಶಂಕರ ಬಾಡಕರ, ತ್ರಯಂಭಕ ಮುಂತಾದವರು ಸಹ ಸಂಗೀತಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿರುತ್ತಾರೆ.

ಸುಂದರಿ ಮತ್ತು ಕೊಳಲು ವಾದನದಲ್ಲಿ ಪ್ರಸಿದ್ಧಿ ಪಡೆದ ದುರ್ಗಾದಾಸ (ಅಪ್ಪಾ) ಮರಾಠೆ, ಚಂಡೆ ಮದ್ದಳೆ ಗುಮ್ಮಟೆ ವಾದ್ಯಗಳ ವೋಡಿಗಾರ ಪ್ರೇಮಾನಂದ (ಆಪುನಿಯಾ) ಆಜಾದೀಪಕರ ಇವರನ್ನು ಶ್ರದ್ಧೆಯಿಂದ ನೆನಪಿಸುವ ಕಾರ್ಯವಾಗಬೇಕಾಗಿದೆ.

ಹಾರ್ಮೋನಿಯಂ ವಾದನದಲ್ಲಿ ಪರಿಣಿತಿಯನ್ನು ಪಡೆದ ಸೀತಾರಾಮ ನಾರ್ವೇಕರ, ವಿಠೋಬಾ ಅಂಕೋಲೆಕರ, ಸುಬ್ರಮಣ್ಯ ಶೆಟ್ಟಿ ಮುಂತಾದವರ ಕೊಡುಗೆಯು ಸಹ ಸ್ಮರಿಸುವಂತಹದ್ದಾಗಿದೆ..

ಲಲಿತ ಕಲಾ ಮಂಡಳಿ ಸ್ಥಾಪನೆ :

ಭಾರತದ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಸಂಗೀತಕ್ಕೆ ಸಂಬಂಧಿಸಿದಂತೆ ಅಂಕೋಲಾದ ಚಿತ್ರಣ ಸ್ವಲ್ಪ ಮಟ್ಟಿಗೆ ಬದಲಾವಣೆಯಾಗಿರುವುದು ಕಂಡುಬಂದಿರುವಂತಹದು. ಸಂಗೀತ ಆಸಕ್ತರು, ಸಂಗೀತಗಾರರು ಮತ್ತು ಕಲಾಭಿರುಚಿ ಹೊಂದಿರುವ ಸಮಾನ ಮನಸ್ಕ ಸದಸ್ಯರು ಸೇರಿ 1950 –51ನೇ ಸಾಲಿನಲ್ಲಿ ಲಲಿತ ಕಲಾ ಮಂಡಳಿಯನ್ನು ಸ್ಥಾಪಿಸಿದರು. ಆರ್. ಕೆ. ನಾಯ್ಕ. ಪತ್ರೇಕರ ಮಾಸ್ತರ, ವಿ.ಜೆ.ನಾಯ್ಕ, ಪಿ.ವಿ.ಶೆಟ್ಟಿ ಮಾಸ್ತರ, ಜಿ.ಪಿ.ನಾಯ್ಕ ಮುಂತಾದವರು ಸಂಸ್ಥಾಪಕರ ಸದಸ್ಯರಾಗಿದ್ದರು. ನಂತರ ದಿನಗಳಲ್ಲಿ ಮಧುಕರ ನಾಗ್ವೇಕರ (ಬಾಬುಲಿ), ಶ್ರೀಧರ ವಾಜಂತ್ರಿ, ಮರಾಠೆ ಮಾಸ್ತರ, ಸುಬ್ರಮಣ್ಯ ಶೆಟ್ಟಿ, ಗೋವಿಂದ ಮಹಾಲೆ, ವಸಂತ ಮಹಾಲೆ ಮುಂತಾದವರು ಲಲಿತ ಕಲಾ ಮಂಡಳಿಯ ಸದಸ್ಯರಾಗಿ ಸೇರಿಕೊಂಡು ರಾಜ್ಯಾದ್ಯಂತ ಅನೇಕ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು ಹಾಗೂ ಸಂಗೀತ ನಾಟಕಗಳನ್ನು ಪ್ರದರ್ಶಿಸಿ ಸೈ ಎನಿಸಿಕೊಂಡರು.

ಮರಾಠೇ ಮಾಸ್ತರ್, ಹಳದಿಪುರಕರ, ಬಾಬುರಾವ ಬಾನಾವಳಿ, ಗಣೇಶ ಥಾಮಸೆ ಮತ್ತು ಮಾರುತಿ ಥಾಮಸೆ ಸಹೋದದರು ವಿಶ್ವನಾಥ ಗಡಕರ, ಕೃಷ್ಣ ಕುರುಡೇಕರ, ಗಣಪತಿ ಫಾತರಫೇಕರ ಮುಂತಾದ ಕಲಾವಿದರು ಮತ್ತು ಕಲಾ ಪೋಷಕರು ಆಗಾಗ ಬಂದು ಲಲಿತ ಕಲಾ ಮಂಡಳದಲ್ಲಿ ಸಂಗೀತ ಕಾರ್ಯಕ್ರಮದಲ್ಲಿ ಭಾಗಿಯಾಗಿ ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆಯನ್ನಾಗಿ ಮಾರ್ಪಡಿಸಿಕೊಳ್ಳುತ್ತಿದ್ದರು.

ಲಲಿತ ಕಲಾ ಮಂಡಳಿಯ ಪ್ರೇರಣೆಯಿಂದಾಗಿ ಅಂಕೋಲಾ ತಾಲೂಕಿನಾದ್ಯಂತ ಅನೇಕ ಶಾಸ್ತ್ರೀಯ ಸಂಗೀತಕಾರ್ಯಕ್ರಮಗಳು ಹಾಗೂ ಸಂಗೀತ ನಾಟಕಗಳು ಪ್ರದರ್ಶಿತವಾಗುತ್ತಿದ್ದವು. ಕಾಲ ಕ್ರಮೇಣ ವೈಚಾರಿಕ ಭಿನ್ನತೆ ಮತ್ತು ಶಾಸ್ತ್ರೀಯ ಸಂಗೀತದಲ್ಲಿ ಆಸಕ್ತಿಯ ಕೊರತೆ ಹಾಗೂ ಉದರ ಪೋಷಣೆ ನಿಮಿತ್ತ ಅಂಕೋಲಾದಲ್ಲಿ ಶಾಸ್ತ್ರೀಯ ಸಂಗೀತ ಆಸಕ್ತರ ಪ್ರಮಾಣ ಗಣನೀಯವಾಗಿ ತಗ್ಗಿತು. ಈ ಸಂದರ್ಭದಲ್ಲಿ ಹಿಂದೂಸ್ತಾನಿ ಸಂಗೀತ ಪರಂಪರೆಯನ್ನು ಅಂಕೋಲಾದಲ್ಲಿ ಅನುಚಾನವಾಗಿ ಅನೇಕ ದಶಕಗಳ ಕಾಲ ಮುಂದುವರೆಸಲು ಶ್ರಮಿಸಿದ ಇಬ್ಬರು ಕಲಾವಿದರನ್ನು ನಾವು ಹೆಮ್ಮೆಯಿಂದ ಸ್ಮರಿಸಲೇಬೇಕು. ಮೊದಲನೆಯದಾಗಿ ಮಧುಕರ ನಾಗ್ವೇಕರ (ಬಾಬುಲಿ) 1954 ರಿಂದ 2023 ರವರೆಗೆ ಸುಮಾರು 7 ದಶಕಗಳ ಕಾಲ ಅಂಕೋಲೆಗೆ ಆಗಮಿಸಿರುವ ಬಹುತೇಕ ಎಲ್ಲ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದರಿಗೆ ತಬಲಾ ಸಾಥನ್ನು ಒದಗಿಸುವ ಏಕೈಕ ಕಲಾವಿದ ಎನಿಸಿದ್ದರು. "ಟಿಪ್" ಮಾದರಿಯ ತಬಲಾವನ್ನು ಅಂಕೋಲೆಗೆ ಮೊಟ್ಟ ಮೊದಲು ಪರಿಚಯಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ. ತಬಲಾ ವಾದನವನ್ನು ಪರಂಪರಾಗತವಾಗಿ ಕಲಿತು ತಮ್ಮ ಶಿಷ್ಯದಿರಿಂದ ನಿಶುಲ್ಕವಾಗಿ ವಿದ್ಯೆಯನ್ನು ಧಾರೆಯೆರೆದಿದ್ದಾರೆ. ಈ ಮೂಲಕ ಅವರ ಗರಡಿಯಲ್ಲಿ ಪಳಗಿದ ಶಿಷ್ಯೋತ್ತಮರನ್ನು ಅಂಕೋಲೆಯಲ್ಲಿ ಪ್ರಸ್ತುತ ದಿನಗಳಲ್ಲಿ ಕಾಣಬಹುದಾಗಿದೆ. ಅವರಲ್ಲಿ ಪ್ರಮುಖರೆಂದರೆ ಲಕ್ಷ್ಮೀಕಾಂತ ನಾಗ್ವೇಕರ, ನಾರಾಯಣ ರಾಯಕರ, ಶಶಿಧರ ಭಟ್, ತನ್ಮಯ ಅಜಾದೀಪಕರ, ನಿಶಾಂತ ಕಿಣಿ, ವೈಭವ ನಾಗ್ವೇಕರ, ವಲ್ಲಭ ನಾಗ್ವೇಕರ, ವರದ ಶೆಟ್ಟಿ ಮುಂತಾದವರು.

ಅದೇ ರೀತಿ ಅಂಕೋಲೆಗೆ ಆಗಮಿಸುತ್ತಿದ್ದ ಎಲ್ಲ ಸಂಗೀತಕಾರರಿಗೆ ಹಾರ್ಮೋನಿಯಂ ವಾದನದಲ್ಲಿ ಸಹಕರಿಸುತ್ತಿದ್ದವರು ಸುಬ್ರಮಣ್ಯ ಶೆಟ್ಟಿ ಇವರು ಹಾರ್ಮೋನಿಯಂ ಮತ್ತು ಆರ್ಗನ್‌ಗಳನ್ನು ಸ್ವತಃ ತಯಾರಿಸುತ್ತಿದ್ದರು. ಅಲ್ಲದೇ ನಾಟಕಗಳಿಗೂ ಹಾರ್ಮೋನಿಯಂನ್ನು ನುಡಿಸುತ್ತಿದ್ದರು. ಬಾಬುಲಿ

ನಾಗ್ವೇಕರ ಹಾಗೂ ಸುಬ್ರಹ್ಮಣ್ಯ ಶೆಟ್ಟಿ ಇವರ ಜೋಡಿ ಸುಮಾರು 50 ವರ್ಷಗಳ ಕಾಲ ಅಂಕೋಲಾದಲ್ಲಿ ಸಂಗೀತ ಸೇವೆಗೈದು ಜನಮಾನಸದಲ್ಲಿ ಉಳಿದುಕೊಂಡಿರುತ್ತಾರೆ.

ನಂತರದ ದಿನಗಳಲ್ಲಿ ಅನಿಲ ಸುವರ್ಣ ಮತ್ತು ದೇವಿದಾಸ ಸುವರ್ಣ (ಸುವರ್ಣ ಬ್ರದರ್ಸ್) ಗೋಪಾಲ ವಾಜಂತ್ರಿ, ಆನಂದು ಕುರುಡೇಕರ, ಅಂಕ್ಲೇಕರ ಬ್ರದರ್ಸ್, ಶಿವಾನಂದ ಅಂಕೋಲೆಕರ ಮತ್ತು ಶಿವಾಜಿ ವಾಸ್ಟರ್, ಕೇಶವ ತೊರ್ಕೆ, ದಯಾನಂದ ಪ್ರಭು, ನಾಗರಾಜ ಜಾಂಬಳೇಕರ ಮತ್ತು ಹರೀಶ ಬಾನಾವಳಿ ಮುಂತಾದವರು. ನಾಟಕಗಳಲ್ಲಿ ಹಿನ್ನೆಲೆ ಸಂಗೀತ ಮತ್ತು ಗಾಯನವನ್ನು ಒದಗಿಸಿದ ಹೆಮ್ಮೆಯ ಕಲಾವಿದರಾಗಿದ್ದಾರೆ.

ಭಜನಾ ಮಂಡಳಿ :

ಅಂಕೋಲಾ ತಾಲೂಕಿನಲ್ಲಿ ಬಹುತೇಕ ಎಲ್ಲ ಗ್ರಾಮದಲ್ಲೂ ಸಮಾಜಕ್ಕೊಂದರಂತೆ ಭಜನಾ ಮಂಡಳಿಯನ್ನು ಕಾಣಬಹುದಾಗಿದೆ. ವರ್ಷದ ನಿಶ್ಚಿತ ದಿನಗಳಿಗೆ ಸೀಮಿತವಾಗಿ ಭಜನಾ ಸಪ್ತಾಹವನ್ನು ಆಚರಿಸಿ ಊರಿನ ಜನರಿಗೆ ಸಾಂಸ್ಕೃತಿಕ ಮತ್ತು ಪಾರಂಪರಿಕ ಮಹತ್ವವನ್ನು ಸಾರುವಲ್ಲಿ ಅವು ಪ್ರಮುಖ ಪಾತ್ರ ವಹಿಸುತ್ತವೆ. ಶ್ರೀ ಕದಂಬೇಶ್ವರ ದೇವಸ್ಥಾನದಲ್ಲಿ ನಿರಂತರ ಏಳು ದಿನಗಳ ನಿರಂತರ ಅಖಂಡ ಭಜನಾ ಸಪ್ತಾಹ ನಡೆಯುತಿತ್ತು. ಆಗ ಜಿಲ್ಲೆಯ ಎಲ್ಲ ಹಿರಿಯ ಕಿರಿಯ ಕಲಾವಿದರು ಬಂದು ಭಜನಾ ಕೈಂಕರ್ಯವನ್ನು ಮಾಡಿ ಕೃತಾರ್ಥರಾಗುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅನೇಕ ಭಜನಾ ಮಂಡಳಿಗಳು ಸಂಘಟಕರಿಲ್ಲದೇ ಮಂಕಾಗಿವೆ, ಕೆಲವು ಸ್ತಬ್ಧವಾಗಿವೆ. ಇಂತಹ ಸಂದರ್ಭದಲ್ಲಿ ಅಂಕೋಲಾದ ಹಳೆ ಬಜಾರದಲ್ಲಿ ಇರುವ ಶ್ರೀ ಮಹಾಗಣಪತಿ ಭಜನಾ ಮಂಡಳಿ ದಿನದಿಂದ ದಿನಕ್ಕೆ ತನ್ನ ಸದಸ್ಯರ ಸಂಖ್ಯಾ ಗಾತ್ರವನ್ನು ಹೆಚ್ಚಿಸಿಕೊಂಡು ವಾರದ ಭಜನೆ ಹಾಗೂ ಏಕಾಹ ಭಜನೆಗಳನ್ನು ನಿಯಮಿತವಾಗಿ ಮತ್ತು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಪ್ರಶಂಸನೀಯ. ಈ ಭಜನಾ ಮಂಡಳಿಯನ್ನು ಕಟ್ಟಿಕೊಂಡು ನಡೆಸಿಕೊಂಡು ಬಂದವರಲ್ಲಿ ಪಿ. ವಿ. ಶೆಟ್ಟಿ, ರಾಮಕೃಷ್ಣ ಕಾಮತ, ವಿಠೋಬ ಅಂಕೋಲೆಕರ, ತಿಮ್ಮಪ್ಪ ಅಂಕೋಲೆಕರ, ದಾಮೋದರ ಕಾಮತ, ಸೀತಾರಾಮ ನಾರ್ವೇಕರ, ವೆಂಕಟರಮಣ ಕಿಣಿ, ದಿಗಂಬರ ನಾಗ್ವೇಕರ, ಶಿವಾನಂದ ಆಚಾರಿ, ವಿಠೋಬಾ ನಾಯ್ಕ, ವೆಂಕಟದಾಸ ಕಾಮತ ನಾರಾಯಣ ಮಹಾಲೆ, ಅನಂತ ನಾವಗೇ, ಮಾಧವ ಮಹಾಲೇ, ಕೇಶವ ನಾಯಕ, ದೇವಿದಾಸ ಸಾದಯೇ ನಾರಾಯಣ ಮೆಥಾ, ಬಾಬುಲಿ ನಾಗ್ವೇಕರ, ಸುಬ್ರಮಣ್ಯ ಶೆಟ್ಟಿ, ಅಭಯ ಮರಬಳ್ಳಿ, ಶ್ರೀಕಾಂತ ಆಚಾರಿ, ಮುಂತಾದವರು ಪ್ರಮುಖರು.

ನಮ್ಮ ನಾಡಿನ ಬಹುತೇಕ ಪ್ರಸಿದ್ಧ ಸಂಗೀತಕಾರರಿಗೆ ತಮ್ಮ ಸಂಗೀತ ಕಲಾ ಪ್ರೌಢಿಮೆಯನ್ನು ಪ್ರದರ್ಶಿಸಲು ವೇದಿಕೆಯನ್ನು ಶ್ರೀ ಮಹಾ ಗಣಪತಿ ಭಜನಾ ಮಂಡಳಿ ಒದಗಿಸಿ ಕೊಟ್ಟಿರುವುದು ಶ್ಲಾಘನೀಯ.

ಸಂಗೀತ ಶಾಲೆ :

80ರ ದಶಕದಲ್ಲಿ ಅಂಕೋಲಾದ ಜನರಲ್ಲಿ ಕ್ಷೀಣಿಸುತ್ತಿರುವ ಸಂಗೀತ ಆಸಕ್ತಿ ಗಮನಿಸಿ ವಿದ್ಯಾರ್ಥಿಗಳಿಗೆ ಸಂಗೀತಾಭ್ಯಾಸವನ್ನು ರೂಢಿಸಬೇಕೆಂಬ ಆಶಯಗಳೊಂದಿಗೆ ಹುಟ್ಟಿಕೊಂಡಿದ್ದೇ ಕೆನರಾ ವೆಲ್‌ಫೇರ್ ಟ್ರಸ್ಟಿನ ಶ್ರೀ ದಿನಕರ ಕಲಾನಿಕೇತನ. ಶ್ರೀ ಆರ್. ಪಿ. ಆಸುಂಡಿ ಅವರು ಪ್ರಾರಂಭಿಕ ಶಿಕ್ಷಕರಾಗಿ ನೇಮಕಗೊಂಡು ಸುಮಾರು 3 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದರು. ನಂತರ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಶ್ರೀ ವಿ. ಜಿ. ಪಾಟೀಲವರು ತಮ್ಮ ಜೀವನ ಪರ್ಯಂತ ಈ ಶಾಲೆಯ ಸಂಗೀತ ಶಿಕ್ಷಕರಾಗಿ ಮುಂದುವರೆದು ಅನೇಕ ವಿದ್ಯಾರ್ಥಿಗಳಿಗೆ ಸಂಗೀತ ಪಾಠವನ್ನು ಹೇಳಿಕೊಟ್ಟರು. ಇದರಿಂದಾಗಿ ಅವರ ಶಿಷ್ಯ ಪರಂಪರೆಯಲ್ಲಿ ಅನೇಕ ಹಿರಿ–ಕಿರಿಯ ಕಲಾವಿದರು ಅಂಕೋಲೆಯಲ್ಲಿ ಸಂಗೀತ ಪರಂಪರೆಯನ್ನು ಮುಂದುವರೆಸುವಂತಾಯಿತು.

ಇಂದಿನ ಸ್ಥಿತಿಗತಿ :

ಅಂಕೋಲಾ ತಾಲೂಕಿನಲ್ಲಿ ಪ್ರಸ್ತುತ 5 ಸಂಗೀತ ಶಾಲೆಗಳು ನಡೆಸಲ್ಪಡುತ್ತಿವೆ. ಸುಮಾರು 100ಕ್ಕೂ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಸಂಗೀತ ಶಿಕ್ಷಣವನ್ನು ಪಡೆಯುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಸದ್ಯ ನಮ್ಮ ತಾಲೂಕಿನಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪರಂಪರೆಯ ಕೆಲವೇ ಕಲಾವಿದರನ್ನು ಹೆಸರಿಸಬಹುದಾಗಿದೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯನದಲ್ಲಿ ಡಾ. ಗಣೇಶ ಎಸ್. ನಾಗ್ವೇಕರ (ವಿದ್ವತ್) ಮಹೇಶ

ಮಹಾಲೆ, ಪ್ರಶಾಂತ ತೇಲಂಗ, ನಾರಾಯಣ ರಾಯ್ಕರ, ಕೃಷಮೂರ್ತಿ ಗುನಗಾ, ದರ್ಶಿನಿ ಶೆಟ್ಟಿ, ಸ್ನೇಹಾ ನಾರ್ವೇಕರ ಮುಂತಾದವರು. ತಬಲಾ ವಾದನದಲ್ಲಿ ಮಧು ಕುಡಾಳಕರ, ಶಶಿಧರ ಭಟ್ (ವಿದ್ವತ) ತನ್ಮಯ ಆಜಾದೀಪಕರ (ಸೀನಿಯರ್), ನಿಶಾಂತ ಕೇಣಿ, ಶ್ರೇಯಸ್ ಎಸ್. ಎಂ., ವರದ ಶೆಟ್ಟಿ. ಸಂವಾದನಿಯಲ್ಲಿ ಅಭಯ ಮರಬಳ್ಳಿ, ಗಣೇಶ ನಾಗ್ವೇಕರ, ರವಿ ರಾಯ್ಕರ ಡಾ. ನಾರಾಯಣ ರಾಯ್ಕರ ಮುಂತಾದವರು.

ಅಂಕೋಲಾ ತಾಲೂಕಿನಲ್ಲಿರುವ ಇನ್ನೋರ್ವ ಅಪ್ರತಿಮ ಕಲಾಕಾರ ಎಂದರೆ ಶ್ರೀ ಗೋಪಾಲ ಶ್ರೀಧರ ವಾಜಂತ್ರಿ. ಇವರು ತಮ್ಮ ಮನೆತನದಿಂದ ಪರಂಪರಾನುಗತವಾಗಿ ಒಲಿದು ಬಂದಿರುವ ವಾದನದ ಕಲೆಯನ್ನು ಅಭ್ಯಸಿಸಿ ಕರಗತ ಮಾಡಿಕೊಂಡಿರುವ ಹಿನ್ನಲೆಯಲ್ಲಿ ಕೊಳಲು, ಶಹನಾಯಿ, ಕ್ಲಾರಿನೇಟ್, ಸೆಕ್ಸೋಫೋನ್, ಹಾರ್ಮೋನಿಯಂ ಮುಂತಾದ ವಾದ್ಯಗಳನ್ನು ಸುಶ್ರಾವ್ಯವಾಗಿ ನುಡಿಸುವುದಲ್ಲದೇ ಸುಗಮ ಸಂಗೀತ ಮತ್ತು ಭಜನಾ ಕಾರ್ಯಕ್ರಮಗಳಲ್ಲಿ ತಬಲಾ ಸಾಥ ಮಾಡುವವರಾಗಿದ್ದಾರೆ. ಅಲ್ಲದೆ ಎಲ್ಲ ಬಗೆಯ ವಾದ್ಯ ಪರಿಕರಗಳನ್ನು ತಯಾರಿಸುವಲ್ಲಿ ಸಿದ್ಧಹಸ್ತರು.

ಪ್ರಾಚೀನ ಕಾಲದಿಂದ ಅವ್ಯಾಹತವಾಗಿ ತಲತಲಾಂತರಗಳಿಂದ ಪರಂಪರಾನುಗತವಾಗಿ ಹರಿದು ಬಂದಿರುವ ಸಂಗೀತ ಸೇವೆ ಹೀಗೆ ನಿರಂತರವಾಗಿ ಮುಂದುವರಿಯಲೆಂದು ಆಶಿಸೋಣ.

ವಂದನೆಗಳು

ಹೂವೆ !

ಮಳೆಯಲ್ಲಿ ಗಾಳಿಯಲಿ
ಗುಡುಗು ಸಿಡಿಲುಗಳಲ್ಲಿ
ಬಿಸಿಲು-ಬೇಗೆಯಲ್ಲಿ ಕುಲುಕುಲನೆ ನಗುತ
ಪರಿಮಳವ ಬೀರುತ್ತ
ಭ್ರಮರಗಳ ಕರೆಯುತ್ತ
ತಣಿಸುತಿಹೆ ಮಕರಂದವನು ನೀಡುತ.

ಅರಳಿ ರವಿಯುದಯದಲಿ
ನಲಿದು ಜನಹೃದಯದಲಿ
ತಾಯ್ಗೆರಗಿ ಅಸ್ತಮಯ ಸಮಯದಲ್ಲಿ
ಕೆಲ ಚಣದ ಬಾಳ್ ಬಾಳೆ
ಮಿಣುಕುತಿಹೆ ಗಗನದಲಿ
ನಿನ್ನ ಸೊಗಮಿರಲೆನ್ನ ಬಾಳಿನಲ್ಲಿ.

– ವಿ. ವೆ. ತೊರ್ಕೆ
(ಸುಮಾಂಜಲಿ ಸಂಕಲನದಿಂದ)

ಅಂಕೋಲೆಯ ಗ್ರಾಮದೇವತೆಗಳ ಮೂಲವ ಅರಸುತ್ತಾ...

– ವಿಘ್ನೇಶ್ವರ ಗುನಗಾ

ಕೃಷಿ ದೇವತೆಗಳು ಮತ್ತು ಮೃತಪಟ್ಟ ವೀರಯೋಧರನ್ನು ಗ್ರಾಮದೇವತೆಗಳನ್ನಾಗಿ ಆರಾಧಿಸುವ ಪದ್ಧತಿಯು ಅಂಕೋಲೆ ಮತ್ತು ಸುತ್ತ ಮುತ್ತಲಿನ ಪರಿಸರದೆಲ್ಲೆಡೆ ಕಂಡು ಬರುತ್ತದೆ. ಅಂಕೋಲಾ ತಾಲೂಕಿನ 30ಕ್ಕೂ ಹೆಚ್ಚು ಗ್ರಾಮಗಳಲ್ಲಿ, ಅನಾದಿ ಕಾಲದಿಂದ ಆರಾಧಿಸಲ್ಪಡುತ್ತಿರುವ ಗ್ರಾಮದೇವತೆಗಳ ದೇವಾಲಯಗಳು ಮತ್ತು ಅವುಗಳ ಪರಿವಾರ ದೇವತೆಗಳ ಗುಡಿಗಳು ಕಂಡುಬರುತ್ತವೆ. ಒಂದೇ ರೀತಿಯ ಪೂಜಾ ಪದ್ಧತಿಯನ್ನು ಹೊಂದಿರುವ ಇಲ್ಲಿನ ಗ್ರಾಮದೇವತೆಗಳ ಹೆಸರಿನಲ್ಲಿ ಕೆಲವೆಡೆ ಭಿನ್ನತೆಗಳಿದ್ದರೂ, ಹೆಚ್ಚಿನೆಡೆಗಳಲ್ಲಿ ಸಾಮ್ಯತೆಯೇ ಕಂಡು ಬರುತ್ತವೆ. ಹೀಗೆ, ಈ ಭಾಗದಲ್ಲಿ ಆರಾಧಿಸಲ್ಪಡುತ್ತಿರುವ ಈ ಗ್ರಾಮದೇವತೆಗಳನ್ನು ಕೃಷಿ, ಮಹಾ ಮಾರಿ, ಬೇಟೆ ಮತ್ತು ಗ್ರಾಮದ ರಕ್ಷಣೆಗೆ ಸಂಬಂಧಿಸಿದ ದೇವತೆಗಳನ್ನಾಗಿ ಗುರುತಿಸಲಾಗುತ್ತದೆ.

ಗ್ರಾಮದೇವತೆಗಳಲ್ಲಿನ ಪ್ರಕಾರಗಳು :

ಅಂಕೋಲೆಯ ಪರಿಸರದಲ್ಲಿ ಆರಾಧಿಸಲ್ಪಡುವ ಗ್ರಾಮದೇವತೆಗಳನ್ನು ಮೂರು ಮುಖ್ಯ ಶ್ರೇಣಿಗಳಲ್ಲಿ ವಿಂಗಡಿಸಬಹುದು.

1. ಪ್ರಧಾನ ದೇವತೆ : ಒಂದು ಗ್ರಾಮಕ್ಕೆ ಒಂದು ಪ್ರಧಾನ ದೇವತೆಯಿದ್ದು, ಅದನ್ನು ಗ್ರಾಮದೇವತೆಯನ್ನಾಗಿ ಆರಾಧಿಸಲಾಗುತ್ತದೆ. ಇನ್ನುಳಿದ ಸಹಾಯಕ ದೇವತೆಗಳನ್ನು ಆ ದೇವತೆಯ ಪರಿವಾರ ದೇವತೆಗಳು ಎಂದು ಕರೆಯಲಾಗುತ್ತದೆ.

ಈ ಭಾಗದ ಹೆಚ್ಚಿನ ಗ್ರಾಮಗಳಲ್ಲಿ ಅಮ್ಮನವರು ಗ್ರಾಮದೇವತೆಯಾಗಿದ್ದು, ಅಮ್ಮನವರ ಉಪಸ್ಥಿತಿ ಇಲ್ಲದ ಕೆಲವು ಗ್ರಾಮಗಳಲ್ಲಿ ಬೊಮ್ಮಯ್ಯ, ಮುರ್ಕುಂಡಿ, ಬೀರ ಮುಂತಾದ ದೇವರುಗಳು ಗ್ರಾಮದೇವತೆಗಳಾಗಿರುವುದು ಕಂಡುಬರುತ್ತದೆ.

2. ಪರಿವಾರ ದೇವತೆಗಳು : ಅಮ್ಮನವರು ಗ್ರಾಮದ ಪ್ರಧಾನ ದೇವತೆಯಾಗಿರುವ ಗ್ರಾಮಗಳಲ್ಲಿ ಬೊಮ್ಮಯ್ಯ, ಬೀರ, ಹೊನ್ನಪ್ಪ, ಹೊಸಬ, ಜಾಳಿ, ಪಂತಿ, ಬೇಡ, ಮಾಸ್ತಿ, ರಾಕೇಸರ, ಹೊಸಬ, ಹೊಲ್ಯೇಟರ, ಹುಲಿ ದೇವರು ಮುಂತಾದ ದೇವತೆಗಳನ್ನು ಆಕೆಯ ಪರಿವಾರ ದೇವತೆಗಳನ್ನಾಗಿ ಪೂಜಿಸಲಾಗುತ್ತದೆ.

3. ಉಪ ಪರಿವಾರ ದೇವತೆಗಳು : ಜಟಗ, ನಾಸ, ಚೌಂಡಿ, ಕರಿದೇವರು, ಹೆಮ್ಮೊಲ್ತಿ ಮುಂತಾದ ಕೆಲವು ದೇವರುಗಳು ಪರಿವಾರ ದೇವತೆಗಳಿಗಿಂತ ನಂತರದ ಶ್ರೇಣಿಯಲ್ಲಿ ಪೂಜಿಸಲ್ಪಡುತ್ತಿರುವುದು ಇಲ್ಲಿನ ಪರಿಸರದಲ್ಲಿ ಕಂಡು ಬರುತ್ತವೆ.

ಇಲ್ಲಿ ಪೂಜಿಸಲ್ಪಡುವ ಕೆಲವು ಗ್ರಾಮದೇವತೆಗಳಿಗೆ ದೊಡ್ಡ ದೊಡ್ಡ ದೇವಾಲಯಗಳಿದ್ದರೆ, ಇನ್ನು ಕೆಲವು ಪರಿವಾರ ದೇವತೆಗಳಿಗೆ ಅರ್ಚಕರು ನಿಂತು ಪೂಜೆ ಸಲ್ಲಿಸುವುದೂ ಅಸಾಧ್ಯ ಎನ್ನುವಷ್ಟು ಚಿಕ್ಕ ಗುಡಿಗಳಿವೆ. ನಾಗರ, ಹುಲಿದೇವರು, ಕರಿದೇವರು, ಮಾಸ್ತಿ, ನಾಸ ಮುಂತಾದ ದೇವತೆಗಳಲ್ಲಿ ಹೆಚ್ಚಿನವುಗಳು ತಲೆಯ ಮೇಲೆ ಸೂರೇ ಇಲ್ಲದೇ, ಮರದ ಬುಡದಲ್ಲಿಯೋ, ಕಟ್ಟೆಯ ಮೇಲೋ, ಗಿಡ–ಗಂಟೆಗಳ ಮಧ್ಯೆಯೋ, ನೂರಾರು ವರ್ಷಗಳಿಂದ ಮಳೆ–ಬಿಸಿಲೆನ್ನದೇ ನಿಂತಿವೆ. ಆದರೆ, ಹೊಸದಾಗಿ ತಲೆಯೆತ್ತಿರುವ ಶ್ರೀಮಂತ ದೇವಾಲಯಗಳ ನಡುವೆಯೂ ಈ ಗ್ರಾಮದೇವತೆಗಳು, ಇಂದಿಗೂ ಗ್ರಾಮದ ಜನರ ಹೃದಯ ದೇಗುಲದಲ್ಲಿ ತಮ್ಮನ್ನು ಪ್ರತಿಷ್ಠಾಪಿಸಿಕೊಂಡಿವೆ ಎಂದರೆ ತಪ್ಪಾಗಲಿಕ್ಕಿಲ್ಲ.

ಪ್ರಧಾನ ದೇವತೆಗಳು ಮತ್ತು ಕೆಲವು ಪ್ರಮುಖ ಪರಿವಾರ ದೇವತೆಗಳಿಗೆ ನಿತ್ಯ ಪೂಜೆ, ಉಪಾರ, ರಾತ್ರಿ ಪೂಜೆಗಳು ನಡೆದರೆ, ಹೆಚ್ಚಿನ ಪರಿವಾರ ದೇವತೆಗಳಿಗೆ ವಾರಕ್ಕೊಮ್ಮೆ(ಸೋಮವಾರದಂದು) ಪೂಜೆ ನಡೆಯುತ್ತದೆ. ಉಪ ಪರಿವಾರ ದೇವತೆಗಳಿಗೆ ವರ್ಷಕ್ಕೊಮ್ಮೆ ನಡೆಯುವ ಆವಾರಿಯಂದೇ, ಪೂಜೆ ಮತ್ತು ರಾತ್ರಿಯ ಅಯನ ನಡೆಯುತ್ತದೆ.

ಪರಿವಾರ ದೇವತೆಗಳಲ್ಲಿಯೂ ಒಳ ಪರಿವಾರ ದೇವತೆಗಳು ಮತ್ತು ಹೊರ ಪರಿವಾರ ದೇವರುಗಳೆಂಬ ವಿಧಗಳಿವೆ. ಹೊರ ಪರಿವಾರ ದೇವರುಗಳಿಗೆ ಪ್ರಾಣಿ

ಬಲಿ ಸಾಮಾನ್ಯವಾದರೆ, ಒಳ ಪರಿವಾರ ದೇವತೆಗಳಿಗೆ ರಕ್ತ ಬಲಿ ವರ್ಜ್ಯ.

ಅಮ್ಮನವರು, ಭೂಮಿತಾಯಿ

ಈ ಭಾಗದ ಹೆಚ್ಚಿನ ಗ್ರಾಮಗಳಲ್ಲಿ ಅಮ್ಮನವರನ್ನು ಗ್ರಾಮದೇವತೆಯನ್ನಾಗಿ ಆರಾಧಿಸಲಾಗುತ್ತದೆ. ಅಂಕೋಲೆಯ ಗ್ರಾಮದೇವತೆಯನ್ನು ಅಮ್ಮನವರು, ಅಮ್ಮ, ಭೂಮ್ತಾಯಿ, ಕುಂಬಾರಕುಂಠಿ, ಶಾಂತಾದುರ್ಗೆ, ಭೂಮ್ದೇವತೆ ಎಂಬ ಹೆಸರುಗಳಿಂದ ಕರೆದರೆ, ಅವರ್ಸಾದ ಗ್ರಾಮದೇವತೆಯನ್ನು ಭೂದೇವಿ ಎಂದೂ, ಅಲಗೇರಿಯ ಗ್ರಾಮದೇವತೆಯನ್ನು ಸಣ್ಣಮ್ಮ ದೇವಿ, ಹೊಸಗೇರಿಯ ಗ್ರಾಮದೇವತೆಯನ್ನು ಬಿಳಿಗಿರಿ ದೇವಿ, ಹಿಚ್ಕಡದ ಗ್ರಾಮದೇವತೆಯನ್ನು ಶಾಂತಾದುರ್ಗೆ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ.

ಬಾಂಬೆ ಪ್ರೆಸಿಡೆನ್ಸಿ ಗ್ಯಾಜೆಟಿಯರ್‌ನಲ್ಲಿ "ಅಂಕೋಲೆಯ ಅಮ್ಮ". ಕ್ರಿ.ಶ.1883ರಲ್ಲಿ ಪ್ರಕಟವಾದ ಬಾಂಬೆ ಪ್ರೆಸಿಡೆನ್ಸಿ ಗ್ಯಾಜೆಟಿಯರ್‌ನಲ್ಲಿ "ಜಿಲ್ಲೆಯಾದ್ಯಂತ ಅನೇಕ ಗ್ರಾಮದೇವತೆಗಳಿದ್ದು ಅವುಗಳನ್ನು ಆಯಾ ಗ್ರಾಮದ ಜನತೆ 'ಅಮ್ಮನವರು' ಎಂದು ಕರೆಯುತ್ತಾರೆ. ಗ್ರಾಮದೇವತೆಗಳ ಈ ಆರಾಧನಾ ಪದ್ಧತಿಯು, ಆರ್ಯರ ಆಗಮನಕ್ಕಿಂತ ಹಿಂದಿನ ಕಾಲಕ್ಕೆ ಸಂಬಂಧಿಸಿರುವಂತೆ ಕಂಡು ಬರುತ್ತದೆ. ಈ ಗ್ರಾಮದೇವತೆಗಳು, ಹೊಲ-ಗದ್ದೆ ಮತ್ತು ಗ್ರಾಮವನ್ನು ಕ್ಷುದ್ರ ದೇವತೆಗಳು ಮತ್ತು ಪ್ಲೇಗ್, ಬೆಂಕಿ, ಅತಿವೃಷ್ಟಿ-ಅನಾವೃಷ್ಟಿಗಳಂತಹ ವಿಪತ್ತುಗಳಿಂದ ಕಾಪಾಡುತ್ತವೆ. ಈ ಗ್ರಾಮದೇವತೆಗಳು ಹೆಚ್ಚಾಗಿ ಸ್ತ್ರೀರೂಪದಲ್ಲಿದ್ದು, ಗ್ರಾಮದ ಜನತೆ ಅವರನ್ನು 'ಅಮ್ಮನವರು' ಎಂದು ಕರೆಯುತ್ತಾರೆ. ಇವುಗಳಲ್ಲಿ ಅಂಕೋಲೆಯ ಅಮ್ಮ, ಭೂಮಿದೇವತೆ, ಕದ್ರಾ ಅಮ್ಮ, ಹೊನ್ನಾವರ ಅಮ್ಮ ಪ್ರಮುಖವಾದವು" ಎಂದು ವಿವರಿಸಲಾಗಿದೆ.

ಬೊಮ್ಮಯ್ಯ ದೇವರು

ಅಮ್ಮನವರುಗಳ ನಂತರ ಈ ಭಾಗದಲ್ಲಿ ಅತಿ ಹೆಚ್ಚು ಪ್ರಸಿದ್ಧಿಯನ್ನು ಪಡೆದಿರುವ ಗ್ರಾಮದೇವತೆ ಎಂದರೆ ಬೊಮ್ಮಯ್ಯ ದೇವರು. ಕಾರವಾರದ ಶಿರವಾಡದಿಂದ ಕುಮಟೆಯ ಅಂತ್ರೊಳ್ಳಿಯವರೆಗೆ ಸುಮಾರು 16ಕ್ಕೂ ಹೆಚ್ಚು ಗ್ರಾಮಗಳಲ್ಲಿ ಬೊಮ್ಮಯ್ಯ ದೇವರು ಪೂಜಿಸಲ್ಪಡುತ್ತದೆ. ಅಂಕೋಲೆಯ ಸುತ್ತ ಮುತ್ತಲಿನ ಗ್ರಾಮಗಳಾದ ಹೊಸಗದ್ದೆ, ತೆಂಕಣಕೇರಿ, ಹಿರೇಗುತ್ತಿ, ಅಲಗೇರಿ, ಕೊಗ್ರೆ, ಹೊನ್ನೆಬೈಲು ಗ್ರಾಮಗಳಲ್ಲಿ ಗ್ರಾಮದೇವತೆಯಾಗಿ ಪೂಜಿಸಲ್ಪಡುತ್ತಿದ್ದರೆ, ಅಂಕೋಲಾ, ಅವರ್ಸಾ, ಬೇಲೇಕೇರಿ, ಅಮದಳ್ಳಿ, ಬಳಲೆ, ಅಂತ್ರೊಳ್ಳಿ, ಕೊಡ್ಕಣಿ, ಕಡ್ಮೆ, ಶಿರವಾಡ ಗ್ರಾಮಗಳಲ್ಲಿ ಬೊಮ್ಮಯ್ಯ ದೇವರು ಪರಿವಾರ ದೇವತೆಯಾಗಿ ಪೂಜಿಸಲ್ಪಡುತ್ತದೆ.

ಹೆಚ್ಚಿನ ಗ್ರಾಮಗಳಲ್ಲಿ ಬೊಮ್ಮಯ್ಯ ದೇವರಿಗೆ ರಕ್ತ ಬಲಿ ನಿಷಿದ್ಧ. ಆದರೆ, ಕೆಲವು ಗ್ರಾಮಗಳಲ್ಲಿ ಬೊಮ್ಮಯ್ಯ ದೇವರಿಗೆ ರಕ್ತ ಬಲಿಯನ್ನು ನೀಡಲಾಗುತ್ತದೆ. ಹೆಚ್ಚಿನ ಗ್ರಾಮಗಳಲ್ಲಿ ಬೊಮ್ಮಯ್ಯ ದೇವರು ಗದೆಯನ್ನು ಧರಿಸಿ ಕುದುರೆಯ ಮೇಲೆ ಕುಳಿತಿದ್ದರೆ, ತೆಂಕಣಕೇರಿ ಗ್ರಾಮದಲ್ಲಿ ಮಾತ್ರ ಬೊಮ್ಮಯ್ಯ ದೇವರು ಆನೆಯ ಮೇಲೆ ಆಸೀನನಾಗಿದ್ದಾನೆ.

ಎಲ್ಲಾ ಬೊಮ್ಮಯ್ಯ ದೇವರುಗಳು ಮೂಲತಃ ಒಂದೇ ದೇವತೆಯೋ, ಅಥವಾ ಭಿನ್ನ ಭಿನ್ನ ದೇವತೆಗಳೋ ಹೇಳುವುದು ಸ್ವಲ್ಪ ಕಷ್ಟ. ಈ ಎಲ್ಲಾ ದೇವರುಗಳಲ್ಲಿ ಹೆಚ್ಚಿನ ಗೌರವ, ಆದರಗಳನ್ನು ಹೊಂದಿರುವುದು ಹೊಸಗದ್ದೆಯ ಬೊಮ್ಮಯ್ಯ ದೇವರು. ಈ ದೇವರನ್ನು ಹಿಂದೆ "ಈಸನಕುಳಿ ಬೊಮ್ಮಯ್ಯ ದೇವರು" ಎಂದೇ ಕರೆಯುತ್ತಿದ್ದರು. ಅಂಕೋಲೆಯ ಗ್ರಾಮದೇವತೆಯಾದ ಭೂಮ್ತಾಯಿಯು, ಸುತ್ತ-ಮುತ್ತಲಿನ ಹತ್ತೂ ಗ್ರಾಮಗಳ ಗ್ರಾಮದೇವತೆಗಳ ಹಿರಿಯಕ್ಕನೆಂದೇ ಗುರುತಿಸಲ್ಪಡುತ್ತಾಳೆ. ಆದರೆ, ಈಸನಕುಳಿ ಬೊಮ್ಮಯ್ಯ ದೇವರು, ಭೂಮ್ತಾಯಿಯ ಅಣ್ಣನೆಂದೇ ಪ್ರತೀತಿ. ಭೂಮ್ತಾಯಿ, ಅಂಕೋಲೆಯ ಬಂಡಿಹಬ್ಬದಲ್ಲಿ ತನ್ನ ಅಣ್ಣನಾದ ಈಸನಕುಳಿ ಬೊಮ್ಮಯ್ಯ ದೇವರನ್ನು ಕರೆಯಲು ಬರುತ್ತಾಳೆ. ಇದನ್ನು "ಅಣ್ಣನನ್ನು ಕರೆಯುವುದು" ಎಂದೇ ಹೇಳಲಾಗುತ್ತದೆ. ಅಂತೆಯೇ, ತೆಂಕಣಕೇರಿಯ ಬೊಮ್ಮಯ್ಯ ದೇವರೂ, ಈಸನಕುಳಿಯ ಬೊಮ್ಮಯ್ಯ ದೇವರನ್ನೇ ಕರೆಯಲು ಬರುತ್ತದೆ. ಹೀಗೆ, ತೆಂಕಣಕೇರಿಯ ಬೊಮ್ಮಯ್ಯ ದೇವರು ಮತ್ತು ಹೊಸಗದ್ದೆಯ ಬೊಮ್ಮಯ್ಯ ದೇವರು ಬೇರೆ ಬೇರೆ ಎಂಬುದು ಕಂಡು ಬರುತ್ತದೆ.

ಅಲ್ಲದೇ, ಬೊಮ್ಮಯ್ಯ ದೇವರು, ಭೂಮ್ತಾಯಿಯ ಪರಿವಾರ ದೇವತೆಯಾಗಿದ್ದು ದೇವಾಲಯದ ಪರಿಸರದಲ್ಲಿಯೇ ಅದರ ಗುಡಿ ಇದೆ. ಭೂಮ್ತಾಯಿಯ ಮೂಲವೆಂದೇ ನಂಬಲಾದ ಶಿರಕುಳಿಯಲ್ಲಿ ಬೊಮ್ಮಯ್ಯ

ದೇವರು ಮತ್ತು ಕಾನದೇವತೆ ಒಟ್ಟಿಗೆ ನಿಂತಿದ್ದಾರೆ, ಶೆಡಗೇರಿ, ಅಂಬಾರಕೊಡ್ಲ, ಬೆರಡೆ, ಕುಳಿಗದ್ದೆ, ಕಾರ್ನಗೋಡ ಮತ್ತು ಬಾಳೇಗುಳಿಗಳಲ್ಲಿಯೂ ಬೊಮ್ಮಯ್ಯ ದೇವರ ವಿಗ್ರಹಗಳಿವೆ.

ಬೀರ, ಹಿರೇ ಹೊನ್ನಪ್ಪ, ಹೊಲ್ಯೇಟರ, ರಾಕೇಸರ

ಬೀರ ದೇವರು ಅಂಕೋಲೆಯ ಪರಿಸರದಲ್ಲಿ ಅತಿ ಹೆಚ್ಚು ಗ್ರಾಮಗಳಲ್ಲಿ ಪೂಜಿಸಲ್ಪಡುವ ದೇವತೆ. ಹೆಚ್ಚಿನ ಗ್ರಾಮಗಳಲ್ಲಿ ಪರಿವಾರ ದೇವತೆಯಾಗಿ ಪೂಜಿಸಲ್ಪಡುವ ಬೀರ ದೇವರು, ಕೆಲವು ಗ್ರಾಮಗಳಲ್ಲಿ ಪ್ರಧಾನ ದೇವತೆಯಾಗಿಯೂ ಆರಾಧಿಸಲ್ಪಡುತ್ತದೆ. ಬೀರ, ಚಂಡಿಕೆ ಬೀರ, ಜೈನ ಬೀರ, ಮಾಣಿ ಬೀರ, ಬಲಿ ಬೀರ, ಅರಮನೆ ಬೀರ, ಕಾಳ ಬೀರ, ಉರಿ ಬೀರ, ಬೀದಿ ಬೀರ, ಶೂಲದ ಬೀರ, ಬೇಟೆ ಬೀರ ಎಂಬ ಹೆಸರುಗಳಿದ್ದು ಅವು ಬಹುಶಃ ಬೀರ ದೇವರುಗಳ ಕೆಲಸವನ್ನು ಹೇಳುತ್ತವೆ.

ಹಿರೇ ಹೊನ್ನಪ್ಪ, ಹೊಲ್ಯೇಟರ, ರಾಕೇಸರ, ಚಾಳಿ–ಪಂತಿ, ಬೇಡ, ಮಾಸ್ತಿ, ಹುಲಿದೇವರು, ಈ ಭಾಗದ ಹೆಚ್ಚಿನ ಗ್ರಾಮಗಳಲ್ಲಿ ಪರಿವಾರ ದೇವತೆಗಳಾಗಿ ಪೂಜಿಸಲ್ಪಡುತ್ತವೆ. "ಹೊಲೆಯ ಭಟರು" ಎಂಬ ಮೂಲ ಹೆಸರೇ ಅಪಭ್ರಂಶಗೊಂಡು ಹೊಲ್ಯೇಟರ ಆಗಿರುವ ಸಾಧ್ಯತೆಗಳಿವೆ ಎಂದು ಅನೇಕರು ಅಭಿಪ್ರಾಯ ಪಡುತ್ತಾರೆ. ಹಿರಿಯರು ಹೇಳುವ ಪ್ರಕಾರ "ಈ ಗ್ರಾಮದೇವತೆಗಳು, ಹಿಂದೆ ಗ್ರಾಮವನ್ನು ಕಾಡುತ್ತಿದ್ದ ಮಹಾಮಾರಿ, ಅವುಗಳಿಂದ ಸಂಭವಿಸುತ್ತಿದ್ದ ಮೃತ್ಯು, ಅವುಗಳ ಪರಿಹಾರಾರ್ಥವಾಗಿ ಸಲ್ಲಿಸುತ್ತಿದ್ದ ರಕ್ತ ಬಲಿಗಳಿಗೇ ಸಂಬಂಧಿಸಿದ ದೇವತೆಗಳು. ಒಂದರ್ಥದಲ್ಲಿ ಹೊಲೆ(ಮೈಲಿಗೆ)ಯೊಂದಿಗೇ ಸಂಬಂಧವನ್ನು ಹೊಂದಿರುವ ದೇವತೆಗಳು. ಹೀಗೆ, ಗ್ರಾಮದ ಹೊಲೆಯನ್ನು ದೂರ ಮಾಡುವ ಭಟರು ಎಂಬರ್ಥದಲ್ಲಿ ಹೊಲ್ಯೇಟರ ಎಂದು ಕರೆದಿರುವ ಸಾಧ್ಯತೆಗಳಿವೆ". ಇನ್ನೂ ಕೆಲವರ ಪ್ರಕಾರ, "ಹಿಂದೆ ಬೇಟೆಯನ್ನು 'ಹೊಲ' ಎಂದೇ ಕರೆಯುತ್ತಿದ್ದರು. ಹೊಲದ ಭಟರು ಎಂದರೆ, ಬೇಟೆಗೆ ಸಂಬಂಧಿಸಿ ಭಟರು ಎಂಬರ್ಥದಲ್ಲಿಯೂ ಹೊಲ್ಯೇಟರ ಅಥವಾ ಹೊಲವಟರ ಎಂದು ಕರೆದಿರುವ ಸಾಧ್ಯತೆಗಳಿವೆ."

ಜಟ್ಟಿಗಗಳೇ, ಪ್ರಾಚೀನ ಕಾಲದ ವೀರಗಲ್ಲುಗಳು

ಈ ಭಾಗದಾದ್ಯಂತ, ಗ್ರಾಮದ ಪ್ರತಿಯೊಂದು ಕೊಪ್ಪದಲ್ಲಿಯೂ ಗ್ರಾಮ ದೇವತೆಗೆ ಸಂಬಂಧಿಸಿದ ಒಂದೊಂದು ಜಟಗ ಇರುವುದು ಕಂಡು ಬರುತ್ತದೆ. ಮರದ ಕಂಬದಾಕಾರದಲ್ಲಿರುವ ಈ ಜಟಗಗಳನ್ನು ಅವು ನೆಲೆಸಿರುವ ಜಾಗೆಯ ಮೇಲಿಂದ ತಾರೀ ಜಟಗ, ಹಾದರಗದ್ದೆ ಜಟಗ, ಕುಂಬಾರ ಜಟಗ ಎಂದು ಗುರುತಿಸಲಾಗುತ್ತದೆ. ಈ ಜಟಗಗಳಿಗೆ ಸುತ್ತ ಮುತ್ತಲಿನ ಜನರೆಲ್ಲ ಸೇರಿ ವರ್ಷಕ್ಕೊಮ್ಮೆ ಆವಾರೆ ನಡೆಸಿ, ಕೋಳಿ–ಕುರಿ ಬಲಿ ನೀಡುವುದು ವಾಡಿಕೆ. ಹೀಗೆ, ಆವಾರೆ ನಡೆದ ದಿನ ರಾತ್ರಿ ಅಯನವನ್ನು ನಡೆಸಲಾಗುತ್ತದೆ. ಕುಂಬಾರಕೇರಿಯಲ್ಲಿ ನೆಲೆಸಿರುವ ತೊಟ್ಟಿಲ ಜಟಗವು, ಈ ಭಾಗದ ಜಟಗಗಳಲ್ಲಿಯೇ ಅತ್ಯಂತ ಪ್ರಮುಖವಾಗಿ ಗುರುತಿಸಲ್ಪಡುತ್ತದೆ. ಅಂಕೋಲೆಯ ಬಂಡಿಹಬ್ಬ ನಡೆದ ಒಂದು ತಿಂಗಳ ನಂತರ ತೊಟ್ಟಿಲ ಜಟಗನಲ್ಲಿ ಹಬ್ಬ ನಡೆಯುತ್ತದೆ. ಇಲ್ಲಿ ಈ ಆವಾರೆ ನಡೆದ ನಂತರವೇ ಅಂಕೋಲೆ, ತೆಂಕಣಕೇರಿ, ಪೂಜಗೇರಿ ಗ್ರಾಮಗಳ ಗ್ರಾಮದೇವತೆಗಳ ದೇವಾಲಯಗಳಲ್ಲಿ ಬಂಡಿಹಬ್ಬದ ವಿಧಿ–ವಿಧಾನಗಳ ಪ್ರಯುಕ್ತ ಸ್ಥಗಿತಗೊಂಡಿದ್ದ ಪೂಜೆಗಳು ಪುನರಾರಂಭಗೊಳ್ಳುವುದು ರೂಢಿ.

2ನೇ ಶತಮಾನದ್ದೆಂದು ನಂಬಲಾದ ತಮಿಳು ಕವಿತೆಗಳ ಸಂಗ್ರಹ "ಪುರಾಣನೂರು"ನಲ್ಲಿ ಯುದ್ಧದಲ್ಲಿ ಮೃತಪಟ್ಟ ಯೋಧರನ್ನು ಸ್ಮರಿಸಿಕೊಳ್ಳುತ್ತಾ "ತುದಿಯನ್, ಪಾನನ್, ಪರೈಯನ್ ಮತ್ತು ಕದಂಬನ್ ಕುಡಿ (ಜಾತಿ)ಗಳನ್ನು ಬಿಟ್ಟು ಬೇರೆ ಜಾತಿಗಳಿಲ್ಲ. ಯುದ್ಧದಲ್ಲಿ ವೈರಿಗಳನ್ನು ಎದುರಿಸಿ ಮೃತಪಟ್ಟ ವೀರ ಯೋಧರ ಕಂಬಗಳನ್ನು ಪೂಜಿಸುವದಕ್ಕಿಂತ ದೊಡ್ಡ ದೇವರಿಲ್ಲ" ಎಂದು ಹೇಳಲಾಗಿದೆ. ಡಾ. ಹೇಮಂತ ಭಟ್ಟರು, ತಮ್ಮ "ಉತ್ತರ ಕನ್ನಡದ ಶಾಸನಗಳು ಮತ್ತು ದೇವಾಲಯಗಳು" ಎಂಬ ಪ್ರಬಂಧದಲ್ಲಿ, "ಜಿಲ್ಲೆಯಾದ್ಯಂತ ಆರಾಧಿಸಲ್ಪಡುವ ಜಟ್ಟಿಗಗಳೇ, ಪ್ರಾಚೀನ ಕಾಲದ ವೀರಗಲ್ಲುಗಳು" ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಗ್ರಾಮದೇವತೆಗಳ ಪೂಜಾ ಪದ್ಧತಿ

ವೈದಿಕ ದೇವತೆಗಳ ಆರಾಧನಾ ಪದ್ಧತಿಯಿಂದ ಸಂಪೂರ್ಣ ಭಿನ್ನವಾಗಿರುವ ಇಲ್ಲಿನ ಗ್ರಾಮದೇವತೆಗಳ ಆರಾಧನಾ ಪದ್ಧತಿಯನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

1. ಸಾಮಾನ್ಯವಾದ ಕಲ್ಲು–ಗುಂಡುಗಳೇ ದೇವತೆಗಳು : ಇತ್ತೀಚಿನ ವರ್ಷಗಳಲ್ಲಿ ಅನೇಕ

ಗ್ರಾಮದೇವತೆಗಳಿಗೆ ವಿಗ್ರಹ ರೂಪವನ್ನು ನೀಡಲಾಗಿದೆಯಾದರೂ, ಅವು ಮೂಲತಃ ಹುತ್ತ ಅಥವಾ ಕಲ್ಲುಗುಂಡುಗಳ ರೂಪವನ್ನೇ ಹೊಂದಿದ್ದದ್ದು ತಿಳಿದು ಬರುತ್ತದೆ. ಅಲ್ಲದೇ, ಈ ಭಾಗದ ಅನೇಕ ಕಡೆಗಳಲ್ಲಿ ಇಂದಿಗೂ ಕೆಲವು ಪರಿವಾರ ದೇವತೆಗಳು, ಕಲ್ಲು-ಗುಂಡುಗಳ ರೂಪದಲ್ಲಿಯೇ ಆರಾಧಿಸಲ್ಪಡುತ್ತಿರುವುದು ಕಂಡು ಬರುತ್ತದೆ.

2. ಅವೈದಿಕ ಆಚರಣೆ: ಈ ದೇವತೆಗಳ ಆರಾಧನೆಯು, ಯಾವುದೇ ವೇದ ಮಂತ್ರಗಳ ಸೋಂಕಿಲ್ಲದೆ ಅತ್ಯಂತ ಸರಳತೆಯಿಂದ ಕೂಡಿರುತ್ತದೆ. ಹೇಳಿಕೆ, ಹರಕೆಗಳೆಲ್ಲ ಅಪ್ಪಟ ಗ್ರಾಮೀಣ ಭಾಷೆಯಲ್ಲಿರುತ್ತವೆ. ಈ ದೇವತೆಗಳಿಗೆ ಎಣ್ಣೆಯ ಸ್ನಾನ, ದೆವ್ವ ಕಟ್ಟುವುದು (ಪೂರ್ವಜರ ಆತ್ಮವನ್ನು ದೈವಸ್ಥಾನದಲ್ಲಿ ಬಂಧಿಸಿಡುವ ಕ್ರಿಯೆ), ಅರ್ಚಕರಿಗೆ ಮೈ ಭಾರ ಬರುವುದು, ಬಾಗಿಲ ಕಟ್ಟುವುದು ಮುಂತಾದ ಸಂಪೂರ್ಣ ಜಾನಪದ ವಿಧಿಗಳಿಗೆ ಇಲ್ಲಿ ಅತ್ಯಂತ ಹೆಚ್ಚಿನ ಮಹತ್ವವಿರುತ್ತದೆ.

3. ರಕ್ತ ಬಲಿಯೇ ಶ್ರೇಷ್ಠ : ಹಿಂದು ಧರ್ಮದಲ್ಲಿ ರಕ್ತವು, ಬಿಸಿಯಾದ, ಅತ್ಯಂತ ಶಕ್ತಿಶಾಲಿಯಾದ, ಅಶುದ್ಧವಾದ ಮತ್ತು ಯಾವುದೇ ವಸ್ತುವನ್ನು ಅಶುದ್ಧಗೊಳಿಸಬಲ್ಲ ವಸ್ತುವೆಂದು ಪರಿಗಣಿಸಲ್ಪಟ್ಟಿದೆ. ಹಾಗೆಯೇ, ರಕ್ತ ಬಲಿಯನ್ನು ಪಡೆಯುವ ದೇವತೆಗಳೂ ಸಹ ಅಷ್ಟೇ ಶಕ್ತಿಶಾಲಿಯಾಗಿದ್ದು, ಅತ್ಯಂತ ಅಪಾಯಕಾರಿಯೂ ಆಗಿರುತ್ತವೆ ಎಂದು ಇಲ್ಲಿನ ಜನ ನಂಬಿದ್ದರು. ಅಂತೆಯೇ, ವರ್ಷಕ್ಕೊಮ್ಮೆ ಬಂಡಿಹಬ್ಬ ಅಥವಾ ಅವಾರೆ ನಡೆಸಿ ಈ ದೇವತೆಗಳಿಗೆ ರಕ್ತ ಬಲಿ ನೀಡುವುದು ಸಾಮಾನ್ಯವಾಗಿ ಕಂಡು ಬರುತ್ತದೆ.

"ಹಿಂದೆ, ಮೃತ ವೀರ ಯೋಧರ ಸ್ಮರಣಾರ್ಥ ಕಲ್ಲನ್ನು ನೆಟ್ಟು, ಅದರ ಮೇಲೆ ಬಲಿ ನೀಡಿದ ಪ್ರಾಣಿಯ ರಕ್ತವನ್ನು ಹಾಕಲಾಗುತ್ತಿತ್ತು. ಅದನ್ನು ಗುರುತಿನ ಕಲ್ಲು ಅಥವಾ 'ಗುತ್ತ' ಎಂದು ಕರೆಯಲಾಗುತ್ತಿತ್ತು. ಆ ಜಾಗೆಯು ಪವಿತ್ರ ಸ್ಥಳವೆಂದು ಘೋಷಿಸಲ್ಪಡುತ್ತಿತ್ತು. ಅದನ್ನು ಉಲ್ಲಂಘಿಸುವುದನ್ನು ಅಪರಾಧವೆಂದು ಪರಿಗಣಿಸಲಾಗುತ್ತಿತ್ತು" ಎಂಬ ಉಲ್ಲೇಖ ಅನೇಕ ಪುಸ್ತಕಗಳಲ್ಲಿ ಸಿಗುತ್ತದೆ. ಹೀಗೆ, ಗ್ರಾಮದೇವರುಗಳ ಪ್ರತಿಷ್ಠಾಪನೆಯೇ ರಕ್ತ ಬಲಿಯಿಂದ ಆರಂಭಗೊಳ್ಳುತ್ತಿತ್ತು ಎಂದು ತಿಳಿದು ಬರುತ್ತದೆ.

4. ಬ್ರಾಹ್ಮಣೇತರರೇ ಅರ್ಚಕರು: ಗ್ರಾಮದೇವತೆಗಳ ಉಗಮದ ಸಮಯದಲ್ಲಿ ಈ ಭಾಗದಲ್ಲಿ ವೈದಿಕರು ಉಪಸ್ಥಿತರಿರಲಿಲ್ಲವೋ, ಅಥವಾ ರೋಗ, ಮರಣ, ರಕ್ತ ಬಲಿಯಂತಹ ಸಾಂಪ್ರದಾಯಿಕವಾಗಿ ಮೈಲಿಗೆ ಎಂದು ಪರಿಗಣಿಸಲ್ಪಡುವ ವಿಷಯಗಳೊಂದಿಗೇ ಸಂಬಂಧವನ್ನು ಹೊಂದಿರುವ ಈ ದೇವತೆಗಳೊಂದಿಗೆ ಅವರು ಸಹಜವಾಗಿಯೇ ದೂರವನ್ನು ಕಾಯ್ದುಕೊಂಡರೋ ಗೊತ್ತಿಲ್ಲ. ಅಂತೂ, ಈ ದೇವತೆಗಳ ಅರ್ಚಕರು ಮತ್ತು ಭಕ್ತವೃಂದ ಹೆಚ್ಚಾಗಿ ಬ್ರಾಹ್ಮಣೇತರರೇ ಆಗಿರುವುದು ಕಂಡುಬರುತ್ತದೆ. ಗ್ರಾಮದೇವತೆಗಳನ್ನು ಶಿಷ್ಟದೇವತೆಯ ಮಟ್ಟಕ್ಕೆ ಏರಿಸಿ ಪೂಜಿಸುವೆಡೆಯಲ್ಲಿ ಮಾತ್ರ ಮೇಲ್ಜಾತಿಯ ಅರ್ಚಕರನ್ನು ಕಾಣಬಹುದು.

5. ಕಳಸವೇ ಉತ್ಸವಮೂರ್ತಿ: ವೈದಿಕ ದೇವತೆಗಳ ದೇವಾಲಯಗಳಲ್ಲಿ ಜಾತ್ರೆ ಅಥವಾ ಉತ್ಸವಗಳ ಸಂದರ್ಭದಲ್ಲಿ ದೇವತೆಯ ಉತ್ಸವಮೂರ್ತಿಯನ್ನು ಪಲ್ಲಕ್ಕಿ, ತೇರು ಅಥವಾ ರಥಗಳಲ್ಲಿಟ್ಟು ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತದೆ. ಆದರೆ, ಗ್ರಾಮದೇವತೆಯ ದೇವಾಲಯಗಳಲ್ಲಿ ಕಳಸವೇ ಉತ್ಸವಮೂರ್ತಿ. ಈ ದೇವತೆಗಳ ಅರ್ಚಕರು ಬಂಡಿಹಬ್ಬದ ಜಾತ್ರೆಯಲ್ಲಿ ತಾವೇ ಕಳಸವನ್ನು ತಯಾರಿಸಿ ತಲೆಯ ಮೇಲೆ ಹೊತ್ತು ವಾದ್ಯ-ಘೋಷಗಳೊಂದಿಗೆ ಮೆರವಣಿಗೆ ಹೊರಡುವುದು ಸಾಮಾನ್ಯ. ಅಲ್ಲದೇ ಬಂಡಿಹಬ್ಬ ನಡೆಯುವ ಹೆಚ್ಚಿನ ಗ್ರಾಮಗಳಲ್ಲಿ ಇಂದಿಗೂ ಗ್ರಾಮದೇವತೆಯ ಉತ್ಸವಮೂರ್ತಿ ಇಲ್ಲದಿರುವುದೂ ವಿಶೇಷ.

6. ಬಂಡಿಹಬ್ಬವೇ ಜಾತ್ರೆ: ವೈದಿಕ ದೇವತೆಗಳ ದೇವಾಲಯಗಳಲ್ಲಿ ತೇರು, ರಥೋತ್ಸವಗಳು ಸಾಮಾನ್ಯವಾದರೆ, ಇಲ್ಲಿನ ಗ್ರಾಮ ದೇವತೆಗಳಿಗೆ ವಾರ್ಷಿಕ ಜಾತ್ರೆಯಾಗಿ ಬಂಡಿಹಬ್ಬ ಅಥವಾ ಗಡಿಹಬ್ಬ ನಡೆಯುವುದು ಸಾಮಾನ್ಯ. ಅಂತೆಯೇ, ವೈದಿಕ ದೇವತೆಗಳ ದೇವಾಲಯಗಳಲ್ಲಿ ಬಂಡಿಹಬ್ಬ ನಡೆಯುವುದಿಲ್ಲ ಎಂಬುದೂ ಗಮನೀಯ.

ಗ್ರಾಮ ದೇವತೆಗಳ ವಾರ್ಷಿಕ ಜಾತ್ರೆ

ತಮ್ಮ ಸಕಲ ಕಷ್ಟಗಳನ್ನು ಪರಿಹರಿಸಿ, ವರ್ಷವಿಡೀ ವಿಪತ್ತುಗಳಿಂದ ಕಾಪಾಡುವ ಗ್ರಾಮದೇವತೆಗೆ ಗ್ರಾಮಸ್ಥರು ತಾವು ಬೆಳೆದ ಬೆಳೆಯನ್ನು ಉಪಾರದ ರೂಪದಲ್ಲಿ ಅರ್ಪಿಸಿದ ನಂತರವೇ ತಾವು ಉಣ್ಣುತ್ತಾರೆ. ತಮ್ಮ ಜಾಗೆಯಲ್ಲಿ ಬೆಳೆದ ಯಾವುದೇ ಹೊಸ ಫಲವನ್ನು

ಗ್ರಾಮದೇವತೆಗೆ ಅರ್ಪಿಸಿ, ತಾವೂ ತಿನ್ನುತ್ತಾರೆ. ಹಿಂದೆ, ಶಿಕಾರಿ (ಕಾಡು ಪ್ರಾಣಿಗಳ ಬೇಟೆ)ಯಲ್ಲಿ ಯಾವುದೇ ಪ್ರಾಣಿಯನ್ನು ಬೇಟೆಯಾಡಿದರೂ "ದೇವರ ಪಾಲು" ಎಂದು ತೆಗೆದಿಡುವ ಪದ್ಧತಿಯಿತ್ತು.

ಇವೆಲ್ಲ ದೈನಂದಿನ ಪ್ರಕ್ರಿಯೆಗಳಾದರೆ, ವರ್ಷಕ್ಕೊಮ್ಮೆ ಕೃಷಿಯನ್ನು ಆರಂಭಿಸುವ ಮುಂಚೆ ಊರವರೆಲ್ಲ ಗ್ರಾಮದೇವತೆಯ ಮುಂದೆ ಸೇರಿ, ಮಳೆ-ಬೆಳೆ ಸರಿಯಾಗಿ ಆಗಲೆಂದೂ, ಗ್ರಾಮಸ್ಥರಿಗೆ ಮತ್ತು ದನ-ಕರುಗಳಿಗೆ ರೋಗ-ರುಜಿನಗಳು ಬರದೇ ಇರಲಿ ಎಂದೂ, ದೇವಿಯ ಆಶೀರ್ವಾದ ಪಡೆಯಲು ಬಂಡಿಹಬ್ಬವನ್ನು ಆಚರಿಸುತ್ತಿರುವುದು ಕಂಡು ಬರುತ್ತದೆ. ಹೀಗೆ, ನಡೆಯುವ ಬಂಡಿಹಬ್ಬದಲ್ಲಿ, ಗ್ರಾಮಸ್ಥರು ವರ್ಷವಿಡೀ ಹೇಳಿಕೊಂಡ ಹರಕೆಯನ್ನು ತೀರಿಸುವುದು, ಪರಿವಾರ ದೇವತೆಗಳಿಗೆ ಕೋಳಿಯನ್ನೋ, ಕುರಿಯನ್ನೋ ಅರ್ಪಿಸಿ ತಾವೂ ತಿನ್ನುವುದು ರೂಢಿ.

ಗ್ರಾಮದೇವತೆಗಳ ಮೂಲದ ಕುರಿತು ದಾಖಲೆಗಳಿಲ್ಲ. ಇಲ್ಲಿನ ಜನತೆಯ ಜೀವಾಳವೇ ಆಗಿರುವ ಗ್ರಾಮದೇವತೆಗಳ ಮೂಲ, ಪ್ರತಿಷ್ಠಾಪಿಸಲ್ಪಟ್ಟ ಕಾಲ ಮುಂತಾದವುಗಳ ನಿಖರವಾದ ಮಾಹಿತಿಯನ್ನು ನೀಡುವ ಯಾವುದೇ ಪುಸ್ತಕಗಳಾಗಲೀ, ಅಥವಾ ಶಾಸನಗಳಾಗಲೀ ದೊರೆಯುವುದಿಲ್ಲ. ಗ್ರಾಮದೇವತೆಗಳ ಕುರಿತು ಇತ್ತೀಚಿನ ದಿನಗಳಲ್ಲಿ ಡಾ. ಸಿದ್ದಲಿಂಗಯ್ಯ, ಬಸರಾಜ ಕೋಡಗುಂಟೆ, ಚನ್ನಣ್ಣ ವಾಲೀಕಾರರಂತಹ ಕೆಲವು ವಿದ್ವಾಂಸರುಗಳು ಅಧ್ಯಯನ ನಡೆಸಿದ್ದು ಬಿಟ್ಟರೆ, ರಾಜ್ಯ ಅಥವಾ ರಾಷ್ಟ್ರಮಟ್ಟದಲ್ಲಿಯೂ ಗ್ರಾಮದೇವತೆಗಳ ಕುರಿತು ತಿಳಿಸುವ ಐತಿಹಾಸಿಕ ಲೇಖನಗಳು ಅತ್ಯಂತ ವಿರಳವೆಂದರೆ ತಪ್ಪಲ್ಲ.

ನೂರಾರು ವರ್ಷಗಳ ಹಿಂದೆಯೇ ಅಧ್ಯಯನ ನಡೆಸಿದ್ದ ವಿದೇಶೀಗರು : ಕ್ರಿ.ಶ. 17 ರಿಂದ 20ನೇ ಶತಮಾನದ ಮಧ್ಯಂತರದಲ್ಲಿ ಭಾರತಕ್ಕೆ ಆಗಮಿಸಿದ ವಿದೇಶೀಯರು ದ.ಭಾರತದ ಗ್ರಾಮದೇವತೆಗಳ ಮೂಲ, ಆಚರಣೆ, ಪೂಜಾ ಪದ್ಧತಿಗಳ ಕುರಿತು ಅಧ್ಯಯನ ಮಾಡಿ, ಬರೆದಿಟ್ಟ ಅನೇಕ ಪುಸ್ತಕಗಳು ಈ ಗ್ರಾಮದೇವತೆಗಳ ಮೂಲದ ಕುರಿತು ಬೆಳಕು ಚೆಲ್ಲುತ್ತವೆ. ಜಿನಿಯೊಲೊಜಿ ಆಫ್ ಸೌತ್ ಇಂಡಿಯನ್ ಗೊಡ್ಸ್(ದ. ಭಾರತದ ದೇವತೆಗಳ ವಂಶಾವಳಿ), ದ್ರಾವಿಡಿಯನ್ ಗೊಡ್ಸ್ ಇನ್ ಮೊಡರ್ನ್ ಹಿಂದುಯಿಸಮ್, ಕಲ್ಟ್ ಆಫ್ ಮದರ್ ಗೊಡೆಸೆಸ್ ಇನ್ ಇಂಡಿಯಾ, ವಿಲೇಜ್ ಗೊಡ್ಸ್ ಆಫ್ ಸೌತ್ ಇಂಡಿಯಾದಂತಹ ಅನೇಕ ಪುಸ್ತಕಗಳಲ್ಲಿ ದಕ್ಷಿಣ ಭಾರತದ ಗ್ರಾಮದೇವತೆಗಳ ಮೂಲ, ಅಂದಿನ ಆಚರಣಾ ಪದ್ಧತಿಗಳ ಕುರಿತು ಸಾಕಷ್ಟು ವಿವರಗಳು ದೊರೆಯುತ್ತವೆ. ಅದರಲ್ಲಿಯೂ ಹುಕ್ ಸ್ವಿಂಗಿಗ್ ಇನ್ ಇಂಡಿಯಾ ಎಂಬ ಪುಸ್ತಕದಲ್ಲಿ ನೂರಾರು ವರ್ಷಗಳ ಹಿಂದೆ, ಕಾರವಾರದ ಬಂಡಿಹಬ್ಬದಲ್ಲಿ ಭಕ್ತರು ಬೆನ್ನಿಗೆ ಕಬ್ಬಿಣದ ಕೊಕ್ಕೆಯನ್ನು ಸಿಲುಕಿಸಿ ಬಂಡಿಗೆ ನೇತು ಬೀಳುತ್ತಿದ್ದ ವಿವರಗಳು ದೊರೆಯುತ್ತವೆ.

ಗ್ರಾಮರಕ್ಷಕ, ಕೃಷಿದೇವತೆ, ಅಮ್ಮನವರು, ಭೂಮಿತಾಯಿ ಈ ಪುಸ್ತಕಗಳ ಆಯ್ದ ಕೆಲವು ತುಣುಕುಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದ್ದು. ಇದರಲ್ಲಿನ ಅಂಶಗಳು ಅಂಕೋಲೆಯ ಗ್ರಾಮದೇವತೆಗಳ ಮೂಲದ ಕುರಿತು ಬೆಳಕು ಚೆಲ್ಲುತ್ತವೆ.

ಡಬ್ಲ್ಯೂ. ಕ್ರೂಕ್‌ರವರು 1919ರಲ್ಲಿ ಬರೆದ ಕಲ್ಟ್ಸ್ ಆಫ್ ಮದರ್ ಗೊಡೆಸೆಸ್ ಇನ್ ಇಂಡಿಯಾ ಎಂಬ ಲೇಖನದಲ್ಲಿ ಗ್ರಾಮದೇವತೆ ಮತ್ತು ಪರಿವಾರ ದೇವತೆಗಳ ಕುರಿತು "ದ.ಭಾರತದ ಕರ್ನಾಟಕ, ಕೇರಳ, ಆಂಧ್ರ ಪ್ರದೇಶ, ತಮಿಳುನಾಡುಗಳಲ್ಲಿನ ಮೂಲ ನಿವಾಸಿಗಳು ಕಲ್ಲು-ಗುಂಡು, ಹುತ್ತ, ಪವಿತ್ರ ಮರ ಹಾಗೂ ಮಡಕೆಯ ರಾಶಿಯನ್ನು, ಗ್ರಾಮದೇವತೆ ಎಂದು ಪೂಜಿಸುತ್ತಿದ್ದರು. ಅವರು ಗ್ರಾಮದೇವತೆಯನ್ನು ಭೂಮಿತಾಯಿ, ಅಮ್ಮನವರು ಎಂದು ಕರೆಯುತ್ತಿದ್ದರು. ಅಲ್ಲದೇ ಯುದ್ಧದಲ್ಲಿ ಮೃತಪಟ್ಟ ವೀರಯೋಧರನ್ನು ದೇವತೆಗಳೆಂದು ಆರಾಧಿಸುತ್ತಿದ್ದರು. ಅವುಗಳ ಆರಾಧನೆಯು ಅತ್ಯಂತ ಪ್ರಾಚೀನವಾದ ಸರಳತೆಯಿಂದ ಕೂಡಿರುತ್ತದೆ" ಎಂದು ಬರೆಯುತ್ತಾರೆ.

ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾದಲ್ಲಿ "ಗ್ರಾಮದೇವತೆಯು, ಆಯಾ ಗ್ರಾಮದ ಸ್ಥಳೀಯ ದೇವತೆಯಾಗಿದ್ದು, ದಕ್ಷಿಣಭಾರತದೆಲ್ಲೆಡೆ ಹೆಚ್ಚಾಗಿ ಪೂಜಿಸಲ್ಪಡುತ್ತವೆ. ಗ್ರಾಮದೇವತೆಯು ವಿಶೇಷತಃ ಸ್ತ್ರೀರೂಪದಲ್ಲಿದ್ದು, ಕೃಷಿ ದೇವತೆಯ ಮೂಲ ರೂಪದಲ್ಲಿರುತ್ತವೆ. ಈ ದೇವತೆಗಳು ದ. ಭಾರತದಲ್ಲಿ ವೈದಿಕ ದೇವತೆಗಳಿಗೆ ಸರಿ ಸಮನವಾದ ಸ್ಥಾನ-ಮಾನವನ್ನು ಹೊಂದಿವೆ. ರೋಗ-ರುಜಿನ, ಬೆಳೆ ನಷ್ಟ, ಮಾಟ-ಮಂತ್ರಗಳಂತಹ ಸಂಕಷ್ಟಗಳಿಂದ ಪಾರಾಗಲು,

ಗ್ರಾಮದ ಜನತೆ ಈ ಗ್ರಾಮದೇವತೆಗಳಿಗೆ ಪ್ರಾಣಿ ಬಲಿ ನೀಡುವುದು ಪರಿಪಾಠ. ಇವು ಗುಂಡು ಕಲ್ಲು, ಮರ, ಹುತ್ತ ಅಥವಾ ಮಡಕೆಯ ರೂಪದಲ್ಲಿರಬಹುದು" ಎಂದು ವಿವರಿಸಲಾಗಿದೆ.

ಎಚ್. ವೈಟ್‌ಹೆಡ್‌ರವರು ಕ್ರಿ.ಶ. 1921ರಲ್ಲಿ ಬರೆದ ತಮ್ಮ ದ ವಿಲೇಜ್ ಗೊಡ್ಸ್ ಆಫ್ ಸೌತ್ ಇಂಡಿಯಾ ಎಂಬ ಪುಸ್ತಕದಲ್ಲಿ "ಗ್ರಾಮದೇವತೆಗಳು, ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ದೇವತೆಗಳು. ಅವು ಗ್ರಾಮದ ರಕ್ಷಕ ದೇವತೆಗಳಾಗಿದ್ದು, ವಿಶೇಷತಃ ರೋಗ-ರುಜಿನ ಹಾಗೂ ನೈಸರ್ಗಿಕ ವಿಪತ್ತುಗಳಿಂದ ಗ್ರಾಮದ ಜನರನ್ನು ರಕ್ಷಿಸುತ್ತವೆ. ಇವು ಮೂಲತ: ಕೃಷಿ ದೇವತೆಗಳಾಗಿದ್ದು, ಸ್ತ್ರೀರೂಪದಲ್ಲಿರುತ್ತವೆ. ಈ ದೇವತೆಗಳಿಗೆ ಸಹಾಯಕನಾದ ಆಜ್ಞಾಧಾರಕ ಪುರುಷ ದೇವತೆಯಿರುತ್ತದೆ. ಈ ಗ್ರಾಮದೇವತೆಗಳ ಪೂಜೆ ಹಾಗೂ ಇವುಗಳಿಗೆ ಪ್ರಾಣಿ ಬಲಿ ನೀಡುವುದನ್ನು ದ್ರಾವಿಡರು ಕೃಷಿ ಜೀವವನ್ನು ಪ್ರಾರಂಭಿಸಿದಂದಿನಿಂದಲೇ ಆರಂಭಿಸಿದರು. ಅಂದರೆ, ಕ್ರಿ.ಪೂ. 3000-4000 ವರ್ಷಗಳ ಹಿಂದೆಯೇ ಇದು ಆರಂಭಗೊಂಡಿರಬೇಕು" ಎಂದು ಬರೆಯುತ್ತಾರೆ.

ಅಂಕೋಲೆಯ ಗ್ರಾಮದೇವತೆಗಳೊಂದಿಗೆ ಸಾಮ್ಯತೆ :

"ಕಲ್ಲು-ಗುಂಡುಗಳನ್ನು, ವೀರ ಯೋಧರನ್ನು ದೇವತೆಗಳೆಂದು ಪೂಜಿಸುವ ಇಲ್ಲಿನ ಸಂಸ್ಕೃತಿಯು ಕೇವಲ ಅಂಕೋಲೆಗಷ್ಟೇ ಸೀಮಿತವಾಗಿರದೇ, ದ.ಭಾರತದಾದ್ಯಂತ ರೂಢಿಯಲ್ಲಿತ್ತು. ಗ್ರಾಮದ ಪ್ರಧಾನ ದೇವತೆಯು ಮೂಲತಃ ಕೃಷಿ ದೇವತೆಯಾಗಿದ್ದು, ಸ್ತ್ರೀರೂಪದಲ್ಲಿ ಪೂಜಿಸಲ್ಪಡುತ್ತಿದ್ದಳು. ಆಕೆಯನ್ನು ಅಂಕೋಲೆಯಲ್ಲಿ ಕರೆಯುವಂತೆಯೇ, ಭೂಮಿತಾಯಿ, ಅಮ್ಮನವರು ಎಂದು ಕರೆಯುತ್ತಿದ್ದರು. ಆಕೆಗೆ ಇಲ್ಲಿರುವಂತೆಯೇ ಸಹಾಯಕನಾದ ಆಜ್ಞಾಧಾರಕ ಪುರುಷ ಪರಿವಾರ ದೇವತೆಗಳಿರುತ್ತಿದ್ದವು. ಅವುಗಳ ಪೂಜಾ ಪದ್ಧತಿಯು ವೇದ, ಮಂತ್ರಗಳ ಉಚ್ಚಾರಣೆಯಿಲ್ಲದೇ ಅತ್ಯಂತ ಸರಳತೆಯಿಂದ ಕೂಡಿರುತ್ತಿತ್ತು. ಈ ಗ್ರಾಮದೇವತೆಗಳು ಗ್ರಾಮದ ಅತ್ಯಂತ ಪುರಾತನ ದೇವತೆಗಳಾಗಿದ್ದು, ಇವುಗಳಿಗೆ ಪ್ರಾಣಿ ಬಲಿ ನೀಡುವುದು ಸಾವಿರಾರು ವರ್ಷಗಳ ಹಿಂದೆಯೇ ಆರಂಭವಾಗಿರಬೇಕು" ಎಂಬುದು ಸ್ಪಷ್ಟವಾಗುತ್ತದೆ.

ಮೆಸೊಪೋಟೋಮಿಯಾದ ಗ್ರಾಮದೇವತೆಗಳು :

ದೇಶದ ಇತಿಹಾಸದಿಂದ ಮುಂದುವರೆದು ಜಗತ್ತಿನ ನಾಗರೀಕತೆಯಲ್ಲಿ ಗ್ರಾಮದೇವತೆಗಳ ಮೂಲವನ್ನು ಹುಡುಕುವ ಪ್ರಯತ್ನ ನಡೆಸಿದರೆ, ಅಲ್ಲಿ ಹೊಸದಾದ ಒಂದು ಜಗತ್ತೇ ತೆರೆದುಕೊಳ್ಳುತ್ತದೆ. ಕ್ರಿ.ಪೂ. 3000 ವರ್ಷಗಳ ಹಿಂದೆ ಆಚರಣೆಯಲ್ಲಿದ್ದ ಮೆಸೊಪೋಟೋಮಿಯಾದ ಧಾರ್ಮಿಕ ಆಚರಣೆಗಳು ಬಹುತೇಕ ನಮ್ಮ ಈ ಭಾಗದಲ್ಲಿನ ಗ್ರಾಮದೇವತೆಗಳ ಪೂಜಾ ಪದ್ಧತಿಯನ್ನೇ ಹೋಲುತ್ತದೆ. ಮೆಸೊಪೋಟೋಮಿಯಾದಲ್ಲಿ ಅಂದು ನಮ್ಮಲ್ಲಿ ಇರುವಂತೆಯೇ ಬಹುದೇವತಾ ಆರಾಧನಾ ಪದ್ಧತಿಯು ರೂಢಿಯಲ್ಲಿತ್ತು. ಅಲ್ಲಿನ ಜನರು ಸ್ಥಾನೀಯ ದೇವತೆಗಳನ್ನು ಮತ್ತು ಮೃತಪಟ್ಟ ವೀರರನ್ನು ಆರಾಧಿಸುತ್ತಿದ್ದರು. ಅನೇಕ ಪ್ರಮುಖ ದೇವತೆಗಳನ್ನು ನೂರಾರು ಉಪ ದೇವತೆಗಳನ್ನು ಅವರು ಪೂಜಿಸುತ್ತಿದ್ದರು. ಈ ದೇವರುಗಳಿಗೆ ಅವರು ದೇವಾಲಯಗಳನ್ನು ನಿರ್ಮಿಸಿದ್ದರು. ದೇವಾಲಯಗಳು ವಿಪುಲವಾದ ಭೂಮಿಯನ್ನು ಹೊಂದಿದ್ದವು. ಅದನ್ನು ಗ್ರಾಮದ ಜನರು ಮತ್ತು ದೇವಾಲಯದ ಆಡಳಿತ ಮಂಡಳಿಯವರು ಸಾಗುವಳಿ ಮಾಡುತ್ತಿದ್ದರು. ದೇವಾಲಯಗಳಲ್ಲಿ ದೇವರ ಮೂರ್ತಿಗಳಿದ್ದು, ದೇವಾಲಯದ ಭೂಮಿಯಲ್ಲಿ ಬೆಳೆದ ಧಾನ್ಯಗಳಿಂದ ಅರ್ಚಕರು ಪ್ರತಿ ದಿನ ಅಡುಗೆಯನ್ನು ತಯಾರಿಸಿ ದೇವರಿಗೆ ಅರ್ಪಿಸುತ್ತಿದ್ದರು. ದೇವರುಗಳಿಗೆ ಪ್ರತಿ ನಿತ್ಯ ಸ್ನಾನ ಮಾಡಿಸುತ್ತಿದ್ದರು. ಅಗರಬತ್ತಿ, ಲೋಬಾನಗಳನ್ನು ಉರಿಸುತ್ತಿದ್ದರು. (ಬ್ರಿಟಾನಿಕಾ/ಮೆಸೊಪೊಟೊಮಿಯಾ ಧರ್ಮ)

ಗ್ರೀಸ್‌ನಲ್ಲಿಯೂ ಭೂಮಿ ತಾಯಿ ಮತ್ತು ಪ್ರಾಣಿ ಬಲಿ:

ಗ್ರೀಕ್‌ರು ಕೃಷಿ ದೇವತೆಯನ್ನು "ಡಿಮಿಟರ್" ಎಂದು ಕರೆಯುತ್ತಿದ್ದರು. ಗ್ರೀಕ್ ಭಾಷೆಯಲ್ಲಿ "ಮಿಟರ್" ಎಂಬುದರ ಅರ್ಥ ಇಂಗ್ಲೀಷಿನ "ಮದರ್"(ತಾಯಿ) ಎಂದಾಗಿದ್ದು, "ಡೀ" ಎಂದರೆ ಭೂಮಿ ಅಥವಾ ಧಾನ್ಯ ಎಂದಾಗಿತ್ತು. ಅಂದರೆ, ಅಂಕೋಲೆಯ ಭಾಗದಲ್ಲಿ, ಕೃಷಿ ದೇವತೆಯನ್ನು "ಭೂಮಿ ತಾಯಿ" ಎಂದು ಕರೆಯುವಂತೆ.

ಅಲ್ಲದೇ, ಗ್ರೀಕರು, ತಾವು ಬೆಳೆದ ಪ್ರಥಮ ಫಲ, ಧಾನ್ಯ ಮತ್ತು ಮೊದಲು ಹುಟ್ಟಿದ ಮೊದಲ ಮರಿಯನ್ನು

ದೇವರಿಗೆ ಅರ್ಪಿಸುತ್ತಿದ್ದರು. ಅವರು ತಳ ಗುಂಡಾಕಾರವಾಗಿದ್ದು, ಮೇಲೆ ಚೂಪಾಗಿದ್ದ ಕಪ್ಪು ಕಲ್ಲುಗಳನ್ನು ಅವರು ಆರಾಧಿಸುತ್ತಿದ್ದರು. (ಅರಬ್ಸ್ ಎಂಡ್ ಅರೇಬಿಯನ್ಸ್)

ದಾಖಲಾದ ಜಗತ್ತಿನ ಅತಿ ಪ್ರಾಚೀನ ಜಾತ್ರೆ

ಮೆಸಪೊಟೊಮಿಯಾದಲ್ಲಿ ಸಾವಿರಾರು ವರ್ಷಗಳ ಹಿಂದೆ ಆಚರಣೆಯಲ್ಲಿದ್ದ "ಅಕಿಟು", ಜಗತ್ತಿನ ಇತಿಹಾಸದಲ್ಲಿ ದಾಖಲಾದ ಅತಿ ಪ್ರಾಚೀನ ಜಾತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಗ್ರಾಮದೇವತೆಯ ಕೃಷಿ ಹಬ್ಬವಾಗಿ ಆಚರಿಸಲ್ಪಡುತ್ತಿದ್ದ ಅಕಿಟು ಜಾತ್ರೆಯು ಬಹುತೇಕ ಅಂಕೋಲೆಯ ಬಂಡಿಹಬ್ಬವನ್ನೇ ಹೋಲುತ್ತಿತ್ತು. ಮೂಲತಃ ಕೃಷಿಯ ಕೊಯ್ಲಿಗೆ ಸಂಬಂಧಿಸಿದ ಈ ಜಾತ್ರೆಯು ಹನ್ನೆರಡು ದಿನಗಳ ಕಾಲ ನಡೆಯುತ್ತಿತ್ತು. ಈ ಜಾತ್ರೆಯಲ್ಲಿ ದೇವರುಗಳ ಮೆರವಣಿಗೆ ನಡೆಯುತ್ತಿತ್ತು. ಹೊಲ-ಗದ್ದೆಗಳ ಫಲವತ್ತತೆಗಾಗಿ ಆಚರಿಸಲಾಗುತ್ತಿದ್ದ ಗ್ರಾಮದೇವತೆಯ ಈ ಜಾತ್ರೆಯು ಪ್ರತಿ ವರ್ಷ ನಡೆಯುತ್ತಿತ್ತು. ಈ ಜಾತ್ರೆಯಲ್ಲಿ ಪ್ರಾಣಿ ಬಲಿಯನ್ನು ಅರ್ಪಿಸುವುದು ಅರ್ವಲ್ ಸಹೋದರರ ಮುಖ್ಯ ಕೆಲಸವಾಗಿತ್ತು. ಹೀಗೆ, ಅಂಕೋಲೆಯ ಭಾಗದಲ್ಲಿ ಇಂದಿಗೂ ಆರಾಧಿಸಲ್ಪಡುತ್ತಿರುವ ಮತ್ತು ಗ್ರೀಸ್, ರೋಮ್‌ಗಳಲ್ಲಿ 3000–4000 ವರ್ಷಗಳ ಹಿಂದೆ ಪೂಜಿಸಲ್ಪಡುತ್ತಿದ್ದ ಗ್ರಾಮದೇವತೆಗಳು ಮತ್ತು ಅವುಗಳ ಆಚರಣೆಯಲ್ಲಿ ಅನೇಕ ರೀತಿಯ ಸಾಮ್ಯತೆಗಳು ಕಂಡು ಬರುತ್ತವೆ. ಹೀಗೆ, ಜಗತ್ತಿನಾದ್ಯಂತ ಆಚರಣೆಯಲ್ಲಿದ್ದ ಗ್ರಾಮದೇವತೆಗಳ ಪೂಜಾ ಪದ್ಧತಿಯು ಒಂದೇ ಮೂಲ ಅಥವಾ ತತ್ವದಿಂದ ಆರಂಭಗೊಂಡಿರುವ ಸಾಧ್ಯತೆಗಳಿವೆ.

ಗ್ರಾಮದ ನಿರ್ಮಾಣ

ಹೀಗೆ, ಮೆಸಪೊಟೋಮಿಯಾ, ರೋಮ್, ಗ್ರೀಸ್, ಬ್ಯಾಬಿಲೋನಿಯಾಗಳಂತಹ ಜಗತ್ತಿನ ಅತಿ ಪ್ರಾಚೀನ ನಾಗರೀಕತೆಗಳಲ್ಲಿ ಅಂದು ಆಚರಣೆಯಲ್ಲಿದ್ದ ಮತ್ತು ಅಂಕೋಲೆಯಲ್ಲಿ ಇಂದಿಗೂ ಆಚರಣೆಯಲ್ಲಿರುವ ಗ್ರಾಮದೇವತೆಗಳ ಪೂಜಾ ಪದ್ಧತಿಗಳನ್ನು ಸಮಾಜ ವಿಜ್ಞಾನದ ಆಧಾರದ ಮೇಲೆ ಈ ಕೆಳಗಿನಂತೆ ವಿಶ್ಲೇಷಿಸಬಹುದು.

ಹಿಂಡು-ಹಿಂಡಾಗಿ ಕಾಡು-ಮೇಡುಗಳಲ್ಲಿ ಅಲೆಯುತ್ತಿದ್ದ ಹಳೆಯ ಶಿಲಾಯುಗದ ಮಾನವ, ಪ್ರಾಣಿಗಳನ್ನು ಬೇಟೆಯಾಡಿ, ಗಡ್ಡೆ-ಗೆಣಸುಗಳನ್ನು ತಿಂದು ಜೀವನ ನಡೆಸುತ್ತಿದ್ದ. ಕಾಡಿನ ಗುಹೆಗಳಲ್ಲಿ ನಿದ್ರಿಸುತ್ತಿದ್ದ. ಹೀಗೆ, ಅಲೆಮಾರಿಯಾಗಿ ಪ್ರಾಣಿಯಂತೆ ಬದುಕುತ್ತಿದ್ದ ಆತ, ಕ್ರಮೇಣ ಬುದ್ಧಿ ಬಲಿಯಲಾರಂಭಿಸಿದಂತೆ, ಒಂದೆಡೆ ನೆಲೆ ನಿಂತು ಕೃಷಿ ಜೀವನವನ್ನು ಆರಂಭಿಸಿದ. ಕೃಷಿಗೆ ಅವಶ್ಯಕವಾಗಿದ್ದ ದನ-ಕರುಗಳನ್ನು ಸಾಕಲಾರಂಭಿಸಿದ. ಇದು, ಗ್ರಾಮದ ನಿರ್ಮಾಣಕ್ಕೆ ಕಾರಣವಾಯಿತು.

ಹೀಗೆ, ಒಂದೆಡೆ ನೆಲೆ ನಿಂತ ಆತನಿಗೆ ಇಲ್ಲಿಯವರೆಗೆ ಅರಿವಿರದ ಬದುಕಿನ ಬವಣೆಗಳು ಅರಿವಾಗಿರಬೇಕು. ತನ್ನೊಂದಿಗೆ ಇರುವವರು, ತಾನು ಸಾಕಿದ ದನ-ಕರುಗಳು ರೋಗ-ರುಜಿನಗಳಿಗೆ ತುತ್ತಾಗಿ ಸಾಯುವುದು, ತಾನು ಬೆಳೆದ ಬೆಳೆ ಮೇಲಿಂದ ಮೇಲೆ ಅತಿವೃಷ್ಟಿ, ಅನಾವೃಷ್ಟಿಗಳಿಂದ ನಾಶವಾಗುವುದು ಆತನನ್ನು ಕಂಗೆಡಿಸಿರಬೇಕು. ತನಗಿಂತಲೂ ಬಲಿಷ್ಠವಾದ ಯಾವುದೋ ಒಂದು ಶಕ್ತಿ ಇವನ್ನೆಲ್ಲ ಮಾಡಿಸುತ್ತಿರಬೇಕು ಎಂದು ಭಾವಿಸಿದ ಆತ, ಅಲ್ಲೇ ಇರುವ ಕಲ್ಲನ್ನೋ, ಹುತ್ತವನ್ನೋ ದೇವರೆಂದು ನಂಬಿ, ಈ ಸಂಕಷ್ಟಗಳಿಂದ ರಕ್ಷಿಸುವಂತೆ ಮೊರೆ ಹೋಗಿರಬೇಕು. ಹೀಗೆ, ಗ್ರಾಮದೇವತೆಯ ಪೂಜೆ, ಆರಾಧನೆ ಆರಂಭಗೊಂಡಿರಬೇಕು.

"ಗ್ರಾಮದ ಜನರಲ್ಲಿ ದೇವರುಗಳ ಪರಿಕಲ್ಪನೆ ಆರಂಭಗೊಂಡ ದಿನದಿಂದಲೇ ಈ ಗ್ರಾಮದೇವತೆಗಳ ಆರಾಧನೆ ಆರಂಭಗೊಂಡಿರಬೇಕು ಮತ್ತು ಗ್ರಾಮದೇವತೆಗಳು ಆಯಾ ಗ್ರಾಮದ ಅತ್ಯಂತ ಪುರಾತನ ದೇವತೆಗಳು" ಎಂಬ ಅಭಿಪ್ರಾಯವನ್ನು ಹೆಚ್ಚಿನ ಇತಿಹಾಸಕಾರರು ಒಪ್ಪಿಕೊಳ್ಳುತ್ತಾರೆ. ಅಂತೆಯೇ, ಈ ದೇವತೆಗಳಿಗೆ ಇತ್ತೀಚಿನ ವರ್ಷಗಳಲ್ಲಿ ಮೂರ್ತಿಯ ರೂಪವನ್ನು ನೀಡಲಾಗಿದೆಯಾದರೂ, ಮೂಲತಃ ಇವು ಹುತ್ತ ಇಲ್ಲವೇ ಕಲ್ಲು-ಗುಂಡುಗಳ ರೂಪದಲ್ಲಿಯೇ ಇರುವುದು ಕಂಡು ಬರುತ್ತದೆ. ಹೀಗೆ, ಕಲ್ಲು-ಗುಂಡುಗಳನ್ನು ಪೂಜಿಸುವ ಈ ಪದ್ಧತಿಯು ಜಗತ್ತಿನ ಅತ್ಯಂತ ಪ್ರಾಚೀನ ಪೂಜಾ ಪದ್ಧತಿಯಾಗಿ ಗುರುತಿಸಲ್ಪಟ್ಟಿದೆ. ಹೀಗೆ, ಮಾನವನ ವಿಕಾಸದೊಂದಿಗೆ ಆರಂಭಗೊಂಡ ಗ್ರಾಮದೇವತೆಯ ಆರಾಧನೆಯು ಈ ಭಾಗಗಳಿಗಷ್ಟೇ ಸೀಮಿತವಾಗಿರದೇ, ಜಗತ್ತಿನ ಪ್ರಾಚೀನ ನಾಗರೀಕತೆಗಳೆನ್ನಿಸಿಕೊಂಡ ಹರಪ್ಪ-ಮೊಹೆಂಜೊದಾರೊ, ಮೆಸಪೊಟೊಮಿಯಾ, ಬ್ಯಾಬಿಲೊನಿಯಾ,

ಸುಮೇರಿಯನ್, ರೋಮನ್ ಧರ್ಮಗಳಲ್ಲಿಯೂ ರೂಢಿಯಲ್ಲಿತ್ತು. ಅಂತೆಯೇ, ಕಲ್ಲು-ಗುಂಡುಗಳನ್ನು ದೇವತೆಗಳ ರೂಪದಲ್ಲಿ ಪೂಜಿಸಿ, ವರ್ಷಕ್ಕೊಮ್ಮೆ ಜಾತ್ರೆ ನಡೆಸಿ, ರಕ್ತ ಬಲಿಯನ್ನು ನೀಡುವ ಪದ್ಧತಿಯು ಜಗತ್ತಿನೆಲ್ಲೆಡೆ ಆಚರಣೆಯಲ್ಲಿದ್ದ ಅತ್ಯಂತ ಪುರಾತನ ಪದ್ಧತಿ ಎಂಬುದೂ ಸ್ಪಷ್ಟವಾಗುತ್ತದೆ. ಹೀಗೆ, ಜಗತ್ತಿನಾದ್ಯಂತ ಆಚರಣೆಯಲ್ಲಿದ್ದ ಗ್ರಾಮದೇವತೆಯ ಆರಾಧನಾ ಪದ್ಧತಿಯೇ ಜಗತ್ತಿನ ಮೂಲ ಧರ್ಮವೆಂದರೂ ತಪ್ಪಲ್ಲ.

ಹೀಗೆ, ಸಾವಿರಾರು ವರ್ಷಗಳ ಹಿಂದೆ, ಜಾಗತಿಕ ಧರ್ಮವಾಗಿದ್ದ ಗ್ರಾಮದೇವಿಯ ಪೂಜಾ ಪದ್ಧತಿಯು ಝೊರಾಷ್ಟ್ರಿಯನ್, ಯಹೂದಿ, ಕ್ರೈಸ್ತ, ಮುಸ್ಲಿಂ ಧರ್ಮಗಳ ಉದಯದ ನಂತರ ಜಗತ್ತಿನ ಹೆಚ್ಚಿನ ಭಾಗಗಳಲ್ಲಿ ನಶಿಸಿ ಹೋಗಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

ಆದರೆ, ಗ್ರಾಮದ ನಿರ್ಮಾಣದೊಂದಿಗೇ ಆರಂಭಗೊಂಡಿರಬಹುದಾದ ಅಂಕೋಲೆಯ ಮತ್ತು ಸುತ್ತ ಮುತ್ತಲಿನ ಗ್ರಾಮದೇವತೆಗಳ ಪೂಜಾ ಪದ್ಧತಿಯು, ವಿಧರ್ಮೀಯರ ಆಕ್ರಮಣಕ್ಕೆ ತುತ್ತಾಗದೆ ಇಂದಿಗೂ ತನ್ನತನವನ್ನು ಉಳಿಸಿಕೊಂಡು ಬಂದಿರುವುದು ಕಂಡು ಬರುತ್ತದೆ. ಹೀಗೆ, ಮೆಸಪೊಟೊಮಿಯಾ, ಬ್ಯಾಬಿಲೋನಿಯಾ, ಸುಮೇರಿಯನ್, ರೋಮನ್, ಈಜಿಪ್ಟ್‌ನಂತಹ ನಾಗರೀಕತೆಗಳ ಸಮಕಾಲೀನ ಇತಿಹಾಸವನ್ನು ಹೊಂದಿರಬಹುದಾದ ಇಲ್ಲಿನ ಗ್ರಾಮದೇವತೆಗಳು ಮತ್ತು ಅವುಗಳ ಪೂಜಾ ಪದ್ಧತಿಗೆ ಸಾವಿರಾರು ವರ್ಷಗಳ ಇತಿಹಾಸವೇ ಇದೆ.

ಲಯ

ಆ ಮನೆಯ ನೆಲಗಟ್ಟಿ ಹುಡಿಗೂಡಿ
ಹೋಗಿಹುದು: ನನ್ನ ಗರ್ಭದಲಿ.
ಎದೆಯ ಗೂಡನು ಮೀರಿ
ಒಳಹೊಕ್ಕ ಕಣ್ಣುಗಳು
ಶಿಲುಬೆ ಏರಿದ ಕ್ರಿಸ್ತನಂತೆ
ಮೂಕವಾಗಿಹವು.

ರೋಮ ರೋಮಗಳಲ್ಲಿ
ನನ್ನ ಸಂತಾನ ಬೇರು ಬಿಟ್ಟಿಹವು.
ಏರಿಳಿವ ಕಡಲು, ಸೂರ್ಯಚಂದ್ರ
ಏಕೆ...? ಬ್ರಹ್ಮಾಂಡವೇ ಸಾಕ್ಷಿ
ನನ್ನ ಉಸಿರಿನ ಶಕ್ತಿಗೆ
ಶಾಪಗ್ರಸ್ಥೆಯ ಮುಕ್ತಿಗೆ.

ಹಾವು ಹೊಕ್ಕ ಮನೆ: ಕುಸಿದ ಅರಮನೆ
ಎಲ್ಲೆಲ್ಲಿಯೂ ನಾನು ಬಿತ್ತಿದ ಬೀಜ
ಬೆಂಕಿಯಾಗಿಹುದು

ಮೊನ್ನೆ ಮೊನ್ನೆ ಹುಟ್ಟಿದ
ಹಾಲುಗಲ್ಲದ ಹಸುಳೆ;
ನನ್ನ ಹೆಸರೇ 'ಕ್ಷಯ'.
ಕಣ್ಣು ಬಿಟ್ಟರೆ ಮಾತ್ರ
ಬಂಡಗೂಡಿ
ಲಯ.

– *ಜಿನದೇವ ನಾಯಕ*
(ಕೌರವರೂ ಪಾಂಡವರೂ ಕ್ಷೇಮದಿಂದಿರುವರೇ ಸಂಕಲನದಿಂದ)

ಅಂಕೋಲೆಯ
ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಹಿಂದಿನ ೯ ಸಮ್ಮೇಳನಗಳ ಸಮ್ಮೇಳನಾಧ್ಯಕ್ಷರ

ಪರಿಚಯ ಮತ್ತು ಭಾಷಣ


ಸಮ್ಮೇಳನಾಧ್ಯಕ್ಷರ ಪರಿಚಯ : ಜೆ. ಪ್ರೇಮಾನಂದ

ಅಂಕೋಲಾ ತಾಲೂಕಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೦೮-೧೧-೨೦೦೬

ಸಮ್ಮೇಳನದ ಸರ್ವಾಧ್ಯಕ್ಷರು

ತ್ರಿಪದಿ ಕವಿ – ಶ್ಯಾಮ ಹುದ್ದಾರ



ಅಂಕೋಲೆಯ ಪ್ರಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಶ್ರೀ ಶ್ಯಾಮ ಹುದ್ದಾರರು ಮೂಲತಃ ಬಾಗಲಕೋಟೆಯವರಾಗಿದ್ದರೂ ಸಹ ಅರ್ಧ ಶತಮಾನ ಕಾಲ ಅಂಕೋಲೆಯಲ್ಲಿ ನೆಲೆಸಿ ಇಲ್ಲಿಯ ನೆಲ, ಜಲ, ಜನ, ಭಾಷೆಯೊಂದಿಗೆ ಒಂದಾಗಿ ಬೆರೆತು ಬಾಳಿದ ಹಿರಿಯ ಸಾಹಿತಿ.

ಡಾ। ಶಿವರಾಮ ಕಾರಂತರ ಪರಿಚಯದೊಂದಿಗೆ ಡಾ। ದಿನಕರ ದೇಸಾಯಿಯವರ ಒಡನಾಟಕ್ಕೆ ಬಂದ ಹುದ್ದಾರರು ಆರಂಭದಿಂದ ನಿವೃತ್ತಿಯವರೆಗೂ ದೇಸಾಯಿಯವರ 'ಜನಸೇವಕ' ಪತ್ರಿಕೆ ಹಾಗೂ ಜಿ.ಸಿ. ಕಾಲೇಜಿನಲ್ಲಿ ವಿವಿಧ ಕ್ಷೇತ್ರದಲ್ಲಿ ವೃತ್ತಿ ನಿರ್ವಹಿಸುತ್ತ ಪ್ರವೃತ್ತಿಯಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ರಂಗದಲ್ಲಿ ವಿಶೇಷ ಕೊಡುಗೆ ನೀಡಿ ಗಮನ ಸೆಳೆದವರು.

ವಿದ್ಯಾರ್ಥಿ ದೆಸೆಯಲ್ಲಿಯೇ ಲಘು ಬರಹದಲ್ಲಿ ಆಸಕ್ತಿ ಹೊಂದಿದ್ದ ಹುದ್ದಾರರು ಕ್ರಮೇಣ ತ್ರಿಪದಿಗಳಲ್ಲಿ ಕವನ ರಚಿಸುತ್ತ ಸಾಹಿತ್ಯ ವಲಯದಲ್ಲಿ ಚಿರಪರಿಚಿತರಾದರು. ೧೯೭೭ರಲ್ಲಿ ಪ್ರಕಟವಾದ 'ಖಾನಾವಳಿ ಡಬ್ಬಿ' ಎಂಬ ಹರಟೆಗಳ ಸಂಕಲನ ಹಾಗೂ ೧೯೯೬ರಲ್ಲಿ ಪ್ರಕಟವಾದ 'ಉಸುಕೀನ ಭೂಮ್ಯಾಗ ಕುಸುಬೀಯ ಬಿತ್ತೇನ' ಎಂಬ ತ್ರಿಪದಿಗಳ ಸಂಕಲನಗಳು ಹುದ್ದಾರರಿಗೆ ಹೆಚ್ಚಿನ ಜನಪ್ರಿಯತೆ ತಂದುಕೊಟ್ಟವು.

ಅಂಕೋಲಾ ಕರ್ನಾಟಕ ಸಂಘ ಹಾಗೂ ಉತ್ತರ ಕನ್ನಡ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಹುದ್ದಾರರು, ಅನೇಕ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಪ್ರತ್ಯಕ್ಷವಾಗಿ ಕಂಡವರು. 'ಕನ್ನಡ ಸಾಹಿತಿಗಳ ಜೀವನ ದೃಷ್ಟಿ' ಎಂಬ ವಿಷಯವಾಗಿ ಕನ್ನಡದ ಸುಮಾರು ೧೫೦ ಸಾಹಿತಿಗಳ ಹಸ್ತಾಕ್ಷರ ಸಂಗ್ರಹಿಸಿ ೧೯೬೫ರಲ್ಲಿ ಕಾರವಾರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶಿಸಿದ ಹೆಗ್ಗಳಿಕೆ ಅವರದು. 'ಭಾವ ಪ್ರಪಂಚ' ಶೀರ್ಷಿಕೆಯಡಿ ಡಾ। ಶಿವರಾಮ ಕಾರಂತರ ವಿವಿಧ ಭಾವ-ಭಂಗಿಗಳ ಚಿತ್ರ ಸಂಗ್ರಹಿಸಿದ ಕೀರ್ತಿ ಹುದ್ದಾರರಿಗೆ ಸಲ್ಲುತ್ತದೆ.

ಅಭಿನಯದಲ್ಲೂ ಮಿಂಚಿದ ಹುದ್ದಾರರು ಅಂಕೋಲೆಯ ಕರ್ನಾಟಕ ಸಂಘದ 'ಬಸಂತ' ಕಲಾತಂಡದ ಕ್ರಿಯಾಶೀಲ ಸದಸ್ಯರಾಗಿ ಸೇವೆ ಸಲ್ಲಿಸಿದವರು. ೦೮-೧೧-೨೦೦೬ರಂದು ತಮ್ಮ ೭೫ನೇ ವಯಸ್ಸಿನಲ್ಲಿ ತಾಲೂಕಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಶ್ಯಾಮ ಹುದ್ದಾರರು ತಮ್ಮ ಸ್ವಾರಸ್ಯಪೂರ್ಣ ಅನುಭವ ಕಣಜವನ್ನು ತೆರೆದಿಟ್ಟು ಮೊದಲ ಸಮ್ಮೇಳನಕ್ಕೆ ಮೆರುಗು ತುಂಬಿದರು. ಅವರ ತ್ರಿಪದಿ ಸಾಲು ಹೀಗಿದೆ :

ಕುರ್ಚಿಯ ಹಿಡಿಯಾಕ ಕಚ್ಚಾಟ ಹೆಚ್ಚಾತು ।
ಹುಚ್ಚು ಹಿಡಿದೀತು ಮುದುಕರಿಗೆ ಹೇ ಶಿವನ ।
ದೇಶಕ್ಕೆ ದ್ರೋಹ ಬಗೆದಾರ ।

ಶ್ರೀ ಶ್ಯಾಮ ಹುದ್ದಾರ ಅವರ ಸರ್ವಾಧ್ಯಕ್ಷೀಯ ಭಾಷಣ

ಈ ಸಾಹಿತ್ಯ ಸಮ್ಮೇಳನದ ಸಭಾಂಗಣದಲ್ಲಿ ಕೂಡಿದ ಸಮಸ್ತ ಸಾಹಿತ್ಯಾಸಕ್ತ ಸಜ್ಜನರಿಗೆಲ್ಲ ಹೊಸ ವರ್ಷದ ಶುಭಾಶಯಗಳು.

ಸಾಹಿತ್ಯ ಸಮ್ಮೇಲನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಮಾನ್ಯ ಶ್ರೀ ಆರ್.ಎನ್.ನಾಯಕ ಅವರೇ, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲ ಅವರೇ, ಉತ್ತರ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ರೋಹಿದಾಸ ನಾಯ್ಕ ಅವರೇ, ಜಿಲ್ಲಾ ಘಟಕದ ಕಾರ್ಯದರ್ಶಿಗಳಾದ ಡಾ। ಎಮ್. ಜಿ. ಹೆಗಡೆಯವರೇ, ಅಂಕೋಲಾ ತಾಲೂಕಾ ಕ.ಸಾ.ಪ. ಘಟಕದ ಅಧ್ಯಕ್ಷರೂ ನನ್ನ ಆತ್ಮೀಯ ಸ್ನೇಹಿತರೂ ಆದ ಡಾ। ರಾಮಕೃಷ್ಣ ಗುಂದಿಯವರೇ ಮತ್ತು ತಾಲೂಕಾ ಘಟಕದ ಇತರ ಪದಾಧಿಕಾರಿಗಳೇ ಹಾಗೂ ಸಮ್ಮೇಲನದಲ್ಲಿ ಪಾಲ್ಗೊಂಡಿರುವ ಸಾಹಿತ್ಯಾಸಕ್ತ ಸಭಿಕರೇ,

ನನ್ನ ಬದುಕಿಗೊಂದು ಆಶ್ರಯ ಕೊಟ್ಟ ಕೆನರಾ ವೆಲ್‌ಫೇರ್ ಟ್ರಸ್ಟ್ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿತು. ಆ ಟ್ರಸ್ಟು ನಡೆಸುತ್ತಿರುವ ಅಂಕೋಲೆಯ ಪಿ.ಎಮ್.ಹೈಸ್ಕೂಲು ತನ್ನ ಸುವರ್ಣ ಮಹೋತ್ಸವ ಆಚರಿಸಿಕೊಂಡಿತು. ಅಂಕೋಲೆಯ ಸಾರ್ವಜನಿಕ ಜೀವನದಲ್ಲಿ ಸಾಹಿತ್ಯಸಂಸ್ಕೃತಿಗಳ ಸದಭಿರುಚಿ ಹುಟ್ಟಿಸಿ, ನಾಡುನುಡಿಯ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಕೊಂಡು ೫೦ವರ್ಷಗಳನ್ನು ಪೂರ್ಣಗೊಳಿಸಿದ ಅಂಕೋಲೆಯ ಕರ್ನಾಟಕ ಸಂಘವೂ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿತು. ಈ ಮೂರೂ ಸಂಸ್ಥೆಗಳೊಂದಿಗೆ ಹತ್ತಿರದ ಋಣಾನುಬಂಧ ಇಟ್ಟುಕೊಂಡು ಈ ಅಂಕೋಲೆಯಲ್ಲಿ ಉಳಿದು ಐವತ್ತು ವರ್ಷ ಕಳೆದ ನನಗೆ ಈ ವರ್ಷ ಉತ್ತರ ಕನ್ನಡದ ಅರ್ಥಾತ್ ಅಂಕೋಲೆಯ ನನ್ನ ವಾಸ್ತವ್ಯದ ಸುವರ್ಣ ಮಹೋತ್ಸವ ವರ್ಷ ಇದು.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನನಗಿಂತ ಹೆಚ್ಚು ಅಭ್ಯಾಸ ಮಾಡಿದವರು, ಅಧ್ಯಯನ ನಡೆಸಿ ಸಂಶೋಧನೆ ಮಾಡಿದ ಡಾಕ್ಟರರು ಕೆಲವರು ನನ್ನ ಮುಂದೆ ಕುಳಿತಿದ್ದಾರೆ. ಇನ್ನೂ ಕೆಲವರು ನನ್ನ ಹತ್ತಿರವೇ ಇದ್ದಾರೆ. ಇವರಲ್ಲದೆ ಹತ್ತಾರು ಕವನ ಸಂಕಲನ, ಕಥಾ ಸಂಕಲನ, ವಿಮರ್ಶೆ–ಹೀಗೆ ಅನೇಕ ಕೃತಿಗಳನ್ನು ಪ್ರಕಟಿಸಿದವರೂ ಇದ್ದಾರೆ. ಇಂಥವರನ್ನೆಲ್ಲ ಬಿಟ್ಟು ನನಗೇಕೆ ಅಧ್ಯಕ್ಷ ಸ್ಥಾನ ಕೊಟ್ಟರೆನ್ನುವುದೇ ಒಂದು ಒಗಟಾಗಿದೆ.

ನಾನು ಬರೆದದ್ದು ಹೌದು. ಸಾಹಿತಿಯಾಗಬೇಕೆಂದು ಬರೆಯಲಿಲ್ಲ. ನನಗೆ ಸ್ವಲ್ಪ ಮರಾಠಿ, ಹಿಂದಿ ಮತ್ತು ಇಂಗ್ಲಿಷ್ ಗೊತ್ತು. ಆಯಾ ಭಾಷೆಯಲ್ಲಿ ಒಂದು ಲೇಖನ ಓದಿ ಖುಷಿಪಟ್ಟಾಗ ಆ ಸಂತೋಷವನ್ನು ಹಂಚಿಕೊಳ್ಳಲು ಕನ್ನಡಕ್ಕೆ ಅನುವಾದಿಸಿದೆ. ಹೀಗೆ ಬರೆದ ಬಿಡಿ ಲೇಖನಗಳು 'ಕರ್ಮವೀರ', 'ಪ್ರಪಂಚ', 'ಸುಧಾ', 'ಜನಸೇವಕ', 'ಸಂಯುಕ್ತ ಕರ್ನಾಟಕ', 'ಕಸ್ತೂರಿ' ಮುಂತಾದ ನಿಯತಕಾಲಿಕಗಳಲ್ಲಿ ಪ್ರಕಟವಾಗಿದ್ದೂ ನಿಜ. ಬಿಡಿ ಲೇಖನಗಳನ್ನು ಬರೆದರೂ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರನ್ನಾಗಿ ಮಾಡುತ್ತಾರೆಂದು ಗೊತ್ತಾಗಿದ್ದರೆ ನಾನು ಬರೆಯುವ ಉಸಾಬರಿಯನ್ನೇ ಮಾಡುತ್ತಿದ್ದಿಲ್ಲ. ನನ್ನ ಪ್ರಕಟವಾದ ಕೃತಿಗಳು ಎರಡು ಮಾತ್ರ ಇಷ್ಟು ಮಾತ್ರದಿಂದ ಬಿಡಿ ಲೇಖನಗಳ ಬರಹಗಾರನಾದ ನನಗೆ ತಾಲೂಕಿನ ಪ್ರಥಮ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಸ್ಥಾನ ನೀಡಿದ ತಾಲೂಕಾ ಘಟಕದ ಅಧ್ಯಕ್ಷರು ಹಾಗೂ ಇತರ ಪದಾಧಿಕಾರಿಗಳು ತೋರಿಸಿದ ಪ್ರೀತಿ–ವಿಶ್ವಾಸ ಮತ್ತು ಅವರ ವಿಶಾಲ ಮನೋಭಾವಕ್ಕೆ ನಿರುತ್ತರನಾಗಿ ಒಪ್ಪಿಕೊಂಡು ಇಲ್ಲಿ ನಿಂತಿದ್ದೇನೆ.

ದಿವಂಗತ ಡಾ। ಶಿವರಾಮ ಕಾರಂತರು ನನಗೆ ಕೊಟ್ಟ ಉಡುಗೊರೆ ಅಂಕೋಲಾ. ನಾನಿಲ್ಲಿ ಸ್ಥಾಯೀ ಆಗಿ ಉಳಿಯುವಂತೆ ಮಾಡಿದ್ದು ಅಂಕೋಲಾದ ಸಾರ್ವಜನಿಕರ, ಸ್ನೇಹಿತರ ಪ್ರೀತಿ ಮತ್ತು ವಿಶ್ವಾಸ. ನಾನು ಈ ದಿನ ಈ ವೇದಿಕೆಯಲ್ಲಿ ನಿಂತು

ಮಾತನಾಡುವಾಗ ನನ್ನನ್ನು ಆಶೀರ್ವದಿಸಿದ ದಿನಕರ ದೇಸಾಯಿ, ಗೌರೀಶ ಕಾಯ್ಕಿಣಿ, ಎನ್ಕೆ ಕುಲಕರ್ಣಿ, ಶಿವರಾಮ ಕಾರಂತರು ನೆನಪಾಗುತ್ತಾರೆ. ಅಲ್ಲದೆ ನಾನು ಹೆಚ್ಚು ಓದುವಂತೆ ಮಾಡಿದ, ಬರೆದದ್ದನ್ನು ಓದಿ ಮೆಚ್ಚಿಕೊಂಡು ಪ್ರೋತ್ಸಾಹಿಸಿದ ಸ್ನೇಹಿತರ ಪ್ರೋತ್ಸಾಹವನ್ನೂ ಮರೆಯುವಂತಿಲ್ಲ. ಈ ಸಂದರ್ಭದಲ್ಲಿ ಅಂಕೋಲಾದ ಬಗ್ಗೆ ಸ್ವಲ್ಪ ಹೇಳಬೇಕು. ಊರು ಸಣ್ಣದಾಗಿದ್ದರೂ ಬಹಳ ಹೆಸರು ಗಳಿಸಿದ ಊರು. ಇತಿಹಾಸ ಕಾಲದಿಂದಲೂ ಹೌದು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಂಕೋಲೆಯ ಜನ ತಮ್ಮ ಇಡೀ ಜೀವನವನ್ನೇ ಪಣವಾಗಿಟ್ಟು ಹೋರಾಡಿದವರು. ಅದಕ್ಕೆ ಸಾಕ್ಷಿಯಾಗಿ ಶತಾಯುಷಿ ಶ್ರೀ ಶೆಟಗೇರಿ ಜೋಗಿ ನಾಯಕರು ನಮ್ಮ ನಡುವೆ ಇದ್ದಾರೆ. ರೈತ ಚಳುವಳಿ, ಜೇಪಿ ಚಳುವಳಿ, ಗೋಕಾಕ ಚಳುವಳಿಯಲ್ಲಿ ಅಂಕೋಲೆಯೇ ಜಿಲ್ಲೆಗೆ ಕೇಂದ್ರವಾಗಿ ಹೋರಾಟ ನಡೆಸಿತ್ತು. ದಕ್ಷಿಣಕ್ಕೆ ಗಂಗಾವಳಿ, ಪಶ್ಚಿಮಕ್ಕೆ ಅರಬ್ಬಿ ಸಮುದ್ರ, ಉತ್ತರ–ಪೂರ್ವ ದಿಕ್ಕುಗಳಿಗೆ ದೃಷ್ಟಿ ಹಾಯಿಸಿದಷ್ಟೂ ದೂರ ಹಸಿರು ಹೊದ್ದುಕೊಂಡು ನಿಂತ ಸಹ್ಯಾದ್ರಿಯ ಸೆರಗಿನ ಶಿಖರಗಳು.

ಅಂಕೋಲಾಕ್ಕೆ ಐತಿಹಾಸಿಕ ಮಹತ್ವದ ಹಿನ್ನೆಲೆಯೂ ಉಂಟು. ಊರ ಮಧ್ಯದಲ್ಲಿದ್ದ ಐತಿಹಾಸಿಕ ಕೋಟೆಯನ್ನು ಸರ್ಪಮಲ್ಲಿಕ ಕಟ್ಟಿಸಿದನೆಂದು ಹೇಳಲಾಗುತ್ತದೆ. ಆದರೆ ವಿಜಾಪುರದ ಅರಸರು ವಿಜಯನಗರದ ಪತನದ ನಂತರ ಕಾಳಿ ನದಿಯಿಂದ ಗಂಗಾವಳಿ ನದಿಯವರೆಗಿನ ಪ್ರದೇಶವನ್ನು ಗವರ್ನರನ ಆಡಳಿತಕ್ಕೆ ವಹಿಸಿಕೊಟ್ಟಿದ್ದರು. ೧೬೮೭ರಲ್ಲಿ ಔರಂಗಜೇಬನು ವಿಜಾಪುರವನ್ನು ವಶಪಡಿಸಿಕೊಂಡು ಈ ಪ್ರದೇಶವನ್ನು ಸರದಾರ ಸದಾಶಿವರಾವ್‌ನಿಂದ ಗೆದ್ದುಕೊಂಡ. ಅಲ್ಲಿ ಮಾರುತಿ ದೇವಸ್ಥಾನವನ್ನು ಕಟ್ಟಿಸಿದ. ೧೭೬೩ರಲ್ಲಿ ಸೋಂದಾದ ರಾಜರ ಅವನತಿಯಾದ ಮೇಲೆ ಅಂಕೋಲೆ ಹೈದರ್ ಮತ್ತು ಟಿಪ್ಪು ಇವರ ಅಧೀನಕ್ಕೆ ಬಂತೆಂಬ ಉಲ್ಲೇಖವಿದೆ.

ಈ ಹೊತ್ತು ನಡೆಯುತ್ತಿರುವ ಈ ಅಂಕೋಲಾ ತಾಲೂಕಾ ಮಟ್ಟದ ಪ್ರಥಮ ಸಮ್ಮೇಲನಕ್ಕೆ ಒಂದು ವಿಶೇಷ ಸಂಭ್ರಮವಿದೆ. ನಮ್ಮ ಜಿಲ್ಲೆಯಲ್ಲಿ ಕಳೆದ ನಲವತ್ತು ವರ್ಷಗಳಷ್ಟು ಹಿಂದಿನಿಂದಲೂ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕವಿತ್ತು. ಶ್ರೀ ಎನ್. ಎಸ್. ಹೆಗಡೆ ಕುಂದರಗಿಯವರು ಅಧ್ಯಕ್ಷರಾಗಿದ್ದರು. ಆಗ ಬಿ. ಶಿವಮೂರ್ತಿ ಸ್ವಾಮಿಯವರು ರಾಜ್ಯಾಧ್ಯಕ್ಷರಾಗಿದ್ದರು. ಆದರೆ ಜಿಲ್ಲೆಯಲ್ಲಿ ಯಾವುದೇ ಸಾಹಿತ್ಯಿಕ ಕಾರ್ಯಕ್ರಮ ನಡೆಯಲಿಲ್ಲ. ಈ ನಿಷ್ಕ್ರಿಯತೆಯನ್ನು ಸಹಿಸದ ಸಾಹಿತ್ಯಾಸಕ್ತರು ಶ್ರೀ ಪಿ. ವಿ. ಶಾಸ್ತ್ರಿ ಕಿಬ್ಬಳ್ಳಿಯವರ ಮುಂದಾಳತ್ವದಲ್ಲಿ ಸಾಹಿತ್ಯ ಪ್ರವರ್ತಕರ ಸಂಘವೊಂದನ್ನು ಮಾಡಿಕೊಂಡು ಪ್ರಥಮ ಜಿಲ್ಲಾ ಸಾಹಿತ್ಯ ಸಮ್ಮೇಲನವನ್ನು ಹೊನ್ನಾವರದಲ್ಲಿ ನಡೆಸಿದರು. ಅದಕ್ಕೆ ಡಾ। ಗೌರೀಶ ಕಾಯ್ಕಿಣಿಯವರು ಅಧ್ಯಕ್ಷರಾಗಿದ್ದರು. ಅದರಲ್ಲಿ ಶ್ರೀ ಎನ್.ಎಸ್.ಹೆಗಡೆ ಕುಂದರಗಿಯವರೂ ಸಹ ಸಕ್ರಿಯವಾಗಿ ಭಾಗವಹಿಸಿದ್ದರು. ಆದರೆ ಎರಡನೇ ಜಿಲ್ಲಾ ಸಮ್ಮೇಳನವನ್ನು ಶ್ರೀ ಕುಂದರಗಿಯವರು ಯಲ್ಲಾಪುರದಲ್ಲಿ ದಿ. ಬಿ.ಎಚ್.ಶ್ರೀಧರರ ಅಧ್ಯಕ್ಷತೆಯಲ್ಲಿ ಮಾಡಿದರು. ಆದರೆ ಅದು ಬಿ. ಎಚ್. ಶ್ರೀಧರರು ಅಧ್ಯಕ್ಷರಾಗಿದ್ದರಿಂದ ಸ್ವಲ್ಪ ಮಟ್ಟಿಗೆ ಚೆನ್ನಾಗಿ ಆಯಿತು.

ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಜಿ. ನಾರಾಯಣ ಅವರು ಅಧ್ಯಕ್ಷರಾಗಿ ಪರಿಷತ್ತಿನ ಸಾಹಿತ್ಯಕ ಚಟುವಟಿಕೆಗಳು ಜಿಲ್ಲಾ ಮಟ್ಟದಿಂದ ನಡೆಯಬೇಕೆಂದು ಹೊಸ ತಿರುವು ಕೊಟ್ಟರು. ಆಗ ಹಂಪನಾ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು. ಈ ಬದಲಾವಣೆಗಳಾದಾಗ ಹಂಪನಾ ನಮ್ಮ ಅಂಕೋಲಾದ ಶ್ರೀ ವಿ. ಜೆ. ನಾಯಕರನ್ನು ಜಿಲ್ಲಾ ಅಧ್ಯಕ್ಷರನ್ನಾಗಿ ಮಾಡಿದರು. ಶ್ರೀ ವಿ.ಜೆ. ನಾಯಕರೂ ಸಹ ಎಲ್ಲಾ ತಾಲೂಕುಗಳಲ್ಲಿರುವ ಸಾಹಿತ್ಯ ವೇದಿಕೆ, ಸಾಹಿತ್ಯ ಸಂಘಗಳಿಗೆ ಪರಿಷತ್ತಿನ ಕಾರ್ಯಕ್ರಮ ನಡೆಸುವ ಹೊಣೆ ಒಪ್ಪಿಸಿಕೊಟ್ಟ ಕಾರಣ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಒಂದಿಲ್ಲೊಂದು ಕಾರ್ಯಕ್ರಮಗಳು ನಡೆದು ಬಹು ಜನರ ಗಮನ ಸೆಳೆಯಿತು. ತಮ್ಮ ಅಧಿಕಾರಾವಧಿಯಲ್ಲಿ ಶ್ರೀ ವಿ. ಜೆ. ನಾಯಕರು ಎಲ್ಲಾ ತಾಲೂಕುಗಳಲ್ಲಿ ಸಾಹಿತ್ಯ ಸಮ್ಮೇಲನ ನಡೆಸಿದ್ದರು. ಬಾಕಿ ಉಳಿದ ಅಂಕೋಲಾ–ಮುಂಡಗೋಡುಗಳ ಸಮ್ಮೇಲನ ನಡೆಸುವ ಸಿದ್ಧತೆಯಲ್ಲಿದ್ದರು.

ಶ್ರೀ ವಿ.ಜೆ. ನಾಯಕರು ರಾಜ್ಯದ ಗಡಿ ಭಾಗವಾದ ಕಾರವಾರದಲ್ಲಿ ಮೂರನೆಯ ಸಾಹಿತ್ಯ ಸಮ್ಮೇಲನವನ್ನು ಎರಡು ದಿನಗಳ ಕಾಲ, ಸಂವಾದ–ಚರ್ಚಾಗೋಷ್ಠಿ ಕಾರ್ಯಕ್ರಮ, ಉತ್ತಮ ಊಟ– ವಸತಿ ವ್ಯವಸ್ಥೆ ಮಾಡಿ ತುಂಬಾ ಯಶಸ್ವಿಗೊಳಿಸಿದರು. ಬಾಕಿ ಉಳಿದ ಅಂಕೋಲಾ ಮತ್ತು ಮುಂಡಗೋಡುಗಳಲ್ಲಿ ಸಾಹಿತ್ಯ ಸಮ್ಮೇಲನ ನಡೆಸುವ ಸಿದ್ಧತೆಯಲ್ಲಿರುವಾಗ

ಅನಿರೀಕ್ಷಿತವಾಗಿ ವಿ.ಜೆ. ನಾಯಕರನ್ನು ಅಧ್ಯಕ್ಷ ಸ್ಥಾನದಿಂದ ತೆಗೆದು ಟಿ. ಕೆ. ಮಹಮ್ಮೂದರಿಗೆ ಪಟ್ಟ ಕಟ್ಟಿದರು. ಏತನ್ಮಧ್ಯೆ ಒಂದು ಅವಧಿಗೆ ಕಾರವಾರದ ವಕೀಲರಾದ ದಿ.ಎಸ್.ಕೆ. ಪೈಯವರು ಮತ್ತು ಅಂಕೋಲಾದ ಶ್ರೀ ಪ್ರಕಾಶ ನಾಯಕ ಅವರು ಜಿಲ್ಲಾಧ್ಯಕ್ಷರಾಗಿದ್ದರು. ವಿ.ಜೆ.ನಾಯಕರಿರುವಾಗ ಅಂಕೋಲೆಗೆ ತಪ್ಪಿದ ಸಾಹಿತ್ಯ ಸಮ್ಮೇಲನ ನಡೆಸುವ ಅವಕಾಶ ಮುಂದೆ ಬರಲೇ ಇಲ್ಲ. ಶ್ರೀ ಟಿ.ಕೆ.ಮಹಮೂದರು ಇಪ್ಪತ್ತು ವರ್ಷಗಳ ಕಾಲ ಅಧ್ಯಕ್ಷರಾಗಿದ್ದರು. ಬೇರೆ ಬೇರೆ ಕಡೆ ಜಿಲ್ಲಾ ಸಾಹಿತ್ಯ ಸಮ್ಮೇಲನ, ಶಿರಸಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಲನಗಳನ್ನು ನಡೆಸಿದರು. ಆದರೆ ಮಹಮ್ಮೂದರಿಗೆ ಅಂಕೋಲಾ ಕಾಣಲೇ ಇಲ್ಲ. ಶ್ರೀ ಬಿ. ಹೊನ್ನಪ್ಪ ಅವರು ಅಂಕೋಲಾ ತಾಲೂಕಾ ಕ.ಸಾ.ಪ. ಅಧ್ಯಕ್ಷರಾಗಿದ್ದಾಗ ಸಮ್ಮೇಲನ ನಡೆಸುವ ಬಗ್ಗೆ ನನ್ನೊಂದಿಗೆ ಮಾತನಾಡಿದ್ದರಾದರೂ ಪರಿಷತ್ತಿಗೆ ಹೊಸ ಚುನಾವಣೆ ಬಂದಿದ್ದರಿಂದ ಅವರ ಯೋಜಿತ ಕಾರ್ಯ ಕೈಗೂಡಲಿಲ್ಲ. ಸಾಹಿತ್ಯ ಪರಿಷತ್ತು ಅಲಕ್ಷಿಸಿದರೂ ಕೂಡ ಅಂಕೋಲೆಯಲ್ಲಿ ಸಾಹಿತ್ಯಕ ಕಾರ್ಯಕ್ರಮಗಳು ವರ್ಷವಿಡೀ ಸ್ಥಳೀಯ ಕರ್ನಾಟಕ ಸಂಘ, ಶ್ರೀ ರಾಘವೇಂದ್ರ ಪ್ರಕಾಶನ ಮುಂತಾದ ಸಂಘಟನೆಗಳ ಮೂಲಕ ಕಾವ್ಯ ಕಮ್ಮಟ, ಕಥಾ ಕಮ್ಮಟ, ರಾಜ್ಯ ಮಟ್ಟದ ಸಾಹಿತ್ಯ ಸಮ್ಮೇಲನ, ಹೊಸ ಪುಸ್ತಕಗಳ ಪ್ರಕಟಣೆ, ಬಿಡುಗಡೆ ಹೀಗೆ ಒಂದಿಲ್ಲೊಂದು ಸಮಾರಂಭ ನಡೆದು ಇಡೀ ಅಂಕೋಲಾ ತಾಲೂಕು ಸಾಹಿತ್ಯಿಕ ವಾತಾವರಣದಿಂದ ತುಂಬಿರುತ್ತಿತ್ತು.

ಅಂಕೋಲಾದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ನಡೆಯುತ್ತಿರುವ ಈ ಸಾಹಿತ್ಯ ಸಮ್ಮೇಲನವೇ ಮೊದಲನೆಯದು. ಇಂಥ ಸಂಭ್ರಮ ತಂದುಕೊಡುವ ಪೌರೋಹಿತ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಪ್ರೊ. ಚಂಪಾ ಮತ್ತು ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ರೋಹಿದಾಸ ನಾಯಕರು ವಹಿಸಿದ್ದು ನಮಗೆಲ್ಲ ತುಂಬಾ ಖುಷಿ ತಂದು ಕೊಟ್ಟಿದೆ.

ತಾಲೂಕಿನ ಶಿಕ್ಷಣ ಪ್ರಗತಿಯ ಚಿತ್ರ :

ಇಡೀ ದಿನ ಈ ವೇದಿಕೆಯ ಮೇಲೆ ಕಾರ್ಯಕ್ರಮಗಳು ನಡೆಯುವುದರಿಂದ ಹೆಚ್ಚಿನ ವೇಳೆ ತೆಗೆದುಕೊಳ್ಳದೆ ನಮ್ಮ ತಾಲೂಕಿನ ಶಿಕ್ಷಣ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಂಕ್ಷಿಪ್ತವಾಗಿ ನಾನಿಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ನಮ್ಮ ಅಂಕೋಲಾ ತಾಲೂಕು ಶಿಕ್ಷಣ ಕ್ಷೇತ್ರದಲ್ಲಿ ತೀವ್ರ ಗತಿಯ ಪ್ರಗತಿ ಸಾಧಿಸಿದ್ದನ್ನು ನಾನು ಕಂಡವನು. ಆಗ ೩೦–೩೫ ವರ್ಷಗಳ ಹಿಂದೆ ಅಂಕೋಲಾದಲ್ಲಿ ಜೈಹಿಂದ್ ಹೈಸ್ಕೂಲ್ ಮತ್ತು ಪೀಪಲ್ಸ್ ಮಲ್ಟಿ ಪರ್ಪಸ್ ಹೈಸ್ಕೂಲ್ ಮಾತ್ರ ಇದ್ದವು. ಅಂಕೋಲಾದ ಸುತ್ತಮುತ್ತಲಿನ ಹಳ್ಳಿಗಳ ಹುಡುಗರೆಲ್ಲ ಪ್ರಾಥಮಿಕ ಶಿಕ್ಷಣ ಮುಗಿಸಿ ಹೈಸ್ಕೂಲಿಗಾಗಿ ಅಂಕೋಲಾಕ್ಕೆ ಬರುತ್ತಿದ್ದರು. ತಾಲೂಕಿನಲ್ಲಿ ಅಂದರೆ ಅವರ್ಸಾದಲ್ಲಿ ಶ್ರೀ ಕಾತ್ಯಾಯನಿ ಹೈಸ್ಕೂಲ್ ಮಾತ್ರ ಇತ್ತು. ವರ್ಷಗಳು ಕಳೆದಂತೆ ಹೈಸ್ಕೂಲಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ತಾಲೂಕಿನ ಬೇರೆ ಬೇರೆ ಕಡೆ ಖಾಸಗಿ ಹಾಗೂ ಸರಕಾರಿ ಪ್ರೌಢ ಶಾಲೆಗಳು ಪ್ರಾರಂಭಗೊಂಡವು.

ಸ್ವಾತಂತ್ರ್ಯ ಸಂಗ್ರಾಮದ ಪ್ರದೇಶವಾದ ಶೆಟಗೇರಿ ಭಾಗದಲ್ಲಿ ಸತ್ಯಾಗ್ರಹ ಸ್ಮಾರಕ ವಿದ್ಯಾಲಯ ಪ್ರಾರಂಭವಾಯಿತು. ಈ ಕಡೆ ಭಾವಿಕೇರಿಯಲ್ಲಿ ನೂತನ ಶಿಕ್ಷಣ ಟ್ರಸ್ಟ ಸಂಸ್ಥೆ ಮತ್ತೊಂದು ಹೈಸ್ಕೂಲ್ ಪ್ರಾರಂಭಿಸಿತು. ಮುಂದೆ ಅಲ್ಲಲ್ಲಿಯ ಅವಶ್ಯಕತೆಯನ್ನು ಗಮನಿಸಿ ಸರಕಾರ ಕೇಣಿ, ಬೇಲೇಕೇರಿ, ಬಾಸಗೋಡ, ಅಗಸೂರ ಮುಂತಾದೆಡೆ ಪ್ರೌಢಶಾಲೆಗಳನ್ನು ತೆರೆದು ಗ್ರಾಮೀಣ ಭಾಗದ ಮಕ್ಕಳಿಗೆ ಹೈಸ್ಕೂಲ್ ಶಿಕ್ಷಣದ ಸೌಲಭ್ಯವನ್ನು ದೊರಕಿಸಿಕೊಟ್ಟಿತು. ಈ ಮಧ್ಯಂತರದಲ್ಲಿ ಹೈಸ್ಕೂಲಿನ ಓದು ಮುಗಿಸಿದ ವಿದ್ಯಾರ್ಥಿಗಳು ಕಾಲೇಜು ಓದುವ ಸಲುವಾಗಿ ಹತ್ತಿರದ ಕುಮಟಾಕ್ಕೆ ಹೋಗುತ್ತಿದ್ದುದು ನನಗೆ ಗೊತ್ತು.(ಕಾರವಾರದಲ್ಲಿ ಕಾಲೇಜ ಇದ್ದಿಲ್ಲ) ತಮ್ಮ ಊರಿನ ಮಕ್ಕಳಿಗೆ ಕಾಲೇಜ ಶಿಕ್ಷಣದ ತೊಂದರೆಯಾಗುತ್ತಿದ್ದುದನ್ನು ಗಮನಿಸಿದ ಸ್ಥಳೀಯ ಪ್ರಮುಖರು ಅಂಕೋಲಾದಲ್ಲಿ ಒಂದು ಕಾಲೇಜ ಪ್ರಾರಂಭಿಸುವ ಬಗ್ಗೆ ಡಾ। ದಿನಕರ ದೇಸಾಯಿಯವರೊಂದಿಗೆ ಸಮಾಲೋಚಿಸಿದರು. ದೇಸಾಯಿಯವರ ಕೆಲವು ಶರ್ತುಗಳಿಗೆ ಒಪ್ಪಿಕೊಂಡರು. ಅದೇ ವೇಳೆಗೆ (೧೯೬೭) ಗೋಪಾಲಕೃಷ್ಣ ಗೋಖಲೆಯವರ ಜನ್ಮ ಶತಾಬ್ದಿ ಇದ್ದುದರಿಂದ ಅವರ ಹೆಸರಿನಲ್ಲಿ ದೇಸಾಯಿಯವರು ತಮ್ಮ ಕೆನರಾ ವೆಲ್‌ಫೇರ್ ಟ್ರಸ್ಟಿನ ವತಿಯಿಂದ ಗೋಖಲೆ ಸೆಂಟಿನರಿ ಕಾಲೇಜ್ ಪ್ರಾರಂಭಿಸಿದರು. ಇಲ್ಲಿ ಪ್ರಾರಂಭದಲ್ಲಿ ಆರ್ಟ್ಸ್, ಸೈನ್ಸ್ ವಿಷಯಗಳನ್ನು ಓದುವ ಅವಕಾಶ ಕಲ್ಪಿಸಿಕೊಟ್ಟರು.

ಅಂಕೋಲಾ ತಾಲೂಕಿನಲ್ಲಿ ಈ ಕಾಲೇಜಿನ ಸ್ಥಾಪನೆಯಿಂದಾಗಿ ಸುತ್ತಮುತ್ತಲಿನ ರೈತ, ಕೂಲಿಕಾರ, ಮೀನುಗಾರ, ಶ್ರಮಜೀವಿಗಳ ಮಕ್ಕಳು ಕಾಲೇಜ್ ಶಿಕ್ಷಣ ಪಡೆಯಲು ಅನುಕೂಲವಾಗಿ ನೂರಾರು ಮಕ್ಕಳು ಪದವೀಧರರಾಗಿ ಹೊಸ ಮನ್ವಂತರವೇ ಪ್ರಾರಂಭವಾಯಿತು ಎನ್ನಬಹುದು. ೧೯೬೨ರಲ್ಲಿ ಅಸ್ತಿತ್ವಕ್ಕೆ ಬಂದ ನೂತನ ಶಿಕ್ಷಣ ಸಭಾ ಟ್ರಸ್ಟ್ ಅದೇ ವರ್ಷ ಹೆಣ್ಣುಮಕ್ಕಳಿಗಾಗಿ ವಿ.ಕೆ.ಗರ್ಲ್ಸ್ ಹೈಸ್ಕೂಲ್ ಪ್ರಾರಂಭಿಸಿತು. ಇದೇ ಟ್ರಸ್ಟಿನವರು ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಸಂಸ್ಥೆಯನ್ನು (ಟಿ.ಸಿ.ಎಚ್.) ಇದಕ್ಕೆ ಪೂರಕವಾಗಿ ಪ್ರಾಯೋಗಿಕ ಪ್ರಾಥಮಿಕ ಶಾಲೆಯನ್ನು ತೆರೆದರು. ಅವುಗಳ ಜೊತೆಗೆ ಕಮಲ್ ಮೆಡಿಕಲ್ ಸೆಂಟರ್ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ಆರಂಭಿಸಿ ಅಂಕೋಲಾದ ಸಾರ್ವಜನಿಕರಿಗೆ ಶಿಕ್ಷಣ ಮತ್ತು ಆರೋಗ್ಯದ ತನ್ನ ಸೇವಾ ಕ್ಷೇತ್ರವನ್ನು ವಿಸ್ತರಿಸಿಕೊಂಡಿತು.

ಬೃಹದಾಕಾರವಾಗಿ ಬೆಳೆಯುತ್ತ ಹೊರಟ ಈ ಸಂಸ್ಥೆಯ ಆಡಳಿತ ನೋಡಿಕೊಳ್ಳಲು ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಎಸ್. ವಿ. ಪಿಕಳೆ ಮತ್ತು ಶ್ರೀಮತಿ ಪ್ರೇಮಾ ಪಿಕಳೆ ಅವರು ಬೆಳಗಾವಿಯ ಕೆ. ಎಲ್. ಇ. ಸೊಸೈಟಿಯವರಿಗೆ ವಹಿಸಿಕೊಟ್ಟರು. ಸೊಸೈಟಿಯವರು ೨೦೦೦ನೇ ಇಸ್ವಿಯಲ್ಲಿ ಮಹಿಳಾ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ಇದರಿಂದಾಗಿ ಅಂಕೋಲಾದಲ್ಲಿ ಎರಡು ಪದವಿ ಕಾಲೇಜುಗಳಾದವು.

ಕೆಲವು ಅಂಕಿ – ಸಂಖ್ಯೆಗಳು

ತಾಲೂಕಿನಲ್ಲಿರುವ ಒಟ್ಟೂ ಪ್ರಾಥಮಿಕ ಶಾಲೆಗಳು – ೧೬೩
ಓದುತ್ತಿರುವ ಮಕ್ಕಳ ಸಂಖ್ಯೆ : ೧೨,೯೫೦
ಹೆಣ್ಣುಮಕ್ಕಳ ಸಂಖ್ಯೆ : ೬,೯೧೧
ತಾಲೂಕಿನಲ್ಲಿರುವ ಒಟ್ಟೂ ಮಾಧ್ಯಮಿಕ ಶಾಲೆಗಳು : ೨೨
ಓದುತ್ತಿರುವ ಮಕ್ಕಳ ಸಂಖ್ಯೆ : ೪,೩೬೩

ಪದವಿ ಮತ್ತು ಪದವಿಪೂರ್ವ ಮಹಾವಿದ್ಯಾಲಯಗಳಲ್ಲಿ ಓದುತ್ತಿರುವವರ ಸ್ಥೂಲ ವಿವರ ಹೀಗಿದೆ.

೧) ಜಿ. ಸಿ. ಪದವಿ ಕಾಲೇಜು
ಆರ್ಟ್ಸ್ : ೩೫೫
ಸೈನ್ಸ್ : ೧೧೮
ವಾಣಿಜ್ಯ : ೪೧
ಒಟ್ಟೂ : ೧೫೮

೨) ಕೆ. ಎಲ್. ಇ. ಮಹಿಳಾ ಕಾಲೇಜು
ಒಟ್ಟೂ : ೧೫೮

ತಾಲೂಕಿನಲ್ಲಿ ೦೬ ಪದವಿಪೂರ್ವ ಕಾಲೇಜುಗಳಿದ್ದು ಅವುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೧,೩೦೦ ಆದೀತು. ಈ ಪೈಕಿ ಜಿ. ಸಿ. ಪದವಿಪೂರ್ವ ಕಾಲೇಜಿನಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳನ್ನು ಬೋಧಿಸಲಾಗುತ್ತಿದೆ. ಪೂರ್ಣಪ್ರಜ್ಞಾ ಕರುಣಾ ಪದವಿಪೂರ್ವ ವಿಜ್ಞಾನ ಕಾಲೇಜಿನಲ್ಲಿ ವಿಜ್ಞಾನ ವಿಷಯವನ್ನು ಮಾತ್ರ ಬೋಧಿಸಲಾಗುತ್ತಿದ್ದು ಅಲ್ಲಿ ಓದುತ್ತಿರುವವರ ಸಂಖ್ಯೆ ೩೩ರಷ್ಟಿದೆ. ಈ ಎಲ್ಲ ಶಿಕ್ಷಣ ಸಂಸ್ಥೆಗಳ ಪರೀಕ್ಷಾ ಫಲಿತಾಂಶ ತೃಪ್ತಿಕರವಾಗಿದೆ.

ಈ ವರ್ಷ (೨೦೦೪ – ೨೦೦೫) ಅಗಸೂರಿನ ಪ್ರೌಢಶಾಲೆಯ ದೈಹಿಕ ಶಿಕ್ಷಕರಾದ ಶ್ರೀ ಮಧುಕೇಶ್ವರ ದೇವರಭಾವಿ ಮತ್ತು ಅಂಕೋಲಾದ ಮಾದರಿ ಹಿರಿಯ ಪ್ರಾಥಮಿಕ ಶಾಲೆ ನಂ. ೩ರಲ್ಲಿ ಶಿಕ್ಷಕರಾಗಿರುವ ಶ್ರೀ ದೇವಿದಾಸ ಆರ್. ನಾಯ್ಕ ಇವರು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ. ಇವರಿಬ್ಬರನ್ನೂ ನಾನು ಅಭಿನಂದಿಸುತ್ತೇನೆ. ಪರೀಕ್ಷೆಗಳಲ್ಲಷ್ಟೇ ಅಲ್ಲದೇ ಮೇಲ್ಕಾಣಿಸಿದ ಎಲ್ಲಾ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಆಟೋಟಗಳಲ್ಲಿಯೂ ಭಾಗವಹಿಸಿ ತಮ್ಮ ಶಾಲೆ ಹಾಗೂ ತಾಲೂಕಿಗೆ ಕೀರ್ತಿ ತರುತ್ತಿದ್ದಾರೆ. ಶ್ರೀ ಉದಯ ಪ್ರಭು ಅವರಂಥ ಅಂತರರಾಷ್ಟ್ರೀಯ ಕ್ರೀಡಾಪಟುವನ್ನು ಕೊಟ್ಟ ಅಂಕೋಲಾಕ್ಕೆ ಒಂದು ಕ್ರೀಡಾಂಗಣದ ಆವಶ್ಯಕತೆ ಇರುವುದನ್ನು ಗಮನಿಸಿ ಕ್ರೀಡಾಂಗಣ ನಿರ್ಮಾಣ ಕಾರ್ಯ ಕೈಗೊಂಡಿದ್ದು ಅದು ಇನ್ನೂ ಪೂರ್ಣ ಸಿದ್ಧವಾಗದೇ ಉಳಿದಿದ್ದು ಅದರ ಕೆಲಸ ಬೇಗ ಮುಗಿದು ಕ್ರೀಡಾಪಟುಗಳಿಗೆ ಸಿಗುವಂತಾಗಬೇಕು.

ಕೆನರಾ ವೆಲ್‌ಫೇರ್ ಟ್ರಸ್ಟು ಮೊದಲಿನಿಂದಲೂ ಥಕ್ಕರಬಾಪಾ ಸೇವಾ ಕೇಂದ್ರವನ್ನು ಸ್ಥಾಪಿಸಿ ಆ ಮೂಲಕ ಮಧ್ಯಮವರ್ಗದ ಹೆಣ್ಣು ಮಕ್ಕಳಿಗೆ ಸ್ವಾವಲಂಬನೆ ತಂದುಕೊಡಬೇಕೆಂಬ ಉದ್ದೇಶದಿಂದ ಹೊಲಿಗೆ, ಹೆಣಿಗೆ ಕಲಿಸುವ ವರ್ಗಗಳನ್ನು ಪ್ರಾರಂಭಿಸಿತ್ತು. ಈ ಕೇಂದ್ರದಿಂದ ಹೊಲಿಗೆ ತರಬೇತಿ ಪಡೆದು ಸರಕಾರ ನಡೆಸುವ ಡಿಪ್ಲೊಮಾ ಪರೀಕ್ಷೆಗಳಿಗೆ ಕೂಡ್ರಿಸುವ ವ್ಯವಸ್ಥೆಯಿತ್ತು.

ಈ ಪರೀಕ್ಷೆ ಪಾಸಾದವರಿಗೆ ಹೈಸ್ಕೂಲಿನಲ್ಲಿ ವೃತ್ತಿ ಮಾರ್ಗದರ್ಶಕರೆಂಬ ಉದ್ಯೋಗ ದೊರೆಯುತ್ತಿತ್ತು. ಕೆಲವರು ಇದರ ಲಾಭ ಪಡೆದರೆ ಮತ್ತೆ ಕೆಲವರು ತಾವೇ ಸ್ವತಃ ಹೊಲಿಗೆ ಕೆಲಸ ಪ್ರಾರಂಭಿಸಿ ಸ್ವತಂತ್ರ ಜೀವನ ನಿರ್ವಹಣೆಗೆ ಮಾರ್ಗ ಕಂಡುಕೊಂಡರು. ಆನಂತರ ಅಂಕೋಲಾದಲ್ಲಿ ಅಸ್ತಿತ್ವಕ್ಕೆ ಬಂದ ಮಹಿಳಾ ಮಂಡಳ, ಸಮಾಜ ಮಂದಿರದಲ್ಲಿ ಮಹಿಳೆಯರಿಗಾಗಿ ಹೊಲಿಗೆ ತರಗತಿಯನ್ನು ಪ್ರಾರಂಭಿಸಿತು. ಆನಂತರ ಹೆಣ್ಣುಮಕ್ಕಳಿಗಾಗಿ ಹೊಸ ವಿಷಯ ಕಲಿಸಿ ಅವರಿಗೆ ಬೇರೊಂದು ಮಾರ್ಗವನ್ನು ತೋರಿಸುವ ಪ್ರಯತ್ನವನ್ನು ಯಾರೂ ಮಾಡಲಿಲ್ಲ. ಆದರೆ ಯಲ್ಲಾಪುರದ ವಿಶ್ವದರ್ಶನ ಸಂಸ್ಥೆಯವರು ೧೯೯೮– ೯೯ರಲ್ಲಿ ಅಂಕೋಲಾದಲ್ಲಿ ನರ್ಸಿಂಗ್ ತರಬೇತಿ ಕೇಂದ್ರವನ್ನು ತೆರೆದಿದ್ದರಿಂದ ಪಿ.ಯು.ಸಿ. ಓದಿದ ಮಧ್ಯಮ ವರ್ಗದ ಹೆಣ್ಣುಮಕ್ಕಳಿಗೆ ಹೊಸ ಜೀವನೋಪಾಯದ ದಾರಿ ತೋರಿದಂತಾಗಿದೆ. ಪ್ರಾರಂಭದಲ್ಲಿ ಕೇವಲ ೧೩ ವಿದ್ಯಾರ್ಥಿನಿಯರು ಪ್ರವೇಶ ಪಡೆದರೆ ಅವರೆಲ್ಲ ಗ್ರಾಮೀಣ ಭಾಗದವರೆ. ಈಗಾಗಲೇ ಈ ಸಂಸ್ಥೆಯಿಂದ ೧೧೦ ಮಂದಿ ತರಬೇತಿ ಪಡೆದು ಹೋಗಿದ್ದಾರೆ. ಅವರಲ್ಲಿ ಬಹಳಷ್ಟು ಜನ ಬೇರೆ ಬೇರೆ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರವೇಶ ಕೊಡುವಾಗ ಸ್ಥಾನಿಕ, ತಾಲೂಕು ಹಾಗೂ ಜಿಲ್ಲೆಯವರಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಆದರೂ ಇಲ್ಲಿ ಕೇರಳ, ಕೊಡಗಿನವರೇ ಹೆಚ್ಚು, ನರ್ಸಿಂಗ್ ಕೆಲಸದ ಬಗ್ಗೆ ನಮ್ಮ ಹಳ್ಳಿಗಾಡಿನ ಜನರಲ್ಲಿರುವ ಕೀಳರಿಮೆ ಹೋಗಬೇಕು. ಇಲ್ಲಿ ನರ್ಸಿಂಗ್ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಪ್ರಾತ್ಯಕ್ಷಿಕೆಗಾಗಿ ಜಿಲ್ಲಾ ಆಸ್ಪತ್ರೆ ಮತ್ತು ಸ್ಥಳೀಯ ಸರಕಾರಿ ಆಸ್ಪತ್ರೆಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಯಾವ ತೊಂದರೆಯೂ ಆಗದಂತೆ ಸಂಸ್ಥೆ ನೋಡಿಕೊಳ್ಳುತ್ತಿದೆ.

ಕಮಲ್ ಮೆಡಿಕಲ್ ನೋಡಿಕೊಳ್ಳುತ್ತಿರುವ ಕೆ.ಎಲ್.ಇ. ಸೊಸೈಟಿಯವರೂ ಕೂಡ ನರ್ಸಿಂಗ್ ಡಿಪ್ಲೊಮಾ ಮತ್ತು ನರ್ಸಿಂಗ್ ಪದವಿ ವರ್ಗಗಳನ್ನು ಆರಂಭಿಸಿದ್ದಾರೆ. ಈ ತರಬೇತಿಯಲ್ಲಿ ಈ ವರ್ಷ ಡಿಪ್ಲೊಮಾಕ್ಕೆ ೬೧ ಮತ್ತು ಪದವಿ ವರ್ಗಕ್ಕೆ ೬೦ ಅಭ್ಯರ್ಥಿಗಳಿದ್ದಾರೆ.

ಮಧ್ಯಮ ವರ್ಗದ ಹೆಣ್ಣು ಮಕ್ಕಳಿಗೆ ಆರ್ಥಿಕವಾಗಿ ಭಾರವಾಗದ ಕೋರ್ಸುಗಳು ನಡೆಯುವಂತಾಗಬೇಕು. ಕೆ. ಎಲ್. ಇ. ಸೊಸೈಟಿಯವರು ಈ ವರ್ಷದಿಂದ ಪ್ರಶಿಕ್ಷಣ ಮಹಾವಿದ್ಯಾಲಯ (ಬಿ.ಎಡ್.)ವನ್ನು ಪ್ರಾರಂಭಿಸಿರುವುದರಿಂದ ಎಷ್ಟೋ ಜನ ಸ್ಥಾನಿಕ ಪದವೀಧರ ಯುವಕರಿಗೆ ತುಂಬ ಅನುಕೂಲವಾಗಿದೆ. ಎಸ್.ಎಸ್.ಎಲ್.ಸಿ. ಅಥವಾ ಪಿ. ಯು. ಸಿ. ಓದಿ ಆರ್ಥಿಕ ಇಲ್ಲವೇ ಇನ್ನಿತರ ತೊಂದರೆಗಳಿಂದ ಓದಲಾಗದ ನಮ್ಮ ಯುವಕರಿಗೆ ವೃತ್ತಿ ಶಿಕ್ಷಣ ದೊರಕುವಂತಹ ಕೆಲವು ವೃತ್ತಿ ತರಬೇತಿ ಕೇಂದ್ರಗಳು ಪ್ರಾರಂಭವಾಗುವಂತಾಗಬೇಕು.

ಅಂಕೋಲೆಯ ಸಾಹಿತ್ಯ ಸಿರಿ : ಅಂಕೋಲಾ ತಾಲೂಕಿನಲ್ಲಿ ಅನೇಕ ಜನ ಹಿರಿಯ ಬರಹಗಾರರು ಆಗಿಹೋಗಿದ್ದಾರೆ. ಈ ಸಮ್ಮೇಲನದ ದ್ವಾರಗಳಿಗೆ ಸ. ಪ. ಗಾಂವಕರ, ಡೆಂಗಾ ದೇವು ನಾಯ್ಕ, ಲಕ್ಷ್ಮಣ ಬಾಬಣಿ ಪೈ, ಮ.ಗ.ಶೆಟ್ಟಿ, ಶ್ರೀನಿವಾಸ ಶೆಟ್ಟಿ, ಜಿನದೇವ ನಾಯಕ, ಶಾಂತಾರಾಮ ಬಾಳೆಗುಳಿ ಇವರುಗಳ ಹೆಸರುಗಳನ್ನು ಇಟ್ಟಿದ್ದು ಬಲು ಯೋಗ್ಯವಾಗಿದೆ. ಲಕ್ಷ್ಮಣ ಬಾಬಣಿ ಪೈ ಅವರ ಮೊಮ್ಮಕ್ಕಳು ಪೈಯವರ ಗ್ರಂಥಗಳ ಪ್ರಕಟಣೆಯ ಕಾರ್ಯ ಕೈಗೆತ್ತಿಕೊಂಡಿದ್ದಾಗ ದಿನಕರ ದೇಸಾಯಿಯವರು ಅದನ್ನು ಸ್ವಾಗತಿಸಿ ಒಂದು ಲೇಖನವನ್ನೇ ಜನಸೇವಕದಲ್ಲಿ ಬರೆದಿದ್ದರು. ಇಲ್ಲಿ ಉಲ್ಲೇಖಿಸಿರುವ ಓಡ್ಲಮನೆ ಆತ್ಮಾರಾಮ ಶಾಸ್ತ್ರಿಗಳನ್ನು ನಾನು ನೋಡಿದ್ದೆ. ಅವರು ಕಾರವಾರದಲ್ಲಿರುತ್ತಿದ್ದರೂ ಅಂಕೋಲಾಕ್ಕೆ ಬಂದಾಗ ನಮ್ಮ ಜನಸೇವಕ ಕಾರ್ಯಾಲಯಕ್ಕೆ ಬಂದು ಕುಳಿತು ಮಾತನಾಡಿ ಹೋಗುತ್ತಿದ್ದರು. ಆಯಾ ಲೇಖಕರ ಸಂಕ್ಷಿಪ್ತ ವಿವರಗಳನ್ನು ಗಮನಿಸಿ.

ಲಕ್ಷ್ಮಣ ಬಾಬಣಿ ಪೈ : ೧೮೫೩ ರಿಂದ ೧೯೨೭ರ ಮಧ್ಯಂತರದವರು. ಕನ್ನಡ, ಸಂಸ್ಕೃತ ಭಾಷೆಗಳನ್ನು ಚೆನ್ನಾಗಿ ಓದಿದವರು. ಜನಸೇವೆಗಾಗಿಯೇ ಕೆಲಸ ಮಾಡಿದರಲ್ಲದೆ ಸರಕಾರಿ ನೌಕರಿಗೆ ಸೇರಲಿಲ್ಲ. ಸಂಸ್ಕೃತದಲ್ಲಿಯ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದಗಳಿಗೆ ಕನ್ನಡದಲ್ಲಿ ಸರಳ ಅರ್ಥಗಳನ್ನು ಬರೆದರು. ಮಹಾಭಾರತವನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ.

ಡೆಂಗಾ ದೇವ ನಾಯ್ಕ ಮಾಸ್ತರರು : ಇವರನ್ನು ನಾನು ನೋಡಿದ್ದೆ. ಎತ್ತರದ ಆಳು, ದೊಡ್ಡ ರುಮಾಲು, ಕಪ್ಪು ಬಣ್ಣದ ಕೋಟ್, ಅಷ್ಟೇ ಉದ್ದವಾದ ಬಿಳಿ ಶಲ್ಲೆ.

ವೃತ್ತಿಯಿಂದ ಶಿಕ್ಷಕರಾಗಿ ನಿವೃತ್ತರಾಗಿದ್ದರು. ಶ್ರೀಯುತರು ಕವಿ ಹಾಗೂ ಲೇಖಕರಾಗಿದ್ದರು. ಇವರು ನಾಮಧಾರಿ ಜಾತಿ ಪೌರಾಣಿಕ ಚರಿತ್ರೆಯನ್ನು ಭೋಗ ಷಟ್ಪದಿಯಲ್ಲಿ, ಅಸ್ಪೃಶ್ಯತಾ ನಿವಾರಣಾ ಎಂಬ ನಾಟಕ, ಶಿರಹಟ್ಟಿ ಫಕೀರಸ್ವಾಮಿ ಚರಿತ್ರೆಯನ್ನು ಪದ್ಯದಲ್ಲಿ, ಶ್ರೀ ವೆಂಕಟೇಶ್ವರ ಚರಿತ್ರೆಯನ್ನು ಪದ್ಯದಲ್ಲಿ ಬರೆದಿದ್ದಾರೆ.

ಸಚ್ಚಿದಾನಂದ ಶಿರೋಡ್ಕರ್ : ಇವರು ಅಂಕೋಲೆಯ ತೆಂಕಣಕೇರಿಯವರು. ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಕೊಲ್ಲಾಪುರದ ಗೋಖಲೆ ಕಾಲೇಜಿನಲ್ಲಿದ್ದರು. ಶ್ರೀಯುತರು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡ ಮತ್ತು ಇಂಗ್ಲಿಷನಲ್ಲಿ ಬರೆದರು. ಇದರ ಹೊರತಾಗಿ ಸಹಕಾರ, ಪ್ರಜಾಪ್ರಭುತ್ವ, ಒಕ್ಕಲುತನ ಹುಟ್ಟುವಳಿ ಮಾರಾಟದ ಬಗ್ಗೆಯೂ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವುಗಳ ಹೊರತಾಗಿ ವಿಚಾರ ವಲಯಗಳು ಎಂಬ ವಿಭಿನ್ನವಾದ ಕೃತಿಯನ್ನೂ ರಚಿಸಿದ್ದಾರೆ.

ಸ. ಪ. ಗಾಂವಕರ : ಅಪ್ಪಟ ಗಾಂಧಿವಾದಿಯಾಗಿದ್ದ ಗಾಂವಕಾರರು ಶಿಕ್ಷಕರಾಗಿದ್ದು ಓದು ಮುಂದುವರೆಸಿ ಪದವಿ ಪಡೆದು ಸ್ಕೂಲ್ ಬೋರ್ಡಿನಲ್ಲಿ ಆಡಳಿತಾಧಿಕಾರಿಯಾಗಿ ತುಂಬಾ ಯಶಸ್ವಿಯಾಗಿ ಕಾರ್ಯನಿರ್ವಹಿಸಿದವರು. ಸ್ವಾತಂತ್ರ್ಯ ಹೋರಾಟಗಾರರಾಗಿ ಸಾಹಿತ್ಯದ ಕಡೆಗೆ ಒಲವಿದ್ದವರಾಗಿದ್ದರು. ಇವರ ಅನೇಕ ಕವನಗಳು, ಬರಹಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಮುಗಿಲು ಇವರ ಮೊದಲ ಕವನ ಸಂಕಲನ. ಇಲ್ಲಿಯ ಕವನಗಳನ್ನು ಮಕ್ಕಳೂ ಓದಿ ಅರ್ಥ ಮಾಡಿಕೊಳ್ಳಬಹುದಾದಷ್ಟು ಸರಳವಾಗಿವೆ. ರವೀಂದ್ರನಾಥ ಟಾಗೋರರ ಗೀತಾಂಜಲಿಯನ್ನು ಸರಳಗನ್ನಡದಲ್ಲಿ ಅನುವಾದಿಸಿದ್ದಾರೆ. ಇವರ ಎರಡು ಕವನ ಸಂಕಲನಗಳು ಪ್ರಕಟವಾಗಿವೆ.

ಡಾ॥ ದಿನಕರ ದೇಸಾಯಿ: ಅಂಕೋಲೆ ಹಾಗೂ ಉತ್ತರ ಕನ್ನಡ ಜಿಲ್ಲೆ ಕಂಡ ಅಪರೂಪದ ಕವಿ. ಸಮಾಜಸೇವಕ, ಶಿಕ್ಷಣ ತಜ್ಞ, ಸಮಾಜ ಸುಧಾರಕ ಡಾ॥ ದಿನಕರ ದೇಸಾಯಿ. ಕವಿ ವಿನಾಯಕರು ಹೇಳಿದಂತೆ ಕಾವ್ಯ ಮತ್ತು ಸಮಾಜ ಸೇವೆ ದಿನಕರ ದೇಸಾಯಿಯವರ ಜೀವನದಲ್ಲಿ ಅರಳಿದ ಮಂದಾರಗಳು. ದೇಸಾಯಿಯವರು ಮೂರು ಕವನ ಸಂಕಲನಗಳು, ಪ್ರವಾಸ ಕಥನವಲ್ಲದೇ ಸಾವಿರಾರು ಚೌಪದಿ ಛಂದಸ್ಸಿನ ವಿಡಂಬನಾತ್ಮಕ ಚುಟುಕಗಳಿಂದ ಚುಟುಕ ಚಕ್ರವರ್ತಿ ಎಂಬ ಬಿರುದಿಗೆ ಪಾತ್ರರಾದರು.

ಆತ್ಮಾರಾಮ ಶಾಸ್ತ್ರಿ ಓಡ್ಡಮನೆ : ಕನ್ನಡ, ಸಂಸ್ಕೃತ ಘನ ವಿದ್ವಾಂಸರು. ಮರಾಠಿ ತಿಳಿದವರಾದ್ದರಿಂದ ಮರಾಠಿ ಪತ್ರಿಕೆಗಳಿಗೆ ಕೂಡ ಬರೆಯುತ್ತಿದ್ದರು. ಸಂಸ್ಕೃತ ವಾಙ್ಮಯ, ಧರ್ಮಶಾಸ್ತ್ರ, ತರ್ಕ, ನ್ಯಾಯ ಮುಂತಾದ ವಿಮರ್ಶೆಗಳ ಮೇಲೆ ಮೂರುಭಾಷೆಗಳಲ್ಲಿ ಬರೆಯುತ್ತಿದ್ದರು. ಇವರ ಹಿಂದೂ ವೃತ, ವಿವೇಕಸೇತುಬಂಧ, ಸಂಕ್ಷೇಪ ಗೀತೆ, ನಾಟಕ ಕಲೆ ಎಂಬ ಕೃತಿಗಳು ಕನ್ನಡದಲ್ಲಿ ಪ್ರಕಟವಾಗಿವೆ.

ಶಹಾಣೆ ಬಂಧುಗಳು : ಇವರಿಬ್ಬರೂ ನಮ್ಮ ಜನಸೇವಕದ ಬರಹಗಾರ ಬಳಗದವರಾಗಿದ್ದರು. ಇವರಲ್ಲಿ ಪಾಂದಾ ಶಹಾಣೆಯವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿದವರು. ಮನೆ ಮಾತು ಮರಾಠಿ, ಪಾಂದಾ ತುಂಬ ಶ್ರಮ ಹಾಗೂ ಸಾಹಸಿ ಜೀವಿ. ಕೆಲಕಾಲ ಮುಂಬಯಿ, ಪುಣೆ ಕಡೆ ಹೋಗಿ ಮಹಾರಾಷ್ಟ್ರದ ಖ್ಯಾತ ಸಾನೆ ಗುರೂಜಿಯವರಲ್ಲಿ ಕೆಲಕಾಲ ಇದ್ದು ಬಂದವರು. ಅಲ್ಲಿರುವಾಗ ಖ್ಯಾತ ಸಾಹಿತಿಗಳಾದ ವಿ.ಸ. ಖಾಂಡೇಕರರಿಂದ ಅವರ ಕೃತಿಗಳನ್ನು ಅನುವಾದಿಸುವ ಕುರಿತು ಅನುಮತಿ ಪಡೆದು ಇವರು ಅನುವಾದಿಸಿದ ಖಾಂಡೇಕರರ 'ಕಾಂಚನ ಮೃಗ' ಕಾದಂಬರಿಯನ್ನು ಗೋಕರ್ಣದ ಪರ್ಣಕುಟಿ ಗ್ರಂಥಮಾಲೆ ಪ್ರಕಟಿಸಿತ್ತು. ಇದಲ್ಲದೆ ಸಾನೆ ಗುರೂಜಿಯವರ 'ಗಾಂಧೀಜಿಯ ಸವಿಗವಿತೆಗಳು' ಹಾಗೂ ಸಾನೆ ಗುರೂಜಿಯವರು ಮಕ್ಕಳಿಗಾಗಿ ಬರೆದ 'ಸುಂದರ ಪತ್ರಗಳು' ಎಂಬ ಎರಡು ಪುಸ್ತಕಗಳು ಪ್ರಕಟವಾದವು. ಪ್ರಾರಂಭದಲ್ಲಿ ಇವೆರಡೂ ಅಂಕೋಲೆಯ ಜನಸೇವಕದಲ್ಲಿ ಪ್ರಕಟವಾಗಿ ಮುಂದೆ ಪುಸ್ತಕ ರೂಪದಲ್ಲಿ ಅಚ್ಚಾದವು. ವಿ.ಸ. ಖಾಂಡೇಕರರ ಯಯಾತಿ ಅನುವಾದಕ್ಕೆ ಅನುಮತಿ ದೊರೆತಿತ್ತು. ಅವರ 'ಅಶೂ' ಅನುವಾದವಾಗಿತ್ತು. ಈ ಕಾದಂಬರಿಯ ಹೊರತಾಗಿ ಪಾಂದಾ ಶಹಾಣೆಯವರು ಮಹಾರಾಷ್ಟ್ರದ ಖ್ಯಾತ ನಾಟಕಕಾರ ಪಿ. ಕೆ. ಅತ್ರೆಯವರ 'ಉದಯಾಚಾ ಸಂಸಾರ' ನಾಟಕವನ್ನು 'ನಾಳಿನ ಬಾಳು' ಎಂಬ ಹೆಸರಿನಲ್ಲಿ ಅನುವಾದಿಸಿದ್ದರು. ಈ ನಾಟಕವನ್ನು ನಾವು ಅಂಕೋಲಾದ ಲಲಿತಕಲಾ ಮಂಡಳದ ಆಶ್ರಯದಲ್ಲಿ ರಂಗಕ್ಕೆ ತಂದಿದ್ದೆವು. ಶ್ರೀಯುತರ ಇನ್ನೊಂದು ನಾಟಕ,

'ದುಸರೀ ಕಾಳಿಜ' ಅನ್ನು 'ಎರಡನೆಯ ಕರುಳು' ಎಂದು ಅನುವಾದಿಸಿದ್ದರು. ಈ ನಾಟಕವನ್ನು ಕಾರವಾರದ ಸರಕಾರಿ ಕಾಲೇಜಿನ ಶತಾಬ್ದಿ ಸಮಾರಂಭದಲ್ಲಿ ಅಭಿನಯಿಸಲಾಯಿತು. ಅಂಕೋಲೆಯಲ್ಲಿ ಅದನ್ನು ಮಾಡಿಸಬೇಕೆಂದು ನಾನು ಮುಂದಾಗಿ ತಾಲೀಮು ನಡೆಸಿದರೂ ಅದು ಪೂರ್ಣಗೊಳ್ಳದೆ ನಿಂತು ಹೋಯಿತು. ಆದರೆ ನಾಟಕ ಮಾಡಿಸುವ ಅನುಭವವಾಗಿ ಒಂದು ಹರಟೆಗೆ ಹೊಳಹು ಸಿಕ್ಕಂತಾಯಿತು. ವಿಠಲ ಶಹಾಣೆ ಹೈಸ್ಕೂಲ್ ಶಿಕ್ಷಕರಾಗಿದ್ದರು. ಪದವೀಧರರಾಗಿದ್ದರೂ ಮರಾಠಿ ವಿಷಯ ತೆಗೆದುಕೊಂಡು ಮತ್ತೊಂದು ಪದವಿ ಪಡೆದರು. ಇವರು ಮರಾಠಿ ಕೃತಿಗಳನ್ನು ಅನುವಾದಿಸಲಿಲ್ಲವಾದರೂ ಅನೇಕ ಮರಾಠಿ ಬಿಡಿ ಲೇಖನಗಳನ್ನು ಅನುವಾದಿಸಿ ಜನಸೇವಕದ ಬರಹಗಾರರಾಗಿ ಗುರುತಿಸಿಕೊಂಡರು. ಮರಾಠಿಯಿಂದ ಇನ್ನೂ ಹೆಚ್ಚಿನ ಕೃತಿಗಳು ಬರುತ್ತವೆಂಬ ನಿರೀಕ್ಷೆಯಲ್ಲಿರುವಾಗಲೇ ಇವರಿಬ್ಬರೂ ನಮ್ಮನ್ನಗಲಿ ಹೋದರು.

ಸದಾನಂದ ನಾಯಕ : ಇವರು ಅವರ್ಸಾದವರು. ಎಮ್.ಎ. ಪರೀಕ್ಷೆ ಮುಗಿಸಿ ಸರಕಾರೀ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಕೆಲಸ ಮಾಡಿದವರು. ಅಭ್ಯಾಸಿಗಳೂ, ಸಂಶೋಧಕರೂ ಹೌದು. ಇವರ ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆಯ ಮೊದಲ ಭಾಗ ಪ್ರಕಟವಾಗಿದೆ. ಬೇರೆ ಬೇರೆ ಸಂದರ್ಭಗಳಲ್ಲಿ ಅನೇಕ ವಿಮರ್ಶಾತ್ಮಕ ಲೇಖನಗಳನ್ನೂ ಬರೆದಿದ್ದಾರೆ.

ಡಾ। ಎನ್. ಆರ್. ನಾಯಕ : ಡಾ। ಎನ್. ಆರ್. ನಾಯಕ ಅವರು ಹೊನ್ನಾವರ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಪ್ರಾಚಾರ್ಯರಾಗಿ ನಿವೃತ್ತರಾದರೂ ನಮ್ಮ ಹತ್ತಿರದ ಭಾವಿಕೇರಿಯವರು. ಜಾನಪದದಲ್ಲಿ ಸಂಶೋಧನೆ ನಡೆಸಿ ಡಾಕ್ಟರೇಟ್ ಪಡೆದ ಶ್ರೀಯುತರು ತಮ್ಮದೇ ಆದ ಜಾನಪದ ಟ್ರಸ್ಟ್ ಅನ್ನು ಸ್ಥಾಪಿಸಿಕೊಂಡು ಉತ್ತರ ಕನ್ನಡದ ವಿವಿಧ ವರ್ಗಗಳ ಜಾನಪದ ಕ್ಷೇತ್ರವನ್ನು ಸಮೃದ್ಧಗೊಳಿಸಿದ ಶ್ರೇಯಸ್ಸು ಅವರದು. ಇವರ ಪತ್ನಿ ಡಾ। ಶಾಂತಿ ನಾಯಕರೂ ಕೂಡ ಜಾನಪದ ತಿಂಡಿ, ತಿನಿಸು, ಔಷಧಗಳಲ್ಲಿ ಆಸಕ್ತಿ ವಹಿಸಿ ಮಾಹಿತಿ ಸಂಗ್ರಹಿಸಿ ಅವುಗಳ ಕುರಿತು ವಿವರವಾದ ಕೃತಿಗಳನ್ನೂ ಸಹ ಬರೆದಿದ್ದಾರೆ.

ಶ್ರೀ ಜಿ. ಪಿ. ನಾಯಕ : ಶ್ರೀ ಜಿ. ಪಿ. ನಾಯಕರು ನಟರೂ ಹೌದು ನಾಟಕಕಾರರೂ ಹೌದು. ದೇವ ಮಾನವ, ಅಬ್ಬಾ ಹುಡುಗಿ ಮುಂತಾದ ನಾಟಕಗಳನ್ನು ಬರೆದು ತಮ್ಮದೇ ಆದ ವಿಶ್ವ ಭಾರತಿ ಪ್ರಕಾಶನದಿಂದ ಪ್ರಕಟಿಸಿದರು. ಆನಂತರ ಅವರು ಚೌಪದಿ ಛಂದಸ್ಸಿನ ಚುಟುಕದಲ್ಲಿ ತೊಡಗಿಕೊಂಡು ಕೆಲವು ಕೃತಿಗಳನ್ನು ಕೊಟ್ಟಿದ್ದಾರೆ.

ಬಿ. ಹೊನ್ನಪ್ಪ : ಬಾವಿಕೇರಿಯವರಾದ ಹೊನ್ನಪ್ಪ ಅವರು ಕೇದಿಗೆ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಇವರು ಉತ್ತಮವಾಗಿ ಹಾಡಬಲ್ಲರು. ಇವರ ಇನ್ನೊಂದು ಕವನ ಸಂಕಲನ ಮುತ್ತಿನ ಚೆಂಡು, ನುಡಿಜೇನು ಎಂಬ ಪತ್ರಿಕೆಯನ್ನು ಕಳೆದ ೨೫ ವರ್ಷಗಳಿಂದ ನಿಯಮಿತವಾಗಿ ನಡೆಸಿಕೊಂಡು ಬಂದ ಹೆಗ್ಗಳಿಕೆ ಇವರದು.

ಕೆ. ಎನ್. ಗುನಗಾ : ಇವರು ಅಗ್ಗರಗೋಣದವರು. ಇವರು ಶಿಕ್ಷಕರಾಗಿ ಕನ್ನಡ ಸೇವೆ ಮಾಡುವ ಹಂಬಲವುಳ್ಳವರಾಗಿದ್ದರು. ಶ್ರೀಯುತರು ಇತಿಹಾಸ ಪ್ರಸಿದ್ಧವಾದ ಬನವಾಸಿಯ ಕುರಿತು ಪ್ರವಾಸಿಗರ ಕೈಪಿಡಿಯನ್ನು ರಚಿಸಿದ್ದಾರೆ. ಇದಲ್ಲದೇ ಪ್ರೇಮಯಜ್ಞ ಎಂಬ ಕಾದಂಬರಿ, ಅರಳು ಎಂಬ ಕವನ ಸಂಗ್ರಹಗಳನ್ನೂ ರಚಿಸಿದ್ದಾರೆ.

ಕರ್ನಾಟಕ ಸಂಘ : ಅಂಕೋಲಾದಲ್ಲಿ ಕ.ಸಾ.ಪ.ದ ತಾಲೂಕಾ ಘಟಕವು ಇತ್ತಾದರೂ ಸಾರ್ವಜನಿಕರ ಗಮನ ಸೆಳೆಯುವಂತಹ ಕಾರ್ಯಕ್ರಮಗಳನ್ನು ನಡೆಸಿರಲಿಲ್ಲ. ಅಂತಹ ಕಾರ್ಯವನ್ನು ಅಂಕೋಲೆಯ ಕರ್ನಾಟಕ ಸಂಘವು ಕಾಲಕಾಲಕ್ಕೆ ಮಾಡುತ್ತಾ ಬಂದಿದೆ. ತನ್ನ ಐವತ್ತು ವರ್ಷಗಳ ದೀರ್ಘಾವಧಿಯಲ್ಲಿ ಸಂಘವು ಸ್ಥಳೀಯ ಸಾರ್ವಜನಿಕರ ಸಹಾಯ ಸಹಕಾರಗಳಿಂದ ನಿರಂತರವಾಗಿ ಸಾಹಿತ್ಯಿಕ–ಸಾಂಸ್ಕೃತಿಕ ಸಂಘಟನೆಗಳನ್ನು ನಡೆಸುತ್ತ ಪ್ರಚಲಿತ ಸಮಸ್ಯೆಗಳಿಗೆ ಸ್ಪಂದಿಸುತ್ತ ನಡೆದು ಬಂದಿದೆ. ಕರ್ನಾಟಕ ಸಂಘದ ಬೆಳವಣಿಗೆಯಲ್ಲಿ ಸ್ಥಾನಿಕ ಶಿಕ್ಷಣ ಸಂಸ್ಥೆಗಳಾದ ಪಿ.ಎಮ್. ಹೈಸ್ಕೂಲ್, ಜೈಹಿಂದ್ ಹೈಸ್ಕೂಲ್‌ಗಳು ಹಾಗೂ ಅವುಗಳ ಶಿಕ್ಷಕವೃಂದ ಸಕ್ರಿಯವಾಗಿ ತೊಡಗಿಕೊಂಡಿದ್ದರಿಂದ ಆಯಾ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶ ಒದಗಿ ಬಂತು. ಇದರಿಂದಾಗಿ ಅವರೆಲ್ಲ ವಿದ್ಯಾರ್ಥಿ ಸದಸ್ಯರಾಗಿ ತುಂಬ ಆಸಕ್ತಿಯಿಂದ ಸಂಘದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಕರ್ನಾಟಕ ಸಂಘವು ತಾನು ಆಚರಿಸುತ್ತಿದ್ದ ನಾಡ ಹಬ್ಬ, ಕನ್ನಡ ರಾಜ್ಯೋತ್ಸವ, ವಸಂತ ಸಾಹಿತ್ಯೋತ್ಸವ ಕಾರ್ಯಕ್ರಮಗಳ ಅಂಗವಾಗಿ ಅನೇಕ ನಾಟಕಗಳನ್ನು ರಂಗಕ್ಕೆ ತಂದು ರಂಗಭೂಮಿಗೆ ಹೊಸ ಆಯಾಮ ತಂದುಕೊಟ್ಟಿತು. ಪಿ. ಎಮ್. ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದ ಶ್ರೀ ಜಿ.ಪಿ. ನಾಯಕ ಮತ್ತು ಶ್ರೀ ವಿ. ಜೆ. ನಾಯಕರು ನಟರೂ ನೃತ್ಯ ಕಲಾವಿದರೂ ಆಗಿದ್ದರು. ಆಗ ಪಿ. ಎಮ್. ಹೈಸ್ಕೂಲಿನಲ್ಲಿ ಒಕ್ಕಲುತನ, ಹೊಲಿಗೆ ಮತ್ತು ಟೈಪಿಂಗ್, ಸಂಗೀತ ಮುಂತಾದ ಬೇರೆ ಬೇರೆ ವಿಷಯಗಳನ್ನು ಕಲಿಸುತ್ತಿದ್ದರು. ಅಲ್ಲಿ ಸಂಗೀತ ಶಿಕ್ಷಕರಾಗಿದ್ದ ದಿ. ಟಿ. ಡಿ. ಪತ್ತೇಕರರು ನಟರೂ ಉತ್ತಮ ಸಂಗೀತಗಾರರೂ ಆಗಿದ್ದರು. ಇವರೆಲ್ಲ ಕೂಡಿ ಅಭಿನಯಿಸಿದ 'ಪರಿವರ್ತನ', 'ನಾಳಿನ ಬಾಳು' ಮೊದಲಾದ ನಾಟಕಗಳು ಇಂದಿಗೂ ಜನಮನದಲ್ಲಿ ಉಳಿದಿವೆ.

ಮದುವೆ ಪತ್ತಲ, ಕಲ್ಯಾಣಿ ನನ್ನ ಹೆಂಡತಿ, ಮಗನ ಗೆಲುವು, ರಕ್ತಾಕ್ಷಿ, ಸ್ವರ್ಣಮೂರ್ತಿಯಂಥ ಕಿರು ನಾಟಕಗಳು ಜನರ ಮನಸೂರೆಗೊಂಡವು. ಶ್ರೀ ಜಿ. ಪಿ. ನಾಯಕ, ಶ್ರೀ ವಿ. ಜೆ. ನಾಯಕ, ಶ್ರೀ ಎಸ್.ಎನ್. ಶೆಟ್ಟಿ (ಭಾವಿಕೇರಿ), ಟಿ. ಡಿ. ಪತ್ರೇಕರ್, ದಿ. ಎಮ್.ಎನ್. ಭಟ್ಟ, ದಿ. ಜಿ.ಜೆ. ನಾಯಕ, ಶ್ರೀ ಮಂಗೇಶ ಶೆಟ್ಟಿ ಇವರೆಲ್ಲ ಆಗ ತಮ್ಮ ಪಾತ್ರಗಳನ್ನು ಜೀವಂತವಾಗಿಟ್ಟು ಅಭಿನಯಿಸಿದ ಕಲಾವಿದರು. ದಿನಕಳೆದಂತೆ ಕರ್ನಾಟಕ ಸಂಘವು ಬೀದಿ ನಾಟಕಗಳಲ್ಲಿಯೂ ಹೆಚ್ಚಿನ ಪರಿಶ್ರಮ ವಹಿಸಿ ಯಶಸ್ವಿಯಾಯಿತು. 'ನಾಯಿಗಳು', 'ವರದಕ್ಷಿಣೆ', 'ರೇಶನ್ ಕಾರ್ಡ', 'ಬೆಲೆ ಇಳಿದಿದೆ' ಮೊದಲಾದ ಬೀದಿ ನಾಟಕಗಳು ಅಂಕೋಲಾದ ರಸ್ತೆಯ ಕೂಟದಲ್ಲಿಯೇ ಅಭಿನಯಿಸಲ್ಪಟ್ಟು ಜನ ಜಾಗೃತಿ ಉಂಟುಮಾಡುವಲ್ಲಿ ಅಪೂರ್ವ ಯಶಸ್ಸು ಗಳಿಸಿದವು. ಇಂಥ ನಾಟಕಗಳಲ್ಲಿ ಪ್ರೊ. ಮೋಹನ ಹಬ್ಬು, ಪ್ರೊ. ಆರ್. ಜಿ. ಗುಂದಿ, ವಿಷ್ಣು ನಾಯ್ಕ, ಶ್ರೀ ಶ್ಯಾಮ ಹುದ್ದಾರ, ಶ್ರೀ ಕೃಷ್ಣ ನಾಯುಕ (ಹಿಚ್ಕಡ), ಶ್ರೀ ರಾಮು ನಾಯ್ಕ, ಮೊದಲಾದವರು ಯಶಸ್ವಿಯಾಗಿ ಅಭಿನಯಿಸಿ ಜನಮನ ಗೆದ್ದರು.

ಲಲಿತಕಲಾ ಮಂಡಳಿ : ಕರ್ನಾಟಕ ಸಂಘವು ಸಾಹಿತ್ಯಕ ಚಟುವಟಿಕೆಗಳನ್ನು ನಡೆಸುತ್ತಿರುವಾಗ ಪಿ. ಎಮ್. ಹೈಸ್ಕೂಲಿನಲ್ಲಿ ಸಂಗೀತ ಶಿಕ್ಷಕರಾಗಿದ್ದ ದಿ. ಟಿ.ಡಿ. ಪತ್ತೇಕರ ಅವರು ಸಂಗೀತದಲ್ಲಿ ಆಸಕ್ತಿಯಿರುವ ಕಲಾವಿದರಾದ ಶ್ರೀ ಸುಬ್ರಹ್ಮಣ್ಯ ಶೆಟ್ಟಿ, ಶ್ರೀ ಬಾಬುಲಿ ನಾಗ್ವೇಕರ್, ದಿ.ಪಿ.ವಿ.ಶೆಟ್ಟಿ, ದಿ. ಶ್ರೀಧರ ವಾಜಂತ್ರಿ, ದಿ. ಆಪಾ ನಾರ್ವೇಕರ್ ಮುಂತಾದವರೊಂದಿಗೆ ಸಂಗೀತಾಭ್ಯಾಸ ಮಾಡುತ್ತಿದ್ದರು. ನನಗಿಲ್ಲಿ ದಿ. ಆರ್. ಕೆ. ನಾಯಕರ ನೆನಪಾಗುತ್ತದೆ. ಅವರು ಶಿಕ್ಷಣ ಇಲಾಖೆಯಲ್ಲಿ ನಾಲ್ಕು ಜಿಲ್ಲೆಗಳಿಗೆ ಆಡಳಿತಾಧಿಕಾರಿಯಾಗಿ ನಿವೃತ್ತರಾಗಿದ್ದರು. ಯಕ್ಷಗಾನ ಹಾಗೂ ಇತರ ಲಲಿತ ಕಲೆಗಳಲ್ಲಿ ಆಸಕ್ತಿ ಉಳ್ಳವರಾಗಿದ್ದರು. ಶ್ರೀಯುತರು ಲಲಿತಕಲಾ ಮಂಡಳವನ್ನು ಸ್ಥಾಪಿಸಿದರು. ಶ್ರೀ ಗೋಪಾಲಕೃಷ್ಣ ನಾಯಕ ಅವರು ಹೆಚ್ಚಿನ ಆಸಕ್ತಿ ವಹಿಸಿದ್ದರು. ಇಲ್ಲಿ ಸಂಗೀತ ವಾದ್ಯ ಕಲಿಯುವವರಿಗೆ ಅನುಕೂಲ ಮಾಡಿಕೊಟ್ಟರು. ಲಲಿತಕಲಾ ಮಂಡಳದ ಮೂಲಕ ನಾಟಕಗಳನ್ನು ಮಾಡಲಾಗುತ್ತಿತ್ತು. ಸಂಗೀತ ಕಲಿಸುವ ಎಲ್ಲ ವಾದ್ಯ ಉಪಕರಣಗಳನ್ನು ಒದಗಿಸಲಾಗಿತ್ತು. ಆಗಾಗ ಕಾರವಾರದಿಂದ ದಿ. ಹಳದಿಪುರಕರ ಮರಾಠಿ ಮಾಸ್ತರರೂ ಬಂದು ಹೋಗುತ್ತಿದ್ದರು. ಆದರೆ ಸಾರ್ವಜನಿಕರಲ್ಲಿ ಈಗಿನಷ್ಟು ಆಸಕ್ತಿ ಆಗ ಇದ್ದಿರಲಿಲ್ಲ. ಕಾರಣಾಂತರದಿಂದ ಅದು ನಿಂತು ಹೋಯಿತು. ಸಧ್ಯ ದಿನಕರ ಕಲಾನಿಕೇತನ ಎಂಬ ಸಂಗೀತ ಕಲಿಸುವ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ.

ಜಾನಪದ ಕಲೆಗಳು : ಜಿಲ್ಲೆಯ ವಿಶಿಷ್ಟ ಕಲೆಗಳೆನಿಸಿದ ಯುಕ್ಷಗಾನ, ಸುಗ್ಗಿ ಕುಣಿತ, ಮುಂತಾದುವುಗಳಲ್ಲಿಯೂ ನಮ್ಮ ತಾಲೂಕು ಹೆಸರು ಗಳಿಸಿಕೊಂಡಿದೆ. ಈ ಸಂದರ್ಭದಲ್ಲಿ ನನಗೆ ಬಡಗೇರಿಯ ದಿ. ಗೋವಿಂದ ಮಹಾಲೆ, ಸದಾನಂದ ಮಹಾಲೆ ಬಂಧುಗಳು ನೆನಪಾಗುತ್ತಾರೆ. ಈ ಎರಡೂ ಕ್ಷೇತ್ರಗಳಲ್ಲಿ ಇವರಿಬ್ಬರೂ ಹೆಚ್ಚಿನ ಸಾಧನೆ ಮಾಡಿದರಲ್ಲದೇ ಬಡಗೇರಿಯಲ್ಲಿ ಜಾನಪದ ಕಲೆಗಳ ತರಬೇತಿ ಕೇಂದ್ರವನ್ನು ನಡೆಸಿಕೊಂಡು ಬಂದರು. ಅಲ್ಲದೇ ನಮ್ಮ ಹಾಲಕ್ಕಿ ಒಕ್ಕಲಿಗರ ಸುಗ್ಗಿ ಕುಣಿತದ ತಂಡವನ್ನು ಮೈಸೂರು ದಸರಾ ಮೆರವಣಿಗೆಯವರೆಗೂ ಒಯ್ದಿದ್ದರು. ಸದಾನಂದ ಮಹಾಲೆಯವರು ಮಣ್ಣಿನ ಮೂರ್ತಿಗಳನ್ನು ಮಾಡುವುದರಲ್ಲಿಯೂ ಸಿದ್ಧಹಸ್ತರಾಗಿದ್ದರು. ಅಂಕೋಲೆಯಲ್ಲಿ ಲಲಿತಕಲಾ ಅಕಾಡೆಮಿ ಒಂದು ಕಾರ್ಯಾಗಾರವನ್ನು ನಡೆಸಿದಾಗ ಇವರು ಭಾಗವಹಿಸಿ ಪ್ರಶಸ್ತಿ ಪಡೆದಿದ್ದರು. ಗೋವಿಂದ ಮಹಾಲೆ ಗುಮಟೆ ಬಾರಿಸುವುದರಲ್ಲಿ ಎತ್ತಿದ ಕೈಯೆನಿಸಿದ್ದರು. ಈ ಇಬ್ಬರೂ

ಸಹೋದರರು ಅಂಕೋಲಾ ಕರ್ನಾಟಕ ಸಂಘದ ಸದಸ್ಯರಾಗಿ ಎಲ್ಲಾ ಕಾರ್ಯಕ್ರಮಗಳಲ್ಲಿ, ನಾಟಕಗಳಲ್ಲಿ ಭಾಗವಹಿಸಿದ್ದರು. ದಿ. ಗೋವಿಂದ ಮಹಾಲೆ ಒಂದು ಅವಧಿಯಲ್ಲಿ ಜಾನಪದ ಅಕಾಡೆಮಿಯ ಸದಸ್ಯರಾಗಿದ್ದರು. ಶ್ರೀ ವಿ. ಜೆ. ನಾಯಕರು ನಾಟಕ ಅಕಾಡೆಮಿಯ ಸದಸ್ಯರಾಗಿದ್ದಾಗ ಬಡಗೇರಿಯಲ್ಲಿ ಜಾನಪದ ಸಮ್ಮೇಲನವನ್ನು ೧೯೮೯ರ ಮೇ ದಲ್ಲಿ, ಅಂಕೋಲಾದಲ್ಲಿ ಮತ್ತೊಂದು ಜಿಲ್ಲಾ ಮಟ್ಟದ ಸಮ್ಮೇಲನವನ್ನು ನಡೆಸಲಾಗಿತ್ತು.

ಈ ಭಾಗದ ಇನ್ನೊಂದು ವಿಶಿಷ್ಟ ಜಾನಪದ ಕಲೆ ಸುಗ್ಗಿ ಕುಣಿತದಲ್ಲಿ ಹೆಸರು ಮಾಡಿದ್ದ ಬೆಳಂಬಾರ ತಂಡದವರ ಸುಗ್ಗಿ ಕುಣಿತಕ್ಕೆ ಸರಕಾರದಿಂದ ತಕ್ತೆ ದೊರಕುತ್ತಿತ್ತು. ಅದು ಇಂದಿಗೂ ಮುಂದುವರೆದುಕೊಂಡು ಬಂದಿದೆ. ಕಳೆದ ಕೆಲ ವರ್ಷಗಳಿಂದ ಅವರ್ಸಾದಲ್ಲಿ ಶ್ರೀ ಗಿರಿಯಪ್ಪ ಮೇತ್ರಿಯವರು ಸುಗ್ಗಿ ಕುಣಿತ ಪ್ರಾರಂಭಿಸಿದ್ದಾರೆ. ಅಂಕೋಲಾದ ಬೊಬ್ರುವಾಡಾದ ನಾಮಧಾರಿ ಸಮಾಜದವರು ಕೆಲವು ವರ್ಷ ನಿಲ್ಲಿಸಿದ್ದ ಸುಗ್ಗಿ ಕುಣಿತ ಕಟ್ಟುವುದನ್ನು ಪುನಃ ಇತ್ತೀಚೆಗೆ ಪ್ರಾರಂಭಿಸಿದ್ದಾರೆ. ಸುಗ್ಗಿ ಹಬ್ಬದ ಸಂದರ್ಭದಲ್ಲಿ ಅಂಕೋಲೆ ಪೇಟೆಗೆ ವಿಶೇಷ ಕಳೆ ಬರುತ್ತದೆ.

ಅಲಗೇರಿ ಶ್ರೀ ಸಣ್ಣಮ್ಮದೇವಿ ಯುವಕ ಮಂಡಳವು ಜಾನಪದ ಕಲಾ ಕ್ಷೇತ್ರದಲ್ಲಿ ಕೋಲಾಟ, ಜಾನಪದ ನೃತ್ಯ ಮೊದಲಾದವುಗಳಲ್ಲದೆ ಸಂಗ್ಯಾ ಬಾಳ್ಯಾ ಆಟವನ್ನು ಅಭಿನಯಿಸಿ ಜಿಲ್ಲಾ ಮಟ್ಟದ ವಿವಿಧ ಸಂದರ್ಭಗಳಲ್ಲಿ ಪ್ರದರ್ಶಿಸಿ ಪ್ರಶಸ್ತಿ ಬಹುಮಾನಗಳನ್ನು ತಂದಿದ್ದರಲ್ಲದೆ ಮಡಿಕೇರಿಯಲ್ಲಿ ನಡೆದ ಯುವಜನ ಮೇಳದಲ್ಲಿ ಭಾಗವಹಿಸಿ ರಾಜ್ಯ ಪ್ರಶಸ್ತಿ ಕೂಡ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ.

ಯಕ್ಷಗಾನವು ನಮ್ಮ ಗ್ರಾಮಾಂತರ ಭಾಗದ ಜನರಿಗೆ ಮನರಂಜನೆಯನ್ನು ಒದಗಿಸುವಲ್ಲಿ ಸಿನಿಮಾ, ನಾಟಕಗಳಿಗಿಂತ ಹೆಚ್ಚು ಹತ್ತಿರದ್ದು ಮತ್ತು ಪ್ರಿಯವಾದದ್ದು. ಈ ಕಲಾ ಕ್ಷೇತ್ರದಲ್ಲಿ ತಾಲೂಕಿನ ವಿವಿಧ ಕಡೆ ಪ್ರಸಂಗಗಳು ನಡೆಯುತ್ತಲೇ ಇರುತ್ತವೆ. ಅಗ್ಗರಗೋಣದ ಪಿ.ಎಮ್.ನಾಯಕ, ಪ್ರೊ. ಆರ್.ಜಿ. ಗುಂದಿ, ಶ್ರೀ ವಿಠೋಬ ನಾಯಕ ವಂದಿಗೆ, ಶ್ರೀ ಮಂಗು ಗೌಡ ಇವರುಗಳನ್ನು ಈ ಸಂದರ್ಭದಲ್ಲಿ ಹೆಸರಿಬಹುದು. ಶ್ರೀ ಬುದ್ದು ಆಗೇರ ಯಕ್ಷಗಾನ ಅಕಾಡೆಮಿಯಿಂದ ಪ್ರಶಸ್ತಿ ಪಡೆದವರಾಗಿದ್ದಾರೆ. ಅಂಕೋಲಾದ ಶ್ರೀ ರಾಘವೇಂದ್ರ ಪ್ರಕಾಶನವು ತನ್ನ ಪ್ರಕಟಣೆಯ ಪ್ರಾರಂಭದಿಂದಲೂ ಹೊಸ ಬರಹಗಾರರನ್ನು ಹುಡುಕಿ ಅವರ ಕೃತಿಗಳನ್ನು ಪ್ರಕಟ ಮಾಡಿ ಪ್ರೋತ್ಸಾಹಿಸುತ್ತ ಬಂದಿದೆ. ಅದರ ಸಾಧನೆಗಾಗಿ ಅದು ಉತ್ತಮ ಪ್ರಕಾಶನವೆಂಬ ಪ್ರಶಸ್ತಿ ಗಳಿಸಿದೆ. ಇದುವರೆಗೆ ತಾನು ಪ್ರಕಟಿಸಿದ ಗ್ರಂಥಗಳನ್ನು ಪುನರ್ ಪರಿಶೀಲಿಸಿ ಪುಸ್ತಕ ಸಂಗಾತಿ ಎಂಬ ಗ್ರಂಥವನ್ನು ಪ್ರಕಟಿಸಿದೆ. ನಾಡಿನ ಬೇರಾವ ಪ್ರಕಾಶಕರೂ ಇಂತಹ ಸಾಹಸ ಮಾಡಿಲ್ಲ. ಪ್ರಕಾಶನದ ಸಂಚಾಲಕರಾದ ಶ್ರೀ ವಿಷ್ಣು ನಾಯ್ಕರು ಅಭಿನಂದನಾರ್ಹರು.

ಇಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಾಹಿತ್ಯ ಗೋಷ್ಠಿಯೂ ಒಂದಾಗಿರುವುದರಿಂದ ನಾನಿಲ್ಲಿ ಸಂಕ್ಷಿಪ್ತ ಟಿಪ್ಪಣಿ ಮಾಡಿದ್ದೇನೆ. ಸಾಹಿತ್ಯದ ಕಥಾ ಪ್ರಕಾರದಲ್ಲಿ ಶ್ರೀ ವಿಷ್ಣು ನಾಯ್ಕರು ಪ್ರಾರಂಭದಲ್ಲಿ 'ಕಣ್ಣೀರ ಕಥೆಗಳು' ಸಂಗ್ರಹವನ್ನು ಪ್ರಕಟಿಸಿದರು. ಆದರೆ ಅವರು ಮುಂದೆ ಕಾವ್ಯವನ್ನೇ ತಮ್ಮ ಮಾಧ್ಯಮವನ್ನಾಗಿ ಮಾಡಿಕೊಂಡು ಅನೇಕ ಕವನ ಸಂಕಲನಗಳನ್ನು ಪ್ರಕಟಿಸಿದರು. ತನ್ಮಧ್ಯೆ ಕೆಲವು ನಾಟಕಗಳನ್ನು ಬರೆದು ರಂಗಭೂಮಿಗೆ ತಂದು ಹೊಸ ಕಲಾವಿದರನ್ನು ಪರಿಚಯಿಸಿದರು. ಶ್ರೀ ನಾಗಪತಿ ಹೆಗಡೆಯವರು ಇತ್ತೀಚೆಗೆ 'ಉತ್ತರಾರ್ಧ' ಎಂಬ ತಮ್ಮ ಚೊಚ್ಚಲ ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಅವರು ತಮ್ಮ ಮೊದಲ ಸಂಕಲನದಲ್ಲಿಯೇ ಸಾಕಷ್ಟು ಭರವಸೆ ಹುಟ್ಟಿಸಿದ್ದಾರೆ. ಹೆಗಡೆಯವರು ತಮ್ಮ ನಮ್ರತಾ ಪ್ರಕಾಶನದ ಮೂಲಕ ಬೇರೆ ಬರಹಗಾರರ ಕೃತಿಗಳನ್ನು ಪ್ರಕಟಿಸುವ ಸಾಹಸಕ್ಕೂ ಕೈ ಹಾಕಿರುವರಲ್ಲದೆ ತಮ್ಮ ಪ್ರಕಾಶನದ ಮೂಲಕ ಹಲವು ಸಾಹಿತ್ಯಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನೂ ನಡೆಸಿಕೊಂಡು ಬಂದಿದ್ದಾರೆ. ಪ್ರೊ. ಮೋಹನ ಹಬ್ಬು ಅವರೂ ಸಹ ಇತ್ತೀಚೆಗೆ ತಮ್ಮ ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಹಬ್ಬು ಅವರು ಮೊದಲಿನಿಂದಲೂ ನಾಟಕ ಬರೆಯುವುದರಲ್ಲಿ ಪರಿಶ್ರಮ ವಹಿಸಿದವರು. ರಂಗಭೂಮಿಯ ಬಗ್ಗೆ ಆಸಕ್ತಿಯಿಟ್ಟುಕೊಂಡವರು. ಆದರೆ ಏಕೋ ಇತ್ತೀಚೆಗೆ ಅವರ ನಾಟಕ ರಚನೆಗಳು ಕಂಡು ಬರುತ್ತಿಲ್ಲ.

ಕಾವ್ಯ ಕ್ಷೇತ್ರದಲ್ಲಿ ಪ್ರಮುಖರೆನಿಸುವ ಶ್ರೀ ಶಾಂತಾರಾಮ ನಾಯಕ ಹಿಚ್ಕಡ ಹಿರಿಯ ಕವಿಯಾಗಿ ಗುರುತಿಸಿಕೊಳ್ಳುತ್ತಾರೆ. ಆನಂತರ 'ಆ

ಹುಡುಗಿ' ಖ್ಯಾತಿಯ ಶ್ರೀ ಪ್ರಕಾಶ ಶೆಟ್ಟಿ ಮತ್ತು 'ಭೂಗೋಲ' ಬರೆದ ಶ್ರೀ ಕೃಷ್ಣ ನಾಯಕರ ನಂತರ ಹೊಸ ಕವಿಗಳು ನನಗೆ ಕಾಣಬರಲಿಲ್ಲ. ಆದರೆ ಆಗಾಗ ಪತ್ರಿಕೆಗಳಲ್ಲಿ ಕವನ ಬರೆಯುತ್ತಿರುವ ಅಚವೆಯ ಪ್ರೊ. ಫಾಲ್ಗುಣ ಗೌಡರು ಒಬ್ಬ ಕವಿಯಾಗುವ ಭರವಸೆ ಹುಟ್ಟಿಸುತ್ತಾರೆ. ಪ್ರೊ. ಸಿದ್ಧಲಿಂಗಸ್ವಾಮಿ ವಸ್ತ್ರದ ಅವರು ತಮ್ಮ 'ಪ್ರಥಮ ರಾತ್ರಿಯಲ್ಲೊಂದು ಸಖಿಗೀತ' ಕವನ ಸಂಗ್ರಹ ನೀಡಿದ್ದಾರೆ. ಇವರು ಆಗಾಗ ಬರೆಯುವ ಅನುವಾದ ಕವಿತೆಗಳು ಉತ್ತಮ ಅನುವಾದಕರಾಗುವ ಮುನ್ಸೂಚನೆ ನೀಡುತ್ತವೆ.

ದಿನಕರ ದೇಸಾಯಿಯವರ ಮಾದರಿಯ ಚುಟುಕ ಬರೆಯುವವರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡರು. ದಿ. ಶ್ರೀನಿವಾಸ ಶೆಟ್ಟಿ, ದಿ. ಶಾಂತಾರಾಮ ಬಾಳೆಗುಳಿ, ಶ್ರೀ ರಮೇಶ ನಾಯಕ, ಶ್ರೀ ಶ್ಯಾಮ ಹುದ್ದಾರ, ಶ್ರೀ ವಿಡಂಬಾರಿ, ಶ್ರೀ ಜಿ. ಪಿ. ನಾಯಕ, ಶ್ರೀ ಎನ್. ಬಿ.ಕಾಮತ್ ಮೊದಲಾದವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದು. ಇದೇ ಸಂದರ್ಭದಲ್ಲಿ ಆಕಾರದಲ್ಲಿ ಚುಟುಕವೆನಿಸುವ ಹನಿಗವನಗಳ ಎರಡು ಸಂಕಲನಗಳನ್ನು ನೀಡಿದವರು ಶ್ರೀ ಜೆ. ಪ್ರೇಮಾನಂದ ಅವರು.

ತಾಲೂಕಿನಲ್ಲಿ ಮಕ್ಕಳಿಗಾಗಿ ಮಕ್ಕಳ ಕವಿತೆಗಳನ್ನು ಬರೆಯುವವರ ಸಂಖ್ಯೆ ತೀರ ಕಡಿಮೆ. ದಿ. ಶ್ರೀನಿವಾಸ ಶೆಟ್ಟಿಯವರು ಭಾವಗೀತೆ, ಚುಟುಕದ ಸಂಗಡ ಮಕ್ಕಳ ಕವಿತೆಗಳನ್ನು ಬರೆದರು. ಪ್ರಾರಂಭದಲ್ಲಿಯೇ ಅವರ ಕವಿತೆಗಳಿಗೆ ಪ್ರಕಾಶಕರು ಸಿಕ್ಕಿದ್ದರೆ ಶೆಟ್ಟಿಯವರು ಉತ್ತರ ಕನ್ನಡದ 'ಶಿಶು ಸಂಗಮೇಶ' ಆಗುತ್ತಿದ್ದರು. ಅಂಕೋಲೆಯ ರಾಘವೇಂದ್ರ ಪ್ರಕಾಶನವೇ ಅವರ ಪ್ರಥಮ ಮಕ್ಕಳ ಪದ್ಯ ಪ್ರಕಟಿಸಿತು. ಆನಂತರ ಸ್ವತಃ ಶೆಟ್ಟಿಯವರೇ ನಾಲ್ಕು ಮಕ್ಕಳ ಪದ್ಯ ಸಂಕಲನಗಳನ್ನು ಪ್ರಕಟಿಸಿದರು. ಆನಂತರ ಶ್ರೀ ನಾಗೇಂದ್ರ ನಾಯಕರು 'ಮಗು ನಗು' ಎಂಬ ಮಕ್ಕಳ ಕವಿತೆ ಪ್ರಕಟಿಸಿದರು. ಇವರ 'ಗುಬ್ಬಿಗೂಡು' ಎಂಬ ಇನ್ನೊಂದು ಸಂಗ್ರಹವನ್ನು ಇತ್ತೀಚೆಗೆ ರಾಘವೇಂದ್ರ ಪ್ರಕಾಶನವು ಪ್ರಕಟಮಾಡಿದೆ. ಇವರ ಹೊರತಾಗಿ ಶಿಕ್ಷಣ ತಜ್ಞರಾದ ಶ್ರೀ ಎಸ್. ವಿ. ಪಿಕಳೆಯವರು ಮಕ್ಕಳ ಪದ ಮತ್ತು ಮಕ್ಕಳ ಕಥೆ ಸಂಕಲನಗಳನ್ನು ಹೊರ ತಂದಿದ್ದಾರೆ. ಈ ಎರಡು ಕೃತಿಗಳಲ್ಲಿ ಶ್ರೀ ಪಿಕಳೆಯವರು ಮಕ್ಕಳ ಮನೋಭಾವವನ್ನು ಹತ್ತಿರದಿಂದ ಕಂಡು ಮಕ್ಕಳಿಗೆ ಹಿಡಿಸುವ ಸರಳ ಶೈಲಿಯಲ್ಲಿ ನಿರೂಪಿಸಿದ್ದಾರೆ. ಇವು ಅಪರೂಪದ ಕೃತಿಗಳೆನ್ನಬಹುದು.

ಅಂಕೋಲಾದಲ್ಲಿ 'ಜನಸೇವಕ' ವಾರ ಪತ್ರಿಕೆ ಪ್ರಕಟವಾಗುತ್ತಿದ್ದಾಗ ಅಂಕೋಲಾ ತಾಲೂಕಿನವರು ಬರೆದದ್ದು ಬಹಳ ಕಡಿಮೆ. ಆ ಪತ್ರಿಕೆಯನ್ನು ನಿಜವಾಗಿ ಬಳಸಿಕೊಂಡಿದ್ದರೆ ಈಗ ಸುಮಾರು ೧೫-೨೦ ಬರಹಗಾರರು ತಯಾರಾಗಬಹುದಿತ್ತು. ತಾಲೂಕಿನಲ್ಲಿ ಮಹಿಳಾ ಲೇಖಕಿಯರು ತೀರ ಕಡಿಮೆ, ಇಲ್ಲವೆಂದರೂ ನಡೆದೀತು. ಜನಸೇವಕದಲ್ಲಿ ಶ್ರೀಮತಿ ಗೀತಾ ಮನೋಹರ (ಕುಸುಮಾ ಕೇಣಿಕರ್) ಆಗಾಗ ಬರೆಯುತ್ತಿದ್ದರು. ಅವರೇ ಮುಂದೆ ಮಕ್ಕಳ ಕತೆಗಳನ್ನು ಬರೆದರು. ಇದೂ ಕೂಡ ಶ್ರೀ ರಾಘವೇಂದ್ರ ಪ್ರಕಾಶನದ ಪ್ರಕಟಣೆ. ಇನ್ನೊಬ್ಬರು ಅಗಸೂರಿನ ಡಾ॥ ಜಿ. ಆರ್. ಭಟ್ಟರ ಮಗಳು ಜಯಶ್ರೀ ಭಟ್ಟ, ಈಗ ಅವರು ಶ್ರೀಮತಿ ಜಯಶ್ರೀ ಯಾಜಿಯಾಗಿ 'ಶಂಕ್ರು' ಎಂಬ ಕಥಾ ಸಂಕಲನವನ್ನು ರಾಘವೇಂದ್ರ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ. ಇವರು ತಮ್ಮ ಬರೆಯುವ ಹವ್ಯಾಸವನ್ನು ಉಳಿಸಿಕೊಂಡು ಬಂದಿದ್ದಾರೆ. ಆದರೂ ಈಗ ಹೊಸ ಮಹಿಳಾ ಬರಹಗಾರರು ಕಾಣಬರುತ್ತಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಂಘ ಅಥವಾ ಇನ್ನಿತರೇ ಸಾಹಿತ್ಯಕ-ಸಾಂಸ್ಕೃತಿಕ ವೇದಿಕೆಗಳು ನಡೆಸುವ ಕಾರ್ಯಕ್ರಮಗಳಿಗೆ ಮಾನವ ಸಂಪನ್ಮೂಲ ಒದಗಿಸಬೇಕಾಗಿರುವ ಶಾಲೆ ಕಾಲೇಜುಗಳಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಆಸಕ್ತಿ, ಅವಕಾಶ, ಅಭಿಲಾಷೆ ಕಂಡುಬರುತ್ತಿಲ್ಲ. ಏನಿದ್ದರೂ ಅದು ಪರೀಕ್ಷೆಯ ಫಲಿತಾಂಶದ ಮೇಲೆ ಹೆಚ್ಚಿನ ಒತ್ತಡ. ನೌಕರಿಗಾಗಿ ಸರ್ಟಿಫಿಕೇಟ್ ಬೇಕು. ಸರ್ಟಿಫಿಕೇಟಗಾಗಿ ಪರೀಕ್ಷೆ, ಪರೀಕ್ಷೆಗಾಗಿ ಓದು ಎನ್ನುವಂತಾಗಿದೆ. ಹೀಗಾಗಿ ಓದುವವರಿಗೆ ಓದಿಸುವವರಿಗೆ ಪಠ್ಯೇತರ ವಿಷಯಗಳಲ್ಲಿ ಆಸಕ್ತಿಯಿಲ್ಲ. ಎಲ್ಲವೂ ಅನಾಯಾಸವಾಗಬೇಕು. ಓದುವ ಶ್ರಮ ಬೇಡ, ಬರೆಯುವ ಶ್ರಮ ಬೇಡ. ಹೀಗಾಗಿ ಇಂದು ಪರೀಕ್ಷಾ ವಿಧಾನವೇ ಬದಲಾಗಿಬಿಟ್ಟಿದೆ. ನಾವು ಪರೀಕ್ಷೆಗೆ ಮೂರು ತಾಸು ಕುಳಿತು ಬರೆದರೂ ವೇಳೆ ಸಾಕಾಗುತ್ತಿದ್ದಿಲ್ಲ. ಇಂದಿನ ಪ್ರಶ್ನೆ ಪತ್ರಿಕೆಗಳೇ ವಿಚಿತ್ರ. ಪ್ರಶ್ನೆಯ ಮುಂದೆ ೩-೪ ಉತ್ತರ, ಸರಿಯಾದದ್ದನ್ನು ಗುರುತಿಸಿ ಟಿಕ್ ಮಾಡಿದರಾಯಿತು. ೮-೧೦ ಸಾಲು

ಉತ್ತರ ಬರೆಯುವ ಪ್ರಮೇಯವೇ ಇಲ್ಲ. ಹಾಗಂತ ಶಿಕ್ಷಕರೂ ಹಾಗೇನೇ, ಪಾಠದ ಕೊನೆಯಲ್ಲಿರುವ ಪ್ರಶ್ನೆಗಳಿಗೆ ೪ನೇ ಪ್ರಶ್ನೆಗೆ ೧೫ನೇ ಪುಟದ ೨ನೇ ಪ್ಯಾರಾದ ೧೦ನೇ ವಾಕ್ಯಕ್ಕೆ ಕಂಸ ಹಾಕಿಸಿಬಿಡುತ್ತಾರೆ. ಈ ರೀತಿ ಶಿಕ್ಷಣದಲ್ಲಿ ಓದು–ಬರಹ ನಡೆದರೆ ಮಕ್ಕಳಲ್ಲಿ ಹೊಸ ಹವ್ಯಾಸ, ಹೊಸ ಕುತೂಹಲ ಹೇಗೆ ಹುಟ್ಟಬೇಕು?

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ತಾಲೂಕಿಗೆ ಕೀರ್ತಿ ತಂದವರಿದ್ದಾರೆ. ಕೆಲವರನ್ನು ಸನ್ಮಾನಿಸಲಾಗುತ್ತಿದೆ. ಸಮಾಜಸೇವೆಗಾಗಿ ರಾಜ್ಯ ಪ್ರಶಸ್ತಿ ಪಡೆದ ಶ್ರೀಮತಿ ನಿರ್ಮಲಾ ಗಾಂವಕರ ಅವರನ್ನು ಮತ್ತು ದಿಲ್ಲಿಯ ಇಂಟರ್‌ನ್ಯಾಶನಲ್ ಚಾರಿಟೇಬಲ್ ಟ್ರಸ್ಟ್ ಈ ವರ್ಷ ಆಯ್ಕೆ ಮಾಡಿದ ಯುವ ವೈದ್ಯರಲ್ಲಿ ನಮ್ಮ ಬೆಳಂಬಾರದ ಶ್ರೀ ಹನುಮಂತ ಬೊಮ್ಮು ಗೌಡ ಒಬ್ಬರಾಗಿದ್ದಾರೆ. ಅವರು ಇತ್ತೀಚೆಗಷ್ಟೇ ದಿಲ್ಲಿಗೆ ಹೋಗಿ ಪ್ರಶಸ್ತಿ ಸ್ವೀಕರಿಸಿ ಬಂದಿದ್ದಾರೆ. ಇವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ನಾನಿಲ್ಲಿ ಉಲ್ಲೇಖಿಸಿದ ವಿಷಯಗಳೆಲ್ಲ ಪರಿಪೂರ್ಣವೆಂದು ಹೇಳಲಾರೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರ ಹೆಸರುಗಳು ಉಳಿದಿರಬಹುದು. ದಯವಿಟ್ಟು ತಪ್ಪು ಭಾವಿಸಬಾರದೆಂದು ನನ್ನ ಕೋರಿಕೆ.

ನನಗೆ ಇಂಥ ದೊಡ್ಡ ಹೊಣೆಗಾರಿಕೆಯ ಸ್ಥಾನ ನೀಡಿ ಗೌರವಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಎಲ್ಲಾ ಮುಖ್ಯಸ್ಥರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

– ಜೈ ಹಿಂದ್ ಜೈ ಕರ್ನಾಟಕ

ಸಾಹಿತ್ಯ

ಮನಿ ತುಂಬ ಪುಸ್ತಕ ತುಂಬಿಟ್ಟು ಕೊಂಡಾನ
ದುಡ್ಡು ಕೊಟ್ಟೇನು ತಂದಿಲ್ಲ । ಮಂದೀವು
ಓದಾಕ ತಂದು ಕೊಟ್ಟಿಲ್ಲ ॥ ೨೦೮

ಯಾರ್‍ಯಾರೊ ಬರದದ್ದು ಹರಕೊಂಡು ತಂದಾನ
ಮತ್ತೊಮ್ಮೆ ಕುಂತು ಬರದಾನ । ಊರಾಗ
ಸಾಹಿತಿ ತಾನಂತ ಹೊಂಟಾನ ॥ ೨೦೯

ಬರಿಯೂವ ಮಂದೀಗೆ ಬಹುಮಾನ ಕೊಟ್ಟಾರ
ಸರಕಾರಿ ಯಾದಿ ನೋಡಿದೆ । ಅದರಾಗ
ಮೂಕರ್ಜಿ ಹಾಕವನ ಹೆಸರಿತ್ತ ॥ ೨೧೦

ಕತೆ -ಕವನ ಬರದೀರಿ ನಾಟಕ ಮಾಡಿದಿರಿ
ಮೈತುಂಬ ಶಾಲು ಹೊದಿಸ್ಯಾರ । ಮನಿಮುಂದ
ಸಾಲಾ ಕೊಟ್ಟವರು ಬಂದಾರ ॥ ೨೧೧


– ಶ್ಯಾಮ ಹುದ್ದಾರ
(ಉಸುಕಿನ ಭೂಮ್ಯಾಗ ಕುಸುಬೀಯ ಬಿತ್ತೇನ ಸಂಕಲನದಿಂದ)

ಅಂಕೋಲಾ ತಾಲೂಕಾ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೨೦-೦೧-೨೦೦೮

ಸಮ್ಮೇಳನದ ಸರ್ವಾಧ್ಯಕ್ಷರು

ಅನುರಾಗದ ಕವಿ : ಶಾಂತಾರಾಮ ನಾಯಕ ಹಿಚಕಡ



ಅಂಕೋಲೆಯ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಶ್ರೀ ಶಾಂತಾರಾಮ ನಾಯಕ ಹಿಚಕಡ ಅವರು ಸ್ವಾತಂತ್ರ್ಯ ಯೋಧರ ಕುಟುಂಬದಿಂದ ಬಂದ ಶಿಕ್ಷಕ-ಸಾಹಿತಿ. ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾದ ಇವರು ಹಿಂದಿ ರಾಷ್ಟ್ರಭಾಷಾ ವಿಶಾರದ ಪದವಿ, ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಶಿಕ್ಷಣ, ಸಾಹಿತ್ಯ, ಕಲೆ ಮುಂತಾದ ರಂಗಗಳಲ್ಲಿ ಕ್ರಿಯಾಶೀಲರಾಗಿರುವ ಇವರು ಸಂವೇದನಾಶೀಲ ಬರಹಗಾರರಾಗಿ, ಗ್ರಂಥ ಪ್ರಕಾಶಕರಾಗಿ, ಯಕ್ಷಗಾನ ಹಾಗೂ ನಾಟಕ ಕಲಾವಿದರಾಗಿ ತಮ್ಮ ಹೆಜ್ಜೆ ಗುರುತನ್ನು ದಾಖಲಿಸಿದ್ದಾರೆ. ಮಾನವೀಯ ಪ್ರೀತಿ, ಜೀವನ್ಮುಖಿ ವಿಚಾರಗಳಿಗೆ ಮನ್ನಣೆಯಿಟ್ಟು ಸಾಹಿತ್ಯ ರಚನೆಗೆ ತೊಡಗಿದ ಇವರು, ಕಾಡ ಹೆಣ್ಣು, ಅನುಭವ, ಆತಂಕ, ದಾರಿ ಮಾಡಿಕೊಡಿ, ಅನುರಾಗ, ನಿನಾದ, ಸಂಭ್ರಮ ಎಂಬ ಕವನ ಸಂಕಲನ, ಚರಿತ್ರೆಯಲ್ಲಿ ಮರೆತವರ ಕಥೆ ಹಾಗೂ ಸ್ವಾತಂತ್ರ್ಯ ಹೋರಾಟದ ಹೊರಳು ನೋಟ ಎಂಬ ಚರಿತ್ರೆ, ನಾಡವರು, ಹಂಬಲ, ಹುಡುಕಾಟ ಎಂಬ ಪ್ರಬಂಧ ಸಂಕಲನ, ಮಾನಧನ ಎಮ್.ಎಚ್. ನಾಯಕ, ಶಿಕ್ಷಕ ಕವಿ ವಿ.ವೆ. ತೊರ್ಕೆ, ಕರುಣಾಳು ಸ.ಪ. ಗಾಂವಕರ ಎಂಬ ಜೀವನ ಚರಿತ್ರೆ ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಶಾಂತಾರಾಮ ನಾಯಕರು 'ಜಿನದೇವ ಪ್ರಕಾಶನ'ವನ್ನು ಆರಂಭಿಸಿ ತನ್ಮೂಲಕ ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಓದುವ ಅಭಿರುಚಿ ಇರುವವರಿಗೆ ತಮ್ಮ ಮನೆಯಂಗಳದಲ್ಲಿ 'ಓದುವ ಮನೆ'ಯನ್ನಾರಂಭಿಸಿದ್ದಾರೆ. ನಿವೃತ್ತಿಯ ನಂತರ ಹಲವು ಸಮಾಜಮುಖಿ ಸಂಘ-ಸಂಸ್ಥೆಗಳ ಮಾರ್ಗದರ್ಶಕರಾಗಿಯೂ ಅಮೂಲ್ಯ ಸೇವೆ ನೀಡುತ್ತಿದ್ದಾರೆ. ಹಲವು ರಾಜ್ಯ ಮಟ್ಟದ ಸಾಹಿತ್ಯ ಗೋಷ್ಠಿಗಳಲ್ಲಿ ಭಾಗವಹಿಸಿದ ಇವರು ಅಂಕೋಲಾ ಕರ್ನಾಟಕ ಸಂಘದ ಅಧ್ಯಕ್ಷರಾಗಿಯೂ ತಮ್ಮ ಕೊಡುಗೆ ನೀಡಿದ್ದಾರೆ. ಇವರ ಕುರಿತು 'ಸೌಜನ್ಯ' ಎಂಬ ಅಭಿನಂದನಾ ಗ್ರಂಥ ಪ್ರಕಟಗೊಂಡಿದೆ.

೨೦-೦೧-೨೦೦೮ರಂದು ತಮ್ಮ ೭೯ನೇ ವಯಸ್ಸಿನಲ್ಲಿ ತಾಲೂಕಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಶಾಂತಾರಾಮ ನಾಯಕರು ತಮ್ಮ ಶಿಕ್ಷಣ, ಸಾಹಿತ್ಯ ಹಾಗೂ ಸಾಂಸ್ಕೃತಿಕ ದೃಷ್ಟಿಕೋನದಿಂದ ಸಮ್ಮೇಳನವನ್ನು ಚೈತನ್ಯಪೂರ್ಣಗೊಳಿಸಿದರು. ಅವರ ಕವನದ ಸಾಲು ಹೀಗಿದೆ :

ಉಳುಮೆಯಾಗಲಿ ಪೂರ್ಣ ಎದೆಯ ಹೊಲ
ಒಲುಮೆ ಬೀಜವ ಬಿತ್ತಿ ನಿತ್ಯ
ಹೂವರಳಿ ಪರಿಮಳ ಬೀರುತಿರಲಿ
ವಿರಸಗಳ ಮೌನ ಮುರಿದು
ಅಂತರಂಗದ ಕದವ ತೆರೆದು

ಶ್ರೀ ಶಾಂತಾರಾಮ ನಾಯಕ, ಹಿಚಕಡ ಅವರ ಸರ್ವಾಧ್ಯಕ್ಷೀಯ ಭಾಷಣ

ನನ್ನ ಪ್ರೀತಿಯ ಕನ್ನಡದ ಹಿರಿ–ಕಿರಿಯ ಸಹೋದರ, ಸಹೋದರಿಯರೇ, ಸಾಹಿತ್ಯಾಭಿಮಾನಿಗಳೇ, ಆಗಮಿಸಿದ ಸನ್ಮಾನ್ಯ ಹಿರಿಯ ಸಾಹಿತಿಗಳೇ ಹಾಗೂ ಸಹೃದಯ ಸನ್ಮಿತ್ರರೆ,

ಅಂಕೋಲೆಯ ಕನ್ನಡದ ನುಡಿಹಬ್ಬಕ್ಕೆ ಬಂದ ತಮಗೆಲ್ಲರಿಗೂ ವಂದನೆಗಳು ಹಾಗೂ ಹಾರ್ದಿಕ ಶುಭಾಶಯಗಳು.

ನನ್ನ ಸಾಹಿತ್ಯ ಮಿತ್ರರು, ಅಭಿಮಾನಿ ಸಹೃದಯರು ತೋರಿದ ಪ್ರೀತಿ ವಿಶ್ವಾಸದ ಮನ್ನಣೆಯ ಗೌರವವೆಂದು ಭಾವಿಸಿ, ಈ ಸಮ್ಮೇಲನದ ಅಧ್ಯಕ್ಷತೆಯುನ್ನು ವಿನಯದಿಂದ ಸ್ವೀಕರಿಸಿದ್ದೇನೆ.

ಸಾಹಿತ್ಯ ಸಮ್ಮೇಲನಗಳು ಬೇಕೇ ಬೇಡವೇ ಎಂಬ ಜಿಜ್ಞಾಸೆ ನಡೆಯುತ್ತಿರುವಾಗಲೇ ನೆರೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೫ ದಿನಗಳ ಅವಧಿಯಲ್ಲಿ ನಾಲ್ಕು ಸಮ್ಮೇಲನಗಳು ಸಂಭ್ರಮದಿಂದ ನಡೆದು ಹೋದವು. ಅಂಥ ಚಿಕ್ಕದೊಂದು ಸಾಹಿತ್ಯ ಹಬ್ಬ ಅಂಕೋಲೆಯಲ್ಲಿ ಇಂದು ಸಮಾವೇಶಗೊಂಡಿದೆ.

ಇಂಥ ಸಂತೋಷದ ಗಳಿಗೆಯಲ್ಲಿ ನೋವೊಂದು ನಮ್ಮನ್ನು ಕಾಡುತ್ತಿದೆ. ಅಂಕೋಲೆಯ ಮೊದಲನೆಯ ಸಮ್ಮೇಲನದ ಅಧ್ಯಕ್ಷರಾಗಿ, ಎರಡನೆಯ ಸಮ್ಮೇಲನ ಬರುವುದರೊಳಗೆ ಶ್ಯಾಮಹುದ್ದಾರರನ್ನು ಕಳೆದುಕೊಂಡು ಅಂಕೋಲೆ ಸಾಂಸ್ಕೃತಿಕವಾಗಿ ಬಡವಾಗಿದೆ. ಅವರ ಅಕಾಲಿಕ ಅಗಲಿಕೆಯ ನೋವು ನಮ್ಮನ್ನು ಕಾಡುತ್ತಿದೆ. ಇನ್ನೂ ಬದುಕಬೇಕೆಂಬ ಆಶೆ ಹೊತ್ತು ತನ್ನ ಆತ್ಮೀಯ ಗೆಳೆಯರೊಡನೆ ಸಂವಹನಕ್ಕೆ ಹಂಬಲಿಸುತ್ತಿದ್ದ ಅವರಂತಹ ಶುದ್ಧ ಸ್ನೇಹಿತರ ಕೊರತೆ ಎಲ್ಲೆಲ್ಲೂ ಎದ್ದು ಕಾಣುತ್ತದೆ. ಅಂಕೋಲೆಯನ್ನು ಅಂಕೋಲೆಯವರಿಗಿಂತ ಹೆಚ್ಚಾಗಿ ಪ್ರೀತಿಸಿದ ಹುದ್ದಾರರು ದಿನಕರನ ಚೌಪದಿಗೆ ಮಣಿದು, ಅಂಕೋಲೆಯ ಹೋರಾಟದ ನೆಲದಲ್ಲಿ ಬೆಳೆದ ಬಿಸಿ ಬಿಸಿ ಹೋಳಿಗೆ ತುಪ್ಪದ ಸ್ವಾದ ಹಾಗೂ ಜೋಳದ ಒಣರೊಟ್ಟಿಯ ಖಾರ ಚಟ್ನಿಯ ಬಿರುಸಿನ ಆ ತ್ರಿಪದಿಗಳನ್ನು ಇನ್ನೆಲ್ಲಿ ಕಾಣುವುದು. ಎಣ್ಣೆ ಇಲ್ಲದೇ ತ್ರಿಪದಿಗಳ ದೀಪ ನಂದಿ ಹೋಯಿತು. ಆ ಆತ್ಮೀಯ ಸ್ನೇಹಿತರಿಗೆ ನನ್ನ ನುಡಿನಮನಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಂದುವರಿಸುತ್ತೇನೆ.

ಕನ್ನಡ ವರ್ಣಮಾಲೆಯ ಮೊದಲಕ್ಷರದಿಂದ ಪ್ರಾರಂಭವಾಗುವ ಅಂಕೋಲೆಯ ನಿಸರ್ಗದ ಚೆಲುವು, ಸುಂದರ ಕರಾವಳಿಯ ಸೊಬಗು, ಹಸಿರು ತೊಟ್ಟ ಬೆಟ್ಟ–ಗುಡ್ಡಗಳ ಸಾಲು, ನದಿ, ಕಡಲ ಕಿನಾರೆಗಳು, ಸುತ್ತಲೂ ರೋಮಾಂಚನಗೊಳಿಸುವ ಚೆಲುವಿನ ತಾಣಗಳು, ಹೊಳೆ–ಹಳ್ಳಗಳು, ಜೀವನದಿ ಶಾಲ್ಮಲೆಯ ಗಂಭೀರ ಓಟದ ನೋಟ, ಸೊಬಗನ್ನು ನೆಮ್ಮದಿಯನ್ನು ನೀಡುತ್ತಿರುವ ನಮ್ಮೆಲ್ಲರ ಅಭಿಮಾನದ ನೆಲ. ಪಶ್ಚಿಮ ವಾಹಿನಿ ಗಂಗಾವಳಿ ನದೀ ದಂಡೆಯ ಈ ನಾಡು ವೀರ ಸಂಸ್ಕೃತಿಯ ಚೆಲುವಿನ ಬೀಡು, ಎಂದೆಂದಿಗೂ ಕ್ರಾಂತಿಯ ನೆಲವೀಡು, ಸ್ವಾತಂತ್ರ್ಯ ಸಂಗ್ರಾಮದ ಚಂಡೆಮದ್ದಳೆ ಬಾರಿಸಿ, ಪ್ರಚಂಡ ಜನಶಕ್ತಿಯನ್ನು ಕೇಂದ್ರೀಕರಿಸಿಕೊಂಡು ಕೆಚ್ಚೆದೆಯಿಂದ ಪ್ರಾಣದ ಹಂಗು ತೊರೆದು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಅವಿರತ ಹೋರಾಟ ನಡೆಸಿ, ಚರಿತ್ರೆ ನಿರ್ಮಿಸಿದ ಪವಿತ್ರಭೂಮಿ. ಭಾರತದ ಎರಡನೇ ಬಾರ್ಡೋಲಿಯೆಂದು ಖ್ಯಾತಿ ಪಡೆದ ತ್ಯಾಗ ಭೂಮಿ'.

ಸಾಮಾಜಿಕ ನ್ಯಾಯ ಕೇಳಿ ಬಂಡಾಯವೆದ್ದ ರೈತ ಜನಾಂದೋಲನದ ರಣ ಹಲಗೆಯ ಆರ್ಭಟ ಕೇಳಿಸಿದ ಹೋರಾಟದ ನೆಲ ಈ ಅಂಕೋಲೆ.

ಅಂಕೋಲೆಯ ಹೆಸರಿನ ಹಿನ್ನೆಲೆ ಹಾಗೂ ಐತಿಹಾಸಿಕ ಸಂಗತಿಗಳ ಕುರಿತಾಗಿ ಭಿನ್ನಾಭಿಪ್ರಾಯಗಳು, ಊಹಾಪೋಹಗಳಿದ್ದರೂ ಪಶ್ಚಿಮಕ್ಕಿರುವ ಬೆಳಂಬಾರದಿಂದ ಪೂರ್ವಕ್ಕಿರುವ ಹಿಲ್ಲೂರು, ಅಂಗಡಿಬೈಲ್ ದಾಟಿ ತಿಂಗಳಬಯಲಿನಾಚೆಗೂ ೯೧೯ ಚದರ ಕಿ.ಮಿ. ವಿಸ್ತಾರವಾಗಿ ಹರಡಿರುವ ತಾಲ್ಲೂಕು ಅಂಕೋಲೆ ಎಂಬುದು ಮಾತ್ರ ವಾಸ್ತವದ ಸಂಗತಿಯಾಗಿದೆ.

ಬೆಳಂಬಾರ, ಬಿಳಿಹೊಂಯ್ಲಿ ಹೊನ್ನೆಬಯಲು, ಪೂಜಗೇರಿ, ಹೊನ್ನಿಕೇರಿ, ಶೇಡಿಕುಳಿ, ಅಂಬಾರಕೊಡಲು, ಬಿಳಿಸಿರಿ, ಶಿಂಗಣಮಕ್ಕಿ, ಕನಸಿಗದ್ದೆ, ತಿಂಗಳಬಯಲು ಏನೆಂಥ ಸುಂದರ ಹೆಸರಿನ ಊರುಗಳು.

ಅಂಕೋಲೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದಿನ ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಕದಂಬರಿಂದ ಹಿಡಿದು ಸರ್ಪಮಲ್ಲಿಕನೇ ಆದಿಯಾಗಿ ಬ್ರಿಟೀಷರವರೆಗೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ವಿಭಿನ್ನ ಅರಸು ಮನೆತನಗಳ ಆಡಳಿತ ಕೈಬಳಕೆಯ ಊರಾಗಿ ತನ್ನ ಅಸ್ತಿತ್ವವನ್ನು ಕಾದುಕೊಂಡು ಬಂದಿದೆ.

ಅಂಕೋಲೆ ಸಮೃದ್ಧ ಜನಪದ ಸಂಪತ್ತಿನ ತವರೂರು. 'ಜಾನಪದ ಶ್ರೀ' ಹಾಗೂ 'ನಾಡೋಜ' ಪ್ರಶಸ್ತಿಗಳನ್ನು ಪಡೆದ ಶ್ರೀಮತಿ ಸುಕ್ರಿ ಗೌಡ ನಮ್ಮ ಅಂಕೋಲೆಯವರು. ಜಾನಪದ ವೈದ್ಯರಲ್ಲಿ ಬೆಳಂಬಾರದ ಖ್ಯಾತಿ ದೇಶವ್ಯಾಪಿಯಾದುದು. ಅಂಕೋಲೆಯ ಈಶಾಡ ಮಾವಿನ ಹಣ್ಣಿನ ರುಚಿ ರಾಜ್ಯದ ಗಡಿದಾಟಿದೆ. ಅಂಕೋಲೆ ವಿವಿಧ ಸಾಮಾಜಿಕ ಉಪಭಾಷೆಗಳ ಆಡಂಬೊಲ, ಧಾರ್ಮಿಕ ಸೌಹಾರ್ದತೆಗೆ, ಭಾವೈಕ್ಯತೆಗೆ ಅಂಕೋಲೆ ಮಾದರಿ.

ಅಂಕೋಲಾ ತಾಲೂಕು ವಿಸ್ತೀರ್ಣದಲ್ಲಿ ದೊಡ್ಡದಾದರೂ ಜನ ಸಂಖ್ಯೆಯಿಂದ ಸಣ್ಣ ತಾಲೂಕು. ಒಟ್ಟೂ ೮೮ ಹಳ್ಳಿಗಳು. ಕೆಲವು ಹಳ್ಳಿಗಳಿಗೆ ಅಭಿವೃದ್ಧಿಯ ಕಾಲುದಾರಿ ಕೂಡ ಇನ್ನೂ ತಲುಪಿಲ್ಲ. ಬಹುತೇಕ ಜನರಿಗೆ ಈ ಕನ್ನಡ ಮಾಧ್ಯಮ, ಆಡಳಿತ ಭಾಷೆ, ಕರ್ನಾಟಕ ಸಂಘ, ಸಾಹಿತ್ಯ ಪರಿಷತ್ತು, ಸಾಹಿತ್ಯ ಸಮ್ಮೇಲನಗಳ ಗಂಧಗಾಳಿ ಇಲ್ಲ. ಬಹುಶಃ ಅವರಿಗೆ ಬೇಕಾಗಿಯೂ ಇಲ್ಲ. ಜನಸಾಮಾನ್ಯರ ಆರ್ಥಿಕ ಪರಿಸ್ಥಿತಿ ಆರಕ್ಕೇರದ ಮೂರಕ್ಕಿಳಿಯದಂತಿದೆ. ಗಳಿಕೆಗಿಂತ ಹೆಚ್ಚು ವೆಚ್ಚ ಮಾಡುವ ಡೌಲು, ಆಡಂಬರದ ಜೀವನಕ್ಕೆ ಒಗ್ಗಿದ ಮಧ್ಯಮ ವರ್ಗದ ಜನರದೇ ದರ್ಬಾರು ಇಲ್ಲಿ. ಇದು ಇಲ್ಲದ ಊರು ಹೌದು, ಸಲ್ಲುವ ಊರೂ ಹೌದು. ಆದರೆ ಇದು ಹೇಗಿದ್ದರೂ, ಎಂತಿದ್ದರೂ ನನಗೆ ಮಾತ್ರ 'ಅಂದದ ಕೋಮಲ ಲಾವಣ್ಯದ' ಊರು.

ಅಂಕೋಲಾ ತಾಲೂಕಿನ ಸಾಹಿತ್ಯ:

ಅಂಕೋಲೆ ಸಾಹಿತ್ಯ, ಕಲೆ, ಶಿಕ್ಷಣ ಹಾಗೂ ಸಾಂಸ್ಕೃತಿಕ ರಂಗಕ್ಕೆ ನೀಡಿದ ಕೊಡುಗೆ ಗಮನಾರ್ಹವಾದುದು. ಹಿರಿ–ಕಿರಿಯ ಸುಮಾರು ೮೬ ರಷ್ಟು ಲೇಖಕರು ಇದ್ದಾರೆ.

ಅಂಕೋಲಾ ತಾಲೂಕಿನ ಸಾಹಿತ್ಯವನ್ನು ಕಟ್ಟಿ ಬೆಳೆಸಿದ ಅನೇಕ ಹಿರಿಯ ಬರಹಗಾರರು ಆಗಿಹೋಗಿದ್ದಾರೆ. ಉದ್ದಾಮ ಪಂಡಿತರೆಂದು ಪ್ರಸಿದ್ಧರಾದ ದಿ. ಲಕ್ಷ್ಮಣ ಬಾಬಣಿ ಪೈ, ಉತ್ತರ ಕನ್ನಡ ಜಿಲ್ಲೆಯ ಕವಿ ಕುಲಪುರುಷರೆಂಬ ಗೌರವಕ್ಕೆ ಪಾತ್ರರಾದ ದಿ. ಸ. ಪ. ಗಾಂವಕರ, ಶಿಕ್ಷಕ ಕವಿ ಹಾಗೂ ಜಿಲ್ಲೆಯ ಮೊದಲ ಹಳ್ಳಿಯ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ ದಿ. ವಿ. ವೆ. ತೊರ್ಕೆ, ಸುಧಾರಣಾವಾದಿ ಪ್ರಜ್ಞೆಯ ಲೇಖಕರಾದ ದಿ. ಡೆಂಗಾ ದೇವಾ ನಾಯಕ, ಕನ್ನಡ ಸಾಹಿತ್ಯಕ್ಕೆ ಅಂಕೋಲೆಯ ಕೊಡುಗೆಯಾದ ದಿ. ದಿನಕರ ದೇಸಾಯಿ, ಬಹುಶ್ರುತ ಲೇಖಕರಾದ ದಿ. ಮ. ಗ. ಶೆಟ್ಟಿ, ಮಕ್ಕಳ ಕವಿಯಾದ ದಿ. ಶ್ರೀನಿವಾಸ ಶೆಟ್ಟಿ, ಶ್ರೇಷ್ಠ ವಿಮರ್ಶಕ ಕವಿಯಾಗಿದ್ದ ದಿ. ಜಿನದೇವ ನಾಯಕ, ಭಾವುಕ ಶಿಕ್ಷಕ ಕವಿಯಾದ ದಿ. ಶಾಂತಾರಾಮ ಬಾಳೆಗುಳಿ, ಮಕ್ಕಳ ಸಾಹಿತ್ಯದ ಕೊರತೆಯನ್ನು ನೀಗಿಸಲು ಹಟತೊಟ್ಟು ಮಕ್ಕಳ ಕಥೆ, ಕವನ ರಚಿಸಿದ ದಿ. ಗಿರಿ ಪಿಕಳೆ, ಭೂಗತನ ನೆನಪು ಕೃತಿ ರಚಿಸಿದ ದಯಾನಂದ ಪ್ರಭು, ಚಿಂತನಶೀಲ, ಉತ್ಸಾಹಿ ಬರಹಗಾರರಾಗಿದ್ದ ಸಗಡಗೇರಿಯ ದಿ. ಬಿ. ಜಿ. ನಾಯಕ ವಿಮರ್ಶಕರು, ಸಂಶೋಧಕ ಬರಹಗಾರರಾದ ಡಾ। ಸದಾನಂದ ನಾಯಕ, ಶತಾಯುಷಿ ದಿ. ಜೋಗಿ ನಾಯಕ, ದಿ. ಶ್ಯಾಮ ಹುದ್ದಾರ, ಡಾ॥ ಟಿ. ವಿ. ನಾಯಕ ಇವರೆಲ್ಲರನ್ನೂ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಲು ಬಯಸುತ್ತೇನೆ.

ಅಂಕೋಲೆಯಲ್ಲಿ ಹುಟ್ಟಿ ಬೆಳೆದು ಉದ್ಯೋಗಾರ್ಥ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆಸಿ ಸಾಹಿತ್ಯ ಸೃಷ್ಟಿಸಿ ಪ್ರಸಿದ್ಧರಾದವರು ಅನೇಕರಿದ್ದಾರೆ. ಅವರೆಲ್ಲ ಅಂಕೋಲಾ ನೆಲದ ಕೊಡುಗೆಗಳು. ಕನ್ನಡ ಸಾಹಿತ್ಯದ ನಾಮಾಂಕಿತ ಸೃಜನಶೀಲ ವಿಮರ್ಶಕರಾಗಿ ನಾಡಿನ ಗೌರವಾದರಕ್ಕೆ ಪಾತ್ರರಾಗಿ ಮೈಸೂರಿನಲ್ಲಿ ನೆಲೆಸಿರುವ ಪ್ರೊ. ಜಿ. ಎಚ್. ನಾಯಕರು ಕನ್ನಡ ಸಾಹಿತ್ಯಕ್ಕೆ ಅಂಕೋಲೆ ನೀಡಿದ ಶ್ರೇಷ್ಠ ಕೊಡುಗೆ, ಬೆರಳೆಣಿಕೆಯ ಜಾನಪದ ತಜ್ಞರಲ್ಲಿ ಒಬ್ಬರಾಗಿ ಜಾನಪದ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿ ಪ್ರಸಿದ್ಧರಾದ ಡಾ॥ ಎನ್. ಆರ್. ನಾಯಕ ಹಾಗೂ ಅವರ ಶ್ರೀಮತಿ ಶಾಂತಿ ನಾಯಕ, ಭರವಸೆಯ ಕವಿ, ಕಥೆಗಾರ ಸಂದೀಪ ನಾಯಕ ಶೆಟಗೇರಿ

ಮತ್ತು ವೆಂಕಟರಮಣ ಗೌಡ, ಸಂವೇದನಾಶೀಲ ಕವಿ ಪ್ರಕಾಶ ಕಡಮೆ, ಪ್ರಸಿದ್ದ ಕತೆಗಾರ್ತಿ ಶ್ರೀಮತಿ ಸುನಂದಾ ಕಡಮೆ, ಕವಿ, ಲೇಖಕರಾದ ಶ್ರೀ ವಿಠಲ ಗಾಂವಕರ, ಡಾ॥ ಸಚ್ಚಿದಾನಂದ ಶಿರೋಡಕರ, ಪ್ರೊ. ಡಿ. ಎನ್. ರಾಯ್ಕರ, ಮನೋಹರ ಮಲ್ಮನೆ ಇವರೆಲ್ಲ ನಮ್ಮ ಅಂಕೋಲೆಯವರು ಎಂಬುದು ನಮಗೆ ಹೆಮ್ಮೆ.

ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ವಿಶಿಷ್ಟವಾಗಿ ಗುರುತಿಸಿಕೊಂಡ ಬಹುಮುಖ ಪ್ರತಿಭೆಯ ಶ್ರೀ ವಿಷ್ಣು ನಾಯ್ಕರು, ಕನ್ನಡ ನಾಡಿನ ಸಾಹಿತ್ಯ ನಕ್ಷೆಯಲ್ಲಿ ಅಂಕೋಲೆಗೊಂದು ಶಾಶ್ವತ ಸ್ಥಾನ ಕಲ್ಪಿಸಿಕೊಟ್ಟವರು. ಚಿತ್ತಾಲ ಬಂಧುಗಳು ಕನ್ನಡ ಸಾಹಿತ್ಯದಲ್ಲಿ ತಮ್ಮೂರು ಹನೇಹಳ್ಳಿಯನ್ನು ಶಾಶ್ವತಗೊಳಿಸಿದಂತೆ ವಿಷ್ಣು ನಾಯ್ಕರು ತನ್ನೂರು ಅಂಬಾರಕೊಡಲನ್ನು ಪ್ರಸಿದ್ಧಿಯ ಅಂಬಾರಕ್ಕೇರಿಸಿರುವರು. ಸಮಾಜವಾದಿ ನೆಲೆಯ ಶ್ರೇಷ್ಠ ಚಿಂತನಶೀಲ ಕವಿ, ಲೇಖಕರು ಹಾಗೂ ಶಿಕ್ಷಣ ತಜ್ಞರಾಗಿ ಪ್ರಸಿದ್ಧರಾದ ಶ್ರೀ ವಿ. ಜೆ. ನಾಯಕ, ಉತ್ತರ ಕನ್ನಡ ಜಿಲ್ಲೆಯ ದೇವನೂರ ಮಹಾದೇವನೆಂದೇ ಖ್ಯಾತರಾದ ಡಾ॥ ರಾಮಕೃಷ್ಣ ಗುಂದಿ, ಹಿರಿಯ ಕವಿ, ಲೇಖಕರಾದ ಶ್ರೀ ಎನ್. ಬಿ. ಕಾಮತ, ಗದ್ಯ-ಪದ್ಯಗಳೆರಡರಲ್ಲಿಯೂ ಸೃಜನಶೀಲ ಪ್ರತಿಭೆಯನ್ನು ಮೆರೆದ ಶ್ರೀ ಶಾಂತಾರಾಮ ನಾಯಕ ಹಿಚಕಡ, ಕವಿ-ನಾಟಕಕಾರ, ಉತ್ತಮ ಕಥೆಗಾರರಾಗಿ ಪರಿಚಿತರಾದ ಪ್ರೊ. ಮೋಹನ ಹಬ್ಬು, ಕಾವ್ಯವನ್ನು ಗಂಭೀರವಾಗಿ ಸ್ವೀಕರಿಸಿ ಕಾವ್ಯ ರಚನೆಯಲ್ಲಿ ಕಲಾತ್ಮಕತೆಯನ್ನು ಮೆರೆದ ಕೃಷ್ಣ ನಾಯಕ ಹಿಚಕಡ, ಪಾಂಡಿತ್ಯ ಪ್ರತಿಭೆ ವೈಚಾರಿಕತೆಗಳು ಮುಪ್ಪುರಿಗೊಂಡು ಹೆಸರಾದ ಕವಿ, ಲೇಖಕರಾದ ಸಿದ್ಧಲಿಂಗಸ್ವಾಮಿ ವಸ್ತ್ರದ, ಕಾವ್ಯ ಹಾಗೂ ಕಥಾಕ್ಷೇತ್ರದಲ್ಲಿ ಈಗಾಗಲೇ ತಮ್ಮನ್ನು ಗುರುತಿಸಿಕೊಂಡಿರುವ ಬಿ.ಹೊನ್ನಪ್ಪ, ಜೆ. ಪ್ರೇಮಾನಂದ, ನಾಗೇಂದ್ರ ತೊರ್ಕೆ, ಎನ್. ವಿ. ನಾಯಕ, ಫಾಲ್ಗುಣ ಗೌಡ, ನಾಗಪತಿ ಹೆಗಡೆ, ನಾಗೇಶ ದೇವ, ಬಿ. ಎಚ್. ನಾಯಕ, ಎ. ಎ. ಸಣ್ಣು, ಜೋಗಿ ಬೊಮ್ಮಯ್ಯ ನಾಯಕ, ಡಾ. ಶ್ರೀಪಾದ ಶೆಟ್ಟಿ, ವಿ. ಎ. ಜೋಶಿ, ಅಮ್ಮೆಂಬಳ ಆನಂದ, ರಾಮಚಂದ್ರ ಶೇಟ, ರಮೇಶ ನಾಯಕ, ಎಲ್. ಎಸ್. ನಾಯಕ, ಡಾ॥ ಎಸ್. ಡಿ. ನಾಯ್ಕ, ಡಾ॥ ಶಿವಾನಂದ ನಾಯಕ, ಶ್ರೀಧರ ನಾಯಕ, ಕೆ.ಟಿ. ನಾಯಕ, ಕೆ.ಡಿ.ನಾಯ್ಕ ಮನೋಹರ ನಾಯಕ ಜಮಗೋಡ, ಶ್ರೀಮತಿ ಕುಸುಮಾ ಕೇಣಿಕರ, ಶ್ರೀಮತಿ ಶ್ರೀದೇವಿ ಕೆರೆಮನೆ, ಉಮೇಶ ನಾಯ್ಕ, ಪ್ರಭಾಕರ ನಾಯಕ, ಬಾಲಕೃಷ್ಣ ದೇವನಮನೆ, ಗಣಪತಿ ತಾಂಡೇಲ, ಶ್ರೀಮತಿ ಭಾರತಿ ನಾಯ್ಕ, ಅಮಿತಾ ನಾಯ್ಕ, ವಸಂತ ಎಂ. ನಾಯಕ ಅಗ್ಗರಗೋಣ, ವೈದ್ಯಕೀಯ ಅಂಕಣ ಬರಹಗಾರರಾದ ಡಾ॥ ಬ್ರಹ್ಮಾನಂದ ನಾಯಕ, ಅಂಕಣಕಾರ ನಾಗರಾಜ ವಿ. ನಾಯಕ, ರಾಮಮೂರ್ತಿ ಬಾಸಗೋಡ, ಹೀಗೆ ಪಟ್ಟಿ ಬೆಳೆಯುತ್ತದೆ.

ಅಂಕೋಲಾ ಸಾಹಿತ್ಯ ಬಳಗದವರು ನೆರೆಯ ತಾಲೂಕುಗಳಲ್ಲಿ ನಡೆಯುವ ವಿವಿಧ ಸಾಹಿತ್ಯ, ಸಾಂಸ್ಕೃತಿಕ, ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಮೂಲಕ ಸಾಂಸ್ಕೃತಿಕ ಸಂಬಂಧವನ್ನು ಬೆಸೆಯುವಲ್ಲಿ ಮುಂದಾಗಿರುವುದು ಈ ಸಾಹಿತಿ ಬಳಗದ ವಿಶೇಷವಾಗಿದೆ. ಸಾಹಿತ್ಯ ಸ್ನೇಹಸೇತುವೆ ಕಟ್ಟಿದ ಸಂತೋಷ ಅಂಕೋಲೆಯವರದಾಗಿದೆ.

ಅಂಕೋಲೆಯ ಶೈಕ್ಷಣಿಕ-ಸಾಂಸ್ಕೃತಿಕ ಹಿರಿಮೆ:

ಅಂಕೋಲಾ ತಾಲೂಕಿನ ಶಿಕ್ಷಣ ಪ್ರಗತಿಗೆ ಪ್ರಮುಖವಾಗಿ ಕಾರಣರಾದವರು ಮಾನ್ಯರಾದ ಗಿರಿ ಪಿಕಳೆ (ಪಿಕಳೆ ಮಾಸ್ತರ) ಹಾಗೂ ದಿನಕರ ದೇಸಾಯಿಯವರು. ನೂತನ ಶಿಕ್ಷಣ ಸಭಾ ಟ್ರಸ್ಟ್ (ಈಗ ಕೆ. ಎಲ್. ಇ. ಸಂಸ್ಥೆ) ಹಾಗೂ ಜಿಲ್ಲಾವ್ಯಾಪ್ತಿಯನ್ನು ಮೀರಿದ ಕೆನರಾ ವೆಲ್‌ಫೇರ್ ಟ್ರಸ್ಟ್ ಈ ಎರಡು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಕಾರಣರಾಗಿದ್ದಾರೆ. ಅಂಕೋಲೆಯ ಶಿಕ್ಷಣದ ಸಾಧನೆಯಲ್ಲಿ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರವೂ ಮಹತ್ವದ್ದಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕನಿಷ್ಠ ಪ್ರಮಾಣದ ಮೂಲಭೂತ ಸೌಕರ್ಯ ಹಾಗೂ ಅವಶ್ಯಕವಾದ ಅಧ್ಯಾಪಕರನ್ನು ನೇಮಿಸದೇ ತರಾತುರಿಯಲ್ಲಿ ಸರಕಾರಿ ಶಾಲೆ ಕಾಲೇಜುಗಳು ಸ್ಥಾಪನೆಯಾಗಿವೆ.

ಅಂಕೋಲೆ ಸಾಂಸ್ಕೃತಿಕವಾಗಿ ತುಂಬಾ ಜೀವಂತವಾಗಿರುವ ತಾಲ್ಲೂಕು. ಅಂಕೋಲೆಯ ಸಾಂಸ್ಕೃತಿಕ ಜಾಗೃತಿಗೆ ಸುವರ್ಣ ಮಹೋತ್ಸವವನ್ನು ಕಂಡ ಅಂಕೋಲೆಯ ಕರ್ನಾಟಕ ಸಂಘ ಪ್ರಧಾನವಾಗಿದೆ. ಅದರ ಜೊತೆಗೆ ವಿಷ್ಣು ನಾಯ್ಕರ ರಾಘವೇಂದ್ರ ಪ್ರಕಾಶನದ ವೈವಿಧ್ಯಮಯ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳು, ಹವ್ಯಾಸಿ ನಾಟಕಗಳು, ಯಕ್ಷಗಾನ ಬಯಲಾಟವೂ ಕೂಡ ಅಷ್ಟೇ ಮಹತ್ವದ್ದಾಗಿವೆ.

ಅಂಕೋಲೆಯ ಕರ್ನಾಟಕ ಸಂಘ ಕಳೆದ ಐದು ದಶಕಗಳಿಂದ ಕಾವ್ಯ ಸಾಹಿತ್ಯ ಗೋಷ್ಠಿಗಳನ್ನು ನಾಟಕ, ಸಂಗೀತ ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ ಸಾಂಸ್ಕೃತಿಕ ವಾತಾವರಣವನ್ನು ನಿರ್ಮಾಣ ಮಾಡುವುದರಲ್ಲಿ ಯಶಸ್ವಿಯಾಗಿದೆ. ಅಪರೂಪದ ನಾಟಕ ಪ್ರದರ್ಶನಗಳನ್ನು ಅಂಕೋಲೆಯ ಜನತೆಗೆ ನೀಡಿ ಮೆಚ್ಚುಗೆ ಪಡೆದಿದೆ.

ಅಂಕೋಲೆಯಲ್ಲಿ ಇದು ಎರಡನೆಯ ಸಾಹಿತ್ಯ ಸಮ್ಮೇಳನವಾದರೂ ಕೂಡ ಕರ್ನಾಟಕ ಸಂಘ ಹಾಗೂ ರಾಘವೇಂದ್ರ ಪ್ರಕಾಶನದಡಿಯಲ್ಲಿ ಜಿಲ್ಲಾ ಹಾಗೂ ರಾಜ್ಯಮಟ್ಟದ ಅತ್ಯಂತ ಮೌಲಿಕವಾದ ಸಾಹಿತ್ಯ ಸಮ್ಮೇಲನ, ವಿವಿಧ ಗೋಷ್ಠಿಗಳು, ಕಮ್ಮಟಗಳು, ನಡೆದು ಅಂಕೋಲೆಯಲ್ಲಿ ಸಾಹಿತ್ಯ – ಸಾಂಸ್ಕೃತಿಕ ವಾತಾವರಣವನ್ನು ಕಾದಿಟ್ಟುಕೊಂಡು ಬಂದಿವೆ.

ಅಂಕೋಲೆಯ ಸಾಂಸ್ಕೃತಿಕ ಜೀವಂತಿಕೆಗೆ ಇತರ ಸಂಘಟನೆಗಳೂ ಕಾರಣವಾಗಿರುವುದನ್ನು ಮರೆಯಲಾಗದು. ೪೦ರ ದಶಕದಲ್ಲಿ ಪ್ರಸಿದ್ದಿ ಪಡೆದ ಬಾಸಗೋಡದ ಸುಬೋಧ ಯಕ್ಷಗಾನ ಮಂಡಳಿ, ಲಲಿತ ಕಲಾಮಂಡಳಿ, ಅಂಬಾರಕೊಡಲದ ರಾಘವೇಂದ್ರ ರಂಗ ಸಂಘ, ಶೆಟಗೇರಿ ಸತ್ಯಾಗ್ರಹ ಸ್ಮಾರಕ ಶಿಕ್ಷಣ ಸಮಿತಿಯ ಯಕ್ಷರಂಗ ಶಿಕ್ಷಣ ವೇದಿಕೆ, ಶಿಕ್ಷಣ ಪ್ರತಿಷ್ಠಾನ ಕೊಗ್ರೆ, ಜನತಾ ಕ್ರಿಕೆಟ್ ಕ್ಲಬ್ ಬಾಸಗೋಡ, ಶ್ರೀ ವೆಂಕಟರಮಣ ದೇವ ಯಕ್ಷಗಾನ ಕಲಾಮಂಡಳಿ, ದಿನಕರ ಸಂಗೀತ ವಿದ್ಯಾಲಯ, ನೃತ್ಯ ಕಲಾಕೇಂದ್ರಗಳು ಕಾರಣವಾಗಿರುವುದನ್ನು ಗಮನಿಸಬೇಕಾಗುತ್ತದೆ. ಅಂಕೋಲಾದ ವೈಶಿಷ್ಟ್ಯಪೂರ್ಣ ಬಂಡಿಹಬ್ಬ, ಕಾರ್ತಿಕೋತ್ಸವ, ದೊಡ್ಡ ದೇವರ ತೇರು, ಗಣೇಶೋತ್ಸವ, ಸುಗ್ಗಿ ಹಬ್ಬ, ಕೋಲಾಟ, ಗುಮಟೆ ಪಾಂಗು, ಪುಗಡಿ, ತಾರ್ಲೆ, ಮರಕಾಲ ಕುಣಿತಗಳು, ಪಂಚವಾದ್ಯಗಳ ಸಡಗರ, ತಮ್ಮಟೆ, ಗುಮಟೆ, ರಣಹಲಗೆಗಳ ಅಬ್ಬರ, ಭಜನೆಯ ತಾಳ, ಡೋಲು, ಜಾಗಟೆಗಳ ನಾದ ಅಂಕೋಲೆಯ ಸಾಂಸ್ಕೃತಿಕ ಪರಿಸರವನ್ನು ಇನ್ನೂ ಬೆಚ್ಚಗಾಗಿಟ್ಟಿವೆ. ಅಂಕೋಲೆಯ ಸಾಹಿತ್ಯ ಚಟುವಟಿಕೆಗಳನ್ನು ಸಂಘಟಿಸಿ ಹೊಸ ಲೇಖಕರನ್ನು ಬೆಳಕಿಗೆ ತರುವ ಹಾಗೂ ಸಾಹಿತ್ಯಾಭಿರುಚಿಯನ್ನು ಬೆಳೆಸುವುದರಲ್ಲಿ ಅಂಕೋಲೆಯ ಪ್ರಕಾಶನ ಸಂಸ್ಥೆಗಳು ಮಹತ್ವದ ಪಾತ್ರಗಳನ್ನು ವಹಿಸಿವೆ. ಜನತಾ ಪ್ರಕಾಶನ, ವಿಷ್ಣು ನಾಯ್ಕರ ರಾಘವೇಂದ್ರ ಪ್ರಕಾಶನ, ಶಾಂತಾರಾಮ ನಾಯಕರ ಜಿನದೇವ ಪ್ರಕಾಶನ, ಮೋಹನ ಹಬ್ಬು ಅವರ ಪ್ರಜ್ಞಾ ಪ್ರಕಾಶನ, ನಾಗಪತಿ ಹೆಗಡೆಯವರ ನಮ್ರತಾ ಪ್ರಕಾಶನ, ಸಿದ್ಧಲಿಂಗಸ್ವಾಮಿ ವಸ್ತ್ರದ ಅವರ ಜಂಗಮ ಪ್ರಕಾಶನ, ಡಾ॥ ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನದ ಪ್ರಕಾಶನ, ಶೆಟಗೇರಿಯ ಸತ್ಯಾಗ್ರಹ ಸ್ಮಾರಕ ಶಿಕ್ಷಣ ಸಮಿತಿಯ ಪ್ರಕಾಶನ ಹಾಗೂ ವಿ. ಜೆ. ನಾಯಕರ ಪಟೇಲ ಜೋಗಿ ನಾಯಕ ಗ್ರಂಥಮಾಲೆ ಪ್ರಕಾಶನಗಳು ಪ್ರಮುಖವಾಗಿವೆ.

ಪತ್ರಿಕಾ ರಂಗದಲ್ಲಿ ಅಂಕೋಲೆ ಮಿಂಚಿದ್ದು ಹಳೆಯ ಕಥೆಯಾಗಿದೆ. ಹೊಸ ಲೇಖಕರನ್ನು ಬೆಳಕಿಗೆ ತಂದು ಪ್ರಸಿದ್ಧವಾದ ಪತ್ರಿಕೆ ಜನಸೇವಕ ಹಾಗೂ ವಿಷ್ಣು ನಾಯಕರ ಸಕಾಲಿಕ ಪತ್ರಿಕೆಗಳು ಸ್ಥಗಿತಗೊಂಡಿರುವುದು ತುಂಬಿಬಾರದ ಹಾನಿಯಾಗಿದೆ. ಅಂಕೋಲೆಯ ಧ್ವನಿಯನ್ನೇ ಕಳೆದುಕೊಂಡು ಅಪರಾಧಿ ಪ್ರಜ್ಞೆ ನಮ್ಮನ್ನು ಕಾಡುತ್ತಲಿದೆ. ಈ ನಡುವೆ ದಿ. ಆರ್. ಜಿ. ನಾಯಕರ 'ಅಭಯ' ಪತ್ರಿಕೆ ಮಿಂಚಿಮಾಯವಾಗಿದೆ. ಬಿ. ಹೊನ್ನಪ್ಪ ಅವರ 'ನುಡಿಜೇನು' ಮಾತ್ರ ಮುಂದುವರಿದಿದೆ.

ಹೋರಾಟದ ನೆಲ ಅಂಕೋಲೆ:

ಅಂಕೋಲೆ ಹಿಂದಿನಿಂದಲೂ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹೋರಾಟದ ನೆಲವಾಗಿ ಗುರುತಿಸಿಕೊಂಡು ಬಂದಿದೆ. ರಾಜ್ಯ ರಾಷ್ಟ್ರಮಟ್ಟದ ಎರಡು ಪ್ರಮುಖ ಹೋರಾಟಗಳು ನಡೆದ ಗಂಡುಮೆಟ್ಟಿನ ನೆಲವಿದು. ಸ್ವಾತಂತ್ರ್ಯ ಹೋರಾಟ ಹಾಗೂ ರೈತ ಚಳುವಳಿಗಳು ಜನಸಾಮಾನ್ಯರ ಬದುಕಿನ ಅವಿಭಾಜ್ಯ ಅಂಗವಾಗಿ, ದೇಶಕ್ಕೆ ಮಾದರಿಯಾಗಿ ಸಂಭವಿಸಿದವು. ಆದರೆ ಈ ಹೋರಾಟಗಳ ಹಿನ್ನೆಲೆಯಲ್ಲಿ ಸಾಹಿತ್ಯ ನಿರ್ಮಾಣವಾಗದೇ ಇರುವುದು ಕುತೂಹಲವೆನಿಸುತ್ತದೆ. ಈ ಹೋರಾಟಗಳು ಅಂಕೋಲೆಯ ಮುಂದಿನ ತಲೆಮಾರಿನವರನ್ನು ಗಾಢವಾಗಿ ಪ್ರಭಾವಿಸಿದಂತೆ ಕಾಣುವುದಿಲ್ಲ. ಹಾಗಂದ ಮಾತ್ರಕ್ಕೆ ಅಂಕೋಲೆಯಲ್ಲಿ ಹೋರಾಟಗಳೇ ನಡೆದಿಲ್ಲವೆಂದಲ್ಲ.

ಹಿಂದಿನ ಹೋರಾಟದ ಕೆಚ್ಚು – ಕಸುವು ಇಲ್ಲದಿದ್ದರೂ ಸಂದರ್ಭಗಳಿಗೆ ತಕ್ಕಂತೆ, ಅಂಕೋಲೆಯ ಜನತೆ ಜೆ.ಪಿ. ಆಂದೋಲನ, ಗೋಕಾಕ್ ಚಳುವಳಿ, ಸಾಕ್ಷರತಾ ಆಂದೋಲನ, ಪರಿಸರ ಚಳುವಳಿ, ಸರಾಯಿ ವಿರೋಧಿ ಆಂದೋಲನ, ಸೀಬರ್ಡ ನಿರಾಶ್ರಿತರ

ಹೋರಾಟ, ಅಂಗನವಾಡಿ ಕಾರ್ಯಕರ್ತೆಯರ ಹೋರಾಟ, ಈಗ ಚಾಲ್ತಿಯಲ್ಲಿರುವ ಅಂಕೋಲಾ–ಹುಬ್ಬಳ್ಳಿ ರೈಲು ಮಾರ್ಗದ ಹೋರಾಟಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದೆ.

ಪ್ರತಿಯೊಬ್ಬನಿಗೂ ತನ್ನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೇಲೆ ಅಭಿಮಾನ ಅತ್ಯಗತ್ಯ. ಇದನ್ನು ತಿರಸ್ಕರಿಸಿದಾತ ಮಾನವ ಜನಾಂಗಕ್ಕೆ ಹೊರತಾದವನು ಎಂಬುದು ಪ್ರಾಜ್ಞರ ಅಭಿಪ್ರಾಯ. ಆದರೆ ನಮ್ಮಲ್ಲಿ ಅನೇಕರಿಗೆ ಈ ಕಾವ್ಯ, ಕಥೆ, ಸಾಹಿತ್ಯ, ಸಮ್ಮೇಲನಗಳ ಬಗ್ಗೆ ಅಲರ್ಜಿ ಇದೆ. ಈ ಸಾಹಿತ್ಯ ಯಾಕಾಗಿ ಯಾರಿಗಾಗಿ? ಇದರಿಂದ ಹೊಟ್ಟೆ ತುಂಬುತ್ತದೆಯೇ? ಪ್ರಯೋಜನವೇನು? ಎಂದು ಕೇಳುವವರು ಹಾಗೂ ತಮ್ಮಷ್ಟಕ್ಕೆ ಕೇಳಿಕೊಳ್ಳುವವರು ಇದ್ದಾರೆ. ಕೆಲವರು ಅಜ್ಞಾನದಿಂದ, ಕೆಲವರು ವ್ಯಂಗ್ಯವಾಗಿ ಮತ್ತೆ ಕೆಲವರು ಅಸಹನೆಯಿಂದ, ಇನ್ನೂ ಕೆಲವರು ಇವರೇನು ಮಹಾ ಎಂಬ ಅಹಂಕಾರದಿಂದ ಸಿನಿಕರಾಗಿಕೇಳುವುದನ್ನು ಆಗಾಗ ನಾವು ಕೇಳಿಸಿಕೊಳ್ಳುತ್ತಿದ್ದೇವೆ. ಇಂಥ ಮಾತುಗಳು ನನ್ನನ್ನು ಕಾಡುತ್ತಲಿವೆ.

ಈ ಸಾಹಿತ್ಯ ಕಾವ್ಯ ಕಲೆಗಳ ಗೊಡವೆ ಇಲ್ಲದೆ ಬದುಕುತ್ತಿರುವ ಜನಸಮೂಹ ಇದ್ದೇ ಇದೆ. ಇದು ಕೇವಲ ಭೌತಿಕ ಸುಖಕ್ಕಾಗಿ ಹಾತೊರೆಯುವ ಜನರಿಗೆ ಬದುಕಿನ ಸಾಂಸ್ಕೃತಿಕಮುಖ ನಿಷ್ಪ್ರಯೋಜಕವಾಗಿ ಕಾಣಿಸುತ್ತಲಿದೆ. ನಮ್ಮ ಸಾಂಸ್ಕೃತಿಕ ಮೌಲ್ಯಗಳು ಕುಸಿದಿರುವುದರಿಂದ ಕಾವ್ಯ, ಸಂಗೀತ, ಸಾಹಿತ್ಯ ಕಲೆಗಳು ನಿಜವಾದ ಬೆಲೆಯನ್ನು ಕಳೆದುಕೊಂಡಿವೆ. ಇದು ಹೊಸ ಮಾತೇನಲ್ಲ. ನಮ್ಮನ್ನು ಆಳುವ ಬಹುತೇಕರಿಗೆ ಸಾಂಸ್ಕೃತಿಕ ವ್ಯಕ್ತಿತ್ವ ಶೂನ್ಯ. ಅಂಥವರ ದೃಷ್ಟಿಯಲ್ಲಿ ಈ ಕವಿ, ಸಾಹಿತಿ, ಕಲಾವಿದರು ನಿರುಪಯೋಗಿ ವ್ಯಕ್ತಿಗಳು. ಹಾಗಾಗಿ ಈ ಅನಂತಮೂರ್ತಿ ಅಂದರೆ ಯಾರು? ತೇಜಸ್ವಿ ಎಂದರೆ, ಚಂಪಾ ಎಂದರೆ ಯಾರು ಎಂದು ಕೇಳುವ ಮುಖ್ಯಮಂತ್ರಿಗಳು ಆಗಿ ಹೋಗಿದ್ದಾರೆ.

ನಮ್ಮ ಕೆಲವು ಸಾಹಿತಿಗಳು ತಮ್ಮ ವೈಯಕ್ತಿಕ ದ್ವೇಷ, ಅಸೂಯೆ, ಕೋಪ – ತಾಪಗಳ ಕೆಸರನ್ನು ಪರಸ್ಪರರು ತಮ್ಮ ಮುಖದ ಮೇಲೆ ಎರಚಿಕೊಳ್ಳುವ ಮೂಲಕ ಸಾಹಿತ್ಯದ ಘನತೆಗೆ ಕುಂದುಂಟು ಮಾಡಿ ಜನಸಾಮಾನ್ಯರ ದೃಷ್ಟಿಯಲ್ಲಿ ಈ ಸಾಹಿತಿಗಳು ರಾಜಕಾರಣಿಗಳಿಗಿಂತ ಕಡಿಮೆಯೇನಲ್ಲ ಎಂಬ ತಾತ್ಸಾರಕ್ಕೆ ಒಳಗಾಗಿರುವುದು ಕೂಡ ಸುಳ್ಳಲ್ಲ.

ಬದುಕು ಮತ್ತು ಸಮಾಜ ರಾಜಕೀಯದಿಂದ ಭೇದಿಸಿಕೊಂಡು ಇರುವುದಿಲ್ಲ. ಸಾಮಾಜಿಕ, ಸಾಂಸ್ಕೃತಿಕ ಪರಿವರ್ತನೆಗಳಿಗೆಲ್ಲಾ ಮೂಲ ರಾಜಕೀಯವಾದುದರಿಂದ ಸಾಹಿತಿಗಳಿಗೆ ರಾಜಕೀಯ ತ್ಯಾಜ್ಯವೇನೂ ಅಲ್ಲ. ಪ್ರತಿಯೊಬ್ಬ ಪ್ರಜ್ಞಾವಂತ ಕವಿ, ಸಾಹಿತಿಗೆ ಸಮಾಜದ ಬಗ್ಗೆ ಕ್ರಿಯಾತ್ಮಕ ಕಾಳಜಿ ಇದ್ದೇ ಇರುತ್ತದೆ. ಸುಶಿಕ್ಷಿತರೂ ಸಾಹಿತ್ಯಜ್ಞರೂ, ವೇದಾಂತಿಗಳು ರಾಜಕೀಯಕ್ಕೆ ಇಳಿಯಬೇಕೆಂದು ತತ್ವಜ್ಞಾನಿ 'ಪ್ಲೆಟೋ' ಹೇಳಿದರೆ, ಕಾವ್ಯವೇ ಮನುಕುಲದ ಗುರಿ ಎಂದು ಹೇಳುವ 'ಬ್ರಾಡಸ್ಕಿ' ರಾಜಕಾರಣಕ್ಕೆ ಸಾಹಿತ್ಯದ ದೀಕ್ಷೆ ಆಗಬೇಕು ಎನ್ನುತ್ತಾನೆ. ಆದರೆ ಈ ಸಾಹಿತ್ಯಕ್ಕೆ ರಾಜಕೀಯ ದೀಕ್ಷೆ ಆಗ್ತಾ ಇದೆ. ಇದನ್ನು ಮಾಡಿಕೊಂಡವರು ನಮ್ಮ ಸಾಹಿತಿಗಳೇ.

ಚಿಲಿ ದೇಶದ ಕವಿ 'ನೆರೂಡ' ತನ್ನ ಕವಿತೆ ಜನರ ರೊಟ್ಟಿಯಾಗಬೇಕೆಂದು ಹೇಳಿರುವನು. ಇದು ಕವಿಯ ಸಾಮಾಜಿಕ ಕಾಳಜಿಯನ್ನು ತಿಳಿಸುತ್ತದೆ. ಕವಿತೆಗಳನ್ನು ಬರೆಯುವುದರಿಂದ, ಓದುವುದರಿಂದ ಹಸಿವು ಹಿಂಗುವುದಿಲ್ಲ. ಸುಖ ಸಿಗುವುದಿಲ್ಲ, ಆದರೆ ಸಹೃದಯರ ಹೃದಯದ ಹಸಿವನ್ನು ಹಿಂಗಿಸಲು ಕಾವ್ಯಬೇಕು.

'ನಾವು ನಮ್ಮ ಸಾಮ್ರಾಜ್ಯವನ್ನಾದರೂ ಬಿಟ್ಟು ಕೊಟ್ಟೇವು ಆದರೆ ಷೇಕ್ಸ್‌ಪಿಯರನನ್ನು ಬಿಟ್ಟುಕೊಡಲಾರೆವು.' ಬ್ರಿಟಿಷ್ ರಾಜಕಾರಣಿ 'ಮೆಕಾಲೆ' ಹೇಳಿದ ಈ ಮಾತು ಸಾಹಿತ್ಯದ ಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತದೆ. ಜಗತ್ತಿನಲ್ಲಿ ಸೂರ್ಯ ಮುಳುಗದ ಸಾಮ್ರಾಜ್ಯವೆನಿಸಿದ್ದ ಬ್ರಿಟಿಷ್ ಚಕ್ರಾಧಿಪತ್ಯ ಕಡೆಗೂ ಮುಳುಗಿ ಹೋಯಿತು. ಆದರೆ ಷೇಕ್ಸ್‌ಪಿಯರ ಇಂಗ್ಲೆಂಡಿನ ಮಾತ್ರವಲ್ಲ, ವಿಶ್ವದ ಅಮೂಲ್ಯ ಆಸ್ತಿಯಾಗಿ ಇಂದಿಗೂ ಉಳಿದಿದ್ದಾನೆ. ಮುಂದೆಯೂ ಉಳಿಯುತ್ತಾನೆ. ಈ ಮಾತು ಜಗತ್ತಿನ ಎಲ್ಲಾ ಶ್ರೇಷ್ಠ ಸಾಹಿತಿಗಳಿಗೂ ಅನ್ವಯಿಸುತ್ತದೆ. ನಮ್ಮ ವ್ಯಾಸ, ವಾಲ್ಮೀಕಿ, ಪಂಪ, ಕುಮಾರವ್ಯಾಸ, ರಾಘವಾಂಕ, ಕುವೆಂಪು, ಬೇಂದ್ರೆ ಅವರಂಥ ಕವಿಚಕ್ರವರ್ತಿಗಳು ಚಿರಂತನ ನಕ್ಷತ್ರಗಳಾಗಿ ಪ್ರಜ್ವಲಿಸುತ್ತಿದ್ದಾರೆ.

ಕವಿ ರಾಘವಾಂಕನು ಜನ ಬದುಕಬೇಕೆಂದು ಕಾವ್ಯವನ್ನು ಬರೆಯುತ್ತೇನೆಂದು ಹೇಳಿದ್ದಾನೆ. ಇದು ಬಹು ದೊಡ್ಡ ಆದರ್ಶ. ದೈವದತ್ತವಾದ ಪ್ರತಿಭೆಯನ್ನು ಜನರ ಹಿತಕ್ಕೆ ಸಮರ್ಪಿಸುವುದು ಸಾಹಿತ್ಯಕ್ಕೆ ಮತ್ತು

ದೇಶಕ್ಕೆ ಶ್ರೇಯಸ್ಸನ್ನು ಉಂಟುಮಾಡುತ್ತದೆ. ಸಾಹಿತಿ ಓದುಗರ ಅಂತಃಕರಣವನ್ನು ಅರಳಿಸುತ್ತಾನೆ. ಬುದ್ಧಿಯನ್ನು ಬೆಳೆಸುತ್ತಾನೆ. ಯಾವ ಪಂಥದ ಸಾಹಿತ್ಯವೇ ಆಗಲಿ ಮನುಷ್ಯನನ್ನು ಬೆಳೆಸಬೇಕು. ಸಾರ್ಥಕವಾಗಿ ಬದುಕುವುದನ್ನು ಕಲಿಸುವ ಸಾಹಿತ್ಯ ಕೃತಿಯೇ ನಮಗೆ ಬೇಕು.

ವಾಲ್ಮೀಕಿಯ ಶೋಕ ರಾಮಾಯಣದ ಸೃಷ್ಟಿಗೆ ಕಾರಣವಾಯಿತು. ಆದರೆ ಶೋಕ ಅವನ ಸ್ವಂತ ಕಷ್ಟದಿಂದ ಬಂದದ್ದಲ್ಲ. ಒಂದು ಹಕ್ಕಿಯ ಸಾವಿನಿಂದ ಬಂದದ್ದು. ಮಹರ್ಷಿಯು ತನ್ನನ್ನು ಮರೆತು ಪುಟ್ಟ ಪಕ್ಷಿಯ ದುಃಖದಲ್ಲಿ ಒಂದಾದಾಗ ಮಹಾಕಾವ್ಯದ ಸೃಷ್ಟಿಗೆ ಕಾರಣವಾಯಿತು. ಮನುಷ್ಯ ತನ್ನನ್ನು ಮರೆತು ಜಗತ್ತಿನೊಡನೆ ಒಂದಾಗುವುದನ್ನು ಕಲಿಸುವ ಸಾಹಿತ್ಯ ನಮಗೆ ಬೇಕು. ಇತರರ ಕಷ್ಟ–ದುಃಖಗಳನ್ನು ತನ್ನದೆಂದು ಭಾವಿಸುವ ಮನೋಧರ್ಮವನ್ನು ಬೆಳೆಸುವ ಕೃತಿ ನಮಗೆ ಬೇಕು.

ಗಾಂಧೀಜಿ ಸಾಹಿತ್ಯದ ಕುರಿತು ಹೇಳುವ ಮಾತು ತುಂಬಾ ಮನನೀಯವಾಗಿದೆ. 'ಸಾಹಿತ್ಯ ಒಂದು ಆಟ ಆಗಬಾರದು. ಅದು ಜೀವನದ ಚೆಲುಮೆಗಳನ್ನು ಬತ್ತಿಸಬಾರದು. ಅರಮನೆಯಲ್ಲಿ ಕೂತು ಕಾಮವಿಕಾರದ ಕನಸಿನಲ್ಲಿ ಮುಳುಗಿ ತೇಲುವ ರಸಿಕರ ಕೈಯ ಬಟ್ಟಲು, ಪಕ್ಕದ ಹೆಣ್ಣು ಆಗಬಾರದು. ಸಾಹಿತ್ಯ ಸರ್ವಭೋಗ್ಯವಾಗಬೇಕು. ಸಾಹಿತ್ಯ ಹಣವಂತರಿಗೆ ಮಾತ್ರ ಸಿಗುವ ಕೇಸರಿ, ಕರ್ಪೂರ ಬೆರೆಸಿದ ದೇವರ ತೀರ್ಥ ಆಗಬಾರದು.'

ವಿಜ್ಞಾನದ ಪ್ರಗತಿಯಿಂದಾಗಿ ಗೊತ್ತಿಲ್ಲದ ಗುರಿಯ ಕಡೆ ಬದುಕು ವೇಗವಾಗಿ ಧಾವಿಸುತ್ತಿರುವಾಗ ಬದುಕು ಗೊಂದಲದ ಗೂಡು, ರಾಡಿಯಾಗಿರುವಾಗ ಜೀವನದ ಅಂಗವೇ ಆದ ಸಾಹಿತ್ಯಕ್ಕೆ, ಕಲೆಗೆ, ಸದಭಿರುಚಿಗೆ, ಸದಾಚಾರಕ್ಕೆ ಯಾವ ಸ್ಥಾನ? ಈ ಪ್ರಶ್ನೆ ಅನೇಕ ಪ್ರಜ್ಞಾವಂತರನ್ನು ಕಾಡುತ್ತಲಿದೆ.

ಸಾಹಿತ್ಯ ಮನುಷ್ಯನಿಗೆ, ಮನುಷ್ಯನಾಗಿರುವವನಿಗೆ ಸಂಬಂಧಪಟ್ಟ ಕ್ರಿಯೆ. ಅಲ್ಲದೇ ಯಾವುದೇ ಜಾತಿಗೆ ಆಗಲಿ, ಪಂಗಡಕ್ಕೆ ಆಗಲಿ, ವರ್ಗಕ್ಕೆ ಆಗಲಿ, ಸೀಮಿತವಾದುದಲ್ಲ. ತನ್ನ ವರ್ಗದ, ತನ್ನ ಪರಿಸರದ, ತನ್ನ ಸಂಸ್ಕೃತಿಯ ತನ್ನ ಭಾಷೆಯ ಮೂಲಕವೇ ಸಹಜವಾಗಿ ವ್ಯಕ್ತಿಗೊಳ್ಳುವ ಅನುಭವ ಎಲ್ಲ ಭಿನ್ನತೆಗಳನ್ನು ಮೀರಿ ನಿಲ್ಲುವಂತಹದ್ದು.

ನಮ್ಮ ಮನಸ್ಸುಗಳು ಬೆಳೆಯದೆ ನಮ್ಮ ಭಾಷೆಯೂ ಬೆಳೆಯುವುದಿಲ್ಲ. ಆದ ಕಾರಣ ಇದು ಮುಖ್ಯವಾಗಿ ಶಿಕ್ಷಣದ ಪ್ರಶ್ನೆ. ಸಾಹಿತ್ಯ ಭಾಷೆಯಲ್ಲಿ ನಡೆಯುವ ಕೆಲಸವಾದುದರಿಂದ ಆ ಭಾಷೆಯ ಬೆಳವಣಿಗೆಗಾಗಿ ಶಾಲೆ ಕಾಲೇಜುಗಳಲ್ಲಿ ಪರಿಣಾಮಕಾರಿಯಾಗಿ ಬೋಧಿಸಬೇಕಾದ ಅವಶ್ಯಕತೆ ಇದೆ.

ಸಾಹಿತ್ಯ ಮನಸ್ಸಿನ ಕೆಲಸ. ಓದುಗರ ಮನಸ್ಸಿನ ಮೇಲೆ ಮಾತ್ರ ಪ್ರಭಾವ ಬೀರಿ ಕ್ರಮೇಣ ಒಂದು ಜನಾಂಗದ ಮನಸ್ಸನ್ನು ಹೊಸ ಬದುಕಿಗೆ ಸಿದ್ಧಪಡಿಸುತ್ತದೆ. ಮನುಷ್ಯನ ಅನೇಕ ಕ್ರಿಯೆಗಳಲ್ಲಿ ಸಾಹಿತ್ಯವೂ ಒಂದು. ಸಾಹಿತ್ಯವು ಜೀವನವನ್ನು ಪರಿಶುದ್ಧಗೊಳಿಸುವ ವಿಶಿಷ್ಟಶಕ್ತಿಯಾಗಬೇಕೆಂದು ಹೇಳುತ್ತಾರೆ. ನಮಗಿಂದು ನಿಜವಾದ ಮನಸ್ಸನ್ನು ನಿರ್ಮಾಣ ಮಾಡುವ ಸಾಹಿತ್ಯಬೇಕು. ನಮಗಿಂದು ಮನುಷ್ಯ, ಡಾಕ್ಟರರು, ಇಂಜಿನಿಯರರು, ಶಿಕ್ಷಕರು, ರಾಜಕಾರಣಿಗಳು ಮನುಷ್ಯ ಅಧಿಕಾರಿಗಳು ಬೇಕಾಗಿದ್ದಾರೆ. ನಮ್ಮ ಮಕ್ಕಳಿಗೆ ಉತ್ತಮ ಭವಿಷ್ಯದ ಕನಸ್ಸನ್ನು ನೀಡುವ ಸಾಹಿತ್ಯ ಬೇಕಾಗಿದೆ. ಸಾಹಿತ್ಯ ನೆಳಲಲ್ಲ, ಅಣಕವಲ್ಲ, ಹಗರಣವಲ್ಲ, ಅದು ಬೆಳಕು, ಅದು ಚೈತನ್ಯ, ಅದು ಸತ್, ಅದರ ದುರುಪಯೋಗವು ಕ್ಷಮ್ಯವಲ್ಲ.

ಕನ್ನಡ ಭಾಷೆಗೆ ಹಿಂದೆಂದಿಗಿಂತಲೂ ಈಗ ಹೆಚ್ಚು ಅಪಾಯವಿದೆ. ಬಾಹ್ಯ ಸವಾಲುಗಳಿರುವುದರಿಂದ ಹೊಸ ತಲೆಮಾರಿನವರಿಗೆ ಕನ್ನಡದ ಎಚ್ಚರವನ್ನು ನಿರಾತಂಕವಾಗಿ ಮುಟ್ಟಿಸಲು ಇಂಥ ನುಡಿಹಬ್ಬದ ಅವಶ್ಯಕತೆ ಇದೆ. ಕನ್ನಡ ಪರಿಸರ ನಿರ್ಮಾಣ ಮಾಡುವ ಅವಶ್ಯಕತೆ ಎಂದೆಗಿಂತ ಇಂದು ಹೆಚ್ಚಾಗಿದೆ. ಕನ್ನಡಕ್ಕೆ ಬಾಹ್ಯ ಸವಾಲುಗಳಿಗಿಂತ ಒಳಗಿನ ಸವಾಲುಗಳೇ ಮಾರಕವಾಗಿವೆ. ನಮ್ಮ ಸುವರ್ಣ ಕರ್ನಾಟಕದ ವರ್ಷದ ಆರಂಭ ಒಂದನೆಯ ವರ್ಗದ ಮಗುವಿಗೆ ಇಂಗ್ಲೀಷ ಭಾಷೆಯ ಉಡುಗೊರೆಯೊಂದಿಗೆ ಆರಂಭವಾಗಿದ್ದು ತುಂಬಾ ಆತಂಕ ಹಾಗೂ ನೋವಿನ ಸಂಗತಿಯಾಗಿದೆ. ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಹಾಗೂ ಇಂಗ್ಲೀಷ್ ಕಲಿಕೆಯ ವಿಷಯದಲ್ಲಿ ಕನ್ನಡ ಸಾಹಿತಿಗಳಲ್ಲಿ ಒಮ್ಮತದ ಅಭಿಪ್ರಾಯ ರೂಪಿಸುವಲ್ಲಿ ವಿಫಲರಾದುದು ದುರ್ದೈವದ ಸಂಗತಿಯಾಗಿದೆ. ಸಾಹಿತಿಗಳ ಒಣ ಪ್ರತಿಷ್ಠೆಯ ನಿಲುವು ಕನ್ನಡಕ್ಕೆ ಬಗೆದ ದ್ರೋಹವಾಗಿದೆ.

ಇಂಗ್ಲೀಷ ಬೇಡವೆಂದು ಯಾರೂ ಹೇಳುತ್ತಿಲ್ಲ. ಇಂಗ್ಲೀಷ್ ಕಲಿಕೆ ಇನ್ನೂ ಚೆನ್ನಾದ ರೀತಿಯಲ್ಲಿ ಆಗಬೇಕಾದ ಅವಶ್ಯಕತೆ ಇದೆ. ಭಾಷೆಗಳ ಮೇಲಿನ ದ್ವೇಷ ಸಲ್ಲದು. ಗಾಂಧೀಜಿ, ವಿಶ್ವಕವಿ ರವೀಂದ್ರನಾಥ ಟಾಗೋರರೇ ಮೊದಲಾದ ಜಗತ್ತಿನ ಎಲ್ಲ ಶಿಕ್ಷಣ ತಜ್ಞರು ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡಬೇಕೆಂದು ಪ್ರತಿಪಾದಿಸಿದ್ದಾರೆ. ಅಂತರ ರಾಷ್ಟ್ರೀಯ ವಿಜ್ಞಾನಿ ಡಾ|| ಸಿ. ಎನ್.ಆರ್. ರಾವ್ ಅವರು ವಿಶ್ವವಿದ್ಯಾಲಯ ಪ್ರಾಧ್ಯಾಪಕರುಗಳಿಗೆ ಕನ್ನಡದಲ್ಲಿ ವಿಜ್ಞಾನವು ಪರಿಣಾಮಕಾರಿಯಾಗಿ ಬೋಧನೆ ಮಾಡಿ ಮನವರಿಕೆ ಮಾಡಿಕೊಟ್ಟರೂ ನಮಗೂ ನಮ್ಮನ್ನಾಳುವವರಿಗೂ ಅರಿವು ಮೂಡುತ್ತಿಲ್ಲ. ಅದರ ಜೊತೆಗೆ ಅನೇಕರಿಗೆ ಕಂಪ್ಯೂಟರ್ ಕಲಿಕೆಗೆ ಇಂಗ್ಲೀಷ ಬೇಕೆಂಬ ಭ್ರಮೆ. ಇಂಗ್ಲೀಷ ಗಂಧಗಾಳಿ ಇಲ್ಲದವರೂ ಸಹ ಕಂಪ್ಯೂಟರಿನಲ್ಲಿ ಕೆಲಸ ಮಾಡಬಲ್ಲ ಸಾಫ್ಟವೇರ್ ಇಸ್ರೇಲ್ ಕಂಪನಿಯ ಸಹಭಾಗಿತ್ವದಲ್ಲಿ ಸಿದ್ಧಪಡಿಸಲಾಗಿದೆ. ೨೦೦೯ ರ ಹೊತ್ತಿಗೆ ಭಾರತದಲ್ಲಿ ಅಧಿಕೃತವಾಗಿ ಮನ್ನಣೆ ಪಡೆದ ಎಲ್ಲ ಭಾಷೆಗಳಲ್ಲಿ ಈ ಸಾಪ್ಟವೇರ್ ಲಭ್ಯವಾಗಲಿದೆ. ಇತ್ತೀಚೆಗೆ ಮಾತೃಭಾಷೆಯಲ್ಲಿಯೇ ಮಾಹಿತಿ ತಂತ್ರಜ್ಞಾನ ನೀಡುವ ಹೊಸ ಸಾಪ್ಟವೇರ್ ಬಿಡುಗಡೆಯಾಗಿದೆ. ಕನ್ನಡಿಗರೇ ಕನ್ನಡವನ್ನು ಪ್ರೀತಿಸದೇ ಇದ್ದರೆ ಇನ್ನಾರು ಪ್ರೀತಿಸಬೇಕು? ನಾವು ಕನ್ನಡವನ್ನು ಪ್ರೀತಿಸುವುದೆಂದರೆ ನಮ್ಮನ್ನು ನಾವು ಪ್ರೀತಿಸಿದಂತೆ. ಆದುದರಿಂದಲೇ ಇಂಗ್ಲೆಂಡ್, ಅಮೇರಿಕಾ, ದುಬೈಗಳಲ್ಲಿ ಕನ್ನಡಕೂಟಗಳು ಅಸ್ತಿತ್ವಕ್ಕೆ ಬಂದು ವಿಶ್ವಕನ್ನಡ ಸಮ್ಮೇಳನಗಳು ನಡೆಯುತ್ತವೆ. ಯಾಕಾಗಿ? ನಾವು ಎಲ್ಲೇ ಇದ್ದರೂ ನಮ್ಮನ್ನು ಗುರುತಿಸಿಕೊಳ್ಳುವುದು ನಮ್ಮ ಮಾತೃಭಾಷೆ ಕನ್ನಡದಿಂದ ಮಾತ್ರ ಸಾಧ್ಯ. ಆದರೆ ಊರೂರು ತಿರುಗಿ ಮನೆದಾರಿಯನ್ನೇ ಮರೆತ ಕರ್ನಾಟಕದ ಕನ್ನಡಿಗರು ನಾವಾಗಿದ್ದೇವೆ.

ಐಟಿ, ಬಿಟಿ, ತಂತ್ರಜ್ಞಾನ, ವಿಜ್ಞಾನ ಕ್ಷೇತ್ರಗಳಲ್ಲಿರುವವರಿಗೂ ಸಾಹಿತ್ಯ ಸಂಗೀತದ ಸ್ಪರ್ಶಬೇಕು. ಮುಖ್ಯವಾಗಿ ಈ ಎಲ್ಲಾ ಉದ್ಯೋಗಗಳಲ್ಲಿ ಇಂದು ಒತ್ತಡ ಅಧಿಕವಾಗಿದೆ. ಈ ಒತ್ತಡದಿಂದ ಹೊರ ಬರಲು ಹೃದಯ ಹಾತೊರೆಯುತ್ತದೆ. ಹೀಗೆ ಹೊರ ಬರಲು ಸಾಹಿತ್ಯ ಒಂದು ರಹದಾರಿಯಾಗಿರುತ್ತದೆ.

ಕೊರತೆಗಳ ಅಂಕೋಲೆ

'ಹೆಸರಿಗೆ ಹೆಬ್ಬಾರ ಮಜ್ಜಿಗೆಗೆ ತತ್ವಾರ' ಎಂಬಂತಾಗಿದೆ. ಅಂಕೋಲೆಯ ಸ್ಥಿತಿ. ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ರಾಷ್ಟ್ರ ಮಟ್ಟದಲ್ಲಿ ಹೆಸರು ಪಡೆದ ತ್ಯಾಗವೀರರ ನೆಲವೆಂದು ಪ್ರಸಿದ್ಧಿ ಪಡೆದ ಅಂಕೋಲೆ ಇಂದು 'ಅಂಕೋಲಾ' ಹೆಸರಿನ ಮತಕ್ಷೇತ್ರವನ್ನೇ ಕಳೆದುಕೊಳ್ಳುತ್ತಲಿದೆ. ಅಂಕೋಲೆಯ ತ್ಯಾಗಕ್ಕೆ ಸಂದ ಬೆಲೆ ಇದು. ತಾಲೂಕನ್ನು ಇಡಿಯಾಗಿ ಉಳಿಸಿಕೊಂಡಿದ್ದೇವೆ. ಹೆಸರನ್ನು ಕಳೆದುಕೊಂಡಿದ್ದೇವೆ.

ಅಂಕೋಲೆ – ಹುಬ್ಬಳ್ಳಿಯ ರೈಲು ಮಾರ್ಗದ ಶತಮಾನದ ಬೇಡಿಕೆ ಇನ್ನೂ ಕೈಗೂಡಲಿಲ್ಲ. ನಿರಂತರ ಹೋರಾಟ ನಡೆದೇ ಇದೆ. ನಮ್ಮ ಕೂಗು ದಿಲ್ಲಿ ತಲುಪಲಿಲ್ಲ. ನಮ್ಮ ಜಿಲ್ಲೆಯ ನಾಯಕತ್ವ ಸೋತಿದೆ.

ಕೊಂಕಣ ರೇಲ್ವೆಗಾಗಿ ಅಂಕೋಲೆಯ ಜನತೆ ಭೂಮಿ ತ್ಯಾಗ ಮಾಡಿದೆ. ಆದರೆ ಯಾವುದೇ ಮಹತ್ವದ ರೇಲ್ವೆಗಳು ಅಂಕೋಲೆಯ ನಿಲ್ದಾಣದಲ್ಲಿ ನಿಲ್ಲುವುದೇ ಇಲ್ಲ. ತ್ಯಾಗ ನಮ್ಮದು ಲಾಭ ಇನ್ನೊಬ್ಬರದ್ದಾಗಿದೆ. ಇದಕ್ಕೂ ಹೋರಾಟ ಮಾಡಲಾಗಿದೆ. ಅಂಕೋಲೆ ಚಾರಿತ್ರಿಕ ಹೆಸರು ಉಪಯೋಗಕ್ಕೆ ಬರಲಿಲ್ಲ. ನೀರಿನ ಕೊರತೆ, ನೀರಿದ್ದರೂ ಅದರ ವ್ಯವಸ್ಥೆಯ ಕೊರತೆ ಅಂಕೋಲೆಯ ಜನರ ನಿತ್ಯ ಬವಣೆ, ನಮ್ಮ ನೆರೆಯಲ್ಲೇ ಹರಿಯುವ ಶಾಲ್ಮಲೆಯಲ್ಲಿ ನೀರಿದ್ದರೂ ಅಂಕೋಲೆಯ ಜನರಿಗೆ ನೀರಿನ ತತ್ವಾರ. ಹೀಗಿದ್ದರೂ ಈ ತ್ಯಾಗ ಭೂಮಿಯ ನೀರು ಸೀಬರ್ಡ್ ನೆಲೆಗೆ ಒಯ್ಯಲು ಹುನ್ನಾರ ನಡೆದಿದೆ. ಈ ಯೋಜನೆಯನ್ನು ಪ್ರೋತ್ಸಾಹಿಸಿ ಸಮರ್ಥಿಸುವವರೂ ಇದ್ದಾರೆ ಎನ್ನುವುದು ಖೇದದ ಸಂಗತಿಯಾಗಿದೆ.

ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಿದಂತೆ ದೇಶದ ರಕ್ಷಣೆಗಾಗಿ ಸೀಬರ್ಡ ನೌಕಾನೆಲೆಗೂ ಅಂಕೋಲೆಯ ಬಡ ಜನತೆ ತಮ್ಮ ಭೂಮಿ, ಮನೆ, ಮಠ, ಕುಲದೇವರುಗಳನ್ನು ತ್ಯಾಗ ಮಾಡಿ ನಿರಾಶ್ರಿತರಾಗಿ ಇಪ್ಪತ್ತು ವರ್ಷಗಳಾದರೂ ದೊರೆಯಬೇಕಾದ ಪರಿಹಾರ ಇನ್ನೂ ದೊರಕಿಲ್ಲ. ಪರಿಹಾರದ ಹಂಬಲದ ಕನಸಿನಲ್ಲಿಯೇ ಅನೇಕ ನಿರಾಶ್ರಿತರು ಸಾವಿಗೀಡಾಗಿದ್ದಾರೆ. ಇಲ್ಲಿಯೂ ನಿರಂತರ ಹೋರಾಟ ನಡೆದಿದೆ. ಅಮಾನೀಯವಾಗಿ ವರ್ತಿಸುತ್ತಿರುವ ಕೇಂದ್ರ ಸರಕಾರದ ರಕ್ಷಣಾ ಇಲಾಖೆಯ ವಿರುದ್ಧ ಯಾರಲ್ಲಿ ದೂರುವುದು? ನಮ್ಮ ಜಿಲ್ಲೆಯ ನೇತಾರರು ಎಲ್ಲಡಗಿದ್ದಾರೆ?

ಅಂಕೋಲಾ ತಾಲೂಕಿನ ರಸ್ತೆಗಳ ಸ್ಥಿತಿ, "ಎಲೆ ಎಲೆ ರಸ್ತೆ ಏನವ್ಯವಸ್ಥೆ" ಎಂದು ಕೇಳುವಂತಾಗಿದೆ. ರಾಘವಾಂಕ ಕವಿ 'ನಡೆವ ರೆಡಹದೇ ಕುಳಿತವ ರೆಡುಹರೆ' ಎಂದಂತೆ ಕುಳಿತರೂ ಎಡಹುವ ನಮ್ಮ ಹದಗೆಟ್ಟ ರಸ್ತೆಗಳು ನಮ್ಮ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿವೆ.

ಅತಿಕ್ರಮಣದ ತೆರವಿನಿಂದಾಗಿ ನಗರದ ರಸ್ತೆಗಳು ಅಗಲವಾಗಿ, ನಿರಾಳವಾಗಿ, ಹಾಯಾಗಿ ಓಡಾಡುಂತಾಗಿದೆ. ರಸ್ತೆಗಳು ಅಗಲವಾಗಿ ಸ್ವಾಗತಿಸಲು ಬಾಹುಗಳನ್ನು ಚಾಚಿ ನಿಂತಿವೆ. ಇದು ಆಗಬೇಕಾದ ಕಾರ್ಯವಾಗಿತ್ತು. ಆದರೆ ಈ ಅಗಲೀಕರಣದ ತಗಾದೆಯಿಂದ ಉದ್ಯೋಗ ಕಳೆದುಕೊಂಡು ನೊಂದವರಿಗಾಗಿ ಮಾನವೀಯ ದೃಷ್ಟಿಯಿಂದ ಪರ್ಯಾಯ ವ್ಯವಸ್ಥೆಯಾಗಬೇಕಾದುದು ಕೂಡ ಅಷ್ಟೇ ಅವಶ್ಯವಾಗಿದೆ. ಮಂಜೂರಾದ ಏತನೀರಾವರಿ ಯೋಜನೆಗಳು ನಾಪತ್ತೆಯಾಗಿವೆ. ನಮ್ಮ ತಾಲೂಕಿನ ಈ ಕೊರತೆಗಳನ್ನು ಪೂರೈಸಿಕೊಳ್ಳಲು ಸಾಹಿತ್ಯ ಕಲಾವಿದರಾದಿಯಾಗಿ ನಾಗರಿಕರೆಲ್ಲರೂ ಒಂದಾಗಿ ಹೋರಾಡಬೇಕಾದ ಸಂದರ್ಭ ಮುಂದಾಗಿ ಬಂದಿದೆ. ನಮ್ಮ ನಾಡು ನುಡಿ ಗಡಿ ಜಲ–ನೆಲಗಳ ಸಮಸ್ಯೆಗಳ ಪರಿಹಾರಕ್ಕಾಗಿ ಅಂಕೋಲೆಯ ಮಾದರಿಯಲ್ಲಿ ಸತ್ಯಾಗ್ರಹ ನಡೆಯಬೇಕೆಂದು ೭೪ ನೆಯ ಕನ್ನಡ ಸಾಹಿತ್ಯ ಸಂಮ್ಮೇಳನದ ಅಧ್ಯಕ್ಷರಾದ ಮಾನ್ಯಶ್ರೀ ಎಲ್. ಎಸ್. ಶೇಷಗಿರಿರಾವ್ ಅವರು ಕರೆ ನೀಡಿದ್ದಾರೆ. ಸತ್ಯಾಗ್ರಹ ಖ್ಯಾತಿಯ ಅಂಕೋಲೆಯವರಾದ ನಾವು ಸುಮ್ಮನಿರುವುದು ಶೋಭಿಸುವುದಿಲ್ಲ. ಗಾಂಧಿಗಿರಿಗೆ ಎಲ್ಲರೊಂದಾಗಿ ಹಾಡೋಣ ನಾಂದಿ !

ರಾಜ್ಯದ ಜಿಲ್ಲೆಯ ಸಾಹಿತ್ಯ ಧುರೀಣತ್ವ ಸಮರ್ಥವಾಗಿದ್ದರೆ ಕನ್ನಡ ನಾಡು ನುಡಿಯ ಏಳಿ ಸಾಧ್ಯವಾಗುವುದು, ರಾಜ್ಯಮಟ್ಟದಲ್ಲಿ ಪ್ರೊ. ಚಂದ್ರಶೇಖರ ಪಾಟೀಲರಂಥ ಸಮರ್ಥರ ನಾಯಕತ್ವ ನಮಗೆ ಲಭಿಸಿದೆ. ದಾರಿ ಕಿರಿದಾಗಿದ್ದಲ್ಲಿ ಅಗಲ ಪಡಿಸಿಕೊಂಡು ಕನ್ನಡದ ತೇರನ್ನು ಮುನ್ನೆಡೆಸಿ ಮೂರು ಯಶಸ್ವೀ ಸಮ್ಮೇಳನಗಳನ್ನು ಸಂಘಟಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ನಮ್ಮ ಜಿಲ್ಲೆಗೂ ಮಾನ್ಯ ರೋಹಿದಾಸ ನಾಯಕರಂಥ ಉತ್ಸಾಹಶೀಲರ ನಾಯಕತ್ವ ಕಳೆದ ಮೂರು ವರ್ಷಗಳಿಂದ ದೊರೆತಿರುವುದು ಜಿಲ್ಲೆಯ ಸಾಹಿತ್ಯಾಭಿಮಾನಿಗಳಿಗೆ ಹೊಸ ಹುರುಪನ್ನು ತಂದಿದೆ. ಅವರ ಅವಧಿಯಲ್ಲಿ ಜಿಲ್ಲೆಯ ಸಾಹಿತ್ಯ ಚಟುವಟಿಕೆಗಳು ತುಂಬಾ ಯಶಸ್ವಿಯಾಗಿ ನಡೆಯುತ್ತಲಿವೆ. ಜಿಲ್ಲೆಯ ಸಾಹಿತ್ಯ ಸೊಬಗು ಹೆಚ್ಚಿದೆ. ಇಂದು ಕನ್ನಡದ ಕೈಂಕರ್ಯಕ್ಕೆ ಇಂಥ 'ದಾಸ'ರ ಸೇವೆ ಅವಶ್ಯಕವಾಗಿದೆ.

'ಕವಿ ಋಷಿ ಸಂತರ ಆದರ್ಶದಲಿ ಸರ್ವೋದಯವಾಗಲಿ ಸರ್ವರಲಿ' ಎಂಬ ಕವಿವಾಣಿಯನ್ನು ನೆನಪಿಸಿಕೊಂಡು ಸರ್ವರಿಗೂ ಶುಭವನ್ನು ಹಾರೈಸುತ್ತ ನಾವೆಲ್ಲರೂ ಕನ್ನಡದ ಜಾಗೃತಿಯ ಹಣತೆಯನ್ನು ಹಚ್ಚಿ ಬೆಳಗೋಣ ಎಂದು ಕೇಳಿಕೊಳ್ಳುತ್ತ ತಮಗೆಲ್ಲರಿಗೂ ಧನ್ಯತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಿ ವಿರಮಿಸ ಬಯಸುತ್ತೇನೆ.

ಜೈ ಕರ್ನಾಟಕ। ಜೈ ಕನ್ನಡ।

ಅಂಕೋಲಾ ತಾಲೂಕಾ ತೃತೀಯ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೧೫-೧೨-೨೦೧೧

ಸಮ್ಮೇಳನದ ಸರ್ವಾಧ್ಯಕ್ಷರು

ನುಡಿಜೇನಿನ ಬಿ. ಹೊನ್ನಪ್ಪ



ಅಂಕೋಲೆಯ ತೃತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಶ್ರೀ ಬಿ. ಹೊನ್ನಪ್ಪ ಭಾವಿಕೇರಿ ಅವರು ಸಾಂಪ್ರದಾಯಿಕ ಕೃಷಿ ಮನೆತನದಿಂದ ಬಂದ ಜನಪದ ಕವಿ-ಗಾಯಕ. ಸಾಹಿತ್ಯ, ಸಂಗೀತ, ಕಲೆ, ಪತ್ರಿಕೋದ್ಯಮ, ಸಂಘಟನೆ ಮುಂತಾದ ಹಲವು ರಂಗಗಳಲ್ಲಿ ಗುರುತಿಸಿಕೊಂಡ ಬಿ. ಹೊನ್ನಪ್ಪ ಅವರು ೧೯೬೮ರಲ್ಲಿ 'ಕೇದಿಗೆ' ಎಂಬ ಕವನ ಸಂಕಲನ ಪ್ರಕಟಿಸಿದ್ದಾರೆ. ಮೈಸೂರಿನಲ್ಲಿ ಸಂಗೀತಾಭ್ಯಾಸ ಮಾಡಿದ ಹೊನ್ನಪ್ಪ ಅವರು ಭಾರತ ಸರಕಾರದ ಸಂಗೀತ ಮತ್ತು ನಾಟಕ ವಿಭಾಗದ ನಾಮಾಂಕಿತ ಕಲಾವಿದರಾಗಿ ರಾಜ್ಯದ ಹಲವು ಆಕಾಶವಾಣಿ ಹಾಗೂ ಸಮಾರಂಭಗಳಲ್ಲಿ ಕಾರ್ಯಕ್ರಮ ನೀಡಿ ತಮ್ಮ ಮಧುರ ಕಂಠಕ್ಕೆ ಹೆಸರಾದವರು.

ಗಾನಸುಂದರ, ಉತ್ತರ ಕನ್ನಡದ ಕೋಗಿಲೆ, ಶೃಂಗಾರ ನಟ ಮುಂತಾಗಿ ಬಿರುದಾಂಕಿತರಾದ ಹೊನ್ನಪ್ಪ ಅವರು ನಾಟಕದಲ್ಲಿಯೂ ತಮ್ಮ ಪ್ರತಿಭೆಯನ್ನು ದಾಖಲಿಸಿದ್ದಾರೆ. ನಾಟಕ ರಚಿಸಿ, ನಿರ್ದೇಶಿಸಿ, ಸ್ವತಃ ನಟರಾಗಿಯೂ ಮಿಂಚಿದ ಬಿ. ಹೊನ್ನಪ್ಪ ಅವರು ಬಾಲ ಕಬೀರ, ನಾರೀ ಪರೀಕ್ಷೆ, ದೇವದಾಸಿ, ಪ್ರಭಾವತಿ, ಹರಹರ ಮಹಾದೇವ ಮುಂತಾದ ನಾಟಕಗಳಿಂದ ಜನಪ್ರಿಯತೆ ಪಡೆದರು.

೧೯೭೦ರಿಂದ ಈವರೆಗೂ 'ನುಡಿಜೇನು' ಎಂಬ ಜಾನಪದ ಸೊಗಡಿನ ಪತ್ರಿಕೆಯನ್ನು ಪ್ರಕಟಿಸುತ್ತ ಬಂದ ಇವರಿಗೆ ೨೦೧೪ರಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ, ಕೆ. ಶ್ಯಾಮರಾವ್ ದತ್ತಿನಿಧಿ ಪ್ರಶಸ್ತಿ, ಡಾ. ಶಿವರಾಮ ಕಾರಂತ ಸದ್ಭಾವನಾ ರಾಜ್ಯ ಪ್ರಶಸ್ತಿಗಳು ಲಭಿಸಿವೆ.

ಅಂಕೋಲಾ ಕರ್ನಾಟಕ ಸಂಘ ಹಾಗೂ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಉತ್ತರ ಕನ್ನಡ ಜಿಲ್ಲಾ ವೈಚಾರಿಕ ವೇದಿಕೆಯ ಗೌರವಾಧ್ಯಕ್ಷರಾಗಿ ಬಹುಮುಖ ಸೇವೆ ಸಲ್ಲಿಸಿದ ಹೊನ್ನಪ್ಪ ಅವರು ೧೫-೧೨-೨೦೧೧ರಂದು ತಮ್ಮ ೭೪ನೇ ವಯಸ್ಸಿನಲ್ಲಿ ತಾಲೂಕಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗುವುದರೊಂದಿಗೆ ಜನಪದ ಕಂಪಿನೊಂದಿಗೆ ಸಮ್ಮೇಳನವನ್ನು ಸುಮಧುರವಾಗಿಸಿದರು.

ಅವರ ಕವನದ ಸಾಲುಗಳು ಹೀಗಿವೆ :

ಕಾರವಾರದ ಚಲುವ ಕೇದಿಗೆ
ಬಹುದಿನವು ಸಂದಿದೆ ನೋಡದೆ
ಕಡಲ ತೀರದ ಉಸುಕು ದಿನ್ನೆಗೆ
ಹಸುರಾದ ಗಿಡದಲ್ಲಿ ಶೋಭಿಪೆ
ಹುಡಿ ಹಾರುತಿಹ ಮೈಯ ಬಿಳುಪು
ಎಲ್ಲಿ ಹೋದರು ಮರೆಯೆ ನೆನಪು.

ಶ್ರೀ ಬಿ. ಹೊನ್ನಪ್ಪ ಅವರ ಸರ್ವಾಧ್ಯಕ್ಷೀಯ ಭಾಷಣ

ಬಾರಿಸು ಕನ್ನಡ ಡಿಂಡಿಮವಾ
ಓ ಕರ್ನಾಟಕ ಹೃದಯ ಶಿವಾ ॥ಬಾರಿಸು॥

ಸತ್ತಂತಿಹರನು ಬಡಿದೆಚ್ಚರಿಸು
ಕಚ್ಚಾಡುವರನು ಕೂಡಿಸಿ ಒಲಿಸು
ಹೊಟ್ಟೆಯ ಕಿಚ್ಚಿಗೆ ಕಣ್ಣೀರ ಸುರಿಸು
ಒಟ್ಟಿಗೆ ಬಾಳುವ ತೆರದಲಿ ಹರಸು ॥ಬಾರಿಸು॥

ಕ್ಷಯಿಸೆ ಶಿವೇತ್ತರ ಕೃತಿ ಕೃತಿಯಲ್ಲಿ
ಮೂಡಲಿ ಮಂಗಲ ಮತಿ ಮತಿಯಲ್ಲಿ
ಕವಿ ಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ ॥ಬಾರಿಸು॥

– ಕುವೆಂಪು

ಸ್ನೇಹಿತರೇ....

ಸಾವಿರಾರು ವರ್ಷಗಳ ಶ್ರೇಷ್ಠ ಸಂಸ್ಕೃತಿ, ಶ್ರೀಮಂತ ಕಲೆ, ಅನುಪಮ ಸಾಹಿತ್ಯ ಭಂಡಾರ ಹೊಂದಿರುವ ಕರ್ನಾಟಕದ ವೈಭವವನ್ನು ದೇಶದ ಉದ್ದಗಲಕ್ಕೂ ಮೆರೆಸಿದ ಹಿರಿಮೆ ಕನ್ನಡಿಗರದು. ಸಾಮಾಜಿಕ ಸಮಾನತೆ ಹೃದಯ ವೈಶಾಲತೆಯ ಮೂಲಸೆಲೆಯಲ್ಲಿ ಮೂಡಿಬಂದ ಈ ನಾಡಿನ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳು ಸದಾ ಪ್ರಸ್ತುತ. ಅವು ಮನುಕುಲಕ್ಕೆ ನೀಡಿದ ಅಭೂತಪೂರ್ವ ಕೊಡುಗೆಗಳು.

ದೇಶದ ಕಲೆ ಸಾಹಿತ್ಯ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನಗಳಂತಹ ಮಹತ್ತರ ರಂಗಗಳಲ್ಲಿ ಮಹೋನ್ನತ ಕಾಣಿಕೆ ನೀಡಿದ ಕರ್ನಾಟಕವನ್ನು ಮತ್ತಷ್ಟು ಸಮೃದ್ಧಗೊಳಿಸುವುದು ಕನ್ನಡಿಗರ ಕರ್ತವ್ಯವಾಗಿದೆ. ಇದಕ್ಕಾಗಿ ದೃಢ ಸಂಕಲ್ಪ ತೊಡಬೇಕಾಗಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಯತ್ತ ಗಮನಹರಿಸಬೇಕಾದ ಅವಶ್ಯಕತೆ ಇದೆ. ಇಂದಿನ ಯುವ ವಲಯ ಮೈ ಕೊಡವಿ ನಿಂತರೆ ಇದು ಅಸಾಧ್ಯದ ಕೆಲಸವೇನಲ್ಲ!

ಉತ್ತರ ಕನ್ನಡ ಜಿಲ್ಲೆಯ ನೈಸರ್ಗಿಕ ಚೆಲುವು ಪ್ರಾಕೃತಿಕ ಸಂಪತ್ತನ್ನು ಕಂಡು ಸಂತಸಗೊಂಡ ಚುಟುಕು ಬ್ರಹ್ಮ ಖ್ಯಾತಿಯ ದಿನಕರ ದೇಸಾಯಿ 'ಹುಟ್ಟುವುದಾದರೆ ಇನ್ನು ಇನ್ನು ಉತ್ತರ ಕನ್ನಡದಲ್ಲೆ ಅನ್ನು' ಎಂದು ಜನ್ಮಕೊಟ್ಟ ಜಿಲ್ಲೆಯ ನೆಲದ ಋಣ ಎಷ್ಟು ಹಿರಿದಾಗಿದೆ ಎಂದು ಹೇಳಿರುವುದು ಸದಾ ಸ್ಮರಿಸುವಂತಹದು.

ಸುಂದರ ಕರಾವಳಿ, ಹಸಿರುಡುಗೆ ತೊಟ್ಟು ಸಂಭ್ರಮಿಸುತ್ತಿರುವ ಸಹ್ಯಾದ್ರಿ ಪರ್ವತ ಶ್ರೇಣಿಗಳ ಸಾಲು, ಗಿರಿ ಶಿಖರಗಳಿಂದ ಕೂಡಿರುವ ದಟ್ಟಡವಿ, ಮಲೆನಾಡು ಬಯಲುನಾಡು ಹೀಗೆ ವೈವಿಧ್ಯತೆಯ ಲಕ್ಷಣದೊಂದಿಗೆ ರಾಜ್ಯದಲ್ಲಿ ವಿಭಿನ್ನ ಪ್ರಾಕೃತಿಕ ರೂಪ ಹೊಂದಿರುವ ಉತ್ತರ ಕನ್ನಡ ಜಿಲ್ಲೆ ಸಾಂಸ್ಕೃತಿಕ, ಪ್ರಾಕೃತಿಕ ಖನಿಜ ಸಂಪತ್ತುಗಳೊಂದಿಗೆ ದೇಶದಲ್ಲೇ ಗುರುತಿಸಿಕೊಂಡು ತನ್ನ ಹಿರಿಮೆಯನ್ನು ಮೆರೆದಿದೆ. ಅಂತೆಯೇ ವಿವಿಧತೆಯ ಬದುಕಿನ ವಿಭಿನ್ನ ಜನಾಂಗಗಳೊಂದಿಗೆ ಸಾಮರಸ್ಯ ಸಾರುತ್ತಿರುವ ಜಿಲ್ಲೆ ಉತ್ತರ ಕನ್ನಡ.

ದೇಶದಾದ್ಯಂತ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು ತನ್ನ ಶೂರತನದ ರಾಷ್ಟ್ರಪ್ರೇಮದಿಂದ ಹೋರಾಡಿ ಭಲೆ ಎನಿಸಿಕೊಂಡ ಉತ್ತರ ಕನ್ನಡ ಜಿಲ್ಲೆಯನ್ನು 'ಕರ್ನಾಟಕದ ಕಾಶ್ಮೀರ' ಎಂದು ಕರೆದವರು ಕವಿ ರವೀಂದ್ರನಾಥ ಠಾಗೋರ. ಇಲ್ಲಿಯ ಮೆಣಸು, ಯಾಲಕ್ಕಿ, ಸಾಂಬಾರ ಬೆಳೆಗಳನ್ನು ಕಂಡು ಬ್ರಿಟೀಷರು ಮೆಣಸಿನ ರಾಣಿ, ಸಾಂಬಾರ ರಾಣಿ ಎಂದು ವರ್ಣಿಸಿದರು. ಐತಿಹಾಸಿಕ ಕೋಟೆಕೊತ್ತಲಗಳು, ದೇವಾಲಯಗಳು, ಪೌರಾಣಿಕ ಪ್ರಸಿದ್ದ ಸ್ಥಳಗಳು ಸೊಬಗಿನಿಂದ ಕೂಡಿದ ತೀರ, ಪ್ರವಾಸಿಗರನ್ನು ಸದಾ ಆಕರ್ಷಿಸುತ್ತಿವೆ. ಆದರೆ ಆಳುವ ಸರಕಾರ ಪ್ರವಾಸೋದ್ಯಮವನ್ನು ಕಡೆಗಣಿಸಿರುವುದು ಮಾತ್ರ ಶೋಚನೀಯ ಸಂಗತಿಯಾಗಿದೆ. ಭಾಷಣ ಮಾಡುವುದರಿಂದ ಪತ್ರಿಕಾ ಪ್ರಕಟಣೆಗಳನ್ನು ಕೊಡುವುದರಿಂದ ಕಾರ್ಯವಾಗುವುದೆಂಬುದನ್ನು ಗಮನಿಸಬೇಕು.

ಜಿಲ್ಲೆಯಲ್ಲಿ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳು ಬಹಳಷ್ಟು ಕಾಣುತ್ತಿವೆ. ಸೀಬರ್ಡ

ನೌಕಾನೆಲೆ, ಕೈಗಾ ಅಣುವಿದ್ಯುತ್ ಸ್ಥಾವರ, ಕಾಳಿ ಜಲ ವಿದ್ಯುತ್, ಕೊಂಕಣ ರೈಲ್ವೆ ಯೋಜನೆಗಳಿಂದಾಗಿ ಜಿಲ್ಲೆ ದೇಶದ ಗಮನ ಸೆಳೆಯುತ್ತಿದೆ. ಆದರೆ ಈ ಯೋಜನೆಗಳಿಂದ ಉದ್ಭವಿಸುವ ಸಮಸ್ಯೆಗಳಿಗೆ ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆಯೇ ಎನ್ನುವುದೇ ಪ್ರಶ್ನೆಯಾಗಿದೆ.

ನಮ್ಮದು ಕೃಷಿ ಪ್ರಧಾನ ದೇಶ. ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರಧಾನ್ಯ ಬೆಳೆಯುತ್ತಿರುವುದು ತೀರಾ ಅಗತ್ಯವಾಗಿದೆ. ಸರಕಾರ ಇದನ್ನು ವ್ಯವಸ್ಥಿತ ರೀತಿಯಲ್ಲಿ ನಿಭಾಯಿಸಬೇಕಾಗಿದೆ.

ಮೀನುಗಾರಿಕೆ ಈ ಜಿಲ್ಲೆಯ ಪ್ರಮುಖ ಕಸುಬು ಮತ್ತು ದೊಡ್ಡ ಉದ್ಯಮ. ಜಿಲ್ಲೆಯು ೧೪೪ ಕಿ.ಮೀ ಉದ್ದದ ಸಮುದ್ರತೀರ ಹೊಂದಿದ್ದು ಸುಮಾರು ೮೦೦೦ ಜನ ಮೀನುಗಾರರಿದ್ದಾರೆ. ೧೩೫ ಫರ್ಸಿನ ದೋಣಿ, ೫೬೦ ಗಿಲ್‌ನೆಟ್. ಸುಮಾರು ೬೫೦೦ ನಾಡದೋಣಿಗಳ ಸಹಾಯದಿಂದ ಮೀನುಹಿಡಿಯುವ ಕಾರ್ಯ ನಡೆಯುತ್ತಿದೆ. ವಿದೇಶಗಳಿಗೆ ರಫ್ತು ಮಾಡಿ ವಿದೇಶಿ ವಿನಿಮಯಗಳಿಸಲಾಗುತ್ತಿದೆ.

ಇಂದಿನ 'ನುಡಿಹಬ್ಬ' ಕ್ಕಾಗಮಿಸಿದ ಕನ್ನಡದ ಕುಲಬಾಂಧವರೇ, ಸಂಗೀತ ಸಾಹಿತ್ಯ ಕಲಾಪ್ರೇಮಿಗಳೇ ಹಾಗೂ ಎಲ್ಲಾ ಹಿರಿಕಿರಿಯ ಸಾಹಿತಿಗಳೇ, ಮಾಧ್ಯಮ ಮಿತ್ರರೇ ತಮಗೆಲ್ಲರಿಗೂ ನನ್ನ ಅನಂತ ವಂದನೆಗಳು ಹಾಗೂ ಹಾರ್ದಿಕ ಶುಭಾಶಯಗಳನ್ನು ಅರ್ಪಿಸುತ್ತಿದ್ದೇನೆ. ಅಂಕೋಲೆಯ ನನ್ನೆಲ್ಲಾ ಸಂಗೀತ, ಸಾಹಿತ್ಯ ಕಲಾ ಮಿತ್ರರೂ, ಅಭಿಮಾನಿವಲಯದವರು, ಸಹೃದಯರು ತೋರಿಸಿದ ಪ್ರೀತಿ ವಿಶ್ವಾಸದ ಮುಂದೆ ನಾನು ಗೌಣ ಎಂದು ಭಾವಿಸಿದರೂ ಇದೊಂದು ನನಗೆ ಕೊಟ್ಟ ಗೌರವ ಎಂದು ತಿಳಿದು ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಿನಮ್ರತೆಯಿಂದ ಸ್ವೀಕರಿಸಿದ್ದೇನೆ. ಇಂದು ಇಂತಹ ಸಾಹಿತ್ಯ ಸಮ್ಮೇಳನಗಳ ಅವಶ್ಯಕತೆ ಇದೆಯೇ? ಎಂಬುದು ಬಹು ಕಡೆಯಿಂದ ಕೇಳಿ ಬರುತ್ತಿದೆ. ವ್ಯವಸ್ಥಿತವಾಗಿ ಇಂತಹ ಹಬ್ಬಗಳು ಎಲ್ಲೇ ಆಗಲಿ, ಯಾರೇ ನಡೆಸಲಿ. ನಮ್ಮ ಧ್ಯೇಯ ಧೋರಣೆಗೆ ಧಕ್ಕೆಯಾಗದೆಂದು ನಾನು ಭಾವಿಸಿದ್ದೇನೆ. ಈ ಪಠ್ಯಕ್ರಮದಿಂದ ನಾನು ಸಂತೋಷದೊಂದಿಗೆ ಸಂಭ್ರಮಿಸುತ್ತಿದ್ದೇನೆ. ಆದರೆ ಇಲ್ಲಿ ಸಣ್ಣದೊಂದು ನೋವು ನನ್ನ ಮನವನ್ನು ಕಲಕುತ್ತಿದೆ. ಅಂಕೋಲೆಯ ಮೊದಲನೆಯ ಸಮ್ಮೇಳನದ ಅಧ್ಯಕ್ಷರಾಗಿ ಸಮರ್ಥ ರೀತಿಯಲ್ಲಿ ಕಾರ್ಯ ನಿರ್ವಹಿಸಿದ ಕನ್ನಡದ ಚಿಂತಕ, ಸಾಹಿತಿ, ಕವಿ ಶ್ಯಾಮ ಹುದ್ದಾರ ಇಂದು ನಮ್ಮೊಡನೆ ಇಲ್ಲದಿರುವುದು. ಅವರು ಬಹು ವರ್ಷಗಳಿಂದ ಅಂಕೋಲೆಯಲ್ಲಿಯೇ ಇದ್ದು ಅಂಕೋಲೆಯನ್ನು ಬಹು ರೀತಿಯಲ್ಲಿ ಪ್ರೀತಿಸುತ್ತಿದ್ದರು. ಆತ್ಮೀಯ ಸ್ನೇಹಿತರಾದ ಅವರಿಗೆ ನನ್ನ ನುಡಿನಮನಗಳನ್ನು ಸಲ್ಲಿಸುತ್ತಾ ಎರಡನೆಯ ಸಮ್ಮೇಳನದ ಅಧ್ಯಕ್ಷರಾಗಿ ಸಾಂಗವಾಗಿ ಕಾರ್ಯ ನಿರ್ವಹಿಸಿದ ನನ್ನ ಆತ್ಮೀಯ ಸ್ನೇಹಿತರಾದ ಸಾಹಿತಿ, ಕವಿ, ಲೇಖಕ, ಚಿಂತಕರಾದ ಶಾಂತಾರಾಮ ನಾಯಕ, ಹಿಚ್ಕಡ ಅವರು ನನ್ನ ಜೊತೆಯಲ್ಲಿಯೇ ಇದ್ದಾರೆ. ಅವರಿಗೂ ನನ್ನ ನಮನಗಳು.

ಸಂಗೀತ ಸಾಹಿತ್ಯ ಶಿಕ್ಷಣ ಕಲಾ ಸಾಂಸ್ಕೃತಿಕ ದೇವನಗರಿ ಅಂಕೋಲೆ
ನೆಲ ಜಲ ಫಲ ಬಲ ಥಲ ಸರಳತೆ ಸೌಜನ್ಯತೆ ಇಲ್ಲುಂಟು ದೇವಲೀಲೆ
ಸುಂದರ ಕಡಲು ತುಂಬಿದ ಒಡಲು ಎಲ್ಲೆಲ್ಲೂ ಪರಿ ಸರ ಕಾಂತಿ
ಚಿಕ್ಕ ಚೊಕ್ಕ ಈ ಊರ ತುಂಬಾ ದೇವಮಂದಿರ ನೆಲೆಸಿದೆ ಶಾಂತಿ.

ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಬಾರ್ಡೋಲಿ ಎಂದು ಕರೆಯಿಸಿಕೊಂಡಿರುವ ಅಂಕೋಲಾ ರಾಜ್ಯದಲ್ಲಿಯೇ ವಿಶಿಷ್ಟವಾದ ತಾಲೂಕು. ಈ ತಾಲೂಕಿನ ಜನ ಈ ದೇಶ ಸ್ವತಂತ್ರವಾಗಬೇಕೆನ್ನುವ ಕನಸಿನಲ್ಲಿ ತಮ್ಮ ಸರ್ವಸ್ವವನ್ನು ತ್ಯಾಗಮಾಡಿ ಹೋರಾಡುವ ಮೂಲಕ ರಾಷ್ಟ್ರದಲ್ಲಿಯೇ ಈ ತಾಲೂಕಿಗೆ ವಿಶಿಷ್ಟ ಸ್ಥಾನಮಾನ ತಂದು ಕೊಟ್ಟಿದ್ದಾರೆ. ಸ್ವಾತಂತ್ರೋತ್ತರದ ಆರು ದಶಕದ ಅವಧಿಯಲ್ಲಿ ಈ ತಾಲೂಕು ಶೈಕ್ಷಣಿಕವಾಗಿ ಸಾಹಿತ್ಯಕ ದೃಷ್ಟಿಯಿಂದ ಗಮನಾರ್ಹ ಕೊಡುಗೆ ನೀಡಿದೆ. ಉತ್ತರ ಕನ್ನಡ ಜಿಲ್ಲೆಯ ಕೇಂದ್ರಸ್ಥಾನ ಕಾರವಾರದ ದಕ್ಷಿಣಕ್ಕೆ ಅಂಕೋಲೆ ೩೪ ಕಿ.ಮೀ ಅಂತರದಲ್ಲಿದೆ. ಅಂಕೋಲೆ ಹೆಸರಿನ ಕುರಿತು ಸಾಕಷ್ಟು ಮತಭೇದಗಳಿವೆ. ಕೆಲವು ವಿದ್ವಾಂಸರು ಅಂಕಲೇಶ್ವರ ದೇವಾಲಯದಿಂದ ಈ ಹೆಸರು ಬಂದಿದೆ ಎನ್ನುತ್ತಾರೆ. ಆದರೆ ಈ ದೇವಾಲಯ ಅಂಕೋಲೆಯಲ್ಲಿ ಈಗಿಲ್ಲ. ಹಲವು ಶತಮಾನಗಳ ಹಿಂದೆ ಗಂಗಾವಳಿ ನದಿಗೆ 'ಅಂಕಲೇಶ್ವರ' ನದಿಯೆಂಬ ಹೆಸರಿತ್ತು ಎಂದು ಸಹ ಹೇಳಲಾಗುತ್ತಿದೆ. ಅಂಕೋಲೆ ಎಂಬ ವೃಕ್ಷದಿಂದ ಈ ಹೆಸರು ಬಂತೆಂಬ ಮಾತು ಇದೆ. ಈ ಮರವನ್ನು ಹಾಲಕ್ಕಿ ಒಕ್ಕಲಿಗರು ಪವಿತ್ರ ಎಂದು ಭಾವಿಸಿದ್ದರು ಎಂದೂ ಸಹ ಹೇಳಲಾಗುತ್ತಿದೆ.

ಅಂಕೋಲೆಯಲ್ಲಿ ಸರ್ಪಮಲ್ಲಿಕ ಕಟ್ಟಿಸಿದ ಕೋಟೆ ಇದೆ. ಇದು ತುಂಬಾ ವಿಶಾಲವಾಗಿದ್ದು ರಾಜರ

ಅನುಕೂಲಕ್ಕೆ ಬೇಕಾದ ಸಕಲ ಸೌಲಭ್ಯಗಳು ಇಲ್ಲಿ ಇದ್ದುದನ್ನು ನಾವೂ ನೋಡಿದ್ದೇವೆ. ಇಂದು ಅದು ಕೆ.ಎಲ್.ಇ. ಸೊಸೈಟಿಯ ಶಿಕ್ಷಣ ಸಂಸ್ಥೆಯ ಸ್ವಾಧೀನದಲ್ಲಿದೆ. ಈ ಕೋಟೆಯಲ್ಲಿ ಬೇರೆ ರಾಜ್ಯದ ಪ್ರತಿನಿಧಿಗಳು ನೆಲೆಸಿ ಸುತ್ತಲಿನ ಪ್ರದೇಶದ ಜವಾಬ್ದಾರಿ ನಡೆಸಿದರಲ್ಲದೆ ಅಂಕೋಲೆಯ ಆರಸರಾರು ಈ ಪ್ರದೇಶವನ್ನು ಆಳಿಲ್ಲ. ಬಿಜಾಪುರದ ಆದಿಲ್‌ಶಾಹಿಯರ ಆಳ್ವಿಕೆಯಲ್ಲಿ ವಿಜಯನಗರದ ಪತನದ ನಂತರ ಇಲ್ಲಿಯ ಕೋಟೆ ರಚಿಸಲ್ಪಟ್ಟು ಅವರ ಸುಬೇದಾರರೆ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಅಂಜದೀವ್ ಸಹ ಆಗ ಇವರ ಪ್ರಭಾವಕ್ಕೊಳಗಾಗಿತ್ತು. ಹೀಗಾಗಿ ಈ ಪ್ರದೇಶದಲ್ಲಿ ಮುಸಲ್ಮಾನರು ಬಹು ಸಂಖ್ಯೆಯಲ್ಲಿ ನೆಲಸುವಂತಾಯಿತು. ಇಂದಿಗೂ ಇಲ್ಲಿ ಇಸ್ಲಾಂಪುರವೆಂಬ ಭಾಗವೇ ಇದೆ. ಇದನ್ನು ಸೋಂದೆಯ ಅರಸರು ವಶಪಡಿಸಿಕೊಂಡರು. (೧೬೮೭) ಹೀಗೆ ಅಂಕೋಲೆಯ ಹೆಸರಿನ ಹಿನ್ನೆಲೆಯ ಐತಿಹಾಸಿಕ ಸಂಗತಿಗಳ ಕುರಿತು ಭಿನ್ನಾಭಿಪ್ರಾಯ ಊಹಾಪೋಹಗಳಿವೆ.

ಅಂಕೋಲಾ ತಾಲೂಕು ವಿಸ್ತೀರ್ಣದಲ್ಲಿ ೯೧೯ ಚ.ಕಿ.ಮೀ ವಿಸ್ತಾರವಾಗಿದ್ದು ಕರಾವಳಿ ಮತ್ತು ಮಲೆನಾಡಿನಂತಹ ಪ್ರದೇಶದ ವಿಶಿಷ್ಟ ಸಂಗಮ. ತಾಲೂಕಿನಲ್ಲಿ ೮೬ ಗ್ರಾಮಗಳು. ೪ ಹೋಬಳಿಗಳು ಬರುತ್ತವೆ. ಸುಮಾರು ೧.೨೦ ಲಕ್ಷ ಜನಸಂಖ್ಯೆ ಇಲ್ಲಿಯದು. ತಾಲೂಕಿನ ಕೃಷಿ ಪ್ರದೇಶ ೬೪೦೦ ಹೆಕ್ಟೇರ್ ಇದ್ದು ೭೫೩೭೪ ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಅಭಿವೃದ್ಧಿ ದೃಷ್ಟಿಯಿಂದ ನೋಡಿದರೆ ಕೃಷಿ, ಮೀನುಗಾರಿಕೆ, ಪ್ರವಾಸೋದ್ಯಮ, ತೋಟಗಾರಿಕೆಯಂತಹ ಕ್ಷೇತ್ರಗಳಲ್ಲಿ ಇಲ್ಲಿ ಅಭಿವೃದ್ಧಿ ಮಾಡುವ ವಿಪುಲ ಅವಕಾಶಗಳು ಕಾಣುತ್ತಿವೆ.

ನಮ್ಮ ಅಂಕೋಲೆ ಸುಮಾರು ಎರಡು ಸಾವಿರ ವರ್ಷಗಳ ಐತಿಹಾಸಕ ಪರಂಪರೆ ಹೊಂದಿದೆ. ಕದಂಬರಿಂದ ಹಿಡಿದು ಸರ್ಪಮಲ್ಲಿಕನ್ನೊಳಗೊಂಡು ಬ್ರಿಟೀಷರವರೆಗೆ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಅರಸು ಮನೆತನಗಳು ಆಡಳಿತ ನಡೆಸಿದ ಊರಾಗಿ ತನ್ನ ಅಸ್ತಿತ್ವಕ್ಕೆ ಕುಂದು ಬಾರದಂತೆ ಮುಂದುವರಿದುಕೊಂಡು ಬಂದಿದೆ. ಅಂಕೋಲೆ ವಿವಿಧ ಜನಾಂಗಗಳ, ಉಪಭಾಷೆಗಳ, ಧಾರ್ಮಿಕ ಸೌಹಾರ್ದತೆಯ ಭಾವೈಕ್ಯತೆಗೆ ಮಾದರಿಯಾಗಿದೆ.

ಅಂಕೋಲಾ ತಾಲೂಕಿನ ಸಾಹಿತ್ಯ

ಅಂಕೋಲೆ ಸಂಗೀತ, ಸಾಹಿತ್ಯ, ಕಲೆ, ಶಿಕ್ಷಣ, ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದುದು. ಹಿರಿಕಿರಿಯ ಸುಮಾರು ನೂರಕ್ಕೂ ಹೆಚ್ಚು ಲೇಖಕರು ಇಲ್ಲಿದ್ದಾರೆ. ಅಂಕೋಲಾ ತಾಲೂಕಿನ ಸಾಹಿತ್ಯಕ್ಕೆ ಒತ್ತು ಕೊಟ್ಟು ಬೆಳೆಸಿದ ಅನೇಕ ಹಿರಿಯರು ಆಗಿ ಹೋಗಿದ್ದಾರೆ. ದೊಡ್ಡ ಪಂಡಿತರೆಂದೆ ಹೆಸರಾದ ದಿ. ಲಕ್ಷ್ಮಣ ಬಾಬಣೆ ಪೈ, ಉತ್ತರ ಕನ್ನಡ ಜಿಲ್ಲೆಯ ಕವಿ ಕುಲಪುರುಷ ಗೌರವಕ್ಕೆ ಪಾತ್ರರಾದ ದಿ. ಸ.ಪ.ಗಾಂವಕರ, ಶಿಕ್ಷಣ ಕವಿಯಾಗಿ ಜಿಲ್ಲೆಯ ವಿವಿಧ ರೀತಿಯ ಜನಪದ ಹಾಡುಗಳನ್ನು ಸಂಗ್ರಹಿಸಿ ಜನಪದ ಸಾಹಿತ್ಯದ ಮೇಲೆ ಪ್ರಭಾವ ಬೀರಿ ಪ್ರಕಟಿಸಿದ ದಿ. ವಿ.ವೆ.ತೊರ್ಕೆ, ಪ್ರಗತಿಪರ ಪ್ರಜ್ಞೆಯ ಲೇಖಕರಾದ ದಿ. ಡೆಂಗಾ ದೇವಾ ನಾಯ್ಕ, ಕನ್ನಡ ಸಾಹಿತ್ಯಕ್ಕೆ ಹೊಸ ರೀತಿಯ ಮೆರಗು ನೀಡಿದ ಚುಟುಕು ಬ್ರಹ್ಮ ಖ್ಯಾತಿಯ ದಿ. ದಿನಕರ ದೇಸಾಯಿ, ಬಹುಮುಖ ಲೇಖಕರಾದ ದಿ. ಮ.ಗ.ಶೆಟ್ಟಿ, ಮಕ್ಕಳ ಕವಿಯಾದ ದಿ. ಶ್ರೀನಿವಾಸ ಶೆಟ್ಟಿ, ಶ್ರೇಷ್ಠ ವಿಮರ್ಶಕ ಕವಿ ಜಿನದೇವ ನಾಯಕ, ಶಿಕ್ಷಕ ಕವಿ ಶಾಂತಾರಾಮ ಬಾಳೆಗುಳಿ, ಮಕ್ಕಳ ಸಾಹಿತ್ಯಕ್ಕೆ ಪ್ರಾಮುಖ್ಯತೆ ನೀಡಿದ ಮಕ್ಕಳ ಕಥೆ, ಕವನ ರಚಿಸಿದ ದಿ. ಗಿರಿ ಪಿಕಳೆ, ಉತ್ಸಾಹದ ಚಿಲುಮೆಯಂತಿದ್ದ ಬರಹಗಾರ ಸಗಡಗೇರಿಯ ದಿ. ಬಿ.ಜೆ.ನಾಯಕ, ವಿಮರ್ಶಕ ಸಂಶೋಧಕ ಎಂದು ಹೆಸರು ಮಾಡಿದ ಡಾ॥ ಸದಾನಂದ ನಾಯಕ, ಸ್ವಾತಂತ್ರ್ಯಯೋಧ, ಶತಾಯುಷಿ ದಿ. ಜೋಗಿ ನಾಯಕ ಶೆಟಗೇರಿ, ದಿ. ಶ್ಯಾಮ ಹುದ್ದಾರ ಇವರೆಲ್ಲರನ್ನು ಸ್ಮರಿಸುತ್ತೇನೆ. ಅಂಕೋಲಾ ತಾಲೂಕಿನಲ್ಲಿ ಹುಟ್ಟಿ ಬೆಳೆದು ಉದ್ಯೋಗಿಯಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆಸಿ ಸಾಹಿತ್ಯ ಕೃಷಿಯಿಂದ ಪ್ರಸಿದ್ಧರೆನಿಸಿದವರು ಬಹು ಸಂಖ್ಯೆಯಲ್ಲಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರದ ನಾಮಂಕಿತ ಸೃಜನಶೀಲ ಲೇಖಕರಾಗಿ, ವಿಮರ್ಶಕರಾಗಿ, ವಾಙ್ಮಯಕಾರರಾಗಿ ನಾಡಿನ ಗೌರವಾದರಕ್ಕೆ ಪಾತ್ರರಾಗಿ ಮೈಸೂರಿನಲ್ಲಿ ನೆಲೆ ನಿಂತಿರುವ ಪ್ರೊ. ಜಿ. ಎಚ್. ನಾಯಕರು ತಾಲೂಕಿಗೆ ಒಂದು ದೊಡ್ಡ ಕೊಡುಗೆ. ಕೆಲವೇ ಜಾನಪದ ತಜ್ಞರಲ್ಲಿ ಒಬ್ಬರಾದ ಜನಪದ, ಸಂಗೀತ, ಸಾಹಿತ್ಯ ಸಂಗ್ರಹಕ್ಕೆ ಅಮೂಲ್ಯ ಕೊಡುಗೆ ನೀಡಿ ನಾಡಿನ ಗಮನ ಸೆಳೆದ ಖ್ಯಾತಿವೆತ್ತ ಡಾ. ಎನ್.ಆರ್. ನಾಯಕ ಹಾಗೂ ಅವರ ಶ್ರೀಮತಿ ಶಾಂತಿ ನಾಯಕ, ಕವಿ ಕಥೆಗಾರ ಶೆಟಗೇರಿಯ ಸಂದೀಪ ನಾಯಕ, ವೆಂಕಟರಮಣ ಗೌಡ, ಫಾಲ್ಗುಣ ಗೌಡ, ಕವಿ ಪ್ರಕಾಶ

ಕಡಮೆ, ಕಥೆಗಾರ್ತಿ ಶ್ರೀಮತಿ ಸುನಂದಾ ಕಡಮೆ, ಕವಿ ಲೇಖಕ ವಿಠಲ ಗಾಂವಕರ, ಡಾ. ಸಚ್ಚಿದಾನಂದ ಶಿರೋಡಕರ, ಮನೋಹರ ಮಲ್ಮನೆ ಇವರೆಲ್ಲಾ ನಮ್ಮ ಅಂಕೋಲೆಯವರೆ ಆಗಿದ್ದಾರೆ. ಉ. ಕ. ಜಿಲ್ಲೆಯ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ವಿಶಿಷ್ಠವಾಗಿ ಗುರುತಿಸಿಕೊಂಡ ಸಮಾಜವಾದಿ ನೆಲೆಯ ಶ್ರೇಷ್ಠ ಚಿಂತನಶೀಲ, ಅಧ್ಯಯನ ಪ್ರವೃತ್ತಿಯ ಕವಿ, ಲೇಖಕ, ಕಲಾವಿದ, ಶಿಕ್ಷಣ ತಜ್ಞ ಶ್ರೀ ವಿ.ಜೆ.ನಾಯಕ, ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡ ಬಹುಮುಖ ಪ್ರತಿಭೆಯ ವಿಷ್ಣು ನಾಯ್ಕ, ಕತೆ, ಕವನ, ಲೇಖನಗಳಿಂದ ಖ್ಯಾತರಾದ ಡಾ. ರಾಮಕೃಷ್ಣ ಗುಂದಿ, ಹಿರಿಯ ಕವಿ, ಲೇಖಕ, ಚಿಂತಕ, ಉತ್ಸಾಹಿ ಶ್ರೀ ಎನ್.ಬಿ. ಕಾಮತ, ಗದ್ಯ ಪದ್ಯ ಲೇಖನಗಳಲ್ಲಿ ಪ್ರತಿಭೆ ಮೆರೆದ ಶ್ರೀ ಶಾಂತಾರಾಮ ನಾಯಕ ಹಿಚ್ಕಡ, ಕವಿ, ನಾಟಕಕಾರ, ಕತೆಗಾರರಾಗಿ ಪರಿಚಿತರಾದ ಪ್ರೊ. ಮೋಹನ ಹಬ್ಬು, ಕಾವ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಬರವಣಿಗೆಗೆ ಮಹತ್ವ ಕೊಡುತ್ತಿರುವ ಕೃಷ್ಣಾ ನಾಯಕ ಹಿಚ್ಕಡ, ಪ್ರತಿಭೆ, ವೈಚಾರಿಕತೆಗೆ ಹೆಸರಾದ ಕವಿ, ಲೇಖಕ ಶ್ರೀ ಸಿದ್ದಲಿಂಗ ಸ್ವಾಮಿ ವಸ್ತ್ರದ, ಕಾವ್ಯ ಕಥಾಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಜೆ. ಪ್ರೇಮಾನಂದ. ನಾಗೇಂದ್ರ ನಾಯಕ ತೊರ್ಕೆ, ಎನ್.ವಿ. ನಾಯಕ ಭಾವಿಕೇರಿ, ಫಾಲ್ಗುಣ ಗೌಡ, ನಾಗಪತಿ ಹೆಗಡೆ, ನಾಗೇಶ ದೇವಾ ಅಂಕೋಲೆಕರ, ಬಿ. ಎಚ್. ನಾಯಕ, ಡಾ॥ ಶ್ರೀಪಾದ ಶೆಟ್ಟಿ, ವಿ. ಎ. ಜೋಶಿ, ಅಮ್ಮೆಂಬಳ ಆನಂದ, ರಮೇಶ ನಾಯಕ, ಎಲ್. ಎಸ್. ನಾಯಕ, ಡಾ.ಶಿವಾನಂದ ನಾಯಕ, ಶ್ರೀಧರ ನಾಯಕ, ಕೆ. ಟಿ. ನಾಯಕ, ಕೇ.ಡಿ.ನಾಯ್ಕ, ಮನೋಹರ ನಾಯಕ ಜಮಗೋಡ, ಶ್ರೀಮತಿ ಕುಸುಮಾ ಕೇಣೀಕರ, ಶ್ರೀಮತಿ ಶ್ರೀದೇವಿ ಕೆರೆಮನೆ, ಶ್ರೀಮತಿ ಅಕ್ಷತಾ, ಕುಮಾರಿ ರೇಷ್ಮಾ ನಾಯಕ, ಡಾ. ರಾಜೇಂದ್ರ ಎಸ್. ನಾಯಕ, ಶ್ರೀಮತಿ ಮಂಗಲಾ ಹಾರ್ವಾಡೇಕರ್, ಶ್ರೀ ರಾಮಮೂರ್ತಿ ನಾಯಕ, ಶ್ರೀಮತಿ ರೇಣುಕಾ ಡಿ. ನಾಯಕ, ಶ್ಯಾಮಸುಂದರ ಗೌಡ, ಲಲಿತಾ ಬಿ. ಜೋಗಳೆ, ಕೃಷ್ಣಾ ಜಿ. ನಾಯ್ಕ, ಶ್ರೀಮತಿ ಪುಷ್ಪ ಎ. ನಾಯ್ಕ ಕುಮಾರಿ ರುಮಾಜಿಯಾ ಶೇಖ, ಜಯಶೀಲ ವಿ. ಆಗೇರ, ಉಮೇಶ ನಾಯ್ಕ, ಗಣಪತಿ ಆರ್. ತಾಂಡೇಲ, ವಸಂತ ಎನ್.ನಾಯಕ, ಅಂಕಣ ಬರಹಗಾರರಾದ ಡಾ. ಬ್ರಹ್ಮಾನಂದ ನಾಯಕ, ನ್ಯಾಯವಾದಿ ನಾಗರಾಜ ವಿ. ನಾಯಕ, ಉಲ್ಲಾಸ ಹುದ್ದಾರ, ಅಮಿತಾ ನಾಯ್ಕ, ನಾಗೇಂದ್ರ ಶೆಟ್ಟಿ, ಗಣಪತಿ ಗೌಡ ಹೊನ್ನಳ್ಳಿ, ಚಂದನ ಎಮ್. ಗುನಗ ಸಂಗೀತ, ಸಾಹಿತ್ಯ, ನಾಟಕ, ಜನಪದ, ಪತ್ರಿಕಾ ಕ್ಷೇತ್ರಗಳಲ್ಲಿ ಗುರುತಿಸಿಕೊಂಡ ಬಿ. ಹೊನ್ನಪ್ಪ ಮುಂತಾದವರೊಳಗೊಂಡಂತೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ನಾಟಕ ಕ್ಷೇತ್ರ

ನಾಟಕ ಕ್ಷೇತ್ರದಲ್ಲೂ ಈ ತಾಲೂಕು ಮುಂದೆ ಇದೆ. ಅನೇಕ ಸಂಸ್ಥೆಗಳು ತಾಲೂಕಿನಾದ್ಯಂತ ಹುಟ್ಟಿಕೊಂಡು ಪ್ರತಿವರ್ಷ ಒಂದು ಎರಡು ನಾಟಕಗಳನ್ನಾಡುವ ಮೂಲಕ ಬೇರೆ ಬೇರೆ ನಗರಿಗಳಿಂದ ಒಳ್ಳೆಯ ನಟ–ನಟಿಯರನ್ನು ಕರೆಯಿಸಿ ಅವರ ಕಲೆಯನ್ನು ಪ್ರದರ್ಶಿಸುವ ಮೂಲಕ ಗಮನ ಸೆಳೆದಿದ್ದಾರೆ. ಇಲ್ಲಿ ನಟರಾಗಿ ಗಮನ ಸೆಳೆದವರ ಕೆಲವು ಹೆಸರನ್ನು ಸೂಚಿಸಬಯಸುತ್ತೇನೆ. ಶ್ರೀ ಮಂಜುನಾಥ ಪ್ರಭು, ಅಂಕೋಲಾ, ಮಂಗೇಶ ಶೆಟ್ಟಿ, ಗೋಪಾಲಕೃಷ್ಣ ಪಿ. ನಾಯಕ, ಶ್ರೀ ವಿ.ಜೆ.ನಾಯಕ, ಎಸ್.ಎನ್. ಶೆಟ್ಟಿ, ದಿ. ಎಮ್.ಎನ್.ಭಟ್ಟ, ಜಿ.ಜೆ.ನಾಯಕ, ಶ್ರೀ ಬಿ. ಹೊನ್ನಪ್ಪ ಭಾವಿಕೇರಿ, ಮಹಾಬಲೇಶ್ವರ ಶೆಟ್ಟಿ, ಶ್ರೀ ವಿಷ್ಣು ನಾಯ್ಕ, ಬಲೀಂದ್ರ ಗೌಡ, ಅನಂತ ನಾಯ್ಕ, ಟಿ. ವಿ. ನಾಯ್ಕ, ಪೋಸ್ಟಮನ್ ಮಾರುತಿ ನಾಯ್ಕ, ಮೋಹನ ಹಬ್ಬು, ಆರ್. ಜಿ. ಗುಂದಿ, ಶ್ಯಾಮ ಹುದ್ದಾರ, ಕೃಷ್ಣ ನಾಯ್ಕ, ರಾಮಾ ನಾಯ್ಕ, ದಿ. ಆರ್. ಕೆ. ನಾಯ್ಕ, ಶ್ರೀ ವಸಂತ ಮಹಾಲೆ, ದಿ. ಶಾಂತಾರಾಮ ಭಟ್ಟ, ಕೆ. ರಮೇಶ ಮುಂತಾದವರು ನಾಟಕಾಭಿನಯದಿಂದ ಜನಮನ ಗೆದ್ದವರಾಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ಮುಗ್ಗಟ್ಟಿನಿಂದ ನಾಟಕ ನಡೆಯದಿರುವುದು ನಾಟಕ ಪ್ರಿಯರಿಗೆ ಅಸಮಾಧಾನದ ಸಂಗತಿ.

ಜನಪದ ಸಾಹಿತ್ಯ

ಬೆಳಗಾಗಿ ನಾ ಎದ್ದು ಯಾರಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯಂತ। ಭೂಮಿತಾಯ।
ಎದ್ದೊಂದು ಗಳಿಗೆ ನೆನೆದೇನ
ಮಣ್ಣನ್ನು ನಂಬಿ ನಾ ಮಣ್ಣಿಂದ ಬದುಕೇನ
ಮಣ್ಣೆನಗೆ ಮುಂದೆ ಹೊನ್ನು। ಅಣ್ಣಯ್ಯ।
ಮಣ್ಣೆ ಲೋಕದಲಿ ಬೆಲೆಯಾದ್ದು ॥

ಈ ಜಾನಪದ ಗೀತೆ ಈ ನೆಲದೊಂದಿಗೆ ಅನ್ಯೋನ ನಿಕಟ ಸಂಬಂಧ ಹೊಂದಿ ಬದುಕುತ್ತಿರುವ ಕೃಷಿ ಸಂಸ್ಕೃತಿಯ ಮಂದಿಗೆ ಕನ್ನಡ ನಾಡು–ನುಡಿಯ ಕುರಿತು

ಎಷ್ಟು ಪ್ರೀತಿ ಇತ್ತೆಂಬುದು ಗೊತ್ತಾಗುತ್ತದೆ. ಕನ್ನಡ ಜೀವಂತವಾಗಿ, ಸಶಕ್ತವಾಗಿ ಇರುವುದಾದರೆ ಹಳ್ಳಿಗಳಲ್ಲೇ ಎಂಬುದು ಸ್ಪಷ್ಟವಾಗುತ್ತದೆ.

ಉತ್ತರ ಕನ್ನಡ ಜಿಲ್ಲೆ ಹೆಮ್ಮೆಪಡುವಂತಹ ಜಾನಪದ ಸಂಗ್ರಾಹಕ ಅಧ್ಯಯನಕಾರ, ನುಡಿಜೇನು ಪತ್ರಿಕೆಗೆ ಅನೇಕ ಪ್ರಕಾರದ ಜಾನಪದ ಸಾಹಿತ್ಯ ಪೂರೈಸುತ್ತಿದ್ದ ನುಡಿಜೇನು ಅಭಿಮಾನಿ ಡಾ॥ ಎಲ್. ಆರ್. ಹೆಗಡೆಯವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತಿದ್ದೇನೆ.

ಅಂಕೋಲಾ ತಾಲೂಕಿನಲ್ಲಿ ಜನಪದ ಸಾಹಿತ್ಯದ ಫಸಲು ಬೆಳೆದು ಬಂದಿದೆ. ನಾಡವರು, ನಾಮಧಾರಿಗಳು, ಹಾಲಕ್ಕಿ ಒಕ್ಕಲಿಗರು, ಆಗೇರರು, ಹರಿಕಾಂತರು, ಗಾಬೀತರು. ಕೋಮಾರಪಂಥರು, ಭಂಡಾರಿ, ಸಿದ್ದಿ ಮೊದಲಾದ ಸಮಾಜದವರಿಗೂ ಅವರವರದೇ ಆದ ಮಾತಿನ ಭಾಷೆ, ಧಾಟಿ, ಜೀವನದ ರೀತಿ, ಪಾಲಿಸುವ ನೀತಿಗಳಿದ್ದು ಇಲ್ಲಿಯ ಜನಪದ ಸಾಹಿತ್ಯ ಮತ್ತು ಕಲೆಗಳು ಸಮೃದ್ದವಾಗಿ ಬೆಳೆದಿವೆ. ಇಲ್ಲಿಯ ಜನಪದ ಸಾಹಿತ್ಯ ಹಾಡುಗಳು ವೈವಿಧ್ಯಮಯವಾಗಿವೆ. ಅದರಂತೆ ಜನಪದ ಕಲೆಗಳಾದ ಸುಗ್ಗಿ, ಗುಮಟೆ ಪಾಂಗು, ಕೋಲಾಟ, ಹೂವಿನ ಮಕ್ಕಳ ಕುಣಿತ, ಮುಖ ಆಡಿಸುವುದು, ಹಗರಣ, ಹಲಗೆವಾದ್ಯ, ಮರಕಾಲು ಕುಣಿತ, ಕರಡಿ ಹುಲಿ ಕುಣಿತ, ತಾರೆ ಕುಣಿತ, ಪುಗಡಿ ಕುಣಿತ ಇತ್ಯಾದಿ ತುಂಬಾ ಆಕರ್ಷಣೀಯವಾದ ಕಲೆಗಳು.

ಡಾ॥ ಎನ್.ಆರ್.ನಾಯಕ ಮತ್ತು ಶ್ರೀಮತಿ ಶಾಂತಿ ನಾಯಕ ಇವರು ತಾಲೂಕಿನ ಹಾಗೂ ಜಿಲ್ಲೆಯ ಬಹುತೇಕ ಎಲ್ಲಾ ಪ್ರಕಾರದ ಜನಪದ ಸಾಹಿತ್ಯವನ್ನು ಉಳಿಸಿ ಬೆಳೆಸುವಲ್ಲಿ ಅವರು ಮಾಡಿದ ಶ್ರಮ ಸ್ತುತ್ಯಾರ್ಹವಾಗಿದೆ. ಎಷ್ಟೇ ಸಂಗ್ರಹಿಸಿದರೂ ಜನಪದ ನಿಧಿ ಸಿಗುತ್ತಲೇ ಇರುತ್ತದೆ. ಆ ಕಾರ್ಯವನ್ನು ಇಂದಿನ ಯುವಕರು ಮಾಡಬೇಕಾಗಿದೆ. ಈಗಿನ ಎಳೆಯರಿಗೆ ಸಿನೇಮಾ ಹಾಡುಗಳೆಂದರೆ ಪ್ರಾಣ, ಹಳ್ಳಿಯ ಹಾಡುಗಳು ಲಕ್ಷ್ಯವಿಲ್ಲ. ಹೀಗಾಗಿ ಮಹತ್ತರವಾದ ಲಕ್ಷ ಲಕ್ಷ ಹಾಡುಗಳು ವರುಷ ಕಳೆದಂತೆ ಮಾಯವಾಗುತ್ತಿವೆ. ಒಬ್ಬ ಒಳ್ಳೆಯ ಹಿರಿಯ ಹಾಡುಗಾರ ಇಲ್ಲವೇ ಹಾಡುಗಾರ್ತಿ ಸತ್ತರೆ ಅವಳೊಡನೆ ಅಸಂಖ್ಯಾತ ಹಾಡುಗಳು ಸಾಯುತ್ತವೆ. ಜನಪದ ಹಾಡುಗಳನ್ನು ಉಳಿಸಿ ಬೆಳೆಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಅದರಂತೆ ಜನಪದ ಕಲೆಗಳ ಕಡೆಗೂ ನಮ್ಮ ದೃಷ್ಟಿ ಸದಾ ಇರಬೇಕು. ನಮ್ಮಲ್ಲಿ ನಾಡೋಜ ಸುಕ್ರಿ ಬೊಮ್ಮು ಗೌಡ ಅಂತವರು ಅನೇಕರಿದ್ದಾರೆ. ಅವರನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ ಜರುಗಬೇಕಾಗಿದೆ. ನುಡಿಜೇನು ಪತ್ರಿಕಾ ಬಳಗವನ್ನು ಹುಟ್ಟು ಹಾಕಿದ ಬಿ. ಹೊನ್ನಪ್ಪ ಅವರು ಅನೇಕ ಜಾನಪದ ಕಲಾವಿದರನ್ನು ಗುರುತಿಸಿ ಸನ್ಮಾನಿಸಿ ಗೌರವಿಸಿದ್ದಾರೆ. ಇಂತಹ ಕಾರ ಅಂಕೋಲೆಯ ಎಲ್ಲಾ ಸಂಘಸಂಸ್ಥೆಗಳಿಂದ ನಡೆಯಬೇಕು. ಜಾನಪದ ತಜ್ಞ ಡಾ॥ ಎನ್. ಆರ್. ನಾಯಕರು ಇದೇ ಕಾರ್ಯವನ್ನು ಪ್ರತಿವರ್ಷ ಕ್ರಮಬದ್ಧವಾಗಿ ನಡೆಸಿಕೊಂಡು ಬಂದಿರುವುದು ವಿಶೇಷ ಎನಿಸಿದೆ. ಅಂಬಾರಕೊಡ್ಲದ ಶ್ರೀಮತಿ ಸುಕ್ರಿ ಹನುಮಾ ಗೌಡ, ಹೊಸಬು ಬೊಮ್ಮ ಗೌಡ, ವಿಷ್ಣು ಟಿ. ಗೌಡ, ಸಂತೋಷ ಶಿವಪ್ಪ ಗೌಡ, ಬಡಗೇರಿಯ ತೋಕು ನಾಗು ಗೌಡ, ಮಂಕಾಳು ತುಕ್ಕಾ ಗೌಡ, ನಾಗಮ್ಮ ಸುಕ್ರು ಗೌಡ, ಸೋಮಿ ಗೌಡ ಇವರೆಲ್ಲಾ ಜನಪದ ಕಲಾಕ್ಷೇತ್ರದಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತಿದ್ದಾರೆ. ಅಂತೆಯೇ ಸ್ವಾತಂತ್ರ ಸಂಗ್ರಾಮ ಕಾಲದಲ್ಲಿ ಬ್ರಿಟೀಷರಿಂದ ಬಹುಮಾನಿತರಾದ ಬೆಳಂಬಾರದ ಸುಗ್ಗಿ ತಂಡ ವಿವಿಧ ಪ್ರಕಾರದ ಹಗರಣಗಳಿಂದ ಜನಮನ ಗೆದ್ದಿದೆ. ಸುಗ್ಗಿ ಹಬ್ಬದ ಸಂದರ್ಭದಲ್ಲಿ ಅಂಕೋಲಾ ನಗರದಲ್ಲಿ ಅವರ ವಿವಿಧ ರೀತಿಯ ಕಲಾ ಪ್ರಕಾರಗಳು ನಡೆಯುತ್ತಿದ್ದು ಪ್ರದರ್ಶನ ವೀಕ್ಷಿಸಲು ಸಹಸ್ರಾರು ಜನ ಸೇರುತ್ತಾರೆ. ಇಂಥ ತಂಡಗಳು ಅಂಕೋಲೆಯ ಸುತ್ತುಮುತ್ತಲಿನ ಬಹುತೇಕ ಎಲ್ಲ ಹಳ್ಳಿಗಳಲ್ಲಿಯೂ ಇವೆ, ಆದರೆ ಗುರುತಿಸುವ ಪ್ರೋತ್ಸಾಹಿಸುವ ಕೆಲಸ ನಡೆಯಬೇಕು.

ಸಾಂಸ್ಕೃತಿಕ ಹಿರಿಮೆ

ಅಂಕೋಲೆಯು ತನ್ನ ಸಾಂಸ್ಕೃತಿಕ ಚಟುವಟಿಕೆಗಳಿಂದಲೂ ಪ್ರಸಿದ್ಧಿ ಪಡೆದಿದೆ. ೧೯೪೦ರ ದಶಕದಲ್ಲಿ ಪ್ರಾರಂಭವಾದ ಬಾಸಗೋಡದ ಸುಬೋಧ ಯಕ್ಷಗಾನ ಮಂಡಳಿ, ಲಲಿತ ಕಲಾ ಮಂಡಳಿ, ಭಾವಿಕೇರಿಯ ನುಡಿಜೇನು ಪತ್ರಿಕಾ ಬಳಗ, ಅಂಬಾರಕೊಡ್ಲಿನ ರಾಘವೇಂದ್ರ ರಂಗ ಸಂಘ, ಶೆಟಗೇರಿಯ ಸತ್ಯಾಗ್ರಹ ಸ್ಮಾರಕ ಶಿಕ್ಷಣ ಸಮಿತಿಯ ಯಕ್ಷರಂಗ ಶಿಕ್ಷಣ ವೇದಿಕೆ, ಶಿಕ್ಷಣ ಪ್ರತಿಷ್ಠಾನ ಕೊಗ್ರೆ, ಜನತಾ ಕ್ರಿಕೆಟ್ ಕ್ಲಬ್ ಬಾಸಗೋಡ, ಶ್ರೀ ವೆಂಕಟರಮಣ ದೇವ ಯಕ್ಷಗಾನ ಕಲಾಭಿವೃದ್ಧಿ ಸಂಘ, ದಿನಕರ ಸಂಗೀತ ವಿದ್ಯಾಲಯ, ಸಂಗಾತಿ ರಂಗಭೂಮಿ ಹೀಗೆ ಹಲವು ನೃತ್ಯ ಕಲಾ ಕೇಂದ್ರಗಳು ವಿಜೃಂಭಿಸುತ್ತಿರುವುದನ್ನು ಗಮನಿಸುತ್ತಿದ್ದೇವೆ. ಇದೇ ರೀತಿಯಲ್ಲಿ ಇನ್ನೂ ಎಷ್ಟೋ

ಸಂಘ–ಸಂಸ್ಥೆಗಳು ಅಂಕೋಲೆಯಲ್ಲಿ ಹುಟ್ಟಿಕೊಂಡು ಚಟುವಟಿಕೆಯಿಂದಿರುವುದು ಸಂತೋಷದ ವಿಷಯ.

ಶಿಕ್ಷಣ ಕ್ಷೇತ್ರ :

ಭಾರತಕ್ಕೆ ಸ್ವಾತಂತ್ರ್ಯ ಬಂದು ೬೪ ವರ್ಷಗಳು ಮುಗಿದಿವೆ. ಕರ್ನಾಟಕ ಏಕೀಕರಣವಾಗಿ ಐವತ್ತೈದು ವರ್ಷಗಳು ಗತಿಸಿವೆ. ಇಷ್ಟೊಂದು ದೀರ್ಘ ಅವಧಿಯಲ್ಲಿ ಸರಿಯಾದ ವ್ಯವಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕೊಡಲು ಸಾಧ್ಯವಾಗಿಲ್ಲ. ಜನರಲ್ಲಿ ಎಚ್ಚರ ಮೂಡದಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಸರಕಾರದ ಯೋಜನೆಗಳು ಸರಿಯಾಗಿ ಕಾರ್ಯಗತವಾಗದಿರುವುದೂ ಸಹ ಅಷ್ಟೇ ಸತ್ಯ. ಕೇಂದ್ರ ಸರಕಾರ ೧೪ ವರ್ಷದ ಒಳಗಿನ ಎಲ್ಲ ಮಕ್ಕಳಿಗೂ ಶಿಕ್ಷಣವನ್ನು ಕಡ್ಡಾಯಮಾಡಿದೆ. ರಾಜ್ಯ ಸರಕಾರವು ಶಿಕ್ಷಣಕ್ಕಾಗಿ ಪ್ರತಿವರ್ಷ ಸಾವಿರಾರು ಕೋಟಿ ರೂಪಾಯಿಗಳನ್ನು ವ್ಯಯಿಸುತ್ತದೆ. ಆದರೂ ಸಹ ಸರ್ವರನ್ನು ಸುಶಿಕ್ಷಿತರನ್ನಾಗಿ ಮಾಡಲು ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿ ನಮ್ಮಲ್ಲಿರುವಾಗ ೩೧೭೪ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ನಿರ್ಧಾರ ತೆಗೆದುಕೊಂಡಿರುವುದು ಯಾಕೆ ಎಂದು ಪ್ರಶ್ನಿಸಬೇಕಾಗುತ್ತದೆ. ಸರಕಾರಿ ಶಾಲೆಗಳು ಸರಿಯಾದ ಕಟ್ಟಡವಿಲ್ಲದೆ, ಶಿಕ್ಷಕರಿಲ್ಲದೆ, ಪೀಠೋಪಕರಣ, ಆಟೋಪಕರಣವಿಲ್ಲದೆ, ಪಠ್ಯಪುಸ್ತಕಗಳ ಕೊರತೆಯಿಂದ ನರಳುತ್ತಿರುವುದನ್ನು ಕಾಣುತ್ತೇವೆ. ಶಿಕ್ಷಕರನ್ನು ಸಮಯಕ್ಕೆ ಸರಿಯಾಗಿ ನೇಮಕ ಮಾಡಿಕೊಳ್ಳದೆ ಶಾಲೆಗೆ ಬಂದ ಮಕ್ಕಳು ಮುಚ್ಚಿದ ಬಾಗಿಲನ್ನು ನೋಡಿಕೊಂಡು ಹೋಗುವುದನ್ನು ಎಷ್ಟೋ ಊರುಗಳಲ್ಲಿ ನೋಡುತ್ತೇವೆ. ಅದೆಷ್ಟೋ ಶಾಲೆಗಳ ಪರಿಸರ ಮಕ್ಕಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ, ಏಕೋಪಾಧ್ಯಾಯ ಶಾಲೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ದೂರು ಇದ್ದೇ ಇದೆ. ಪಾಠ ಹೇಳಿಕೊಡಬೇಕಾದ ಶಿಕ್ಷಕರನ್ನು ಬಿಸಿಯೂಟದ ಉಸ್ತುವಾರಿ, ಜನಗಣತಿ, ಪಶುಗಣತಿ, ಗ್ರಾಮಪಂಚಾಯತಿ, ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ವಿಧಾನಸಭೆ, ಲೋಕಸಭೆ ಚುನಾವಣೆಯ ಕಾರ್ಯಗಳಿಗೆ ಬಳಸಿಕೊಳ್ಳುವುದರಿಂದ ಶೈಕ್ಷಣಿಕ ಕಾರ್ಯಗಳಿಗೆ ಅಡಚಣೆಯಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಶಾಲೆಗಳು ಇವೆಲ್ಲ ಸಮಸ್ಯೆಗಳಿಂದ ಮುಕ್ತವಾದಾಗ ಪೋಷಕರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಕಳುಹಿಸಿ ಕೊಡುತ್ತಾರೆ. ಆದ್ದರಿಂದ ಇವೆಲ್ಲ ಸಮಸ್ಯೆಗಳನ್ನು ಬಗೆಹರಿಸುವ ಕಡೆಗೆ ಗಮನಹರಿಸಬೇಕಾಗಿದೆ. ವಿದ್ಯಾರ್ಥಿಗಳ ಕೊರತೆ ಎಂಬ ಕಾರಣಕ್ಕೆ ಶಾಲೆಗಳನ್ನು ಮುಚ್ಚುವುದು ಸರ್ವಥಾ ಸಾಧುವಲ್ಲ. ಗುಣಮಟ್ಟವನ್ನು ವೃದ್ಧಿಸಬೇಕಾಗಿರುವುದು ಸರಕಾರದ ಮೊದಲ ಕರ್ತವ್ಯ. ಸರಕಾರ ತನ್ನ ಭಾಷಾನೀತಿಯನ್ನು ಬದಲಿಸಿಕೊಳ್ಳಬೇಕಾಗಿದೆ. ಕನ್ನಡವು ಶಾಲೆಗಳಿಂದ ದೂರವಾದರೆ ಜನರಿಂದಲೂ ದೂರವಾಗುತ್ತದೆ ಎಂಬುದನ್ನು ಮರೆಯಬಾರದು. ಸರಕಾರ ಇನ್ನು ಮುಂದಾದರೂ ಎಚ್ಚೆತ್ತುಕೊಂಡು ಸರಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ನಿರ್ಧಾರ ಕೈಬಿಡಬೇಕು. ಕನ್ನಡದ ಮುಂದೆ ಯಾರೂ ದೊಡ್ಡವರಲ್ಲ ಎಂಬುದನ್ನು ನೆನಪಿಡಬೇಕು.

ನಮ್ಮ ಅಂಕೋಲಾ ತಾಲೂಕು ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದನ್ನು ನಾನು ನೋಡುತ್ತಾ ಬಂದಿದ್ದೇನೆ. ೩೦–೩೫ ವರ್ಷಗಳ ಹಿಂದೆ ಅಂಕೋಲಾದಲ್ಲಿ ಜೈಹಿಂದ್ ಹೈಸ್ಕೂಲ್, ಪೀಪಲ್ಸ್ ಮಲ್ಟಿಪರ್ಪಸ್ ಹೈಸ್ಕೂಲ್ ಇದ್ದವು. ಅಂಕೋಲೆಯ ಸುತ್ತಮುತ್ತಲಿನ ಹಳ್ಳಿಯ ಹುಡುಗರು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಹೈಸ್ಕೂಲ್ ಶಿಕ್ಷಣಕ್ಕೆ ಅಂಕೋಲೆಗೆ ಬರುತ್ತಿದ್ದರು. ನಂತರ ಅವರ್ಸಾದಲ್ಲಿ ಶ್ರೀ ಕಾತ್ಯಾಯಿನಿ ಹೈಸ್ಕೂಲ್ ಪ್ರಾರಂಭವಾಯಿತು. ವರ್ಷ ಕಳೆದಂತೆ ಹೈಸ್ಕೂಲಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ತಾಲೂಕಿನ ಬೇರೆ ಬೇರೆ ಊರುಗಳಲ್ಲಿ ಖಾಸಗಿ ಶಾಲೆಗಳು ಪ್ರಾರಂಭವಾದವು. ಸ್ವಾತಂತ್ರ್ಯ ಸಂಗ್ರಾಮದ ಪ್ರದೇಶವಾದ ಶೆಟಗೇರಿಯಲ್ಲಿ ಸತ್ಯಾಗ್ರಹ ಸ್ಮಾರಕ ವಿದ್ಯಾಲಯ ಸ್ಥಾಪನೆಯಾಯಿತು. ಭಾವಿಕೇರಿಯಲ್ಲಿ ನೂತನ ಶಿಕ್ಷಣ ಟ್ರಸ್ಟ್ ಹೈಸ್ಕೂಲ್ ಪ್ರಾರಂಭಿಸಿತು. ಮುಂದೆ ಅಲ್ಲಲ್ಲಿಯ ಅವಶ್ಯಕತೆಗಳನ್ನು ಗಮನಿಸಿ ಸರಕಾರ ಕೇಣಿ, ಬೇಲೇಕೇರಿ, ಬಾಸಗೋಡ, ಅಗಸೂರು, ಹಿಲ್ಲೂರು, ಮೊಗಟಾ ಮುಂತಾದ ಕಡೆ ಪ್ರೌಢಶಾಲೆಗಳನ್ನು ತೆರೆದು ಗ್ರಾಮೀಣ ಭಾಗದ ಮಕ್ಕಳಿಗೆ ಹೈಸ್ಕೂಲು ಶಿಕ್ಷಣ ಒದಗಿಸಿ ಕೊಟ್ಟಿತು. ಈ ಮಧ್ಯಂತರದಲ್ಲಿ ಓದು ಮುಗಿಸಿದ ವಿದ್ಯಾರ್ಥಿಗಳು ಕಾಲೇಜು ಓದುವ ಸಲುವಾಗಿ ಸಮೀಪದ ಕುಮಟಾಕ್ಕೆ ಹೋಗುತ್ತಿದ್ದುದನ್ನು ನಾನು ಕಂಡಿದ್ದೇನೆ. ಕಾರವಾರದಲ್ಲಿ ಕಾಲೇಜ್ ಇದ್ದಿದ್ದಿಲ್ಲ. ಇಂತಹ ಸಂದರ್ಭದಲ್ಲಿ ತಮ್ಮ ಊರಿನ ಮಕ್ಕಳಿಗೆ ಕಾಲೇಜ್ ಶಿಕ್ಷಣದಲ್ಲಿ ತೊಂದರೆಯಾಗುತ್ತಿದ್ದುದ್ದನ್ನು ಗಮನಿಸಿದ ಸ್ಥಳಿಯ ಪ್ರಮುಖರು ಅಂಕೋಲೆಯಲ್ಲಿ ಒಂದು ಕಾಲೇಜ್ ಪ್ರಾರಂಭಿಸುವ ಬಗ್ಗೆ ಡಾ. ದಿನಕರ ದೇಸಾಯಿಯವರೊಂದಿಗೆ ಸಮಾಲೋಚನೆ ನಡೆಸಿದರು.

ದೇಸಾಯಿಯವರು ಇದಕ್ಕೆ ಒಪ್ಪಿಕೊಂಡರು. ೧೯೬೭ ಗೋಪಾಲಕೃಷ್ಣ ಗೋಖಲೆಯವರ ಜನ್ಮಶತಾಬ್ದಿ ಇದ್ದುದರಿಂದ ಅವರ ಹೆಸರಿನಲ್ಲಿ ದೇಸಾಯಿಯವರು ತಮ್ಮ ಕೆನರಾ ವೆಲ್‌ಫೇರ್ ಟ್ರಸ್ಟಿನ ವತಿಯಿಂದ ಗೋಖಲೆ ಸೆಂಟಿನರಿ ಕಾಲೇಜ ಪ್ರಾರಂಭಿಸಿದರು. ಈ ಕಾಲೇಜ್ ಸ್ಥಾಪನೆಯಿಂದಾಗಿ ಸುತ್ತಮುತ್ತಲಿನ ರೈತ, ಕೂಲಿಕಾರ, ಮೀನುಗಾರ, ಶ್ರಮ ಜೀವಿಗಳ ಮಕ್ಕಳಿಗೆ ಕಾಲೇಜ ಶಿಕ್ಷಣ ಪಡೆಯಲು ಅನುಕೂಲವಾಗಿ ಸಾವಿರಾರು ಮಕ್ಕಳು ಇಂದು ಪದವೀಧರರಾಗಿ ಹೊಸ ಮನ್ವಂತರವೇ ಪ್ರಾರಂಭವಾಯಿತೆನ್ನಬಹುದು. ೧೯೬೭ ರಲ್ಲಿ ಅಸ್ತಿತ್ವಕ್ಕೆ ಬಂದ ನೂತನ ಶಿಕ್ಷಣ ಸಭಾ ಟ್ರಸ್ಟ ಹೆಣ್ಣುಮಕ್ಕಳಿಗಾಗಿ ವಿ. ಕೆ. ಗರ್ಲ್ಸ್ ಹೈಸ್ಕೂಲ್ ಪ್ರಾರಂಭಿಸಿತು. ಇದೇ ಟ್ರಸ್ಟಿನವರು ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಸಂಸ್ಥೆಯನ್ನು (T.C.H) ಇದಕ್ಕೆ ಪೂರಕವಾಗಿ ಪ್ರಾಯೋಗಿಕ ಪ್ರಾಥಮಿಕ ಶಾಲೆಯನ್ನು ತೆರೆದರು. ಇದೇ ರೀತಿಯಲ್ಲಿ ತಾಲೂಕಿನಾದ್ಯಂತ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡು ವಿದ್ಯಾರ್ಥಿಗಳಿಗೆ ಸಹಾಯಕವಾದವು.

ಪತ್ರಿಕಾ ಕ್ಷೇತ್ರ:

ದಿನಪತ್ರಿಕೆಯಾಗಲಿ, ವಾರಪತ್ರಿಕೆಯಾಗಲಿ ಇನ್ನಾವುದೇ ನಿಯತಕಾಲಿಕವೇ ಆಗಲಿ ಸಂಪಾದಕನೇ ಆ ಪತ್ರಿಕೆಯ ಸೂತ್ರಧಾರ. ವೃತ್ತ ಪತ್ರಿಕೆಯೊಂದರ ಸಂಪಾದಕೀಯ ವಿಭಾಗದ ನಿರ್ದೇಶನ ಮತ್ತು ಉಸ್ತುವಾರಿ ನಡೆಸುವವನೇ ಸಂಪಾದಕ. ಪತ್ರಿಕೆಯ ಮೇಲೆ ಅವನ ವ್ಯಕ್ತಿತ್ವದ ಮುದ್ರೆ ಮೂಡುತ್ತದೆ. ತನ್ನ ಕಾರ್ಯ ನಿರ್ವಹಿಸಲು ಸಂಪಾದಕ ಒಂದು ರೀತಿಯ ಆಲ್ ರೌಂಡರ್ ಆಗಿರಬೇಕು. ರಾಜಕಾರಿಣಿ, ನ್ಯಾಯವಾದಿ, ಹಣಕಾಸುತಜ್ಞ, ಕಲೆ ಹಾಗೂ ಕ್ರೀಡೆಗಳು ಹೀಗೆ ಈ ಎಲ್ಲಾ ವಿಭಿನ್ನ ವಿಷಯಗಳಲ್ಲಿ ಅವನಿಗೆ ಸಾಕಷ್ಟು ತಿಳುವಳಿಕೆ ಇದ್ದು, ಉನ್ನತಮಟ್ಟದ ನೈತಿಕತೆ, ನಿರ್ಣಯ ಸಾಮರ್ಥ್ಯ, ಮಾನವೀಯತೆ, ದೀರ್ಘಕಾಲ ದುಡಿಯುವ ಶಕ್ತಿ, ವಿವಿಧ ಮನೋಧರ್ಮಗಳುಳ್ಳ ಪತ್ರಿಕೆಯ ಸಿಬ್ಬಂದಿಯೊಡನೆ ಹೊಂದಾಣಿಕೆಯಿಂದ ಕರ್ತವ್ಯ ನಿರ್ವಹಿಸುವ ಜಾಣತನ, ಲವಲವಿಕೆ ಈ ಗುಣಗಳೆಲ್ಲ ಅವನಿಗೆ ಅವಶ್ಯ. ಜೊತೆಗೆ ಸುದ್ದಿ ಕುರಿತಾದ ಸೂಕ್ಷ್ಮಗ್ರಾಹಿತ್ವ ಅವನಲ್ಲಿರಬೇಕು. ಪತ್ರಿಕೆಯ ನೀತಿಧೋರಣೆ ನಿರ್ಧರಿಸುವವನೇ ಸಂಪಾದಕ.

ಸಂಪಾದಕ ತಾನೇ ಸಂಪಾದಕೀಯವನ್ನು ಬರೆಯಬಹುದು. ಇಲ್ಲವೇ ಸಹ ಸಂಪಾದಕರಿಗೆ ನಿರ್ದೇಶನ ನೀಡಬಹುದು. ಸಂಪಾದಕನ ವಿಭಾಗದಲ್ಲಿ ಸಹಸಂಪಾದಕರು, ಫೀಚರ್ (ರೂಪಕ) ಸಂಪಾದಕರು, ವ್ಯಂಗ್ಯಚಿತ್ರಗಾರರು, ಛಾಯಾಚಿತ್ರಗಾರರು ಮತ್ತು ಕಲಾವಿದರು ಆಯಾ ಪತ್ರಿಕೆಯ ಗಾತ್ರ, ಅವಶ್ಯಕತೆ ಹಾಗೂ ಆರ್ಥಿಕ ದೃಢತೆಗಳಿಗೆ ತಕ್ಕಂತೆ ಇರುತ್ತಾರೆ. ಪತ್ರಿಕೆಯಲ್ಲಿ ಅಚ್ಚಾಗಿ ಹೊರಬರುವ ಎಲ್ಲಕ್ಕೂ ಅಂತಿಮವಾಗಿ ಸಂಪಾದಕನೇ ಹೊಣೆ. ಪತ್ರಿಕೆಯ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಬಿದ್ದರೆ ಪತ್ರಿಕೆಯ ಕಾರ್ಯಕ್ರಮವನ್ನು ಸಮರ್ಥಿಸಿ ರಕ್ಷಿಸುವ ಕರ್ತವ್ಯ ಅವನದೆ.

'ಜನಸೇವಕ' ಜನಸೇವೆಯನ್ನೆ ಮುಂದಿಟ್ಟು ಉತ್ತರಕನ್ನಡ ಜಿಲ್ಲೆಯ ಜನರ ದೈನಂದಿನ ತೊಡಕುಗಳನ್ನು ನಿವಾರಿಸಲು ಜನ ಜಾಗೃತಿಗೆ ಉಪಯುಕ್ತವಾದ ಜ್ಞಾನಪ್ರಸಾರ ಮಾಡಿ ಕರಾವಳಿ ಕರ್ನಾಟಕ ಮಾತ್ರವಲ್ಲದೆ ವಿಶಾಲ ಕರ್ನಾಟಕದ ಸರ್ವಾಂಗೀಣ ಉನ್ನತಿಗಾಗಿ ದುಡಿಯುವ ಮಹೋದ್ದೇಶವನ್ನು ಇಟ್ಟುಕೊಂಡು ಉತ್ತರ ಕನ್ನಡ ಜಿಲ್ಲೆಯ ಹಿರಿಯ ಸಾಹಿತಿ, ಲೇಖಕ ಧುರೀಣರಾದ ದಿನಕರ ದೇಸಾಯಿಯವರು ತಮ್ಮ ಸಹಕಾರ್ಯಕರ್ತರಾದ ಎಸ್. ವಿ. ಪಿಕಳೆ, ದಯಾನಂದ ನಾಡಕರ್ಣಿ ಇವರ ಸಹಕಾರದೊಂದಿಗೆ ಕೆನರಾ ವೆಲ್‌ಫೇರ್ ಟ್ರಸ್ಟಿನ ವತಿಯಿಂದ ೧೯೫೫ರಲ್ಲಿ ಜನಸೇವಕ ವಾರಪತ್ರಿಕೆಯನ್ನು ಅಮ್ಮೆಂಬಳ ಆನಂದರ ಸಂಪಾದಕತ್ವದಲ್ಲಿ ಹೊರಡಿಸಿದರು. ಜಿಲ್ಲೆಯ ಮುಖವಾಣಿಯಾಗಿದ್ದ ಈ ಪತ್ರಿಕೆ ಆರ್ಥಿಕ ಮುಗ್ಗಟ್ಟನ್ನು ಸಹಿಸಲಾರದೆ ೧೯೭೭ರಲ್ಲಿ ಜನಸೇವೆಯಿಂದ ದೂರ ಸರಿದದ್ದು ವಿಷಾದನೀಯ, 'ಅಭಯ' ಎನ್ನುವ ವಾರಪತ್ರಿಕೆ ೧೯೬೪ರಲ್ಲಿ ತಾಲೂಕಿನ ಭಾವಿಕೇರಿಯಿಂದ ಆರ್.ಜಿ. ನಾಯಕರ ಸಂಪಾದಕತ್ವದಲ್ಲಿ ನಡೆದು ಹಾಗೆಯೇ ನಿಂತುಹೋಯಿತು. ಜನಸಾಮಾನ್ಯರಲ್ಲಿ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ರಂಗಗಳಲ್ಲಿ ಪ್ರಜ್ಞೆಗಳನ್ನು ಮೂಡಿಸುವುದರ ಸಲುವಾಗಿ ಆರ್. ಜಿ. ನಾಯಕರು ಪತ್ರಿಕೆ ನಡೆಸಲು ಮುಂದಾಗಿದ್ದರು.

'ನುಡಿಜೇನು' ಜಾನಪದ ಸಾಹಿತ್ಯದ ಪ್ರಕಟಣೆಗೆ ಹೆಚ್ಚಿನ ಒತ್ತುಕೊಟ್ಟು ಅಳಿದು ಹೋಗುತ್ತಿರುವ ಜನಪದ ಸಾಹಿತ್ಯ ಕಲೆಗಳನ್ನು ಬದುಕಿಸಿಕೊಳ್ಳುವ ಉದ್ದೇಶದಿಂದ ಗಾಯಕ, ಕಲಾವಿದರಾದ ಬಿ. ಹೊನ್ನಪ್ಪ ಅವರು ೧೯೭೦ರಲ್ಲಿ ಪ್ರಾರಂಭಿಸಿ ಇಂದು ಆ ಪತ್ರಿಕೆ ೪೨ ವರ್ಷಗಳನ್ನು ಪೂರೈಸಿದೆ.

'ಸಕಾಲಿಕ' ಜಿಲ್ಲೆಯ ಸಾಹಿತ್ಯ, ಸಂಸ್ಕೃತಿಯನ್ನು ಮುಂದಿಟ್ಟುಕೊಂಡು, 'ಸಕಾಲಿಕ' ವಾರಪತ್ರಿಕೆಯನ್ನು ಸಾಹಿತಿ, ಕವಿ, ವಿಷ್ಣುನಾಯ್ಕರು ಪ್ರಾರಂಭಿಸಿದರು. ಒಳ್ಳೆಯ ರೀತಿಯಿಂದ ಮುನ್ನಡೆಯುತ್ತಿದ್ದ ಈ ಪತ್ರಿಕೆ ನಿಂತು ಹೋಯಿತು. ಈಗ 'ಗಿರಿಗರ್ಜನೆ', 'ಕರಾವಳಿ ಸುಪ್ರಭಾತ' ಪತ್ರಿಕೆಗಳು ಹೊರಡುತ್ತಿಲ್ಲ. 'ಆರ್ಯಪ್ರಭಾ', 'ಕರಾವಳಿ ಧ್ವನಿ', 'ಜ್ಞಾನಸಂದೇಶ' ಪತ್ರಿಕೆಗಳು ಪ್ರಕಟಗೊಳ್ಳುತ್ತಿವೆ. ಇತ್ತೀಚಿನ ಎರಡು ವರ್ಷಗಳಿಂದ 'ಕೆನರಾ ವಿಜಯಾ' ಎನ್ನುವ ದಿನಪತ್ರಿಕೆ ಕುಮಟೆಯಿಂದ ನಡೆಯುತ್ತಿದೆ. ಈ ಪತ್ರಿಕೆಯ ಸಂಪಾದಕರು ನಮ್ಮ ಅಂಕೋಲೆಯ ಉದ್ಯಮಿ ಮಂಜುನಾಥ ನಾಯ್ಕರು. ಇದು ನಮಗೆ ಹೆಮ್ಮೆ ಪ್ರಸಕ್ತ ಕಾಲದಲ್ಲಿ ನಡೆಯುತ್ತಿರುವ ಪತ್ರಿಕೆಗಳು ಮುಂದುವರಿಯಲಿ ಎಂದು ಹಾರೈಸುತ್ತೇನೆ. ಪತ್ರಕರ್ತರು ತಮ್ಮ ನೀತಿ ಸಂಹಿತೆಯ ಬಗ್ಗೆ ತಿಳಿದುಕೊಳ್ಳುವ ಅವಶ್ಯಕತೆ ಇದೆ.

ಸಂಗೀತ ಕ್ಷೇತ್ರ :

ಅಂಕೋಲೆ ಹಿಂದಿನಿಂದಲೂ ಸಂಗೀತ ಕ್ಷೇತ್ರದಲ್ಲಿ ತನ್ನನ್ನು ಗುರುತಿಸಿಕೊಂಡಿದೆ. ಸುಬ್ರಾವ್ ಅಂಕೋಲೇಕರ್, ದತ್ತಾ ಹನುಮಟ್ಟೇಕರ್, ಶಿವಾ ನಾಗ್ವೇಕರ್ ಮುಂತಾದವರು ಇಂದಿಲ್ಲದಿದ್ದರೂ ಅವರು ತಬಲಾವಾದಕತ್ವದಲ್ಲಿ ವಿದ್ವತ್ ಪಡೆದು ಹೆಸರು ಮಾಡಿದವರಾಗಿದ್ದರು. ಈಗ ಕೊನೆಯ ಕೊಂಡಿ ಎಂಬಂತೆ ತಬಲಾದಲ್ಲಿ ಪ್ರಾವೀಣ್ಯತೆ ಪಡೆದ ಬಾಬೂಲಿ ನಾಗೇಕರ್ ನಮ್ಮೊಂದಿಗಿದ್ದಾರೆ. ದಿ| ಸೀತಾಬಾಯಿ ಅಜಾದೀಪಕರ್, ಶ್ರೀಮತಿ ಬಾಯಿ ನಾರ್ವೆಕರ್ ಖ್ಯಾತ ಗಾಯಕಿಯರಾಗಿದ್ದರು. ಗಾಯಕಿ ಶಾಲಿನಿ ನಾರ್ವೇಕರ್ ವಯೋವೃದ್ಧರಾಗಿದ್ದು ಮುಂಬೈನಲ್ಲಿರುತ್ತಾರೆ. ಖ್ಯಾತ ಗಾಯಕರಾಗಿ ಹೆಸರು ಮಾಡಿದ್ದ ಭೀಮಸೇನ ಜೋಶಿಯವರ ಜೊತೆಜೊತೆಯಲ್ಲೇ ಸಂಗೀತಾಭ್ಯಾಸ ಮಾಡಿದ್ದ ದಿ. ಬಿ. ಆರ್. ನಾಯಕ ಮತ್ತು ದಿ. ಪಿ. ವಿ. ಶೆಟ್ಟಿ ಇಂದು ನಮ್ಮೊಂದಿಗಿಲ್ಲ. ಶ್ರೀ ಗಣೇಶ ಸದಾನಂದ ನಾರ್ವೆಕರ ಸಂಗೀತ ವಿದ್ವತ್ ಪಡೆದವರಾಗಿದ್ದಾರೆ.

ಇತ್ತೀಚಿನ ತಲೆಮಾರಿನಲ್ಲಿ ಮಹೇಶ ಮಹಾಲೆ, ದೇವಾನಂದ ಗಾಂವಕಾರ ಇನ್ನೂ ಕೆಲವು ಯುವಕರು ಪ್ರಯತ್ನಪಟ್ಟು ಸಂಗೀತಾಭ್ಯಾಸ ಮಾಡಿದ್ದರೆ ಒಳ್ಳೆಯ ಭವಿಷ್ಯವಿತ್ತು. ಇತ್ತೀಚಿನ ವರ್ಷಗಳಲ್ಲಿ ಸಂಗೀತ, ನೃತ್ಯ ಶಾಲೆಗಳು ಅಂಕೋಲೆಯಲ್ಲಿ ಪ್ರಾರಂಭವಾಗಿದೆ. ಬಾಲ ಪ್ರತಿಭೆ ದರ್ಶಿನಿ ಪ್ರಶಾಂತ ಶೆಟ್ಟಿ ಈಟಿವಿಯ 'ಎದೆತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳುತ್ತಿರುವುದು ಅಂಕೋಲೆಗೆ ಹೆಮ್ಮೆ.

ಖಾರಲ್ಯಾಂಡ್ ಅಭಿವೃದ್ಧಿ

ತಾಲೂಕಿನ ಬಹುತೇಕ ಪ್ರದೇಶದಲ್ಲಿ ಭತ್ತ ಪ್ರಮುಖ ಬೆಳೆಯಾಗಿದೆ. ಈ ತಾಲೂಕಿನ ಮಟ್ಟಿಗೆ ಗಂಗಾವಳಿ ನದಿ ಜೀವನದಿಯಾಗಿದ್ದು ಇದರೊಂದಿಗೆ ಕೇಣಿ, ಪೂಜಗೇರಿ, ಹಟ್ಟಿಕೇರಿ ನದಿಗಳು ಕೃಷಿಗೆ ವರವಾಗಿವೆ. ಈ ನದಿಯ ಪಾತ್ರದಲ್ಲಿ ಭತ್ತದ ಕೃಷಿಯ ಜೊತೆಗೆ ಕಲ್ಲಂಗಡಿ, ಶೇಂಗಾ ಪ್ರಧಾನವಾಗಿ ಬೆಳೆಯಲಾಗುತ್ತದೆ. ಇಂದಿಗೂ ಅನೇಕ ಕೃಷಿ ಪ್ರದೇಶ ಉಪ್ಪು ನೀರಿಗೆ ಬಲಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಖಾರ್‌ಲ್ಯಾಂಡ್ ಅಭಿವೃದ್ಧಿ ಮತ್ತು ಚೆಕ್ ಡ್ಯಾಂ ನಿರ್ಮಾಣಕ್ಕೆ ಆದ್ಯತೆ ನೀಡಬೇಕಾಗಿದೆ. ಇದರಿಂದ ಕೃಷಿ ಪ್ರದೇಶದ ವಿಸ್ತರಣೆಯಾಗುವುದರ ಜೊತೆಗೆ ಕ್ಷಾರ ನೀರು ಕೃಷಿ ಪ್ರದೇಶಕ್ಕೆ ಹೋಗದಂತೆ ಶಾಶ್ವತವಾಗಿ ತಡೆಯಬಹುದಾಗಿದೆ. ಚೆಕ್ ಡ್ಯಾಂ ನಿರ್ಮಾಣದಿಂದ ಅಂತರ್ಜಲ ಮಟ್ಟ ಏರಿಕೆಯಾಗಿ ಈ ಪ್ರದೇಶದ ಕುಡಿಯುವ ನೀರಿನ ಸಮಸ್ಯೆಗೆ ತಕ್ಕ ಮಟ್ಟಿನ ಪರಿಹಾರವು ಸಿಗಬಹುದಾಗಿದೆ.

ಇದರ ನಿರ್ಮಾಣದಿಂದಾಗುವ ಹಿನ್ನೀರಿನಲ್ಲಿ ವಿಶಿಷ್ಟವಾದ ಸಿಗಡಿ, ಏಡಿ ಮತ್ತಿತರ ಬೆಲೆಬಾಳುವ ಸಿಹಿನೀರಿನ ಮೀನುಗಳ ಕೃಷಿಯೂ ಸಾಧ್ಯವಾಗಲಿದೆ. ಈ ಕಾರಣದಿಂದ ಸಾಂಪ್ರದಾಯಿಕ ಮೀನುಗಾರರ ಆರ್ಥಿಕ ಅನುಕೂಲತೆಗೂ ಈ ಯೋಜನೆ ಉಪಯೋಗವಾಗಲಿದೆ.

ಕಲ್ಲಂಗಡಿ ಮತ್ತು ಮಾವು :

ಅಂಕೋಲಾ ತಾಲೂಕಿನಲ್ಲಿ ಕಲ್ಲಂಗಡಿ ಬೆಳೆಯನ್ನು ಕಳೆದ ಹತ್ತು ವರ್ಷಗಳಿಂದ ಬೆಳೆಯಲಾಗುತ್ತದೆ. ಪ್ರತಿ ವರ್ಷ ಈ ಕಲ್ಲಂಗಡಿಯ ವ್ಯವಹಾರ ಅಂಕೋಲಾ ತಾಲೂಕಿನಲ್ಲಿಯೇ ೧೦ ರಿಂದ ೧೫ ಕೋಟಿ ರೂ. ದಾಟಿದೆ. ಅಂಕೋಲಾದ ಕಲ್ಲಂಗಡಿಗೆ ಭಾರೀ ಬೇಡಿಕೆಯೂ ಇದೆ.

ಅದೇ ರೀತಿ ಅಂಕೋಲೆಯ ಕರಿ ಇಸಾಡ ಮಾವಿಗೆ ಭಾರಿ ಬೇಡಿಕೆ ಇದ್ದು, ಹೊರ ರಾಜ್ಯ ದೇಶಗಳಲ್ಲೂ ಬೇಡಿಕೆಯಿದೆ.

ಮೀನುಗಾರಿಕೆ :

ಮೀನುಗಾರಿಕೆ ಇಲ್ಲಿಯ ಮತ್ತೊಂದು ಪ್ರಮುಖ ಉದ್ಯೋಗವಾಗಿದೆ. ಹಾರವಾಡದಿಂದ ಮಂಜಗುಣಿ ತನಕದ ವಿಸ್ತಾರದ ಕಡಲ ತೀರ ಇಲ್ಲಿ ಮೀನುಗಾರಿಕೆಗೆ ಲಭ್ಯ. ಈ ಉದ್ಯೋಗಕ್ಕೆ ಬೇಲೇಕೇರಿ ಬಂದರು ಪ್ರಶಸ್ತವಾಗಿತ್ತು. ಆದರೆ, ಇಂದು ಅದಿರು ಉದ್ಯೋಗದ ಕಾರಣವಾಗಿ ತನ್ನ ಹಿರಿಮೆಯನ್ನು ಕಳೆದುಕೊಂಡಿದೆ. ಇದರಿಂದಾಗಿ ಇಲ್ಲಿ ಮೀನುಗಾರಿಕೆಯ ಅವಕಾಶ ಕಡಿಮೆಯಾಗುತ್ತಿದೆ. ಈ ಕಾರಣದಿಂದ ಇಲ್ಲಿಯ ಭಾವಿಕೇರಿ, ಗಾಬೀತಕೇಣಿಯ ಬಂದರನ್ನು ಪುನರುಜ್ಜೀವನಗೊಳಿಸುವ ಕಾರ್ಯ ನಡೆಯಬೇಕು. ಇದು ಈ ಹಿಂದೆ ಪ್ರಮುಖ ಮೀನುಗಾರಿಕೆಯ ಬಂದರಾಗಿತ್ತು. ಇದನ್ನು ಮತ್ತೆ ಅಭಿವೃದ್ಧಿಗೊಳಿಸಿದರೆ ತಾಲೂಕಿನ ಮೀನುಗಾರರಿಗೆ ತುಂಬಾ ಅನುಕೂಲವಾಗಲಿದೆ. ಇದೇ ರೀತಿ ಸಮುದ್ರದ ದಂಡೆಗುಂಟ ಬೆಳಂಬಾರ, ಮಂಜಗುಣಿಯ ಕುರಿತು ವಿಚಾರ ಮಾಡಿ ಅಲ್ಲೂ ಮೀನುಗಾರರ ಅನುಕೂಲಕ್ಕಾಗಿ ಬಂದರು ಸ್ಥಾಪನೆಯ ಅವಶ್ಯಕತೆ ಇದೆ.

ಅಂಕೋಲಾ – ಹುಬ್ಬಳ್ಳಿ ರೈಲು :

ಕೇವಲ ಐದು ವರ್ಷಗಳಲ್ಲಿ ಮುಂಬೈಯಿಂದ ಕೇರಳದವರೆಗೆ ಕೊಂಕಣ ರೇಲ್ವೆ ಯೋಜನೆಯನ್ನು ಮುಗಿಸಿದ ಕೀರ್ತಿ ಆಗಿನ ಎನ್. ಡಿ. ಎ. ಸರ್ಕಾರಕ್ಕೆ ಸೇರುತ್ತದೆ. ಇಚ್ಛಾಶಕ್ತಿ ಇದ್ದರೆ ಏನನ್ನೂ ಸಾಧಿಸಬಹುದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆ ಸರಕಾರ ಇನ್ನೊಂದೈದು ವರ್ಷ ಮುಂದುವರಿದರೆ ಅಂಕೋಲಾ – ಹುಬ್ಬಳ್ಳಿ ರೇಲ್ವೆ ಮಾರ್ಗ ಪೂರ್ಣಗೊಂಡು ಹುಬ್ಬಳ್ಳಿ–ಅಂಕೋಲಾ ಬೆಸುಗೆಯೊಂದಿಗೆ ಇಂದು ಉತ್ತರಕನ್ನಡ ಜಿಲ್ಲೆ ಅಭಿವೃದ್ಧಿಯ ಮುಂಚೂಣಿಯಲ್ಲಿರುತ್ತಿತ್ತು. ಆಗ ಪ್ರಧಾನ ಮಂತ್ರಿಗಳಾದ ವಾಜಪೇಯಿಯವರಿಂದ ಉದ್ಘಾಟನೆಗೊಂಡ ಈ ಮಾರ್ಗ ಕಲಘಟಗಿಯವರೆಗೆ ಪೂರ್ಣಗೊಂಡು ನಂತರ ಸ್ಥಗಿತಗೊಂಡು ಮೊನ್ನೆ ಮೊನ್ನೆ ಮತ್ತೆ ಪರಿಸರವಾದಿಗಳು ಬಂದು ಸಮೀಕ್ಷೆ ನಡೆಸಿ ಹೋಗಿದ್ದಾರೆ. ಆನೆ ತಿರುಗಾಡುವ ಸ್ಥಳವೆಂದು ಬಣ್ಣಿಸಿರುವುದು ಜಿಲ್ಲೆಯಾದ್ಯಂತ ನಗೆಪಾಟಲಿಗೆ ಗುರಿಯಾಗಿದೆ. ಹಿಂದೆ ಸರ್ವೆಮಾಡಿ ಹಸಿರು ನಿಶಾನೆ ತೋರಿಸಿದ ನಂತರವೇ ಅಂದಿನ ಪ್ರಧಾನಿ ವಾಜಪೇಯಿಯವರು ಉದ್ಘಾಟನೆ ಮಾಡಿದ್ದಾರೆ. ಅಂದಿಲ್ಲದ ಆನೆಗಳು ಇಂದೆಲ್ಲಿಂದ ಬಂದವೋ ಗೊತ್ತಾಗುತ್ತಿಲ್ಲ! ಇದೆಲ್ಲ ಇಚ್ಛಾಶಕ್ತಿಯ ಕೊರತೆಯ ಪರಿಣಾಮ ಎನ್ನಬೇಕಾಗಿದೆ.

ಪ್ರವಾಸೋದ್ಯಮ:

ಪ್ರವಾಸೋದ್ಯಮದ ದೃಷ್ಟಿಯಿಂದಲೂ ಅಂಕೋಲಾ ತಾಲೂಕು ಮಹತ್ವದ ಸ್ಥಾನದಲ್ಲಿದೆ. ಇಲ್ಲಿಯ ಬೇಲೇಕೇರಿ ತೀರ ಸುಂದರ ಪ್ರವಾಸಿ ತಾಣವೂ ಹೌದು. ಇಲ್ಲಿ ಅನೇಕ ಚಲನಚಿತ್ರಗಳ ಚಿತ್ರೀಕರಣ ಸಹ ನಡೆದಿದೆ. ಆದರೆ ಇಲ್ಲಿ ಅದಿರು ಬಂದ ಮೇಲೆ ಪ್ರಕೃತಿ ಸೌಂದರ್ಯದ ಮೇಲೆ ಧೂಳಿನ ಮುಸುಕು ಕವಿದ ಪರಿಣಾಮ ಪ್ರವಾಸಿಗರಾರೂ ಬರದಂತಾಗಿದೆ. ಇದರ ಜೊತೆಗೆ ಬಸಕಲ್‌ಗುಡ್ಡ, ಶೇಡಿಕುಳಿ, ನದಿಭಾಗ, ಹೊನ್ನೇಬೈಲ್ ಮುಂತಾದ ಸುಂದರ ತೀರಗಳೂ ಸಹ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದ್ದು, ಇವನ್ನೂ ಸಹ ಅಭಿವೃದ್ಧಿಪಡಿಸಬೇಕಾಗಿದೆ.

ಇನ್ನು ಅಂಕೋಲಾ ತಾಲೂಕಿನ ಜೀವನದಿ ಗಂಗಾವಳಿಯ ಮೇಲೆ ನಿರಂತರ ದೌರ್ಜನ್ಯ ನಡೆದಿದೆ. ಇದರಿಂದ ಸಾಮರ್ಥ್ಯಕ್ಕಿಂತ ಹೆಚ್ಚು ನೀರು ಬಸಿದು, ಅಕ್ಕ–ಪಕ್ಕದ ತಾಲೂಕುಗಳ ಜನರದಾಹ ಇಂಗಿಸುವ ಕಾರ್ಯ ನಿರಂತರ ನಡೆದಿದೆ. ಇದರಿಂದಾಗಿ ಅಂಕೋಲಾದ ಜನ ನಿರಂತರ ನೀರಿನ ಬವಣೆಗೆ ಒಳಗಾಗುತ್ತಿದ್ದಾರೆ. ಅಂಕೋಲೆ ಉದ್ಯಮ ದೃಷ್ಟಿಯಿಂದ ಮುಂದೆಬರಲು ವ್ಯಾಪಾರೋದ್ಯಮ ಬಲಗೊಳ್ಳಲು ಗಂಗಾವಳಿ ನದಿಗೆ ಸೇತುವೆಯಾಗಬೇಕು. ಅಂತೆಯೇ ಕೇಣಿ ಸೇತುವೆಯ ಅಗಲೀಕರಣ ಹಾಗೂ ಬೇಲೇಕೇರಿ ನದಿಗೆ ಸೇತುವೆಯಾದರೆ ಗೋಕರ್ಣ, ಅಂಕೋಲಾ, ಕಾರವಾರ ನಗರಗಳ ವ್ಯಾಪಾರೋದ್ಯಮ ಬೆಳೆದು ಗೋಕರ್ಣ ಕ್ಷೇತ್ರವು ಸಮೀಪವಾಗಿ ಪ್ರವಾಸೋದ್ಯಮ ತನ್ನಷ್ಟಕ್ಕೆ ಚೇತರಿಸಿಕೊಳ್ಳುತ್ತದೆ. ಉತ್ಪನ್ನದ ದೃಷ್ಟಿಯಿಂದಲೂ ಇದು ಗಮನ ಸೆಳೆಯಲಿದೆ.

ಇದರ ಜೊತೆಗೆ ಅಂಕೋಲಾ ತಾಲೂಕು ಪುನರ್ವಸತಿ ಪ್ರದೇಶವಾಗಿ ಪರಿಣಮಿಸಿದ್ದು, ಹಾರವಾಡ, ಹಟ್ಟಿಕೇರಿ, ಹಳವಳ್ಳಿ, ಕಲ್ಲೇಶ್ವರ, ಬೇಲೇಕೇರಿ, ಶಿರಗುಂಜಿ ಮತ್ತಿತರ ಭಾಗದಲ್ಲಿ ನಿರ್ಮಾಣವಾಗಿರುವ ಪುನರ್ವಸತಿ ಬಡಾವಣೆಗಳು ಇಂದಿಗೂ ತಮ್ಮ ಒಡಲಲ್ಲಿ ನೂರೆಂಟು ಸಮಸ್ಯೆಗಳನ್ನು ಮತ್ತು ಬಳಲುತ್ತಿದೆ ಈ ಸಮಸ್ಯೆಗೆ ಯೋಗ್ಯ ಪರಿಹಾರ ನೀಡುವ ಪ್ರಯತ್ನ ಸರಕಾರ ಮಾಡಬೇಕು.

ಅಂಕೋಲೆಯಲ್ಲಿ ಕಾಣುತ್ತಿರುವ ಕೊರತೆಗಳು :

ಅಂಕೋಲೆ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ರಾಷ್ಟ್ರಮಟ್ಟದಲ್ಲಿ ತನ್ನ ಹೆಸರನ್ನು ಮೆರೆಸಿತ್ತು. ಭಾರತದ ಎರಡನೇ ಬಾರ್ಡೋಲಿ ಎಂಬ ಹೆಸರನ್ನು ತಂದುಕೊಂಡಿತ್ತು. ತ್ಯಾಗವೀರರ ನಾಡೆಂದೂ ಬಣ್ಣಿಸಲ್ಪಟ್ಟಿತ್ತು. ಇಂಥ ಅಂಕೋಲೆ ಇಂದು 'ಅಂಕೋಲಾ' ಎಂಬ ಹೆಸರಿನ ಮತಕ್ಷೇತ್ರವನ್ನೇ ಕಳೆದುಕೊಂಡು ಅನಾಥವಾಗಿದೆಯೇ ಎನ್ನುವಂತಾಗಿದೆ.

ಅಂಕೋಲೆ–ಹುಬ್ಬಳ್ಳಿಯ ರೈಲುಮಾರ್ಗದ ಬೇಡಿಕೆ ಬಲು ಹಿಂದಿನದು. ಇದಕ್ಕಾಗಿ ನಿರಂತರ ಹೋರಾಟ ನಡೆದೇ ಇದೆ. ನಮ್ಮ ಕೂಗು ನಮ್ಮನ್ನಾಳುವ ಧುರೀಣರಿಗೆ ಕೇಳುತ್ತಲೇ ಇಲ್ಲ. ಅಂಕೋಲೆಯ ಮಧ್ಯದಿಂದ ಕೊಂಕಣ ರೇಲ್ವೆ ಮಾರ್ಗ ಹಾದುಹೋಗಿದೆ. ಇಲ್ಲಿಯ ಜನತೆ ಭೂಮಿ ತ್ಯಾಗ ಮಾಡಿದೆ. ಆದರೆ, ಮಹತ್ವದ ಯಾವ ರೈಲುಗಳೂ ನಿಲ್ಲುತ್ತಿಲ್ಲ! ಇದಕ್ಕೂ ಹೋರಾಟ ಮುಂದುವರಿದಿದೆ. ಎರಡು ವರ್ಷಗಳ ಹಿಂದೆ ಬೆಂಗಳೂರು ರಾಜಧಾನಿಯಿಂದ ಮಂಗಳೂರು ಮಾರ್ಗವಾಗಿ ಕಾರವಾರಕ್ಕೆ ರೈಲು ಬಿಡುವ ಆದೇಶ ರೇಲ್ವೆ ಇಲಾಖೆ ಮಾಡಿತು. ಆದರೆ ಆ ರೈಲು ಕಾರವಾರಕ್ಕೆ ಬರುವ ಬದಲು ಕೇರಳದ ಕಣ್ಣಾನೂರಿಗೆ ತೆರಳುವಂತಾಯಿತು. ಇದು ಯಾರ ಗಮನಕ್ಕೂ ಬಾರದಿರುವುದು ಆಶ್ಚರ್ಯವಲ್ಲವೇ ? ನಮ್ಮ ಕನ್ನಡನಾಡಿನ ಜನಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ ನೋಡಿ!

ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗಮಾಡಿದ ನಮ್ಮ ಜನ ದೇಶದ ರಕ್ಷಣೆಯ ಸಲುವಾಗಿ ಸೀಬರ್ಡ್, ನೌಕಾನೆಲೆ ಯೋಜನೆಗೂ ಇಲ್ಲಿಯ ಬಡಜನತೆ ತಮ್ಮ ಭೂಮಿ, ಮನೆ, ಮಠ, ದನ– ಕರು, ಗಿಡ–ಮರ, ತ್ಯಾಗಮಾಡಿ ನಿರಾಶ್ರಿತರಾಗಿ ೨೫ ವರ್ಷ ಮೇಲ್ಪಟ್ಟರೂ ದೊರೆಯಬೇಕಾದ ಪರಿಹಾರ ದೊರೆಯಲಿಲ್ಲ. ಪರಿಹಾರದ ಹಂಬಲದಲ್ಲಿಯೆ ಅನೇಕ ನಿರಾಶ್ರಿತರು ಸಾವು ಕಂಡರು. ಇದಕ್ಕಾಗಿಯೇ ಸೀಬರ್ಡ್ ನೌಕಾನೆಲೆ ನಿರಾಶ್ರಿತರ ವೇದಿಕೆ (ರಿ.) ಕಾರವಾರ, ಅಂಕೋಲಾ ಹುಟ್ಟಿಕೊಂಡಿತು. ಸಾಮಾಜಿಕ ಧುರೀಣರಾದ ಆರ್.ಜಿ. ನಾಯಕ, ಕೆ.ಕೆ. ನಾಯಕ, ಕೆ. ಕೆ. ಪಡ್ತಿ ಈ ವೇದಿಕೆಯ ಪ್ರಾರಂಭದ ದಿನಗಳಲ್ಲಿ ನಿಷ್ಠೆಯಿಂದ ದುಡಿದರು. ಆನಂತರದಲ್ಲಿ ಮಾಜಿ ಸಚಿವ ಪ್ರಭಾಕರ ರಾಣೆ ಗೌರವಾಧ್ಯಕ್ಷರಾಗಿ, ಬಿ. ಹೊನ್ನಪ್ಪ ಭಾವಿಕೇರಿ ಅಧ್ಯಕ್ಷರಾಗಿ, ಕವಿ, ಸಾಹಿತಿ, ದಿ। ಸದಾನಂದ ಪಡ್ತಿ ಪ್ರಧಾನ ಕಾರ್ಯದರ್ಶಿಯಾಗಿ ಅವಿರತ ಹೋರಾಟವನ್ನು ಮುಂದುವರೆಸಿ ರಕ್ಷಣಾ ಇಲಾಖೆಯನ್ನೇ ಬೆರಗುಗೊಳಿಸುವಂತೆ ಮಾಡಿ, ಹಲವಾರು ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಸಫಲರಾದರು. ಈ ಸಂದರ್ಭದಲ್ಲಿ ಗಣಪತಿ ಮಾಂಗ್ರೆ, ದಿ। ಸುಬ್ರಾಯ ವಿ. ನಾಯಕ, ಶ್ರೀ ಚಂದ್ರಕಾಂತ ಖಾರ್ವಿ, ರವೀಂದ್ರ ಅಮದಳ್ಳಿ, ತಿಮ್ಮಣ್ಣ ಬೀರಪ್ಪ ನಾಯಕ ಮುಂತಾದವರನ್ನು ನೆನೆಸಿಕೊಳ್ಳುತ್ತೇನೆ. ಕಾಲಕಾಲಕ್ಕೆ ನಿರಾಶ್ರಿತರ ಪ್ರತಿಭಟನೆಗೆ ತನು–ಮನ–ಧನದಿಂದ ನೆರವು ನೀಡಿದ ಉದ್ಯಮಿ, ಸಹಕಾರಿ ಧುರೀಣ ಆರ್.ಎನ್. ನಾಯಕ ಅವರನ್ನು ವೇದಿಕೆ ಸ್ಮರಿಸುತ್ತದೆ.

ಈಗ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ದಿ। ಸದಾನಂದ ಪಡ್ತಿಯವರ ಮಗ ರವೀಂದ್ರ ಅಮದಳ್ಳಿ ಅವರು ಕಾಲಕಾಲಕ್ಕೆ ಸೀಬರ್ಡ್ ವೇದಿಕೆಯನ್ನು ಎಚ್ಚರಿಸುವ ಮೂಲಕ ಮುಂದಿನ ಪ್ರತಿಭಟನೆಗೆ ಕಾರ್ಯಕ್ರಮ ರೂಪಿಸಿ, ವೇದಿಕೆಯ ಮುಂದಿಟ್ಟಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಪ್ರತಿಭಟನೆಗೆ ಇಳಿಯುವುದು ಅನಿವಾರ್ಯವಾಗಿದೆ.

ಇತಿಹಾಸದ ಹಿನ್ನೆಯ ಚಾರಿತ್ರಿಕ ಹೆಸರಿನ ಅಂಕೋಲೆಗೆ ವಿಶೇಷ ಸೌಲಭ್ಯ ಸರಕಾರದಿಂದ ದೊರೆಯಲಿಲ್ಲ. ನೀರಿದ್ದರೂ ನೀರಿನ ಸಮಸ್ಯೆ, ಬಸ್ಸುಗಳಿದ್ದರೂ ಪ್ರಯಾಣಿಕರ ಗೋಳು, ಜಮೀನಿದೆ ಆಳುಗಳ ಕೊರತೆ. ಇದೇ ರೀತಿ ಮುಂದುವರಿಯುತ್ತಿದೆ. ಇಂತಹ ಹಲವಾರು ಸಮಸ್ಯೆಗಳಿವೆ. ಇದಕ್ಕೆ ನಮ್ಮ ಜನಪ್ರತಿನಿಧಿಗಳು ಸ್ಪಂದಿಸುವರೇ! ರೈಲುಗಳು ಓಡಾಡುತ್ತಿವೆ. ಅಂಕೋಲೆಯಲ್ಲಿ ನಿಲುಗಡೆ ಇಲ್ಲ. ಹೆಸರು ಬಾರ್ಡೋಲಿ. ಯಾವುದೇ ಸೌಲಭ್ಯ ಬಾರ್ಡೋಲಿ ಅಂಕೋಲೆಗಿಲ್ಲ.

ಯಕ್ಷಗಾನ

ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಕಲೆ ತುಂಬಾ ಕಲಾತ್ಮಕವಾಗಿದ್ದು ಮೇಲ್ಮಟ್ಟದಲ್ಲಿದೆ. ಉತ್ತಮ ಯಕ್ಷಗಾನ ಕಲಾವಿದರಿದ್ದಾರೆ. ಹಾಸ್ಯಗಾರರಿದ್ದಾರೆ. ಭಾಗವತರಿದ್ದಾರೆ, ಅನೇಕ ಮೇಳಗಳಿವೆ. ಭಾವಿಕೇರಿಯ ದಿ. ರಾಮ ನಾಯಕ, ಬಾಸಗೋಡದ ದೊಡ್ಡ ಮೋನಪ್ಪ ನಾಯಕ, ಹಿಚ್ಕಡದ ಸಣ್ಣ ಮೋನಪ್ಪ ನಾಯಕ, ವಿಠಲ ನಾಯಕ, ವಿಶ್ವನಾಥ ಶೇಣಿ, ದತ್ತ ಶೇಟ, ವಂದಿಗೆಯ ಶ್ರೀ ವಿ. ಜೆ. ನಾಯಕ, ವಿಠೋಬ ಹಮ್ಮಣ್ಣ ನಾಯಕ, ಸಂದೀಪ ನಾಯಕ ಭಾವಿಕೇರಿ, ನಾರಾಯಣ ನಾಯ್ಕ, ಭಾವಿಕೇರಿ (ಹಾಸ್ಯ ಪಾತ್ರ) ಹನುಮಟ್ಟೆಯ ವಾಮನ ನಾಯ್ಕ, ವಸಂತ ಖೇಮು

ನಾಯ್ಕ, ಬೊಮ್ಮಯ್ಯ ಗಾಂವಕರ, ಮಂಜು ನಾಯ್ಕ, ರಾಜೇಶ ನಾಯಕ, ದಿ. ಮಂಗೇಶ ಗೌಡ, ಭಾಗವತ ಆನಂದು ಆಗೇರ ಹೀಗೆ ಇನ್ನೂ ಎಷ್ಟೋ ಜನ ಹಿರಿಕಿರಿಯ ಕಲಾವಿದರಿದ್ದಾರೆ.

ಅವರೆಲ್ಲರಿಗೂ ಪ್ರಣಾಮಗಳು.

'ನಮ್ಮ ಜಿಲ್ಲೆ ಕನ್ನಡ ಜಿಲ್ಲೆಯೆಂದು ಕರೆಸಿಕೊಂಡಿದೆ.' ಇದು ಒಂದು ರೀತಿಯ ಅಭಿಮಾನದ ಸಂಗತಿ. ಕೇವಲ ಕನ್ನಡದ ಅಭಿಮಾನವಿದ್ದರೆ ಸಾಲದು. ಕನ್ನಡವನ್ನು ಉಳಿಸಿ ಬೆಳೆಸುವ ಬದ್ಧತೆ ಬೇಕು. ಕನ್ನಡದಲ್ಲಿಯೇ ಎಲ್ಲ ವ್ಯವಹಾರಗಳು ಬೆಳೆಯಬೇಕು. ಭಾಷೆ ಬೆಳೆದರೆ ಸಂಸ್ಕೃತಿಯು ಬೆಳೆಯುತ್ತದೆ ಎಂಬ ಅರಿವಿರಬೇಕು. ಇಂಗ್ಲೀಷ್ ಬೇಡವೆಂದು ಯಾರೂ ಹೇಳುತ್ತಿಲ್ಲ. ಇಂಗ್ಲೀಷ್ ಕಲಿಕೆ ಇನ್ನೂ ಚೆನ್ನಾಗಿ ಮುಂದುವರಿಯಬೇಕು. ಭಾಷೆಗಳ ಮೇಲಿನ ದ್ವೇಷ ಯಾರಿಗೂ ಹಿತತರುವಂತಹದಲ್ಲ. ಇಂದಿನದು ಕಂಪ್ಯೂಟರ್ ಯುಗ, ಇಂಗ್ಲೀಷ್ ಬೇಕೆನ್ನುವ ಭ್ರಮೆ ಇದೆ. ಇಂಗ್ಲೀಷ್ ಗೊತ್ತಿಲ್ಲದವರೂ ಸಹ ಕಂಪ್ಯೂಟರ್‌ನಲ್ಲಿ ಕೆಲಸಮಾಡುವ ಸಾಫ್ಟವೇರ್ ಇಸ್ರೇಲ್ ಕಂಪನಿಯ ಸಹಭಾಗಿತ್ವದಲ್ಲಿ ಸಿದ್ಧಪಡಿಸಲಾಗಿದೆ. ಇಷ್ಟೆಲ್ಲ ಇದ್ದರೂ ನಾವು ಏನೂ ಗೊತ್ತಿಲ್ಲದವರಂತಿರುವುದು ಮಾತ್ರ ಸರಿಯಿಲ್ಲ.

ಜಿಲ್ಲೆಯ ಮುಂದಾಳತ್ವ ಜವಾಬ್ದಾರಿಯುತವಾಗಿದ್ದರೆ ಕನ್ನಡ ನಾಡು–ನುಡಿಯ ಅಭಿವೃದ್ಧಿ ತಾನಾಗಿಯೇ ಆಗುತ್ತದೆ. ರಾಜ್ಯ ಹಾಗೂ ಜಿಲ್ಲೆಯಲ್ಲಿ ಅಂತಹ ಅನೇಕ ಮನಸ್ಸುಗಳಿವೆ. ಅವರೊಡನೆ ನಾವು ಹೊಂದಾಣಿಕೆಯಿಂದಿದ್ದು ಕನ್ನಡ ತೇರನ್ನು ಎಳೆಯಲು ಮುಂದಾಗಬೇಕು.

ನಮ್ಮ ಜಿಲ್ಲೆಯಲ್ಲಿ ಸಾಹಿತ್ಯೋತ್ಸಾಹಿ ರೋಹಿದಾಸ ನಾಯ್ಕರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ತುಂಬಾ ಉತ್ಸುಕತೆಯಿಂದ ಕೆಲಸ ಮಾಡಿದ್ದಾರೆ. ಜಿಲ್ಲೆಯ ಸಾಹಿತ್ಯಾಭಿಮಾನಿಗಳಿಗೆ ಹೊಸ ಹುರುಪನ್ನು ನೀಡುವಲ್ಲಿ ಪ್ರಯತ್ನಿಸಿದ್ದಾರೆ. ಎಲ್ಲರನ್ನೂ ತನ್ನ ತೆಕ್ಕೆಯಲ್ಲಿ ತೆಗೆದುಕೊಂಡು ಸಾಹಿತ್ಯ ಕಾರ್ಯ ಕಲಾಪಗಳು ತುಂಬಾ ಯಶಸ್ವಿಯಿಂದ ನಡೆಯುವಂತೆ ಮಾಡಿದ್ದಾರೆ. ಯಾವ ಅಪವಾದವೂ ಇವರ ಮೇಲಿಲ್ಲದಿರುವದು ಇವರ ಪ್ರಾಮಾಣಿಕತೆಗೆ ಹಿಡಿದ ಕನ್ನಡಿಯಾಗಿದೆ. ಇಂಥ ನಾಯಕತ್ವದ ಅವಶ್ಯಕತೆ ಇಂದಿದೆ.

ಅಂಕೋಲೆಯಲ್ಲಿ ಕರ್ನಾಟಕ ಸಂಘ, ರೋಟರಿ ಕ್ಲಬ್, ಲಾಯನ್ಸ್ ಕ್ಲಬ್‌ಗಳಂಥ ಹತ್ತಾರು ಸಂಸ್ಥೆಗಳಿವೆ. ಜನಹಿತ ಕಾರ್ಯಗಳಲ್ಲಿ ತೊಡಗಿಕೊಂಡಿವೆ.

'ಆಶ್ರಯ ಫೌಂಡೇಶನ್' ಇತ್ತೀಚಿನ ನಾಲ್ಕೈದು ವರ್ಷಗಳಿಂದ ಸಾಮಾಜಿಕ ಕಾಳಜಿಯನ್ನು ಮುಂದಿಟ್ಟುಕೊಂಡು ನೇತ್ರದಾನದಂತ ಪವಿತ್ರ ಕಾರ್ಯಕ್ರಮದಲ್ಲಿ ತನ್ನನ್ನು ತೊಡಗಿಸಿಕೊಂಡ ಹಿರೇಗುತ್ತಿಯ ರಾಜೀವ ಗಾಂವಕರ ಇವರು "ಆಶ್ರಯ ಫೌಂಡೇಶನ್" ಸಂಸ್ಥೆಯ ಮೂಲಕ ಅನೇಕ ಕೆಲಸ ಮಾಡಿ ಪರಿಚಿತರಾಗಿದ್ದಾರೆ. ಅಂಕೋಲೆಯಲ್ಲಿಯೇ ಇವರ ಕೇಂದ್ರ ಕಚೇರಿ ಇದೆ. ಬಡವರಿಗೆ ಅನುಕೂಲಕರ ವಾತಾವರಣ ಕಲ್ಪಿಸಿ ತಮ್ಮ ಸಂಸ್ಥೆಯಿಂದ ಸಹಾಯ ನೀಡುತ್ತಿದ್ದಾರೆ. ಇಂಥ ಸಂಸ್ಥೆಗಳನ್ನು ನಾವು ಅಭಿನಂದಿಸಬೇಕು.

ನಮ್ಮ ನಾಟಕಕಾರ, ಶಿಕ್ಷಣತಜ್ಞ, ನೃತ್ಯಪಟು, ಸಾಹಿತಿ, ಕವಿ, ಸದ್ಯ 'ನಾಟ್ಯ ಶಿರೋಮಣಿ' ಬಿರುದನ್ನು ತಮ್ಮ ಮುಡಿಗೇರಿಸಿಕೊಂಡ ಗೋಪಾಲಕೃಷ್ಣ ಪಾಂಡುರಂಗ ನಾಯಕ ೮೨ ರ ಇಳಿ ವಯಸ್ಸಿನ ಇವರು ಕನ್ನಡಕ್ಕಾಗಿ ಶ್ರಮಿಸಿದ ವ್ಯಕ್ತಿಯಾಗಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಇವರನ್ನು ಗಮನಿಸದಿರುವುದು ದೊಡ್ಡ ಕೊರತೆ ಎಂದು ಭಾವಿಸಿದ್ದೇನೆ.

ಪ್ರಾರಂಭದಲ್ಲಿಯೇ 'ಬಾರಿಸು ಕನ್ನಡ ಡಿಂಡಿಮವ' ಹಾಡಿದ್ದೇನೆ. 'ಕವಿ ಋಷಿ ಸಂತರ ಆದರ್ಶದಲ್ಲಿ ಸರ್ವೋದಯವಾಗಲಿ ಸರ್ವರಲಿ' ಎಂಬ ಕವಿವಾಣಿಯನ್ನು ಮತ್ತೊಮ್ಮೆ ಸ್ಮರಿಸಿಕೊಂಡು ಸರ್ವರಿಗೂ ಶುಭಕೋರಿ ಕನ್ನಡ ನಮ್ಮ ಉಸಿರಾಗಿರಲಿ ಎಂದು ವಿನಮ್ರತೆಯಿಂದ ಕೇಳಿಕೊಳ್ಳುತ್ತ ತಮಗೆಲ್ಲರಿಗೂ ಧನ್ಯತಾಪೂರ್ವಕ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.


ಜೈ ಕನ್ನಡ, ಜೈ ಕರ್ನಾಟಕ

ಅಂಕೋಲಾ ತಾಲೂಕಾ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೨೩-೦೧-೨೦೧೩

ಸಮ್ಮೇಳನದ ಸರ್ವಾಧ್ಯಕ್ಷರು

ಸೌಜನ್ಯ ಸಾಹಿತಿ : ಪ್ರೊ॥ ಮೋಹನ ಹಬ್ಬು



ಅಂಕೋಲೆಯ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಪ್ರೊ. ಮೋಹನ ಹಬ್ಬು ಅವರು ಮೂಲತಃ ಕಾರವಾರದವರಾದರೂ ಸಹ ಅಂಕೋಲೆಯ ನಿವಾಸಿಯಾಗಿ ಬದುಕಿನ ಬಹುಭಾಗವನ್ನು ಇಲ್ಲಿಯೇ ಕಳೆದ ಸೃಜನಶೀಲ ಬರಹಗಾರರು. ದೀರ್ಘಕಾಲ ಭೌತಶಾಸ್ತ್ರ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಸೇವೆಗೈದ ಹಬ್ಬು ಅವರು ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರು. ಕನ್ನಡ, ಇಂಗ್ಲಿಷ್, ಹಿಂದಿ, ಕೊಂಕಣಿ ಮುಂತಾದ ಭಾಷೆಗಳನ್ನು ಕರಗತ ಮಾಡಿಕೊಂಡು ಭಾಷಾಂತರದಲ್ಲಿಯೂ ತಮ್ಮ ಛಾಪನ್ನು ಮೂಡಿಸಿದ್ದಾರೆ.

ಹಬ್ಬು ಅವರು ಕಾವ್ಯ, ಕಥೆ, ನಾಟಕ, ಪ್ರಬಂಧ, ಅನುವಾದ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಇವರ ಕಥೆಗಳು ವೈಜ್ಞಾನಿಕ ಹಾಗೂ ವೈಚಾರಿಕ ಸ್ಪರ್ಶದಿಂದ ಕೂಡಿವೆ. ಉತ್ತಮ ನಾಟಕಕಾರ, ನಿರ್ದೇಶಕ, ನಟರಾಗಿ, ಗಾಯಕರಾಗಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.

ತೆಂಕನ ಹಸಿರು ನಿಶಾನೆ, ಕುಸುರಿಯೊಳಗಣ ಕಸರು, ನಾಗಮುರಿ ಇವು ಹಬ್ಬು ಅವರ ಕವನ ಸಂಕಲನಗಳು. ವೈಶಾಖದ ಮಳೆ, ವೃತ್ತದೊಳಗೊಂದು ವೃತ್ತ ಇವು ಕಥಾ ಸಂಕಲನಗಳು, ಎರಡು ಬೀದಿ ನಾಟಕಗಳು, ಕರ್ಣ, ಏಕಲವ್ಯ ಮತ್ತು ಇತರ ಕಿರು ನಾಟಕಗಳು ಇವು ನಾಟಕ ಕೃತಿಗಳು. ಲಾಘವದ ಕ್ಷಣಗಳು ಇದು ಹನಿಗವನ ಸಂಕಲನ, ಬೆಳಕು, ವಿಜ್ಞಾನದ ಸಂಕಥನಗಳು ಹಾಗೂ ಚಿತ್ರಮಾಲೆ ವಿಮರ್ಶಾ ಕೃತಿಗಳು. ಕನ್ನಡದಲ್ಲಿ ಉರ್ದು ಶಾಯರಿಗಳು, ಹೊಸಬೆಳಕಿನ ಹಾದಿಯಲ್ಲಿ ಇವು ಹಬ್ಬು ಅವರ ಅನುವಾದ ಕೃತಿಗಳು.

ತಾಲೂಕಿನ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಗೌರವ ಪಡೆದ ಹಬ್ಬು ಅವರು ಅಂಕೋಲಾ ಕರ್ನಾಟಕ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅಂಕೋಲೆಯ ಶೈಕ್ಷಣಿಕ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸದಾ ಕ್ರಿಯಾಶೀಲರಾಗಿ ಪಾಲ್ಗೊಂಡು ಎಲ್ಲ ವಯೋಮಾನದವರೊಂದಿಗೆ ಸ್ನೇಹದಿಂದ ಒಡನಾಡುವ ಹಬ್ಬು ಅವರು ತಮ್ಮ ಬದುಕು ಹಾಗೂ ಬರವಣಿಗೆಯಲ್ಲಿ ಸೌಜನ್ಯತೆಯನ್ನು ತುಂಬಿಕೊಂಡವರು. ಇವರ ಕುರಿತು 'ತರಂಗಿಣಿ' ಎಂಬ ಅಭಿನಂದನಾ ಗ್ರಂಥ ಪ್ರಕಟಗೊಂಡಿದೆ. ದಿನಾಂಕ ೨೩-೦೧-೨೦೧೩ರಂದು ತಮ್ಮ ೬೯ನೇ ವಯಸ್ಸಿನಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗುವುದರೊಂದಿಗೆ ಸಮ್ಮೇಳನವನ್ನು ಚಲನಶೀಲಗೊಳಿಸಿದರು. ಅವರ ಕವನದ ಸಾಲುಗಳು ಹೀಗಿವೆ :

ಸಂಜೆಯಾಗುತ್ತಲಿದೆ ಹೊತ್ತು ಕಂತುವ ಹೊತ್ತು
ಚೆಲ್ಲಿಹನು ಬಣ್ಣಗಳ ಚೆದುರಿ ಬೆಳಕ....
ತೈಲ ಮುಗಿದರು ತುಸುವೆ ಆರ್ದ್ರವಾಗಿದೆ ಬತ್ತಿ
ಹಚ್ಚುವೆನು ಕಿರು ಹಣತೆ ದೀಪವನ್ನು.

ಪ್ರೊ॥ ಮೋಹನ ಹಬ್ಬು ಅವರ ಸರ್ವಾಧ್ಯಕ್ಷೀಯ ಭಾಷಣ

ಶಕ್ತಿಸ್ಥಲ ಅಂಕೋಲೆ : ಧಾರ್ಮಿಕ, ಐತಿಹಾಸಿಕ ಹಾಗೂ ರಾಷ್ಟ್ರೀಯ ನೆಲೆಗಳಲ್ಲಿ ಅಂಕೋಲೆ ಒಂದು ಶಕ್ತಿಸ್ಥಲ. ಇಲ್ಲಿನ ಹೆಚ್ಚಿನ ಸಂಖ್ಯೆಯ ದೇವಾಲಯಗಳಲ್ಲಿ ಶಕ್ತಿದೇವತೆಗಳೇ ಪ್ರತಿಷ್ಠಾಪನೆಗೊಂಡಿವೆ. ಭೂಮಿಯನ್ನು ಪ್ರತಿನಿಧಿಸುವ ಭೂಮಿತಾಯಿ–ಆಕೆ ಶಾಂತಾದುರ್ಗೆಯೂ ಹೌದು–ಈ ಊರಿನ ಅಧಿಷ್ಠಾತ್ರಿ, ಈ ಊರಿನ ಜನರೆಲ್ಲಾ ಆ ತಾಯಿಯ ಮಕ್ಕಳು. ಕಡುಬಡವರಿಂದ ಸಿರಿವಂತರವರೆಗೆ, ಕಾರ್ಮಿಕರು–ರೈತರು–ಮೀನುಗಾರರಿಂದ ಉದ್ಯಮಪತಿಗಳವರೆಗೆ, ಅಂಕೋಲಾವಾಸಿಗಳಿಂದ ಮುಂಬೈ ಮಹಾ ನಗರವಾಸಿಗಳವರೆಗೆ ಅಸಂಖ್ಯ ಭಕ್ತರು ಈ ತಾಯಿಯನ್ನು ಆರಾಧಿಸುತ್ತಾರೆ. ಆರ್ಯಾದುರ್ಗೆ, ಕುಂಡೋದರಿ, ಮಹಾಮಾಯಾ, ಕಾಳಮ್ಮ, ಅವರ್ಸೆಯ ಕಾತ್ಯಾಯನಿ ಈ ಎಲ್ಲ ದೇವತೆಗಳು ಕೂಡ ಈ ಮಹಾನ್ ಶಕ್ತಿಯ ವಿವಿಧ ರೂಪಗಳೆ. ಪ್ರಕೃತಿಸ್ವರೂಪರಾದ ಈ ದೇವತೆಗಳಿಗೆ ಸಂವಾದಿಯಾಗಿ ಪುರುಷ ದೇವತೆಗಳೂ ಇವೆ. ವೆಂಕಟರಮಣ, ಸುಂದರ ನಾರಾಯಣ, ಲಕ್ಷ್ಮೀ ನಾರಾಯಣ, ರಾಮನಾಥ, ಕದಂಬೇಶ್ವರ, ಕಣಕಣೇಶ್ವರ, ದತ್ತಾತ್ರೇಯ ಮೊದಲಾದ ದೇವರುಗಳು ಈ ಊರ ಶ್ರದ್ಧಾಕೇಂದ್ರಗಳಾಗಿವೆ. ಬೊಮ್ಮ ದೇವರು, ಹೊನ್ನಾರಾಕಾ, ಮುಕ್ರುಂಡಿ ದೇವರು ಮೊದಲಾದ ಗ್ರಾಮದೇವತೆಗಳು ಆಯಾ ಗ್ರಾಮಗಳ ಭಕ್ತಜನರಿಂದ ಪೂಜಿಸಲ್ಪಡುತ್ತಾರೆ. ದೇವರು–ದೈವಗಳ ಮೇಲಿರುವ ಪರಂಪರಾಗತ ನಂಬಿಕೆ ಭಾವುಕರ ಮಾನಸಿಕ ಅಗತ್ಯವಾಗಿ ಬೆಳೆದು ಬಂದಿರುವುದು ಸಹಜ ವಿದ್ಯಮಾನ.

ಐತಿಹಾಸಿಕವಾಗಿ ಅಂಕೋಲಾ ಸೀಮೆ ಪ್ರಾಚೀನ ಪ್ರದೇಶಗಳಲ್ಲೊಂದು. ಈ ಊರಿನ ಪ್ರಾಚೀನ ಇತಿಹಾಸದ ಒಂದು ಹೊರಳು ನೋಟವನ್ನು ಶ್ಯಾಮಸುಂದರ ಗೌಡರು ತಮ್ಮ 'ಅಂಕೋಲೆ: ಒಂದು ಸ್ಥೂಲ ಚಾರಿತ್ರಿಕ ಹಿನ್ನೆಲೆ' ಎಂಬ ಕಿರುಲೇಖನದಲ್ಲಿ ನೀಡಿದ್ದಾರೆ. ಕಳೆದ ಶತಮಾನದ ೩೦–೪೦ರ ದಶಕದಲ್ಲಿ ಅಂಕೋಲೆ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಸಾಹಸಮಯ, ರೋಚಕ ಕಥೆ ಚರಿತ್ರೆಯಲ್ಲಿ ದಾಖಲುಗೊಂಡಿದೆ. ಅಂಕೋಲಾ ಸೀಮೆಯ ಅನೇಕ ಹಿರಿಕಿರಿಯರು ನಡೆಸಿದ ಹೋರಾಟ, ಮಾಡಿದ ತ್ಯಾಗಗಳಿಂದಾಗಿ ಈ ತಾಲೂಕು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದೆ. ಸಾಮಾಜಿಕವಾಗಿ ಕೂಡ ಅಂಕೋಲೆ ಒಂದು ವಿಶಿಷ್ಟ ಪ್ರದೇಶ. ಈ ತಾಲೂಕಿನಲ್ಲಿರುವಷ್ಟು ಜನಾಂಗವೈವಿಧ್ಯವನ್ನು ಪ್ರಾಯಶ: ಇನ್ನಾವ ತಾಲೂಕುಗಳಲ್ಲಿಯೂ ಕಾಣಲಾಗದು. ಪ್ರತಿಯೊಂದು ಜನಾಂಗಕ್ಕಿರುವ ತನ್ನದೇ ಆದ ವಿಶಿಷ್ಟ ಆಡುಭಾಷೆ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನಿಂದಾಗಿ ಈ ಸೀಮೆ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಒಂದು ವಿಶಿಷ್ಟ ಪ್ರದೇಶವಾಗಿ ಪ್ರಕ್ಷಿಪ್ತಗೊಂಡಿದೆ. ಭಾಷಾ ವಿಜ್ಞಾನದಲ್ಲಿ ಸಂಶೋಧನೆ ಕೈಕೊಳ್ಳಬಯಸುವವರು ಅಂಕೋಲೆಯನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳಬಹುದಾಗಿದೆ.

ಸಾಂಸ್ಕೃತಿಕವಾಗಿಯೂ ಸಹ, ಅಂಕೋಲೆ ಒಂದು ಶಕ್ತಿಸ್ಥಲ. ಈ ಸೀಮೆಯ ಯಕ್ಷರಂಗದ ಬಗೆಗಿನ ಪ್ರೀತಿ, ಅಭಿಮಾನ ಅನುಪಮ. ಈ ಪ್ರೀತಿ ಯಾವುದೇ ಜನಸಮುದಾಯಕ್ಕೆ ಸೀಮಿತವಾದುದಲ್ಲ. ಯಕ್ಷಗಾನ ಮೇಳ ಕಟ್ಟಿದ ಸಾಹಸಿಗಳೂ ಈ ಸೀಮೆಯಲ್ಲಿದ್ದರು ಎಂಬುದನ್ನು ಉಲ್ಲೇಖಿಸಬೇಕು. ಕಳೆದ ಶತಮಾನದಿಂದ ಈವರೆಗೆ ಇಲ್ಲಿ ಅನೇಕ ನಾಮಾಂಕಿತ ಯಕ್ಷನಟರು ಆಗಿ ಹೋಗಿದ್ದಾರೆ. ಈಗಲೂ ಹೆಸರಿಸಬಲ್ಲ ಅನೇಕ ನಟರಿದ್ದಾರೆ. ಯಕ್ಷಪ್ರಸಂಗಗಳನ್ನು ರಚಿಸಿದ ಕವಿಗಳೂ ಈ ಸೀಮೆಯಲ್ಲಿದ್ದಾರೆ. ನಾಟಕ ರಂಗದಲ್ಲಿ ಆಸಕ್ತರಾದ ಅನೇಕ ನಟರು, ನಿರ್ದೇಶಕರು, ಕವಿಗಳು, ಸಾಹಿತಿಗಳು ಇದೇ ಸೀಮೆಯ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ.

ಭೌಗೋಲಿಕವಾಗಿ, ೮೮ ಹಳ್ಳಿಗಳನ್ನೂ, ಒಂದು ನಗರವನ್ನೂ ಹೊಂದಿರುವ ಅಂಕೋಲಾ ತಾಲೂಕು ೯೦೪.೭೯ ಚದುರು ಮೀಟರ್ ಪ್ರದೇಶವನ್ನು ವ್ಯಾಪಿಸಿದೆ. ಕಾಡಿನ ಸೆರಗಿನ ಪ್ರದೇಶದಿಂದ ಸಾಗರದ ತಟದ ವರೆಗೆ

ಸದಾ ನಿತ್ಯ ಹರಿದ್ವರ್ಣವನ್ನು ಸೂಸುವ ಈ ಸುಂದರ ನೆಲ ಜಿಲ್ಲೆಯಲ್ಲಿಯೇ ಅತ್ಯಂತ ಜಾಗೃತ ಪ್ರದೇಶವಾಗಿದೆ. ಸಮುದ್ರದಿಂದ ತೀರ ಹತ್ತಿರವೂ ಇರದ, ತೀರ ದೂರವೂ ಇರದ ಅಂಕೋಲಾ ನಗರ ತನ್ನ ಸಮಶೀತೋಷ್ಣ ಗುಣವನ್ನು ಸದಾ ಕಾಪಿಟ್ಟುಕೊಂಡಿದೆ. ಹಿಂದಿನ ಗಣತಿಯ ಪ್ರಕಾರ, ಈ ತಾಲೂಕಿನ ಜನಸಂಖ್ಯೆ ೧,೦೧,೫೪೯. ಈ ಸಂಖ್ಯೆಯಲ್ಲಿ ೫೧,೩೬೮ ಗಂಡಸರು ಮತ್ತು ೫೦,೧೫೧ ಹೆಂಗಸರು. ಇದರಲ್ಲಿ ೭೫,೪೧೧ ನಗರವಾಸಿಗಳು ಮತ್ತು ೨೬,೧೩೮ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಾರೆ. ನೂರಕ್ಕೆ ನೂರು ಅಕ್ಷರಸ್ಥರುಳ್ಳ ಈ ತಾಲೂಕು ತೀಕ್ಷ್ಣ ಪ್ರಜ್ಞಾವಂತಿಕೆಯುಳ್ಳ, ಸ್ಪಂದನಶೀಲ ಜನಸಮುದಾಯಗಳಿಗೆ ನೆಲೆಯನ್ನು ಒದಗಿಸಿದೆ.

ಹೆಸರಿನ ಮಹಿಮೆ : 'ಅಂಕೋಲಾ' ಪದದ ವ್ಯುತ್ಪತ್ತಿಯನ್ನು ಮೂರು ಬಗೆಗಳಲ್ಲಿ ಊಹಿಸಲಾಗಿದೆ. ಒಂದು: ಅಂಕ+ವಲ್ಲಿ=ಅಂಕ್ವಲ್ಲಿ=ಅಂಕೋಲೆ. ಇದರ ಅರ್ಥ: ಸೀಮೆಯ ಸೆರಗು. ಎರಡನೆಯದು: ಅಂಕ+ ಓಳಿ= ಅಂಕೋಳಿ= ಅಂಕೋಲೆ. ಇದರ ಅರ್ಥ: ಯುದ್ಧದ ಕಣ. ಮೂರನೆಯ ಸಾಧ್ಯತೆ 'ಅಂಕೋಲೆ' ಎಂಬ ಗಿಡದ ಹೆಸರನ್ನು ಆಧರಿಸಿದ್ದು.

ಅಂಕೋಲಾ ಗಿಡ : ಶ್ರೀಶಂಕರಾಚಾರ್ಯ ವಿರಚಿತ 'ಶಿವಾನಂದ ಲಹರಿ' ಕಾವ್ಯಕೃತಿಯ ಒಂದು ಶ್ಲೋಕದಲ್ಲಿ 'ಅಂಕೋಲ' ಎಂಬ ಗಿಡದ ಉಲ್ಲೇಖವಿದೆ. *ಅಂಕೋಲಂ ನಿಜಬೀಜಸಂತತಿರಯಸ್ಕಾಂತೋಪಲಂ ಸೂಚಿಕಾ ಸಾಧ್ವೀ ನೈಜ ವಿಭೂಂ ಲತಾ ಕ್ಷಿತಿರುಹಂ ಸಿಂಧುಃ ಸರಿದ್ವಲ್ಲಭಮ್। ಪ್ರಾಪ್ನೋತೀಹ ಯಥಾ ತಥಾ ಪಶುಪತೇಃ ಪಾದಾರವಿಂದದ್ವಯುಮ್ ಚೇತೋವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೇ ॥೬೧॥* (ಈ ಲೋಕದಲ್ಲಿ ಅಂಕೋಲದ ಬೀಜಗಳು ಪುನಃ ಅದೇ ಮರವನ್ನೂ, ಸೂಜಿಯು ಅಯಸ್ಕಾಂತವನ್ನೂ, ಪತಿವ್ರತೆಯು ಪತಿಯನ್ನೂ, ಬಳ್ಳಿಯು ಮರವನ್ನೂ, ನದಿಯು ಸಮುದ್ರವನ್ನೂ ಹೇಗೆ ಆಶ್ರಯಿಸುತ್ತದೆಯೋ ಹಾಗೆ ಮನೋವೃತ್ತಿಯು ಪಶುಪತಿಯ ಪಾದಾರವಿಂದದ ಬಳಿ ಸಾರಿ ಸದಾ ಅವುಗಳಲ್ಲಿ ನಿಂತರೆ ಅದು ಭಕ್ತಿಯೆನಿಸುವುದು.)

ಕ್ರಿಸ್ತ ಶಕೆ ೧೫೦೦ರಲ್ಲಿ ರಚಿತವಾದ ಭಾವಮಿಶ್ರನ 'ಭಾವಪ್ರಕಾಶ' ನಿಘಂಟು ಅಂಕೋಲ ಮರದ ಕುರಿತು ಈ ಕೆಳಗಿನ ವಿವರಗಳನ್ನು ನೀಡಿದೆ.

ಫಲದ ಗುಣ : ಶೀತಲ, ಸ್ವಾದಿಷ್ಟ, ಕಫನಾಶಕ, ಬ್ರಂಹಣ, ಪಾಕದಲ್ಲಿ ಶ್ರೇಷ್ಠ, ಬಲಕಾರಕ, ವಿರೇಚಕ, ವಾಯು–ಪಿತ್ಯ, ದಾಹ, ಕ್ಷಯ ಹಾಗೂ ರಕ್ತವಿಕಾರಗಳನ್ನು ದೂರೀಕರಿಸುವ ಗುಣವುಳ್ಳದ್ದು. ಸಸ್ಯಶಾಸ್ತ್ರದ ಪ್ರಕಾರ ಈ ಮರ ಸಸ್ಯಲೋಕದ 'ಅಲಾಂಜಿಯಮ್ ಲಾಮಾರ್ಕಿ ಸ್ಟೇಟ್ ಕುಟುಂಬದ 'ಅಲೆಂಜಿಯಾಸೀ' (Alangiaceae) ಎಂಬ ಜಾತಿ. ಈ ಮರ ದಕ್ಷಿಣ ಭಾರತ, ಉತ್ತರ ಪ್ರದೇಶ, ಬಂಗಾಲ, ಬಿಹಾರ ಹಾಗೂ ಹಿಮಾಲಯ ಘಟ್ಟದಿಂದ ಗಂಗಾತಟದ ವರೆಗಿನ ಪ್ರದೇಶ ಮತ್ತು ರಾಜಪುತಾನಾ ಪ್ರದೇಶಗಳಲ್ಲಿ ಕಂಡುಬರುತ್ತದೆ. ಬಹುತೇಕವಾಗಿ ನದಿ, ಕಾಲುವೆಗಳ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಲಭ್ಯ.

ಇದರ ಸಣ್ಣ ಗಿಡ ಮುಳ್ಳುಗಳಿಂದ ಕೂಡಿದ್ದ ನೋಡಲು ಸುಂದರ ಹಾಗೂ ದಟ್ಟವಾಗಿರುತ್ತದೆ. ತೊಗಟೆ ಕಂದು ಬಣ್ಣದ್ದು, ದಪ್ಪ, ಹಾಗೂ ಹುರುಬುರುಕು. ಬೇರು ಬಲವಾಗಿದ್ದು ಹಳದಿ, ತೈಲಾಂಶದಿಂದ ಕೂಡಿದ್ದು ದೃಢವಾಗಿರುತ್ತದೆ. ಎಲೆಗಳು ಮೂರರಿಂದ ಐದು ಇಂಚು ಉದ್ದ, ಒಂದರಿಂದ ಎರಡು ಇಂಚು ಅಗಲ, ಆಯತಾಕಾರ. ಕೆಲವು ದೀರ್ಘವೃತ್ತಾಕಾರದ್ದೂ ಇರುತ್ತವೆ. ಹೂ ಬಿಡುವ ಮುನ್ನ ಎಲೆಗಳು ಉದುರಿ ಹೋಗುತ್ತವೆ. ಹೂವು ಸುವಾಸನೆಯುಳ್ಳದ್ದು ಬಿಳಿಯ ಬಣ್ಣದವು. ಕಾಯಿ ಹಸಿ ಇದ್ದಾಗ ನೀಲಿ, ಹಣ್ಣಾದಾಗ ಕಡುಗೆಂಪು. ಉದ್ದ ನಾಲ್ಕರಿಂದ ಆರು ಇಂಚು ಇದ್ದು ಮಾಂಸಲ. ಬೀಜ ಗುಂಡಗಿದ್ದು ದೊಡ್ಡದಾಗಿರುತ್ತದೆ.

ಇದರ ಬೇರಿನ ತೊಗಟೆ, ಎಲೆ, ಬೀಜ ಮತ್ತು ಬೀಜದ ಎಣ್ಣೆಯನ್ನು ಚಿಕಿತ್ಸೆಗೆ ಬಳಸುತ್ತಾರೆ. ರುಚಿ ಕಹಿ. ಸ್ವದಜನಕ, ಮೂತ್ರಲ, ರೇಚಕ, ಜ್ವರಹರ, ವಿಷಹರ, ಕುಷ್ಟ, ಉಪದಂಶಗಳಲ್ಲಿ, ಇನ್–ಫ್ಲು–ಎಂಝಾ, ಸಂಧಿಪೀಡೆ, ಯುಕ್ತಜ್ವರ(ಡೆಂಗ್ಯೂ)ಗಳಲ್ಲಿ ಬೇರನ್ನು ಬಳಸಲಾಗುತ್ತದೆ. ಯಕ್ರೋದರ, ಜಲೋದರಗಳ ಚಿಕಿತ್ಸೆಗೂ ಇದನ್ನು ಬಳಸುತ್ತಾರೆ. ಒಟ್ಟಿನಲ್ಲಿ, ಅಂಕೋಲ ಮರ ಅಂಕೋಲೆಯ ವಿಶಿಷ್ಟತೆಗೆ, ವೈವಿಧ್ಯಮಯ ಸಂಸ್ಕೃತಿಗೆ ರೂಪಕವಾಗಿ ನಿಂತಿದೆ.

ಅಂಕೋಲೆ ಮತ್ತು ಸ್ವಾತಂತ್ರ್ಯ ಸಮರ : ಸ್ವಾತಂತ್ರ್ಯ ಸಮರದ ಕಥೆಯನ್ನು ಉಲ್ಲೇಖಿಸದೇ ಅಂಕೋಲೆಯ ಕಥೆ ಪೂರ್ಣವಾಗುವುದಿಲ್ಲ. ಅಂತರ್ಜಾಲದಲ್ಲಿ ಅಂಕೋಲೆಯಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ

ಉಲ್ಲೇಖವನ್ನು ಸಂಕ್ಷಿಪ್ತವಾಗಿ ಮಾಡಲಾಗಿದೆ. ಅದು ಹೀಗಿದೆ: '೧೯೩೦ರ ಆಪ್ರಿಲ್ ೧೩ರಂದು ೪೦,೦೦೦ ಜನರ ಸಮ್ಮುಖದಲ್ಲಿ ಎಂ.ಪಿ. ನಾಡಕರ್ಣಿ ಉಪ್ಪಿನ ಕಾಯ್ದೆಯನ್ನು ಮುರಿದರು. ರೇವು ಹೊನ್ನಪ್ಪ ನಾಯ್ಕರು ರೂ.೩೦/-ಕ್ಕೆ ಹರಾಜಾದ ಮೊದಲ ಉಪ್ಪಿನ ಪೊಟ್ಟಣವನ್ನು ಖರೀದಿಸಿದರು. ಹರಾಜಿನ ನಂತರ ಸ್ವಾಮಿ ವಿದ್ಯಾನಂದರು ಸಭೆಯುನ್ನುದ್ದೇಶಿಸಿ ಮಾತನಾಡಿದರು. ಸಭೆಯಲ್ಲಿ ಡಾ.ನಾ. ಸು.ಹರ್ಡೀಕರ, ಕಾರ್ನಾಡ ಸದಾಶಿವ ರಾವ್, ಶ್ರೀಮತಿ ಉಮಾಬಾಯಿ ಕುಂದಾಪುರ, ಟಿ.ಎಸ್.ನಾಯಕ ಮೊದಲಾದವರು ಭಾಗವಹಿಸಿದ್ದರು. ಪೋಲೀಸರು ನಾಯಕರನ್ನೆಲ್ಲ ಬಂಧಿಸಿದರು. ಆದರೆ ಸತ್ಯಾಗ್ರಹ ೪೫ ದಿನಗಳ ಕಾಲ ಪೂರ್ಣ ಪ್ರಮಾಣದಲ್ಲಿ ಅದೇ ತೀವ್ರತೆಯಿಂದ ಮುಂದುವರೆಯಿತು.

ಉಪ್ಪಿನ ಸತ್ಯಾಗ್ರಹದ ನಂತರ ಅರಣ್ಯಸತ್ಯಾಗ್ರಹ ಪ್ರಾರಂಭವಾಯಿತು. ಜನರು ಕಾಯ್ದಿಟ್ಟ ಅರಣ್ಯಕ್ಕೆ ಸಂಬಂಧಿಸಿದ ಕಾಯ್ದೆಯನ್ನು ಮುರಿದರು. ಕಟ್ಟಿಗೆ ಮತ್ತು ಹುಲ್ಲನ್ನು ಸುಟ್ಟು ಬಂಧನಕ್ಕೊಳಗಾದರು. ಮದ್ಯದ ಅಂಗಡಿಗಳಿಗೆ, ಮದ್ಯದ ಡಿಪೋಗಳಿಗೆ ಮತ್ತು ಮದ್ಯದ ಹರಾಜಿಗೆ ತಡೆಗಾವಲನ್ನೊಡ್ಡಿದರು. ಬೈನಿ ಗಿಡಗಳನ್ನು ಕಡಿದು ಹಾಕಿದರು. ತಡೆಗಾವಲನ್ನು ಹಾಕಿದ ಜನರನ್ನು ಪೋಲೀಸರೂ, ಮದ್ಯವ್ಯಸನಿಗಳೂ ಹೊಡೆದು ಬಡಿದು ಅಟ್ಟುವುದು ಸಾಮಾನ್ಯ ದೃಶ್ಯವಾಗಿತ್ತು. ವಿದೇಶೀ ಬಟ್ಟೆಗಳನ್ನು ನಿರ್ಬಂಧಿಸುವಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸಿದರು.

ಈ ಮಹಿಳೆಯರು ಮನೆಯಿಂದ ಮನೆಗೆ ತೆರಳಿ ವಿದೇಶೀ ಬಟ್ಟೆಗಳನ್ನು ಸಂಗ್ರಹಿಸಿ ಅಗ್ನಿಗೆ ಅರ್ಪಿಸಿದರು. ತೀವ್ರ ವಿರೋಧದ ನಡುವೆಯೂ ಈ ಸತ್ಯಾಗ್ರಹಗಳು ಯಶಸ್ಸನ್ನು ಕಂಡವು. ಸತ್ಯಾಗ್ರಹದಲ್ಲಿ ಪಾಲ್ಗೊಂಡ ವಿವಿಧ ವರ್ಗಗಳ ಜನಸಾಮಾನ್ಯರ ವಿಶೇಷತಃ, ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ ನಾಡವರ ಸಮುದಾಯದ– ವಿವರಗಳಿಲ್ಲದೇ ಈ ವರದಿ ಅಪೂರ್ಣವಾಗಿದೆ. ಹಿರಿಯ ಕವಿ ಶಾಂತಾರಾಮ ನಾಯಕ ಹಿಚಕಡ ಅವರು ತಮ್ಮ 'ಚರಿತ್ರೆ ಮರೆತವರ ಕಥೆ' ಹಾಗೂ 'ಸ್ವಾತಂತ್ರ್ಯ ಹೋರಾಟದ ಹೊರಳು ನೋಟ' ಈ ಕೃತಿಗಳಲ್ಲಿ ಹೋರಾಟದ ಕಥೆಗಳನ್ನು ಎಳೆಎಳೆಯಾಗಿ ಚಿತ್ರಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಕವಿಗಳು ಪ್ರತಿಕ್ರಿಯಿಸಿರುವುದರ ಬಗೆಯನ್ನು ಶಾಂತಾರಾಮ ನಾಯಕರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಕ್ರಾಂತಿಯ ಕಹಳೆಯನ್ನೂದಿದ ಈ ಕವಿತೆಗಳ ಎರಡು ಮಾದರಿಗಳು:

ಭರತಭೂಮಿ ನನ್ನ ತಾಯಿ ನನ್ನ ಪೊರೆವ ತೊಟ್ಟಿಲು
ಜೀವನವನೆ ದೇವಿಗೆರೆವೆ ಬಿಡುತೆ ಗುಡಿಯ ಕಟ್ಟಲು ।
ತುಹಿನ ಗಿರಿಯ ಸಿರಿಯ ಮುಡಿಯ
ಹಿರಿಯ ಕಡಲು ತೊಳೆಯುವಡಿಯ
ಪೈರು ಪಚ್ಚೆ ಪಸುರಿನುಡಿಯ ನನ್ನ ಪೊರೆವ ತೊಟ್ಟಿಲು
ಭರತಭೂಮಿ ನನ್ನ ತಾಯಿ ನನ್ನ ಪೊರೆವ ತೊಟ್ಟಿಲು
ಜೀವನವನೆ ದೇವಿಗೆರೆವೆ ಬಿಡುತೆ ಗುಡಿಯ ಕಟ್ಟಲು ।
ಸಿಂಧು ಯಮುನೆ ದೇವಗಂಗೆ
ತಪತಿ ಕೃಷ್ಣ ಭದ್ರೆ ತುಂಗೆ
ಸಲಿಲತೀರ್ಥ ಪುಣ್ಯರಂಗೆ
ನನ್ನ ಪೊರೆವ ತೊಟ್ಟಿಲು ? ಭರತಭೂಮಿ ನನ್ನ ತಾಯಿ...
ಮತದ ಬಿರುಕುಗಳನ್ನು ತೊರೆವೆ
ಗುಡಿಗಳೊಡಕುಗಳನು ಮರೆವೆ
ತೊತ್ತ ತೊಡಕುಗಳನ್ನು ಬಿರಿವೆ
ಜೀವನವನು ದೇವಿಗೆರೆವೆ । ಭರತ ಭೂಮಿ...

(ಕುವೆಂಪು)

ಅಂಕೋಲೆಯಲ್ಲಿ ನಡೆದ ಸಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ನಾಡವರ ಹಳ್ಳಿಗಳಲ್ಲಿ ವಾಸವಾಗಿದ್ದು ಚಳವಳಿಗೆ ಮಾರ್ಗದರ್ಶನ ಮಾಡಿದ ಧಾರವಾಡದ ಬಾಲಚಂದ್ರ ಘಾಣೇಕರರು ಅಂಕೋಲೆಯಲ್ಲಿ ನಡೆದ ಕರಬಂಧಿ ಚಳವಳಿಯನ್ನು ಲಾವಣಿಯ ರೂಪದಲ್ಲಿ ಅತ್ಯಂತ ಮನೋಜ್ಞವಾಗಿ ವರ್ಣಿಸಿದ್ದಾರೆ. ಈ ಲಾವಣಿಯ ಆಯ್ದ ಭಾಗ:

ಕರಬಂಧೀ ಸಮರದ ಅಂಕೋಲೆ ಕತೆಯನ್ನು
ವರ್ಣಿಸಿ ಹೇಳೂವ ಕೇಳೀರಣ್ಣಾ ।
ವೀರ । ರೈತರ ಸಾಹಸವ ನೊಡೀರಣ್ಣಾ ।
ಧೀರ । ಮಹಿಳೆಜನ ಪಟ್ಟ ಕಷ್ಟವನ್ನ ।
ಸಾರಿ ಹೇಳುವೆ ನಾನು । ಬಾಲರು ಮುದಗೊಂಡು।
ತೋರಿದ ಸಾಹಸ ಕೃತ್ಯಗಳೆಲ್ಲಾ ।
ಮಾತರಂ । ವಂದೇ ಮಾತರಂ ॥
ಹುರಿದುಂಬಿ ಎದ್ದರು ಹಳ್ಳಿಯ ಜನರೆಲ್ಲಾ
ಪರಿಪರಿ ಕಷ್ಟ ಸಹಿಸಲೀಕೆ ।
ಗುರು । ಗಾಂಧೀಯ ಮಾತನ್ನ ಆಲಿಸಲೀಕೆ । ।
ಕ್ರೂರ । ಬ್ರಿಟಿಶರ ಹೊರಗಟ್ಟಿ ದೂಡಲಿಕೆ ।

ತರತರದಿಂದಲಿ ಸರಕಾರ ಕಾಯ್ದೆಯ ।
ದರ ಕಾರವಿಲ್ಲದೇ ಮುರಿದಿಹರಣ್ಣಾ ।
ಮಾತರಂ । ವಂದೇ ಮಾತರಂ ॥
ಶೆಟಗೇರಿ ಸೂರುವೆ ಹಿಚಕಡ ಬಾಸ್ಕೊಡ
ಉಳುವರೆ । ದಿಟವಾದ ಹಳ್ಳಿ ಜನರೆಲ್ಲಾ ।
ಗಟ್ಟಿ । ವಾಸರೆಕುದ್ರಿಗೆ ಬಾಂಧವರು
ಕಣಗೀಲ ಮೊದಲಾದ ಊರಿನವರು
ಶ್ರೇಷ್ಠ । ಅಂಕೋಲಾ ತಾಲೂಕು ಜನರೆಲ್ಲಾ ।
ಸೃಷ್ಟಿ । ಯೊಳಗೆಲ್ಲಾ ಹೆಸರು ಪಡೆದಿಹರು ।
ವಂದೇ ಮಾತರಂ । ವಂದೇ ಮಾತರಂ ॥

ಸ್ವಾತಂತ್ರ್ಯಕ್ಕಾಗಿ ತುಡಿದ ಜನಸಮುದಾಯಗಳು ಒಂದಾಗಿ ನಡೆಸಿದ ಹೋರಾಟದ ರೋಮಾಂಚಕಾರೀ ಯಶೋಗಾಥೆ ನಾಡನ್ನು ಕಟ್ಟಲಿರುವ ಯುವಜನತೆಗೆ ಪ್ರೇರಣೆ ನೀಡಲಿ ಎಂದು ಹಾರೈಸುತ್ತೇನೆ.

ಸಾಹಿತ್ಯ-ಸಂಸ್ಕೃತಿ : ಪದಶಃ ಸಾಹಿತ್ಯವೆಂದರೆ ಸಹಿತವಾಗಿ ಬಂದುದು. ಸಾಹಿತ್ಯ ಬದುಕಿಗೆ ಒದಗಿಬಂದ ಸೌಭಾಗ್ಯವೆಂದೇ ನಾನು ಭಾವಿಸುತ್ತೇನೆ. ಸಾಹಿತ್ಯವಿರಲಿ, ಕಲೆ ಇರಲಿ, ಅದು ಆಯಾ ಕೃತಿಕಾರನ ಆಲೋಚನೆಯ ಫಲ. ಅಮೂರ್ತವಾದ ಆಲೋಚನೆ ಕೃತಿಕಾರನ ತನ್ಮಯ ಕ್ಷಣಗಳಲ್ಲಿ ಒಂದು ಬರಹ ಅಥವಾ ಒಂದು ಕಲಾಕೃತಿಯಾಗಿ ಮೂರ್ತರೂಪ ಪಡೆಯುವ ಪ್ರಕ್ರಿಯೆಯಲ್ಲಿ ಆ ಸೃಷ್ಟಿಕರ್ತನ ಪರಿಶ್ರಮವಿದೆ. "ಅನುಭವಸಂಪತ್ತೇ ಸಾಹಿತ್ಯದ ಜೀವಾಳ' ಎನ್ನುತ್ತಾರೆ ಮಹಾಂತಯ್ಯ, ಅನುಭವದಿಂದ ಸೃಷ್ಟಿಗೊಳ್ಳುವ ಸಾಹಿತ್ಯಕ್ಕೆ ತಾನೇತಾನಾಗಿ ನೈಜತೆ, ಅಧಿಕೃತತೆ ಪ್ರಾಪ್ತವಾಗುತ್ತದೆ. ಅನುಭವವನ್ನು ಯಥಾವತ್ ಬರಹಕ್ಕಿಳಿಸಿದರೆ ಅದು ವರದಿಯಾದೀತಷ್ಟೆ ಬರಹ ಸಾಹಿತ್ಯ ವೆನಿಸಿಕೊಳ್ಳುವುದು ಬರಹಗಾರನ ಆಲೋಚನಾವಿಧಾನ ಹಾಗೂ ಅಭಿವ್ಯಕ್ತಿ ಸಾಮರ್ಥ್ಯದಿಂದ. ಸಾಹಿತ್ಯಕೃತಿಯೊಂದು ಬುದ್ಧಿ ಮತ್ತು ಭಾವ ಎರಡನ್ನೂ ತಟ್ಟಿ ಜಾಗೃತಗೊಳಿಸಬೇಕು. ಈ ಜಾಗೃತಿ ಸೂಕ್ತ ಸಂವೇದನೆಯಲ್ಲಿ ಹರಳುಗಟ್ಟಬೇಕು.

ಒಂದೇ ಅನುಭವ ಅಥವಾ ವಸ್ತುವಿಗೆ ಬೇರೆಬೇರೆ ಲೇಖಕರು ಸ್ಪಂದಿಸುವ ಬಗೆ ವಿಭಿನ್ನವಾಗಿರಲು ಸಾಧ್ಯವೆಂಬುದನ್ನು ನೆನೆಸಿಕೊಂಡರೆ ಸಾಹಿತ್ಯದ ಅಳವಿನ ವಿಸ್ತಾರದ ಅರಿವಾಗುತ್ತದೆ. ಕವಿ, ಜಾನಪದ ವಿದ್ವಾಂಸ ಎ.ಕೆ.ರಾಮಾನುಜನ್ ಹೇಳಿದ ಒಂದೇ ಜಾನಪದ ಕಥೆಯನ್ನಾಧರಿಸಿ ಪ್ರಸಿದ್ಧ ನಾಟಕಕಾರರಾದ ಗಿರೀಶ ಕಾರ್ನಾಡ ಮತ್ತು ಚಂದ್ರಶೇಖರ ಕಂಬಾರ ಪ್ರತ್ಯೇಕವಾಗಿ ನಾಟಕಗಳನ್ನು ರಚಿಸಿದರು. ಇಂದು ಕಾರ್ನಾಡರ 'ನಾಗಮಂಡಲ' ಹಾಗೂ ಕಂಬಾರರ 'ಸಿರಿಸಂಪಿಗೆ' ಒಂದೇ ವಸ್ತುವನ್ನಾಧರಿಸಿಯೂ ಕನ್ನಡದ ವಿಭಿನ್ನ ಶೈಲಿಯ ಅದ್ವಿತೀಯ ಕೃತಿಗಳಾಗಿವೆ.

'ಸಾಹಿತ್ಯ ಬದುಕಿನ ವಿಮರ್ಶೆ' ಎಂದು ಮ್ಯಾಥ್ಯ ಆರ್ನಾಲ್ಡ್ ಹೇಳುತ್ತಾರೆ. ಆದ್ದರಿಂದಲೇ ಲೇಖಕ ವಿಮರ್ಶಕನೂ ಆಗಬೇಕಾದ ಅಗತ್ಯವಿದೆ. ಒಂದೇ ಘಟನೆ ಅಥವಾ ವಸ್ತುವನ್ನು ವಿವಿಧ ಮಗ್ಗಲುಗಳಿಂದ ಪರಾಮರ್ಶಿಸಬಲ್ಲ ಲೇಖಕ ಉತ್ತಮ ಕೃತಿಗಳನ್ನು ನೀಡಬಲ್ಲ. ಅಭಿವ್ಯಕ್ತಿಯ ಮಾರ್ಗವನ್ನು ಖಚಿತ ಪಡಿಸಿಕೊಳ್ಳುವುದು, ಸೂಕ್ತ ಅಧ್ಯಯನ ಇವು ಸಾಹಿತ್ಯವನ್ನು ನಿರ್ಮಿಸಬಯಸುವ ಪ್ರತಿಯೊಬ್ಬ ಜವಾಬ್ದಾರಿ ಲೇಖಕನೂ ಅನುಸರಿಸ ಬೇಕಾದ ದಾರಿಗಳು.

ಒಂದು ದೇಶದ ಸಂಸ್ಕೃತಿಯ ಮಾನದಂಡಗಳಲ್ಲಿ ಸಾಹಿತ್ಯವೂ ಒಂದು. 'ಸಾಂಸ್ಕೃತಿಕ ವಿಕಾಸಕ್ಕೆ ಸಾಹಿತ್ಯವೇ ಸಾಧನ' ಎನ್ನುತ್ತಾರೆ ಹಿಂದಿಯ ಕಾದಂಬರಿ ಸಾಮ್ರಾಟ ಪ್ರೇಮಚಂದ. ಉತ್ತಮ ಸಾಹಿತ್ಯವನ್ನು ಒದಗಿಸುವ, ತನ್ಮೂಲಕ ಸಾಂಸ್ಕೃತಿಕ ಮಟ್ಟವನ್ನು ಎತ್ತರಿಸುವ ಹೊಣೆ ಸಾಹಿತಿಗಳದಾಗಿದೆ. ಅಂತೆಯೇ 'ಸಾಹಿತಿಯ ಮಟ್ಟಕ್ಕೆ ಓದುಗ ಬರಬೇಕೇ ಹೊರತು ಓದುಗರ ಮಟ್ಟಕ್ಕೆ ಸಾಹಿತಿ ಎಂದೂ ಇಳಿಯಬಾರದು' ಎಂದು ವರಕವಿ ದ.ರಾ.ಬೇಂದ್ರ ಎಚ್ಚರಿಸಿದ್ದಾರೆ.

ಪ್ರತಿಯೊಬ್ಬ ಸಾಹಿತಿಗೂ ಅವನದೇ ಆದ ಅಭಿವ್ಯಕ್ತಿಯ ಶೈಲಿ ಇದೆ. ಪಳಗಿದ ಸಾಹಿತ್ಯಾಭ್ಯಾಸಿ ಬಹುಶಃ ಬರಹದ ಶೈಲಿಯಿಂದಲೇ ಬರಹಗಾರನನ್ನು ಗುರುತಿಸಬಲ್ಲ. ಆದ್ದರಿಂದಲೇ ವಿವಿಧ ಶೈಲಿಗಳನ್ನು ಮೀರಿ ತನ್ನದೇ ಆದ ವಿಶಿಷ್ಟ ಶೈಲಿಯನ್ನು ಮೈಗೂಡಿಸಿಕೊಳ್ಳಲು ಪ್ರತಿಭೆ ಮತ್ತು ಪರಿಶ್ರಮ ಎರಡೂ ಬೇಕು. ಕವಿ ಗೋಪಾಲಕೃಷ್ಣ ಅಡಿಗರು ಆ ಕಾಲದ ಕಾವ್ಯ ತಮ್ಮ ಮೇಲೆ ಬೀರಿದ ಪ್ರಭಾವದಿಂದ ತಪ್ಪಿಸಿಕೊಂಡು ಸ್ವೋಪಜ್ಞತೆಯನ್ನು ಸಾಧಿಸಲು ಸಾಕಷ್ಟು ಪರಿಶ್ರಮ ಪಡಬೇಕಾಯಿತು. ಅವರು ಪಟ್ಟ ಪಾಡು ಅವರದೇ ಕವನದ ಸಾಲುಗಳಲ್ಲಿ ಹೀಗೆ ವ್ಯಕ್ತವಾಗಿದೆ:

ಅನ್ಯರೊರೆದುದನೆ, ಬರೆದುದುನೆ ನಾ ಬರೆಬರೆದು
ಬಿನ್ನಗಾಗಿದೆ ಮನವು; ಬಗೆಯೊಳಗನೇ ತೆರೆದು ನನ್ನ

ನುಡಿಯೊಳೆ ಬಣ್ಣ ಬಣ್ಣದಲಿ ಬಣ್ಣಿಸುವ ಪನ್ನತಿಕೆ ಬರುವನಕ ನನ್ನ ಬಾಳಿದು ನರಕ

ಒಂದು ನೆಲೆಯಲ್ಲಿ, ಸಾಹಿತಿ ಸಂಶೋಧಕನೂ ಹೌದು. ಬದುಕನ್ನು ವಿಚಿಕಿತ್ಸಕ ನೋಟದಿಂದ ಅವಲೋಕಿಸಿ ಮನುಷ್ಯವ್ಯಾಪಾರವನ್ನು ಅರ್ಥೈಸುವ, ಒಳನೋಟಗಳತ್ತ ಬೆಳಕನ್ನು ಚೆಲ್ಲುವ ಕಾರ್ಯವನ್ನು ಸಾಹಿತಿ . ತನ್ನ ಕೃತಿಗಳ ಮೂಲಕ ಮಾಡುತ್ತಾನೆ. ಒಂದು ನಿರ್ದಿಷ್ಟ ದೇಶ–ಕಾಲಗಳ ಸಂದರ್ಭದಲ್ಲಿ, ವ್ಯಕ್ತಿ ಅಥವಾ ಸಮೂಹ ತೋರುವ ವರ್ತನೆಗೆ ಕಾರಣಗಳನ್ನು ಆತ ಹುಡುಕುತ್ತಾನೆ. ಓದುಗನನ್ನು ಆಲೋಚನೆಗೆ ತೊಡಗಿಸುವ, ಸರಿ–ತಪ್ಪುಗಳ ವಿಮರ್ಶೆಗೆ ಹಚ್ಚುವ ಕೃತಿಗಳು ಯಶಸ್ವೀ ಕೃತಿ ಎಂದು ನಾನು ಭಾವಿಸುತ್ತೇನೆ.

ಕೊನೆಗೂ ಸಾಹಿತ್ಯನಿರ್ಮಾಣದ ಉದ್ದೇಶವೇನು? ಕೇವಲ ಆತ್ಮತೃಪ್ತಿಗಾಗಿ ಎನ್ನುವ ಮಾತು ಬರಿ ಬೂಟಾಟಿಕೆಯದು. ಸಾಹಿತ್ಯ ಇತರ ಅನೇಕ ವಿದ್ಯಮಾನಗಳಂತೆ ಪರಸ್ಪರ ಕ್ರಿಯೆ. ಲೇಖಕರು ಬರೆಯಬೇಕು. ಓದುಗರು ತಮಗಿಷ್ಟವಾದ ಬರಹವನ್ನು ಓದಬೇಕು. ತಿನ್ನದ ಮೇಲೆ ಹಣ್ಣು ಎಷ್ಟಿದ್ದರೇನು? ಓದುರಿಲ್ಲದ ಸಾಹಿತ್ಯಕ್ಕೇನು ಬೆಲೆ?

ಉತ್ತಮ ಸಾಹಿತ್ಯ ನಿರ್ಮಾಣ ಹೊಣೆಗಾರ ಸಾಹಿತಿಯ ಕೆಲಸ. ಅದು ಸಹೃದಯರ ಓದಿಗೆ ದಕ್ಕುವದಾದರೆ ಅಂಥ ಸಾಹಿತ್ಯ ಸಾರ್ಥಕವಾಗುತ್ತದೆ. ಭವಭೂತಿ ಮಾತನ್ನಿಲ್ಲಿ ನೆನೆಸಿಕೊಳ್ಳಬಹುದು. 'ನನ್ನ ಕೃತಿಯನ್ನು ಓದಿ ಮೆಚ್ಚಿಕೊಳ್ಳುವ ಸಹೃದಯಿ ಓದುಗ ಎಂದಾದರೂ, ಎಲ್ಲಾದರೂ ಹುಟ್ಟಬಹುದು'.

ಪುಸ್ತಕ ಪ್ರಕಾಶನಗಳು : ಜನವರಿ ೭, ೨೦೧೩ರ 'ವಿಜಯಕರ್ನಾಟಕ'ದಲ್ಲಿ ಪ್ರಕಟ ವಾಗುವ ತಮ್ಮ ಅಂಕಣಬರಹ('ನೋಟ ಪಲ್ಲಟ)ದಲ್ಲಿ ಕವಿ, ವಿಮರ್ಶಕ ಜಿ.ಪಿ.ಬಸವರಾಜು ಪುಸ್ತಕ ಪ್ರಕಾಶನಗಳ ಬಗೆಗೆ ಬರೆದಿದ್ದಾರೆ. ಅವರು ಮಂಡಿಸಿದ ವಿಚಾರಗಳು ಇಂತಿವೆ:

'...ಬಂಡವಾಳದ ಪ್ರಶ್ನೆಯನ್ನು ಇಟ್ಟುಕೊಂಡರೆ, ಕೋಟ್ಯಂತರ ರೂಪಾಯಿಯ ಬಂಡವಾಳ ಹೂಡಿರುವ ಕನ್ನಡ ಪ್ರಕಾಶನಗಳು ಕಣ್ಣಿಗೆ ಕುಕ್ಕುತ್ತವೆ. ಏಳೆಂಟು ಸಾವಿರ ಪುಸ್ತಕಗಳು ಕನ್ನಡದಲ್ಲಿ ಪ್ರತಿವರ್ಷ ಪ್ರಕಟವಾಗುತ್ತವೆ ಎಂದು ಕನ್ನಡಿಗರು ಬೀಗಬಹುದು. ಕನ್ನಡ ಪುಸ್ತಕಗಳ ಹೊರನೋಟ, ವಿನ್ಯಾಸ, ಹೊದಿಕೆ, ಮುದ್ರಣ ಗುಣಮಟ್ಟಗಳನ್ನು ಗಮನಿಸಿದರೆ ಕನ್ನಡ ಪುಸ್ತಕಗಳು ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲೂ ಭಾಗವಹಿಸುವ ಅರ್ಹತೆಯನ್ನು ಪಡೆದುಕೊಂಡಿವೆ ಎಂದು ಹೆಮ್ಮೆ ಪಡಬಹುದು.

ಆದರೆ ಕನ್ನಡ ಪುಸ್ತಕ ಪ್ರಕಾಶನದ ನಿಜರೂಪ ನೋಡಿದರೆ? ಬಹುಪಾಲು ಪ್ರಕಾಶಕರು ಲೇಖಕರನ್ನು ನಡೆಸಿಕೊಳ್ಳುವ ರೀತಿ, ಪುಸ್ತಕಗಳನ್ನು ಮಾರುವ ಕ್ರಮ ಈ ಉದ್ಯಮದ ಹಿಂದಿರುವ ಮೌಲ್ಯಗಳು, ನೈತಿಕತೆ ಇತ್ಯಾದಿಗಳನ್ನು ಗಮನಿಸಿದರೆ ವಿಷಾದವೇ ಮಡುಗಟ್ಟುತ್ತದೆ. ಶೇ.೯೦ ಭಾಗ ಪ್ರಕಾಶಕರು ಲೇಖಕರನ್ನು ಸುಲಿಯುವ ಹುನ್ನಾರದಲ್ಲಿಯೇ ಇರುತ್ತಾರೆ. ಸರ್ಕಾರದ ಸಗಟು ಖರೀದಿಗಾಗಿ ಎಂಥ ಕಳಪೆ ಪುಸ್ತಕವನ್ನಾದರೂ ಪ್ರಕಟಿಸುವುದು, ಹೇಗಾದರೂ ಮಾಡಿ ಅದನ್ನು ಗ್ರಂಥಾಲಯಗಳಿಗೆ ತುಂಬುವುದು ಇದನ್ನೆಲ್ಲಾ ನೋಡಿದರೆ ಕನ್ನಡಿಗರು ತಲೆ ತಗ್ಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಗಟು ಖರೀದಿ ಯೋಜನೆ ಥಟ್ಟನೆ ನಿಂತು ಹೊದರೆ ಮುಕ್ಕಾಲು ಪಾಲು ಪ್ರಕಾಶನ ಸಂಸ್ಥೆಗಳು ಮುಚ್ಚಿಬಿಡುತ್ತವೆ. ಹಾಗಾಗುವುದು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಸಾರ್ವಜನಿಕ ಹಣವನ್ನು ಅಕ್ಷರದ ಹೆಸರಿನಲ್ಲಿ ನುಂಗುವುದಕ್ಕೆ ಸ್ವಲ್ಪ ಮಟ್ಟಿಗಾದರೂ ತಡೆಯುಂಟಾಗುತ್ತದೆ...'

ಪುಸ್ತಕ ಪ್ರಕಾಶನದ ಹೆಸರಿನಲ್ಲಿ ನಡೆಯುವ ಶೋಷಣೆಯ ಚಿತ್ರ ಈ ಅಂಕಣದಲ್ಲಿದೆ. ಇತ್ತೀಚೆಗೆ ಬರಹಗಾರರ ಸಂಖ್ಯೆಯಲ್ಲಿ ವೃದ್ಧಿಯಾಗಿರುವುದು ವಾಸ್ತವ. ಈ ಸಂಖ್ಯೆ ಸಗಟು ಖರೀದಿ ಯೋಜನೆ ಪ್ರಾರಂಭವಾದಾಗಿನಿಂದ ಹೆಚ್ಚಾಗಿರುವುದೂ ಸತ್ಯ. ತನಗೆ ತೋಚಿದ್ದನ್ನು ಬರೆಯವುದು ಹಕ್ಕು ಪ್ರತಿಯೊಬ್ಬನಿಗಿದೆ. ಬರಹದ ಗುಣಮಟ್ಟ ಚೆನ್ನಾಗಿರಬೇಕು ಎಂಬುದು ಅಪೇಕ್ಷಣೀಯ. ಬಸವರಾಜು ಅವರ ಪ್ರಕಾರ, ಖರೀದಿಗೆ ಆಯ್ಕೆಯಾದ ಪುಸ್ತಕಗಳಲ್ಲಿ ಕಳಪೆ ಪುಸ್ತಕಗಳೂ ಸೇರಿವೆ. ಇದನ್ನು ತಡೆಗಟ್ಟುವುದು ಹೇಗೆ ಎಂಬುದು ಮುಖ್ಯ ಪ್ರಶ್ನೆಯಾಗಬೇಕೇ ಹೊರತು ಯೋಜನೆಯನ್ನು ನಿಲ್ಲಿಸುವುದಲ್ಲ. ಪುಸ್ತಕಗಳ ಆಯ್ಕೆಯ ಪ್ರಕ್ರಿಯೆಗೆ ಸೂಕ್ತ ಮಾನದಂಡಗಳು ನಿರ್ಧಾರವಾಗಬೇಕು. ಆಯ್ಕೆ ಸಮಿತಿಯನ್ನು ಬಲಪಡಿಸಬೇಕು. ಈನಿಟ್ಟಿನಲ್ಲಿ ಸರಕಾರದ ಹಂತದಲ್ಲಿ ನಿರ್ದಿಷ್ಟ ಧೋರಣೆ ರೂಪುಗೊಳ್ಳಬೇಕು.

ಅದನ್ನು ಬಿಟ್ಟು ಖರೀದಿ ಯೋಜನೆಯನ್ನೇ ನಿಲ್ಲಿಸಿಬಿಟ್ಟರೆ ಆರ್ಥಿಕ ಕಾರಣಗಳಿಂದ ತನ್ನ ಕೃತಿಗಳನ್ನು ಪ್ರಕಟಿಸಲಾಗದ ಅರ್ಹ ಬರಹಗಾರನಿಗೆ ಅನ್ಯಾಯವಾಗದೇ?

ನಾವು ಮತ್ತು ನಮ್ಮ ಗ್ರಂಥಾಲಯಗಳು : ಇಂದಿನ ಬದುಕಿನಲ್ಲಿ ಕಾಣುವ ವಿದ್ಯಮಾನವೆಂದರೆ ಆದ್ಯತೆಗಳಲ್ಲಿ ಕಂಡು ಬರುವ ತೀವ್ರ ಪಲ್ಲಟ. 'ಇರುವುದೆಲ್ಲವ ಬಿಟ್ಟು ಇರದುದಕೆ ತುಡಿಯುತ್ತಿದೆ ಪ್ರತಿಯೊಬ್ಬರ ಮನಸ್ಸು. ಪರಿಣಾಮವೆಂದರೆ ಯಾರಿಗೂ ಓದಲು ಪುರಸೊತ್ತಿಲ್ಲ. ಪುಸ್ತಕಗಳ ಓದು ಇತರ ಎಲ್ಲ ಜ್ಞಾನವಾಹಿನಿಗಳಿಗಿಂತ ಹೆಚ್ಚು ಪರಿಣಾಮಕಾರಿ. ಓದದ ವ್ಯಕ್ತಿ ಎಂದಿಗೂ ಬೆಳೆಯಲಾರ; ಆತನ ಅಂತರಂಗ ಬೆಳೆಯದು. ನಮ್ಮ ಇಂದಿನ ಗ್ರಂಥಾಲಯಗಳು ಖಾಲಿ ಹೊಡೆಯುತ್ತಿರುವುದು ವರ್ತಮಾನದ ಸಾಮಾನ್ಯ ವಿದ್ಯಮಾನ. ವಿದ್ಯುನ್ಮಾಧ್ಯಮ ನಮ್ಮ ಆಸಕ್ತಿಗಳನ್ನು, ಕಲೆಗಳನ್ನು ಹೀರಿಕೊಂಡಂತೆ ಭಾಸವಾಗುತ್ತಿದೆ. ಪಠ್ಯಪುಸ್ತಕಗಳ ಹೊರತಾದ ಓದು ನಮ್ಮ ಮಕ್ಕಳನ್ನು ಕೆಡಿಸುತ್ತದೆ ಎಂಬ ಭಾವನೆ ಕೆಲವು ವಲಯಗಳಲ್ಲಿದೆ. ಈ ಮಾತು ಸಂಗೀತ, ನೃತ್ಯದಂತಹ ಕಲಾಪ್ರಕಾರಗಳಿಗೂ ಅನ್ವಯವಾಗುತ್ತದೆ. 'ಕರಾವಳಿ ಮುಂಜಾವು' ದಿನಪತ್ರಿಕೆಯ ಅಂಕಣಕಾರ ಡಾ.ಬ್ರಹ್ಮಾನಂದ ನಾಯಕ ಒಂದೆಡೆ ಸಂಗೀತ ಕಲಿಯುವುದರಿಂದ ಬುದ್ಧಿ ಚುರುಕಾಗುತ್ತದೆ ಎಂದಿದ್ದಾರೆ. ಓದಿನ ಕುರಿತು ನಮ್ಮ ಅಭಿಪ್ರಾಯ ಬದಲಾಗಬೇಕಾದ ಅಗತ್ಯವಿದೆ. ದಿನದ ಅಲ್ಪಕಾಲವಾದರೂ ಗ್ರಂಥಾಲಯದಲ್ಲಿ ಕಾಲ ಕಳೆಯುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕಿದೆ. ನಮ್ಮ ಮಕ್ಕಳನ್ನು ಕೂಡ ಪಠ್ಯದೊಂದಿಗೆ ಪಠ್ಯೇತರ ಓದಿನತ್ತ ಸೆಳೆಯುವ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಬೇಕಿದೆ. ಈ ವಿಷಯದಲ್ಲಿ ಅಧ್ಯಾಪಕರ ಹೊಣೆ ಗುರುತರವಾದುದು.

ನನ್ನದೊಂದು ಸಲಹೆಯೆಂದರೆ ಪ್ರತಿಯೊಂದು ಮನೆಯಲ್ಲಿ ಪ್ರತ್ಯೇಕ ಗ್ರಂಥಾಲಯವನ್ನು ಹೊಂದಿರುವುದು. ಸೂಕ್ತ. ಪುಸ್ತಕಗಳ ಸಂಗ್ರಹ ನಿಮ್ಮ ಮನೆಗಳ ಸೌಂದರ್ಯವನ್ನು ಹೆಚ್ಚಿಸಬಲ್ಲದು. ಪುಸಕ್ತಗಳ ಓದು ನಿಮ್ಮ ಮನಗಳನ್ನು ಬೆಳಗಬಲ್ಲದು. ನಿಮ್ಮ ವಾರ್ಷಿಕ ಮುಂಗಡಪತ್ರದಲ್ಲಿ ಪುಸ್ತಕಗಳ ಖರೀದಿಗೆ ಅಲ್ಪಪ್ರಮಾಣದಲ್ಲಾದರೂ ಅವಕಾಶ ನೀಡಿ. ಸ್ಥಳೀಯ ಬರಹಗಾರರ ಪುಸ್ತಕಗಳನ್ನು ಖರೀದಿಸಿ ಪ್ರೋತ್ಸಾಹ ನೀಡಿ.

ನಮ್ಮದು ಶ್ರೇಷ್ಠ ಭಾಷೆ : ಹೌದು. ನಿಸ್ಸಂದೇಹವಾಗಿ ನಮ್ಮ ಕನ್ನಡ ಶ್ರೇಷ್ಠ ಭಾಷೆಗಳಲ್ಲೊಂದು ಪ್ರಾಚೀನ ಭಾಷೆಗಳಲ್ಲೊಂದಾದ, ಸುದೀರ್ಘ ಇತಿಹಾಸವುಳ್ಳ, ಶ್ರೀಮಂತಸಾಹಿತ್ಯವುಳ್ಳ ಭಾಷೆ ಕನ್ನಡ. ದಿನದಿಂದ ದಿನಕ್ಕೆ ತನ್ನ ಕ್ಷಿತಿಜವನ್ನು ಹೆಚ್ಚಿಸಿ ಕೊಳ್ಳುತ್ತಿರುವ ಭಾಷೆ ಕನ್ನಡ. ಮಾಧ್ಯಮದ ಕುರಿತಾದ ಗೊಂದಲ ಕನ್ನಡ ಭಾಷಿಕರನ್ನು ಭ್ರಮೆಗೆ ತಳ್ಳಿದೆ. ಪ್ರಾಥಮಿಕ ಹಂತದ ಜ್ಞಾನಾರ್ಜನೆಗೆ ಮಾತೃಭಾಷೆಯೇ ಸೂಕ್ತ ಎಂಬುದು ಜಗತ್ತಿನ ಎಲ್ಲ ಶಿಕ್ಷಣತಜ್ಞರು ಅಂಗೀಕರಿಸಿದ ಅಭಿಪ್ರಾಯ. ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಕೀಳರಿಮೆಗೆ ಒಳಗಾಗದೇ ಧೈರ್ಯದಿಂದ ಮುಂದೆ ಸಾಗಲಿ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಇಂಗ್ಲೀಷ್ ಮಾಧ್ಯಮದ ವಿದ್ಯಾರ್ಥಿಗಳಷ್ಟೇ ಚೆನ್ನಾಗಿ–ಅಷ್ಟೆ ಏಕೆ; ಅವರಿಗಿಂತ ಚೆನ್ನಾಗಿ–ತಮ್ಮ ಪ್ರತಿಭೆಯನ್ನು ತೋರಿದ ಉದಾಹರಣರಣೆಗಳನ್ನು ನಾನು ಬಲ್ಲೆ. ಮಾತೃಭಾಷೆಯನ್ನು ಸರಿಯಾಗಿ ಕಲಿತವ ಬೇರೆ ಯಾವ ಭಾಷೆಯನ್ನಾದರೂ ಕಲಿಯಬಲ್ಲ ಎಂಬುದು ಎಲ್ಲರಿಗೂ ತಿಳಿದಿರಲಿ.

ಕೆಲವು ವಿದ್ಯಮಾನಗಳು : ಕಳೆದ ಎರಡು ಮೂರು ವರ್ಷಗಳಿಂದ ನಮ್ಮ ದೇಶದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ನಡೆಯುತ್ತಿವೆ ಎನ್ನಲಾದ ವಿದ್ಯಮಾನಗಳು ಸಮಸ್ತ ದೇಶವಾಸಿಗಳನ್ನು ಬೆಚ್ಚಿಬೀಳಿಸುವಂಥವು. ದೇಶದ ಎಲ್ಲ ಸುದ್ದಿಮಾಧ್ಯಮಗಳು ಎಡೆಬಿಡದೇ ಬಿತ್ತರಿಸುತ್ತಿದ್ದ ಸುದ್ದಿ ಒಂದೇ: ಅದು ದೇಶವ್ಯಾಪೀ ಭ್ರಷ್ಟಾಚಾರದ ಕುರಿತಾದದ್ದು. ಆಡಳಿತ ವ್ಯವಸ್ಥೆ ಅಷ್ಟೊಂದು ಕೆಟ್ಟಿದೆಯೇ? ನಮ್ಮ ದೇಶದ ರಾಜಕಾರಣಿಗಳು, ಅಧಿಕಾರಿಗಳು ಅಷ್ಟೊಂದು ಕೆಟ್ಟವರೇ? ನಮ್ಮನ್ನಾಳುವವರು ಅಷ್ಟೊಂದು ಸ್ವಾರ್ಥಿಗಳೇ? ಜನಸೇವೆ ಎಂಬುದರ ಅರ್ಥ ಇದೇನಾ? ಸಾಮಾನ್ಯ ಜನರ ಬವಣೆ ಇವರ ಕಣ್ಣಿಗೆ ಕಾಣುವುದಿಲ್ಲವೇ? ಈ ಮಧ್ಯೆ ವಿವೇಕಾನಂದರ ೧೫೦ನೇ ಹುಟ್ಟಹಬ್ಬದ ಆಚರಣೆಯಾಗಿದೆ. ವಿವೇಕಾನಂದರು ಹೇಳಿದ ಮಾತು: 'ಅತಿ ದೊಡ್ಡ ಪಾಪವೆಂದರೆ ಸ್ವಾರ್ಥ. ಯಾವುದು ಸ್ವಾರ್ಥವೋ ಅದು ಅನೈತಿಕ; ಯಾವದು ನಿಃಸ್ವಾರ್ಥವೋ ಅದು ನೈತಿಕ.'

ಮನ ಕಲಕುವ ಇನ್ನೊಂದು ಘಟನೆ ದೆಹಲಿಯಲ್ಲಿ ನಡೆದ ಸಾಮೂಹಿಕ ಅತ್ಯಾಚಾರ. ಇದಕ್ಕೂ ಮುನ್ನ, ಪಾಕಿಸ್ತಾನದ ಮಾನವ ಹಕ್ಕುಗಳ ಹೋರಾಟಗಾರ್ತಿ,

ಹದಿನಾಲ್ಕು ವರ್ಷಗಳ ಬಾಲೆ ಗುಂಡಿನೇಟು ತಿಂದ ಘಟನೆ. ಇದು ಕ್ರೌರ್ಯದ ಪರಾಕಾಷ್ಠೆಯಲ್ಲದೇ ಮತ್ತೇನು?

ಕ್ರೌರ್ಯದ ಭಾಷೆಗೆ ಮುಗುದೆಯ ನಲ್ನುಡಿ ತಟ್ಟಿತು ಹೇಗೆ? ಧರ್ಮ ದ ಕುರುಡು ಬೆಳಕಿಗೆ ಮುಖ ಮಾಡೀತು ಹೇಗೆ? ಮಲೆತು ನಿಂತ ಮೆದುಳು ಅರಿವಿನೆಡೆ ಹೊರಳೀತು ಹೇಗೆ? ಬಂದೂಕಿನ ಗುಂಡಿಗೆ ಕೋಮಲ ಗುಂಡಿಗೆ ತಡೆದೀತು ಹೇಗೆ?

ಪತ್ರಿಕೆಯೊಂದು ನಮ್ಮ ಸಂವೇದನಾಶೀಲತೆಯ ಕುರಿತು ಬರೆದ ಟಿಪ್ಪಣಿ ಯನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. 'ದೇಶದ ಯಾವುದೇ ಮೂಲೆಯಲ್ಲಿ ದೌರ್ಜನ್ಯ ನಡೆದರೂ ಪ್ರಜ್ಞಾವಂತ ನಾಗರಿಕರ ಸೈನ್ಯ ಮುಸ್ಸಂಜೆ ಹೊತ್ತು ಆಯಕಟ್ಟಿನ ಸ್ಥಳಗಳಲ್ಲಿ ಮೊಂಬತ್ತಿ ಹಿಡಿದು ನಿಂತು ಪ್ರತಿಭಟನೆ ವ್ಯಕ್ತಪಡಿಸುತ್ತದೆ. ಎಚ್ಚರಿಕೆ, ಜಾಗೃತಿಯ ಘಂಟಾಘೋಷ ಮೊಳಗಿಸುತ್ತದೆ. ಆದರೆ, ಕಟು ವಾಸ್ತವಿಕ ಮತ್ತು ಕಹಿ ಸತ್ಯದ ಸಂಗತಿ ಏನೆಂದರೆ ಈ ಪ್ರತಿಭಟನೆ, ಧರಣಿಗಳೆಲ್ಲ ಆ ಸಂಜೆಗಷ್ಟೇ ಸೀಮಿತವಾಗಿ ಮೊಂಬತ್ತಿ ಉರಿದು ಹೋಗುತ್ತಿದ್ದಂತೆ ನಾಗರಿಕ ಪ್ರಜ್ಞೆ ಕತ್ತಲಲ್ಲಿ ಕರಗಿ ಹೋಗಿಬಿಡುತ್ತದೆ. ಆ ಬಳಿಕ ಸಾರ್ವಜನಿಕರ ಆಕ್ರೋಷ, ಪ್ರತಿಜ್ಞೆ ಜಾಗೃತಿ ಹೆಪ್ಪುಗಟ್ಟಲು ಮತ್ತೊಂದು ದುರ್ಘಟನೆಯೇ ನಡೆಬೇಕು.!' ಇದು ಚಿಂತಿಸಬೇಕಾದ ವಿಷಯ ಎಂದು ನನ್ನ ಅನಿಸಿಕೆ.

ನೆನಕೆ–ಹಾರೈಕೆ : ಅಂಕೋಲೆಯ ಹಿರಿಮೆ–ಗರಿಮೆಗಳಿಗೆ ಕಾರಣರಾದ–ನಾ ಕಂಡ– ಅನೇಕ ಹಿರಿಯರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕ ನೆನೆಯುತ್ತೇನೆ. ಸ್ವಾತಂತ್ರ್ಯ ಸೇನಾನಿ ತಿಮ್ಮಪ್ಪ ನಾಯಕ, ಋಷಿಸದೃಶ ವ್ಯಕ್ತಿತ್ವದ ಕವಿ– ರಾಜಕಾರಣಿ ಸ.ಪ.ಗಾಂವಕರ, ಬಾಸಗೋಡದ ರಾಮ ನಾಯಕ, ಭಾವಿಕೇರಿ ರಾಮ ನಾಯಕ, ಶತಾಯುಷಿ ಜೋಗಿ ಬೀರಣ್ಣ ನಾಯಕ, ಆದರ್ಶ ಶಿಕ್ಷಕ ಬೋಳೆಯ ಜೋಗಿ ನಾಯಕ ಮಾಸ್ತರರು, ಬಾಸಗೋಡದ ಬೊಮ್ಮಯ್ಯ ಗಾಂವಕಾರ, ಕವಿ–ಶಿಕ್ಷಣತಜ್ಞ– ರೈತ ಚಳವಳಿಯ ರೂವಾರಿ ದಿನಕರ ದೇಸಾಯಿ, ಗಾಂಧೀವಾದಿ ಅನಂತ ಪೈ, ದಯಾನಂದ ನಾಡಕರ್ಣಿ, ಅಜಾತಶತ್ರು ವಿಠಲ ಶೆಟ್ಟಿ ಕಾಂಜನ, ಶೋಷಿತರ ಪರ ದನಿಯೆತ್ತಿದ ಎಸ್.ವಿ.ಪಿಕಳೆ, ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ ಪ್ರೇಮಾ ಪಿಕಳೆ, ಕಲಾವಿದ ಸುಬ್ರಹ್ಮಣ್ಯ ಶೆಟ್ಟಿ, ಕಟ್ಟುವ ಕಾಯಕದ ವಾಮನ ಪೈ, ಸಾಹಿತಿ ಶ್ಯಾಮ ಹುದ್ದಾರ, ಗೋಖಲೆ ಸೆಂಟಿನರಿ ಕಾಲೇಜಿಗೆ ರಾಜ್ಯಮಟ್ಟದ ಹೆಸರನ್ನು ತಂದುಕೊಟ್ಟ ಕೆ.ಜಿ.ನಾಯಕ ಹಾಗೂ ನಾನು ಕಾಣದ ಅನೇಕ ಸ್ವಾತಂತ್ರ್ಯ ಸೇನಾನಿಗಳಿಗೆ, ಹಿರಿಯರಿಗೆ ಅತ್ಯಂತ ಗೌರವದ ನೆನಕೆಗಳು.

ಈ ವರ್ಷ ಗೋಖಲೆ ಸೆಂಟಿನರಿ ಕಾಲೇಜಿನ ವಿದ್ಯಾರ್ಥಿನಿಯರಾದ ಹೇಮಾ ನಾಯಕ, ಕಾವ್ಯಶ್ರೀ ಕೆರೆಮನೆ, ಮತ್ತು ಸಹನಾ ಗಾಂವಕರ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎಸ್.ಸಿ.ಅಂತಿಮ ಪರೀಕ್ಷೆಯಲ್ಲಿ ಕ್ರಮವಾಗಿ ಮೊದಲ, ಏಳನೆಯ ಮತ್ತು ಒಂಬತ್ತನೆಯ ಯಾರ್ಂಕ್ ಪಡೆದಿದ್ದಾರೆ. ಇದೇ ಕಾಲೇಜಿನ ಬಿ.ಎಸ್.ಸಿ. ಅಂತಿಮ ವರ್ಗದ ವಿದ್ಯಾರ್ಥಿನಿ ಪಂಕಜಾ ನಾಯಕ ಪ್ರತಿಷ್ಠಿತ ಪಿ.ಎಸ್.ಕಾಮತ ಸ್ಮಾರಕ ಚರ್ಚಾಸ್ಪರ್ಧೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಅಂತೆಯೇ, ಕಾರವಾರದ ದಿವೇಕರ ಕಾಲೇಜಿನ ವಿದ್ಯಾರ್ಥಿ ದಾಮೋದರ ಕಿಣಿ ಬಿ.ಕಾಂ. ಅಂತಿಮ ಪರೀಕ್ಷೆಯಲ್ಲಿ ಆರನೆಯ ಯಾರ್ಂಕ್ ಗಳಿಸಿದ್ದಾನೆ. ಈ ವಿದ್ಯಾರ್ಥಿಗಳಿಗೆ ಅಂಕೋಲೆಯ ಜನತೆಯ ಪರವಾಗಿ ಹಾರ್ದಿಕ ಅಭಿನಂದನೆಗಳು. ಅಂಕೋಲೆಯ ಈ ಕುಡಿಗಳ ಭವಿಷ್ಯ ಉಜ್ವಲವಾಗಲಿ.

ಅಂಕೋಲೆಯ ಹಿರಿಯ ಕವಿ, ಸಂಘಟಕ ವಿಷ್ಣು ನಾಯ್ಕರು ಇತ್ತೀಚೆಗೆ, 'ವರ್ಧಮಾನ' ಮತ್ತು 'ಅವ್ವ' ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅಂಕೋಲೆಯ ಸಾಹಿತ್ಯಲೋಕಕ್ಕೆ ಹಿರಿಮೆ–ಗರಿಮೆಗಳನ್ನು ತಂದುಕೊಟ್ಟವರು ಅವರು. ಜಿಲ್ಲೆಯ ಅನೇಕ ಉದಯೋನ್ಮುಖ ಬರಹಗಾರರನ್ನು ಬೆಳಕಿಗೆ ತಂದವರು. ಅವರಿಗೆ ಈ ಸಂದರ್ಭದಲ್ಲಿ ಎಲ್ಲರ ಪರವಾಗಿ ಅಭಿನಂದನೆಗಳು.

ಅಂಕೋಲೆಯ ಕ್ರಿಯಾಶೀಲ ಯುವಕ, ಅಭಿಜಾತ ಯಕ್ಷಗಾನ ಕಲಾವಿದ ಮತ್ತು ಸಂಘಟಕ ಭಾವಿಕೇರಿಯ ಸಂದೀಪ ನಾಯಕ ನಮ್ಮನ್ನೆಲ್ಲ ಬಿಟ್ಟು ಕಾಣದ ಲೋಕಕ್ಕೆ ತೆರಳಿದ್ದಾನೆ. ಅಂಕೋಲೆಗಾದ ನಷ್ಟ ಇದು. ಅವನಿಗಾಗಿ ಹಿಡಿ ಕಂಬನಿ.

ಸಮಾರೋಪ : ಸಾಹಿತ್ಯಕವಾಗಿ ಅಂಕೋಲೆ ಸದಾ ಜಾಗೃತವಾಗಿರುವ ತಾಲೂಕು. ಇಲ್ಲಿ ಗ್ರಾಮೀಣ ಹಂತದಿಂದ ರಾಜ್ಯದ ಹಂತದ ವರೆಗಿನ ಬರಹಗಾರರಿದ್ದಾರೆ.ಅನೇಕ ಯುವ ಬರಹಗಾರರು

ಉದಯಿಸುತ್ತಿದ್ದಾರೆ. ಇವರ ಬರಹಗಳನ್ನು ಪ್ರಕಟಿಸಿ ಪ್ರೋತ್ಸಾಹಿಸುತ್ತಿರುವ ಜನಪ್ರಿಯ ದಿನಪತ್ರಿಕೆ 'ಕರಾವಳಿ ಮುಂಜಾವು' ಪತ್ರಿಕೆಯ ನಿಲುಮೆ ಅತ್ಯಂತ ಆರೋಗ್ಯ ಪೂರ್ಣವಾದುದು. ನಮ್ಮ ಜಿಲ್ಲೆಯ ಈ ಹೆಮ್ಮೆಯ ಪತ್ರಿಕೆ ಬೆಳೆದುಬಂದ ಬಗೆ ಅಚ್ಚರಿ ಹುಟ್ಟಿಸುವಂತಹದು. ಪತ್ರಿಕೆಯ ಸಂಪಾದಕರಾದ ಗಂಗಾಧರ ಹಿರೇಗುತ್ತಿ ಅವರ ಸಾಧನೆಗೆ ಇಡೀ ಜಿಲ್ಲೆ ಹೆಮ್ಮೆ ಪಡುತ್ತದೆ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಅಂಕೋಲೆ ನನಗೆ ನೆಲೆಯನ್ನು ಒದಗಿಸಿದೆ. ಸ್ಥಾನ–ಮಾನಗಳನ್ನು ನೀಡಿದೆ. ನಾಲ್ಕನೆಯ ಸಾಹಿತ್ಯ ಸಮ್ಮೇಲನದ ಸರ್ವಾಧ್ಯಕ್ಷತೆ ಅಂಕೋಲೆಯ ಜನತೆ ನನಗೆ ನೀಡಿದ ಅತಿ ದೊಡ್ಡ ಗೌರವ. ಈ ಗೌರವವನ್ನು ನಾನು ವಿನೀತ ಭಾವದಿಂದ ಸ್ವೀಕರಿಸಿದ್ದೇನೆ. ಇದಕ್ಕೆ ಕಾರಣರಾದ ಅಂಕೋಲಾ, ಜಿಲ್ಲಾ, ರಾಜ್ಯ ಸಾಹಿತ್ಯ ಪರಿಷತ್ತುಗಳ ಅಧ್ಯಕ್ಷರಾದಿಯಾಗಿ ಎಲ್ಲ ಪದಾಧಿಕಾರಿಗಳಿಗೆ, ಸಾಹಿತ್ಯ ಬಳಗದ ಹಿರಿಕಿರಿಯ ಸ್ನೇಹಿತರಿಗೆ ಹಾಗೂ ಅಂಕೋಲೆಯ ಮಹಾಜನತೆಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಉತ್ತರಕನ್ನಡ ಜಿಲ್ಲೆಯ ೧೬ನೇ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಡಾ. ಬಿ. ಎ. ಸನದಿಯವರ ಮಾತನ್ನು ಇಲ್ಲಿ ಉದ್ಧರಿಸಬಯಸುತ್ತೇನೆ. ಅವರು ಹೇಳಿದ್ದು: 'ನಿರಂತರ ಜಾಗೃತಿಯೆಂಬುದು ಮೊದಲಿಗಿಂತಲೂ ಹೆಚ್ಚಾಗಿದೆ ಯೆಂಬ ಅರಿವು ಮೂಡಿದಷ್ಟೂ ನಮ್ಮ ಮಾನವಲೋಕಕ್ಕೆ ಕ್ಷೇಮ; ಮಕ್ಕಳ ಲೋಕಕ್ಕೂ ಕ್ಷೇಮ'. ಇಂಥ ಎಚ್ಚರದ ಬದುಕು ನಮ್ಮದಾಗಲಿ. ಕವಿವಾಣಿಯಂತೆ, ನಮ್ಮ ನಾಡು ಸಮ ಬಗೆಯ ಸಮಸುಖದ ಸಮದುಃಖದ ಸಾಮಗಾನದ ಲಹರಿಯ ಮೇಲೆ ತೇಲಿ ಬರಲಿ.

ಎಲ್ಲರೂ ಸುಖಿಗಳಾಗಲಿ ।
ಎಲ್ಲರೂ ಆರೋಗ್ಯವಂತರಾಗಲಿ ।
ಎಲ್ಲರೂ ಪ್ರಜ್ಞಾವಂತರಾಗಲಿ ।
ಎಲ್ಲರೂ ಒಳ್ಳೆಯದನ್ನೇ ಕಾಣಲಿ.

ಸಿರಿಗನ್ನಡಂಗೆಲ್ಗೆ

ಮಾವಿನ ಹಣ್ಣು

ಮಾವಿನ ಹಣ್ಣು ಮಾವಿನ ಹಣ್ಣು
ಭಾರತ ಭೂಮಿಯ ಹೆಮ್ಮೆಯ ಹಣ್ಣು
ಮಂಗ ಮಾನವರು ಮೆಚ್ಚುವ ಹಣ್ಣು
ಕಾಗೆ ಬಾವಲಿ ತಿನ್ನುವ ಹಣ್ಣು

ಹುಳಿ ಸಿಹಿ ರಸವ ತುಂಬಿದ ಹಣ್ಣು
ಬಾಯಾಲಿಕೆಯ ತಣಿಸುವ ಹಣ್ಣು
ಮಕ್ಕಳಿಗೆಲ್ಲಾ ಸೇರುವ ಹಣ್ಣು
ಹಲ್ಲಿಲ್ಲದ ಅಜ್ಜಿ ಸೀಪುವ ಹಣ್ಣು

ಆಪೂಸ ಲಾಂಗ್ಲಾ ನೀಲಂ ದಶೇರಿ
ರಸರಸ ತುಂಬಿದ ಈಷಾಡ ಪಾಯ್ರಿ
ತರಗಳು ಇರುವವು ನೂರು ಹನ್ನೆರಡು
ತಿಂದರೆ ಹುಳಿ ಸಿಹಿ ರುಚಿಗಳು ಎರಡು

ಧಾರವಾಡದ ಪೇರಲ ಹಣ್ಣು
ನಾಗಪುರದ ಕಿತ್ತಳೆ ಹಣ್ಣು
ಶಿಮ್ಲಾ ಸೀಮೆಯ ಸೇಬಿನ ಹಣ್ಣು
ಎಲ್ಲಕೂ ಮಿಗಿಲು ಮಾವಿನ ಹಣ್ಣು

– ಗಿರಿ ಪಿಕಳೆ
(ಮಕ್ಕಳ ಪದಗಳು ಸಂಕಲನದಿಂದ)

ಅಂಕೋಲಾ ತಾಲೂಕಾ ಐದನೇ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೦೬-೦೨-೨೦೧೫

ಸಮ್ಮೇಳನದ ಸರ್ವಾಧ್ಯಕ್ಷರು

ಯಕ್ಷ ಪ್ರೇಮಿ : ಡಾ॥ ಆರ್.ಜಿ. ಗುಂದಿ



ಅಂಕೋಲೆಯ ಐದನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಡಾ॥ ರಾಮಕೃಷ್ಣ ಗುಂದಿ ಅವರು ಮೂಲತಃ ಕುಮಟಾ ತಾಲೂಕಿನವರಾದರೂ ತಮ್ಮ ವೃತ್ತಿ ಹಾಗೂ ಪ್ರವೃತ್ತಿಗಳಿಂದ ಅಂಕೋಲಿಗರಾಗಿ ಬಾಳುತ್ತಿರುವವರು. ಬಹುಮುಖ ಪ್ರತಿಭೆಯ ಗುಂದಿಯುವರು ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಸೇವೆಗೈಯುವದರೊಂದಿಗೆ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾದವರು. ಶಿಕ್ಷಣ, ಸಾಹಿತ್ಯ, ಕಲೆ, ಪತ್ರಿಕೋದ್ಯಮ ಇವು ಗುಂದಿಯವರ ಪ್ರಮುಖ ಸಾಮಾಜಿಕ ಕಾರ್ಯಕ್ಷೇತ್ರಗಳು.

ಉತ್ತರ ಕನ್ನಡ ಜಿಲ್ಲೆಯ ಅತ್ಯುತ್ತಮ ಯಕ್ಷಗಾನ ಕಲಾವಿದರಲ್ಲಿ ಒಬ್ಬರಾಗಿರುವ ಗುಂದಿಯವರು ಕಂಸ, ಕೌರವ, ಮಾಗಧ, ವಿಶ್ವಾಮಿತ್ರ ಮುಂತಾದ ಪಾತ್ರಗಳಿಂದ ಹೆಸರುವಾಸಿಯಾದವರು. ನಾಟಕದಲ್ಲೂ ಪ್ರಖರವಾಗಿ ಮಿಂಚಿದ ಗುಂದಿಯವರ ಜೈಸಿದ್ನಾಯ್ಕ, ಕಟ್ಟು, ವಂದೇ ಮಾತರಂ ಮುಂತಾದ ನಾಟಕದ ಪಾತ್ರಗಳು ಈಗಲೂ ಪ್ರೇಕ್ಷಕರ ಮನದಲ್ಲಿ ಹಸಿರಾಗಿವೆ.

ನಾಡಿನ ಉತ್ತಮ ಕಥೆಗಾರರಲ್ಲಿ ಒಬ್ಬರಾಗಿರುವ ಗುಂದಿಯವರು, ಭಾಷೆಯ ಕಸುವು ಮತ್ತು ತಣ್ಣನೆಯ ಬಂಡಾಯದ ಮೂಲಕ ಕಲಾತ್ಮಕವಾಗಿ ಕತೆ ಹೆಣೆಯುವ ಕೌಶಲ್ಯ ಹೊಂದಿದವರು. ಅವಾರಿ, ಕಡಲ ಬೆಳಕಿನ ದಾರಿಗುಂಟ, ಅತಿಕ್ರಾಂತ, ಸೀತೆದಂಡೆ ಹೂವೆ ಎಂಬ ಕಥಾ ಸಂಕಲನಗಳು, ನಾಗಲೋಕ ವಿಜಯ ಎಂಬ ಯಕ್ಷಗಾನ ಪ್ರಸಂಗ, ಪ್ರಾಂಜಲ ಎಂಬ ವಿಮರ್ಶಾ ಸಂಕಲನ, ಆಗೇರರ ಸಂಸ್ಕೃತಿ ಎಂಬ ಸಂಶೋಧನೆ, ವಂದೆ ಮಾತರಂ ಎಂಬ ನಾಟಕ ಇವು ಗುಂದಿಯವರ ಪ್ರಮುಖ ಕೃತಿಗಳು.

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಹಾಪ್ರಬಂಧವನ್ನು ಸಾದರಪಡಿಸಿ ಡಾಕ್ಟರೇಟ್ ಪದವಿ ಪಡೆದ ಗುಂದಿಯವರು ಕೆಲಕಾಲ ಪತ್ರಕರ್ತರಾಗಿಯೂ ಸೇವೆಗೈದ ಅನುಭವ ಹೊಂದಿದ್ದಾರೆ. ಅಂಕೋಲಾ ಕರ್ನಾಟಕ ಸಂಘ ಹಾಗೂ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಉತ್ತರ ಕನ್ನಡ ಜಿಲ್ಲಾ ಆಗೇರ ಸಮಾಜ ಅಭಿವೃದ್ಧಿ ಸಂಘದ ಗೌರವಾಧ್ಯಕ್ಷರಾಗಿ, ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನದ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಸಿನೆಟ್ ಸದಸ್ಯರಾಗಿ ಮಹತ್ವದ ಸೇವೆಯನ್ನು ದಾಖಲಿಸಿದ್ದಾರೆ.

ದಿನಾಂಕ ೦೬-೦೨-೨೦೧೫ರಂದು ತಮ್ಮ ೬೨ನೇ ವಯಸ್ಸಿನಲ್ಲಿ ತಾಲೂಕಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗುವುದರೊಂದಿಗೆ ತಮ್ಮ ಮಾತಿನ ಮೋಡಿಯಿಂದ ಸಮ್ಮೇಳನವನ್ನು ವರ್ಣರಂಜಿತಗೊಳಿಸಿದರು. ಅವರ ಕವನದ ಸಾಲುಗಳು ಹೀಗಿವೆ :

ಚೆಂಗುಲಾಬಿ ನಿನ್ನಲೇಕೆ
ಸೌಂದರ್ಯ ಹೊಸೆದ?
ನೀ ಹುಟ್ಟಿದ ಗಿಡಕೆ ದೇವ
ಮುಳ್ಳನೇಕೆ ಬೆಸೆದ?

ಡಾ. ರಾಮಕೃಷ್ಣ ಗುಂದಿ ಅವರ ಸರ್ವಾಧ್ಯಕ್ಷೀಯ ಭಾಷಣ

ಅಂಕೋಲಾ ತಾಲೂಕು ಸಾಹಿತ್ಯ ಪರಿಷತ್ ಘಟಕದ ಐದನೆಯ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರೂ, ಮಾನ್ಯ ಶಾಸಕರೂ ಆದ ಶ್ರೀ ಸತೀಶ್ ಕೃಷ್ಣ ಸೈಲ್ ಅವರೆ, ಸಮ್ಮೇಳನವನ್ನು ಉದ್ಘಾಟಿಸಿದ ಉತ್ತರ ಕನ್ನಡ ಜಿಲ್ಲಾ ಪಂಚಾಯತ ಅಧ್ಯಕ್ಷರಾದ ಶ್ರೀಮತಿ ಸರಸ್ವತಿ ಶಂಕರ ಗೌಡ ಅವರೆ, ಮುಖ್ಯ ಅತಿಥಿಗಳಾದ ಹಿರಿಯ ಕವಿ ಡಾ. ಬಿ.ಎ. ಸನದಿಯವರೆ, ಸ್ಮರಣ ಸಂಚಿಕೆಯ ಬಿಡುಗಡೆ ಮಾಡಿದ ಜಿಲ್ಲಾ ಪಂಚಾಯತ್ ಸದಸ್ಯ ಶ್ರೀ ಉದಯ ನಾಯ್ಕ ಅವರೆ, ಕನ್ನಡ ಧ್ವಜಾರೋಹಣ ಮಾಡಿದ ಉ.ಕ. ಜಿಲ್ಲಾ ಸಾಹಿತ್ಯ ಪರಿಷತ್ ಘಟಕದ ಅಧ್ಯಕ್ಷ ರೋಹಿದಾಸ ನಾಯ್ಕ ಅವರೆ, ರಾಷ್ಟ್ರ ಧ್ವಜಾರೋಹಣ ಪೂರೈಸಿದ ಅಂಕೋಲಾ ತಹಶೀಲ್ದಾರರಾದ ಶ್ರೀ ವಿ.ಜಿ. ಲಾಂಜೇಕರ ಅವರೆ, ಅತಿಥಿಗಳಾಗಿ ವೇದಿಕೆಯಲ್ಲಿ ಉಪಸ್ಥಿತರಿರುವ ಜಿ.ಪಂ. ಸದಸ್ಯ ವಿನೋದ ನಾಯಕರೆ, ತಾ.ಪಂ. ಅಧ್ಯಕ್ಷ ವಿನೋದ ಗಾಂವಕರ ಅವರೆ, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಪಿ.ಜಿ. ಗಾಂವಕರ ಅವರೆ, ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ ನಾಯಕ ಅವರೆ, ಸಿ.ಪಿ.ಐ. ಗಣೇಶ ಹೆಗಡೆ ಅವರೆ, ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಶಾಂತಾರಾಮ ನಾಯಕರೆ, ಬಿ. ಹೊನ್ನಪ್ಪ ಭಾವಿಕೇರಿಯವರೆ, ಪ್ರೊ. ಮೋಹನ ಹಬ್ಬು ಅವರೆ,

ಅಂಕೋಲಾ ತಾಲೂಕು ಘಟಕದ ಅಧ್ಯಕ್ಷ ಗೋಪಾಲಕೃಷ್ಣ ನಾಯಕ ಅವರೆ, ಪರಿಷತ್ತಿನ ಇತರ ಪದಾಧಿಕಾರಿಗಳೆ, ಸದಸ್ಯರೆ, ಸಭೆಯಲ್ಲಿ ಉಪಸ್ಥಿತರಿರುವ ಗಣ್ಯ ಮಹನೀಯರೆ, ವಿದ್ವಾಂಸರೆ, ಸಾಹಿತ್ಯಾಭಿಮಾನಿ ಸಹೋದರ ಸಹೋದರಿಯರೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ ಹಾಗೂ ಮಾಧ್ಯಮದ ಎಲ್ಲ ಸ್ನೇಹಿತರೆ ಅಂಕೋಲಾ ತಾಲೂಕು ಐದನೆಯ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವ ನೀಡಿ ಈ ಸುಂದರ ಸಮ್ಮೇಳನವನ್ನು ಸಂಘಟಿಸಿದ ಸಹಕರಿಸಿದ ತಮ್ಮೆಲ್ಲರಿಗೆ ನನ್ನ ಹೃದಯಪೂರ್ವಕ ವಂದನೆಗಳನ್ನು ಪ್ರಥಮವಾಗಿ ಸಲ್ಲಿಸುವೆ.

ಸಹೋದರ–ಸಹೋದರಿಯರೇ,

ಉತ್ತರ ಕನ್ನಡ ಜಿಲ್ಲೆ ಮಾತ್ರವಲ್ಲದೆ ಕರ್ನಾಟಕ ರಾಜ್ಯದ ಜಾಗೃತ ಪ್ರಜ್ಞೆಯ ಪ್ರತೀಕದಂತಿರುವ ನಮ್ಮ ಅಂಕೋಲೆ ಸ್ವಾತಂತ್ರ್ಯ ಹೋರಾಟದ ಮೂಲಕ ದೇಶವ್ಯಾಪಿಯಾಗಿ ಪ್ರಸಿದ್ಧಿಯನ್ನು ಪಡೆದ ಪುಣ್ಯ ಭೂಮಿ. ಈ ನೆಲಕ್ಕೆ ವಿಶಿಷ್ಟವಾದ, ಶೈಕ್ಷಣಿಕ, ಸಾಂಸ್ಕೃತಿಕ, ಐತಿಹಾಸಿಕ ಹಿನ್ನೆಲೆಯಿದೆ. ಶುದ್ಧ ಸಾತ್ವಿಕ ಆಚಾರ ವಿಚಾರಗಳ ಭವ್ಯ ಪರಂಪರೆಯಿದೆ. ಕಳೆದ ಒಂದು ಶತಮಾನದುದ್ದಕ್ಕೂ ಸಮಾನತೆ–ಸ್ವಾತಂತ್ರ್ಯ–ಭಾಷಾಭಿಮಾನದ ಕುರಿತು ನಡೆದ ಹಲವು ಚಳುವಳಿಗಳಿಗೆ ಸಾಕ್ಷಿಯಾದ ಅಂಕೋಲೆಯ ಜನಪದ ನಿರಂತರ ಚಲನಶೀಲ ಸತ್ವವನ್ನು ಉಳಿಸಿಕೊಂಡು ನೆಲದ ಗುಣ ಗೌರವವನ್ನು ಕಾಪಾಡಿಕೊಂಡೇ ಬಂದಿರುವುದು ನಾವೆಲ್ಲ ಅಭಿಮಾನಪಡಬೇಕಾದ ಸಂಗತಿ. ಸ್ವಾತಂತ್ರ್ಯ ಚಳುವಳಿಯ ಗಂಡುಮೆಟ್ಟಿನ ನೆಲ. ಅಸಹಕಾರ ಚಳುವಳಿಯಿಂದ ಮೊದಲ್ಗೊಂಡು ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ ಚಳುವಳಿ, ಚಲೇಜಾವ್ ಚಳುವಳಿಗಳಲ್ಲಿ ಅಂಕೋಲೆಯ ಜನಸಮುದಾಯ ತೋರಿದ ಅಪ್ರತಿಮ ಸಾಹಸಗಾಥೆ ದೇಶದ ಚರಿತ್ರೆಯಲ್ಲಿ ಅವಿಸ್ಮರಣೀಯ ದಾಖಲೆಯಾಗಿ ಉಳಿದಿದೆ. ಈ ಹೋರಾಟದ ಜೊತೆ ಜೊತೆಯಲ್ಲೇ ನಡೆದ ರೈತ ಚಳುವಳಿ ಕೂಡ ಈ ಭಾಗದ ಜನತೆಯ ಆರ್ಥಿಕ ಮತ್ತು ಶೈಕ್ಷಣಿಕ ಸ್ವಾತಂತ್ರ್ಯ, ಸಾಮಾಜಿಕ ಜಾಗೃತಿ ಪ್ರಜ್ಞೆಯ ಪ್ರತೀಕವಾಗಿಯೇ ನಮ್ಮೆಲ್ಲರ ಸ್ಮರಣೆಯಲ್ಲಿ ಉಳಿದುಕೊಂಡಿದೆ. "ರೈತ ಚಳುವಳಿ ಕೇವಲ ರೈತ ಶೋಷಣೆಯ ವಿರುದ್ಧವೊಂದೇ ಅಲ್ಲ. ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಜಾಗೃತಿಗಾಗಿಯೂ ನಡೆದ ಹೋರಾಟ" ಎಂದು ವಿಶ್ಲೇಷಿಸುವ ವಿಷ್ಣು ನಾಯ್ಕರ 'ದುಡಿಯುವ ಕೈಗಳ ಹೋರಾಟದ ಕತೆ' ಕೃತಿಗೆ ಬರೆದ ಮುನ್ನುಡಿಯಲ್ಲಿ ನಮ್ಮ ಅಂಕೋಲೆಯವರೇ ಆದ ನಾಡಿನ ಖ್ಯಾತ ವಿಮರ್ಶಕ ಜಿ.ಎಚ್. ನಾಯಕ ಅವರು ಬರೆದ ಮುನ್ನುಡಿಯಲ್ಲಿ. "ಉತ್ತರ ಕನ್ನಡ ಜಿಲ್ಲೆ ಮುಖ್ಯವಾಗಿ

ನಮ್ಮ ಅಂಕೋಲಾ ತಾಲೂಕು ೧೯೨೦ರ ದಶಕದಿಂದ ೧೯೭೦ರ ದಶಕದವರೆಗೆ ಅಂದರೆ ಸರಿಸುಮಾರು ಐವತ್ತು ವರ್ಷಗಳ ಕಾಲ ನಿರಂತರ ಹೋರಾಟದ ಕೆಂಡದ ಕೊಂಡ ಹಾದು ಒಂದು ಅದ್ಭುತ ಚರಿತ್ರೆ ನಿರ್ಮಿಸಿದ್ದು ಈಗ ಇತಿಹಾಸ. ಇಂಥ ಮತ್ತು ಇಷ್ಟು ಧೀರ್ಘ ಕಾಲಾವಧಿಯ ನಿರಂತರ ಹೋರಾಟ ಕರ್ನಾಟಕದಲ್ಲಿ ಬೇರೆ ಯಾವ ತಾಲೂಕಿನಲ್ಲಿಯೂ ಯಾವ ಜಿಲ್ಲೆಯಲ್ಲಿಯೂ ನಡೆಯಲಿಲ್ಲ. ಇಷ್ಟು ದೀರ್ಘ ಕಾಲದ ಜನಾಂದೋಲನದ ಚರಿತ್ರೆ ದೇಶದ ಯಾವ ರಾಜ್ಯದಲ್ಲಿಯೂ ಬಹುಶಃ ಇಲ್ಲ. ಇದು ಈ ಹೋರಾಟದಲ್ಲಿ ಅತ್ಯಂತ ಮುಖ್ಯ ಪಾತ್ರ ವಹಿಸಿದ್ದ ನಮ್ಮ ಅಂಕೋಲಾ ತಾಲೂಕಿಗೆ ಒಟ್ಟಿನಲ್ಲಿ ಉ.ಕ. ಜಿಲ್ಲೆಗೆ ಯಾವ ಕಾಲಕ್ಕೂ ಹೆಮ್ಮೆಯ ಸಂಗತಿಯಾಗಿ ಉಳಿಯುತ್ತದೆ." ಎಂಬ ಮಾತನ್ನು ಅಂಕೋಲೆಯ ನೆಲದ ಪ್ರತಿಯೊಂದು ಜೀವವೂ ಆತ್ಮಸಾಕ್ಷಿಯ ಎಚ್ಚರವಾಗಿ ಗಮನಿಸಬೇಕಾದದ್ದು ತುಂಬ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಶಾಂತಾರಾಮ ನಾಯಕ ಹಿಚ್ಕಡ ಅವರು ಬರೆದ 'ಸ್ವಾತಂತ್ರ್ಯದ ಹೊರಳು ನೋಟ', ದಯಾನಂದ ಪ್ರಭು ಅವರ 'ಭೂಗತನ ನೆನಪುಗಳು' ಮತ್ತು ವಿಷ್ಣು ನಾಯ್ಕರ 'ದುಡಿಯುವ ಕೈಗಳ ಹೋರಾಟದ ಕತೆ' ಗ್ರಂಥಗಳನ್ನು ನಮ್ಮ ಯುವ ಪೀಳಿಗೆ ಕಡ್ಡಾಯವಾಗಿ ಓದುವಂತೆ ಪ್ರೇರೇಪಿಸುವುದು ಹಿರಿಯರೆಲ್ಲರ ಜವಾಬ್ದಾರಿಯಾಗಿದೆ.

ಅಂಕೋಲೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಮಹತ್ವ :

ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಂಕೋಲೆ ಸಮೃದ್ಧ ಎನಿಸುವ ಸಿದ್ಧಿ ಪ್ರಸಿದ್ಧಿಯನ್ನು ಪಡೆದಿದೆ. ೧೮೫೩ ರಿಂದ ೧೯೨೭ರ ಅವಧಿಯಲ್ಲಿ ಬಾಳಿದ ಲಕ್ಷ್ಮಣ ಬಾಬಣಿ ಪೈ ಅವರ ಭಾಮಿನಿ ಷಟ್ಪದಿಯ ಭಗವದ್ಗೀತೆ, ಸ.ಪ. ಗಾಂವಕರರ 'ಗೀತಾಂಜಲಿ', ಡೆಂಗಾ ನಾಯ್ಕರ 'ನಾಮಧಾರಿ ಜಾತಿ' ಎಂಬ ಷಟ್ಪದಿ ಕಾವ್ಯಗಳು ಅಂಕೋಲೆಯ ಕಾವ್ಯ ಪರಂಪರೆಗೆ ಭದ್ರ ಬುನಾದಿ ಹಾಕಿದವು. ಮುಂದಿನ ತಲೆಮಾರಿನಲ್ಲಿ ದಿನಕರ ದೇಸಾಯಿ, ವಿಷ್ಣು ನಾಯ್ಕ, ಶಾಂತಾರಾಮ ನಾಯಕ, ಜಿನದೇವ ನಾಯಕ, ಶ್ರೀನಿವಾಸ ಶೆಟ್ಟಿ, ಶಾಂತಾರಾಮ ಬಾಳೆಗುಳಿ ಇತ್ಯಾದಿ ಮಹನೀಯರು ಈ ಪರಂಪರೆಗೆ ಇನ್ನಷ್ಟು ಶಕ್ತಿ ತುಂಬಿ ಬೆಳೆಸಿದರು. ಸರಿಸುಮಾರು ಎಂಭತ್ತರ ದಶಕದಿಂದ ಇತ್ತೀಚೆಗೆ ಪ್ರಕಟವಾದ ಮಂಜುನಾಥ ಗಾಂವಕರ ಬರ್ಗಿಯವರ 'ನಾನೂ ಗರತಿಯಾಗಬೇಕು' ಮತ್ತು ಇಂದು ಬಿಡುಗಡೆ ಕಂಡ ಶಾರದಾ ನಾಯಕ ಅವರ 'ನಮನ' ಸಂಕಲನದವರೆಗೆ ಅಸಂಖ್ಯ ಎನ್ನಬಹುದಾದಷ್ಟು ಕವಿಗಳು ಕಾವ್ಯ ಕ್ಷೇತ್ರಕ್ಕೆ ಕೊಡುಗೆ ಸಲ್ಲಿಸಿದ್ದಾರೆ ಮತ್ತು ಕವಿಗಳ ಮಾಲಿಕೆಯಲ್ಲಿ ಕವಿಯಿತ್ರಿಯರ ಸಂಖ್ಯೆಯೇ ಹೆಚ್ಚಿರುವುದು ಆಶಾದಾಯಕ ಬೆಳವಣಿಗೆ. ಕಳೆದ ವರ್ಷಾವಧಿಯಲ್ಲಿ ಅಕ್ಷತಾ ಕೃಷ್ಣಮೂರ್ತಿಯವರ 'ಎರಡು ದಡೆ ಬೆಲ್ಲ' ಕವನ ಸಂಕಲನ ಡಿ.ಎಸ್. ಕರ್ಕಿ ಕಾವ್ಯ ಪುರಸ್ಕಾರ ಪಡೆದದ್ದು, ಶ್ರೀದೇವಿ ಕೆರೆಮನೆ ತಮ್ಮ ಅಂಕಣ ಬರಹಗಳ ಸಂಕಲನ 'ಹೆಣ್ತನದ ಆಚೆ ಈಚೆ' ಕೃತಿಗೆ 'ಬಸವರಾಜ ಕಟ್ಟಿಮನಿ ಯುವ ಸಾಹಿತ್ಯ ಪ್ರಶಸ್ತಿ' ಮತ್ತು 'ಬೇಂದ್ರೆ ಸಾಹಿತ್ಯ ಯುವ ಪುರಸ್ಕಾರ' ಪಡೆದುದನ್ನು ಇಲ್ಲಿ ಸ್ಮರಿಸಿ ಈರ್ವರೂ ಯುವ ಕವಿಯಿತ್ರಿಯವರನ್ನು ಅಭಿನಂದಿಸುತ್ತೇನೆ. ಮೂಲತಃ ಅಂಕೋಲೆಯವರಾಗಿದ್ದು, ಈಗ ಹುಬ್ಬಳ್ಳಿಯಲ್ಲಿ ನೆಲೆಸಿರುವ ನಾಡಿನ ಖ್ಯಾತ ಕಥೆಗಾರ್ತಿ ಶ್ರೀಮತಿ ಸುನಂದಾ ಕಡಮೆ ರಚಿಸಿದ 'ಬರೀ ಎರಡು ರೆಕ್ಕೆ' ಕಾಬಂದರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದ್ದು, ಅವರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ಸುಮಾರು ಎಪ್ಪತ್ತರ ದಶಕದಿಂದ ಕಥಾ ಸಾಹಿತ್ಯ ರಚನೆಗಳು ಇಲ್ಲಿ ಕಾಣಸಿಗುತ್ತವೆ. ಗೀತಾ ಮನೋಹರ ಅವರ ಮಕ್ಕಳ ಕತೆಗಳಿಂದ ಆರಂಭಿಸಿ ವಿಷ್ಣು ನಾಯ್ಕ, ಮೋಹನ ಹಬ್ಬು, ರಾಮಕೃಷ್ಣ ಗುಂದಿ, ವೆಂಕಟ್ರಮಣ ಗೌಡ, ಸುನಂದಾ ಕಡಮೆ, ನಾಗಪತಿ ಹೆಗಡೆ, ಸಂದೀಪ ನಾಯಕ, ರಾಜೀವ ನಾಯಕ ಮುಂತಾದವರು ಈಗಾಗಲೇ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಫಾಲ್ಗುಣ ಗೌಡ, ಅಕ್ಷತಾ ಕೃಷ್ಣಮೂರ್ತಿ, ಶಾಂತಲಾ ನಾಯ್ಕ, ಉಮೇಶ ನಾಯ್ಕ ಮುಂತಾದವರು ಬಿಡಿ ಕಥೆಗಳನ್ನು ಪ್ರಕಟಿಸುವ ಮೂಲಕ ಕತೆಗಾರರಾಗಿ ಬೆಳೆಯುವ ಲಕ್ಷಣ ತೋರಿದ್ದಾರೆ.

ಕಾದಂಬರಿ ಕ್ಷೇತ್ರದಲ್ಲಿ ಸಮೃದ್ಧವೆನ್ನಿಸುವ ಕೊಡುಗೆ ಇಲ್ಲ. ಮ.ಗ. ಶೆಟ್ಟಿಯವರು 'ದೇವದಾಸಿ' ಎಂಬ ಅನುವಾದ ಕಾದಂಬರಿಯ ಬಳಿಕ, ವೆಂಕಟ್ರಮಣ ಗೌಡರ 'ತರುವಾಯ', ವಿಷ್ಣು ನಾಯ್ಕರ 'ಜಂಗು ಜಕ್ಕುಂ' ಮತ್ತು ಸುನಂದಾ ಕಡಮೆಯವರ 'ಬರೀ ಎರಡು ರೆಕ್ಕೆ' ಕೃತಿಗಳು ಗಮನಾರ್ಹ ಕೃತಿಗಳಾಗಿವೆ. ಯುವ ಬರಹಗಾರರು ಕಾದಂಬರಿ ರಚನೆಯತ್ತ ಗಮನ ಹರಿಸಬೇಕೆಂದು ಬಿನ್ನಿವಿಸುವೆ.

'ಅಸ್ಪೃಶ್ಯತಾ ನಿವಾರಣ' ಎಂಬ ಡೆಂಗಾ ದೇವಾ ನಾಯ್ಕರು ಬರೆದ ಮೊದಲ ನಾಟಕ ಕೃತಿಯಿಂದ ಆರಂಭವಾದ ನಾಟಕ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದವರು ವಿಷ್ಣು ನಾಯ್ಕರು. ೧೯೬೨ರಲ್ಲಿ ಸ್ಥಾಪನೆಗೊಂಡ ಜನತಾ ನಾಟ್ಯ ಮಂಡಳಿಯ ಪ್ರದರ್ಶನಕ್ಕಾಗಿ ನಾಟಕ ಬರೆಯತೊಡಗಿದ ವಿಷ್ಣು ನಾಯ್ಕ ಮಹತ್ವದ ನಾಟಕ ಕೃತಿಗಳನ್ನು ನೀಡಿದ್ದಾರೆ. ಮೋಹನ ಹಬ್ಬು, ಕೃಷ್ಣ ನಾಯ್ಕ ಮುಂತಾದವರನ್ನು ಇಲ್ಲಿ ಉಲ್ಲೇಖಿಸಬೇಕು.

ಅಂಕೋಲೆಯವರೇ ಆಗಿದ್ದು ಮೈಸೂರಿನಲ್ಲಿ ನೆಲೆಸಿರುವ ಜಿ.ಎಚ್. ನಾಯಕ ವಿಮರ್ಶಾ ಕ್ಷೇತ್ರದಲ್ಲಿ ರಾಜ್ಯದ ಬಹುಮುಖ್ಯರಾಗಿ ಪ್ರಖ್ಯಾತಿ ಪಡೆದಿದ್ದಾರೆ.

'ಖಾನಾವಳಿ ಡಬ್ಬಿ' ಎಂಬ ಪ್ರಬಂಧ ಸಂಕಲನದ ಮೂಲಕ ಗಮನ ಸೆಳೆದ ಶ್ಯಾಮ ಹುದ್ದಾರರಿಂದ ಆರಂಭಿಸಿ, ಶಾಂತಾರಾಮ ನಾಯಕ, ವಿ.ಜೇ. ನಾಯಕ, ವಿ.ಎ. ಜೋಷಿ, ವಿಠಲ ಗಾಂವಕರ, ವಿಷ್ಣು ನಾಯ್ಕ, ವೈಶಾಲಿ ಹೆಗಡೆ ಮುಂತಾದವರು ಪ್ರಬಂಧ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ.

ಅಂಕೋಲೆ ಬಹು ಜಾತಿಯ, ಬಹು ಭಾಷೆಯ ವೈವಿಧ್ಯಪೂರ್ಣ ನೆಲ. ಇಲ್ಲಿ ಜಾನಪದ ಸಾಹಿತ್ಯ ಮತ್ತು ಸಾಂಸ್ಕೃತಿಕ ಬದುಕಿನ ನೆಲೆಗಳು ಬಹು ವಿಸ್ತ್ರತವಾಗಿವೆ. ನಾಡೋಜ ಸುಕ್ರಿ ಗೌಡ, ಲಕ್ಷ್ಮಿ ಗೌಡರಂಥ ಹೆಮ್ಮೆಯ ಜನಪದ ಹಾಡುಗಾರ್ತಿಯರ ಕರ್ಮಭೂಮಿ ಇದು. ತಾಲೂಕಿನವರೇ ಆದ ಡಾ. ಎನ್.ಆರ್. ನಾಯಕ, ಶ್ರೀಮತಿ ಶಾಂತಿ ನಾಯಕ, ವಿ.ಪಿ. ತೊರ್ಕೆ ಮೊದಲಾದ ಮಹನೀಯರು ಇಲ್ಲಿಯ ಸಮೃದ್ಧ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸುವ ಮೂಲಕ ಜಾನಪದ ಕ್ಷೇತ್ರದ ಅರಿವನ್ನು ರಾಜ್ಯಾದ್ಯಂತ ಹಂಚಿದ್ದಾರೆ.

ಅಂಕೋಲೆಯ ಸಾಂಸ್ಕೃತಿಕ, ಸಮೃದ್ಧಿಯೂ ಅಮೋಘವಾದುದು. ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಪ್ರಸಿದ್ಧವಾದ 'ಹಗರಣಗಳು' ಇಲ್ಲಿಯ ಸಾಮಾಜಿಕ ಬದುಕಿನಲ್ಲಿ ನೈತಿಕತೆಯನ್ನು ಕಾಪಾಡುವಲ್ಲಿ ತುಂಬ ಮಹತ್ವದ ಪಾತ್ರ ವಹಿಸಿವೆ. ಹೋಳಿ ಹುಣ್ಣಿಮೆ, ಯುಗಾದಿ, ಬಂಡಿ ಹಬ್ಬಗಳಲ್ಲಿ ಪ್ರದರ್ಶಿತವಾಗುವ ಹಗರಣಗಳು ಇಂದಿನ ಆಧುನಿತ ಯುಗದಲ್ಲಿಯೂ ತಮ್ಮ ಜನಪ್ರತಿಯತೆಯನ್ನು ಉಳಿಸಿಕೊಂಡಿರುವುದು ವಿಶೇಷ.

ತಾಲೂಕಿನಾದ್ಯಂತ ಆಚರಿಸುವ ಸುಗ್ಗಿ ಹಬ್ಬ, ಬಂಡಿ ಹಬ್ಬಗಳು, ಅಂಕೋಲೆಯ ಕಾರ್ತಿಕೋತ್ಸವ, ದಹಿಕಾಲ ಉತ್ಸವಗಳು, ಯಕ್ಷಗಾನ ಬಯಲಾಟಗಳು, ಬಯಲು ನಾಟಕ ರಂಗ ಭೂಮಿಗಳು, ಭಜನೆ ಉತ್ಸವಗಳು ಇಲ್ಲಿಯ ಸಾಂಸ್ಕೃತಿಕ ಸಿರಿವಂತಿಕೆಯನ್ನು ಹೆಚ್ಚಿಸಿವೆ.

ಅಂಕೋಲೆಯಲ್ಲಿ ಅನೇಕ ಸಾಂಸ್ಕೃತಿಕ ಸಂಘಟನೆಗಳು ಕ್ರಿಯಾಶೀಲವಾಗಿವೆ. ಬಹುದೀರ್ಘ ಕಾಲದಿಂದಲೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ನೆಲೆಯಾದ ಕರ್ನಾಟಕ ಸಂಘದೊಡನೆ ರಾಘವೇಂದ್ರ ಪ್ರಕಾಶನದಂಥ ಸಂಸ್ಥೆಗಳು ಬಹಳಷ್ಟು ಕವಿ ಕಲಾವಿದರಿಗೆ ವೇದಿಕೆಯಾಗಿ ಬೆಳೆದಿವೆ. ಇತ್ತೀಚೆಗೆ 'ಸಂಗಾತಿ ರಂಗಭೂಮಿ', ಬಾಸಗೋಡಿನ ಜನತಾ ಕ್ರಿಕೆಟ್ ಕ್ಲಬ್, ಹಾರವಾಡದ ಸುಕ್ರು ಮಾಸ್ತರ ಸ್ಮಾರಕ ಪ್ರತಿಷ್ಠಾನ, ಲಕ್ಷ್ಮೇಶ್ವರದ ಚಿನ್ನದಗರಿ ಯುವಕ ಸಂಘ ಮುಂತಾದವುಗಳಲ್ಲದೆ ಗ್ರಾಮೀಣ ಯುವಕ-ಯುವತಿ ಮಂಡಲಗಳು ನಿರಂತರವಾಗಿ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತ ಸಾಮಾಜಿಕ ಬದುಕನ್ನು ಜೀವಂತವಾಗಿರಿಸಿವೆ. ಜೈಂಟ್ಸ್ ಗ್ರೂಪ್, ಲೈನ್ಸ್ ಕ್ಲಬ್ ಮುಂತಾದ ಸಂಘಟನೆಗಳು ಆರೋಗ್ಯ ಮತ್ತು ಶಿಕ್ಷಣ ಸಂಬಂಧಿ ಸೇವೆಗಳಲ್ಲಿ ಕ್ರಿಯಾಶೀಲವಾಗಿವೆ. ತೀರ ಇತ್ತೀಚೆಗೆ ಡಾ. ಪ್ರಕಾಶ ನಾಯಕ ಹುಟ್ಟುಹಾಕಿದ 'ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ' ಜಾನಪದ ಕಲೆ-ಕ್ರೀಡೆ- ಸಂಸ್ಕೃತಿಯ ಕುರಿತು ಗಮನ ಹರಿಸುತ್ತಿದೆ.

ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ ನಾಯಕರ ನೇತೃತ್ವದ ತಂಡವೊಂದು ನೂರು ದಿನಗಳಿಗೂ ಮೀರಿ ಸ್ವಚ್ಛತಾ ಅಭಿಯಾನದ ದಾಖಲೆ ನಿರ್ಮಿಸಿದೆ. ಇವರೆಲ್ಲರೂ ಅಭಿನಂದನಾರ್ಹರು.

ತಾಲೂಕು ಮಾತ್ರವಲ್ಲದೆ ಜಿಲ್ಲೆಯ ಸಾಂಸ್ಕೃತಿಕ ಪ್ರತಿನಿಧಿಯೆಂದೇ ಗುರುತಿಸಿಕೊಂಡ ಕರ್ನಾಟಕ ರಾಜ್ಯ ಕನ್ನಡ ಅಭಿವೃದ್ಧಿ ಪ್ರಾಧಿಕಾರದ, ನಿಕಟಪೂರ್ವ ಸದಸ್ಯ, ಹಿರಿಯ ಕವಿ ವಿಷ್ಣು ನಾಯ್ಕ ಪ್ರಸ್ತುತ ಅವಧಿಯಲ್ಲಿ ಪ್ರತಿಷ್ಠಿತ ಪಂಪ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಜ್ಯೂರಿ ಮೆಂಬರ್ ಆಗಿ, ರಾಷ್ಟ್ರಕವಿ ಆಯ್ಕೆ ಸಮಿತಿಯ ಸದಸ್ಯರಾಗಿ, ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಉಪಾಧ್ಯಕ್ಷರಾಗಿ, ಸಾಕ್ಷರತಾ ಆಂದೋಲನ ರಾಜ್ಯ ಕಾರ್ಯಕಾರೀ ಸಮಿತಿಯ

ಸದಸ್ಯರಾಗಿ–ಜಿಲ್ಲಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿರುವುದು ಅಂಕೋಲಿಗರು ಹೆಮ್ಮೆಪಡುವ ಸಂಗತಿಯಾಗಿದೆ. ಇತ್ತೀಚೆಗೆ ತಮ್ಮ ಸಾಹಿತ್ಯ ಸಾಧನೆಗಾಗಿ 'ವರ್ಧಮಾನ ಪ್ರಶಸ್ತಿ' (ಸೀನಿಯರ್ ವಿಭಾಗ) ಪಡೆದಿರುವ ಅವರಿಗೆ ತಮ್ಮೆಲ್ಲರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುವೆ.

ಭಾವೈಕ್ಯತೆಯ ನೆಲೆ

ಅಂಕೋಲೆಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಇತ್ಯಾದಿ ಧರ್ಮಗಳಿವೆ. ಹಿಂದೂ ಧರ್ಮದ ಅಸಂಖ್ಯ ಜಾತಿಗಳಿವೆ. ಒಂದು ಕಾಲದಲ್ಲಿ ಸಾಮಾಜಿಕವಾಗಿ ತೀರ ಕೆಳಸ್ತರದಲ್ಲಿದ್ದ ದಲಿತ ಸಮುದಾಯವಿದೆ. ಇಂದು ಎಲ್ಲ ಜಾತಿ–ಧರ್ಮಗಳ ಜನರು ಸೌಹಾರ್ದಯುತವಾಗಿ ಬದುಕು ನಡೆಸುತ್ತಿರುವುದು ಈ ನೆಲದ ವಿಶೇಷತೆ. ಇಲ್ಲಿನ ಹಿಂದೂ ದೇವಾಲಯಗಳಲ್ಲಿ ನಡೆಯುವ ಪೂಜೆ ಇತ್ಯಾದಿ ಧಾರ್ಮಿಕ ಆಚರಣೆಗಳಲ್ಲಾಗಲಿ, ಮಸೀದಿ–ಚರ್ಚುಗಳಲ್ಲಿ ನಡೆವ ಧಾರ್ಮಿಕ ವಿಧಿ– ವಿಧಾನಗಳಾಗಲಿ ಯಾವುದೇ ಆತಂಕವಿಲ್ಲದೆ ನಡೆಯುವಂಥ ವಾತಾವರಣ ನಿರ್ಮಾಣವಾಗಿರುವುದು, ಮಾನವೀಯ ಸಂಬಂಧಗಳ ಬೆಸುಗೆ ಸೌಹಾರ್ದಯುತವಾಗಿ ಸಾಧ್ಯವಾಗಿರುವುದು ಹೆಮ್ಮೆಪಡುವಂಥ ಸಂಗತಿಯಾಗಿದೆ. ಹಾಗೆಂದು ಇಲ್ಲಿ ಜಾತಿ ಸಂಘಟನೆಗಳೂ ಇವೆ. ತಮ್ಮ ಸಮುದಾಯದ ಕಷ್ಟಕ್ಕೆ ಸ್ಪಂದಿಸುವುದಕ್ಕಾಗಿ ಇಂಥ ಸಂಘಟನೆಗಳ ಅಗತ್ಯವಿದೆ. ರಾಜಕೀಯ ಕಾರಣಕ್ಕಾಗಿ, ಔದ್ಯೋಗಿಕ ಕಾರಣಕ್ಕಾಗಿ, ಅಭದ್ರತೆಯ ಕಾರಣಕ್ಕಾಗಿ ಇಂಥ ಸಂಘಟನೆಗಳ ಅಗತ್ಯ ಇದ್ದಿರಬಹುದು. ಆದರೆ ನಮ್ಮ ಮುಂದಿನ ಪೀಳಿಗೆ ಜಾತಿಯನ್ನು ಮೀರಿ ಯೋಚಿಸುವಂತಹ ಜನಾಂಗವಾಗಿ ರೂಪುಗೊಳ್ಳುವಂತೆ ನಾವು ಪ್ರೇರೇಪಿಸಬೇಕಾಗಿದೆ. ಎರಡು–ಮೂರು ದಶಕಗಳ ಹಿಂದೆ ಅಂಕೋಲೆಯ ದಲಿತ ಸಮುದಾಯ ತೀರ ಶೋಷನೀಯ ಸ್ಥಿತಿಯಲ್ಲಿದ್ದುದನ್ನು ನಾನು ಬಲ್ಲೆ. ಆದರೆ ಇಂದು ದಲಿತರ ಸ್ಥಿತಿಗತಿಗಳಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ದೇವಾಲಯಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಇದ್ದ ಪ್ರವೇಶ ನಿಷೇಧ ಇಂದು ಸಂಪೂರ್ಣ ಇಲ್ಲವಾಗಿದೆ. ಆರ್ಥಿಕವಾಗಿಯೂ, ಶೈಕ್ಷಣಿಕವಾಗಿಯೂ ಸುಧಾರಣೆ ಕಂಡಿದೆ. ಆದರೂ ಜಾತೀಯತೆಯ ಕೀಳರಿಮೆಯಿಂದ ತಾವಾಗಿಯೇ ದಲಿತರು ದೇವಾಲಯ ಪ್ರವೇಶಕ್ಕೆ ಹಿಂಜರಿದ ಸಂದರ್ಭಗಳೂ ಇಲ್ಲದಿಲ್ಲ. ಇಂಥಲ್ಲಿ ಅವರಲ್ಲಿ ಆತ್ಮವಿಶ್ವಾಸ ತುಂಬುವಲ್ಲಿ ಸಮಾಜ ಗಮನಹರಿಸುವ ಸ್ವಲ್ಪಮಟ್ಟಿನ ಅಗತ್ಯವೂ ಇದೆ.

ಯಾವುದೇ ಧಾರ್ಮಿಕ ಆಚರಣೆಗಳು ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುವಂತಾದರೆ ಮಾನವೀಯ ನಡತೆಗೆ ಧಕ್ಕೆ ಉಂಟಾಗುವಂತಿದ್ದರೆ ಅದನ್ನು ವಿರೋಧಿಸುವ ನಾಗರಿಕ ಪ್ರಜ್ಞೆ ಜಾಗೃತವಾಗಿರಬೇಕು. ಸುದೈವದಿಂದ ಈ ಭಾಗದಲ್ಲಿ ಮಡೆಸ್ನಾನ, ಸಿಡಿಯಾಡುವ ಹರಕೆ, ಬೆತ್ತಲೆಸೇವೆ, ಇತ್ಯಾದಿ ಆಚರಣೆಗಳು ಜಾರಿಯಲ್ಲಿ ಇಲ್ಲದಿರುವುದು ಗಮನಾರ್ಹ. ನಾಗರಿಕತೆಗೆ ಕಳಂಕ ತರುವ ಯವುದೇ ಮೌಢ್ಯ ಆಚರಣೆಗಳನ್ನು ಖಂಡಿತವಾಗಿಯೂ ನಿಷೇಧಿಸುವ, ವಿರೋಧಿಸುವ ಎಚ್ಚರವನ್ನು ಅಂಕೋಲಿಗರು ಖಂಡಿತ ಉಳಿಸಿಕೊಳ್ಳುತ್ತಾರೆ ಎಂಬ ನಂಬಿಕೆ ನನ್ನದು. ಮದುವೆ, ಹುಟ್ಟುಹಬ್ಬ ಇತ್ಯಾದಿ ಸಂಭ್ರಮಗಳನ್ನು ಅದ್ದೂರಿಯಾಗಿ ನಡೆಸುವ ಒಂದು ಹೊಸ ಬೆಳವಣಿಗೆ ಇತ್ತೀಚೆಗೆ ಅಂಕೋಲೆಯಲ್ಲಿ ಅಧಿಕವಾಗುತ್ತಿದೆ. ನಮ್ಮೊಳಗಿನ ದೊಡ್ಡಸ್ತಿಕೆಯನ್ನು ತೋರುವ, ಇನ್ನೊಬ್ಬರ ಕಣ್ಣು ಕುಕ್ಕುವಂತೆ ಮಾಡಿ ತಮ್ಮ ಆಹಂಕಾರ ಪ್ರದರ್ಶಿಸುವ ಇಂಥ ಆಚರಣೆಗಳಿಗೆ ಕಡಿವಾಣ ಹಾಕುವುದು ಅಗತ್ಯವೆಂದು ನನ್ನ ಭಾವನೆ.

ಕನ್ನಡ ಭಾಷೆ ಮತ್ತು ಶಿಕ್ಷಣ ಮಾಧ್ಯಮದ ಪ್ರಶ್ನೆ

ಕನ್ನಡ ಭಾಷೆ ಇಂದು ಅಪಾಯಕಾರಿ ಸಂದರ್ಭದಲ್ಲಿ ನಿಂತಿದೆ. ಜಾಗತೀಕರಣದ ಪ್ರಭಾವದಿಂದ ಇಂಗ್ಲೀಷ ಕಲಿಕೆಯ ವ್ಯಾಮೋಹ ಅತಿಯಾಗುತ್ತಿರುವುದು ದೇಶದ ಎಲ್ಲ ಪ್ರಾದೇಶಿಕ ಭಾಷೆಗಳ ಮೇಲೆ ದುಷ್ಪರಿಣಾಮ ಬೀರಿದೆ. ಮೊನ್ನೆ ನಡೆದ ಶ್ರವಣ ಬೆಳಗೊಳದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿ ಸಿದ್ಧರಾಮಯ್ಯನವರು "ಇಂಗ್ಲೀಷ ಭಾಷೆಯ ಹೆಸರಿನಲ್ಲಿ ಇಂದು ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾದೇಶಿಕ ಭಾಷೆಗಳ ಮೇಲೆ ಸವಾರಿ ಮಾಡುತ್ತಿವೆ. ಇದರಿಂದ ನಮ್ಮ ನೆಲದಲ್ಲೇ ಮಾತೃಭಾಷೆಗೆ ಅಪಾಯ ಬಂದಿದೆ...... ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸುವ ಸುಪ್ರೀಂಕೋರ್ಟ ಆದೇಶವನ್ನು ರದ್ದುಪಡಿಸುವಂತೆ ಮನವಿ ಮಾಡಿದ್ದರೂ ಸರಕಾರಕ್ಕೆ ಹಿನ್ನಡೆಯಾಗಿದೆ." ಎಂದು ವಿಷಾಧ ವ್ಯಕ್ತಪಡಿಸಿದ್ದಾರೆ. ಆದರೂ "ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಭಾಷೆಯಲ್ಲೇ ಕಡ್ಡಾಯಗೊಳಿಸಲು

ತೀರ್ಮಾನ ಕೈಗೊಳ್ಳಲಾಗಿದೆ" ಎಂಬ ಭರವಸೆಯ ಮಾತುಗಳನ್ನು ಆಡಿರುವುದು ಆಶಾದಾಯಕವಾಗಿದೆ. ನಿಜ, ಕನ್ನಡ ಮಾಧ್ಯಮ ಕುರಿತು ಮೂರು ದಶಕಗಳ ಹೋರಾಟ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದಾಗಿ ತೀವ್ರ ಹಿನ್ನಡೆ ಅನುಭವಿಸುವಂತೆ ಮಾಡಿದೆ. ಈಗ ಸಂವಿಧಾನ ತಿದ್ದುಪಡಿಯೊಂದೇ ಉಳಿದಿರುವ ದಾರಿ ಅನ್ನುವಂತಾಗಿದೆ. ಅದಕ್ಕಾದರೂ ಎಷ್ಟು ಕಾಲ ಕಾಯಬೇಕಾಗಬಹುದೋ ಗೊತ್ತಿಲ್ಲ. ಕರ್ನಾಟಕ ಸರಕಾರ, ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಎಲ್ಲ ಕನ್ನಡಪರ ಸಂಘಟನೆಗಳು, ಭಾಷಾ ತಜ್ಞರು, ಶಿಕ್ಷಣ ತಜ್ಞರು ಹಾಗೂ ಕಾನೂನು ತಜ್ಞರು ಈ ಕುರಿತು ಯೋಚಿಸಿ ಕಾರ್ಯಪ್ರವೃತ್ತರಾಗಬೇಕಾಗಿದೆ. ಕನ್ನಡ ಕಲಿಕೆ ಮತ್ತು ಅಭ್ಯಾಸದ ನಿರಂತರತೆ ಹಾಗೂ ರಾಜ್ಯದ ಎಲ್ಲ ಹಂತದ ಎಲ್ಲ ಶಿಸ್ತಿನ ಶಿಕ್ಷಣದಲ್ಲಿ ಕನ್ನಡ ಅಭ್ಯಾಸ ಉಳಿಸಿಕೊಳ್ಳುವ ದೃಷ್ಟಿಯಿಂದ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ. ಈ ಕಾಲಘಟ್ಟದಲ್ಲಿ ಕನ್ನಡಿಗರಿಗೆ ಉಳಿದಿರುವ ಏಕೈಕ ಮಾರ್ಗವೆಂದರೆ ಕರ್ನಾಟಕ ರಾಜ್ಯ ಭಾಷೆಯ ಕುರಿತು ರಚನಾತ್ಮಕವೂ ಕ್ರಿಯಾತ್ಮಕವೂ ಆದ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸಲು ಶ್ರಮಿಸುವುದು. ಅದಕ್ಕಾಗಿ ಕನ್ನಡಿಗರೆಲ್ಲ ಒಂದಾಗಬೇಕಾದ ಅನಿವಾರ್ಯತೆ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಮಾತೃಭಾಷೆ ಮಾಧ್ಯಮವಿಲ್ಲದೆ ಸಮಾನ ಶಿಕ್ಷಣ ನೀತಿ ಸಾಧ್ಯವಿಲ್ಲ ಎಂಬುದನ್ನು ಗಮನಿಸಬೇಕು. ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಕಡ್ಡಾಯಗೊಳಿಸುವುದೊಂದೇ ಸಮಾನ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಇರುವ ಏಕೈಕ ಮಾರ್ಗ. ಪ್ರಾಥಮಿಕ ಶಿಕ್ಷಣದಿಂದಲೇ ವಿದ್ಯಾರ್ಥಿಗಳಲ್ಲಿ ಭೇದವನ್ನು ಕಲ್ಪಿಸಿ ವರ್ಗ ವೈಶಮ್ಯವನ್ನು ಜಾಗೃತಗೊಳಿಸುವ ಇಂಗ್ಲೀಷ್ ಮಾಧ್ಯಮವನ್ನು ಸಂಪೂರ್ಣ ತೆಗೆದುಹಾಕಬೇಕು. ಖ್ಯಾತ ಸಾಹಿತಿ ದೇವನೂರು ಮಹದೇವ ಹೇಳಿದ "ಎಳೆಯ ಶಿಕ್ಷಣದಲ್ಲಾದರು ಪಂಕ್ತಿ ಭೇದ ಕೂಡದು" ಎಂಬ ಮಾತಿನ ಆಶಯ ಇದೇ ಆಗಿದೆ. ಪ್ರಾಥಮಿಕ ಹಂತದಿಂದಲೂ ಇಂಗ್ಲೀಷನ್ನು ಒಂದು ಭಾಷೆಯನ್ನಾಗಿ ಕಲಿಯಲು ಯಾವ ಅಭ್ಯಂತರವೂ ಇಲ್ಲ. ಆದರೆ ಶಿಕ್ಷಣ ಮಾಧ್ಯಮ ಕನ್ನಡವೇ ಕಡ್ಡಾಯವಾಗಬೇಕು.

ಬರಹಗಾರರು ಮತ್ತು ಓದು

ಹೊಸ ತಲೆಮಾರಿನಲ್ಲಿ ಬರಹಗಾರರ ಸಂಖ್ಯೆ ಹೆಚ್ಚಿದೆ. ಪುಸ್ತಕ ಪ್ರಕಟಣೆಯೂ ಅಧಿಕವಾಗುತ್ತಿದೆ. ಇದು ಮೆಚ್ಚಬೇಕಾದ ಸಂಗತಿಯೇ. ಯುವ ಬರಹಗಾರರು ತುಂಬ ಉತ್ಸಾಹದಿಂದ ಬರೆಯುತ್ತ ತಮ್ಮದೇ ಆದ ಛಾಪು ಮೂಡಿಸುತ್ತಿದ್ದಾರೆ. ಅವರೆಲ್ಲ ತಮ್ಮ ಹಿಂದಿನ ಕವಿಗಳ–ಸಾಹಿತಿಗಳ ಕೃತಿಗಳನ್ನು ತಪ್ಪದೆ ಓದಿಕೊಳ್ಳಬೇಕು. ಪ್ರಾಚೀನ ಕವಿಗಳನ್ನು ಅಭ್ಯಾಸ ಮಾಡಬೇಕು. ಆದರೆ ಅವರನ್ನು ಅನುಕರಿಸದೆ ಸ್ವಂತ ಅಭಿವ್ಯಕ್ತಿ– ಶಕ್ತಿಯನ್ನು ಹೆಚ್ಚಿಸಿಕೊಂಡು ಬರೆಯಬೇಕು. ಮುಖ್ಯವಾಗಿ ಜೀವಪರವಾಗಿ ಬಡವರ, ನಿರ್ಗತಿಕರ, ದಲಿತರ, ಬೀದಿ ವ್ಯಾಪಾರಿಗಳ, ಪೌರ ಕಾರ್ಮಿಕರ ಪರವಾಗಿ ದನಿ ಎತ್ತಬೇಕು. ಅಷ್ಟಾಗಿಯೂ ತಮ್ಮದೇ ಅನುಭವ ಪ್ರಾಮಾಣ್ಯದಲ್ಲಿ ವಸ್ತುನಿಷ್ಠವಾಗಿ ಬರೆಯಬೇಕು. ಅಂಥ ಬರಹದಲ್ಲಿ ಪ್ರಾಮಾಣಿಕತೆ, ಶಕ್ತಿ–ಇರುತ್ತದೆ ಎಂಬುದು ನನ್ನ ವಿನಯಪೂರ್ವಕ ಸಲಹೆ.

ಪುಸ್ತಕ ಪ್ರಕಟಣೆಯ ಸಂಖ್ಯೆ, ಮಾರಾಟದ ಸಂಖ್ಯೆಗೆ ಅನುಗುಣವಾಗಿ ಸಾಹಿತ್ಯದ ಓದುಗರ ಸಂಖ್ಯೆ ಹೆಚ್ಚಿದೆ ಎಂದು ನನಗನಿಸುವುದಿಲ್ಲ. ಮುಖ್ಯವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಸಾಹಿತ್ಯದ ಓದುಗರಾಗುವಂತೆ ಆಸಕ್ತಿ ಹೆಚ್ಚಿಸಲು ಪ್ರಯತ್ನ ಬೇಕಿದೆ. ಸಾಹಿತ್ಯ ಪರಿಷತ್ತು, ಕರ್ನಾಟಕ ಸಂಘ, ಪುಸ್ತಕ ಪ್ರಕಾಶನ ಸಂಸ್ಥೆಗಳು ಶಾಲಾ ಕಾಲೇಜುಗಳಲ್ಲಿ ಪುಸ್ತಕ ಪ್ರದರ್ಶನ, ವಿಚಾರ ಸಂಕಿರಣ, ಚರ್ಚೆ ಮುಂತಾದವುಗಳನ್ನು ನಡೆಸಿ ಓದಿನ ಅಭಿರುಚಿ ಹೆಚ್ಚಿಸುವ ಕಾರ್ಯಯೋಜನೆಗಳನ್ನು ಜಾರಿಗೊಳಿಸಬೇಕೆಂದು ನಾನು ವಿನಂತಿಸುವೆ.

ಒಂದು ಕಾಲದಲ್ಲಿ ಮಹಿಳೆಯರು ಧಾರಾವಾಹಿ, ಕಾದಂಬರಿಗಳನ್ನು ಓದುತ್ತಿದ್ದು, ದೂರದರ್ಶನದ ಪ್ರಭಾವದಲ್ಲಿ ಓದಿಗೆ ತಿಲಾಂಜಲಿಯಿತ್ತು ದೃಶ್ಯ ಸಾಹಿತ್ಯದಲ್ಲಿ ಮುಳುಗಿ ಹೋಗಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಒಂದೊಂದು ಧಾರವಾಹಿಯೂ ಎರಡರಿಂದ ಮೂರು ವರ್ಷಗಳವರೆಗೆ ಮುಕ್ತಾಯ ಕಾಣದ ದುರಂತದಲ್ಲಿ ಬೇಸರಗೊಂಡು ಪುಸ್ತಕ ಓದಿಗೆ ಮತ್ತೆ ಮರಳಿರುವುದು ಆಶಾದಾಯಕ ಬೆಳವಣಿಗೆಯೇ ಆಗಿದೆ.

ಮುಗಿಸುವ ಮುನ್ನ...

ಅಂಕೋಲೆಯಲ್ಲಿ ೫೦ರ ದಶಕದಲ್ಲಿ ಹುಟ್ಟಿದ ಕೆನರಾ ವೆಲ್‌ಫೇರ್ ಟ್ರಸ್ಟ್ ಮತ್ತು ೬೦ರ ದಶಕದಲ್ಲಿ ಸ್ಥಾಪನೆಗೊಂಡ 'ನೂತನ ಶಿಕ್ಷಣ ಸಭಾ ಟ್ರಸ್ಟ್' ಉತ್ತರ ಕನ್ನಡ ಜಿಲ್ಲೆಯಲ್ಲೇ ಶೈಕ್ಷಣಿಕ ಕ್ರಾಂತಿಗೆ ಕಾರಣವಾದವು. ಡಾ. ದಿನಕರ ದೇಸಾಯಿ, ಶೇಷಗಿರಿ ಪಿಕಳೆ ಇಬ್ಬರೂ ಈ ನೆಲದ ಚಿರಸ್ಮರಣೀಯ ಚೇತನಗಳು..

ಇಂದು ಹಲವು ಸರಕಾರೀ ಮತ್ತು ಖಾಸಗಿ ಹೈಸ್ಕೂಲುಗಳು, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳು ಸ್ಪರ್ಧಾತ್ಮಕವಾಗಿ ಗುಣಮಟ್ಟದ ಶಿಕ್ಷಣ ನೀಡಲು ಶ್ರಮಿಸುತ್ತಿರುವುದು ಪ್ರಸ್ತುತ ಸಂದರ್ಭದಲ್ಲಿ ಮಹತ್ವದ ಬೆಳವಣಿಗೆಯಾಗಿದೆ.

ಈ ಎಲ್ಲಾ ಒಳಿತುಗಳ ನಡುವೆ ಗ್ರಾಮೀಣ ಭಾಗದಿಂದ ಜನಸಾಮಾನ್ಯರ ನಗರ ವಲಸೆ, ಕೃಷಿ ಕಾರ್ಯಗಳ ಸಂಪೂರ್ಣ ಉಪೇಕ್ಷೆ, ನಿರುದ್ಯೋಗಿಗಳ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಇತ್ಯಾದಿ ಆತಂಕಕಾರಿ ಸನ್ನಿವೇಶಗಳು–ಸಂಗತಿಗಳು ನಮ್ಮ ಮುಂದೆ ಇವೆ.

ಇವುಗಳಿಗೆಲ್ಲ ಪರಿಹಾರ ದೊರೆಯುವಂತೆ ನಮ್ಮ ಜನ ನಾಯಕರು– ಜನಪ್ರತಿನಿಧಿಗಳು ಸಾಧ್ಯವಾದಷ್ಟು ಸಾರ್ವಜನಿಕ ಅಹವಾಲುಗಳನ್ನು ಆಲಿಸುವ, ಚರ್ಚಿಸುವ, ಉದ್ಯೋಗ ಸೃಷ್ಟಿಗೆ ಅವಕಾಶ ಕಲ್ಪಿಸುವ ಯೋಜನೆಗಳನ್ನು ರೂಪಿಸುವಲ್ಲಿ ಕಾರ್ಯ ಪ್ರವೃತ್ತರಾಗಲಿ.

ಎಲ್ಲ ತಾಯಂದಿರು ಆಧುನಿಕ ಜಗತ್ತಿನ ಎಲ್ಲ ಸುಖ ಸೌಕರ್ಯಗಳನ್ನು ಅನುಭವಿಸುತ್ತಲೇ ನಾಡು–ನುಡಿ, ಸಂಸ್ಕೃತಿಯ ಅಭಿಮಾನವುಳ್ಳ ಸತ್ಪ್ರಜೆಗಳಾಗುವಂತೆ ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಲಿ.

ಯುವ ಸಮುದಾಯ ಭ್ರಮೆಯ ಬದುಕಿನ ಬೆನ್ನು ಹತ್ತದೆ ವಾಸ್ತವದ ಅರಿವಿನಲ್ಲಿ ಶುದ್ಧ ಸಾತ್ವಿಕ ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ ಕಾರ್ಯಪ್ರವೃತ್ತರಾಗಲಿ.

ಈ ಭಾಗದ ಶಕ್ತಿ ದೇವತೆಗಳಾದ ಶಾಂತಾದುರ್ಗೆ, ಮಹಾಮಾಯಾ, ಕಾತ್ಯಾಯಿನಿಯರಂತೆಯೇ ಇಲ್ಲಿಯ ನೆಲ–ನದಿ–ನದ ಸಮುದ್ರಗಳೆಲ್ಲ ಜನಪದದ ಬದುಕಿನ ವಿಕಾಸಕ್ಕೆ ಸದಾ ತೆರೆದುಕೊಳ್ಳಲಿ ಎಂಬ ಸದಾಶಯದೊಂದಿಗೆ ನನ್ನ ಮಾತು ಮುಗಿಸುವೆ.

ಸಿರಿಗನ್ನಡಂ ಗೆಲ್ಗೆ–ಬಾಳೆ!

ಆತ್ಮವಿಶ್ವಾಸ

ಸತ್ತರೂ ಬದುಕಿರಲಿ ಆತ್ಮವಿಶ್ವಾಸ
ತಪ್ಪದೇ ಮರಳುವುದು ಶ್ರಾವಣ ಮಾಸ

ಬಾಡಿ ಹೋದರು ಹುಲ್ಲು ಜೀವಂತವಾಗಿ
ಉಸಿರಾಡುವುದು ನೋಡು ಹಸುರು ಹಸುರಾಗಿ

ನೆಗೆಯುವುದು ನೆಲದಿಂದ ಸೂರಣದ ದಂಟು
ಮುದಿ ವೃಕ್ಷವೂ ಕೂಡ ಹೂಬಿಡುವುದುಂಟು

ಚಳಿಗಾಲದಲಿ ನಡುಗಿ ಸತ್ತ ಹೂಬಳ್ಳಿ
ನಲಿದಾಡುತ್ತಿದೆ ಮತ್ತೆ ಮಳೆಗಾಲದಲ್ಲಿ

ಚಿಗುರುವುದು ಬೇಲಿಯಲಿ ಒಣಗಿದ್ದ ಗುಟ್ಟ
ಕಾಡಗಿಚ್ಚಲಿ ಬೆಂದು ಮಸಿಯಾದ ಬೆಟ್ಟ

ಒಂದು ದಿನದಲ್ಲಿಯೇ ಬಿಟ್ಟರೂ ಶ್ವಾಸ
ಆಲೆಂಬೆಗೂ ಕೂಡ ಆತ್ಮವಿಶ್ವಾಸ !


– ದಿನಕರ ದೇಸಾಯಿ
(ದಿನಕರ ದೇಸಾಯಿ ಸಮಗ್ರ ಕಾವ್ಯ)

ಅಂಕೋಲಾ ತಾಲೂಕಾ ಆರನೇ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೧೯-೦೩-೨೦೧೭

ಸಮ್ಮೇಳನದ ಸರ್ವಾಧ್ಯಕ್ಷರು

ಭಾವಕವಿ : ಎನ್.ವಿ. ನಾಯಕ, ಭಾವಿಕೇರಿ



ಅಂಕೋಲೆಯ ಆರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಭಾವಿಕೇರಿಯ ಶ್ರೀ ಎನ್.ವಿ. ನಾಯಕರು ವೃತ್ತಿಯಲ್ಲಿ ಹೈಸ್ಕೂಲ್ ಶಿಕ್ಷಕರಾಗಿ ನಿವೃತ್ತರಾದರೂ ಸಹ ಪ್ರವೃತ್ತಿಯಲ್ಲಿ ಸಾಹಿತ್ಯ ಸಂಗೀತ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಬಹಳ ಆಸಕ್ತಿಯಿಂದ ತಮ್ಮನ್ನು ತೊಡಗಿಸಿಕೊಂಡವರು,

ನಿತ್ಯಚೇತನ ಹಾಗೂ ಋತುಗಾನ ಎಂಬ ಎರಡು ಭಾವಗೀತ ಸಂಕಲನಗಳನ್ನು ಪ್ರಕಟಿಸಿದ ಎನ್.ವಿ ನಾಯುಕರು ಅದಕ್ಕೆ ಪೂರಕವಾಗಿ ಒಂದು ಧ್ವನಿಸುರುಳಿಯನ್ನು ಸಹ ಹೊರತಂದಿದ್ದಾರೆ. ನಾಟಕದಲ್ಲಿ ಆಸಕ್ತಿ ಹೊಂದಿರುವ ಇವರು ಅನೇಕ ನಾಟಕಗಳನ್ನು ನಿರ್ದೇಶಿಸಿ, ನಟಿಸಿ ಜನಮನ್ನಣೆ ಗಳಿಸಿದ್ದಾರೆ. ಗ್ರಾಮೀಣ ಭಾಗದಲ್ಲಿ ಕೇವಲ ಮಹಿಳೆಯರಿಂದಲೇ ಸಂಪೂರ್ಣ ನಾಟಕವನ್ನು ಸಂಘಟಿಸಿ ಪ್ರದರ್ಶಿಸಿದ ಕೀರ್ತಿ ಇವರದಾಗಿದೆ. ಯಕ್ಷಗಾನದಲ್ಲಿಯೂ ಅಭಿನಯಿಸಿದ ಎನ್.ವಿ. ನಾಯಕರು ವಿಶೇಷವಾಗಿ ಸ್ತ್ರೀ ಪಾತ್ರದಿಂದ ಪ್ರೇಕ್ಷಕರ ಗಮನ ಸೆಳೆದವರು.

ಬಾಲ್ಯದಿಂದಲೇ ಕವಿತೆಗಳನ್ನು ಬರೆದು ಹಾಡುವ ಹವ್ಯಾಸ ಹೊಂದಿದ್ದ ಇವರು ತಾಲೂಕಿನ ಭಾವಗೀತಾ ಕವಿ ಎಂದೇ ಗುರುತಿಸಲ್ಪಡುತ್ತಾರೆ. ಸಾಂಸ್ಕೃತಿಕ ಸಂಘಟನೆಯೊಂದಿಗೆ ಸಮಾಜಮುಖಿ ಹೋರಾಟಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವ ಇವರು ನೌಕಾನೆಲೆ ನಿರಾಶ್ರಿತರ ವೇದಿಕೆ, ಕೊಂಕಣ ರೇಲ್ವೆ ನಿರಾಶ್ರಿತರ ವೇದಿಕೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಅಂಕೋಲಾ ಕರ್ನಾಟಕ ಸಂಘ ಹಾಗೂ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡ ನಾಡು-ನುಡಿಗಾಗಿ ಸೇವೆ ಸಲ್ಲಿಸಿದ ಎನ್.ವಿ. ನಾಯಕರು ೧೯-೦೩-೨೦೧೭ರಂದು ತಮ್ಮ ೬೯ನೇ ವಯಸ್ಸಿನಲ್ಲಿ ಅಂಕೋಲೆಯ ಗ್ರಾಮೀಣ ಭಾಗವಾದ ಚನಗಾರಿನಲ್ಲಿ ನೆರವೇರಿದ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗುವುದರೊಂದಿಗೆ ತಮ್ಮ ನಿಸರ್ಗಪ್ರೇಮದ ಭಾವದೊಂದಿಗೆ ಸಮ್ಮೇಳನವನ್ನು ಹಸಿರಾಗಿಸಿದರು.

ಅವರ ಭಾವಗೀತೆಯ ಸಾಲುಗಳು ಹೀಗಿವೆ :

ಆದಿ ಅಂತ್ಯದ ಹಾದಿ
ವರುಷಕೊಮ್ಮೆ ಯುಗಾದಿ
ತಿರುಗುತಿದೆ ಕಾಲಚಕ್ರ
ನವಿರಾದ ಉಡುಗೆಯೊಳು ।
ಬಣ್ಣದೋಕುಳಿಯಾಡಿ
ಸಾಗಿ ಬಂದಿದೆ ಮತ್ತೆ ಚೈತ್ರ ।

ಶ್ರೀ ಎನ್. ವಿ. ನಾಯಕ, ಭಾವಿಕೇರಿ ಅವರ ಸರ್ವಾಧ್ಯಕ್ಷೀಯ ಭಾಷಣ

ನನ್ನೊಲವಿನ ಸಹೃದಯ ಮನಸ್ಸುಗಳೇ,

ತಮ್ಮೆಲ್ಲರ ಒಲವು-ಹಾರೈಕೆಗಳ ಸತ್ವಲವಾಗಿ ನನಗಿಂದು ಅಂಕೋಲಾ ತಾಲೂಕಾ ಆರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸುವ ಸುಂಯೋಗವು ಒದಗಿ ಬಂದಿರುವುದಕ್ಕೆ ಅಮಿತಾನಂದವೆನಿಸಿದೆ. ಇದು ನನ್ನ ಸಾಧನೆಗೆ ಸಂದ ಗೌರವವೆಂದೆಣಿಸದೇ ಅಂಕೋಲೆಯ ಕನ್ನಡ ಸಾರಸ್ವತ ಲೋಕವು ನನ್ನ ಮೇಲಿಟ್ಟ ಪ್ರೀತಿ ವಿಶ್ವಾಸ ಅಭಿಮಾನವೆಂದೇ ಭಾವಿಸುತ್ತೇನೆ. ಈ ಅಕ್ಷರ ಜಾತ್ರೆಯ ಪರ್ವಕಾಲದಲ್ಲಿ ನನ್ನೊಳಗಿನ ಒಂದಿಷ್ಟು ವಿಚಾರಗಳನ್ನು ತಮ್ಮೆದುರು ಹಂಚಿಕೊಳ್ಳಲು ಅತೀವ ಸಂತೋಷವೆನಿಸುತ್ತದೆ.

ಕನ್ನಾಡೆಂಬುದೇ ಅನನ್ಯ!

ನಿಜವಾಗಿಯೂ ಹೌದು. ಕರ್ನಾಟಕವೆಂಬುದು ಅನನ್ಯವಾದುದೇ. ಇಲ್ಲಿನ ನೆಲ, ಭಾಷೆ, ಸಂಸ್ಕೃತಿ ಎಲ್ಲವೂ ಜಗತ್ತಿಗೆ ಅಪೂರ್ವವಾದ ಕೊಡುಗೆಗಳೇ ಆಗಿದೆ. ಕವಿರಾಜ ಮಾರ್ಗಕಾರನೆಂದಂತೆಯೇ, **"**ಕಾವೇರಿಯಿಂದ್ ಮಾ ಗೋದಾವರಿ ವರಮಿರ್ದ ನಾಡದು ಕನ್ನಡ ಭಾವಿಸಿದ ಜನಪದಂ**"** ಅಷ್ಟೊಂದು ವಿಸ್ತಾರವಾದ ಪ್ರದೇಶವಿದು. ಇದು ಕೇವಲ ಭೌಗೋಳಿಕವಾಗಷ್ಟೇ ಸಮೃದ್ಧವಲ್ಲ, ಇಲ್ಲಿನ ನೆಲದಲ್ಲಿ ಜೀವಸತ್ವವಿದೆ. ಜೀವನೋತ್ಸಾಹವಿದೆ. ತಾತ್ವಿಕವಾದ ಬದ್ಧತೆಯಿದೆ. ಪ್ರಗತಿಪರ ಧೋರಣೆಯಿದೆ. ಕ್ಷಾತ್ರ ನಿಲುವಿದೆ, ಸೊಗಸಿದೆ, ಇದಕ್ಕಿಂತಲೂ ಹೆಚ್ಚಾಗಿ ಈ ನೆಲದಲ್ಲಿ ಮನುಷ್ಯ ಸಂಬಂಧಕ್ಕೆ ವಿಶೇಷವಾದ ಆದ್ಯತೆ ಇದೆ. ಆದರೂ ಕೂಡ ಕನ್ನಡಿಗರು ಆಕ್ರಮಣವನ್ನು, ದುರ್ವತ್ರನೆಯನ್ನು, ಖಂಡಿತ ಸಹಿಸುವವರಲ್ಲ, ಹಾಗಾಗಿಯೇ ಕಪ್ಪೆ ಅರೆಭಟ್ಟನ ಶಿಲಾಶಾಸನದಲ್ಲಿ –

"ಸಾಧುಂಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ,
ಭಾದಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ" – ಎಂದು ಹೇಳಿರುವುದು ಎಷ್ಟೊಂದು ಅರ್ಥಗರ್ಭಿತವಾಗಿದೆ. ಕನ್ನಡಿಗರ ಭಾಷೆಗೆ ಅವರ ದೇಶೀಯ ಗೇಯತೆ ಇದೆ. ಸೊಗಡಿದೆ, ಸೊಗಸಿದೆ ಹಾಗೂ ಪಕ್ವತೆಯಿದೆ.

"ನನ್ನ ಕನ್ನಡ ನುಡಿಯೇ ನೀನೆಷ್ಟು ಚೆಂದ
ಎಷ್ಟು ಗೀಚಿದರೂ ಆಗುವುದು ಶ್ರೀಗಂಧ
ಸಿಂಗರದ ನುಡಿ ನಿನ್ನ ಶಬ್ದ ಸಂಪತ್ತು
ಬಂಗಾರಕ್ಕಿಂತಲೂ ಶ್ರೇಷ್ಠ ನುಡಿಮುತ್ತು" ಎಂಬ ದಿನಕರರ ಚೌಪದಿಯ ಸಾಲುಗಳು ಎಷ್ಟೊಂದು ಮನೋಜ್ಞವಾಗಿದೆ.

ಉತ್ತರ ಕನ್ನಡವೆಂದೂ ಎತ್ತರ ಕನ್ನಡವೇ!

ನಮ್ಮ ಉತ್ತರ ಕನ್ನಡ ಜಿಲ್ಲೆಯ ಐತಿಹಾಸಿಕ ಖ್ಯಾತಿಯ ಬನವಾಸಿಯನ್ನು ಆದಿಕವಿ "ಆರಂಕುಶಂ ಇಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂದು ಮನದುಂಬಿ ಹಾಡಿದ್ದಾನೆ. ಬನವಾಸಿಯ ಮಧುಕೇಶ್ವರನ ದೇವಸನ್ನಿಧಿ ಪಂಪನಿಗೆ ಆಶ್ರಯತಾಣ. ಕನ್ನಡದ ಮೊದಲ ರಾಜಮನೆತನವಾದ ಕದಂಬರು ಆಳ್ವಿಕೆ ನಡೆಸಿದ್ದು ಇಲ್ಲಿಯೇ, ಅಂತೆಯೇ ಇಡಗುಂಜಿಯ ಗಣಪತಿ, ಗೋಕರ್ಣದ ಮಹಾಬಲೇಶ್ವರ, ಶಿರಸಿಯ ಮಾರಿಕಾಂಬೆ, ಯಾಣದ ಭೈರವೇಶ್ವರ, ಉಳವಿಯ ಚೆನ್ನಕೇಶವ, ಭಟ್ಕಳದ ಮುರ್ಡೇಶ್ವರ, ಅಂಕೋಲೆಯ ಭೂಮಿತಾಯಿ ವೆಂಕಟರಮಣ ಈ ಮೊದಲಾದವರೆಲ್ಲ ಈ ಜಿಲ್ಲೆಯ ಕಾರಣಿಕ ದೇವರೆನಿಸಿದ್ದಾರೆ. ಕರ್ನಾಟಕದಲ್ಲಿರುವ ಏಕಮೇವ ಭುವನೇಶ್ವರಿ ದೇವಾಲಯವಿರುವುದು ಇದೇ ಜಿಲ್ಲೆಯ ಸಿದ್ದಾಪುರದ 'ಭುವನಗಿರಿ'ಯಲ್ಲಿ.

ಕರ್ನಾಟಕದ ಕಾಶ್ಮೀರವೆಂದೇ ಗುರುದೇವ ರವೀಂದ್ರರ ಮುಕ್ತ ಪ್ರಶಂಸೆಗೆ ಪಾತ್ರವಾದ ಕಾರವಾರವೇ ಜಿಲ್ಲಾಕೇಂದ್ರವಾಗಿದ್ದು ವಿಜ್ಞಾನ ಕೇಂದ್ರವೂ ಹೌದು. ಜಿಲ್ಲೆಯುದ್ದಕ್ಕೂ ಸುಂದರ ಕಡಲಕಿನಾರೆ, ದಾಂಡೇಲಿಯ ಕಾಗದ ಕಾರ್ಖಾನೆ, ಜೋಗಜಲಪಾತ, ಸೂಪ ಆಣೆಕಟ್ಟು ಇತ್ಯಾದಿಗಳಿಂದ ಗಮನ ಸೆಳೆದಿದೆ. ಈರ್ವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಮುಡಿಗೇರಿಸಿದ ಜಿಲ್ಲೆಯಿದು. ಶಿವರಾಮ, ಚಿಟ್ಟಾಣಿ, ಶಂಭು, ಮಹಾಬಲ, ಗೋವಿಂದ ನಾಯಕರಂತ

ಶ್ರೇಷ್ಠರಿಂದ ಯಕ್ಷಗಾನ ಕಲಾಕ್ಷೇತ್ರಕ್ಕೆ ನಾಡಿನಾಚೆಗೂ ಗೌರವವನ್ನು ತಂದಿತ್ತ ಜಿಲ್ಲೆಯಿದು. ಅಂತೆಯೇ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಶ್ರೀ ವಿಠೋಬ ನಾಯಕ ವಂದಿಗೆ ನಮ್ಮ ಅಂಕೋಲೆಯವರು. ದಿನಕರ, ಗೌರೀಶ, ಜಿ. ಪಿ. ನಾಯಕ, ಚಿತ್ತಾಲ, ಯಕ್ಕುಂಡಿ, ಸನದಿ, ಜಮಿರುಲ್ಲಾ ಷರೀಫ್, ಆರ್. ವಿ. ಭಂಡಾರಿ, ವಿಡಂಬಾರಿ, ಡಾ. ಶ್ರೀಪಾದ ಶೆಟ್ಟಿ ಮೊದಲಾದ ಸಾಹಿತ್ಯ ದಿಗ್ಗಜರನ್ನು ಕಂಡ ಜಿಲ್ಲೆಯಿದು. ಬಿ. ವಿ. ನಾಯಕರಂತಹ ಅಪ್ರತಿಮ ವಿಚಾರವಾದಿ ಇದೇ ಜಿಲ್ಲೆಯವರು. ಪ್ರಾಚಾರ್ಯರಾಗಿ ಗಮನ ಸೆಳೆದ ಎಸ್. ಆರ್. ನಾರಾಯಣರಾವ್, ಕೊಗ್ರೆಯ ಎಂ. ಎಚ್. ನಾಯಕರಂಥ ಶಿಕ್ಷಣ ತಜ್ಞರು ಇದೇ ಜಿಲ್ಲೆಯವರು. ಕಾರವಾರ ಜಿಲ್ಲೆಯೆಂದು ಹಲವರಿಂದ ಕರೆಯಿಸಿಕೊಂಡರೂ ಉತ್ತರ ಕನ್ನಡ ಜಿಲ್ಲೆ ಎಂದು ಕರೆಯಿಸಿಕೊಳ್ಳುವಲ್ಲಿ ವಿಶೇಷವಾದ ಮಾಧುರ್ಯವಿದೆ, ಹಿರಿತನವಿದೆ, ಕಲಿತನವಿದೆ, ಉತ್ತರದಾಯಿತ್ವವನ್ನು ಹೊಂದಿದ ನಮ್ಮ ಉತ್ತರ ಕನ್ನಡ ಜಿಲ್ಲೆ ಎಂದೆಂದೂ ಎತ್ತರ ಕನ್ನಡವೇ. ಬೇರಾವ ಜಿಲ್ಲೆಯಲ್ಲೂ ಕಾಣಸಿಗದಷ್ಟು ಕನ್ನಡದ ಆಡುನುಡಿಯ ಬಳಕೆಯಿಂದ ವಿಶೇಷ ಗಮನ ಸೆಳೆಯುತ್ತಿದೆ.

ನಮ್ಮ ಅಂಕೋಲೆ

ಅಂಕೋಲೆಯ ಕುರಿತು ಕೇವಲ ಅಂಕೋಲಿಗರಷ್ಟೇ ಅಲ್ಲ, ನಾಡಿಗೆ ನಾಡೇ ಅಭಿಮಾನವನ್ನು ಪಡುತ್ತಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಉಪ್ಪಿನ ಸತ್ಯಾಗ್ರಹದ ಮೂಲಕ "ಕರ್ನಾಟಕದ ಬಾರ್ಡೋಲಿ" ಎನಿಸಿ ಚರಿತ್ರೆಯ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಿದೆ. ಕವಿ ಕರ್ಮಯೋಗಿ ಡಾ॥ ದಿನಕರ ದೇಸಾಯಿಯವರು ತಮ್ಮ ಕೆನರಾ ವೆಲ್‌ಫೇರ್ ಟ್ರಸ್ಟಿನ ಮೂಲಕ ಜಿಲ್ಲೆಯಾದ್ಯಂತ ಜನತಾ ವಿದ್ಯಾಲಯಗಳನ್ನು ಸ್ಥಾಪಿಸಿ ಅಂತೆಯೇ ಮಾನ್ಯರಾದ ಗಿರಿ ಪಿಕಳೆ, ನೂತನ ಶಿಕ್ಷಣ ಸಭಾ ಟ್ರಸ್ಟ್ (ಕೇ.ಎಲ್.ಇ. ಸಂಸ್ಥೆ) ಸ್ಥಾಪಿಸುವ ಮೂಲಕ ಅಕ್ಷರ ಬೀಜವನ್ನು ಬಿತ್ತಿ ಹಲವರ ಬಾಳಿಗೆ ಬೆಳಕಾದ ಪ್ರಾತಃಸ್ಮರಣೀಯರೆನಿಸಿದ್ದಾರೆ. ಅಂಕೋಲೆಯ ಗೋಖಲೆ ಜನ್ಮಶತಾಬ್ದಿ ಮಹಾವಿದ್ಯಾಲಯವು ಹಿಂದಿನಿಂದಲೂ ಸುವಿಖ್ಯಾತವಾಗಿದ್ದು, ಪ್ರೊ. ಕೆ. ಜಿ. ನಾಯಕರಂತಹ ಅಪೂರ್ವ ಪ್ರಾಚಾರ್ಯರಿಲ್ಲಿ ಸೇವೆ ಸಲ್ಲಿಸಿದ್ದಾರೆ. ಅದೇ ದಾರಿಯಲ್ಲಿ ಮುನ್ನಡೆದ ಶ್ರೀಮತಿ ಪ್ರೇಮಾ ಪಿಕಳೆಯವರ ಹೆಸರು ಸದಾ ಹಸಿರು.

ತಾಲೂಕಿನ ಹಿಂದುಳಿದ ಹಾಲಕ್ಕಿ ಸಮಾಜದ ಸುಕ್ರಜ್ಜಿ ತಮ್ಮ ಕಂಠಸಿರಿಯಿಂದ ಜಾನಪದ ಲೋಕವನ್ನೇ ಬೆಳಗಿ ನಾಡೋಜೆಯಾಗಿದ್ದವರಿಂದು ದೇಶದ ಪ್ರತಿಷ್ಠಿತ ಪದ್ಮಶ್ರೀಗೆ ಭಾಜನರಾಗಿರುವುದು ಎಲ್ಲಿಲ್ಲದ ಅಭಿಮಾನದ ವಿಷಯ. ಅವರ ಹೋರಾಟ ಚಳುವಳಿಗಳ ಯಶೋಗಾಥೆಯು ಪರಮಾದ್ಭುತ. ಇಂತಹ ಹಲವಾರು ಹಾಡಜ್ಜಿಯರು ಅಂಕೋಲೆಯ ಉದ್ದಗಲಕ್ಕೂ ತುಂಬಿತುಳುಕುತ್ತಿದ್ದಾರೆ. ಹಾಗೆಯೇ ಯಕ್ಷಗಾನ ಕಾರ್ಯಕ್ರಮಗಳನ್ನು ಸಂಘಟಿಸುವಲ್ಲಿ ಅಂಕೋಲಿಗರಿಗೆ ಸರಿಸಾಟಿಯಿಲ್ಲ. ಕಲಾವಿದರಿಗೆ ಅಂಕೋಲಾದಲ್ಲಿ ಸಿಗುವಷ್ಟು ಮಾನ, ಸನ್ಮಾನ ಸಂಭಾವನೆಯೂ ಮತ್ತೆಲ್ಲಿಯೂ ಇಲ್ಲ. ಮೇಳದ ಆಟಗಳಂತೂ ಅಂಕೋಲಾದಲ್ಲಿ ಆಗುವಷ್ಟು ಇನ್ನೆಲ್ಲಿಯೂ ಆಗುವುದಿಲ್ಲ. ಹೀಗೆ ಯಕ್ಷಗಾನ, ಸಂಗೀತ, ನಾಟ್ಯ, ನೃತ್ಯ ಕಲಾವಿದರಿಗೆ ಬದುಕು ಕಟ್ಟಿಕೊಟ್ಟ ಕಟ್ಟಿಕೊಡುತ್ತಿರುವ ನೆಲವಿದು. ಈ ನಿಟ್ಟಿನಲ್ಲಿ ದಿ। ಸಂದೀಪ ನಾಯಕ ಭಾವಿಕೇರಿ, ದಿ. ಆರ್. ಎನ್. ನಾಯಕರೆಂದೆಂದೂ ಸ್ಮರಣೀಯರು. ಅಂತೆಯೇ ಸಂಗಾತಿ ರಂಗಭೂಮಿಯ ಸಂಚಾಲಕ ಕೇ. ರಮೇಶ ನೆನಪಿಸಲೇಬೇಕಾದ ಹೆಸರು. ಯಕ್ಷರಂಗದ ಕಲಾವಿದರಾಗಿ ಹೆಸರು ಮಾಡಿದ ಕಲಾವಿದರು ಸಾಕಷ್ಟು ದಿ। ಎಂ. ಎಂ. ನಾಯಕ, ಮಂಗೇಶ ಗೌಡ, ನಾಗೇಶ ಪೂಜಾರಿ, ಡಾ। ಆರ್. ಜಿ. ಗುಂದಿ, ಕೃಷ್ಣ ಹೆಬ್ಬಾರ, ರವೀಂದ್ರ ಭಟ್ಟ, ಬುದ್ದು ಆಗೇರ, ಬೀರಣ್ಣ ಮಾಸ್ತರ, ನಾಗರಾಜ ನಾಯಕ ಬಾಸಗೋಡ, ರಾಜೇಶ ನಾಯಕ ಸೂರ್ವೆ, ರಮಾನಂದ ಶೀಳ್ಯ, ಆನಂದು ಆಗೇರ, ರಾಮಕೃಷ್ಣ ಭಟ್ಟ ಹಿಲ್ಲೂರು, ಡಾ। ಶಿವಾನಂದ ಬೋಳೆ, ಗೌರೀಶ ನಾಯಕ ಶಿರಗುಂಜಿ, ಹೊಸಬಣ್ಣ ಮಾಸ್ತರ, ತುಳಸು ಮಾಸ್ತರ, ನಾರಾಯಣ ನಾಯ್ಕ ಭಾವಿಕೇರಿ... ಈ ರಂಗದಲ್ಲಿ ಹೆಸರು ಮಾಡಿದವರು. ನೆರೆಯ ತಾಲೂಕಿನ ವೇಷಧಾರಿ ದಿ. ವೆಂಕಟರಮಣ ನಾಯಕ, ಗೋವಿಂದ ನಾಯ್ಕ, ಶಿವಾನಂದ ಭಂಡಾರಿ, ಮೋಹನ ಕೂಜಳ್ಳಿ, ಹಾಸ್ಯಗಾರ ದಿ. ಹೆಗಡೆ ವೆಂಕಟ್ರಮಣ ನಾಯ್ಕ, ಶ್ರೀ ಬೊಮ್ಮಯ್ಯ ಗಾಂವ್‌ರ, ಮಂಜುನಾಥ ಬರ್ಗಿ, ಅನಂತ ಹಾವಗೋಡಿ ಮೊದಲಾದವರು ಅಂಕೋಲೆಯ ಯಕ್ಷರಂಗದೊಂದಿಗಿನ ನಂಟು ಸಹ ಬಣ್ಣಿಸಲಸದಳ, ಕನ್ನಡದ ಉಳಿವಿಗೆ ಯಕ್ಷಗಾನದ ಕೊಡುಗೆ ಬಹುಮೂಲ್ಯ.

ಸಾಹಿತ್ಯ ಸಂಘಟನೆಯಲ್ಲಿ ಅಂಕೋಲಿಗರು ನೀಡಿದ ಕೊಡುಗೆ ಸಾಮಾನ್ಯವೇನಲ್ಲ. ಅಂಕೋಲಾ ತಾಲೂಕಿನ

ಸಾಹಿತ್ಯವನ್ನು ಕಟ್ಟಿ ಬೆಳೆಸಿದ ಅನೇಕ ಹಿರಿಯ ಬರಹಗಾರರು ತಮ್ಮ ನೆನಪನ್ನು ಬಿಟ್ಟು ಹೋಗಿದ್ದಾರೆ. ಅವರೆಂದರೆ ಲಕ್ಷ್ಮಣ ಬಾಬಣ್ಣ ಪೈ, ಸ. ಪ. ಗಾಂವಕರ, ವಿ. ವಿ. ತೊರ್ಕೆ, ಡೆಂಗಾ ದೇವು ನಾಯ್ಕ, ಮ.ಗ. ಶೆಟ್ಟಿ, ಶ್ರೀನಿವಾಸ ಶೆಟ್ಟಿ, ಶಾಂತಾರಾಮ ಬಾಳೆಗುಳಿ, ಜಿನದೇವ ನಾಯಕ, ಸತಾಯುಷಿ ಜೋಗಿ ನಾಯಕ ಶೆಟಗೇರಿ, ಪ್ರೊ. ಡಿ. ಎನ್. ರಾಯ್ಕರ್, ಡಾ. ಸದಾನಂದ ನಾಯಕ, ಜೋಗಿ ನಾಯಕ ಬೋಳೆ, ಮನೋಹರ ನಾಯಕ ಬೊಮ್ಮಿಗುಡಿ, ಚುಟುಕು ಸಾಹಿತ್ಯದಿಂದ ನಾಡಿನ ಮನೆಮಾತಾದವರು ದಿನಕರರು, ದಿ. ಶ್ರೀ ಜಿ. ಪಿ. ನಾಯಕ, ವಿ. ಜೆ. ನಾಯಕ, ಶಾಂತಾರಾಮ ನಾಯಕ ಹಿಚ್ಕಡ, ವಿಷ್ಣು ನಾಯ್ಕ, ಪ್ರೊ. ಜಿ. ಎಚ್. ನಾಯಕ, ಡಾ. ಎನ್. ಆರ್. ನಾಯಕ, ಶಾಂತಿ ನಾಯಕ, ಕೃಷ್ಣ ಹಿಚ್ಕಡ ಹಾಗೂ ಬಿ. ಹೊನ್ನಪ್ಪ ಭಾವಿಕೇರಿ, ವಿಠಲ ಗಾಂವಕರ ಮೊದಲಾದವರ ಸಾಹಿತ್ಯ ಕೃತಿಯು ನಾಡಿನ ಗಮನವನ್ನು ಸೆಳೆದಿವೆ. ಸಂಘಟನಾತ್ಮಕವಾಗಿ ಅವರ ಕೊಡುಗೆಯು ಅಪೂರ್ವವಾದುದ್ದೇ.

ತಾಲೂಕಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಡಾ॥ ಪ್ರಕಾಶ ನಾಯಕ ಬೆಳಸೆಯವರು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನವನ್ನು ಹುಟ್ಟು ಹಾಕಿ ಕನ್ನಡ ಪರವಾದ ಹಲವಾರು ರಚನಾತ್ಮಕವಾದ ಕಾರ್ಯಚಟುವಟಿಕೆಗಳನ್ನು ಕೈಗೊಳುತ್ತಿದ್ದಾರಲ್ಲದೇ ಕರೀಂಖಾನರ ಬದುಕು-ಬರಹ, ಅಭಿಮಾನ, ಮಾಸ್ಕೆರಿಯಾನ, ಬದುಕು ಬರೆದ ಸುಕ್ರಜ್ಜಿ, ಜನಪದ ಪ್ರಣಯ ಗೀತೆಗಳು, ಮಾಸ್ಕೇರಿ ಅವ್ವನ ಹಾಡು ಮೊದಲಾದ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರು ಸಂಘಟಿಸಿದ "ಮಾಸ್ಕೇರಿ ದರ್ಶನ"ವು ಚಾರಿತ್ರಿಕ ಕಾರ್ಯಕ್ರಮ, ವಂದಿಗೆಯ ಸಂದೀಪ ನಾಯಕ ಉತ್ತಮ ಕಥೆಗಾರನಾಗಿ, ಕವಿಯಾಗಿ, 'ಮಯೂರ' ಪತ್ರಿಕೆಯ ಸಂಪಾದಕತ್ವದ ಹೊಣೆ ಹೊತ್ತಿರುವುದು ಅಭಿಮಾನದ ಸಂಗತಿ. ಶ್ರೀಯುತರಾದ ಫಾಲ್ಗುಣ ಗೌಡ, ಪ್ರೊ. ಆರ್. ಎಸ್. ನಾಯಕ, ಬಿ.ಎಚ್. ನಾಯಕ ಹಿಲ್ಲೂರು, ಜೇ. ಪ್ರೇಮಾನಂದ, ಶ್ರೀಲತಾ ಅರಮನೆ, ಶ್ರೀಮತಿ ಹೊನ್ನಮ್ಮ ನಾಯಕ, ನಾಗರಾಜ ಮಂಜಗುಣಿ, ಅಕ್ಷತಾ ಕೃಷ್ಣಮೂರ್ತಿ, ರೇಣುಕಾ ರಮಾನಂದ, ಶ್ರೀದೇವಿ ಕೆರೆಮನೆ, ನಾಗಮಣಿ ನಾಯಕ, ಗುರುರಾಜ ಬೇಲೇಕೇರಿ, ರಾಮಮೂರ್ತಿ ನಾಯಕ, ರಾಮಕೃಷ್ಣ ಭಟ್ಟ ಕಲ್ಲೇಶ್ವರ, ಪುಷ್ಪಾ ಪ್ರಭಾಕರ, ವೆಂಟು ಮಾಸ್ತರ ಶೀಳ್ಯ, ಜಯಶೀಲ ಆಗೇರ, ಖೇಮು ಗೌಡ, ಜಿ. ಆರ್. ತಾಂಡೇಲ, ಹೊನ್ನಪ್ಪ ನಾಯಕ, ಜಿ. ಆರ್. ನಾಯಕ ವಂದಿಗೆ, ರಮೇಶ ಮಾಸ್ತರ ವಂದಿಗೆ, ಸಾತು ಗೌಡ, ಶಿವಾ ಬಾಬಾ ನಾಯ್ಕ, ನಾಗೇಶದೇವ ಅಂಕೋಲೇಕರ, ಮನೋಹರ ಮಲ್ಮನೆ, ಕುಸುಮಾ ಕೇಣಿಕರ, ಚಂದ್ರಕಲಾ ನಾಯಕ, ಜಿ. ಡಿ. ನಾಯ್ಕ, ರಾಮಚಂದ್ರ ಶೇಟ್, ರೇಷ್ಮಾ ಉಮೇಶ, ಹೊಸಬಣ್ಣ ನಾಯಕ ವಾಸರಕುದ್ರಿಗೆ, ರಾಜೀವ ಎನ್. ನಾಯಕ ವಾಸರೆ, ವೆಂಕಟ್ರಮಣ ಗೌಡ, ಶ್ರೀಧರ ನಾಯಕ, ಉಮೇಶ ನಾಯ್ಕ, ಶ್ರೀಮತಿ ಸುವರ್ಣ ಶೆಟ್ಟಿ ಹೀಗೆ ಇನ್ನುಳಿದ ಅನೇಕರು ಪ್ರಸ್ತುತ ಅಂಕೋಲಾ ಸಾಹಿತ್ಯ ವಲಯದಲ್ಲಿ ಕ್ರಿಯಾಶೀಲರಾಗಿದ್ದಾರೆ.

ನೆರೆಯ ತಾಲೂಕಿನ ಖ್ಯಾತ ಸಾಹಿತಿಗಳಾದ ಶ್ರೀಯುತ ಜಯಂತ ಕಾಯ್ಕಿಣಿ, ಗೌತಮ ಗಾಂವಕರ, ಮಾಕ್ಕೇರಿ ಎಂ. ಕೆ. ನಾಯಕ, ಮಂಜುನಾಥ ಬರ್ಗಿ, ನಾಗೇಂದ್ರ ನಾಯಕ ತೊರ್ಕೆ, ಸುನಂದಾ ಕಡಮೆ, ಲಕ್ಷ್ಮೀ ಹಿರೇಗುತ್ತಿ, ಪ್ರಕಾಶ ಕಡಮೆ ಮೊದಲಾದವರು ಸಾಹಿತ್ಯಕ ಕೊಡುಗೆಯ ಮೂಲಕ ಅಂಕೋಲೆಗೆ ಬೇಕಾಗಿದ್ದಾರೆ. ಹಾಗೆಯೇ ದಿ. ಶ್ಯಾಮ್ ಹುದ್ದಾರ, ಪ್ರೊ. ಮೋಹನ ಹಬ್ಬು, ಡಾ॥ ಆರ್. ಜಿ. ಗುಂದಿ, ಅಮ್ಮೆಂಬಳ ಆನಂದ, ಉಲ್ಲಾಸ ಹುದ್ದಾರ, ನಾಗಪತಿ ಹೆಗಡೆ, ಮಹಾಂತೇಶ ರೇವಡಿ, ಪ್ರೊ. ಸಿದ್ಧಲಿಂಗಸ್ವಾಮಿ ವಸ್ತ್ರದರವರ ನುಡಿಸೇವೆಯು ಅಭಿನಂದನಾರ್ಹವಾದುದ್ದು.

ಪದ್ಮಶ್ರೀ ಸುಕ್ರಿ ಬೊಮ್ಮು ಗೌಡ, ಡಾ. ಎನ್. ಆರ್. ನಾಯಕ, ಶ್ರೀ ಬಿ. ಹೊನ್ನಪ್ಪ ಭಾವಿಕೇರಿ, ಶ್ರೀಮತಿ ಶಾಂತಿ ನಾಯಕ ಜನಪದ ಸಾಹಿತ್ಯ, ಸಂಗೀತ, ಕಲಾ ಕ್ಷೇತ್ರದಲ್ಲಿ ಗಮನಸೆಳೆದವರು. ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದ ನಮ್ಮವರೇ ಆದ ದಿ. ಬಿ. ಆರ್. ನಾಯಕ ಹಿಲ್ಲೂರು (ಗಾಯನ ಬೀರಣ್ಣ) ದಿ. ಗಂಗೂಬಾಯಿ ಹಾನಗಲ್ಲ, ದಿ. ಭೀಮಸೇನ ಜೋಷಿಯವರ ಸಮಕಾಲೀನರೆನ್ನುವುದು ಉಲ್ಲೇಖನೀಯ.

ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಗ್ರಾಮೀಣ ಅತ್ಯುತ್ತಮ ದಿನಪತ್ರಿಕೆಯೆಂಬ ಪ್ರಶಸ್ತಿಗೆ ಪಾತ್ರವಾದ ಕರಾವಳಿ ಮುಂಜಾವಿನೊಂದಿಗೆ ಜಿಲ್ಲೆಯ ಇನ್ನಿತರ ದಿನಪತ್ರಿಕೆಗಳು ವಿಶೇಷ ಗಮನ ಸೆಳೆಯುತ್ತವೆ. ಅಷ್ಟೇ ಅಲ್ಲದೇ ರಾಜ್ಯದಿಂದ ಪ್ರಕಟಗೊಳ್ಳುತ್ತಿರುವ ಅನೇಕ

ಪತ್ರಿಕೆಗಳು ಉತ್ತರ ಕನ್ನಡ ಪ್ರತ್ಯೇಕ ಪುರವಣಿಗೆಯೊಂದಿಗೆ ಪ್ರಕಟಗೊಳ್ಳುತ್ತಲಿದೆ. ಈ ಹಿಂದೆ ಪ್ರಕಟಗೊಳ್ಳುತ್ತಿದ್ದ ತಾಲೂಕಿನ ಜನಸೇವಕ, ಅಭಯ, ಸಕಾಲಿಕ ವಾರಪತ್ರಿಕೆಗಳು ಮಾಸದ ನೆನಪಾಗಿ ಉಳಿದಿದೆ. ಸುಮಾರು ನಲವತ್ತೆಂಟು ವರ್ಷಗಳಿಂದ ನಡೆಯುತ್ತಿದ್ದ ನುಡಿಜೇನು ಪತ್ರಿಕೆ ಇಂದಿಗೂ ಮುನ್ನಡೆಯುತ್ತಲಿದೆ.

ಕಲೆ, ಸಾಹಿತ್ಯ, ಸಾಂಸ್ಕೃತಿಕ ರಂಗಗಳಲ್ಲಿ ಬಾಸಗೋಡದ ಸುಬೋಧ ಯಕ್ಷಗಾನ ಮಂಡಳಿ, ಅಂಕೋಲೆಯ ಕರ್ನಾಟಕ ಸಂಘ, ಶೆಟಗೇರಿಯ ಯಕ್ಷರಂಗ ವೇದಿಕೆ, ಭಾವಿಕೇರಿಯ ನುಡಿಜೇನು ಪತ್ರಿಕಾ ಬಳಗ, ಅಂಬಾರಕೊಡ್ಲದ ರಾಘವೇಂದ್ರ ರಂಗಸಂಘ, ವೆಂಕಟರಮಣ ಯಕ್ಷಗಾನ ಕಲಾ ಮಂಡಳಿ, ಬಾಸಗೋಡದ ಜ್ಞಾನಸತ್ರ, ಸಂಗಾತಿ ರಂಗಭೂಮಿ, ಕನ್ನಡ ಚಂದ್ರಮ ಹೀಗೆ ಹತ್ತಾರು ವೇದಿಕೆಗಳು ಸಾಹಿತ್ಯ ಹಾಗೂ ಸಾಂಸ್ಕೃತಿಕ ನೆಲೆಯನ್ನು ಗಟ್ಟಿಗೊಳಿಸಿದೆ.

ಆಶ್ರಯ ಫೌಂಡೇಶನ್ನಿನ ಶ್ರೀ ರಾಜೀವ ಗಾಂವ್ಕರರವರು ಅಚವೆಯ ಸರಕಾರಿ ಪ್ರೌಢಶಾಲೆಯನ್ನು ದತ್ತು ಪಡೆದು ಅನೇಕ ಶಿಕ್ಷಣ ಸಂಸ್ಥೆಗಳಿಗೆ, ಬಡ ಮಕ್ಕಳಿಗೆ ನೆರವಾಗಿ, ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಿದ್ದಾರೆ. ಅದಲ್ಲದೇ ಅದೆಷ್ಟೋ ಅಸಹಾಯಕರ ನೆರವಿಗೆ ಆಶ್ರಿತರಾಗಿದ್ದಾರೆ.

ಅಚವೆ, ಚನಗಾರವನ್ನೊಳಗೊಂಡ ಯಾಣದ ಸುತ್ತಮುತ್ತಲಿನ ವಿಶಾಲ ಪ್ರದೇಶಗಳು ಐತಿಹಾಸಿಕ ಹಿನ್ನೆಲೆಯೊಂದಿಗೆ ಸರ್ಪಮಲ್ಲಿಕನ ಆಡಳಿತಕ್ಕೊಳಪಟ್ಟಿದೆ ಎಂಬುದಕ್ಕೆ ಅಂಕೋಲೆಯ ಕಲ್ಲಿನ ಕೋಟೆ (ಕೋಟೆಬೇಣ) ಸಾಕ್ಷಿ ಒದಗಿಸುತ್ತದೆ.

ಪತ್ರಕರ್ತ ಸಂಘದ ಅಧ್ಯಕ್ಷ ಶ್ರೀ ವಿಠ್ಠಲದಾಸ ಕಾಮತ, ಡಾ. ಸಿದ್ಧಲಿಂಗಸ್ವಾಮಿ ವಸ್ತ್ರದ ರಾಮದಾಸ ಶೆಟ್ಟಿ, ವಿದ್ಯಾಧರ ಮೊರಬ, ವಾಸುದೇವ ಗುನಗಾ, ಅರುಣ ಶೆಟ್ಟಿ, ನಾಗರಾಜ ಮಂಜಗುಣಿ, ರಾಘು ಕಾಕರಮಠ, ಸುಭಾಸ ಕಾರೇಬೈಲ್, ಈ ಮೊದಲಾದವರು ಪತ್ರಿಕಾವಲಯದಲ್ಲಿದ್ದಾರೆ. ಸೃಜನಶೀಲತೆಗೆ ಶ್ರೀ ಶ್ಯಾಮಸುಂದರ ಗೌಡ ಹೆಸರಾಗಿದ್ದಾರೆ. ನ್ಯಾಯವಾದಿ ಶ್ರೀ ನಾಗರಾಜ ನಾಯಕ ಬಾಸಗೋಡರವರು ತಮ್ಮ ಸಮಾಜಮುಖಿ ಚಟುವಟಿಕೆಗಳ ಮೂಲಕ ಭವಿಷ್ಯವನ್ನು ಹೊಂದಿದ್ದಾರೆ. ನೌಕಾನೆಲೆಯ ನಿರಾಶ್ರಿತರಿಗಾಗಿ ನಮ್ಮೊಡನೆ ಟೊಂಕಕಟ್ಟಿ ನಿಂತ ಆಪ್ತರಾದ ಶ್ರೀ ಸತೀಶ ಸೈಲ್‌ರವರು ನಮ್ಮ ಶಾಸಕರೆಂಬುದು ಅಭಿಮಾನದ ಸಂಗತಿ. ಸಜ್ಜನ ರಾಜಕರಾಣಿಗಳೆಂದೇ ಗುರುತಿಸಿಕೊಂಡ ಶ್ರೀ ರಮಾನಂದ ನಾಯಕ ಹಾಗೂ ಶ್ರೀ ಜಿ. ಎಮ್. ಶೆಟ್ಟಿಯವರು ನಮ್ಮ ತಾಲೂಕಿನವರೇ. ರಾಜ್ಯ ಮೀನುಗಾರಿಕೆ ನಿಗಮದ ಅಧ್ಯಕ್ಷರಾದ ಶ್ರೀ ರಾಜೇಂದ್ರ ನಾಯ್ಕ ಕೂಡ ನಮ್ಮವರೇ, ಬೆಳಂಬಾರ ಗೌಡರ ಪಾರ್ಶ್ವವಾಯುವಿನ ಮದ್ದು ಇಡೀ ನಾಡಿಗೇ ಪ್ರಸಿದ್ಧ. ಉದಯಕುಮಾರ ಶೆಟ್ಟಿಯವರಂತಹ ದಕ್ಷ ವ್ಯಕ್ತಿ ಇಲ್ಲಿ ತಾಲೂಕಾ ದಂಡಾಧಿಕಾರಿಯಾಗಿ ಕಾರ್ಯನಿರ್ವಹಿಸಿದಾಗ ಅವರು ಅಂಕೋಲಾ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ ಅಪಾರ. ಇಲ್ಲಿಯ ಕೆಂಕಣಿ–ಶಿವಪುರ, ಕೋಟೆಬೇಣ ಐತಿಹಾಸಿಕ ತಾಣ. ಬೇಲೆಕೇರಿಯ ರೌದ್ರ ರಮಣೀಯವಾದ ಕಡಲು ಕಿನಾರೆ. ಅಂತೆಯೇ ಅಂಕೋಲೆಯ ನದಿಬಾಗ, ಬಸಾಕಲ್ ಗುಡ್ಡ, ತುಳಸಿ ಗುಡ್ಡ, ವಿಭೂತಿ ಫಾಲ್ಸ್, ಮೋತಿಗುಡ್ಡ, ಹನಿಬೀಚ್ ಮನಮೋಹಕ ಸ್ಥಳಗಳು.

ಶ್ರೀ ವೆಂಕಟರಮಣ, ಶಾಂತಾದುರ್ಗಾ, ಆರ್ಯದುರ್ಗಾ, ಹೊನ್ನಾರಾಕಾ ಸುಂದರ ನಾರಾಯಣ, ಕೊಗ್ರೆ ಶ್ರೀ ಬೊಮ್ಮಯ್ಯ ದೇವರು, ಕೋಟೆ ಮಾರುತಿ, ಶ್ರೀ ವೀರವಿಠ್ಠಲ, ಅವರ್ಸೆಯ ಕಾತ್ಯಾಯನಿ, ಭಾವಿಕೇರಿಯ ಕಾನಬೀರ, ಬೇಲೇಕೇರಿಯ ಜೈನಬೀರ, ಅಲಗೇರಿಯ ಸಣ್ಣಮ್ಮದೇವಿ, ಯೆಕ್ಕೆಗುಳಿ ಮಾಸ್ತಿ, ಶೆಟಗೇರಿಯ ಶ್ರೀ ವರಮಹಾಗಣಪತಿ, ಬೆಳಸೆಯ ದುರ್ಗಾದೇವಿ, ಅಗ್ರಗೋಣದ ಶಾಂತಿಕಾಪರಮೇಶ್ವರಿ ಈ ಮೊದಲಾದ ದೇವಾಲಯಗಳು ಪುರಾತನವೂ ಪ್ರಸಿದ್ಧವೂ ಆಗಿವೆ. ಅಂಕೋಲೆಯ ದೊಡ್ಡದೇವರ ತೇರು, ಕಾರ್ತಿಕೋತ್ಸವ, ಸುಗ್ಗಿಹಬ್ಬ, ಬಂಡಿಹಬ್ಬ ಎಲ್ಲವೂ ವಿಶೇಷವೇ. ತಾಲೂಕಿನಲ್ಲಿರುವ ಚರ್ಚು–ಮಸೀದಿಗಳು ತುಂಬಾ ಗಮನಸೆಳೆಯುತ್ತವೆ. ಹೀಗೆ ಅಂಕೋಲಾ ಕುರಿತು ಹೇಳಬೇಕೆಂದರೆ ಅದೊಂದು ವಿಶಾಲವಾದ ವಾರಿಧಿ. ಮೊಗೆದಿದ್ದಲ್ಲಿ ಒಂದಿಷ್ಟು ಮುತ್ತುಗಳು ಮಾತ್ರ.

ಕನ್ನಡದ ಮೂಲಕ ಬದುಕನ್ನು ಕಟ್ಟಬೇಕು!

ಕನ್ನಡವು ಕೇವಲ ನೆಲದ ಭಾಷೆಯಲ್ಲ, ಹಾಗಾಗಲೂ ಬಿಡಬಾರದು ಅದು ಬದುಕಿನ ಭಾಷೆಯಾಗಬೇಕು. ಅದನ್ನೇ ಆಡಬೇಕು ಉಸಿರಾಗಿಸಿಕೊಳ್ಳಬೇಕು. ಅದನ್ನು ಅನ್ನದ ಭಾಷೆಯನ್ನಾಗಿಸಿಕೊಳ್ಳಬೇಕು. ಬ್ಯಾಂಕ್, ಅಂಚೆ, ಸರಕಾರಿ

ಕಛೇರಿಗಳಲ್ಲಿನ ಅಧಿಕಾರಿಗಳು, ಕನ್ನಡಿಗರಾಗಿರಬೇಕು. ಇದಕ್ಕೆ ಆಡಳಿತರೂಢ ಪ್ರಭುಶಕ್ತಿಯ ಇಚ್ಛೆಯು ಅತ್ಯವಶ್ಯಕ. ಅದನ್ನು ಮನಗಾಣಿಸುವ ಹೊಣೆ ನಮ್ಮೆಲ್ಲರ ಮೇಲಿದೆ.

ಪ್ರಾಥಮಿಕ ಶಾಲೆಗಳಲ್ಲಿ ಒಂದರಿಂದ ಐದನೆಯ ತರಗತಿಯವರೆಗೆ ಕಡ್ಡಾಯವಾಗಿ ಕನ್ನಡವನ್ನು ಬೋಧಿಸುವಂತಾಗಬೇಕು. ಎಸ್.ಎಸ್.ಎಲ್.ಸಿ.ಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಉದ್ಯೋಗದಲ್ಲಿ ನೀಡಲಾಗುವ ಮೀಸಲಾತಿಯ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬೇಕು. ಕನ್ನಡದಲ್ಲಿಯೇ ಬರೆಯಲು ಸಹಿ ಮಾಡಲು ಸಂಕಲ್ಪಿಸಬೇಕು. ಅದಕ್ಕೆ ಮುಕ್ತ ವಾತಾವರಣವೂ ನಿರ್ಮಾಣವಾಗಬೇಕು. ಕನ್ನಡ ಸಂಘಟನೆಗಳೆಲ್ಲವೂ ಬಲಗೊಳ್ಳಬೇಕು. ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು. ಕನ್ನಡದ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಮನೆ–ಮನೆಯ ಬಾಗಿಲುಗಳನ್ನು ಮುಟ್ಟಿ–ತಟ್ಟಲಿ ಕನ್ನಡ ಸಾಹಿತ್ಯ ಪರಿಷತ್ ಎಂಬುದು ಶ್ರೀಮಾನ್ಯನನ್ನೂ ಮುಟ್ಟುವಂತಾಲಿ. ಪ್ರತಿ ಮನೆಯಲ್ಲಿಯೂ ಕನ್ನಡಾಂಬೆಯ ಭಾವಚಿತ್ರವಿರಲಿ, ಭುವನೇಶ್ವರಿಯನ್ನು ನಿತ್ಯವೂ ಅರ್ಚಿಸೋಣ. ವರ್ಷಕ್ಕೊಮ್ಮೆ ಯಾದರೂ ಪ್ರತಿ ಊರಿನಲ್ಲಿಯೂ ಕನ್ನಡ ಜಾತ್ರೆಯು ನಡೆಯುವಂತಾಗಲಿ, ಪುಸ್ತಕಗಳನ್ನು ಉಡುಗೊರೆಯಾಗಿ ನೀಡುವ ಸಜ್ಜನಿಕೆಯನ್ನು ಮೈಗೂಡಿಸಿಕೊಳ್ಳೋಣ, ಪ್ರತೀ ಮನೆಯಲ್ಲೂ ಗ್ರಂಥಾಲಯವಿರಲಿ. ಕನ್ನಡಕ್ಕೆ ಕುತ್ತು ಬಂದರೆ ಸೆಟೆದು ನಿಲ್ಲೋಣ.

"ಬರೆಯುವುದಷ್ಟೇ ಸಾಹಿತ್ಯವಲ್ಲ, ಬದುಕನ್ನು ಬರೆಯುವುದು ನಿಜವಾದ ಸಾಹಿತ್ಯ"

ಒಂದಿಷ್ಟು ಬರೆದರೆ ಸಾಲದು, ಬದುಕಿದಂತೆ ಬರೆಯಬೇಕು, ಬದುಕುವಂತೆ ಬರೆಯಬೇಕು, ಸಾಹಿತಿಯಾದವನು ಲೇಖನಿ ಹಿಡಿದು ಬರೆಯಲೇಬೇಕೆಂದೇನೂ ಇಲ್ಲ. ಬಿತ್ತುವುದು, ಉತ್ತುವುದು, ಬೆಳೆಯುವುದು ಫಲವನ್ನು ಪಡೆಯುವುದು, ಸಮಷ್ಟಿಯಲ್ಲಿ ಮಾದರಿಯಾಗಿ ಬಾಳಿ ತೋರಿಸುವುದು ನಿಜವಾದ ಸಾಹಿತ್ಯ. ನಮ್ಮ ಸುಕ್ರಜ್ಜಿ ಯಾವ ಶಾಲೆ ಕಾಲೇಜನ್ನು ಓದಿದವಳಲ್ಲ, ಏನನ್ನೂ ಬರೆದವಳಲ್ಲ, ನಿಜವಾದ ಸಾಹಿತ್ಯ ಅದು. ತನ್ನಿಂದ ತಾನೇ ಓದಿಸಿಕೊಳ್ಳುತ್ತದೆ. ಅಂತಹ ಸಾಹಿತ್ಯ ಎಂದಿಗೂ ಅಮರ ಅಂತಹ ಸಾಹಿತಿಯು ತನ್ನನ್ನು ತಾನು ಸರ್ವದಾ ತೆರೆದುಕೊಳ್ಳುತ್ತಾನೆ, ನಿತ್ಯನೂತನವಾಗಿರುತ್ತಾನೆ.

ಸರಕಾರಿ ಶಾಲೆಗಳ ಉಳಿವು ನಮ್ಮೆಲ್ಲರ ಹೊಣೆ

ಇತ್ತೀಚಿಗೆ ನಮ್ಮ ಸರಕಾರಿ ಕನ್ನಡ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ತೀರ ಕಡಿಮೆಯಾಗುತ್ತಿದೆ ಎಂಬುದು ತೀರ ವಿಷಾದನೀಯ ಸಂಗತಿ. ಈಗಿನ ಸರಕಾರಿ ಶಾಲೆಗಳ ಶಿಕ್ಷಕರು ಸ್ಪರ್ಧಾತ್ಮಕ ಪರೀಕ್ಷೆಯನ್ನೆದುರಿಸಿ ಆಯ್ಕೆಯಾದ ಅತಿ ಬುದ್ಧಿವಂತ ಅಭ್ಯರ್ಥಿಗಳು. ಇನ್ನು ಶಾಲೆಗಳಲ್ಲಿ ಉಚಿತ ಊಟ, ಸಮವಸ್ತ್ರ, ಪಠ್ಯ–ಪುಸ್ತಕ, ಹಾಲು, ಮೊಟ್ಟೆ, ವಿಟಮಿನ್ ಮಾತ್ರೆಗಳು ಇತ್ಯಾದಿಗಳನ್ನು ನೀಡುತ್ತಿದೆಯಾದರೂ ಸರಕಾರಿ ಶಾಲೆಗಳು ಸಮೀಪದಲ್ಲಿದ್ದರೂ ಪಾಲಕರು ತಮ್ಮ ಮಕಳನ್ನು ಖಾಸಗಿ ಶಾಲೆಗಳಿಗೆ ಕಳಿಸಲು ಕಾರಣವೇನು? ಗಂಭೀರವಾಗಿ ಚಿಂತಿಸಲೇಬೇಕಾದ ವಿಷಯ. ಸರಕಾರಿ ಶಾಲೆಗಳಲ್ಲಿ ಬಹುತೇಕವಾಗಿ ಆಂಗ್ಲಮಾಧ್ಯಮ ಇಲ್ಲದಿರುವುದು. ಆದರೆ ಬಹುತೇಕ ಪಾಲಕರಿಗೆ ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮದಲ್ಲೇ ಓದಿಸಲೇಬೇಕೆಂಬ ಒತ್ತಾಸೆ ಇರುವುದು ಸರಕಾರಿ ಶಾಲಾ ಶಿಕ್ಷಕರ ಮೇಲೆ ಬೋಧನೆಗಿಂತ ಮುಖ್ಯವಾಗಿ ಶಾಲಾ ದಾಖಲೆಗಳ ನಿರ್ವಹಣೆಯೊಂದಿಗೆ ಇನ್ನಿತರೇ ಕಾರ್ಯಚಟುವಟಿಕೆಗಳ ಒತ್ತಡ ಇರುವುದು ಮತ್ತು ಅವರ ಸೃಜನಶೀಲ ಪ್ರಯೋಗಕ್ಕೆ ಮುಕ್ತ ಅವಕಾಶ ಇಲ್ಲದಿರುವುದು. ಕನ್ನಡ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ತಂದಿದೆ. ಇಂದು ಉನ್ನತ ಹುದ್ದೆಯಲ್ಲಿದ್ದವರೆಲ್ಲಾ ಕನ್ನಡ ಶಾಲೆಗಳಲ್ಲೇ ಓದಿದವರೆಂಬುದನ್ನು ಮನಗಾಣಬೇಕು. ಇತ್ತೀಚಿಗಷ್ಟೇ ಭಾರತೀಯ ನಾಗರಿಕ ಸೇವಾ ಪರಿಕ್ಷೆಯಲ್ಲಿ ಉತ್ತೀರ್ಣರಾದ ಸೂರ್ಯ ಪ್ರಮೋದ ಕನ್ನಡ ಶಾಲೆಯಲ್ಲಿಯೇ ಓದಿದ ಹುಡುಗ. ಸಮೀಪದ ಕುಂಟಗಣಿಯ ಸುವಿಖ್ಯಾತ ವೈದ್ಯಕೀಯ ನಾರಾಯಣ ತಿಮ್ಮಣ್ಣ ಗಾಂವ್ಕರ್ ಸಹ ಮೂಲತಃ ಕನ್ನಡ ಮಾಧ್ಯಮದಲ್ಲೇ ಓದಿದವರು. ಇವರು ರಾಷ್ಟ್ರಪ್ರಶಸ್ತಿಗೆ ಭಾಜನರಾಗಿರುವುದು ಅಭಿಮಾನದ ಸಂಗತಿ. ಹೀಗಿರುವಾಗಿ ನಮ್ಮ ಪಾಲಕರೇಕೇ ತಮ್ಮ ಮಕ್ಕಳನ್ನು ಮಾತೃಭಾಷಾ ಮಾಧ್ಯಮದ ಶಾಲೆಗಳಿಗೆ ಕಳಿಸಲು ಹಿಂಜರಿಯಬೇಕು? ಅಂದಮಾತ್ರಕ್ಕೆ ನಾವು ಇಂಗ್ಲೀಷ್ ಹಾಗೂ ಇತರೇ ಭಾಷೆಗಳನ್ನು ದ್ವೇಷಿಸಬೇಕೆಂದೇನೂ ಇಲ್ಲ, ಇಂದಿನ ಸ್ಪರ್ಧಾ ಜಗತ್ತಿನಲ್ಲಿ ಬಾಲ್ಯದಿಂದಲೇ ಇಂಗ್ಲೀಷ್ ಶಿಕ್ಷಣ ಬೇಕು. ಇಂಗ್ಲೀಷನ್ನು ಮಾಧ್ಯಮವಾಗಿ ಸ್ವೀಕರಿಸುವ ಬದಲು ಒಂದನೇ ತರಗತಿಯಿಂದಲೇ ಒಂದು ವಿಷಯವಾಗಿ ಕನ್ನಡ ಶಾಲೆಗಳಲ್ಲಿ ಬೋಧಿಸುವಂತಾಗಲಿ, ಶಾಲೆಗಳಲ್ಲಿ ವಿದ್ಯಾರ್ಥಿಗಳೇ ಜೀವಂತ

ದಾಖಲೆಗಳಾಗಿರುವಾಗ ಅನಗತ್ಯ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿಯಿಂದ ಶಿಕ್ಷಕರನ್ನು ವಿಮುಕ್ತಿಗೊಳಿಸಿ. ಕಾರ್ಯನಿರ್ವಹಿಸುವಂತೆ ಆಗಬೇಕು. ಸರಕಾರಿ ಶಾಲೆಗಳ ಉಳಿವಿಗಾಗಿ ಹೊಸ ಖಾಸಗಿ ಶಾಲೆಗಳಿಗೆ ಎಷ್ಟೇ ಒತ್ತಡವಿದ್ದರೂ ಮಂಜೂರಾತಿಯನ್ನು ನೀಡಬಾರದು.

ಸದಾ ನೆನಪಿನಲ್ಲಿರಬೇಕಾದ ಸಂಗತಿ

ಚರಿತ್ರೆಯು ಭೂತದ ಫಲ, ಭವಿಷ್ಯತ್ತಿನ ಬೀಜ, ಭೂತದ ಅರಿವಿಲ್ಲದಾದಲ್ಲಿ ವರ್ತಮಾನವನ್ನು ಅರ್ಥಪೂರ್ಣವಾಗಿರಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಸಂಗತಿಗಳ ದಾಖಲೀಕರಣವೂ ತೀರ ಅವಶ್ಯಕ. ಐತಿಹಾಸಿಕ ನೆಲೆಗಳನ್ನು ಗುರುತಿಸಿ ಕೋಟೆ–ಕೊತ್ತಲಗಳನ್ನು ಒಳಗೊಂಡು ಕೆಂಕಣಿ– ಶಿವಪುರದಂತಹ ವಿಶೇಷತೆಯನ್ನು ಪಡೆದ ಪ್ರದೇಶಗಳನ್ನು ಕುರಿತು ವಿಶೇಷವಾದ ಅಧ್ಯಯನವಾಗಬೇಕಾಗಿದೆ. ವಿನಾಶದತ್ತ ಸಾಗುವ ಪರಿಸರದ ಆಗು–ಹೋಗುಗಳನ್ನು ಗುರುತಿಸಿ ಆ ಬಗ್ಗೆ ತುಂಬಾ ಕಾಳಜಿ ವಹಿಸಬೇಕಾಗಿದೆ. ನಮ್ಮ ಗ್ರಾಮೀಣ ಬದುಕಿನ ಕಲೆ, ಸಾಹಿತ್ಯ, ಸಂಸ್ಕೃತಿ, ಜೀವನ ಧರ್ಮವನ್ನು ಕಾಪಾಡಿಕೊಳ್ಳುವ ಅವಶ್ಯಕತೆ ತೀರಾ ಇದೆ.

ಸಮ್ಮೇಳನದ ಸಂದೇಶ

ಸಮ್ಮೇಳನದ ಆಚರಣೆಯ ಹಿಂದೆ ಅದರದೇ ಆದ ಆಶಯವಿದೆ. ಅದು ಕಾಟಾಚಾರಕ್ಕೆ ನಡೆಯುವಂತಹದ್ದಲ್ಲ. ಪ್ರತಿಯೊಂದು ಸಮ್ಮೇಳನವು ತನ್ನ ನೆಲೆಯಲ್ಲಿ ಅನನ್ಯವೆನಿಸಲೇಬೇಕು. ಈ ಹಿನ್ನೆಲೆಯಲ್ಲಿ ಈ ವರ್ಷ ನಡೆಯುತ್ತಿರುವ ಆರನೇ ಅಂಕೋಲಾ ತಾಲ್ಲೂಕಾ ಸಾಹಿತ್ಯ ಸಮ್ಮೇಳನವೂ ಒಂದು ವಿಶೇಷವೂ ಹೌದು. ಕ.ಸಾ.ಪ.ದ ರಾಜ್ಯಾಧ್ಯಕ್ಷರಾದ ಶ್ರೀ ಮನು ಬಳಿಗಾರರವರ ಆಶಯದಂತೆ ಕನ್ನಡ ಸಾಹಿತ್ಯ ಪರಿಷತ್ತು ಹಳ್ಳಿಯಡೆ ನಡೆಯಬೇಕು ಎಂಬುದನ್ನು ಸಾಕಾರಗಳಿಸುವಲ್ಲಿ ಶುದ್ಧ ಗ್ರಾಮೀಣ ಸೊಗಡಿನ 'ಅಚವೆಯಲ್ಲಿಂದು ಅಂಕೋಲಾ ಸಾಹಿತ್ಯ ಸಮ್ಮೇಳನವು ನಡೆದಿರುವುದು ಸಾಕ್ಷಿಯಾಗಿದೆ. ಈ ಸಮ್ಮೇಳನವನ್ನು ಅರ್ಥಪೂರ್ಣಗೊಳಿಸುವಲ್ಲಿ ಶ್ರೀ ಜಿ. ಎಮ್. ಶೆಟ್ಟಿ, ಜಗದೀಶ ಮೊಗಟಾ, ಬಾಲಚಂದ್ರ ಶೆಟ್ಟಿ, ಉದಯ ಗುನಗಾ, ಉಮಾಮಹೇಶ್ವರ ಹೆಗಡೆ ಮೊದಲಾದ ಸ್ಥಳೀಯ ಮುಖಂಡರಿಗೆ ಎಷ್ಟು ಬಾಗಿದರೂ ಕಡಿಮೆಯೇ. ಇವರೊಂದಿಗೆ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಶ್ರೀ ಅರವಿಂದ ಕರ್ಕಿಕೋಡಿ ಹಾಗೂ ತಾಲ್ಲೂಕಾಧ್ಯಕ್ಷರಾದ ಡಾ. ಪ್ರಕಾಶ ನಾಯಕ ಬೆಳಸೆಯವರು ಅಭಿನಂದನಾರ್ಹರು.

ಅಂತರಂಗದ ಅರವಿಂದ

ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಯುತ ಅರವಿಂದ ಕರ್ಕಿಕೋಡಿಯವರು ಬೆಳೆಯುತ್ತಿದ್ದಾರೆ ಎನ್ನುವುದಕ್ಕಿಂತ ಸಾಹಿತ್ಯ ಪರಿಷತ್ತು ಅವರಿಂದ ಬೆಳೆಯುತ್ತಿದೆ ಎಂಬುದನ್ನು ಒಪ್ಪಲೇಬೇಕು. ಸಾಹಿತ್ಯ ಸಂಘಟನೆಗಳ ಮೂಲಕ ಎಳೆಯ ವಯಸ್ಸಿನಲ್ಲಿಯೇ ನಾಡಿನ ಗಮನ ಸೆಳೆದವರು. ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾದವರು. ಶ್ರೇಷ್ಠರನೇಕರ ಸಂಪರ್ಕದಲ್ಲಿದ್ದವರು. ಸೃಜನಶೀಲರನ್ನೆಷ್ಟೋ ಹುಟ್ಟುಹಾಕಿದವರು. ಅವರು ಭವಿಷ್ಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗುವ ಎಲ್ಲಾ ಲಕ್ಷಣಗಳು ಇವೆ. ಅವರ ಸಾರಥ್ಯದಲ್ಲಿ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತು ಇನ್ನೆರಡು ವರ್ಷಗಳಲ್ಲಿ ಮತ್ತಷ್ಟು ಉತ್ತಮವಾಗಿ ಕಾರ್ಯನಿರ್ವಹಿಸಲಿದೆ ಎಂಬ ವಿಶ್ವಾಸವಿದೆ.

ಸಂಪನ್ನಗೊಳಿಸುವ ಮುನ್ನ

ಹೇಳಬೇಕಾದದ್ದು ಬಹಳಷ್ಟಿದ್ದರೂ ಸಮಯದ ವಿವೇಚನೆಯೊಂದಿಗೆ ಸಂಘಟನೆಯ ಎಲ್ಲಾ ಕನ್ನಡ ಮನಸ್ಸುಗಳನ್ನು ಮನದಲ್ಲಿರಿಸಿ ಈ ಭಾಗದ ಜನತೆಯ ಸೌಹಾರ್ದ ಪ್ರೀತಿಗೆ ತಲೆಬಾಗಿ, ಜ್ಞಾನದ ಅಭಿವೃದ್ಧಿಗೆ ಯಾವುದೇ ಭಾಷೆಯನ್ನು ಕಲಿತರೂ ಕೂಡ ಕನ್ನಡತನವೆಂದೂ ನಮ್ಮದಾಗಿರಲಿ. ನಮ್ಮೊಳಗಿನ ಪ್ರೀತಿ–ಪ್ರೇಮ, ಸ್ನೇಹ, ಅಭಿಮಾನ, ಕನ್ನಡದ ನೆಲದಲ್ಲಿ ಸದಾ ಸಾಕಾರಗೊಳ್ಳುತ್ತಿರಲಿ ಎಂಬ ಶುಭ ಹಾರೈಕೆಯೊಂದಿಗೆ,

ಸಮ್ಮೇಳನದ ಕುರಿತು ಕಟ್ಟಿಕೊಂಡ ಕನಸು ನನಸಾಗುವ ಮುನ್ನವೇ ಕಾಣದ ಲೋಕಕ್ಕೆ ಪಯಣಿಸಿದ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಸಜ್ಜನಿಕೆಯ ಆತ್ಮೀಯ ಗೆಳೆಯ ಮನೋಹರ ಬೊಮ್ಮಿಗುಡಿಯವರಿಗೆ ಮಣಿದು ಉಪಸ್ಥಿತರಿದ್ದ ತಮ್ಮೆಲ್ಲರಿಗೂ ಇನ್ನೊಮ್ಮೆ ವಂದಿಸಿ ವಿರಮಿಸುತ್ತೇನೆ.

ಸಿರಿಗನ್ನಡಂ ಗೆಲ್ಗೆ

ಅಂಕೋಲಾ ತಾಲೂಕಾ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೧೫-೦೪-೨೦೧೮

ಸಮ್ಮೇಳನದ ಸರ್ವಾಧ್ಯಕ್ಷರು

ಸಾಹಿತ್ಯಾರಾಧಕ ಶಿಕ್ಷಕ : ಶ್ರೀ ವಿಠ್ಠಲ ಗಾಂವಕಾರ



'ಕರ್ನಾಟಕದ ಬಾರ್ಡೋಲಿ' ಎಂದು ಅನ್ವರ್ಥಗೊಂಡ ಅಂಕೋಲೆಯ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿದ ಶ್ರೀ ವಿಠ್ಠಲ ವಿ. ಗಾಂವಕಾರರು ಶಿಕ್ಷಣ ಹಾಗೂ ಸಾಹಿತ್ಯ ವಲಯದಲ್ಲಿ ರಾಜ್ಯಮಟ್ಟದಲ್ಲಿ ಗಮನ ಸೆಳೆದವರು. ಸುಮಾರು ನಾಲ್ಕು ದಶಕಗಳ ಕಾಲ ಉದ್ಯೋಗ ನಿಮಿತ್ತ ನೆರೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರೌಢಶಾಲಾ ಕನ್ನಡ ಅಧ್ಯಾಪಕರಾಗಿ, ಮುಖ್ಯಾಧ್ಯಾಪಕರಾಗಿ, ಸಹಾಯಕ ಶಿಕ್ಷಣಾಧಿಕಾರಿಗಳಾಗಿ ಸೇವೆ ಸಲ್ಲಿಸಿ ೧೯೯೫ರಲ್ಲಿ ರಾಜ್ಯ ಶ್ರೇಷ್ಠ ಶಿಕ್ಷಕ ಪ್ರಶಸ್ತಿಗೆ ಭಾಜನರಾದವರು.

ಗಾಂವಕಾರರು ೧೯೮೬ರಿಂದ ಈವರೆಗೂ ಕನ್ನಡ ವ್ಯಾಕರಣ, ಕನ್ನಡ ಭಾಷಾಜ್ಞಾನ, ಪ್ರಬಂಧ ಸಂಕಲನ, ಸಾಮಾನ್ಯ ಜ್ಞಾನ, ಚಿಂತನ ಕಥೆಗಳು, ಕವನ ಸಂಕಲನ, ವೈಚಾರಿಕ ಬರಹ, ಚುಟುಕು ಸಂಕಲನ, ಗಾದೆಗಳ ಸಂಕಲನ ಮುಂತಾದ ಹಲವು ಪ್ರಕಾರಗಳ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದ್ದಾರೆ. ಇವರ ನಾಲ್ಕಾರು ಕೃತಿಗಳು ಹತ್ತಾರು ಮುದ್ರಣ ಕಂಡಿರುವುದು ಒಂದು ವಿಶೇಷ ಸೃಜನಶೀಲ ಹಾಗೂ ಸೃಜನೇತರ ವಿಭಾಗಗಳಲ್ಲಿ ಸಮತೂಕದ ಬರಹಗಳನ್ನು ಪ್ರಕಟಿಸಿದ ವಿಠ್ಠಲ ಗಾಂವಕಾರರು ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರಗಳ ಅವಿನಾಭಾವ ಸಂಬಂಧವನ್ನು ಇನ್ನಷ್ಟು ಪುಷ್ಟಿಗೊಳಿಸಿದ್ದಾರೆ.

ಅಂಕೋಲಾ ಕರ್ನಾಟಕ ಸಂಘದ ಅಧ್ಯಕ್ಷತೆ, ಡಾ| ಶಿವರಾಮ ಕಾರಂತ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯತ್ವ, ಉಡುಪಿ ತಾಲೂಕಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹಾಗೂ ಪದವಿಪೂರ್ವ ಮಹಾವಿದ್ಯಾಲಯಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷತೆ ಮುಂತಾದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ ಗಾಂವಕಾರರಿಗೆ ಗೋರೂರು ಪ್ರತಿಷ್ಠಾನದಿಂದ ರನ್ನ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವಿಶೇಷ ಪುರಸ್ಕಾರ, ಕೊಗ್ರೆ ಶಿಕ್ಷಣ ಪ್ರತಿಷ್ಠಾನ ಅಂಕೋಲಾದಿಂದ ವಿಶೇಷ ಸನ್ಮಾನ ಮುಂತಾದ ಗೌರವಗಳು ಪ್ರಾಪ್ತವಾಗಿವೆ.

ಈಗ ತಮ್ಮ ೬೭ನೇ ವಸಂತದಲ್ಲಿರುವ ವಿಠಲ ಗಾಂವಕಾರರು ದಿನಾಂಕ ೧೫-೦೪-೨೦೧೮ರಂದು ಅವರ ಜನ್ಮಸ್ಥಳ ಶೆಟಗೇರಿಯಲ್ಲಿ ಜರುಗಿದ ಅಂಕೋಲಾ ತಾಲೂಕಾ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ತಮ್ಮ ಶಿಕ್ಷಣ ಹಾಗೂ ಸಾಹಿತ್ಯ ವಿಚಾರಧಾರೆಗಳಿಂದ ಸಾಹಿತ್ಯ ಸಮ್ಮೇಳನವನ್ನು ಸಂಪನ್ನಗೊಳಿಸಿದರು. ಅವರ ಚುಟುಕದ ಸಾಲು ಹೀಗಿದೆ :

ನರನ ತಲೆ ಹುಟ್ಟಿನೊಳು ಬರಿದಾದ ಪಾತ್ರೆ
ಅನುಭವ ತುಂಬಿಕೊಡುವುದು ಬದುಕಿನ ಯಾತ್ರೆ
ತಲೆಯೊಳು ತುಂಬಲಿ ಮೊಳೆವ ಬೀಜದ ಕಾಳು
ಜೀವ ಸತ್ತ ಬೀಜ ಬಿತ್ತಿದರೂ ಹಾಳು!

ಶ್ರೀ ವಿಠ್ಠಲ ವಿ. ಗಾಂವಕರ ಅವರ ಸರ್ವಾಧ್ಯಕ್ಷೀಯ ಭಾಷಣ

ಈ ಕ್ಷೇತ್ರದ ಗಣೇಶ ದೇವರಿಗೆ ನಮಿಸುವೆನು.

ಸರ್ವರಿಗೂ ವಂದನೆ.

ಹೆತ್ತ ತಾಯಿ ಲಕ್ಷ್ಮೀಗೆ, ಹೊತ್ತ ತಾಯಿ ಕನ್ನಡತಿಗೆ, ಪೊರೆವ ತಾಯಿ ಭಾರತಿಗೆ, ಜ್ಞಾನ ಮತ್ತು ಸಾಹಿತ್ಯ ತಾಯಿ ಸರಸ್ವತಿಗೆ ಮನುಕುಲವ ಪೊರೆವ ವಿಶ್ವ ಮಾತೆಗೆ ನಮಿಸುವೆನು. ಆತ್ಮೀಯ ಬಂಧುಗಳೇ, ನಿಮ್ಮನ್ನೆಲ್ಲ ಅಂಕೋಲ ಏಳನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬರಮಾಡಿಕೊಳ್ಳುತ್ತ ತಲೆಬಾಗಿ ಕೈಮುಗಿವೆ.

ಒಂದು ಗಡಿ ಕಡಲು ಇನ್ನೊಂದು ಅರಬೈಲು
ಮಧ್ಯದಲಿ ಭತ್ತ ನೆಲಗಡಲ ಬಯಲು
ಇತ್ತ ಗಂಗಾವಳಿ ಅತ್ತ ಮೋತಿ ಗುಡ್ಡ
ಅಂಕೋಲೆಯೊಳು ಭೂಮಿದೇವತೆಯು ದೊಡ್ಡ

ಸ್ವಾತಂತ್ರ್ಯ ಕಲಿತನಕೆ ಹಿರಿದು ಅಂಕೋಲೆ
ಕಡಿದು ಹಾಕಿದರು ಬ್ರಿಟಿಷರ ಸಂಕೋಲೆ
ನಾಡಿಗರು ಮೆರೆದರು ಕೆಚ್ಚೆದೆಯ ಕಲಿತನ
ಕರ್ನಾಟಕ ಬಾರ್ಡೋಲಿ ನಮ್ಮ ಹಿರಿತನ.

ಇಂತಹ ಪುಣ್ಯದ ನೆಲೆ ನನ್ನ ಅಂಕೋಲ ತಾಲ್ಲೂಕು.

ಅದರಲ್ಲೂ ಶೆಟಗೇರಿ ಚೌಕದ ಹಳ್ಳಿಯ ಒಂದೂರು. ಚೌಕದ ಹಳ್ಳಿ ಅಂದು ಸ್ವಾತಂತ್ರ್ಯ ಯೋಧರ ಆಡಂಬೊಲ. ನಾನು ಹುಟ್ಟಿ ಬೆಳೆದದ್ದು ಈ ನೆಲದಲ್ಲಿ ಎಂಬ ಹೆಮ್ಮೆ ನನಗಿದೆ. ಇಂದು ಧರ್ಮದರ್ಶಿ ಶ್ರೀ ಎನ್. ಬಿ. ನಾಯಕ ಇವರ ಇಚ್ಛಾಶಕ್ತಿಯ ಫಲವಾಗಿ ಧಾರ್ಮಿಕ ಕ್ಷೇತ್ರವಾಗಿ ಹೆಸರುಗೊಳ್ಳುತ್ತಿದೆ. ಇಂತಹ ಪವಿತ್ರ ನೆಲದಲ್ಲಿ ಅಂಕೋಲ ತಾಲ್ಲೂಕಿನ ಏಳನೆಯ ಸಾಹಿತ್ಯ ಸಮ್ಮೇಳನ ಆಗುಗೊಳ್ಳುತ್ತಿರುವುದು ಅತ್ಯಂತ ಆನಂದವನ್ನು ತಂದಿದೆ.

ಕನ್ನಡ ವರ್ಣಮಾಲೆಯ ಮೊದಲ ಅಕ್ಷರ 'ಅ' ದಿಂದಲೇ ಹೆಸರುಗೊಂಡಿರುವ ಅಂಕೋಲ ತಾಲ್ಲೂಕು ತನ್ನ ನೆಲದೊಳಗೆ ಹಲವು ಮೊದಲುಗಳನ್ನು ಇರಿಸಿಕೊಂಡಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಕೋಲೆಯ ವೀರರು ತೋರಿದ ಶೌರ್ಯದಿಂದಾಗಿಯೇ ಕನ್ನಡ ನಾಡಿನಲ್ಲಿ ಯಾರಿಗೂ ಇಲ್ಲದ ಹೆಗ್ಗಳಿಕೆ "ಕರ್ನಾಟಕ ಬಾರ್ಡೋಲಿ" ಎಂದು ಖ್ಯಾತಿ ಗೊಂಡಿದೆ. ಚುಟುಕು ಸಾಹಿತ್ಯ ಪ್ರಕಾರವನ್ನು ಚೌಪದಿ ಶೈಲಿಯಲ್ಲಿ ನೆಲೆ ನಿಲ್ಲಿಸಿ 'ಚುಟುಕುಬ್ರಹ್ಮ'ನೆಂದು ಖ್ಯಾತಿಗೊಂಡ ದಿನಕರ ದೇಸಾಯಿ ಅಂಕೋಲೆಯವರು, ಕುರಿತು ಓದದೆ ಇದ್ದರೂ ನಿಂತಲ್ಲಿಯೇ ಕಾವ್ಯ ಹೊಸೆಯಬಲ್ಲ ಜಾನಪದ ಜಾಣೆ, ಜಾನಪದ ಕೋಗಿಲೆ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸುಕ್ರಿ ಬೊಮ್ಮ ಗೌಡ ಅಂಕೋಲೆಯ ಬಡಗೇರಿಯವರು. ಸಾಹಿತ್ಯ ವಿಮರ್ಶೆಯಲ್ಲಿ ಕನ್ನಡ ನಾಡಿನಲ್ಲಿ ತಮ್ಮದೇ ಛಾಪು ಮೂಡಿಸಿದ ಪಂಪ ಪ್ರಶಸ್ತಿ ಪುರಸ್ಕೃತ ಪ್ರೊ. ಜಿ.ಎಚ್.ನಾಯಕರು ಅಂಕೋಲ ಚೌಕದ ಹಳ್ಳಿಯ ಸೂರ್ವೆಯವರು. ಜಾನಪದ ಸಾಹಿತ್ಯದಲ್ಲಿ ವಿಪುಲ ಕೃಷಿ ಮಾಡಿದ ಮಾಡುತ್ತಿರುವ ಜಾನಪದ ವಿದ್ವಾಂಸ ಡಾ। ಎನ್. ಆರ್. ನಾಯಕ ಮತ್ತು ಅವರ ಮಡದಿ ಶ್ರೀಮತಿ ಶಾಂತಿ ನಾಯಕ ಅಂಕೋಲ ಭಾವಿಕೇರಿಯವರು. ಅರ್ಧಾಂಗವಾತ ಕಾಯಿಲೆಗೆ ವನಸ್ಪತಿ ಔಷಧವನ್ನು ಕಂಡು ಹಿಡಿದ ಶ್ರೀ ಶಿವು ಗೌಡ ಅಂಕೋಲೆಯ ಬೆಳಂಬಾರದವರು. ಮೊನ್ನೆ ಝೀ ಟಿ.ವಿ ಹಿಂದಿ ವಾಹಿನಿಯ ಪ್ರತಿಷ್ಠಿತ ಡ್ಯಾನ್ಸ್ ಇಂಡಿಯಾ ಡ್ಯಾನ್ಸ್ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಹೊರ ಹೊಮ್ಮಿದ ಶ್ರೀ ಸಂಕೇತ ಗಾಂವಕಾರ ಅಂಕೋಲೆಯವರು. ಇದು ನಮ್ಮ ಅಂಕೋಲ.

ನಾನು ಅಂಕೋಲೆಯಲ್ಲಿ ಹುಟ್ಟಿದ್ದು ಭಾಗ್ಯ. ಅದರಲ್ಲೂ ಶಿಕ್ಷಣ ಸಾಹಿತ್ಯ ಕ್ಷೇತ್ರಗಳಲ್ಲಿ ಸೇವೆ ಮಾಡಲು ಅವಕಾಶ ಸಿಕ್ಕಿದ್ದು ಮಹಾಭಾಗ್ಯ ಇಂದು ನಾನೇನಾದರೂ ಬದುಕಿನಲ್ಲಿ ಗುರುತಿಸಿಕೊಂಡಿದ್ದೇನೆ ಎಂದಾದರೆ ಅದು ನನ್ನ ಶಿಕ್ಷಕ ವೃತ್ತಿ, ಸಾಹಿತ್ಯ ಪ್ರೀತಿಯಿಂದ ಆಗಿರುತ್ತದೆ. ವ್ಯಕ್ತಿ ತಾನು ಮಾಡುವ ಉತ್ತಮ ವೃತ್ತಿಯಲ್ಲಿ ಬೆಳೆದಾಗ

ವ್ಯಕ್ತಿತ್ವದಲ್ಲಿ ಬೆಳೆಯುತ್ತಾನೆ, ಬೆಳಗುತ್ತಾನೆ. ವೃತ್ತಿಯಲ್ಲಿ ಸರಿಯಾಗಿ ಸಚ್ಚಾರಿತ್ರ್ಯದಿಂದ ಸೇವೆ ಮಾಡಲು ಅರಿಯದವ ಉಳಿದ ಯಾವ ಕೆಲಸ ಮಾಡಿದರೂ ಅಪೂರ್ಣವೇ ಸರಿ. 'ಹಿಡಿಬಿತ್ತಿ, ಮುಡಿಬೆಳೆದ ಬೆಳೆಗಾರ' ನಾನು. ಇಂದು ಅಂಕೋಲಾ ತಾಲ್ಲೂಕು ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವ ಸಿಕ್ಕಿದೆ. ಇದು ದೇವರು ಕರುಣಿಸಿದ ಪ್ರಸಾದವೆಂದು ತಿಳಿದಿರುವೆನು. ಈ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಅರವಿಂದ ಕರ್ಕಿಕೋಡಿ, ತಾಲ್ಲೂಕು ಘಟಕದ ಅಧ್ಯಕ್ಷರಾದ ಡಾ। ಪ್ರಕಾಶ ನಾಯಕ ಮತ್ತು ಪರಿಷತ್ತಿನ ಸರ್ವ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುವೆನು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಪ್ರೊ. ಕೆ.ವಿ. ನಾಯಕ ಮತ್ತು ಸ್ವಾಗತ ಸಮಿತಿಯ ಸರ್ವ ಸದಸ್ಯರಿಗೆ ವಂದನೆಗಳು. ಅಂಕೋಲೆಯ ಸಮಸ್ತ ಜನರಿಗೆ ನಮಸ್ಕಾರ ಸಲ್ಲಿಸುವೆನು.

ಈ ವೇದಿಕೆಯಲ್ಲಿ ನಾನು ಮಾಡಬೇಕಾದ ಕಾರ್ಯವೊಂದಿದೆ. ಕರ್ತವ್ಯವೂ ಅಹುದು. ಅದು ಗುರುವಂದನೆ. ನನ್ನಲ್ಲಿರುವ ಅಜ್ಞಾನವನ್ನು ಕಳೆದು ಸುಜ್ಞಾನವನ್ನು ತುಂಬಿದ ನನಗೆ ಕಲಿಸಿದ ಎಲ್ಲ ಗುರುಗಳನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುವೆನು, ವಂದಿಸುವೆನು. ಸಾಹಿತ್ಯಾಸಕ್ತಿಯನ್ನು ಮೂಡಿಸಿದ ಗುರುಗಳಾದ ದಿ। ವಿ.ಜೆ. ನಾಯಕ, ಶ್ರೀ ಶಾಂತಾರಾಮ ನಾಯಕ ಹಿಚಕಡ, ದಿ. ರಾಜಗೋಪಾಲಾಚಾರ್ಯ, ಕಾಲೇಜು ವಿದ್ಯಾಭ್ಯಾಸದ ಸಮಯದಲ್ಲಿ ಸಾಹಿತ್ಯ ರುಚಿಯನ್ನು ಉಣಿಸಿದ ದಿ. ಪ್ರೊ. ವಿ. ಎ. ಜೋಶಿ, ವ್ಯಾಕರಣ ಪಾಠ ಮಾಡಿದ ಪ್ರೊ. ಕೆ. ವಿ. ನಾಯಕ, ಸಂಸ್ಕೃತ ಪಾಠ ಮಾಡಿದ ಪ್ರೊ. ಎಂ. ಪಿ. ಭಟ್ ಇವರಿಗೆ ಕೃತಜ್ಞತೆ ಸಲ್ಲಿಸುವೆನು. ಉದ್ಯೋಗ ನಿಮಿತ್ತ ಉಡುಪಿ ಜಿಲ್ಲೆಯ ಕೋಟದಲ್ಲಿ ನೆಲೆಸಿದಾಗ ಡಾ॥ ಶಿವರಾಮ ಕಾರಂತರನ್ನು ಹತ್ತಿರದಿಂದ ಕಾಣುವ ಅವಕಾಶ ಒದಗಿಬಂತು. ಅವರ ಬರಹ, ಸಾಹಿತ್ಯ ಕೃಷಿ, ಬದುಕಿನ ಬದ್ಧತೆ ನನಗೆ ತುಂಬ ಇಷ್ಟ. ಆ ದಿನಗಳಲ್ಲಿ ನನ್ನ ಶಾಲೆಯ ಮೂರು ಕಾರ್ಯಕ್ರಮಗಳಲ್ಲಿ ಪಾಲುಗೊಂಡಿದ್ದರು. ಸಾಹಿತ್ಯಾಸಕ್ತಿಯನ್ನು ಮೂಡಿಸಿದ್ದರು. ಅವರನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸುವೆನು.

ಸಾಹಿತ್ಯ ಎಂದರೇನು? ಸಾಹಿತ್ಯ ನಮಗೆ ಏಕೆ ಬೇಕು? :

'ಬದುಕಿನ ಬರಹವೇ ಸಾಹಿತ್ಯ' ಸಾಹಿತ್ಯ ಬದುಕಿನ ಎಲ್ಲ ಮುಖಗಳ ದಾಖಲೆಯ ಮೊತ್ತ. ಸಾಹಿತ್ಯ ಬೇರೆಯಲ್ಲ. ಬದುಕು ಬೇರೆಯಲ್ಲ. ಬದುಕೇ ಸಾಹಿತ್ಯ ಬದುಕನ್ನು ತೆರೆದು ತೋರಿಸುವುದು ಸಾಹಿತ್ಯ. ಹೊಸ ಬದುಕನ್ನು ಕಟ್ಟಿಕೊಳ್ಳಲು ದಾರಿ ತೋರುವುದು ಸಾಹಿತ್ಯ, ಸಾಹಿತ್ಯ ಕೃತಿ ಬದುಕಿನ ಬುತ್ತಿಯಾಗಿರುತ್ತದೆ. ಬದುಕಿನ ಮುನ್ನಡೆಗೆ ದಾರಿ ತೋರುವ ಬೆಳಕಿನ ಬೀಜವಾಗಿರುತ್ತದೆ. ತಂದೆ-ತಾಯಿಯಾಗಿರುತ್ತದೆ, ಗುರುವಾಗಿರುತ್ತದೆ. ಗೆಳೆಯನಾಗಿರುತ್ತದೆ. ಪ್ರಿಯತಮೆಯಂತೆ ಮುದ್ದಿಸಿ ಮುದ ನೀಡುತ್ತದೆ. ಮನದ ಕೊಳೆಯನ್ನು ತೊಳೆದು ಬೆಳಕು ನೀಡುತ್ತದೆ. ಸಾಹಿತ್ಯ ಜ್ಞಾನವನ್ನು ತುಂಬಿಕೊಡುತ್ತದೆ. ಆತ್ಮಾನಂದವನ್ನು ಆತ್ಮೋನ್ನತಿಯನ್ನು ಉಂಟುಮಾಡುತ್ತದೆ.

ಸಾಹಿತ್ಯ ಎಲ್ಲರಿಗಾಗಿ ಬೇಕು. ಸಾಹಿತ್ಯ ಜನ ಜೀವನದ ಪ್ರತಿಬಿಂಬ, ಬದುಕು ಎಲ್ಲರಿಗೂ ಇದೆ. ಬದುಕಿಗೆ ಬದುಕಿನ ಅನುಭವಗಳಿಗೆ ಜಾತಿ-ಮತ-ಪಂಥಗಳ ಹಂಗಿಲ್ಲ. ಸಾಹಿತ್ಯದ ತುಂಬ ಇರುವುದು ಬದುಕಿನ ಮೌಲ್ಯಗಳು. ಮಾನವೀಯ ಮೌಲ್ಯಗಳು ಸತ್ಯ, ಪ್ರೀತಿ, ದಯೆ, ಅಹಿಂಸೆ, ಧೈರ್ಯ, ತಾಳ್ಮೆ, ನಂಬಿಕೆ, ಸ್ವಾಭಿಮಾನ, ವಿಧೇಯತೆ, ಕ್ಷಮಾಗುಣ, ಪರೋಪಕಾರ, ದಾನಗುಣ, ಹೊಂದಾಣಿಕೆ, ಕೃತಜ್ಞತೆ, ಗುಣ ಗೌರವ ಈ ಎಲ್ಲ ಹಿರಿದಾದ ಅಂಶಗಳನ್ನು ಸಾಹಿತ್ಯ ತಿಳಿಸಿಕೊಡುತ್ತದೆ.

ಜ್ಞಾನ ಸಂಪಾದನೆಗಾಗಿ ಸಾಹಿತ್ಯ ಬೇಕು. ತನ್ನರಿವಿಗಾಗಿ ಸಾಹಿತ್ಯ ಬೇಕು. ಸಂಸ್ಕೃತಿಯ ತಿಳಿವಿಗಾಗಿ ಸಾಹಿತ್ಯ ಬೇಕು. ಸಮಷ್ಟಿಯ ತಿಳಿವಿಗಾಗಿ ಸಾಹಿತ್ಯ ಬೇಕು. ಅಂತರಂಗ ಶೋಧನೆಗಾಗಿ ಸಾಹಿತ್ಯ ಬೇಕು. ಮಾನಸಿಕ ಸಮತೋಲನವನ್ನು ಸಾಧಿಸಲು ಸಾಹಿತ್ಯಬೇಕು. ಬದುಕಿನ ಪಾಠ ಹೇಳಿಕೊಡಲು ಸಾಹಿತ್ಯ ಬೇಕು. ತಾಯಿ, ತಾಯ್ನೆಲ, ತಾಯ್ನುಡಿಯನ್ನು ಪ್ರೀತಿಸುವುದಕ್ಕಾಗಿ ಸಾಹಿತ್ಯ ಬೇಕು. ಮಾನವರಾಗಲು ಸಾಹಿತ್ಯ ಬೇಕು. ಮನಾನಂದವನ್ನು ಹೊಂದಿ ಸುಖದಿಂದ ಬದುಕಲು ಸಾಹಿತ್ಯ ಬೇಕು. ಒಟ್ಟಿನಲ್ಲಿ ಸಾಹಿತ್ಯವಿಲ್ಲದೇ ಬದುಕಿಲ್ಲ. ಕೆಲವು ದಶಕಗಳ ಹಿಂದೆ ಕವಿ ಮತ್ತು ಸಾಹಿತಿಗಳ ಕೃತಿರಚನೆಗೆ ಸೀಮಿತವಾಗಿದ್ದ ಸಾಹಿತ್ಯ ಕ್ಷೇತ್ರ ಇಂದು ಬಹುಮುಖವಾಗಿ ತೆರೆದುಕೊಂಡಿದೆ. ನಿತ್ಯ ಹೊಸ ಕೃತಿಗಳ ಮೂಲಕ, ಬಿಡಿ ಬರಹಗಳ ಮೂಲಕ ಸಾಹಿತ್ಯ ಕ್ಷೇತ್ರ ತುಂಬಿಕೊಳ್ಳುತ್ತಿದೆ. ಕಾವ್ಯ, ಕತೆ, ಕಾದಂಬರಿ, ನಾಟಕ, ಹರಟೆ, ಪ್ರಬಂಧ, ಹಾಸ್ಯಬರಹ, ಪ್ರವಾಸ ಕಥನ,

ವಿಮರ್ಶಾ ಚಿಂತನೆ, ಸಂಶೋಧನೆ, ಶಾಸ್ತ್ರ ವಿವೇಚನೆ, ಕಾವ್ಯ ವಿವೇಚನೆ, ವೈದ್ಯಕೀಯ, ರಾಜಕೀಯ, ವೈಜ್ಞಾನಿಕ, ಭೌತ–ಖಗೋಲ, ಜ್ಯೋತಿಷ್ಯ, ಧಾರ್ಮಿಕ ಗಣಕ ಯಾವೆಲ್ಲ ಅಂಶಗಳು ಬದುಕಿಗೆ ಅನುಕೂಲ, ಅನಿವಾರ್ಯವಾಗಿವೆಯೋ ಅವೆಲ್ಲ ಸಾಹಿತ್ಯರೂಪ ಪಡೆದು ಪ್ರಕಟಗೊಳ್ಳುತ್ತಿವೆ. ದೃಶ್ಯ ಮಾಧ್ಯಮದ ಕಾರ್ಯಕ್ರಮಗಳಾಗಲಿ, ವಾರ್ತಾ ಪತ್ರಿಕೆಗಳಲ್ಲಿ ಪ್ರಕಟವಾಗುವ ಲೇಖನಗಳು ಸಾಹಿತ್ಯದ ಒಡಲಿನಿಂದಲೇ ಹೊರಬರುವವು. ಆದುದರಿಂದ ಸಾಹಿತಿ ಮತ್ತು ಸಾಹಿತ್ಯದ ವಿಸ್ತಾರವನ್ನು ತೆರೆದ ಕಣ್ಣಿನಿಂದ ನೋಡುವ ಅಗತ್ಯವಿದೆ. ಕಾವ್ಯ ಅಥವಾ ಸಾಹಿತ್ಯ ಬರಹದಲ್ಲಿ ಬದುಕಿನ ಎಲ್ಲ ಮುಖಗಳು ಇರುವುದರಿಂದ ಓದುಗರಿಗೆ ಬೇಕಾದುದೆಲ್ಲವೂ ಅವರವರ ಇಚ್ಛೆಗನುಗುಣವಾಗಿ ಸಿಗುತ್ತದೆ. ಈ ಸಾಹಿತ್ಯವನ್ನು ಹದಿನೈದನೆಯ ಶತಮಾನದಲ್ಲಿ 'ಕರ್ಣಾಟ ಭಾರತ ಕಥಾಮಂಜರಿ' ಬರೆದ ಕುಮಾರವ್ಯಾಸ ಕವಿ ಪೀಠಿಕಾ ಸಂಧಿಯಲ್ಲಿಯೇ ಹೇಳಿರುವನು "ಅರಸುಗಳಿಗಿದು ವೀರ, ದ್ವಿಜರಿಗೆ ಪರಮ ವೇದದ ಸಾರ, ಯೋಗೀಶ್ವರ ತತ್ವ ವಿಚಾರ. ಮಂತ್ರಿಜನಕ್ಕೆ ಬುದ್ಧಿಗುಣ, ವಿರಹಿಗಳ ಶೃಂಗಾರ, ವಿದ್ಯಾಪರಿಣಿತರಲಂಕಾರ....." ಎಂದಿರುವನು. ಸಾಹಿತ್ಯ ತಾಯಿಯ ಜೋಗುಳ ಹಾಡಿನಿಂದ ಪ್ರಾರಂಭವಾಗಿ ಸಾಯುವ ಕೊನೆಯ ಕ್ಷಣದವರೆಗೂ ನಮ್ಮ ಸಂಗಾತಿಯಾಗಿರುತ್ತದೆ. ಅದು ಜಾನಪದ ಸಾಹಿತ್ಯ ರೂಪದಲ್ಲಿ ಇರಬಹುದು. ಶಿಷ್ಟ ಸಾಹಿತ್ಯ ರೂಪದಲ್ಲಿ ಇರಬಹುದು.

ಸಾಹಿತಿ, ಸಾಹಿತ್ಯ ರಚನೆ :

ಎಲ್ಲರೂ ಕವಿ, ಸಾಹಿತಿಗಳಾಗಲಾರರು; ಋಷಿಯಾಗದವ ಕಾವ್ಯ ಬರೆಯಲಾರ ಎಂಬ ಮಾತಿದೆ, ಇದು ಸತ್ಯ. ಸಾಹಿತ್ಯ ಬರವಣಿಗೆ ಒಂದು ಕಲೆ. ಬರಹಗಾರನಾಗುವ ಕನಸು ಬಹಳ ಜನರಿಗಿರುತ್ತದೆ. ಆದರೆ ಬರಹಕ್ಕೆ ಬೇಕಾದ ಮನಸ್ಸು ಅದನ್ನು ಸಿದ್ಧಿಸಿಕೊಳ್ಳುವ ತಪಸ್ಸು ಇರುವುದಿಲ್ಲ. ಸಾಹಿತ್ಯ ಬರವಣಿಗೆಯ ಕಲೆಯನ್ನು ಅನುಭಾವದ ಮೂಲಕ ರೂಢಿಸಿಕೊಳ್ಳಬೇಕಾಗುತ್ತದೆ. ಸಾಹಿತ್ಯ ರಚನೆ ಕಲೆ ಅನ್ಯರು ಕಲಿಸಿ ಬರುವ ಕಲೆಯಲ್ಲ. ಬರಹಗಾರನಾಗುವ ಮನಸ್ಸಿದ್ದರೆ, ಕನಸಿದ್ದರೆ, ಪರಿಶ್ರಮವಿದ್ದರೆ ಅದನ್ನು ಸಾಧಿಸಿಕೊಳ್ಳಬಹುದು. ಮನಸ್ಸನ್ನು ಭೂಮಿಯಾಗಿ ಮಾಡಿ ಹದಗೊಳಿಸಬೇಕು. ಅಲ್ಲಿ ಸೃಜನಶೀಲ ಸಾಹಿತ್ಯದ ಬೆಳೆಯನ್ನು ತೆಗೆಯಬಹುದು. ಸೃಜನೇತರ ಸಾಹಿತ್ಯದ ಬೆಳೆಯನ್ನೂ ತೆಗೆಯಬಹುದು. ಸೃಜನ ಸಾಹಿತ್ಯದಲ್ಲಿ ವಸ್ತು, ಭಾವ, ಭಾಷೆ, ಶೈಲಿಯಲ್ಲಿ ಕವಿ–ಸಾಹಿತಿ ಹೊಸ ಸಾಹಿತ್ಯ ಕೃತಿಯೊಂದನ್ನು ಸೃಷ್ಟಿ ಮಾಡಿದರೆ, ಸೃಜನೇತರರ ಬರಹದಲ್ಲಿ ಸಾಹಿತಿ ಬದುಕಿನ ಸುತ್ತ ಇರುವ ನೈಜ ಘಟನೆ, ಜ್ಞಾನದ ಚಿಂತನ ಬದುಕಿಗೆ ಬೇಕಾದ ಅಂಶಗಳನ್ನು ಕಂಡು ಸ್ಫೂರ್ತಿ ಪಡೆಯುತ್ತಾನೆ. ಎರಡೂ ಸಾಹಿತ್ಯ ಪ್ರಕಾರಗಳಲ್ಲಿ ಬದುಕಿನ ಮುಖಗಳೇ ತುಂಬಿಕೊಂಡಿರುತ್ತವೆ. ತೆರೆದ ಕಣ್ಣಿನಿಂದ ನೋಡಿದಾಗ ಮಾತ್ರ ಸೃಜನ ಮತ್ತು ಸೃಜನೇತರ ಸಾಹಿತ್ಯ ಸೃಷ್ಟಿ ಸಾಧ್ಯ. ಭಾವ, ಭಾಷೆ, ಬರಹ ಶುದ್ಧಿಯಿಲ್ಲದೇ, ತಿಳಿವು ಇಲ್ಲದೆ ಸಾಹಿತಿ ನಿಲ್ಲಲಾರ, ಸಾಹಿತಿ ಸಮಾಜಕ್ಕೆ ದೀಪಧಾರಿಯಾಗಬೇಕಾದವನು. ಬದುಕಿಗೂ ಬರಹಕ್ಕೂ ಅಂತರವಿಲ್ಲದೆ ಬದುಕ ಬೇಕಾದವನು. ಹೀಗೆ ಬದುಕಿದಾಗ ಮಾತ್ರ ಅವನ ಸಾಹಿತ್ಯಕ್ಕೂ ಬದುಕಿಗೂ ಬೆಲೆ. ಆಗ ಸಮಾಜದಲ್ಲಿ ಗೌರವ ಪಡೆಯುತ್ತಾನೆ. ಉಳಿದವರ ಬಾಳಿಗೆ ಆದರ್ಶವಾಗುತ್ತಾನೆ. ಆದುದರಿಂದ ಸಾಹಿತಿಗೆ ಬರಹಗಾರನಿಗೆ ಆದರ್ಶದ ಬದುಕಿನ ನಡೆ ಬೇಕು. ಸಾಹಿತಿ ಉತ್ತಮ ಸಮಾಜದ ನಿರ್ಮಾಣಕ್ಕೆ ಗುರುವಾಗಬೇಕು. 'ಶಿವನಿಗಿಂತ ಶಿವ ಶರಣರು ಶ್ರೇಷ್ಠ' ಎಂಬ ಮಾತಿದೆ. ಕವಿ ಸಾಹಿತಿಗಳಿಗಿಂತ ಸಾಹಿತ್ಯಾಸಕ್ತರು ಶ್ರೇಷ್ಠರು. ಸಾಹಿತ್ಯಾಸಕ್ತರಿಂದಲೇ ಸಾಹಿತ್ಯ ಬದುಕಿ ಬೆಳೆಯುವುದು. ಕವಿ ಸಾಹಿತಿಗಳಿಗೆ ಮನ್ನಣೆ ಸಿಗುವುದು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯವನ್ನು ಉಳಿಸಿ ಬೆಳೆಸುತ್ತಿರುವ ಎಲ್ಲಾ ಸಾಹಿತ್ಯಾಸಕ್ತರನ್ನು ಕನ್ನಡಿಗರನ್ನು ಅಭಿನಂದಿಸುವೆನು. ಅವರಿಗೆ ಕೃತಜ್ಞತೆ ಹೇಳುವೆನು.

ಭಾಷೆ, ಕನ್ನಡ ಭಾಷೆ, ಸಂಸ್ಕೃತಿ :

ಮಾನವ ಬದುಕಿನಲ್ಲಿ ರೂಪಿಸಿಕೊಂಡ ಅತ್ಯಮೂಲ್ಯವಾದ ಆವಿಷ್ಕಾರ ಭಾಷೆ. ಭಾಷೆಯಿಲ್ಲದಿದ್ದರೆ ಮಾನವನ ಬದುಕು ಕತ್ತಲು. ಪ್ರಾಣಿ ಬದುಕಿಗೂ ಮಾನವ ಬದುಕಿಗೂ ವ್ಯತ್ಯಾಸವೇ ಇರುತ್ತಿರಲಿಲ್ಲ. ಇದು ಕೇವಲ ಸಂವಹನ ಸಲಕರಣೆಯಲ್ಲ. ಇದು ನಮ್ಮ ಆಲೋಚನೆ. ವಿಚಾರ, ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವ ಸಾಧನ. ಭಾಷೆ ನಮ್ಮ ಆಚಾರ–ವಿಚಾರ, ರೀತಿ ನೀತಿ, ಜೀವನಮೌಲ್ಯಗಳನ್ನು ಹಿಡಿದಿಡುವ ಸಾಧನ. ಹೃದಯ ಹೃದಯಗಳನ್ನು ಒಪ್ಪಿಕೊಳ್ಳುವ, ಅಪ್ಪಿಕೊಳ್ಳುವ ಶಕ್ತಿಯನ್ನು ಹೊಂದಿರುವ ಭಾವನಾತ್ಮಕ ಬಂಧದ ಸಂಸ್ಕೃತಿಯ ಗಂಟು. ಭಾವನೆಗಳು

ಸತ್ತಾಗ ಬದುಕು ಸಾಯುತ್ತದೆ. ಭಾವನೆಗಳನ್ನು ಜೀವಂತವಾಗಿಡುವ ಸಾಧನವೇ ಭಾಷೆ.

ಮಾನವನ ತಾಯ್ನುಡಿ, ತಾಯ್ನೆಲದ ಭಾಷೆ ಅವನ ಬದುಕಿನ ಜೀವ, ಜೀವಾಳ. ತನ್ನ ಕುಟುಂಬ, ತನ್ನ ಸಮಾಜ, ತನ್ನ ಸುತ್ತಲಿನ ಪರಿಸರದಲ್ಲಿ ಚೈತನ್ಯಶೀಲನಾಗಿರುವುದು ಸಂತಸದಿಂದ ಇರುವುದು ತಾಯ್ನುಡಿ, ತಾಯ್ನೆಲದ ಭಾಷೆಯಿಂದ ಆಗಿರುತ್ತದೆ. ಇಂತಹ ತಾಯ್ನುಡಿಯನ್ನು ಕಲಿತುಕೊಳ್ಳದೇ ಹೋದರೆ ನಾವು ನಮ್ಮ ಜನರು, ನಮ್ಮ ನೆಲ, ನಮ್ಮ ಸಂಸ್ಕೃತಿಯಿಂದ ದೂರವಾಗಿ ಒಂಟಿಯಾಗಿ ಹುಟ್ಟಿದ ನೆಲದ ಪಾಲಿಗೆ ನಾವಿಲ್ಲದಂತೆ ಆಗುತ್ತೇವೆ.

ನಮ್ಮ ತಾಯ್ನುಡಿ ಕನ್ನಡ. ಎರಡು ಸಾವಿರ ವರ್ಷಗಳ ಇತಿಹಾಸವುಳ್ಳ ಭಾಷೆ ದೀರ್ಘಕಾಲೀನ ಉತ್ತಮ ಪರಂಪರೆ ಮತ್ತು ಸಂಸ್ಕೃತಿ ಸಂಪನ್ನಭಾಷೆ, ಕನ್ನಡಿಗರ ಪಡೆಯನ್ನು ಕಟ್ಟಿ ಬೆಳೆಸಿದ ಭಾಷೆ. ಹೀಗಿದ್ದೂ ಇಪ್ಪತ್ತನೆಯ ಶತಮಾನದ ಎಂಬತ್ತರ ದಶಕದ ನಂತರ ಕನ್ನಡ ಭಾಷೆಗೆ ದೊಡ್ಡ ಆಘಾತ ಬೀಳಲು ಪ್ರಾರಂಭವಾಯಿತು. ಬದುಕಿಗೆ ಹೊಸ ಹೇತುವಾಗಿ ಆಂಗ್ಲ ಮಾಧ್ಯಮ ಶಿಕ್ಷಣ ಶಾಲೆಗಳು ಪ್ರಾರಂಭವಾದವು. ಇವು ಕನ್ನಡ ಭಾಷೆ, ಕನ್ನಡಿಗರ ಬದುಕು, ಕನ್ನಡಿಗರ ಸಂಸ್ಕೃತಿಯ ದೃಷ್ಟಿಯಿಂದ ದೊಡ್ಡ ಗಂಡಾಂತರವನ್ನೇ ತಂದವು. ಕೃತಕ ಆಂಗ್ಲ ಸಂಸ್ಕೃತಿಯನ್ನು ಕನ್ನಡದ ನೆಲದೊಳಗೆ ತಂದವು.

ಆಂಗ್ಲಮಾಧ್ಯಮ ಶಾಲೆಗಳು ಕನ್ನಡಿಗರ ಮೂಲ ಬದುಕು ಸಂಸ್ಕೃತಿಯನ್ನೇ ದಮನಗೊಳಿಸಿದವು. ತಿಳಿದೋ, ತಿಳಿಯದೆಯೋ ಕನ್ನಡಿಗರಾದ ನಾವು ಕಲಿಕಾ ಮಾಧ್ಯಮ ವಿಷಯದಲ್ಲಿ ತಪ್ಪು ಹೆಜ್ಜೆಯನ್ನು ಇಟ್ಟೆವು. ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತವರು ಮಾತ್ರ ಇಂಜಿನಿಯರ್, ಡಾಕ್ಟರ್ ಆಗುತ್ತಾರೆ. ವಿದೇಶಗಳಿಗೆ ಹೋಗುತ್ತಾರೆ. ಹಣಗಳಿಸುತ್ತಾರೆ ಎಂಬ ಭ್ರಮೆಗೆ ಒಳಗಾದೆವು. ಹಣವೇ ಬದುಕಲ್ಲ ಎಂಬ ಒಳ ಸತ್ಯವನ್ನು ಮರೆತೆವು. ನೂರರಲ್ಲಿ ಬೆರಳೆಣಿಕೆಯಷ್ಟು ಜನರು ಇಂಜಿನಿಯರ್, ಡಾಕ್ಟರ್ ಆಗಬಹುದು. ಉಳಿದ ತೊಂಬತ್ತು ಜನರು ಈ ನೆಲದ ಸಂಸ್ಕೃತಿಯಲ್ಲಿ ಬದುಕ ಬೇಕಾದವರು ಎಂಬುದನ್ನು ಮರೆತೆವು.

ಇಂಗ್ಲಿಷ್ ವ್ಯಾಮೋಹದಲ್ಲಿ ಕನ್ನಡ ತಿಳಿಯದೇ ಹೋದರೂ ಚಿಂತೆಯಿಲ್ಲ, ಇಂಗ್ಲಿಷ್ ಗೊತ್ತಿದ್ದರೆ ಸಾಕು ಎಂಬ ಭ್ರಮೆಗೆ ಒಳಗಾದೆವು. ಇಂತಹ ಭ್ರಮೆಯಿಂದಾಗಿಯೇ ಇತ್ತ ಕನ್ನಡವೂ ತಿಳಿಯದ ಅತ್ತ ಇಂಗ್ಲಿಷ್ ಅರಿಯದ ಸೋಮಾರಿಗಳ ಸೃಷ್ಟಿಯಾಯಿತು. ಪರಂಪರೆಯ ಬದುಕಿಲ್ಲ, ಕೃಷಿ ಮೂಲ ಉದ್ಯೋಗವಿಲ್ಲ, ಮನೆಯ ಹೊಲಗದ್ದೆಗಳೆಲ್ಲ ಬಂಜರು ಬಿದ್ದವು. "ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ" ಎಂಬ ಗಾದೆ ನುಡಿಯಂತೆ ಐಷಾರಾಮದ ಬದುಕಿನ ದಾರಿ ಹಿಡಿದರು. ಎಲ್ಲದಕ್ಕೂ ದೊಡ್ಡ ದುರಂತ. ತನ್ನ ಮಾತೃಭಾಷೆಯನ್ನು ಮರೆಯುವುದು, ತನ್ನ ಸಂಸ್ಕೃತಿಯನ್ನು ಮರೆಯುವುದು, ತನ್ನ ನೆಲವನ್ನು ಮರೆಯುವುದು. ನೆಲದ ಭಾಷೆಯನ್ನು ನಾವು ಕಲಿಯದೆ ಹೋದರೆ ನಮ್ಮ ಜನರು, ನಮ್ಮ ಸಮಾಜ ನಮ್ಮ ಸಂಸ್ಕೃತಿ ನಮ್ಮ ಪರಂಪರೆಯಿಂದ ದೂರವಾಗಿ ಊರಿಲ್ಲದವರಾಗುತ್ತಿದ್ದೇವೆ. ನಲವತ್ತು ಐವತ್ತು ವರ್ಷಗಳ ಹಿಂದೆ ಊರು ಬಿಟ್ಟವರು ಇಂದು ಊರಿಲ್ಲದವರಾಗಿದ್ದಾರೆ. ಅವರ ಮಕ್ಕಳಿಗೆ ಅವರ ತಂದೆ ತಾಯಿಗಳ ಊರು, ಭಾಷೆ, ಸಂಸ್ಕೃತಿ ಗೊತ್ತಿಲ್ಲ. ಇದು ಎದುರಿಗಿರುವ ಸತ್ಯ. ಆದುದರಿಂದಲೇ ರಾಷ್ಟ್ರಕವಿ ಕುವೆಂಪುರವರ ಮಾತನ್ನು ಮರೆಯಬಾರದು.

'ಎಲ್ಲಾದರೂ ಇರು ಎಂತಾದರೂ ಇರು
ಎಂದೆಂದಿಗೂ ನೀ ಕನ್ನಡವಾಗಿರು'.

ಶಾಲಾ ಶಿಕ್ಷಣ ಹಂತದಲ್ಲಿ ತಾಯ್ನುಡಿ ಕನ್ನಡದಲ್ಲಿ ಕಲಿಕೆ ಕಡ್ಡಾಯವಾಗಬೇಕು. ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ಕೇಂದ್ರಕ್ಕೆ ಒತ್ತಡ ಹೇರಬೇಕು. ಈ ವಿಚಾರದಲ್ಲಿ ರಾಜ್ಯ ಸರಕಾರಗಳೆಲ್ಲ ಒಟ್ಟಾಗಿ ಒತ್ತಡ ತರಬೇಕು. ಈ ಮುಂದಿನ ಮಾತನ್ನು ಸ್ಪಷ್ಟವಾಗಿ ತಿಳಿಯಪಡಿಸುತ್ತೇನೆ. ಅದೇನೆಂದರೆ ಕನ್ನಡಾಭಿಮಾನಿಗಳಾದ ನಾವು ಆಂಗ್ಲ ಭಾಷಾ ಮಾಧ್ಯಮ ಕಲಿಕೆಯನ್ನು ವಿರೋಧಿಸುತ್ತೇವೆಯೇ ಹೊರತು ಆಂಗ್ಲ ಭಾಷೆಯನ್ನಲ್ಲ. ನಾಡ ಭಾಷೆಯಾದ ಕನ್ನಡವನ್ನು ಕಲಿತು ಪರಿಣತಿ ಪಡೆದು ಅದರ ಜೊತೆ ಇಂಗ್ಲಿಷ್ ಭಾಷೆ ಕಲಿಯಬೇಕು. ಆದರೆ ಇಂಗ್ಲಿಷ್ ಎಷ್ಟು ಬೇಕು? ಯಾವಾಗ ಬೇಕು? ಎಂಬುದರ ಬಗ್ಗೆ ಸ್ಪಷ್ಟ ಜ್ಞಾನ ಬೇಕು. ಇಂಗ್ಲಿಷ್ ಮಾಧ್ಯಮ ಶಾಲೆಗಳಿಲ್ಲದೇ ಜ್ಞಾನವಿಲ್ಲ ಬದುಕಿಲ್ಲ ಎಂಬುದು ಸುಳ್ಳು. ಆಧುನಿಕ ತಂತ್ರಜ್ಞಾನದಲ್ಲಿ ಮುಂದುವರಿದ ಜಪಾನ್, ಕೋರಿಯಾ, ಚೈನಾ, ಇಟಲಿ, ಫ್ರಾನ್ಸ್, ರಷ್ಯಾ ತಮ್ಮ ದೇಶ ಭಾಷೆಯಲ್ಲಿಯೇ ಪರಿಣತಿ ಹೊಂದಿದ್ದಾರೆ. ಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷೆ ಪ್ರಥಮ ಭಾಷೆಯಾಗಿ ಏಕರೂಪ ಶಿಕ್ಷಣ ಪದ್ಧತಿ ಬರಬೇಕು.

ಶಾಲಾ ಶಿಕ್ಷಣದಲ್ಲಿ ಸರಿಯಾದ ಕನ್ನಡ ಬಾಷಾ ಕಲಿಕೆಗೆ ಒತ್ತು ನೀಡಬೇಕು :

ಆಂಗ್ಲ ಮಾಧ್ಯಮದಲ್ಲಿ ಓದುವ ವಿದ್ಯಾರ್ಥಿಗಳು ಕನ್ನಡ ಭಾಷೆಯ ಕಲಿಕೆಯ ಬಗ್ಗೆ ಅಸಡ್ಡೆ ತೋರುವುದು ಒಂದು ಸಾಮಾನ್ಯ ವಿಷಯ. ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಕನ್ನಡ ಭಾಷಾ ಜ್ಞಾನವನ್ನು ಕಂಡಾಗ ಆಘಾತವಾಗುತ್ತದೆ. ಪ್ರಾಥಮಿಕ ಶಾಲಾ ಹಂತ ಮಾತ್ರವಲ್ಲ; ಪ್ರೌಢಶಾಲಾ ಪದವಿ ಪೂರ್ವ ಹಂತವನ್ನು ಮುಗಿಸಿದ ಕೆಲವು ವಿದ್ಯಾರ್ಥಿಗಳಲ್ಲಿ ಶುದ್ಧವಾದ ಕನ್ನಡವನ್ನು ಉಚ್ಚರಿಸಲಾಗದ, ಬರೆಯಲಾಗದ, ವಾಕ್ಯ ರಚನೆ ಮಾಡಲಾಗದ ಸ್ಥಿತಿಯಿದೆ. ಒತ್ತಕ್ಷರಗಳ ಅರಿವಿಲ್ಲ. ಧ್ವನಿ ಏರಿಳಿತಗಳ ಪ್ರಜ್ಞೆಯಿಲ್ಲ, ವ್ಯಾಕರಣ ನಿಯಮಗಳ ತಿಳಿವಿಲ್ಲ. ಎಲ್ಲವನ್ನೂ ಸರಳಗೊಳಿಸಬೇಕು ಎಂಬ ಕಾರಣದಿಂದ ಭಾಷೆಯ ಮೂಲ ಸತ್ವವಾದ ಶುದ್ಧತೆಯನ್ನು ಹಾಳು ಮಾಡುತ್ತಿದ್ದೇವೆ. ಉಚ್ಚಾರಣೆ ತಪ್ಪಾದಾಗ ಅರ್ಥ ತಪ್ಪಾಗಿ ಅಭಿವ್ಯಕ್ತಿಯೊಳಗಿನ ಆಶಯ ತಪ್ಪಾಗುತ್ತದೆ. ಕನ್ನಡ ಕಲಿತು ಏನಾಗಬೇಕು ? ಎಂಬ ಅಸಡ್ಡೆಯ ಭಾವ ನಿರ್ಲಕ್ಷ್ಯಕ್ಕೆ ಎಡೆಮಾಡಿಕೊಟ್ಟಿದೆ. ಕನ್ನಡ ಭಾಷೆಯನ್ನು ಸರಿಯಾಗಿ ಕಲಿತು ಹದಗೊಂಡರೆ ಸರಿಯಾದ ಕ್ರಮದಲ್ಲಿ ಪದಗಳ ಬಳಕೆಯಾಗುತ್ತದೆ. ಹದವಿಲ್ಲದೇ ಪದವಿಲ್ಲ, ಹದವೆಂದರೆ ಮಾಗುವುದು. ಪರಿಪಕ್ವವಾಗುವುದು. ಇದು ಭಾಷೆಯ ಕಲಿಕೆಯಲ್ಲಿ ಬೇಕು.

"ಓಡುವ ಕುದುರೆ ತಪ್ಪಿದರೆ ನಡೆಸುವ ಸವಾರನದು ಅಧಿಕ ತಪ್ಪು", ವಿದ್ಯಾರ್ಥಿಗಳ ಕನ್ನಡ ಕಲಿಕೆಯ ಲೋಪಗಳಿಗೆ ಅಧ್ಯಾಪಕರು ಪಾಲುಗಾರರಾಗುತ್ತಾರೆ ಎಂಬುದನ್ನು ತಳ್ಳಿ ಹಾಕುವ ಹಾಗಿಲ್ಲ; ಜೊತೆಯಾಗಿ ಬಂದಿರುವ ಕಾನೂನಿನ ಸಡಲಿಕೆಗಳು ಕಾರಣವಾಗಿವೆ. ನಾಲ್ಕು ಐದು ದಶಕಗಳ ಹಿಂದೆ ಶಾಲಾ ಶಿಕ್ಷಣದಲ್ಲಿ ಬರಹ ಶುದ್ಧಿ, ವ್ಯಾಕರಣ ಶುದ್ಧಿ, ಅಕ್ಷರದ ಅಂದವನ್ನು ಅಂಕ ಕೊಡುವಾಗ ಗಣನೆಗೆ ತೆಗೆದುಕೊಳ್ಳುತ್ತಿದ್ದರು. ಇಂದು ಈ ಕ್ರಮವಿಲ್ಲ. ಭಾಷಾ ಶುದ್ಧಿಯನ್ನು ನೋಡಬೇಡಿ. ನಿಮಗೆ ಅರ್ಥವಾದರೆ ಪೂರ್ಣ ಅಂಕ ಕೊಡಿ ಎಂಬ ಸ್ಥಿತಿಗೆ ಬಂದಿದೆ. ಭಾಷಾ ಕಲಿಕೆಯು ಕೇವಲ ಅಂಕಗಳಿಗೆ ಸೀಮಿತವಾಗಿರುವುದು ದುರಂತ. ಹಿಂದೆ ವಿದ್ಯಾರ್ಥಿಗಳಿಗೆ ಬರವಣಿಗೆ ಶುದ್ಧವಾಗಿರಬೇಕು. ಅಂದವಾಗಿರಬೇಕು, ಉಚ್ಚಾರಣೆ ಸ್ಪಷ್ಟವಾಗಿರಬೇಕು, ಗಟ್ಟಿಯಾಗಿರಬೇಕು. ಅಕ್ಷರ ಸ್ಖಾಲಿತ್ಯರಹಿತವಾಗಿರಬೇಕು ಎಂದು ಹೇಳಿ ಅದನ್ನು ಅಧ್ಯಾಪಕರು ರೂಢಿಸುತ್ತಿದ್ದರು. ಈ ಕ್ರಮವನ್ನು ಇಂದಿನ ಶಿಕ್ಷಕ ವೃಂದದವರು, ಹೆತ್ತವರು ರೂಢಿಸಿಕೊಂಡರೆ ಭಾಷಾ ಕಲಿಕೆ ಹೆಚ್ಚು ಅರ್ಥಪೂರ್ಣವಾಗಬಹುದು.

ಬದುಕಿಗೆ ಒಲವು ಬೇಕು. ಓದಿನ ಹವ್ಯಾಸ ಬೇಕು :

ಒಲವಿನ ಬದುಕಿನಿಂದ ಮಾನವರು ನಿರ್ಮಾಣಗೊಳ್ಳುತ್ತಾರೆ. ಒಲವು ಉತ್ತಮ ಬರಹಗಳನ್ನು, ಪುಸ್ತಕಗಳನ್ನು ಓದುವುದರಿಂದ ಪ್ರಾಪ್ತವಾಗುತ್ತದೆ. ಓದುವ ಹವ್ಯಾಸವನ್ನು ಎಳವೆಯಿಂದಲೇ ಬೆಳೆಸಿಕೊಳ್ಳಬೇಕು. ಮಕ್ಕಳಿಗೆ ಓದುವ ಹವ್ಯಾಸದಲ್ಲಿ ತೊಡಗಿಕೊಳ್ಳುವಂಥ ಅವಕಾಶ ಕಲ್ಪಿಸಿ ಕೊಡಬೇಕು. ಕೇವಲ ಪರೀಕ್ಷೆಯ ಓದಿನಿಂದ ಅವರ ಹೃದಯ ಅರಳುವುದಿಲ್ಲ. ಇಂದು ನಾವು ನಮ್ಮ ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡಲು ಹೊರಟಿದ್ದೇವೆ. ಹೆತ್ತವರಿಗೆ ಗುರುಗಳಿಗೆ ಇದೇ ಹಂಬಲ. ಮಕ್ಕಳಿಗೆ ಬುದ್ಧಿಯೊಂದಿಗೆ ಹೃದಯವೂ ಇದೆ ಎಂಬುದನ್ನು ಮರೆತಿದ್ದೇವೆ. ಹೀಗಾಗಿಯೇ ಭಾವಜಡರಾಗಿ ಕೆಲವರು ರೂಪುಗೊಳ್ಳುತ್ತಿದ್ದಾರೆ. ಬುದ್ಧಿ ಭಾವಗಳ ಮೇಳವಿಲ್ಲದಿದ್ದರೆ ಬದುಕು ಬರಡು, ಬದುಕು ಅರಳುವ ಬದಲು ಕೆರಳುವಿಕೆಯ ಕಡೆಗೆ ಹೋಗುತ್ತದೆ. ಆಗ ವ್ಯಕ್ತಿ ಬದುಕಿನ ಪ್ರತಿಯೊಂದು ರಂಗದಲ್ಲೂ ಮುಗ್ಗರಿಸುತ್ತಾನೆ. ಹೀಗಾಗಬಾರದು ಎಂದಿದ್ದರೆ ಎಲ್ಲರೂ ಒಲವಿನ ಹೃದಯದವರಾಗಬೇಕು. ಒಲವು ಬದುಕಿನ ಪುಸ್ತಕವಾಗಬೇಕು. ಅದಕ್ಕಾಗಿಯೇ ವರಕವಿ ಬೇಂದ್ರೆಯವರ ಕವಿತೆಯ ಈ ಕೆಳಗಿನ ಸಾಲುಗಳನ್ನು – ನೆನಪಿನಲ್ಲಿ ಇಟ್ಟುಕೊಳ್ಳೋಣ.

ಒಲವೆಂಬ ಹೊತ್ತಿಗೆಯನೋದ ಬಯಸುವ ನೀನು
ಬೆಲೆಯೆಷ್ಟು ಎಂದು ಕೇಳುತಿಹೆ ಹುಚ್ಚ
ಹಗಲಿರುಳು ದುಡಿದರೂ ಹಲ ಜನುಮ ಕಳೆದರೂ
ನೀ ತೆತ್ತಲಾರೆ ಬರಿ ಅಂಚೆ ವೆಚ್ಚ ?

ಕನ್ನಡ ಸಾಹಿತ್ಯ ಪರಿಷತ್ತು :

ಕನ್ನಡ ನಾಡು, ಕನ್ನಡ ಭಾಷೆ, ಕನ್ನಡ ಸಾಹಿತ್ಯ, ಕನ್ನಡಿಗರ ಸಂಸ್ಕೃತಿ ಇವೆಲ್ಲವನ್ನು ಕಟ್ಟಿ ಬೆಳೆಸುವ ಹಿರಿದಾದ ಉದ್ದೇಶದಿಂದ ಕಳೆದ ಶತಮಾನದ ಆದಿಯಲ್ಲಿ ಅಂದರೆ ೧೯೧೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ರೂಪುಗೊಂಡಿತು. ನೂರರ ಗಡಿ ಮುಟ್ಟಿ ಶತಮಾನೋತ್ಸವವನ್ನು ಸಹ ಅದ್ದೂರಿಯಾಗಿ ಆಚರಿಸಲಾಯಿತು. ಈ ಸಾಹಿತ್ಯ ಪರಿಷತ್ತು ನಾಡು,

ನುಡಿ, ಸಾಹಿತ್ಯ ಸಂಸ್ಕೃತಿಗಳ ಶಕ್ತಿ ಕೇಂದ್ರವಾಗಿ ಕೆಲಸ ಮಾಡುತ್ತಿದೆ. ಇದು ಜಾತಿ– ಮತ, ಪ್ರದೇಶ, ರಾಜಕೀಯ ಪಕ್ಷಗಳ ಎಲ್ಲೆಯನ್ನು ಮೀರಿ ಕನ್ನಡಿಗರೆಲ್ಲರನ್ನು ಒಂದಾಗಿಸುವ ಸಮಸ್ತ ಕನ್ನಡಿಗರ ಸಂಸ್ಥೆ. ಇತ್ತೀಚಿನ ವರ್ಷಗಳಲ್ಲಿ ನಮ್ಮನ್ನಾಳಿದ ಸರಕಾರಗಳು ಸಾಹಿತ್ಯ ಪರಿಷತ್ತಿಗೆ ಅನುದಾನವನ್ನು ಬಿಡುಗಡೆ ಮಾಡಿ ಇತ್ತೀಚಿನ ವರ್ಷಗಳಲ್ಲಿ ಸಮ್ಮೇಳನಗಳು ನಡೆಯಲು ಸಹಾಯ ಮಾಡುವುದು ಸಂತಸದ ಸಂಗತಿ. ಈ ಕಾರಣದಿಂದಾಗಿಯೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಜಿಲ್ಲಾ ಸಾಹಿತ್ಯ ಸಮ್ಮೇಳನ, ತಾಲ್ಲೂಕು ಸಾಹಿತ್ಯ ಸಮ್ಮೇಳನ ಸಾಂಗವಾಗಿ ನಡೆದು ಬರುತ್ತಿವೆ. ಇನ್ನೊಂದು ಅಂಶವನ್ನು ಇಲ್ಲಿ ತೆರೆದಿಡಬೇಕು. ಸರಕಾರದ ಅನುದಾನ ಮಿತವಾಗಿರುವುದರಿಂದ ಸ್ಥಳೀಯ ದಾನಿಗಳು, ಸಂಘ ಸಂಸ್ಥೆಗಳು ಆರ್ಥಿಕವಾಗಿ ಸಹಾಯ ಮಾಡುವುದರಿಂದ ಕಾರ್ಯಕ್ರಮಗಳು ಹೆಚ್ಚು ಪ್ರಯೋಜನಕಾರಿಯಾಗಿ ಆಗುಗೊಳ್ಳುತ್ತಿವೆ. ಕನ್ನಡದ ಕೆಲಸಕ್ಕಾಗಿ ಆರ್ಥಿಕ ಸಹಾಯ ಮಾಡುವ ದಾನಿಗಳನ್ನು ಸಂಘ ಸಂಸ್ಥೆಗಳನ್ನು ಅಭಿನಂದಿಸುವೆನು.

ಇದು ಅಂಕೋಲ ತಾಲ್ಲೂಕಿನ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನ. ಈ ಹಿಂದೆ ಆರು ಜನರು ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವವನ್ನು ಹೊಂದಿದ್ದಾರೆ ಇವರೆಲ್ಲರನ್ನು ಅಭಿನಂದಿಸುವೆನು. ಜಿಲ್ಲೆಯ ಸಾಹಿತ್ಯ ಕೃಷಿ ಅಂಕೋಲಾ ತಾಲ್ಲೂಕು ಸಾಹಿತ್ಯ ಕೃಷಿಯಲ್ಲಿ ಸಮೃದ್ಧವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಕೃಷಿಯ ಕಣಜಕ್ಕೆ ಅಂಕೋಲಾ ತಾಲ್ಲೂಕಿನ ಸಾಹಿತ್ಯ ಕೃಷಿಯ ಕೊಡುಗೆ ವಿಪುಲವಾದದ್ದು. ಈ ನೆಲದ ಸಾಹಿತಿಗಳನ್ನು ಅಭಿನಂದಿಸುವೆನು.

ಅಂಕೋಲೆಯ ಕರ್ನಾಟಕ ಸಂಘವು ಕನ್ನಡನಾಡು ಉದಯವಾಗುವ ಪೂರ್ವದಲ್ಲಿ ಅಂದರೆ ೧೯೫೭ರಲ್ಲಿ ಸ್ಥಾಪನೆಗೊಂಡಿದೆ. ಅಂದಿನಿಂದ ಇಂದಿನವರೆಗೂ ಕನ್ನಡ ಭಾಷೆ, ಸಾಹಿತ್ಯ, ಶಿಕ್ಷಣ, ಸಂಸ್ಕೃತಿ ಕ್ಷೇತ್ರದಲ್ಲಿ ಅಂಕೋಲೆಯ ಜನರಿಗೆ ವಿಶಿಷ್ಟ ಕೊಡುಗೆಯನ್ನು ಕೊಡುತ್ತ ಬಂದಿದೆ. ಈ ಸಂಘವನ್ನು ಕಟ್ಟಿ ಬೆಳೆಸಿದ ಹಿರಿಯರನ್ನು ಸ್ಮರಿಸಿರುವೆನು.

ಅಂಕೋಲಾದ ತಾಲ್ಲೂಕು ಭಾವೈಕ್ಯದ ನೆಲ :

ಒಂದು ತಾಲ್ಲೂಕು ಬೆಳೆಯಬೇಕಾದರೆ, ಅಲ್ಲಿಯ ಜನರು ನೆಮ್ಮದಿಯಿಂದ ಬದುಕಬೇಕಾದರೆ ಆ ನೆಲದಲ್ಲಿ ಬದುಕುವ ಜನರ ಮನಸ್ಸು ಬೆಳೆಯಬೇಕು. ಭಾವೈಕ್ಯದ ಭಾವ ಗಟ್ಟಿಗೊಳ್ಳಬೇಕು. ಸಣ್ಣತನದ ಸಂಕೋಚಗಳು ದೂರವಾಗಬೇಕು. ತನ್ನ ನೆಲ, ತನ್ನ ಭಾಷೆ, ತನ್ನ ಜನರು ಎಂಬ ಒಗ್ಗಟ್ಟಿನ ಸೂತ್ರವಿರಬೇಕು. ಈ ಹಿನ್ನೆಲೆಯಲ್ಲಿ ಅಂಕೋಲೆಯ ಜನರು ಭಾಗ್ಯವಂತರು. ಇಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತರೆಲ್ಲ ಒಟ್ಟಾಗಿ ಬದುಕುತ್ತಿದ್ದಾರೆ. ಈ ನೆಲದಲ್ಲಿ ಅಸಂಖ್ಯ ಜಾತಿಗಳಿದ್ದರೂ ಸೌಹಾರ್ದತೆಯಿಂದ ಬದುಕು ನಡೆಸುತ್ತಿದ್ದಾರೆ. ಇದು ನಿತ್ಯನಿರಂತರವಾಗಿರಲಿ. ಈ ತಿಳಿವನ್ನು ಶಾಶ್ವತವಾಗಿ ಹೊಂದಲು ನಮ್ಮ ಹತ್ತಿರದ ಕವಿ ಹನೇಹಳ್ಳಿಯ ಗಂಗಾಧರ ಚಿತ್ತಾಲರ ಪದ್ಯದ ಈ ಸಾಲುಗಳನ್ನು ನೆನಪಿನಲ್ಲಿ ಇಡೋಣ.

ಮನುಕುಲದ ರಕ್ತಮಯ ಇತಿಹಾಸ ಕೂಗಿತ್ತು
ನೆಲವು ನಂದನವಾಗಲೇನು ಬೇಕು?
ತಿಳಿವು ತುಂಬಿದ ಕಣ್ಣು ಒಲವು ತುಂಬಿದ ಎದೆಯು
ಛಲವನರಿಯದ ಬದುಕು, ಇಷ್ಟೆ ಸಾಕು'

ಎಲ್ಲ ರೋಗಗಳು ಮೊದಲು ಹುಟ್ಟುವುದು ಮನಸ್ಸಿನಲ್ಲಿ, ಅಂಥ ಎಲ್ಲ ಘಟನೆಗಳು ಮೊದಲು ರೂಪುಗೊಳ್ಳುವುದು ಮನಸ್ಸಿನಲ್ಲಿ. ಮನಸ್ಸನ್ನು ಸರಿಯಾಗಿ ಇಟ್ಟುಕೊಳ್ಳೋಣ. ಮನುಜ ಮತ ವಿಶ್ವ ಪಥದಲ್ಲಿ ನಂಬಿಗೆಯಿಡೋಣ. ಅಂಕೋಲೆಯ ಸಾಹಿತ್ಯ, ಶೈಕ್ಷಣಿಕ, ಸಾಂಸ್ಕೃತಿಕ ಸಾಂಘಿಕ ವಲಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಂಕೋಲೆಯನ್ನು ಅಪಾರವಾಗಿ ಪ್ರೀತಿಸಿದ ಶ್ರೀ ಶ್ಯಾಮ ಹುದ್ದಾರ, ಶ್ರೀ ವಿ. ಜೆ. ನಾಯಕ, ಶ್ರೀ ವಿ. ಎ. ಜೋಶಿ, ಶ್ರೀ ಜಿ. ಪಿ. ನಾಯಕ ಅವರು ನಮ್ಮನ್ನು ಆಗಲಿದ್ದಾರೆ. ಅವರ ಸೇವೆಯನ್ನು ಸ್ಮರಿಸುತ್ತ ಅವರ ದಿವ್ಯಾತ್ಮಕ್ಕೆ ಶಾಂತಿಯನ್ನು ಕೋರುವೆನು.

ಅಂಕೋಲೆಯ ಬೇಕುಗಳ ಬಗ್ಗೆ :

ಈ ಸಂದರ್ಭದಲ್ಲಿ ತಾಲ್ಲೂಕಿನ ಅಗತ್ಯಗಳ ಬಗ್ಗೆ ತೆರೆದ ಕಣ್ಣಿನಿಂದ ನೋಡಿ ಒಮ್ಮೆ ಚಿಂತಿಸುವುದು ಒತ್ತಾಯಿಸುವುದು ಅಗತ್ಯ ಅನಿಸುತ್ತದೆ. ಅಂಕೋಲಾ ಪಟ್ಟಣ ಪಂಚಾಯತ್ ಪುರಸಭೆಯಾಗಿ ಪರಿವರ್ತನೆಯಾಗಿದೆ. ಜನಸಂಖ್ಯೆ ಹೆಚ್ಚಾಗಿದೆ. ಬೇಕುಗಳು ಹೆಚ್ಚಾಗಿವೆ. ಸಮಸ್ಯೆಗಳು ಹೆಚ್ಚಾಗಿವೆ. ಈ ಬೇಡಿಕೆ ಎಲ್ಲ ಹಂತದ ಜನಪ್ರತಿನಿಧಿಗಳ ಕಿವಿಗೆ ಮುಟ್ಟಬೇಕು, ಕಾರ್ಯಪ್ರವೃತ್ತರಾಗಬೇಕು. ಸ್ವಾತಂತ್ರ್ಯ ಬಂದು ಹಲವು ದಶಕಗಳೇ ಸಂದರೂ ಅಂಕೋಲಾಕ್ಕೆ ಸರಕಾರದಿಂದ

ಯಾವ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಬಂದಿಲ್ಲ. ಸರಿಯಾದ ವೈದ್ಯಕೀಯ ಸೌಲಭ್ಯಗಳಿಲ್ಲ, ಆಸ್ಪತ್ರೆಗಳಿಲ್ಲ. ಸಾರಿಗೆ ವ್ಯವಸ್ಥೆಯಲ್ಲೂ ಹೇಳಿಕೊಳ್ಳುವ ಉತ್ತಮತೆ ಇಲ್ಲ. 'ಕರ್ನಾಟಕ ಬಾರ್ಡೋಲಿ' ಎಂದು ಹೆಸರುಗೊಂಡಿರುವ ನಮ್ಮ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಯೋಧರ ಸ್ಮರಣಾರ್ಥ ಪ್ರತಿವರ್ಷ ಕಾರ್ಯಕ್ರಮವೊಂದನ್ನು ಆಯೋಜಿಸಿ ಯೋಧರಿಗೆ ಗೌರವ ಸಲ್ಲಿಸುವ ಕಾರ್ಯ ನಡೆಯಬೇಕಾಗಿದೆ. ನನ್ನ ಇತಿಮಿತಿಯ ಅರಿವಿನೊಂದಿಗೆ ಕೆಲವೊಂದು ಅಂಶಗಳನ್ನು ಪ್ರಸ್ತಾಪಿಸಿರುವೆನು. ಉಳಿದಂತೆ ಕೆಲವೊಂದು ಗೋಷ್ಠಿಗಳಲ್ಲಿ ಹೊರಹೊಮ್ಮಬಹುದು.

ವಿನಯಾರ್ಥ : ಅಂಕೋಲೆಯ ಕನ್ನಡಾಭಿಮಾನಿಗಳೆ, ನಿಮ್ಮೆಲ್ಲರ ಮುಂದೆ ಸಮ್ಮೇಳನಾಧ್ಯಕ್ಷ ಸ್ಥಾನದಲ್ಲಿ ಇಷ್ಟು ಹೊತ್ತು ಮಾತನಾಡುವ ಅವಕಾಶವನ್ನು ಕಲ್ಪಿಸಿಕೊಟ್ಟ ಎಲ್ಲರಿಗೂ ಮತ್ತೊಮ್ಮೆ ಕೃತಜ್ಞತೆಯನ್ನು ಸಲ್ಲಿಸಿರುವೆನು. ನಮ್ಮ ಬದುಕು ಹುಟ್ಟಿದ ನೆಲ, ಜನರು, ಭಾಷೆ, ಸಂಸ್ಕೃತಿಯಿಂದ ರೂಪುಗೊಳ್ಳುತ್ತದೆ. ಇವೆಲ್ಲವುಗಳ ಋಣ ನನ್ನ ಮೇಲಿದೆ. ಆದುದರಿಂದ ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ ಅವರ ಕವಿತೆಯ ಸಾಲಗಳಿಂದಲೆ ಋಣಕ್ಕೆ ಕೃತಜ್ಞತೆ ಹೇಳುವೆನು.

ಎನಿತು ಜನ್ಮದಲಿ ಎನಿತು ಜೀವರಿಗೆ
ನಾವು ಋಣಿಯೋ
ತಿಳಿದು ನೋಡಿದರೆ ಬಾಳು ಎಂಬುದಿದು
ಋಣದ ರತ್ನದ ಗಣಿಯೋ

ನಿಮಗೆಲ್ಲ ನನ್ನ ಭಾವದೇಗುಲದಿ ನಿತ್ಯ ನಂದಾದೀಪ, ಶರಣು ಶರಣೆಂಬುದೊಂದೇ ಕೊನೆಯ ಸೊಲ್ಲು. ರಾಷ್ಟ್ರಕವಿ ಗೋವಿಂದ ಪೈ ಅವರ ಪ್ರಾರ್ಥನಾ ಪದ್ಯದ ಸಾಲುಗಳೊಂದಿಗೆ ನನ್ನ ಭಾಷಣ ಮುಗಿಸುವೆನು.

ತಾಯೆ ಬಾರ ಮೊಗವ ತೋರ ।
ಕನ್ನಡಿಗರ ಮಾತೆಯೇ ।
ಹರಸು ತಾಯೆ ಸುತರ ಕಾಯೆ ।
ನಮ್ಮ ಜನ್ಮದಾತೆಯೇ

ಸಿರಿಗನ್ನಡಂ ಗೆಲ್ಗೆ, ಬಾಳ್ಗೆ

'ನಾನು' ನಾನಲ್ಲ !?

ಬರಿದಾಗಿ ಬಂದೆ ನಾ ಬರಿಗೈಲಿ ಹೋಗುವೆನು
ಜೀವನವೆ ಬರಿದೆಂದು ತಿಳಿವೆಯೇನು ?
ಜೀವ ಕೋಟಿಗಳಲ್ಲಿ ಮಾನವನೆ ಅತಿ ಶ್ರೇಷ್ಠ
ಬರಡಲ್ಲ ಜೀವನವು ತಿಳಿಯದೇನು ?

ಮಡದಿ ಮಕ್ಕಳ ಭಾಗ್ಯ ಸಂಸಾರ ಸುಖ ಭೋಗ
ಸಿರಿಯೇ ಸ್ಥಿರ ಸೊತ್ತೆಂದು ತಿಳಿವೆಯೇನು ?
ಬಂದೆ ನೀ ಏಕಾಂಗಿ ಪೋಪೆ ಇಲ್ಲದೆ ಲುಂಗಿ ।
ಗೈದ ಪುಣ್ಯವೇ ಸಿರಿಯು ತಿಳಿಯದೇನು ?

ಅಧಿಕಾರ ಸಂಪತ್ತಿನಾ ತೃಪ್ತಿ ಸಂತಸವೇ
ಸಗ್ಗ ಸುಖವೆಂದು ನೀ ತಿಳಿವೆಯೇನು ?
ಕೋಟಿ ಜನುಮಗಳ ಬಾಳ ಪಯಣದ ಕೊನೆಯ
ಮೋಕ್ಷ ಸಿದ್ಧಿಯೇ ಸಗ್ಗ ತಿಳಿಯದೇನು ?

ಮಾಯಾ ಲೋಕದ ಸೃಷ್ಟಿ ! ಈ ದೃಷ್ಟಿ ದೋಷದಿ
"ನಾನು" ನಾನೆಂದು ನಿ ತಿಳಿವೆಯೇನು ?
ಎಲ್ಲ ದೇವರ ಲೀಲೆ ಶರಣೆಂದು ಇರು ಮನವೆ
ಗೊಂಬೆಯಾಟದ ಮರ್ಮ ತಿಳಿಯದೇನು ?


– ಎನ್. ಬಿ. ಕಾಮತ್
(ಜ್ಯೋತ್ಸ್ನಾ ಸಂಕಲನದಿಂದ)

ಅಂಕೋಲಾ ತಾಲೂಕಾ ಎಂಟನೇ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೦೮-೦೧-೨೦೧೯

ಸಮ್ಮೇಳನದ ಸರ್ವಾಧ್ಯಕ್ಷರು

ಮಕ್ಕಳ ಕವಿ : ಶ್ರೀ ನಾಗೇಂದ್ರ ನಾಯಕ ತೊರ್ಕೆ



ಅಂಕೋಲೆಯ ಎಂಟನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಶ್ರೀ ನಾಗೇಂದ್ರ ನಾಯಕ ಅವರು ಮೂಲತಃ ಕುಮಟಾ ತಾಲೂಕಿನ ತೊರ್ಕೆ ಊರಿನವರಾದರೂ ಸಹ ವೃತ್ತಿ ಹಾಗೂ ಪ್ರವೃತ್ತಿಯಲ್ಲಿ ಅಂಕೋಲೆಯ ನಿವಾಸಿಗಳಾಗಿದ್ದಾರೆ. ಸರ್ಕಾರಿ ಶಾಲಾ ಶಿಕ್ಷಕರಾಗಿ ಉತ್ತರ ಕನ್ನಡ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರೂ ಸಹ ಪ್ರವೃತ್ತಿಯಲ್ಲಿ ಅಂಕೋಲೆಯ ಸಾಹಿತ್ಯ ಕ್ಷೇತ್ರದಲ್ಲಿ ಸದಾ ಕ್ರಿಯಾಶೀಲರಾಗಿದ್ದಾರೆ.

'ಮಗು-ನಗು', 'ಗುಬ್ಬಿಗೂಡು', 'ಹೆಜ್ಜೆಗೊಂದು ಹೂವು', 'ಅರಳುವ ಹೂವುಗಳು', 'ಮಕ್ಕಳ ಲೋಕ', 'ನೂರೊಂದು ಕವಿತೆಗಳು' ಮುಂತಾದ ಮಕ್ಕಳ ಕವನ ಸಂಕಲನಗಳನ್ನು ಪ್ರಕಟಿಸಿರುವ ಇವರು ಸಾಹಿತ್ಯ ವಲಯದಲ್ಲಿ 'ಮಕ್ಕಳ ಸಾಹಿತಿ' ಎಂದೇ ಗಮನ ಸೆಳೆದವರು.

ಆದರ್ಶ ನಿಧಿ, ಚುಟುಕು ಚಿತ್ತಾರ ಮತ್ತು ಅಕ್ಷರಗಾನ, ಅರಿವು, ನಾಡವರು ಒಂದು ಜನಾಂಗೀಯ ಇತಿಹಾಸ, ಪ್ರಸ್ತುತ, ವಿಧಿಯಾಟ ಕಾದಂಬರಿ, ಶ್ರೀ ರಾಘವೇಂದ್ರ ಚಿಂತಾಮೃತ ಕಾವ್ಯ, ಶಿರಡಿ ಸಾಯಿ ನಾಮಾಮೃತ ಮುಂತಾದ ಇತರೆ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

ಅಂಕೋಲಾ ಕರ್ನಾಟಕ ಸಂಘದ ಅಧ್ಯಕ್ಷರಾಗಿ, ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಘಟಕದ ಕೋಶಾಧ್ಯಕ್ಷರಾಗಿ, ಸೇವೆಸಲ್ಲಿಸಿರುವ ಇವರು ಡಾ. ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ, ತಾಲೂಕು ಚುಟುಕು ಸಾಹಿತ್ಯ ಪರಿಷತ್, ಶ್ರೀ ಗುರು ರಾಘವೇಂದ್ರ ಮಂದಿರ ಮುಂತಾದ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ತಮ್ಮ ಸೃಜನಶೀಲ ಸೇವೆಯನ್ನು ನೀಡಿದ್ದಾರೆ. ಬದುಕಿನಲ್ಲಿ ಸರಳತೆ ಹಾಗೂ ಸೌಜನ್ಯತೆಯನ್ನು ರೂಡಿಸಿಕೊಂಡಿರುವ ನಾಗೇಂದ್ರ ನಾಯಕ ಅವರಿಗೆ ಅಂಕೋಲಾ ತಾಲೂಕಾ ಆಡಳಿತದಿಂದ ಸಾಹಿತ್ಯ ಕ್ಷೇತ್ರದ ಸೇವೆಗಾಗಿ ರಾಜ್ಯೋತ್ಸವ ಸನ್ಮಾನ ಲಭ್ಯವಾಗಿದೆ.

ದಿನಾಂಕ ೦೮-೦೧-೨೦೧೯ರಂದು ತಮ್ಮ ೭೮ನೇ ವಯಸ್ಸಿನಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗುವದರೊಂದಿಗೆ ಮಗುವಿನ ಮನದಿಂದ ಸಮ್ಮೇಳನವನ್ನು ಪ್ರಫುಲ್ಲಗೊಳಿಸಿದರು.

ಅವರ ಕವನದ ಸಾಲುಗಳು ಹೀಗಿವೆ :

ತೊದಲು ಮಾತು ಕೇಳಿರಿ ಕುಳಿತು
ಇಳಿಯುವುದು ಮನದ ಭಾರವು......
ಆಗಸ ಹೋಲುವ ಎಳೆಯರ ಮನವು
ತಿಳಿಯಿರಿ ಬಲು ನಿರ್ಮಲವು......
ಗೆಳೆಯರು ಕೂಡಿ ಪ್ರೀತಿಸಿ ನೋಡಿ
ಜೀವನ ಜೇನಿನ ಗೂಡು.....

ಶ್ರೀ ನಾಗೇಂದ್ರ ನಾಯಕ ತೊರ್ಕೆ ಅವರ ಸರ್ವಾಧ್ಯಕ್ಷೀಯ ಭಾಷಣ

ಆತ್ಮೀಯ ಕನ್ನಡ ಸಾಹಿತ್ಯ ಪ್ರೇಮಿಗಳೆ, ಉತ್ತರಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಅರವಿಂದ ಕರ್ಕಿಕೋಡಿ ಅವರೆ, ಅಂಕೋಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ। ಪ್ರಕಾಶ ನಾಯಕ ಅವರೆ, ಸಮ್ಮೇಳನದ ಯಶಸ್ಸಿಗಾಗಿ ಚೈತನ್ಯ ತುಂಬುತ್ತಿರುವ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಪ್ರೊ. ಕೆ.ವಿ. ನಾಯಕ ಅವರೆ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ರವೀಂದ್ರ ಕೇಣಿ ಅವರೆ, ರಾಜ್ಯ ಸಮಿತಿಯ ಅಧ್ಯಕ್ಷರೆ, ಪದಾಧಿಕಾರಿಗಳೆ, ಸಮ್ಮೇಳನದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ವಿಠ್ಠಲ ಗಾಂವಕಾರ ಅವರೆ, ಇಂದಿನ ಸಮ್ಮೇಳನದ ಉದ್ಘಾಟಕರಾದ ಶ್ರೀ ಕುಂ. ವೀರಭದ್ರಪ್ಪ ಅವರೆ, ಮುಖ್ಯ ಅತಿಥಿಗಳಾದ ಡಾ॥ ಪ್ರಜ್ಞಾ ಮತ್ತಿಹಳ್ಳಿ ಅವರೆ, ವೇದಿಕೆಯ ಮೇಲಿರುವ ಎಲ್ಲ ಗಣ್ಯರೆ, ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳ ಹಾಗೂ ಆಜೀವ ಸದಸ್ಯರೆ, ಸಮ್ಮೇಳನದ ಜವಾಬ್ದಾರಿ ಹೊತ್ತ ಎಲ್ಲ ಪದಾಧಿಕಾರಿಗಳೆ, ಎಲ್ಲ ಬಂಧು–ಭಗಿನಿಯರೆ, ಅಂಕೋಲೆಯ ಮಹಾಜನಗಳೆ, ವಿದ್ಯಾರ್ಥಿಗಳೆ, ಮಾಧ್ಯಮ ಮಿತ್ರರೆ ಎಂಟನೆಯ ನುಡಿಹಬ್ಬಕ್ಕೆ ತಮಗೆಲ್ಲ ಸ್ವಾಗತ ಕೋರುತ್ತ ಶುಭ ಹಾರೈಸುವೆ.

ಈ ದಿನ ಶುಭದಿನ, ಸೃಷ್ಟಿ ಸೌಂದರ್ಯದ ಬೀಡಾದ ನಮ್ಮ ಅಂಕೋಲೆಯಲ್ಲಿ ಸಾಹಿತ್ಯದ ಸಮಾರಾಧನೆ, ನುಡಿಜಾತ್ರೆ, ಹೊಸ ಅನುಭವ, ಜಾಗೃತಿಯ ದಿವ್ಯ ಚೇತನದ ಶುಭ ಸಂದೇಶದ ಸ್ಮರಣೀಯ ದಿನವಾಗಿದೆ. ಸಾಹಿತ್ಯಾಸಕ್ತರು, ಅಭಿಮಾನಿಗಳು ಎಲ್ಲ ಸೇರಿ ನಾಡ–ನುಡಿಯ ಸರ್ವತೋಮುಖ ಅಭಿವೃದ್ಧಿಯ ಚಿಂತನ–ಮಂಥನ ನಡೆಸುವ ಅವಕಾಶ ಒದಗಿರುವುದು ನನಗಿಂದು ಅಭಿಮಾನದ ಸಂಗತಿಯಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಸತ್ಯವಾಗಿಯೂ ನಾನೊಬ್ಬ ವಿದ್ಯಾರ್ಥಿ. ನಮ್ಮ ಅಂಕೋಲೆ ಹಾಗೂ ಅದರ ಪರಿಸರದಲ್ಲಿ ಹಾಗೂ ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುತ್ತಿರುವ ಅಂಕೋಲೆಯ ಅನೇಕ ವಿದ್ವಾಂಸರಿದ್ದಾರೆ. ತೂಕವುಳ್ಳ ಉತ್ತಮ ಸಾಹಿತ್ಯ ಕೃತಿಗಳನ್ನು ಬೆಳಕಿಗೆ ತಂದವರಿದ್ದಾರೆ. ಕಥೆ, ನಾಟಕ, ಹನಿಗವನ, ಚುಟುಕು ಮುಂತಾದ ಮೌಲಿಕ ಕೃತಿಗಳನ್ನು ನಾಡಿಗೆ ನೀಡಿದ ಸಾಕಷ್ಟು ಜನರಿದ್ದಾರೆ. ಅಲ್ಲದೆ ಇತ್ತೀಚೆಗೆ ಸಾಕಷ್ಟು ಲೇಖಕಿಯರು ತಮ್ಮ ಪ್ರತಿಭೆಯನ್ನು ತೋರಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಸಾಗರದಲ್ಲಿ ನಾನೊಂದು ಬಿಂದು. ನನ್ನ ವಯಸ್ಸಿನ ಹಿರಿತನದಿಂದ ಮತ್ತು ಸುಮಾರು ಮೂವತ್ತು ವರ್ಷಗಳಿಂದ ಇಲ್ಲಿಯ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಕ್ರಿಯ ಕಾರ್ಯಕರ್ತನಾಗಿ ಅನೇಕ ಹುದ್ದೆಗಳಲ್ಲಿ ಗುರುತಿಸಿಕೊಂಡಿರುವುದರಿಂದಲೋ ಏನೋ ಅಂಕೋಲೆಯ ಆತ್ಮೀಯ ಸಾಹಿತ್ಯ ಮಿತ್ರರು ತೋರಿಸಿರುವ ಪ್ರೀತಿ–ವಿಶ್ವಾಸದ ಪ್ರತೀಕವಾಗಿ ಇಂದಿನ ಎಂಟನೆಯ ಕನ್ನಡ ಸಾಹಿತ್ಯ ಸಮ್ಮೇಳದ ಸರ್ವಾಧ್ಯಕ್ಷತೆಯ ಗೌರವವನ್ನು ನೀಡಿದ್ದಾರೆ. ತಾವು ನೀಡಿರುವ ಈ ಗೌರವವನ್ನು ನಮ್ರತೆಯಿಂದ ಸ್ವೀಕರಿಸಿದ್ದೇನೆ. ನುಡಿಹಬ್ಬಕ್ಕೆ ಬಂದ ತಮಗೆಲ್ಲರಿಗೂ ಶಿರಬಾಗಿ ವಂದಿಸುತ್ತೇನೆ.

ಸಹೋದರ, ಸಹೋದರಿಯರೆ, ನಾನು ಜನಿಸಿದ್ದು ಕುಮಟಾ ತಾಲೂಕಿನ ಸುಶಿಕ್ಷಿತ ಊರಾದ ತೊರ್ಕೆಯಲ್ಲಿ. ದಿವಂಗತ ನಾರಾಯಣ ತೊರ್ಕೆ ಹಾಗೂ ಸಾವಿತ್ರಿ ಇವರ ಹಿರಿಯ ಮಗನಾಗಿ ಹುಟ್ಟಿದ್ದು ನನ್ನ ಪುಣ್ಯವಾಗಿದೆ. ಇಂದು ನಾನು, ನನ್ನ ಕುಟುಂಬ ವಾಸವಾಗಿರುವುದು ಸ್ವಾತಂತ್ರ್ಯದ ಕರ್ಮಭೂಮಿಯಾಗಿರುವ ಅಂಕೋಲೆಯ ಪುಣ್ಯನೆಲದಲ್ಲಿ. ಈಗ ನನಗೆ ಎಪ್ಪತ್ತೇಳು ವರ್ಷ ದಾಟಿದೆ. ಇದರಲ್ಲಿ ಸುಮಾರು ನಲವತ್ತು ವರ್ಷಕ್ಕೂ ಮೇಲ್ಪಟ್ಟು ನನ್ನನ್ನು ಸಲುಹಿದ ತಾಲೂಕಿದು. ಹೀಗಾಗಿ ಕುಮಟಾ–ಅಂಕೋಲಾ ಇವೆರಡೂ ನನ್ನೆರಡು ಕಣ್ಣುಗಳಿದ್ದ ಹಾಗೆ. ನನ್ನ ಸಾಹಿತ್ಯ ಕೃಷಿಗೆ ನೀರೆರೆದು ಪೋಷಿಸಿದವರು ಇಲ್ಲಿಯ ಸಾಹಿತ್ಯ ಬಂಧುಗಳು. ಅಲ್ಲದೆ ಇಲ್ಲಿಯ ತಾಲೂಕಾಡಳಿತ ಕನ್ನಡ ರಾಜ್ಯೋತ್ಸವ ಸನ್ಮಾನ ಪುರಸ್ಕಾರವನ್ನು ನೀಡಿ ಗೌರವಿಸಿದೆ. ತನ್ನ ಮಡಿಲಲ್ಲಿ ಪ್ರೀತಿ ವಿಶ್ವಾಸ ತೋರಿದ ಈ ಊರು ನನ್ನದೆಂಬ ಅಭಿಮಾನವಿದೆ.

ನಾನೊಬ್ಬ ನಿವೃತ್ತ ಶಿಕ್ಷಕ. ವಿದ್ಯಾರ್ಥಿಗಳಿಗೆ ಜ್ಞಾನದ ಬೆಳಕನ್ನು ನೀಡಿ ಅವರ ಪ್ರೀತಿಗೆ ಪಾತ್ರನಾಗಿ ಬಾಳುವುದೇ ಶಿಕ್ಷಕನ ಕರ್ತವ್ಯ. ಉತ್ತಮ ಶಿಕ್ಷಣ ನೀಡಿದಾಗಲೇ ಗುರುಸ್ಥಾನಕ್ಕೆ ಮೆರಗು. ಜಿಲ್ಲೆಯ ಅನೇಕ ತಾಲೂಕುಗಳಲ್ಲಿ ಕೆಲಸ ಮಾಡಿದ್ದೇನೆ. ಅದರಲ್ಲಿ ಧನ್ಯನಾಗಿದ್ದೇನೆ. ಸೇವಾನಿವೃತ್ತಿಯ ನಂತರ ಸಾಂಸ್ಕೃತಿಕ-ಸಾಹಿತ್ಯಿಕ ಕಾರ್ಯಗಳಲ್ಲಿ ನನ್ನನ್ನು ತೊಡಗಿಸಿಕೊಂಡೆ, ಅದರಲ್ಲಿ ತೃಪ್ತಿಯನ್ನು ಕಂಡಿರುವೆ.

ಅಂಕೋಲೆಯಲ್ಲಿ ನಿಸರ್ಗ ಚೆಲುವಿನ ಶ್ರೀಮಂತಿಕೆ ಹಾಗೂ ಭವ್ಯತೆಯನ್ನು ಕಾಣಬಹುದು. ಉದ್ದ ಕರಾವಳಿ ನಮ್ಮ ಆರ್ಥಿಕ ಸೌಭಾಗ್ಯಕ್ಕೆ ಕಾರಣವೆನ್ನಬಹುದು. ಇಲ್ಲಿಯ ಕರಾವಳಿಯ ಉದ್ದಕ್ಕೂ ಮೈಚಾಚಿಕೊಂಡಿರುವ ಬೆಟ್ಟ-ಗುಡ್ಡಗಳು, ಕಡಲ ಕಿನಾರೆಗಳು ನಿಸರ್ಗ ವೈಭವವನ್ನು ಸಾರುತ್ತಲಿವೆ. ಇಲ್ಲಿಯ ಹಾರವಾಡ, ಬೇಲೇಕೇರಿ, ಬೆಳಂಬಾರ, ಹೊನ್ನೇಬೈಲ, ಮಂಜಗುಣಿಗಳ ಸಾಗರ ಅತಿ ಮನೋಹರ. ಇಲ್ಲಿಯ ಸೂರ್ಯಾಸ್ತವನ್ನು ನೋಡಿಯೇ ತಿಳಿಯಬೇಕು. ಹೀಗಾಗಿ ಇದು ಪ್ರವಾಸಿಗರ ತಾಣವಾಗಿದೆ. ಅಂಕೋಲೆಯ ಸುಗ್ಗಿ ಕುಣಿತ, ತಾರ್ಲೆ ಕುಣಿತಗಳು ನಾಡಿನಲ್ಲಿಯೇ ಪ್ರಸಿದ್ಧವಾಗಿವೆ. ಹಗರಣಗಳು ಮನಸ್ಸಿಗೆ ಮುದಕೊಡುತ್ತವೆ. ಇಲ್ಲಿ ನಡೆಯುವ ಬಂಡಿಹಬ್ಬ, ದೀಪೋತ್ಸವ ಮುಂತಾದವು ಜನ- ಮನ ರಂಜಿಸುತ್ತವೆ. ಇಂತಹ ಸಾಂಸ್ಕೃತಿಕ ಉತ್ಸವಗಳು ಇಲ್ಲಿಯ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಇಲ್ಲಿ ಹರಿಯುವ ಗಂಗಾವಳಿ ನದಿಗುಂಟ ಬೆಳದಿಂಗಳ ಚೆಲುವಿನಲ್ಲಿ ದೋಣಿ ಪರ್ಯಟನ ಮಾಡಿದಾಗ ಆಗುವ ಸಂತೋಷವು ಅಪ್ಪಿಷ್ಟಲ್ಲ. ಈ ನದಿ ದಂಡೆಯ ಸಂತೇಗುಳಿ, ಬ್ರಹ್ಮರ ಮೊದಲಾದೆಡೆಗಳಲ್ಲಿ ಬಾಳಿ ಬದುಕಿದ ಜನರ ಉನ್ನತವಾದ ಸಂಸ್ಕೃತಿಯ ಸಮೃದ್ಧಿಯನ್ನು ಚರಿತ್ರೆಯು ಹೇಳುತ್ತದೆ. ಒಂದೆಡೆ ಭೋರ್ಗರೆವ ವಿಸ್ತಾರ ಕಡಲು, ಇನ್ನೊಂದೆಡೆ ಗಗನಚುಂಬಿ ಸಹ್ಯಾದ್ರಿಯ ಒಡಲು, ಫಲಭರಿತ ಬಯಲು, ತೆಂಗು, ಹಲಸು, ಗೋಡಂಬಿ, ಅಡಿಕೆ, ಭತ್ತ, ಕಾಯಿಪಲ್ಲೆಗಳು, ತೇಗ, ನಂದಿ ಹೀಗೆ ಹಲವು ಸಸ್ಯಗಳು. ಇಲ್ಲಿಯ ಕರಿ ಇಶಾಡು ಮಾವು ದೇಶದ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ಅಲ್ಲದೆ ವಿವಿಧ ಜಾತಿಯ ಮೀನುಗಳು ದೊರೆಯುವವು. ಹೀಗಾಗಿ ನಮ್ಮ ಅಂಕೋಲೆಯ ಸೀಮೆ ಸಹಜವಾಗಿ ಪ್ರಾಕೃತಿಕ ಸೌಂದರ್ಯದ ಖಣಿಯಾಗಿದೆ. ಇದಲ್ಲದೆ ಬೆಳಂಬಾರದ ಹಾಲಕ್ಕಿ ಗೌಡರು ವಾತದ ಖಾಯಿಲೆಗೆ ನೀಡುವ ವನೌಷಧ ತುಂಬಾ ಪ್ರಸಿದ್ಧಿ ಪಡೆದಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಸಾಹಿತ್ಯಕವಾಗಿ ಅಂಕೋಲೆ ಮುಂಚೂಣಿಯಲ್ಲಿರುವ ಜಾಗೃತ ನೆಲವೆಂದು ನಾಡು ಗುರುತಿಸಿದೆ. ಕೇವಲ ಜಿಲ್ಲೆ ಮಾತ್ರವಲ್ಲ, ಇಡೀ ರಾಜ್ಯದ ಸಾಂಸ್ಕೃತಿಕ ಮನಸ್ಸುಗಳನ್ನು ಪ್ರಭಾವಿಸಿದ ಬರಹಗಾರರು, ಕಲಾವಿದರು ಈ ನೆಲಕ್ಕೆ ಸೇರಿದವರು ಎಂಬುದಕ್ಕೆ ವಿವರಣೆಯ ಅಗತ್ಯವಿಲ್ಲ. ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆದ ಎಲ್ಲ ಹಂತದ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ತಾಲೂಕು ಅಂಕೋಲೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಸಾಮಾಜಿಕ ನ್ಯಾಯಕ್ಕಾಗಿ, ಅನ್ನ-ಬಟ್ಟೆ-ಸೂರಿಗಾಗಿ ದಿವಂಗತರಾದ ದಿನಕರ ದೇಸಾಯಿ, ಗಿರಿ ಪಿಕಳೆ, ದಯಾನಂದ ನಾಡಕರ್ಣಿ ಮುಂತಾದ ಧುರೀಣರ ನಾಯಕತ್ವದಲ್ಲಿ ಮೂರು ದಶಕಗಳ ಕಾಲ ನಡೆದ ಇಲ್ಲಿಯ ರೈತ ಜನಾಂದೋಲನ ಎಲ್ಲ ಜನಪರ ಹೋರಾಟಗಳಿಗೆ ಮಾದರಿಯಾಗಿದ್ದುದನ್ನು ತಿಳಿದಿದ್ದೇವೆ. ಇಂಥ ಕ್ರಿಯಾಶೀಲ ನೆಲದಲ್ಲಿ ತಾಲೂಕಾ ಮಟ್ಟದ ಎಂಟನೆಯ ಸಾಹಿತ್ಯ ಸಮ್ಮೇಳನವು ನಡೆಯುತ್ತಿರುವುದು ಎಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ. ಇದರಲ್ಲಿ ನಾನು ಭಾಗಿಯಾಗಿರುವುದು ತುಂಬಾ ಸಂತಸ ತಂದಿದೆ.

ಅಂಕೋಲೆಯ ಸಾಹಿತ್ಯಕ-ಸಾಂಸ್ಕೃತಿಕ ಶ್ರೀಮಂತಿಕೆ : ಸಾಹಿತ್ಯಕ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆ ಈ ನೆಲದ ಗುಣವೆನ್ನಬಹುದು. ಇಲ್ಲಿಯ ವೈಶಿಷ್ಟ್ಯವನ್ನು ಸಮಯದ ಮಿತಿಯಲ್ಲಿ ನನ್ನ ಅರಿವಿನಾಳದಲ್ಲಿ ಗೋಚರಿಸಿದ ಕೆಲವು ಸಂಗತಿಗಳನ್ನು ತಮ್ಮ ಮುಂದಿಡಲು ನನ್ನದೊಂದು ಚಿಕ್ಕ ಪ್ರಯತ್ನವಾಗಿದೆ. ಇಲ್ಲಿಯ ಸಾಹಿತ್ಯವನ್ನು ಜನಪದ, ಕಾವ್ಯ, ಕಥೆ, ನಾಟಕ, ವಿಮರ್ಶೆ, ಪ್ರಬಂಧ, ಕಾದಂಬರಿ, ಅಂಕಣ ಸಾಹಿತ್ಯ ಇತ್ಯಾದಿ ಪ್ರಕಾರಗಳಲ್ಲಿ ವಿಂಗಡಿಸಬಹುದು. ಇಲ್ಲಿ ಎಲ್ಲವನ್ನೂ ಎಲ್ಲರನ್ನೂ ಗುರ್ತಿಸಲು ಸಾಧ್ಯವಾಗದಿರಬಹುದು. ಕಾರಣ ಮನ್ನಿಸುವಿರೆಂದು ನಂಬಿರುವೆ.

ಅಂಕೋಲೆ ಸಾಹಿತ್ಯ-ಕಲೆ-ಶಿಕ್ಷಣ ಹಾಗೂ ಸಾಂಸ್ಕೃತಿಕ ಲೋಕಕ್ಕೆ ನೀಡಿರುವ ಕೊಡುಗೆ ಅನನ್ಯವಾದುದು. ಇಲ್ಲಿ ಬರಹಗಾರರ ದಂಡೇ ತುಂಬಿದೆ.

ಇಲ್ಲಿ ಸಾಹಿತ್ಯವನ್ನು ಕಟ್ಟಿ ಬೆಳೆಸಿದ ಅನೇಕ ಹಿರಿಯ ಸಾಹಿತಿಗಳು ಆಗಿ ಮರೆಯಾಗಿದ್ದಾರೆ. ಮಹಾ ಮೇಧಾವಿಗಳಾದ ದಿ. ಲಕ್ಷ್ಮಣ ಬಾಬಣಿ ಪೈ, ರವೀಂದ್ರರ ಗೀತಾಂಜಲಿಯುನ್ನು ಕನ್ನಡಕ್ಕೆ ಕೊಟ್ಟ ಕವಿ ಕುಲಪುರೋಹಿತರೆಂಬ ಗೌರವಕ್ಕೆ ಪಾತ್ರರಾದ ದಿ. ಸ.ಪ. ಗಾಂವಕರ ಇವರು ಅಂಕೋಲೆಯ ಕರ್ನಾಟಕ ಸಂಘದ ಸ್ಥಾಪನೆಯ ಮುಂಚೂಣಿಯಲ್ಲಿ ಇದ್ದವರು. ಹಳ್ಳಿಯ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ ದಿ. ವಿ.ವೆ. ತೊರ್ಕೆ, ಸುಧಾರಣಾವಾದಿಗಳೆಂದು ಕರೆಯಿಸಿಕೊಂಡ ದಿ. ಡೆಂಗಾ ದೇವಾ ನಾಯ್ಕ, ಕನ್ನಡ ಸಾಹಿತ್ಯದ ಕೊಡುಗೆಯಾದ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ ಡಾ। ದಿನಕರ ದೇಸಾಯಿ, ಬರಹಗಾರರಾದ ದಿ. ಮ.ಗ. ಶೆಟ್ಟಿ, ಮಕ್ಕಳ ಕವಿಯೆಂದು ಪ್ರಸಿದ್ಧರಾದ ದಿ. ಶ್ರೀನಿವಾಸ ಶೆಟ್ಟಿ, ವಿಮರ್ಶಕ ಕವಿಯಾದ ದಿ. ಜಿನದೇವ ನಾಯಕ, ಶಿಕ್ಷಕ ಭಾವಜೀವಿ ಕವಿಯಾದ ದಿ. ಶಾಂತಾರಾಮ ಬಾಳೆಗುಳಿ, ಮಕ್ಕಳ ಕವನ–ಕಥೆ ರಚಿಸಿದ ದಿ. ಗಿರಿ ಪಿಕಳೆ, ಭೂಗತನ ನೆನಪುಗಳ ಕೃತಿಕಾರರಾದ ದಿ. ದಯಾನಂದ ಪ್ರಭು, ಸಗಡಗೇರಿಯ ದಿ. ಬಿ.ಜಿ. ನಾಯಕ, ವಿಮರ್ಶಕ ದಿ. ಡಾ॥ ಸದಾನಂದ ನಾಯಕ, ಶತಾಯುಷಿ ದಿ. ಜೋಗಿ ಬಿ. ನಾಯಕ, ನಮ್ಮೆಲ್ಲರ ಅಚ್ಚುಮೆಚ್ಚಿನ ಶಾಂತಮೂರ್ತಿ ದಿನಚರಿಯ ಸಾಲಿನ ಸಾತ್ವಿಕ ಕವಿ, ಬರಹಗಾರರಾದ ಆದರ್ಶ ಶಿಕ್ಷಕರಾದ ದಿ. ವಿ.ಜೆ. ನಾಯಕ ವಂದಿಗೆ, ತ್ರಿಪದಿಯ ಕವಿಯೆಂದೆ ಪ್ರಸಿದ್ಧರಾದ ದಿ. ಶ್ಯಾಮ ಹುದ್ದಾರ, ದಿ. ಡಾ। ಜಿ.ವಿ. ನಾಯಕ, ದಿ. ವಿ.ಎ. ಜೋಶಿ, ದಿ. ಮನೋಹರ ನಾಯಕ ಹಾಗೂ ತ್ರಿಭಾಷಾ ಕವಿಯೆಂದು ಗುರ್ತಿಸಲ್ಪಟ್ಟ ದಿ. ಎನ್.ಬಿ. ಕಾಮತ ಮುಂತಾದ ಮಹಾನ್ ಚೇತನಗಳನ್ನು ಸ್ಮರಿಸಿಕೊಳ್ಳುತ್ತ ಪೂಜ್ಯರಿಗೆ ನನ್ನ ಅನಂತ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಮೈಸೂರಿನಲ್ಲಿ ನೆಲೆಸಿದ ಸೂರ್ವೆಯ ಸೃಜನಶೀಲ ವಿಮರ್ಶಕರಾದ ನಾಡಿನ ಪ್ರತಿಷ್ಠಿತ ಪಂಪ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಜಿ.ಎಚ್. ನಾಯಕರವರು ನಮ್ಮವರು. ಅದರಂತೆ ಜಾನಪದ ತಜ್ಞರಲ್ಲಿ ಶ್ರೇಷ್ಠರಾದ ಹೊನ್ನಾವರದಲ್ಲಿ ವಾಸಿಸುತ್ತಿರುವ ಡಾ। ಎನ್.ಆರ್. ನಾಯಕ ಅವರು ಈ ಕ್ಷೇತ್ರದಲ್ಲಿ ಅಮೂಲ್ಯ ಸೇವೆ ಮಾಡಿದವರು. ಅವರ ಪತ್ನಿ ಶ್ರೀಮತಿ ಶಾಂತಿ ನಾಯಕರು ಕೂಡ ಸಾಹಿತ್ಯ ಕ್ಷೇತ್ರದಲ್ಲಿ ದುಡಿದವರಾಗಿದ್ದಾರೆ. ಕಥೆಗಾರರಾದ ಸಂದೀಪ ನಾಯಕ, ವೆಂಕಟ್ರಮಣ ಗೌಡ, ಕವಿ ಪ್ರಕಾಶ ಕಡಮೆ, ಕಥೆಗಾರ್ತಿ ಸುನಂದಾ ಕಡಮೆ, ಅನೇಕ ಕೃತಿಗಳನ್ನು ರಚಿಸಿದ ವಿಠಲ ಗಾಂವಕಾರ ಅಲ್ಲದೆ ಸಚ್ಚಿದಾನಂದ ಶಿರೋಡ್ಕರ, ಪ್ರೊ. ಡಿ.ಎನ್. ರಾಯ್ಕರ, ಮನೋಹರ ಮಲ್ಮನೆ ಇವರೆಲ್ಲ ನಮ್ಮ ಅಂಕೋಲೆಯವರು. ಸಗಡಗೇರಿಯ ಸುಬ್ರಾಯ ಪಾರುಮನೆ ಧಾರವಾಡದಲ್ಲಿದ್ದು ಇವರು ಕೂಡಾ ಕೃತಿ ರಚಿಸಿದ್ದಾರೆ. ಹಾಸ್ಯ ಬರಹದಲ್ಲಿ ಸುವರ್ಣ ಅವರು ಮಿಂಚಿದ್ದಾರೆ.

ಅಂಕೋಲೆಯಲ್ಲಿದ್ದು ಸಾಹಿತ್ಯ ದುಡಿದ ಸಾಹಿತಿಗಳಲ್ಲಿ ಶ್ರೀ ವಿಷ್ಣು ನಾಯ್ಕ ಕಾದಂಬರಿ, ಕಾವ್ಯ, ನಾಟಕ, ಪ್ರಬಂಧ ಮುಂತಾದ ವಿಷಯಗಳ ಮೇಲೆ ಅನೇಕ ಕೃತಿಗಳನ್ನು ರಚಿಸಿ ಅನೇಕ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡವರಾಗಿದ್ದಾರೆ. ಯಕ್ಷಗಾನ ಕಲಾವಿದರು, ಉತ್ತಮ ವಾಗ್ಮಿಗಳು, ಕಥೆಗಾರರೂ ಆದ ಡಾ। ರಾಮಕೃಷ್ಣ ಗುಂದಿ ನಮ್ಮವರು. ಕಾವ್ಯ, ಕಥೆ, ಪ್ರಬಂಧಗಳು ಹೀಗೆ ಅನೇಕ ಕೃತಿಗಳನ್ನು ರಚಿಸಿ ಪರಿಚಿತರಾದ ಸೌಜನ್ಯಶೀಲ ವ್ಯಕ್ತಿ ಶ್ರೀ ಶಾಂತಾರಾಮ ಹಿಚ್ಕಡ ಮತ್ತು ಹಿಚ್ಕಡದವರೇ ಆದ ಶ್ರೀ ಕೃಷ್ಣ ಹಿಚ್ಕಡ ಕಾವ್ಯ ರಚನೆಯಲ್ಲಿ ಕಲಾತ್ಮಕತೆಯನ್ನು ತೋರಿದ ಹೆಮ್ಮೆ ಇವರದು. ನನಗೆ ಆತ್ಮೀಯರಾದ ಪ್ರೊ. ಮೋಹನ ಹಬ್ಬು ಇವರು ಕಾವ್ಯ, ನಾಟಕ, ಕಥೆ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೈ ಆಡಿಸಿ ಪರಿಚಿತರಾಗಿದ್ದಾರೆ. ನುಡಿಜೇನಿನ ಸಂಪಾದಕರಾದ ಶ್ರೀ ಬಿ. ಹೊನ್ನಪ್ಪ, ಉತ್ತಮ ವಿಮರ್ಶಕರೆಂದು ಗುರುತಿಸಿಕೊಂಡ ಡಾ। ಸಿದ್ದಲಿಂಗಸ್ವಾಮಿ ವಸ್ತ್ರದ, ಹಲವು ಕೃತಿಗಳನ್ನು ನೀಡಿರುವ ಸ್ನೇಹಿತರಾದ ಶ್ರೀ ನಾಗಪತಿ ಹೆಗಡೆ ಉತ್ತಮ ಕಥೆಗಾರರು, ಪ್ರಬಂಧಕಾರರು, ಉತ್ತಮ ಶಿಕ್ಷಕರು. ಇದರಂತೆ ಗೆಳೆಯ ಜೆ. ಪ್ರೇಮಾನಂದ, ಎನ್.ವಿ. ನಾಯಕ, ಫಾಲ್ಗುಣ ಗೌಡ, ನಾಗೇಶದೇವ ಅಂಕೋಲೆಕರ, ಬಿ.ಎಚ್. ನಾಯಕ, ಅಮ್ಮೆಂಬಳ ಆನಂದ, ಜಿ.ಯು. ನಾಯಕ, ಎಲ್.ಎಸ್. ನಾಯಕ, ಡಾ। ಎಸ್.ಡಿ. ನಾಯ್ಕ, ಆತ್ಮೀಯರಾದ ಡಾ। ಶಿವಾನಂದ ನಾಯಕ, ಶ್ರೀಧರ ನಾಯಕ, ಕೆ.ಜಿ. ನಾಯಕ, ನಾಗರಾಜ ಮಂಜಗುಣಿ, ರೇವಡಿಯವರು, ರಾಮಚಂದ್ರ ನಾಯಕ ಬೇಲೇಕೇರಿ, ಉಮೇಶ ನಾಯ್ಕ ಅಂಬಾರಕೊಡ್ಲ, ಜಯಶೀಲ ಆಗೇರ, ಶಿವಾ ಬಾಬಾ ನಾಯ್ಕ, ಉಲ್ಲಾಸ ಹುದ್ದಾರ, ಕಥೆಗಾರರಾದ ಗೋಪಾಲಕೃಷ್ಣ ನಾಯಕ, ರಾಜೀವ ಎನ್. ನಾಯಕ, ಗೌರೀಶ ಎಚ್. ನಾಯಕ,

ಡಾ। ಪ್ರಕಾಶ ನಾಯಕ, ಮಹೇಶ ಬಿ. ನಾಯಕ, ಮಕ್ಕಳ ಸಾಹಿತಿ ನಾಗೇಂದ್ರ ನಾಯಕ ತೊರ್ಕೆ, ಪತ್ರಕರ್ತರಾದ ವಿಠಲದಾಸ ಕಾಮತ, ಸುಭಾಶ ಕಾರೇಬೈಲ, ವಾಸುದೇವ ಗುನಗಾ ಅಲ್ಲದೆ ಬಾಲಕೃಷ್ಣ ದೇವನಮನೆ, ಪ್ರಭಾಕರ ನಾಯಕ, ಜಿ.ಆರ್. ತಾಂಡೇಲ, ಸಾತು ಗೌಡ, ಶ್ಯಾಮಸುಂದರ ಗೌಡ, ಹೊನ್ನಪ್ಪ ನಾಯಕ ಹೀಗೆ ಇನ್ನೂ ಹಲವು ಬರಹಗಾರರು ನಮ್ಮಲ್ಲಿದ್ದಾರೆ. ಇದಲ್ಲದೆ ಇಂದು ನಮ್ಮಲ್ಲಿ ಮಹಿಳಾ ಸಾಹಿತಿಗಳ ಬಳಗ ತುಂಬಿಕೊಂಡಿದೆ. ಶ್ರೀಮತಿ ಕುಸುಮಾ ಕೇಣಿಕರ, ಲತಾ ಆರ್. ನಾಯಕ, ಶ್ರೀದೇವಿ ಕೆರೆಮನೆ, ಅಕ್ಷತಾ ಕೃಷ್ಣಮೂರ್ತಿ, ನಾಗರೇಖಾ ಗಾಂವಕರ, ರೇಣುಕಾ ರಮಾನಂದ, ಹೊನ್ನಮ್ಮ ನಾಯಕ, ಕಲಾ ಭಟ್ಟ, ಲಕ್ಷ್ಮೀ ನಾಯಕ, ಪುಷ್ಪಾ ನಾಯ್ಕ, ಚಂದ್ರಕಲಾ ನಾಯಕ ಮುಂತಾದವರು ಕಾವ್ಯ–ಕಥೆ ಮುಂತಾದ ಕ್ಷೇತ್ರದಲ್ಲಿ ಮಿಂಚುತ್ತಿದ್ದಾರೆ.

ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಿರಿಮೆ : ದಿ. ದಿನಕರ ದೇಸಾಯಿ ಹಾಗೂ ದಿ. ಗಿರಿ ಪಿಕಳೆಯವರು ಅಂಕೋಲೆಯಲ್ಲಿ ಶಾಲೆ ಹಾಗೂ ಕಾಲೇಜುಗಳನ್ನು ಸ್ಥಾಪಿಸಿ ಇಲ್ಲಿಯ ಶೈಕ್ಷಣಿಕ ಪ್ರಗತಿಗೆ ಮುಖ್ಯವಾಗಿ ಕಾರಣರಾಗಿದ್ದಾರೆ. ಅದರಂತೆ ಇನ್ನೂ ಅನೇಕರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ. ಶಿಕ್ಷಣ ಜ್ಯೋತಿಯನ್ನು ಹಚ್ಚಿದ ಎಲ್ಲರನ್ನೂ ನೆನಪಿಸಿಕೊಳ್ಳೋಣ. ದಿ. ಆರ್. ಎನ್. ನಾಯಕರು ಕೂಡ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಗುರ್ತಿಸಿಕೊಂಡಿದ್ದಾರೆ. ವಜ್ರಮಹೋತ್ಸವ ಆಚರಿಸಿಕೊಂಡ ಇಲ್ಲಿಯ ಕರ್ನಾಟಕ ಸಂಘ ರಾಜ್ಯದಲ್ಲಿಯೇ ಗುರುತಿಸಿಕೊಂಡ ಸಂಸ್ಥೆಯಾಗಿದೆ. ಜೊತೆಗೆ ಇಲ್ಲಿ ಕಾವ್ಯ, ನಾಟಕ, ಸಾಹಿತ್ಯ ಗೋಷ್ಠಿಗಳು ನಡೆಯುತ್ತಿದ್ದು ಸಾಂಸ್ಕೃತಿಕವಾಗಿ ಮುಂದಿದೆ. ಇಲ್ಲಿಯ ರಾಘವೇಂದ್ರ ಪ್ರಕಾಶನ ವೈವಿಧ್ಯಮಯವಾದ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತ ಬಂದಿದೆ. ಇಲ್ಲಿಯ ಯಕ್ಷಗಾನ ಬಯಲಾಟಗಳು ತುಂಬಾ ಪ್ರಸಿದ್ಧಿ ಪಡೆದಿವೆ. ನಲ್ವತ್ತರ ದಶಕದಲ್ಲಿ ಬಾಸಗೋಡದ ಸುಬೋಧ ಯಕ್ಷಗಾನ ಮಂಡಳಿ, ರಾಘವೇಂದ್ರ ರಂಗಸಂಗ, ಲಲಿತ ಕಲಾಮಂಡಳಿ, ಶೆಟಗೇರಿಯ ಸತ್ಯಾಗ್ರಹ ಸ್ಮಾರಕ ಶಿಕ್ಷಣ ಸಮಿತಿ, ಜನತಾ ಕ್ರಿಕೆಟ್ ಕ್ಲಬ್ ಬಾಸಗೋಡ, ವೆಂಕಟರಮಣ ದೇವ ಯಕ್ಷಗಾನ ಮಂಡಳಿ, ದಿನಕರ ಸಂಗೀತ ವಿದ್ಯಾಲಯ, ನೃತ್ಯ ಕಲಾಕೇಂದ್ರಗಳು, ಜೊತೆಗೆ ಬಂಡಿಹಬ್ಬ, ಕಾರ್ತಿಕೋತ್ಸವ, ದೊಡ್ಡ ದೇವರ ತೇರು, ಗಣೇಶೋತ್ಸವ, ಸುಗ್ಗಿ, ಕೋಲಾಟ, ಗುಮಟೆಪಾಂಗ, ಪುಗುಡಿ, ತಾರ್ಲೆ, ಪಂಚವಾದ್ಯಗಳ ಸಡಗರ, ರಣಹಲಗೆಗಳ ಅಬ್ಬರ, ಭಜನೆ, ತಾಳ–ಜಾಗಟೆಗಳ ನಾದ ಈ ತಾಲೂಕಿನ ಸಾಂಸ್ಕೃತಿಕ ಪರಿಸರವನ್ನು ಜಾಗೃತವಾಗಿಟ್ಟು ಜನ–ಮನ ಸೂರೆಗೊಂಡಿವೆ.

ವಿವಿಧತೆಯಲ್ಲಿ ಏಕತೆಯ ಅಂಕೋಲೆ : ಅಂಕೋಲೆಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಮುಂತಾದ ವಿವಿಧ ಧರ್ಮಿಯರು, ಅಲ್ಲದೆ ಹಿಂದೂ ಧರ್ಮದ ಅಸಂಖ್ಯ ಜಾತಿಗಳಿವೆ. ಎಲ್ಲ ಧರ್ಮಿಯರು ವಿವಿಧ ಜಾತಿಯ ಜನರು ಸೌಹಾರ್ದಯುತವಾಗಿ ಬದುಕು ನಡೆಸುತ್ತಿರುವುದು ಅಂಕೋಲೆಯ ನೆಲದ ವಿಶೇಷತೆ ಎನ್ನಬಹುದು. ಮಹಾಮಾಯಿ, ಆರ್ಯಾದುರ್ಗಾ, ಶಾಂತಾದುರ್ಗಾ, ವೆಂಕಟರಮಣ, ಹೊನ್ನಾರಾಕಾ, ಕುಂಡೋದರಿ, ಕಾತ್ಯಾಯನಿ ಬಾಣೇಶ್ವರ ಮೊದಲಾದ ದೇವಸ್ಥಾನಗಳ ಬೀಡಿದು. ಗುರು ರಾಘವೇಂದ್ರಸ್ವಾಮಿ, ಗುರು ಶಿರಡಿ ಸಾಯಿಬಾಬಾ ನೆಲೆಸಿರುವ ಕ್ಷೇತ್ರವಿದು. ಇಲ್ಲಿ ರಾಜರಾಳಿದ ಕೋಟೆಯೂ ಇದೆ. ಶ್ರೀ ಮಾರುತಿ ಹಾಗೂ ಶಿವಾಲಯ, ಭೂತಾಯಿ ಹಾಗೂ ಚರ್ಚ, ಮಸೀದಿಗಳೂ ಇವೆ. ಯಾವುದೇ ಧರ್ಮಿಯರ ಧಾರ್ಮಿಕ ವಿಧಿ–ವಿಧಾನಗಳಾಗಲಿ ಯಾವುದೇ ಆತಂಕವಿಲ್ಲದೆ ನಡೆಯುವಂಥ ವಾತಾವರಣ ಇಲ್ಲಿದೆ. ಮಾನವ ಸಂಬಂಧಗಳ ಬೆಸುಗೆ ಗಟ್ಟಿಯಾಗಿದೆ. ಹೀಗೆ ವಿವಿಧತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು ಬಂದಿರುವ 'ಭಾವೈಕ್ಯತೆ' ಇಲ್ಲಿದೆ.

ಸಾಹಿತ್ಯ : ನಾನೊಬ್ಬ ಪಾಂಡಿತ್ಯಪೂರ್ಣ ಸಾಹಿತಿಯಲ್ಲ. ಆದರೂ ಸ್ನೇಹಿತರೆಲ್ಲ ಸೇರಿ ಇಲ್ಲಿ ಕುಳ್ಳಿರಿಸಿದ್ದೀರಿ. ಆ ಕಾರಣವಾಗಿಯಾದರೂ ನಾನಿಲ್ಲಿ ಕೆಲವು ವಿಚಾರಗಳನ್ನು ತಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ. ನನ್ನ ಸಾಮರ್ಥ್ಯದ ಚೌಕಟ್ಟಿನಲ್ಲಿ ವಿದ್ವಾಂಸರು ಹೇಳಿದ ಮಾತುಗಳಲ್ಲಿ ಒಂದಂಶವನ್ನು ತಮ್ಮ ಮುಂದಿಡಲು ಪ್ರಯತ್ನಿಸುತ್ತಿರುವೆ. ಬದುಕಿನಂತೆಯೇ ಸಾಹಿತ್ಯ ಕೂಡ ನಿಂತ ನೀರಲ್ಲ. ಹರಿವ ಪ್ರವಾಹದಂತೆಯೇ – ಸಾಹಿತ್ಯದಲ್ಲಿಯೂ ಕೂಡ ಕಾಲಕಾಲಕ್ಕೆ ಹೊಸತು ಬರುವುದು ಸಹಜ. ಬದುಕಿನ ಏಳು– ಬೀಳುಗಳಂತೆಯೇ ಸಾಹಿತ್ಯದ ಏರಿಳಿತಗಳು. ಬದುಕು ಬದಲಾಯಿಸಿದಂತೆಯೇ ಸಾಹಿತ್ಯವೂ ಕೂಡಾ ಬದಲಾಗುತ್ತಿರುತ್ತದೆ. ವ್ಯಕ್ತಿ ಸಮಾಜ ಜೀವಿ. ಬದುಕಿನಲ್ಲಿ

ತಾನು ಕಂಡ ಸೊಗಸನ್ನು ಉಂಡು ಸಿಹಿಯನ್ನು ಉಳಿಸಿಕೊಳ್ಳಲು ಸದಾ ಹೆಣಗುತ್ತಿರುತ್ತಾನೆ. ಇದರಿಂದ ಸಮಾಜದ ಸ್ಥಿತಿ–ಗತಿಗಳಿಗೆ ಅನುಗುಣವಾದ ಸಾಹಿತ್ಯ ಸೃಷ್ಟಿಗೊಳ್ಳುತ್ತದೆ. ಒಂದು ಭಾಷೆಯ ಸಾಹಿತ್ಯ ಇತರ ಭಾಷೆಯ ಸಾಹಿತ್ಯಗಳೊಂದಿಗೆ ಸಂಪರ್ಕಕ್ಕೆ ಬಂದಾಗಲೂ ಸಾಹಿತ್ಯದಲ್ಲಿ ಬದಲಾಗುವುದುಂಟು.

ಎಲ್ಲರ ಹಿತ ಒಳಗೊಂಡಿರುವುದೇ ಸಾಹಿತ್ಯ. ಸಮಷ್ಟಿಯ ಹಿತಚಿಂತನೆ ಮಾಡಿ ಅಭಿವ್ಯಕ್ತಿಪಡಿಸುವುದು ಸಾಹಿತ್ಯದ ಕರ್ಮವಾಗಿದ್ದು ಎಲ್ಲರ ಹಿತ ಒಳಗೊಂಡಿರುವುದೇ ನಿಜವಾದ ಸಾಹಿತ್ಯವಾಗಿದೆ. ಇನ್ನು ಸಾಹಿತಿ ಎನ್ನುವವನು ಸತ್ಯ ಹೇಳಬೇಕು. ಸತ್ಯವನ್ನು ಪ್ರಿಯವಾಗುವಂತೆ ಹೇಳಬೇಕು. ಪ್ರಿಯವನ್ನು ಕೌಶಲ್ಯಯುತವಾಗಿ ಹೇಳುವ ಪ್ರತಿಭೆಯುಳ್ಳವನು ಉತ್ತಮ ಸಾಹಿತಿಯಾಗಿರುತ್ತಾನೆ.

ಭಾಷೆಯ ಕುರಿತು ಪಂಡಿತರ ಅನಿಸಿಕೆ : ಒಂದು ಭಾಷೆ ತನ್ನ ಜನಾಂಗವನ್ನು ಸಂಸ್ಕಾರದಲ್ಲಿ ಮುಂದೆ ತೆಗೆದುಕೊಂಡು ಹೋಗಲು ಅದು ಸಾಧನೆಯಾಗುತ್ತದೆ. ಇಂತಹ ಸಂಸ್ಕಾರ ನೀಡುವ ತಾಕತ್ತು ಕನ್ನಡ ಭಾಷೆಗೆ ಇದೆ. ಒಂದು ಜನಾಂಗದ ಸಂಸ್ಕೃತಿಯನ್ನು ಮೂರು ನೆಲೆಗಳಲ್ಲಿ ಗುರುತಿಸಬಹುದು. ಜನಪದ ನೆಲೆ, ಮಧ್ಯಮವರ್ಗದ ಸಂಸ್ಕೃತಿ, ವಿದ್ವತ್ ಸಂಸ್ಕೃತಿ. ಇವುಗಳನ್ನು ಬೆಸೆಯುವುದು ನಮ್ಮ ಆಡುನುಡಿಗಳು. ಆದರೆ ಇಂದು ನಮ್ಮ ಆಡುನುಡಿಯ ಬಗ್ಗೆ ಇರುವ ಉದಾಸೀನತೆಯಿಂದ ನಮ್ಮ ಭಾಷೆಯ ಜೊತೆಗೆ ನಮ್ಮ ಸಂಸ್ಕೃತಿಯೂ ಕೂಡ ಕರಗುತ್ತಿದೆ, ಇದು ವಿಶಾದನೀಯ. ಸುಮಾರು ಐದು ಸಾವಿರ ವರ್ಷಗಳ ಇತಿಹಾಸವುಳ್ಳ ಕನ್ನಡ ಭಾಷೆ ಆಡಳಿತಾತ್ಮಕ ಭಾಷೆಯಾಗಬೇಕು.

ಯಾವುದೇ ಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿ ಕಲಿಯುವುದು ಬೇರೆ, ಒಂದು ಭಾಷೆಯನ್ನಾಗಿ ಕಲಿಯುವುದು ಬೇರೆ. ಇಂದು ನಮ್ಮ ಪಾಲಕರಲ್ಲಿ ಹಾಗೂ ಸರಕಾರ ನಡೆಸುವವರಲ್ಲಿ ಇದರ ಅರಿವಿಲ್ಲದ ಕಾರಣ ಇಂದು ಆಂಗ್ಲಮಾಧ್ಯಮ ಶಾಲೆಗಳ ವ್ಯಾಮೋಹ ಹಳ್ಳಿಗಳ ಮೂಲೆ–ಮೂಲೆಯವರೆಗೆ ವ್ಯಾಪಿಸಿದೆ. ನಮಗೆ ಪಂಪ, ರನ್ನ, ಕುಮಾರವ್ಯಾಸ ಗೊತ್ತು. ಆದರೆ ಅವರ ಕಾವ್ಯದ ಗೊಡವೆ ನಮಗೇಕೆ? ಎಂದು ನಾವದನ್ನು ದೂರ ಮಾಡಿದ್ದೇವೆ. ಭಾಷೆ ಎನ್ನುವುದು ಕೇವಲ ಅಕ್ಷರ ಜೋಡಣೆಯಲ್ಲ, ಅದು ನಮ್ಮತನವನ್ನು ಜಗತ್ತಿಗೆ ತೋರಿಸುವಂಥದ್ದು. ಸಮಷ್ಟಿಯ ಹಿತಚಿಂತನೆ ಮಾಡಿ ಅಭಿವ್ಯಕ್ತಿಪಡಿಸುವುದು ಸಾಹಿತ್ಯದ ಕರ್ಮವಾಗಿದ್ದು ಅದು ಎಲ್ಲರ ಹಿತ ಒಳಗೊಂಡಿರುವುದೇ ನಿಜವಾದ ಸಾಹಿತ್ಯ ಎಂದಿದ್ದಾರೆ.

ಕಾವ್ಯ ಸಾಹಿತ್ಯದ ಕುರಿತು : ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯವೇ ಅತಿ ಪ್ರಾಚೀನವಾದುದು. ನಿರಂತರವಾಗಿ ಸಮೃದ್ಧಿಯಾಗಿ ಕಾವ್ಯಧಾರೆ ಹರಿದುಬಂದು ಅದರ ಪರಂಪರೆ ಬೆಳೆದುಬಂದಿದೆ. ಕವಿ ಕಂಡ ಅನುಭವವೇ ಕಾವ್ಯ, ಶೋಷಣೆ, ದಬ್ಬಾಳಿಕೆ, ಧಾರ್ಮಿಕ, ಸಾಮಾಜಿಕ ಸಮಸ್ಯೆಗಳು, ಒತ್ತಡಗಳು ಹಿಂದೆಯೂ ಇದ್ದವು, ಇಂದೂ ಇವೆ. ಅಂದಿನಿಂದಲೂ ಕವಿ ಅಭಿವ್ಯಕ್ತಿಪಡಿಸುವ ರೀತಿ ಬೇರೆ ಬೇರೆ ತೆರನಾಗಿರಬಹುದು. ಹಿಂದಿನವರು ತಮ್ಮದೇ ಆದ ಅನುಭವಗಳನ್ನು ತಮ್ಮದೇ ಆದ ರೀತಿಯಲ್ಲಿ ಛಂದಸ್ಸಿನಲ್ಲಿ ಪ್ರಕಟಗೊಳಿಸಿದರು. ಇದರಿಂದ ಹೊಸ ಶೈಲಿಯು ಹುಟ್ಟಿಕೊಂಡಿತು. ಕವಿಯ ಭಾವ ಸಂವೇದನೆಯಿಂದ ಹೊರಟಿದ್ದೇ ಕಾವ್ಯ ಕವಿಯ ಹೃದಯದಿಂದ ತರಂಗ ತರಂಗವಾಗಿ ಕಲ್ಪನೆಯ ಮಾಯಾಜಾಲಗಳೇ ಸೃಷ್ಟಿಯಾಗುತ್ತವೆ. ಬುದ್ಧಿಗೆ ಹೆಚ್ಚು ಶ್ರಮನೀಡುವ ಅದ್ಭುತವಾದ ಕಲ್ಪನಾ ಕ್ರಿಯಾಶೀಲ ಮಾಧ್ಯಮವೆಂದರೆ ಕಾವ್ಯ ಮಾತ್ರ, ಕಾವ್ಯ ಏತಕ್ಕಾಗಿ ಎನ್ನುವುದಾದರೆ ಬೇರೆಯವರಿಗಲ್ಲ, ಇದು ನನ್ನ ಸಂತೋಷಕ್ಕಾಗಿ, ಅರ್ಥಮಾಡಿಕೊಳ್ಳುವವರಿಗೆ ಮಾತ್ರ ಕಾವ್ಯ ದನಿಯಾಗಬಲ್ಲದು. ಮನದ ತುಡಿತ, ಭಾವನೆಗಳ ಸ್ಪಂದನೆ, ವೇದನೆಯ ವೇದಿಕೆ, ತಿರಸ್ಕಾರದ ತಳಮಳ, ಮಾನವೀಯ ಮಿಡಿತ ಹೀಗೆ ಹತ್ತು ಹಲವು ಮುಖಗಳಲ್ಲಿ ಕ್ರಮಿಸುವ ಸಾಮರ್ಥ್ಯ ಕಾವ್ಯಕ್ಕಿದೆ ಎನ್ನುತ್ತಾರೆ. ಕಾವ್ಯ ಜನಸಾಮಾನ್ಯರಿಗೆ ಅರ್ಥವಾಗಬೇಕು. ಕವಿತಾ ರಚನೆಯಲ್ಲಿ ಬೌದ್ಧಿಕ ಕಸರತ್ತು ಸಲ್ಲದು. ಅಂತಹ ಕವಿತೆಗಳು ಸಹೃದಯದಿಂದ ದೂರ ಸರಿದುಬಿಡುತ್ತದೆ. ಹಿಂದಿಯಲ್ಲಿ ತುಳಸಿದಾಸರು ಬರೆದ 'ರಾಮಚರಿತ ಮಾನಸ' ಇಂದಿಗೂ ಜನಮಾನಸದಲ್ಲಿ ಉಳಿದಿರುವುದಕ್ಕೆ ಅಲ್ಲಿರುವ ಮುದ ನೀಡುವ ಆಡುಭಾಷೆಯ ಸೊಗಡೇ ಕಾರಣವೆನ್ನಬಹುದು. ಒಂದು ಮಾತಂತೂ ಸತ್ಯ, ಭಾಷೆ ತೀರಾ ಸರಳವಾಗಿದ್ದರೆ ಕವಿತೆ ಜಾಳು–ಜಾಳಾಗಿ ಬಿಡುತ್ತದೆ. ಭಾಷೆ ಕ್ಲಿಷ್ಟವಾಗಿ ಬಿಟ್ಟರೆ ಶಬ್ದಗಳ ನಡುವೆ ಸಿಕ್ಕು ಅರ್ಥವು ತತ್ತರಿಸಿಬಿಡುತ್ತದೆ. ಕಾವ್ಯಾಸಕ್ತರು ಓದಿ ಅರ್ಥಮಾಡಿಕೊಳ್ಳುಬಲ್ಲಂತಹ ನೈಪುಣ್ಯತೆ ಪಡೆಯಬೇಕು. ಅಂತಹ ಕಾವ್ಯ ನಿಲ್ಲುತ್ತದೆ. ಕಾವ್ಯ ಕಟ್ಟುವುದು

ಸುಲಭವೆಂದು ಭಾವಿಸುವವರೇ ಹೆಚ್ಚು. ವಾಸ್ತವದಲ್ಲಿ ಇದು ಸುಲಭವಲ್ಲ. ಹಕ್ಕಿ ಗೂಡು ಕಟ್ಟುವ ಕ್ರಿಯೆಯಂತೆ. ಹಕ್ಕಿ ಒಂದೊಂದೇ ಗರಿಯನ್ನು ತೆಗೆದುಕೊಂಡು ಅತ್ಯಂತ ಜಾಣೆಯಿಂದ ಹೆಣೆಯುತ್ತದೆ. ಕಾವ್ಯವೂ ಹಾಗೆಯೇ. ಕಾವ್ಯವೆಂಬುದು ಕುವೆಂಪುರವರು ಹೇಳುವಂತೆ 'ಬುದ್ಧಿಜೀವಿಗಳ ಆಲಿಂಗನವಾಗಿದೆ.'

ಶಿಶು ಸಾಹಿತ್ಯ : ಮಕ್ಕಳಿಗಾಗಿ ಸಾಹಿತ್ಯ ರಚಿಸುವ ಹವ್ಯಾಸಿ ನಾನು. ಕಾರಣ ಆ ಬಗ್ಗೆ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಮಕ್ಕಳ ಮನದ ಬಾನಂಗಳದಲ್ಲಿ ಎಳೆಯರಿಗಾಗಿ ಹಳೆ ತಲೆಮಾರು ಸಾಹಿತ್ಯ ರಚಿಸುವ ಪ್ರಕ್ರಿಯೆ ಎಂದೋ ಪ್ರಾರಂಭಗೊಂಡಿತ್ತು. ಅದು ಲಿಖಿತ ಪರಂಪರೆಯಲ್ಲಿಯೇ ಮೊದಲಾಯಿತು ಎನ್ನುವ ಹಾಗಿಲ್ಲ. ಮೌಖಿಕ ಪರಂಪರೆಯಲ್ಲಿಯೂ ತೊಡಗಿ ಬಂದಿರುವುದನ್ನು ಕಾಣುತ್ತೇವೆ. ಏನೇ ಇರಲಿ ಬಾಲಪ್ರಪಂಚ ಅಥವಾ ಮಕ್ಕಳ ಲೋಕದ ಪರಿಕಲ್ಪನೆಯನ್ನು ಹಿರಿಯರು ಅರ್ಥಮಾಡಿಕೊಂಡಿರುವುದು ಬಹು ಸಹಜವಾದ ಮತ್ತು ಅಷ್ಟೇ ಸರಳವಾದದ್ದು ಎನ್ನಬಹುದು. ಅದರಲ್ಲೂ ಅಳುವ ಕಂದನನ್ನು ಎತ್ತಿ ಮುದ್ದಾಡಿಸುವಾಗ ಹುಟ್ಟಿಬಂದ ಜೋಗುಳದ ದನಿ, ಎದೆ ತುಂಬಿದ ತಾಯಿಯ ಬಾಯಿಂದ ಹೊರಬಂದ ಅದು ಮೊದಲ ಶಿಶುಗೀತೆಯೇ ಹೌದು. ಜೋಗುಳದ ಹಾಡು, ತೊಟ್ಟಿಲ ಪದ, ಶಿಶು ಪ್ರಾಸ, ಕಿಶೋರ ಸಾಹಿತ್ಯ, ಬಾಲಗೀತೆ, ಒಗಟು, ಅಜ್ಜಿಕಥೆ ಅದ್ಭುತ ರಮ್ಯ ವರ್ಣನೆಗಳಾಗಿವೆ. ಜನಪದ ಸಾಹಿತ್ಯದಲ್ಲಿ ಇದಕ್ಕೆ ಬೇಕಾದಷ್ಟು ನಿದರ್ಶನಗಳು ಸಿಗುತ್ತವೆ.

ಮಕ್ಕಳ ಕವನಗಳು ವೈಶಿಷ್ಟಪೂರ್ಣವಾಗಿರಬೇಕು. ಅವರಿಗೆ ತಿಳಿಯುವಂತಿದ್ದು ಗೇಯುತೆಯುನ್ನು ಪಡೆದಿರಬೇಕು. ಸರಳ ಪದಗಳಲ್ಲಿ ರಚನೆಗೊಂಡು ಅಂತ್ಯಪ್ರಾಸವನ್ನು ಹೊಂದಿರಬೇಕು. ಗಣಗಳ, ಮಾತ್ರೆಗಳ ಬಂಧ ಸರಿಯಾಗಿರಬೇಕು. ಉದ್ದುದ್ದ ಕವನಗಳಿಗಿಂತ ಚಿಕ್ಕ ನುಡಿಗಳು ಐದಾರಿದ್ದರೆ ಮಕ್ಕಳಿಗೆ ಬಲು ಇಷ್ಟ. ಚುಟುಕುಗಳಂತೂ ಅವರಿಗೆ ಪೆಪ್ಪರಮೆಂಟು ಇದ್ದ ಹಾಗೆ. ಅಭಿನಯದೊಂದಿಗೆ ಹಾಡುವ ಕುಣಿಯುವ ನಾಲ್ಕು ಸಾಲಿನ ಬಿಡಿ ಪದ್ಯಗಳು ಮಕ್ಕಳಿಗೆ ಹಣ್ಣಿನ ತೊಳೆಯಿದ್ದಂತೆ. ಅಂತೆಯೇ ಕವನ ರಚಿಸುವವರಿಗೆ ವ್ಯಾಪಕ ಓದು, ಹೊಸ ಹೊಸ ಪ್ರಯೋಗ, ಪರಿಣತ ಕವಿಗಳ ಕಾವ್ಯದ ಅಧ್ಯಯನ ಅವಶ್ಯ. ಇಂಥ ಸಾಹಿತ್ಯ ಸಮ್ಮೇಳನಗಳಲ್ಲಿ ಮಕ್ಕಳ ಸಾಹಿತ್ಯದ ಗೋಷ್ಠಿಗಳನ್ನು ನಡೆಸುವುದು ತೀರಾ ಅವಶ್ಯ. ಮಕ್ಕಳ ಸಾಹಿತ್ಯ ಬೆಳೆಸಿದವರಲ್ಲಿ ಪಂಜೆ ಮಂಗೇಶರಾಯರು, ನಾ.ಕಸ್ತೂರಿ, ಜಿ.ಪಿ. ರಾಜರತ್ನಂ, ಕುವೆಂಪು, ದಿನಕರ ದೇಸಾಯಿ ಮುಂತಾದವರನ್ನು ಹೆಸರಿಸಬಹುದು. ಅವರ ಮಕ್ಕಳ ಕವನಗಳು ಇಂದು ಮಾದರಿಯಾಗಿ ಉಳಿದಿವೆ. ಅಂತೆಯೇ ಇಂದೂ ಕೂಡ ಅನೇಕ ಸಾಹಿತಿಗಳು ಮಕ್ಕಳ ಕವನ, ಕಥೆಗಳನ್ನು ಬರೆದು ಕನ್ನಡ ಸಾಹಿತ್ಯದ ಕಣಜವನ್ನು ತುಂಬುತ್ತಲೇ ಇದ್ದಾರೆ. ಅದು ಇನ್ನೂ ಬೆಳೆಯಬೇಕಾಗಿದೆ.

ಕನ್ನಡ ಸಾಹಿತ್ಯ ಸಮ್ಮೇಳನ ಎನ್ನುವಲ್ಲಿ ಇದು ಕನ್ನಡ ಸಮ್ಮೇಳನವೂ ಹೌದು. ನಾವೆಲ್ಲ ಮೊದಲಿಗೆ ಕನ್ನಡಿಗರು, ಆಮೇಲೆ ಸಾಹಿತಿ, ವಿಜ್ಞಾನಿ, ರಾಜಕಾರಣಿ, ಪತ್ರಕರ್ತ, ಅಧ್ಯಾಪಕ ಏನೆಲ್ಲ. ಕನ್ನಡ ನಮ್ಮ ಅಸ್ಮಿತೆ, ನಮ್ಮದು ಕನ್ನಡ, ನಮ್ಮ ರಕ್ತ–ಮಾಂಸ, ಜೀವ–ಭಾವ, ಕನಸು–ಮನಸು, ಸಾಧ್ಯತೆ–ಸಾಮರ್ಥ್ಯ ಎಲ್ಲವೂ ಕನ್ನಡ. ತಾಯಿ–ತಂದೆ– ಬಂಧು–ಬಳಗ ಎಲ್ಲವೂ ಕನ್ನಡ. ನಮ್ಮ ತಾಣ–ಪ್ರಾಣವೂ ಕೂಡ ಕನ್ನಡ. ಅದುವೇ ನಮ್ಮ ಉಸಿರು–ಬಸಿರೂ ಕೂಡ. ಕನ್ನಡವೇ ಹಸಿರು, ಅದಿಲ್ಲದೆ ನಮಗೆಲ್ಲಿಯ ಉಸಿರು? ಕನ್ನಡವೇ ನಮ್ಮ ಆಸ್ತಿ, ಇದು ಸ್ವಂತದ್ದು, ಇದನ್ನು ಉಳಿಸಿ ಬೆಳೆಸಿಕೊಳ್ಳುವುದು ಕನ್ನಡಿಗರಾದ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ನಮ್ಮ ನಾಡಿನಲ್ಲಿ ಕನ್ನಡ ನಂಬಿ ಸೋತೆವು ಎನ್ನುವುದು ಒಂದು ಕುಚೋದ್ಯವೇ ಸರಿ. ಇನ್ನು ಇಂಗ್ಲಿಷ್ ಮಾಧ್ಯಮವೇ ಮಕ್ಕಳ ಉಜ್ವಲ ಭವಿಷ್ಯಕ್ಕೆ ಇರುವ ಏಕೈಕ ಮಾರ್ಗೋಪಾಯ ಎಂದು ಪ್ರತಿಪಾದಿಸುವುದು ಮೂರ್ಖತನವಾದೀತು. ಕನ್ನಡವನ್ನು ನಂಬಿದವರಿಗೆ ಕನ್ನಡವು ಕೈಬಿಡುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಕನ್ನಡ ಮಾಧ್ಯಮದಲ್ಲಿ ಓದಿರುವ ಹಲವರು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿರುವುದನ್ನು ಕೇಳಿದ್ದೇವೆ, ಕಂಡಿದ್ದೇವೆ.

'ಕನ್ನಡದ ಮಕ್ಕಳಿಗೆ ಕನ್ನಡವೇ ಸಹಜ, ಸರಳ, ಸುಂದರವಾಗಿರುತ್ತದೆ. ಕನ್ನಡ ಬಿಟ್ಟು ಅವರಿಗೆ ಇಂಗ್ಲಿಷ್ ಕೊಟ್ಟು ಕಳುಹಿಸುವುದು ಅವರಿಗೆ ವಿಚಿತ್ರ ಹಿಂಸೆ. ಹೆತ್ತವರು, ಅಧ್ಯಾಪಕರು ಅವರಿಗೆ ಭಯೋತ್ಪಾದಕರಾಗಿ ಕಂಡರೆ ಅಚ್ಚರಿಯಿಲ್ಲ. ಮಗುವಿಗೆ ತನ್ನದಲ್ಲದ

ಭಾಷೆಯೊಂದು ಎಳೆ ವಯಸ್ಸಿನಲ್ಲಿ ಕಡ್ಡಾಯವಾದರೆ ಅದು ಅವರಿಗೆ ಶಿಕ್ಷೆ, ತನ್ನೆಲ್ಲ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಇಂಗ್ಲಿಷ್ ಬೋಧನೆ ಮಗುವಿಗೆ ಸುಸ್ತೋ–ಸುಸ್ತು. ಕನ್ನಡದ ನಗು, ಕನ್ನಡದ ಭಾಷೆ–ಕಲೆಗಳಲ್ಲಿ ತೆರೆದುಕೊಳ್ಳುವ, ಮೆರೆದುಕೊಳ್ಳುವ ಅದು ಇಂಗ್ಲಿಷ್ ಭಾಷೆಯಲ್ಲಿ ತೆರೆದುಕೊಳ್ಳುವುದಿಲ್ಲ, ಇದು ಅಪ್ಪಟ ಸತ್ಯ.

ಕನ್ನಡ ನಾಡಿನ ಸಾಹಿತಿಗಳ ಚಿಂತನೆ ಆನಂದದಾಯಕ, ಜ್ಞಾನದಾಗರ. ಇಲ್ಲಿಯ ವಚನಕಾರರ ವಿಚಾರಧಾರೆ, ದಾಸಶ್ರೇಷ್ಠರ ದೇವರನಾಮ, ಕವಿವರೇಣ್ಯರ ವಿಪುಲ ಕಾವ್ಯಧಾರೆ, ಕುಮಾರವ್ಯಾಸನ ಕರ್ನಾಟಕ ಭಾರತ ಕಥಾಮಂಜರಿ, ಲಕ್ಷ್ಮೀಶನ ಜೈಮಿನಿ ಭಾರತ, ನರಹರಿ ಅಥವಾ ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ ಮಾತ್ರವಲ್ಲದೆ ನವೋದಯದ ಸಾಹಿತಿಗಳಾದ ಡಿ.ವಿ.ಜಿ., ಕುವೆಂಪು, ಬೇಂದ್ರೆ ಪು.ತಿ.ನ., ನರಸಿಂಹ ಸ್ವಾಮಿ, ವಿ.ಸಿ., ಸಿದ್ದಯ್ಯ ಪುರಾಣಿಕ, ಶಿವರಾಮ ಕಾರಂತ ಇನ್ನೂ ಅನೇಕರ ವಿಚಾರಗಳಿಂದ ಕನ್ನಡ ಸಾಹಿತ್ಯ ಅಮೋಘವಾಗಿದೆ. ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗವನ್ನು ಕನ್ನಡದ ಭಗವದ್ಗೀತೆಯೆಂದೇ ಕರೆಯಲಾಗುತ್ತದೆ. ಕುವೆಂಪುರವರ ರಾಮಾಯಣ ದರ್ಶನಂ ಒಂದು ಅದ್ಭುತ ಕೃತಿ. ಎಂಟು ಕನ್ನಡ ಸಾಹಿತಿಗಳಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿವೆ. ಮಹಲಿಂಗರಂಗರು ಕನ್ನಡ ಭಾಷೆಯ ಬಗ್ಗೆ ಹೀಗೆ ಹೇಳುತ್ತಾರೆ. 'ಸುಲಿದ ಬಾಳೆಯ ಹಣ್ಣಿನಂದದಿ। ಕಳೆದ ಸಿಗುರಿನ ಕಬ್ಬಿನಂದದಿ । ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ ಲಲಿತವಹ ಕನ್ನಡದ ನುಡಿಯಲಿ । ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ' ಎಂಬ ನುಡಿ ಮಾರ್ಮಿಕವಾಗಿದೆ.

ಭಾಷೆಯ ವಿಷಯದಲ್ಲಿ ಮಡಿವಂತಿಕೆ ಸರಿಯಲ್ಲ. ನಮ್ಮ ರಾಜ್ಯ ಭಾಷೆಗೆ ಸಲ್ಲಿಸಬೇಕಾದ ಗೌರವವನ್ನು ನೀಡಿ ಆಮೇಲೆ ಅವರವರ ಶಕ್ತ್ಯಾನುಸಾರ ಬೇಕಾದಷ್ಟು ಭಾಷೆ ಕಲಿಯಲು ಅವಕಾಶವಿದೆ. ಭಾಷೆಗೆ ಜಾತಿ–ಮತಗಳ ಭೇದವಿಲ್ಲ. ನಮ್ಮ ಹಲವು ಮುಸ್ಲಿಂ ಬಾಂಧವರು ಕನ್ನಡ ಸಾಹಿತ್ಯದಲ್ಲೂ ಹೆಸರು ಮಾಡಿದ್ದಾರೆ. ಅವರಲ್ಲಿ ನಮ್ಮ ನಡುವೆ ಇದ್ದ ಪಂಪ ಪ್ರಶಸ್ತಿ ಪುರಸ್ಕೃತರಾದ ಡಾ। ಬಿ.ಎ. ಸನದಿ, ಎಮ್. ಅಕ್ಬರ ಅಲಿ, ನಿಸಾರ್ ಅಹ್ಮದ್, ಡಾ। ಸೈಯದ್ ಝಮಿರುಲ್ಲಾ ಷರೀಫ್ ಮುಂತಾದವರಿದ್ದಾರೆ. ಕ್ರಿಶ್ಚಿಯನ್ನರಲ್ಲಿ ನಾ. ಡಿಸೋಜಾ ಕನ್ನಡ ಸಾಹಿತ್ಯ ರಚಿಸಿದ್ದಾರೆ. ಇವರೆಲ್ಲ ಕನ್ನಡಿಗರೇ. ಕನ್ನಡ ಪ್ರೀತಿ–ಅಭಿಮಾನದ ಮೇಲೆ ಸಾಹಿತ್ಯವು ನಿಂತಿದ್ದು ಅದುವೇ ಜೀವನ ಪ್ರೇಮ, ಜೀವನಾದರ್ಶಗಳು ಎಂಬುದನ್ನು ಸರ್ವರೂ ತಿಳಿಯಲೇಬೇಕು.

ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಬೆಳವಣಿಗೆಯ ಬಲವಿದ್ದರೂ ಕರ್ನಾಟಕದ ಬಹುಜನರು ಅದನ್ನು ಅವಜ್ಞೆಯಿಂದ ಕಾಣುತ್ತ ಪರಭಾಷಾ ವ್ಯಾಮೋಹಕ್ಕೆ ಬಲಿಯಾಗಿದ್ದಾರೆ. ಕನ್ನಡ ನಾಡಿನಲ್ಲಿ ಎಂದೆಂದಿಗೂ ಕನ್ನಡಕ್ಕೆ ಅಗ್ರಸ್ಥಾನ ಸಲ್ಲಲೇಬೇಕು. ಕರ್ನಾಟಕದಲ್ಲಿದ್ದು ಕನ್ನಡ ಭಾಷೆಯನ್ನು ಪ್ರೀತಿಸದಿದ್ದವರು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ನಾವು ನಮಗೆ ಬೇಕಾದಷ್ಟು ಭಾಷೆಗಳನ್ನು ಕಲಿಯೋಣ ಆದರೆ ಇಲ್ಲಿ ನಮ್ಮ ತಾಯಿನುಡಿ ಕನ್ನಡಕ್ಕೆ ಮೊದಲ ಮನ್ನಣೆ ಸಲ್ಲಲೇಬೇಕು. ಅದು ನಾವು ಮಾಡುವ ಉಪಕಾರವಲ್ಲ, ಕರ್ತವ್ಯ. ಕರ್ನಾಟಕದಲ್ಲಿ ಇರುವವರಿಗೆ ಕನ್ನಡದಿಂದಲೇ ಮೋಕ್ಷ. ನಮ್ಮ ಸಾಹಿತ್ಯ ಪರಂಪರೆಯನ್ನು ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಇಂತಹ ಕನ್ನಡ ಜಾತ್ರೆಯಲ್ಲಿ ನಾವೆಲ್ಲ ಸೇರಿ ಕನ್ನಡವನ್ನು ಅಭಿವೃದ್ಧಿಪಡಿಸಲು ಮುನ್ನುಗ್ಗಬೇಕಾಗಿದೆ. ಅದಕ್ಕಾಗಿ ನಾವೆಲ್ಲ ಪಣತೊಡೋಣ. ಇಂದು ಮುಚ್ಚುತ್ತಿರುವ ಕನ್ನಡ ಶಾಲೆಗಳ ಉಳಿವಿಗಾಗಿ ಜಾಗೃತರಾಗೋಣ.

ಪ್ರಾಥಮಿಕ ಶಿಕ್ಷಣದ ಎಲ್ಲ ಹಂತಗಳಲ್ಲಿ ಕನ್ನಡ ಭಾಷೆ ಜಾರಿಗೆ ಬಂದಿಲ್ಲ. ಕರ್ನಾಟಕದೊಳಗೆ ಕನ್ನಡವು ಮೊದಲನೆಯ ತರಗತಿಯಿಂದಲೇ ಎಲ್ಲರಿಗೂ ಕಲಿಸುವಂತಾಗಬೇಕು, ಕಲಿಸುವ ಕ್ರಮ ಬದಲಾಗಬೇಕು, ಮೊದಲು ಮಾತನಾಡಲು ನಂತರ ಬರೆಯಲು ಕಲಿಸಬೇಕು. ನಮ್ಮ ಸರಕಾರ ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಮಾಧ್ಯಮದ ಶಾಲೆ ಸ್ಥಾಪಿಸಲು ಹೊರಟಿದೆ. ಹೀಗಾಗಿ ಕನ್ನಡದ ಉಳಿವಿಗೆ ಹೋರಾಡುವುದು ಅನಿವಾರ್ಯ. ಭಾಷೆಯೊಂದರ ಬೆಳವಣಿಗೆ ಅದರ ಓದುವಿಕೆ, ಮಾತನಾಡುವಿಕೆ ಮತ್ತು ಬರೆಯುವಿಕೆ ಈ ಮೂರು ವಿಧಗಳ ಬಳಸುವಿಕೆಯಿಂದ ನಿರ್ಧಾರವಾಗಿತ್ತದೆಯೇ ಹೊರತ ಭಾವಾವೇಶದ ಭಾಷಣಗಳಿಂದಲ್ಲ. ಇಂದಿನ ಮಕ್ಕಳು ಕನ್ನಡವನ್ನು ಬಳಸಲಾಗದ ಪರಿಸರದಲ್ಲಿರುವುದಕ್ಕೆ ನಾವೇ

ಹೊಣೆಗಾರರು. ಹೊಟ್ಟೆಯಪಾಡಿಗಾಗಿ ಇಂಗ್ಲಿಷ್ ವಿದ್ಯೆಯೇ ಅಡಿಗಲ್ಲು ಎಂಬ ಮೂಢನಂಬಿಕೆಯ ಜನ ನಾವಾಗಿದ್ದೇವೆ. ಅದರ ಕಾರಣವಾಗಿ ಈಗಿನ ಬಹಳಷ್ಟು ವಿದ್ಯಾರ್ಥಿಗಳು ಕನ್ನಡ ದಿನಪತ್ರಿಕೆಗಳನ್ನು ಸರಿಯಾಗಿ ಓದಲಾರದವರಾಗಿದ್ದಾರೆ. ನಮ್ಮ ಪಾಲಕರು ವಸ್ತುಸ್ಥಿತಿಯನ್ನು ಅರಿಯದೇ ಬಾಲ್ಯದಿಂದಲೇ ಮಕ್ಕಳ ಮೇಲೆ ಇಂಗ್ಲಿಷ್ ಮಾಧ್ಯಮವನ್ನು ಹೇರಿ ಕನ್ನಡದ ಸಮಾಧಿಗೆ ನಾವೇ ಚಪ್ಪಡಿಕಲ್ಲು ಎಳೆದುಕೊಳ್ಳುತ್ತಿದ್ದೇವೆ. ಇಂದಿನ ಎಲ್ಲ ದುಸ್ಥಿತಿಗೂ ಮೂಲ ಕಾರಣ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಸರಿಯಾಗಿ ಚಾಲ್ತಿಯಲ್ಲಿ ನಡೆಯದಿರುವುದೇ ಕಾರಣವಾಗಿದೆ. ಇಂಗ್ಲಿಷ್ ವ್ಯಾಮೋಹದಿಂದಾಗಿ ಕನ್ನಡ ಶಾಲೆಗಳು ಮುಚ್ಚುತ್ತಲಿವೆ. ಇದನ್ನರಿತು ಸರ್ಕಾರ ಹಾಗೂ ಕನ್ನಡ ಸಂಘಟನೆಗಳು, ಸಾರ್ವಜನಿಕರು ಈ ನಿಟ್ಟಿನಲ್ಲಿ ತ್ವರಿತವಾಗಿ ಸಾಮಾಜಿಕ ಸುಧಾರಣೆಗೆ ಮುಂದಾಗದಿದ್ದಲ್ಲಿ ಮುಂದೆ ಕನ್ನಡದ ಭವಿಷ್ಯ ಕರಾಳವಾಗುವುದು ಎನ್ನದೆ ವಿಧಿಯಿಲ್ಲ.

ಆತ್ಮೀಯರೆ, ನಮ್ಮೆಲ್ಲರ ಬದುಕಿನ ಉಸಿರು ಕನ್ನಡ, ದುರ್ದೈವದ ಸಂಗತಿಯೆಂದರೆ ಕನ್ನಡದ ನೆಲದಲ್ಲಿ ಕನ್ನಡ ಉಸಿರು ಕಟ್ಟುವ ಸ್ಥಿತಿಯಲ್ಲಿದೆ. ಅದರ ಉಳಿವಿಗಾಗಿ ಹೋರಾಡುವ ಅನಿವಾರ್ಯತೆ ಇದೆ. ಇಂದು ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಘಟಕಗಳೂ ಆಂದೋಲನದ ರೀತಿಯಲ್ಲಿ ಸಜ್ಜಾಗಿ ಕನ್ನಡವನ್ನು ಮೊಳಗಿಸಬೇಕು. ಸಾಹಿತ್ಯ ಪರಿಷತ್ತು ಕನ್ನಡದ ಉಳಿವಿಗಾಗಿ ಸಾಕಷ್ಟು ಪ್ರಯತ್ನ ಮಾಡಿದೆ, ಮಾಡುತ್ತಲಿದೆ. ಭಾಷೆ ಉಳಿಯದಿದ್ದರೆ ಸಾಹಿತ್ಯಕ್ಕೆ ಯಾವ ಬೆಲೆ? ಬರೆದದ್ದೆಲ್ಲ ಕಪಾಟುಗಳಲ್ಲಿಯೇ ಇರಬೇಕಾಗುತ್ತದೆ. ಇಂತಹ ಸಮಯದಲ್ಲಿ ಬರಹಗಾರರಾದ ನಾವು ಸಾಕಷ್ಟು ಕೆಲಸ ಮಾಡಬೇಕಾಗಿದೆ. ನಮ್ಮ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಘಟಕವು ಕನ್ನಡದ ಏಳಿಗಾಗಿ ಉತ್ತಮ ಕೆಲಸ ಮಾಡಿದ ತಾಲೂಕಾ ಘಟಕಕ್ಕೆ ಹಾಗೂ ಜಿಲ್ಲೆಯಲ್ಲಿ ಕನ್ನಡ ಸಾಹಿತಿಗಳಲ್ಲಿ ಒಬ್ಬರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಅಲ್ಲದೆ ಯುವ ಬರಹಗಾರರನ್ನು ಉತ್ತೇಜಿಸಲು ಕಾವ್ಯ ಪ್ರಶಸ್ತಿ ಹೀಗೆ ಅನೇಕ ನವೀನ ಕಾಠ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಹೀಗೆ ಕನ್ನಡದ ಏಳ್ಗೆಗಾಗಿ ಶ್ರಮಿಸುತ್ತಿರುವುದು ಶ್ಲಾಘನೀಯ. ಇದಕ್ಕಾಗಿ ಮನದುಂಬಿ ಶ್ರೀ ಅರವಿಂದ ಕರ್ಕಿಕೋಡಿಯವರಿಗೆ ಅಭಿನಂದಿಸುತ್ತೇನೆ. ಕನ್ನಡಾಂಬೆಯ ತೇರನ್ನು ನಾವು ನೀವೆಲ್ಲ ಜೈಘೋಷದೊಂದಿಗೆ ಎಳೆಯೋಣ, ಬನ್ನಿ ಕನ್ನಡಿಗರೆಲ್ಲ ಒಂದೆನ್ನೋಣ. ಇದೇ ಸಂದರ್ಭದಲ್ಲಿ ಅಂಕೋಲೆಗೆ ಕೀರ್ತಿ ತಂದ ಜನಪದ ಕಾವ್ಯಗಳ ಕಣಜವಾದ ನನ್ನ ಬಡಗೇರಿಯ ಪದ್ಮಶ್ರೀ ಸುಕ್ರಿ ಬೊಮ್ಮ ಗೌಡ ನಾಡೋಜ ಪ್ರಶಸ್ತಿಗೆ ಭಾಜನರಾದದ್ದು ಹೆಮ್ಮೆಯಲ್ಲವೇ. ಅವರಿಗೆ ಈ ಸಂದರ್ಭದಲ್ಲಿ ವಂದಿಸುತ್ತೇನೆ. ಇದೇ ರೀತಿ ಅಂಕೋಲೆಯ ಇತಿಹಾಸದಲ್ಲಿ ಅನೇಕರು ಪ್ರಶಸ್ತಿಗೆ ಭಾಜನರಾಗಿರುವರು. ಅವರೆಲ್ಲರೂ ಪ್ರಾತಃಸ್ಮರಣೀಯರು. ಹೀಗೆ ಅಂಕೋಲೆಯ ಪ್ರಗತಿಗೆ ಕಾರಣರಾದವರಿಗೆಲ್ಲ ಮನದಲ್ಲಿಯೇ ವಂದಿಸುತ್ತ ನಮ್ಮೆಲ್ಲರ ಅಂಕೋಲೆ ಸದಾ ಜಾಗೃತವಾಗಿಯೇ ಇರಲೆಂದು ಆಶಿಸುವೆ.

ಅಂಕೋಲೆಯ ಅಗತ್ಯತೆಗಳು :

ಗಂಗಾವಳಿ ಸೇತುವೆ : ಅಂಕೋಲಾದಿಂದ ಗೋಕರ್ಣಕ್ಕೆ ತೆರಳುವ ಜನರಿಗೆ ಅತಿ ಸಮೀಪವಾಗಿರುವ ರಸ್ತೆ ಇದಾಗಿದೆ. ಪ್ರತಿದಿನ ದೋಣಿಗಳ ಮುಖಾಂತರ ನದಿ ದಾಟುವುದು ಪ್ರಯಾಸಕರವಾದ ಕೆಲಸವಾಗಿದೆ. ಮಳೆಗಾಲದಲ್ಲಂತೂ ಪ್ರಯಾಣಿಕರ ಕಷ್ಟ ನೋಡಲಾಗದು. ಕಾರಣ ಈ ನದಿಗೆ ಸೇತುವೆಯ ಅವಶ್ಯಕತೆಯಿದೆ. ಈ ಬಗ್ಗೆ ನಮ್ಮ ಶಾಸಕರು ಪ್ರಯತ್ನಿಸಿ ಯಶ ಪಡೆದಿದ್ದರು ಎಂದು ಕೇಳಿದ್ದೆ. ಆದರೆ ಆ ಕಾರ್ಯ ಇನ್ನೂ ಪ್ರಾರಂಭವಾಗದಿರುವುದು ವಿಷಾದನೀಯ. ನಮ್ಮ ಶಾಸಕಿಯರು ಈ ಕೆಲಸ ಕೂಡಲೇ ಪ್ರಾರಂಭಿಸಲು ಪ್ರಯತ್ನ ಮಾಡಬೇಕೆಂದು ಒತ್ತಾಯಿಸುತ್ತೇನೆ.

ತಾಂತ್ರಿಕ ಶಿಕ್ಷಣ ಕಾಲೇಜ : ಅಂಕೋಲೆಯ ಅನೇಕ ಸೇವಾಮನೋಭಾವನೆಯ ಮಹನೀಯರಿಂದ ಅನೇಕ ಶಾಲೆ–ಕಾಲೇಜುಗಳು ಪ್ರಾರಂಭವಾಗಿ ಶಿಕ್ಷಣದ ದೀಪ ಬೆಳಗಿಸಿದ್ದಾರೆ. ಅದರಂತೆ ಸರಕಾರವೂ ಕೂಡ ಕಾಲೇಜುಗಳನ್ನು ಸ್ಥಾಪಿಸಿದೆ. ಆದರೆ ನಮ್ಮ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯಲು ಬೇರೆ ತಾಲೂಕಿಗೆ ಹೋಗಬೇಕಾಗಿದೆ. ಕಾರಣ ನಮ್ಮ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತಾಂತ್ರಿಕ ಶಿಕ್ಷಣ ಕಾಲೇಜಿನ ಅವಶ್ಯಕತೆಯಿದೆ. ನಮ್ಮ ನೆಚ್ಚಿನ ಶಾಸಕಿಯರು ಈ ಬೇಡಿಕೆಯನ್ನು ಸರಕಾರದ ಮುಂದಿಟ್ಟು ಅಂಕೋಲೆಯ ಈ ಕನಸನ್ನು ನನಸು ಮಾಡಿಕೊಡಬೇಕಾಗಿ ವಿನಂತಿಸುವೆ.

ಸಾರ್ವಜನಿಕ ಶೌಚಾಲಯ – ದೇಶದ ತುಂಬಾ ಸ್ವಚ್ಛತಾ ಅಭಿಯಾನ ಪ್ರಾರಂಭವಾಗಿದೆ. ಸರ್ವರ ಆರೋಗ್ಯ ರಕ್ಷಣೆಗೆ ಸ್ವಚ್ಛತೆ ಎಂಬುದು ಒಂದು ಮುಖ್ಯ ಕಾರಣ.

ಆ ಬಗ್ಗೆ ಅಂಕೋಲಿಗರು ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮ ಸೌಕರ್ಯವಾದ ಶೌಚಾಲಯ ನಗರದಲ್ಲಿ ಕಡಿಮೆಯಾಗಿದೆ. ದಯವಾಡಿ ಪ್ರತಿಯೊಂದು ವಾರ್ಡುಗಳಲ್ಲಿ ಎರಡು– ಮೂರರಂತೆ ಶೌಚಾಲಯ ನಿರ್ಮಾಣ ಮಾಡಿ ಸಾರ್ವಜನಿಕರ ಆರೋಗ್ಯಕ್ಕೆ ನಮ್ಮ ಪುರಸಭೆ ಕಾರ್ಯಪ್ರವೃತ್ತವಾಗಲು ವಿನಂತಿಸುವೆ.

ಸುಸಜ್ಜಿತ ಮಾರುಕಟ್ಟೆ – ಈಗಿರುವ ಮಾರುಕಟ್ಟೆ ಚಿಕ್ಕದಿದ್ದು ಅದು ಇದ್ದರೂ ಇಲ್ಲದಂತಾಗಿದೆ. ವ್ಯಾಪಾರಸ್ಥರು, ಕಾಯಿಪಲ್ಲೆ ಮಾರುವವರು ಎಲ್ಲೆಂದರಲ್ಲಿ ವ್ಯವಹಾರ ಮಾಡುತ್ತಾರೆ. ಇದರಿಂದ ಜನಸಂದಣಿಯೂ ಆಗಿ ಓಡಾಡಲು ಕಷ್ಟವಾಗುತ್ತದೆ. ಕಾರಣ ಇಲ್ಲೊಂದು ವಿಶಾಲವಾದ ಸುಸಜ್ಜಿತ ಮಾರುಕಟ್ಟೆಯ ಅವಶ್ಯಕತೆ ಇದೆ. ಸಂಬಂಧಿಸಿದವರು ಇದರಲ್ಲಿ ಆಸ್ಥೆ ವಹಿಸಿಬೇಕೆಂದು ಕೇಳಿಕೊಳ್ಳುವೆ.

ಶಿಕ್ಷಣ ಕ್ಷೇತ್ರದ ಸುಧಾರಣೆ – ಇಲ್ಲಿ ಸಾಕಷ್ಟು ಶಿಕ್ಷಣ ಸಂಸ್ಥೆಗಳಿದ್ದರೂ ಅವುಗಳಿಗೆ ಆಟದ ಬಯಲು, ಸೈಕಲ್ಲು ನಿಲ್ಲಿಸಲು ಸ್ಥಳ ಮುಂತಾದ ಅಗತ್ಯತೆ ಕೆಲವು ಶಾಲೆಗಳಿಗೆ ಇಲ್ಲ. ಅದರಂತೆ ಸುಸಜ್ಜಿತ ವಾಚನಾಲಯಗಳ ಅವಶ್ಯಕತೆಯಿದೆ. ಓದಲು ಉತ್ತಮ ಪುಸ್ತಕಗಳು ದೊರೆಯಬೇಕು. ಮಕ್ಕಳು ಓದಿ ಜ್ಞಾನ ಗಳಿಸುವಂತೆ ನೋಡಿಕೊಳ್ಳಬೇಕು.

ಸಾಹಿತ್ಯ ಪರಿಷತ್ತು : ಒಂದು ಭಾಷೆ ಸಂಸ್ಕೃತಿ ಹಾಗೂ ಕಲೆಗಳ ಬಗೆಗೆ ಪ್ರತಿವರ್ಷಕ್ಕೊಮ್ಮೆ ಸದಭಿರುಚಿಯ ಆಯಾಮಗಳೊಡನೆ ಆಸಕ್ತರು, ಅಭಿಮಾನಿಗಳು ಒಂದೆಡೆ ಸೇರಿ ವಿವಿಧ ನಿಟ್ಟಿನಲ್ಲಿ ಚಿಂತನೆ ನಡೆಸಬೇಕಾದ ಒಂದು ಸ್ತುತ್ಯಾರ್ಹವಾದ ಕಾರ್ಯ ಅದೇ ಸಮ್ಮೇಲನ. ಇತ್ತೀಚೆಗೆ ಸಾಹಿತ್ಯ ಸಮ್ಮೇಳನಗಳಲ್ಲಿ ಹರಿದು ಬರುತ್ತಿರುವ ಅಸಂಖ್ಯ ಕನ್ನಡಾಭಿಮಾನಿಗಳ ಪ್ರವಾಹ ಜನಶಕ್ತಿಯ ಪ್ರದರ್ಶನ ತುಂಬಾ ಸಂತಸ ತರುವಂಥದ್ದಾಗಿದೆ. ಈ ಜನಶಕ್ತಿಯನ್ನು ಕ್ರಿಯಾಶೀಲವಾಗಿ, ರಚನಾತ್ಮಕವಾಗಿ ಕನ್ನಡ ಕಟ್ಟುವ ಕೆಲಸಕ್ಕೆ ಬಳಸಿಕೊಳ್ಳುವ ನಿರ್ದಿಷ್ಟ ಯೋಜನೆಗಳನ್ನು ಯೋಚಿಸಿ, ಸಮಾಲೋಚಿಸಿ ಒಪ್ಪಿತ ಕ್ರೋಢೀಕೃತ ಕಾರ್ಯಕ್ರಮಗಳಿಗೆ ರೂಪ ಕೊಡುವಂತಾಗುವುದೇ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮವೆನ್ನಬಹುದು. ಕನ್ನಡ ಭಾಷೆ ಮತ್ತು ಸಾಹಿತ್ಯದ ಸರ್ವತೋಮುಖವಾದ ಬೆಳವಣಿಗೆಗೆ ಕನ್ನಡದ ಸ್ಥಾನಮಾನ, ವಿವೇಚನೆ ಹಾಗೂ ಕನ್ನಡ ಜನಜಾಗೃತಿ ಮೊದಲಾದ ಮಹತ್ವಾಕಾಂಕ್ಷೆ ಯೋಜನೆಗಳ ಅನುಷ್ಠಾನಕ್ಕೆ ಶ್ರಮಿಸುತ್ತಿರುವ ಸಂಸ್ಥೆಯೇ ಕನ್ನಡ ಸಾಹಿತ್ಯ ಪರಿಷತ್ತು. ಕನ್ನಡ ಸಾಹಿತ್ಯದಲ್ಲಿ ಹುಲುಸಾದ ಬೆಳೆ ಬೆಳೆಯಲು, ಕನ್ನಡ ಸಾಹಿತ್ಯದ ದಿಗ್ಗಜರನ್ನು ಪ್ರೋತ್ಸಾಹಿಸಲು ಈ ಸಂಸ್ಥೆ ೧೯೧೫ರಲ್ಲಿ ಹುಟ್ಟಿಕೊಂಡಿತು. ಅಂದಿನಿಂದ ಇಂದಿನವರೆಗೂ ಕನ್ನಡದ ಏಳ್ಗೆಗಾಗಿ ಶ್ರಮಿಸುತ್ತಲಿದೆ. ಇದು ಶ್ಲಾಘನೀಯ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಸರ್ವಮಾನ್ಯ ಜ್ಞಾನಪೀಠ ಪ್ರಶಸ್ತಿ ಭಾಜರಾದ ಕಂಬಾರರವರೆಗೆ ಮಹಾನ್ ಸಾಹಿತಿಗಳು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ವಿಜೃಂಭಿಸಿದ್ದಾರೆ. ಇವರಿಂದ ನಮ್ಮ ಸಾಹಿತ್ಯ ಪರಿಷತ್ತಿನ ಘನತೆ ಹೆಚ್ಚಿದೆ.

ಇದುವರೆಗೆ ಅಂಕೋಲೆಯ ಹಿರಿಮೆ– ಗರಿಮೆಗಳ ಕುರಿತು ಹೇಳಿ ಕನ್ನಡದ ಏಳ್ಗೆಯ ಕುರಿತು ಕನ್ನಡ ವಿದ್ವಾಂಸರು ನುಡಿದ ಮುತ್ತುಗಳನ್ನು ನನಗೆ ತಿಳಿದಂತೆ ಹೇಳಿದ್ದೇನೆ. ತಪ್ಪುಗಳಿದ್ದರೆ ಮನ್ನಿಸಿರೆಂದು ಕೇಳಿಕೊಳ್ಳುವೆ. ಕೊನೆಯದಾಗಿ ನನಗೆ ಗೌರವಸ್ಥಾನ ನೀಡಿರುವುದಕ್ಕೆ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೆ, ಆಜೀವ ಸದಸ್ಯರಿಗೆ, ಜಿಲ್ಲಾ ಸಮಿತಿಯ ಎಲ್ಲ ಪದಾಧಿಕಾರಿಗಳಿಗೆ, ಸ್ವಾಗತ ಸಮಿತಿಯ ಎಲ್ಲ ಗೌರವಾನ್ವಿತರಿಗೆ, ಸಾಹಿತ್ಯ ಪ್ರೇಮಿಗಳಿಗೆ ವಂದಿಸುತ್ತ, ದಿನಕರರ ಚುಟುಕೊಂದನ್ನು ಹೇಳಿ ನನ್ನ ಮಾತಿಗೆ ವಿರಾಮ ಹೇಳುವೆ.

ನನ್ನ ಕನ್ನಡ ನುಡಿಯೆ ನೀನೆಷ್ಟು ಚೆಂದ ।
ಏನು ಗೀಚಿದರು ಆಗುವುದು ಶ್ರೀಗಂಧ ।
ಸಿಂಗರದ ಗಣಿ ನಿನ್ನ ಶಬ್ದ ಸಂಪತ್ತು ।
ಬಂಗಾರಕಿಂತಲೂ ಶ್ರೇಷ್ಠ ನುಡಿಮುತ್ತು ।

ಜೈ ಕನ್ನಡಾಂಬೆ.

ಅಂಕೋಲಾ ತಾಲೂಕಾ ಒಂಭತ್ತನೇ ಕನ್ನಡ ಸಾಹಿತ್ಯ ಸಮ್ಮೇಳನ

ದಿನಾಂಕ : ೨೦-೦೧-೨೦೨೩

ಸಮ್ಮೇಳನದ ಸರ್ವಾಧ್ಯಕ್ಷರು

ಹೊನ್ನುಡಿಯ ಹೊನ್ನಮ್ಮ ನಾಯಕ



ಅಂಕೋಲೆಯ ೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಶ್ರೀಮತಿ ಹೊನ್ನಮ್ಮ ನಾಯಕ ಅವರು ಅಂಕೋಲಾ ತಾಲೂಕಿನ ಬೆಳಸೆ ಊರಿನ ಕೃಷಿಕ ದಂಪತಿಗಳಾದ ಶ್ರೀ ಬೊಮ್ಮಯ್ಯ ನಾಯಕ ಹಾಗೂ ಶ್ರೀಮತಿ ಮಹಾದೇವಿ ಅವರ ಮಗಳು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಎಮ್.ಎ. ಪದವಿ ಹಾಗೂ ಮೈಸೂರಿನ ಮಾನಸ ಗಂಗೋತ್ರಿ ವಿಶ್ವವಿದ್ಯಾಲಯದಿಂದ ಎಂ.ಎಡ್. ಪದವಿಗಳಿಸಿದ ಇವರು, ಉಡುಪಿಯ ಸರಕಾರಿ ಮಹಿಳಾ ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ ಪ್ರಶಿಕ್ಷಕಿಯಾಗಿ ೨೩ ವರ್ಷಗಳ ಉತ್ತಮ ಸೇವೆ ಸಲ್ಲಿಸಿದ ಇವರು ನಂತರ ಅಂಕೋಲಾ ತಾಲೂಕಿನ ಹಿಲ್ಲೂರು ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಎಂಟು ವರ್ಷಗಳ ಕಾಲ ಕನ್ನಡ ಭಾಷಾ ಉಪನ್ಯಾಸಕಿಯಾಗಿ ಹಾಗೂ ಎರಡು ವರ್ಷ ತಾಲೂಕ ಕೇಂದ್ರ ಸಂಪನ್ಮೂಲ ವ್ಯಕ್ತಿಯಾಗಿ ಒಟ್ಟಾರೆ ೩೩ ವರ್ಷಗಳ ಸುದೀರ್ಘ ಸೇವೆಯನ್ನು ಶಿಕ್ಷಣ ಕ್ಷೇತ್ರಕ್ಕೆ ನೀಡಿದ್ದಾರೆ.

ಕಾವ್ಯ ರಚನೆ, ಕಾವ್ಯ ಗಾಯನ ಹಾಗೂ ಲೇಖನ ಬರಹಗಳಲ್ಲಿ ಅಪಾರ ಆಸಕ್ತಿ ಹೊಂದಿರುವ ಹೊನ್ನಮ್ಮ ಅವರು ತಮ್ಮ ನಯವಿನಯ ಒಡನಾಟ, ಅಸ್ಖಲಿತ ಮಾತುಗಾರಿಕೆಯಿಂದ ಸಾಹಿತ್ಯಾಸಕ್ತರ ಗಮನ ಸೆಳೆದ ಇವರು ಸದಾ ಸಾಂಪ್ರದಾಯಿಕ ಉಡುಪಿನಲ್ಲಿ ಶೋಭಿಸುವ ಮಂದಸ್ಮಿತರು, ಮೃದುಭಾಷಿಗಳು ಆಗಿದ್ದು ಎಲ್ಲವನ್ನು ಎಲ್ಲರನ್ನೂ ಮಮತೆಯಿಂದ ಕಾಣುವ ಮಾತೃ ಹೃದಯದವರು.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿರುವ ಇವರು 'ನಗುವಿನಲ್ಲಿ ನೋವು ಬಚ್ಚಿಟ್ಟು' ಹಾಗೂ 'ಚೈತ್ರದ ನಡಿಗೆ' ಎಂಬ ಕವನ ಸಂಕಲನಗಳನ್ನು ಮತ್ತು 'ಹೊನ್ನುಡಿ' ಎಂಬ ಚುಟುಕು ಸಂಕಲನವನ್ನು ಪ್ರಕಟಿಸಿದ್ದಾರೆ.

ದಿನಾಂಕ ೨೦-೦೧-೨೦೨೩ರಂದು ತಮ್ಮ ೬೮ನೇ ವಯಸ್ಸಿನಲ್ಲಿ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನಗಳ ಮೊದಲ ಮಹಿಳಾ ಸರ್ವಾಧ್ಯಕ್ಷರಾಗುವದ -ರೊಂದಿಗೆ ಸಮ್ಮೇಳನವನ್ನು ತಮ್ಮ ಹೊನ್ನುಡಿಗಳಿಂದ ಶ್ರೀಮಂತಗೊಳಿಸಿದರು.

ಅವರ ಕವನದ ಸಾಲುಗಳು ಹೀಗಿವೆ :

ಹೂವಿನೊಳಗಿದೆ ಗಂಧ
ನಂಬಿಕೆಯೊಳು ಬಂಧ
ಗಂಧ ಬಂಧಗಳಿರಲು
ಬದುಕು ಚಂದ

ಶ್ರೀಮತಿ ಹೊನ್ನಮ್ಮ ನಾಯಕ ಅವರ ಸರ್ವಾಧ್ಯಕ್ಷೀಯ ಭಾಷಣ

ಪ್ರಥಮ ಪೂಜಿತ ಮಹಾಗಣಪತಿಯನ್ನು ನೆನೆದು, ಅಂಕೋಲೆಯ ಸಕಲ ಶಕ್ತಿ ದೇವತೆಗಳಿಗೆ ನಮಿಸಿ, ಕನ್ನಡ ತಾಯಿ ಭುವನೇಶ್ವರಿಯನ್ನು ಸ್ಮರಿಸಿ ನನ್ನ ಮಾತನ್ನು ಪ್ರಾರಂಭಿಸುತ್ತೇನೆ.

ಅಂಕೋಲಾ ತಾಲೂಕು ಸಾಹಿತ್ಯ ಪರಿಷತ್ ಘಟಕದ ೯ನೆಯ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ ಹಿರಿಯ ಸಾಹಿತಿ ಪ್ರೊ. ಮಾಲತಿ ಪಟ್ಟಣಶೆಟ್ಟಿಯವರೆ, ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಮಾನ್ಯ ಉಸ್ತುವಾರಿ ಸಚಿವ ಕೋಟ ಶ್ರೀ ಶ್ರೀನಿವಾಸ ಪೂಜಾರಿಯವರೆ, ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರು ಹಾಗೂ ನಮ್ಮ ಕ್ಷೇತ್ರದ ಮಾನ್ಯ ಶಾಸಕಿ ಶ್ರೀಮತಿ ರೂಪಾಲಿ ನಾಯ್ಕರೆ, ಪುಸ್ತಕ ಮಳಿಗೆ ಉದ್ಘಾಟನೆ ಮಾಡಿದ ಹಿರಿಯ ಸಾಹಿತಿ ಶ್ರೀ ವಿಷ್ಣು ನಾಯ್ಕರೆ, ಸಮ್ಮೇಳನದ ದ್ವಾರಗಳ ಉದ್ಘಾಟನೆ ಮಾಡಿದ ಹಿರಿಯ ಸಾಹಿತಿ ಶ್ರೀ ಶಾಂತಾರಾಮ ನಾಯಕರೆ, ಕನ್ನಡ ಧ್ವಜ ಹಸ್ತಾಂತರಿಸಿದ ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಶ್ರೀ ನಾಗೇಂದ್ರ ನಾಯಕರೆ, ಮುಖ್ಯ ಅತಿಥಿಗಳಾದ ಪುರಸಭಾಧ್ಯಕ್ಷೆ ಶ್ರೀಮತಿ ಶಾಂತಲಾ ನಾಡಕರ್ಣಿಯವರೆ, ಪುರಸಭೆಯ ಮುಖ್ಯಾಧಿಕಾರಿ ಶ್ರೀ ಎನ್.ಎಮ್. ಮೇಸ್ತಾ ಅವರೆ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಮಂಗಳಲಕ್ಷ್ಮೀಯವರೆ, ಉತ್ತರ ಕನ್ನಡ ಕ.ಸಾ.ಪ. ಅಧ್ಯಕ್ಷ ಶ್ರೀ ಬಿ.ಎನ್. ವಾಸರೆಯವರೆ, ಅಂಕೋಲಾ ಕ.ಸಾ.ಪ. ಅಧ್ಯಕ್ಷ ಶ್ರೀ ಗೋಪಾಲಕೃಷ್ಣ ನಾಯಕರೆ, ಪರಿಷತ್ತಿನ ಇತರ ಎಲ್ಲ ಪದಾಧಿಕಾರಿಗಳೆ, ಸದಸ್ಯರೆ ಮತ್ತು ಈ ಸುಂದರ ವೇದಿಕೆಯನ್ನು ಅಲಂಕರಿಸಿರುವ ಎಲ್ಲ ಗಣ್ಯರೇ, ನಿಮಗೆಲ್ಲರಿಗೂ ನನ್ನ ಆತ್ಮೀಯ ವಂದನೆಗಳು.

ಈ ಸುಂದರ ಸಭಾಂಗಣದಲ್ಲಿ ಆಸೀನರಾಗಿ ಸಮ್ಮೇಳನಕ್ಕೆ ಕಳೆ ತುಂಬಿರುವ ನನ್ನ ಪ್ರೀತಿಯ ಎಲ್ಲ ಗುರು ಹಿರಿಯರೆ, ನಾಡಿನ ಸನ್ಮಾನ್ಯರೆ, ಸಾಹಿತ್ಯ ಸಂಸ್ಕೃತಿ ಸಹೃದಯರೆ, ಸಹೋದರ–ಸಹೋದರಿಯರೆ, ನನ್ನೆಲ್ಲ ಬಂಧುಗಳೆ ನಾನು ನಿಮ್ಮ ಮನೆಮಗಳು. ಇದೇ ನೆಲದಲ್ಲಿ ಹುಟ್ಟಿ, ನಿಮ್ಮೆದುರಲ್ಲೇ ಓಡಾಡಿ ಒಡನಾಡಿ, ನಿಮ್ಮಿಂದಲೇ ನಾಲ್ಕಕ್ಷರ ಕಲಿತು ಬದುಕಿ ಬೆಳೆದವಳು. ನಿಮಗೆಲ್ಲರಿಗೂ ನನ್ನ ಪ್ರೀತಿ ಪೂರ್ವಕ ಪ್ರಣಾಮಗಳು.

ಇಂದು ನಾನಿಲ್ಲಿ ಬಂದು ನಿಲ್ಲುವ ಅಕ್ಷರದ ಶಕ್ತಿಯನ್ನು ಅಕ್ಕರದಿ ತುಂಬಿ ಅಗಲಿರುವ ಮತ್ತು ಇಂದು ನನ್ನ ಎದುರಿರುವ ನನ್ನೆಲ್ಲ ಗುರುಗಳನ್ನು ನೆನೆದು ಭಕ್ತಿಪೂರ್ವಕವಾಗಿ ನಮಿಸುತ್ತೇನೆ.

ಅಂಕೋಲಾ ತಾಲೂಕು ೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಸ್ಥಾನ ನೀಡಿ ಈ ಸುಂದರ ಸಮ್ಮೇಳನವನ್ನು ಸಂಘಟಿಸಿದ, ಸಹಕರಿಸಿದ ತಮ್ಮೆಲ್ಲರಿಗೂ ನನ್ನ ಮನದಾಳದ ವಂದನೆಗಳನ್ನು ಸಲ್ಲಿಸುತ್ತೇನೆ.

ಅಂಕೋಲೆ ಎಂದರೆ :

ಅಂಕೋಲೆ ಎಂದರೆ ಶಕ್ತಿ ದೇವತೆಗಳ ಶಕ್ತ ಸ್ಥಲ. ಸ್ವಾತಂತ್ರ್ಯ ಹೋರಾಟದ ಕರ್ನಾಟಕದ ಬಾರ್ಡೋಲಿ. ಅಂಕೋಲೆಯೆಂದರೆ ಬಂಡಿಹಬ್ಬ, ಸುಗ್ಗಿಹಬ್ಬ, ಹೋಳಿ ಹಗರಣ. ಅಂಕೋಲೆಯೆಂದರೆ ಕವಿ–ಸಾಹಿತಿಗಳ ಬೀಡು. ಜಾನಪದ ಸಿರಿ ಸೊಗಡು. ಸರ್ವಧರ್ಮ ಸಮಾನತೆಯ ನೆಲೆವೀಡು. ಅಂಕೋಲೆಯೆಂದರೆ ಜಗತ್ಪ್ರಸಿದ್ಧ ಕರಿಇಸಾಡು.

ಸುಂದರ ಕಾಡು ಕಡಲುಗಳಿಂದಾವೃತ ಅಂಕೋಲೆಯ ಅಪ್ರತಿಮ ನಿಸರ್ಗ ಸೌಂದರ್ಯ, ಅಂಕೋಲಿಗರ ಪ್ರೀತಿ ತುಂಬಿದ ಆಂತರ್ಯ, ಅಕ್ಕರೆಯ ಅನುಪಮ ಆತಿಥ್ಯ, ಹಬ್ಬ ಹರಿದಿನಗಳ ಔಚಿತ್ಯ, ಪರಸ್ಪರ ಸ್ನೇಹ–ಸಾಮರಸ್ಯ, ಇವೆಲ್ಲ ನಮ್ಮ ಅಂಕೋಲೆಯ ಮಣ್ಣಿನ ವೈಶಿಷ್ಟ್ಯ.

ಅಂಕೋಲೆ ಮತ್ತು ಸ್ವಾತಂತ್ರ್ಯ ಹೋರಾಟ :

ನಮ್ಮ ಅಂಕೋಲೆ ಉತ್ತರ ಕನ್ನಡ ಜಿಲ್ಲೆಯಷ್ಟೇ ಅಲ್ಲದೇ, ಕರ್ನಾಟಕ ರಾಜ್ಯದ ಜಾಗೃತ ಪ್ರಜ್ಞೆಯ ಪ್ರತೀಕದಂತಿದ್ದು, ಸ್ವಾತಂತ್ರ್ಯ ಹೋರಾಟದ ಮೂಲಕ ಎಲ್ಲಿಲ್ಲದ ಪ್ರಸಿದ್ಧಿಯನ್ನು ಪಡೆದ ಪುಣ್ಯಭೂಮಿ. ಕಳೆದ ಒಂದು ಶತಮಾನದುದ್ದಕ್ಕೂ, ಸಮಾನತೆ, ಸ್ವಾತಂತ್ರ್ಯ,

ಭಾಷಾಭಿವಾನದ ಕುರಿತು ನಡೆದ ಹಲವು ಚಳುವಳಿಗಳಿಗೆ ಸಾಕ್ಷಿಯಾಗಿದೆ. ಅಸಹಕಾರ ಚಳುವಳಿಯಿಂದ ಮೊದಲ್ಗೊಂಡು ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ, ಚಲೇಜಾವ್ ಚಳವಳಿಗಳಲ್ಲಿ ಅಂಕೋಲೆಯ ಜನ ತೋರಿದ ಅಪ್ರತಿಮ ಸಾಹಸಗಾಥೆ, ದೇಶದ ಚರಿತ್ರೆಯಲ್ಲಿ ಅವಿಸ್ಮರಣೀಯ ದಾಖಲೆಯಾಗಿ ಉಳಿದಿದೆ. ಅಂಕೋಲೆಯಲ್ಲಿ ನಡೆದ ಗೋಕಾಕ ಭಾಷಾ ಚಳುವಳಿ ಸ್ಮರಣೀಯವಾದದ್ದು. ಈ ಹೋರಾಟದ ಜೊತೆ ಜೊತೆಜೊತೆಯಲ್ಲಿಯೇ ನಡೆದ ರೈತ ಚಳುವಳಿ ಕೂಡ ಸಾವಾಜಿಕ ಆರ್ಥಿಕ ಜಾಗೃತೀ ಪ್ರಜ್ಞೆಯ ಪ್ರತೀಕವಾಗಿಯೇ ನಮ್ಮೆಲ್ಲರ ಸ್ಮರಣೆಯಲ್ಲಿ ಉಳಿದುಕೊಂಡಿದೆ. 'ವಿಷ್ಣು ನಾಯಕರ ದುಡಿಯುವ ಕೈಗಳ ಹೋರಾಟದ ಕತೆ' ಈ ದಿಶೆಯಲ್ಲಿ ವಿಶಿಷ್ಟ ಕೃತಿ. ಇದರೊಂದಿಗೆ ದಯಾನಂದ ಪ್ರಭುಗಳ 'ಭೂಗತನ ನೆನಪುಗಳು' ಅದ್ಭುತ ಕೃತಿಯನ್ನು ಕೂಡ ಇಂದಿನ ಜನಾಂಗ ಓದಲೇ ಬೇಕು. ಹಿರಿಯ ಕವಿ ಸಾಹಿತಿ ಶಾಂತಾರಾಮ ನಾಯಕ ಹಿಚ್ಕಡ ಅವರು ನಮ್ಮ ಅಂಕೋಲೆಯ ಸ್ವಾತಂತ್ರ್ಯ ಸಮರದ ಕುರಿತೇ ಐದು ಕೃತಿಗಳನ್ನು ರಚಿಸಿರುವುದು ಸಾಮಾನ್ಯ ಮಾತಲ್ಲ. 'ಸ್ವಾತಂತ್ರ್ಯ ಹೋರಾಟದ ಹೊರಳು ನೋಟ', 'ಚರಿತ್ರೆಯಲ್ಲಿ ಮರೆತವರ ಕತೆ', 'ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆ', 'ಸ್ವಾತಂತ್ರ್ಯ ಹೋರಾಟದಲ್ಲಿ ನಾಡವರು' ಮತ್ತು ಇತ್ತೀಚೆಗೆ ಬಿಡುಗಡೆಯಾದ ಕೃತಿ 'ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು'. ಇವರ ಈ ಎಲ್ಲ ಕೃತಿಗಳು ಹೋರಾಟದ ವಿಭಿನ್ನ ಮುಖಗಳನ್ನು ಮನದಟ್ಟು ಮಾಡುತ್ತವೆ. ಇವರೆಲ್ಲರ ಕೃತಿಗಳ ಓದು ಜನಜಾಗೃತಿ ಮೂಡಿಸುತ್ತಿದೆ ಎನ್ನುವುದಕ್ಕೆ ಈತ್ತೀಚೆಗೆ ಉಳುವರೆ, ಕಣಗೀಲ ಮುಂತಾದೆಡೆ ಸ್ವಾತಂತ್ರ್ಯ ಯೋಧರನ್ನು ನೆನೆದು ಅವರ ಕುಟುಂಬದವರನ್ನು ಸನ್ಮಾನಿಸುವ ಕಾರ್ಯಕ್ರಮಗಳು ನಡೆದಿರುವುದೇ ಸಾಕ್ಷಿಯಾಗಿದೆ.

ಅಂಕೋಲೆಯ ಇತಿಹಾಸದ ಮೈಲುಗಲ್ಲುಗಳಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆಗೈದು ಘನತೆಗೆ ಪಾತ್ರರಾದ ಲೆಕ್ಕವಿಲ್ಲದಷ್ಟು ಹಿರಿಯರಿದ್ದಾರೆ. ಎಲ್ಲರನ್ನೂ ಹೆಸರಿಸಲಾಗದಿದ್ದರೂ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಬಾಸಗೋಡ ರಾಮ ನಾಯಕ, ತಿಮ್ಮಪ್ಪ ನಾಯಕ, ಉಳುವರೆ ರಾಮದಾಸ ಗೌಡ, ಭಾವಿಕೇರಿ ರಾಮ ನಾಯಕ, ಶತಾಯುಷಿ ಜೋಗಿ ಬೀರಣ್ಣ ನಾಯಕ, ಬೊಮ್ಮಯ್ಯ ಗಾಂವಕರ ಬಾಸಗೋಡ, ಶಂಕರ ಕೇಣಿ, ಜೀವನ ಶಿಕ್ಷಣ ಮಾದರಿ ಶಿಕ್ಷಕ ರಾಷ್ಟ್ರಪ್ರಶಸ್ತಿ ಪುರಸ್ಕೃತ ಜೋಗಿ ಬೊಮ್ಮಯ್ಯ ನಾಯಕ (ಜೋಗ್ ಮಾಸ್ತರ) ಇತ್ತೀಚೆಗೆ ಅಗಲಿದ ಶತಾಯುಷಿ ವೆಂಕಣ್ಣ ನಾಯಕ ಸೂರ್ವೆ, ಇನ್ನೂ ಅನೇಕರು ಸ್ಮರಣೀಯರು.

ಅಂಕೋಲೆಯ ಎಲ್ಲ ಜನಾಂಗದವರು ಸ್ತ್ರೀ–ಪುರುಷ ಭೇದವಿಲ್ಲದೆ ಹೋರಾಟದಲ್ಲಿ ಪಾಲ್ಗೊಂಡಿದ್ದರು. ತೆರೆಮರೆಯಲ್ಲೇ ಉಳಿದ ಅಂಕೋಲೆಯ ಎಷ್ಟೋ ಮಹಿಳೆಯರ ಪರಿಚಯ ಅವರ ಕೃತಿಯಲ್ಲಿದೆ. ದಿಟ್ಟ ಮಹಿಳೆಯರಲ್ಲಿ ಅಗ್ರ ಸ್ಥಾನದಲ್ಲಿರುವ ಒಬ್ಬರ ಕುರಿತು ನಾನು ಹೇಳಲೇ ಬೇಕು. ಅವರು ನಮ್ಮೂರಿನವರು ನಮ್ಮ ನೆರೆಮನೆಯವರು, ನಮ್ಮ ಒಡನಾಟಕ್ಕೆ ದೊರೆತವರು ಕಣಗಿಲದ ವೀರವನಿತೆ ಕಾಣೆ ಬೊಮ್ಮಕ್ಕ. 'ಗೋ ಬ್ಯಾಕ್ ಗವರ್ನರ್' ಎನ್ನುತ್ತಾ ಕಾವಲು ಪಡೆಯ ಕಣ್ಣು ತಪ್ಪಿಸಿ ಸೆರಗಲ್ಲಿ ಅಡಗಿಸಿಟ್ಟುಕೊಂಡ ಕರಿ ಪತಾಕೆ ಹಿಡಿದು ಆರ್ಭಟಿಸುತ್ತ ಮುನ್ನುಗ್ಗಿದ ಅವರ ವೀರಾವೇಶ ಬ್ರಿಟಿಷ್ ಪಡೆಗೆ ದಿಗ್ಭ್ರಮೆ ಮೂಡಿಸಿದರೆ ಇಂದು ಓದುತ್ತಿದ್ದಂತೆ ನಮ್ಮನ್ನು ಕಂಗಾಲು ಮಾಡುತ್ತದೆ.

ಮಹಾತ್ಮ ಗಾಂಧಿ ಪ್ರಾರಂಭಿಸಿದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹಾಗೂ ಅವರಲ್ಲಿ ಹೆಚ್ಚಿನವರು ಅನಕ್ಷರಸ್ಥರಾಗಿದ್ದರೆಂಬುದು ಗಮನೀಯ. ಗಾಂಧಿ ಚಿಂತನೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡು ಗಾಂಧಿ ತತ್ವದೊಂದಿಗೆ ಮತ್ತು ಅಂಥವರ ನಡುವೆ ಬದುಕಿದ ಅನೇಕರ ತಾಯ್ನೆಲವಿದು. ಗಾಂಧೀಜಿ ಅಂದು ನಮ್ಮ ಅಂಕೋಲೆಗೆ ಬಂದಾಗ ಕರೆ ಕೊಟ್ಟ ಪವಿತ್ರ ಸ್ಥಳವೇ ನಮ್ಮ ಅಂಕೋಲೆಯ ಗಾಂಧೀ ಮೈದಾನ. ಅಂದು ಸಭೆಗೆ ಸೇರಿದ ಜನಸಾಗರದಲ್ಲಿ ಮಡಿಲಲ್ಲಿ ಮಗುವನ್ನೆತ್ತಿಕೊಂಡು ಉಟ್ಟ ಬಟ್ಟೆಯಲ್ಲಿಯೇ ಬಂದ ಎಷ್ಟೋ ಹಳ್ಳಿ ಹಳ್ಳಿಯ ಮಹಿಳೆಯರು ಗಾಂಧೀಜಿಗೆ ನಾವೇನು ಕೊಡಬಲ್ಲೆವು ಎಂಬ ಅಸಹಾಯಕತೆಯಿಂದ ಕತ್ತಿನಲ್ಲಿದ್ದ ಏಕೈಕ ಕರಿಮಣಿ ತಾಳಿಯನ್ನೇ ಕಿತ್ತೆಸೆದರೆಂಬುದು ಸ್ವಾತಂತ್ರ್ಯ ಯೋಧರ ಕುಟುಂಬದ ಹಿರಿಯರ ಬಾಯಿಂದ ಬಂದ ಸತ್ಯವಾಗಿದೆ.

"ತಾಯಿಯ ಬಂಧನ ಮುಕ್ತಗೊಳಿಸಲು
ಸಕಲ ಭಾಗ್ಯವನು ತೊರೆದವರು
ಬದುಕು–ಭಾವ ಬಂಗಾರದೊಡವೆಗಳ
ಬಹು ಸಂತಸದಲಿ ಎಸೆದವರು.

ದಿಟ್ಟತನದಿ ಹೋರಾಡುತ ಅಂಜದೆ
ಬಿಳಿಯರ ಏಟನು ತಿಂದವರು
ನಾರಿ ನಿಮಗೆ ಹೆಮ್ಮಾರಿ ಎನುತಲಿ
ಕರಿಯ ಪತಾಕೆಯ ಹಿಡಿದವರು!
ಗಾಂಧಿತಾತ ಅಂಕೋಲೆಗೆ ಬರಲು
ಇದ್ದುದನೆಲ್ಲವ ನೀಡಿದರು
ನಿಮ್ಮಯ ತತ್ವಕೆ ಬದ್ಧರು ನಾವು
ಎನ್ನುತ ಉಪ್ಪನು ಎತ್ತಿದರು." – ಇವು ನನ್ನ ಕವನದ ಸಾಲುಗಳು.

ಅಂಕೋಲಾ ಮತ್ತು ಸಮಾಜ ಸೇವೆ :

ಅಂಕೋಲೆಯ ಉಪ್ಪಿನ ಸತ್ಯಾಗ್ರಹ ಮತ್ತು ಕರನಿರಾಕರಣೆ ಚಳುವಳಿಯಿಂದ ಸ್ಫೂರ್ತಿಗೊಂಡು ದಿನಕರ ದೇಸಾಯಿಯವರು ಸಮಾಜ ಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡು ರೈತ ಚಳುವಳಿಯನ್ನು ಪ್ರಾರಂಭಿಸಿದರು. ಸ್ವಂತದ ಹೊಲ ಮನೆ ಇರಬೇಕು, ರೈತನಿಗೆ ಅನ್ನ ಸಿಗಬೇಕು ಎಂಬ ದೇಶದ ಹಿತವನ್ನು ನಂಬಿ ನಡೆದ ಹೋರಾಟವಿದು. ರೈತ ಸಭೆಯಿಂದ ಲೋಕಸಭೆಯ ವರೆಗೆ ನಡೆದ ಹೋರಾಟದ ಚೈತ್ರ ಯಾತ್ರೆಯಲ್ಲಿ ಅಂಕೋಲೆಯ ಅನೇಕ ಸಮಾಜ ಸುಧಾರಕರು ಭಾಗಿಗಳಾದರು. ಸ.ಪ. ಗಾಂವಕರ, ದಯಾನಂದ ನಾಡಕರ್ಣಿ, ಹರಿ ಅನಂತ ಪೈ ಮೊದಲಾದವರನ್ನು ಹೆಸರಿಸಬಹುದು. ಅಂದಿನ ದಿನಗಳಲ್ಲಿಯೇ ಅಂಕೋಲೆ ಸಮಾಜದ ಪ್ರತಿಯೊಂದು ರಂಗದಲ್ಲಿ ಗಂಡು ಹೆಣ್ಣೆಂಬ ತಾರತಮ್ಯವಿಲ್ಲದ ಸಾಮಾಜಿಕತೆಯ ತವರಾಗಿತ್ತು. ಮುಂದಿನ ದಿನಗಳಲ್ಲಿ ಜನಸೇವಕ ಪತ್ರಿಕೆಯ ಅಮ್ಮೆಂಬಾಳ ಆನಂದರ ಪತ್ನಿ ಗಂಗಾಬಾಯಿ, ಸುಂದರಿ ಸುವರ್ಣ, ವಿಜಯಾ ನಾಡಕರ್ಣಿ, ಕುಸುಮಾ ನಾರ್ವೇಕರ್, ಪ್ರೇಮಾ ಪಿಕಳೆ, ವಿದ್ಯಾಬಾಯಿ ನಾರ್ವೇಕರ, ಶಾಂತಾ ಹೆಗಡೆ ಮುಂತಾದವರು ಸಾಮಾಜಿಕವಾಗಿ ಕ್ರಿಯಾಶೀಲ ಮಹಿಳೆಯರಾಗಿದ್ದರು. ಇವರೊಂದಿಗೆ ಇತ್ತೀಚೆಗೆ 'ಜೀವಿತಾವಧಿ ಸಾಧನಾ ಪ್ರಶಸ್ತಿ' ಪಡೆದ ಶಾಲಿನಿ ಕಾಳೆ, ಶಶಿಕಲಾ ಶೆಟ್ಟಿ ಮತ್ತು ಕಣಗಿಲದ ಶಶಿಕಲಾ ನಾಯಕ ಯಾವ ಸದ್ದು ಗದ್ದಲವಿಲ್ಲದೆ ಮಹಿಳಾ ಸಬಲೀಕರಣದಲ್ಲಿ ತೊಡಗಿಸಿಕೊಂಡು ಮಾದರಿಯಾಗಿ ಮುಂದುವರಿಯುತ್ತಿದ್ದಾರೆ. ಇಂದು ನಮ್ಮ ಅಂಕೋಲೆಯ ಜನಪ್ರತಿನಿಧಿಗಳಾಗಿ, ರೂಪಾಲಿ ನಾಯ್ಕ, ಸುಜಾತಾ ಗಾಂವಕರ, ಶಾಂತಲಾ ನಾಡಕರ್ಣಿ ಮೊದಲಾದವರು ನಮ್ಮ ಮುಂದಿದ್ದಾರೆ.

ಈ ದಿಶೆಯಲ್ಲಿ ವಿಚಾರ ಮಾಡಿದಾಗ ಕನ್ನಡ ಸಾಹಿತ್ಯ ಪರಿಷತ್ತಿನ ಅಂಕೋಲಾ ಘಟಕ ಓರ್ವ ಮಹಿಳೆಯನ್ನು ೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ ಹಿನ್ನೆಲೆಯಲ್ಲಿ ಆಯ್ಕೆ ಸಮಿತಿಯನ್ನು ಅಂಕೋಲೆಯ ಎಲ್ಲ ಮಹಿಳೆಯರ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಗೌರವದ ಸ್ಥಾನವನ್ನು ನಾನು ಅತ್ಯಂತ ವಿನೀತಳಾಗಿ ಪ್ರೀತಿಯಿಂದ ಸ್ವೀಕರಿಸಿದ್ದು ತುಂಬು ಮನದ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಅಂದು ಸಮಾಜದ ಶೋಷಿತ ವರ್ಗ ಮತ್ತು ನಿರ್ಲಕ್ಷ್ಯಕ್ಕೆ ತುತ್ತಾದವರಿಗಾಗಿ, ಅಸಹಾಯಕರಿಗಾಗಿ ಸ.ಪ. ಗಾಂವಕರ ಕಟ್ಟಿದ 'ಗಾಂಧಿ ನಿವಾಸ' ಅನೇಕರಿಗೆ ಆಶ್ರಯವಿತ್ತು ವಿದ್ಯಾವಂತರನ್ನಾಗಿ ಮಾಡಿದೆ ಮತ್ತು ಅನೇಕರು ಗಣ್ಯ ವ್ಯಕ್ತಿಗಳಾಗಿ ಬೆಳೆದಿದ್ದಾರೆ. ಯಲ್ಲಾಪುರದ ಎಮ್.ಎಲ್.ಸಿ. ಶಾಂತಾರಾಮ ಸಿದ್ದಿ ಮತ್ತು ಅಂಕೋಲೆಯ ಖ್ಯಾತ ಯಕ್ಷಗಾನ ಭಾಗವತ ಆನಂದು ಆಗೇರ ಇಲ್ಲಿಯೇ ಓದಿದವರು. ಸ.ಪ ಗಾಂವಕರ ಅವರ ಮೊಮ್ಮಗಳು ಜಿ.ಸಿ. ಕಾಲೇಜಿನ ನಿವೃತ್ತ ಇಂಗ್ಲಿಷ್ ಪ್ರೊ. ನಿರ್ಮಲಾ ಗಾಂವಕರ, ಅವರ ಸೇವೆಯನ್ನು ಮುಂದುವರಿಸಿಕೊಂಡು ಬಂದು ತನ್ನನ್ನು ಸಂಪೂರ್ಣವಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ನಮ್ಮ ಮುಂದಿದ್ದಾರೆ. ಅವರನ್ನು ಅರಿಯದ ಅಂಕೋಲಿಗರಿಲ್ಲ. ಅಂದಿನ 'ಗಾಂಧಿ ನಿವಾಸ'ವೇ ನಾವಿಂದು ಸೇರಿರುವ 'ನಾಡವರ ಸಮುದಾಯ ಭವನ' ಕಳೆದ ವರ್ಷವಷ್ಟೇ ಸನ್ಮಾನ್ಯರಾದ ಸ.ಪ. ಗಾಂವಕರ ಅವರ ಸುಂದರ ಕಂಚಿನ ಪ್ರತಿಮೆಯನ್ನು ಅವರ ಕುಟುಂಬದವರ ಉಪಸ್ಥಿತಿಯಲ್ಲಿ ಹೆಬ್ಬಾಗಿಲಲ್ಲಿ ನಿಲ್ಲಿಸಿ ಗೌರವ ಸಲ್ಲಿಸಿದ್ದೇವೆ.

ಇಂದು ನಮ್ಮೊಂದಿಗಿರುವ ನಮ್ಮ ಉತ್ತರ ಕನ್ನಡ ಜಿಲ್ಲೆಯ ಮೊದಲ 'ಜಿಲ್ಲಾ ಪಂಚಾಯತ ಅಧ್ಯಕ್ಷ'ರಾಗಿ ಸೇವೆ ಸಲ್ಲಿಸಿ ಮೌಲ್ಯಾಧಾರಿತ ರಾಜಕಾರಣಿ ಎಂದು ಹೆಸರುಗಳಿಸಿರುವ ರಮಾನಂದ ನಾಯಕ ಹಿಚ್ಕಡ ನಮ್ಮ ಅಂಕೋಲೆಯವರು. ಅಂಕೋಲೆಯ ಎಲ್ಲ ಕಾರ್ಯಕ್ರಮ ಚಟುವಟಿಕೆಗಳಲ್ಲಿ ಅವರ ಉಪಸ್ಥಿತಿ ಅಭಿನಂದನೀಯ.

೧೯೪೦ರಲ್ಲಿ ಕೇರಳದಿಂದ ಬಂದ ಫಾದರ್ ರೆವೆರೆಂಡ್ ಪಿ.ಜೆ. ಥಾಮಸ್ ಅಂದು ಅಂಕೋಲೆಯ ಅಜ್ಜಿಕಟ್ಟೆಯಲ್ಲಿ ಆರಂಭಿಸಿದ ಆಸ್ಪತ್ರೆ, ಅಂಕೋಲಾದ

ವೈದ್ಯಕೀಯ ಕ್ಷೇತ್ರದಲ್ಲಿ ಮೊದಲ ಆಸ್ಪತ್ರೆ, ಉತ್ತರ ಕನ್ನಡದ ವೈದ್ಯಕೀಯ ಇತಿಹಾಸದಲ್ಲಿ ಮೊದಲ ಎಕ್ಸ್–ರೇ ಮಷಿನ್ ಹೊಂದಿದ ಆಸ್ಪತ್ರೆ ಕೂಡಾ ಅಂಕೋಲಾದ ಕ್ರೈಸ್ತ ಮಿಶನರಿಯೇ ಆಗಿತ್ತು. ೧೯೫೦ ರಲ್ಲಿ ಸುಸಜ್ಜಿತ ಆಸ್ಪತ್ರೆ, ಚರ್ಚುಗಳೆಲ್ಲಾ ಫಾದರ್ ಪಿ. ಜೆ. ಥಾಮಸ್‌ರ ನೇತೃತ್ವದಲ್ಲಿ ಆರಂಭವಾಗಿ ಕ್ರಿಸ್ತ ಮಿತ್ರ ಆಶ್ರಮವಾಗಿ ಮುನ್ನಡೆದು ನೀಡಿದ ಸೇವೆ ಮರೆಯಲಾಗದು.

ಅಂಕೋಲೆ ಮತ್ತು ಸಾಹಿತ್ಯ :

'ಸಾಹಿತ್ಯ' ಎಂದರೆ ಸಹಿತವಾಗಿರುವುದು. ಸಾಂಸ್ಕೃತಿಕ ವಿಕಾಸಕ್ಕೆ ಸಾಹಿತ್ಯವೇ ಸಾಧನ. ಉತ್ತಮ ಸಾಹಿತ್ಯವನ್ನು ಒದಗಿಸುವುದರ ಮೂಲಕ ಸಾಂಸ್ಕೃತಿಕ ಮಟ್ಟವನ್ನು ಎತ್ತರಿಸುವ ಹೊಣೆ ಸಾಹಿತಿಗಳದಾಗಿದೆ. ಅನುಭವದಿಂದ ಸೃಷ್ಟಿಗೊಳ್ಳುವ ಸಾಹಿತ್ಯಕ್ಕೆ ತಾನೇ ತಾನಾಗಿ ನೈಜತೆ ಮತ್ತು ಪ್ರಭುತ್ವ ಪ್ರಾಪ್ತವಾಗುತ್ತದೆ. ಬರಹ ಸಾಹಿತ್ಯ ಅನ್ನಿಸಿಕೊಳ್ಳುವುದು ಬರಹಗಾರನ ಆಲೋಚನಾ ವಿಧಾನ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದಿಂದ. ಸಾಹಿತ್ಯ ಎಂದರೇನು ಎಂಬ ಪ್ರಶ್ನೆ ಬಹಳ ಹಳೆಯದಾದರೂ ಈ ಪ್ರಶ್ನೆಯ ಉತ್ತರಗಳು ಮತ್ತೆ ಮತ್ತೆ ತಿದ್ದಲ್ಪಟ್ಟಿವೆ. ಅಕ್ಷರ ರೂಪದಲ್ಲಿರುವ ಕಥೆ, ಕವಿತೆ, ನಾಟಕಗಳಷ್ಟೇ ಅಲ್ಲದೆ ಮೌಖಿಕ ಪರಂಪರೆಯ ಸೃಜನಶೀಲ ಸಂರಚನೆಗಳನ್ನು ಸಾಹಿತ್ಯದ ಪರಿಧಿಗೆ ಸೇರಿಸಲಾಗಿದೆ. ಇಂದು ಸಾಹಿತ್ಯವೆಂದರೆ ಜ್ಞಾನದ ಎಲ್ಲ ಬಗೆಯ ರಚನೆಗಳನ್ನು ದಾಖಲಿಸುವ, ಗ್ರಹಿಸುವ ಮತ್ತು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಪರಿಕರವೆಂದು ಪರಿಗಣಿಸಲಾಗಿದೆ. ಓದುಗನ ಕೈ ಸೇರುತ್ತಲೇ ಸಾಹಿತ್ಯ ಕೃತಿಯೊಂದು ಓದುಗನದಾಗಿ ಬಿಡುತ್ತದೆ. ಓದುಗನ ಸಂವೇದನೆ ಲೋಕದೊಂದಿಗೆ ಮುಖಾಮುಖಿಯಾಗುತ್ತದೆ.

ಜ್ಞಾನ ಸಂಪಾದನೆಯೊಂದಿಗೆ ತಾಯ್ನೆಲ, ತಾಯ್ನುಡಿಯ ಪ್ರೀತಿಗಾಗಿ, ಮಾನವತೆಯ ಮಿಡಿತಕ್ಕಾಗಿ, ಜೀವಂತ ಬದುಕಿಗಾಗಿ ಸಾಹಿತ್ಯ ಬೇಕು. ಆದಿಕವಿ ಪಂಪನಿಂದ ಹಿಡಿದು ಇಂದಿನ ವರೆಗೆ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ದಾಸ ಕೀರ್ತನ, ಶರಣರ ವಚನ ಮತ್ತು ನವ್ಯ ಸಾಹಿತ್ಯದ ಪ್ರಕಾರಗಳೆಲ್ಲ ಬಿತ್ತಿದ್ದು ಸಾರ್ಥಕ ಬದುಕಿನ ಬೀಜವನ್ನೇ. ಸಾಹಿತ್ಯ ಬದುಕಿನ ಎಲ್ಲ ಮುಖಗಳ ಚಿತ್ರಣವಾಗಿದ್ದು ಅದಕು ಇದಕು ಎಲ್ಲದಕ್ಕೂ ಬಳಸಿಕೊಳ್ಳುವ ಕಲೆಯಾಗಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಅಂಕೋಲೆ ಸಮೃದ್ಧ ಎನಿಸುವಷ್ಟು ಪ್ರಸಿದ್ಧಿಯನ್ನು ಪಡೆದಿದೆ. ಹಿಂದಿನ ತಲೆಮಾರಿನಲ್ಲಿ ಲಕ್ಷ್ಮಣ ಬಾಬಣಿ ಪೈ, ಸ.ಪ. ಗಾಂವಕರ, ದಯಾನಂದ ಪ್ರಭು, ಡೆಂಗಾ ನಾಯ್ಕ, ಮ.ಗ. ಶೆಟ್ಟಿ, ಗೀತಾ ಮನೋಹರ (ಕುಸುಮಾ ಕೇಣಿಕರ್) ಮೊದಲಾದವರು ಅಂಕೋಲೆಯ ಸಾಹಿತ್ಯ ಪರಂಪರೆಗೆ ಭದ್ರ ಬುನಾದಿ ಹಾಕಿದರು. ಸ.ಪ. ಗಾಂವಕರ ವರಕವಿ ಬೇಂದ್ರೆಯವರ ಒಡನಾಡಿಗಳಾಗಿದ್ದರು.

ಸ.ಪ. ಗಾಂವಕರರಿಂದ ಪ್ರಭಾವಿತರಾದ ಚುಟುಕು ಬ್ರಹ್ಮ ದಿನಕರ ದೇಸಾಯಿಯವರು ಸಾಹಿತ್ಯ ಮತ್ತು ಸಮಾಜ ಸೇವೆಯೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಎಂದಿಗೂ ಮರೆಯಲಾಗದ್ದು. ಅವರ 'ನನ್ನ ದೇಹದ ಬೂದಿ' ಕವನ ಅವರು ಬರೆದಂತೆ ಬದುಕಿದ ಸಾರ್ಥಕತೆಯನ್ನು ತೆರೆದಿಟ್ಟಿದೆ. ದಿನಕರ ದೇಸಾಯಿ, ದಯಾನಂದ ನಾಡಕರ್ಣಿ, ಶೇಷಗಿರಿ ಪಿಕಳೆ ಈ ತ್ರಿಮೂರ್ತಿಗಳಿಂದ ಸ್ಥಾಪಿತವಾದ 'ಕೆನರಾ ವೆಲ್‌ಫೇರ್ ಟ್ರಸ್ಟ್' ಮುಂದೆ ಬೆಳೆದು ಅಂಕೋಲೆಯ ಮನೆ ಮನೆಗಳಲ್ಲಿ ಪದವೀಧರರನ್ನು ಸೃಷ್ಟಿ ಮಾಡಿದೆ. ಅನ್ನ ಕೊಟ್ಟಿದೆ, ಬದುಕು ಕೊಟ್ಟಿದೆ. ಮುಂದಿನ ದಿನಗಳಲ್ಲಿ ಶೇಷಗಿರಿ ಪಿಕಳೆ ಮತ್ತು ಪ್ರೇಮಾ ಪಿಕಳೆ ದಂಪತಿಗಳು ಕಟ್ಟಿದ 'ನೂತನ ಸಭಾ ಟ್ರಸ್ಟ್' ಹಾಗೂ ಕೆ.ಎಲ್.ಇ. ಸಮೂಹ ಸಂಸ್ಥೆಗಳ ಸೇವೆ ಕೂಡ ಅಷ್ಟೇ ಮಹತ್ತರವಾದದ್ದು. ಇವರಿಬ್ಬರೂ ಅಂಕೋಲೆಯ ಜನಮನಕ್ಕೆ ಪ್ರಾತಃಸ್ಮರಣೀಯರು. ಈ ನೆಲದ ಚಿರಸ್ಮರಣೀಯ ಚೇತನಗಳು.

ಅಂಕೋಲೆಯ ಜಿ.ಸಿ. ಕಾಲೇಜಿನ ಪ್ರಥಮ ಪ್ರಾಚಾರ್ಯ ಕೆ.ಜಿ. ನಾಯಕರ ನೇತೃತ್ವ, ಅಂದು ಸಮರ್ಥ ಪ್ರಾಧ್ಯಾಪಕ ವೃಂದದವರೊಂದಿಗೆ ಶಿಕ್ಷಣವಷ್ಟೇ ಅಲ್ಲದೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಅಪಾರವಾದ ಕೊಡುಗೆಯನ್ನು ನಾವೆಂದೂ ಮರೆಯಲಾಗದು. ಇಲ್ಲಿಯೇ ತಮ್ಮ ಅಮೂಲ್ಯ ಸೇವೆ ಗೈದವರು 'ಖಾನಾವಳಿ ಡಬ್ಬಿ' ಪ್ರಬಂಧ ಸಂಕಲನದ ಮೂಲಕ ಗಮನ ಸೆಳೆದ ಶ್ಯಾಮ ಹುದ್ದಾರ ಮತ್ತು 'ಜನ ಸೇವಕ' ಪತ್ರಿಕೆಯ ಅಮ್ಮೆಂಬಾಳ ಆನಂದರು. ಇವರನ್ನು ಅಂಕೋಲೆ ಸದಾ ಸ್ಮರಿಸುತ್ತದೆ. ಮುಂದೆ ವಿ. ಜೆ. ನಾಯಕ, ವಿಷ್ಣು ನಾಯ್ಕ, ಶಾಂತಾರಾಮ ನಾಯಕ ಹಿಚ್ಕಡ, ವಿ.ಎ. ಜೋಷಿ, ಮೋಹನ ಹಬ್ಬು,

ಡಾ. ರಾಮಕೃಷ್ಣ ಗುಂದಿ ಮೊದಲಾದವರು ತಮ್ಮ ಕೃತಿ ರಚನೆಗಳಿಂದ ಅಂಕೋಲೆಯ ಸಾಹಿತ್ಯ ಕ್ಷೇತ್ರಕ್ಕೆ ಶಕ್ತಿ ತುಂಬಿದ್ದಾರೆ.

ಇವರೆಲ್ಲ ನಾಲ್ಕೈದು ದಶಕಗಳಿಂದ ಶಿಕ್ಷಕ, ಕವಿ, ಸಾಹಿತಿ, ಕತೆಗಾರ, ನಾಟಕಕಾರ, ಯಕ್ಷಗಾನ ಕಲಾವಿದ ಮತ್ತು ಸಂಪಾದಕರಾಗಿ ನಾಡಿನ ಸಾಹಿತ್ಯಾಸಕ್ತರಿಗೆ ಸುಪರಿಚಿತರು. ಅಂಕೋಲೆಯ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಂಘ, ಸಂಘಟನೆ, ಸಭೆ, ಸಮಾರಂಭ, ಸಮ್ಮೇಳನ, ಚಳುವಳಿ ಇತ್ಯಾದಿಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಅಂಕೋಲೆಯ ಜನಮಾನಸದಲ್ಲಿ ಶಾಶ್ವತವಾಗಿ ನೆಲೆ ನಿಂತವರು. ಇವೆಲ್ಲವನ್ನೂ ಮೀರಿ ಪ್ರಕಾಶನ, ಪ್ರತಿಷ್ಠಾನಗಳ ಮೂಲಕ ಅಂಕೋಲೆಯಲ್ಲಿ ಅಪಾರ ಕವಿ ಸಾಹಿತಿಗಳ ಬಳಗವನ್ನು ಹುಟ್ಟು ಹಾಕಿ, ಕಿರಿಯರ ಬೆನ್ನು ತಟ್ಟಿ ಬೆಳೆಸಿದ ಹಿರಿಯರು.

ಮೈಸೂರಲ್ಲಿ ನೆಲೆಸಿರುವ ಪಂಪ ಪ್ರಶಸ್ತಿ ಪುರಸ್ಕೃತ ಜಿ. ಎಚ್. ನಾಯಕರು ಗಣನೀಯವಾಗಿ ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಂಡ ಖ್ಯಾತ ವಿಮರ್ಶಕರು. ಪತ್ನಿ ಶಿಕ್ಷಕಿ ಮೀರಾ ನಾಯಕ 'ಸಮತಾ ವೇದಿಕೆ' ಹುಟ್ಟು ಹಾಕಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರು. ಹೊನ್ನಾವರದಲ್ಲಿ ನೆಲೆಸಿರುವ ಜಾನಪದ ತಜ್ಞ ಡಾ. ಎನ್. ಆರ್. ನಾಯಕ ಮತ್ತು ಶಾಂತಿ ನಾಯಕ ದಂಪತಿಗಳು ತಮ್ಮ ಬಹುಮುಖ ಸಾಹಿತ್ಯ ಸೇವೆಯೊಂದಿಗೆ ಜಾನಪದ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ ಅಪೂರ್ವವಾದುದು. ಇಲ್ಲಿ ನಾವು ಶಿಕ್ಷಕ ದಿ. ವಿ.ವೆ. ತೊರ್ಕೆಯವರನ್ನು ಕೂಡ ಸ್ಮರಿಸಿಕೊಳ್ಳಲೇಬೇಕು.

ಸರಿ ಸುಮಾರು ೭೦/೮೦ರ ದಶಕದಿಂದ ಇಂದಿನ ವರೆಗೆ ಕಂಡು ಬರುವ ಸಾಹಿತ್ಯ ಕ್ಷೇತ್ರದಲ್ಲಿ ಕಥೆ, ಕಾವ್ಯ, ಕವನ, ನಾಟಕ, ಕಾದಂಬರಿ, ಪ್ರವಾಸ, ಪ್ರಬಂಧಗಳಾದಿಯಾಗಿ ಅಂಕೋಲೆಯಲ್ಲಿ ಬೆಳೆಯುತ್ತಿರುವ ಸಾಹಿತಿಗಳ ಗಣನೀಯ ಸಂಖ್ಯೆ ಹೆಮ್ಮೆ ಪಡುವಂಥದ್ದು. ಶಾಂತಾರಾಮ ಬಾಳೇಗುಳಿ, ಶ್ರೀನಿವಾಸ ಶೆಟ್ಟಿ, ಬಿ. ಹೊನ್ನಪ್ಪ, ನಾಗೇಂದ್ರ ನಾಯಕ ತೊರ್ಕೆ, ಎನ್.ವಿ. ನಾಯಕ, ಮಾದೇವ ಮಾಸ್ತರ ಸೂರ್ವೆ, ಶಿವಬಾಬಾ ನಾಯ್ಕ, ಕೆ.ಟಿ ನಾಯಕ, ಜಿ.ಆರ್. ನಾಯಕ, ಜೆ. ಪ್ರೇಮಾನಂದ, ಜಿ. ಯು. ನಾಯಕ, ಕೃಷ್ಣ ಹಿಚ್ಕಡ, ವಿಠ್ಠಲ ಗಾಂವಕಾರ, ರಾಮಮೂರ್ತಿ ನಾಯಕ, ಡಾ. ಎಸ್. ವಿ. ವಸ್ತ್ರದ್, ಜನಾರ್ಧನ ನಾಯಕ, ಫಾಲ್ಗುಣ ಗೌಡ, ವೆಂಕಟರಮಣ ಗೌಡ, ಸಾತು ಗೌಡ, ಗೋಪಾಲಕೃಷ್ಣ ನಾಯಕ, ಸಂದೀಪ ನಾಯಕ, ವೆಂಟು ಮಾಸ್ತರ್ ಶೀಳ್ಯ, ನಾಗೇಶದೇವ ಅಂಕೋಲೆಕರ, ಜಿ.ಆರ್.ತಾಂಡೇಲ, ಜಯಶೀಲ ಆಗೇರ, ರಮೇಶ ನಾಯಕ, ಹೊನ್ನಪ್ಪ ನಾಯಕ, ಡಾ. ಶಿವಾನಂದ ನಾಯಕ ಸಗಡಗೇರಿ, ಡಾ. ಪ್ರಭಾಕರ ನಾಯಕ, ಬಾಲಕೃಷ್ಣ ನಾಯಕ ಭಾವಿಕೇರಿ, ಮೋಹನ ಗೌಡ ಹೆಗ್ರೆ, ಮೋಹನ ಹಾರ್ವಾಡೇಕರ, ನಾಗರಾಜ ಮಂಜಗುಣಿ, ಶ್ರೀನಿವಾಸ ನಾಯಕ, ಸಚಿನ್ ನಾಯ್ಕ, ದಿನಕರ ನಾಯಕ ಇವರಲ್ಲದೆ ರಾಮಚಂದ್ರ ಶೆಟ್ಟಿ, ವಸಂತ ನಾಯಕ ಸೂರ್ವೆ, ಆರ್.ಎಚ್.ನಾಯಕ, ಅರುಣ ಗೌಡ ಜೂಗ, ನಿಶಾಂತ ಆಗೇರ, ನವೀನ ಭಟ್ ಶೇವ್ಕಾರ್, ಬಾಲಕೃಷ್ಣ ದೇವನಮನೆ, ತಿಮ್ಮಪ್ಪ ಗೌಡ, ರಾಮಚಂದ್ರ ಹೆಗಡೆ ಮೊದಲಾದ ಇನ್ನೂ ಅನೇಕರು ಬರೆವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ತಮ್ಮ ವಿವಿಧ ಬಗೆಯ ಬರಹ ಬಿಡಿಬರಹಗಳ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಮಹಾಂತೇಶ ರೇವಡಿ, ನಗೆಹನಿಗಳ ದೇವಿದಾಸ ಸುವರ್ಣ, ಉಲ್ಲಾಸ ಹುದ್ದಾರ, ಗೌರೀಶ ಶಿರಗುಂಜಿ, ಮಂಜುನಾಥ ಇಟಗಿ, ನ್ಯಾಯವಾದಿ ಸುಭಾಷ್ ನಾರ್ವೇಕರ ಮುಂತಾದವರು ಸಾಹಿತ್ಯ ಸಮೃದ್ಧಗೊಳಿಸುತ್ತಿದ್ದಾರೆ.

ಕಳೆದ ವರ್ಷ ಬಿಡುಗಡೆಯಾದ ವಿಘ್ನೇಶ್ವರ ಗುನಗಾ ಅವರ 'ಭೂಮ್ತಾಯಿ' ಕೃತಿ ಚರಿತ್ರೆಯ ಹಿನ್ನೆಲೆಯಲ್ಲಿ ಹೊಸ ಬೆಳಕು ಚೆಲ್ಲುವ ಅಪೂರ್ವ ಕೃತಿಯಾಗಿ ಜನ ಮೆಚ್ಚುಗೆ ಗಳಿಸಿದೆ.

ಅಂಕೋಲೆಯ ಶ್ಯಾಮಸುಂದರ ಗೌಡ ಪ್ರಾಚ್ಯಲಿಪಿ ತಜ್ಞರು ಮತ್ತು ಸಂಶೋಧಕರು. ಅವರು ಅಂಕೋಲೆಗೆ ಸಂಬಂಧಿಸಿದ ಅನೇಕ ಮೂರ್ತಿಗಳು ಮತ್ತು ಶಿಲಾ ಲೇಖನಗಳನ್ನು ಅಧ್ಯಯನ ಮಾಡಿ ಸಚಿತ್ರ ದಾಖಲೆಗಳೊಂದಿಗೆ ಉತ್ತಮ ಮಾಹಿತಿ ನೀಡುತ್ತಿದ್ದಾರೆ. ನಂದನ ಐಗಳ ಅವರು ಕೂಡ ಈ ದಿಶೆಯಲ್ಲಿಯೇ ಚಾರಿತ್ರಿಕ ಮಾಹಿತಿ ನೀಡುವುದರಲ್ಲಿ ತೊಡಗಿಸಿಕೊಂಡಿದ್ದಾರೆ.

ಅಂಕೋಲೆಯ ಕವಿ, ಕಾವ್ಯ, ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರ ಸ್ಥಾನ ಅತಿ ಉತ್ತುಂಗದಲ್ಲಿದೆ. ಸುನಂದಾ ಕಡಮೆ, ಶ್ರೀದೇವಿ ಕೆರೆಮನೆ, ನಾಗರೇಖಾ ಗಾಂವಕರ,

ಅಕ್ಷತಾ ಕೃಷ್ಣಮೂರ್ತಿ, ರೇಣುಕಾ ರಮಾನಂದ, ಶ್ರೀಲತಾ ಅರಮನೆ, ತಮ್ಮ ಸಾಹಿತ್ಯ ಕೃಷಿ ಹಾಗೂ ಗಳಿಸಿರುವ ಪ್ರಶಸ್ತಿಗಳಿಂದ ಅಂಕೋಲೆಯನ್ನು ಶ್ರೀಮಂತಗೊಳಿಸಿದ್ದಾರೆ. ಹಲವು ಸಂಘ ಸಂಸ್ಥೆಗಳು ಕೊಡಮಾಡುವ ಅನೇಕ ದತ್ತಿ ಪ್ರಶಸ್ತಿಗಳು ಇವರೆಲ್ಲರ ಮುಡಿಗೇರಿವೆ. ರೇಣುಕಾ ರಮಾನಂದರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು 'ಸಂಬಾರಬಟ್ಟಲ ಕೊಡಿಸು' ಕೃತಿಗೆ 'ಸಂಗಂ ರಾಷ್ಟ್ರೀಯ ಪ್ರಶಸ್ತಿ' ಪುರಸ್ಕಾರ ದೊರೆತಿದೆ. ಹಿಂದಿನ ಹಲವು ಪ್ರಶಸ್ತಿಗಳೊಂದಿಗೆ ಶ್ರೀದೇವಿ ಕೆರೆಮನೆಯವರು 'ಅಲೆಯೊಳಗಿನ ಮೌನ' ಹಾಗೂ 'ನನ್ನ ದನಿಗೆ ನಿನ್ನ ದನಿಯು' ಎಂಬ ಗಝಲ್ ಸಂಕಲನ ಹಾಗೂ 'ತೀರದ ಧ್ಯಾನ' ಎಂಬ ಗಝಲ್ ವಿಮರ್ಶಾ ಸಂಕಲನ ಹೊರ ತಂದಿದ್ದು ಕಳೆದ ತಿಂಗಳಷ್ಟೇ 'ರಾಷ್ಟ್ರೀಯ ಗಝಲ್ ಸಾಹಿತ್ಯ ಪ್ರಶಸ್ತಿ'ಗೆ ಪಾತ್ರರಾಗಿದ್ದಾರೆ. ಅಕ್ಷತಾ ಕೃಷ್ಣಮೂರ್ತಿಯವರ ಜನಪ್ರಿಯ ಪುಸ್ತಕ 'ಇಸ್ಕೂಲು' ಸರಕಾರಿ ಶಾಲೆಯ ಟೀಚರ್ ಹೇಳುವ ಕತೆ, ಸದ್ಯ ಬಿಡುಗಡೆಗೊಂಡಿದೆ. ನಾಗರೇಖಾ ಗಾಂವಕರರ 'ದಿ ಡೈರಿ ಆಫ್ ಎ ಯಂಗ್ ಗರ್ಲ್ ಆ್ಯನ್ ಫ್ರೆಂಕ್' ಅನುವಾದಿತ ಕೃತಿ ಮರು ಮುದ್ರಣ ಕಂಡಿದ್ದು ಇವರೆಲ್ಲ ಅಂಕೋಲೆಯ ಹೆಮ್ಮೆಗೆ ಪಾತ್ರರಾಗಿದ್ದಾರೆ.

ದಿ. ಕಲಾ ಭಟ್, ಹೊನ್ನಮ್ಮ ನಾಯಕ, ನಾಗಮಣಿ ನಾಯಕ, ಬೀನಾ ನಾಯಕ ಹೊಸ್ಕೇರಿ, ಶಾರದಾ ನಾಯಕ, ಚಂದ್ರಕಲಾ ನಾಯಕ, ಡಾ. ಪುಷ್ಪಾ ನಾಯ್ಕ, ಡಾ. ಅರ್ಚನಾ ನಾಯ್ಕ, ಶಾಂತಲಾ ನಾಯ್ಕ, ಶಿವಮ್ಮ ನಾಯಕ ಮುಂತಾದವರ ಕೃತಿಗಳು ಪ್ರಕಟವಾಗಿದ್ದು ಇವರೆಲ್ಲರ ಸಾಧನೆ ನಮ್ಮ ಮಹಿಳೆಯರ ಅಭಿಮಾನಕ್ಕೆ ಗರಿ ಮೂಡಿಸಿದೆ.

ಮುಂದುವರಿದು ವೀಣಾ ಜೋಷಿ, ಲಕ್ಷ್ಮಿ ನಾಯಕ, ನಿಶಾ ನಾಯಕ, ರಮ್ಯಾ ಹೆಗಡೆ ಅಚವೆ, ಸುವರ್ಣಾ ಶೆಟ್ಟಿ, ದೀಪಾ ನಾಯ್ಕ, ಸಂಧ್ಯಾ ನಾಯ್ಕ, ಜ್ಯೋತಿ ನಾಯ್ಕ, ಭಾವನಾ ನಾಯಕ, ಪಲ್ಲವಿ ಶೆಟ್ಟಿ, ಅಮಿತಾ ನಾಯ್ಕ, ರೀನಾ ನಾಯಕ ಮೊದಲಾದವರು ಬರವಣಿಗೆಯಲ್ಲಿ ನಿರತರಾಗಿದ್ದು ಶೀಘ್ರವಾಗಿ ಕೃತಿಗಳು ಪ್ರಕಟವಾಗಲಿ ಎಂದು ಹಾರೈಸುತ್ತೇನೆ.

ಕಳೆದೆರಡು ವರ್ಷಗಳಲ್ಲಿ ಸುಮಾರು ಮೂವತ್ತಕ್ಕೂ ಹೆಚ್ಚು ಕೃತಿಗಳು ಲೋಕಾರ್ಪಣೆಗೊಂಡಿರುವುದು ಅಂಕೋಲೆಯ ಹೆಗ್ಗಳಿಕೆಯಾಗಿದೆ.

ಬೇರೆ ಬೇರೆ ಪ್ರದೇಶಗಳಲ್ಲಿ ಬದುಕು ಕಟ್ಟಿಕೊಂಡು ಕನ್ನಡದ ಕೃಷಿಯಲ್ಲಿ ತೊಡಗಿಸಿಕೊಂಡಿದ್ದ ದಿ. ಸುಬ್ರಾಯ ನಾಯಕ ಪಾರುಮನೆ, ದಿ. ಜಿನದೇವ ನಾಯಕ, ದಿ. ಜಿ.ಪಿ. ನಾಯಕ, ದಿ. ಬಿ.ಜಿ. ನಾಯಕ ಸದಾ ಸ್ಮರಣೀಯರು.

ಕನ್ನಡದ ನಾಡು ನುಡಿಸೇವೆಯೊಂದಿಗೆ ಅಂಕೋಲೆಯ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಯಾವತ್ತೂ ಭಾಗವಹಿಸುತ್ತಿರುವ ಪ್ರವೀಣ ನಾಯಕ ಮತ್ತು ನಾಗರೇಖಾ ಗಾಂವಕರ ದಂಪತಿಗಳು, 'ನಾಗಸುಧೆ'ಯ ಸುನಂದಾ ಮತ್ತು ಪ್ರಕಾಶ ಕಡಮೆ ದಂಪತಿಗಳು, ಅಕ್ಷತಾ ಕೃಷ್ಣಮೂರ್ತಿ, ನಿತ್ಯವೂ ಬರೆಯುವ ಬಿಡಿ ಬರಹಗಳ ಖ್ಯಾತಿಯ ಬೀರಣ್ಣ ನಾಯಕ ಮೊಗಟಾ, ನಮ್ಮ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎನ್.ವಾಸರೆ, ಪ್ರೊ. ಆರ್. ಎಸ್. ನಾಯಕ, 'ಪ್ರೀತ್ಸೆ' ಕಾದಂಬರಿಯ ರಾಜೀವ ನಾಯಕ, ಡಾ. ಪ್ರಕಾಶ ನಾಯಕ, ಡಾ. ಶಿವಾನಂದ ನಾಯಕ, ಡಾ. ರಾಜೇಂದ್ರ ನಾಯಕ, ಪ್ರೊ. ಶ್ರೀಧರ ನಾಯಕ, ರೇಷ್ಮಾ ಉಮೇಶ, ಸಾವಿತ್ರಿ ಮಾಸ್ಕೇರಿ, ಶುಭಲಕ್ಷ್ಮೀ ನಾಯಕ, ಮಂಗಲಾ ಹಾರ್ವಾಡೇಕರ, ನ್ಯಾಯವಾದಿ ನಾಗರಾಜ ನಾಯಕ, ಮನೋಹರ ನಾಯಕ ಜಮಗೋಡ, ಕಿರಣ ಅಂಕ್ಲೇಕರ್, ರಾಜಮ್ಮ ಹಿಚ್ಕಡ, ಚೈತ್ರಾ ರಮೇಶ ನಾಯಕ ಇವರೆಲ್ಲ ತಮ್ಮ ವಿವಿಧ ಪ್ರಕಾರದ ಬರಹಗಳಿಂದ ಅಂಕೋಲೆಯನ್ನು ಸಮೃದ್ಧಿಗೊಳಿಸುತ್ತಿರುವ ಅಂಕೋಲೆಯ ಮಣ್ಣಿನ ಮಕ್ಕಳು.

ವಿದೇಶದಲ್ಲಿ ನೆಲೆನಿಂತು ಕನ್ನಡದಲ್ಲಿ ಸಣ್ಣ ಕಥೆ ಕಾದಂಬರಿಗಳನ್ನು ಬರೆಯುವುದರ ಮೂಲಕ ಕನ್ನಡದ ಕೃಷಿ ಗೈಯುತ್ತಿರುವ ಪ್ರಕಾಶ ನಾಯಕ (ಅಗ್ಗರಗೋಣ) ಮತ್ತು ವೈಶಾಲಿ ಹೆಗಡೆ ಅಂಕೋಲೆಯವರು. ಇವರಿಬ್ಬರೂ ನಮ್ಮ ಜಿ.ಸಿ. ಕಾಲೇಜಿನ ವಿದ್ಯಾರ್ಥಿಗಳು. ಅಂಕೋಲೆಯ ಹೆಮ್ಮೆಗಳಾಗಿ ಕಾವ್ಯಾ ಕಡಮೆಯವರನ್ನೂ ನಾನಿಲ್ಲಿ ನೆನೆಯುತ್ತೇನೆ.

ಕವಿ, ಸಾಹಿತಿ, ಪ್ರಖ್ಯಾತ ವಾಗ್ಮಿಗಳಾಗಿರುವ ಡಾ. ಶ್ರೀಪಾದ ಶೆಟ್ಟರು ಜಿ.ಸಿ. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಹನ್ನೊಂದು ವರ್ಷ ಅಂಕೋಲೆಯಲ್ಲಿದ್ದರು. ಅವರ ಸಂಶೋಧನಾ ಮಹಾ ಪ್ರಬಂಧ 'ದಿನಕರ ದೇಸಾಯಿ ಬದುಕು ಬರಹ' ಈ ಅವಧಿಯಲ್ಲಿಯೇ ಹೊರ ಬಂದ ಅಭಿಮಾನದ ಕೃತಿ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಸಾಹಿತಿ ವಿವೇಕ ಶ್ಯಾನಭಾಗ ಅಂಕೋಲೆಯ ನಂತರ ಪ್ರತಿಭೆ. ಪ್ರಾಥಮಿಕ ಶಿಕ್ಷಣ ಮತ್ತು ಪದವಿ ಪೂರ್ವ ಶಿಕ್ಷಣ ಜಿ.ಸಿ. ಕಾಲೇಜಿನಲ್ಲಿ ಪೂರೈಸಿದವರು. ಕಥೆ, ಕಾದಂಬರಿ ನಾಟಕಗಳಿಂದ ಪ್ರಸಿದ್ಧರು. ಇವರ ಕಥಾ ಸಂಕಲನ 'ಘಾಚರ್ ಘೋಚರ್' ಇಂಗ್ಲಿಷ್ ಮತ್ತು ಜಗತ್ತಿನ ಇನ್ನಿತರ ಹನ್ನೆರಡು ಭಾಷೆಗಳಿಗೆ ಅನುವಾದಗೊಂಡಿವೆ.

ಸುಪ್ರಸಿದ್ಧ ಬರಹಗಾರ್ತಿ, ಕವಯಿತ್ರಿ ಸಾಹಿತಿ ಶ್ರೀಮತಿ ವಿನಯಾ ಒಕ್ಕುಂದ ಇದೇ ಜಿ.ಸಿ. ಕಾಲೇಜಿನ ವಿದ್ಯಾರ್ಥಿನಿ. ಇವರು ಖ್ಯಾತ ವಾಗ್ಮಿಗಳು ಎಂಬುದನ್ನು ಮರೆಯುವಂತಿಲ್ಲ.

ಪ್ರತಿಷ್ಠಿತ 'ಡಿ.ಎಸ್.ಸಿ.' ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಬಹುಮುಖ ಪ್ರತಿಭೆಯ ಅಪ್ರತಿಮ ಕತೆಗಾರ ಜಯಂತ ಕಾಯ್ಕಿಣಿಯವರು ಅಂಕೋಲೆಯಲ್ಲಿ ಹುಟ್ಟದಿದ್ದರೂ ಅಂಕೋಲೆಯ ಜನಮನದಲ್ಲಿ ನೆಲೆ ನಿಂತವರು. ಅಂಕೋಲೆಯ ಎಲ್ಲ ಹಿರಿಯ ಸಾಹಿತಿಗಳ ಮನೆಮಗನಂತಿದ್ದು ಇವರ ಗತ್ತಿಲ್ಲದ ಘನತೆ ಅಂಕೋಲಿಗರ ಆಕರ್ಷಣೆ.

ಅಂಕೋಲೆಯ ನಾಡಿ ಮಿಡಿತ 'ಕರಾವಳಿ ಮುಂಜಾವು' ಪತ್ರಿಕೆಯ ಸಂಪಾದಕ ಗಂಗಾಧರ ಹಿರೇಗುತ್ತಿ ಅವರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ ಅಂಕೋಲೆಯ ಅನೇಕ ಕವಿ, ಸಾಹಿತಿ, ಬರಹಗಾರರನ್ನು ಬೆಳಕಿಗೆ ತಂದಿದ್ದಾರೆ. ಪುಸ್ತಕಗಳನ್ನೇ ಕೊಡುಗೆಯಾಗಿತ್ತು ಓದುವ ಹವ್ಯಾಸವನ್ನು ಬೆಳೆಸುತ್ತಿರುವ ಇವರ ಕಾರ್ಯ ಪ್ರಶಂಸನೀಯ.

ಅಂಕೋಲೆಯ ಪತ್ರಿಕಾ ಪ್ರಪಂಚದಲ್ಲಿ ಪತ್ರಕರ್ತ ವರದಿಗಾರರಾಗಿ ವಿಭಿನ್ನ ಮಾದರಿಯ ಉತ್ತಮ ಲೇಖನಗಳಿಂದ ಅನೇಕರು ಗುರುತಿಸಿಕೊಂಡಿದ್ದಾರೆ. ಹೊಸದಿಗಂತ ಪತ್ರಿಕೆಯ ಹುಬ್ಬಳ್ಳಿ ವಿಭಾಗದ ಮುಖ್ಯಸ್ಥ ವಿಠ್ಠಲದಾಸ ಕಾಮತರು ಈ ದಿಶೆಯಲ್ಲಿ ಮಾದರಿಯಾಗಿದ್ದು ತಮ್ಮ ಸಾಧನೆಗಾಗಿ 'ಡಾ. ಪಾಟೀಲ ಪುಟ್ಟಪ್ಪ ಸಾಧನಾ ರಾಷ್ಟ್ರೀಯ ಪತ್ರಕರ್ತ' ಪ್ರಶಸ್ತಿ ಪಡೆದುಕೊಂಡಿದ್ದಾರೆ.

ನಾನಿಲ್ಲಿ ಅಂಕೋಲೆಯ ಎಲ್ಲ ಹಿರಿ ಕಿರಿಯ ಸಾಹಿತಿಗಳ ದಾಖಲೆಯನ್ನು ಮುಂದಿಟ್ಟಿರುವುದಾಗಿ ಭಾವಿಸುವುದಿಲ್ಲ. ಕೆಲವು ದಶಕಗಳ ಹಿಂದೆ ಕೃತಿ ರಚನೆಗೆ ಸೀಮಿತವಾಗಿದ್ದ ಸಾಹಿತ್ಯ ಕ್ಷೇತ್ರ ಇಂದು ಬಹುಮುಖವಾಗಿ ತೆರೆದುಕೊಂಡಿದೆ. ನಿತ್ಯ ಹೊಸ ಕೃತಿಗಳೊಂದಿಗೆ ಬಿಡಿ ಬರಹಗಳು, ಪ್ರವಾಸಕಥನ, ಚಿಂತನೆ, ವಿಮರ್ಶೆ, ಆಧ್ಯಾತ್ಮ, ಯೋಗ, ಜ್ಯೋತಿಷ್ಯ ಮುಂತಾದ ಬದುಕಿಗೆ ಅನುಕೂಲಕರವಾದ ಅನಿವಾರ್ಯವಾದ ಎಲ್ಲ ಅಂಶಗಳು ಸಾಹಿತ್ಯದ ರೂಪ ಪಡೆದು ಪ್ರಕಟಗೊಳ್ಳುತ್ತಿವೆ. ಬರಹಗಾರರ ಸಂಖ್ಯೆ ಹೆಚ್ಚಿದೆ. ಹಾಗಾಗಿ ನನ್ನರಿವಿನ ಕ್ಷೇತ್ರಕ್ಕೆ ಹೊರತಾಗಿ ತಪ್ಪಿ ಹೋದವರಿದ್ದರೆ ಕ್ಷಮಿಸಿ ಎನ್ನುತ್ತ ಅಭಿನಂದಿಸುತ್ತೇನೆ.

ಸಾಂಸ್ಕೃತಿಕ ಮಹತ್ವ : ಅಂಕೋಲೆ ಬಹು ಜಾತಿಯ, ಬಹುಭಾಷೆಯ, ವೈವಿಧ್ಯಮಯ ನೆಲ. ಇಲ್ಲಿ ಇಲ್ಲದ ಜಾತಿಗಳಿಲ್ಲ, ಆಡದ ಭಾಷೆಗಳಿಲ್ಲ. ಪ್ರತಿ ಜನಾಂಗ, ಪ್ರತಿ ಪ್ರದೇಶಗಳಿಗೆ ತಕ್ಕಂತೆ ಭಿನ್ನ ಭಾಷೆ, ಭಿನ್ನ ರೀತಿ ರಿವಾಜುಗಳಿದ್ದು ಎಲ್ಲರೂ ಒಟ್ಟಾಗಿ ಬಾಳುತ್ತಿರುವ ಸಾಮರಸ್ಯ ಶ್ಲಾಘನೀಯ. ಹಿಂದಿನಿಂದ ನಡೆದುಕೊಂಡು ಬಂದ ಬಂಡಿಹಬ್ಬ, ಹೋಳಿ ಹುಣ್ಣಿಮೆ, ಯುಗಾದಿ ಹಬ್ಬಗಳಲ್ಲಿ ಪ್ರದರ್ಶಿತವಾಗುವ ಹಗರಣಗಳು ಇಂದಿನ ಆಧುನಿಕ ಯುಗದಲ್ಲಿಯೂ ತಮ್ಮ ಜನಪ್ರಿಯತೆಯನ್ನು ಉಳಿಸಿಕೊಂಡಿವೆ. ತಾಲೂಕಿನಾದ್ಯಂತ ಆಚರಿಸುವ ಕಾರ್ತಿಕೋತ್ಸವ, ದಹಿಂಕಾಲ ಉತ್ಸವ, ಯಕ್ಷಗಾನ ಬಯಲಾಟ, ರಂಗಭೂಮಿ ನಾಟಕಗಳು, ಭಜನೆ–ಉತ್ಸವಗಳು, ಇಲ್ಲಿಯ ಸಾಂಸ್ಕೃತಿಕ ಸಿರಿಯನ್ನು ಹೆಚ್ಚಿಸಿವೆ. ಇತ್ತೀಚೆಗೆ ಬಗೆ ಬಗೆಯ ರಂಗೋಲಿ ಕಲೆ ಮನ ಸೆಳೆಯುತ್ತಿದೆ. ಅಂಕೋಲೆಯ ಹಳ್ಳಿ ಹಳ್ಳಿಗಳಲ್ಲಿ ಅನೇಕ ಸ್ಮಾರಕ ಪ್ರತಿಷ್ಠಾನಗಳು, ಯುವಕ ಸಂಘ, ಯುವತಿ ಮಂಡಲಗಳು ವರಂತರವಾಗಿ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತಾ ಸಾಮಾಜಿಕ ಬದುಕನ್ನು ಜೀವಂತವಾಗಿರಿಸಿವೆ. ಉತ್ತಮ ಕಲಾಕಾರರಾಗಿ ಮಯೂರ ಆಗೇರ ಗಮನ ಸೆಳೆಯುತ್ತಿದ್ದಾರೆ. ಕೆ. ರಮೇಶರ 'ಸಂಗಾತಿ ರಂಗಭೂಮಿ'ಯ ಚಟುವಟಿಕೆಗಳು ಮೆಚ್ಚುಗೆಗೆ ಪಾತ್ರವಾಗಿವೆ.

ಜೈಂಟ್ಸ್ ಗ್ರೂಪ್, ಲಾಯನ್ಸ್ ಕ್ಲಬ್, ರೋಟರಿ ಕ್ಲಬ್ ಮುಂತಾದ ಸಂಘಟನೆಗಳು ಆರೋಗ್ಯ ಮತ್ತು ಶೈಕ್ಷಣಿಕ ಸೇವೆಗಳಲ್ಲಿ ಕ್ರಿಯಾಶೀಲವಾಗಿವೆ. ಈ ಹಿಂದಿನ ಕರಾವಳಿ ಜ್ಯೂನಿಯರ್ ಚೇಂಬರ್ (ಜೆ.ಸಿ.ಐ) ಇದರ ಸಾಂಸ್ಕೃತಿಕ ಕೊಡುಗೆಯೂ ಅನನ್ಯವಾದುದು.

ಗಾಂಧೀಜಿಯವರಿಗೆ ವೇಡಿದ ಚಿಕಿತ್ಸೆಯಿಂದ ಪ್ರಸಿದ್ಧಿಗೆ ಬಂದ ಬೆಳಂಬರದ ಅರ್ಧಾಂಗ ವಾಯು ಔಷಧಿ ವಂಶಪಾರಂಪರ್ಯವಾಗಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ನಾಟಿ ವೈದ್ಯ ಹನುಮಂತ ಗೌಡರಿಂದ ಮುಂದುವರಿಯುತ್ತಿದೆ.

ಯಕ್ಷಗಾನ ಅಂಕೋಲೆಯ ಬಹು ಪ್ರಾಚೀನ ಗಂಡು ಮೆಟ್ಟಿನ ಕಲೆ. ಪ್ರಸಿದ್ಧ ಪಾತ್ರಧಾರಿಗಳ ತವರು. ಹಿಂದೆಲ್ಲ ಹೆಚ್ಚಿನ ಮನರಂಜನೆ ಯಕ್ಷಗಾನ ಬಯಲಾಟವಾಗಿತ್ತು.

ಬಾಸಗೋಡದ 'ಸುಬೋಧ ಯಕ್ಷಗಾನ ಮಂಡಳಿ' ಕಳೆದ ತಿಂಗಳಷ್ಟೇ ಶತಮಾನೋತ್ಸವವನ್ನು ಸಪ್ತದಿನಗಳ ಕಾಲ ಸಂಭ್ರಮದಿಂದ ಆಚರಿಸಿದೆ. ಇಂದಿನ ತಲೆಮಾರಿಗೆ ಅಂದಿನ ಮಹಾನ್ ಕಲಾವಿದರನ್ನು ಪರಿಚಯಿಸುವ ಮಹತ್ತರ ಕಾರ್ಯ ಅಭಿನಂದನೀಯ. 'ಯಕ್ಷ ಗ್ರಂಥಾಲಯ' ಮತ್ತು 'ಯಕ್ಷಗಾನ ತರಬೇತಿ ಕೇಂದ್ರಗಳ ಮೂಲಕ ಸಂಸ್ಕೃತಿಯ ರಕ್ಷಣೆ ಮತ್ತು ಪೋಷಣೆಯ ಕಾಯಕಕ್ಕೆ ಬಾಸಗೋಡ ಬಳಗ ನಾಂದಿ ಹಾಡಿದೆ.

ಬಾಸಗೋಡದ ಗಾಂವಕರ ಮೆಮೋರಿಯಲ್ ಫೌಂಡೇಶನ್ ಉದಯೋನ್ಮುಖ ಪ್ರತಿಭೆಗಳನ್ನು ಗುರುತಿಸಿ ಸನ್ಮಾನಿಸುತ್ತಿರುವ ಕಾರ್ಯ ಪ್ರಶಂಸನೀಯ.

ಅಂಕೋಲೆಯ ಸುಗ್ಗಿ ಕುಣಿತ, ಗುಮಟೆ ಪಾಂಗು, ಹಾಲಕ್ಕಿ ಹಾಡುಗಳು, ಪಂಚವಾದ್ಯ ವಿಶಿಷ್ಟ ಕಲೆಗಳಾಗಿವೆ.

ಅಂಕೋಲೆ ಹಿಂದಿನಿಂದ ತನ್ನ ಅಪೂರ್ವ ಅಸ್ಮಿತೆಯನ್ನು ಕಾಪಾಡಿಕೊಂಡು ಇಲ್ಲಿನ ಬೆಟ್ಟ, ಬಯಲು, ನದಿ, ಕಡಲುಗಳ ಚೆಲುವು, ಹಾಡು ಹೊಸೆವ ಜನಪದರ ಗ್ರಾಮೀಣ ಬದುಕಿನ ಸೊಗಡು ನಮ್ಮ ಶಿಷ್ಟ ಸಾಹಿತ್ಯಕ್ಕೆ ಪುಷ್ಟಿ ನೀಡುವ ಬೆರಗಾಗಿವೆ.

ಬಂಡಿಹಬ್ಬಕ್ಕೆ ಬರುವ ನೆಂಟರ ದಂಡು, ಕೋಳಿ ಆಸಿ–ಹಂಚಿನ ರೊಟ್ಟಿ, ನಾಡವರ ಹಾಲಡ್ಗಿ, (ಶಾಂತಾರಾಮ ನಾಯಕರ ಆತ್ಮಕಥೆಯ ಶೀರ್ಷಿಕೆ) ಹುರಿಯಕ್ಕಿ ಉಂಡಿ, ಕುಚ್ಚಕ್ಕಿ ಅನ್ನ–ಮೀನಿನ ಪಳದಿ, ಬೆರಕಿ ಹುಳ್ಗಾ ಇವೆಲ್ಲ ನಮ್ಮ ಅಂಕೋಲೆಯ ನೆಲದ ಅಪರೂಪದ ಅಚ್ಚುಮೆಚ್ಚಿನ ಅಡುಗೆ ಮತ್ತು ಕೊಡುಗೆಯಾಗಿವೆ.

'ಕುರಿತೋದದೆ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಖ್ಯಾತಿಗೆ ಪಾತ್ರರು ನಮ್ಮ ಅಂಕೋಲೆಯ ನಾಡೋಜ ಮತ್ತು ಪದ್ಮಶ್ರೀ ಪುರಸ್ಕೃತ ಹಾಡು ಹಕ್ಕಿ ಬಡಗೇರಿಯ ಸುಕ್ರಿ ಗೌಡ. ಯಾವ ಪ್ರಚೋದನೆ ಪ್ರಚಾರವಿಲ್ಲದೆ ಪ್ರಕೃತಿಯನ್ನು ಪ್ರೀತಿಸಿ ಬೆಳೆಸಿ ಪದ್ಮಶ್ರೀ ಪುರಸ್ಕೃತರಾಗಿರುವ ವೃಕ್ಷಮಾತೆ ಹೊನ್ನಳ್ಳಿಯ ತುಳಸಿ ಗೌಡ ಮತ್ತು ದಲಿತ ಜನಾಂಗದ ಹೆಸರಾಂತ ಹಿರಿಯ ಯಕ್ಷಗಾನ ಭಾಗವತ ದಿ. ಬುದ್ದು ಆಗೇರ ವಂದಿಗೆ ಇವರೆಲ್ಲ ನಮ್ಮ ಅಂಕೋಲೆಯ ಹೆಮ್ಮೆ.

'ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ
ಶಾಸ್ತ್ರಿತನದಿಂದಲ್ಲ ಮಂಕುತಿಮ್ಮ'.

ಕನ್ನಡ ಭಾಷೆ ಮತ್ತು ಶಿಕ್ಷಣ

ಮಾನವ ಬದುಕಿನಲ್ಲಿ ರೂಪಿಸಿಕೊಂಡ ಅತ್ಯಮೂಲ್ಯವಾದ ಆವಿಷ್ಕಾರವೆಂದರೆ ಭಾಷೆ. ಭಾವನೆಗಳನ್ನು ಜೀವಂತವಾಗಿಡುವ ಸಾಧನ ಭಾಷೆಯಾಗಿದ್ದು, ಅದು ಯೋಚನೆಯ ಪ್ರಬಲವಾದ ಉಪಕರಣವಾಗಿದೆ.

ನಮ್ಮ ತಾಯ್ನುಡಿ ಕನ್ನಡ, ತಾಯ್ನೆಲ ಕನ್ನಡ, ನಮ್ಮ ಸಂಸ್ಕೃತಿ ಕನ್ನಡ. ನಮ್ಮ ಕನ್ನಡಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ, ತನ್ನದೇ ಪರಂಪರೆಯಿದೆ, ಸೊಗಸಿದೆ. 'ಸುಲಿದ ಬಾಳೆಯ ಹಣ್ಣು, ಕಳಿದ ಸಿಗುರಿನ ಕಬ್ಬು, ಅಳಿಸಿದುಷ್ಣದ ಹಾಲಿನಂತೆ ಅತಿ ಸುಲಭ, ಅತಿ ಲಲಿತ' ನಮ್ಮ ಸವಿಗನ್ನಡ ಎಂದಿದ್ದಾರೆ ಮಹಲಿಂಗ ಕವಿ. ಸುಂದರ ಕಲಿಕೆಗೆ ಮಾತೃ ಭಾಷೆ ಪರಿಣಾಮಕಾರಿ ಎಂಬುದನ್ನು ತಿಳಿಯದವರಿಲ್ಲ. ಎಂಟು ಜ್ಞಾನಪೀಠ ಪ್ರಶಸ್ತಿಗಳ ಹೆಗ್ಗಳಿಕೆ ನಮ್ಮದು. ನಮ್ಮ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ–ಮಾನ ದೊರಕಿರುವುದು ಅಭಿಮಾನದ ಸಂಗತಿ. ಆದರೂ ಪರಿಸ್ಥಿತಿಯ ಕೈಗೊಂಬೆಗಳಾಗಿ ಪರಭಾಷೆಯ ಬೆನ್ನು ಹತ್ತಿರುವುದು ವಿಷಾದನೀಯ. ಮುದ್ದಣನ ಕತ್ತೂರಿ ಕನ್ನಡ ಇಂದು ಇಂಗ್ಲಿಷ್ ಅಡಕತ್ತರಿಯಲ್ಲಿ ಸಿಕ್ಕು ಚಡಪಡಿಸುತ್ತಿದೆ. ಕನ್ನಡಕ್ಕೆ ಶಕ್ತಿ ತುಂಬುವವರ ಕೊರತೆ ಕಾಣುತ್ತಿದ್ದೇವೆ. ಹೆಸರಾಯಿತು ಕರ್ನಾಟಕ ಆದರೆ ಉಸಿರಾಗಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು ಎಪ್ಪತ್ತೈದು ವರ್ಷಗಳಾದರೂ ಇಂಗ್ಲಿಷ್ ನಮ್ಮಿಂದ ತೊಲಗಿಲ್ಲ. ದಿನೇ ದಿನೇ ಹೆಚ್ಚು ಹೆಚ್ಚು ವ್ಯಾಪಿಸುತ್ತಾ, ಹೆಚ್ಚು ಹೆಚ್ಚು ಆಳವಾಗಿ, ಪ್ರಭಾವಶಾಲಿಯಾಗಿ ದೇಶೀಯ ಭಾಷೆಗಳ ಕತ್ತು ಹಿಸುಕುತ್ತಿದೆ. ಇಂಗ್ಲಿಷ್ ಕಲಿಕೆಯ ವ್ಯಾಮೋಹ ಅತಿಯಾಗುತ್ತಿರುವುದು ದೇಶದ ಎಲ್ಲ ಪ್ರಾದೇಶಿಕ ಭಾಷೆಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ.

'ಎಲ್ಲಾದರು ಇರು, ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು' ಎಂದರು ಕುವೆಂಪು. ಆದರೆ ಕನ್ನಡ ನಾಡಿನಲ್ಲೇ, ಕನ್ನಡಿಗರ ಮನೆಯಲ್ಲೇ ಇಂದು ಕನ್ನಡ ಇಲ್ಲವಾಗುತ್ತಿದೆ. ಜನ ಬಳಸುವುದು ಕಡಿಮೆಯಾಗುತ್ತಾ ಬಂದಂತೆ ಆ ಭಾಷೆ ಅವಸಾನದಂಚಿಗೆ ಸಾಗುತ್ತದೆ ಎಂಬ ಸತ್ಯವನ್ನು ಮರೆಯುವಂತಿಲ್ಲ. ಹಾಗಾದಲ್ಲಿ ಯಾವುದೇ ಪ್ರಶಸ್ತಿ, ಸರಕಾರದ ಅನುದಾನಗಳು, ಭಾಷಾ ಸಮ್ಮೇಳನಗಳು, ಭಾಷಾಭಿಮಾನದ ಚಳುವಳಿಗಳು ಯಾವವೂ ಆ ಭಾಷೆಯನ್ನು ಉಳಿಸಲಾರವೆಂಬ ಮಾತು ನೂರಕ್ಕೆ ನೂರು ಸತ್ಯ.

ಸಾಲಿ ರಾಮಚಂದ್ರರಾಯರು 'ಕನ್ನಡ ನೆಲದ ಹುಲ್ಲೆನಗೆ ಪಾವನ ತುಲಸಿ, ಕನ್ನಡದ ನೀರ್ವೊನಲೆನಗೆ ದೇವನದಿ, ಕನ್ನಡದ ಕಲ್ಲೆನಗೆ ಸಾಲಿಗ್ರಾಮ, ಕನ್ನಡದ ನುಡಿಯೆನಗೆ ಗಾಯತ್ರಿಯ ಅದ್ಭುತ ಮಂತ್ರ' ಎಂದರು. ಇಂಥ ಅದ್ಭುತ ಉತ್ಕಟ ಪ್ರೀತಿ ಶ್ರದ್ಧಾಭಾವಗಳಿದ್ದು ಬಳಸಿದರೆ ಮಾತ್ರ ಭಾಷೆಯ ಉದ್ಧಾರ ಸಾಧ್ಯ. ಮಾತೃಭಾಷಾ ಮಾಧ್ಯಮ ಕಡ್ಡಾಯ ಮಾಡಿ ಆದೇಶ ಹೊರಡಿಸುವುದು, ಮತ್ತೆ ರದ್ದು ಪಡಿಸುವುದು ಇವುಗಳ ಮಧ್ಯೆ ಮಕ್ಕಳ ಭವಿಷ್ಯ ನಲುಗುವಂತಾಗಬಾರದು. ನಮ್ಮ ಸರಕಾರ, ನಮ್ಮ ಜನಪ್ರತಿನಿಧಿಗಳು, ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಎಲ್ಲ ಕನ್ನಡಪರ ಸಂಘಟನೆಗಳು ಭಾಷಾ ತಜ್ಞರು, ಶಿಕ್ಷಣ ತಜ್ಞರು ಹಾಗೂ ಕಾನೂನು ತಜ್ಞರು ಈ ಕುರಿತು ಯೋಚಿಸಿ ಕಾರ್ಯ ಪ್ರವೃತ್ತರಾಗಬೇಕಾದ ಅಗತ್ಯವಿದೆ.

ಪ್ರಾಥಮಿಕ ಹಂತದಿಂದಲೂ ಇಂಗ್ಲಿಷನ್ನು ಒಂದು ಭಾಷೆಯನ್ನಾಗಿ ಕಲಿಯಲು ಯಾವ ಅಭ್ಯಂತರವೂ ಇಲ್ಲ. ಆದರೆ ಶಿಕ್ಷಣ ಮಾಧ್ಯಮ ಮಾತ್ರ ಪ್ರಾಥಮಿಕ ಹಂತದಲ್ಲಿ ಕನ್ನಡವೇ ಕಡ್ಡಾಯವಾಗಿರಬೇಕು. ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು, ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಷ್ಟೇ ಚೆನ್ನಾಗಿ, ಅಷ್ಟೇ ಏಕೆ ಅವರಿಗಿಂತ ಚೆನ್ನಾಗಿ ತಮ್ಮ ಪ್ರತಿಭೆಯನ್ನು ತೋರಿದ ಉದಾಹರಣೆಗಳಿವೆ. ಮಾತೃ ಭಾಷೆಯನ್ನು ಚೆನ್ನಾಗಿ ಕಲಿತವ ಬೇರೆ ಯಾವ ಭಾಷೆಯನ್ನಾದರೂ ಕಲಿಯಬಲ್ಲ ಎಂಬುದನ್ನು ಎಲ್ಲರೂ ತಿಳಿಯಬೇಕಾಗಿದೆ.

ದಿನಕರ ದೇಸಾಯಿ ಅವರ ಈ ಚುಟುಕಿನಲ್ಲಿ ಅವರ ಕನ್ನಡದ ಪ್ರೀತಿಯನ್ನು ತಿಳಿಯಬಹುದು –

ನನ್ನ ಕನ್ನಡ ನುಡಿಯೆ ನೀನೆಷ್ಟು ಚಂದ
ಏನು ಗೀಚಿದರು ಆಗುವುದು ಸೌಗಂಧ
ಸಿಂಗರದ ಗಣಿ ನಿನ್ನ ಶಬ್ದ ಸಂಪತ್ತು
ಬಂಗಾರಕಿಂತಲೂ ಶ್ರೇಷ್ಠ ನುಡಿಮುತ್ತು

ಈಗೆಲ್ಲ ಕನ್ನಡ ಬರಹದಲ್ಲಿ ಸ್ಪಷ್ಟತೆ ಮತ್ತು ಓದು ಉಚ್ಚಾರದಲ್ಲಿ ಪರಿಶುದ್ಧತೆ ದೂರವಾಗುತ್ತಿದ್ದು, ಹೆಚ್ಚಿನ ಗಮನ ಹರಿಸಬೇಕಾದ ಅಗತ್ಯವಿದೆ. ಇತ್ತೀಚೆಗೆ ದೂರದರ್ಶನ ಧಾರಾವಾಹಿ 'ಕನ್ನಡತಿ' ಅಂತ್ಯದಲ್ಲಿ ಕೊಡುವ ಸಂದೇಶ 'ಸರಿಗನ್ನಡಂ ಗೆಲ್ಗೆ' ಸ್ವಾಗತಾರ್ಹ.

ಕನ್ನಡ ಧ್ವನಿಪೂರ್ಣ ಭಾಷೆ. ಆಯಾ ಜನಾಂಗಕ್ಕನುಗುಣವಾಗಿ ನಮ್ಮ ಗ್ರಾಮೀಣ ಬದುಕಿನ ಜನಪದ ಹಾಡುಗಳ ಗೇಯತೆ ವಿಶಿಷ್ಟವಾಗಿದೆ. ಶಾಸ್ತ್ರ ಕಾವ್ಯಗಳ ಪರಿಚಯವಿಲ್ಲದ ಪೂರ್ವಜರು ಬಿಟ್ಟು ಹೋದ ಅಚ್ಚರಿಯ ಪರಂಪರೆ ಜಾನಪದ ಸಂಸ್ಕೃತಿಯಾಗಿದೆ.

ಕನ್ನಡದ ಲಿಪಿ ಅತಿ ಸುಂದರ, ವೈಶಿಷ್ಟ್ಯಪೂರ್ಣ. ಕವಿ ಡಿ.ಎಸ್. ಕರ್ಕಿಯವರು ಕನ್ನಡಕ್ಕರದ ಚೆಲುವನ್ನು ಈ ರೀತಿ ವರ್ಣಿಸಿದ್ದಾರೆ ಒಂದೆರಡು ಸಾಲನ್ನು ಮಾತ್ರ ಉದಾಹರಿಸುತ್ತೇನೆ.

ಎಂಥ ಚಂದದ ಬಳ್ಳಿ, ಚೆಲ್ಲವರಿದಿಹುದಿಲ್ಲಿ
ಚೆಲುವನರಸುವ ಜಾಣ, ಬಂದು ನೋಡು
ಮೊಗ್ಗಿನಂದದಿ ಕೆಲವು ಮಲರಿನಂದದಿ ಹಲವು
ಕುಡಿಹೀಚು ಮಿಡಿಕಾಯ್ಗಳಂತೆ ಕೆಲವು
ಕನ್ನಡಕ್ಕರಗಳಿವು ಬಳ್ಳಿಯನೆ ಏರಿಹವು

ಬಗೆಯ ಬಳ್ಳಿಯನೇ ಅಲ್ಲಾಡಿಸುವವು–ನಿಜ, ಕನ್ನಡಕ್ಕರದ ಬಳ್ಳಿಯ ಸೊಗಸಿಗೆ ಸಾಟಿ ಇಲ್ಲ. ಇಂಥ ಒಲವು ತುಂಬಿ ಬಂದಾಗ ಕೀಳರಿಮೆ ದೂರವಾಗಿ ಪ್ರೀತಿ ಹುಟ್ಟುತ್ತದೆ. ಇದನ್ನು ಹುಟ್ಟಿಸುವ ಪ್ರಯತ್ನ ಪಾಲಕರು, ಶಿಕ್ಷಕರು ನಮ್ಮೆಲ್ಲರಿಂದ ಆಗಬೇಕಾಗಿದೆ.

ಹೆಮ್ಮೆಯ ಕುಡಿಗಳು : ನಮ್ಮ ಅಂಕೋಲೆಯ ಯುವ ಪೀಳಿಗೆಯ ಇತ್ತೀಚಿನ ಸಾಧನೆಯನ್ನು ನೆನೆಯಲೇ ಬೇಕು. ಐ.ಎ.ಎಸ್. ಅಧಿಕಾರಿಯಾಗಿ ಹೇಮಾ ಶಾಂತಾರಾಮ ನಾಯಕ, ಐ.ಎಫ್.ಎಸ್. ಅಧಿಕಾರಿಯಾಗಿ ದಿಗಂತ ನಾರಾಯಣ ನಾಯಕ ಮತ್ತು ಎಸ್. ನವೀನ ಕುಮಾರ ಅಚವೆ, ಕೆ.ಪಿ.ಎಸ್.ಸಿ.ಯಲ್ಲಿ ಆಯ್ಕೆಯಾದ ಧನ್ಯಾ ನೀಲಕಂಠ ನಾಯಕ ಡಿ.ವೈ.ಎಸ್.ಪಿ ಯಾಗಿ ಮತ್ತು ಸೌಜನ್ಯ ಬೊಮ್ಮಯ್ಯ ನಾಯಕ ಕಮರ್ಷಿಯಲ್ ಟೆಕ್ಸ್ ಅಧಿಕಾರಿಯಾಗಿ,

'ಮಹೋನ್ನತ ಮಹಿಳಾ ಸಂಶೋಧಕಿ' ಪ್ರಶಸ್ತಿ ಪಡೆದು ವಿದೇಶದಲ್ಲಿ ಉದ್ಯೋಗದಲ್ಲಿರುವ ಕಾವ್ಯಶ್ರೀ ಸುಖದ ನಾಯಕ, ಐ.ಐ.ಎಮ್. ಬೆಂಗಳೂರಿನಲ್ಲಿ ಆಯ್ಕೆಯಾಗಿ ಹೆಸರಾಂತ ಕರ್ನಿ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿರುವ ಗೌರವ ಗೋಪಾಲಕೃಷ್ಣ ನಾಯಕ, ಚಿನ್ನದ ಪದಕಗಳೊಂದಿಗೆ ಕಾರವಾರ ಮೆಡಿಕಲ್ ಕಾಲೇಜಿನ ಪ್ರಥಮ ಬ್ಯಾಚ್‌ನಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ ಸಹನಾ ಸುರೇಶ ನಾಯಕ, ಯು.ಪಿ.ಎಸ್.ಸಿ ನಡೆಸುವ ಎಮ್.ಇ.ಎಸ್. ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್‌ಗಳಿಸಿ ಡೆಪ್ಯೂಟಿ ಆರ್ಕಿಟೆಕ್ಟ್ ಆಗಿರುವ ವಿಜಯಶ್ರೀ ವಾಸುದೇವ ನಾಯಕ, ಐ.ಐ.ಟಿ. ಅಡ್ವಾನ್ಸ್‌ನಲ್ಲಿ ೯೯.೬೦ ಅಂಕಗಗಳನ್ನು ಗಳಿಸಿ ಪ್ರಸ್ತುತ ಐ.ಐ.ಟಿ. ಮದ್ರಾಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಚಿರಾಗ ವಿನಾಯಕ ಗಾಂವಕರ ಇವರೆಲ್ಲ ನಮ್ಮ ಅಂಕೋಲೆಯ ಹೆಮ್ಮೆಯ ಪ್ರತಿಭಾನ್ವಿತ ಕುಡಿಗಳು. ಅವರೆಲ್ಲರ ಸಾಧನೆ ಅಭಿನಂದನೀಯ.

ಓದಿನೊಂದಿಗೆ ಕಲಾ ಕ್ಷೇತ್ರದಲ್ಲಿ ಬೆಳೆಯುತ್ತಿರುವ ಕೆಲವು ಪ್ರತಿಭೆಗಳು ಇಂದು ನಮ್ಮ ಕಣ್ಣ ಮುಂದಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸುತ್ತಿರುವ ಆದ್ಯಾ ಆನಂದ್ ಮತ್ತು ಅನಾಯಾ ಆನಂದ್ ಸೋದರಿಯರು ನಮ್ಮ ಅಂಕೋಲೆಯ ಸೂರ್ವೆಯವರು. **'ಬಾಂಬೆ ಬೇಗಮ್ಸ್'** ಖ್ಯಾತಿಯ ಆದ್ಯಾ ಆನಂದ್ ತನ್ನ ಅತ್ಯುತ್ತಮ ಅಭಿನಯದಿಂದಾಗಿ ಪ್ರತಿಷ್ಠಿತ **'ಇಂಡಿಯನ್ ಫಿಲ್ಮ್ ಟೆಲಿವಿಷನ್ ಅವಾರ್ಡ್ಸ್'** ಪಡೆದುಕೊಂಡಿದ್ದಾಳೆ. ಕೆ.ಜಿ.ಎಫ್. ಚಲನಚಿತ್ರ ಮತ್ತು ಕನ್ನಡ ಧಾರಾವಾಹಿಗಳಲ್ಲಿ ಬಾಲ ನಟನಾಗಿ ಅಭಿನಯಿಸುತ್ತಿರುವ ಆರ್ಯ ವಿನೋದ ಅಂಕೋಲೆಯ ಅಗ್ಗರಗೋಣದವರು.

ಡಾನ್ಸ್ ಇಂಡಿಯಾ ಡಾನ್ಸ್ ಮೂಲಕ ಚಾಂಪಿಯನ್ ಆಗಿ ಪ್ರಸಿದ್ಧನಾಗಿರುವುದರೊಂದಿಗೆ ದೇಶದಾದ್ಯಂತ ಖ್ಯಾತಿ ಗಳಿಸಿ ಹೆಮ್ಮೆ ಮೂಡಿಸಿರುವ ಸಂಕೇತ ಗಾಂವಕರ ನಮ್ಮ ಅಂಕೋಲೆಯವರು. ಅಂಕೋಲೆಯಲ್ಲಿ ಡಾನ್ಸ್ ತರಬೇತಿ ಕೇಂದ್ರವನ್ನು ತೆರೆದು ಅನೇಕ ಆಸಕ್ತರನ್ನು ಬೆಳೆಸುತ್ತಿದ್ದಾರೆ. ಇವರೆಲ್ಲ ನಮ್ಮ ಅಂಕೋಲೆಯ ಅಭಿಮಾನದ ಅಪರೂಪದ ಪ್ರತಿಭೆಗಳು.

ಸಾಹಿತ್ಯ, ಸಂಸ್ಕೃತಿ, ಕ್ರೀಡೆಗಳಲ್ಲಿ ನಮ್ಮ ಅಂಕೋಲಿಗರು ಅದ್ಭುತ ಎನ್ನಿಸುವ ಮಟ್ಟಿಗೆ ಬೆಳೆಯುತ್ತಿದ್ದಾರೆ. ಅವರೆಲ್ಲರ ಉತ್ತಮ ಬೆಳವಣಿಗೆಗೆ ಶುಭ ಕೋರುತ್ತೇನೆ.

ಆಶಯ : ಸಾಹಿತ್ಯ ಸರ್ವರ ಸೊತ್ತು. ಅದು ಜನಸಾಮಾನ್ಯರ ಏಳಿಗೆಯ ಸದಾಶಯವನ್ನು ಹೊತ್ತು ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನೂ ಕಡೆಗಣಿಸದೇ, ಸರ್ವರನ್ನೂ ಒಗ್ಗೂಡಿಸಿಕೊಂಡು ಅನನ್ಯವಾದ ಕಾರ್ಯಕ್ರಮಗಳೊಂದಿಗೆ ಸತ್ವಪೂರ್ಣತೆಯನ್ನು ಗಮನಿಸಿ, ಸೃಜನಶೀಲತೆಯನ್ನು ಬೆಂಬಲಿಸಿ ಗುಣಗೌರವದೊಂದಿಗೆ ಮುನ್ನಡೆಯಬೇಕಾಗಿದೆ.

ಬದುಕು ಕಲಿಸುವ ಸಾಹಿತ್ಯ ರಚನೆಯಾಗಬೇಕು, ಬರಹ ಬದುಕಿಗೆ ಮಾದರಿಯಾಗಬೇಕು. ಬರೆಯುವುದರಿಂದಷ್ಟೇ ಸಾಹಿತ್ಯ ಬೆಳೆಯುವುದಿಲ್ಲ. ಓದುವುದರಿಂದ ಸಾಹಿತ್ಯದ ಅಭಿವೃದ್ಧಿ. ಓದು ಹವ್ಯಾಸವಾಗಬೇಕು. ಬರೆಯುವುದೇ ದೊಡ್ಡ ಮಾತಲ್ಲ, ಅದನ್ನು ಓದುವವರಿದ್ದಾಗ ಬರೆದವರಿಗೆ ತೃಪ್ತಿ ಮತ್ತು ಮುಂದೆ ಬರೆಯುವವರಿಗೆ ಸ್ಫೂರ್ತಿ.

ಸತ್ಕಾರ ಸನ್ಮಾನಗಳಿಂದ ಸಾಹಿತ್ಯ ಬೆಳೆಯುವುದಿಲ್ಲ, ಸಾಹಿತಿಯೂ ಬೆಳೆಯುವುದಿಲ್ಲ. ಕೃತಿಗಳನ್ನು ಓದಿ ಬೆಳೆಸಬೇಕು. ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಓದಿನ ಹಸಿವು ಹೆಚ್ಚಿಸುವ ಕಾರ್ಯಕ್ರಮ ಚಟುವಟಿಕೆಗಳು ಇಂದಿನ ಅಗತ್ಯ.

ನಮ್ಮಲ್ಲಿ ಹಲವು ಸರಕಾರಿ ಮತ್ತು ಖಾಸಗಿ ಹೈಸ್ಕೂಲು, ಪದವಿ ಪೂರ್ವ ಕಾಲೇಜುಗಳಿದ್ದು ಸ್ಪರ್ಧಾತ್ಮಕವಾಗಿ ಗುಣಮಟ್ಟದ ಶಿಕ್ಷಣ ನೀಡಲು ಶ್ರಮಿಸುತ್ತಿರುವುದು ಮಹತ್ವದ ಬೆಳವಣಿಗೆಯಾಗಿದೆ.

ಯಾವುದೇ ಸಮುದಾಯ ಭ್ರಮೆಯ ಬದುಕಿನ ಬೆನ್ನು ಹತ್ತದೆ ವಾಸ್ತವದ ಅರಿವಿನಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳುವಂತಾಗಬೇಕು.

ದಿನೇ ದಿನೇ ಮಹಿಳೆಯರ ಮೇಲಿನ ದೌರ್ಜನ್ಯ ಸಂಖ್ಯೆ ಹೆಚ್ಚುತ್ತಿದೆ. ಈ ದಿಶೆಯಲ್ಲಿ ಮಹಿಳೆಯರು ತಮ್ಮ ಸಂಘಟನೆಯ ಮೂಲಕ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ಪ್ರತಿಭಟಿಸಲು ಮುಂದಾಗಬೇಕು.

ಖಡ್ಗಕ್ಕಿಂತ ಹರಿತವಾದುದು ಲೇಖನಿ. ಆದ್ದರಿಂದ ಲೇಖಕರು ನಿರ್ಲಿಪ್ತರಾಗಿರದೆ ಹದವಾಗಿ ಬರೆತು ಅಗತ್ಯದ ಬದಲಾವಣೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವಂತಾಗಲಿ ಎಂಬುದು ನನ್ನ ಆಶಯ.

ನೆನಪು ಮತ್ತು ನಮನ : ೧೯೫೨ರಲ್ಲಿ ಸ್ಥಾಪನೆಗೊಂಡ ಅಂಕೋಲೆಯ ಕರ್ನಾಟಕ ಸಂಘ

ಅಂದಿನಿಂದ ಇಂದಿನವರೆಗೆ ಕನ್ನಡ ಭಾಷೆ, ಸಾಹಿತ್ಯ ಶಿಕ್ಷಣ, ಸಂಸ್ಕೃತಿ ಕ್ಷೇತ್ರದಲ್ಲಿ ತನ್ನಿಂದಾದ ವಿಶಿಷ್ಟ ಕೊಡುಗೆಯನ್ನು ಕೊಡುತ್ತ ಬಂದಿದೆ. ಅಂಕೋಲೆಯ ಸಾಂಸ್ಕ್ರತಿಕ ರಾಯಭಾರಿ ಎಂದೇ ಗುರುತಿಸಿಕೊಂಡಿದ್ದ ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ ವಿ.ಜೆ. ನಾಯಕರು ಸಂಘದ ಅಧ್ಯಕ್ಷರಾಗಿದ್ದಾಗ ಸಂಘದ ಸದಸ್ಯರೊಡಗೂಡಿ ಸ್ವತಃ ಆಡಿದ ನಾಟಕ ಮತ್ತು ಬೀದಿ ನಾಟಕಗಳು, ಶಾಂತಾರಾಮ ನಾಯಕರ ಅವಧಿಯಲ್ಲಿ ಪ್ರದರ್ಶನಗೊಂಡ ಕುರುಡರ ನಾಟಕ ಸಂಘಕ್ಕಿತ್ತ ಅಮೂಲ್ಯ ಕೊಡುಗೆಗಳಾಗಿವೆ. ಇಂದಿಗೂ ತೊಡಗಿಸಿಕೊಂಡಿರುವ ಹಿರಿಯ ಚಿಂತಕ ಕಾಳಪ್ಪ ನಾಯಕರಾದಿಯಾಗಿ ಈ ಸಂಘ ಕಟ್ಟಿ ಬೆಳೆಸಿದ ಹಿರಿಯರೆಲ್ಲರನ್ನೂ ಸ್ಮರಿಸುತ್ತೇನೆ.

ಇಂದು ನಮ್ಮ ಅಂಕೋಲೆಯ ಕರ್ನಾಟಕ ಸಂಘ, ಗುರುಗಳಾದ ನಿವೃತ್ತ ಪ್ರೊ. ಕೆ.ವಿ. ನಾಯಕರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಹಲವು ಕನ್ನಡ ಪರ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಮುಂದುವರಿಯುತ್ತಿದೆ. ಪ್ರತಿ ವರ್ಷ ಗೋಷ್ಠಿಗಳಲ್ಲಿ ಪ್ರಸ್ತುತ ಪಡಿಸಿದ ಕವನ ಕಥೆಗಳು ಕೃತಿಗಳಾಗಿ ಹೊರ ಬರುತ್ತಿದ್ದು ಎಲ್ಲ ಪದಾಧಿಕಾರಿಗಳನ್ನು ಮತ್ತು ಸದಸ್ಯರನ್ನು ಪ್ರೀತಿಪೂರ್ವಕವಾಗಿ ನೆನೆಯುತ್ತೇನೆ.

ಅಂಕೋಲೆಯ ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವಿಷ್ಣು ನಾಯ್ಕ ಮೊದಲಾದ ಅನೇಕ ಹಿರಿಯರ ನೇತೃತ್ವದಲ್ಲಿ ಉತ್ತಮ ಸಂಘಟನೆಯ ಮೂಲಕ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ಇಂದು ಗೋಪಾಲಕೃಷ್ಣ ನಾಯಕರ ಅಧ್ಯಕ್ಷತೆಯಲ್ಲಿ ಮುಂದುವರಿಯುತ್ತಿದೆ. ಘಟಕದ ಎಲ್ಲ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ.

ಹಿಂದಿನ ತಾಲೂಕು ಮತ್ತು ಜಿಲ್ಲಾ ಸಮ್ಮೇಳನಗಳ ಎಲ್ಲ ಗೌರವಾನ್ವಿತ ಸರ್ವಾಧ್ಯಕ್ಷರನ್ನು ನೆನೆದು ಗೌರವ ಸಲ್ಲಿಸುತ್ತೇನೆ. ಈ ಸಾಲಿನ ಜಿಲ್ಲಾ ಸಮ್ಮೇಳನಾಧ್ಯಕ್ಷರಾದ ಶಾಂತಾರಾಮ ನಾಯಕ ಮತ್ತು ನನಗೆ ಕನ್ನಡ ಧ್ವಜ ಹಸ್ತಾಂತರಿಸಿದ ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ನಾಗೇಂದ್ರ ನಾಯಕ ಇವರಿಗೆ ನನ್ನ ಪ್ರಣಾಮಗಳು. ನನಗೆ ಸಲಹೆ ಸೂಚನೆಗಳನ್ನಿತ್ತು ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದ ಗುರು ಹಿರಿಯರೆಲ್ಲರಿಗೆ ನನ್ನ ವಂದನೆಗಳು. ನನಗಾಗಿ ಸಂಭ್ರಮಿಸಿದ ಆತ್ಮೀಯ ಸ್ನೇಹಿತರು ಮತ್ತು ಬಂಧುಗಳಿಗೆ ನನ್ನ ಪ್ರೀತಿಯ ವಂದನೆಗಳನ್ನು ಸಲ್ಲಿಸುತ್ತೇನೆ.

ಅಂಕೋಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅರ್ಥಪೂರ್ಣ ಅತಿ ಸುಂದರ ಲಾಂಛನಕ್ಕಾಗಿ ಕೆ.ಎಲ್.ಇ ಬಿ.ಎಡ್ ಕಾಲೇಜಿನ ಪ್ರಾಚಾರ್ಯ ಡಾ. ವಿನಾಯಕ ಹೆಗಡೆ ಅವರು ಅಭಿನಂದನಾರ್ಹರು.

ಅಂಕೋಲಾ ತಾಲೂಕು ೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ಮಹಿಳಾ ಸರ್ವಾಧ್ಯಕ್ಷೆಯನ್ನಾಗಿ ಆಯ್ಕೆ ಮಾಡಲು ಕಾರಣರಾದ ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ ಮತ್ತು ರಾಜ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಿಯಾಗಿ ಎಲ್ಲ ಪದಾಧಿಕಾರಿಗಳಿಗೆ ಮತ್ತು ನನ್ನ ಅಂಕೋಲೆಯ ಮಹಾ ಜನತೆಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಇತ್ತೀಚಿನ ವರ್ಷಗಳಲ್ಲಿ ನಮ್ಮನ್ನಗಲಿದ ಗುರುಗಳಾದ ಪ್ರೊ. ವಿ.ಎ. ಜೋಷಿ, ಪ್ರೊ. ಎಂ.ಪಿ. ಭಟ್, ಕವಯಿತ್ರಿ ಕಲಾ ಭಟ್, ಖ್ಯಾತ ವೈದ್ಯ ಅವಿನಾಶ ತಿನೇಕರ, ಉತ್ತಮ ಛಾಯಾಗ್ರಾಹಕರಾಗಿದ್ದ ಅರವಿಂದ ಜೈವಂತ, ನಿವೃತ್ತ ಪ್ರೊ ವಿ. ಆರ್ ವೆರ್ಣೇಕರ ಮತ್ತು ಪ್ರೊ. ಪಿ.ಟಿ.ಥಾಮಸ್ ಇವರೆಲ್ಲರ ಪವಿತ್ರಾತ್ಮಕ್ಕೆ ನನ್ನ ನಮನಗಳು.

ಅಗತ್ಯದ ಬೇಡಿಕೆಗಳು : ಪ್ರಾಥಮಿಕ ಹಂತದ ಬೋಧನೆ ಮಾತೃಭಾಷೆ ಕನ್ನಡ ಮಾಧ್ಯಮದಲ್ಲಿರಬೇಕು. ಶಾಲಾ ಕಾಲೇಜುಗಳಲ್ಲಿ ಬೋಧಕರ ಕೊರತೆ, ಕಛೇರಿಗಳಲ್ಲಿ ನೌಕರರ ಕೊರತೆ ನೀಗಿಸುವ ಪ್ರಯತ್ನ ಮಾಡಬೇಕು. ಉದ್ಯೋಗಕ್ಕೆ ಅವಕಾಶವಾಗುಂತಹ ಪರಿಸರಕ್ಕೆ ಹಾನಿಯಾಗದಂತಹ ಉದ್ದಿಮೆಗಳು ಬರಲಿ. ನಮ್ಮ ಅಂಕೋಲೆ ಅನೇಕ ಸುಂದರ ರಮ್ಯ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿದೆ. ಇವುಗಳನ್ನು ಗಮನದಲ್ಲಿಟ್ಟು ಪ್ರವಾಸೋದ್ಯಮ ಅಭಿವೃದ್ಧಿಗೆ ಗಮನಹರಿಸುವಂತೆ ಆಗಬೇಕು. ನಮ್ಮ ತಾಲೂಕಿಗೆ ತುಂಬಾ ಅಗತ್ಯವಿರುವ ಅಂಕೋಲಾ ಹುಬ್ಬಳ್ಳಿ ರೈಲು ಮಾರ್ಗ ಯೋಜನೆ ಕಾರ್ಯಗತವಾಗಬೇಕು. ಸುಸಜ್ಜಿತ ಆಸ್ಪತ್ರೆ ಮತ್ತು ಪರಿಣಿತ ವೈದ್ಯರ ಅವಶ್ಯಕತೆ ಇದ್ದು ಆ ದಿಶೆಯಲ್ಲಿ ಪ್ರಯತ್ನ ನಡೆಯಬೇಕು. ಹೆಸರಲ್ಲೇ ಉಸಿರಿರುವ ನಮ್ಮ ಉತ್ತರ ಕನ್ನಡ ಜಿಲ್ಲೆ ಅವಿಭಾಜ್ಯವಾಗಿರಬೇಕು. ಯಾವುದೇ ಬದಲಾವಣೆ ಸುಧಾರಣೆಗೆ ಮೊದಲು ಪ್ರತಿಭಟನೆಗಳು ಸಹಜ. ಆದರೆ ಸಕಾರಾತ್ಮಕ ನಿಲುವಿಗೆ ಒತ್ತುಕೊಡುವುದು

ಒಳಿತು. ಬಿಡಿಯಾಗದೆ ಇಡಿಯಾಗಿರೋಣ. ಬೆಸೆದ ಭಾವನೆಗಳಿಗೆ ನೋವು ನೀಡದಿರೋಣ.

ಕೊನೆಯ ಮಾತು : ಮುಗಿಸುವ ಮುನ್ನ ನನ್ನ ಕೊನೆಯ ಮಾತು

"ಕನ್ನಡವೆಂದರೆ ತಾಯಿಯೇ ದೇವಿಯೇ?
ನಾನು ನೀನು ಅವರು".

ಎಂದಿದ್ದಾರೆ ಕವಿ ಗೋಪಾಲಕೃಷ್ಣ ಅಡಿಗರು. ಹಾಗಿರುವಾಗ ಎಲ್ಲ ಸಾಧಕ ಬಾಧಕಗಳಿಗೆ ನಾವೇ ಕಾರಣರು.

'ಸಹ್ಯಾದ್ರಿಯಾಗಿರಲಿ ಜೀವನದ ಕನಸು
ಕಾವೇರಿಯಂತಿರಲಿ ಮಾನವನ ಮನಸು
ಜೋಗ ಜಲಪಾತವಾಗಿರಲಿ ಗೈವ ಕಾರ್ಯ
ಯಶ ಗಳಿಸುತಿರಬೇಕು ಕಡಲ ಔದಾರ್ಯ' –

ಎಂದು ನುಡಿದ ದಿನಕರ ದೇಸಾಯಿ ಅವರ ಆಶಯ ಈಡೇರಲಿ.

ಕೀ ನಂ ಶ್ರೀ ಕವಿವಾಣಿಯಂತೆ

"ನಾವೆಲ್ಲರೊಡಗೂಡಿ ಒಡನಾಡಿ ಕಲಿತು
ಕನ್ನಡದ ಸೇವೆಯಲಿ ನಮ್ಮ ಮೈ ಮರೆತು
ಕುಂದು ಕೊರತೆಗಳೊಂದಕಿಂಬಿಲ್ಲದಂತೆ
ನಮ್ಮ ಸಖ್ಯದ ಮೊಗ್ಗು ಬಿರಿದರಳುವಂತೆ
ದೇವಿ ಕರುಣಿಸಲಿ ವರವ
ಕನ್ನಡದ ದೇವಿ ಕರುಣಿಸಲಿ ವರವ" ಎಂಬ

ಪ್ರಾರ್ಥನೆಯೊಂದಿಗೆ, ಎಲ್ಲರೂ ಆರೋಗ್ಯವಂತರಾಗಿರಲಿ, ಎಲ್ಲರೂ ಸುಖಿಗಳಾಗಿರಲಿ, ಎಲ್ಲರೂ ಖುಷಿಯಾಗಿರಲಿ ಎಂದು ಹಾರೈಸುತ್ತ, ಸಮ್ಮೇಳನಕ್ಕೆ ಆಗಮಿಸಿ ನನ್ನ ಮಾತುಗಳನ್ನು ಆಲಿಸಿದ ತಮಗೆಲ್ಲರಿಗೂ ನನ್ನ ವಂದನೆಗಳು.

ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ.
ಜೈ ಕರ್ನಾಟಕ ಮಾತೆ, ವಂದೇ ಮಾತರಮ್.

ಕೇದಿಗೆ

ಕಾರವಾರದ ಚಲುವ ಕೇದಿಗೆ
ಬಹುದಿನವು ಸಂದಿದೆ ನೋಡದೆ ॥

ಕಡಲ ತೀರದ ಉಸುಕು ದಿನ್ನೆಗೆ
ಹಸುರಾದ ಗಿಡದಲ್ಲಿ ಶೋಭಿಪೆ
ಹುಡಿ-ಹಾರುತಿಹ ಮೈಯು ಬಿಳುಪು
ಎಲ್ಲಿಗೋದರು ಮರೆಯೆ ನೆನಪು ॥

ಗಿಡ ಮುಳ್ಳು ಗುಟ್ಟಾಗಿ ಇದ್ದು
ಕಾಣಿಸುವೆ ಆಗಾಗ ಎದ್ದು
ತುಂಟಜನ ನಿನ್ನನ್ನು ನೋಡಿ
ಬಡಿಗೆಯೊಳು ಮಾಡುವರು ಗೇಲಿ ॥

ಕೊನೆಗೊಮ್ಮೆ ನಿನ್ನೊಡನೆ ಸೆಣಸಿ
ನೋವಿಲ್ಲದೆ ತೆಗೆದು ಇರಿಸಿ
ಮೈ-ಸವಲಿ ವಾಸನೆಯ ಹೀರಿ
ಮೋಜಿನೊಳು ಸಾಗುವರು ದಾರಿ ॥

ಹೆಣ್ಣು ಮಕ್ಕಳು ನಿನ್ನ ನೋಡಿ
ಕೈಯೊಳಗೆ ಹಿಡಿದು ಮುದ್ದಾಡಿ
ನಮಗಿನ್ನು ಎಂಬ ಆಷೆಯಲಿ
ಇಡುವರು ಮೆಲ್ಲಗಾ ಜಡೆಯಲಿ ॥

ನೀನಿರುವ ದೇವರ ಗುಡಿಯು
ಘಮ-ಘಮ ಎಂಬುದು ದಿನವು
ಸನಿಹದೊಳು ನೀನೀಗ ಇರಲು
ಚಿಮ್ಮುವುದು ಸಂತಸದ ಹೊನಲು ॥

– ಬಿ. ಹೊನ್ನಪ್ಪ
(ಕೇದಿಗೆ ಸಂಕಲನದಿಂದ)

ಅಂಕೋಲಾ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನಗಳ ಪಕ್ಷಿನೋಟ

ಸಂಖ್ಯೆ	ದಿನಾಂಕ	ಸರ್ವಾಧ್ಯಕ್ಷರು	ಸ್ವಾಗತ ಸಮಿತಿ ಅಧ್ಯಕ್ಷರು	ಕ.ಸಾ.ಪ. ಅಧ್ಯಕ್ಷರು/ ಕಾರ್ಯಾಧ್ಯಕ್ಷರು	ಸ್ಮರಣ ಸಂಚಿಕೆ ಹೆಸರು	ಸಂಪಾದಕರು
೧.	೦೮–೦೧–೨೦೦೬	ಶ್ರೀ ಶ್ಯಾಮ ಹುದ್ದಾರ	ಶ್ರೀ ಆರ್. ಎನ್. ನಾಯಕ	ಡಾ. ಆರ್. ಜಿ. ಗುಂದಿ	ಅಂಕೋಲೆ	ಶ್ರೀ ನಾಗಪತಿ ಹೆಗಡೆ ಡಾ. ಶಿವಾನಂದ ನಾಯಕ
೨.	೨೦–೦೧–೨೦೦೮	ಶ್ರೀ ಶಾಂತಾರಾಮ ನಾಯಕ	ಶ್ರೀ ವಿಷ್ಣು ನಾಯ್ಕ	ಡಾ. ಆರ್. ಜಿ. ಗುಂದಿ	ನುಡಿಸುಗ್ಗಿ	ಶ್ರೀ ವಿಷ್ಣು ನಾಯ್ಕ ಶ್ರೀ ನಾಗೇಂದ್ರ ನಾಯಕ, ತೊರ್ಕೆ
೩.	೧೫–೧೨–೨೦೧೧	ಶ್ರೀ ಬಿ. ಹೊನ್ನಪ್ಪ, ಭಾವಿಕೇರಿ	ಶ್ರೀ ಉದಯ ಡಿ. ನಾಯ್ಕ	ಶ್ರೀ ಎನ್.ವಿ. ನಾಯಕ ಭಾವಿಕೇರಿ	ನುಡಿಸುಗ್ಗಿ – ೨	ಪ್ರೊ. ಮೋಹನ ಹಬ್ಬು ಶ್ರೀ ಎನ್.ವಿ.ನಾಯಕ, ಭಾವಿಕೇರಿ
೪.	೨೩–೦೧–೨೦೧೩	ಪ್ರೊ. ಮೋಹನ ಹಬ್ಬು	ಶ್ರೀ ಶಾಂತಾರಾಮ ನಾಯಕ ಹಿಚಕಡ	ಶ್ರೀ ರಾಮಕೃಷ್ಣ ಜಿ. ನಾಯಕ, ಸೂರ್ವೆ	ತೋರಣ	ಶ್ರೀ ಜೆ. ಪ್ರೇಮಾನಂದ ಶ್ರೀ ರಾಮಕೃಷ್ಣ ಜಿ. ನಾಯಕ, ಸೂರ್ವೆ
೫.	೦೬–೦೨–೨೦೧೫	ಡಾ. ರಾಮಕೃಷ್ಣ ಗುಂದಿ	ಶ್ರೀ ಸತೀಶ ಸೈಲ್	ಶ್ರೀ ಗೋಪಾಲಕೃಷ್ಣ ನಾಯಕ	ಬತ್ತದ ತೆನೆ	ಶ್ರೀ ಪ್ರಭಾಕರ ಬಂಟ ಶ್ರೀ ಎನ್.ಡಿ. ಅಂಕೋಲೇಕರ
೬.	೧೯–೦೩–೨೦೧೭	ಶ್ರೀ ಎನ್.ವಿ. ನಾಯಕ	ಶ್ರೀ ಜಿ. ಎಂ. ಶೆಟ್ಟಿ	ಡಾ. ಪ್ರಕಾಶ ನಾಯಕ	ನುಡಿತೇರು	ಶ್ರೀ ನಾಗಪತಿ ಹೆಗಡೆ
೭	೧೫–೦೪–೨೦೧೮	ಶ್ರೀ ವಿಠಲ ಗಾಂವಕಾರ	ಪ್ರೊ. ಕೆ. ವಿ. ನಾಯಕ	ಡಾ. ಪ್ರಕಾಶ ನಾಯಕ	ಬಾಡ್ರೋಳಿ	ಶ್ರೀ ನಾಗಪತಿ ಹೆಗಡೆ
೮.	೦೮–೦೧–೨೦೧೯	ಶ್ರೀ ನಾಗೇಂದ್ರ ನಾಯಕ ತೊರ್ಕೆ	ಶ್ರೀ ರವೀಂದ್ರ ಕೇಣಿ	ಡಾ. ಪ್ರಕಾಶ ನಾಯಕ	(ಪ್ರಕಟವಾಗಿಲ್ಲ)	––
೯.	೨೦–೦೧–೨೦೨೩	ಶ್ರೀಮತಿ ಹೊನ್ನಮ್ಮಾ ನಾಯಕ	ಶ್ರೀ ಉದಯ ಕುಂಬಾರ	ಶ್ರೀ ಗೋಪಾಲಕೃಷ್ಣ ನಾಯಕ	ಹೊನ್ನಕಳಸ	ಶ್ರೀ ಮಹಾಂತೇಶ ರೇವಡಿ
೧೦.	೦೮–೦೨–೨೦೨೪	ಪ್ರೊ. ನಾಗೇಶದೇವ ಅಂಕೋಲೆಕರ	ಡಾ. ಮಹೇಶ ಗೋಳಿಕಟ್ಟೆ	ಶ್ರೀ ಗೋಪಾಲಕೃಷ್ಣ ನಾಯಕ	ಅಂಕೋಲೆ ಒಡಲಾಳ	ಶ್ರೀ ಶ್ಯಾಮಸುಂದರ ಗೌಡ

೧೦ನೇ ಸಾಹಿತ್ಯ ಸಮ್ಮೇಳನಕ್ಕೆ ಧನಸಹಾಯ ನೀಡಿದವರು

೧.	ಶ್ರೀ ಶ್ಯಾಮಸುಂದರ ಗೌಡ, ಸಾಯಿ ಲೀಡ್ಸ್, ಅಂಕೋಲಾ	ರೂ. ೩೭೦೦೦.೦೦
೨.	ಶ್ರೀ ಸತೀಶ ಸೈಲ್, ಶಾಸಕರು, ಕಾರವಾರ–ಅಂಕೋಲಾ ವಿಧಾನಸಭಾ ಕ್ಷೇತ್ರ	ರೂ. ೨೫೦೦೦.೦೦
೩.	ಸೇಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಕೋ–ಆಫ್ ಸೊಸೈಟಿ ಲಿ.	ರೂ. ೧೫೦೦೦.೦೦
೪.	ಶ್ರೀ ಶ್ರೀಧರ ನಾಯ್ಕ, ಲಕ್ಷ್ಮೀ ಟಿಂಬರ್, ಬೇಲೇಕೇರಿ	ರೂ. ೧೫೦೦೦.೦೦
೫.	ಶ್ರೀ ಶಕ್ತಿ ಟವರ್ಸ್, ಪೂಜಗೇರಿ, ಅಂಕೋಲಾ	ರೂ. ೧೦೦೦೦.೦೦
೬.	ಡಾ. ಶ್ರೀದೇವಿ ತಿನ್ನೈಕರ್, ಆರ್ಯ ಮೆಡಿಕಲ್ ಸೆಂಟರ್, ಅಂಕೋಲಾ	ರೂ. ೧೦೦೦೦.೦೦
೭.	ಶ್ರೀ ವಸಂತ ಜಿ. ನಾಯಕ, ಶ್ರೀರಾಮ ಪರಿಸರ ಕ್ರೆಡಿಟ್ ಸಹಕಾರಿ ಸಂಘ, ಅಂಕೋಲಾ	ರೂ. ೧೦೦೦೦.೦೦
೮.	ಶ್ರೀ ದೇವಿದಾಸ ವಿಠೋಬ ನಾಯಕ, ಉದ್ಯಮಿಗಳು, ಕಣಗಿಲ್, ಅಂಕೋಲಾ	ರೂ. ೧೦೦೦೦.೦೦
೯.	ಶ್ರೀ ರಾಘವೇಂದ್ರ ನಾಯಕ, ಗೋದಾವರಿ ಕ್ರೆಡಿಟ್ ಸೌಹಾರ್ದ ಸಹಕಾರಿ, ಗೋಕರ್ಣ	ರೂ. ೧೦೦೦೦.೦೦
೧೦.	ಶ್ರೀಮತಿ ಹೊನ್ನಮ್ಮ ಎಚ್. ನಾಯಕ, ನಿವೃತ್ತ ಉಪನ್ಯಾಸಕರು, ವಂದಿಗೆ, ಅಂಕೋಲಾ	ರೂ. ೧೦೦೦೦.೦೦
೧೧.	ಶ್ರೀ ರಾಜೀವ ಗೋವಿಂದ್ರಾಯ ನಾಯಕ, ನಿವೃತ್ತ ಉಪನ್ಯಾಸಕರು, ಅಂಕೋಲಾ	ರೂ. ೫೦೦೦.೦೦
೧೨.	ಶ್ರೀ ಗೋಪಾಲಕೃಷ್ಣ ಸಿ. ನಾಯ್ಕ(ನಾಗೇಂದ್ರ), ಮಾಜಿ ಸದಸ್ಯರು, ಪುರಸಭೆ, ಅಂಕೋಲಾ	ರೂ. ೫೦೦೦.೦೦
೧೩.	ಶ್ರೀ ಶಾಂತಾರಾಮ ನಾಯಕ, ಹಿರಿಯ ಸಾಹಿತಿಗಳು, ಹಿಚಕಡ	ರೂ. ೫೦೦೦.೦೦
೧೪.	ಶ್ರೀ ಅಬ್ದುಲ್ ಕರೀಂ ಶೇಖ್, ಸಾಮಾಜಿಕ ಕಾರ್ಯಕರ್ತರು, ಅಂಕೋಲಾ	ರೂ. ೨೦೦೦.೦೦
೧೫.	ಶ್ರೀ ವಿಜಯ್ ಆರ್. ನಾಯಕ, ಮಾಜಿ ಅಧ್ಯಕ್ಷರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ	ರೂ. ೨೦೦೦.೦೦
೧೬.	ಡಾ. ವಿನಾಯಕ ಜಿ. ನಾಯಕ, ವಿಶ್ರಾಂತ ಪ್ರಾಚಾರ್ಯರು, ಕಾರವಾರ	ರೂ. ೨೦೦೦.೦೦
೧೭.	ಶ್ರೀಮತಿ ಶುಭಲಕ್ಷ್ಮಿ ಆರ್. ನಾಯಕ, ಉಪನ್ಯಾಸಕರು, ವಂದಿಗೆ, ಅಂಕೋಲಾ	ರೂ. ೧೫೦೦.೦೦
೧೮.	ಶ್ರೀ ಅಮ್ಮೆಂಬಳ ಆನಂದ, ಹಿರಿಯ ಸಮಾಜವಾದಿ ಚಿಂತಕರು, ಅಂಕೋಲಾ–ಮಣಿಪಾಲ	ರೂ. ೧೦೦೦.೦೦

ಜಾಹಿರಾತುಗಳು

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು

ಶ್ರೀ ರಾಮ ಪರಿಸರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ

ಅಂಕೋಲಾ, ಉತ್ತರ ಕನ್ನಡ

ಪ್ರಧಾನ ಕಛೇರಿ : 'ದೇವಕಿ ಅನಂತ ರೆಸಿಡೆನ್ಸಿ' ಶಿರಸಿ ಅರ್ಬನ್ ಬ್ಯಾಂಕ್‌ಗೆ ಹೊಂದಿಕೊಂಡು
ಬೇಲಾಬಂದರ ರೋಡ, ಅಂಕೋಲಾ-581314

e-mail : shreeramparisaracredit@gmail.com ಫೋ.: 08388-233124 ಮೊ. : 9482692855



"ನಮ್ಮ ಸಂಸ್ಥೆಯು 31.03.2024 ಕ್ಕೆ 14ನೇ ವಾರ್ಷಿಕ ವ್ಯವಹಾರ ಮುಗಿಸಿ 15ನೇ ವಾರ್ಷಿಕ ವರ್ಷದಲ್ಲಿ ಮುನ್ನಡೆಯುತ್ತಲಿದೆ. ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು."

- ವರ್ಷದಿಂದ ವರ್ಷಕ್ಕೆ ಸಂಸ್ಥೆಯು ಪ್ರಗತಿಯಲ್ಲಿ ಸಾಗುತ್ತಲಿದೆ.
- ಜಿಲ್ಲೆಯಾದ್ಯಂತ ಉತ್ತಮ ರೀತಿಯ ವ್ಯವಹಾರಗಳ ಬೆಳವಣಿಗೆ
- ಕಳೆದ ವರ್ಷದ ವ್ಯವಹಾರದ ಮೇಲೆ 25% ಅಭಿವೃದ್ಧಿ.
- ಸಂಸ್ಥೆಯಿಂದ ಸಮಾಜದ ಅಭಿವೃದ್ಧಿಗಾಗಿ ಹೆಚ್ಚಿನ ಒತ್ತು.
- ರೂ. 94,54,00,500 (ತೊಂಬತ್ನಾಲ್ಕು ಕೋಟಿ ಐವತ್ನಾಲ್ಕು ಲಕ್ಷದ ಐದು ನೂರು) ವಾರ್ಷಿಕ ವ್ಯವಹಾರ
- 98% ಸಾಲ ವಸೂಲಾತಿ

*** ಸಹಕಾರಿಯು ಸ್ವೀಕರಿಸುವ ವಿವಿಧ ಠೇವುಗಳು ***

ಕ್ಯಾಶ್ ಸರ್ಟಿಫಿಕೇಟ್
ಸಾಮಾನ್ಯ ನಾಗರಿಕರಿಗೆ : 10%
ಹಿರಿಯ ನಾಗರಿಕರಿಗೆ, ವಿಧವೆಯರಿಗೆ ಮಾಜಿ ಸೈನಿಕರಿಗೆ ಹಾಗೂ ಅಂಗವಿಕಲರಿಗೆ : 10.5%

ಮುದ್ದತ್ತಿ ಠೇವು : 1 ವರ್ಷಕ್ಕೆ : 9%
ರಿಕರಿಂಗ್ ಡಿಪಾಸಿಟ್ : 9%(5 ವರ್ಷದ ಅವಧಿಗೆ)
ಪಿಗ್ಮಿ ಠೇವು : 4%

ವಿಶೇಷ ಕೊಡುಗೆ : ಹಿರಿಯ ನಾಗರಿಕರು ರೂ. 1,00,000=00 ತೊಡಗಿಸಿದರೆ ಪ್ರತಿ ತಿಂಗಳು ಸಿಗುವ ಬಡ್ಡಿ ರೂ. 850=00

*** ಸಹಕಾರಿಯು ವಿತರಿಸುವ ವಿವಿಧ ಸಾಲಗಳು ***

* ಕ್ಯಾಶ್ ಕ್ರೆಡಿಟ್ ಸಾಲ
* ವಾಹನ ಸಾಲ
* ಜಮೀನು ಖರೀದಿ ಸಾಲ
* ಠೇವು ಸಾಲ
* ಗೃಹ ಸಾಲ

ಸಾಲ ಸೌಲಭ್ಯಗಳು : ರೂ. 50.000 (ಐವತ್ತು ಸಾವಿರ) ದಿಂದ ರೂ. 1,00,00,000 (ಒಂದು ಕೋಟಿ)ಯ ವರೆಗೆ ಸೂಕ್ತ ಭದ್ರತೆಯ ಮೇಲೆ ಸಾಲ ಸೌಲಭ್ಯಗಳನ್ನು ಕೊಡಲಾಗುವುದು.

ವಿ.ಸೂ.: ಸಾಲ ಪಡೆದ ಸದಸ್ಯರು ಸರಿಯಾದ ಸಮಯಕ್ಕೆ ಮರುಪಾವತಿ ಮಾಡಿ ಸಾಲದ ಬಡ್ಡಿಯ ಮೇಲೆ ರಿಯಾಯಿತಿ ಪಡೆದುಕೊಳ್ಳಿರಿ. ಹಾಗೂ ಸಂಸ್ಥೆಯ ಅಭಿವೃದ್ಧಿಗೆ ಸಹಕರಿಸಿರಿ.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಶಾಖೆಗಳನ್ನು ಸಂಪರ್ಕಿಸಿರಿ.



ಶ್ರೀ ವಸಂತ ಜಿ. ನಾಯಕ, ಜಮಗೋಡ
ಅಧ್ಯಕ್ಷರು, ಶ್ರೀರಾಮ ಪರಿಸರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಂಕೋಲಾ (ಉ.ಕ.)

ಶಾಖೆ : ಅಂಕೋಲಾ 'ದೇವಕಿ ಅನಂತ ರೆಸಿಡೆನ್ಸಿ' ಬೇಲಾ ಬಂದರ ರೋಡ ಮೊ. : 9482692855
ಶಾಖೆ : ಬೆಳಸೆ ಉದಯ ಎಲ್. ನಾಯಕ ಕಾಂಪ್ಲೆಕ್ಸ್, ಎನ್. ಎಚ್. 66 ಬೆಳಸೆ ಮೊ. : 9482693289
ಶಾಖೆ : ಅವರ್ಸಾ ಮೇನ್ ರೋಡ್, ಕಾತ್ಯಾಯನಿ ಹೈಸ್ಕೂಲ್ ಹತ್ತಿರ ಮೊ. : 8088044032
ಶಾಖೆ : ಕುಮಟಾ ಶೇಟ್ ಕಾಂಪ್ಲೆಕ್ಸ್, ಕುಂಭೇಶ್ವರ, ರಸ್ತೆ ಬಸ್ತಿಪೇಟೆ, ಕುಮಟಾ, ಮೊ. : 8971768201
ಶಾಖೆ : ಬಳಲೆ ಮಾದನಗೇರಿ ಸರ್ಕಲ್, ಮಾದನಗೇರಿ, ಮೊ. : 9141401510
ಶಾಖೆ : ಬೆಳಂಬಾರ ದಾಮೋದರ ಬಿಲ್ಡಿಂಗ್ ತಾಳೇಬೈಲ್, ಬೆಳಂಬಾರ, ಮೊ. : 9482693003
ಶಾಖೆ : ಕಾರವಾರ ಮೊದಲ ಮಹಡಿ, ಆನಂದ ಹೆರಿಟೇಜ್, ಗ್ರೀನ್ ಸ್ಟ್ರೀಟ್, ಕಾರವಾರ, ಮೊ. : 7411220414

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ

ಹಾರ್ದಿಕ ಶುಭಾಶಯಗಳು



ಶ್ರೀ ದೇವಿದಾಸ ವಿಠೋಬ ನಾಯಕ

ಉದ್ಯಮಿಗಳು, ಕಣಗಿಲ, ಅಂಕೋಲಾ

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶುಭ ಹಾರೈಕೆಗಳು

ನಾಡು ನುಡಿ ಚಿರಸ್ಥಾಯಿಯಾಗಿರಲಿ



ಡಿ. ಎಚ್. ಎಲ್. ನಾಯಕ

ನಿವೃತ್ತ ಪ್ರಾಂಶುಪಾಲರು, ಕಣಗಿಲ, ಅಂಕೋಲಾ

“ಹಣೆಬರಹ ಅಳಿಸಲಾಗದು
ನೀವಿತ್ತ ಪ್ರೀತಿ ಸಹಕಾರ ಸ್ಫೂರ್ತಿ ಮರೆಯಲಾಗದು
ನನ್ನ ಬರಹದ ಮೊದಲ ಓದುಗ
ಸೂಕ್ತ ಸಲಹೆಯ ಮಾರ್ಗದರ್ಶಕ
ನನ್ನೆಲ್ಲ ಸಿರಿ ಸಂಭ್ರಮದ ದಣಿ
ನಿಮ್ಮ ನೆನಪು ಅನವರತ”

ಶ್ರೀಮತಿ ಹೊನ್ನಮ್ಮ ನಾಯಕ

ನಿವೃತ್ತ ಉಪನ್ಯಾಸಕಿ, ಅಂಕೋಲಾ

ಅಂಕೋಲಾ ತಾಲೂಕಾ 10 ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.

GODAVARI SOUHARDHA LTD

ಗೋದಾವರಿ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ., ಗೋಕರ್ಣ

ಪ್ರಧಾನ ಕಛೇರಿ : ಗೋಕರ್ಣ	ಶಾಖೆ : ಮಿರ್ಜಾನ	ಶಾಖೆ : ಗೋಕರ್ಣ	ಶಾಖೆ : ಕಾರವಾರ	ಶಾಖೆ : ಕುಮಟ	ಶಾಖೆ : ಅಂಕೋಲಾ	ಶಾಖೆ : ಮಾದನಗೇರಿ
08386-256999, 295888	08386-296222	08386-256333	08382-28444	08386-224555	08388-232666	08386-279777

2023-24ರ ರಾಜ್ಯ ಶ್ರೇಷ್ಠ ಸೌಹಾರ್ದ ಸಹಕಾರಿ ಪ್ರಶಸ್ತಿ ಪುರಸ್ಕೃತ ಸಂಸ್ಥೆ

ಓವರ್ ಡ್ರಾಫ್ಟ್ ಸಾಲ	14%
ವಾಣಿಜ್ಯ ಸಾಲ	16%
ಗೃಹ ಸಾಲ	13.50%
ಜಮೀನು ಅಡಮಾನ ಸಾಲ	14.50%
ಕೃಷಿ ಉಪಕರಣ ಸಾಲ	13%
ವೇತನದರರ ಸಾಲ	15%
ಗೋಲ್ಡ್ ಲೋನ್	12.50%

50,000 ದಿಂದ 5 ಕೋಟಿಯವರೆಗೆ ಸಾಲ ಸೌಲಭ್ಯ
(ಷರತ್ತುಗಳು ಅನ್ವಯಿಸುತ್ತವೆ)

ವಾಹನ ಸಾಲ

ನಮ್ಮಲ್ಲಿ ಬೈಕ್, ಸ್ಕೂಟರ್, ರಿಕ್ಷಾ, ಕಾರ್, ಟ್ರಕ್, ಟಿಪ್ಪರ್ ಗಳಂತಹ ಯಾವುದೇ ವಾಹನಗಳ ಖರೀದಿಗೆ ಕನಿಷ್ಠ ದಾಖಲಾತಿಗಳೊಂದಿಗೆ ಸಾಲವನ್ನು ನೀಡಲಾಗುತ್ತದೆ

ಇಳಿಮುಖ ಬಡ್ಡಿ ದರ	75% ವರೆಗೆ ಆನ್ ರೋಡ್ ಸಾಲ	36, 48, 60 ಸುಲಭ ಮಾಸಿಕ ಕಂತುಗಳು	4 ಚಕ್ರದ ವಾಹನಗಳಿಗೆ 84 ಕಂತುಗಳ ಅವಧಿ (7 ವರ್ಷ)

ನಿಮ್ಮ ಹೊಸ ವಾಹನ ಖರೀದಿಸುವ ಕನಸನ್ನು ನನಸಾಗಿಸಲು ನಮ್ಮ ಹತ್ತಿರದ ಶಾಖೆಗೆ ಇಂದೇ ಭೇಟಿ ನೀಡಿ

ನಿರ್ದಿಷ್ಟ ಉದ್ದೇಶಗಳಿಗಾಗಿ ಸೂಕ್ತ ಭದ್ರತೆಯ ಆಧಾರದಲ್ಲಿ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ

ವಿಶೇಷ ಕೊಡುಗೆ

ಉತ್ತರ ಕನ್ನಡ ಜಿಲ್ಲೆಯ ನಮ್ಮ ಎಲ್ಲಾ ಶಿಕ್ಷಕ ಮಿತ್ರರಿಗೆ ಹಾಗೂ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ನೌಕರರಿಗೆ ಕೇವಲ 12.50% ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು ಮತ್ತು ಠೇವಣಿಗಳಿಗೆ ಆಕರ್ಷಕ ಬಡ್ಡಿ ನೀಡಲಾಗುವುದು.
ಕುಮಟಾ ಶಾಖೆಯಲ್ಲಿ ಮಾತ್ರ



ಅರಮನೆ ಮೈದಾನ ಬೆಂಗಳೂರಿನಲ್ಲಿ ರಾಜ್ಯ ಶ್ರೇಷ್ಠ ಸಹಕಾರಿ ವಿಶೇಷ ಪ್ರಶಸ್ತಿ ಪಡೆಯುತ್ತಿರುವ ಸುಸಂದರ್ಭ

1) 2023-24ರ ರಾಜ್ಯ ಶ್ರೇಷ್ಠ ಸೌಹಾರ್ದ ಸಹಕಾರಿ ಪ್ರಶಸ್ತಿಯೊಂದಿಗೆ ರಾಜ್ಯದ ಸಂಯುಕ್ತ ಸಹಕಾರಿಯಿಂದ ಪುರಸ್ಕೃತಗೊಂಡಿರುವ ಸಂಸ್ಥೆ.
2) ಅನುಭವಿ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳನ್ನು ಹೊಂದಿರುವಂತಹ ಸಂಸ್ಥೆ.
3) ಎಲ್ಲಾ ಶಾಖೆಗಳು ಹವಾನಿಯಂತ್ರಿತ ವ್ಯವಸ್ಥೆ ಮತ್ತು CCTV ಕ್ಯಾಮೆರಾ ಜಾಗರೂಕತೆಯನ್ನು ಹೊಂದಿರುವ ಸಂಸ್ಥೆ.
4) ಪ್ರತಿ ವರ್ಷ ರಾಷ್ಟ್ರೀಯ ಹಬ್ಬಗಳಾದ ಆಗಸ್ಟ್ 15 ಮತ್ತು ಜನವರಿ 26 ರಂದು ನಿವೃತ್ತ ಶಿಕ್ಷಕರು ವೈದ್ಯರು ಹಾಗೂ ಪೋಲೀಸ್ ಇಲಾಖೆಗೆ ಸಾಮಾಜಿಕ ಸೇವೆಗಳ ಪ್ರೋತ್ಸಾಹಕ್ಕಾಗಿ ಪ್ರಶಸ್ತಿ ಕಾರ್ಯಕ್ರಮವನ್ನು ನಡೆಸುವಂತಹ ಏಕೈಕ ಸಂಸ್ಥೆ.
5) ಸಂಸ್ಥೆಯ ಗ್ರಾಹಕರ ಗೌಪ್ಯತೆಯನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ಭವಿಷ್ಯದಲ್ಲಿ ಉತ್ತಮ ಸಂಬಂಧವನ್ನು ಬೆಳೆಸುವಲ್ಲಿ ಯಶಸ್ವಿಯಾಗಿರುವ ಸಂಸ್ಥೆ.
6) 150ಕ್ಕೂ ಹೆಚ್ಚಿನ ಸಿಬ್ಬಂದಿಗಳು ನಮ್ಮ ಸಂಸ್ಥೆಯಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಿರುವ ಸಂಸ್ಥೆ.
7) ಸಂಸ್ಥೆಯ ಪ್ರತಿವರ್ಷದ ಲಾಭಾಂಶದಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳಿಗೆ ಹಣದ ಸಹಾಯ ಹಾಗೂ ವೃದ್ಧಾಶ್ರಮದ ಅಸ್ವಸ್ಥ ಹಿರಿಯರಿಗೆ ವೈದ್ಯಕೀಯ ಮತ್ತು ಹಣ್ಣು ಹಂಪಲು ನೀಡಿ ಸಾಮಾಜಿಕ ಸೇವೆ ಮಾಡುವ ಸಂಸ್ಥೆ.
8) ಸಂಸ್ಥೆಯ ಸರ್ವ ಸಿಬ್ಬಂದಿಗಳಿಗೂ ಪಿಎಫ್, ಇಎಸ್ಐ ಹಾಗೂ ಇನ್ಶೂರೆನ್ಸ್ ಸೌಲಭ್ಯವನ್ನು ಒದಗಿಸಿರುವ ಅತ್ಯುತ್ತಮ ಸಂಸ್ಥೆ.
9) ಸಿಬ್ಬಂದಿಗಳ ಆರೋಗ್ಯದ ಜೊತೆಗೆ ಸಿಬ್ಬಂದಿಗಳ ಮಕ್ಕಳ ವಿಶೇಷ ಪಾಲನೆ ಪೋಷಣೆಗಾಗಿ ಪ್ರತಿ ತಿಂಗಳು ಎರಡು ಸಾವಿರ ಭತ್ಯೆಯನ್ನು ನೀಡುವ ರಾಜ್ಯದ ಏಕೈಕ ಸಂಸ್ಥೆ

ನಮ್ಮ ಸಹಕಾರಿ ನಮ್ಮ ಹೆಮ್ಮೆ



* ನಾವು ಆರ್.ಬಿ.ಆಯ್. ಮತ್ತು ಆದಾಯ ತೆರಿಗೆಯ ನಿಯಮಗಳನ್ನು ಅನುಸರಿಸುತ್ತೇವೆ.   * ಕೆವೈಸಿ ದಾಖಲಾತಿಗಳನ್ನು ಕಡ್ಡಾಯವಾಗಿ ತೆರೆದುಕೊಳ್ಳುತ್ತೇವೆ.



ಗೋದಾವರಿ ರಿಕರಿಂಗ್ ಠೇವಣಿ (ಆರ್. ಡಿ.) ಯೋಜನೆಗಳು

ರೂ. 500/- ರಿಂದ 5,000	1 ವರ್ಷದ ಅವಧಿಗೆ	9%
ರೂ. 500/- ರಿಂದ 5,000	2 ವರ್ಷದ ಅವಧಿಗೆ	10%
ರೂ. 5000/- ರಿಂದ 20,000	3 ವರ್ಷದ ಅವಧಿಗೆ	11%
ರೂ. 20,000/- ರಿಂದ 50,000	5 ವರ್ಷದ ಅವಧಿಗೆ	12%

ಮಕ್ಕಳ ಭವಿಷ್ಯ ನಿಧಿ ಯೋಜನೆ	ಮಕ್ಕಳ ಶಿಕ್ಷಣ ನಿಧಿ ಯೋಜನೆ	ಮಕ್ಕಳ ಕಲ್ಯಾಣ ನಿಧಿ ಯೋಜನೆ
ರೂ. 1000 ದಿಂದ 50,000 5 ವರ್ಷದ ಅವಧಿಗೆ 11% ರೂ. 5000 ದಿಂದ 50,000 10 ವರ್ಷದ ಅವಧಿಗೆ 12%	ಪ್ರತಿ ತಿಂಗಳು ರೂ. 5000 ತೊಡಗಿಸಿ 120 ತಿಂಗಳುಗಳ ನಂತರ ಪಡೆಯಿರಿ ರೂ. 9,63,000/-	ಪ್ರತಿ ತಿಂಗಳು ರೂ. 1000/- ತೊಡಗಿಸಿ 180 ತಿಂಗಳುಗಳ ನಂತರ ಪಡೆಯಿರಿ ರೂ. 3,15,750/-



ಸಹಕಾರಿಯು ಸ್ವೀಕರಿಸುವ ವಿವಿಧ ಠೇವುಗಳು

3 ತಿಂಗಳಿಂದ	1 ವರ್ಷದ ಠೇವುಗಳಿಗೆ	8%
1 ವರ್ಷ	ಮೇಲ್ಪಟ್ಟ ಠೇವುಗಳಿಗೆ	10%
3 ವರ್ಷ	ಮೇಲ್ಪಟ್ಟ ಠೇವುಗಳಿಗೆ	11%
ಹಿರಿಯ ನಾಗರಿಕರಿಗೆ	1 ವರ್ಷ ಮೇಲ್ಪಟ್ಟ ಠೇವುಗಳಿಗೆ	10.5%

ಗೋದಾವರಿ ಗೋಲ್ಡ್ ಕ್ಯಾಶ್ ಸರ್ಟಿಫಿಕೇಟ್

ಕೇವಲ 78 ತಿಂಗಳಲ್ಲಿ ನಿಮ್ಮ ಹಣ ದ್ವಿಗುಣ

ವಿಶೇಷ ಕೊಡುಗೆ

ರೂ. 10,00,000/- ಮೇಲ್ಪಟ್ಟ ಠೇವುಗಳಿಗೆ 72 ತಿಂಗಳಿಗೆ ಹಣ ದ್ವಿಗುಣ

ವಿಶೇಷ ಮೀಸಲಾತಿ ಬಡ್ಡಿದರ 10.5% 366 ದಿನಗಳಿಗೆ

ವಿಧವೆಯರಿಗೆ, ಅಂಗವಿಕಲರಿಗೆ, ಸೈನಿಕರಿಗೆ, ನಿವೃತ್ತ, ಸೈನಿಕರಿಗೆ, ದೇಶಸೇವೆಯಲ್ಲಿ ಹುತಾತ್ಮರಾದ ಸೈನಿಕ ಕುಟುಂಬದವರಿಗೆ, ಪೋಲೀಸರಿಗೆ, ನಿವೃತ್ತ ಪೋಲೀಸರಿಗೆ. * (ಸೂಕ್ತ ದಾಖಲಾತಿಗಳನ್ನು ಒದಗಿಸತಕ್ಕದ್ದು)

ಸಹಕಾರಿಯ ಸದಸ್ಯರ ಮಾಹಿತಿ ಹಾಗೂ ತಿಳುವಳಿಕೆಗಾಗಿ ಪ್ರಕಟಿಸಲಾಗಿದೆ.



ಹಿರಿಯ ನಾಗರಿಕರಿಗೆ ವಿಶೇಷ ವರಮಾನ ಯೋಜನೆ (ಪೆನ್ಷನ್ ಸ್ಕೀಮ್)

ರೂ. 1,20,000/- ಠೇವಣಿಗೆ **ರೂ. 1,000/- ಪ್ರತಿ ತಿಂಗಳು** ಬಡ್ಡಿ ಪಡೆಯಿರಿ
(10% ಬಡ್ಡಿದರದಲ್ಲಿ 3 ವರ್ಷ ಅವಧಿಗೆ)

ಠೇವಣಿ ಮೊತ್ತ	ಅವಧಿ	ಬಡ್ಡಿ ಪ್ರತಿ ತಿಂಗಳಿಗೆ	ಅವಧಿಯ ಕೊನೆಯ ಕಂತಿನ ಜೊತೆ ಹೆಚ್ಚಿನ ಲಾಭಾಂಶ
10,00,000	1 ವರ್ಷ	8750 ಪ್ರತಿ ತಿಂಗಳು	5,000
20,00,000	2 ವರ್ಷ	17500 ಪ್ರತಿ ತಿಂಗಳು	9,000
30,00,000	3 ವರ್ಷ	26250 ಪ್ರತಿ ತಿಂಗಳು	15,000
50,00,000	5 ವರ್ಷ	43750 ಪ್ರತಿ ತಿಂಗಳು	5,000

ಗೋದಾವರಿ ಭವಿಷ್ಯ ನಿಧಿ ಯೋಜನೆ

ರೂ. 10,000/- ತೊಡಗಿಸಿ ಮತ್ತು 120 ತಿಂಗಳ ನಂತರ ರೂ. 26,000/- ಪಡೆಯಿರಿ.
(ಈ ಠೇವಣಿಯನ್ನು ರೂ. 1,00,000/- ಮತ್ತು ಗುಣಕಗಳಲ್ಲಿ ಸಹ ವಿನಿಯೋಗಿಸಬಹುದು.)


ಅಂಕೋಲಾ ತಾಲೂಕಿನ ೧೦ ನೇ
ಕನ್ನಡ ಸಾಹಿತ್ಯ ಸಮ್ಮೇಳನ
೮ ಫೆಬ್ರುವರಿ ೨೦೨೪, ಗುರುವಾರ
ಹಾರ್ದಿಕ ಶುಭಾಶಯಗಳು.
ಶ್ರೀ ರಾಜೀವ ಗೋವಿಂದರಾಯ ನಾಯಕ
ನಿವೃತ್ತ ಉಪನ್ಯಾಸಕರು,(ಹಿಚಕಡ) ಅಂಕೋಲಾ


ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.
ಶ್ರೀ ಗೋಪಾಲಕೃಷ್ಣ(ನಾಗೇಂದ್ರ) ಚನ್ನಪ್ಪ ನಾಯ್ಕ
ಮಾಜಿ ಸದಸ್ಯರು, ಪುರಸಭೆ, ಅಂಕೋಲಾ

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.



ಶ್ರೀ ಶಾಂತಾರಾಮ ನಾಯಕ ಹಿಚಕಡ

ಹಿರಿಯ ಸಾಹಿತಿಗಳು, ಹಿಚಕಡ, ಅಂಕೋಲಾ

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.

ಶ್ರೀ ಅಬ್ದುಲ ಕರೀಂ ಶೇಖ

ಸಾಮಾಜಿಕ ಕಾರ್ಯಕರ್ತರು, ಅಂಕೋಲಾ

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.

ಶ್ರೀ ವಿಜಯ ಆರ್. ನಾಯಕ

ಮಾಜಿ ಅಧ್ಯಕ್ಷರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಅಂಕೋಲಾ

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.

ಸ್ವಾಗತ ಸಮಿತಿ

ಅಂಕೋಲಾ ತಾಲೂಕಾ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನ

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.

ಡಾ. ವಿನಾಯಕ ಜಿ. ನಾಯಕ

ವಿಶ್ರಾಂತ ಪ್ರಾಚಾರ್ಯರು
ದುರ್ಗಾದೇವಿ ಪದವಿಪೂರ್ವ ಕಾಲೇಜು
ಕೆರವಡಿ, ಕಾರವಾರ (ಉ.ಕ.)



ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.

ಶ್ರೀಮತಿ ಶುಭಲಕ್ಷ್ಮಿ ಆರ್. ನಾಯಕ

ನಿವೃತ್ತ ಉಪನ್ಯಾಸಕರು, ವಂದಿಗೆ, ಅಂಕೋಲಾ

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.



ಶ್ರೀ ಅಮ್ಮೆಂಬಳ ಆನಂದ

ಹಿರಿಯ ಸಮಾಜವಾದಿ ಚಿಂತಕರು, ಅಂಕೋಲಾ-ಮಣಿಪಾಲ

ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶುಭ ಹಾರೈಕೆಗಳು




ದಿ. ಡಾ. ಅವಿನಾಶ ತಿನ್ನೈಕರ್

ಡಾ. ಶ್ರೀದೇವಿ ತಿನ್ನೈಕರ್

ಆರ್ಯ ಮೆಡಿಕಲ್ ಸೆಂಟರ್

ಡಾ. ದಿನಕರ ದೇಸಾಯಿ ಮಾರ್ಗ, ಅಂಕೋಲಾ



ಅಂಕೋಲಾ ತಾಲೂಕಾ 10 ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.
ಶಕ್ತಿ ಟವರ್ಸ್
ಪೂಜಗೇರಿ, ಅಂಕೋಲಾ
SHAKTHI TOWERS
SHAKTHI TOWERS
Google Map Link
ಡಾ. ಮಹೇಶ ಗೋಳಿಕಟ್ಟೆ
ಮೊ.ಸಂ.: 8618350861
ಶ್ರೀ ಜಾತವೇದ ಡಿ. ನಾಯಕ
ಮೊ.ಸಂ.: 974207303
ಶ್ರೀ ರಾಮಾ ಎಮ್. ನಾಯಕ
ಮೊ.ಸಂ.: 9003175513


ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು.
ಶ್ರೀ ಶ್ರೀಧರ ಡಿ. ನಾಯ್ಕ
ಉದ್ಯಮಿಗಳು, ಬೇಲೇಕೇರಿ, ತಾ. ಅಂಕೋಲಾ
LAXMI TIMBER TRADERS, BELEKERI,
Supplier of Teakwood, Rose Wood, Joungle wood
Round Logs and Cut Sizes
Ph: (Mill): 08388-282230
Mob.: 9448223090



ಅಂಕೋಲಾ ತಾಲೂಕಾ ೧೦ ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು
ST. MILAGRES
MCSC
CREDIT SOUHARDHA CO-OP. LTD., KARWAR
ಸೈಂಟ್ ಮಿಲಾಗ್ರಿಸ್
ಕ್ರೆಡಿಟ್ ಸೌಹಾರ್ದ ಕೋ-ಆಫ್ ಸೊಸೈಟಿ ಲಿ.
ಪ್ರಧಾನ ಕಛೇರಿ : ಕಾರವಾರ
ಆಕರ್ಷಕ ಠೇವು ಯೋಜನೆ - ಸಾಲ ನೀಡಿಕೆ - ಮೌಲ್ಯಾಧಾರಿತ ಸೇವೆ - ಇನ್ಶುರೆನ್ಸ್
ರೂ.5000 ದಿಂದ ಕೋಟಿಯವರೆಗೆ
ಸಾಲ ಸೌಲಭ್ಯ
ಮನೆ ಸಾಲ
ವ್ಯಾಪಾರಿ ಸಾಲ
ಜಮೀನು ಹಾಗೂ ಕಟ್ಟಡ ಒತ್ತೆ ಸಾಲ
ವೈಯಕ್ತಿಕ ಸಾಲ
SPOT LOAN
ಓವರ ಡ್ರಾಫ್ಟ್ ಸಾಲ
ಗೃಹ ಅಲಂಕಾರಿ ಸಾಮಗ್ರಿಗಳ ಮೇಲೆ ಸಾಲ
ನಿಮ್ಮ ಹೊಸ ವಾಹನ ಖರೀದಿಸುವ ಕನಸನ್ನು ನನಸಾಗಿಸಲು.....
ನಿಮ್ಮ ಹತ್ತಿರದ ಶಾಖೆಗೆ ಇಂದೇ ಭೇಟಿ ನೀಡಿ
ವಾಹನ ಸಾಲ
ನಮ್ಮಲ್ಲಿ ಬೈಕ್, ಸ್ಕೂಟರ್, ರಿಕ್ಷಾ, ಕಾರ್, ಟ್ರಕ್, ಟಿಪ್ಪರ್‌ಗಳಂತಹ ಯಾವುದೇ ವಾಹನಗಳ ಖರೀದಿಗೆ ತ್ವರಿತವಾಗಿ (Spot loan),ಕನಿಷ್ಟ ದಾಖಲಾತಿಗಳೊಂದಿಗೆ ಸಾಲವನ್ನು ನೀಡಲಾಗುವುದು.
ಇತರೇ ಭದ್ರತೆ ನೀಡಿದಲ್ಲಿ 100% ಸಾಲ (ಶರತ್ತುಗಳಿಗೆ ಒಳಪಟ್ಟು)
ಸಹಕಾರಿ ಕ್ಷೇತ್ರದಲ್ಲೇ ಮಾದರಿಯಾದ ಉತ್ತರ ಕನ್ನಡ ಜಿಲ್ಲೆಯ ಹೆಮ್ಮೆಯ ಸಹಕಾರಿ
20ನೇ ವರ್ಷದ ಮೈಲುಗಲ್ಲಿನ ಬಂಪರ್ ಕೊಡುಗೆ
10%
399 Days Quarterly Interest Available
10.25% 999 Days
9% 366 Days
CELEBRATING 20th Milestone OFFER
ಹಿರಿಯ ನಾಗರಿಕರಿಗೆ
10.50%
399 Days Quarterly Interest Available
10% 2 years (730 Days)
8%
ಕರ್ನಾಟಕದ 9 ಜಿಲ್ಲೆಗಳಲ್ಲಿ 111 ಶಾಖೆಗಳು
111 Branches across Karnataka
Karnataka
Uttar Kannada- 47
Mangaluru- 16
Udupi - 12
Shivamogga- 10
Dharwad- 09
Haveri- 08
Belagavi- 04
Chikamagaluru- 03
Mysuru- 02
47 Branches in Uttar Kannada District:-
Karwar - Habbuwada- Kajubag- Kodibag- Nandangadda- Kadwad- Mallapur- Halga- Sadashivgad- Majali- Ankola- Bhavikeri- Basgod- Aversa- Amadalli- Kumta- Kumta2- Gokarna- Madangeri- Mirjan- Hosad- Samsi- Chandavar- Hadinbal- Honnavar- Kasarkod- Haldipur- Manki- Balkur- Bhatkal- Shirali- Murdeshwar- Sirsi- Bisalkoppa- Devikere- Hulekal- Malagi- Kansur- Banavasi- Siddapur- Mundgod- Yellapur- Dandeli- Ramnagar- Joida- Haliyal- Murkwad
Tel: 08382-223600, Websit: www.milagrescooperative.com